సంవాద: ౧౯-౨౪

ಖಾಸಗಿ ಪ್ರಸಾರಕ್ಕಾಗಿ

ಸಂವಾದ

೧೯

ಂವಾದ ಪ್ರಕಾಶನ, ಮಲ್ಲಾಡಿಹಳ್ಳಿ – ೫೭೭ ೫೩೧, ಚಿತ್ರದುರ್ಗ ಜಿಲ್ಲೆ

ಈ ಸಂಚಿಕೆಯ ಲೇಖಕರು:

- **ಡಾ|| ಜಿ. ಎಸ್. ಶಿವರುದ್ರಪ್ಪ,**
  'ಚೈತ್ರ', 867, 18ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560 070
- **ದೇವನೂರ ಮಹಾದೇವ,**
  53, 5ನೇ ಕ್ರಾಸ್, ನವಿಲು ರಸ್ತೆ, ಕುವೆಂಪುನಗರ, ಮೈಸೂರು–570 023
- **ಕಿಕ್ಕೇರಿ ನಾರಾಯಣ,**
  ಭಾರತೀಯ ಭಾಷಾ ಸಂಸ್ಥಾನ, ಮಾನಸ ಗಂಗೋತ್ರಿ, ಮೈಸೂರು–570 006
- **ರಾಘವೇಂದ್ರ ಪಾಟೀಲ,**
  ಜೀವಶಾಸ್ತ್ರ ಅಧ್ಯಾಪಕರು, ಪದವಿಪೂರ್ವ ಕಾಲೇಜು, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ
- **ಡಿ. ಎಸ್. ನಾಗಭೂಷಣ,**
  ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ ಎಫ್. ಎಂ. ಕೇಂದ್ರ, ಹಾಸನ–573 201
- **ಪ್ರೇಮ್‌ಚಂದ್,**
  ಖ್ಯಾತ ಹಿಂದಿ ಕಥೆ–ಕಾದಂಬರಿಕಾರ (ದಿವಂಗತರು)
- **ಚಂದ್ರಶೇಖರ ತಾಳ್ಯ,**
  ತರ್ಕಶಾಸ್ತ್ರ ಅಧ್ಯಾಪಕರು, ಕೆ.ಎಸ್. ಪದವಿಪೂರ್ವ ಕಾಲೇಜು, ಹೊಳಲ್ಕೆರೆ ಚಿತ್ರದುರ್ಗ ಜಿಲ್ಲೆ
- **ಗವಿಸಿದ್ಧ ಎನ್. ಬಳ್ಳಾರಿ,**
  ಜವಾಹರ ಬೀದಿ, ಕೊಪ್ಪಳ–583 231, ಬಳ್ಳಾರಿ ಜಿಲ್ಲೆ
- **ಕೆ. ಪಿ. ಮೃತ್ಯುಂಜಯ,**
  ಕಲ್ಕೆರೆ, ಮಾಯಸಂದ್ರ ಮಾರ್ಗ–572 221, ತುಮಕೂರು ಜಿಲ್ಲೆ
- **ಎಂ. ಎಸ್. ವೇದಾ,**
  ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ ಮೈಸೂರು–570 006
- **ಆನಂದಕಂದ** (ದಿವಂಗತ ಬೆಟಗೇರಿ ಕೃಷ್ಣಶರ್ಮರು)
- **ಡಾ|| ಪುರುಷೋತ್ತಮ ಬಿಳಿಮಲೆ.**
  ಕನ್ನಡ ಅಧ್ಯಾಪಕರು. ಮಂಗಳ ಗಂಗೋತ್ರಿ, ಕೊಣಾಜೆ (ದ.ಕ.)
- **ಡಾ|| ಬಿ. ಎನ್. ಸುಮಿತ್ರಾಬಾಯಿ,**
  73/15, 5ನೇ ಕ್ರಾಸ್, ಹನುಮಂತನಗರ, ಬೆಂಗಳೂರು–560 019
- **ಎಸ್. ಆರ್. ವಿಜಯಶಂಕರ,**
  ಸಾರ್ವಜನಿಕ ಸಂಪರ್ಕಾಧಿಕಾರಿ, ಹೆಚ್.ಎಂ.ಟಿ.ಲಿ., 36. ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು
- **ಎ. ಆರ್. ನಾಗಭೂಷಣ,**
  1235, ಕೃಷ್ಣಮೂರ್ತಿಪುರಂ, ಮೈಸೂರು–570 004

ಪ್ರಸ್ತುತ ಸಾಹಿತ್ಯ ಎದುರಿಸುತ್ತಿರುವ ಬಿಕ್ಕಟ್ಟುಗಳು*

ಡಾ॥ ಜಿ. ಎಸ್. ಶಿವರುದ್ರಪ್ಪ

ನಾನು ಹುಟ್ಟಿದ್ದು ಕನ್ನಡನಾಡಿನ ಮಲೆನಾಡಿನ ಬೆಟ್ಟ–ಕಾಡು–ಹೊಳೆಗಳ ಪರಿಸರದಲ್ಲಿ; ಆದರೆ ಬೆಳೆದದ್ದು ಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯ ಬಯಲು ಹಾಗೂ ಬಂಡೆ-ಬೆಟ್ಟಗಳ ನಡುವೆ. ಹೀಗಾಗಿ ನನ್ನಲ್ಲಿ ಆ ಮಲೆನಾಡಿನ ರಮ್ಯ ನಿಸರ್ಗಾನುಭವದ ಜತೆಗೆ, ಚಿತ್ರದುರ್ಗದ ಬಂಡೆ-ಬೆಟ್ಟಗಳ ದಿಟ್ಟತನವೂ ಸೇರಿಕೊಂಡಿದೆ. ಈ ಕಾರಣದಿಂದ ಇದೀಗ ಇಲ್ಲಿ ಸಮಾವೇಶಗೊಂಡಿರುವ ಚಿತ್ರದುರ್ಗ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಈ ಗೌರವವನ್ನು ಅತ್ಯಂತ ಪ್ರೀತಿ ಹಾಗೂ ಕೃತಜ್ಞತೆಗಳಿಂದ ನಾನು ಒಪ್ಪಿಕೊಂಡಿದ್ದೇನೆ.

ನಾನು ನನ್ನ ಈ ಅಧ್ಯಕ್ಷ ಭಾಷಣದಲ್ಲಿ ಇಲ್ಲಿ ನಿಯೋಜಿತವಾಗಿರುವ ಗೋಷ್ಠಿಗಳಲ್ಲಿ ಚರ್ಚೆಗೆ ಗುರಿಯಾಗಲಿರುವ ವಿಷಯಗಳನ್ನು ಪ್ರಸ್ತಾಪಿಸಲು ಹೋಗುವುದಿಲ್ಲ. ಯಾಕೆಂದರೆ ಆ ವಿಷಯಗಳನ್ನು ಕುರಿತು ತಮ್ಮೆದುರಿಗೆ ಮಂಡಿಸುವ ಪರಿಣತರಿದ್ದಾರೆ. ನಿಮ್ಮಂತೆಯೇ ನಾನೂ ಆ ಚರ್ಚೆಗಳಿಗೆ ಶ್ರೋತೃವಾಗಲು ಆಸಕ್ತನಾಗಿದ್ದೇನೆ. ಅದರ ಬದಲು ನಮ್ಮ ಸಾಮಾಜಿಕ ಜೀವನ ಹಾಗೂ ಸಾಹಿತ್ಯ ನಿರ್ಮಿತಿಗಳು ಎದುರಿಸುತ್ತಿರುವ ಕೆಲವು ಬಿಕ್ಕಟ್ಟುಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇನೆ. ದಯಮಾಡಿ ಕೇಳಬೇಕು.

ಇರುವ ಬದುಕನ್ನು ಇನ್ನಷ್ಟು ಸಹನೀಯವನ್ನಾಗಿ, ಸುಖಮಯವನ್ನಾಗಿ, ಸುಂದರವನ್ನಾಗಿ, ವೈಚಾರಿಕವನ್ನಾಗಿ ಮಾಡುವುದು ಹೇಗೆ ಎನ್ನುವುದೇ ಎಲ್ಲ ಕವಿ–ಕಲಾವಿದರ, ಕ್ರಾಂತಿಕಾರಿಗಳ ಹಾಗೂ ವಿಜ್ಞಾನಿಗಳ ಹಂಬಲವಾಗಿದೆ. ಆದರೆ ನಮ್ಮ

* ಸಿರಿಗೆರೆಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ, ಚಿತ್ರದುರ್ಗ ಜಿಲ್ಲಾ ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷ ಭಾಷಣದ ಸಂಪಾದಿತ ರೂಪ.

ಬದುಕು ಅಸಹನೀಯವಾಗಿ, ಅಹಿತಕರವಾಗಿ, ಕುರೂಪವಾಗಿ ಹಾಗೂ ಅವೈಚಾರಿಕವಾಗಿ ರೂಪುಗೊಳ್ಳುತ್ತಿರುವಂತೆ ತೋರುತ್ತಿದೆಯಲ್ಲ, ಎಂಬುದೇ ನಮ್ಮೆಲ್ಲರ ಆತಂಕಕ್ಕೆ ಕಾರಣವಾಗಿದೆ. ಈ ಆತಂಕದ ಸಮಯದಲ್ಲಿ ನಮ್ಮನ್ನು ನಾವು ಕುರಿತು, ಈ ವ್ಯವಸ್ಥೆ ಯಾಕೆ ಹೀಗಿದೆ ಎಂಬುದನ್ನು ಕುರಿತು, ಅದು ಹಾಗಿರುವುದಕ್ಕೆ ನಾವೂ ಕಾರಣವಲ್ಲವೆ ಎಂಬುದನ್ನು ಕುರಿತು, ವಿಚಾರ ಮಾಡಬೇಕಾಗಿದೆ. ಯಾಕೆಂದರೆ ಈ ವಾಸ್ತವದ ಒಂದು ಭಾಗವಾಗಿರುವ ನಾವು ಬದಲಾಗದೆ, ಸುತ್ತಣ ಜಗತ್ತು ಬದಲಾಗುವುದಾದರೂ ಹೇಗೆ ? ನಾವು ಬದಲಾಗಬೇಕೆಂಬ ಎಚ್ಚರವಿಲ್ಲದೆ ಅಥವಾ ಇಷ್ಟವಿಲ್ಲದೆ, ಈ ಜಗತ್ತು ಬದಲಾಗಬೇಕೆಂಬ ಸುಧಾರಕತನದ ಸೋಗನ್ನು ತಾಳುವುದು ಅತ್ಯಂತ ಅನೈತಿಕವಾದ ನಿಲುವಾಗುತ್ತದೆ.

ಟಾಯಿಂಬೀ ಎಂಬ ಪ್ರಸಿದ್ಧ ಇತಿಹಾಸಜ್ಞ ಹೇಳುತ್ತಾನೆ, ಒಂದು ದೇಶದ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಕಾಲವೆಂದರೆ ಆತಂಕಗಳ, ಸಂದಿಗ್ಧತೆಗಳ, ಸಂಘರ್ಷ ಗಳ ಕಾಲವೇ ಎಂದು. ಯಾಕೆಂದರೆ ಇಂಥ ಆತಂಕಗಳ ತಲ್ಲಣಗಳ ಕಾಲದಲ್ಲಿ ವ್ಯಕ್ತಿಗಳು ತಮ್ಮ ಪರಿಸರವನ್ನು ಕುರಿತು, ತಮ್ಮನ್ನು ಕುರಿತು, ಒಂದು ಬಗೆಯ ಮರುಚಿಂತನೆಗೆ ತೊಡಗುತ್ತಾರೆ. ನಾವು ಇದೀಗ ಅಂತಹ ಆತಂಕ ಹಾಗೂ ತಲ್ಲಣಗಳ ಸಂದರ್ಭದಲ್ಲಿ ಇದ್ದೇವೆ.

ಇನ್ನೇನು ಇಪ್ಪತ್ತನೆಯ ಶತಮಾನ ಕೊನೆಗೊಳ್ಳುತ್ತಿದೆ. ಇಪ್ಪತ್ತೊಂದನೆಯ ಶತಮಾನಕ್ಕೆ ನಾವು ಹೋಗುತ್ತಿದ್ದೇವೆ. ನಿಜವಾಗಿ ನೋಡಿದರೆ, ಇಪ್ಪತ್ತನೆಯ ಶತಮಾನ ಮನುಕುಲದ ಇತಿಹಾಸದಲ್ಲಿ ಒಂದು ಅದ್ಭುತವಾದ ಕಾಲ. ಹಿಂದಿನ ಶತಮಾನಗಳಿಗೆ ಹೋಲಿಸಿದರೆ, ಇಪ್ಪತ್ತನೆಯ ಶತಮಾನ ಅನೇಕ ಮಹತ್ವದ ಪಲ್ಲಟಗಳ, ಅನ್ವೇಷಣೆಗಳ ಹಾಗೂ ನವಶೋಧಗಳ ಕಾಲ. ರಾಜಕೀಯವಾಗಿ, ಧಾರ್ಮಿಕವಾಗಿ ಹಾಗೂ ವೈಚಾರಿಕವಾಗಿ ಇಡೀ ಜಗತ್ತಿನ ಜನಜೀವನ ಹೊಸ ಎಚ್ಚರಗಳಿಗೆ ಹಾಗೂ ಪರಿವರ್ತನೆಗಳಿಗೆ ಒಳಗಾದ ಕಾಲ. ವಿಜ್ಞಾನದ ದೃಷ್ಟಿಯಿಂದಲಂತೂ ಈ ಶತಮಾನ ಮನುಷ್ಯನ ಮಹತ್ಸಾಧನೆಗಳ ಕಾಲ. ಒಂದು ಮಾತಿನಲ್ಲಿ ಈ ಶತಮಾನದ ಲಕ್ಷಣ ವನ್ನು ಸೂತ್ರೀಕರಿಸಿ ಹೇಳುವುದಾದರೆ ಇದು ವಿಜ್ಞಾನ ಯುಗ. ಈ ವಿಜ್ಞಾನ ಯುಗ ಮನುಷ್ಯನ ನಾಗರೀಕತೆಯನ್ನು ಅನನ್ಯವಾಗಿ ರೂಪಿಸಿದೆ; ಆತನ ಸುಖ–ಸೌಲಭ್ಯ ಗಳನ್ನು ಹೆಚ್ಚಿಸಿದೆ. ಈ ವೈಜ್ಞಾನಿಕ ಯುಗ ತಂದ ನಾಗರಿಕ ಸವಲತ್ತುಗಳಿಗೆ ಮನು ಕುಲ ಬಾಧ್ಯವಾದಂತೆ, ವೈಜ್ಞಾನಿಕ ದೃಷ್ಟಿ ಎಂಬುದು ನಿಜವಾಗಿಯೂ ನಮ್ಮ ಬದುಕನ್ನು ಪ್ರಭಾವಿಸಿದೆಯೆ ? ವಿಜ್ಞಾನದ ಸವಲತ್ತುಗಳನ್ನು ನಮ್ಮ ಜನ್ಮಸಿದ್ಧ ಹಕ್ಕೆಂಬಂತೆ ಪಡೆದುಕೊಳ್ಳುವುದರಲ್ಲಿ ನಾವು ತೋರಿಸುವ ಉತ್ಸಾಹವನ್ನು, ವೈಜ್ಞಾನಿಕ

ದೃಷ್ಟಿಕೋನವನ್ನು ನಮ್ಮ ಬದುಕಿಗೆ ಅಳವಡಿಸಿಕೊಳ್ಳುವ ವಿಚಾರದಲ್ಲಿ ನಾವು ತಾಳಿದ್ದೇವೆಯೋ ? ವೈಜ್ಞಾನಿಕತೆಯನ್ನು ಅಥವಾ ನಿಜವಾದ ವೈಚಾರಿಕತೆಯನ್ನು ಈ ದೇಶದ ಲೇಖಕರು, ರಾಜಕಾರಣಿಗಳು, ಧಾರ್ಮಿಕ ನಾಯಕರುಗಳು ಎಷ್ಟರಮಟ್ಟಿಗೆ ಪ್ರತಿಪಾದಿಸಿದ್ದಾರೆ ? ಯಾವ ಮಹತ್ವದ ವೈಜ್ಞಾನಿಕ ಆವಿಷ್ಕಾರಗಳಿಗೆ ನಮ್ಮಲ್ಲಿ ಎಷ್ಟು ಜನ ಲೇಖಕರು ಸರಿಯಾಗಿ ಸ್ಪಂದಿಸಿದ್ದಾರೆ ? ನಮ್ಮ ಪರಂಪರೆಯನ್ನು, ಸಂಪ್ರದಾಯಗಳನ್ನು, ರೂಢಿಗತ ಆಚಾರ ವಿಚಾರಗಳನ್ನು ನಿಜವಾದ ವೈಚಾರಿಕತೆಯ ಒರೆಗಲ್ಲಿಗೆ ಎಷ್ಟರಮಟ್ಟಿಗೆ ನಾವು ಉಜ್ಜಿ ನೋಡಿದ್ದೇವೆ ? ಒಂದು ವೇಳೆ ಹಾಗೆ ವೈಜ್ಞಾನಿಕ ವಿಚಿಕಿತ್ಸೆಗೆ ಒಳಗುಪಡಿಸಿದ್ದೇ ನಿಜವಾಗಿದ್ದರೆ, ಧಾರ್ಮಿಕವಾದ ಹಾಗೂ ಸಾಂಪ್ರದಾಯಿಕವಾದ ಸಂಗತಿಗಳ ಬಗೆಗೆ, ಅವಿಚಾರವೂ, ಆವೇಶಭರಿತವೂ ಆದ ಪ್ರತಿಕ್ರಿಯೆಗಳು, ಈ ಪ್ರಮಾಣದಲ್ಲಿ ಕೆರಳುತ್ತಿರಲಿಲ್ಲ ಎಂದು ನಮಗೆ ಅನ್ನಿಸುವುದಿಲ್ಲವೆ ? ನಿಜವಾದ ಸಂಗತಿಯೇನೆಂದರೆ, ನಮ್ಮ ಬದುಕಿನಲ್ಲಿ ಆಗಿರುವಂತೆ ತೋರುವ ಬದಲಾವಣೆಗಳೇನಿದ್ದರೂ ಕೇವಲ ಮೇಲ್ಪದರದವು ಮಾತ್ರ; ಆದರೆ ಒಳಗಿನ ತಿರುಳಿನಲ್ಲಿ ಏನೇನೂ ಬದಲಾವಣೆಯಾಗಿಲ್ಲ. ಮೇಲೆ ನೋಡಲು ಈ ಯುಗದ ಮನುಷ್ಯ ಎಷ್ಟೊಂದು ನಾಗರಿಕನಂತೆ ತೋರಿದರೂ, ಅವನ ಒಳಗೆ ಇರುವ ಮನುಷ್ಯ ಕೇವಲ ಆದಿಮಾನವನೇ ಆಗಿದ್ದಾನೆ-ಎಂದು ಅನಿಸುತ್ತದೆಯಲ್ಲವೇ ? ಇಂಥ ವಿಲಕ್ಷಣವಾದ ಮನುಷ್ಯನ ಸಮೇತ ನಾವೀಗ ಇಪ್ಪತ್ತನೆಯ ಶತಮಾನವನ್ನು ದಾಟಿ ಇಪ್ಪತ್ತೊಂದನೇ ಶತಮಾನವನ್ನು ಪ್ರವೇಶಿಸುತ್ತಿದ್ದೇವೆ ಎನ್ನುವುದು ಎಂತಹ ವಿಪರ್ಯಾಸದ ಸಂಗತಿಯಾಗಿದೆ ! ಕೆಲವು ವರ್ಷಗಳ ಹಿಂದೆ ನಮ್ಮ ರಾಷ್ಟ್ರನಾಯಕರೊಬ್ಬರು 'ನಾವೀಗ ಇಪ್ಪತ್ತೊಂದನೆಯ ಶತಮಾನಕ್ಕೆ ಹೋಗುತ್ತಿದ್ದೇವೆ' ಎಂಬ ಹೇಳಿಕೆಯನ್ನು ಒಂದು ಮಹತ್ವದ ಘೋಷಣೆಯೆಂಬಂತೆ ಸಾರಿ ಹೇಳಿದರು. ನಿಜ, ನೀವು ಹೇಳಲಿ ಬಿಡಲಿ, ನಾವು ಇಪ್ಪತ್ತೊಂದನೆಯ ಶತಮಾನಕ್ಕೆ ಹೋಗುವುದು ಕಾಲಗತಿಯಲ್ಲಿ ಅನಿವಾರ್ಯವಾದ ಚಲನೆಯಾಗಿದೆ. ಆದರೆ ಇಪ್ಪತ್ತೊಂದನೆಯ ಶತಮಾನಕ್ಕೆ ಯಾವ ಒಂದು ಸ್ಥಿತಿಯಲ್ಲಿ ನಾವು ಹೋಗುತ್ತಿದ್ದೇವೆ ಎಂಬುದು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಯಾಗಿದೆ.

ಆಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದು ನಾಲ್ಕು ದಶಕಗಳ ಮೇಲಾಯಿತು. ಸ್ವಾತಂತ್ರ್ಯಪೂರ್ವದಲ್ಲಿ ನಾವು ಕಟ್ಟಿಕೊಂಡ ಕನಸುಗಳೂ, ಇಟ್ಟುಕೊಂಡ ಆಸೆಗಳೂ ಇನ್ನೂ ಮರೀಚಿಕೆಯಾಗಿಯೇ ಉಳಿದಿವೆ. ಈ ಹಲವು ದಶಕಗಳ ಉದ್ದಕ್ಕೂ ನಾವು ಕೇವಲ ವಿಘಟನೆಗೊಳ್ಳುತ್ತಲೇ ಬಂದಿದ್ದೇವೆ. 'ಭಾವೈಕ್ಯತೆ'ಯ, 'ರಾಷ್ಟ್ರೀಯ ಸಮಗ್ರತೆ'ಯ, 'ಜಾತ್ಯಾತೀತತೆ'ಯ ಘೋಷಣೆಗಳು ಈ ವಿಘಟನೆಯ ತಲ್ಲಣವನ್ನೇ

ಧ್ವನಿಸುತ್ತ ಬಂದಿವೆ. ನಮ್ಮನ್ನು ಕಾಡುತ್ತಿರುವ ರಾಜಕೀಯ–ಸಾಮಾಜಿಕ–ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಸಾಂಗತ್ಯಗಳು, ಈ ಎಲ್ಲವೂ ದಿನದಿಂದ ದಿನಕ್ಕೆ ಒಡೆದು ಹೋಗುತ್ತಿರುವ ಬದುಕಿನ ಪರಿಣಾಮಗಳಾಗಿವೆ. "The best lack all conviction, while the worst are full of passionate intensity"–ಎಂದ ಕವಿ ಯೇಟ್ಸ್‌ನ ಮಾತು ನಿಜವಾಗುತ್ತಾ, Things fall apart : the centre cannot hold ಎಂಬ ಸತ್ಯ ಸಮರ್ಥಿತವಾಗತೊಡಗಿದೆ. ಸ್ವಾತಂತ್ರ್ಯಪೂರ್ವದ ಗಾಂಧೀಯುಗದ ಸಂದರ್ಭದಲ್ಲಿ 'ನಡೆವುದೆಲ್ಲಂ ನಡೆವುದೊಳ್ಳಿಗೆ' ಎಂಬ ಶ್ರದ್ಧೆಯನ್ನು ಉದ್ಘೋಷಿಸಿದ ಕವಿ ಕುವೆಂಪು ಅವರು ಇತ್ತೀಚೆಗೆ–

ಆಗಲೋ–ಹಿಂದಕ್ಕೆ ಗುರುವಿದ್ದ, ಮುಂದಕ್ಕೆ ಗುರಿಯಿತ್ತು
ನುಗ್ಗಿದುದು ಧೀರ ದಂಡು
ಈಗಲೋ–ಹಿಂದಕ್ಕೆ ಗುರುವಿಲ್ಲ ಮುಂದಕ್ಕೆ ಗುರಿಯಿಲ್ಲ
ಮುಗ್ಗುತಿದೆ ಹೇಡಿ ಹಿಂಡು

ಎಂದು ಹೇಳುವಂತಾದದ್ದು ನಮ್ಮ ಪರಿಸ್ಥಿತಿಯ ವಿಪರ್ಯಾಸಕ್ಕೊಂದು ಸಮರ್ಥವಾದ ಪ್ರತೀಕವಾಗಿದೆ. ದಿನದಿಂದ ದಿನಕ್ಕೆ ಉಳ್ಳವರ ಮಹಲುಗಳು ಎತ್ತರಕ್ಕೇರಿದಂತೆ, ಇಲ್ಲದವರ ಬದುಕು ಬಡತನದ ತಳಾತಳಕ್ಕೆ ಇಳಿಯುತ್ತಿದೆ. ನಮ್ಮ ಬಹುಸಂಖ್ಯಾತ ಗ್ರಾಮಾಂತರ ಪರಿಸರವಂತೂ ಭ್ರಷ್ಟತೆ ಹಾಗೂ ಶೋಷಣೆಗಳ ಆಡುಂಬೊಲವಾಗುತ್ತಿದೆ. ಅನಕ್ಷರತೆ ಬದುಕನ್ನು ಗುತ್ತಿಗೆ ಹಿಡಿದುಕೊಂಡಿದೆ; ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಜನತೆಯನ್ನು ಸುಲಿಗೆ ಮಾಡಲು ಅನುಕೂಲವಾದ ಮೂಢನಂಬಿಕೆಗಳ ಬುಡ ಭದ್ರವಾಗಿದೆ. ಅನಕ್ಷರತೆ, ಬಡತನ ಮತ್ತು ಮೂಢನಂಬಿಕೆಗಳು ಭಾರತೀಯ ರಾಜಕಾರಣದ ಫಿಕ್ಸೆಡ್ ಡಿಪಾಸಿಟ್‌ಗಳಾಗಿವೆ. ಈ ಮೂರೂ ತೊಲಗಬೇಕೆಂಬುದು ಎಲ್ಲ ರಾಜಕೀಯ ಪಕ್ಷಗಳ ಘೋಷಣೆಯಾದರೂ, ಅವು ತಮ್ಮ ಯಥಾಸ್ಥಿತಿಯಲ್ಲಿ ಉಳಿದುಕೊಂಡು ಬರುವುದು ತಮ್ಮ ಸ್ಥಿರ ಪಟ್ಟಕ್ಕೆ ಎಷ್ಟೊಂದು ಅಗತ್ಯ ಎಂಬುದು ಅಂತರಂಗದ ರಹಸ್ಯ ಆಶಯವಾಗಿದೆ.

ನನಗೆ ತೋರುವ ಮಟ್ಟಿಗೆ ಈ ದೇಶದ ತರುಣ ಜನಾಂಗದ ಬದುಕನ್ನು ನಿಯಂತ್ರಿಸುವ ಶಕ್ತಿಗಳು, ಮುಖ್ಯವಾಗಿ ಈ ಮೂರು : ರಾಜಕಾರಣ, ಚಲನಚಿತ್ರ ಜಗತ್ತು ಮತ್ತು ಧಾರ್ಮಿಕ ಸಂಸ್ಥೆಗಳು. ಈ ನಾಡಿನ ತರುಣ ಜನಾಂಗದ ಮೌಲ್ಯ ಪ್ರಜ್ಞೆಯನ್ನು ಪ್ರಸ್ತುತ ರಾಜಕೀಯವೂ, ಈ ನಾಡಿನ ತರುಣ ಜನಾಂಗದ ಅಭಿರುಚಿಯನ್ನು ಚಲನಚಿತ್ರ ಜಗತ್ತೂ, ಈ ನಾಡಿನ ತರುಣ ಜನಾಂಗದ ವೈಚಾರಿಕತೆಯನ್ನು ಧಾರ್ಮಿಕ ಸಂಸ್ಥೆಗಳೂ ನಿಯಂತ್ರಿಸುತ್ತಿರುವ ಪರಿಸರದಲ್ಲಿ, ನಮ್ಮ ಸಾಹಿತ್ಯವಾಗಲೀ

ಗಂಭೀರವಾದ ಸಾಂಸ್ಕೃತಿಕ ಚಟುವಟಿಕೆಗಳಾಗಲೀ ಎದುರಿಸಬೇಕಾದ ಸವಾಲುಗಳೂ ಬಿಕ್ಕಟ್ಟುಗಳೂ ಅತ್ಯಂತ ಕ್ಲಿಷ್ಟವಾದವುಗಳಾಗಿವೆ. ಈ ಪರಿಸ್ಥಿತಿಯಲ್ಲಿ ನಮ್ಮ ಸಾಹಿತ್ಯ, ಇರುವ ಬದುಕನ್ನು ಇನ್ನಷ್ಟು ಸಹನೀಯುವನ್ನಾಗಿ, ಸುಂದರವನ್ನಾಗಿ, ವೈಚಾರಿಕವನ್ನಾಗಿ ಮಾಡಲು ಸಾಧ್ಯವೆ ? ನಮ್ಮ ಜನ ಈ ಪರಿಸರಕ್ಕೆ ಸ್ಪಂದಿಸುವುದು ಹೇಗೆ ? ಪ್ರಶ್ನೆ ಮಾಡುವುದು ಹೇಗೆ ? ಎಂಬ ಎಚ್ಚರವನ್ನು ಹುಟ್ಟಿಸುವುದು ಸಾಹಿತ್ಯದಿಂದ ಸಾಧ್ಯವಾಗಬೇಕಲ್ಲವೇ ? ಹಾಗಾಗಬೇಕಾದರೆ ಸಾಹಿತ್ಯವು ಕೇವಲ ಪ್ರಚಾರಾತ್ಮಕವಾದ, ಉಪದೇಶಾತ್ಮಕವಾದ ಧಾಟಿಯನ್ನು ತಾಳಬೇಕೆಂಬುದು ಖಂಡಿತ ನನ್ನ ಅಭಿಪ್ರಾಯವಲ್ಲ. ಆದರೆ ಸಾಹಿತ್ಯಕ್ಕೆ ಇರುವ ಈ ಸಾಮಾಜಿಕ ಜವಾಬ್ದಾರಿಯನ್ನು ಕಡೆಗಣಿಸಿ, ಕೇವಲ ತನ್ನದೇ ಆದ, ಮೂರ್ತಾಮೂರ್ತಗಳ, ಸೂಕ್ಷ್ಮಾತಿಸೂಕ್ಷ್ಮಗಳ ಚಿಂತನೆಯಲ್ಲಿ ತೊಡಗುವುದರಿಂದ ಏನು ಪ್ರಯೋಜನ ? ತನ್ನ ಪರಿಸರಕ್ಕೆ ಸ್ಪಂದಿಸದೆ ಹೋದರೆ ಹಾಗೂ ಯಾವ ಒಂದು ಸಮುದಾಯದ ಭಾಗವೂ, ಪ್ರತಿನಿಧಿಯೂ ಆದ ಲೇಖಕ, ಆ ಜನಕ್ಕೆ ತಾನು ಸಾಹಿತ್ಯಕವಾಗಿ ತಲುಪದೆ ಹೋದರೆ, ಅಂಥ ಬರಹದ ಪ್ರಸ್ತುತತೆಯೇನು ಎಂದು ನಾವು ಕೇಳಿಕೊಳ್ಳಬೇಕಾಗಿದೆ.

ಹಿಂದೆ ಸಾಹಿತ್ಯ ತನ್ನ ಕಥನ ಕಾವ್ಯರೂಪದ ಶ್ರವಣ ಸಂವಹನದ ಮೂಲಕ ಅನಕ್ಷರಸ್ಥ ಬಹು ಜನ ಸಮುದಾಯದೊಂದಿಗೆ ಇರಿಸಿಕೊಂಡ ಸಂಬಂಧದೊಂದಿಗೆ ಹಾಗೂ ಮಾಡುತ್ತಿದ್ದ ಪರಿಣಾಮದೊಂದಿಗೆ ಹೋಲಿಸಿದರೆ, ಪ್ರಸ್ತುತ ಸಾಹಿತ್ಯ ಆ ಬಗೆಯ ಸಂಬಂಧವನ್ನು ಇಂದು ಇರಿಸಿಕೊಂಡಿಲ್ಲ ಎಂಬ ಮಾತು, ಕಾವ್ಯವೆಂಬ ಪ್ರಕಾರದ ಮಟ್ಟಿಗೆ ನಿಜವಾದರೂ, ಅಂದಿಗಿಂತ ಇಂದು ತಾವಾಗಿಯೇ ಸಾಹಿತ್ಯವನ್ನು ಓದುವವರ ಸಂಖ್ಯೆ ತೌಲನಿಕವಾಗಿ ಹೆಚ್ಚಾಗಿದೆ ಎಂಬುದನ್ನೂ ಮತ್ತು ಕಾವ್ಯೇತರವಾದ ಜನಪ್ರಿಯ ಗದ್ಯ ಪ್ರಕಾರಗಳು ಸಾಹಿತ್ಯಾಸಕ್ತರನ್ನು ತಲುಪುತ್ತಿವೆ ಎಂಬುದನ್ನೂ ಒಪ್ಪಬೇಕಾಗಿದೆ. ಆದರೆ ದುರದೃಷ್ಟದ ಸಂಗತಿ ಎಂದರೆ ಹಿಂದಿನ ಅಭಿಜಾತ ಕಾವ್ಯ ಅನಕ್ಷರಸ್ಥ ಬಹು ಜನ ಸಮುದಾಯದ ಮೇಲೆ ವಾಚನ ಅಥವಾ ಗಮಕ ವಿಧಾನದ ಮೂಲಕ ಉಂಟು ಮಾಡುತ್ತಿದ್ದ ಗಾಢವಾದ ಸಂಸ್ಕಾರಕ್ಕೆ ಹೋಲಿಸಿದರೆ, ಇವತ್ತು ಹೊಸದಾಗಿ ಓದುವ ರುಚಿಯನ್ನು ಮೊದಲ ಬಾರಿಗೆ ಕಂಡುಕೊಂಡ ಬಹುಸಂಖ್ಯಾತ ಸಾಹಿತ್ಯಾಸಕ್ತರಿಗೆ ನಮ್ಮ ಜನಪ್ರಿಯ ಬರಹಗಾರರೂ ಹಾಗೂ ಪತ್ರಿಕೆಗಳೂ ಒದಗಿಸುತ್ತಿರುವ ಸಾಹಿತ್ಯದ ಗುಣಮಟ್ಟ ನಿಜಕ್ಕೂ ಗಾಬರಿ ಹುಟ್ಟಿಸುವಂತಿದೆ. ಸಾಹಿತ್ಯವು ಒಂದು ಲಾಭದಾಯಕ ಉದ್ಯಮವೆಂಬುದನ್ನು ಕಂಡುಕೊಂಡ ಈ ವ್ಯಾಪಾರೀ ಮನೋಧರ್ಮದ ಈ ದುಷ್ಪರಿಣಾಮಗಳನ್ನು ತಡೆಗಟ್ಟುವುದು ಹೇಗೆ ಎನ್ನುವುದು ಇವತ್ತಿನ ಗಂಭೀರ ಸಾಹಿತ್ಯಾಸಕ್ತರೆಲ್ಲರ ಸಮಸ್ಯೆಯಾಗಿದೆ.

ಸಾಹಿತ್ಯದ ಮೂಲಕ ನಮ್ಮ ಜನದಲ್ಲಿ ತಕ್ಕ ವೈಚಾರಿಕತೆಯನ್ನು ಎಚ್ಚರಿಸುವುದು ಇವತ್ತಿನ ಅಗತ್ಯವಾಗಿದೆ. ಕಳೆದ ಆರೇಳು ದಶಕಗಳ ಹೊಸಗನ್ನಡ ಸಾಹಿತ್ಯದಲ್ಲಿ ಈ ವೈಚಾರಿಕತೆಯ ಅಂಶ ತಕ್ಕಮಟ್ಟಿಗೆ ಕಾಣಿಸಿಕೊಂಡರೂ, ಪ್ರಸ್ತುತ ದಶಕದಲ್ಲಿ. ಅದರಲ್ಲಿಯೂ ದಲಿತ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಈ ವೈಚಾರಿಕತೆ ಎನ್ನುವುದು ಹೆಚ್ಚು ಸಮಾಜಮುಖಿಯಾಗುತ್ತ, ಸಮಾಜದ ಹಲವು ಸ್ತರಗಳು ತಮ್ಮ ನಿಜವಾದ ವಾಸ್ತವಗಳನ್ನು ನೇರವಾಗಿ ಬಿಚ್ಚಿಡುತ್ತ ವೈಚಾರಿಕತೆಗೆ ಹೊಸ ಆಯಾಮಗಳನ್ನು ಒದಗಿಸಿವೆ. ನಮ್ಮ ಹಿಂದಿನ ಸಾಹಿತ್ಯದ ಧರ್ಮನಿಷ್ಠ ನಿಲುವುಗಳ ವೈಚಾರಿಕತೆಯೊಂದಿಗೆ ಹೋಲಿಸಿದರೆ ಈ ವಿಷಯ ಇನ್ನೂ ಸ್ಪಷ್ಟವಾಗುತ್ತದೆ. ನಮ್ಮ ಹಳಗನ್ನಡ ಸಾಹಿತ್ಯವನ್ನು ನಿಯಂತ್ರಿಸಿದ ಎರಡು ಮುಖ್ಯ ಶಕ್ತಿಗಳೆಂದರೆ, ಧರ್ಮ ಮತ್ತು ಪ್ರಭುತ್ವ. ಇವುಗಳಲ್ಲಿ ಪ್ರಭುಶಕ್ತಿಯನ್ನು ಕುರಿತು ನಿರಾಕರಣೆಯ ಹಾಗೂ ಪ್ರತಿಭಟನೆಯ ದನಿಗಳು ಆಗಾಗ ಕೇಳಿಬಂದರೂ, ಯಾವತ್ತೂ ಧರ್ಮವನ್ನು ಕುರಿತ ನಿರಾಕರಣೆಯ ಹಾಗೂ ಪ್ರತಿಭಟನೆಯ ದನಿಗಳು ಕೇಳಿಬರಲು ಸಾಧ್ಯವಾಗಲಿಲ್ಲ. ಅಷ್ಟರಮಟ್ಟಿಗೆ ಧರ್ಮವು ಸಾಹಿತ್ಯದ ಪ್ರೇರಕವೂ ನಿಯಂತ್ರಕವೂ ಆದ ಶಕ್ತಿಯಾಗಿ ವರ್ತಿಸಿದೆ. ಧರ್ಮನಿರಪೇಕ್ಷವಾದ ನಿಲುವುಗಳು ಗಟ್ಟಿಗೊಂಡದ್ದು ಕೇವಲ ಆಧುನಿಕ ಸಾಹಿತ್ಯದ ಸಂದರ್ಭದಲ್ಲಿಯೇ. ಹೀಗೆ ಧರ್ಮನಿಷ್ಠವಾದ ನಮ್ಮ ಹಿಂದಿನ ಸಾಹಿತ್ಯ ಅಂಥಂದಿನ ಕಾಲಕ್ಕೆ ಉಚಿತವಾದ ಹೊಸ ಧಾರ್ಮಿಕ ಹಾಗೂ ನೈತಿಕ ಮನುಷ್ಯನನ್ನು ನಿರ್ಮಾಣ ಮಾಡಿತಾದರೂ, ಮೂಲಭೂತವಾಗಿ ಸಾಮಾಜಿಕ ವಾಸ್ತವಗಳಾದ ಬಡತನ ಹಾಗೂ ಶೋಷಣೆಗಳನ್ನು ಅತ್ಯಂತ ಅಮುಖ್ಯವನ್ನಾಗಿ ಪರಿಗಣಿಸುತ್ತ, ಬಡತನವನ್ನು ವರ ಎಂದೋ, ದೈವಕೃಪೆ ಎಂದೋ ವೈಭವಿಸುತ್ತ, ಬಡತನವನ್ನು ಸಂಕಟವನ್ನು ಸಹಿಸಿಕೊಳ್ಳುವುದರ ಮೂಲಕವೇ ಮನುಷ್ಯನ ವ್ಯಕ್ತಿತ್ವ ಘನವಾಗುತ್ತದೆ ಎಂಬ ನಿಲುವನ್ನು ಎತ್ತಿಹಿಡಿಯುತ್ತ, ಒಂದರ್ಥದಲ್ಲಿ ಯಥಾಸ್ಥಿತಿಯನ್ನು ಬೆಂಬಲಿಸುತ್ತ, ಸಾಮಾಜಿಕ ತರತಮಗಳ ಹಾಗೂ ಶೋಷಕರ ಪರವಾಗಿಯೇ ನಿಂತಿತೆಂದು ಹೇಳುವುದು ಅನಿವಾರ್ಯವಾಗಿದೆ. ಆದರೆ ಯಾವ ಒಂದು ನಿಲುವು ಬಡತನವನ್ನು ಒಂದು ಶಾಪ ಎಂದು ಪರಿಗಣಿಸುತ್ತದೆಯೋ ಅದು, ಸಾಮಾಜಿಕ ವಾಸ್ತವಗಳನ್ನು ಸರಿಯಾಗಿ ಗ್ರಹಿಸಿ ಶೋಷಕ ಶಕ್ತಿಗಳ ವಿರುದ್ಧ ಧ್ವನಿ ಎತ್ತುತ್ತ ಬಹುಜನ ಹಿತವನ್ನು ತನ್ನ ಗುರಿಯನ್ನಾಗಿಸಿಕೊಂಡ ಕಾರಣದಿಂದ, ಅದು ನಿಜವಾದ ಅರ್ಥದಲ್ಲಿ ಧಾರ್ಮಿಕವಾದುದೆಂದು, ನಾನು ಪರಿಗಣಿಸುತ್ತೇನೆ. ಹಾಗೆಯೇ ವಿಧಿ–ಕರ್ಮ–ದೈವಗಳ ಹೆಸರಿನಲ್ಲಿ ಸಾಮಾಜಿಕ ಅಸಮಾನತೆಗಳನ್ನು ಸಮರ್ಥಿಸುವುದು ಅತ್ಯಂತ ಅಧಾರ್ಮಿಕವಾದ ನಿಲುವೆಂದೇ ನಾವು ಹೇಳಬೇಕಾಗುತ್ತದೆ. ಒಬ್ಬ ಬಡವನಾಗಿರುವುದಕ್ಕೆ ಆತನ ಪೂರ್ವ ಜನ್ಮದ ಪಾಪವೇ ಕಾರಣವೆಂದೂ, ಮತ್ತೊಬ್ಬ ಶ್ರೀಮಂತನಾಗಿರುವುದಕ್ಕೆ ಆತನ ಪೂರ್ವಜನ್ಮದ

ಪುಣ್ಯವೇ ಕಾರಣವೆಂದೂ, ಜನವನ್ನು ಧರ್ಮದ ಹೆಸರಿನಲ್ಲಿ ನಂಬಿಸುವ ಎಲ್ಲಾ ಕುತಂತ್ರಗಳನ್ನೂ, ನಮ್ಮ ಜನ ಗುರುತಿಸಿ ಖಂಡಿಸುವಂತಹ ಎಚ್ಚರವನ್ನು ಅವರಲ್ಲಿ ಮೂಡಿಸಬೇಕಾಗಿದೆ. ಹನ್ನೆರಡನೆಯ ಶತಮಾನದಷ್ಟು ಹಿಂದೆಯೇ ಶಿವಶರಣರು ದೇವಸ್ಥಾನಗಳನ್ನೆ ನಿರಾಕರಣೆ ಮಾಡಿದರೆಂಬುದು ಒಂದು ಮಹತ್ವದ ವೈಚಾರಿಕ ಕ್ರಾಂತಿಯಾಗಿರುವಾಗ, ಇವತ್ತು ದೇವಸ್ಥಾನವನ್ನು ಕೆಡವಿ ಅದರ ಮೇಲೊಂದು ದೇವಸ್ಥಾನವನ್ನು ಕಟ್ಟುತ್ತೇವೆ ಎನ್ನುವ ರಾಜಕಾರಣ–ಧರ್ಮಯುದ್ಧವವನ್ನು ಹೇಗೆ ಮೆಚ್ಚಬೇಕೋ ತಿಳಿಯದಾಗಿದೆ. ಚರಿತ್ರೆಯೊಳಗೆ ಎಂದೋ ಆದ ತಪ್ಪುಗಳನ್ನು ತಿದ್ದುತ್ತೇವೆ ಎಂದು, ತಪ್ಪುಗಳ ಚರಿತ್ರೆಯನ್ನೇ ನಿರ್ಮಿಸಲು ಹೊರಡುವುದು ಪ್ರಗತಿ ಪರವಾದ ಕ್ರಮವೇನಲ್ಲ. ಯಜ್ಞ ಯಾಗಾದಿಗಳನ್ನು ಮಾಡಿ ಬೆಂಕಿಗೆ ತುಪ್ಪವನ್ನು ಹೊಯ್ಯುವುದರಿಂದ, ಉತ್ಸವಾದಿ–ಯಾತ್ರಾ ಪ್ರದರ್ಶನಗಳಿಂದ, ಮತ್ತೆ ಎಲ್ಲರೂ ಸಂಸ್ಕೃತವನ್ನು ಮಾತನಾಡುವಂತೆ ಮಾಡುವುದರಿಂದ ಭಾಷಾ ಸಾಮರಸ್ಯವನ್ನು ಸಾಧಿಸ ಬಹುದು ಎಂಬ ಭ್ರಮೆಗಳಿಂದ, ನಾವು ಇವತ್ತಿನ ವೇಗಯುಗದಿಂದ ಮತ್ತೆ ಪ್ರಪ್ರಾಚೀನ ವಾದ ವೇದಯುಗಕ್ಕೇ ಹಿಮ್ಮುಖವಾಗಿ ಪ್ರಯಾಣ ಮಾಡಿದಂತಾಗುತ್ತದೆಯೇ ವಿನಾ, ಇಪ್ಪತ್ತನೆಯ ಶತಮಾನದ ವೈಜ್ಞಾನಿಕ ಯುಗದಿಂದ ಮುಂದಿನ ಇಪ್ಪತ್ತೊಂದನೆಯ ಶತಮಾನಕ್ಕೆ ಮುನ್ನಡೆದ ಹಾಗಾಗುವುದಿಲ್ಲ. ಏನು ಮಾಡಿದರೂ ಈ ದೇಶದಲ್ಲಿ ಯಾವುದೇ ಮೂಲಭೂತವಾದ ಬದಲಾವಣೆಗಳನ್ನು ತರಲು ಸಾಧ್ಯವಾಗುತ್ತಿಲ್ಲವಲ್ಲ ಎಂಬ ವಿಷಾದದ ಹಿನ್ನೆಲೆಯಲ್ಲಿ, ವೈಚಾರಿಕತೆ ಹಾಗೂ ಸೃಜನಶೀಲತೆಗಳು ದಿಗ್ಮೂಢ ವಾಗಿ ನಿಂತುಕೊಂಡಂತೆ ತೋರುತ್ತದೆ.

ಸ್ನೇಹಿತರೆ, ಪ್ರಸ್ತುತ ಪರಿಸ್ಥಿತಿಯಲ್ಲಿ ನಮ್ಮ ಸಾಹಿತ್ಯವು ಎದುರಿಸುತ್ತಿರುವ ಹಲವು ಬಿಕ್ಕಟ್ಟುಗಳನ್ನು ನಿಮ್ಮೆದುರು ಪ್ರಸ್ತಾಪಿಸಿದ್ದೇನೆ. ಈ ಪ್ರಸ್ತಾಪದೊಳಗಿನ ನನ್ನ ಆಲೋಚನೆಗಳು ಬದುಕಿನ ಬಗ್ಗೆ ಗಾಢವಾದ ಪ್ರೀತಿಯಿಂದ ಹಾಗೂ ಕಳಕಳಿ ಯಿಂದ ಮೂಡಿದವುಗಳೇ ಹೊರತು ನಿರಾಶೆಯಿಂದಲಾಗಲಿ, ವ್ಯಗ್ರತೆಯಿಂದಲಾಗಲಿ ಮೂಡಿದವುಗಳಲ್ಲ. ಯಾಕೆಂದರೆ ನಾನು ಎಂದೂ ನಿರಾಶಾವಾದಿಯಲ್ಲ ಮತ್ತು ಮಾನವೀಯ ಸಂಬಂಧಗಳಲ್ಲಿ ನಂಬಿಕೆಯನ್ನು ಕಳೆದುಕೊಂಡವನಲ್ಲ. ●

ದೇವನೂರ ಮಹಾದೇವ ಅವರೊಂದಿಗೆ

ಒಂದು ಸಂದರ್ಶನ

ನಮ್ಮ ಮುಖ್ಯ ಲೇಖಕರಲ್ಲೊಬ್ಬರಾದ ಶ್ರೀ ದೇವನೂರ ಮಹಾದೇವ ಅವರ 'ಕುಸುಮ ಬಾಲೆ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಂದಿದೆ. ಈ ಪ್ರಶಸ್ತಿ ಬಂದಾದಮೇಲೆ ಸಂಕ್ರಮಣ ಪತ್ರಿಕೆಯು ಕುಸುಮಬಾಲೆ–ಮಹಾದೇವ ಕುರಿತಂತೆ ವಿವಾದ ಒಂದನ್ನು ಆರಂಭಿಸಿದೆ. ಮಹಾದೇವ ಅವರಿಗೆ ಪ್ರಶಸ್ತಿ ಬಂದ ಸಂತಸದ ಸಂದರ್ಭ ಮತ್ತು ಈ ವಿವಾದ ಇವುಗಳ ಹಿನ್ನೆಲೆಯಲ್ಲಿ ಮಹಾದೇವ ಅವರನ್ನು ಸಂದರ್ಶಿಸುವ ಉದ್ದೇಶದಿಂದ 'ಸಂವಾದ'ದ ಪರವಾಗಿ ಶ್ರೀ ರಾಘವೇಂದ್ರ ಪಾಟೀಲ ಮತ್ತು ಶ್ರೀ ಡಿ. ಎಸ್. ನಾಗಭೂಷಣ, ಅವರಲ್ಲಿಗೆ ಹೋದೆವು. ಸುಮಾರು ಎರಡು ಗಂಟೆಗಳ ಕಾಲ ಮುಕ್ತವಾಗಿ ಮಾತಾಡಿದೆವು. ಈ ಮಾತುಕತೆಯ ಸಾರಾಂಶವನ್ನು ಇಲ್ಲಿ ದಾಖಲಿಸುತ್ತಿದ್ದೇವೆ. ಚರ್ಚೆಯನ್ನು ನಾವು ಧ್ವನಿಮುದ್ರಿಸಿಕೊಂಡಿಲ್ಲ. ಯಥಾವತ್ತಾಗಿ ಬರೆದುಕೊಂಡೂ ಇಲ್ಲ. ಸಂದರ್ಶನ ಮುಗಿದಾದ ಮೇಲೆ ನೆನಪಿನ ಆಧಾರದ ಮೇಲೆ ಬರೆದ ಲೇಖನ ಇದಾಗಿದೆ. ಆದ್ದರಿಂದ ಇಲ್ಲಿ ಬಳಕೆಗೊಂಡ ಮಾತುಗಳು ಚರ್ಚೆಯಲ್ಲಿ ಬಳಕೆಗೊಂಡ ತದ್ವತ್ ಮಾತುಗಳಾಗದಿರಬಹುದು. ಆದರೆ ಇಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಮಾತ್ರ ಚರ್ಚೆಯಲ್ಲಿ ಮೂಡಿಬಂದ ಅಭಿಪ್ರಾಯಗಳೇ ಆಗಿವೆ. –ಸಂ]

ಸಂವಾದ: ಮಹಾದೇವ, ನೀವು ಎಪ್ಪತ್ತರ ದಶಕದ ಆರಂಭದಲ್ಲಿ, ಕಥೆ ಬರೆಯಲು ಆರಂಭಿಸಿದಿರಿ. ನಿಮ್ಮ ಕಥೆಗಳು ಹೊಸದೊಂದು ಧ್ವನಿಯನ್ನು ಹೊತ್ತು ಬಂದವು. ಬಹುಶಃ ಅವು ಕನ್ನಡದ ಮೊದಲ ಗಮನಾರ್ಹ ದಲಿತ ಬರಹ ಕೂಡ ಆಗಿವೆ. ಆದರೆ ನಿಮ್ಮ ಈ ಆರಂಭದ ಕಥೆಗಳಲ್ಲಿ ರೊಚ್ಚು, ರೋಷ, ವ್ಯಕ್ತವಾಗದೇ ಒಂದು ತೆರನ ತಂಪಾದ ನಿರ್ಲಿಪ್ತ ಕೋಪ ಮೂಡಿ ಬಂದಿದೆ. ಇಂಥ ಒಂದು ನಿಲುವು ನಿಮಗೆ ನಿಮ್ಮ ಆರಂಭದ ಬರಹದಲ್ಲೇ ಹೇಗೆ ಸಾಧ್ಯವಾಯಿತು ? ನಿಮ್ಮ ಬಾಲ್ಯದ ಅನುಭವಗಳ ಹಿನ್ನೆಲೆ ಏನಾದರೂ ಇದರ ಹಿಂದೆ ಇದೆಯಾ ?

ಮಹಾದೇವ: ನಾನು ಬರೆಯಲು ಆರಂಭಿಸಿದಾಗ ಬರುತ್ತಿದ್ದಂತಹ ಕಥೆಗಳು–ನನ್ನ ಬಾಲ್ಯದ ಅನುಭವಗಳು–ಉದಾಹರಣೆಗೆ, ನನಗೆ ನನ್ನ ಅಜ್ಜಿ ಹೇಳುತ್ತಿದ್ದಂತಹ ಕಥೆಗಳು ಮತ್ತು ನನಗೆ ಒದಗಿದ ಸಹವಾಸ–ಆಗ ನನಗೆ ಸೂ. ರಮಾಕಾಂತ ಮತ್ತು ಆಲನಹಳ್ಳಿ ಕೃಷ್ಣನಂತವರ ಸಹವಾಸ ಒದಗಿತ್ತು. ಹೀಗೆ ಇವೆಲ್ಲಾ ಕಾರಣಗಳು ನನ್ನ ಕಥೆಗಳಲ್ಲಿನ ನಿಲುವಿಗೆ **ಕಾರಣ** ಆಗಿರಬಹುದು. ಮತ್ತೆ ... ನಾನು ಬರೆಯಲು

ಆರಂಭಿಸಿದಾಗಲೇ ನನಗೆ ಏನನಸ್ಸಿತ್ತು ಅಂದರೆ-ಹೇಳಬೇಕಾದ್ದನ್ನ ಪರಿಣಾಮಕಾರಿಯಾಗಿ ಮತ್ತು ಸಂಕ್ಷಿಪ್ತವಾಗಿ ಹೇಳಬೇಕು ಎನ್ನುವ ಭಾವನೆ ಇತ್ತು.

ಸಂ: ನವ್ಯ ಮಾರ್ಗ ಮೀರಿದ ಈ ಶೈಲಿ ನಿಮಗೆ ಒಮ್ಮೆಲೇ ಒದಗಿ ಬಂದದ್ದು ಹೇಗೆ ...

ಮ: ಗೊತ್ತಿಲ್ಲ....

ಸಂ: ದೇವರ ದಯವೇ ....

ಮ: ....(ನಗು)....

ಸಂ: ನೋಡಿ.... ನಿಮ್ಮ ತಂದೆ ಪೋಲೀಸ್ ಕಾನ್‌ಸ್ಟೇಬಲ್ ಆದವರು. ಅಂದರೆ ಸರ್ಕಾರಿ ನೌಕರಿಯಲ್ಲಿದ್ದವರು. ಹೀಗಾಗಿ ನಿಮಗೆ ಒಂದು ರೀತಿಯ secured ಜೀವನ ಲಭ್ಯವಾಗಿತ್ತು. ಆದ್ದರಿಂದ ನಿಮ್ಮ ಬಾಲ್ಯದಲ್ಲಿ ನೀವು ತೀವ್ರ ನೋವನ್ನು ಅನುಭವಿಸದೇ ಇದ್ದಿರಬಹುದು. ಅದಕ್ಕೇ ನಿಮ್ಮ ಕಥಾನಕಗಳಲ್ಲಿ ದಲಿತ ಶೋಷಣೆ ಕುರಿತು ಭಾವಾವೇಶದ ರೊಚ್ಚು, ರೋಷ ವ್ಯಕ್ತವಾಗದೇ ಇರಬಹುದೇ ...?

ಮ: ಇಲ್ಲ ಇಲ್ಲ. ನಮ್ಮಪ್ಪ ಪೋಲೀಸಾಗಿದ್ದಕ್ಕೆ ನನಗೆ ಸಮೃದ್ಧಿಯ ಜೀವನ ವೇನೂ ಸಿಕ್ಕಿಲ್ಲ. ನಾನು S S L.C. ಪಾಸುಮಾಡಿ ಇಲ್ಲಿ ಮೈಸೂರಿಗೆ ಕಾಲೇಜಿಗೆ ಬಂದೆ ನೋಡಿ.... 67–68ನೇ ಇಸ್ವಿಗಳಲ್ಲಿ.... ಆಗ ಮಳೆಗಿಳೆ ಬರದೇ ಬರಗಾಲ ಸೈತ ಇತ್ತು.... ಆಗ ಇಲ್ಲಿ ನನಗೆ ಊಟಕ್ಕೆ ಏನೇನೂ ವ್ಯವಸ್ಥೆ ಇರಲಿಲ್ಲ ... ಸಾಲಾ ಮಾಡಿ ಕಾರಾ ಮಂಡಕ್ಕಿ ತಿಂದು ದಿನಾ ಕಳೀತಿದ್ದೆ. ಹಂಗೆ ಸಮೃದ್ಧಿಯ ಬದುಕೇನೂ ಅಲ್ಲ...

ಸಂ: ಇದು ಬಡತನದ ಪ್ರಶ್ನೆ ಆಯ್ತು.... ಎಲ್ಲ ಬಡವರಿಗೂ ಸಾಮಾನ್ಯವಾದ ಅನುಭವ ...

ಮ: ಹಾಗಲ್ಲ, ಬರೀ ಅದಷ್ಟೇ ಆಗಿರ್ಲಿಲ್ಲ ...

ಸಂ: ನೀವು ನಿಮ್ಮ ದ್ಯಾವನೂರು ಸಂಕಲನದ ಕಥೆಗಳಲ್ಲಾಗಲೀ ಮತ್ತು ಒಡಲಾಳದಲ್ಲಾಗಲೀ ನಿಮ್ಮ ದಲಿತ ಅನುಭವಗಳಿಗೆ ಸೀಮಿತಗೊಂಡು ಅವುಗಳಿಗೆ ಮಾತ್ರ ಅಭಿವ್ಯಕ್ತಿ ನೀಡಿದ್ದೀರಿ. ಅಂದರೆ ಈ ಕೃತಿಗಳಲ್ಲಿ ದಲಿತ ಲೋಕಕ್ಕೆ ಹೊರತಾದ ಅನುಭವಗಳು ಬರುವುದೇ ಇಲ್ಲ. ಆದರೆ ನಿಮ್ಮ ಕುಸುಮಬಾಲೆ ಕೃತಿಯಲ್ಲಿ ಮೊಟ್ಟ ಮೊದಲಿಗೆ ದಲಿತೇತರ ಲೋಕದ ಚಿತ್ರ ಕೊಡಲು ಪ್ರಯತ್ನಿಸಿದ್ದೀರಿ. ಈ ಪ್ರಯತ್ನ ದಲ್ಲಿ ನಿಮಗೆ ಮಾನಸಿಕ ಹಿಂಜರಿಕೆ ಏನಾದರೂ ಅನ್ನಿಸಿತೆ ?

ಮ: ನನ್ನ ಕಥೆಗಳಲ್ಲಿ ಮತ್ತು ಒಡಲಾಳದಲ್ಲಿ.... ನಾನು ನೋಡಿದ ಪಾತ್ರಗಳು– ನನ್ನ ಲೋಕದ, ಅನುಭವದ ಪಾತ್ರಗಳು ಬರುತ್ತವೆ. ಅವು ಹೇಗಿದ್ದವೋ ಹಾಗೇ ಬರುತ್ತವಂತಲ್ಲ.... ಅಂದರೆ ನಾನು ಅವುಗಳನ್ನ ಹ್ಯಾಂಡಲ್ ಮಾಡಲು ಹೋಗು ವುದಿಲ್ಲ. ನಾನು interfere ಮಾಡಲು ಹೋಗುವುದಿಲ್ಲ.... ಅಂದರೆ ಆ ಪಾತ್ರಗಳನ್ನ

ಅವುಗಳ ಅತ್ಯಂತ ಸಹಜ ವಾತಾವರಣದೊಳಗೆ ಇಡುವ ಪ್ರಯತ್ನ ಮಾಡ್ತೀನಿ. ಈ ಪಾತ್ರಗಳು ನನ್ನ ವರ್ಗದವೇ ಆಗಿದ್ದವು ... ಇನ್ನು ಕುಸುಮಬಾಲೆಯೊಳಗೆ–ನಾನು ಬರೀ ನೋಡಿದವಲ್ಲ–ಇನ್ನೂ ಬೇರೆಯದನ್ನ ಹಿಡಿಯಲಿಕ್ಕೆ ನೋಡಿದ್ದೇನೆ....ಅಂದರೆ ಬರೀ ನನ್ನ ಅನುಭವದ ಅಂಗಳದೊಳಗೇ ನಿಲ್ಲುವದಲ್ಲ, ಅದನ್ನು ದಾಟಿ ಹೋಗಲು ನೋಡುವದು....ಒಂದು ರೀತಿಯಾಗಿ ನನ್ನ ಅನುಭವಗಳನ್ನು ಇನ್ನೊಂದಿಷ್ಟು ಬಾಚಿ ಕೊಳ್ಳುವುದು....

ಸಂ: ಅಲ್ಲ. ನಾವು ಈ ಪ್ರಶ್ನೆ ಯಾಕೆ ಕೇಳಿದೆವೆಂದರೆ–ಕುಸುಮಬಾಲೆಯಲ್ಲಿ ಬರುವ ಮುಖ್ಯ ಎಳೆ ಈ ವಂಶ–ಜಾತಿಗಳ ಶುದ್ಧತೆಯ ಅಹಂಕಾರವನ್ನ ಸ್ಫೋಟ ಗೊಳಿಸುವದಾಗಿದೆ....ಜಾತಿ ಸಂಕರವನ್ನ ಸಹಿಸಲಾರೆನೆನ್ನುವ ನಮ್ಮ ಸಾಮಾಜಿಕ 'ಇಗೊ'ದ ಬಲೂನಿಗೆ ಮುಳ್ಳು ಚುಚ್ಚುವುದು ಇದರ ಮುಖ್ಯ ಎಳೆಯಾಗಿದೆ. ಆದರೆ ಈ ಎಳೆ ಅತ್ಯಂತ ತೆಳುವಾಗಿದೆ ಮತ್ತು ಅದು ಮೂರ್ತಗೊಳ್ಳುವುದಿಲ್ಲ. ಇದು ನೀವು ನಿಮ್ಮ ಖಾಸಾ ಅನುಭವ ಲೋಕವನ್ನು ಮೀರುವ ಪ್ರಯತ್ನದಲ್ಲಿನ ಮಾನಸಿಕ ಹಿಂಜ ರಿಕೆಯಿಂದ ಆದ ಪರಿಣಾಮವಾಗಿರಬಹುದೇ ?....ಅದಕ್ಕೇ ನೋಡಿ ಕಾದಂಬರಿ ಅತ್ಯಂತ ದಟ್ಟ ಕುಸುರುಗಾರಿಕೆಯ ತಂತ್ರದಲ್ಲಿ ಹುಗಿದುಕೊಂಡುಬಿಡುತ್ತದೆನಿಸುತ್ತದೆ....

ಮ: ಅಲ್ಲ.... ಒಂದು ... ಕುಸುಮಬಾಲೆಯಲ್ಲಿ ನಾನು ಹೊಸ ತಂತ್ರ ಬಳಸಿ ದ್ದೇನೆ ಅಥವಾ ನನ್ನ ಈ ಬರವಣಿಗೆ ಒಂದು ತಂತ್ರ, ಪ್ರಯೋಗ ಅಂತ ನಾನು ಖಂಡಿತ ವಾಗಿ ಭಾವಿಸುವುದಿಲ್ಲ. ಅದರಲ್ಲಿ ತಂತ್ರ ಅನ್ನುವುದು ಇಲ್ಲವೇ ಇಲ್ಲ.... ನಾನು ಯಾವಾಗಲೂ ಸಹಜವಾಗಿ ಕಥೆ ಹೇಳುವವ. ತಂತ್ರ ಅನ್ನುವಂಥಾದ್ದು ಅಲ್ಲಿ ಇರುವು ದಿಲ್ಲ. ಕುಸುಮಬಾಲೆಯಲ್ಲಿ ಈಗ ಜಾನಪದ ಸಹಜ ಕಥೆಯ ರೀತಿ ಜೋತಮ್ಮಗಳು ಬಂದು ಕಥೆ ಹೇಳತಾವೆ....

ಸಂ: ಅದು ತಂತ್ರವೆಂದೇ ಅನಿಸುತ್ತದೆ.... ಕಥೆ ಹೇಳುವ ರೀತಿಯೋ ಅಲ್ಲವೇ ಈ ತಂತ್ರವೆನ್ನುವುದು ...

ಮ: ಹೌದಾ.... (ಮುಗುಳುನಗೆ)

ಸಂ: ಆದಾಯಿತಲ್ಲ.... ಈ ಕಥಾನಕದ ಮುಖ್ಯ ಎಳೆಸೋಡಿ....ಎಷ್ಟೊಂದು ತೆಳು ವಾಗಿ ಬಂದಿದೆ. ಕುಸುಮಳ ಒಂದು ಘಟನೆ–ಕೆಂಪಿಯ ಒಂದು ಘಟನೆ....

ಮ: ಅದೇ ಮುಖ್ಯ ಎಳೆ ಅಂತ ಯಾಕೆ ಇಟ್ಟಕೋಬೇಕು....

ಸಂ: ಕುಸುಮಬಾಲೆ ಹಾಗಿದ್ದರೆ ಏನನ್ನ ಹೇಳ್ತದೆ ? ಅದು ತುಂಬ ಅಮೂರ್ತ ವಾಗಿಬಿಡ್ತದೆ. ಅದು ಒಂದು ತತ್ವಪದ ಆಗಬಹುದಿತ್ತು, ಆದರೆ ಕಾದಂಬರಿ ಆಗಲು ಹೋಗಿದೆ, ಎರಡೂ ಆಗಿಲ್ಲ.... ನೀವು ಹಿಂದೊಮ್ಮೆ ಮಾತಾಡ್ತಾ–ನಾನು ಓದುಗನನ್ನ ಹೊರಗಡೆ ಇಟಕೊಂಡು ಬರೆಯುವುದಿಲ್ಲ....ನಾನೇ ಓದುಗ ಆಗಿ ನನ್ನನ್ನು ಕೂಡಿಸಿ

ಕೊಂಡು ನಾನು ಕಥೆ ಹೇಳ್ತೀನಿ ಅಂತ ಹೇಳಿದ್ದಿರಿ. ಇಲ್ಲಿ ಅದು ಅತಿಗೆ ಹೋಗಿದೆ ಅನಿಸ್ತದೆ. ಬಹುಃಶಃ ಕುಸುಮಬಾಲೆ ನಿಮ್ಮನ್ನು ಬಿಟ್ಟು ಮತ್ಯಾರಿಗೂ ತಲುಪೇ ಇಲ್ಲ ಅನ್ನುವ ಅಭಿಪ್ರಾಯ ಬರ್‍ತಾ ಇದೆ

ಮ: ಹಾಗೇ ಅಂದಕೊಳ್ಳಿ....ಬುದ್ಧಿವಂತರಿಗೆ ಅರ್ಥವಾಗ್ತಿರಲಿಕ್ಕಿಲ್ಲ .. (ನಗು)

ಸಂ: ಹಾಗಲ್ಲ. ಈಗ ನೋಡಿ ಕಾದಂಬರಿಯಲ್ಲಿ ಜೀತವಿಮೋಚನಾ ಚಳುವಳಿಯ ದಲಿತ ಸಂಘರ್ಷ ಸಮಿತಿಯ ಮೆರವಣಿಗೆಯ ವಿವರ ಬರ್‍ತದೆ. ಇದು ಕಾದಂಬರಿಯ ಮುಖ್ಯ ಎಳೆಗೆ ತನ್ನನ್ನು ಜೋಡಿಸಿಕೊಳ್ಳುವುದೇ ಇಲ್ಲ. ಸ್ವತಂತ್ರವಾಗಿ ಈ ಬರಹ ಇಷ್ಟವಾಗುತ್ತದೆ. ಅದರಲ್ಲಿನ ತಿಳಿಹಾಸ್ಯವಂತೂ ನಿಮ್ಮ ವೈಶಿಷ್ಟ್ಯ ... ಆದರೆ ಈ ಅಧ್ಯಾಯ ಕಾದಂಬರಿಯ ಮುಖ್ಯ ಎಳೆಯೊಂದಿಗೆ ಸೇಂದ್ರೀಯವಾಗಿ ಜೋಡಿಸಿ ಕೊಳ್ಳುವುದಿಲ್ಲ.... ಒಂದು ಮುಖ್ಯಧಾರೆ ಕಾದಂಬರಿಯಲ್ಲಿ ಹರಿಯುತ್ತಿದ್ದರೆ ಮುಂದು ಗಡೆ ಇನ್ನೊಂದು ಧಾರೆ ಕಾಣುತ್ತದೆ. ಅಕ್ಕಪಕ್ಕದಲ್ಲಿ ಇನ್ನಷ್ಟು ಧಾರೆ ಕಾಣಿಸುತ್ತವೆ. ಅವೆಲ್ಲಾ ಎಲ್ಲೋ ಸೇರಿಕೊಳ್ಳಬಹುದೆಂದರೆ ಅವು ಸೇರಿಕೊಳ್ಳುವುದೇ ಇಲ್ಲ. ಎಲ್ಲಾ ಅಕ್ಕಪಕ್ಕದಲ್ಲಿ ಬೇರೆ ಬೇರೆಯಾಗಿ ಹರಿಯುತ್ತವೆ ...

ಮ: ಹರಿಯಲಿ ಬಿಡಿ....ಅಂತೂ ನೆಲಕ್ಕೆ ತಂಪೋ .. (ನಗು)

ಸಂ: ನೀವು ನಿಮ್ಮ ಕಥೆಗಳಲ್ಲಿ ಆರಂಭದಿಂದಲೇ ನಿಮ್ಮದೇ ಆದ ಒಂದು ಭಾಷೆ ಯನ್ನು ರೂಪಿಸಿಕೊಂಡಂತೆ ಕಾಣುತ್ತದೆ. ಅದರ ಅವಶ್ಯಕತೆ ಏನಿತ್ತು ?....ಇಂಥದಕ್ಕೆ ಪ್ರೇರಣೆ. ಪ್ರಭಾವ ದೊರೆತದ್ದು ಹೇಗೆ ?

ಮ: ಪ್ರಭಾವ ಅಂತಲ್ಲ.... ಪಾತ್ರಗಳನ್ನ ಅವುಗಳ ಸ್ವಾಭಾವಿಕ ವಾತಾವರಣದಲ್ಲಿ ಇಡಬೇಕೆನ್ನುವ ನನ್ನ ಪ್ರಯತ್ನದ ಬಗ್ಗೆ ಹೇಳಿದೆನಲ್ಲ... ಅದರ ಅಂಗವಾಗಿಯೇ ಇದು ಬಂದಿರಬೇಕು. ಅದೂ ಅಲ್ಲದೇ ಕಥೆಗಳಲ್ಲಿ ಈ ಭಾಷೆ ಬಳಸಿದಾಗ ಬಂದ ಪ್ರತಿ ಕ್ರಿಯೆ–ಸಾಹಿತ್ಯದ ಗೆಳೆಯರು ಇದನ್ನು ಸ್ವೀಕರಿಸಿದ ರೀತಿ, ನೀಡಿದ ಪ್ರೋತ್ಸಾಹ–ಇವು ಕೂಡ ನನ್ನ ಈ ಭಾಷೆಯ ಬಳಕೆಯ ಬಗ್ಗೆ ನನಗೆ ಪ್ರೇರಣೆ ನೀಡಿರಬೇಕು....

ಸಂ: ನೀವು ಲೋಹಿಯಾರವರ ಸಮಾಜವಾದೀ ಚಿಂತನೆಯಿಂದ ಪ್ರಭಾವಿತ ರಾದವರು. ಕರ್ನಾಟಕ ಸಮಾಜವಾದೀ ಯುವಜನ ಸಭಾದ ಸಂಚಾಲಕರಾಗಿ ಕೆಲಸ ಮಾಡಿದ್ದೀರಿ. ನೀವು ಸಮಾಜವಾದಿ ಚಿಂತನೆಯಿಂದ ಪ್ರಭಾವಿತರಾಗಲು ನಿಮ್ಮಲ್ಲಿನ ತುಡಿತಗಳು ಕಾರಣವೋ ಅಥವಾ ಆಕಸ್ಮಿಕವಾಗಿ ಆದದ್ದೋ....

ಮ: ಅದು ಆಕಸ್ಮಿಕವಾದದ್ದೆನಿಸುತ್ತದೆ.... ಆಗ ಆ ಸಂಘಟನೆಯ ಸಂಪರ್ಕದಲ್ಲಿ ಬಂದೆ....

ಮ: ಹಾಗಂದರೆ ನೀವು ಆಗ ಕಮ್ಯುನಿಸ್ಟ್ ಸಂಘಟನೆಯ ಸಂಪರ್ಕಕ್ಕೆ ಬಂದಿದ್ದರೆ ಅದನ್ನು ಸೇರುತ್ತಿದ್ದಿರಾ ?

ಮ: ಹೌದೆನಿಸುತ್ತದೆ....

ಸಂ: ಅಂದರೆ R.S.S. ಸಂಪರ್ಕದಲ್ಲಿ ಬಂದಿದ್ದರೆ? ಅದನ್ನು ಸೇರುತ್ತಿದ್ದಿರಾ?

ಮ: ಇಲ್ಲ....ನಾನು R.S.S.ನಲ್ಲಿ ಇದ್ದು ಹೊರಗೆ ಬಂದವನು... ಶಾಲೆಯಲ್ಲಿ ಇದ್ದಾಗ ನಾನೂ R.S.S.ಗೆ ಹೋಗುತ್ತಿದ್ದೆ. ಒಂದು ರೀತಿಯಾಗಿ ಅದರ ಪ್ರಭಾವ ದಲ್ಲೇ ಇದ್ದೆ....ಒಂದು ನೆನಪು ಬರ್‍ತದೆ....ಮೋಹನ ಅಂತ–ಈಗ ಎಲ್ಲಿಯೋ ಇಂಜಿನಿಯರ್ ಆಗಿದಾನೆ....ಬ್ರಾಹ್ಮಣರ ಹುಡುಗ. ಅವನೂ ಸಂಘದ ಕಾರ್ಯಕರ್ತ. ಅವ ಒಮ್ಮೆ ನನ್ನ ಎಂಜಲನ್ನು ಎತ್ತಿದ. ನನಗೆ ಅದು ಆಶ್ಚರ್ಯ ಅನಿಸಿತ್ತು. ಪ್ರಭಾವ ಬೀರಿತ್ತು. ಆದರೆ ಕ್ರಮೇಣ ಅವರು ಹೇಳುವ ಎಲ್ಲರೂ ಒಂದೇ ಅನ್ನುವ ಮಾತು ನಟನೆ ಅಂತ ತೋರತೊಡಗಿತು ಮತ್ತು ಇದೆಲ್ಲಾ ಅಲ್ಲದೇ, ಬರೀ ಅವರ ಸಂಪರ್ಕವೇ ಸಾಕು, ಒಂದು ರೀತಿಯ ಮುಸ್ಲಿಂರ ಬಗೆಗೆ, ಕ್ರಿಶ್ಚಿಯನ್ನರ ಬಗೆಗೆ ತನ್ನಿಂದ ತಾನೇ ದ್ವೇಷಭಾವನೆ ಮೂಡಿಬಿಡ್ತದೆ....ಅದನ್ನ ಅವರು ವ್ಯಕ್ತವಾಗಿ ಹೇಳದಿದ್ದರೂ, ಕಲಿಸದಿದ್ದರೂ ಅದು ಸಹಜವಾಗಿ ನಮ್ಮ ಮನಸ್ಸಿನಲ್ಲಿ ಮೂಡ್ತದೆ....ಹೀಗಾಗಿ ನಾನು R.S.S. ಬಿಟ್ಟವ....ಅದಕ್ಕೆ ಅದನ್ನ ಮತ್ತೆ ಸೇರುವ ಪ್ರಶ್ನೆ ಇಲ್ಲ....

ಸಂ: ಸಮಾಜವಾದೀ ಚಿಂತನೆಗಳ ಪ್ರಭಾವ ನಿಮ್ಮ ಕಥೆಗಳ ಮೇಲೆ ಆಗಿರ ಬಹುದಲ್ಲವೇ?

ಮ; ಆಗಿರಬಹುದು,... ಸಹಜವಾಗಿ.

ಸಂ: ಹಾಗೆಯೇ. ನೀವು ಹೇಳಿದಿರಲ್ಲ... ಸಮಾಜವಾದೀ ಚಿಂತನೆಯ ಪ್ರಭಾವಕ್ಕೆ ಒಳಗಾದದ್ದು ಆಕಸ್ಮಿಕವೆಂದು. ಈ ಆಕಸ್ಮಿಕದಲ್ಲಿ ನೀವು ಕಮ್ಯುನಿಷ್ಟ್ ಚಿಂತನೆಯ ಪ್ರಭಾವಕ್ಕೆ ಒಳಗಾಗಿದ್ದರೆ ನಿಮ್ಮ ಕಥೆಗಳು ಇದೇ ರೂಪದಲ್ಲಿ ಬರುತ್ತಿದ್ದವೆ...

ಮ: ನಾನು ಬರೆಯುವಾಗ ನನಗೆ ಈ ಯಾವ ಚಿಂತನೆಗಳೂ ಬದ್ಧತೆಗಳಾಗಿ ಕಾಡುವುದಿಲ್ಲ. ಸಮಾಜವಾದಿ ಚಿಂತನೆಗಳಾಗಲೀ, ಕಮ್ಯುನಿಷ್ಟ್ ಚಿಂತನೆಗಳೇ ಆಗಲಿ, ದಲಿತ ಸಂಘರ್ಷ ಸಮಿತಿಯ ಚಟುವಟಿಕೆಗಳೇ ಆಗಲಿ.... ಇವು ಯಾವುವೂ ಬದ್ಧತೆಗಳಾಗುವುದಿಲ್ಲ....

ಸಂ: ಹಾಗಿದ್ದರೆ, ನೀವು ಆಕಸ್ಮಿಕವಾಗಿ ಕಮ್ಯುನಿಷ್ಟ್ ಪಕ್ಷ ಸೇರುವಂತಾಗಿದ್ದರೆ ನೀವು ಆ ಪಕ್ಷದಲ್ಲಿ ಉಳಿಯಲು ಸಾಧ್ಯವಾಗುತ್ತಿತ್ತೆ?

ಮ: ಆಗುತ್ತಿರಲಿಲ್ಲಾಂತ ಕಾಣ್ತದೆ...ನನ್ನ ಬರವಣಿಗೆಯನ್ನ ನಿರ್ದೇಶಿಸಕ್ಕಾಗದೆ ಹೊರಕ್ಕೆ ಹಾಕ್ತಿದ್ರೋ ಏನೋ...

ಸಂ: ಈಗ ದಲಿತ ಸಂಘರ್ಷ ಸಮಿತಿ ಹೇಗಿದೆ ಅನಿಸ್ತದೆ....

ಮ: ಅದು ಹಿಂದಕ್ಕೂ ಹೋಗ್ತಾ ಇಲ್ಲ, ಮುಂದಕ್ಕೂ ಬರ್‍ತಾ ಇಲ್ಲ ಅನಿಸ್ತದೆ.

ಸಂ: ಇದಕ್ಕೆ ನಿಮ್ಮಂಥವರ ನಿಷ್ಕ್ರಿಯತೆಯೇ ಕಾರಣವಲ್ಲವೆ ? ನೀವೂ ರಾಜ್ಯ ಸಂಚಾಲಕರಾಗಿದ್ದಿರಿ....

ಮ: ನಾನು ರಾಜ್ಯ ಸಂಚಾಲಕನಾಗಿದ್ದಾಗಲೇ ಜಿಲ್ಲಾ ಸಂಚಾಲಕರಿಗೆ ತಾವು ಜಿಲ್ಲಾ ಸಂಚಾಲಕರು ಅಂತ ಅನಿಸಿದ್ದು....ದಲಿತ ಸಂಘರ್ಷ ಸಮಿತಿಯ ಸಮಸ್ಯೆ ಏನಂದರೆ ಅದು ಸಮಾಜದ ಡಾಕ್ಟ್ರಾಗಿ ವರ್ತಿಸಬೇಕಾದದ್ದು....ಆದರೆ ಅದು ಪೇಶಂಟ್‌ನಂತೆ ವರ್ತಿಸ್ತಾ ಇದೆ. ನಾವು ಈ ತರದ ತಪ್ಪು ಮಾಡಿದಿವಿ ಅಂತ ಈಗ ನನಗೆ ಗೊತ್ತಾಗ್ತಾ ಇದೆ.

ಸಂ: ಪರಿಸ್ಥಿತಿ ಹೀಗಿರುವಾಗ ಅವು ರಾಜಕೀಯಕ್ಕೆ ಇಳಿಯುವುದು ಎಷ್ಟರ ಮಟ್ಟಿಗೆ ಸರಿ ?

ಮ: ಹಂಗಲ್ಲ.... ನಾವು ಎಲ್ಲಾ ರೀತಿಯಿಂದ ಪರಿಶುದ್ಧಿ ಮಾಡಿಕೊಂಡೇ ಏನಾದರೂ ಕೆಲಸಕ್ಕೆ ಹೋಂಡ್ತೀವಿ ಅಂದರೆ ಅದು ಆಗದ ಮಾತು...ಕೆಲಸಾ ಮಾಡ್ತಾ ಮಾಡ್ತಾನೇ ಸರಿಹೋಗಬೇಕು....

ಸಂ: ನಿಮಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ಮೇಲೆ ನೀವು ವಿವಾದಕ್ಕೆ ಸಿಕ್ಕಿಹಾಕಿಕೊಂಡಿದ್ದೀರಿ. ಇತ್ತೀಚಿನ ಸಂಕ್ರಮಣಗಳಲ್ಲಿ ಬಂದ ಲೇಖನ–ಪ್ರತಿಕ್ರಿಯೆಗಳನ್ನು ನೀವು ಗಮನಿಸಿರಬಹುದು, ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ?

ಮ: ಬೇಜಾರು ಜಾಸ್ತಿ ಆಗಿ ಆಗಿ ಈಗ ಅದರ ತೀವ್ರತೆ ಕಳೆದು ಹೋಗಿದೆ,... ಅಲ್ಲ, ಕುಸುಮಬಾಲೆ ನಿಮಗೆ ಒಳ್ಳೆಯ ಕಾದಂಬರಿ ಅನಿಸದಿದ್ದಲ್ಲಿ–ಅದು ಅರ್ಥವಾಗುವುದಿಲ್ಲ ಅಂತ ಅನಿಸಿವಲ್ಲಿ–ಚಂಪಾ ಆಗಲಿ ಅಥವಾ ಮತ್ತೆ ಯಾರೇ ಆಗಲಿ-ಅದರ ಬಗ್ಗೆ ಹಾಗೆ ಬರೆದರೆ ನನಗೆ ಬೇಜಾರೇನೂ ಆಗುವುದಿಲ್ಲ ಆದರೆ ಕೇವಲ ಊಹಾಪೋಹದ ಮೇಲೆ ವೈಯುಕ್ತಿಕ ಆರೋಪ ಮಾಡುವುದರಿಂದ ಪ್ರಯೋಜನವಿಲ್ಲ. ನನ್ನ ಕೃತಿಯಲ್ಲಿ ಅಂತಿಮವಾಗಿ ಏನನ್ನು ಉಳಿಸಿಕೊಳ್ಳಬೇಕು, ಏನನ್ನು ಬಿಡಬೇಕು ಅನ್ನುವುದು ಸಂಪೂರ್ಣವಾಗಿ ನನಗೆ ಸೇರಿದ್ದು. ಅದಕ್ಕೆ ನಾನೇ ಹೊಣೆ, ಬೇರೆ ಯಾರೂ ಅಲ್ಲ. ಈ ಸಂಬಂಧವಾಗಿ ಬೇರೆಯವರ ಕಡೆಗೆ ಬೊಟ್ಟು ಮಾಡುವುದು ಸದಭಿರುಚಿ ಆಗಲಾರದು.

ಸಂ: ನಿಮ್ಮ ಕೃತಿ ಕುರಿತ ವಿಮರ್ಶೆಯೊಂದು ಪತ್ರಿಕೆಯಲ್ಲಿ ಪ್ರಕಟವಾಗುವ ಮೊದಲು ಅದರ ಕೆಲವು ಭಾಗಗಳನ್ನು ನೀವು ತೆಗೆಸಿ ಹಾಕಿದಿರೆನ್ನುವ ಆರೋಪವಿದೆಯಲ್ಲ ?

ಮ: ಅದು ಹಾಗಲ್ಲ. ಚಂಪಾ ಈ ಸಂಬಂಧ ವಿಮರ್ಶೆಯ ಮಾಫಿಯಾ ಅದು ಇದೂ ಅಂತ ಭಯಾನಕ ಶಬ್ದ ಬಳಸಿ ಏನನ್ನೋ ಮಾಡಬಾರದ್ದನ್ನ ಮಾಡಲಾಗಿದೆ ಅನ್ನುವ ಅಭಿಪ್ರಾಯ ಮೂಡಿಸಲು ಪ್ರಯತ್ನಿಸಿದ್ದಾರೆ. ಆದರೆ ಆಗಿದ್ದೆಂದರೆ–ಡೆಕನ್ ಹೆರಾಲ್ಡ್‌ಗೆ ಪೋಲಂಕಿಯವರು ಕುಸುಮಬಾಲೆಯ ಬಗ್ಗೆ ಬರೆದು ಕಳುಹಿಸಿದ

ಲೇಖನದಲ್ಲಿ ಕೃತಿಯಲ್ಲಿಲ್ಲದ ಭಾಗವನ್ನು ಉಲ್ಲೇಖಿಸಿ ಕೆಲವು ಅಭಿಪ್ರಾಯ ಮಂಡಿಸಿದ್ದ ರೆನ್ನುವುದು ಪತ್ರಿಕೆಯಲ್ಲಿನ ಓರ್ವ ಗೆಳೆಯನಿಂದ ತಿಳಿಯಿತು. ಆಗ ನಾನು ಶ್ರೀ ಪೋಲಂಕಿಯವರಿಗೆ ಪುಸ್ತಕದಲ್ಲಿಲ್ಲದ ಭಾಗದ ಮೂಲಕ ಪುಸ್ತಕವನ್ನು ಮತ್ತು ಲೇಖಕ ನನ್ನು ಚರ್ಚೆಗೀಡು ಮಾಡುವುದು ಸರಿಯಲ್ಲವೆಂದೂ, ಲೇಖನದಲ್ಲಿ ಬದಲಾವಣೆ ಮಾಡಲು ಇಷ್ಟವಿಲ್ಲದಿದ್ದರೆ, ಕನಿಷ್ಠ ಚರ್ಚೆಗೆ ನಿಮಿತ್ತವಾದ ಆ ಭಾಗ ಪುಸ್ತಕದಲ್ಲಿ ಸೇರಿಲ್ಲವೆನ್ನುವ ಟಿಪ್ಪಣಿಯನ್ನಾದರೂ ಬರೆಯಬೇಕೆಂದು ಸೂಚಿಸಿದೆ. ಆದರೆ ಅವರು ನನ್ನ ಸೂಚನೆಯನ್ನು ಒಪ್ಪದಿದ್ದಾಗ ಲೇಖನದ ಅಂಥ ಉಲ್ಲೇಖಗಳನ್ನು ತೆಗೆಯಲು ಪತ್ರಿಕೆಗೆ ಮನವಿ ಮಾಡಬೇಕಾಯಿತು. ಅಷ್ಟೆ....

[ಲೇಖನ: **ರಾಘವೇಂದ್ರ ಪಾಟೀಲ**]

ನನ್ನ ಬರವಣಿಗೆಯಲ್ಲಿ ನಾನೆಲ್ಲಿದ್ದೇನೆ ? ನಾನೊಬ್ಬ ಬರಹಗಾರ ಎಂದುಕೊಂಡಾಗ ನನಗೆ ಎರಡು ಕಥೆಗಳು ಮನಸ್ಸಿಗೆ ಬರುತ್ತವೆ. ಒಂದು, ಕ್ರಿಸ್ತಪೂರ್ವದಲ್ಲಿದ್ದ ಆದಿನಾಥನೆಂಬ ಜೈನ ದೊರೆಯದ್ದು. ಆತ ಒಂದು ಬೆಳಿಗ್ಗೆ ಎದ್ದು ನೋಡುತ್ತಾನೆ, ಅವನ ತಲೆಯ ಒಂದು ಕೂದಲು ನೆರೆತಿದೆ. ಅವನಿಗೆ ತಕ್ಷಣವೇ ಬದುಕಿನ ಕ್ಷಣಿಕತೆಯ–ಹುಟ್ಟು, ಸಾವು, ಎಲ್ಲದರ ದರ್ಶನವಾಯಿತು. ಆವನು ರಾಜ್ಯ, ಕೋಶ ಎಲ್ಲ ಬಿಟ್ಟು ತಪಸ್ಸು ಮಾಡಲು ಕಾಡಿಗೆ ಹೊರಟು ಹೋದ.

ಇನ್ನೊಂದು. ಸುಮಾರು ನನ್ನ ತರವ ಮನುಷ್ಯನಿಗೆ ಸಂಬಂಧಿಸಿದ್ದು, ಅವನು ಒಂದು ದಿನ ನದಿಯೊಂದರಲ್ಲಿ ನೀರು ಕುಡಿಯುತ್ತಿದ್ದಾಗ ಅವನ ಬೊಗಸೆಯಲ್ಲಿ ಒಂದು ಉದ್ದನೆಯ ಕೂದಲು ಕಂಡಿತು. ತಕ್ಷಣ ಅವನ ಕಣ್ಮುಂದೆ ಒಬ್ಬ ಸುಂದರ ಹೆಣ್ಣಿನ ರೂಪ ಮೂಡಿತು. ಈ ಕೂದಲೇ ಇಷ್ಟೊಂದು ಮನೋಹರವಾಗಿರುವಾಗ ಈ ಕೂದಲನ್ನು ಪಡೆದ ಹೆಣ್ಣು ಇನ್ನೆಷ್ಟು ಚೆಲುವೆಯಾಗಿರ ಬೇಕು ಎಂದು ಆತ ಯೋಚಿಸಿದ. ಅವನು ಆ ಹೆಣ್ಣನ್ನು ಹುಡುಕಿ ಅವಳ ಒಲವನ್ನು ಗಳಿಸಲು ಹೆಣಗತೊಡಗಿದ.

ನನ್ನ ಬರವಣಿಗೆ ಈ ಎರಡರ ಮಧ್ಯೆ ಇರುವಂತಹದು.

—ದೇವನೂರ ಮಹಾದೇವ

ಇನ್ನೊಂದು ಸಂದರ್ಶನ

ಕುಸುಮಬಾಲೆಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಂದ ಸಂದರ್ಭದಲ್ಲಿ ಮೈಸೂರು ಆಕಾಶವಾಣಿ ಪರವಾಗಿ ಶ್ರೀ ಕಿಕ್ಕೇರಿ ನಾರಾಯಣ ಅವರು ಮಹಾದೇವ ಅವರನ್ನು ಸಂದರ್ಶಿಸಿದರು. ಆ ಸಂದರ್ಶನವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಸಂವಾದಕ್ಕಾಗಿ ಧ್ವನಿಸುರುಳಿಯಿಂದ ಈ ಸಂದರ್ಶನವನ್ನು ಬರಹದ ರೂಪಕ್ಕೆ ತಂದುಕೊಟ್ಟ ಶ್ರೀ ಕಿಕ್ಕೇರಿ ನಾರಾಯಣ ಅವರಿಗೆ ಸಂವಾದ ತನ್ನ ನೆನಕೆಗಳನ್ನು ಸಲ್ಲಿಸುತ್ತದೆ. —ಸಂ.]

ಕಿಕ್ಕೇರಿ ನಾರಾಯಣ: ನಿಮ್ಮ–ನಮ್ಮ–ಕನ್ನಡಿಗರ ಕುಸುಮಬಾಲೆ ಕೃತಿಗೆ 1990ರ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಬಂದ ಸಂದರ್ಭದಲ್ಲಿ ಆಕಾಶವಾಣಿ ಪರವಾಗಿ ನಿಮಗೆ ಅಭಿನಂದನೆಗಳನ್ನು ಅರ್ಪಿಸ್ತಿದೀನಿ.

ದೇವನೂರ ಮಹಾದೇವ: ವಂದನೆಗಳು.

ಕಿ.ನಾ. ಈ ಸಂದರ್ಭದಲ್ಲಿ ನೀವು ಬರಹಗಾರರಾಗಿ ಬಹುಮಾನದ ಸುದ್ದಿ ಬಂದಾಗ ನಿಮಗೇನನಿಸ್ತು ?

ದೇ.ಮ.: ನಾನಾವಾಗ ಬೆಂಗಳೂರಿನಲ್ಲಿದ್ದೆ, ಮೊದಲು ನನಗನಿಸಿದ್ದು–ಸ್ವಲ್ಪ ಸಂಕೋಚ ಅನಿಸ್ತು. ಯಾಕಂದರೆ ಅನಂತಮೂರ್ತಿಯವರಿಗೆ ಬಂದಿರಲಿಲ್ಲ ಇದು, ಲಂಕೇಶ್ ಅವರಿಗೆ ಬಂದಿರಲಿಲ್ಲ, ಕಂಬಾರರಿಗೆ ಬಂದಿರಲಿಲ್ಲ. ಅವರು ನನಗಿಂತಲೂ ಹಿರಿಯರಾದುದರಿಂದ ಆ ಕಾರಣಕ್ಕೆ ಸ್ವಲ್ಪ ಸಂಕೋಚ ಅನಿಸ್ತು. ಆದರೆ ಕೆಲಸ ಬಿಟ್ಟು ಬೇಸಾಯಕ್ಕೆ ಇಳಿದು land holder ಆದಮೇಲೆ–land holder ಅಂದರೆ ಭೂಮಿ ಹಿಡಕೊಂಡವನು ಅಂತ....

ಕಿ.ನಾ.: ನೆಲ ಕಚ್ಚಿದವನು ಅಂತ ...

ದೇ.ಮ.: ನೆಲ ಕಚ್ಚಿದವನು ಅಂತ. ಆ ತರ ಸ್ಥಿತೀಲಿದ್ದೆ ಸ್ವಲ್ಪ ಹೆಚ್ಚು, ಹೆಚ್ಚೂ ಕಮ್ಮಿ. ಆದ್ದರಿಂದ ಹಣದ ದೃಷ್ಟಿಯಿಂದ ಖುಷಿಯಾಯ್ತು.

ಕಿ.ನಾ. ಕುಸುಮಬಾಲೆ ಬರೆಯೋವಾಗ ಪ್ರೇರಣೆ ಏನಿರಬಹುದು ನಿಮಗೆ ?

ದೇ.ಮ.: ಬರೆಯೋವಾಗ ಬರೆಯೋದೆ. ಆವಾಗ ಪ್ರೇರಣೆ ಗೀರಣೆ ಅಂತಿರಲ್ಲ. ಬರೆಯೋದಕ್ಕೆ ಹಿಂದೆ ಇರಬಹುದು. ಒಂದು ಸಂಗತಿ ನನಗೆ ಆಗಾಗ ನೆನಪಿನಲ್ಲಿ ಬರ್‍ತಾ ಇತ್ತು. ಅದೇನೂಂತಂದರೆ ಒಂದು ಆಚರಣೆ–ನಮ್ಮ ಕಡೆ ಹಳ್ಳಿಗಳಲ್ಲಾಗುವ

ಒಂದು ಆಚರಣೆ, ಆ ಆಚರಣೆ ಏನೂಂತಾಂದರೆ ಯಾರಾದರೂ ಊಟ ಇಲ್ಲದೇನೋ ಅಥವಾ ಕಾಯಿಲೆಯಿಂದಾನೋ ಸಣ್ಣಕಾಗ್ತಾ ಹೋಗ್ತಾ ಇದ್ದರೆ ಅದಕ್ಕೆ ಆ ಮಾಗೂಗೆ ದೆವ್ವಾನೋ ಪಿಶಾಚೀನೋ ಹಿಡಕೊಂಬಿಟ್ಟಿದೆ. ಅದಕ್ಕೆ ಭೂತ ಬಿಡಿಸಬೇಕು ಅಂತ ಹೇಳಿಬಿಟ್ಟು ಒಂದು ಆಚರಣೆ ಮಾಡ್ತಿದ್ರು. ಆ ಆಚರಣೆ ಇದೆಯಲ್ಲಾ ಅದು ನನ್ನ ಮನಸ್ಸಲ್ಲೇ ಸುತ್ತಾ ಇತ್ತು. ಆ ಒಂದು ಎಳೆ ಇನ್ನು ಬೇರೆ ಸಂಗತಿಗಳ ಜೊತೆ ಕೂಡಿಕೊಂಡು ಕುಸುಮಬಾಲೆಯಾಯ್ತು.

ಕಿ.ನಾ.: ನೀವು ದ್ಯಾವನೂರು ಕಥಾ ಸಂಕಲನ ತಂದ ಏಳು ವರ್ಷಗಳ ನಂತರ ಒಡಲಾಳ ಬರೆದಿರಿ. ಆ ನಂತರ ಏಳೆಂಟು ವರ್ಷದ ಮೇಲೆ ಕುಸುಮಬಾಲೆ ಬಂದ್ರಿ. ಒಂದು ಕೃತಿ ರಚನೆಗೂ ಇನ್ನೊಂದು ಕೃತಿ ರಚನೆಗೂ ಏಕೆ ಇಷ್ಟು ಅಂತರ ? ಅದನ್ನ ತಿಳಕೋಬೇಕು ಅನ್ನೋ ಕುತೂಹಲ ಇದೆ.

ದೇ.ಮ.: ನಾನೂ ತಿಳಕೋಬೇಕು ಅಂತಾನೇ ಆಸೆಪಡ್ತಿದೀನಿ, ಗೊತ್ತಾಯ್ತಾ ಇಲ್ಲ.

ಕಿ.ನಾ.; ಅಂದರೆ ಬರವಣಿಗೆ ಬರೀತಾ ಇರ್ತಾರಲ್ಲ–ಸಾಮಾನ್ಯವಾಗಿ ಬರೆಯೋರು ಬಹಳ ಬೇಗ ಬೇಗ ಬರದು ಬರದು ಪ್ರಕಟಣೆ ಮಾಡ್ತಾ ಇರ್ತಾರೆ.

ದೇ.ಮ.: ನಾನು ಪ್ರತಿ ಯಾವುದನ್ನೇ ಬರೆದರೂನೂ ನಾನು ಒಬ್ಬ ಬರಹಗಾರ ಅನ್ಕೊಂಡು ಆರಂಭ ಆಗಿಲ್ಲ ಹೊಸದಾಗಿ ಅ–ಆ–ಇ–ಈ ಕಲಿತ್ಕೊಂಡು ಆರಂಭ ಮಾಡ್ದಂಗೆ ನಾನು ಆರಂಭದಲ್ಲಿ ಬರೀತೀನಿ. ಮೊದಲನೆ ಪುಟ ಅಂತೂ ಒಂದ್ನೂರಸಲನಾದ್ರೂ ಬರೀತಿನಿ. ಇಂತಾ ಕಷ್ಟದ ಕಾರಣಕ್ಕಾಗೋ ಅಥವಾ ಪ್ರತಿ ಸಲ ಬರೆದಾಗ್ಲೂನೂ ಒಬ್ಬ ಹೊಸ ಬರಹಗಾರನಾಗಿ ಆಗೋದ್ರಿಂದ ಈ ತರ ಕಷ್ಟ ಇರಬಹುದು.

ಕಿ.ನಾ.: ಒಡಲಾಳ, ದ್ಯಾವನೂರು ಬರೆಯೋವಾಗಿನ ಮನಃಸ್ಥಿತಿಗೂ ಕುಸುಮಬಾಲೆ ಬರೆದಾಗಿನ ಮನಃಸ್ಥಿತಿಗೂ ಏನಾದರೂ ವ್ಯತ್ಯಾಸ ಇತ್ತಾ ? ಇದ್ದರೆ ಏನದು ?

ದೇ.ಮ. ಒಡಲಾಳ ಬರೆಯೋವಾಗ ನನಗೆ ಅಂದಾಜು ಹೆಚ್ಚಿಗೆ ಇತ್ತು. ಏನು ಬರೀಬೇಕೂಂತ ಅಂದಾಜು ಇದೆಯೋ ಅದು ಹೆಚ್ಚಿಗೆ ಇತ್ತು. ಆದರೆ ಕುಸುಮ ಬಾಲೆನಲ್ಲಿ ನನಗೆ ಅಂದಾಜುಗಳೇ ಇರಲಿಲ್ಲ. ಒಡಲಾಳ ಬರೆಯೋವಾಗ ನಿರ್ದಿಷ್ಟ ವಾದ್ದು ಎಷ್ಟಿತ್ತೋ ಅಷ್ಟನ್ನೇ ಬರೀತಾ ಇದ್ದೆ. ಹೆಚ್ಚಿಗೆ ಅಂದರೆ ಅದೇ ಅಂತ ಅಲ್ಲ. ಆದರೆ ಕುಸುಮಬಾಲೆ ಬರೆಯೋವಾಗ ಆ ಮನಸ್ಥಿತಿನಲ್ಲಿ ಯಾವದನ್ನ ಕಾಣತೀನೋ ಅದೆಲ್ಲಾ ಕಲಾಕೃತಿಯಾಗೋ ಒಂದು ಬಿಂದು_ಒಂದು ಸಾಧ್ಯತೆ ಇತ್ತು. ಉದಾ ಹರಣೆಗೆ ಹೇಳ್ತೀನಿ ಪ್ರತಿಯೊಂದು ವಸ್ತೂನೂ ನಾನು ಸುಮ್ಮನೆ ಮುಟ್ಕೊಂಡು ಮುಟ್ಕೊಂಡು ಹೋಗ್ತಾ ಇದ್ದೆ. ಏನು ಸಿಕ್ಕ ದಾರೀನಲ್ಲಿ ಹೋಗ್ತಾ ಹೋಗ್ತಾ–

ಬರೆಯೋ ಸ್ಪೀಡಿನಲ್ಲಿ ಪ್ರತಿಯೊಂದು ವಸ್ತೂನೂ ಸುಮ್ಮನೆ ಮುಟ್ಟೋದು. ಈತರ ಒಂದು ಮನಸ್ಥಿತಿ ಇತ್ತು. ಅಂದರೆ ಆ ತರದ ವ್ಯತ್ಯಾಸ ಕಾಣಿಸತ್ತೆ.

ಕಿ ನಾ. ಈಗ ನೀವು ಬರಹಗಾರರಾಗಿ ಬೇರೆ ಒಂದು ಕೃತೀನ ಓದ್ತೀರ ಅಂತ ಇಟ್ಕೊಳ್ಳೋಣ. ಈಗ ಕುವೆಂಪು ಅವರ ಪುಸ್ತಕಗಳು–Particular ನಾವೆಲ್ ಅಥವಾ ಟಾಲ್‌ಸ್ಟಾಯ್ ಅವರ–ಚಿನುವಾ ಅಚಿಬೆ ಇಂಥವರ ಕೃತಿಗಳನ್ನು ಓದ್ತೀರಲ್ಲ–ಅವನ್ನ ನೀವು ಬರಹಗಾರರಾಗಿ ಹೇಗೆ ಓದ್ತೀರ ?

ದೇ. ಮ. ನಾ ಬರಹಗಾರನಾಗಿ ಓದೋದೇ ಇಲ್ಲ, ಓದುಗನಾಗೇ ಓದೋದು.

ಕಿ.ನಾ.: ನಿಮ್ಮ ಕೃತಿಯನ್ನು ಓದುಗರು ಅಥವಾ ವಿಮರ್ಶಕರು ಓದಿ ಕೃತಿಕಾರರಾಗಿ ನಿಮಗೆ ಅನಿಸಿದ್ದನ್ನು ಏನಾದರೂ ತೋರಿಸಿಕೊಟ್ಟರೆ ನಿಮಗೆ ಬೆರಗುಗೊಳಿಸಿದೆಯಾ ?

ದೇ.ಮ.: ಆ ರೀತಿ ಆಗಿದಾವೆ, ಸುಮಾರು ಆಗಿದಾವೆ. ಆದರೆ ನನಗೆ ಸದ್ಯಕ್ಕೆ ನೆನಪಿಲ್ಲ. ಸುಮಾರು ಸಲ ಹಾಗನ್ನಿಸಿದೆ.

ಕಿ.ನಾ. ಈಗ ನಿಮ್ಮ ಕುಸುಮಬಾಲೆಗೆ ಬರ್ತಾ ಅದು ಬಂದಾಗಿನಿಂದ ಕೆಲವರು ಅವನ್ನ ಓದೋದು ತುಂಬಾ ಕಷ್ಟ ಅಂತಾರಲ್ಲ ಅದರ ಬಗ್ಗೆ ನಿಮ್ಮ ಅಭಿಪ್ರಾಯ ಏನು ?

ದೇ.ಮ. ಈಗ ನಾ ಕುಸುಮಬಾಲೆ ಬರೆದಾದ ಮೇಲೆ, ಪ್ರಿಂಟಾದ ಮೇಲೆ ನಾನೂ ಓದಿಲ್ಲ....ನನಗೂ ಓದಕ್ಕೆ ಆರಂಭ ಮಾಡಿದರೆ ಒಂದ್ಹತ್ತು ಪುಟದವರೆಗೂ ನನಗೂ ಕಷ್ಟ ಆಗತ್ತೆ. ಒಂದು ಮಾಡಬಹುದಾಗಿತ್ತು ನಾನು, ಅದೇನು ದೊಡ್ಡ ನಷ್ಟ ಆಗ್ತಿರಲಿಲ್ಲ ...ಆ ಒತ್ತಕ್ಷರಗಳನ್ನು ಕಮ್ಮಿ ಮಾಡಬಹುದಾಗಿತ್ತು ಅಂತ ಈಗ ಅನ್ನಿಸ್ತಾ ಇದೆ.

ಕಿ.ನಾ. ಅಷ್ಟು ಬಿಟ್ಟರೆ ಭಾಷೆ ಬಗ್ಗೆ ಏನೂ ಕಷ್ಟಅಂತ ಅನ್ನಿಸುಲ್ವಾ ನಿಮಗೆ..

ದೇ.ಮ. ನಾನೇ ಹೇಳಿದ್ನಲ್ಲ ಇಲ್ಲ. ಒಂದ್ಹತ್ತು ಪುಟ ಓದೋವರೆಗೆ ನನಗೇ ಕಷ್ಟ ಆಗಬಹುದು. ಆಮೇಲೆ ಅದೇ ಒಂದು ಆವರಣ ಉಂಟುಮಾಡಿಕೊಂಡು ಮುಂದಕ್ಕೆ ಸುಲಭ ಆಗತ್ತೆ ಅನ್ಕಂಡಿದೀನಿ.

ಕಿ.ನಾ. ಮತ್ತೆ ನಾನು ಅನೇಕ ಸಲ ನೋಡಿದೀನಿ, ನೀವು ಸೃಜನೇತರ ಬರಹದ ಭಾಷೆ ಉಪಯೋಗಿಸೋದಕ್ಕೂ ಮತ್ತು ಸೃಜನಶೀಲ ಬರಹದ ಭಾಷೆ ಉಪಯೋಗಿಸೋ ದಕ್ಕೂ ಸ್ವಲ್ಪ ವ್ಯತ್ಯಾಸ ಇದೆ ಅಂತನಿಸುತ್ತೆ. ಇದಕ್ಕೆ ಕಾರಣ ಏನು... ?

ದೇ.ಮ. ನಿಜ. ನಾನು ಒಂದು ಕಲಾಕೃತಿನಲ್ಲಿ ಒಂದು ಪಾತ್ರಾನೇ ಆ ಪಾತ್ರಾನೇ ಅದರ ಮಾತೇ ಅದರ ನುಡಿಗಟ್ಟೇ–ಅದನ್ನ–ಅದರ ನಾಡಿ ಹಿಡಿಯುಕ್ಕೆ ಪ್ರಯತ್ನ ಪಡ್ತೀನಿ. ಆದರೆ ಒಂದು ಲೇಖನಾನೋ ಏನೋ ಬರೆದಾಗ–ನಾನು ಬರೀತಾ ಇರೋದು ಅದು–ಅಂದರೆ ಮಹಾದೇವ ಬರೀತಾ ಇರೋದು, ಆದ್ದರಿಂದ ಅಲ್ಲಿ ಮಹಾದೇವ ಅಲ್ಲ–ಮಹಾದೇವ ಅದಾಗಕ್ಕೆ ಪ್ರಯತ್ನ ಪಡ್ತಿರೋದು ಈ ವ್ಯತ್ಯಾಸ ಇರಬಹುದು.

ಕಿ.ನಾ. ಮತ್ತೆ ನಿಮ್ಮ ಕುಸುಮಬಾಲೆ ಕೃತಿಯ ಹಿನ್ನೆಲೆಯಲ್ಲಿ ನೋಡಿದಾಗ ಪದ್ಯ ರಚನೆಗೂ ಕಾವ್ಯ ರಚನೆಗೂ ಏನಾರ ವ್ಯತ್ಯಾಸ ಇದೆ ಅಂತ ಅನಿಸುತ್ಯ ?

ದೇ.ಮ. ನಾನೂನು ಪದ್ಯ ಬರೆಯಕ್ಕೆ ಪ್ರಯತ್ನಪಟ್ಟು ವಿಫಲ ಆಗಿದೀನಿ. ಆದರೆ ಕಾದಂಬರೀನೋ ಕಥೇನೋ ಬರೆಯೋವಾಗ ಪದ್ಯ ಬರೆಯೋ ಮನಸ್ಥಿತಿನಲ್ಲೇ ಅವನ್ನೂ ಕೂಡ ನಾನು ಬರೀತೀನಿ ಅನ್ಕೊಂಡಿದೀನಿ.

ಕಿ.ನಾ. ಅಂದರೆ ಅದು ಅದಕ್ಕೆ ಸೇರಿಕೊಂಡಿರುತ್ತೆ.... ಈಗ.... ಕುಸುಮಬಾಲೆಯಲ್ಲಿ ಜನಪದ ಅಂಶಗಳನ್ನ ನೀವು ಬಳಸಿಕೊಂಡಿದ್ದೀರಲ್ಲ, ಇದರ ಅವಶ್ಯಕತೆ ಏಕೆ ಬಂತು ?

ದೇ.ಮ. ನಾನು ಬಳಸಿಕೊಂಡಿಲ್ಲ, ಎಷ್ಟು ಸಾಧ್ಯವೋ ಅಷ್ಟು ಜಾನಪದ ಆಗಕ್ಕೆ ಪ್ರಯತ್ನ ಪಟ್ಟಿದೀನಿ. ಅದಷ್ಟು ಮಾತ್ರ ಬರ್ದಿದೀನಿ. ಯಾಕಂದ್ರೆ ನಾನು ಬರೀತಾ ಇರೋದೇ ಜಾನಪದ....

ಕಿ.ನಾ. ಕುಸುಮಬಾಲೆನಲ್ಲಿ ಒಂದು ರೀತಿಯ ಲಯ ಸೃಷ್ಟಿಸಿಕೊಂಡಿದಿರಲ್ಲಾ.... ಈ ಲಯಕ್ಕೂ ಮತ್ತದರ ವಸ್ತುಗೂ ಏನಾದರೂ ಸಂಬಂಧ ಇದೆ ಅಂತ ಅನಿಸುತ್ಯ ?

ದೇ.ಮ. ಇಲ್ಲ. ಆ ತರ ಏನು ಸೃಷ್ಟಿಸಿ–ಬರೆಯುವಾಗ ಒಂದು ಲಯ ಸೃಷ್ಟಿಸಿದೀನಿ ಅಂತಾನೋ ಅಥವಾ ಯಾವ ಯಾವ ಪ್ರತಿಯೊಂದೂ ತನ್ನಷ್ಟಕ್ಕೆ ತಾನೇ ಒಂದು ಲಯ ಆಗತ್ತೇನೋ.... ಯಾವುದೇ ಮಾಡಿದ್ದರೂ ಇದು ನಾನು ಬರೆಯುವಾಗ ಇಷ್ಟೇ ಮಾಡಿಕೊಂಡದ್ದು–ಎಷ್ಟು ಪರಿಣಾಮಕಾರಿಯಾಗಬಹುದು....ಎಷ್ಟು ಆಳವಾಗಿ ಅರ್ಥ ಮಾಡ್ಕೋಬಹುದು—ಈ ತನ್ಕ ಅನ್ಕಂಡಿದ್ದು. ಅದು ತನ್ನಷ್ಟಕ್ಕೆ ತಾನೇ ಒಂದು ಲಯ ಆಗಿರಬಹುದು ಅಷ್ಟೇನೇ. ಆ ಲಯವೇ ಪ್ರತ್ಯೇಕವಾಗಿ ಸೃಷ್ಟಿಸಿದ್ದು ಅಂತೇನಲ್ಲ.

ಕಿ.ನಾ. ನೀವು ಪ್ರಜ್ಞಾಪೂರ್ವಕವಾಗಿ ಸೃಷ್ಟಿಸಿದೀರ ಅಂತ ಅಲ್ಲ, ನಾನು ಕೇಳಿದೆನಲ್ಲ.... ಆ ಲಯ ಬಂತಲ್ಲ ಆ ಲಯ ಬಂದಿದ್ದಕ್ಕೇನಾದರೂ ...

ದೇ.ಮ. ನಾನು ಕುಸುಮಬಾಲೆ ಬರೆದ ಮೇಲೆ ಓದಿಲ್ಲ.

ಕಿ.ನಾ. ಈಗ ನಿಮ್ಮ ಕೃತಿಯಲ್ಲಿ ಅಂಬೇಡ್ಕರವಾದ, ಲೋಹಿಯಾವಾದ ಇವುಗಳ ಪ್ರಭಾವ ಏನಾದರೂ ಇದೆಯ ?

ದೇ.ಮ. ನೀವು ಹೇಳಬೇಕು ಅದನ್ನ.

ಕಿ.ನಾ. ಈಗ ಓದುಗರಾಗಿ ನಾವು ಕೇಳಿದರೆ ಈ ಪ್ರಶ್ನೇನ ನೀವು ಏನು ಹೇಳ್ತೀರ ?

ದೇ.ಮ. ಅದು ನನಗೆ ಸಂಬಂಧಪಟ್ಟದ್ದಲ್ಲ ಅಂತ ಹೇಳ್ತೀನಿ ಅಷ್ಟೆ.

ಕಿ.ನಾ. ಈಗ ಕೆಲವು ವಿಮರ್ಶಕರು ಈ ವಾದಗಳ ಹಿನ್ನೆಲೆಯಲ್ಲಿ ನಿಮ್ಮ ಕೃತಿಯನ್ನು ನೋಡಹೊರಟಿದಾರೆ. ಅಂದರೆ ಒಂದು ಸಾಮಾಜಿಕ ಸಿದ್ಧಾಂತದ ಹಿನ್ನೆಲೆಯಲ್ಲಿ ಕೃತಿಯನ್ನು ನೋಡಕ್ಕೆ ಪ್ರಯತ್ನಪಟ್ಟಿದಾರೆ. ಹೀಗೆ ನೋಡೋದ್ರಿಂದ ಕೃತಿಯನ್ನು

ಓಸೋದಕ್ಕೆ ಏನಾದರೂ ತೊಡಕಾಗತ್ತೆ ಅಂತ ಅನಿಸುತ್ಯ ನಿಮಗೆ ?... ಅಂದರೆ ಹೀಗೆ ನೋಡುವ ದೃಷ್ಟಿ restrict ಮಾಡುತ್ತೆ ಅಂತ ಅನಿಸತ್ಯ ?

ದೇ.ಮ. ಇದು ಕೂಡ ಒಬ್ಬ ಬರಹಗಾರನಿಗೆ ಸಂಬಂಧಪಟ್ಟದ್ದಲ್ಲ. ಯಾಕಂದ್ರೆ ಆದಷ್ಟೂ ಮುಕ್ತವಾಗಿರೋದು ಒಳ್ಳೇದು. ಯಾವುದೇ ಅಳತೆಗೋಲಿಲ್ಲದೆ ಮುಕ್ತ ವಾಗಿರೋದು ಒಳ್ಳೇದು ಅಂತ ನಾನು ಹೇಳಬಹುದೇ ಹೊರತು ಹಿಂಗಲ್ಲ ಹಿಂಗೆ ಓದಿ ಅಂತ ನಾನ್ಯಾಕೆ ಹೇಳ್ಲಿ ?

ಕಿ ನಾ. ಅಲ್ಲ ಈಗ ವಿಮರ್ಶಕರು ಹಾಗೆ ಓದೋಹಾಗೆ ಮಾಡ್ತಾರಲ್ಲ–ಈ ದೃಷ್ಟಿ ಯಿಂದ ನೋಡಿಕೊಂಡು ಹೋಗಬೇಕೂ ಅನ್ನೋದು. ಈಗ ನಾನು ಓದುಗನಾಗಿ ನನ್ನಮೇಲೆ ಒಂದು ರೀತಿಯಲ್ಲಿ ಅದು restrict ಮಾಡತ್ತೆ. ಈಗ ನನಗೆ ಅಂಬೇಡ್ಕರ್‌ವಾದ ಗೊತ್ತಿಲ್ಲದೇ ಇದ್ರೆ ಈ ಕೃತೀನ ಓದಕ್ಕಾಗಲ್ವೇನೋ ಅಂತ ಒಂದು ಇದು ಬರತ್ತೆ ಓದುಗನಲ್ಲಿ. ಈ ಹಿನ್ನೆಲೆಯಲ್ಲಿ ಏನು ಹೇಳ್ತೀರಿ ?

ದೇ.ಮ. ನನಗೆ ಅಂಬೇಡ್ಕರ್ ಆಗಲೀ, ಲೋಹಿಯಾ ಆಗಲೀ, ಮಾರ್ಕ್ಸ್ ಆಗಲೀ ಒಂದು ಅಂದಾಜು ಗೊತ್ತೇ ಹೊರತು ವಿವರಗಳು ನನಗೆ ಗೊತ್ತಿಲ್ಲ. ಮತ್ತೆ ಬರೆಯು ವಾಗ ಅಲ್ಲಿ ಸಣ್ಣಪುಟ್ಟ ಜನಸಾಮಾನ್ಯರಿರ್ತಾರಲ್ಲ ಆವರೇ ನನಗೆ ಅಂಬೇಡ್ಕರ್ ಆಗಿ ರ್ತಾರೆ, ಅವರೇ ಲೋಹಿಯಾ ಅನಿಸ್ತಾರೆ, ಅವರೇ ಮಾರ್ಕ್ಸ್ ಆಗಿರ್ತಾರೆ, ಅವರೇ ಇನ್ನೊಂದು ಆಗಿರ್ತಾರೆ, ಸರ್ವಸ್ವ ಆಗಿರ್ತಾರೆ.

ಕಿ.ನಾ. ಈಗ ಸೃಜನಶೀಲ ಬರಹಗಾರ ತನ್ನ ಸಾಮಾಜಿಕ ಅನುಭವದ ಹಿನ್ನೆಲೆಯಲ್ಲಿ ಕೃತಿ ರಚಿಸಿದರೆ ಹೆಚ್ಚು ಅಥೆಂಟಿಕ್ ಆಗಿರತ್ತೆ ಅನ್ನೋ ವಾದ ಇದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯ ಏನು ?

ದೇ.ಮ. ಪ್ರೇಮ್‌ಚಂದ್ ಅವರು ದಲಿತರಲ್ಲ. ಅವರ....ಗಬನ್ ...ಗಬನ್ ಅಲ್ಲ.... 'ಹೆಣದ ಬಟ್ಟೆ' ಅಂತ ಒಂದು ಕಥೆ ಇದೆ. ಆ ಕಥೆಗಳ ಮಟ್ಟಕ್ಕೆ ನಾನು ಬರೆದಿಲ್ಲ. ಅದು ದಲಿತರ ಬಗ್ಗೆ ಬರೆದಿರೋ ಕಥೆ. ಅಂದರೆ ಅರ್ಥ, ಸೆನ್ಸಿಬಿಲಿಟಿ ಅಂತಾರಲ್ಲ, ಅದಕ್ಕೆ ಸಂಬಂಧಪಟ್ಟದ್ದು–ಎಷ್ಟು ಒಬ್ಬನಿಗೆ ಒಳಗೊಳ್ಳಕ್ಕೆ ಸಾಧ್ಯನೋ ಆ ಮಟ್ಟದಲ್ಲಿ ಸಾಧ್ಯವಾಗ್ತದೆ. ಗಂಡಸರ ಅನುಭವಾನ ಹೆಂಗಸರು ಬರೆಯೋಕ್ಕಾಗಲ್ಲ, ಹೆಂಗಸರ ಅನುಭವಾನ ಗಂಡಸರು ಬರೆಯೋಕಾಗಲ್ಲ. ಈ ತರ ಮಾಡೋಕೆ ಸಾಧ್ಯವಾ ? ಎಷ್ಟು ಹೆಣ್ಣಾಗಕ್ಕೆ ಸಾಧ್ಯ–ಎಷ್ಟು ಒಬ್ಬ ಕಲಾವಿದ ಗಂಡಾಗಕ್ಕೆ ಸಾಧ್ಯ–ಹೆಣ್ಣಾಗಿದ್ರೆ–ಇದರ ಮೇಲೆ ಆವಲಂಬನೆ ಆಗೋದು. ಆದರೆ ಅನುಭವದ್ದು–ಅದನ್ನೂ ಕಡೆಗಣಿಸಕ್ಕೆ ಆಗಲ್ಲ. ಇದಕ್ಕೆ theory ಅಥವಾ ಏನು ಒಂದು ನಿಯಮ ಅಂತ ಮಾಡಿಕೊಳ್ಳೋ ಕಾಗಲ್ಲ. ನಾವು ಬಾಳಿದ್ದು ಬದುಕಿದ್ದು ಇದೆಲ್ಲಾ ಕೂಡ ಅಲ್ಲಿ ಲೆಕ್ಕಕ್ಕೆ ಬರತ್ತೆ. ●

(ಕೃಪೆ: ಆಕಾಶವಾಣಿ, ಮೈಸೂರು)

ಕುಸುಮಬಾಲೆಯಲ್ಲಿ ಜನ್ಮಾಂತರಗೊಳ್ಳುವ

ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳು

ಡಿ. ಎಸ್. ನಾಗಭೂಷಣ

ಸಾಹಿತ್ಯ ಆಂದೋಲನಗಳು ಸಕ್ರಿಯವಾಗಿದ್ದಾಗ ಸಾಹಿತ್ಯ ವಿಮರ್ಶೆ ಸುಲಭವೆನಿಸುತ್ತದೆ. ಆ ಆಂದೋಲನ ಒಪ್ಪಿಕೊಂಡಿರುವ ಸಾಹಿತ್ಯ ಮೌಲ್ಯಗಳ ಒಂದು ಚೌಕಟ್ಟು ನಿಮಗೆ ಲಭ್ಯವಿರುತ್ತದೆ. ಆ ಚೌಕಟ್ಟಿನಲ್ಲಿ ನೀವು ಮಾಡಬಹುದಾದ ಸ್ಥೂಲ ಟೀಕೆ, ಟಿಪ್ಪಣಿಗಳು ಆಂದೋಲನದ ಕಾವಿನಿಂದ ನಿರ್ದಿಷ್ಟ ಅರ್ಥಗಳ ಭ್ರಮೆಯನ್ನಾದರೂ ಹುಟ್ಟಿಸಬಲ್ಲವು. ಯಾಕೆಂದರೆ ಆಗ ನೀವು ಆಡುವ ಮಾತುಗಳಲ್ಲಿ ಅರ್ಧ ನಂಬಿಕೆ ಇದ್ದರೂ ಸಾಕು, ಆಂದೋಲನದ ಅಬ್ಬರ ಅದನ್ನು ಪೂರ್ಣಗೊಳಿಸುತ್ತದೆ. ಆಂದೋಲನಗಳ ಕಾಲದಲ್ಲಿ ನಂಬಿಕೆ ಆಳವಾಗಿ, ಸತ್ಯವಾಗಿ ಮಾರ್ಪಡುವ ವ್ಯವಧಾನವೇ ಇರುವುದಿಲ್ಲ. ಅನ್ನಿಸಿಕೆಗಳೇ ಆಂದೋಲನ ದಯಪಾಲಿಸುವ ಹುಚ್ಚು ಧೈರ್ಯದಿಂದಾಗಿ ಸತ್ಯಗಳಂತೆ ಮೆರೆಯುತ್ತವೆ. ಉದಾಹರಣೆಗೆ, ಮಾಸ್ತಿ ಕತೆಗಳೆಂದರೆ ಯಾವುದೇ ಬುಟ್ಟಿಯಲ್ಲಿ ಹಾಕಿಕೊಂಡು ಹೋಗಬಹುದಾದ ಸೌತೆಕಾಯಿ ತರಹ ಎಂಬ ಮಾತು ನವ್ಯ ಆಂದೋಲನದ ಕಾವಿನಲ್ಲೂ, ಅಡಿಗರ ಕವಿತೆ ಜೀವ ವಿರೋಧಿಯಾದದ್ದು ಎಂಬ ಮಾತು ಬಂಡಾಯ ಸಾಹಿತ್ಯ ಆಂದೋಲನದ ಕಾವಿನಲ್ಲೂ ಆಯಾ ಆಂದೋಲನಗಳಲ್ಲಿದ್ದ ಬಹಳಷ್ಟು ಜನರಿಗೆ ಬಹು ಗಂಭೀರವಾದ ಸಾಹಿತ್ಯ ವಿಮರ್ಶೆಯ ಮಾತುಗಳೆನಿಸಿದ್ದವು.

ಇವೊತ್ತು ಸಾಹಿತ್ಯ ವಿಮರ್ಶೆಗೆ ಆ ಅನುಕೂಲವಿಲ್ಲ ಆಂದೋಲನಗಳಿಲ್ಲದ ಕಾಲವಿದು. ಆದುದರಿಂದ ವಿಮರ್ಶಕ ತನ್ನ ನಂಬಿಕೆಯನ್ನೇ ನಂಬಿ ವಿಮರ್ಶೆಯ ಮಾತುಗಳನ್ನಾಡಬೇಕಾಗುತ್ತದೆ. ಕಳೆದ ಮೂವತ್ತು ವರ್ಷಗಳ ಕಾಲ ಆಂದೋಲನಗಳಿಗೆ ಒಗ್ಗಿ ಹೋದ ಕನ್ನಡ ವಿಮರ್ಶೆಯ ಮನಸ್ಸಿಗೆ ಇದು ಕಷ್ಟಕಾಲ. ವಿಮರ್ಶಕನ ನಿಜವಾದ ಸತ್ವಪರೀಕ್ಷೆಯ ಕಾಲ. ವಿಮರ್ಶೆಗೆ ಆಂದೋಲನಗಳು ಒದಗಿಸುತ್ತಿದ್ದ

ಇತ್ತೀಚೆಗೆ ಮಲ್ಲಾಡಿಹಳ್ಳಿ ಸ್ವಾಮೀಜಿಯವರ ಜನ್ಮಶತಾಬ್ದಿ ಸಮಾರೋಪ ಸಮಾರಂಭದ ಅಂಗವಾಗಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಓದಲಾದ ಪ್ರಬಂಧದ ಪರಿಷ್ಕೃತ ರೂಪ.

ಸಾಪೇಕ್ಷವಾದದ್ದಾದರೂ ಒಂದು ಚೌಕಟ್ಟಿಗೆ ಬದಲಾಗಿ ಇಂದು ಆತ ತನ್ನದೇ ಆದ-ಅಂದರೆ, ಸಾಹಿತ್ಯವೆಂದರೆ ಮೂಲತಃ ಏನು ಎಂಬ ತನ್ನ ಗ್ರಹಿಕೆಯನ್ನೇ ಆಧರಿಸಿದ-ಒಂದು ಚೌಕಟ್ಟಿನಲ್ಲಿ ಸಾಹಿತ್ಯ ವಿಮರ್ಶೆ ಮಾಡಬೇಕಾಗಿದೆ. ಇವಕ್ಕೆ ಆತ ಪರಂಪರೆಯ ಹಾಗೂ ತನ್ನ ಹಿಂದಿನ ಆಂದೋಲನಗಳು ಕಲಿಸಿದ ಪಾಠಗಳ ನೆರವು ಪಡೆಯಲೂ ಬಹುದು. ಆದರೆ ವಸ್ತುತಃ ತನ್ನದೇ ಆದ ಸತ್ಯದ ಒಂದಂಶವನ್ನು ಸಾಧಿಸಿಕೊಂಡೇ, ಆದರಿಂದ ವಿಮರ್ಶೆಯ ಮಾತುಗಳನ್ನು ಹೊರಡಿಸಬೇಕಾಗಿದೆ.

ಇಂದಿನ ಸಾಹಿತ್ಯ ವಿಮರ್ಶೆ ಕುರಿತ ಈ ಮಾತುಗಳನ್ನೇ ಇಂದಿನ ಕೃತಿನಿರ್ಮಾಣದ ಕೆಲಸಕ್ಕೂ ಅನ್ವಯಿಸಬಹುದು. ಕೆಲವರಿಗೆ, ನಾನು ತಿರುಗು-ಮುರುಗಾಗಿ ಮಾತಾಡುತ್ತಿದ್ದೇನೆ ಎನ್ನಿಸಬಹುದು. ಕೃತಿ ಮತ್ತು ಕೃತಿವಿಮರ್ಶೆಗಳಲ್ಲಿ ಮೊದಲು-ನಂತರಗಳ ಕ್ರಮ ಇದೆಯೆಂದು ನಾನು ಭಾವಿಸುವುದಿಲ್ಲ-ಕೋಳಿ ಮತ್ತು ಕೋಳಿ ಮೊಟ್ಟೆಯಂತೆ. ಜೀವಂತ ಹಾಗೂ ನಿರಂತರವಾದ ಒಂದು ಸಾಹಿತ್ಯ ಪರಂಪರೆಯಲ್ಲಿ ಕೃತಿನಿರ್ಮಾಣ ಹಾಗೂ ವಿಮರ್ಶೆ ಬೇರೆಯಾಗಿರಲಾರದು. ಕೃತಿಕಾರನೇ ಅನುಸಂಗಿಕವಾಗಿ ವಿಮರ್ಶಕನೂ ಆಗಿರುವನಾದ್ದರಿಂದ ಕೃತಿನಿರ್ಮಾಣ ಹಾಗೂ ವಿಮರ್ಶೆ ಪರಸ್ಪರ ಮುಖಾಮುಖಿಯಾದ ಕ್ರಿಯೆಯೇ ಆಗಿರುತ್ತದೆ. ಹೀಗಾಗಿ ಇಂದಿನ ಕೃತಿಕಾರ ಕೂಡಾ ಚೌಕಟ್ಟಿಗೆ, ಬೆಂಬಲಕ್ಕೆ ಇಲ್ಲದ ಆಂದೋಲನಗಳಿಗೆ ಹೊರತಾಗಿಯೇ, ಇಡಿಯಾಗಿ ಸ್ವತಃ ತನ್ನ ಸೃಜನಶಕ್ತಿಯನ್ನೇ ನಂಬಿಕೊಂಡು ಕೃತಿರಚನೆ ಮಾಡಬೇಕಾಗಿದೆ. ಇದಕ್ಕಾಗಿ ಆತ ಇಡಿಯಾಗಿ ತನ್ನ ಬದುಕು ಹಾಗೂ ಗ್ರಹಿಕೆಗಳನ್ನೇ ನಂಬಬೇಕು ಮತ್ತು ಈ ನಂಬಿಕೆ ಸ್ವತಃ ತನ್ನ ಪ್ರಾಮಾಣಿಕತೆಯ ಆಧಾರದ ಮೇಲೇ ಸತ್ಯವೆನ್ನಿಸುವಷ್ಟರ ಮಟ್ಟಿಗೆ ಆಳವಾಗಬೇಕು. ಇದಕ್ಕಾಗಿ ಆತ ಆದಷ್ಟೂ ಹೆಚ್ಚು ಇತರರ-ತನ್ನ ಸುತ್ತ ಮುತ್ತಲಿನವರ-ಬದುಕನ್ನೂ, ಅರಿತು ನೋಡುವ ಪ್ರೀತಿಯನ್ನೂ ವ್ಯವಧಾನವನ್ನೂ ಪಡೆದಿರಬೇಕು. ಹೀಗೆ ಪ್ರೀತಿ, ವ್ಯವಧಾನಗಳ ಮೂಲಕ ದಕ್ಕುವ, ಆದಷ್ಟೂ ಹೆಚ್ಚು ಜನರ ಬದುಕಿನ ಕಾವಿನಲ್ಲಿ ಮಾಗಿದ, ಸ್ವಂತ ಬದುಕನ್ನೇ ಇಂದಿನ ಕೃತಿ ನೆಚ್ಚಬೇಕಾಗಿದೆ. ಇದು, ತನ್ನನ್ನು ತಾನೇ ಪರರಲ್ಲಿ ಹುಡುಕಿಕೊಳ್ಳುವ ಕಲೆಗಾರಿಕೆ. ಯಾವುದನ್ನು ನಾವು ಎಲ್ಲ ಧರ್ಮಗಳ ಮೂಲಕೇಂದ್ರವೆನ್ನುತ್ತೇವೋ ಅಲ್ಲಿ ತನ್ನ ಬೇರುಗಳನ್ನು ಪಡೆದುಕೊಂಡಿರುವ ಈ ಕಲೆಗಾರಿಕೆ ತನ್ನನ್ನು ತನ್ನೊಳಗೇ ಹುಡುಕಿಕೊಳ್ಳುವ ನವ್ಯ ಅಥವಾ ತನ್ನನ್ನು ಪರರಲ್ಲಿ ಕಳೆದುಕೊಳ್ಳುವ ಬಂಡಾಯದ ಒಲವುಗಳಿಗಿಂತ ಭಿನ್ನವಾದದ್ದು.

ಇತ್ತೀಚಿನ ಕನ್ನಡ ಸಾಹಿತ್ಯದ ಒಲವುಗಳ ಚಾಲಕ ಶಕ್ತಿಯಾಗಿ ಗುರುತಿಸಬಹುದಾದದ್ದು ಲೋಕವ್ಯವಹಾರವನ್ನು ಮೀರಿ ನಿಂತು ಅದನ್ನು ಗಮನಿಸುವ ನಿರಹಂಕಾರಿಯಾದ ಈ ಲೋಕೋತ್ತರ ತುಡಿತವನ್ನೇ. ನಿಜ, ಎಲ್ಲ ಕಾಲದ ಶ್ರೇಷ್ಠ ಸಾಹಿತ್ಯವೂ

ಒಂದಲ್ಲ ಒಂದು ರೂಪದಲ್ಲಿ ಈ ರೀತಿಯ ತುಡಿತವನ್ನು ಹೊಂದಿಯೇ ಇರುತ್ತದೆ. ಏಕೆಂದರೆ ಸಾಹಿತ್ಯದ ಮೂಲಶಕ್ತಿ ಸ್ರವಿಸುವುದೇ ಈ ತುಡಿತಗಳಿಂದ. ಆದರೆ, ಕಳೆದ ಮುವ್ವತ್ತು–ನಲವತ್ತು ವರ್ಷಗಳ ಕಾಲ ಕನ್ನಡ ಸಾಹಿತ್ಯದಲ್ಲಿ ಬಹುಶಃ ಈ ತುಡಿತ ವನ್ನು ಹಾಸ್ಯಮಾಡಿ ಸ್ಥೂಲಗೊಳಿಸಿದ ನವೋದಯದ ಕೊನೆಗಾಲದ ಅತಿಗಳಿಗೆ ಪ್ರತಿ ಕ್ರಿಯೆಯಾಗಿ, ಕಂತಿಹೋಗಿದ್ದ ಈ ತುಡಿತ ಕ್ರಮೇಣ ಈಗ ಹೊಸ ರೂಪ–ರಚನೆ–ಲಯಗಳೊಂದಿಗೆ ವ್ಯಕ್ತವಾಗತೊಡಗಿದೆ.

ತನ್ನ ಮತ್ತು ಇತರರ ಲೋಪದೋಷಗಳನ್ನು ಆ ಲೋಪದೋಷಗಳ ನೆಲೆಗಟ್ಟಿನಲ್ಲಷ್ಟೇ ನೋಡದೆ, ಅವು ಜೀವದ ಹುಟ್ಟು-ಸಾವುಗಳಷ್ಟೇ ಸಹಜವೆಂದು ಗ್ರಹಿಸಿ, ಅವುಗಳೊಂದಿಗೆ ಹೊಡೆದಾಡುವುದರಿಂದ ಹುಟ್ಟುವ ರೂಪಗಳಿಗಿಂತ ಅವುಗಳನ್ನು ಮೀರುವ ಪ್ರಯತ್ನದಲ್ಲಿ ಹುಟ್ಟುವ ರೂಪಗಳು ಸುಂದರವೂ, ಸತ್ಯವೂ, ಸಾಂತ್ವನ ಪೂರ್ಣವೂ ಆಗಿರುತ್ತವೆಂಬ ಅರಿವು ಕನ್ನಡದ ಇತ್ತೀಚಿನ ಅನೇಕ ಪ್ರಮುಖ ಕೃತಿಗಳ ರಚನೆಯ ಹಿಂದೆ ಕಾಣುತ್ತದೆ. ಅಂತಿಮವಾಗಿ, ಸಿನಿಕತೆಗೆ ಎಳೆದೊಯ್ಯುವ ನವ್ಯದ ವಿಷಾದದ ಒಳನೋಟ ಹಾಗೂ ವ್ಯಗ್ರತೆಗೆ ಎಳೆದೊಯ್ಯುವ ಬಂಡಾಯದ ಕ್ರೋಧದ ಹೊರನೋಟಗಳ ಆಯಾಸದಿಂದ ಹುಟ್ಟಿರಬಹುದಾದ ಈ ಹೊಸ ನೋಟವು, ಕ್ಷಣ ದಲ್ಲಿ ಅನಂತದ ವಿವರಗಳನ್ನು ಕಾಣುವ ಮತ್ತು ಅನಂತದಲ್ಲಿ ಕ್ಷಣದ ತೀವ್ರತೆಯನ್ನು ಗಮನಿಸುವ–ಬದುಕಿನ ಮಧ್ಯವೇ ಕಣ್ಣು ಮುಚ್ಚಿ ಕೂತ ಗಾಢ ಧ್ಯಾನದಿಂದ ಮಾತ್ರ ದಕ್ಕುವ–ವ್ಯವಧಾನ ಹಾಗೂ ಪ್ರೀತಿಗಳನ್ನು ತನ್ನ ಎರಡು ಕಣ್ಣುಗಳನ್ನಾಗಿ ಪಡೆದು ಕೊಂಡಿರುವಂತೆ ತೋರುತ್ತಿದೆ. ಇದಕ್ಕೆ ತಕ್ಕುದಾಗಿಯೇ ಭಾಷೆ ನವ್ಯದ ಬಿಗಿಗಂಟು ಗಳನ್ನೂ ಬಂಡಾಯದ ಏದುಸಿರುಗಳನ್ನೂ ಕಳೆದುಕೊಂಡು ಆರೋಗ್ಯವಂತ ಮನುಷ್ಯನ ಉಸಿರಾಟದ ಲಯಗಳಿಗನುಸಾರವಾದ ಸಹಜ–ಸರಳ ನಡಿಗೆಯನ್ನು ಸಾಧಿಸಿಕೊಳ್ಳುತ್ತಿದೆ.

ಇದೆಲ್ಲದಕ್ಕೆ ನಾವು ಇಂದು ಅನೇಕ ಉದಾಹರಣೆಗಳನ್ನು ಕೊಡಬಹುದು. ಕಾವ್ಯವನ್ನೇ ತೆಗೆದುಕೊಂಡರೆ, ಮುಖ್ಯವಾಗಿ ಅಡಿಗರ 'ಚಿಂತಾಮಣಿಯಲ್ಲಿ ಕಂಡ ಮುಖ' ಹಾಗೂ 'ಮೌನದ ಸುವರ್ಣ ಪುತ್ಥಳಿ', ಕೆ. ವಿ. ತಿರುಮಲೇಶರ 'ಅವಧ' ಹಾಗೂ 'ಪಾಪಿಯೂ', ಹೆಚ್. ಎಸ್. ಶಿವಪ್ರಕಾಶರ 'ಅಣುಕ್ಷಣ ಚರಿತೆ', ಹೆಚ್. ಎಸ್. ವೆಂಕಟೇಶಮೂರ್ತಿಯವರ 'ಅಗ್ನಿ ಸ್ತಂಭ' ಹಾಗೂ ಸುಬ್ರಾಯ ಚೊಕ್ಕಾಡಿ ಯವರ 'ಮೊನ್ನೆ ಸಿಕ್ಕವರು' ಕವನ ಸಂಕಲನಗಳ ಹಲವಾರು ಪದ್ಯಗಳನ್ನು ಉದಾ ಹರಿಸಬಹುದು. ಈ ಎಲ್ಲ ಪದ್ಯಗಳಲ್ಲೂ ಹಕ್ಕಿಯೋ, ಮರವೋ, ಹೂವೋ ಮನುಷ್ಯನೋ, ಪ್ರಾಣಿಯೋ ತನ್ನ ಇನ್ನೊಂದು ಭಾಗವಾಗಿ ಕಾಣುವ, ಕಾಡುವ

ಹಾಗೂ ಕರಗುವ ವಿಸ್ಮಯವನ್ನು-ಪ್ರೀತಿಯ ತೀವ್ರತೆಯನ್ನು ವ್ಯವಧಾನದ ವಿವರಗಳಿಂದ temper ಮಾಡಿ-ಹೇಳುವ ಹೊಸ ಹದದ ಕಲೆಗಾರಿಕೆಯನ್ನು ನೋಡಬಹುದು

ಚಿಂತಾಮಣಿಯ ಸಭಾಂಗಣದಲ್ಲಿ ಭಾಷಣ ಮಗ್ನ–
ಮನಸ್ಸು. ಮನಸ್ಸಿನ ಶೇಕಡಾ ತೊಂಭತ್ತು ಪಾಲು; ಕಣ್ಣು
ಹಾಯುತ್ತಿತ್ತು ಮುಖದಿಂದ ಮುಖಕ್ಕೆ, ಹುಡುಕುತ್ತಿತ್ತು
ರೇವುಳ್ಳ ನಡುಗಡ್ಡೆಯೊಂದ ತಂಗಲು ನಿಮಿಷ ; ತಂಗಿ
ಅಂತರಂಗದ ಅನಂಗಭಂಗಿಗೆ ತಕ್ಕ ಭಂಗಿ. ದೃಷ್ಟಿಗೆ ದೃಷ್ಟಿ
ಬಡಿತಕ್ಕೆ ತಕ್ಕ ಪ್ರತಿಬಡಿತ ಕೊಡುವಿನ್ನೊಂದು
ಸಮ ಹೃದಯದ ನಿಗೂಢ ಸಹಜ ಕಂಪನದ ರೋಮಾಂಚ,
ಪ್ರತಿಫಲಿಸಬಲ್ಲೊಂದು ಮುಖವ. ಹಠಾತ್ತಾಗಿ
ಮಾಡಿತ್ತಲ್ಲ, ಅಗೋ ಸಭಾಮಧ್ಯದಲ್ಲಿ ಪರಮಾಪ್ತ ಮುಖ
ಮಾತಿನಾಚೆಯ ಸಹಸ್ಪಂದಿ; ಮಾತಿಲ್ಲದೆಯೆ
ಇಂಗಿತವನರಿತ ಸಹಭಾಗಿನಿಯ ಸಹಜಮುದ್ರೆ
ಯಾವ ಮುಖ ಅದು ? ಎಲ್ಲಿ ಯಾವಾಗ ಯಾವ ಭವ–
ದಲ್ಲಿ. ಲೋಕದಲ್ಲಿ, ಸಂಭಾವ್ಯತೆಯ ಯಾವ ಆಕಸ್ಮಿಕದ
ಆತ್ಮೀಯತೆಯ ಅಪ್ಯಾಯಮಾನ ಕ್ಷಣದಲ್ಲಿ
ಕಂಡದ್ದು ಅದು ?

...ಹೀಗೆ ಸಾಗುವ ಅಡಿಗರ 'ಚಿಂತಾಮಣಿಯಲ್ಲಿ ಕಂಡ ಮುಖ' ಪದ್ಯ, ಕಿರಿಯ ಕವಿಗಳ ಅನುಭೂತಿಯ ಆವರಣದಲ್ಲಿ ಅನುರಣಿಸುವುದು ಹೀಗೆ:

ಎಲ್ಲಿಂದ ಬಂದಿತೋ ಅಲ್ಲಿಗೇ ಈ ನೋಟ
ಕಳೆದುಕೊಂಡಿದ್ದನ್ನು ಮತ್ತೆ ಪಡೆಯುವ ಹೂಟ
ಬದುಕಿನುದ್ದಕ್ಕೂ ಗಳಿಸಿದ್ದನ್ನು, ಮಣ್ಣಿಂದ
ಹೀರಿದ್ದನ್ನು, ಸಾಧ್ಯವಿಶಾಲ ಚಾಚುಗಳಿಂದ
ತನ್ನ ತೆಕ್ಕೆಗೆ ಒಗ್ಗಿದ್ದನ್ನು, ಪಂಚಭೂತಗಳೆದುರು
ತ್ರಿಕಾಲಗಳ ಬೆಸೆದ ಕಾಲಕ್ಕೆ ಮುಖಾಮುಖಿಯಾಗಿ
ಒಗ್ಗೂಡಿಸುವ ಯತ್ನದಲಿ
ಕಾಣ್ಕೆ–ಕಣ್ಕಟ್ಟುಗಳ ನಡುವೆ ತೆಳುಗೆರೆ ಹರಿದು
ಆಚೆಗೆ ಚಾಚಿಕೊಳ್ಳುವ ಸಿದ್ಧಿಯಾಕಾಂಕ್ಷೆಯಲಿ
ಎದುರು ನಿಂತಿದೆ ಇಲ್ಲಿ ತ್ರಿಭಂಗಿ ನಿಲುವಲ್ಲಿ ಧ್ಯಾನಸ್ಥ
ಆಕಾಶಕ್ಕೆ ಲಗ್ಗೆಯಿಟ್ಟಂಥ ಪಾರಿಜಾತ

–ಇದು ಸುಬ್ರಾಯ ಚೊಕ್ಕಾಡಿಯವರ 'ಧ್ಯಾನಸ್ಥ' ಪದ್ಯದ ಕೊನೆಯ ಸಾಲುಗಳು. ಹೀಗೇ ನಾವು ಜಿ. ಎಸ್. ಶಿವರುದ್ರಪ್ಪನವರ 'ಕಂಪಿನ ಕರೆ', ತಿರುಮಲೇಶರ 'ಜಖ್ಖು ಪಾಲ ಮಹಾತೇರ', ಶಿವಪ್ರಕಾಶರ 'ನಾಗಾರ್ಜುನ', 'ಶಂಸ್ ತಬ್ರೀಜ್', ವೆಂಕಟೇಶ ಮೂರ್ತಿಯವರ 'ಕಾರಂಜಕೆ ಕೊಕ್ಕರೆ' ಮುಂತಾದ ಕನ್ನಡದ ಇತ್ತೀಚಿನ ಬಹುಮುಖ್ಯ ಕವನಗಳಿಂದ ಸಾಲುಗಳನ್ನು ಉಲ್ಲೇಖಿಸುತ್ತಾ ಹೋಗಬಹುದು–ಈ ಲೋಕೋತ್ತರ ತುಡಿತ ಹೇಗೆ ಇತ್ತೀಚಿನ ಕನ್ನಡ ಕಾವ್ಯದ ಮೂಲಸೆಲೆಯಾಗಿ ಕಾಣಿಸಿಕೊಳ್ಳತೊಡಗಿದೆ ಎಂಬುದರ ಉದಾಹರಣೆಗಳಾಗಿ. ಅಷ್ಟೇ ಅಲ್ಲ, ಅನುಭಾವದ ಕಡೆಗೆ ಎನ್ನಬಹುದಾದ ಈ ತುಡಿತ ಸ್ವಲ್ಪ ಕಾಲ ಬಂಡಾಯದ ಬಣ್ಣ ಬಳಿದುಕೊಂಡು ಕ್ಷೀಣಿಸಿದ ಸಿದ್ಧಲಿಂಗಯ್ಯ, ಚಂದ್ರಶೇಖರ ತಾಳ್ಯ, ಶಂಕರ ಕಟಗಿ ಹಾಗೂ ಚೆನ್ನಣ್ಣವಾಲೀಕಾರರಂತಹ ಕವಿಗಳಲ್ಲೂ ಕಾಣತೊಡಗಿರುವುದು ಮತ್ತು ಅತಿ ಇತ್ತೀಚಿನ ಕವಿಗಳೆಂದು ಗುರುತಿಸಬಹುದಾದ ಕೆ.ಬಿ. ಸಿದ್ಧಯ್ಯ, ಎಸ್. ಮಂಜುನಾಥ್, ನಜೀರ ಚಂದುವರ, ಸವಿತಾ ನಾಗಭೂಷಣ, ವೈದೇಹಿ ಮುಂತಾದವರಲ್ಲಿ ಪ್ರಧಾನ ಪ್ರೇರಣೆಯಾಗಿ ಹೊರ ಹೊಮ್ಮುತ್ತಿರುವುದನ್ನು ನಾವು ಗಮನಿಸಬಹುದು.

ಗದ್ಯಕ್ಕೆ ಬಂದರೆ ಇದೇ ತೀವ್ರತೆ ಹಾಗೂ ವ್ಯವಧಾನಗಳನ್ನು ತೇಜಸ್ವಿ, ಜಯಂತ ಕಾಯ್ಕಿಣಿ, ರಾಘವೇಂದ್ರ ಪಾಟೀಲ ಹಾಗೂ ಆಶ್ಚರ್ಯವೆಂಬಂತೆ ಬೊಳುವಾರರ ಇತ್ತೀಚಿನ ಕಥೆಗಳಲ್ಲಿ ಮತ್ತು ಚಿತ್ತಾಲರ 'ಪುರುಷೋತ್ತಮ' ಹಾಗೂ ಮಹಾದೇವ ಅವರ 'ಕುಸುಮಬಾಲೆ'ಯಲ್ಲಿ ನೋಡಬಹುದು. ತೇಜಸ್ವಿ, ಕಾರಂತರಂತೆ ವಿಚಾರವಾದೀ ನಿಲುವುಗಳ ಮೂಲಕವೇ ಆತ್ಯಂತಿಕವೆಂದು ಕರೆಯಲಾಗುವ ಸತ್ಯ ಗಳನ್ನು ಹಿಡಿಯಲೆಣಿಸುವ ಕಲೆಗಾರ. ಅವರ 'ಕರ್ವಾಲೋ' ಹಾಗೂ 'ಚಿದಂಬರ ರಹಸ್ಯ'ಗಳಲ್ಲಿ ವಿಜ್ಞಾನ ಮತ್ತು ಧರ್ಮ ತಮ್ಮ ವಿವಿಧ ರೂಪಗಳಲ್ಲಿ ಮುಖಾಮುಖಿ ಯಾಗಿ ನಿಂತು ಕಾದಂಬರಿಯ 'ಕ್ರಿಯೆ'ಗಳಲ್ಲಿ ಬೆಂದು ಒಂದಾಗುವ ತಾರ್ಕಿಕ ರೂಪ ಗಳನ್ನು ನೋಡುತ್ತೇವೆ. ಬಹುಶಃ ಕಾದಂಬರಿಗಳ ಸ್ವರೂಪವೇ ಆಂತರಿಕವಾಗಿ ತಾರ್ಕಿಕವಾದದ್ದು. ಆದರೆ ಸಣ್ಣಕತೆಗಳಲ್ಲಿ ಹಾಗಲ್ಲ. ಉದಾಹರಣೆಗೆ ಇವರ 'ಮಾಯಾಮೃಗ', 'ಕೃಷ್ಣೇಗೌಡನ ಆನೆ' ಹಾಗೂ 'ನಾನು ಸೈಕಲ್ ಕಲಿತಿದ್ದು' ಕಥೆಗಳು ವಾಸ್ತವವನ್ನು ಹೇಳುವ ಬೆರಗಿನಲ್ಲೇ ಆತ್ಯಂತಿಕ ಸತ್ಯದ ಬೆಡಗನ್ನು ಸಾಧಿಸಿಬಿಡುತ್ತವೆ. ಈ ಕಥೆಗಳಲ್ಲಿ ಒಂದು ನಾಯಿ, ಒಂದು ಸಾಕು ಆನೆ ಹಾಗೂ ಒಂದು ಸೈಕಲ್, ಲೋಕ–ಲೋಕೋತ್ತರಗಳ ನಡುವಣ ಪಾರದರ್ಶಕ ಸೇತುವೆಗಳಂತೆ ಮೂಡಿ ನಿಲ್ಲುವುದು ತರ್ಕವನ್ನು ಮೀರಿದ ಇಂತಹ ತುಡಿತಗಳ ಮೂಲಕವೇ, ಕಾಯ್ಕಿಣಿಯವರ 'ತನ್ಮಯಿಯ ಸೂಟ', 'ದಗಡೂಪರಬ...' ಹಾಗೂ 'ಬಿನ್ನಿಕೃಷ್ಣನ್...', ರಾಘವೇಂದ್ರ

ಪಾಟೀಲರ 'ಕರಿ ಟೊಪಗಿ....' ಹಾಗೂ ಬೊಳುವಾರರ 'ಇಬಾದತ್' ಇಂತಹುದೇ ಧ್ವನಿಗಳನ್ನು ಮಂದ್ರಸ್ವರದಲ್ಲಿ ಹೊರಡಿಸುವ ಪ್ರಯತ್ನಗಳು.

ಯಶವಂತ ಚಿತ್ತಾಲರ 'ಪುರುಷೋತ್ತಮ', ಕಾದಂಬರಿ ರೂಪದಲ್ಲೇ ಅನುಷಂಗಿಕವಾಗಿರುವ ತಾರ್ಕಿಕತೆಯನ್ನು ಪ್ರತಿತಾರ್ಕಿಕತೆಯ ಸಹಾಯದಿಂದ ಒಡೆಯುವ ಮೂಲಕ, ಆಧುನಿಕ ಮನುಷ್ಯ 'ತ್ರಿಭಂಗಿ ನಿಲುವಲ್ಲಿ ಧ್ಯಾನಸ್ಥ-ಆಕಾಶಕ್ಕೆ ಲಗ್ಗೆಯಿಟ್ಟಂಥ ಪಾರಿಜಾತ'ವಾಗಲು ನಡೆಸುವ ಹೋರಾಟದ ವಿವರ ಹಾಗೂ ತೀವ್ರತೆಗಳೆರಡನ್ನೂ ಒಟ್ಟಿಗೆ ಬೆಸೆದುಕೊಂಡು, ಮೂಡಿನಿಂತ ಕೃತಿ. ಬದ್ಧನಾದ ಹಾಗೂ ಅದರಿಂದಾಗಿ ಅಶಾಂತನಾದ ಆಧುನಿಕ ಮನುಷ್ಯ ಬುದ್ಧನಾಗಿ ಶಾಂತನಾಗುವ ಮಹಾ ಹೋರಾಟದ ಹಾಗೂ ಮಹಾ ಪ್ರಯಾಣದ ಈ ಕಥೆ, ಈಚಿನ ಕನ್ನಡ ಸಾಹಿತ್ಯದ ಮಹಾ ಹೋರಾಟದ ಹಾಗೂ ಮಹಾ ಪ್ರಯಾಣದ ಕಥೆಯಂತೆಯೂ ಕಾಣುತ್ತದೆ! ಒಂದು ಚಲನಶೀಲ ಸಂಸ್ಕೃತಿಯ-ಇಲ್ಲಿ ಕೈಗಾರಿಕಾ ಹಾಗೂ ನಗರೀಕರಣ ಸಂಸ್ಕೃತಿ-ಇಡೀ ಬೀಸನ್ನು ಮನುಷ್ಯ ಜೀವ ತನ್ನ ಪ್ರಜ್ಞೆಯ ಅತ್ಯಂತ ಎತ್ತರಗಳಲ್ಲಿ ಕಂಡುಕೊಳ್ಳಬಹುದಾದ ಅತ್ಯಂತ ನಿರ್ಗುಣವಾದ ಮೌಲ್ಯಗಳಲ್ಲಿ ಲೀನಗೊಳಿಸಿಬಿಡುವ ಕಲಾವಂತಿಕೆ ಆ ಎತ್ತರಗಳು ಅನುಭಾವಿಕವಾದಾಗ ಮಾತ್ರ ಸಾಧ್ಯ-ಅಲ್ಲಮನ ವಚನಗಳಲ್ಲಾದಂತೆ. ಹೀಗಾಗಿ ಇಲ್ಲಿ 'ಪುರುಷೋತ್ತಮ' ಗದ್ಯದಲ್ಲಿ ಸಾಧಿಸಿರುವುದನ್ನು ಅಸಾಮಾನ್ಯವೆಂದೇ ಹೇಳಬೇಕು. ತೇಜಸ್ವಿ ತಮ್ಮ 'ಚಿದಂಬರ ರಹಸ್ಯ'ದಲ್ಲಿ ಕಥೆಗಾರಿಕೆಯ ಧಾವಂತದಿಂದಾಗಿ ಸಾಧಿಸಲಾಗದೇ ಹೋದದ್ದನ್ನು ಚಿತ್ತಾಲರು ಇಲ್ಲಿ ಸಾವಧಾನದಿಂದ ಸಾಧಿಸಿದ್ದಾರೆ. ಬರವಣಿಗೆ ಧ್ಯಾನವನ್ನು ಸಮೀಪಿಸುವುದು ಹೀಗೇ.

ಸ್ಪೆಂಗ್ಲರ್ ಎಂಬ ಇತಿಹಾಸಜ್ಞನ ಪ್ರಕಾರ ಪ್ರತಿಯೊಂದು ಸಂಸ್ಕೃತಿಗೂ ಒಂದು ಆಯುಸ್ಸಿರುತ್ತದೆ. ಆ ಆಯುಸ್ಸು ಮುಗಿಯುವ ಸ್ವಲ್ಪ ಮುನ್ನ 'ಸೆಕೆಂಡ್ ರಿಲಿಜಿಯಾಸಿಟಿ' ಎಂಬುದೊಂದನ್ನು ಸಾಧಿಸಿಕೊಂಡು, ಅದರ ಒಡಲಿಂದ-ದೀಪ ಆರುವ ಮುನ್ನ ಚೆನ್ನಾಗಿ ಉರಿದು ಆರುವಂತೆ-ಒಂದು ನಾಗರೀಕತೆಯನ್ನು ಕಟ್ಟಿ ಕುಸಿದು ಬೀಳುತ್ತದಂತೆ. ಅದರ ಪಾಳಿನಲ್ಲಿ ಹೊಸದೊಂದು ಸಂಸ್ಕೃತಿಯ ಉದಯವಾಗಬೇಕು. ಆಧುನಿಕ ಕನ್ನಡ ಸಾಹಿತ್ಯದ ಪರಂಪರೆಯನ್ನು ಒಂದು ಸಂಸ್ಕೃತಿಯಾಗಿ ಪರಿಗಣಿಸಿದರೆ ಇದರ 'ಸೆಕೆಂಡ್ ರಿಲಿಜಿಯಾಸಿಟಿ' ಈಗ ವ್ಯಕ್ತವಾಗುತ್ತಿದ್ದಂತೆ ತೋರುತ್ತದೆ. 'ಪುರುಷೋತ್ತಮ' ಇದರ ನಾಗರೀಕತೆಯ ಒಂದು ರೂಪವಾಗಿರಬಹುದು. ಹಾಗಾದರೆ ಇದರ ಪಾಳಿನಲ್ಲಿ ಹುಟ್ಟುವ ಹೊಸ ಸಂಸ್ಕೃತಿ ಎಂತಹದಿರಬಹುದು ?

ಈ ಪ್ರಶ್ನೆಗೆ ಉತ್ತರವನ್ನು ಊಹಿಸಿಕೊಂಡಾಗಲೆಲ್ಲಾ ನನಗೆ 'ಕುಸುಮಬಾಲೆ' ಸೆನಪಿಗೆ ಬರುತ್ತದೆ. ಈಗಾಗಲೇ ಕನ್ನಡ ಓದುಗರನ್ನು 'ಅರ್ಥವಾಗದ ಮಹಾಕೃತಿ'

ಯಾಗಿ ಕಾಡಿರುವ 'ಕುಸುಮ ಬಾಲೆ' ಐದಾರು ಓದುಗಳ ನಂತರ ನನಗೆ ಬರವಣಿಗೆಯ ಹೊಸ ಸಂಸ್ಕೃತಿಯ ತೊದಲ್ನುಡಿಯಂತೆ ಕೇಳಿಸುತ್ತಿದೆ.

ಇದು ಮಾದರಿಗಳು, ಮೌಲ್ಯಗಳು ಹಾಗೂ ಮಾರ್ಗಗಳು ಪಲ್ಲಟಗೊಳ್ಳುತ್ತಿರುವ ಕಾಲ. ನಲ್ವತ್ತು ವರ್ಷಗಳ ಹಿಂದೆಯೂ–ಅಂದರೆ ನಮಗೆ ಸ್ವಾತಂತ್ರ್ಯ ಬಂದಾಗಲೂ ಹೀಗೇ ಆಗಿತ್ತು. ಜಾತಿ ಪದ್ಧತಿ, ಜಮೀನುದಾರಿಕೆ ಹಾಗೂ ಮಿತಿಗಳುಳ್ಳ ಬದುಕಿನ ಕ್ರಮವನ್ನು ಪ್ರಜಾಪ್ರಭುತ್ವ ಹುಟ್ಟುಹಾಕಿದ ಕನಸುಗಳು ಅಲ್ಲಾಡಿಸಿದವು. ಈವರೆಗಿನ ಆಧುನಿಕ ಕನ್ನಡ ಸಾಹಿತ್ಯ ಹೊಡೆದಾಡಿರುವುದು ಈ ಕನಸುಗಳೊಂದಿಗೇ. ಇನ್ನಷ್ಟು ವಿವರವಾಗಿ ಹೇಳುವುದಾದರೆ, ಆಧುನಿಕ ಕನ್ನಡ ಸಾಹಿತ್ಯ ಭಾರತೀಯ ಪ್ರಜಾಪ್ರಭುತ್ವದ ಏಳುಬೀಳುಗಳನ್ನೇ ತನ್ನ ಕೇಂದ್ರ ಕಳಕಳಿಯನ್ನಾಗಿಟ್ಟುಕೊಂಡು, ಅದರ ಆದರ್ಶ–ವಿರೋಧಾಭಾಸಗಳು ಹಾಗೂ ವೈಫಲ್ಯ-ಹತಾಶೆಗಳನ್ನೇ ತನ್ನ ವಿವಿಧ ಸ್ತರದ ಅನುಭವ ಹಾಗೂ ಗ್ರಹಿಕೆಗಳ ಮೂಲಕ ಪ್ರತಿಫಲಿಸುತ್ತಾ ಒಂದು ಸಾಹಿತ್ಯ ಸಂಸ್ಕೃತಿಯನ್ನು ನಿರ್ಮಿಸಿ, ಅದರ ವಿಮರ್ಶೆಗೆ ತಕ್ಕುದಾದ ಪರಿಕರಗಳನ್ನು ಆ ತನ್ನ ಒಡಲಿನಿಂದಲೇ ಪಡೆದುಕೊಂಡಿತ್ತು. ಅಂತರಂಗದ ಶೋಧನೆ, ಅನುಭವದ ಸಂಕೀರ್ಣತೆ, ಬಂಧದ ಸಾವಯವ ಸಮಗ್ರೀಕರಣ, ಸಾಮಾಜಿಕ ಕಳಕಳಿ, ಖಡ್ಗಕಾವ್ಯ–ಈ ಎಲ್ಲ ಪರಿಕಲ್ಪನೆಗಳೂ ಪ್ರಜಾಪ್ರಭುತ್ವ ದಯಪಾಲಿಸುವ ಅನೇಕ ಸ್ತರಗಳ ಸ್ವಾತಂತ್ರ್ಯದ ಹಾಗೂ ನಿಷೇಧದ ಅನ್ವೇಷಣಾ ಪರಿಕರಗಳಷ್ಟೇ. ಸಾಂಪ್ರದಾಯಿಕ ಅಥವಾ ಮಧ್ಯಕಾಲೀನ ನಂಬುಗೆಗಳನ್ನೇ ತನ್ನ ಅಂತರಂಗದಲ್ಲಿಟ್ಟುಕೊಂಡು ಬಹಿರಂಗವಾಗಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸ್ವೀಕರಿಸುವ ವಿರೋಧಾಭಾಸದ ಹಾಗೂ ಸಂಘರ್ಷದ ಸಂದರ್ಭದಲ್ಲಿ ಹುಟ್ಟಿದ ಈ ಗ್ರಹಿಕೆಗಳು ಸಂಕೀರ್ಣತೆ. ಒಳಶೋಧನೆ, ಸಮಗ್ರೀಕರಣ, ಸಾಮಾಜಿಕತೆಗಳ ಬಗ್ಗೆ ಎಷ್ಟೇ ಮಾತಾಡಿದರೂ ಅವಕ್ಕೆ ಈ ವಿರೋಧಾಭಾಸ ಹಾಗೂ ಸಂಘರ್ಷದ ಎಲ್ಲ ಪರಿಮಿತಿಗಳೂ ಇದ್ದವು ಎಂಬುದನ್ನು ನವ್ಯ–ಬಂಡಾಯಗಳ ಸೋಲು-ಗೆಲುವುಗಳ ನೆಲೆಗಳನ್ನು ಬಲ್ಲವರಿಗೆ ವಿವರಿಸಿ ಹೇಳಬೇಕಾಗಿಲ್ಲ. ಈವರೆಗಿನ ನಮ್ಮ ಸಾಮಾಜಿಕ–ರಾಜಕೀಯ ಪ್ರಕ್ರಿಯೆಗಳಂತೆಯೇ ಈ ಸಾಹಿತ್ಯಕ ಪರಿಕರಗಳು ಕೂಡಾ ಈ ವಿರೋಧಾಭಾಸ ಹಾಗೂ ಸಂಘರ್ಷಗಳನ್ನು ಮೀರಿ ಅಥವಾ ಸಂಪೂರ್ಣವಾಗಿ ಅರಗಿಸಿಕೊಂಡು ಶುಭದಾಯಕ ಎನ್ನಿಸುವ ಒಂದು ನೆಲೆಯನ್ನು ತಲುಪಲು ವಿಫಲವಾದವು. ಇದು ಒಂದು ಬರವಣಿಗೆ ಸಂಸ್ಕೃತಿ ಮುಟ್ಟಬಹುದಾದ dead-end. 'ತಾ ಕಳ್ಳ ಪರರ ನಂಬ'ದ ಈ ಸಂಸ್ಕೃತಿಯ ಶಬ್ದ–ವ್ಯಾಕರಣಗಳೂ ಜಡತೆಯನ್ನು ಮುಟ್ಟಿದಂತಹ ಬಿಕ್ಕಟ್ಟು ಇದು. ಆದರೆ 'ಕುಸುಮಬಾಲೆ' ಈ ಬಿಕ್ಕಟ್ಟಿಗೆ ಒಂದು ಉತ್ತರವೆಂಬಂತೆ ನಮ್ಮ ಮುಂದೆ ನಿಂತಿದೆ. ನಾನು ಈ ಮೊದಲು ಪ್ರಸ್ತಾಪಿಸಿದ ಕನ್ನಡ ಸಾಹಿತ್ಯದ ಇತ್ತೀಚಿನ ಪ್ರಮುಖ ಕೃತಿಗಳ ಒಲವುಗಳು ಈ ಕೃತಿಯಲ್ಲಿ ಜನ್ಮಾಂತರಗೊಂಡಂತೆ

ಹೊಚ್ಚ ಹೊಸ ರೂಪ-ಲಯಗಳೊಂದಿಗೆ ಮೈದಾಳಿವೆ. ಈ ಅರ್ಥದಲ್ಲಿ ಈ ಕೃತಿ ಬರವಣಿಗೆಯ ಹೊಸ ಸಂಸ್ಕೃತಿಯ ತೊದಲ್ನುಡಿ. ತೊದಲ್ನುಡಿ ಏಕೆಂದರೆ ಈ ಕೃತಿ ತನ್ನ ಸಂಪೂರ್ಣ ಅರ್ಥವನ್ನು ಇನ್ನೂ ಬಿಟ್ಟುಕೊಡಬೇಕಾಗಿದೆ–ಬಹುಶಃ ಇದೇ ಪರಂಪರೆಯಲ್ಲಿ ಬರಬಹುದಾದ ಇನ್ನಿತರ ಕೃತಿಗಳ ಮೂಲಕ.

ಮೂಲಭೂತವಾಗಿ ಯಾರ ಪುರುಷಾರ್ಥಕ್ಕಾಗಿ ಪ್ರಜಾಪ್ರಭುತ್ವ ಒಂದು ಮೌಲ್ಯವಾಗಿ ಪವಿತ್ರವೆನಿಸಿತೋ ಆ ದಲಿತರ ಒಂದು ಶ್ರೇಷ್ಠ ಸೃಜನಶೀಲ ಮನಸ್ಸೇ, ಪ್ರಜಾಪ್ರಭುತ್ವ ಪ್ರಯೋಗದಲ್ಲಿನ ಸಂಘರ್ಷ ವಿರೋಧಾಭಾಸಗಳನ್ನು ಗೆದ್ದುಕೊಳ್ಳುವ ಬಗೆಯೇ ಈ ಕೃತಿಯ ಒಂದು (ಸಾಹಿತ್ಯ ಇತಿಹಾಸದ) ಹಂತದ ಯಶಸ್ಸಾದರೆ, ಇದು ಕೇವಲ ದಲಿತರ ಕಥೆಯಾಗದೆ ದಲಿತರ ಮೂಲಕ ಕಂಡುಕೊಂಡ ಎಲ್ಲರ ಕತೆಯಾಗುವುದು ಇನ್ನೊಂದು ಹಂತದ ಯಶಸ್ಸು. ಬಸಪ್ಪಸೋಮಿ, ಸಿದ್ಧೋರರ ಮಧ್ಯ ಯುಗೀನತೆ, ಅಕ್ಕಮಾದೇವಮ್ಮನ ಯುಗಾತೀತ-ತಾಯ್ತನ, ಯಾಡನ ಬೂದಿಮುಚ್ಚಿದ ಕೆಂಡದಂತಹ ಛಲ, ಅಮಾಸನ ನಿಗೂಢತೆ, ಸೋಮಪ್ಪನ ದಿಗ್ಭ್ರಮೆ, ಕುಸುಮಾಳ ವಿಷಾದ, ಮಧ್ವಾಚಾರ್ಯರ ಬಡ ಬಿಗುಮಾನ, ಗಾರೆ ಸಿದ್ಧಾಮನ ಜೀವನ ಪ್ರೀತಿ, ಈರಿಯ ನೋವು, ಆಕೆಯ ಮಗನ ರೋಗ, ತೂರಮ್ಮನ ಮಂತ್ರ, ದಲಿತ ಸಂಘರ್ಷ ಸಮಿತಿಯ ಅರೆ ಗಂಭೀರ–ಅರೆ ತಮಾಷೆಯ ಮೆರವಣಿಗೆ–ಈ ಎಲ್ಲವೂ ಇಲ್ಲಿ ಒಂದಕ್ಕೊಂದು ಸಂಬಂಧ ಕಲ್ಪಿಸಿಕೊಳ್ಳುವುದು ದಲಿತ ಹುಡುಗ ಚೆನ್ನನು ತಾನು ಮಾಗದೆ, ಪ್ರಜಾಪ್ರಭುತ್ವದ ಮೂಲಕ ಮಾಗಿದ ಹಣ್ಣನ್ನು ಪಡೆಯಲು ಹೋಗಿ ತಾನೇ ಇಲ್ಲವಾದ ದುರಂತದಲ್ಲಿ. ಆದರೆ ಈ ಕೃತಿ ಇದನ್ನು ಬರೀ ದುರಂತವಾಗಿ ಗ್ರಹಿಸುವುದಿಲ್ಲ. ಆದರೆ ಅವನ್ನು ದುರಂತವಾಗಷ್ಟೇ ಕೊನೆಗಾಣಲು ಬಿಡುವುದಿಲ್ಲ. ಹೊಸ ಭರವಸೆಯಲ್ಲಿ ಈ ದುರಂತ ತನ್ನ ಅರ್ಥಪೂರ್ಣತೆಯನ್ನು ಕಂಡುಕೊಳ್ಳುತ್ತದೆ. ಚೆನ್ನನ ಬರುವಿಕೆಗಾಗಿ, ಬದುಕಿನಲ್ಲಿ ಗಾಢ ನಂಬಿಕೆಯಿಟ್ಟು ಕಾಯುತ್ತಲೇ ಇರುವ ಅವನ ತಂದೆ ತಾಯಿಗಳ ಈ ಸಂಭಾಷಣೆಯೊಂದಿಗೆ ಕಾದಂಬರಿಯ ನಾಟಕ ಮುಗಿಯುತ್ತದೆ:

"ನಮ್ಮ ಆ ಕ್ರಿಯಾ ಒಂದು ಸುದ್ದ ಇದ್ರ ಒಂದಲ್ಲ ಒಂಜಿನ ಅವ್ನೇ ಬತ್ತನ ಕನಾ. ಸಾಸ್ತ್ರ ಹೇಳವ್ನ ರೂಪ್ದಲಿ ಬರಬೌದು....ದಾಸಯ್ಯನ ರೂಪ್ದಲಿ ಬರಬೌದೂ ....ಮಾಟ ಮಂತ್ರದವನ ರೂಪ್ದಲಿ ಬರಬೌದು,..."

"ಯಾವ ರೂಪ್ದಲಿ ಆಗ್ಲಿ ಕನಾ...ಯಾವತ್ತಾದರೂ ಬಂದಾನಾ....?"

"ಬರ್ದೆ ? ಸಂಬಂಜ ಅನ್ನೋದು ದೊಡ್ಡದು ಕನಾ...,"

ಕ್ರಿಯೆಯಲ್ಲಿ ಶುದ್ಧಿ ಹಾಗೂ ಸಂಬಂಧಗಳಲ್ಲಿ ನಂಬಿಕೆ–ಇವೆರಡೇ ಬದುಕಿನ ಎಲ್ಲ ಪ್ರಯತ್ನಗಳನ್ನೂ ಅರ್ಥಪೂರ್ಣಗೊಳಿಸುವ ಶಕ್ತಿಗಳು ; ಇವುಗಳಾಚೆಗೆ ಎಲ್ಲವೂ

ಮಂಜು ಎಂಬ ಸತ್ಯದ ಕಡೆ ತುಡಿಯುವ ಈ ಕೃತಿ, ಬದುಕಿನ ಈ ಎಲ್ಲ ಪ್ರಯತ್ನಗಳನ್ನೂ ಆಯಾ ಪ್ರಯತ್ನಗಳ ಭಾವ-ಬಣ್ಣಗಳೊಂದಿಗೇ ನಾಟ್ಯೀಕರಿಸಿದೆ.

ಆಧುನಿಕ ಜೀವನ ಹಾಗೂ ಆಧುನಿಕ ಕನ್ನಡ ಸಾಹಿತ್ಯ ನಂಬಿರುವ ಆಂತರಿಕ ತರ್ಕವನ್ನೇ ಮರೆತಂತೆ ತೋರುವ ಈ ಕೃತಿ ಸಹಜವಾಗಿಯೇ ಈ ತರ್ಕದ ಉತ್ಪನ್ನಗಳಂತಿರುವ ಸರಿ-ತಪ್ಪುಗಳ, ಇತಿಹಾಸ-ವರ್ತಮಾನಗಳ, ವಸ್ತು-ಶಕ್ತಿಗಳ, ಗದ್ಯ-ಪದ್ಯಗಳ, ಆಡುಮಾತ -ಗ್ರಂಥಮಾತುಗಳ, ಶಬ್ದ-ಮೌನಗಳ, ಜಾನಪದ-ಶಾಸ್ತ್ರೀಯ ಶೈಲಿಗಳ ಭೇದಗಳನ್ನೇ ಅಳಿಸಿಕೊಂಡು ಹೋಗುತ್ತಾ ಎಲ್ಲವನ್ನೂ ಒಂದಾಗಿ ಕಾಣುವ ತರ್ಕಾತೀತ ನೋಟದಲ್ಲಿ ನೆಲೆಗೊಳ್ಳುತ್ತದೆ. ಈವರೆಗಿನ ಆಧುನಿಕ ಕನ್ನಡ ಬರವಣಿಗೆಯ ಸಂಸ್ಕೃತಿಗೆ ಸಾರಾಸಗಟಾದ ಪ್ರತಿಕ್ರಿಯೆಯೆಂಬಂತೆ ಬರೆಯಲ್ಪಟ್ಟಿರುವ ಈ ಕೃತಿ ಆಧುನಿಕ ಜೀವನದ ತತ್ವಮೀಮಾಂಸೆ ಹಾಗೂ ಹೋರಾಟಗಳ ವ್ಯಾಕರಣದ ಅಸಂಗತತೆಯನ್ನು ತಮಾಷೆಯಾಗಿ ನೋಡುತ್ತಾ, ಮನುಷ್ಯ ಚೇತನ ಈ ತತ್ವ-ವ್ಯಾಕರಣಗಳನ್ನು ಮೀರಿದ ನೆಲೆಯಲ್ಲಿ ತನ್ನ ಸಾಂಗತ್ಯವನ್ನು ಪಡೆದುಕೊಂಡಿರುವ ಕಡೆ ಬೊಟ್ಟು ಮಾಡುತ್ತದೆ. ಇದಕ್ಕಾಗಿ ಕೃತಿ ಕನ್ನಡ ಜನಪದ ಪ್ರಜ್ಞೆಯ ಸುಪ್ತದಲ್ಲಿ ಮಲಗಿರುವ ಲಯಗಳನ್ನೂ ಮೌನಗಳನ್ನೂ ಎಬ್ಬಿಸುತ್ತದೆ. ಈ ಎಚ್ಚೆತ್ತ ಮೌನ-ಲಯಗಳ ಮೂಲಕ ಕಾಲದ ಕಳ್ಳ ಹೆಜ್ಜೆಗಳನ್ನು ಗುರುತಿಸುವ ಶಕ್ತಿ ಪಡೆದುಕೊಳ್ಳುತ್ತದೆ. ಲೋಕದ ಬಗೆಗಿನ ಅವಿತವಾದ ಪ್ರೀತಿಯಿಂದ ಮಾತ್ರ ಹುಟ್ಟಬಹುದಾದ ಈ ಶಕ್ತಿ ತನ್ನ ಸಾವಧಾನ ಗತಿಯಲ್ಲಿ ಎಲ್ಲವನ್ನೂ ಮುಟ್ಟುತ್ತ ಸಾಯುತ್ತಿರುವ ಬದುಕಿಗೆ ಜೀವದಾನ ಮಾಡುತ್ತದೆ-ಇತಿಹಾಸ-ವರ್ತಮಾನಗಳ ಕಳ್ಳಗಂಟುಗಳು ತಂತಾನೇ ಬಿಚ್ಚಿಕೊಂಡು ಬದುಕು ಬಯಲಾಗುತ್ತದೆ; ಆಲಯವಾಗಲು ಹಂಬಲಿಸುತ್ತದೆ. ಲೋಕ ಬರೀ 'ಲೋಕ'ದಲ್ಲಿಲ್ಲ ಎಂಬ ಅರಿವನ್ನು ಲೋಕವ್ಯವಹಾರಗಳ ಮೂಲಕವೇ ಮಂಡಿಸಲು ಯತ್ನಿಸುವ ಈ ಕೃತಿ, ಬದುಕಿನ ಜೀವಜಲಕ್ಕಾಗಿ ಮನುಷ್ಯ ಗಾಳಿಯಲ್ಲಿ ಸುರಿಯುವ ಸಕ್ಕರೆಗೆ ಸರಿಯಾಗಿ ಬಾಯೊಡ್ಡಿ ನಿಲ್ಲುವ ಹೊಲೆಗೇರಿಯ ಆ ಹೈಕಳಿನಂತೆ ಧ್ಯಾನಸ್ಥನಾಗಬೇಕು; ಲೋಕೋತ್ತರನಾಗಬೇಕು ಎಂದು ಧ್ವನಿಸುತ್ತದೆ. ಆದರೆ ಈ ಧ್ವನಿ ಅಪಾರ್ಥದಲ್ಲಿ, ಅಸ್ಪಷ್ಟ ತರಂಗಗಳಲ್ಲಿ ನಮ್ಮನ್ನು ಮುಟ್ಟುತ್ತಿರುವುದಕ್ಕೆ ಈ ಕೃತಿಯ ಕೃತಕ ಹೊರರೂಪವೇ ಕಾರಣವಿರಬಹುದು.

'ಕುಸುಮಬಾಲೆ' ಮೂಲತಃ ಒಂದು ಆಧುನಿಕ ತತ್ವಪದ. ತತ್ವಪದದಂತೆಯೇ ಅದನ್ನು ಆಲಿಸಬೇಕು. ಆಗಮಾತ್ರ ಅದರ ಅರ್ಥ ಮತ್ತು ಮಿತಿಗಳು ಹೊಳೆಯುತ್ತವೆ. ಕಾದಂಬರೀ ರೂಪವಾಗಿ ಈ ಕೃತಿ ಪ್ರಸ್ತುತಗೊಂಡಿರುವುದೇ ಇದು 'ಅರ್ಥವಾಗದ ಮಹಾಕೃತಿ'ಯೆಂದು ಹೆಸರಾಗಲು ಕಾರಣವೆಂದು ತೋರುತ್ತದೆ.

ಲಿಖಿತ ರೂಪಕ್ಕೆ ಒಗ್ಗದ, ಓದಿನ ತರ್ಕಕ್ಕೆ ಸಿಗದ ಈ ಕೃತಿ ಅಧ್ಯಾಯಗಳಲ್ಲಿ ಒಡೆದು ಕಾದಂಬರಿಯಾಗಲು ಹೆಣಗಿ ಸೋಲುತ್ತದೆ. ಇದರಿಂದಾಗಿ ಅದು ತತ್ತ್ವಪದವಾಗಿಯೂ ತನ್ನ ಪೂರ್ಣ ರೂಪ ಪಡೆಯದೆ, ತನ್ನ ಐಕ್ಯತೆಯನ್ನು ಕಳೆದುಕೊಂಡಿದೆ. ರೂಪದ ಈ ಬಿಕ್ಕಟ್ಟು ನಮ್ಮ ಸಮಕಾಲೀನ ಸಾಹಿತ್ಯ ಸಂದರ್ಭದ, ಹಾಗೇ ಸಮಕಾಲೀನ ಜೀವನದ ಬಿಕ್ಕಟ್ಟು ಕೂಡಾ ಹೌದು. ಪ್ರಜಾಪ್ರಭುತ್ವವನ್ನು ವಿಚಾರದಿಂದ ಅಧ್ಯಾತ್ಮಿಕಗೊಳಿಸುವ ಬಿಕ್ಕಟ್ಟು. ಪ್ರಜಾಪ್ರಭುತ್ವವನ್ನು ವಿರೋಧಾಭಾಸ ಹಾಗೂ ಸಂಘರ್ಷಗಳಿಂದ ಪಾರುಮಾಡುವ ಬಿಕ್ಕಟ್ಟು. ಈ ಬಿಕ್ಕಟ್ಟಿನಲ್ಲಿ ಹುಟ್ಟಿರುವ 'ಕುಸುಮಬಾಲೆ' ಏನನ್ನೋ ಹೊಸದಾಗಿ ಹೇಳಲು ಯತ್ನಿಸುತ್ತಿರುವಂತಿವೆ. ಅದರ ಈ ತೊದಲ್ನುಡಿಯನ್ನು ನಾವೆಲ್ಲಾ ಕೊಂಚ ಸಹನೆ-ಪ್ರೀತಿಗಳಿಂದ ಕೇಳೋಣ.

ಟಿಪ್ಪಣಿ: ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳನ್ನು ಗುರುತಿಸುವ ಕೆಲಸವನ್ನಷ್ಟೇ ನಾನು ಇಲ್ಲಿ ಮಾಡಿರುವುದು. ಈ ಒಲವುಗಳನ್ನು ಪ್ರಕಟಪಡಿಸದೇ ಸಾಹಿತ್ಯ ಕೃತಿಯೊಂದು ಶ್ರೇಷ್ಠವೆನ್ನಿಸಿಕೊಳ್ಳಲಾರದೆಂಬ ಮೌಲ್ಯ ನಿರ್ಣಯದ ಕೆಲಸವನ್ನು ನಾನು ಮಾಡಿಲ್ಲ. ●

ಕುಸುಮಬಾಲೆ: ದಲಿತರ ನೇಣುಗಂಬ

ಕರ್ನಾಟಕದಲ್ಲಿ ಯಾರಿಗೂ ಅರ್ಥವಾಗದ 'ಕುಸುಮಬಾಲೆ' ನನಗೆ ಅರ್ಥವಾಗಿದೆ. ಕಾವ್ಯಾತ್ಮಕ ಲಾಲಿತ್ಯದಿಂದ ಕೂಡಿದ ಆ ಕಾದಂಬರಿ ದಲಿತ ಮತ್ತು ದಲಿತ ಸಂಸ್ಕೃತಿಯ ವಿರೋಧಿಯಾಗಿದೆ. ಇತಿಹಾಸದ ಇತರ ಕತೆಯಾಗಬಹುದಾಗಿದ್ದ 'ಕುಸುಮಬಾಲೆ' ಸದ್ಯಕ್ಕೆ ಉಳ್ಳವರ ಮೇಲುವರ್ಗದವರ ಆತ್ಮಚರಿತ್ರೆಯಾಗಿದೆ. ಆ ಕತೆಯ ಒಡಲಿನಂತ ಆ ಕಲಾತ್ಮಕ ಚೆಲುವಿನ ಭಾಷೆಯನ್ನು ತೆಗೆದುಬಿಟ್ಟರೆ ಅದು ದಲಿತರ ನೇಣುಗಂಬದಂತೆ ಕಾಣಿಸುತ್ತದೆ.

...ದಲಿತ ವಿರೋಧಿಯಾದ ಸರ್ಕಾರ, ದಲಿತರ ಕೊಲೆಯನ್ನು ಬಯಸುವ ಸರ್ಕಾರ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಗಳು ದಲಿತ ವಿರೋಧಿಗಳಾಗಿರುವುದರಿಂದ ದಲಿತ ವಿರೋಧಿ ಕತೆಯನ್ನು ಪುರಸ್ಕರಿಸಿವೆ. ಈ ಗೌರವ ದಲಿತರಿಗೆ ಗೌರವವಲ್ಲ. ಬದಲಿಗೆ ಅಗೌರವವೆಂದೇ ನನ್ನ ಭಾವನೆ.

—**ಮುಳ್ಳೂರು ನಾಗರಾಜ**
ಸಂಕ್ರಮಣ–೨೨೪ರಲ್ಲಿ

ಕಥೆ

ಮಂದಿರ-ಮಸೀದಿ....

ಮೂಲ: **ಪ್ರೇಮಚಂದ್**

ಕನ್ನಡಕ್ಕೆ: ರಾಘವೇಂದ್ರ ಪಾಟೀಲ

ಇಶ್ರತ್‌ಅಲಿ ಚೌಧರಿಯವರು ಜಿಲ್ಲೆಯಲ್ಲಿಯೇ ದೊಡ್ಡ ಜಮೀನುದಾರರು. ಇವರ ಪೂರ್ವಿಕರು ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಿದ ಸೇವೆಗಾಗಿ ದೊರೆತ ಜಹಗೀರು ಇವರ ಕಾಲದಲ್ಲಿ ತುಂಬ ಊರ್ಜಿತವಾಗಿತ್ತು. ಇಡೀ ಜಿಲ್ಲೆಯಲ್ಲಿ ಚೌಧರಿಯವರು ಸಂಪನ್ನರಾದ, ಅತ್ಯಂತ ಮುಖ್ಯರಾದ ವ್ಯಕ್ತಿ ಎನ್ನಿಸಿಕೊಂಡಿದ್ದರು. ಚೌಧರಿಯವರ ಪ್ರದೇಶದ ಖಾಸೇಸವಾರಿಗೆ ಬಂದ ಯಾವುದೇ ಬ್ರಿಟಿಷ್ ಅಧಿಕಾರಿಯು ಇವರ ಮನೆಗೆ ಬಂದು ಭೆಟ್ಟಿಯಾಗುವುದನ್ನು ಮರೆಯುತ್ತಿರಲಿಲ್ಲ. ಆದರೆ ಇವರು ಮಾತ್ರ ಎಂದೂ ಯಾವ ಅಧಿಕಾರಿಯನ್ನೂ ಭೆಟ್ಟಿಯಾಗಲು ಹೋಗುವವರಲ್ಲ. ಕಮಿಷನರ್ ಸಾಹೇಬರೇ ಬರಲಿ ಇವರು ಅವರನ್ನು ಭೆಟ್ಟಿಯಾಗಲು ಹೋಗುವವರಲ್ಲ. ಅವರು ಕೋರ್ಟು ಕಚೇರಿಗಳಿಗೆ ಹೋಗಲೇಬಾರದಾಗಿ ಆಣೆಇಟ್ಟುಕೊಂಡವರಂತೆ ಆಡುವರು.. ಅಧಿಕಾರಿಗಳ ಮುಂದೆ ತಲೆಬಗ್ಗಿಸಿ ಕೈಜೋಡಿಸಿಕೊಂಡು ನಿಂತು ಅವರು ಹೇಳಿದ್ದಕ್ಕೆಲ್ಲ ಜೀ ಹುಜೂರ್....ಅಂತನ್ನುವುದು ಇವರಿಗೆ ಹೊಂದದ ಸಂಗತಿಯಾಗಿತ್ತು. ಸಾಧ್ಯವಾದಷ್ಟುಮಟ್ಟಿಗೆ ಅವರು ಕಾಯ್ದೆ ಕಾನೂನುಗಳ ಗೊಂದಲಕ್ಕೆ ಸಿಕ್ಕಿಹಾಕಿಕೊಳ್ಳದಂತೆ ನೋಡಿಕೊಳ್ಳುತ್ತಿದ್ದರು. ತಮಗೆ ಹಣಕಾಸಿನ ಲುಕ್ಸಾನು ಆದರೂ ಸರಿ. ಆದರೆ ಇಂಥದರ ಗದ್ದಲ ಬೇಡವೆನ್ನುವುದು ಅವರ ಭಾವನೆಯಾಗಿತ್ತು. ತಮ್ಮ ಭೂಮಿ, ಆಸ್ತಿಗಳ ಮೇಲ್ವಿಚಾರಣೆಗೆ ಬೇಲೀಫರನ್ನು ನೇಮಿಸಿದ್ದರು. ಅವರು ದುಡ್ಡುಕಾಸಿನ ಲೆಕ್ಕಾಚಾರವನ್ನು ಪ್ರಾಮಾಣಿಕವಾಗಿ ಇಡುತ್ತಿದ್ದರೇ ಇಲ್ಲವೇ ಅನ್ನುವುದು ಬೇರೆ ಮಾತು. ಆದರೆ ಎಲ್ಲ ಕಾರುಬಾರು ಅವರದೇ.

ಚೌಧರಿಯವರು ಪರ್ಶಿಯನ್ ಮತ್ತು ಅರಬೀ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದರು. ಮುಸ್ಲಿಂ ವೈಯುಕ್ತಿಕ ನಿಯಮಗಳಾದ 'ಶರಾ'ದ ನಿಷ್ಠ ಅನುಯಾಯಿಗಳು. ಸಾಲಕ್ಕೆ ಬಡ್ಡಿ ತಕ್ಕೊಳ್ಳುವುದು ಪಾಪವೆಂಬ ನಂಬಿಕೆಯುವರು. ದಿನಕ್ಕೆ ಐದು ಸಲ ನಮಾಜು ಮಾಡುವವರು. ರಮಝಾನ್ ತಿಂಗಳು ಉಪವಾಸವಿರುವವರು ಮತ್ತು

ನಿತ್ಯ ಕುರಾನಿನ ಪಠಣ ಮಾಡುವವರು. ಇಂಥ ನಿಷ್ಠ ಧಾರ್ಮಿಕ ದೃಷ್ಟಿಕೋನ ಹೊಂದಿದವರಾದರೂ ಚೌಧರಿಯವರು ಸಂಕುಚಿತ ಮನಸ್ಸಿನ ಸನಾತನಿಯೇನೂ ಆಗಿರಲಿಲ್ಲ. ಪ್ರಾತಃಸಮಯದಲ್ಲಿ ಪವಿತ್ರವಾದ ಗಂಗೆಯಲ್ಲಿ ಸ್ನಾನಮಾಡುವುದು ಅವರ ನಿತ್ಯರೂಢಿಯಾಗಿತ್ತು. ಚಳಿ ಮಳೆ ಏನೇ ಇದ್ದರೂ ಚೌಧರಿಯವರು ಮಾತ್ರ ಎರಡು ಮೈಲಿ ನಡೆದು ಗಂಗೆಗೆ ಹೋಗುವುದನ್ನು ಮಾತ್ರ ತಪ್ಪಿಸುವವರಲ್ಲ. ಅಲ್ಲಿಂದ ವಾಪಸಾಗುವಾಗ ಅವರು ಬೆಳ್ಳಿಯ ಬಿಂದಿಗೆಯಲ್ಲಿ ಗಂಗೆಯ ಪವಿತ್ರಜಲವನ್ನು ತುಂಬಿ ತಂದಿಟ್ಟುಕೊಂಡು ಇಡೀ ದಿನ ಆ ಪವಿತ್ರ ಜಲವನ್ನೇ ಕುಡಿಯುತ್ತಿದ್ದರು. ಹಿಂದೂ ಸಾಧು ಸಂತರಿಗೆ ಗಂಗೆಯ ಬಗ್ಗೆ ಇರುವ ಭಕ್ತಿಗಿಂತ ಚೌಧರಿಯವರದು ಕಡಿಮೆಯಾಗಿರಲಿಲ್ಲ.

ಪ್ರತಿ ವಾರವಾರವೂ ಚೌಧರಿಯವರ ಇಡೀ ಮನೆಯನ್ನು ಆಕಳ ಸಗಣಿಯಿಂದ ಸಾರಿಸುತ್ತಿದ್ದರು. ಅವರ ಧರ್ಮನಿರಪೇಕ್ಷತೆ ಅನ್ನುವುದು ಇಷ್ಟೇಅಲ್ಲ. ಅವರ ಬಗೀಚದಲ್ಲಿ ಇಡೀ ವರ್ಷಕಾಲವೂ ಒಬ್ಬ ಹಿಂದೂ ಪಂಡಿತನು ಧರ್ಮಗ್ರಂಥಗಳ ಪಠಣ ಮಾಡುತ್ತಿದ್ದನು. ಅವರು ಸಾಧು ಸಂತರಿಗೆ ಭಕ್ತಿಪೂರ್ವಕವಾಗಿ ನೀಡುವ ಆತಿಥ್ಯ ಹಿಂದಿನ ಕಾಲದ ರಾಜ ಮಹಾರಾಜರು ಋಷಿ ಮುನಿಗಳಿಗೆ ನೀಡುತ್ತಿದ್ದ ಆತಿಥ್ಯಕ್ಕಿಂತ ಯಾವ ದೃಷ್ಟಿಯಿಂದಲೂ ಕಡಿಮೆ ಎಂದು ಹೇಳಲು ಆಗುತ್ತಿರಲಿಲ್ಲ. ಒಂದು ಮಾತಿನಲ್ಲಿ ಹೇಳಿ ಮುಗಿಸುವುದಾದರೆ ಚೌಧರಿಯವರ ಮನೆಯ ಬಾಗಿಲು ಎಲ್ಲ ಮತಗಳ ಸಾಧು ಸಂತರಿಗೆ ಸದಾ ತೆರೆದಿರುತ್ತಿತ್ತು.

ಮುಸ್ಲಿಂ ಫಕೀರರಿಗೆ ಅವರ ಮನೆಯ ಪಾಕಶಾಲೆಯಲ್ಲಿಯೇ ಅಡಿಗೆ. ದಿನಾಲು ನೂರಾರು ಮುಸ್ಲಿಂರ ಸಹಭೋಜನ ಅಲ್ಲಿ ನಡೆಯುತ್ತಿತ್ತು. ಇಷ್ಟೆಲ್ಲ ದುಂದು ಎನ್ನಿಸುವಂತಹ ಪರೋಪಕಾರ ಚಟುವಟಿಕೆಗಳಿದ್ದರೂ ಚೌಧರಿಯವರು ಮಾತ್ರ ಒಂದು ಕವಡೆಯಷ್ಟು ಕೂಡ ಸಾಲ ಮಾಡಿರಲಿಲ್ಲ. ದೇವರ ದಯದಿಂದ ಅವರ ಸಂಪತ್ತು ದಿನಗಳು ಕಳೆದಂತೆ ವರ್ಧಿಸುತ್ತಲೇ ನಡೆದಿತ್ತು.

ಅವರು ತಮ್ಮ ಜಹಗೀರಿನ ಪ್ರದೇಶದ ಜನರ ಅನುಕೂಲಕ್ಕಾಗಿ ಒಂದು ಆಜ್ಞೆಯನ್ನು ಹೊರಡಿಸಿದ್ದರು. ಅದೆಂದರೆ–ಸಂಸ್ಕಾರಕ್ಕಾಗಿ; ಹೋಮ ಹವನಾದಿಗಳಿಗಾಗಿ ಅಥವಾ ಮದುವೆಯ ಅಡಿಗೆಗಾಗಿ ಆ ಜಹಗೀರಿನ ಪ್ರಜೆಗಳು ಚೌಧರಿಯವರ ಕಾಡಿನಿಂದ ಬೇಕಾಗುವಷ್ಟು ಉರುವಲು ಕಡಿದುಕೊಂಡು ಹೋಗಬಹುದು. ಅದಕ್ಕಾಗಿ ಚೌಧರಿಯವರ ಅನುಮತಿಗಾಗಿ ಕಾಯಬೇಕಾಗಿಲ್ಲ. ಇನ್ನು ಹಿಂದೂ ರೈತರುಗಳ ಮನೆಗಳಲ್ಲಿ ಮದುವೆಗಳಿದ್ದರೆ–ಮದುವೆಯ ಮೆರವಣಿಗೆಗಾಗಿ ಆನೆ, ಕುದುರೆ, ಮೇಣೆ, ಕಾರ್ಪೆಟ್ಟು

ಗಳು ಮತ್ತು ಬೇಕಾಗುವ ಯಾವುದೇ ಸಾಮಾನುಗಳನ್ನು ಚೌಧರಿಯವರ ಮನೆಯಿಂದ ನಿರಾತಂಕವಾಗಿ ಪಡೆಯಬಹುದಾಗಿತ್ತು. ಇವರುಗಳ ಮದುವೆಗೆ ಹಾಜರಾಗಲು ಚೌಧರಿಯವರು ತಮ್ಮ ಪ್ರತಿನಿಧಿಯೊಬ್ಬನನ್ನು ನೇಮಿಸಿದ್ದರು. ಈ ಕಾಯಂ ಆದ ಪ್ರತಿನಿಧಿಗೆ ಪ್ರತಿ ಮದುವೆಗೆ ಹೋದಾಗ ನಿರ್ದಿಷ್ಟವಾದ ಸಂಭಾವನೆ ದೊರೆಯುತ್ತಿತ್ತು. ಅದಲ್ಲದೇ, ಕನ್ಯಾದಾನದ ಕಾಲಕ್ಕೆ ಚೌಧರಿಯವರ ಪರವಾಗಿ ಕಾಣಿಕೆ ಸಂದಾಯ ವಾಗುತ್ತಿತ್ತು.

ಚೌಧರಿಯವರ ಅಂಗರಕ್ಷಕನಾಗಿ ಠಾಕೂರ್ ಭಜನ್‌ಸಿಂಗ್‌ನೆಂಬ ರಜಪೂತ ವ್ಯಕ್ತಿ ಇದ್ದ. ಆರಡಿ ಎತ್ತರದ ಹರವಾದ ಎದೆಯ ಈ ಮನುಷ್ಯ ಬಿಲ್ಲಿಗೆ ಹೂಡಿದ ಬಾಣ ದಂಥವನು, ಧೈರ್ಯಶಾಲಿ. ಚೌಧರಿಯವರಿಗೆ ಇವನ ಮೇಲೆ ಎಷ್ಟು ನಂಬಿಕೆಯೆಂದರೆ ತಾವು ಹಜ್‌ಗೆ ಹೋದಾಗ ಕೂಡ ಇವನನ್ನು ಜೊತೆಗೆ ಕರೆದುಕೊಂಡು ಹೋಗಿದ್ದರು. ಠಾಕೂರ್ ಭಜನಸಿಂಗ್ ಜೊತೆಗಿದ್ದರೆ ಚೌಧರಿಯವರಿಗೆ ಯಾವ ಭಯವೂ ಇಲ್ಲ. ಅವ ಜೊತೆಗಿದ್ದರೆ ತಮ್ಮ ಶತೃವಿನ ಮನೆಯ ಬಾಗಿಲ ಮುಂದೆಯೇ ನಿದ್ರಿಸಿಯಾರು! ಚೌಧರಿಯವರಿಗೆ ಶತೃಗಳೂ ಇದ್ದರು! ಅಕ್ಕಪಕ್ಕದ ಜಮೀನುದಾರರೆಲ್ಲ ಇವರ ಪ್ರಭಾವ ಪ್ರಸಿದ್ಧಿ ಕಂಡು ಕರುಬುವವರಾಗಿದ್ದರು. ಈ ಚೌಧರಿಯವರ ದೆಸೆಯಿಂದ ಅವರು ತಮ್ಮ ಟೆನೆಂಟುಗಳೊಂದಿಗೆ ಇಷ್ಟಬಂದಂತೆ ನಡೆದುಕೊಳ್ಳುವಂತೆ ಇರಲಿಲ್ಲ. ಯಾಕೆಂದರೆ ಯಾರೇ ದುರ್ಬಲರಿಗೆ ಅನ್ಯಾಯವಾದರೆ ಚೌಧರಿಯವರು ಅಂಥವರಿಗೆ ನ್ಯಾಯ ದೊರಕಿಸಿಕೊಡಲು ಮುನ್ನುಗ್ಗುವಂಥವರಾಗಿದ್ದರು.

ಚೌಧರಿಯವರಿಗೆ ಈ ಭಜನ್‌ಸಿಂಗ್ ಮನೆಯಿಂದ ಹೊರಗೆ ಹೊರಟನೆಂದರೆ ಎಲ್ಲಿಲ್ಲದ ಚಿಂತೆ. ಯಾರ ಜೊತೆಗೆ ಏನು ಉಲಕೋಚಿತನವಾಡಿ ಯಾವ ಜಗಳ ತಂದಿಟ್ಟುಕೊಳ್ಳುತ್ತಾನೆಯೋ....ಎಲ್ಲಿ ಪೆಟ್ಟು ತಿನ್ನುತ್ತಾನೆಯೋ ಎನ್ನುವ ಕಾಳಜಿ. ಭಜನಸಿಂಗ್ ಕಟ್ಟಿ ಮೇಯಿಸಿದ ಟಗರಿನಂಥವನು, ಬಿಚ್ಚಿ ಬಿಟ್ಟರೆ ಸಾಕು–ಎದುರಿಗೆ ಸಿಕ್ಕವರತ್ತ ನುಗ್ಗಿ ತಲೆಗೆ ಗುದ್ದುವಂಥವನು. ಇವನಿಗೆ ಚೌಧರಿಯವರೆಂದರೆ ಸರ್ವಸ್ವ. ಮೂರು ಲೋಕದಲ್ಲಿನ ಯಾರಿಗೂ ಕಡಿಮೆಯಲ್ಲ. ರಾಜನೆನ್ನಿರಿ, ಒಡೆಯನೆನ್ನಿರಿ, ದೇವರೆನ್ನಿರಿ... ಠಾಕೂರನಿಗೆ ಚೌಧರಿಯವರೆಂದರೆ ಇದೆಲ್ಲವೂ ಆಗಿದ್ದರು. ಅವನು ತನ್ನ ಜೀವವನ್ನೇ ಪಣಕ್ಕೆ ಒಡ್ಡಿ ಚೌಧರಿಯವರನ್ನು ಅನೇಕಲ ರಕ್ಷಿಸಿದ್ದಾನೆ.

ಚೌಧರಿ ಸಾಹೇಬರ ನಡಾವಳಿಕೆಯಿಂದ ಮುಸ್ಲಿಮರ ಮನಸ್ಸಿಗೆ ಮುಳ್ಳು ಚುಚ್ಚಿದಂತಾಗುತ್ತಿತ್ತು. ಇವರು ಅದೆಂಥ ಮುಸ್ಲಿಮರು ಎಂದು ಅವರು ಬೇಸರ ಪಟ್ಟುಕೊಳ್ಳುತ್ತಿದ್ದರು. ಇವರ ವಿಚಿತ್ರ ನಂಬಿಕೆಗಳೋ!.... ಯಾವ ಮುಸ್ಲಿಮನು

ಅವುಗಳನ್ನು ಒಪ್ಪಿಕೊಳ್ಳಲಾದೀತು ? ಗಂಗಾ ನದಿಯ ನೀರನ್ನು ಪವಿತ್ರವೆಂದು ಭಾವಿಸಿ ನಿತ್ಯ ಆ ನೀರನ್ನೇ ಕುಡಿಯುವ ಇವರನ್ನು ನಿಜವಾದ ಮುಸ್ಲಿಂ ಎಂದು ಹೇಳಲಾದೀತೆ? ....ಹಿಂದೂ ಸಾಧು ಸಂತರಿಗೆ ಅದ್ದೂರಿಯ ಆತಿಥ್ಯ ನೀಡುತ್ತಾರಲ್ಲ ಇವರು. ಸರಿಯೆ ? ಪಂಡಿತನನ್ನು ಮನೆಗೆ ಕರೆಸಿ ಹಿಂದೂ ಧರ್ಮಗ್ರಂಥಗಳನ್ನು ಓದಿಸುತ್ತಾರಲ್ಲ–ಇದು ಯೋಗ್ಯವೆ ?....ಸನಾತನ ಮುಸ್ಲಿಮರು ಚೌಧರಿಯವರ ವಿರುದ್ಧ ಸಂಚಿನ ಯೋಜನೆ ರೂಪಿಸತೊಡಗಿದರು. ಹೇಗಾದರೂ ಮಾಡಿ ಈ ಹಿಂದೂಗಳನ್ನು ಬಗ್ಗು ಬಡಿಯ ಬೇಕೆಂದು ಹಂಚಿಕೆ ಮಾಡತೊಡಗಿದರು.... ಅಂತೂ ಕೊನೆಗೆ ಅವರು ಯೋಜನೆ ಯೊಂದನ್ನು ಸಿದ್ಧಪಡಿಸಿಯೇಬಿಟ್ಟರು. ಭಗವಾನ್ ಕೃಷ್ಣ ಜನ್ಮಾಷ್ಟಮಿಯ ದಿವಸ ದೇವಸ್ಥಾನ ನುಗ್ಗಿ, ಹಿಂದುಗಳು ಎಂದೆಂದಿಗೂ ಮರೆಯದಂತೆ ಚಚ್ಚಬೇಕೆಂದು ನಿರ್ಧರಿಸಿದರು....ಚೌಧರಿಯ ಆಶ್ರಯದಲ್ಲಿ ಕೊಬ್ಬಿದ್ದಾರೆ ಕೊಬ್ಬು ಇಳಿಸಬೇಕು.... ಈ ಚೌಧರಿ ತಾನೇ ಏನು ಮಾಡಿಯಾನು ? ಒಂದು ವೇಳೆ ಹಿಂದೂಗಳ ಬಾಜೂ ಹಿಡಿದರೆ ಇವನನ್ನೂ ಒಂದು ಕೈ ನೋಡಿಕೊಳ್ಳುವುದು. ಅಂದರೆ ಇವನನ್ನು ಹಿಡಿದು ಕೊಂಡ ಹಿಂದೂ ಭೂತ ಕೂಡ ಬಿಟ್ಹೋಡಬಹುದು ...

ಅಂದು ಜನ್ಮಾಷ್ಟಮಿ. ಕಾರ್ಗತ್ತಲು. ಗುಡಿಯಲ್ಲಿ ಉತ್ಸವ ನಡೆದಿದೆ....ಬಚ್ಚ ಬಾಯಿಯ ಮುದುಕನೊಬ್ಬ ತಾನಪುರಾದ ಶೃತಿಯಲ್ಲಿ ಧ್ರುಪದವೊಂದನ್ನು ಹಾಡು ತ್ತಿದ್ದನು. ಢೋಲು, ತಾಳಗಳನ್ನು ಹಿಡಿದ ನೂರಾರು ಭಕ್ತರ ಗುಂಪು....ಈ ಮುದುಕ ಯಾವಾಗ ತನ್ನ ರಾಗ ಮುಗಿಸಿಯಾನು–ಯಾವಾಗ ನಾವು ಭಜನೆಗಳನ್ನು ಹಾಡೇವು ಎಂದು ಕುತೂಹಲದಿಂದ ಕಾಯುತ್ತಿದ್ದರು. ಭಕ್ತಸಮೂಹಕ್ಕೆ ಕೊನೆಗೆ ಹಂಚಬೇಕಾದ ಪ್ರಸಾದದ ಅಡಿಗೆಯೂ ಮುಗಿದಾಗಿತ್ತು.. ಗಂಡಸರು, ಹೆಂಗಸರು ಅತ್ಯಂತ ಉತ್ಸಾಹ ದಿಂದ ಉತ್ಸವದಲ್ಲಿ ಭಾಗಿಗಳಾಗಿದ್ದರು ...ಅಷ್ಟರಲ್ಲಿ ಲಾಠಿಗಳನ್ನು ಹಿಡಿದ ಮುಸ್ಲಿಮರ ಗುಂಪೊಂದು ಅಲ್ಲಿಗೆ ಬಂದು ದಬ ದಬ ಎಂದು ಗುಡಿಯತ್ತ ಕಲ್ಲುಬೀಸತೊಡಗಿದರು.... 'ಕಲ್ಲು !....ಎಲ್ಲಿಂದ ಬರಲಿಕತ್ಯಾವ ?' 'ಕಲ್ಲು....ಯಾರ ಒಗೀಲಿಕತ್ಯಾರ !? ಅಂತ ಒದರಾಟ ಚೀರಾಟ ಸುರುವಾಗಿ ಗುಡಿಯೊಳಗೆ ಅಲ್ಲೋಲ ಕಲ್ಲೋಲವುಂಟಾಯಿತು. ಇದು ಏನು ಹಕೀಕತ್ತು ಎಂದು ತಿಳಿದುಕೊಳ್ಳುವ ಉದ್ದೇಶದಿಂದ ಒಂದಿಷ್ಟು ಮಂದಿ ಹೊರಗೆ ಬಂದರು....ಹೊರಗೆ ಬರಲಿ ಎಂದು ಕಾಯುತ್ತಿದ್ದ ಮುಸ್ಲಿಮರು ಇವರ ಮೇಲೆ ಬಿದ್ದು ಲಾಠಿ ಬೀಸತೊಡಗಿದರು. ಹೌಹಾರಿದ ಈ ನಿರಾಯುಧ ಹಿಂದುಗಳಲ್ಲಿ ಒಂದಿಷ್ಟುಮಂದಿ ಅಡಗಿಕೊಳ್ಳಲು ಓಡಿ ಗುಡಿಹೊಕ್ಕರೆ ಉಳಿದವರು ದಾರಿ ಸಿಕ್ಕತ್ತ ಓಡಿದರು....ಭಯಂಕರ ಗಲಾಟೆ ಶುರುವಾಯಿತು.

ಹೊಡೆದಾಟದ ಸುದ್ದಿ ಚೌಧರಿಯವರಿಗೆ ಮುಟ್ಟಿದ ಕೂಡಲೇ ಅವರು ಭಜನಸಿಂಗನನ್ನು ಕೂಗಿದರು....'ನೋಡು....ಅದೇನು ಗಲಾಟೆ ನೋಡು.... ದೊಂಬೀ

ಎಬ್ಬಿಸಿದವರಿಗೆ ಜಾಗ ಖಾಲೀಮಾಡಲಿಕ್ಕೆ ಹೇಳು, ಅವರು ಮಾತು ಕೇಳದಿದ್ದರ ಕಪಾಳಿ ಗೆರಡು ಬಿಗೀ.... ಹಾಂ.... ನೀ ಯಾರದರೇ ತಲೀಗಿಲೀ ಒಡೀಲಿಕ್ಕೆ ಹೋಗಬ್ಯಾಡಾ ಮತ್ತ...' ಅಂತ ತಾಕೀತುಮಾಡಿ ಕಳಿಸಿದರು. ಇಷ್ಟರೊಳಗೆ ಠಾಕೂರ್ ಭಜನಸಿಂಗನಿಗೆ ಈ ಜಗಳದ ಸುದ್ದಿ ತಿಳಿದು ಅವನ ರಕ್ತ ಕುದಿಯುತ್ತಿತ್ತು. ಅವನು ಹಲ್ಲು ಕಡಿಯುತ್ತಿದ್ದನು. ಚೌಧರಿಯುವರ ಈ ಆಜ್ಞೆ ಅವನ ಮೌನ ಪ್ರಾರ್ಥನೆಗೆ ದೊರೆತ ವರದಂತಾಯಿತು ! ಅವ ದೊಣ್ಣೆಯನ್ನು ಹೆಗಲಿಗೇರಿಸಿಕೊಂಡವನೇ ಗುಡಿಯತ್ತ ಓಡಿದ....ಅಲ್ಲಿ ಹೋಗಿ ನೋಡಿದರೆ ಮುಸ್ಲಿಮರು ಅಧ್ವಾನವೆಬ್ಬಿಸಿದ್ದಾರೆ. ಹಿಂದುಗಳನ್ನು ಗುಡಿಯೊಳಗೆ ಅಟ್ಟಿಸಿಕೊಂಡು ಹೋಗಿ....ಅಲ್ಲಿ ಕಪ್ಪು ಬಸಿಗಳ ಅಂಗಡಿಯೊಳಗೆ ಹೊಕ್ಕ ಸೊಕ್ಕಿದ ಗೂಳಿಯ ಹಂಗೆ ಆಡುತ್ತಿದ್ದಾರೆ !

ಠಾಕೂರ್ ಕೆಂಡಾಮಂಡಲವಾದ. ಅವನ ಹಣೆಯ ನಾಡಿಗಳು ರಕ್ತದ ನುಗ್ಗುವಿಕೆಯಿಂದ ಟಪಟಪವೆಂದು ಹೊಡೆದುಕೊಳ್ಳತೊಡಗಿದವು. ಅವನು ಒಮ್ಮೆ ಜೋರಾಗಿ ಗರ್ಜಿಸಿದವನೇ ಗುಡಿಯೊಳಗಿನ ದೊಂಬಿಕೋರರಿಗೆ ಇಕ್ಕತೊಡಗಿದನು. ಸುಮಾರು ಐವತ್ತು ಜನರ ನಡುವೆ ಒಬ್ಬನೇ ಸಿಕ್ಕಿಹಾಕಿಕೊಂಡ ಇವನು ಹುಲಿಯಂತೆ ಹೋರಾಡ ತೊಡಗಿದ್ದನು. ಅವನು ಕ್ರೋಧದಿಂದ ಕುರುಡಾಗಿದ್ದನು. ಸತ್ತರೋ ಬದುಕಿದರೋ ಎನ್ನುವ ಪರಿವೆ ಇಲ್ಲದವನಂತೆ ಇವರನ್ನು ಮುರಿದು ಮುದ್ದಿಯಾಗುವಂತೆ ಹೊಡೆಯ ತೊಡಗಿದ್ದನು....ಠಾಕೂರನಿಗೆ ಈ ಅತಿಮಾನುಷ ಶಕ್ತಿ ಎಲ್ಲಿಂದ ಬಂದಿತೋ ಯಾರು ಬಲ್ಲರು ! ಅವನು ಯಾವುದೋ ದೈವೀಶಕ್ತಿ ತನ್ನ ಸಹಾಯಕ್ಕೆ ಬಂದಿದೆ ಎಂದು ಭಾವಿಸಿಕೊಂಡಿದ್ದನು....ಭಗವಾನ್ ಕೃಷ್ಣನೇ ಅವನನ್ನು ರಕ್ಷಿಸುತ್ತಿದ್ದಾನೆ ಅನ್ನುವಂತಿತ್ತು....ಧರ್ಮದ ಪಾವಿತ್ರ್ಯ ರಕ್ಷಣೆಗಾಗಿನ ಹೋರಾಟಗಳಲ್ಲಿ ತೊಡಗುವ ಮನುಷ್ಯರು ಹೀಗೆಯೇ ಅದ್ಭುತ ಧೈರ್ಯ ಮೆರೆಯುತ್ತಿರಬಹುದಲ್ಲವೆ !

ಇತ್ತ—ಈ ಠಾಕೂರನು ಯಾರದಾದರೂ ತಲೆ ಒಡೆದು ಹಾಕುವವನೇ ಎನ್ನುವ ಸಂಶಯ ಕಾಡಿದ ಚೌಧರಿಯುವರು ಅವನ ಹಿಂದೆ ಹಿಂದೆಯೇ ಓಡಿಬಂದರು. ಅವರು ಗುಡಿಯನ್ನು ತಲುಪುತ್ತಿದ್ದಂತೆ ವಿನಾಶದ ದೃಶ್ಯ ಗೋಚರವಾಯಿತು. ಓಡಬಲ್ಲವರು ಜೀವ ಉಳಿಸಿಕೊಳ್ಳಲು ಓಡಿಹೋಗುತ್ತಿದ್ದರೆ, ಏಟು ಬಿದ್ದವರು ನೆಲಕ್ಕೆ ಬಿದ್ದು ನೋವಿನಿಂದ ನರಳುತ್ತಿದ್ದರು. ಜನ ಭಯದಿಂದ ಕಿರಿಚುತ್ತಿದ್ದರು. ಚೌಧರಿಯುವರು ಠಾಕೂರನನ್ನು ಕೂಗಬೇಕೆನ್ನುವಷ್ಟರಲ್ಲಿ ಓಡುತ್ತ ಬಂದ ವ್ಯಕ್ತಿಯೊಬ್ಬ ಇವರ ಮುಂದುಗಡೆಯೇ ಧೊಪ್ಪೆಂದು ಬಿದ್ದನು. ಚೌಧರಿಯುವರಿಗೆ ಅವನ ಗುರುತು ಸಿಕ್ಕಾಗ ಅವರ ಕಣ್ಣಿಗೆ ಕತ್ತಲೆ ಕವಿದಂತಾಯಿತು. ಅವನು ಶಾಹಿದ್ ಹುಸೇನ್ ! ಬೇರೆ ಯಾರೂ ಅಲ್ಲ.... ಚೌಧರಿ ಸಾಹೇಬರ ಖಾಸಾ ಅಳಿಯ.... ಅವರ ಇಡೀ ಆಸ್ತಿಯ ಏಕೈಕ ವಾರಸುದಾರ !

ಶಾಹಿದ್‌ನನ್ನು ಎತ್ತಲು ಮುನ್ನುಗ್ಗಿದ ಚೌಧರಿಯವರು 'ಠಾಕೂರ್....ಬಾ ಇಲ್ಲಿ..,ಯಾರು....ಆ ಕಂದೀಲು ತರ್‍ರಿ. ,.ಅಯ್ಯೋ....ಇವ ನನ್ನ ಶಾಹೀದ..,.'ಎಂದು ಗೋಳಾಡತೊಡಗಿದರು. ಠಾಕೂರ್ ನಿಶ್ಚೇಷ್ಟಿತನಾದ....ಅವನು ಯಾರದೋ ಕೈಯಿಂದ ಕಂದೀಲನ್ನು ಕಿತ್ತಿಕೊಂಡವನೇ ಹೊರಗೆ ಓಡಿ ಬಂದ...,ಬೋರಲು ಬಿದ್ದ ಆ ಮನುಷ್ಯ ಶಾಹಿದನೇ ಆಗಿದ್ದ.,..ತಲೆ ಒಡೆದು ರಕ್ತ ಚಿಮ್ಮುತ್ತಿತ್ತು 'ಠಾಕೂರ್...,ನನ್ನ ಮನೀ ದೀಪಾ ಆರಿಸಿಬಿಟ್ಟೆ ...' ಅಂತ ಗೋಳಾಡತೊಡಗಿದರು. ಭಜನ್‌ಸಿಂಗ್ ಪಾದದಿಂದ ನೆತ್ತಿಯತನಕಾ ಗದಗದ ಅಂತ ನಡಗುತ್ತಿದ್ದ. 'ಒಡೆಯಾ....ದೇವರ ಪ್ರಮಾಣ ಮಾಡಿ ಹೇಳತನು... ನನಗೆ ಅವರ ಗುರತು ಹತ್ತಿದ್ದಿಲ್ಲ....' ಅಂತ ಠಾಕೂರ್ ಹೇಳತಿದ್ದರೆ ಚೌಧರಿಯವರು ತಮಗ ತಾವs ಸಮಾಧಾನ ತಂದಕೊಂಡವರಂಗ 'ಇಲ್ಲ, ನಾ ನಿನ್ನ ಬಯ್ಯೊದಿಲ್ಲ....ದೇವಸ್ಥಾನದೊಳಗೆ ನುಗ್ಗಿ ದಾಂಧಲೇ ಮಾಡುವ ಅಧಿಕಾರ ಯಾರಿಗೂ ಇಲ್ಲ....ಆದರ....ನನ್ನ ಗೋಳಂದರ. ..ನನ್ನ ವಂಶದ ಕುಡೀ ಇಲ್ಲಿಗೇ ಮುರಟಿತು....ಅದೂ ನಿನ್ನ ಕೈಯಿಂದ....ನಿಮಗಾಗಿ ನನ್ನ ಜೀವ ಮುಡಪು ಅಂತಿದ್ದ ನಿನ್ನ ಕೈಯಿಂದನs ದೇವರು ನನ್ನ ಮನೀ ಮುರದಾ....' ಅಂತ ಧಾರಾಕಾರವಾಗಿ ಕಂಬನಿ ಸುರಿಸುತ್ತ ಚೌಧರಿಯವರು ದುಃಖಿಸತೊಡಗಿದರು. ಅಪರಾಧೀ ಭಾವ ತುಂಬಿದ ಠಾಕೂರ್ ನಿಶ್ಚಲನಾಗಿ ನಿಂತುಕೊಂಡ...ಅವನಿಗೆ ತನ್ನ ಸ್ವಂತ ಮಗ ಸತ್ತಿದ್ದರೆ ಆಗುತ್ತಿದ್ದಕ್ಕಿಂತಲೂ ಹೆಚ್ಚು ದುಃಖವಾಗಿತ್ತು....ಅಯ್ಯೋ ನನ್ನ ದೇವರ ಕಣ್ಣು ಕಿತ್ತುಕೊಂಡೆನಲ್ಲ....ಇವರು ಒಡಲೊಳಗೆ ಹಾಕಿಕೊಂಡು ಸಾಕಿದರೆ ನಾನು ಸರ್ಪವಾಗಿ ಅವರನ್ನೆ ಕಚ್ಚಿದೆನಲ್ಲ.. .ಎಂತನ್ನುವ ಅಪರಾಧೀ ಭಾವನೆಯಿಂದ ತಳಮಳಗೊಂಡ ಠಾಕೂರ್ ಹೇಳಿದ್ದು ಇಷ್ಟೇ, 'ಒಡೆಯಾs...ನನಗಿಂತ ಪಾಪಿ ಯಾರಿದ್ದಾರು ?...ನಾನು ದ್ರೋಹಿಯಾಗಿಬಿಟ್ಟೆ...'. ಇಷ್ಟು ಮಾತಾಡಿದ ಭಜನ್‌ಸಿಂಗ್ ತನ್ನ ಸೊಂಟದಿಂದ ಚಾಕುವನ್ನು ಇರಿದುಕೊಂಡು ತಾನು ಮಾಡಿದ ಅಪರಾಧದ ಕಶ್ಮಲವನ್ನು ತನ್ನ ಎದೆಯ ರಕ್ತದಿಂದ ತೊಳಿದುಕೊಳ್ಳಲು ಇರಿದುಕೊಳ್ಳಲು ಕೈ ಎತ್ತಿದ.,..ಚೌಧರಿಯವರು ಫಕ್ಕನೇ ಅವನ ಕೈಯಿಂದ ಚಾಕುವನ್ನು ಕಿತ್ತುಕೊಳ್ಳುತ್ತ–'ಇದೇನು ಮಾಡ್ಲಿಕತ್ತೀ.... ಸಂಯಮ ಅನ್ನೂದು ಇರ್ಲಿ....ಇದು ನನ್ನ ಹಣೇ ಬರಹ. ಭಗವಂತನ ಇಚ್ಛಾ ಇದು, ನೀನರೇ ಏನು ಮಾಡೀ ?....ಒಂದ ವ್ಯಾಳ್ಯಾ ನಾನs ಸೈತಾನನ ಬಲಿಗೆ ಬಿದ್ದು ಇಂಥಾ ಕೆಲಸ ಮಾಡಿದ್ದರ–ನಾ ಚೌಧರೀ ಅನ್ನೂದು ನಿನಗೆ ತಿಳಿದೂ ನೀ ನನ್ನ ಕೊಂದಿದ್ದರ ಸಹಿತ ಅದು ತಪ್ಪು ಅಲ್ಲ....ಒಬ್ಬರ ಧರ್ಮಾ ಅಪಮಾನ ಮಾಡೂದರಕಿಂತಾ ದೊಡ್ಡ ಪಾಪ ಯಾವುದೂ ಇಲ್ಲ. ಭಗವಂತನ ಪ್ರಮಾಣ ಮಾಡಿ ಹೇಳತನು–ನನಗ ನಿನ್ನ ಮ್ಯಾಲ ಸಿಟ್ಟಿಲ್ಲ, ..ಆದರ ಈ ದುಃಖ ಮಾತ್ರ ನಂಗ ಮರೀಲಿಕ್ಕೆ ಆಗೂದುಲ್ಲ.. ಹೂಂ....ಈಗ ಇನೂ ಕತ್ತಲ ಅದ, ನೀ ಈಗ ಇಲ್ಲಿಂದ ಓಡು...ನನ್ನ ಎಷ್ಟೇಟಿನ

ಯಾವದರೇ ಹಳೇ ಮನಿಯೊಳಗ ಅಡಗಿಕೋ.... ನೆನಗ ಗೊತ್ತದ....ನನ್ನ ಮನೆ ಯವರು ಚುಚ್ಚಿ ಚುಚ್ಚಿ ಮಾತಾಡಬಹುದು. ನನ್ನ ಮಗಳು ತನ್ನ ಗಂಡನ ಖೂನಿಯ ಸೇಡು ತೀರಿಸಿಕೋಲಿಕ್ಕೆ ಒತ್ತಾಯ ಮಾಡತಾಳ. ಇಡೀ ಮುಸ್ಲಿಂ ಸಮಾಜ ನನ್ನ ರಕ್ತ ಕುಡಿಯಲಿಕ್ಕೆ ಹವಣಿಸಬಹದು...ಒಬ್ಬ ಯಾವನರೇ ಹರೇದ ಹುಡುಗ ನನ್ನ ಖೂನೀ ಮಾಡಲಿಕ್ಕೆ ಹವಣಿಸಬಹುದು....ಇವು ಏನs ಆಗಲಿ....ನಾ ಮಾತ್ರ ನನ್ನ ವಿವೇಕ ಅಂಬೂದನ್ನ ಕಳಕೋದುಲ್ಲ...ನೀ ಅವಸರ ಮಾಡು...ನಡೀ...ಅಲ್ಲಿ ಯಾರೋ ಬರಲಿಕ್ಕತ್ತಂಗಿದೆ...ನಮ್ಮ ಮಂದೆನs...ಹೂಂ...ಓಡು...ಓಡ ನೀ...'ಎಂದು ಚೌಧರಿ ಯವರು ಅವಸರಾಮಾಡಿ ಠಾಕೂರ ಓಡಿ ಹೋಗುವ ಹಂಗ ಮಾಡಿದರು.

ಭಜನಸಿಂಗ್ ಒಂದು ವರ್ಷ ಪೂರಾ ಅಡಗಿಕೊಂಡ. ಇಂವ ಹೊರಗೆ ಬಂದಾ ದರೂ ಬಳಲಿ ಎಂದು ಒಂದು ಕಡೆ ಮುಸ್ಲಿಮರು ಕಾದಿದ್ದರೆ ಇನ್ನೊಂದು ಕಡೆಗೆ ಪೋಲೀಸರು ಕಾಯುತ್ತಿದ್ದರು...ಚೌಧರಿಯವರು ತಮ್ಮ ಮನಿಯವರ ಮಾತಿನ ಬಾಣ ಗಳನ್ನ, ಮುಸ್ಲಿಂ ಸಮಾಜದವರ ಬೈಗುಳನ್ನ, ಪೋಲೀಸರ ಆರೋಪಗಳನ್ನ ಮತ್ತು ಮುಲ್ಲಾಗಳ ದಬಾವಣೆಯನ್ನ ನಿರ್ಲಿಪ್ತವಾಗಿ ಸ್ವೀಕರಿಸುತ್ತ ಠಾಕೂರನನ್ನು ಸುರಕ್ಷಿತ ವಾಗಿ ಮುಚ್ಚಿಟ್ಟಿದ್ದರು. ತಾವು ಜೀವದಿಂದ ಇರುವವರೆಗೆ ಸ್ವಾಮಿನಿಷ್ಠನಾದ ಭಜನ ಸಿಂಗನನ್ನು ಕುರುಡು ಕಾನೂನಿನ ಕೈಗೆ ಒಪ್ಪಿಸಬಾರದೆಂದು ಅವರು ನಿರ್ಧರಿಸಿದ್ದರು. ಪೋಲೀಸರು ಅವರ ಎಸ್ಟೇಟಿನ ಮನೆಗಳ ಮೇಲೆ ರೇಡ್ ಮಾಡಿದರು....ರೊಚ್ಚಿಗೆದ್ದ ಒಂದಿಷ್ಟು ಮುಸ್ಲಿಮರು ಇವರ ಆಳುಗಳನ್ನು ಒಡೆದುಕೊಳ್ಳಲು ನೋಡಿದರು. ಏನೂ ಪ್ರಯೋಜನವಾಗಲಿಲ್ಲ. ಚೌಧರಿ ಸಾಹೇಬರ ಎಲೆಮರೆಯ ಕಾಯಿಯ ರೀತಿಯ ಪರೋಪಕಾರಬುದ್ಧಿಯಂತೆಯೇ ಠಾಕೂರ್ ಸಹಿತ ಯಾರ ಕಣ್ಣಿಗೂ ಬೀಳದೇ ಉಳಿದ.

ಆದರೆ ತನ್ನಿಂದ ಚೌಧರಿಯವರು ನಿತ್ಯ ಹಿಂಸೆ ಅನುಭವಿಸಬೇಕಾಗಿದೆ ಎನ್ನುವುದು ಠಾಕೂರನಿಗೆ ಅರ್ಥವಾದಾಗ ಅವನು ತಳಮಳಕ್ಕೆ ಒಳಗಾದ. ಅವನು ಚೌಧರಿಯವ ರನ್ನು ಹಗಲೆಲ್ಲ ಭೆಟ್ಟಿಯಾಗಿ ತನ್ನನ್ನು ಪೋಲೀಸರಿಗೆ ಒಪ್ಪಿಸಿಬಿಡಿರಿ ಎಂದು ಬೇಡಿ ಕೊಳ್ಳತೊಡಗಿದ. ಆದರೆ ಚೌಧರಿಯವರು ಮಾತ್ರ ಪ್ರತಿಸಲವೂ ಅವನಿಗೆ 'ಇನ್ನೊಂ ದಿಷ್ಟು ದಿನಾ ತಡೀ ...ಇನ್ನೊಂದಿಷ್ಟು ದಿನಾ ತಡೀ' ಎಂದು ಹೇಳಿ ಸಮಾಧಾನಗೊಳಿಸಿ ಕಳಿಸುತ್ತಿದ್ದರು.

ಚೌಧರಿಯವರು ತಮ್ಮ ಮನೆಯವರ ಭರ್ತ್ಸನೆ ಬಿರುನುಡಿಗಳನ್ನು ತಪ್ಪಿಸಿ ಕೊಳ್ಳುವ ಉದ್ದೇಶಕ್ಕೋ ಎನ್ನುವಂತೆ ಆದಷ್ಟು ಹೊರಗೇ, ಪ್ರವಾಸದ ಮೇಲೆ ಇದ್ದು ಬಿಡುತ್ತಿದ್ದರು. ಈ ಸಲದ ಚಳಿಗಾಲ ಬರುತ್ತಿದ್ದಂತೆಯೇ ಅವರು ತಮ್ಮ ವಿಶಾಲ ವಾದ ಎಸ್ಟೇಟಿನ ಇನ್‌ಸ್ಪೆಕ್ಷನ್‌ಗೆಂದು ಪ್ರವಾಸಕ್ಕೆ ಹೊರಟರು. ಆಗ ಒಂದು ರಾತ್ರಿ

ಅವರು ತಮ್ಮ ಊಟ ಮುಗಿಸಿ ಕೂತಿದ್ದಂತೆಯೇ ಭಜನಸಿಂಗ್ ಅವರ ಮುಂದೆ ಹಾಜರಾದನು. . ಎಷ್ಟೊಂದು ಇಳಿದು ಹೋಗಿದ್ದಾನಿವ...!...ಎಂದುಕೊಳ್ಳುತ್ತಾ ಚೌಧರಿಯುವರು ಆಶ್ಚರ್ಯಚಕಿತರಾದರು. ಠಾಕೂರ್ ಮೊದಲು ಮಾತನಾಡಿಸಿದ–

'ದಣೇರು ಆರಾಮಲ್ಲಾ...'

'ಹಾಂ...ಅಲ್ಲಾನ ದಯಾ!...ಅಗದೀ ಗುರ್ತುಹತ್ತದಂಗ ಆಗೀ. ಇಷ್ಟ ರಾತ್ರ್ಯಾಗ ಎತ್ಲಾಗಿಂದ ಬಂದಿ ?

'ದಣೇರ್ರ...ಇನ್ನ ನಾ ಈ ಗುದ್ದಿನಾಗ ಅಡಿಕ್ಕೊಂಡ ಇರಲಾರೆ ನಮ್ಮಪ್ಪಾ. ನೀವು ಹೂಂ ಅನ್ನರಿ...ನಾನು ಮ್ಯಾಜಿಸ್ಟ್ರೇಟರ ಮುಂದ ಹಜರ ಆಗತನ... ಮುಂದ ನನ್ನ ಹಣ್ಯಾಗ ಏನ ಬರದತ್ಯೋ ಅದು ಆಗಲಿ ..ನನ್ನ ದಸಿಂದ ನಿಮಗ ಎಷ್ಟತ್ರಾಸು'

'ಹಾಂಹಾಂ... ಹಂಗ ಮಾಡೀಗೀಡೀ ಮತ್ತ, ನಾ ಜೀವಂತ ಇರೋತನಕಾ ಹಂತಾ ಕೆಲಸಾ ಮಾಡಬ್ಯಾಡಾ ಈ ಪೋಲೀಸರಂದರ ಏನಂತ ತಿಳದೀ.. ಸಾಕ್ಷಿಗೋಳನ ಹೆಂಗಬೇಕಾದಂಗ ಹೊಳ್ಳಿಸ್ತಾರು...ಪುಕ್ಕಟ ಜೀವಾ ಕಳಕೋಬ್ಯಾಡಾ...ನನ್ನ ಸಲುವಾಗಿ ನೀ ಎಷ್ಟು ಸರತೇ ಜೀವಕ್ಕ ಜೀವ ಪಣಾ ಹಚ್ಚಿದ್ದಿಲ್ಲ ಹೇಳೂ ? ನಾ ಇಷ್ಟೂ ಮಾಡದಿದ್ದರ ಏನ ಸಾರ್ಥಕ ಆದಂಗಾತು ? ...ಇನ್ನೊಮ್ಮೆ ಈ ಹಾಜರಾಗೂ ಮಾತss ಆಡಬ್ಯಾಡಾ....'

'ಆದರ...ಯಾರೇ ನಿಮಗ..'

'ನಿನಗ ಅದರ ಚಿಂತಿಬ್ಯಾಡ. ದೇವರ ಇಚ್ಛಾದ ವಿರುದ್ಧ ಯಾರೂ ನನ್ನ ಒಂದ ಕೂದಲಾ ಕೊಂಕಸಾಕ ಆಗೂದುಲ್ಲ... ನೀ ಇನ್ನ ನಡೀ ಇಲ್ಲಿ ಭಾಳೊತ್ತು ಇರೂದು ಕ್ಷೇಮ ಅಲ್ಲ'

'ಮಂದಿ ಈಗ ನಿಮ್ಮನ್ನ ಒಬ್ಬರನss ಮಾಡ್ಯಾರಂತಲಾ ?'

'ಆದರೇನು...ಛಲೋನ ಆತ ಬಿಡು. ಶತೃ ದೂರ ಇದ್ದಷ್ಟ ಛಲೋನss !'

ಆದರೆ ಠಾಕೂರನ ನಿರ್ಧಾರ ಮಾತ್ರ ಅಚಲವಾಗಿಯೇ ಉಳಿಯಿತು. ಹಂಗೆ ಕೇಳಿದರೆ ಈ ಭೆಟ್ಟಿಯಿಂದ ಅವನ ನಿರ್ಧಾರ ಇನ್ನಷ್ಟು ಗಟ್ಟಿಯಾಯಿತು..., 'ನನ್ನಿಂದ ಚೌಧರೀ ಸಾಹೇಬರು ನೆಲೆಯಿಲ್ಲದವರಂಗೆ ಅಲೆದಾಡುವಂತಾಗಿದೆ... ಯಾವನಾದರೂ ಅವರ ಮೈಮೇಲೆ ಏರಿಹೋದರೆ...ನಾನೇಥಾ ಪಾಪಿ... ನಾ ಇಲ್ಲಿ ಕೈ ಕಟ್ಟಸಿಕೊಂಡು ಕೂತೀನಿ...' ಅಂತ ಠಾಕೂರನು ಅಪರಾಧೀ ಭಾವನೆಯಿಂದ ತಳಮಳಕ್ಕೆ ಒಳಗಾಗಿದ್ದ. ಚೌಧರಿಯುವರನ್ನು ಭೆಟ್ಟಿಯಾದ ಮರುದಿನವೇ ಅವನು ಬೆಳಿಗ್ಗೆ ಎದ್ದು ಜಿಲ್ಲಾ ಮ್ಯಾಜಿ

ಸ್ಪೇಟರ ಬಂಗಲೆಗೆ ಹಾಜರಾದ...ಇಂಗ್ಲಿಷ್ ಸಾಹೇಬ–'ಇದುವರೆಗೆ ನೀನು ಚೌಧರೀ ಸಾಹೇಬರ ಆಶ್ರಯದಲ್ಲಿ ಇದ್ದೆಯಾ ?' ಅಂತ ಕೇಳಿದ. ಠಾಕೂರ–'ಇಲ್ಲ ಸಾಹೇಬರ... ನನ್ನ ಜೀವಕ್ಕ ಅಂಜಿ ನಾ ಅಡಿಕ್ಕೊಂಡಿದ್ದೆ' ಅಂತ ಉತ್ತರಿಸಿದನು.

ಚೌಧರಿ ಸಾಹೇಬರಿಗೆ ಈ ಸುದ್ದಿ ಮುಟ್ಟಿದಾಗ ಅವರು ಹೌಹಾರಿದರು... ಈಗೇನು ಮಾಡುವುದು ಎಂದು ಅವರು ಕೈಕೈ ಹಿಚಿಕಿಕೊಂಡರು. ಒಬ್ಬ ವಕೀಲನ್ನ ಹಿಡಿದು ವ್ಯವಸ್ಥೆ ಮಾಡದಿದ್ದರೆ ಠಾಕೂರ ಉಳಿಯುವುದು ಸಾಧ್ಯವೇ ಇಲ್ಲ...ಅವರು ತಾವೇ ಈ ವ್ಯವಸ್ಥೆ ಮಾಡಿದರೆ ಇಸ್ಲಾಮೀ ಸಮಾಜದಲ್ಲಿ ಅಲ್ಲೋಲಕಲ್ಲೋಲವಾಗುತ್ತದೆ. ಫತ್ವಾಗಳ ಬಾಣಗಳು ಚಿಮ್ಮುತ್ತವೆ. ಚೌಧರಿಯವರು ಸಂದಿಗ್ಧದಲ್ಲಿ ಬೇಯುವಂತಾಯಿತು, ಇದಕ್ಕೆ ವ್ಯತಿರಿಕ್ತವಾಗಿ ಮುಸ್ಲಿಂ ಸಮಾಜಕ್ಕೆ ಯಾವ ಸಂದಿಗ್ಧವೂ ಇರಲಿಲ್ಲ. ಈ ಠಾಕೂರನಿಗೆ ಗಲ್ಲು ಶಿಕ್ಷೆ ಸಿಗುವವರೆಗೆ ಅವರು ವಿರಮಿಸುವುದಿಲ್ಲವೆಂದು ನಿರ್ಧರಿಸಿಬಿಟ್ಟಿದ್ದರು. ಅವರು ಇದಕ್ಕಾಗಿ ಒಂದು ನಿಧಿಯನ್ನು ಕೂಡಿಸತೊಡಗಿದರು. ಮುಲ್ಲಾಗಳು ಮಸೀದಿ ಮಸೀದಿಗಳಲ್ಲಿ ಈ ನಿಧಿಯ ಸಲುವಾಗಿ ಉದಾರ ದಾನ ನೀಡುವಂತೆ ಮನವಿ ಮಾಡಿಕೊಳ್ಳತೊಡಗಿದರು. ಜನ ಮನೆ ಮನೆಗೆ ಹೋಗಿ ಹಣ ಕೂಡಿಸತೊಡಗಿದರು, ಈಗ ಕೋರ್ಟಿನಲ್ಲಿದ್ದ ಈ ಜಗಳ ಧಾರ್ಮಿಕ ಬಣ್ಣ ತಾಳಿತು. ಮುಸ್ಲಿಂ ವಕೀಲರು ಈ ಕೇಸಿನಲ್ಲಿ ತಮ್ಮ ಕಾಣಿಕೆ ಸಲ್ಲಿಸಿ ಪ್ರತಿಭೆ ಮೆರೆಯುವ ಉದ್ದೇಶದಿಂದ ನುಗ್ಗತೊಡಗಿದರು. ಪಕ್ಕದ ಜಿಲ್ಲೆಗಳಿಂದಲೂ ಇಂಥ ಲಾಯರು ಮಂದಿ ಹರಿದು ಬರತೊಡಗಿದ್ದರು. ಈ ಜಗಳ ಜೆಹಾದ್ (ಧರ್ಮಯುದ್ಧ) ಅನಿಸಿಕೊಳ್ಳತೊಡಗಿತು ...

ಇಷ್ಟರ ನಡುವೆ ಚೌಧರಿಯವರು ಭಜನಸಿಂಗ್‌ನ ಪರವಾಗಿ ವಾದಿಸಲು ವಕೀಲನನ್ನು ನೇಮಿಸಲು ನಿರ್ಧರಿಸಿದರು. ಹೇಗಾದರೂ ಮಾಡಿ ಠಾಕೂರನನ್ನು ಉಳಿಸಿಕೊಳ್ಳಬೇಕೆಂದು ಅವರು ಮನಸ್ಸು ಮಾಡಿದ್ದರು. ಕಾನೂನಿನ ದೃಷ್ಟಿಯಿಂದ ಅವನು ನಿರ್ದೋಷಿ ಎನ್ನುವುದು ಅವರ ಮನಸ್ಸಿಗೆ ಖಾತ್ರಿಯಾಗಿತ್ತು. ನಿರ್ದೋಷಿಯಾದವನನ್ನು ರಕ್ಷಿಸಲಿಕ್ಕೆ ಭಯಪಡುವುದು ಏಕೆ ಎಂದುಕೊಂಡರು. ಈ ಗಲಾಟೆಯ ಸಲುವಾಗಿ ಅವರು ಒಂದಿಷ್ಟು ದಿನ ಜಿಲ್ಲಾ ಕೇಂದ್ರದಲ್ಲಿಯೇ ಇರಲು ನಿರ್ಧರಿಸಿದರು... ಆರು ತಿಂಗಳುಗಳ ಕಾಲ ಇವರ ಬದುಕು ಈ ಕೋರ್ಟಿನ ಕಛೇರಿಗಳ ಕಾರುಬಾರಿನ ಸುತ್ತ ಗಿರಕಿ ಹೊಡೆಯಿತು. ಅವರು ಕೋರ್ಟಿನ ಕಂಬ ಕಂಬ–ಕುರ್ಚಿ ಕುರ್ಚಿ ಅಲೆದಾಡಿದರು. ದುಡ್ಡನ್ನು ನೀರಿನಂತೆ ಖರ್ಚು ಮಾಡಿದರು, ಅವರು ಹಿಂದೆಂದೂ ಮಾಡಿರದ್ದನ್ನ, ಮುಂದೆಂದೂ ಮಾಡಲಾರದ್ದನ್ನ ಈ ಆರು ತಿಂಗಳುಗಳಲ್ಲಿ ಮಾಡಬೇಕಾಯಿತು. ಗುಮಾಸ್ತರು–ಕೆಳಗಿನ ಅಧಿಕಾರಿಗಳನ್ನ ಪೂಸಿಮಾಡುವುದು–ಅಧಿಕಾರಿಗಳಿಗೆ ಲಂಚ ರುಷುವತ್ತು ನೀಡುವುದು ! ಅಂತೂ ಕೊನೆಗೆ ಠಾಕೂರ್ ಭಜನಸಿಂಗ್

ಬಿಡುಗಡೆ ಹೊಂದಿದನು. ಚೌಧರಿಯವರು ಠಾಕೂರನನ್ನು ಗಲ್ಲು ಕಂಬದಿಂದ ಬಿಡಿಸಿಕೊಂಡಿದ್ದರು... ಜಿಲ್ಲೆಯಲ್ಲೆಲ್ಲ ಈ ಸುದ್ದಿ ಕಾಡ್ಗಿಚ್ಚಿನಂತೆ ಹರಡಿತು...

ಚೌಧರಿಯವರ ಈ ಸತ್ಕೃತಿ ಜಾತಿವಾದಿಗಳ ಕಾವಾಲೆ ದೃಷ್ಟಿಯಲ್ಲಿ ಹಳದಿಯಾಗಿ ಕಂಡಿತು. ಮುಸ್ಲಿಮರಲ್ಲಿ ಇದು ಅಸಾಧ್ಯ ಕ್ರೋಧವನ್ನು ಹುಟ್ಟಿಸಿದ್ದರೆ ಹಿಂದೂಗಳಲ್ಲಿ ಇದು ರಣೋತ್ಸಾಹವನ್ನು ಮೂಡಿಸಿತು. ಮುಸ್ಲಿಮರು, ಈ ಚೌಧರಿ ತಾನು ಹುಟ್ಟಿದ ಧರ್ಮದಲ್ಲಿ ಸಂಪೂರ್ಣವಾಗಿ ನಂಬಿಕೆ ಕಳೆದುಕೊಂಡುಬಿಟ್ಟಿದ್ದಾನೆ—ಇವನೊಬ್ಬ 'ಕಾಫಿರ' ಅಂತನ್ನತೊಡಗಿದರು. ಇನ್ನು ಹಿಂದೂಗಳಿಗೆ, ಚೌಧರಿಯವರು ಈಗಾಗಲೇ ಸಾಕಷ್ಟು ಶುದ್ಧರಾಗಿಬಿಟ್ಟಿದ್ದಾರೆ—ಅವರನ್ನು ಮತಾಂತರಗೊಳಿಸಲು ಪಕ್ವಕಾಲ ಅಂದುಕೊಂಡರು....ಮುಲ್ಲಾಗಳು ಮಸೀದಿಗಳಲ್ಲಿ ಉದ್ದುದ್ದ ಧರ್ಮೋಪದೇಶಮಾಡಿ ಜನಜಾಗೃತಿಗಾಗಿ ಪ್ರಯತ್ನಿಸತೊಡಗಿದರು. ಹಿಂದೂಗಳು ಏಕತೆಯ ಧ್ವಜ ಎತ್ತಿಹಿಡಿದರು. ಪ್ರತಿಯೊಬ್ಬ ಮುಸ್ಲಿಮನಲ್ಲಿಯೂ ತಾನೊಬ್ಬ 'ಮುಸ್ಲಿಂ' ಎಂಬ ಭಾವನೆಯಿರುವಂತೆ ಈಗ ಪ್ರತಿಯೊಬ್ಬ ಹಿಂದುವೂ ತಾನೊಬ್ಬ 'ಹಿಂದೂ' ಎಂಬ ಪ್ರಜ್ಞೆಯನ್ನು ತುಂಬಿಕೊಳ್ಳತೊಡಗಿದನು. ಠಾಕೂರ ಈ ಧಾರ್ಮಿಕ ಪ್ರವಾಹದಲ್ಲಿ ಕೊಚ್ಚಿಹೋದನು. ಉತ್ಸಾಹದ ಬುಗ್ಗೆಯಾದ ಅವನು ಸಹಜವಾಗಿ ಹಿಂದೂ ಗುಂಪಿನ ನೇತಾರನಾಗಿಬಿಟ್ಟನು. ಇದುವರೆಗೆ ಯಾವ ಧಾರ್ಮಿಕ ಭಾವನೆಯನ್ನೂ ಹೊಂದದ ಅವನು ಇಂದು ಧರ್ಮದ ಹೆಸರಿನಲ್ಲಿ ಕಾಲುಕೆರೆದು ಜಗಳಕ್ಕೆಳಸುವ ಮಟ್ಟಿಗೆ ಬಂದನು. ಮುಸ್ಲಿಮರು, ಅವರು ಸಿಗದಿದ್ದರೆ ಒಂದಿಷ್ಟು ಚಮ್ಮಾರರನ್ನಾದರೂ ಹಿಡಿದು ಅವರ ಶುದ್ಧೀಕರಣ ಕ್ರಿಯಾವಿಧಿ ಏರ್ಪಡಿಸತೊಡಗಿದನು.

ಚೌಧರಿ ಸಾಹೇಬರ ಉಳಿದ ಆಳುಗಳೂ ಈ ಧಾರ್ಮಿಕ ಉತ್ತೇಜನದ ಪ್ರವಾಹದಲ್ಲಿ ಸಿಕ್ಕಿಹಾಕಿಕೊಂಡರು. ಮಸೀದಿಯ ಕಡೆಗೆ ಎಂದೂ ಸುಳಿದಾಡದಂತಹ ಮುಸ್ಲಿಮರು ಇಂದು ಪ್ರತಿನಿತ್ಯ ಐದು ಸಲ ನಮಾಜು ಮಾಡುವವರಾಗಿದ್ದರು. ಇನ್ನು ಗುಡಿಯೊಳಗೆ ಹಣಿಕಿ ನೋಡದ ಹಿಂದುಗಳು ಪ್ರಾತಃಕಾಲ, ಸಾಯಂಕಾಲಗಳೆರಡೂ ಹೊತ್ತು ಗುಡಿಗೆ ಹೋಗಿ ಪೂಜೆ—ಮಂಗಳಾರತಿ ಮಾಡಿಸತೊಡಗಿದರು. ....ಹಿಂದೂಗಳು ಇಲ್ಲಿ ಬಹುಸಂಖ್ಯಾತರು. ಬಲಶಾಲಿಯಾದ ಭಜನಸಿಂಗ್‌ನು ಇವರಿಗೆ ಮುಖ್ಯಸ್ಥನಾದ. ಇಲ್ಲಿಯ ತನಕ ಮುಸ್ಲಿಮರು ಕಡಿಮೆ ಸಂಖ್ಯೆಯಲ್ಲಿದ್ದರೂ ಹಿಂದೂಗಳನ್ನು ಹೆದರಿಸುತ್ತಿದ್ದರು. ಯಾಕೆಂದರೆ ಇವರಲ್ಲಿ ಒಗ್ಗಟ್ಟೆನ್ನುವುದು ಇರಲಿಲ್ಲ. ಈಗ ಅವರು ಒಂದಾದರು—ಸಂಘಟಿತರಾದರು....ಈಗ ಕೇವಲ ಒಂದು ಮುಷ್ಠಿ ತುಂಬ ಇದ್ದ ಮುಸ್ಲಿಮರು ಇವರನ್ನು ಹೇಗೆ ಎದುರಿಸುವುದು ?

ಹೀಗೇ ಒಂದು ವರ್ಷ ಕಳೆಯಿತು. ಇನ್ನೊಂದು ಜನ್ಮಾಷ್ಟಮಿ ಸಮೀಪಿಸಿತು. ಹಿಂದಿನ ವರ್ಷದ ಕಹಿ ಅನುಭವವನ್ನು ಹಿಂದುಗಳು ಮರೆತಿರಲಿಲ್ಲ. ಈ ಹಳೆಯ

ಸಾಲ ಮುಟ್ಟಿಸಲಿಕ್ಕೆ ಅವರು ತಿಂಗಳುಗಳಿಂದಲೇ ತಯಾರಿ ನಡೆಸಿದರು.... ಜನ್ಮಾಷ್ಟಮಿಯ ದಿನ ಪ್ರತಿಯೊಬ್ಬ ಭಕ್ತನೂ ಕೈಯಲ್ಲಿ ಒಂದು ಲಾಠಿ ಹಿಡಿದುಕೊಂಡು ಬೆಳಗಿನ ಹೊತ್ತೇ ಗುಡಿಗೆ ಬಂದು ಸೇರಿದರು. ಸ್ವಲ್ಪ ಮಂದಿ ನಡುವಿನಲ್ಲಿ ಬಾಕು ಗಳನ್ನು ಬಚ್ಚಿಟ್ಟುಕೊಂಡಿದ್ದರು. ಅವರ ಯೋಜನೆಯಂತೆ ಮುಸ್ಲಿಮರು ಸಿಟ್ಟಿಗೆದ್ದು ಜಗಳ ಶುರುವಾಗುವಂತೆ ಮಾಡುವುದು. ಇದಕ್ಕಾಗಿ ಹಿಂದೆಂದೂ ಮೆರವಣಿಗೆ ಹೊರ ಡದವರು ಈ ಸಲದ ಜನ್ಮಾಷ್ಟಮಿಯ ಸಂಜೆ ಮೆರವಣಿಗೆ ಹೋಗುವುದೆಂದು ತೀರ್ಮಾ ನಿಸಿದರು.... ಸಂಜೆಯ ದೀಪಗಳು ಹತ್ತಿ–ಮೋದೀನನು ನಮಾಜಿಗೆ ಜನರನ್ನು ಕರೆದನು. ಅಷ್ಟೊತ್ತಿಗೆ ವಾದ್ಯ ವಾದನಗಳೊಂದಿಗೆ ವೈಭವಯುತವಾದ ಮೆರವಣಿಗೆ ಗುಡಿಯಿಂದ ಹೊರಟಿತು. ಆನೆ ಕುದುರೆಗಳು–ಛತ್ರ ಚಾಮರಗಳು.. . ಡೋಲು ಕಹಳೆಗಳು. ,.ಭಜನಸಿಂಗನು ಮೆರವಣಿಗೆಯ ಮುಂಚೂಣಿಯಲ್ಲಿ ಬಿಗುಮಾನ ತುಂಬಿದ ಗಾಂಭೀರ್ಯದಿಂದ ನಡೆದುಬರುತ್ತಿದ್ದರೆ ಅವನ ಹಿಂದೆ ಉತ್ಸಾಹೀ ಯುವಕರ ದಂಡು ಇದ್ದಿತು.

ಇದೀಗ ಜುಮ್ಮಾ ಮಸೀದಿ ಸಮೀಪಿಸಿತು. ಯುವಕರು ತಮ್ಮ ಲಾಠಿಗಳನ್ನು ಹೆಗಲಿಗೇರಿಸಿಕೊಂಡು ಸನ್ನದ್ಧರಾದರು. ಆಕಡೆ ಈಕಡೆ ಚದುರಿದವರು ಹತ್ತಿರ ಹತ್ತಿರ ಬಂದು ಮೆರವಣಿಗೆ ಎನ್ನುವುದು ಒಬ್ಬರಿಗೊಬ್ಬರು ಬಂಧಿಸಿದಂತಹ ದಂಡು ಆಯಿತು. ಈಗ ಪಿಸಿ ಪಿಸಿ ಮಾತಾಡಿ ವಿಚಾರ ವಿನಿಮಯ ಮಾಡಿದರು. ಆಮೇಲೆ ಒಮ್ಮೆಲೇ ಡೋಲುಗಳು ತಾರಕಸ್ವರದಲ್ಲಿ ನುಡಿಯತೊಡಗಿದವು. ಜನರ ಉತ್ಸಾಹದ ಕೇಕೆ ಮುಗಿಲು ಮುಟ್ಟಿತು. ಆಗ ಮೆರವಣಿಗೆ ಸರಿಯಾಗಿ ಮಸೀದಿಯ ಮುಂದೆ ಬಂದು ನಿಂತಿತ್ತು.

ಮಸೀದಿಯಿಂದ ಒಬ್ಬ ಮನಶಾ ಹೊರಗೆ ಬಂದು 'ಈಗ ನಮಾಜಿನ ವ್ಯಾಳ್ಯಾ. ನಿಮ್ಮ ವಾದ್ಯಗೋಳನ ನಿಲ್ಲಸರಿ' ಅಂತಂದ. ಭಜನಸಿಂಗ್ 'ಆಗೂದುಲ್ಲ' ಅಂದ.

'ವಾದ್ಯ ನಿಲ್ಲಿಸಲಿಕ್ಕೇ ಬೇಕು'

'ನೀವs ನಮಾಜ ಯಾಕ ನಿಲ್ಲಿಸಬಾರದು ?'

'ಏ . ಚೌಧರೀ ಸಾಹೇಬ ನಿಮ್ಮ ಕಡೇ ಇದ್ದಾನೆನ್ನುವ ಸೊಕ್ಕು ಬಿಡ್ರಿ. ಈ ಸರತೇ ಎಂದೆಂದೂ ಮರೀಥಂತಾ ಪಾಠಾ ಕಲಸತೀವು'

ಭಜನಸಿಂಗ್ 'ನೀವರಲೇ ಚೌಧರಿ ಸಾಹೇಬರ ಬೆಂಬಲದ ಭ್ರಮಾದಾಗ ಇದ್ದವರು....ನಾವು ಯಾರದೂ ಬೆಂಬಲ ನೆಚ್ಚಿಕೊಂಡಿಲ್ಲ. ನಮ್ಮ ತಯಾರಿಯೊಳಗ

ನಾವು ಆದೀವು, ಇದು ನಮ್ಮ ಧರ್ಮದ ಪ್ರಶ್ನಾ ಐತಿ. ನಮ್ಮ ನಂಬಿಕೀ ಪ್ರಶ್ನೆ ಐತಿ' ಅಂತಂದ.... ಮಸೂತಿಯೊಳಗಿಂದ ಇನಷ್ಟ ಮಂದಿ ಹೊರಗಬಂತು. ಅವರೆಲ್ಲಾ ಡೋಲುಬಾರಸೂದನ್ನ ತಕ್ಷಣ ನಿಲ್ಲಿಸಬೇಕಂತ ಒತ್ತಾಯಮಾಡಿದರ ಡೋಲುಗೋಳು ಮಾತ್ರ ಇನ್ನಷ್ಟು ಜೋರಾಗಿ ನುಡಿಯಲಿಕ್ಕೆ ಶುರುಮಾಡಿದವು. ಹಿಂಗ ಒಂದಕ್ಕೆ ಒಂದು ಸೇರಿ ಪರಿಸ್ಥಿತಿ ಹದಾ ತಪ್ಪಲಿಕ್ಕತ್ತಿತು. ಒಬ್ಬ ಮುಲ್ಲಾ, ಭಜನಸಿಂಗನಿಗೆ_ಏನಲೇ ಏ ಕಾಫಿರ–ಅಂದ. ಇವ ಸಿಟ್ಟಿಗೆದ್ದು ಅವನ ಗಡ್ಡಾ ಹಿಡದು ಎಳದ. ತಕೋ....ಗದ್ದಲ ಶುರುವಾತು. ವಿವೇಕಶೂನ್ಯರಾದ ಮಂದಿ ನುಗ್ಗಿ ಕೈಗೆ ಸಿಕ್ಕವರನ್ನು ಜಜ್ಜತೊಡಗಿದರು ..ಇದರೊಳಗೆ ಯಾರ ಕೈ ಮ್ಯಾಲಾತು–ಯಾರ ಕೈ ಕೆಳಗಾತು ಅಂತ ಯಾರಿಗೂ ತಿಳಿಯದಂತಾ ಗೊಂದಲ ಇತ್ತು. ಹಿಂದೂಗಳು–ಅವರ ಸೊಕ್ಕು ಪೂರಾ ಮುರದಿವು.... ಅಂತ ಅಂತಿದ್ದರೆ ಮುಸ್ಲಿಮರು–ಇನ್ನ ಮುಂದ ಎಂದೆಂದೂ ತಲೀ ಎತ್ತಧಂಗ ಕೊಟ್ಟೆವು ನೋಡು ಅಂತ ಅಂತಿದ್ದರು. ಈ ವಾದಗಳ ಗೊಂದಲದೊಳಗೆ ಎಲ್ಲಾರೂ ಒಪ್ಪಿಗೊಳ್ಳೊ ಮಾತ ಅಂದರ ಭಜನಸಿಂಗ್‌ನ ಅತಿ ಮಾನುಷ ಶಕ್ತಿ. ಮುಸಲ್ಮಾನರು–ಈ ಪಾಪಿ ಒಬ್ಬ ಇಲ್ಲದಿದ್ದರ ಇಂದ ಒಬ್ಬ ಹಿಂದೂ ಸೈತ ಜೀವಂತ ಹೋಗತಿದ್ದಿಲ್ಲ ಎಂದು ಪರಿತಪಿಸುತ್ತಿದ್ದರೆ ಹಿಂದೂಗಳಿಗೆ ಭಜನಸಿಂಗ್ ನೆಂದರೆ ಸಾಕ್ಷಾತ್ ಮಾರುತಿಯ ಅವತಾರ ಅನಿಸಿಬಿಟ್ಟಿತು. ಅತುಲ ಪರಾಕ್ರಮಿ–ರಾಮಬಂಟ ಸಾಕ್ಷಾತ್ ಹನುಮಾನ್ !...ಅವನ ದೊಣ್ಣೆಯ ಒಂದೇ ಒಂದು ಏಟಿ ನಿಂದ ಒಬ್ಬೊಬ್ಬ ಮುಸ್ಲಿಮನೂ ನಿಶ್ಚೇಷ್ಟಿತನಾಗಿ ಬಿದ್ದಿದ್ದ !

ಜನ್ಮಾಷ್ಟಮಿಯ ಉತ್ಸವ ಮುಗಿದಿತು...ಚೌಧರೀ ಸಾಹೇಬರು ತಮ್ಮ ದಿವಾನ ಖಾನೆಯಲ್ಲಿ ಹುಕ್ಕಾ ಸೇದಿಕೋತ ಕೂತಿದ್ದರು. ಅವರ ಮುಖ ಸಿಟ್ಟಿನಿಂದ ಕೆಂಪಾಗಿದೆ. ಹುಬ್ಬುಗಳು ಗಂಟಿಕ್ಕಿವೆ...ಕಣ್ಣಿನಿಂದ ಕಿಡಿಹಾರುತ್ತಿವೆ....ಹುಂ....ದೇವರ ಮನೀ ಹೊಲಸು ಮಾಡಿದರಂತೆ....!....ಈ ವಿಚಾರದಿಂದ ಅವರ ಎದಿ ಬಿರಿದಂಗಾಯಿತು.... 'ಮಸೀದಿಯ ಹೋಗಿನ ಜಾಗಾ ಇವರ ಹೊಡದಾಟಕ್ಕ ಸಾಕಾಗತಿರಲಿಲ್ಲೇನು... ದೇವರ ಮುಂದನ್ನ ರಕ್ತಪಾತ ! ಗುಡಿ ಅನ್ನುವುದು ಹೆಂಗ ಭಗವಂತನ ಮನಿಯೋ ಹಂಗ ಮಸೀದಿ ಅನ್ನೂದು ಭಗವಂತನ ನಿವಾಸ...ಗುಡಿಯ ಪಾವಿತ್ರ್ಯ ಹಾಳುಮಾಡಿದ ಮುಸ್ಲಿಮನಿಗೆ ಶಿಕ್ಷಾ ಸಿಕ್ಕಂಗ ಮಸೀದಿಯನ್ನು ಹಾಳುಮಾಡಿದ ಹಿಂದೂಗೂ ಶಿಕ್ಷಾ ಆಗಬೇಕು...ಈ ಕೆಲಸ ಮಾಡಿದವನು ಠಾಕೂರನಂತೆ ! ಇಂಥಾ ಕೆಲಸ ಮಾಡಿದ ನನ್ನ ಅಳಿಯನ್ನ ಕೊಂದ ಠಾಕೂರನ್ನ ಈಗ ಈ ಕೆಲಸ ಮಾಡ್ಯಾನ....ಇವನೂ ಇಂಥಾವ ಅಂತ ಗೊತ್ತಿದ್ದರ ನಾನು ಇವನ್ನ ಉಳಿಸಲಿಕ್ಕೆ ಹೋಗತಿದ್ದಿಲ್ಲ. ಫಾಸೀ ಆಗಿ ಸತ್ತ ಹೋಗಲೆಂತ ಬಿಡತಿದ್ದೆ...ಠಾಕೂರ್...ನನ್ನ ಜೀವಕ್ಕ ತನ್ನ ಜೀವಾನ್ನ ಪಣ ಇಟ್ಟಂಥಾ

ಸ್ವಾಮಿಭಕ್ತ ಬಂಟ....ನನ್ನ ಕೂದಲಿಗೆ ಸೈತ ಧಕ್ಕಿ ಆಗಧಂಗ ನೋಡಿಕೊಂಡವನು.... ಆದರ ಅಂವ ದೈವದ್ರೋಹದ ಕೆಲಸಾ ಮಾಡ್ಯಾನ...ಅಂವಗ ನರಕದ ಶಿಕ್ಷಾ ಸಿಗಬೇಕು.. . ದ್ರೋಹಿ.... ನರಕದ ಭೆಂಕಿಯೊಳಗ ಬೇಯಬೇಕು ..'... ಚೌಧರಿಯವರ ಮನಸಿನೊಳಗ ಈ ತಳಮಳ ನಡದಿದ್ದಂಗs ಭಜನಸಿಂಗ್ ಅವರ ಮುಂದ ಪ್ರತ್ಯಕ್ಷನಾಗಿದ್ದ.

ಕೆಂಗಣ್ಣು ಬಿಡುತ್ತ ಠಾಕೂರನನ್ನು ಕೇಳಿದರು-'ನೀ ಮಸೀದೀಯೊಳಗ ಹೊಕ್ಕಿದ್ದಿ ಏನು ?' ಠಾಕೂರ್ ಅಂದ–'ಧಣೇರs.... ಮುಲ್ಲಾಗೋಳು ನಮ್ಮ ಮೈಮ್ಯಾಲ ಬಿದ್ದರು'.

'ನಾ ಕೇಳಿದ್ದಕ್ಕ ಮದಲ ಉತ್ತರಾ ಕೊಡು...ಹೇಳು...ನೀ ಮಸೀದೀಯೊಳಗ ಹೊಕ್ಕಿದ್ದೇನು ?'

'ಮಸೂತಿಯೊಳಗಿಂದ ಅವರು ಕಲ್ಲು ಒಗೀಲಿಕ್ಕತ್ತಿದರು. ಅವರನ ಹಿಡೀಲಿಕ್ಕೆ ಮಸೂತ್ಯಾಗ ಹೋಗಬೇಕಾತು'.

'ಮಸೀದೆಂದರ ದೇವರಮನಿ ಅನ್ನೂದು ನಿನಗ ಗೊತ್ತದ ಇಲ್ಲೋ ?'

'ಗೊತ್ತಿರದ ಏನ್ರೀ ಧಣೇರs...'

'ಅದೂ ಗುಡಿಯಷ್ಟs ಪವಿತ್ರಂತ ನಿನಗ ಗೊತ್ತದ ಹೌದಲ್ಲೋ ?' ಠಾಕೂರ ಏನೂ ಉತ್ತರಿಸದಾದ. ಚೌಧರಿಯವರು ಮತ್ತು ತಾವs ಹೇಳಲಿಕ್ಕತ್ತಿದರು.

'ನೋಡು ದೇವಸ್ಥಾನ ಹಾಳು ಮಾಡಿದ ಮುಸಲ್ಮಾನಗ ಏನ ಶಿಕ್ಷಾ ಆತೋ ಆ ಶಿಕ್ಷಾ ಮಸೀದೀ ಹಾಳುಮಾಡಿದವಗೂ ಆಗಬೇಕು'

ಭಜನಸಿಂಗ್ ಮೌನಿಯಾದ, ಅವ ಚೌಧರಿಯವರು ಇಷ್ಟು ಸಿಟ್ಟಿಗೆದ್ದದ್ದನ್ನ ಎಂದೂ ನೋಡಿರಲಿಲ್ಲ.

'ನೀನು ನನ್ನ ಅಳಿಯನ್ನ ಕೊಂದಿ. ಆದರ ನಿನ್ನ ನಾ ಯಾಕ ಉಳಿಸಿಕೊಂಡೆ ? ಯಾಕಂದರ ನನ್ನ ಅಳಿಯ ಮಾಡಿದ ದೈವದ್ರೋಹಕ್ಕ ನೀ ಕೊಟ್ಟ ಶಿಕ್ಷಾ ಬರೊಬ್ಬರಿ ಆಗಿತ್ತು. ಇಂಥಾ ತಪ್ಪಿಗೆ ನನ್ನ ಮಗನ್ನ ಅದ್ಯಾಕ ಸ್ವಂತ ನನ್ನ ಕೊಂದರೂ ನನಗ ತಪ್ಪ ಅನಸೂದುಲ್ಲ. ಆದರ ಇಂದ ನೀನs ಅಂಥಾ ಪಾತಕ ಮಾಡೀ...ಅಲ್ಲೇ ಆ ಆ ಮಸೀದೀ ಒಳಗs ಯಾರರೆ ನಿನ್ನ ಕೊಂದು ನರಕಕ್ಕೆ ಕಳಿಸಿದ್ದರೆ ನನಗೆ ಸಂತೋಷ ಆಗತಿತ್ತು...ನಿರ್ಲಜ್ಜ ಹುಳಧಂಗ ಉಳಿದಬಂದೀ. ದೇವರು ನಿನ್ನ ಹಂಗs ಬಿಡತಾನಂತ ಮಾಡೀ ಏನು ? ...ಹೇಳು... ನೀ ಮಾಡಿದ ಕೆಲಸ ಭಗವಂತನ ಅಪಮಾನ ಹೌದಲ್ಲೋ ?' ಚೌಧರಿಯವರ ನಿಚ್ಚಳ ಪ್ರಾಮಾಣಿಕವಾದ ಧಾರ್ಮಿಕತೆಯ ಮುಂದೆ

ಠಾಕೂರನಿಗೆ ತಾನು ನಿರಪರಾಧಿ ಎಂದು ಹೇಳಲು ಸಾಧ್ಯವೇ ಇರಲಿಲ್ಲ. ಅವನು ತಲೆ ತಗ್ಗಿಸಿ 'ಹೌದು ಧಣೇರ್ರ... ನಾನೂ ಇಂಥಾ ಪಾಪ ಮಾಡಿದೆ'.

'ಇಂಥಾ ಪಾಪ ಮಾಡಿದ್ದಕ್ಕ ಹಿಂದ ನೀನ್ರ ಏನ ಶಿಕ್ಷಾ ಕೊಟ್ಟೆಯೋ ಆದ್ರ ಶಿಕ್ಷಾ ಅನುಭವಿಸಲಿಕ್ಕೆ ನೀ ತಯಾರ ಇದ್ದೀ ಹೌದಲ್ಲೋ'.

'ಧಣೇರ್ರ... ದುಲ್ಹಾಮಿಯಾನ (ಅಳಿಯನ) ಗುರತ್ರ ಹತ್ತಿರಲಿಲ್ಲ....'

'ಏ ...ಇಲ್ಲಿ ನೋಡು. ಆಗ ನೀ ಅವನ್ನ ಕೊಂದಿರದಿದ್ದರ ಸ್ವತಃ ನಾನ್ರ ಅವನ್ನ ಕೊಲತಿದ್ದೆ. ಹಂಗಂತ್ರ ನಿನ್ನ ಬಿಡುಗಡೆ ಮಾಡಿಸಿದ್ದು.... ಈಗ ನೀನು ಮಾಡಿದ ದೈವದ್ರೋಹಕ್ಕೆ ನಾನು ಶಿಕ್ಷಾ ಕೊಡತನು... ನಿನ್ನ ಪೋಲೀಸರಿಗೆ ಕೊಡೂದುಲ್ಲ. ಕಾಯ್ದೆಶೀರ ಆದರ ನಿನಗ ಬರೇ ಸ್ವಲ್ಪ ದಿವಸ ಜೇಲಿಗೆ ಹಾಕತಾರು...ನನ್ನ ನಂಬಿಕಿ ಹೇಳೂ ಪ್ರಕಾರ ನಿನ್ನ ತಲೀ ತಗೀಬೇಕು.... ಠಾಕೂರ್.... ನನಗ ನಿನ್ನ ಮ್ಯಾಲ ಬ್ಯಾರೇ ಏನೂ ಸಿಟ್ಟಿಲ್ಲ. ನೀ ನನ್ನ ಗೆಳ್ಯಾ ಇದ್ದಂಗ ಇದ್ದಿ. ನನ್ನ ಪ್ರಾಣ ಉಳಸಾಕ ನಿನ್ನ ಜೀವಾ ಪಣಕ್ಕೆ ಹಚ್ಚ ತಿದ್ದಿ ನನಗ ಇಂದ ಸಂಕಟ ಆಗಾಕತ್ತೇತಿ...ಆದರೆ ಅದ ನನಗ ಲೆಕ್ಕಕ್ಕಿಲ್ಲ... ನಾ ನಿನ್ನ ಕೊಲ್ಲಾಕ ಬೇಕು...'

–ಅಂತಂದು ಚೌಧರಿಯವರು ತಮ್ಮ ಖಡ್ಗ ಹಿರದು ಠಾಕೂರನ ಮುಂದ ನಿಂತರು.

ಇದು ಅಗದೀ ದೃಶ್ಯ. ಬಿಳೀ ಕೂದಲಿನ ಬಾಗುಬೆನ್ನಿನ ಮುದುಕ ಒಬ್ಬ ಎಳೆವಯದ ಬಲಶಾಲಿಯಾದ ತರುಣನ ಮುಂದೆ ಖಡ್ಗಾ ಹಿಡಕೊಂಡು ನಿಂತನೆ ! ಠಾಕೂರ್ ತನ್ನ ದೊಣ್ಣೆಯ ಒಂದೇ ಒಂದು ಹೊಡೆತದಿಂದ ಚೌಧರಿಯವರ ಮಗ್ಗಲಾ ಮುರಿದು ಅಲ್ಲಿಂದ ನಡದು ಹೋಗಬಹುದಿತ್ತು. ಆದರ ಅವ ತಲೀ ಬಗ್ಗಿಸಿಕೊಂಡು ನಿಶ್ಚಲವಾಗಿ ನಿಂತುಬಿಟ್ಟಿದ್ದ...ಠಾಕೂರನಿಗೆ ತನ್ನ ಎದುರುಗಡೆ ನಿಂತಿರುವ ಮನುಷ್ಯನ ಒಂದೊಂದು ಎಳೆಯ ಬಗೆಗೂ ಆಳವಾದ ಗೌರವ ಇದ್ದಿತು. ಆದರೆ ಚೌಧರಿ ಸಾಹೇಬರು ಇಷ್ಟು ಆಳವಾದ ಧಾರ್ಮಿಕ ಭಾವನೆ ಹೊಂದಿದವರೆನ್ನುವುದು ಮಾತ್ರ ಅವನಿಗೆ ತಿಳಿದಿರಲಿಲ್ಲ. ಬಾಕೀ ಮಂದಿ ಭಾವಿಸಿದಂತೆ ಚೌಧರಿಯವರು ಒಳಗಿನ ಒಳಗೆ ಹಿಂದೂ ಆಗಿದ್ದಾರೆ ಎಂದು ಅವನು ತಪ್ಪಾಗಿ ಭಾವಿಸಿದ್ದ ...ತನ್ನನ್ನು ನೇಣುಗಂಬದಿಂದ ಉಳಿಸಿದ ಚೌಧರಿಯವರ ವಿರುದ್ಧ ಅವನಲ್ಲಿ ಹಿಂಸಾತ್ಮಕವಾದ ಇಲ್ಲವೇ ಪ್ರತೀಕಾರದ ಭಾವನೆ ಮೂಡಲಿಲ್ಲ. ಅವನು ಶೂರನಂತೆ ನಿರ್ಭಯನಾಗಿದ್ದನು. ಕಪಟ ಮೋಸ ಗಳನ್ನು ಅರಿಯದ ಮುಗ್ಧತೆಯಿಂದ ಚೌಧರಿಯವರ ಮುಂದೆ ತಲೆ ತಗ್ಗಿಸಿ ನಿಂತು ಕೊಂಡಿದ್ದನು.... ಆ ಕ್ಷಣದಲ್ಲಿ ಅವನಲ್ಲಿ ತುಂಬಿದ ಭಾವ ಕ್ರೋಧವಾಗಿರಲಿಲ್ಲ. ಅದು ಅಪರಾಧೀ ಪ್ರಜ್ಞೆಯಾಗಿತ್ತು. ಸಾವಿನ ಬರುವಿಕೆ ಅವನಲ್ಲಿ ಹುಟ್ಟಿಸಿದ್ದು ಭಯವನ್ನಲ್ಲ, ಕೇವಲ ವಿಷಾದವನ್ನ !

...ಚೌಧರಿಯವರು ಖಡ್ಗ ಹಿಡಿದು ಕೈಯೆತ್ತಿ ನಿಂತೇ ಇದ್ದಾರೆ. ಅವರ ನಂಬಿಕೆ 'ಕೊಲ್ಲು ಇವನನ್ನ' ಅಂತ ಆಣತಿ ನೀಡುತ್ತಿದ್ದರೆ ಅವರ ಸಾತ್ವಿಕತೆ 'ಹೋಗಲಿ.... ಬದುಕಲು ಬಿಡು' ಎಂದು ಸೂಚಿಸುತ್ತಿತ್ತು. ಅವರು ಸಂದಿಗ್ಧಕ್ಕೆ ಸಿಕ್ಕಿಹಾಕಿಕೊಂಡಿದ್ದರು... ಠಾಕೂರನಿಗೆ ಇವರ ಧರ್ಮಸಂಕಟ ತಿಳಿಯುತ್ತಿತ್ತು ... ಗಂಟಲು ಕಟ್ಟಿದ ಅವನು ಪಿಸು ನುಡಿದ... 'ಧಣೇರ್ರ .. ನಿಮ್ಮ ಹೂವಿನ ಹಂತಾ ಮನಸು ನನ್ನ ಕೊಲ್ಲಾಕ ಬಿಡೂದುಲ್ಲ. ನೀವ್ರ ಹಾಲಿಕ್ಕಿ ದೊಡ್ಡವನ್ನ ಮಾಡಿದ ಈ ನಿಮ್ಮ ಸೇವಕನ್ನ ಕೊಲ್ಲಾಕ ನಿಮ್ಮ ಕೈ ವಜ್ಯಾಲಕ ಏಳವಲ್ಲತು ...ಈ ನನ್ನ ಶಿರಾ ಅನ್ನೂದು ನಿಮಗೆ ಸೇರಿದ್ದು. ಇದ ನಿಮ್ಮ ವಸ್ತು. ಇದನ್ನ ನೀವು ಯಾವಾಗ ಬೇಕಾದಾಗ ತಗೋಬಹುದು...ನಾಳೆ ಬೆಳಿಗ್ಗಿ ನೀವು ಯಾರನರೇ ನಮ್ಮ ಮನೆಗೆ ಕಳಿಸಿ ಈ ಶಿರವನ್ನ ತರಿಸಿಗೋರಿ... ಈ ಸದ್ಯೇಕ್ಕ ನಾನು ಇದನ್ನ ತಗದು ನಿಮ್ಮ ಪಾದದ ಮುಂದ ಇಡತಿದ್ದೆ. ಆದರೆ ಊರಾಗ ನಿಮ್ಮ ವಿರುದ್ಧ ದಂಗೇ ಏಳತೈತಿ...ನನ್ನ ಮನಿಯೊಳಗಾದರ ಇದ ಯಾರ ಮಾಡದರು ಏನ ಹಕೀಕತ್ತಂತ ಯಾರಿಗೂ ತಿಳ್ಯೂದುಲ್ಲ ...ನಾಳೆ ಬೆಳಿಗ್ಗಂದರ ಒಬ್ಬ ಮನಶಾನ್ನ ಕಳಿಸಿಬಿಡ್ರಿ... ನನಗ ತಿಳೀದನ್ರ ನಿಮ್ಮ ಮನಸಿಗೆ ನೋವ ಮಾಡಿದ್ದರ ನನ್ನ ಕ್ಷಮಿಸಬೇಕರೀ...ನಾ ಬರತನರೀ...' ಎಂದು ನುಡಿದ ಠಾಕೂರ್ ಭಜನಸಿಂಗ್ ಅಲ್ಲಿಂದ ನಿಧಾನವಾಗಿ ನಡೆದುಹೋದನು ... ●

ಮತಾಂಧತೆಯು ಹಿಂದೂ ಧರ್ಮದ ಮೇಲೆ ಸಮವಸ್ತ್ರದ ಏಕತೆಯನ್ನು ತೊಡಿಸಲು ಅನೇಕ ಸಾರಿ ಪ್ರಯತ್ನಿಸಿದೆ. ಅದರ ಉದ್ದೇಶಗಳು ಎಲ್ಲ ಸಮಯದಲ್ಲೂ ಸಂಶಯಾಸ್ಪದವಾಗಿಲ್ಲ. ಅದರ ಚಾಲನಾ ಶಕ್ತಿ ಕೆಲವು ವೇಳೆ ಧನ್ಯತೆ ಮತ್ತು ಬಲದ ಹಂಬಲದಿಂದಾಗಿರಬಹುದು. ಆದರೆ ಅದರ ಪರಿಣಾಮವು ಮಾತ್ರ ಯಾವಾಗಲೂ ವಿನಾಶಕಾರಿಯಾಗಿದೆ. ಭಾರತದ ಇತಿಹಾಸದ ಯಾವುದೇ ಕಾಲದಲ್ಲಿ ಮತಾಂಧ ಹಿಂದೂ ಧರ್ಮ ಭಾರತಕ್ಕೆ ಏಕತೆಯನ್ನಾಗಲಿ, ಒಳ್ಳೆಯದನ್ನಾಗಲಿ ಉಂಟು ಮಾಡಿರುವುದು ನನಗೆ ತಿಳಿಯದು. ಭಾರತದಲ್ಲಿ ಏಕತೆ ಮತ್ತು ಸಮೃದ್ಧಿಗಳಿದ್ದ ಕಾಲದಲ್ಲೆಲ್ಲಾ ಜಾತಿ, ಮಹಿಳೆ, ಆಸ್ತಿ ಮತ್ತು ಸಹಿಷ್ಣುತೆಗಳಿಗೆ ಸಂಬಂಧಿಸಿದಂತೆ ಹಿಂದೂ ಧರ್ಮದ ಉದಾತ್ತ ಗುಣ ಪ್ರಬಲವಾಗಿದ್ದುದು ಕಂಡು ಬಂದಿದೆ. ಹಿಂದೂ ಧರ್ಮದ ಮತಾಂಧತೆಯ ತೂಗುಯ್ಯಾಲೆ ಮೇಲ್ಮುಖವಾಗಿದ್ದಾಗಲೆಲ್ಲಾ ದೇಶದ ಸಾಮಾಜಿಕ ಮತ್ತು ರಾಜಕೀಯ ವಿಭಜನೆಗೆ ಕಾರಣವಾಗಿ ಭಾರತೀಯ ಸಮಾಜ ಮತ್ತು ರಾಷ್ಟ್ರ ತುಂಡು ತುಂಡಾಗಿ ಹೋಗಿದೆ. ಭಾರತವು ಛಪ್ಪನ್ನಾರು ದೇಶ–ರಾಜ್ಯಗಳಾಗಿ ವಿಭಜನೆ ಹೊಂದಿದಾಗಲೆಲ್ಲಾ ಮತಾಂಧತೆಯ ಹುಮ್ಮಸ್ಸು ಇತ್ತೋ ಇಲ್ಲವೋ ನನಗೆ ತಿಳಿಯದು. ಆದರೆ ಭಾರತೀಯ ಮನಸ್ಸಿನ ಮೇಲೆ ಉದಾತ್ತ ಹಿಂದೂ ಧರ್ಮ ತನ್ನ ಪ್ರಭಾವವನ್ನು ಹೊಂದಿದ್ದ ಕಾಲದಲ್ಲಿ ಮಾತ್ರ ದೇಶದ ಏಕತೆ ಸಾಧ್ಯವಾಯಿತು ಎಂಬುದು ನಿರ್ವಿವಾದವಾಗಿದೆ.

—ಡಾ॥ ರಾಮ್ ಮನೋಹರ್ ಲೋಹಿಯಾ

ಕವಿತೆಗಳು

1. ನವಿಲೆಲ್ಲಿ

ಎಷ್ಟು ಕಣ್ಣಿನ ನವಿಲೊ
ಯಾವ ಬಣ್ಣದ ನವಿಲೊ
ಕನಸು ಕಂಡರಿಸಿದ್ದು
ನೂರು ಸಾವಿರ ಕಣ್ಣು
ಕಣ್ಣು ತುಂಬಿದ ಬಣ್ಣ.

ಬಯಲ ರಂಗೋಲೆಯಲಿ
ಅಡಿ ಅಡಿಯ ಮೇಲಿರಿಸಿ
ಮುಡಿಕಟ್ಟಿ ಹೂ ಮುಡಿದ
ವಯ್ಯಾರಿ ಭುವನ ಮನೋಹರಿ
ಮಯೂರಿ

ಭೂಮಂಡಲದೆಚ್ಚರದ ಮುಸುಕೊಳಗೆ
ಕಟ್ಟಿರುವೆ ಗೊದ್ದ ಉದ್ದ
ಸುಡು ಬಂಡೆ ಕೋಟೆ
ಬ್ಲೇಡುಗುರು ಸೀಳು ಗಾಳಿ
ಇರುಳ ಗಾವಿಲ ಗೂಳಿ
ಕೆಣಕುವೀ ಮೌನದ ನಾಯಿ
ಸದ್ದೊಡೆದು, ವಿಹ್ವಲ ಕೂಗು
ಬಯಲ ಬಸುರಿನ ಹುತ್ತ, ತೇಗು
ಭುಸಭುಸನೆ ಮೇಲೆದ್ದು ಉರಿಗೋಲು
ಉರಿ ಚಾಚಿ ಕೊಳ್ಳಿ ಕಾಲು ಸಾಲು
ಹಸುರಿನೆದೆ ಸುಟ್ಟು
ಕಂಗೆಟ್ಟು ಮುಖ ವಿಕಾರ
ನಿಟ್ಟುಸುರಿನಾಕಾಶ ಹೊಗೆ

ಅರಗಿನರಮನೆಯೊಳಗೆ
ಏರಿಗಿ ತಾಪದ ಗೋರಿ
ಮೇಲೊಂದು ನವಿಲಗರಿ

೨

ಕುಣಿವಂಗಾಂಗ ಮಣಿದು
ಕುಂಕುಮ ಕೆಂಪು ಹಣೆ ಹಣೆಗೂ ಸೋಣೆದು
ಉರಿ, ಉರಿಯು ರಥವೇರಿ
ಧಗೆ, ಧಗೆಯು ಬೆನ್ನೇರಿ
ದೈವದ ದಾರಿಯಲಿ
ಕೂಸು ಕಸಿವಿಸಿ
ನಿತ್ರಾಣ ತಾಯಿ
ಎದೆ ಬಗಿದು
ಒಂದೊಂದೆ ನವಿಲ ಹೊರ ತೆಗೆದು
ಯಜ್ಞಕುಂಡಕ್ಕೊಗೆದು
ಗರಿ ಗರಿ ಬರಲು
ಕಾಸಿಗೊಂದು ನವಿಲು
ಕವಡೆಗೊಂದು ನವಿಲು

೩

ಮೆಟ್ಟುಗಲ್ಲಿಗೆ ಮೆಟ್ಟು
ಮುಟ್ಟು ಮೈಲಿಗೆ ನುಡಿಗಟ್ಟು
ಸಂಹಾರ ಗುಟ್ಟು ಗೊತ್ತಿರದೆ
ಕನಸುಗಳ ಬಿಚ್ಚಿ ಬಿತ್ತರಿಸಿದೆ
ಕೇಳುವ ಕಿವಿ ಕೋಟಿ
ನೋಡಿ ನೋಡಿ ಆಡುವಾಟವ ಬೆರಗು
ನೋಡುವ ಕಣ್ಣು ಕೋಟಿ
ಕಾಡಿ ಕಡುನೊಂದ ಮನ ಸೊರಗಿ
ಏಕಾಂಗಿ ಬೇಡಿ ಬೇಡಿ
ಬೇಡಿದೆ
ನವಿಲು ತಂಗೀ ನವಿಲು

೬

ಮೌನ ಮಸಣದ ಹಾದಿ
ಕರಕು ಬೂದಿ
ಎಳೆ ಬಿಸಿಲ ನುಂಗಿದ ಹಗಲು
ಹಗಲು ಕನಸಿನ ಇರುಳು
ತುಂಬಿ ತೂಗುವ ಮುಗಿಲು
ಕಣ್ಣು ಕಣ್ಣುಗಳಲ್ಲಿ ಭಯದ ಕರುಳು
ಹೊಯ್ದಾಡುತಿದೆ
ಒಂಟಿ ಜೀವದ ದೀಪ ಶೋಕ
ಭಣಗುಡುವ ಎದೆ ಸುಮ್ಮನೆ
ಕಾಯುತ್ತಿದೆ
ಒಂದೇ ಒಂದು ಹನಿಗಾಗಿ
ತೆರೆದ ಬಾಯೆತ್ತಿದೆ
ತೀರ ತೀರದ ವ್ಯೋಮ ಸುತ್ತ ತಿರುಗುತ್ತಿದೆ.

೭

ಅಗ್ನಿಬಸಿದು ಬೆಂದು ಬೆಂಡಾದ ನೆಲದೊಡಲು
ಸೀಳಿ ಚಿಮ್ಮಿದ ಒಂಟಿ ಹಸುರು ಗರಿಕೆ
ಮೇಲೆ ಇಬ್ಬನಿ ಹೊದಿಕೆ
ಎಷ್ಟೊಂದು ಬಣ್ಣಗಳ ಕಿರಣ ಹೊಳಪು
ಬೇರು ಮೂಲದ ನೀರು ನಿಧಿ
ಅವಿನಾಶಿ ಅಘನಾಶಿ ಕರುಣಾಸನ್ನಿಧಿ
ಒಡಲು ಭಂಡಾರ
ಮೇಲಷ್ಟೆ ಬೂದಿ.

2. ಗಿಣಿಗೆ

ಕೆಂಪು ಕೊಕ್ಕಿನ ಗಿಣಿಯೆ
ಹಸಿರು ಮೈಯಿನ ಗಿಣಿಯೆ
ಗಿಣಿಯೆ ಖಣಿಯೆ ನೆಲದ ಒಡವೆ
ಎಲ್ಲಿದ್ದೇ ಎಲ್ಲಿದ್ದೇ
ಎಲ್ಲಿಂದ ಬಂದೇ.

ಕುಂತಿರುವ ಕೊಂಬೆ ಮೀಟುತ್ತಿರುವೆ
ಹಾರಲೆಳಸುತ್ತಿರುವೆ
ಮೀರದುಳಿಯುತ್ತಿರುವೆ
ಬೆದರಿ ಅತ್ತಿತ್ತ ನೋಡುತ್ತಿರುವೆ
ತೀರ ಬಯಕೆಯ ಹಾಡು ಹಾಡುತ್ತಿರುವೆ.

ಸುತ್ತ ಕಣ್ಣೋಟಕ್ಕೆ ಸಿಕ್ಕಿದ್ದೇನು ?
ಊದಿ ತೂರಿದ ಬೂದಿ
ಸೆಡವು ತುಳಿದೀ ಹಾದಿ
ಹತ್ತು ನಿಟ್ಟಿಗೂ ಚೂಪು ತುದಿ.

ಗಾಳಿ ಚುಳು ಚುಳು ಸವರಿ
ರಣ ಬಿಸಿಲು ಬೆವರಿ
ಬೆಂಗಾಡಿನ ತರಗೆಲೆ ಹಾಸು
ರೆಂಬೆ ರೆಂಬೆಗೂ ಮುಳ್ಳು ಹೊದಿಕೆ.

ಮಲಗಿ ನೆಲ ಸುಸ್ತಾಗಿ
ದಣಿದ ಹೊಲ ಮುಲುಗಿ
ತುಕ್ಕು ನೇಗಿಲು ಮೂಲೆ
ನೊಗವಿರದ ಎತ್ತಿನ ತಲೆ.

ಸೊಲ್ಲಡಗಿ ನಾಯಿ ಬೊಗಳು
ಮೈ ಝುಲಿಸಿ ಕೈಕಾಲಾಡದ ಹಗಲು
ರೆಕ್ಕೆ ಪಟ ಪಟ ಸದ್ದು
ಮೇಲೊಂದು ಹಾರುವ ಹದ್ದು.

ಬಿಳಲು ರೆಕ್ಕೆಯು ಗಿಣಿಯೆ
ಗೂಡು ಹುಡುಕುತ್ತಿರುವೆ
ಗೂಡಿಗೆ ಹಾಡು ಕಟ್ಟುತ್ತಿರುವೆ
ಕಟ್ಟಿ ಹಾರುವಿಯೇನು ?

ಹದ್ದು ಮೀರಿದಾಕಾಶ ತೂಗುವ ನಿಲುವು
ಕೆಳಗೆ ಹಾಗದ ಗೆಲುವು
ನಡುವೆ ನೀನೇ ನೀನು
'ನೀನು' 'ನಾನು' ಏನೇನು ?
ಮುಂದೇನು ? ಮುಂದೇನು ?

—ಚಂದ್ರಶೇಖರ ತಾಳ್ಯ

3. ಆಕಾಶ ಮತ್ತು ನಾನು

ಈ ನೆಲದ ವೇದನೆ
ಸಂವೇದನೆಯು ಪ್ರತೀಕ ನಾನು
ಇಲ್ಲಿದ್ದು ಅಲ್ಲಿರುವ
ಭ್ರಮೆಯ ರೋಗಿಷ್ಟ ನಾನು !

ಬದುಕ ಸಮುದ್ರದಲಿ
ನಾವೆಯೊಂದರಲಿ
ಹುಟ್ಟು ಹಾಕುತ್ತ
ಗೊತ್ತಿರದ ಬಂದರ್ ಸೇರಬೇಕೆನ್ನುವ ಆಶೆ !

ತೂಫಾನು ಚಂಡಮಾರುತ
ಗಳ ಹೊಡೆದ
ತಿಮಿಂಗಲು ಮೀನುಗಳು
ನಾವೆಯುಡಿ ತುಡಿತ.

ನೆಲದ ಬದುಕಿನ ಕತೆ
ಕಲ್ಲು ಮುಳ್ಳಿನ ಹಾಡು
ಗುಡ್ಡ ಬೆಟ್ಟಗಳ ಕಾದಂಬರಿ
ಯಾವುದೂ ನನ್ನ ದಡ ಮುಟ್ಟಿ
                    ಮೈದಡವಲಿಲ್ಲ !

ನಾನು ಭೂಮಿಯಲ್ಲೇ
ಭೂಪಾಲನಾಗಬೇಕೆಂದು
ಬಹುಪಾಲು ಯವ್ವನದ ವಯಸ್ಸು
                    ಕಳೆದೆ.
ಭೂಪಾಲನಾಗಲಿಲ್ಲ !

ಕಡೆಗೆ ಗೋಪಾಲನಾಗಲೂ
ಯಾವ ಗೋಪಿಕಾವನಕ್ಕೂ
ನಾನು ನುಗ್ಗಲಿಲ್ಲ
ಅದು ನನಗೆ ಬರಲಿಲ್ಲ.

ನೆಲದ ವೇದನೆ
ಸಂವೇದನೆಯ ಪ್ರತೀಕ ನಾನು
ಇಲ್ಲಿದ್ದೂ ಅಲ್ಲಿರುವ
ಭ್ರಮೆಯ ರೋಗಿಷ್ಟ ನಾನು !

ಈಗ ನನಗೊಂದು ಉಳಿದಿರುವ ಆಶೆ:
ಆಕಾಶ.

ಕಟ್ಟಬೇಕೊಂದು ಅಲ್ಲಿ ಅರಮನೆ.
ಮುಟ್ಟಬೇಕಿದೆ ನನ್ನ ಮನಸಿಗೆ
ಸಾವಕಾಶ
ಆ ಆಕಾಶ !

ಕಾಣದ ಲೋಕದ ರಂಜಕ ಬದುಕೇ
ಕಾಣುವ ಲೋಕದ ಭಯದ ಬದುಕಿಗಿಂತ
ಹೆಚ್ಚು ವಾಸಿ
ಇದರೆಲ್ಲ ಯಾರ ಚೌಕಾಶಿ !

—ಗವಿಸಿದ್ಧ ಎನ್. ಬಳ್ಳಾರಿ

4. ಕಲ್ಲಕೆರೆಯ ಹಾಡು

ಗಂಗಮ್ಮ ತಾಯೇರು ಶಿಂಪಾ ಆಗಿ ಹರಿದೋರು ಈಗೆಲ್ಲಿ
ಮಾಯವಾದಾರು ಕೆರೆಯೆಲ್ಲ ಕಿರಿದಾಗಿ ತೊರೆಯೆಲ್ಲ ಬರಿದಾಗಿ
ದಡವೆಲ್ಲ ಬೇಲಿಯು ಎಲ್ಲಿ ನೇರಳೆಹಣ್ಣು ಬೆಲವತ್ತ ಅತ್ತೀಯು
ಧುಮ್ಮ ಧುಮ್ಮ ಬಿದ್ದು ಈಜು ಹೊಡೆದೋರು.

೨

ಕಂಟು ಬೆಲ್ಲದ ಅಂಟು ಕೆಟ್ಟ ಕೊಬ್ಬರಿ ನಂಟು
ಊರ ಕೇರಿಯ ತುಂಬ ಬಸ್ಸಾಟವು.
ಮಳೆಹೊಯ್ದು ಕೆರೆಯಾಗಿ ಹರಿದು ಹೋದುವು ಎಲ್ಲಿ
ತೇಲಿ ಬಿಟ್ಟಾ ದೋಣಿ ಚಕ್ಕಮುಕ್ಕಳ ಕುಂತು ಕಂಡಂಥ ವ್ಯಾಳವ ಚಕ್ಕಳಗೊಂಬೆಗಳಾಗಿ
ಕುಣೀತ ಹೋದುವೆಲ್ಲಿ.

೩

ದೊಡ್ಡಮ್ಮ ದೇವರು—ಹುಡುಗಾಟವಲ್ಲ ಆಡಿಕೊಂಡರೆ ಕಣ್ಣು ಕೀಳುತಾಳೆ
ಕ್ವಾಣವೆಂದರೆ ಖುಷಿಯು ಕತ್ತು ಕೇಳುತಾಳೆ
ಅಡ್ಡಬಿದ್ದಂಥವರು ಹಂಗೆ ಮಲಗಿದರಲ್ಲ ಎದ್ದು ನಿಂತಂಥವರು
ಹಿಡುದು ಮೂಡಣ ದಿಕ್ಕು ಹೊರಟೆ ಹೋದರಲ್ಲ ಹಿಂಬಾಲಿಸುತ ಬೆಕ್ಕು.

೪

ಜಾತಿಯೆಂದರೆ ಜನಕೆ ತುಂಬ ತುಂಬಾ ಪ್ರೀತಿ ಮಂದಹಾಸದ ಮಾತು
ಶುದ್ಧಾಂಗ ಸುಳ್ಳು. ಮಡಕೆಗಳ ಸುಟ್ಕೋರು ಸುಟ್ಟುತಲೆ ಹೋದರು
ತಾಳಿಯ ಕೊಟ್ಕೋರು ಮಾಡಕೂಡದು ಮದುವೆ ಮಾಡಿದರೆ ಬದುಕುವುದೆ
ಊರ ಹಿರಿಮೆ
ಕತ್ತೆ ಹೊರಲೇಬೇಕು ಕತ್ತಿ ಕೆರೆಯಲೇಬೇಕು ಇದು ಇದುವೇ ನಮ್ಮ ಸೀಮೆ.

೫

ಗಾಳಿ ಗರಾವು ಹಿಡುದು ಮೈ ತುಂಬಾ ತಿಂದೋರು ಪ್ರಾಣವನೆ ತೆತ್ತೋರು
ಸೂರ್ಯದೇವನ ಎದುರು ಬದುರಾದರು
ಏನ ಪ್ರಾರ್ಥಿಸಿ ಏನ ಪಡೆದರು ಏನನ್ನ ಕುಂತಿಯಂಥವರು
ಪಡೆದಂಥ ಕುಸುಮವನು ಹುಗಿದದ್ದು ಎಲ್ಲಿ–ಹಗೇವಿನೊಳಗು.

೬

ಭೂಮಿಯ ಆಳಿದವರು ಮರಗಳನು ಕಡಿದವರು ಅಕ್ಷರದ ಜುಟ್ಟು
ಬಿಡದವರು–ಸೋತರೆ ಸೋಲಲ್ಲ ಗೆದ್ದರೆ ಹಬ್ಬವು
ಹೆಬ್ಬಾಗಿಲ ತೋರಣವ ಕಿತ್ತದ್ದು ಯಾರ ದನವು
ಹಾಕಿ ಕಿತ್ತರೆ ಖಂಡ ಸೇದಿದರೆ ಗುಂಡಿಗೆ ರಕ್ತ ಏಲಿವಿಲಿ ಒದ್ದಾಡುತಿರುವುದು
ಯಾರ ಮೈಯು

೭

ಎಲ್ಲಿ ಹೋದರು ಮುಂದಿ ದಾಪುಗಾಲನು ಇಟ್ಟು
ಅವರ ಅಂಗೈಯಿ ಇಸ್ಪೀಟು ಅಂಗಾಲು ಸಾರೋಟು
ಬಾಯಲ್ಲಿ ಜೈಮಿನಿ ದೇಹವೆಂಬೋದು
ಕಾಮುನಂಬಿನ ಪಂಜರದ ಅರಮನೆಯು.

೮

ದೊಡ್ಡಯ್ಯನಂಥೋರು ಇಲ್ಲಿ ಸಂದವರಲ್ಲ ಅಲ್ಲಿ ಹೆಂಗೊ ಏನೊ, ಬೇಗೆಯಲಿ ಬೆಂದವರು
ಹೊತ್ತೊತ್ತಿನಿಟ್ಟಿಗೂ ಪಡಿಪಾಟಲು ಪಟ್ಟವರು
ಬರೆದ ಅಕ್ಷರ ನೋಡಿ ಮಾತು ಶುದ್ಧೋಚ್ಚಾರವು
'ಭಾರತ'ದ 'ಭಾಗವತ'ಗೆ ಮೈ ಕೈಯಿ ಇಸುಬು

೯

ಜಾತಿ ಒತ್ತಡದಲಿ ಪ್ರೀತಿ ಬಾಡುವ ವೇಳೆ
ಪ್ರೀತಿಯ ತಹತಹಕೆ ಎಲ್ಲಿ ಕೊನೆಯು

ನೊಂದ ಹೃದಯುಗಳೆಲ್ಲ ನಂದಿ ಹೋಗುವ ಮೊದಲು
ಎಲ್ಲಿಂದ ತರುವುದು ಪ್ರೀತಿಯೆಣ್ಣೆ

೧೦

ಝೂವ ಕಟ್ಟಿದ ಬುಡುಬುಡಿಕೆ ಸಿದ್ಧನ ಮೈಯೆಲ್ಲ ಕಣ್ಣು
ಕಣ್ಣುಗಳೇ ಕಿವಿಗಳು ಆಲಿಸಿ ಹಾಲಕ್ಕಿ ಪಡೆದಂಥ ಶಕುನವನು
ಸಾರುತ್ತಾ ಕೇರಿಯಲಿ ಸಾಕಾಗಿ ಹಾಇ ಅಂತ ಕೂತಂಥ ಸ್ಥಳವೇ–ಹಣ್ಣುಳ್ಳ
ಆಲವೇ ನಿದಿರೆಯಾಟ
ವಿನ್ನೆಲ್ಲಿ, ಮೈನವಿರೇಳಿತೇ ಗಿಳಿ ಬಂದು ಕುಂತವೆ ಮಾತು ಮಾತಾಡುತಾ ಇನ್ನು
ಶುರು ತಾಂಬೂಲ ರಂಗಿನೂಟ

೧೧

ಓ ಆ ಪೂರ್ವ ಕನಸಿನಂಥ ಮುಂಜಾವು; ಮಂಜಿನ ದುಪ್ಪಟಿ ಹೊದ್ದ ಬೆಟ್ಟದವ್ವನ ಬೆನ್ನು.
ಮೇಲಿಂದ ಕಚಗುಳಿ ಕೂಸುಮರಿ ಆಡಿ ಇಳಿದು ಬಂದಂಥವನು ಯಾರಿವನು
'ಯಾರೊ ನೀನು ?' ಎನಲು–ಮರ ಹೊಳೆದು ಗಿಡ ಬೆಳಗಿ ಹೂ ಬಿರಿದೊ ಎಲ್ಲಾ
ಕುಂತ ಹಕ್ಕಿಗೆ ರೆಕ್ಕೆ ಮೌನ ಕಣಿವೆಗೆ ಹಾಡು ಮರೆತ ಮಾತಿಗೆ ಸೃಷ್ಟಿಯ
ಹೊನಲು ಹರಿಯಿತಲ್ಲಾ.

೧೨

ಓ ಗಂಗಮ್ಮ ತಾಯೀರೆ ದೋಣಿಗಳ ತೇಲೀರಿ
ಚಿತ್ರ ಚಿತ್ತಾರಗಳ ಹೊತ್ತು ತನ್ನೀರೆ
ಪುಪ್ಪುಸಕೆ ಹೊಸಗಾಳಿ ಬೆಕ್ಕಸ ಬೆರಗೇಳಿ
ಥಕಥೈಯ ಕುಣಿವಂತೆ ಮಾಡೀರೆ.

೧೩

ಕಣ್ಣುಳ್ಳ ಒಲವೆ ಸುಳ್ಳುಗಳ ಮರೆಯಿಸು ಹಚ್ಚ ಹಸಿರೀನ
ಗಿಡದೇಳು ಹುಚ್ಚೆಳ್ಳು ಹೊಳೆಯಿಸು ನಕ್ಕ ನಲಿವೀನ
ನಕ್ಷತ್ರಗಳ ದಳವಾಗಿ ಅರಳೀಸಿ ಸೂರ್ಯಕಾಂತಿಯು ಬೆರಗು ಎದೆಯೊಳಗೆ
ಬೆಳೆಯಿತು ಓ ತಾಯಿ ಪುಣ್ಯ ನೆಲವೇ.

೧೪

ಚಂದ್ರಕಾಂತಾ ಚಕ್ಕಡಿಯೊಳಗೆ ನಾನು ನನ ಗೆಳತೀಯು
ಹಾಡುಕೋತ ಸಾಗುತೀವಿ ಜೊತೆ ಜೊತೆ
ಸಿಗಲಾರ ಸಿಗಲಾರ ಕಣ್ಣ ಮುಂದಣ ಸೂರ್ಯನು
ನಕ್ಕೊ ನಕ್ಕೊ ಸುಸ್ತಾಗಿ ಕಣ್ಮುಚ್ಚಿ ಮುಖವಿಟ್ಟಳು ಗೆಳತಿ ನನ್ನೆದೆಯ ಮೇಲೆ.

—ಕೆ. ಪಿ. ಮೃತ್ಯುಂಜಯ

ಜನವರಿ–ಫೆಬ್ರುವರಿ ೧೯೯೧/೫೫

5. ಕಲ್ಲು ಕರಗಿ

ಉದಮದದ ಹುಡುಗಿ
ಹದಿವಯಸ್ಸಿನ ಹಸಿಬಿಸಿ
ಭಾವನೆಗಳ ತಿದಿಯಲ್ಲಿ
ಬೇಯುತ್ತ ನಿಂತಾಗ
ಈಡುಜೋಡಿಲ್ಲದ ಗೌತಮನಿಗೆ
ಶಾಂತವಾಗಿ ಸಾಲಂಕೃತ
ಧಾರೆಯೆರೆದು ಕೊಟ್ಟ ಅವಳಪ್ಪ
ಅಹಲ್ಯೆ–ಕಾದ ಅಲ್ಲೆ–
ಕಾಯುತ್ತಲೇ ಹೋದಳು.

ಕಾಯುವಿಕೆಯಲ್ಲಿ ನಿರೀಕ್ಷೆಯಿತ್ತು
ಯಾತರದೊ ! ಪ್ರಶ್ನೆಯೂ ಇತ್ತು
ಕುದಿಯುವ ಕಾಮನೆಗಳ
ತಂಪುಗೈಯ್ಯುವ ಭೂಪನಾರು ?
ಗೌತಮನಲ್ಲಿ ಉತ್ತರವಿರಲಿಲ್ಲ
ಯಜ್ಞ ಕುಂಡಕ್ಕೆ ಆಜ್ಯ
ಹಾಕುತ್ತಲೇ ಕುಳಿತು ಮಂತ್ರವನ್ನೂ
ಮಣಮಣಿಸದ ಅವನ ಮೌನ
ಇವಳನ್ನು ಕೊಲ್ಲುತ್ತಿತ್ತು ಇಂಚು ಇಂಚು.

ಹೊರಗೆ,
ತಬ್ಬಲಿಗಳಿಗೆ ಮಮತೆಯ ತಾಯಿಯಾಗಿ
ಗೌತಮನ ಬ್ರಹ್ಮಚರ್ಯೆಗೆ ಸಾಣೆಗಲ್ಲಾಗಿ
ಆಶ್ರಮದ ಶೃಂಗಾರಕ್ಕೆ ತೋರಣವಾಗಿ
ಕಾಣಿಸಿಕೊಳ್ಳುತ್ತಿದ್ದಳು ನಗುಮುಖದ ಲಲನೆ.

ಒಳಗೆ;
ಕಾಯದ ಕಳವಳದ ಕಡೆ

ಕಣ್ಣು ಹಾಕವೆ ಆತ್ಮದ ಸೆಲೆ
ಅರಿಯು ಹೊರಟವನ ವಿರುದ್ಧ
ರೂಪುಗೊಂಡ ಸುಪ್ತ ತಿರಸ್ಕಾರ
ಮತ್ತೊಬ್ಬನಲ್ಲಿ ಕಾಣಹೊರಟಿತ್ತು ಪರಿಹಾರ.
ಅನಿವಾರ್ಯ ಆತಂಕ, ಅಪವಾದವಾಗಿ
ಅಂಟಿಕೊಂಡ–ಅಲೌಕಿಕ ಬ್ರಹ್ಮಚರ್ಯೆಯು–
ಲೋಕೋತ್ತರ ಸುಂದರಿಯು ನಿರಂತರ ಕನ್ಯೆತನಕ್ಕೆ
ಅಡ್ಡಗಾಲು ಹಾಕಲು ಅವರಿವರು ಅಳವಲ್ಲ !
ಮಹೇಂದ್ರನ ಮೇಲೆ ಮನಸ್ಸಿಟ್ಟು ಕೂತವಳ
ಮೈಮನಗಳಲ್ಲಿ ಕೊತ ಕೊತ ಕುದಿಯುವ
ಲಾವಾರಸದ ಚಲನೆ.

ಮತ್ತೆಯೂ ಕಾಯುತ್ತಲೇ ಕೂತಳು
ಅಹಲ್ಯೆ. ಕಲ್ಲಾಗಿ !
ರಾಮ ಬರುವ ನೇಮಕ್ಕೆ
ಮಿಥಿಲೆಗೆ ಹೋಗುವ ಹಾದಿಯಲ್ಲಿ
ಕಲ್ಲಾದವಳ ಕಥೆ ಕೇಳಬೇಕೆಂದು
ಹುಡುಗರು ಸಡಗರದಿಂದ ನುಡಿದಾಗ
ಕಥೆ ಹೇಳಿದವನೂ ಒಬ್ಬ ತಾಪಸಿಯು !

ಅಹಲ್ಯೆಯದು ತಪ್ಪೆಂದು
ಬಾಲಕರಾಮನೂ ಒಪ್ಪಿಬಿಟ್ಟಿದ್ದರೆ
ಅವನು ಅವಳಿಗೆ ಮಣಿಯುತ್ತಿರಲಿಲ್ಲ
ಮತ್ತೆ ಕಲ್ಲು ಕರಗಿ, ಕರಗಿ ನೀರಾಗಿ,
ನೀರು ನೀರೆಯಾಗಿ
ಅರಳುತ್ತಲೂ ಇರಲಿಲ್ಲ.

— ಎಂ. ಎಸ್. ವೇದಾ

ನನ್ನ ನೆನಪುಗಳು

ಆನಂದ ಕಂದ

ಹಣಮಣ್ಣನ ಸಾವು

ಆರಿವೆಯ ಅಂಗಡಿಯು ನಡೆದೇ ಇದ್ದಿತು. ಎಂತಲೇ ರಾಘಣ್ಣ ಅಂಗಡಿಯ ವ್ಯವಸ್ಥೆಗಾಗಿ ಮೂಡಲಗಿಯಲ್ಲಿಯೇ ಉಳಿದ. ಆಗ ಅವನು ಅನಂತಾಚಾರ್ಯರ ಮನೆಯಲ್ಲಿಯೇ ಊಟ ಮಾಡುತ್ತಿದ್ದ. ಉಳಿದ ನಾವೆಲ್ಲರೂ ಬೆಟಗೇರಿಗೆ ಹೊರಟು ಬಂದೆವು. ಆ ವರ್ಷ ಸೆಪ್ಟಂಬರ್‌ನಲ್ಲಿ ನಡೆಯುವ ಮುಲ್ಕಿ ಪರೀಕ್ಷೆಗಾಗಿ ನಮ್ಮ ಬಲರಾಮಣ್ಣನು ಕಟ್ಟಲಿಲ್ಲ. ಕಾರಣವೆಂದರೆ ನನಗೆ ಬಂದ ಪ್ಲೇಗು. ಹಣಮಣ್ಣನ ಅನಾರೋಗ್ಯ. ಊರು ಬಿಟ್ಟು ಬೇರೂರಲ್ಲಿ ವಾಸ ಮಾಡುವ ಸಂದರ್ಭ. ಅಲ್ಲದೆ ತನಗೆ ತಗಲಿದ ಪ್ಲೇಗು ರೋಗ. ಇವುಗಳ ಮೂಲಕ ಅವನಿಗೆ ಪರೀಕ್ಷೆಗಾಗಿ ಬೆಳಗಾವಿಗೆ ಹೋಗುವುದಕ್ಕೆ ಸಾಧ್ಯವಾಗಲಿಲ್ಲ. ನಾನು ನನ್ನ ರೋಗಕ್ಕೆ ಮೊದಲು ದಿನಗಳನ್ನು ವ್ಯರ್ಥವಾಗಿಯೇನೂ ಕಳೆದಿರಲಿಲ್ಲ ಗಳಗನಾಥರ ಒಳ್ಳೊಳ್ಳೆ ಕಾದಂಬರಿಗಳನ್ನು ಓದಿ ಮುಗಿಸಿದೆ. ಹೊಸಹೊಸತಾಗಿ ಬಂದ 'ಕ್ಷಾತ್ರತೇಜ', 'ಧರ್ಮ ಸಾಮ್ರಾಜ್ಯ', 'ಸತ್ತ್ವಸಾರ', 'ತಿಲೋತ್ತಮೆ', 'ಮಹಾರಾಷ್ಟ್ರ ರಾಜ್ಯದ ಕೊನೆ', 'ಕನ್ನಡಿಗರ ಕರ್ಮದ ಕಥೆ'—ಇವೆಲ್ಲ ಕಾದಂಬರಿಗಳನ್ನೂ ಅವು ಬಂದಂತೆಲ್ಲ ಓದುತ್ತಿದ್ದೆನು. ಅಲ್ಲದೆ 'ವಾಗ್ಭೂಷಣ'ದಲ್ಲಿ ಬಹಳ ಹಿಂದೆಯೇ ಪ್ರಕಟವಾದ 'ನಿದ್ರೆಯಲ್ಲಿ ಎಬ್ಬಿಸಲ್ಪಟ್ಟ ಚಂದನದಾಸ', 'ಸರೋಜಿನಿ ನಾಟಕ' ಅಲ್ಲದೆ ಲಿಂಗೋ ರಾಮಚಂದ್ರ ಅಕ್ರೂರ ಎಂಬುವರು ಅನುವಾದಿಸಿದ 'ಸರಸ್ವತಿ' ಸಾಮಾಜಿಕ ಕಾದಂಬರಿ, ಗೋಕಾವಿಯ ಒಬ್ಬ ಲೇಖಕರಾದ ಧೋಂಡೋ ಗೋವಿಂದ ಮಹಾಜನ ಎಂಬುವರು ಬರೆದ 'ಪ್ರೇಮ ಪಿಯೂಷ', 'ಕುಮುದ್ವತಿ' ಎಂಬ ರಂಜಕ ಕಾದಂಬರಿಗಳು ಮತ್ತು ಅಥಣಿಯವರಾದ ವೇ. ರಾ. ಕುಲಕರ್ಣಿ ಎಂಬುವರು ಭಾಷಾಂತರಿಸಿದ ಮರಾಠಿ ಕಾದಂಬರಿಯಾದ 'ಒಬ್ಬ ರಜಪೂತ ಸರದಾರ' ಎಂಬುದನ್ನು, ಬೇರೆ ಸಣ್ಣ ಪುಟ್ಟ ಪುಸ್ತಕಗಳನ್ನು; 'ಸದ್ಬೋಧ ಚಂದ್ರಿಕೆ', 'ವಾಗ್ಭೂಷಣ', 'ಸಚಿತ್ರ-ಭಾರತ' ಮೊದಲಾದ ಮಾಸಪತ್ರಿಕೆ

ಗಳನ್ನು ನಾನು ಒಂದು ಅಧ್ಯಯನ ದೃಷ್ಟಿಯಿಂದಲೇ ಓದುತ್ತಿದ್ದೆ. ನಾನು ಓದಿದ ಪುಸ್ತಕಗಳಲ್ಲಿ ಯಾವ ಸಂದರ್ಭವನ್ನು ಕುರಿತು ಕೇಳಿದರೂ ಅದನ್ನು ವಿವರಣೆಯೊಂದಿಗೆ ಹೇಳಬಲ್ಲವನಾಗಿದ್ದೆ. ಮೂಡಲಗಿ ದೊಡ್ಡ ಊರು. ಕೆಲವೊಂದು ಗ್ರಂಥಗಳಾದರೂ ಓವಲು ಸಿಗುತ್ತಿದ್ದವು. ಆದರೆ ಈಗ ಬೆಟಗೇರಿಗೆ ಬಂದುದರಿಂದ ವಾಚನಾಲಯ ವಿಲ್ಲದ ಆ ಊರಲ್ಲಿ ಹೊಸ ಹೊಸ ಗ್ರಂಥಗಳು ನನಗೆ ದೊರೆಯದಾದವು. ಅಪ್ಪಯ್ಯನ ಆ ಬಳ್ಳಾರಿಯ ಶೆಟ್ಟರ ಪುಸ್ತಕಗಳನ್ನೇ ಮತ್ತೆ ಮತ್ತೆ ಓದುತ್ತಿದ್ದೆ.

ಮೂಡಲಗಿಯಿಂದ ಬಂದಾಗಲೇ ನಮ್ಮ ಹಣಮಣ್ಣನ ಅನಾರೋಗ್ಯವು ಹೆಚ್ಚಾಗಿದ್ದಿತು. ಕೆಮ್ಮಲು, ಕಫ, ಇವುಗಳ ಮೂಲಕ ಅವನು ದಿನದಿನಕ್ಕೂ ನಿತ್ರಾಣನಾಗ ತೊಡಗಿದ. ಹೊಟ್ಟೆಗೆ ಆಹಾರವು ಕಡಿಮೆಯಾಗುತ್ತಾ ನಡೆಯಿತು. ಆದುದರಿಂದ ಅವನು ಸೊರಗಿ ಹಾಸಿಗೆಯ ಕೂಡ ಹಾಸಿಗೆಯಾಗಿ ಬಿದ್ದುಕೊಂಡು ಬಿಟ್ಟಿದ್ದ. ಯಾರ ಮನಸ್ಸು ಸರಿಯಾಗಿರದ ಆ ದಿನಗಳಲ್ಲಿ ದೇವರಿಗೆ ನವರಾತ್ರಿಯ ಭಕ್ತಿಯಾದರೂ ಹೇಗೆ ದೊರೆತೀತು ? ನವರಾತ್ರಿಯ ದಿನಗಳು ಒಂದೊಂದಾಗಿ ಒಂದರ ಹಿಂದೆ ಒಂದರಂತೆ ಹೊರಟು ನಡೆದವು. ನವರಾತ್ರಿಯು ವಿಜೃಂಭಣೆಯಿಂದ ನಡೆಯಲಿಲ್ಲ. ಮಹಾನವಮಿಯೂ ಬಂದು ಹೋಯಿತು. ದಸರೆಯೂ ಬಂದು ಬನ್ನಿ ಹಂಚುವ ಸಂಪ್ರದಾಯದೊಂದಿಗೆ ಮುಕ್ತಾಯವಾಯಿತು. ದಿನದಿನಕ್ಕೂ ನಮ್ಮ ಹಣಮಣ್ಣ ಚೈತನ್ಯ ಉಡುಗಿ ಸೊರಗುತ್ತಲೇ ನಡೆದಿದ್ದ. ನಮಗೆ ಕಾಣುವಂತೆ ನಮ್ಮ ತಾಯಿ ದುಃಖವನ್ನು ಪ್ರದರ್ಶಿಸುತ್ತಿರಲಿಲ್ಲ. ಆದರೆ ಅವಳ ಮುಖದಲ್ಲಿ ಒಂದು ಮುಗುಳ್ನಗೆ ಆಗ ಕಾಣಲಿಲ್ಲ. ಹಣಮಣ್ಣನ ಹೆಂಡತಿ, ನಮ್ಮ ಅಕ್ಕ, ಮೊದಲಾದವರು ನಿಟ್ಟುಸಿರಿಡುತ್ತಲೇ ದಿನಗಳನ್ನು ಕಳೆಯುತ್ತಿದ್ದರು. ಬದುಕುವದಕ್ಕಾಗಿ ಊಟ. ಅದರ ರುಚಿಯನ್ನು ಅನುಭವಿಸುವುದಕ್ಕೆ ಸಾಧ್ಯವೇ ಇರಲಿಲ್ಲ. ದಿನಗಳು ಒಂದರ ಹಿಂದೆ ಒಂದು ಬಂದು ಹೋಗುತ್ತಿದ್ದವು. ಒಂದೊಂದೂ ಹೆಚ್ಚು ಹೆಚ್ಚು ಚಿಂತೆಯನ್ನು ತರುವ ದಿನಗಳೇ ಆಗಿದ್ದವು. ನಾವು ಎಷ್ಟೇ ಸಣ್ಣವರೆಂದರೂ ನಮ್ಮ ಹಿಗ್ಗಿನ ಕ್ಷಣಗಳನ್ನೂ ನಮ್ಮ ಹಣಮಣ್ಣನ ಅಸ್ವಾಸ್ಥ್ಯವು ಸೆಳೆದುಕೊಂಡಿದ್ದಿತು.

ದಿನಗಳು ಬರುವುದು ಹೋಗುವುದು ತಡೆಯುವುದೇ ? ದೀಪಾವಳಿಯ ಮೊದಲ ದಿನವೂ ಬಂದಿತು. ಅಂದು ಸಂಪ್ರದಾಯದಂತೆ ನಾವೆಲ್ಲ ಆರತಿ ಮಾಡಿ ಅಭ್ಯಂಗ ಸ್ನಾನ ಮಾಡಿದೆವು. ಹಣಮಣ್ಣನಿಗೆ ಅವನು ಬಿದ್ದುಕೊಂಡಲ್ಲಿಯೇ ನಿಟ್ಟುಸಿರಿಡುತ್ತ ಆರತಿಯನ್ನು ಮಾಡಿಯಾಯಿತು. ಪ್ರತಿ ವರ್ಷವೂ ದೀಪಾವಳಿಯ ಹಬ್ಬವೆಂದರೆ ಎಲ್ಲ ಹಬ್ಬಗಳಿಗೆ ಶಿಖರಸ್ವರೂಪವಾಗಿ ಕೊನೆಯಲ್ಲಿ ಸಂತೋಷವನ್ನು ಹೆಚ್ಚಿಸುವಂತಹದು. ಆದರೆ ಈ ವರ್ಷ ಹಬ್ಬದ ಸಿಹಿಯಾದ ಊಟವಾದರೂ ಅದರಲ್ಲಿ

ಯಾರಿಗೂ ಸವಿಯು ಕಂಡು ಬರಲಿಲ್ಲ. ಕಹಿತನವನ್ನೇ ಒದಗಿಸಿಕೊಟ್ಟಿತು. ದೀಪಾವಳಿಯ ಅಮಾವಾಸ್ಯೆ, ಪಾಡ್ಯಮಿ, ಭಾವಬಿದಿಗೆ, ಅಕ್ಕನ ತದಿಗೆ, ಅಮ್ಮನ ಚೌತಿ. ಪಾಂಡನ ಪಂಚಮಿ, ಎಲ್ಲವೂ ಬಂದುಹೋದವು. ದಿನಗಳು ಹೋದಂತೆಲ್ಲಾ ಹಣಮಣ್ಣನ ಅಸ್ವಾಸ್ಥ್ಯವೂ ಬೆಳೆಯುತ್ತಲೇ ನಡೆಯಿತು. ಅಂದು ಕಾರ್ತೀಕ ಶುದ್ಧ ಅಷ್ಟಮಿ. ಸಾಯಂಕಾಲ ನಾಲ್ಕೂವರೆಯ ಸಮಯವಾಗಿದೆ. ಹಣಮಣ್ಣನ ಬಳಿಯಲ್ಲಿಯೇ ಎಲ್ಲರೂ ಕುಳಿತು ನಿಟ್ಟುಸಿರಿಡುತ್ತಿದ್ದರು. ಆಗ ಹಣಮಣ್ಣನು ತನ್ನ ಹೆಂಡತಿಯನ್ನು ಹತ್ತಿರಕ್ಕೆ ಕರೆದು ಕುಳ್ಳಿರಿಸಿಕೊಂಡನು. ಅವಳ ಬಲದ ಕೈಯನ್ನೆತ್ತಿ ನಮ್ಮ ತಾಯಿಯ ಕೈಯಲ್ಲಿಟ್ಟು ಆಕೆಗೆ ತನ್ನ ತೊದಲು ಮಾತಿನಿಂದ ಏನನ್ನೋ ಹೇಳಿದನು. ಕೇಳಿದ ನಮ್ಮ ತಾಯಿಗೆ ದುಃಖವು ಒತ್ತರಿಸಿ ಬಂತು. ಆದರೂ ಅದನ್ನು ತಡೆದುಕೊಂಡು ಸಮಾಧಾನದ ಸ್ವರದಲ್ಲಿಯೇ "ನಿನಗೇನಾಗುವುದಿಲ್ಲವಪ್ಪಾ, ದೇವರು ಈ ದುರ್ಘಟನೆಯಿಂದ ನಿನ್ನನ್ನು ಪಾರುಮಾಡುತ್ತಾನೆ" ಎಂದು ಹೇಳಿ ಒಳಗೆ ಹೋಗಿ ದೇವರಿಗೆ ನಮಸ್ಕರಿಸಿ ಏನನೋ ಒಂದು ಒಡವೆಯನ್ನು ದೇವರಿಗೆ ಮುಡಿಪಾಗಿ ಕಟ್ಟಿಟ್ಟು, ಆಮೇಲೆ ಕಿರುಮನೆಗೆ ಬಂದು ನಮ್ಮ ಅಣ್ಣನ ಹತ್ತಿರವೇ ಕುಳಿತಳು.

ಆಗ ನಮ್ಮ ಕಿರಿಯ ತಮ್ಮ ವಿಜಯೇಂದ್ರ ಮೂರು ವರ್ಷದ ಸಣ್ಣ ಮಗು. ಮನೆಯಲ್ಲಿ ಏನಾದರೂ ಗದ್ದಲು-ಗಲಾಟೆ ಮಾಡಬಹುದೆಂದು ನಮ್ಮ ತಾಯಿ ಅವನನ್ನು ಹೊರಗೆ ಕರೆದುಕೊಂಡು ಹೋಗೆಂದು ಹೇಳಿದುದರಿಂದ ನಾನು ಅವನನ್ನು ಕರೆದುಕೊಂಡು ನಮ್ಮೂರ ಹನುಮಂತದೇವರ ಗುಡಿಗೆ ಹೋಗಿ ಕಟ್ಟೆಯ ಮೇಲೆ ಅವನನ್ನು ಆಡಿಸುತ್ತ ಕುಳಿತಿದ್ದೆ. ಆರೂವರೆ ಗಂಟೆಯಾದರೂ ನಾನು ಅವನನ್ನು ಆಡಿಸುವುದರಲ್ಲಿಯೇ ತೊಡಗಿದ್ದೆ. ಆಗ ನಮ್ಮ ಊರಿನ ವೆಂಕಣ್ಣ ಮಾಸ್ತರರು ಅವಸರದಿಂದಲೇ ಗುಡಿಯ ಮುಂದೆ ಹಾಯ್ದು ಹೋಗುತ್ತ "ನೀನು ಮನೆಯ ಕಡೆ ಹೋಗು" ಎಂದು ಒಂದು ವಿಧವಾದ ಧ್ವನಿಯಲ್ಲಿ ನನಗೆ ಹೇಳಿದರು. ಕೂಡಲೇ ನಾನು ನನ್ನ ತಮ್ಮನನ್ನು ಬಗಲಲ್ಲಿ ಎತ್ತುಕೊಂಡು ಮನೆಯ ಕಡೆ ಹೊರಟೆ. ಮನೆಯ ಬಳಿ ಹೋಗುವುದರಲ್ಲಿಯೇ ದೂರದಿಂದ ನನಗೆ ಮನೆಯ ಜನರೆಲ್ಲರೂ ಅಳುತ್ತಿರುವ ಕೂಗಾಟ ಕೇಳಿಸಿತು. ನಾನು ಗಾಬರಿಗೊಂಡವನಾಗಿಯೇ ಮನೆಗೆ ಹೋಗಿ ನೋಡಿದೆ.

ಭಯಂಕರ ಪರಿಸ್ಥಿತಿ. ಪಡಸಾಲೆಯಲ್ಲಿ ಕಂಬಳಿಯೊಂದನ್ನು ಹಾಸಿ ಅದರ ಮೇಲೆ ಹಣಮಣ್ಣನ ದೇಹವನ್ನು ಮಲಗಿಸಿದ್ದರು. ಅವನ ಉಸಿರಾಟವು ನಿಂತು ಹೋಗಿದ್ದಿತು. ನಾಡಿಗಳೂ ಚಲನವಲನ ಇಲ್ಲದಾಗಿದ್ದವು. ಮೈಮೇಲೆ ಎಚ್ಚರವೇನೂ ಇರಲಿಲ್ಲ. ಜನರು ಬಂದು ಬಂದು ಹೋಗತೊಡಗಿದರು. ಮನೆಯ ಜನರು ಒಂದೇ ಸಮನೆ ದುಃಖಿಸುತ್ತಿದ್ದರು. ಆಗ ಹಣಮಣ್ಣನಿಗೆ ಮರಳಿ ಉಸಿರು ಬಂದಂತಾಗಿ

ಮೂಗಿನಿಂದ ಮೆಲ್ಲನೆ ಉಸಿರಾಟದ ಧ್ವನಿ ಕೇಳತೊಡಗಿತು. ಆಗ ಅಳುವ ಜನರೆಲ್ಲರೂ ಸುಮ್ಮಗಾಗಿ ಅವನಿಗೆ ಕೊನೆಗಾಲದಲ್ಲಿ ಮಾಡಬೇಕಾದ ಸಂಸ್ಕಾರಗಳನ್ನು ಮಾಡುವ ಸಿದ್ಧತೆಗೆ ತೊಡಗಿದರು. ನಮ್ಮ ತಾಯಿಯು ಹೇಳಿಕೆಯಂತೆ ನಾನು ಗೋಪಿಚಂದನದ ನಾಮವನ್ನು ಹಣೆಗೆ ಹಚ್ಚಿ, ತುಳಸಿ ದಳಗಳನ್ನು ಕಿವಿಗಳಲ್ಲಿ ಇರಿಸಿದೆನು. ನಮ್ಮ ಬಲರಾಮಣ್ಣ ಭಾಗೀರಥಿ ನದಿಯ ನೀರಿನ ಗಿಂಡಿಯನ್ನು ಒಡೆದು ಅದರಿಂದ ನೀರನ್ನು ತೆಗೆದು ತೀರ್ಥ–ಸೌಟಿನಿಂದ ಬಾಯೊಳಗೆ ಹಾಕಿದನು. ಆದರೆ ಗುಟುಕರಿಸಿದ ಸಪ್ಪಳವೇ ಕೇಳುತ್ತಿರಲಿಲ್ಲ. ಗಂಟಲೇ ಕಟ್ಟಿಹೋದವರಂತೆ ನೀರು ಕೂಡ ಗಂಟಲಲ್ಲಿ ಇಳಿಯದಂತಾಗಿತ್ತು. ನಾನೂ ಅವನ ತೆರೆದ ಬಾಯಲ್ಲಿ ತೀರ್ಥ–ಸೌಟಿನಿಂದ ನೀರನ್ನು ಹಾಕಿದೆ. ನಮ್ಮ ತಾಯಿಯೂ ಅಳುತ್ತಳುತ್ತಲೇ ಸ್ವಲ್ಪ ನೀರನ್ನು ಬಾಯಲ್ಲಿ ಬಿಟ್ಟಳು. ಒಂದು ಹತ್ತು ನಿಮಿಷದವರೆಗೆ ಉಸಿರಾಟವು ನಡೆದೇ ಇತ್ತು. ಎಲ್ಲರೂ ಅಳುವುದನ್ನು ಶಾಂತರಾಗಿ ಕುಳಿತುಕೊಂಡಿದ್ದೆವು. ಇದ್ದುದಿದ್ದ ಹಾಗೆಯೇ ಮೂಗಿನಿಂದ ಹೊರಡುವ ಉಸಿರಾಟದ ಧ್ವನಿಗೆ ಭಂಗ ಬಂದಿತು, ಸೊರಗಿದ ಮೋರೆಯಲ್ಲಿ ಜೀವವಿಲ್ಲದ ಕಳೆಯು ನೆಲೆಸಿ ನಿಂತಿತು. ಮತ್ತೆ ಎಲ್ಲರೂ ನಾಡಿಯನ್ನು ನೋಡಿದರು. ಉಸಿರಾಟವಂತೂ ಇರಲೇ ಇಲ್ಲ. ಮೈಯೆಲ್ಲವೂ ತಂಪಾಗಿ ಹೋಯಿತು, ಆಯಿತು. ಹಣಮಣ್ಣ ಹೊರಟುಹೋದನೆಂದು ನಿರ್ಣಯಿಸಿ ಎಲ್ಲರೂ ತಮ್ಮ ಅಳುವನ್ನು ಪ್ರಾರಂಭಿಸಿದರು. ಊರಲ್ಲಿಯ ದಾಯಾದಿ ಜನರು ನಮ್ಮ ಮನೆಗೆ ಬಂದು ಬೇಗನೆ ಆ ಶವವನ್ನು ಮಸಣಕ್ಕೆ ಒಯ್ಯುವ ಕಾರ್ಯಭಾರವನ್ನು ನಡೆಸಿದರು.

ಹುಟ್ಟಿದವರು ಒಂದು ದಿನ ಹೋಗಲೇಬೇಕು ಎಂದು ಸಾಂಪ್ರದಾಯಿಕ ಹೇಳಿಕೆ ಇದ್ದರೂ ನೂರು ವರ್ಷ ಬದುಕಿ ಬಾಳಬೇಕೆಂದು ಸಂಪ್ರದಾಯವು ಹೇಳುವುದು, ಇಲ್ಲಿ ಒಂದಕ್ಕೊಂದು ವಿರೋಧ. ೨೬ ವರ್ಷದ ಹಣಮಣ್ಣನಿಗೆ ಮರಣವು ಬಂದಿತು. ಅವನ ಹೆಂಡತಿ ಅಂದು ತನ್ನ ಮಾಂಗಲ್ಯವನ್ನು ಕಳೆದುಕೊಂಡು ವಿಧವೆಯಾದಳು. ಅವನ ಶವವು ಮಸಣಕ್ಕೆ ಹೊರಟು ಹೋಯಿತು. ಆದರೆ ಮನೆಯಲ್ಲಿಯ ಜನರ ಅಳುವು ಕಡಿಮೆಯಾಗಲಿಲ್ಲ. ಹಣಮಣ್ಣನ ಜೀವನದ ಆಗು–ಹೋಗುಗಳನ್ನು ನೆನೆಸಿ ನೆನೆಸಿಕೊಂಡು ಮತ್ತೆ ಮತ್ತೆ ಅಳುವರು. ಸತ್ತವರಿಗಾಗಿ ಅಳುವು ಹೇಗೆ ಬರುವುದು ನೈಸರ್ಗಿಕವೋ, ಜೀವಿಸಿದ್ದ ಮನುಷ್ಯನ ಕಣ್ಣಿಗೆ ನಿದ್ರೆ ಬರುವುದು ನಿಸರ್ಗ ನಿಯಮ. ಅಂದು ಮಧ್ಯರಾತ್ರಿಗೆ ಎಲ್ಲರ ಕಣ್ಣನ್ನೂ ನಿದ್ರೆಯ ಮಾಯೆಯು ಆವರಿಸಿರಬಹುದು. ಎಲ್ಲರೂ ಮಲಗಿ ಏನೇನೋ ಕನಸುಗಳನ್ನು ಕಾಣುತ್ತ ನಿದ್ದೆಯಲ್ಲಿ ಆ ದುಃಖದ ರಾತ್ರಿಯನ್ನು ಕಳೆದರು. ಮನೆಯಲ್ಲಿ ಮೂರು ಜನ ಹೆಂಗಸರೂ ವಿಧವೆಯರಾದರು. ಮುತ್ತೈದೆ ಮನೆಗೆ ಬಂದರೆ ಕುಂಕುಮ ಹಚ್ಚುವುದಕ್ಕೆ ಒಬ್ಬ ಮುತ್ತೈದೆಯೂ ಮನೆಯಲ್ಲಿ ಇಲ್ಲದಂತಾಯಿತು. ಇದನ್ನು ಸ್ಮರಿಸಿಕೊಂಡು ಮತ್ತೆ ಮತ್ತೆ ನಮ್ಮ ತಾಯಿ ಕಣ್ಣೀರು ಸುರಿಸುವಳು.

ಜನವರಿ–ಫೆಬ್ರುವರಿ ೧೯೬೧/೬೧

ಅಣ್ಣ ಸತ್ತರೆ ಅಮಾವಾಸ್ಯೆ ನಿಲ್ಲುವುದೇ ? ದಿನಗಳು ಒಂದರ ಹಿಂದೆ ಒಂದರಂತೆ ಹೋಗಿ ಕರುಳಿನ ದುಃಖದುರಿಯನ್ನು ಕಡಿಮೆ ಮಾಡಿದವು. ಮತ್ತೆ ಎಲ್ಲರ ದೃಷ್ಟಿಯೂ ತಮ್ಮ ತಮ್ಮ ಜೀವನದ ಕಡೆಗೆ ಹೊರಳಿ ನಿಂತಿತು. ನನಗೆ ಏನನ್ನೋ ವಸ್ತುವನ್ನು ಕಳೆದುಕೊಂಡಂತೆ ತಿಂಗಳಾನುತಿಂಗಳು ಮನದ ಹಳಹಳಿಯು ಕಡಿಮೆಯಾಗಲಿಲ್ಲ. ಆದರೂ ದಿನಗಳನ್ನು ಹೇಗೋ ಕಳೆದೆ. ವಾಚನವು ನನಗೊಂದು ಹವ್ಯಾಸವಾದುದರಿಂದ ಅದರತ್ತ ತಿರುಗಿ ದುಃಖವನ್ನು ಮರೆಯತೊಡಗಿದೆ.

ತಿಂಗಳು ಕಳೆದವು. ನಮ್ಮ ಊರಿಗೆ ಬಳ್ಳಾರಿ ಶೆಟ್ಟರು ಪ್ರಕಟಿಸಿದ ಪುಸ್ತಕಗಳ ಮಾರಾಟ ಮಾಡುತ್ತ ಒಬ್ಬ ವ್ಯಾಪಾರಿಯು ಬಂದ. ಅಂಗಡಿಯನ್ನೂ ಹಚ್ಚಿದ. ನಾನು ಆ ಪುಸ್ತಕಗಳನ್ನು ನೋಡಿ ಸಂತೋಷದಿಂದ, ಅಪೂರ್ವವಾದ ಗ್ರಂಥಗಳೇನಾದರೂ ಇವೆಯೋ ಎಂದು ನೋಡತೊಡಗಿದೆ. ಎಲ್ಲವೂ ನನಗೆ ಬೇಡವಾದ ಪುಸ್ತಕಗಳೇ ಆಗಿದ್ದವು. ಕಾರಣವೆಂದರೆ ಎಷ್ಟೋ ಗ್ರಂಥಗಳನ್ನು ನಾನು ಅಂಗಡಿಯ ಅಪ್ಪಯ್ಯನಲ್ಲಿ ತಂದು ಓದಿಕೊಂಡಿದ್ದೆ. ಇನ್ನು ಕೆಲವು ಮೈಸೂರು ಕಡೆಯ ನಾಟಕಗಳು, ಇನ್ನು ಕೆಲವು ವ್ಯಾಪಾರಿ ವೃತ್ತಿಯ ಜ್ಯೋತಿಷ, ವೈದ್ಯಕಗಳನ್ನು ತಿಳಿಸುವ ಗ್ರಂಥಗಳು. ಮತ್ತೆ ಕೆಲವು ಕಾಯ್ದೆ ಪುಸ್ತಕಗಳು. ನನಗೆ ಇವಾವುವೂ ಬೇಡವೆನಿಸಿದವು. ನಾನು ಎರಡು ಪುಸ್ತಕಗಳನ್ನು ಆರಿಸದೆ ಇರಲಿಲ್ಲ. ಒಂದು ಷಡಕ್ಷರಿ ಕವಿಯ 'ಶಬರಶಂಕರ ವಿಳಾಸ', ಇನ್ನೊಂದು ನಿಜಗುಣ ಶಿವಯೋಗಿಯ 'ಕೈವಲ್ಯ ಪದ್ಧತಿ'. ಎರಡರ ಅಚ್ಚೂ ಅಚ್ಚುಕಟ್ಟಾಗಿರಲಿಲ್ಲ. ಕಂದು ಬಣ್ಣದ ಕಾಗದಗಳು. ಆದರೆ ಆ ಹೊತ್ತು ನಾನು ನಮ್ಮ ಅಣ್ಣ(ಚಿಕ್ಕಮ್ಮನ ಮಗ)ನೊಬ್ಬನ ಬಾಯಿಂದ ಷಡಕ್ಷರಿ ಕವಿಯ ಮುಖ್ಯಕೃತಿಯಾದ 'ರಾಜಶೇಖರ ವಿಳಾಸ'ದ ಹೆಸರನ್ನು ಕೇಳಿದ್ದೆ. ಅದರಲ್ಲಿಯ ತಿರುಕೊಳವಿನಾಚಿಯ ಕಥೆಯನ್ನೊಳಗೊಂಡ ಪದ್ಯಗಳನ್ನು ಕೇಳಿ ಅರ್ಥ ತಿಳಿದುಕೊಂಡಿದ್ದೆ. ಈಗ ಅದೇ ಕವಿಯ 'ಶಬರಶಂಕರ ವಿಳಾಸ'ವು ಈ ವ್ಯಾಪಾರಿಯ ಬಳಿ ದೊರೆತುದರಿಂದ ಅದನ್ನು, ಅದರ ಜೊತೆಗೆ ಒಂದು ಇರಲೆಂದು ನಿಜಗುಣ ಶಿವಯೋಗಿಯ 'ಕೈವಲ್ಯ ಪದ್ಧತಿ'ಯನ್ನು ನಾನು ತೆಗೆದುಕೊಂಡೆ. ಆ ವ್ಯಾಪಾರಿಗೆ ದೊರೆತ ನಮ್ಮೂರಲ್ಲಿಯ ಗಿರಾಕಿಗಳೆಂದರೆ ನಾನೊಬ್ಬನೇ. ತೆಗೆದುಕೊಂಡ ಪುಸ್ತಕದ ಬೆಲೆಯೂ ಹೆಚ್ಚಾಗಿರಲಿಲ್ಲ. ಮೇಲೆ ಬರೆದ ಬೆಲೆಯ ಪ್ರಕಾರ ಅವುಗಳ ಬೆಲೆ ಐದು ರೂ.ಗಳಾಗಬಹುದಾಗಿತ್ತು. ಆದರೆ ನನಗೆ ಎರಡೂ ಪುಸ್ತಕಗಳೂ ಸೇರಿ ಒಂದು ರೂ.ಗೆ ದೊರೆತವು. ನನಗೆನಿಸಿತು ಏನೆಂದರೆ ಈ ವ್ಯಾಪಾರಿಗೆ ಈ ಪುಸ್ತಕಗಳು ಪುಕ್ಕಟೆಯಾದರೂ ಸಿಕ್ಕಿರಬೇಕು ಅಥವಾ ಕಳ್ಳತನದಿಂದಾದರೂ ದೊರತಿರಬೇಕು, ಎಂದು. ಹೆಚ್ಚಿನ ವಿಚಾರವನ್ನು ನಾನೇಕೆ ಮಾಡಬೇಕು. ನನಗೆ ಅಲ್ಪ ಬೆಲೆಯಲ್ಲಿ ಇವು ದೊರೆ

ತುದೇ ಸಮಾಧಾನದ ಸಂಗತಿಯಾಗಿತ್ತು. ನಮ್ಮ ತಾಯಿಯು ಕಡೆಯಿಂದ ಒಂದು ರೂ.ವನ್ನು ಪಡೆದು ಆ ಪುಸ್ತಕಗಳೆರಡನ್ನೂ ಮನೆಗೆ ತಂದೆ.

'ಶಬರಶಂಕರ ವಿಳಾಸ'ವನ್ನು ಓದಲು ನಾನು ಪ್ರಾರಂಭಿಸಿದೆ. ಆದರೆ ಅದ ರಲ್ಲಿಯ ಸಂಸ್ಕೃತ ಪದಗಳ, ಹಳಗನ್ನಡ ಶಬ್ದಗಳ ಭೂಯಿಷ್ಠತೆಯಿಂದ ನನಗೆ ಆ ಕಾವ್ಯವು ಉಕ್ಕಿನ ಕಡಲೆಯಾಗಿ ಕಂಡಿತು. ಅದು ಸಟೀಕ ಗ್ರಂಥವಾದುದರಿಂದ ಕೆಳಗೆ ಬರೆದ ಟೀಕೆಯು ಸಹಾಯದಿಂದ ಆ ಕಾವ್ಯದ ಪದ್ಯಗಳ ಅಲ್ಪಸ್ವಲ್ಪ ಅರ್ಥವನ್ನು ಮಾಡಿಕೊಂಡೆ. ನಿಜಗುಣ ಶಿವಯೋಗಿಯು 'ಕೈವಲ್ಯ ಪದ್ಧತಿ'ಯೊಳಗಂತೂ ಸುಂದರವಾದ ಕೀರ್ತನೆಗಳೇ ತುಂಬಿದ್ದವು. ಅವು ಓದಿಕೊಂಡರೆ ಅರ್ಥವಾಗುವಂತಹ ಪದ್ಯಗಳು. ಐಕ್ಯ ಪದ್ಧತಿಯೊಳಗಿನ ವೇದಾಂತದ ಅರ್ಥವು ಸುಲಭವೆನಿಸುವಂತಹದಲ್ಲ. ಅದಕ್ಕಾಗಿ ತಲೆಯನ್ನು ನೋಯಿಸಿಕೊಳ್ಳಲೇಬೇಕು. ಹಿರಿಯರಿಂದ ಆ ವೇದಾಂತ ಭಾಗವನ್ನು ಅರ್ಥ ಮಾಡಿಸಿಕೊಳ್ಳಲೇಬೇಕು. ಪುಸ್ತಕಕ್ಕಾಗಿ ನನಗೆ ಒಂದು ರೂ.ಯನ್ನು ಕೊಟ್ಟು, ನನ್ನ ತಾಯಿ ಅದನ್ನು ಓದಿಸಿ ಕೇಳಿ ನಿರಾಶಳಾದಳು. ಎರಡೂ ಪದ್ಯ ಪುಸ್ತಕಗಳು. ಇವೇನೂ ರಾಮಾಯಣ, ಮಹಾಭಾರತವಲ್ಲ. ಭಾಗವತ–ಪುರಾಣಗಳಲ್ಲ; ಕತೆ–ಕಾದಂಬರಿಗಳಲ್ಲ; ಆದರೂ ನನಗೆ ಓದಿಕೊಂಡು ಹೆಚ್ಚು ಕನ್ನಡದ ಜ್ಞಾನ ಆಗಬಹುದೆಂದು ಆಗ ರೂ. ಕೊಟ್ಟುದಕ್ಕೆ ಸಮಾಧಾನವನ್ನೇ ತಂದುಕೊಂಡಳು.

ನಮ್ಮ ತಂಗಿಗೆ ಫಾಲ್ಗುಣ ಮಾಸಕ್ಕೆ ಹತ್ತು ವರ್ಷಗಳು ತುಂಬಿದ್ದವು. ಆಂದಿನ ಹಿರಿಯರಿಗೆ ಕನ್ಯೆ ಹತ್ತು ವರ್ಷದವಳಾದಳೆಂದರೆ ತಮ್ಮನ್ನು ತಾವೇ ಅಪರಾಧಿಗಳೆಂದು ಭಾವಿಸುತ್ತಿದ್ದರು. ಈಗ ಹಣಮಣ್ಣನ ದುಃಖವು ಸ್ವಲ್ಪ ಮರೆಯಾಗಿ ಆ ಸ್ಥಳವನ್ನು ತಂಗಿಯ ಮದುವೆಯ ಚಿಂತೆಯು ವ್ಯಾಪಿಸಿಕೊಂಡಿತು. ನಮಗೆ ಯಾವ ರೀತಿಯಿಂದಲೂ ಮದುವೆ ಮಾಡಿಕೊಡುವ ಸಾಮರ್ಥ್ಯವಿರಲಿಲ್ಲ. ಕಳೆದೆರಡು ವರ್ಷಗಳೆಂದರೆ ನಮ್ಮ ಆದಾಯಕ್ಕೆ ಇಳಿಗಾಲದ ದಿನಗಳಾಗಿದ್ದವು. ಜಲಪ್ರಳಯ ಕಾಲದಲ್ಲಿಯ ಜೋಳದ ನಾಶ, ಕಣಿಕೆ– ಬಣಿವೆಯ ನಷ್ಟ ಅಲ್ಲದೆ ಅಣ್ಣನ ಗರ್ಭಾದಾನ ಕಾಲದ ಖರ್ಚು, ಪ್ಲೇಗು ರೋಗದಲ್ಲಿ ಮಾಡಬೇಕಾದ ಖರ್ಚು, ನಮ್ಮ ಹಣಮಣ್ಣನ ಸಾವು, ಇವುಗಳಿಂದ ನಮ್ಮ ಆರ್ಥಿಕ ಪರಿಸ್ಥಿತಿಯು ಜರ್ಝರಿತವಾಗಿ ಹೋಗಿತ್ತು.

ತಂಗಿ, ನೋಡಲು ಚಿನ್ನದ ಬೊಂಬೆಯಂಥ ಹುಡುಗಿ, ಸಿರಿವಂತರ ಮನೆಗೆ ಬೀಳಬೇಕಾದಷ್ಟು ದೇಹ ಸೌಂದರ್ಯದವಳು. ಆದರೆ ಸಿರಿವಂತರಾದರೂ ಪುಕ್ಕಟೆಯಾಗಿ ಲಗ್ನವನ್ನು ಮಾಡಿಕೊಳ್ಳಲು ಉದಾರಿಗಳಾರಿರುವರು ? ಈ ಗೌರಿಯಂತಹ ಹುಡುಗಿಯನ್ನು ಯಾರಾದರೂ ಕುರೂಪಿಯಾದವನಿಗೆ ಕೊಟ್ಟರೆ ತಾನು ಕೊನೆಯ ವರೆಗೂ ದುಃಖಿಸಬೇಕಾಗುವದೆಂದು ನಮ್ಮ ತಾಯಿ ಭಾವಿಸಿದಳು. ನಮ್ಮ ಆ

ತಂಗಿಯ ಚೆಲುವಿನ ಬಗ್ಗೆ ಬಹಳ ಮಾತಿನಿಂದ ಬಣ್ಣಿಸಿ ಹೇಳದೆ ಅವಳ ಜೀವನದಲ್ಲಿ ಘಟಿಸಿದ ಒಂದು ಸಂಗತಿಯನ್ನು ನಾನಿಲ್ಲಿ ಹೇಳಬೇಕೆಂದಿದ್ದೇನೆ.

ನಮ್ಮ ತಂಗಿಗಾಗ ಐದು ವರ್ಷದ ವಯಸ್ಸು. ಶ್ರಾವಣ ಮಾಸದ ಮೊದಲ ಶುಕ್ರವಾರದ ದಿವಸ. ನಮ್ಮ ತಾಯಿ ಅವಳಿಗೆ ಅಭ್ಯಂಗ ಸ್ನಾನವನ್ನು ಮಾಡಿಸಿ ನೀಳವಾದ ಕಪ್ಪುಗೂದಲನ್ನು ಹಸಿಯಾರಲೆಂದು ಬೆನ್ನಮೇಲೆ ಹಾಗೆಯೇ ಬಿಟ್ಟಿದ್ದರು. ಹಾಲಮೇಲಿನ ಕೆನೆಯಂತಹ ನುಣುಪಾದ ಬಿಳಿಯ ಮೈ. ಅವಳು ಆಡುತ್ತ ತನ್ನ ಗೆಳತಿಯೊಬ್ಬಳ ಮನೆಗೆ ಹೋದಳಂತೆ. ಅವಳೂ ನಮ್ಮ ತಂಗಿಯ ವಯಸ್ಸಿನ ಹುಡುಗಿ, ಆಕೆ ನಮ್ಮ ತಂಗಿಯನ್ನು ನೋಡಿ 'ನನ್ನನ್ನು ಈ ತಂಗೆವ್ವನಂತೆ ಮಾಡು,' ಎಂದು ಅಳಹತ್ತಿದಳಂತೆ. ಆಗ ಆ ಹುಡುಗಿಯ ಅಜ್ಜಿ "ಕರಿಯ ಮರದ ಗೊಂಬೆಯತಿರುವ ನಿನ್ನನ್ನು ಆಕೆಯ ಹಾಗೆ ಗೌರವರ್ಣದವಳನ್ನಾಗಿ ಹೇಗೆ ಮಾಡಬೇಕು ? ಚೋಟುದ್ದದ ಕೂದಲೂ ಬೆಳೆಯದಿರುವ ನಿನಗೆ ಅವಳಂತಹ ಉದ್ದ ಕೂದಲುಗಳನ್ನು ಹೇಗೆ ಮಾಡಲಿ ಎಂದು ಸಿಟ್ಟು ಮಾಡಿ, ಅದೇ ನೆಪದಿಂದ ಆ ಹುಡುಗಿಗೂ ಎಣ್ಣೆನೀರು ಹಾಕಿದಳಂತೆ. ಸೀಗೆಕಾಯಿ ಮೈಗೆ ಹಚ್ಚಿ ಸ್ವಚ್ಛವಾಗಿ ತೊಳೆದಳಂತೆ. ಸ್ನಾನ ಮಾಡಿ ಮೈಯನ್ನು ಒರಸಿದ ಮೇಲೆ ಆ ಹುಡುಗಿ "ನಾನು ತಂಗೆವ್ವನಂತೆ ಆಗಲಿಲ್ಲವಲ್ಲ" ಎಂದು ಅಳಲು ತೊಡಗಿದಳಂತೆ. ಆಗ ಆ ಮುದುಕಿ ಆ ಹುಡುಗಿಯನ್ನು ನಮ್ಮ ತಾಯಿಯ ಕಡೆಗೆ ಕರೆದುಕೊಂಡು ಬಂದು "ಈ ಕತ್ತೆಯ ಮರಿಯನ್ನು ಕುದುರೆಯ ಮರಿಯನ್ನಾಗಿ ನಾನು ಮಾಡಬೇಕಂತೆ. ತಂಗೆವ್ವನಂತಹ ಮೈ ಬಣ್ಣವನ್ನೂ, ಕೂದಲುಗಳನ್ನೂ, ಸಮವಾದ ಹಲ್ಲುಗಳನ್ನೂ, ನಾನೆಲ್ಲಿಂದ ಇವಳಿಗೆ ತಂದು ಕೊಡಲಿ" ಎಂದು ಸಮಸ್ಯೆಯ ಸ್ವರದಲ್ಲಿ ಹೇಳಿದಳಂತೆ. ಆಗ ನಮ್ಮ ತಾಯಿ ಆ ಹುಡುಗಿಗೇನೋ ಸವಿತಿನಿಸನ್ನು ಕೊಟ್ಟು 'ಅದನ್ನು ತಿಂದರೆ ನೀನೂ ತಂಗೆವ್ವನ ಹಾಗೆ ಆಗುತ್ತಿ' ಎಂದು ಹೇಳಿ ಸಮಾಧಾನ ಪಡಿಸಿ ಕಳಿಸಿದರಂತೆ.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನಮ್ಮ ತಂಗೆವ್ವನಂತಹ ಸುಸ್ವರೂಪಿಗಳು ಸಿಕ್ಕುವುದು ಸಾವಿರಕ್ಕೆ ಒಬ್ಬರೋ, ಇಬ್ಬರೋ. ಆದರೆ ಅಂತಹ ಹುಡುಗಿಯ ಮದುವೆಯ ಸಮಸ್ಯೆಯು ಇಂದು ನಮ್ಮ ತಾಯಿಯ ಹೃದಯವನ್ನು ಚೇಳಿನಂತೆ ಕುಟುಕುತ್ತಿತ್ತು. ಅವಳ ಮದುವೆಯ ವಿಚಾರಕ್ಕೆ ನಮ್ಮ ಬಡತನವು ಒಂದು ಕೋಟೆಯ ಗೋಡೆಯಾಗಿ ಪರಿಣಮಿಸಿತು. ಯಾರು ಯಾರೋ ಬಂದು ಆ ಹುಡುಗಿಯನ್ನು ಮದುವೆಗೆಂದು ಕೇಳಿದರು. ಆದರೆ ಆ ವರನು ಮುದುಕನೋ, ಇಮ್ಮನಿವರನೋ, ಕುರೂಪಿಯೋ ಆಗಿರುತ್ತಿದ್ದನು. ಅಂತಹವನಿಗೆ ಕೊಡಲು ನಮ್ಮ ತಾಯಿಯ ಮನಸ್ಸು ಮೆಚ್ಚದು. ಎಂತಲೇ ಅವಳ ಮದುವೆಯ ವಿಚಾರವು ಅವಳ ತಲೆಯನ್ನು ಒಂದೇ ಸಮನೆ ತಿನ್ನುತ್ತಲಿತ್ತು.

ಹೊಸ ಓದು

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ (ವಿಮರ್ಶೆ)

ಲೇಖಕರು: **ಟಿ. ಪಿ. ಅಶೋಕ**
ಪ್ರಕಾಶಕರು: ಕರ್ನಾಟಕ ಸಂಘ, ಪುತ್ತೂರು (ದ.ಕ.)
ಪುಟ: 63, ಬೆಲೆ: ರೂ. 15/-

ಸಮಕಾಲೀನ ಕನ್ನಡ ವಿಮರ್ಶೆಯ ಮಹತ್ತ್ವದ ಹೆಸರು ಅಶೋಕ. ನವ್ಯ ವಿಮರ್ಶೆಯ ಆಕೃತಿ ಸೂಕ್ಷ್ಮಗಳ ಗ್ರಹಿಕೆ ಮತ್ತು ಬಂಡಾಯ ವಿಮರ್ಶೆಯ ಎಡ ಪಂಥೀಯ ಒಲವಿನ ಸ್ಥೂಲ ಸ್ವೀಕರಣೆಯಿಂದಾಗಿ ಅವರ ವಿಮರ್ಶೆಗೆ ಒಂದು ಬಗೆಯ ಹೊಸತನ, ಲವಲವಿಕೆ ಸಿದ್ಧಿಸಿದೆ. ಅಶೋಕರ ಈ ವಿಮರ್ಶಾ ಕೃತಿಯಲ್ಲಿ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಕಾಣಿಸಿಕೊಂಡಿರುವ ಆಧುನಿಕೀಕರಣ ಪ್ರಕ್ರಿಯೆಯನ್ನು ಶಿಸ್ತುಬದ್ಧವಾಗಿ ಚರ್ಚಿಸುವ ಕೆಲಸ ನಡೆದಿದೆ. ಕೃತಿಯ ಹೆಸರೇ ಸೂಚಿಸುವಂತೆ ಇದು ಕಾರಂತರ ಕಾದಂಬರಿಗಳನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳುವ ವಿಧಾನವೇನೂ ಅಲ್ಲ. ಬದಲು ಕಾದಂಬರಿಯ ಅನೇಕ ಆಯಾಮಗಳಲ್ಲಿ ಒಂದನ್ನು ಪರಿಶೀಲಿಸುವ ಪ್ರಯತ್ನ. ಈ ಬಗೆಯ ಕೆಲಸ ಕನ್ನಡದಲ್ಲಿ ಹೆಚ್ಚು ನಡೆದಿಲ್ಲ ಎಂಬ ಕಾರಣಕ್ಕೆ ಈ ಕೃತಿ ಮುಖ್ಯವಾಗುತ್ತದೆ ಮಾತ್ರವಲ್ಲ ಕೃತಿಯುದ್ದಕ್ಕೂ ಅಶೋಕರು ತಲುಪುವ ಅಂತಿಮ ನೆಲೆಗಳು ಸತಾರ್ಕಿಕವೂ ಸಕಾರಣವೂ ಆಗಿರುವುದರಿಂದ ವಿಮರ್ಶಾ ವಿಧಾನದ ದೃಷ್ಟಿಯಿಂದಲೂ ತುಂಬ ಮಹತ್ತ್ವದ್ದಾಗುತ್ತದೆ.

ತನ್ನ ವಿಮರ್ಶೆಯ ಉದ್ದೇಶದ ಕುರಿತು ಅವರು ಪ್ರಾಸಂಗಿಕವಾಗಿ ಪ್ರಸ್ತಾಪಿಸಿದ್ದಾರೆ–"ಕಾರಂತರ ಎಲ್ಲ ಕಾದಂಬರಿಗಳ ಸಮೀಕ್ಷೆ ಈ ಪ್ರಬಂಧದ ಗುರಿಯಲ್ಲ. ಆಧುನೀಕರಣದ ಪ್ರಕ್ರಿಯೆಯ ಕೆಲವು ವಿನ್ಯಾಸಗಳನ್ನು ಅಭ್ಯಾಸ ಮಾಡುವುದಷ್ಟೇ ಇಲ್ಲಿನ ಉದ್ದೇಶ. ಹಾಗಾಗಿ ಕಾರಂತರ ಎಲ್ಲ ಕಾದಂಬರಿಗಳ ಸಮೀಕ್ಷೆ ಈ ಪ್ರಬಂಧದ ಗುರಿಯಲ್ಲ. ಆಧುನೀಕರಣದ ಪ್ರಕ್ರಿಯೆಯ ಕೆಲವು ವಿನ್ಯಾಸಗಳನ್ನು ಅಭ್ಯಾಸ ಮಾಡುವುದಷ್ಟೇ ಇಲ್ಲಿನ ಉದ್ದೇಶ. ಹಾಗಾಗಿ ಕಾರಂತರ ಎಲ್ಲ ಕಾದಂಬರಿಗಳ ಪ್ರಸ್ತಾಪ

ಇಲ್ಲಿ ಬರುವುದಿಲ್ಲ. ಅಷ್ಟೇ ಅಲ್ಲ, ಕಾರಂತರ ಯಾವುದೇ ಬಿಡಿ ಕಾದಂಬರಿಯ ಸಮಗ್ರ ಅಧ್ಯಯನಕ್ಕೂ ಇಲ್ಲಿ ಸ್ಥಳವಿಲ್ಲ. ಕಾರಂತರ ಕಾದಂಬರಿಗಳಲ್ಲಿನ ಒಂದು ಮುಖ್ಯ ವಸ್ತುವನ್ನು ಅಭ್ಯಾಸ ಮಾಡುವುದಷ್ಟಕ್ಕೇ ಈ ಪ್ರಬಂಧ ಸೀಮಿತವಾಗಿದೆ" (ಪುಟ 26) ಇಷ್ಟು ಮಾತನ್ನು ಅವರು ಬಹಳ ಸ್ಪಷ್ಟವಾಗಿ ಹೇಳಿರುವುದರಿಂದಾಗಿ ಕೆಲವು ಪ್ರಶ್ನೆಗಳನ್ನು ಎತ್ತಬೇಕೆಂಬ ಮನಸ್ಸಿದ್ದರೂ ಎತ್ತಲಾರದೇ ಹೋಗಬೇಕಾಗಿದೆ–ಏಕೆಂದರೆ ವಿಮರ್ಶಕನ ಉದ್ದೇಶವಲ್ಲದ್ದನ್ನು ಅವನ ಮೇಲೆ ಹೊರಿಸುವ ಕೆಲಸ ಮಾಡಬಾರದಷ್ಟೆ !

ಅಶೋಕರು ತನ್ನ ಉದ್ದೇಶ ಏನೆಂಬುದನ್ನು ಹೇಳಿದ್ದಾರೋ, ಅದಷ್ಟನ್ನು ಬಹಳ ಸಮರ್ಪಕವಾಗಿ ಈ ಕೃತಿಯಲ್ಲಿ ಮಾಡಿದ್ದಾರೆ. 'ಆಧುನೀಕರಣ' ಎಂಬ ಬಹು ಚರ್ಚಿತ ಶಬ್ದವನ್ನು ತಾನು ಹೇಗೆ ನೋಡುತ್ತಿದ್ದೇನೆ ಎಂಬುದನ್ನು ಅಲ್ಲಲ್ಲಿ ಸ್ಪಷ್ಟಪಡಿಸುತ್ತಾ ಹೋಗಿದ್ದಾರೆ. ವಸಾಹತುಶಾಹಿ ಆಳ್ವಿಕೆ ಭಾರತದ ಮೇಲೆ ಉಂಟು ಮಾಡಿದ ಪರಿಣಾಮವನ್ನೂ, ಅದಕ್ಕೆ ಭಾರತೀಯ ಮನಸ್ಸುಗಳು ಪ್ರತಿಕ್ರಿಯಿಸಿದ ಬಗೆಯನ್ನೂ ಸ್ಥೂಲವಾಗಿ ಆಧುನೀಕರಣ ಎಂದು ಅವರು ಗುರುತಿಸಿದ್ದಾರೆ. ಆದರೆ ಈ ಬಗೆಯ ಆಧುನೀಕರಣದ ಪರಿಕಲ್ಪನೆಯು ಮೌಲಿಕವಾಗಿ ಹೇಗೆಂಬುದರ ಬಗೆಗೆ ಅವರು ಚರ್ಚೆ ನಡೆಸುವುದಿಲ್ಲ. ಅಂದರೆ ಚರ್ಚೆ ನಡೆಸಲೇಬೇಕಾದ ಕಡೆ ಚರ್ಚಿಸದೆ ಅಶೋಕರು ಮುಂದೆ ಹೋಗಿದ್ದಾರೆ. ಕೆಲವು ವರ್ಷಗಳ ಹಿಂದೆ ಕುವೆಂಪುರವರು ಹೇಳಿದ ಮಾತು ಇಲ್ಲಿ ನೆನಪಿಗೆ ಬರಬೇಕು. "ಬ್ರಿಟಿಷರು ಬರದೇ ಇರುತ್ತಿದ್ದರೆ ನಾನು ಈಗ ಬ್ರಾಹ್ಮಣರ ಮನೆಯಲ್ಲಿ ಸೆಗಣಿ ಹೆಕ್ಕುತ್ತಿದ್ದೆ" ಎಂಬ ಅವರ ಮಾತು ವಸಾಹತೀಕರಣದ ಮೂಲಕ ಬಂದ ಆಧುನೀಕರಣವನ್ನು ಮುಕ್ತವಾಗಿ ಸ್ವೀಕರಿಸುವುದೇ ಆಗಿದೆ. ವರ್ತಮಾನ ಕಾಲದಲ್ಲಿ ಶೂದ್ರರೂ, ದಲಿತರೂ ಇದೇ ಬಗೆಯ ಧೋರಣೆ ಹೊಂದಿದ್ದಾರೆ. ಆದರೆ ರಾಜಕೀಯ ಚಿಂತಕರೂ, ಸಮಾಜ ಶಾಸ್ತ್ರಜ್ಞರೂ 'ವಸಾಹತೀಕರಣದಿಂದ ಶೂದ್ರರೂ, ದಲಿತರೂ ಇನ್ನಷ್ಟು ಬಂಧನಗಳಿಗೆ ಒಳಗಾಗಿದ್ದಾರೆ' ಎಂಬಂಥ ಮಾತುಗಳನ್ನು ಆಡಿದ್ದಾರೆ. ಇವೆರಡರಲ್ಲಿ ಯಾವುದು ನಿಜ ? ಅಥವಾ ಅಶೋಕರು ಇವೆರಡು ನಿಲುವುಗಳಲ್ಲಿ ಯಾವುದನ್ನು ಆಯ್ದುಕೊಳ್ಳುತ್ತಾರೆ ? ಇಂಥ ಕುತೂಹಲದ ಪ್ರಶ್ನೆಗೆ ಎಡೆಯೇ ಇಲ್ಲದಂತೆ ಅಶೋಕರು ಬರೆಯುತ್ತಾರೆ–"ಈ ಆಧುನಿಕತೆ ಒಂದು ವರವೋ ಶಾಪವೋ ಎಂಬ ದ್ವಂದ್ವದಿಂದ ನಾವಿನ್ನೂ ತಪ್ಪಿಸಿಕೊಂಡಿಲ್ಲ–ಇಂಥದ್ದೊಂದು ಸಾಂಸ್ಕೃತಿಕ ದ್ವಂದ್ವವೇ ತೃತೀಯ ಜಗತ್ತಿನ ಪ್ರಧಾನ ಧಾರೆಯ ಕಥಾ ಸಾಹಿತ್ಯದ ಮೂಲವಸ್ತುವಾಗಿದೆ" (ಪುಟ 6). ಅಂದರೆ ಅಶೋಕರ ಕೆಲಸ ಇಲ್ಲಿ ವೀಕ್ಷಕನದ್ದು, ಪಕ್ಷ ವಹಿಸುವುದು ಅಲ್ಲ. ಎಂದಂತಾಯಿತು.

ಇಂಥ ನಿಲುವುಗಳನ್ನು ಪ್ರಶ್ನಿಸಬಹುದಾದರೂ, ಇಂಥ ನಿಲುವುಗಳು ಕೃತಿಯೊಂದರ ಅರ್ಥಗ್ರಹಣಕ್ಕೆ ಸಹಕಾರಿಯಾಗುವ ಬಗೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಸ್ವಲ್ಪ ಉದಾರವಾಗಿ ಹೇಳುವುದಾದರೆ ಇದು 'ಪಕ್ಷ'ವಾದ ನಿಲುವು. ಆಧುನಿಕೀಕರಣ ವನ್ನು ಶಾಪವೆಂದೋ, ವರವೆಂದೋ ಗ್ರಹಿಸುವ ಬರೆಹಗಳಿಂದ ಭಿನ್ನವಾದ ನಿಲುವು ಇದಾದುದರಿಂದ ಈ ಬಗೆಯ ನಿಲುವುಗಳಿಂದ ಹೊರಡುವ ವಿಮರ್ಶೆಗೆ ತನ್ನದೇ ಆದ ಒಂದು ಬಗೆಯ ಸಮತೋಲನದ ದೃಷ್ಟಿ ಪ್ರಾಪ್ತಿಸುತ್ತದೆ. ಅಶೋಕರದು ಅಂಥ ನಿರ್ಮಮ ನಿಲುವು.

ಈ ನಿಲುವಿನಿಂದ ಅಶೋಕರು **ಚೋಮನ ದುಡಿ, ಕುಡಿಯರ ಕೂಸು, ಶನೀಶ್ವರನ ನೆರಳು, ಮರಳಿ ಮಣ್ಣಿಗೆ, ಔದಾರ್ಯದ ಉರುಳಲ್ಲಿ, ಉಕ್ಕಿದ ನೊರೆ** ಮತ್ತು **ಸಮೀಕ್ಷೆ** ಕಾದಂಬರಿಗಳಲ್ಲಿ ಪ್ರಕಟವಾದ ಆಧುನೀಕರಣ ಪ್ರಕ್ರಿಯೆ ಯನ್ನು ಶಿಸ್ತುಬದ್ಧವಾಗಿ ಗುರುತಿಸುತ್ತಾ ಹೋಗಿದ್ದಾರೆ.

ಈ ನಿಟ್ಟಿನಲ್ಲಿ ಕಾರಂತರ ನಿಲುವನ್ನು ಪ್ರಾತಿನಿಧಿಕವಾಗಿ ಪ್ರಕಟಪಡಿಸುವ ಕೃತಿ ಯೆಂದರೆ 'ಚೋಮನ ದುಡಿ'. ಅಶೋಕರ ಪ್ರಕಾರ "ಚೋಮನ ಸಮಸ್ಯೆ ಇತ್ಯರ್ಥ ವಾಗಬೇಕು. ಆದರೆ ಅದು ವಸಾಹತುಶಾಹೀ ಆಡಳಿತವನ್ನು ಅಧಿಕೃತಗೊಳಿಸುವಲ್ಲಿ ಪರ್ಯಾವಸಾನಗೊಳಿಸಬಾರದು ಎಂಬುದು ಕಾದಂಬರಿಯ ಒಟ್ಟಾರೆ ದರ್ಶನವಾಗಿದೆ" ಇದನ್ನು ನೆಮ್ಮಿಕೊಂಡೇ 'ಚೋಮನ ದುಡಿ'ಯನ್ನು 'ವಸಾಹತುಶಾಹೀ ವಿರೋಧಿ ಕಾದಂಬರಿ' ಎಂದು ಅವರು ಸ್ವಲ್ಪ ಅವಸರವಸರವಾಗಿ ವಿವರಿಸುತ್ತಾರೆ. ಇಲ್ಲಿ ಚರಿತ್ರೆ ಯನ್ನು ಸ್ವಲ್ಪ ಎಚ್ಚರದಿಂದ ಪರಿಶೀಲಿಸಬೇಕಾಗುತ್ತದೆ. ಜೊತೆಗೆ ಚರಿತ್ರೆ ಕಲಾಕೃತಿ ಯಲ್ಲಿ ದಾಖಲಾಗುವ ಬಗೆ ಹೇಗೆ ? ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ಸ್ವಲ್ಪ ಸರಳಗೊಳಿಸಿ ಹೇಳುವುದಾದರೆ 30ರ ದಶಕದಲ್ಲಿ 'ಚೋಮನ ಸಮಸ್ಯೆ' ಕಾದಂ ಬರಿಯ ರೂಪ ತಳೆಯುವ ಸಂದರ್ಭಕ್ಕೆ ವಸಾಹತು ಆಡಳಿತದ ಸೃಜನಾತ್ಮಕ ಪ್ರೇರಣೆ ಏನು ? ಅಂದರೆ ಅರ್ಥ ಇಷ್ಟೆ–ಇಂಗ್ಲಿಷರಿಂದಲೇ ಕಲಿತು ಇಂಗ್ಲಿಷರ ವಿರುದ್ಧ ನಿಲ್ಲುವ ರೀತಿಯದು. 'ಬೆಟ್ಟದ ಜೀವ'ದ ಗೋಪಾಲಯ್ಯ ಮಲೆನಾಡಿನ ಗರ್ಭದಲ್ಲಿದ್ದರೂ, ಮಲೆನಾಡಿನ ಕಣ ಕಣದಲ್ಲೂ ಆತ ಕಾಣುವುದು ಮಗನ ಮುಖವನ್ನೇ ಅಲ್ಲವೇ ? ಅಲ್ಲಿ ಮಲೆನಾಡೆಲ್ಲಿ ? ಹಾಗಾಗಿ ಕಾದಂಬರಿ ಕೊನೆಯಾದಾಗ ಶಿವರಾಮನ ಜೊತೆ ಯಾವ ಸಂಕೋಚವೂ ಇಲ್ಲದೆ ಗೋಪಾಲಯ್ಯ ಹೊರಟೇ ಬಿಡುತ್ತಾನೆ. ಗೋಪಾಲಯ್ಯನ ಜೀವ ನಿಂತಿರುವುದು ಮಲೆನಾಡಿನಲ್ಲೋ, ಮಗನಲ್ಲೋ ಎಂದು ಕೇಳಿದರೆ ಮಗನಲ್ಲಿ ಎಂಬುದೇ ಉತ್ತರ. ಭಾರತದ ಬ್ರಾಹ್ಮಣ್ಯದ ಸಮಸ್ಯೆಯಿದು. ಶೂದ್ರರ ಮಲೆನಾಡಿನ ಕಲ್ಪನೆಯೊಂದಿಗೆ ಹೋಲಿಸಿ ನೋಡಿದರೆ ಅದು ಇನ್ನಷ್ಟು ಸ್ಪಷ್ಟವಾಗುತ್ತದೆ.

ಸ್ವಲ್ಪ ವಿಷಯಾಂತರ ಅನ್ನಿಸಿದರೂ ಇದು ಕಾರಂತರು ಆಧುನಿಕತೆಗೆ ಪ್ರತಿ ಕ್ರಿಯಿಸಿದ ಬಗೆಯ ದ್ವಂದ್ವವನ್ನು ಚೆನ್ನಾಗಿ ವಿವರಿಸುತ್ತದೆ. ಈ ನಿಟ್ಟಿನಲ್ಲಿ 'ಕುಡಿಯರ

ಕೊಸು' ಕಾದಂಬರಿಯಲ್ಲಿ ವಸಾಹತು ಆಡಳಿತದ ಅನುಭವ ಭಿನ್ನವಾಗಿರುವುದನ್ನು ಅಶೋಕರು ಗುರುತಿಸಿದ ಕ್ರಮ ಹೆಚ್ಚು ಪ್ರೌಢವಾದುದು. ಸ್ಥಳೀಯ ಸಂಸ್ಕೃತಿಯೊಂದು ಪರಕೀಯ ಸಂಸ್ಕೃತಿಯೊಡನೆ ಮುಖಾಮುಖಿಯಾಗುವಾಗ ಏರ್ಪಡುವ ಭಯ, ಆತಂಕ, ಸ್ವಾಭಿಮಾನಗಳನ್ನು ಇಲ್ಲಿ ಗುರುತಿಸಲಾಗಿದೆ. ಇಂಥ ಕೃತಿಗಳಿಗಿರುವ 'ಅಘೋಷಿತ ಮುನ್ನೋಟ'ವನ್ನು ಕೂಡಾ ಅವರು ಸರಿಯಾಗಿ ಗುರುತಿಸುತ್ತಾರೆ. ಇಂಥ ಅನ್ವೇಷಣೆಯ ಸಂದರ್ಭದಲ್ಲಿ ಕಾರಂತರ ಕೃತಿಗಳು ಒಂದಕ್ಕಿಂತ ಇನ್ನೊಂದು ಹೇಗೆ ಭಿನ್ನವಾಗಿವೆ ಎಂಬುದರ ಕಡೆಯೂ ಅವರ ಲಕ್ಷ್ಯ ಹರಿದಿದೆ.

ಸಮಾಜ ನಿರ್ದಯವಾಗಿ ಚಲಿಸುತ್ತಿರುವಾಗ, ಉಂಟಾಗುವ ಹಳತು–ಹೊಸತರ ಸಂಘರ್ಷವನ್ನು ಕಾರಂತರ ಕಾದಂಬರಿಗಳು ಅದ್ಭುತವಾಗಿ ದಾಖಲಿಸಿವೆ. ಅಶೋಕರ ವಿಮರ್ಶೆ ಅದನ್ನು ಅಷ್ಟೇ ಸಂಯಮದಿಂದ ಗುರುತಿಸುತ್ತದೆ. ನಾವೆಲ್ಲರೂ ಓದಲೇ ಬೇಕಾದ, ಚರ್ಚಿಸಲೇಬೇಕಾದ ಚೊಕ್ಕ ಕೃತಿಯಿದು.

—ಡಾ|| ಪುರುಷೋತ್ತಮ ಬಿಳಿಮಲೆ

ಈ ನೆಲದ ಹಾಡು (ಕವನ ಸಂಕಲನ)

ಲೇಖಕಿ: **ಸ. ಉಷಾ**

ಪ್ರಕಾಶಕರು: ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ

ಪುಟ: viii + 50, ಬೆಲೆ: ರೂ. 15/-

'ತೊಗಲುಗೊಂಬೆಯ ಆತ್ಮಕಥೆ'ಯ ನೆಲೆಯಿಂದ, ತಮ್ಮ ಹಾಡು 'ಈ ನೆಲದ ಹಾಡು' ಆಗುವಂತೆ ಹಂಬಲ ಹೊತ್ತಿರುವ ಸ. ಉಷಾ ಅವರ ಈ ಎರಡನೆಯ ಸಂಕಲನ ಅವರ/ಮಹಿಳಾ ಕಾವ್ಯದ ಬೆಳವಣಿಗೆಯ ದೃಷ್ಟಿಯಿಂದ ಕುತೂಹಲಕಾರಿಯಾಗಿದೆ. ಈ ಸಂಕಲನದ ಕವನಗಳನ್ನು ಓದುತ್ತ ಹೋದಂತೆ ಬದುಕಿನ ಸೊಗಸಿನ ಹಂಬಲ, ಪ್ರೀತಿಗಾಗಿ ತುಡಿತ, ಚುಚ್ಚುವ ವಾಸ್ತವ ಬದುಕಿನ ನೋವು, ಇದನ್ನು ಸಹಿಸುತ್ತ ಸುಂದರ ಭವಿಷ್ಯತ್ತಿಗೆ ಕಾಯುವ ನಿರಂತರ ನಿರೀಕ್ಷೆಗಳು ಉಷಾ ಅವರಿಗೆ ಹೊಸತೇನೂ ಅಲ್ಲದ ವಸ್ತುಗಳೇ–ಎನ್ನಿಸಬಹುದು. ಆದರೆ ಇಲ್ಲಿ ಹೊಸತು ಇರುವುದು ಆ ವಸ್ತುಗಳನ್ನು ಅವರು ನಿರುಕಿಸುವ ಕ್ರಮದಲ್ಲಿ, ತಮ್ಮದೇ ಭಾಷೆಗಾಗಿ ಹುಡುಕುತ್ತ, ತಮ್ಮ ಅನನ್ಯತೆಯ ಶೋಧನೆಗೆ ಯತ್ನಿಸಿರುವ ರೀತಿಯಲ್ಲಿ ಉಷಾ ವಿಭಿನ್ನರಾಗುತ್ತಾರೆ:

'ಅಂದಿಗೂ ಇಂದಿಗೂ
ಕಾಲದನಂತದಲ್ಲಿ ತೇಲುತ್ತಿದ್ದ ಹುಡುಗಿ
ಸುಖದ ತುತ್ತು ತುತ್ತಿಗೂ ಕಲ್ಲಾಗಿ ಕಾಡಿದ್ದಾಳೆ' (ನಿರಂತರ) ಎನ್ನುವಲ್ಲಿ

ಉಷಾ ಕವನಗಳ ಮೂಲದ ಚಿಂತನೆಯ ಎಳೆಯೊಂದನ್ನು ಗುರುತಿಸಬಹುದು.

ಈ ಕವನಗಳ ನಾಯಕಿ–ಒಬ್ಬಳಲ್ಲ, ಹಲವರಿಗೆ ಪ್ರತಿನಿಧಿಯಾಗಬಯಸುವಾಕೆ. ಆ ಹಲವರು ಯುಗಾಂತರಗಳಿಂದ ಕಾಡುವ ಸೀತೆ, ಮಹಾಶ್ವೇತೆ, ವಿನತೆ, ಅಕ್ಕಮಹಾದೇವಿ ಹೀಗೆ ಹೆಸರಾದವರು ಅಥವಾ ಹೆಸರಿಲ್ಲದ ಸಹಸ್ರಾರು ಜನ. ಇವರೆಲ್ಲರ 'ಸುಖ'ದ ಹಂಬಲದ ಸ್ವರೂಪವಾದರೂ ಏನು ?

'ನೂರು ಜನುಮ ದಾಟಿದರೂ
ಕಾಯುತ್ತಿದ್ದೇನಲ್ಲ
ಪುಂಡರೀಕನಾಗಿಯೇ ಬರುತ್ತೀ ಎಂದು' (ಮಹಾಶ್ವೇತೆಯ ಸ್ವಗತ)

'ಈಗ ಬಿಗಿದ ಸಂಕಲೆಗಳಲಿ
ಕನಸಿನ ಮೊಟ್ಟೆಗಳೊಡೆವುದನೆ ಕಾವನೋಂಪಿ
ಬಲಿಯದ ಬಯಕೆಗಳು
ಹಲವುಳಿಯುತ್ತವೆ
ಮತ್ತೆ ಗರಿಗಟ್ಟಿಕೊಳ್ಳುತ್ತಾ
ಉದ್ಧಾರಕನಿಗಾಗಿ ಕಾಯುತ್ತವೆ' (ವಿನತೆ ಮತ್ತು ಗರುಡ)

ಹೀಗೆ ಪತಿ/ಪುತ್ರರ ಮೂಲಕವೇ 'ಸುಖ'ದ ಸೀಮೆಯ ಗುರುತಿಸುವ ಚಿತ್ತಕಟ್ಟುವ ಕನಸಾದರೂ ಏನು ?

'ರೆಕ್ಕೆಯಗಲಿಸಿ ಹಾರಬೇಕಿದೆ
ಆ ಹಸಿರಿನ ನೆರಳಿಗೆ
ಮನೆಮಾಡಿ ಮರದೊಳಗಿನ
ಪೊಟರೆಗೂಡಿಗೆ
ಮುಚ್ಚಿಟ್ಟು ಕಾವು ಕೊಟ್ಟು
ಹೊಸ ಬದುಕ
ಮೊಟ್ಟೆಗಳ ಬಿರಿಸಬೇಕಿದೆ' (ಒಂದು ಕನಸು)

ಎಲ್ಲ 'ಹೊಸ ಬದುಕಿ'ನ ಕಲ್ಪನೆಯಾಗಲೀ, ಅದರ ಸಾಕ್ಷಾತ್ಕಾರವಾಗಲೀ 'ಮನೆ ಮಾಡಿ' 'ಕಾವು ಕೊಟ್ಟು' 'ಮೊಟ್ಟೆಗಳ ಬಿರಿಸು'ದ ಆ ಮೂಲದವೇ ಆಗಿರುವುದು ಗಮನಾರ್ಹ. ಇಂಥಲ್ಲಿ ಇದಕ್ಕೆ ಅತೀತವಾದೊಂದು ಸ್ಥಿತಿಯನ್ನು ಮಹಿಳೆಯರು ಕನಸಿಸಲಾರರೆ ಎಂಬ ಪ್ರಶ್ನೆ ಏಳಬಹುದು. ಆದರೆ ತಾನಿರುವ ಪರಂಪರೆಯೊಳಗಿದ್ದುಕೊಂಡೇ, ಅದರಲ್ಲಿನ ತನ್ನ ವಿರುದ್ಧವಾದ್ದನ್ನು ತಿದ್ದಲೆತ್ನಿಸುವುದು ಮಹಿಳಾ ಕವಿಗಳಿಗೆ ಎದುರಾಗಿರುವ ಸಮಸ್ಯೆ. ಏಕೆಂದರೆ, ಪ್ರಧಾನ ಪರಂಪರೆಯ ಸಿದ್ಧಶಬ್ದರೂಪಗಳು,

ಪ್ರೇರಣೆಗಳು, ಪ್ರತಿಮೆಗಳು, ಕಾವ್ಯವಸ್ತುಗಳ ಸಂಕೀರ್ಣ ಪ್ರಭಾವದಿಂದ ಪೂರ್ಣ ಬೇರೆಯಾಗಿ ಬರೆಯುವುದು ಯಾರೊಬ್ಬರಿಗೂ ಅಸಾಧ್ಯ. ಸಾಧ್ಯವಿರುವುದು ಆ ಪರಂಪರೆಯ ಜಾತಕಗಳ ಪರಿಷ್ಕರಣೆ, ಸುಧಾರಣೆ ಮಾತ್ರ ಆ ಯತ್ನವನ್ನು ಉಷಾ ಮಾಡುತ್ತಿರುವುದರ ನಿದರ್ಶನ ಈ ಸಂಕಲನದ ಶೀರ್ಷಿಕೆಯ ಕವನ 'ಈ ನೆಲದ ಹಾಡು'ವಿನಲ್ಲಿ ದೊರೆಯುತ್ತದೆ:

'ಭೂಮಿ = ಪ್ರಕೃತಿ = ಸ್ತ್ರೀ' ಸಮೀಕರಣದಲ್ಲಿ ಪರಂಪರಾಗತ ಪುರುಷ ಸಂಸ್ಕೃತಿಯ ಬಹುದೊಡ್ಡ ಸಮಸ್ಯೆಯಿದೆ:

ಕಾಯುವ
ಕೊಲ್ಲುವ, ಸಂಗೋಪಿಸುವ
ವಿನಾಶಗೈಯ್ಯುವ

ಈ ಮಹಾಮಾತೃ ಪ್ರತೀಕದ ಜೊತೆಯಲ್ಲಿ ತಾಯಿಯಿಂದ ಬೇರೆಯಾಗಲೇಬೇಕಾದ ಪುರುಷನ ವಿಧಿಯಿದೆ. ಆ ಬೇರೆಯಾಗುವುದರ ನೋವಿದೆ, ಬೆರಗಿದೆ, ಭೀತಿಯಿದೆ, ಮುಗ್ಧತೆಯಿದೆ. ಈ ಪುರುಷ ಚಿಂತನೆಯ ಭಾವಸಂಕೀರ್ಣತೆಯ ಪ್ರತೀಕವೊಂದನ್ನು ಸ್ತ್ರೀ ಶೋಷಣೆಯ ನೆಲೆಯಿಂದ ಆಳೆಯಲು, ವಿಶ್ಲೇಷಿಸಲು, ಯತ್ನಿಸುವಲ್ಲಿ ಕವನದ ನಾಯಕಿ ತನ್ನನ್ನು ಆ ಮಾತೃಪ್ರತೀಕದ ಜೊತೆ ಸಮೀಕರಿಸಿಕೊಳ್ಳುತ್ತಾಳೆ.

'ನನ್ನ ತೊಡೆ ತುಂಬ ನೂರಾರು
ನೇಗಿಲ ಗಾಯ
ನಾನು ನನ್ನಮ್ಮ ಅವಳಮ್ಮ ಅಮ್ಮಂದಿರು
ಎಲ್ಲರನು ಮೀರಿಸಿದ ದೊಡ್ಡಮ್ಮ ಕೂಡಾ
ಸಹಿಸಿ ಒಣಗಿದ ಗಾಯ
ಗಂಡನೋ ಮಗನೋ ತಿಳಿಯದ
ಹೊಂದಾ ನೇಗಿಲ ಸಾಲು'

ನಿಷ್ಕ್ರಿಯವಾದ ಜಡವಾದ ಭೋಗವಸ್ತುವಾದ ಈ ಶೋಷಿತ ಸ್ಥಿತಿಯಲ್ಲಿ ತನ್ನ ಶಕ್ತಿಯನ್ನೂ ಗುರುತಿಸುತ್ತಾಳೆ

'ಎಲ್ಲಿ ಹೋಗುತ್ತೀ ನನಗೆ ಗೊತ್ತಿಲ್ಲವೇ ?
ನನ್ನೆದೆಗೆ ಬೇರಿಳಿದ ಕಾಲು ನಿನ್ನದು'

ಆದರೆ ಕವನದ ಮುಖ್ಯಗುರಿ, ಇಂಥ ಆಳುವ/ಆಳಿಸಿಕೊಳ್ಳುವ ದ್ವಂದ್ವವನ್ನು ವಿಡಂಬಿಸುವುದಷ್ಟೇ ಅಲ್ಲ. ಕೆಳಗಿನ ನೆಲೆಯಿಂದ ಬೇರೆಯಾದ, ತನ್ನತನವನ್ನು ಗುರುತಿಸಿ, ತೋರಿಸುವ ಆಶಯದ್ದು ಅದು.

'ನನ್ನನ್ನೂ ಕರೆಯುತ್ತೆ ಕಾಣಿರೋ
ಆ ನೀಲ ಆಗಸದ ನೂರಾರು ಬಣ್ಣಗಳು
ಹಾರೋ ಹಕ್ಕಿಗಳು'

ಎನ್ನುವ ಮಾನವೀಯ ನೆಲೆಯಲ್ಲಿ 'ವಸ್ತು'ವಿಗಿಂತ ಭಿನ್ನವಾದ ವ್ಯಕ್ತಿಯಾಗಿ ಪುರುಷನ ಸಂಗಾತಿಯಾಗಿ ತನ್ನನ್ನು ಗ್ರಹಿಸಬೇಕೆಂಬ ಒತ್ತಾಯವಿದೆ:

'ನೆನೆಯೋ ನನ್ನೊಡನೆ
ನದಿಯ ಜಳಜಳ
ಬಿಸಿಲ ಕಾವು
ಅನ್ನವಿಲ್ಲದ ನೋವು
ಗರ್ಭಪಾತದ ರಕ್ತ
ಒಂದು ಕ್ಷಣ ಈ
ನೆಲದ ಕಣ್ಣೀರನಳಿಸಲು
ಕೈಯನ್ನಾದರೂ ಎತ್ತೋಣ'.

ಇಂಥ ಕವನದಲ್ಲಿ ಅಡಿಗರ 'ಭೂಮಿಗೀತ'ಕ್ಕೆ ಒಂದು ಕೀಟಲೆಯ 'ತದ್ಭವ'ವನ್ನು ಕಂಡುಬಿಡುವುದು ಬಹು ಸುಲಭ, ಆದರೆ 'ಭೂಮಿಗೀತ' ನಮ್ಮ ಕಾವ್ಯ ಪರಂಪರೆಯ ಯಾವ ಮುಖ್ಯ ಜೀವನದರ್ಶನವನ್ನು ಪ್ರತಿಪಾದಿಸುತ್ತದೆಯೋ ಅದರ ಮೂಲದ ಕೊರತೆಯೊಂದನ್ನು ಶೋಧಿಸುವ ಮಹತ್ವಾಕಾಂಕ್ಷೆಯನ್ನಾದರೂ ಉಷಾರ ಕವನಗಳು ಹೊತ್ತಿರುವುದು ನಿಜಕ್ಕೂ ಮಹತ್ವದ್ದೆಂದು ತೋರುತ್ತದೆ.

—ಬಿ. ಎನ್. ಸುಮಿತ್ರಾಬಾಯಿ

ದಗಡೂ ಪರಬನ ಅಶ್ವಮೇಧ (ಕಥಾ ಸಂಕಲನ)

ಲೇಖಕರು: **ಜಯಂತ ಕಾಯ್ಕಿಣಿ**
ಪ್ರಕಾಶಕರು: ಕೃತಿ ಪ್ರಕಾಶನ, ತ್ಯಾಗರಾಜನಗರ, ಬೆಂಗಳೂರು-೬೪
ಬೆಲೆ: ರೂ. 20/-

ಜಯಂತ ಕಾಯ್ಕಿಣಿಯವರ ಮೂರನೆಯ ಕಥಾಸಂಕಲನ 'ದಗಡೂ ಪರಬನ ಅಶ್ವಮೇಧ', ಒಟ್ಟು ಮೂರು ಭಾಗಗಳಲ್ಲಿ ಹತ್ತು ಕತೆಗಳನ್ನೊಳಗೊಂಡಿದೆ. 1984 ರಿಂದೀಚೆಗೆ, ಪತ್ರಿಕೆಗಳಲ್ಲಿ ಆಗಾಗ ಅಲ್ಲಲ್ಲಿ ಪ್ರಕಟವಾದ ಕತೆಗಳನ್ನೆಲ್ಲಾ ಸೇರಿಸಲಾಗಿದೆ. ಇವನ್ನೆಲ್ಲಾ ಒಟ್ಟಿಗೆ ಒಮ್ಮೆಲೆ ಓದಿದಾಗ ವೈವಿಧ್ಯಗಳಲ್ಲಿ ಹಂಚಿಹೋಗಿರುವ ಬದುಕಿನ

ಅನೇಕ ಸ್ಥಿತಿಗಳನ್ನೂ, ಇನ್ನೂ ಅನೇಕ ಪಾತ್ರಸೃಷ್ಟಿಗಳ ಮೂಲಕ ದಾಖಲಿಸುತ್ತಾ ಹೋಗುವ ಜಯಂತ ಕಾಯ್ಕಿಣಿಯವರಲ್ಲಿ ಬದುಕಿನ ಒಟ್ಟಂದವನ್ನು ಸಮಗ್ರವಾಗಿ ಶೋಧಿಸಿ, ಅದರ ಮೂಲಭಾವವನ್ನೂ, ತರ್ಕವನ್ನೂ ಒಟ್ಟಲ್ಲಿ ಗ್ರಹಿಸಬಯಸುವ ಸ್ಥಾಯಿ ಎಳೆಯೊಂದು ಗೋಚರಿಸುತ್ತದೆ.

ಈ ಅರ್ಥದಲ್ಲಿ ಜಯಂತ ಕಾಯ್ಕಿಣಿಯವರು, ಸೂಕ್ಷ್ಮ ರಚನಾ ಕೌಶಲ್ಯವುಳ್ಳ, ವಿವರಗಳಲ್ಲಿ ಸೂಕ್ಷ್ಮವಾಗಿ ಪೋಣಿಸಬಯಸುವ, ನವ್ಯ ಶೈಲಿಯ ನಾಜೂಕಿನ ಕತೆಗಾರ. ಇಲ್ಲಿ ಪ್ರತಿಯೊಂದು ಕತೆಯೂ, ಬಿಡಿಯಾಗಿ ನೋಡಿದಾಗ, ನಗರ ಜೀವನದ ಹಿನ್ನೆಲೆಯಲ್ಲಿ ನೋಡುವ ಕಣ್ಣು ಬದುಕಿನ ಒಂದಂಶವನ್ನು ಪ್ರತ್ಯೇಕ ಏಕಾಗ್ರತೆಯಲ್ಲಿ ಗಮನಿಸುತ್ತಿರುವಂತೆ ಭಾಸವಾಗುತ್ತದೆ. ಭಾಗ ಒಂದರ ಹೊರತಾಗಿ ಇತರ ಕತೆಗಳ ಪರಿಸರವೂ ನಗರದ್ದೇ ಆಗಿದೆ. ಆದರೆ ಈ ಎಲ್ಲಾ ಕತೆಗಳನ್ನು ಒಟ್ಟಲ್ಲಿ ಗಮನಿಸಿದಾಗ, ಈ ಎಲ್ಲಾ ಕತೆಗಳನ್ನೂ ಹೊಕ್ಕು ಹೊರಡುವ ಚಿಂತನೆಯು ಒಂದು ಸಾಮಾನ್ಯ ಎಳೆ ಗೋಚರಿಸುತ್ತದೆ. ಬದುಕನ್ನು ಬಹಳ ಪ್ರಿಯವಾಗಿ ಸೇವಿಸುವ, ಇತ್ಯಾತ್ಮಕ (Positive) ಒಲವಿಂದ ಅದನ್ನು ಅಪ್ಪಿಕೊಳ್ಳಬಯಸುವ ಆರೋಗ್ಯಕರ ಮನಸ್ಸು ಗೋಚರಿಸುತ್ತದೆ. ಮಧ್ಯಮ ವರ್ಗದ ಬದುಕಿನ ಗೋಳುಗಳು, ಬದಲಾವಣೆಗೆ ಭಯಪಡುವ ಮಾನಸಿಕ ಸ್ಥಿತಿ, ಇದ್ದಲ್ಲೇ ಗೊಣಗುತ್ತಾ, ಕೊಳೆಯುವ ಸ್ಥಿತಿಯಲ್ಲಿ ಬದುಕಬೇಕಾದ ಅನಿವಾರ್ಯತೆ, ನಗರ ಜೀವನದ ಏಕಾಂಗೀತನ ಹಾಗೂ ಅನಾಮಧೇಯ ಅಸ್ಪಷ್ಟತೆ–ಇವೆಲ್ಲವುಗಳ ಒಳಗಿಂದ, ನಳನಳಿಸುವ ಬದುಕಿನ ಕ್ರಿಯಾಶೀಲ, ಆಪ್ತ, ಜೀವಂತ ಪ್ರಕೃತಿಯನ್ನು ಗುರುತಿಸಿ, ಅದನ್ನೇ ಜೀವನದ ಆದರ್ಶವನ್ನಾಗಿ ಗುರುತಿಸಿಕೊಂಡಿರುವುದು ಈ ಕತೆಗಳ ದೊಡ್ಡ ಗುಣ.

ಇದರಿಂದಾಗಿ, ಇಲ್ಲಿನ ಎಲ್ಲಾ ಕತೆಗಳಲ್ಲಿ ಒಬ್ಬ ವ್ಯಕ್ತಿಯ ದೃಷ್ಟಿಕೋನದಿಂದ ಬದುಕನ್ನು ಗ್ರಹಿಸಿ, ಅದರ ಹಿನ್ನೆಲೆಯಲ್ಲಿ ಸಮುದಾಯವನ್ನು ಮತ್ತು ಪರಿಸರವನ್ನು ಗುರುತಿಸಿಕೊಳ್ಳುವ ಪ್ರಕ್ರಿಯೆ ಇದೆ. ಇದು ಒಂದು ಸಮುದಾಯದ ಸ್ವೀಕೃತ ಮೌಲ್ಯಗಳ ಅಥವಾ ಆ ಹಿನ್ನೆಲೆಯಲ್ಲಿ ಆಶಿಸಲ್ಪಟ್ಟ ಮೌಲ್ಯಗಳ ಬೆಳಕಲ್ಲಿ ಜೀವನವನ್ನು ಪರೀಕ್ಷಿಸುವ ಅಥವಾ ಮೌಲ್ಯ ನಿರ್ಧಾರ ಮಾಡಿಕೊಳ್ಳುವ ಪ್ರಕ್ರಿಯೆಗೆ ತೀರಾ ವಿರುದ್ಧವಾದ್ದು. ಆದ್ದರಿಂದ ಜಯಂತ ಕಾಯ್ಕಿಣಿಯವರು ನಿರ್ಮಲವಾಗಿ ಓದಿಸಿಕೊಳ್ಳುವ ನವ್ಯ ಪಂಥದ ಶೈಲಿಯನ್ನು ಇನ್ನೂ ಉಳಿಸಿಕೊಂಡವರು.

ಜಯಂತ ಕಾಯ್ಕಿಣಿಯವರ ಕತೆಗಳ ಇನ್ನೊಂದು ಅಂಶ, ಕೇವಲ ಲೌಕಿಕವಲ್ಲದ, ಸ್ವಲ್ಪ ಮಟ್ಟಿಗೆ ಮೆಟಾಫಿಸಿಕಲ್ ಎನ್ನಬಹುದಾದ, ಬದುಕಿನ ಸಾಧ್ಯತೆಗಳನ್ನು ಅವರು ತಿರಸ್ಕರಿಸುವವರಲ್ಲ. ಎಲ್ಲವೂ ತಯಾರಾಗಿದ್ದರೂ, ಅದು ಹೊತ್ತಿಕೊಳ್ಳದೇ ಉಳಿದು,

ಒಂದು ದಿವ್ಯದಕ್ಷಣದಲ್ಲಿ ಇದ್ದಕ್ಕಿದ್ದಂತೆ ಗೋಚರಿಸಿಬಿಡುವ ಒಂದು ಅವ್ಯಕ್ತ ಸಾಧ್ಯತೆಯನ್ನು ಅವರು ತಿರಸ್ಕರಿಸುವವರಲ್ಲ. ಅದು ಅನೇಕ ಮಜಲುಗಳಲ್ಲಿ, ಅನೇಕ ರೀತಿಗಳಲ್ಲಿ, ಭಾವಗಳಲ್ಲಿ ಸಾಕಾರಗೊಳ್ಳಬಹುದು. ಈ ಸಂಕಲನದ 'ಬಿನ್ನಿ ಕೃಷ್ಣನ್ ಬಂದು ಹೋದ' ಕತೆಯಲ್ಲಿ ಬಹಳ ಗಂಭೀರ ಧಾಟಿಯಲ್ಲಿ ಅದು ಮೂಡಿ ಬಂದರೆ, 'ದಗಡೂ ಪರಬನ ಅಶ್ವಮೇಧ'ದಲ್ಲಿ ಅದು ಬಹಳ ಕಾಮಿಕ್ ಶೈಲಿಯಲ್ಲಿ ನಿರೂಪಿತವಾಗಿದೆ. ನಗರ ಜೀವನದ ಹಿನ್ನೆಲೆಯ ಬದುಕಲ್ಲಿ, ಎಲ್ಲ ಸಾಮಾನ್ಯ, ಸಪ್ಪೆ, ಅರ್ಥಹೀನ ಅಂದುಕೊಳ್ಳುತ್ತಿದ್ದಂತೆ, ಬದುಕಿನ ಸೌಂದರ್ಯ ಸಾಧ್ಯತೆಗಳು ಇದ್ದಕ್ಕಿದ್ದಂತೆ ಈ ಸಾಮಾನ್ಯ ಜೀವನದೊಳಗಿಂದಲೇ ಗೋಚರಿಸಿಬಿಡುವ ಹಿನ್ನೆಲೆಯಲ್ಲಿ ಕಾಯ್ಕಿಣಿಯವರ ಮೂಲ ದೃಷ್ಟಿಯನ್ನು ನಾವು ಗುರುತಿಸಿಕೊಳ್ಳಬಹುದು.

'ಸಮೀರನ ದಿನ' ನಗರ ಜೀವನದ ಅನೇಕ ಒಳಸುಳಿಗಳನ್ನೂ, ಸಾಂಸ್ಕೃತಿಕವಾಗಿ ಬೇರು ಕಡಿದುಕೊಂಡು, ನಗರದ ಜೀವ ಪ್ರಪಂಚದಲ್ಲಿ ಆರ್ಥಿಕ ಅನಿವಾರ್ಯತೆಯಿಂದ ಸೇರಿಕೊಂಡಿರುವ ಒಂದು ದೊಡ್ಡ ಸಮುದಾಯದ ಅಂತರಂಗವನ್ನು ಬಿಡಿಸಿಟ್ಟು ಪ್ರಾತಿನಿಧಿಕವಾಗಿ ಎತ್ತಿತೋರಿಸುವ ಕತೆ. ಈ ಕತೆ ಪಡೆದಿರುವ ಸುಂದರ ಆಕಾರವೇ, ಇಂತಹ ಬದುಕನ್ನು ಗಮನಿಸುವಲ್ಲಿ ಕತೆಗಾರನಿಗಿರುವ ಸಂಯಮ, ಅದರ ಎಳೆ ಎಳೆಗಳನ್ನು ಅರ್ಥಮಾಡಿಕೊಳ್ಳುವ ಕಳಕಳಿ, ಇದರಲ್ಲಿ ಬದುಕು ಕಳೆದುಹೋಗದಂತೆ, ಇರಬೇಕಾದ ಎಚ್ಚರ, ವಾಸ್ತವ ಪ್ರಪಂಚದ ಕಟುನಿಷ್ಠುರತೆಯನ್ನು ಎದುರಿಸಿಯೂ, ಜೀವನವನ್ನು ಅದರ ಎಲ್ಲಾ ವಿವರಗಳೊಂದಿಗೆ ಆರಾಧಿಸ ಬಯಸುವ ತಹತಹ, ಎಲ್ಲವನ್ನೂ ತೋರಿಸಿಕೊಡುತ್ತದೆ.

ಆದರೆ, ಜಯಂತ ಕಾಯ್ಕಿಣಿಯವರ ಮುಂದಿನ ಸಾಧ್ಯತೆಗಳತ್ತ ಬೆರಳು ತೋರಿಸುತ್ತಿರುವ ಕತೆ 'ದಗಡೂ ಪರಬನ ಅಶ್ವಮೇಧ'. ಇಲ್ಲಿನ ಇತರ ಕತೆಗಳ ಗಂಭೀರ ಧಾಟಿಗಿಂತ ಭಿನ್ನವಾಗಿ, ತುಸು ಕಾಮಿಕ್ ಶೈಲಿಯನ್ನು ಬಳಸಿಕೊಂಡಿರುವ ಈ ಕತೆ, ಜಯಂತ ಕಾಯ್ಕಿಣಿಯವರ ಮಾಗುವಿಕೆಯನ್ನು ತೋರಿಸಿಕೊಡುತ್ತದೆ. ಅತಿಯಾದ ಗಂಭೀರತೆ ದಿನನಿತ್ಯದ ಅರಿವಿಗೆ ಕೆಲವೊಮ್ಮೆ ಹೆಚ್ಚಾಗುತ್ತದೆ. ನಿತ್ಯಜೀವನದ ಅನೇಕ ಸುಖಗಳು ಅದರಿಂದಾಗಿ ಕೆಲವೊಮ್ಮೆ ಮರೆಯಾಗುತ್ತದೆ. ಈ ಕತೆಯ ಭಾನುಮತಿ, ಗುಲಾಮ, ಮದುಮಗ ದಗಡೂ ಪರಬ್–ಇಂತಹ ಸಾಮಾನ್ಯ ಜೀವಗಳನ್ನು ಸಮರ್ಪಕವಾಗಿ ಹಿಡಿಯಬಲ್ಲ ಧಾಟಿ ಇದು. ಈ ಸಾಧ್ಯತೆಯತ್ತ, ಜಯಂತ ಕಾಯ್ಕಿಣಿಯವರು ಸ್ಪಷ್ಟ ಹೆಜ್ಜೆ ಇಡುತ್ತಿರುವುದು ಬಹಳ ಸ್ವಾಗತಾರ್ಹ ಬೆಳವಣಿಗೆ. ಆಧುನಿಕ ಜೀವನದ ಹಿನ್ನೆಲೆಯಲ್ಲಿ, ಕನ್ನಡದ ಸಾಹಿತ್ಯ ಸಂದರ್ಭವೂ ಈ ಜಾಡಿನಲ್ಲಿ ಒಂದು ದೊಡ್ಡಮಟ್ಟದ ಸಾಧನೆಗಾಗಿ ಕಾಯುತ್ತಿದೆ ಎಂದು ಸ್ಪಷ್ಟವಾಗಿ ಹೇಳಬಹುದು.

—ಎಸ್. ಆರ್. ವಿಜಯಶಂಕರ್

ಉತ್ಖನನ (ಕಥಾ ಸಂಕಲನ) ಪುಟ: 128, ಬೆಲೆ: ರೂ. 12/-

ಕಟ್ಟುಪಾಡುಗಳು (ಕಥಾ ಸಂಕಲನ) ಪುಟ: 98, ಬೆಲೆ: ರೂ. 15/-

ಎರಡೂ ಪುಸ್ತಕಗಳ ಲೇಖಕರು: **ಟಿ. ಆರ್. ರಾಧಾಕೃಷ್ಣ**

ಪ್ರಕಾಶಕರು: **ಚಿನ್ಮೂಲಾದ್ರಿ ಪ್ರಕಾಶನ, ಚಿತ್ರದುರ್ಗ**

ಸಣ್ಣ ಕಥೆಗಳನ್ನು ನಿಷ್ಠೆಯಿಂದ ರಚಿಸಿಕೊಂಡು ಬರುತ್ತಿರುವ ರಾಧಾಕೃಷ್ಣ ಅವರ ಈ ಎರಡು ಕಥಾಸಂಕಲನಗಳ ಒಳ್ಳೆಯ ಗುಣಲಕ್ಷಣಗಳನ್ನು ಮೊದಲಲ್ಲೇ ಗುರುತಿಸಿಬಿಡುವುದು ಉತ್ತಮ. ಎಷ್ಟೇ ಕಷ್ಟ, ಕೊರಗುಗಳಿದ್ದಾಗ್ಯೂ ಜೀವನವನ್ನು ಇತ್ಯಾತ್ಮಕವೆಂದೇ ಸ್ವೀಕರಿಸುವ ಮನೋಭಾವ ಇವರ ಎಲ್ಲಾ ಕಥೆಗಳಲ್ಲೂ ಕಂಡು ಬರುವ ಮುಖ್ಯ ಗುಣ. ಇದರ ಜೊತೆಗೆ, ಬದುಕಿನ ಏರುಪೇರುಗಳನ್ನು ವಾಸ್ತವ ನೆಲೆಯಲ್ಲಿ ಗ್ರಹಿಸಿ ವಿನಯ-ಸಂಯಮಗಳಿಂದ ಅರ್ಥ ಮಾಡಿಕೊಳ್ಳುವ ಕ್ರಮ ಇಲ್ಲಿದೆ. ಸಹಜತೆ ಹಾಗೂ ಪ್ರಾಮಾಣಿಕತೆಗಳಿಗೆ ವಿಮುಖವಾದ ಜೀವನಶೈಲಿಯನ್ನು ಇವರು ತಿರಸ್ಕರಿಸುತ್ತಾರೆ. ಇಂತಹ ಕಡೆಗಳಲ್ಲಿ ವಿಷಾದ ಸ್ಥಾಯಿಯಾಗಿ ಮೂಡುತ್ತದೆ. ಇಂತಿಂತಹ ಮೌಲ್ಯಗಳನ್ನೇ ಅರಸಿ ಅತುಕೊಳ್ಳಬೇಕೆಂಬ ಸಂದೇಶ ನೀಡದೆ ಇವರು ವಿಮರ್ಶಾತ್ಮಕ ಅಂತರ ಮತ್ತು ಎಚ್ಚರವನ್ನು ಕಾಯ್ದುಕೊಳ್ಳುತ್ತಾರೆ, ಮೇಲ್ನೋಟಕ್ಕೆ ತೀರಾ ಸರಳವೆನ್ನಿಸುವ 'ತೀರ್ಪು' ಕಥೆಯನ್ನು ಇಲ್ಲಿ ಗಮನಿಸಬಹುದು. ಮೂರ್ತ ವಾಸ್ತವ ವಿವರಗಳ ಮಧ್ಯದಿಂದ ಮುಗ್ಧತೆಯ ಪರವಾದ ಧೋರಣೆ ತನ್ನಷ್ಟಕ್ಕೆ ತಾನೇ ಬಿಚ್ಚಿಕೊಳ್ಳುತ್ತದೆ.

ರಾಧಾಕೃಷ್ಣರ ಅನುಭವ ಜಗತ್ತು ಮನುಷ್ಯ ಸಂಬಂಧಗಳಿಂದ ತುಂಬಿಕೊಂಡಿದೆ. ಹಾಗೆ ನೋಡಿದರೆ, ಇವರ ಮುಖ್ಯ ಆಶಯವೇ ಈ ಸಂಬಂಧಗಳ ಎಲ್ಲ ಮಗ್ಗುಲು ಗಳನ್ನು ಅರ್ಥಮಾಡಿಕೊಳ್ಳುವುದು. ಉದಾಹರಣೆಗೆ, 'ರಾಕ್ಷಸ ಮತ್ತು ಕಳ್ಳ' ಹಾಗೂ 'ಸೋಮು ಮತ್ತು ಗವಿ' ಕಥೆಗಳಲ್ಲಿ ಇವರು ಮನುಷ್ಯ-ಮನುಷ್ಯ ಸಂಬಂಧ ಗಳನ್ನು ಕೆದಕುತ್ತಾರೆ. 'ಕಟ್ಟುಪಾಡುಗಳು' ಕಥೆಯಲ್ಲಿ ಈ ಪ್ರಕ್ರಿಯೆ ಇನ್ನಷ್ಟು ಸೂಕ್ಷ್ಮವಾಗಿದೆ.

ನಮ್ಮ ಒಳತೋಟಗಳಿಗೆ, ಆಶಯಗಳಿಗೆ ಕಥಾರೂಪ ಕೊಡುವಲ್ಲಿ ರಾಧಾಕೃಷ್ಣರ ಶಿಸ್ತನ್ನು ಗಮನಿಸಬೇಕು. ಕಥೆ ನಿಧಾನವಾಗಿ ತನ್ನ ಕೈಗಳನ್ನು ಚಾಚುತ್ತಾ ನಿಲುವು ಗಳನ್ನು ಸಾವಕಾಶವಾಗಿ ಪ್ರಕಟಿಸುತ್ತದೆ. ಈ ಕಥನ ಕ್ರಿಯೆಯ ನಿರ್ವಹಣೆ ಓದುಗರ ಮನಸ್ಸನ್ನು ತುಂಬಿಕೊಳ್ಳುವಂತಿದೆ.

ಲೇಖಕರ ಶಕ್ತಿಯುತ್ತ ನಮ್ಮ ಗಮನ ಸೆಳೆಯುವ ಈ ಕಥೆಗಳು ಕೊನೆಗೆ ಅತೃಪ್ತಿಯನ್ನು ಉಂಟುಮಾಡಿ ಹೋಗುತ್ತವೆಂಬುದನ್ನು ಹೇಳಬೇಕು. ಇದಕ್ಕೆ ಹಲವಾರು ಕಾರಣಗಳಿವೆ. ಮೊದಲನೆಯದಾಗಿ, ಕಥೆಯ ಅರ್ಥಶ್ರೀಮಂತಿಕೆಯನ್ನು ಹೆಚ್ಚಿಸಲೇಬೇಕೆಂಬ ಪ್ರಜ್ಞಾಪೂರ್ವಕ ತೀವರ್ಮಾನ. ಇದನ್ನು ಸಾಧಿಸಲು ಕಥೆಯ ಅನುಭವದ ಹಂದರದ ಮೇಲೆ ಸಾಂಕೇತಿಕತೆಯ ಚಪ್ಪರವನ್ನು ಇವರು ಹೇರುತ್ತಾರೆ. 'ಹೊತ್ತು ತಂದ ಹೊರೆ' ಮತ್ತು 'ನಾಟಕಗಳ ಮಧ್ಯೆ' ಸಂಕೇತಗಳ ಅನಗತ್ಯ ಭಾರದಿಂದ ಕುಸಿಯುತ್ತವೆ. ಎರಡನೆಯದಾಗಿ, ಅನುಭವ ವಲಯದಲ್ಲಿ ದಕ್ಕುವ ವಿವರಗಳನ್ನು ಒಂದು ವಿನ್ಯಾಸದಲ್ಲಿ ನೇಯ್ದು ಮುಖ್ಯ ಕೇಂದ್ರಕ್ಕೆ ತರಲಾರದೇ ಹೋಗುವುದು. 'ಬಳುವಳಿ', 'ರೋಗಗ್ರಸ್ಥ' ಕಥೆಗಳ ಶಯ್ಯೆಯಲ್ಲಿರುವ ವಿವರಗಳು ವಸ್ತುವಿಗೆ ಪೂರಕವಾಗಿ ದುಡಿಯದೆ, ತಾತ್ತ್ವಿಕತೆಯನ್ನು ಕಟ್ಟಿಕೊಡದೆ ಅಲ್ಲಲ್ಲೇ ಚದುರಿಕೊಂಡು ಬಿಡುತ್ತವೆ. ಮೂರನೆಯದಾಗಿ (ಮತ್ತು ಮುಖ್ಯವಾಗಿ) ಒಂದು ವಸ್ತುಸ್ಥಿತಿ ಅಥವಾ ಸಂಬಂಧದ ಆಳಕ್ಕಿಳಿಯದೆ ಕಥೆ ಒಂದು ಹಂತದಲ್ಲಿ ತಟಸ್ಥವಾಗಿಬಿಡುವುದು. ಎಷ್ಟೇ ವಿನಯದಿಂದ ತಮ್ಮ ಅನುಭವವನ್ನು ಇವರು ಮುಖಾಮುಖಿಯಾದರೂ ಶೋಧನೆಯ ಕಣ್ಣನ್ನು ಪ್ರಖರವಾಗಿಸುವುದಿಲ್ಲ. ಹೀಗಾಗಿ ಅನುಭವ ನೀಡುವ ಅಚ್ಚರಿ, ಅದರ ನಿಗೂಢತೆಗಳಿಂದ ಕಥೆಗಳು ವಂಚಿತವಾಗಿಬಿಡುತ್ತವೆ. ಇದೇ ಕಾರಣದಿಂದಾಗಿ 'ನಿಕಷ'ದಂತಹ ಗಾಢ ರಚನೆ ಕೂಡಾ ಒಂದು ಗೆರೆಯೊಳಗೆ ನಿಂತುಬಿಡುತ್ತದೆ.

ಯಾವ ಕಥೆಯಲ್ಲೂ ಜೀವವಿರೋಧಿ ಮೌಲ್ಯವನ್ನು ಅನ್ವೇಷಿಸದ ರಾಧಾಕೃಷ್ಣ ಸಣ್ಣಕಥೆ ಪ್ರಕಾರದ ಸಾಧ್ಯತೆಗಳನ್ನು ತಮ್ಮದಾಗಿಸಿಕೊಳ್ಳಲು ತೊಡಗಿದ್ದಾರೆಂಬುದಕ್ಕೆ ಈ ಎರಡು ಕಥಾಸಂಕಲನಗಳೇ ಸಾಕ್ಷಿ. ನಿಜಕ್ಕೂ ಬೇರ್ಪಡಿಸಲಾಗದ ತಾತ್ತ್ವಿಕ ನಿಲುವುಗಳು ಮತ್ತು ಕಲಾವಂತಿಕೆ ಇವರ ಮುಂದಿನ ಕಥೆಗಳಲ್ಲಿ ಹೇಗೆ ರೂಪುಗೊಳ್ಳುತ್ತವೆ ಎಂದು ಕುತೂಹಲದಿಂದ ಕಾಯಬೇಕು.

—ಎ. ಆರ್. ನಾಗಭೂಷಣ

ಮೊದಲ ನೋಟ

ಟಿಪ್ಪುಸುಲ್ತಾನನ ಖಡ್ಗ (ಕಾದಂಬರಿ)

ಇಂಗ್ಲಿಷ್ ಮೂಲ: ಭಗವಾನ್ ಎಸ್. ಗಿದ್ವಾನಿ, ಕನ್ನಡಕ್ಕೆ: ಎಸ್. ಬಿ. ರಂಗನಾಥ್

ಇತಿಹಾಸಕ್ಕೂ ಐತಿಹಾಸಿಕ ಕಾದಂಬರಿಗೂ ಇರುವ ವ್ಯತ್ಯಾಸವನ್ನು ಭಗವಾನ್ ಎಸ್. ಗಿದ್ವಾನಿಯವರ ಮಾತುಗಳಲ್ಲೇ ಹೇಳುವುದಾದರೆ–"ಟಿಪ್ಪು ಯಾವುದಕ್ಕಾಗಿ

ಬದುಕಿದನೋ ಹಾಗೂ ಮಡಿದನೋ ಅವೆಲ್ಲವನ್ನೂ ಹಿಡಿದಿಡಲು ಕೇವಲ ಇತಿಹಾಸವು ಒಂದು ದುರ್ಬಲ ಮಾಧ್ಯಮವಾಗುತ್ತದೆಂಬುದು ನನ್ನ ಭಾವನೆಯಾಗಿತ್ತು.... ಇತಿಹಾಸವು ಗತಕಾಲದ ಬೂದಿಯನ್ನು ಮಾತ್ರ ಉಳಿಸಿಕೊಂಡಿರುತ್ತದೆಯೇ ಹೊರತು ಬೆಂಕಿಯನ್ನಲ್ಲ....ಟಿಪ್ಪು ಸುಲ್ತಾನನ ಜೀವನ, ಪ್ರೇಮ, ಬಲಿದಾನಗಳನ್ನು ವರ್ಣಿಸಲು ....ಅವನು ಯಾವುದರ ಅವಿಭಾಜ್ಯ ಅಂಗವಾಗಿದ್ದನೋ ಆ ಕಾಲದ ಬಗ್ಗೆಯೂ ಸಮರ್ಪಕವಾಗಿ ಸಾಧಿಸಿ ತೋರಿಸಲು ಒಂದು ಕಾದಂಬರಿಯೇ ಆಗಬೇಕಿತ್ತು". ಅಷ್ಟೇನೂ ಖ್ಯಾತ ಬರಹಗಾರರಲ್ಲದ ಗಿದ್ವಾನಿಯವರು ಮತ್ತೆ ಹೇಳುತ್ತಾರೆ– "....ಒಂದು ಇತಿಹಾಸ ಗ್ರಂಥವನ್ನು ಬರೆಯಲು ಬೇಕಾದ ಸಾಧನೆಗಳಾಗಲೀ, ತರಬೇತಿಯಾಗಲೀ ನನ್ನಲ್ಲಿಲ್ಲ....ಆದರೆ ವಾಸ್ತವವಾಗಿ ಕಾದಂಬರಿಯೊಂದನ್ನು ಸಹ ಬರೆಯುವ ಸಾಧನಗಳಾಗಲೀ, ತರಬೇತಿಯಾಗಲೀ, ಪ್ರತಿಭೆಯಾಗಲೀ ನನ್ನಲ್ಲಿವೆಯೆಂದೂ ನಾನು ಹೇಳಿಕೊಳ್ಳಲಾರೆ". ಈ ಹೇಳಿಕೆಗಳಲ್ಲಿರುವ ವಿರೋಧಾಭಾಸಗಳನ್ನು ಓದುಗರು ಗಮನಿಸಬೇಕು. "ಟಿಪ್ಪುವಿನ ಚಿತ್ರವನ್ನು ನ್ಯಾಯಯುತವಾಗಿಯೂ, ಕರಾರುವಾಕ್ಕಾಗಿಯೂ ರಚಿಸಬೇಕೆಂಬುದೇ" ಗಿದ್ವಾನಿಯವರ ಬಯಕೆ ಎಂದು ಅವರೇ ಹೇಳಿಕೊಂಡಿದ್ದಾರೆ.

"ಭಾರತದ ಇತಿಹಾಸವೆಂದರೆ ಸಾಗರದಲ್ಲಿ ಮುಳುಗಿಹೋದ ಹಡಗು"–ಎಂಬ ಹೇಳಿಕೆ ಇಲ್ಲಿ ಪ್ರಸ್ತುತವಾಗುತ್ತದೆ. ಯಾವುದು ಸತ್ಯ, ಯಾವುದು ಮಿಥ್ಯೆ–ಎಂಬ ನಿರ್ಣಯಕ್ಕೆ ಬರಲು ಯಾರಿಗೂ ಅಸಾಧ್ಯ. ಉಭಯ ಪಕ್ಷಗಳಲ್ಲೂ ಸಾಕಷ್ಟು ಉಲ್ಲೇಖಗಳು ದೊರೆಯುತ್ತವೆ. ಟಿಪ್ಪುಸುಲ್ತಾನ್ ಹೇಗಿದ್ದ ಎನ್ನುವುದಕ್ಕಿಂತ, ಅವನು ಹೇಗಿದ್ದರೆ ಚೆನ್ನಾಗಿರುತ್ತಿತ್ತು–ಎಂದು ಕಲ್ಪಿಸಿಕೊಂಡು ಆನಂದಿಸುವ, ಆ ಆನಂದವನ್ನೂ ಓದುಗರೊಂದಿಗೆ ಹಂಚಿಕೊಳ್ಳುವ ಒಬ್ಬ ಲೇಖಕನ ಸ್ವಾತಂತ್ರ್ಯ ಪ್ರಶ್ನಾತೀತವಾದುದು. ಕಾದಂಬರಿಯ ನಲವತ್ತೈದನೇ ಅಧ್ಯಾಯ "ಇನ್ನೊಬ್ಬ ವ್ಯಕ್ತಿಯ ನಾಲ್ಕು ವರ್ಷಗಳು" –ಟಿಪ್ಪುವಿನ ವ್ಯಕ್ತಿತ್ವದ ಹಲವು ಮುಖಗಳನ್ನು ಚಿತ್ರಿಸುವ ಪ್ರಯತ್ನ. ಧರ್ಮ ಸಹಿಷ್ಣುತೆ, ಕೊರಾನ್, ವೇದಗಳು–ಈ ಎಲ್ಲವರ ಪ್ರಸ್ತಾಪ ಅಲ್ಲಿದೆ. ಹಿಂದೂ, ಮುಸ್ಲಿಂ ಜನಾಂಗಗಳು ಒಟ್ಟಾಗಿ ಜೀವಿಸಿ, ಈ ದೇಶದಲ್ಲಿ ಉಭಯ ಸಂಸ್ಕೃತಿಗಳೂ ಹಾಸುಹೊಕ್ಕಾಗಿ ಬೆಸೆದು, ಒಬ್ಬರ ವಿನಾ ಮತ್ತೊಬ್ಬರ ಜೀವನ ಅಪೂರ್ಣ ಎಂಬ ಹಂತವನ್ನು ನಾವಿಂದು ತಲುಪಿದ್ದೇವೆ. ಈ ಸಂದರ್ಭದಲ್ಲೂ ಈ ಜಾತಿ ಧರ್ಮಗಳ ಬಿರುಕನ್ನು ತಂದೊಡ್ಡಿ, ರಾಜಕೀಯ ಮಾಡುವ ಹಳದೀ ಕಣ್ಣುಗಳು ಈ ಕಾದಂಬರಿಯಿಂದ ಕಲಿಯುವುದು ಬೇಕಾದಷ್ಟಿದೆ. ಇದು ಕಾದಂಬರಿ ಎನ್ನಿಸಿಕೊಂಡಿರುವುದರಿಂದ, ಐತಿಹಾಸಿಕ ವಿವಾದಗಳು, ಭಿನ್ನಾಭಿಪ್ರಾಯಗಳು ಅಪ್ರಸ್ತುತ. ಫ್ಲಾಶ್‌ಬ್ಯಾಕ್ ತಂತ್ರ

ವನ್ನು ಪ್ರಧಾನವಾಗಿ ಬಳಸಿಕೊಳ್ಳಲಾದ ಈ ಕಾದಂಬರಿಯಲ್ಲಿ ಕೆಲವು ಕಡೆ ಐತಿಹಾಸಿಕ ದಾಖಲೆಗಳು ಬೇಸರ ಬರಿಸುವಷ್ಟು ವಿಫುಲವಾಗಿವೆ,

ಎಸ್. ಬಿ. ರಂಗನಾಥ್‌ರವರ ಅನುವಾದ ಸೊಗಸಾಗಿದೆ. ಕೃತಿಯು ಬೃಹದ್ಗಾತ್ರದಿಂದಾಗಿ ಅಲ್ಲಲ್ಲಿ ಕೆಲವು ಶಿಥಿಲ ಬಂಧಗಳಿದ್ದರೂ ಸಹ್ಯವಾಗಿವೆ. ಕಾದಂಬರಿಯು ಮುಕ್ತ ಅನುವಾದ ಎಂದು ಅವರು ಹೇಳಿದ್ದಾರೆ. ಕಾದಂಬರಿಯು ವಿನ್ಯಾಸದಲ್ಲಿ ಸಾಮ್ರಾಜ್ಯಶಾಹೀ ಶಕ್ತಿ ಹಾಗೂ ಪ್ರಜಾಪ್ರಭುತ್ವಗಳ ನಡುವಣ ಸಂಘರ್ಷ ಸ್ಫುಟವಾಗಿ ಮೂಡಿಲ್ಲ. ಟಿಪ್ಪುವಿನ ವ್ಯಕ್ತಿಚಿತ್ರಣಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಈ ಅಂಶವನ್ನು ಅನುವಾದಕರು ಏನೂ ಮಾಡುವಂತಿಲ್ಲದೆ ಅಸಹಾಯಕರಾಗಿದ್ದಾರೆ.

—ಎನ್. ಎಸ್. ಚಿದಂಬರರಾವ್

ಆಯ್ದ ಲೇಖನಗಳು
ಲೇಖಕರು: **ಡಾ॥ ತಾಳ್ತಜೆ ವಸಂತಕುಮಾರ**

ಡಾ॥ ತಾಳ್ತಜೆಯವರು ಬರೆದ ಹನ್ನೆರಡು ಲೇಖನಗಳು ಇಲ್ಲಿ ಸಂಕಲಿತವಾಗಿವೆ. 'ಖಡ್ಗವಾಗಲಿ ವಿಮರ್ಶೆ' ಎನ್ನುವ ಧೋರಣೆಯಿಂದ ಖಡ್ಗಹಿರಿದು ಹೊರಡುವ ವಿಮರ್ಶಕರ ಇಂದಿನ ಸಂದರ್ಭಗಳಲ್ಲಿ ತಾಳ್ತಜೆಯವರ ಸಹೃದಯತೆ ಒಡೆದು ತೋರುವಂತಹದು. ತಾಳ್ತಜೆಯವರ ಲೇಖನಗಳಲ್ಲಿ ಕೃತಿಯ ಬಗೆಗೆ ಅವರು ಹೊಂದಿರುವ ಗೌರವ ಅತ್ಯಂತ ಸ್ಪಷ್ಟವಾಗಿ ಮೂಡಿಬರುತ್ತದೆ. ಇದು ಅವರು ತಮ್ಮ ಲೇಖನಗಳಿಗೆ ಆಯ್ದುಕೊಂಡ ಲೇಖಕರ ಬಗ್ಗೆ ಇಟ್ಟುಕೊಂಡ ಗೌರವದ ಭಾವನೆಯ ಮೂಲಕ ನಿಯಂತ್ರಿತವಾದುದೂ ಆಗಿರಬಹುದು. ತಾಳ್ತಜೆಯವರು ಯಾವುದೇ ಕೃತಿಯನ್ನು ಒಂದೇ ನಿರ್ದಿಷ್ಟ ದೃಷ್ಟಿಕೋನದೊಂದಿಗೆ ಪ್ರವೇಶ ಮಾಡುವಂತೆ ತೋರುತ್ತದೆ. ಬಹುತೇಕ ಲೇಖನಗಳು ಈ ದೃಷ್ಟಿಕೋನವನ್ನು ಮಂಡಿಸುತ್ತಲೇ ಆರಂಭಗೊಳ್ಳುತ್ತವೆ ಬಹುಶಃ ಈ ಕ್ರಮವು ಸಹೃದಯರಿಗೆ ಮಿತಿ ಹೇರುವಂಥದಾಗುತ್ತದೆ. ಸಂಕಲನದ 'ಅರವಿಂದ ನಾಡಕರ್ಣಿಯವರೊಡನೆ ಒಂದು ಸಂಜೆ' ಲೇಖನ ಕುತೂಹಲ ಹುಟ್ಟಿಸುವಂಥದಾಗಿದೆ.

ಬೇರು ಒಣಗಿದ ಪ್ರೀತಿ (ಕವನ)
ಲೇಖಕರು: **ಬಿ. ಎಸ್. ಮಲ್ಲೇಶ್**

ಇದು ಕವಿಯ ಮೊದಲ ಸಂಕಲನ. ಇಲ್ಲಿನ ಹಲವಾರು ಕವನಗಳಲ್ಲಿ ಬಂಡಾಯದ ಬಾವುಟ ಪಟಪಟನೆ ಹಾರುವ ಶಬ್ದ ಕೇಳಿಸುತ್ತದೆ. ಆದರೆ ಬರೀ ಶಬ್ದ.

ಅರ್ಥ ಹುಡುಕಲು ಹೆಣಗಬೇಕು. ಹಾಗೆ ಸಿಕ್ಕ ಅರ್ಥವೂ ಹೊಸದೇನೂ ಅನ್ನಿಸು ವುದಿಲ್ಲ, ಕಲ್ಲು ಕಟ್ಟಡದಂತೆ ಇವರ ಪದ್ಯಗಳು. ಪದ್ಯ ಕಟ್ಟುವ ಕೌಶಲ್ಯವಿದೆ; ಅರ್ಥ ಹೊಳೆಯಿಸುವ ಅರಿವೆಂಬುದು ಇಲ್ಲ. ಸ್ವಾತಂತ್ರ್ಯ, ಸಮತೆ ಹಾಗೂ ನ್ಯಾಯಕ್ಕಾಗಿ ಇಲ್ಲಿನ ಪದ್ಯಗಳಲ್ಲಿ ವ್ಯಕ್ತಮಾಡಲಾಗಿರುವ ಕಳಕಳಿ ತನ್ನ ಸ್ಥೂಲತೆಯಿಂದಾಗಿ ಅಂಗಾತ ವಾಗಿದೆ. ಬುದ್ಧಿಯಲ್ಲ. ಹೃದಯಕೊಟ್ಟು ಬರೆದರೆ ಮಲ್ಲೇಶ್ ಒಳ್ಳೆಯ ಪದ್ಯ ಬರೆಯಬಲ್ಲರೆಂಬುದಕ್ಕೆ 'ಬಾಂಬು ತುಟಿಗಳ ...' ಕವನದ ಮೊದಲ ಕೆಲವು ಸಾಲುಗಳು ಸಾಕ್ಷಿಯಂತಿವೆ. 'ಅಚ್ಚರಿಗೊಬ್ಬಳು ಪಿ. ಟಿ. ಉಷಾ' ಹಾಗೂ ಕೆಲವು ಹನಿಗವನಗಳು ಮೆಚ್ಚುಗೆಯಾಗುತ್ತವೆ.

ಕಪ್ಪು ಹುಡುಗನ ಬೆಳಗು (ಕವನ)

ಲೇಖಕರು: **ಎಸ್. ನಟರಾಜ್ ಬೂದಾಳು**

ಪ್ರಧಾನವಾಗಿ ಹಳ್ಳಿ ಬದುಕಿನ ಚಿತ್ರಗಳ ಮೂಲಕವೇ ಕವನ ಕಟ್ಟುವ ಈ ಕವಿ ತಮ್ಮ ಮೊದಲ ಸಂಕಲನದಲ್ಲೇ ನಾಲ್ಕಾರು ಒಳ್ಳೆಯ ಕವನಗಳನ್ನು ನೀಡಿದ್ದಾರೆ. 'ಬೆಳಗಾದ ಪರಿ', 'ಬೆಸ್ತರ ಹುಡುಗಿ', 'ಅಕ್ಕ', 'ತವಕ', 'ತಲೆ ಮೇಲಿನ ದೀವಿಗೆ', 'ಅವ್ವ', 'ಅಗ್ನಿ ಕೊಂಡ' ಹಾಗೂ 'ತೊರೆಯಜ್ಜ' ಇನ್ನೂ ಪೂರ್ಣವಾಗಿ ಅರಳಬೇಕಾದ ಕವನಗಳಾದರೂ ಅವು ಕಟ್ಟಿಕೊಡುವ ಆತ್ಮೀಯ ಚಿತ್ರ ಹಾಗೂ ಭಾವ-ಭಂಗಿಗಳ ಮೂಲಕ ನಮ್ಮನ್ನು ಸೆಳೆಯುತ್ತವೆ. 'ಗಂಗೆ' ಈ ಕವಿಯ ಅಭಿವ್ಯಕ್ತಿ ಸಾಮರ್ಥ್ಯ ಎಷ್ಟು ಸೂಕ್ಷ್ಮವಾದದ್ದೆಂಬುದಕ್ಕೆ ಉದಾಹರಣೆಯಂತಿದೆ. ಆದರೆ ಇಲ್ಲಿನ ಪ್ರತಿಯೊಂದು ಕವನವೂ ಅಪೂರ್ಣ ಕವನದಂತೇ ಅನ್ನಿಸುವುದೇತಕ್ಕೆ ಎಂಬುದನ್ನೂ ಕವಿ ಆಲೋಚಿಸಬೇಕಿದೆ.

ಹುಟ್ಟು ಸಾವುಗಳ ಮಧ್ಯೆ (ಲೇಖನಗಳು)

ಲೇಖಕರು: **ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು**

ಸ್ವಾಮಿಗಳು ವಿವಿಧ ಸಂದರ್ಭಗಳಲ್ಲಿ ಮಂಡಿಸಿದ ಪ್ರಬಂಧಗಳು ಹಾಗೂ ಮಾಡಿದ ಭಾಷಣಗಳನ್ನೊಳಗೊಂಡ ಈ ಸಂಗ್ರಹದ ವಸ್ತುವೈವಿಧ್ಯ ಮಕ್ಕಳ ಪೋಷಣೆ ಹೇಗೆಂಬ ಕೆಲವು ಬುದ್ಧಿಮಾತುಗಳಿಂದ ಹಿಡಿದು ನಮ್ಮ ಸಮಾಜವನ್ನು ಆವರಿಸಿರುವ ಮೂಢನಂಬಿಕೆಗಳ ವಿರುದ್ಧದ ಎಚ್ಚರಿಕೆಯ ಮಾತುಗಳವರೆಗೆ ಹರಡಿಕೊಂಡಿದೆ. ಹಲವೆಡೆ ತೀರಾ ಪ್ರಾಥಮಿಕ ವಿಷಯಗಳನ್ನು ತಿಳಿಸುತ್ತಿದ್ದಾರೆ. ಅನಗತ್ಯವಾಗಿ, ಈಗಾಗಲೇ ಸವಕಲಾಗಿರುವ ಉಲ್ಲೇಖಗಳನ್ನು (quotations) ಮಾಡುತ್ತಿದ್ದಾರೆ ಹಾಗೂ ಹೇಳಿದ್ದನ್ನೇ ನೀರು ನೀರು ಮಾಡಿ ಹೇಳುತ್ತಿದ್ದಾರೆ ಎನ್ನಿಸುವುದಾದರೂ, ಇವರ ಮಾತುಗಳಿಗೆ ಕಿವಿಗೊಡುವಂತಹವರಿಗೆ ಈ ರೀತಿಯ ಮಾತುಗಾರಿಕೆಯೇ ಬೇಕಿರ

ಬಹುದು. ಏನೇ ಆಗಲಿ ಮಠಾಧೀಶರೊಬ್ಬರು ಜನರ ಲೌಕಿಕ ವಿವರಗಳ ಕಡೆಗೂ ಈ ರೀತಿ ಗಮನ ಹರಿಸುತ್ತಿರುವುದು ಶುಭದಾಯಕ.

ತುಂಗೆಯಲ್ಲಿ ಹೆಣ (ಕವನ)

ಲೇಖಕರು: **ಜಿ. ಪಿ. ಬಸವರಾಜು**

ಈಗ್ಗೆ ಬಹಳ ವರ್ಷಗಳಿಂದ ಪದ್ಯ ಬರೆಯುತ್ತಿರುವ ಬಸವರಾಜು ಅವರ ಮೊದಲ ಕವನ ಸಂಕಲನ ಇದು. ಮುನ್ನುಡಿಕಾರ ಜಿ. ರಾಜಶೇಖರ್ ಹೇಳಿರುವಂತೆ 'ಈ ಸಂಕಲನದ ಅಷ್ಟೂ ಪದ್ಯಗಳಲ್ಲಿ ಲಯಕ್ಕೆ ಎರವಾಗುವ ಒಂದೇ ಒಂದು ಸಾಲು, ಲಯವನ್ನು ಮುರಿಯುವ ಒಂದೇ ಒಂದು ಶಬ್ದ ಕಾಣಿಸುವುದಿಲ್ಲ. ಲಯ ಕಾವ್ಯದ ಅತ್ಯಂತ ಪ್ರಾಥಮಿಕ ನಿಯಮ'. ಈ ನಿಯಮವನ್ನು ವ್ರತವೆಂಬಂತೆ ಪಾಲಿಸಿರುವ ಕವಿ ಏನಲ್ಲದಿದ್ದರೂ–ಈಗ ಅಪರೂಪವಾಗುತ್ತಿರುವ–ಅಚ್ಚುಕಟ್ಟಾದ ಕವಿ ಎನ್ನಿಸಿಕೊಳ್ಳುತ್ತಾರೆ. ಹೀಗಾಗಿ ಇಲ್ಲಿರುವ ಎಲ್ಲ 31 ಕವನಗಳನ್ನೂ ಸಂತೋಷದಿಂದ ಓದಬಹುದಾಗಿದೆ. ಬೆರಗು–ವಿಷಾದಗಳನ್ನೇ ತಮ್ಮ ಕಾವ್ಯದ ಸ್ಥಾಯಿಭಾವ ಮಾಡಿಕೊಂಡಿರುವ ಈ ಕವಿ ಈ ಭಾವಗಳು ಹಲವೆಡೆ deliberate ಮತ್ತು manipulated ಆಗಿ ಓದುಗರಿಗೆ ಕಾಣುವುದಕ್ಕೆ ಕಾರಣವೇನು ಎಂಬುದರ ಬಗೆಗೆ ಯೋಚಿಸುವ ಅಗತ್ಯ ಇದೆ. 'ಕತ್ತಲು–ಬೆಳಕು', 'ಪರಿಮಿತಿಯ ಪಾಠ', 'ಚಿಟ್ಟೆ–ಗಿಡ', 'ಕಡಲು' ಹಾಗೂ ಕೆಲವು ಹನಿಗವನಗಳು ಮನ ಮುಟ್ಟುತ್ತವೆ.

ನ್ಯಾಯ (ಕಥೆಗಳು)

ಲೇಖಕರು: **ಕೋರಗಲ್ ವಿರೂಪಾಕ್ಷಪ್ಪ**

ಇಲ್ಲಿನ ಹತ್ತೂ ಕಥೆಗಳು ಕುತೂಹಲ ಉಳಿಸಿಕೊಂಡು ಓದಿಸಿಕೊಳ್ಳುತ್ತವೆ. ಅನ್ಯಾಯ, ಅಸಮತೆ ಹಾಗೂ ಮೌಢ್ಯದ ವಿರುದ್ಧ ಸ್ವಲ್ಪ ವಾಚ್ಯವಾಗಿಯೇ ಪ್ರತಿಭಟನೆ ಸೂಚಿಸುವ ಈ ಕಥೆಗಳು ಉತ್ತರ ಕರ್ನಾಟಕದ ಸರಳಭಾಷೆ, ನೇರ ನಿರೂಪಣೆ ಹಾಗೂ ತನ್ನ ಗ್ರಹಿಕೆಗೆ ದಕ್ಕಿದಷ್ಟನ್ನೇ ಹೇಳುವ ಸಂಯಮಗಳಿಂದಾಗಿ ಎಲ್ಲೂ ಒರಟಾಟ ಹಾಗೂ ಉತ್ಪ್ರೇಕ್ಷೆಗಳಲ್ಲಿ ನುಗ್ಗಾಗದೆ ಉಳಿದಿವೆ. 'ಗಿಣಿಗಿಣಿ ರಾಮ' ಹಾಗೂ 'ನಾನೂ ಕುಬ್ಜ, ನಾನು ಕಿರಿಯ' ಕಥೆಗಳು ವಿರೂಪಾಕ್ಷಪ್ಪ ಅವರು ಸಮಾಜವನ್ನು ಹೊರಗಿದ್ದುಕೊಂಡೇ, ಕೇವಲ ಅಸಮಾಧಾನ ಹಾಗೂ ಅನುಮಾನಗಳಿಂದ ನೋಡದೆ ಅದು ತಾನಿರುವ, ತನ್ನೊಳಗಿರುವ ಸಮಾಜವೇ ಎಂದು ನೋಡತೊಡಗಿದಾಗ ಬರೆಯಬಲ್ಲ ಶಕ್ತಕಥೆಗಳಿಗೆ ಮುನ್ಸೂಚನೆಯಂತಿವೆ. ಈ ನೋಟ ದಕ್ಕಿಸಿಕೊಳ್ಳಲು ಅವರು ತಮ್ಮ ಇತರ ಕಥೆಗಳಲ್ಲಿ ಯಶಸ್ವಿಯಾಗಿ ಅಳವಡಿಸಿಕೊಂಡಿರುವ ಕಥೆಗಾರಿಕೆಯ ಸಾಮಾನ್ಯ ಸೂತ್ರಗಳನ್ನು ಕ್ರಮೇಣ ತ್ಯಜಿಸಬೇಕಾಗುತ್ತದೆ.

ಚಕ್ರತೀರ್ಥ (ಕವನಗಳು)

ಸಂಪಾದಕರು: ಕೇಶವಮಳಗಿ ಹಾಗೂ ಸುಶೀಲಾ ಶಿರೂರು

ಬಳ್ಳಾರಿ ಜಿಲ್ಲೆಯ ಐವತ್ತೈದು ಜನ ಕವಿಗಳು ಸೇರಿ ಹೊರತಂದಿರುವ ಈ ಕವನ ಸಂಕಲನದಲ್ಲಿ ವೈವಿಧ್ಯಮಯ ಆಸಕ್ತಿಗಳು ಪ್ರೇರಣೆಗಳು ಇವೆ_ಮೊಲಾಯಿಸ್‌ನಿಂದ ಹಿಡಿದು ಕಲ್ಲಿನ ಕಥೆಯವರೆಗೆ, ಅಹಲ್ಯೆಯಿಂದ ಹಿಡಿದು ಋತು ಶೃಂಗಾರದವರೆಗೆ. ಹೆಚ್ಚಾಗಿ ನವ್ಯ ಮತ್ತು ಬಂಡಾಯದ ಪ್ರೇರಣೆಗಳು ಇಲ್ಲಿನ ಹೆಚ್ಚಿನ ಕವಿತೆಗಳ ಹಿಂದಿವೆ. ಬಳ್ಳಾರಿಯ ಬಿಸಿಲಲ್ಲಿ ಕವಿತೆಯ ಸಸಿನೆಟ್ಟು 'ನಜರ ಕಾವಲಿಟ್ಟು ತುರಾಯಿ ತುರಾಯಿ ಹೂಗೊಂಚಲು ಅರಳಿಸಲು ಮಾಡಿದ ಸ್ವಾಗತಾರ್ಹ ಪ್ರಯತ್ನವಿದು.

ಜೋಡಿ ದೀಪದ ನೆನಪು (ಕವನಗಳು)

ಲೇಖಕಿ: ಹೆಚ್. ಪ್ರೇಮಲೀಲ

ಹೆಚ್. ಪ್ರೇಮಲೀಲ ಅವರ ಈ ಮೊದಲ ಕವನ ಸಂಕಲನದಲ್ಲಿ ಸುಮಾರು ಮೂವತ್ತೈದು ಕವಿತೆಗಳಿವೆ. 'ಕನಸು', 'ಕೆಂಡವನು ಸುರಿಯದಿರಿ', 'ಮೌನ ಗೀತೆ' ಎಂಬ ಕವಿತೆಗಳಲ್ಲಿ ಒಂದು ಮನಸ್ಥಿತಿಯನ್ನು ನಿರೂಪಿಸುವ ಸನ್ನಿವೇಶ ಕಟ್ಟಿಕೊಡುವ ಪ್ರಯತ್ನವಿದೆ. ಇಲ್ಲಿನ ಹೆಚ್ಚಿನ ಕವಿತೆಗಳಿಗೆ ಪ್ರೇರಣೆ ವೈಯಕ್ತಿಕ ಸಂಬಂಧಗಳು. ಇದು ಒಂದು ನೆಲೆಯಲ್ಲಿ ಕವಿತೆಗೆ ಅಚ್ಚುಕಟ್ಟಿನ ನಿರೂಪಣೆಯನ್ನು ಒದಗಿಸಿದರೆ– ಇನ್ನೊಂದು ನೆಲೆಯಲ್ಲಿ ಗ್ರಹಿಕೆಯನ್ನು ಸೀಮಿತಗೊಳಿಸಿ ಬಿಡುವುದೂ ಉಂಟು.

ಬರಲು (ಕವನಗಳು)

ಲೇಖಕರು: ಟಿ. ಜಿ. ಭಟ್ಟ

ಟಿ. ಜಿ. ಭಟ್ಟರ ಎರಡನೆಯ ಕವನ ಸಂಕಲನವಿದು. ಒಮ್ಮೆ ನವ್ಯದ ವ್ಯಂಗ್ಯ ಕಟಕಿಗಳ ಉತ್ಕಟತೆಯಲ್ಲಿ ಬರೆಯುವ ಈ ಕವಿ (ಉದಾ: 'ಕಾಳಸರ್ಪ', 'ಹೊಸನಾಡಿಗೆ') ಇನ್ನೊಮ್ಮೆ ತಿಳಿಹಾಸ್ಯದ ದಕ್ಷಿಣ ಕನ್ನಡದ ಆಡುಭಾಷೆಯ ಸರಳತೆಯಲ್ಲಿ ತೆರೆದು ಕೊಳ್ಳುತ್ತಾರೆ ('ಮಾಣಿ ಕೂಸು ಸಲ್ಲಾಪ, ಕವಳದ ನಾಗಜ್ಜಿ ಪರಿಸರವಾದ). 'ಕೈಗಾ ಒಂದು ಸಂವಾದ'. 'ಅಪ್ಪಿಕೋ ಹಾಡು' ಬರೆದ ಕವಿಯೇ 'ಕವಳದ ನಾಗಜ್ಜಿ ಪರಿಸರ ವಾದ' ಬರೆದಿರುವುದು ಈ ಕವಿಗೆ ಯಾವುದೇ ಚಳುವಳಿ ಒಂದು ಮಿತಿಯಾಗಿಲ್ಲ ಎಂಬು ದನ್ನು ಸೂಚಿಸುತ್ತದೆ.

ಅವಡುಗಚ್ಚಿದ ಬೇನೆ (ಕವನಗಳು)

ಲೇಖಕಿ: ಹೆಚ್. ಆರ್. ಲೀಲಾವತಿ

ಶ್ರೀಮತಿ ಹೆಚ್. ಆರ್. ಲೀಲಾವತಿಯವರ ಈ ಕವನ ಸಂಕಲನದ ಎಲ್ಲ ಕವಿತೆ ಗಳಲ್ಲಿ ಭಾಷೆಯ ಬಳಕೆ ಸಮಾನವಾಗಿ ಏರುಪೇರಿಲ್ಲದ ಅಚ್ಚುಕಟ್ಟಿನ ಲಯದಲ್ಲಿ ಸಾಗಿದೆ.

ಹೆಚ್ಚು ಮಹತ್ವಾಕಾಂಕ್ಷೆಯಿಲ್ಲದ ಅಚ್ಚುಕಟ್ಟಿನ ಕವಿತೆಗಳಿವೆ. (ಉದಾ: 'ಮುತ್ತಜ್ಜಿಯ ಬೇರು', 'ಕಿರು ಉಲ್ಕೆ') 'ಜಾತ್ರೆ', 'ಸಾವಿತ್ರಿ–ರೂಪ ಕನ್ವರ್' ಕವಿತೆಗಳಲ್ಲಿ ಇವರ ಸೂಕ್ಷ್ಮ ಸಂವೇದನೆ ವ್ಯಕ್ತಗೊಂಡಿದೆ. ಕನ್ನಡ ಕಾವ್ಯ ಸಂದರ್ಭವನ್ನು ರಾಷ್ಟ್ರದ ಸಾಮಾಜಿಕ ಜೀವನವನ್ನು ಕವಯಿತ್ರಿ ಸೂಕ್ಷ್ಮವಾಗಿ ಗಮನಿಸುತ್ತಾ, ಸಂವೇದಿಸುತ್ತಾ ಹೋಗಿರುವುದನ್ನು 'ಸಾಕ್ಷಿ ಗೂಡು', 'ಏಕತೆ' ಕವಿತೆಗಳು ಹೇಳುತ್ತವೆ.

ನಾನು ಒಲಿದಂತೆ ಹಾಡುವೆ (ಪ್ರಬಂಧಗಳು)

ಲೇಖಕರು: **ಚಂದ್ರಶೇಖರ ಆಲೂರು**

ಈ ಸಂಕಲನದಲ್ಲಿರುವ ಹದಿಮೂರು ಪ್ರಬಂಧಗಳಲ್ಲಿ ಲಲಿತವಾದ ಕಾವ್ಯಮಯ ವಾದ ಭಾಷೆಯಲ್ಲಿ ದೈನಂದಿನ ಜೀವನದ ಅನೇಕ ಅನುಭವಗಳು ಚಿಂತನದ ಮೂಲಕ ಹಾದು ಬಂದು ತತ್ವದ ಘನತೆಯನ್ನು ಭಾವಗೀತೆಯ ಮಾಧುರ್ಯವನ್ನು ಪಡೆದು ಕೊಂಡಿದೆ. ದೇವಯಾನಿಯನ್ನು ಕುರಿತ ಕೊನೆಯ ಪ್ರಬಂಧ ಕಥಾನಕ ಮತ್ತು ಉದ್ಧರಣಗಳಿಂದಾಗಿ ತನ್ನ ಒಡಲೇ ತನಗೆ ಹೊರೆಯಾದಂತೆನಿಸುತ್ತದೆ. ಲಲಿತ ಪ್ರಬಂಧಗಳ ಕಾಲವೇ ಮುಗಿಯಿತೆನ್ನುವಾಗ ಮತ್ತೆ ಪ್ರಾರಂಭವಾದ ಮೊದಲ ಸುಗ್ಗಿಗೆ ಇದೊಂದು ಬೆಲೆಯುಳ್ಳ ಸೇರ್ಪಡೆ.

ಬಂದೀಖಾನೆ (ಕಾದಂಬರಿ)

ಲೇಖಕರು: **ಪ್ರಹ್ಲಾದ ಅಗಸನಕಟ್ಟೆ**

ಇದು ಪ್ರಹ್ಲಾದ ಅಗಸನಕಟ್ಟೆಯವರ ಮೊದಲ ಕಾದಂಬರಿ. ಆದರೆ ಈ ಬರೆಹ ಮೊದಲ ಕಾದಂಬರಿಯ ಮಿತಿಗಳನ್ನು ಮೀರಿದ್ದಾಗಿದೆ. 'ತರಣಿಯ ಹುಳು ತನ್ನ ಬಲೆಯ ತಾನೇ ನೇದುಕೊಂಡಂತೆ' ಅನ್ನೆಹಾಳಿನ ಜನ ಜಾತಿ ಪಾತಿ ಎಂದು, ಪಾರ್ಟಿ ಎಂದು, ಬಲೆ ನೇಯುತ್ತ ನೇಯುತ್ತ ಬಂದೀಖಾನೆಯಂತಹ ಶಾಲೆ ಹುಟ್ಟುಹಾಕುತ್ತಾರೆ. ಶಾಲೆ ಎಂಬುವುದೊಂದು ಸಮಾಜದ ಮುಖ್ಯ ಅಂಗ–ಮೆದುಳು ಇದ್ದಹಂಗೆ. ಆದರೆ ಕೊಳೆ ಯುವ ಸಮಾಜ ಕೊಳೆಯುವ ಶಾಲೆಯನ್ನ ಮಾತ್ರ ಹೊಂದಬಹುದು. ಇಂಥ ಬಂದೀಖಾನೆಯಲ್ಲಿ ಸಿಕ್ಕಿಹಾಕಿಕೊಳ್ಳುವ ಹಾಲೇಶಿಯಂಥ ಆರೋಗ್ಯಪೂರ್ಣ ಹುಡುಗನ ದುರಂತ ಅನಿವಾರ್ಯವಾಗುತ್ತದೆ. ಹತ್ತಾರು ಶಬ್ದಗಳಲ್ಲಿ ಮಾತ್ರ ಪ್ರತ್ಯಕ್ಷಗೊಳ್ಳುವ ಆರೋಗ್ಯಪೂರ್ಣ ತುಂಟ, ಜಾಣ, ಹಾಲೇಶಿಯ ದುರಂತ ವಾಸ್ತವ ಮತ್ತು ಸಾಂಕೇತಿಕ ನೆಲೆಗಳೆರಡರಲ್ಲೂ ನಮ್ಮನ್ನು ತಟ್ಟುವಲ್ಲಿ ಕಾದಂಬರಿಯ ಶಕ್ತಿ ಸ್ಪಷ್ಟಗೊಳ್ಳುತ್ತದೆ. ಪ್ರಹ್ಲಾದ ಅಗಸನಕಟ್ಟೆಯವರಿಂದ ಗಂಭೀರ ಕಾಳಜಿಯ ಇನ್ನಷ್ಟು ಶಕ್ತಿಪೂರ್ಣ ಕಥಾ ನಕಗಳನ್ನು ನಿರೀಕ್ಷಿಸಬಹುದೆನ್ನುವ ನಂಬಿಕೆಯನ್ನು ಈ ಕಾದಂಬರಿ ಮೂಡಿಸುತ್ತದೆ.

ಕಸಿ (ಕಥಾ ಸಂಕಲನ)

ಲೇಖಕರು: **ಚಂದ್ರಶೇಖರ ಅಕ್ಕಿ**

ಇದು ಚಂದ್ರಶೇಖರ ಅಕ್ಕಿಯವರ ಮೊದಲ ಕಥಾ ಸಂಕಲನ. ಆದರೆ ಕಥೆಗಾರಿಕೆಯಲ್ಲಿ ಮೂಡಿಬಂದಿರುವ ಸಂಯಮದ ನಡೆಯು ಅಕ್ಕಿಯವರನ್ನು ಗಂಭೀರವಾಗಿ ಪರಿಗಣಿಸುವಂತೆ ಮಾಡುತ್ತದೆ. ಸಂಕಲನದ ಆರು ಕಥೆಗಳು ವೈವಿಧ್ಯತೆಯ ಬಿಂಬಗಳಾಗಿವೆ. 'ಕಸಿ', 'ಮಣ್ಣು ಕೊಟ್ಟದ್ದು' ಕಥೆಗಳು ಸಾಂಕೇತಿಕ ಆಯಾಮ ಪಡೆದುಕೊಳ್ಳುತ್ತವೆ. ಅಕ್ಕಿಯವರು ನವ್ಯದ ಆರಂಭದ ನೆಲೆಯಲ್ಲಿ ನಿಂತು ಬರೆದಂತೆ ತೋರುತ್ತದೆ. ಕೆಲವು ಕಥೆ ಓದುವಾಗ ಹಳೆಯ ಕಥೆಗಳ ಆವೃತ್ತಿಯಂತೆ ತೋರಿ ಅತೃಪ್ತಿ ಮೂಡುತ್ತದೆ. ಆದರೆ ಇವರ ಭಾಷೆ ಮತ್ತು ಶೈಲಿಗಳ ನೆಲೆಯಲ್ಲಿ ಅಕ್ಕಿಯವರ ಮುಂದಿನ ಕಥೆಗಳ ಬಗ್ಗೆ ನಮಗೆ ಆಸೆ ಹುಟ್ಟುತ್ತದೆ. ಗ್ರಹಿಕೆಯ ವ್ಯಾಪ್ತಿ ಮತ್ತು ಚೂಪುತನವನ್ನು ಹೆಚ್ಚಿಸಿಕೊಳ್ಳುವತ್ತ ತೊಡಗಿದರೆ ಇವರಿಂದ ಖಂಡಿತವಾಗಿ ನಮಗೆ ಒಳ್ಳೆಯ ಕಥೆಗಳು ದೊರೆಯುತ್ತವೆ.

ಅಗ್ನಿದಿವ್ಯ (ಕವನ ಸಂಕಲನ)

ಲೇಖಕಿ: **'ವಸುಮತಿ'**

ಲೇಖಕಿಯ ಮೊದಲ ಕವನ ಸಂಕಲನವಿದು. ಇಲ್ಲಿನ ಕವಿತೆಗಳು ಬಹುತೇಕ ಮುಕ್ತಕಗಳಾಗಿವೆ. ಲಘು ಭಾವಗೀತೆಗಳಾಗಿವೆ. ಮೊದಲ ಮುಕ್ತಕ ಸಂಚಯನ– 'ಬಯಕೆ', ಹೆಣ್ಣು ಬಯಕೆಯ ವಿವಿಧ ಮುಖಗಳನ್ನು ತೋರುತ್ತದೆ. ಐಂದ್ರಿಯಿಕ ಆಕಾಂಕ್ಷೆಗಳನ್ನು ಹೇಳುವ ಈ ಸಂಚಯನದಲ್ಲಿ–

ತಪನಿಂತ ಚೆಲುವು
ವರ್ಷ ನೀಡಿದ ಒಲುಮೆಗೆ
ಮುರಿದು ಮೌನ
ಚಿಮ್ಮಿಸಿತು
ಚಿಗುರು–ಹೂವು (ಪುಟ 5)

ಈ ಮುಕ್ತಕ ಚಂದವಾಗಿ ಮೂಡಿ ಬಂದಿದೆ. 'ನಿರಸನ' ಸಂಚಯನದಲ್ಲಿ ವಿರಹ ಭಾವ ವ್ಯಕ್ತವಾಗಿದೆ. ಉಳಿದ ಪದ್ಯಗಳೂ ಹೆಣ್ಣು ಮನಸಿನ ಪದರಗಳನ್ನು ಚಿತ್ರಿಸುವಂಥವುಗಳಾಗಿವೆ. ಈ ಸಂಕಲನದ ಎಗ್ಗಿಲ್ಲದ ಅಭಿವ್ಯಕ್ತಿಯ ಪದ್ಯಗಳು ಸರಳವಾಗಿ ನಮ್ಮೊಳಗೆ ಇಳಿದು ನಮ್ಮ ಹೃದಯವನ್ನು ಬೆಚ್ಚಗಾಗಿಸುವಂಥವುಗಳಾಗಿವೆ.

ಕನಸು ನನಸುಗಳ ನಡುವೆ (ಕವನ ಸಂಕಲನ)

ಲೇಖಕಿ: **ರತ್ನಾ ಮೂರ್ತಿ**

ಇದು ರತ್ನಾ ಮೂರ್ತಿಯವರ ಮೊದಲ ಕವನ ಸಂಕಲನ. ಇವರ ಕಾವ್ಯ

ಪ್ರಜ್ಞೆ ನವೋದಯಕಾಲದ ರಮ್ಯ ಪರಂಪರೆಗೆ ಸೇರಿದ್ದು. ಇದು ನವ್ಯ, ನವ್ಯೋತ್ತರ ಪ್ರಜ್ಞೆಗಳ ಮೂಲಕವಾಗಿ ದಾಟಿ ಬಂದದ್ದಲ್ಲ.

'ಕಲ್ಪನೆಯ ಗರಿಕಟ್ಟಿ ಸಂಚರಿಸುತಿರೆ ಮನಸು
ವಾಸ್ತವತೆ ಮರೆತೊಮ್ಮೆ ತಳಸೇರಲಿ'

ಎಂದು ಪ್ರಾರ್ಥಿಸುವ ಇವರ ಕವಿತೆಗಳು ರೋಮಾಂಟಿಸ್ಮ್‌ನ ಮಿತಿಗಳನ್ನು ಧಾರಾಳವಾಗಿ ಪಡೆದುಕೊಂಡಿವೆ. 'ಮುನಿಸಿನ ಗಂಡ', 'ಮಗಳ ಹಂಬಲ' ಕವಿತೆಗಳ ಹಿಂದಿನ ಸುಕುಮಾರ, ಜಾನಪದ ಪ್ರಜ್ಞೆ ಮಾತ್ರ ಮುದ ನೀಡುವಂತಿದೆ. ಅಧ್ಯಯನ ಮತ್ತು ಧ್ಯಾನದ ಗಂಭೀರವಾದ ನೆಲೆಯಲ್ಲಿ ರತ್ನಾ ಮೂರ್ತಿಯವರು ಕಾವ್ಯಕರ್ಮದಲ್ಲಿ ತೊಡಗುವ ಅವಶ್ಯಕತೆ ಇದೆ.

ರಾಜಧಾನಿಯಲ್ಲಿ ಶ್ರೀಮತಿಯರು

ಲೇಖಕರು, ಕೆ. ಸತ್ಯನಾರಾಯಣ

ಕವನ–ಕಾದಂಬರಿಯೆನ್ನಬಹುದಾದ ಈ ವಿಶಿಷ್ಟ ಪ್ರಯೋಗ ಈ ವಿಶಿಷ್ಟತೆಯಿಂದಲೇ ಗಮನ ಸೆಳೆಯುತ್ತದೆ. ಮೆರವಣಿಗೆಗಾಗಿ ರಾಜಧಾನಿಗೆ ಬಂದ ಅಂಗನವಾಡಿ ಕಾರ್ಯಕರ್ತೆಯರು ಜೈಲು ಸೇರಬೇಕಾಗಿ ಬಂದ ಒಂದು ಅವಘಡದಿಂದ ಉಂಟಾದ ತಲ್ಲಣ, ಇಂದಿನ ಇಂಡಿಯಾದ ಹೆಣ್ಣಿನ ದಿಕ್ಕಾಪಾಲಾದ ಚೇತನವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವಾಗಿ ಮೈದಾಳಿದೆ ಈ ಕೃತಿಯಲ್ಲಿ. ಆದರೆ ಅತ್ತ ಕವನವೂ ಆಗದೆ ಇತ್ತ ಕಾದಂಬರಿಯೂ ಆಗದೆ ಎರಡರ ನೆರಳುಗಳನ್ನಷ್ಟೆ ಸಂಯೋಜಿಸಿಕೊಂಡು, ಪರಿಣಾಮವಾಗಿ ಒಟ್ಟಾರೆ ಸ್ಥೂಲತೆಗೆ ಎರವಾಗಿರುವ ಈ ಕೃತಿ 'ಎಲ್ಲದರ ಪ್ರಾರಂಭಕ್ಕಾಗಿ ಮುಕ್ತಾಯದ ಪ್ರಾರ್ಥನೆ' ಎಂಬ ಕೊನೇ ಅಧ್ಯಾಯದಲ್ಲಿ ತನ್ನ ನಿರ್ಮಲ ಪ್ರೀತಿಗಾಗಿ ತುಡಿತ ಹಾಗೂ ಸರಳಕಾವ್ಯದಿಂದಾಗಿ ಮಿಂಚುತ್ತದೆ.

ಪುಸ್ತಕ ಸ್ವೀಕಾರ

೧. ನವ್ಯಸಾಹಿತ್ಯ ದರ್ಶನ (ವಿಮರ್ಶೆ) ಲೇ: ಶಾಂತಿನಾಥ ದೇಸಾಯಿ
ಪ್ರ: ಪರಿಸರ ಸಾಹಿತ್ಯ, ಶಿವಮೊಗ್ಗ (1990)
ಪುಟ xviii + 246, ಬೆಲೆ ರೂ. 65/–

೨. ಭಗವತಿ ಕಾಡು (ಕಥೆಗಳು) ಲೇ: ಕುಂ. ವೀರಭದ್ರಪ್ಪ
ಪ್ರ: ಕಲ್ಯಾಣಿ ಪ್ರಕಾಶನ, ಶ್ರೀನಗರ, ಬೆಂಗಳೂರು-50 (1990)
ಪುಟ viii + 52, ಬೆಲೆ ರೂ. 30/-

೩. ಕಳೆಕೊಂಡವರು (ನಾಟಕ) ಲೇ: ಚಂದ್ರು ಕಾಳೇನಹಳ್ಳಿ
ಪ್ರ: ಹೊಯ್ಸಳ ಪ್ರಕಾಶನ, ಚನ್ನರಾಯಪಟ್ಟಣ–573 116 ಹಾಸನ ಜಿಲ್ಲೆ (1991)
ಪುಟ viii + 70, ಬೆಲೆ ರೂ. 15/– ಮತ್ತು 25/–

೪. ಕಲೆ ಮತ್ತು ಸಂಸ್ಕೃತಿ (ವಿಚಾರ–ವಿಮರ್ಶೆ) ಲೇ: ಬಿ. ಎ. ಸನದಿ
ಪ್ರ: ಕಾಲಗತಿ ಪ್ರಕಾಶನ, ರಾಯಬಾಗ-591 317 ರಾಯಚೂರು ಜಿಲ್ಲೆ (1990)
ಪುಟ 116, ಬೆಲೆ ರೂ. 16

೫. ಸಂಭವ (ಕವನಗಳು) ಲೇ: ಬಿ. ಎ. ಸನದಿ
ಪ್ರ: ಭಾವನಾ ಪ್ರಕಾಶನ, ಮುಂಬಯಿ (1991) ಪುಟ 104, ಬೆಲೆ ರೂ, 20/–

೬. ಗಮನ (ವಿಮರ್ಶೆ–ವಿಚಾರ) ಲೇ: ಡಿ. ಎಸ್. ನಾಗಭೂಷಣ
ಪ್ರ: ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ (1990)
ಪುಟ viii + 152, ಬೆಲೆ ರೂ. 33/–

೭. ವರ್ತಮಾನ (ಕವನಗಳು) ಲೇ: ಮಾರುತಿ ಭೋಸಲೆ
ಪ್ರ: ಸಾಹಿತ್ಯ ವೇದಿಕೆ, ನರಗುಂದ (1991) ಪುಟ ix + 52, ಬೆಲೆ ರೂ. 8–50

೮. ಕುದುರೆಗಳೂ ಕೇಳಿದವು ಗೀತೋಪದೇಶ (ಕವನಗಳು) ಲೇ: ಮಲ್ಲಿಕಾರ್ಜುನ ಬಿ. ಪಿ.
ಪ್ರ: ಜಯಾ ಮಲ್ಲಿಕಾರ್ಜುನ ಪ್ರಕಾಶನ, ಗುಲಬರ್ಗಾ–585 102 (1990)
ಪುಟ vii + 42, ಬೆಲೆ ರೂ. 10/-

೯. ಬೇರುಗಳು (ಕವನಗಳು) ಲೇ: ಶಂಕರಗೌಡ ಸಾತ್ಮಾರ
ಪ್ರ: ಸಾಹಿತ್ಯ ವೇದಿಕೆ, ನರಗುಂದ (1991) ಪುಟ x + 46, ಬೆಲೆ ರೂ. 8/–

೧೦. ಶ್ರಾವಣ (ಬೇಂದ್ರೆ ಕಾವ್ಯ ವಿಮರ್ಶೆ) ಪ್ರ. ಸಂ: ನ. ರವಿಕುಮಾರ
ಪ್ರ: ಪ್ರತಿಭಾ ಯುವವೇದಿಕೆ, ಬೆಂಗಳೂರು-21 (1991)
ಪುಟ iv + 52, ಬೆಲೆ ರೂ. 10/–

೧೧. ಅಮೀನಪುರದ ಸಂತೆ (ಕಥೆಗಳು) ಲೇ: ಮಲ್ಲಿಕಾರ್ಜುನ ಹಿರೇಮಠ
ಪ್ರ: ಚೈತನ್ಯ ಪ್ರಕಾಶನ, ಹುನಗುಂದ–587 118 (1990)
ಪುಟ viii + 94, ಬೆಲೆ ರೂ, 20

೧೨. ಪ್ರೇಯಸಿಗೆ ಪತ್ರಗಳು (ಪತ್ರ ಸಾಹಿತ್ಯ) ಲೇ: ಕೃಷ್ಣಾನಂದ ಕಾಮತ
ಪ್ರ: ಮನೋಹರ ಗ್ರಂಥಮಾಲಾ, ಧಾರವಾಡ-580 001 (1990)
ಪುಟ xiv + 142, ಬೆಲೆ ರೂ. 25/–

೧೩. ಸಿದ್ಧರ ಬೆಟ್ಟ–ಒಂದು ದರ್ಶನ (ಸ್ಥಳ ಚರಿತ್ರೆ) ಲೇ: ವೀ. ಚಿಕ್ಕವೀರಯ್ಯ
ಪ್ರ: ಶ್ರೀ ಸಿದ್ಧೇಶ್ವರಸ್ವಾಮಿ ಸೇವಾ ಸಮಿತಿ (ರಿ.) ಸಿದ್ಧರಬೆಟ್ಟ, ತುಮಕೂರು ಜಿಲ್ಲೆ (1991)
ಪುಟ 66, ಬೆಲೆ ರೂ. 5/–

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗ,

ನಾಲ್ಕನೇ ಸಂಪುಟದ ಮೊದಲ ಸಂಚಿಕೆ ನಿಮಗೆ ತಡವಾಗಿ ತಲುಪುತ್ತಿದೆ. ಇದಕ್ಕೆ ಕಾರಣಗಳನ್ನು ಹೇಳುವ ಮುನ್ನ, ಈ ತಡಕ್ಕಾಗಿ ನಾವು ಓದುಗರ ಕ್ಷಮೆ ಕೋರುತ್ತೇವೆ. ಹಾಗೂ ನಮ್ಮ ಮುಂದಿನ ಸಂಚಿಕೆ ಇನ್ನೊಂದು ತಿಂಗಳಲ್ಲಿ ನಿಮ್ಮನ್ನು ತಲುಪಲಿದೆ ಎಂಬ ಭರವಸೆ ನೀಡುತ್ತೇವೆ. ಮೂರನೇ ಸಂಪುಟದ ಕೊನೆಯ ಸಂಚಿಕೆಯನ್ನು ವಿಶೇಷ ಸಂಚಿಕೆ ಮಾಡುವ ಹಾಗೂ ಅದನ್ನು ವಿಸ್ತರಿಸಿ ವಿಶೇಷ ಸಂಪುಟ ಮಾಡಿ ವಿಧ್ಯುಕ್ತವಾಗಿ ಬಿಡುಗಡೆ ಮಾಡುವ ಕೆಲಸದೊಂದಿಗೆ ಸಂವಾದ ಪುಸ್ತಕ ಪ್ರಕಾಶನದ 1990ರ ಕೊನೆಯ ಪುಸ್ತಕದ ಪ್ರಕಟಣೆಯ ಧಾವಂತವೂ ಸೇರಿಕೊಂಡು ಪತ್ರಿಕೆಯ ಕಾಲಕ್ರಮತೆ ಅಸ್ತವ್ಯಸ್ತವಾಯಿತು. ಓದುಗರು ನಮ್ಮ ತೊಂದರೆಗಳನ್ನು ಸಹೃದಯತೆಯಿಂದ ಅರ್ಥಮಾಡಿಕೊಂಡು ಸಹಕರಿಸುವರೆಂದು ನಂಬಿದ್ದೇವೆ. ನಮ್ಮ ಅನೇಕ ಚಂದಾದಾರರು ತಮ್ಮ ವಾರ್ಷಿಕ ಚಂದಾವನ್ನು ನವೀಕರಿಸಿಲ್ಲ ಹಾಗೂ ಆಜೀವ ಚಂದಾದ ಬಾಕಿ ಕಂತುಗಳನ್ನು ಪಾವತಿ ಮಾಡಿಲ್ಲ. ಇದಾಗದೆ ಪತ್ರಿಕೆ ಸ್ಥಿರವಾಗದು ಎಂಬುದನ್ನು ವಿವರಿಸಿ ಹೇಳಬೇಕಾಗಿಲ್ಲವೆಂದ.ಕೊಂಡಿದ್ದೇವೆ.

ನಮ್ಮ ಹಿಂದಿನ ಸಂಚಿಕೆ ಹಾಗೂ ಈ ಸಂಚಿಕೆಯ ನಡುವಣ ಅವಧಿಯಲ್ಲಿ ಕನ್ನಡದ ಹಿರಿಯ ಸಾಹಿತಿಗಳಲ್ಲೊಬ್ಬರಾಗಿದ್ದ ಡಾ॥ ಅನುಪಮಾ ನಿರಂಜನ ನಮ್ಮನ್ನು ಅಗಲಿ ಹೋಗಿದ್ದಾರೆ. 'ಸಂವಾದ' ಈ ಪ್ರತಿಭಾವಂತ ಲೇಖಕಿಗೆ ತನ್ನ ಹೃದಯಪೂರ್ವಕ ಶ್ರದ್ಧಾಂಜಲಿಯನ್ನರ್ಪಿಸುತ್ತದೆ. ನಮ್ಮ ಮುಂದಿನ ಸಂಚಿಕೆಯಲ್ಲಿ ಈ ಲೇಖಕಿಯ ವ್ಯಕ್ತಿತ್ವ ಹಾಗೂ ಸಾಹಿತ್ಯ ಕುರಿತ ವಿಶೇಷ ಲೇಖನವೊಂದನ್ನು ಆಯೋಜಿಸಿದೆ. ಈ ಸಂಚಿಕೆ, ಈ ಹಿಂದೆ ತಿಳಿಸಿದ್ದಂತೆ ಇತ್ತೀಚೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ದೇವನೂರ ಮಹಾದೇವ ಅವರ ವ್ಯಕ್ತಿತ್ವ ಹಾಗೂ ಸಾಹಿತ್ಯದ ಮೇಲೆ ವಿಶೇಷ ಬೆಳಕು ಚೆಲ್ಲುವ ಪ್ರಯತ್ನ ಮಾಡಿದೆ. ಅಲ್ಲದೆ ಇತ್ತೀಚಿನ ದಿನಗಳಲ್ಲಿ ನಮ್ಮೆಲ್ಲರ ಅಂತರಂಗವನ್ನು ಕಲಕಿದ ಸಾಮಾಜಿಕ-ರಾಜಕೀಯ ಅಲ್ಲೋಲ-ಕಲ್ಲೋಲಗಳು ನಮ್ಮ ಸಾಹಿತ್ಯ ಸಂದರ್ಭದ ಮೇಲೆ ಉಂಟು ಮಾಡಿರುವ ಪರಿಣಾಮಗಳನ್ನು ಕುರಿತ ಒಂದು ಲೇಖನವೂ ಈ ಸಂಚಿಕೆಯಲ್ಲಿದೆ. ಇದೇ ಸಂಬಂಧ, 65 ವರ್ಷಗಳ ಹಿಂದೆ ಬರೆಯಲ್ಪಟ್ಟಿದ್ದರೂ ಇಂದಿಗೂ ಪ್ರಸ್ತುತವೆನಿಸುವ ಪ್ರೇಮ್‌ಚಂದರ

ಕಥೆಯೊಂದರ ಕನ್ನಡ ರೂಪವನ್ನೂ ಇಲ್ಲಿ ನೀಡಿದ್ದೇವೆ. ಜೊತೆಗೆ ಈ ಸಂಚಿಕೆಯ ವಿಶೇಷವೆಂದರೆ ಕನ್ನಡದ ಇತ್ತೀಚಿನ ಸುಮಾರು 20 ಪುಸ್ತಕಗಳ ವಿವರವಾದ ಇಲ್ಲವೇ ಸಂಕ್ಷಿಪ್ತ ವಿಮರ್ಶೆ. ಓದುಗರು ನಮ್ಮ ಈ ಎಲ್ಲ ಪ್ರಯತ್ನದ ಹಿಂದಿರುವ ಸ್ಪಂದನ ವನ್ನು ಅರಿತು **ಧನಾತ್ಮಕ**ವಾಗಿ ಪ್ರತಿಕ್ರಿಯಿಸುವರೆಂದು ಆಶಿಸಿದ್ದೇವೆ.

ಈ ಮಧ್ಯೆ ನಮ್ಮ ಚಂಪಾ ಅವರಿಗೆ 50 ತುಂಬಿದೆ. ಅವರ ಸಂಪಾದಕತ್ವದ ಪತ್ರಿಕೆ 'ಸಂಕ್ರಮಣ'ಕ್ಕೆ 25 ತುಂಬಿದೆ. ಸಾಹಿತ್ಯ ನಿಯತಕಾಲಿಕವೊಂದನ್ನು ಕನ್ನಡದಲ್ಲಿ 25 ವರ್ಷಗಳ ಕಾಲ ಸತತವಾಗಿ ನಡೆಸುವುದು ನಿಜವಾಗಿಯೂ ಒಂದು ಪವಾಡವೇ. ಪವಾಡ ಪುರುಷ ಚಂದ್ರಶೇಖರ ಪಾಟೀಲರನ್ನು 'ಸಂವಾದ' ತುಂಬು ಹೃದಯದಿಂದ ಅಭಿನಂದಿಸುತ್ತದೆ !

ಸರ್ಕಾರ ಅನೇಕ ಅಕಾಡೆಮಿಗಳನ್ನು ಇನ್ನೂ ಪುನಃರಚಿಸಿಲ್ಲ. ಕರ್ನಾಟಕ ಸಾಹಿತ್ಯ ಅಕಾಡೆಮಿ ಸ್ಥಗಿತಗೊಂಡು ಹೆಚ್ಚೂ ಕಮ್ಮಿ ಒಂದು ವರ್ಷವೇ ಆಗುತ್ತಾ ಬಂದಿದೆ. ಅಕಾಡೆಮಿ ಇದ್ದೇನಾಗಬೇಕಾಗಿದೆ ಎಂಬ ನಿಲುವು ಸರ್ಕಾರದ್ದಾಗಿರುವಂತಿದೆ. ಅಕಾಡೆಮಿ ತನ್ನ ಈ ಹಿಂದಿನ ಅವಧಿಯಲ್ಲಿ ಮಾಡಿರುವ ಕೆಲಸವನ್ನು ಗಮನಿಸಿದವ ರ್‍ಯಾರೂ ಸರ್ಕಾರದ ಈ ನಿಲುವನ್ನು ಲಘುವಾಗಿ ತೆಗೆದುಕೊಳ್ಳಲಾರರು. ಸಾಹಿತ್ಯ ಕ್ಷೇತ್ರಕ್ಕೆ ಸಾಮೂಹಿಕವಾದ ಒಂದು ಚಲನಶೀಲತೆಯನ್ನು ಒದಗಿಸಬಲ್ಲ ಅಕಾಡೆಮಿ ಯನ್ನು ಪುನಃರಚಿಸುವ ವಿವೇಕ ರಾಜ್ಯ ಸರ್ಕಾರಕ್ಕೆ ಬೇಗ ಒದಗಿ ಬರಲಿ ಎಂದು 'ಸಂವಾದ' ಹಾರೈಸುತ್ತದೆ.

—ಸಂಪಾದಕರು

ಸಂವಾದ

೨೦

ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ – ೫೭೭ ೫೩೧ ಚಿತ್ರದುರ್ಗ ಜಿಲ್ಲೆ

ಈ ಸಂಚಿಕೆಯ ಲೇಖಕರು :

- **ಎಸ್. ಮಂಜುನಾಥ್,**
  15ನೇ ಕ್ರಾಸ್, ಬಸವೇಶ್ವರ ಬ್ಲಾಕ್, ಕೆ.ಆರ್. ನಗರ – 571602 (ಮೈಸೂರು ಜಿಲ್ಲೆ)
- **ಡಾ|| ಕೆ. ಪಿ. ನಾರಾಯಣ,**
  ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ, ಬೆಂಗಳೂರು–560056
- **ಚಂದ್ರಶೇಖರ ನಂಗಲಿ,**
  ಕನ್ನಡ ಅಧ್ಯಾಪಕರು, ಸರ್ಕಾರಿ ಮಹಿಳಾ ಕಾಲೇಜು, ಕೋಲಾರ
- **ಎಚ್. ಎಸ್. ರಾಘವೇಂದ್ರರಾವ್,**
  7. "ಶ್ರೀಮಾತಾ", 15ನೇ ಕ್ರಾಸ್, 5ನೇ ಹಂತ, ಜೆ. ಪಿ. ನಗರ, ಬೆಂಗಳೂರು–560 0
- **ಡಾ|| ಬಸವರಾಜ ಕಲ್ಗುಡಿ,**
  ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ, ಬೆಂಗಳೂರು-560 056
- **ಡಾ|| ಎಚ್. ಎಸ್. ವೆಂಕಟೇಶಮೂರ್ತಿ,**
  859, 14ನೇ ಕ್ರಾಸ್, 18ನೇ ಮೇನ್, ಬನಶಂಕರಿ 2ನೇ ಹಂತ, ಬೆಂಗಳೂರು–560 0
- **ಮಲ್ಲು ಸಿ. ಕೊತ್ನೂರ್,**
  ರೂಂ. ನಂ. 51, ಗೌತಮ ವಿದ್ಯಾರ್ಥಿ ನಿಲಯ, ಮಾನಸ ಗಂಗೋತ್ರಿ, ಮೈಸೂರು-6
- **ಶಂಕರ ಕಟಿಗಿ,**
  ಇಂಗ್ಲಿಷ್ ಅಧ್ಯಾಪಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಗುಡಿಗೇರಿ–581 107
  ಧಾರವಾಡ ಜಿಲ್ಲೆ
- **ಸ. ಉಷಾ,**
  ಕನ್ನಡ ಅಧ್ಯಾಪಕರು, ಹೊಯ್ಸಳೇಶ್ವರ ಕಾಲೇಜು, ಅರಸೀಕೆರೆ-573 103. ಹಾಸನ ಜಿ
- **ರಾಘವೇಂದ್ರ ಪಾಟೀಲ,**
  ಜೀವಶಾಸ್ತ್ರ ಅಧ್ಯಾಪಕರು, ಪದವಿ ಪೂರ್ವ ಕಾಲೇಜು, ಮಲ್ಲಾಡಿಹಳ್ಳಿ–577 531
  ಚಿತ್ರದುರ್ಗ ಜಿಲ್ಲೆ
- **ಆನಂದ ಕಂದ** (ದಿವಂಗತ ಡಾ|| ಬೆಟಗೇರಿ ಕೃಷ್ಣಶರ್ಮರು)
- **ಡಾ|| ಬಸವರಾಜ ಸಬರದ,**
  ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಗುಲ್ಬರ್ಗಾ ವಿಶ್ವವಿದ್ಯಾಲಯ,
  ಗುಲಬರ್ಗಾ–585 108
- **ಎ. ಆರ್. ನಾಗಭೂಷಣ,**
  1235, ಕೃಷ್ಣಮೂರ್ತಿಪುರಂ, ಮೈಸೂರು-570 004
- **ಆನಂದ ಝುಂಝುರವಾಡ,**
  ಮುನ್ಸಿಫ್ ನ್ಯಾಯಾಲಯ, ಬನಹಟ್ಟಿ, ಜಮಖಂಡಿ ತಾ|| ಬಿಜಾಪುರ ಜಿಲ್ಲೆ
- **ಜಿ. ಪಿ. ಬಸವರಾಜು,**
  ಎಲ್ಐಜಿ–1/8, ಇ/ಎಫ್ ಬ್ಲಾಕ್, ರಾಮಕೃಷ್ಣನಗರ, ಮೈಸೂರು–570 023

ಸುಮ್ಮನಿರುವ ಸುಮ್ಮಾನ:

ತಾವೊ ಪದ್ಯಗಳು

ಕನ್ನಡದಲ್ಲಿ: ಎಸ್. ಮಂಜುನಾಥ್

ಲಾವೋತ್ಸೆ

1. ನೀರಂತೆ ನೆಳಲಂತೆ

ನೀರಂತಿರುವುದು ನೆಳಲಂತಿರುವುದು
ಎಲ್ಲ ವಸ್ತುಗಳ ತಿರುಳಂತಿರುವುದು
ಎಲ್ಲ ಹುಟ್ಟುಗಳ ಬಸಿರಂತಿರುವುದು
ನೆಳಲಂತಿರುವುದು ನೀರಂತಿರುವುದು
ನೀರೊಳಗಿನ ನೆಳಲಂತಿರುವುದು
ಓ ಕಾಣುವುದು ಕಾಣೆಯಾಗುವುದು
ಕಣ್ಣಿಗಿಂತಲು ದಿಟವೆನಿಸುವುದು
ತನ್ನಿಂದ ತಾನು ತಿಳಿಯುತ್ತಿರುವುದು

2. ಹಿರಿಮೆ

ತೋಳು ತೊಡೆ ತಟ್ಟಿ ಘೀಳಿಡುವವ ಜಟ್ಟಿಯೇ
ಕ್ರೋಧ ತಳೆದು ಕತ್ತಿ ತಿರುಗಿಸುವವ ಯೋಧನೇ
ಜಗದೇಕವೀರ ಬೀದಿ ಜಗಳಕ್ಕೆ ನಿಲ್ಲುವನೆ
ಲೋಕನಾಯಕ ತಾ ಮಿಗಿಲೆಂದೆಣಿಸುವನೆ

ಇದಿರು ಹಾಯದೆ ಮೀರಿ ನಿಲ್ಲುವ ವರಸೆ ಇದು
ಪರರ ಪರಿಶ್ರಮವ ಸಫಲಗೊಳಿಸುವ ಕೌಶಲವು
ಇರವಿನ ಕೋಡುಗಲ್ಲನ್ನೇರಿ ಅರಳುವ ಪವಾಡವು
ಆಕಾಶ ಭಿತ್ತಿಗೆ ಹೆಗಲೆಣೆಯೆನಿಸುವ ಸಾಮರ್ಥ್ಯವು.

3. ಬೆಳಕಿನ ಸೂರೆ

ಇಟ್ಟ ಹೆಜ್ಜೆಯು ಅಳಿಸಿ ಓಡುವವ ಓಟಗಾರ
ನುಡಿದು ಮಾತಿನ ಕುರುಹು ಉಳಿಸದವ ಮಾತುಗಾರ
ಅಗಳಿಯಿರದೇ ಮುಚ್ಚಿದ ಬಾಗಿಲ ತೆರೆಯಲಾಗದು
ಹಗ್ಗವಿರದೇ ಹಾಕಿದ ಕುಣಿಕೆ ಬಿಚ್ಚಲಾಗದು

ಸಜ್ಜನ ಕೇಡಿಗನ ಗುರು
ಕೇಡಿಗ ಕುಂಬಾರನ ಮಣ್ಣು
ಶಿಷ್ಯ ಗುರುವಿಗೆ ಮಣಿಯಬೇಕು
ಗುರು ಶಿಷ್ಯನನು ಆದರಿಸಬೇಕು
ಈರ್ವರೂ ಸೇರಿ ಸೂರೆ ಮಾಡಬೇಕು
ಸ್ವರ್ಗದ ಬೆಳಕು !

4. ಜೀವರಕ್ಷಣೆ ಕುರಿತು

ಜೀವದೊಡಲಿಂದ
ಹುಟ್ಟುವುದು
ಸಾವು

ಜೀವಕಾರಣವೀ
ಶರೀರ
ಸಾವಿಗು ಉಪಕರಣ

ಕರ್ಮಗಳಲ್ಲಿ ಅದು ಬೆಳೆಯುವುದು
ಕರ್ಮಗಳಲ್ಲಿ ಅದು ಸವೆಯುವುದು

ಜೀವರಕ್ಷಣೆ ಬಲ್ಲವನಿಗೆ ಸಾವಿಲ್ಲ ಎನ್ನುವರು

ಹುಲಿಯಾಗಲೀ ಕಾಟಿಯಾಗಲೀ ಅವನನ್ನು ಅಡ್ಡಹಾಕವು
ಕದನದಲ್ಲೂ ಶಸ್ತ್ರಗಳು ತಾಕವು
ಕಾಡೆಮ್ಮೆ ಕೋಡೂರಲೆಲ್ಲೂ ತಾವಿಲ್ಲ

ಹುಲಿಗೆ ನಖವೂರಲೆಲ್ಲೂ ತಾವಿಲ್ಲ
ಶಸ್ತ್ರಕ್ಕೆ ಮೊನೆಯೂರಲೆಲ್ಲೂ ತಾವಿಲ್ಲ
ಅವನಿಗೆ ಸಾವಿನ ವಲಯವೇ ಇಲ್ಲ

5. ತಾವೋ ಖಡ್ಗ

ತಾವೋ ಶೂನ್ಯದ ಖಡ್ಗ
ಯಾರನ್ನೂ ಹೊಡೆಯದು
ಹಿಡಿದವನ ತಲೆ ಕಡಿಯದು

ಸೈನ್ಯ ಬೀಡು ಬಿಟ್ಟಲ್ಲಿ
ಮುಳ್ಳು ಕಳ್ಳಿಗಳಷ್ಟೇ ಬೆಳೆಯುವುವು
ದಂಡು ಮೆಟ್ಟಿದ ನೆಲದಲ್ಲಿ
ಸುಗ್ಗಿ ಕುಗ್ಗುವುದು

ಶೂನ್ಯವನು ಹಿಡಿದು ಜೋಗಿ
ಶಸ್ತ್ರವನು ಗೆಲ್ಲುವನು
ಕದನವನು ನಿಲ್ಲಿಸುವನು.

6. ನಿಜ ಶೃಂಗಾರ

ನಿಜಕ್ಕೆ ಶೃಂಗಾರದ ಹಂಗಿಲ್ಲ
ಒಳಿತಿಗೆ ತರ್ಕದ ಹಂಗಿಲ್ಲ
ಅರಿವಿಗೆ ಜ್ಞಾನದ ಹಂಗಿಲ್ಲ

ಶೂನ್ಯ ಜೋಗಿಯ ನಿಧಿ
ಅದು ಸವೆಯದ ಸಂಪತ್ತು
ಹಾಗಾಗಿ ಜೋಗಿ ನಿತ್ಯ ಸಿರಿವಂತ
ತಾವೋ ದಣಿಯದ ದಾತಾರ.

ಮಾರ್ಚ್–ಏಪ್ರಿಲ್ ೧೯೯೧/೫

ಚುವಾಂಗ್ ತ್ಸೆ

1. ಬುದ್ಧಿಮುಂದ ಹಕ್ಕಿ

ಬುದ್ಧಿಮುಂದ ಎಂಬ ಹಕ್ಕಿ
ಹಾರದು ಎತ್ತರ
ಕುಪ್ಪಳಿಸುವುದೊಂದಷ್ಟು ದೂರ
ಮುದುಡಿ
ಸೇರುವುದು ಜೊತೆಗಾರರ
ಮುನ್ನಡೆವಾಗ ಮೊದಲಾಗದು
ಕಡೆಯದಾಗಿ ಹಿಂದುಳಿಯದು
ಮಿಕ್ಕ ಹಕ್ಕಿಗಳಿಗೆ ಬಿಟ್ಟು
ತಾನು ಕೊನೆಯಲ್ಲಿ ಉಣ್ಣುವುದು
ಬಹುಕಾಲ ಬಾಳುವುದು
ಅದರ ಸಂತತಿ
ಎಂದಿಗೂ ಅಳಿಯದು.

2. ನೆರಳುಗಳು

ಹೊರನೆರಳು ಒಳನೆರಳಿಗೆ:

ನಿಲ್ಲುತೀಯ ಒಂದು ಚಣ
ಓಡುತೀಯ ಮರು ಚಣ
ಒಂದು ಚಣ ಕೂರುತೀಯ
ನಿಲ್ಲುತೀಯ ಮರು ಚಣ
ಯಾಕಯ್ಯ ಈ ತಲ್ಲಣ ,?

ಒಳ ನೆರಳು:

ಬಹುಶಃ ನಾನು ಯಾರದೋ ದಾಸ
ಆ ಯಾರೋ ಮತ್ಯಾರದೋ ದಾಸ
ಹಾವು ಹರಿದಂತೆ ಹಾವಿನ ಮೂಳೆ
ಹೆಣ್ಣು ನಡೆದಂತೆ ಅವಳ ಪೃಷ್ಠ
ನಿಲ್ಲುತೇನೆ ಕೂರುತೇನೆ
ಯಾಕೆ ಗೊತ್ತಿಲ್ಲ ನನಗೇನೆ !

3. ಕುಡಿ

ಕುಡಿಯುಯ್ಯಾ ಕುಡಿ
ಕುಡಿತ ಬಹಳ ಒಳ್ಳೆಯದು
ಅಂದು ನಾನು ಕುಡಿದಿದ್ದೆ
ಗಾಡಿಯಿಂದ ಉರುಳಿಬಿದ್ದೆ
ದಿಂಡಿನಂತೆ ಉರುಳಿಬಿದ್ದೆ
ಮಂಡಿ ಕೊಂಚ ತರಚಿತಲ್ಲದೆ
ಮೂಳೆ ಗೀಳೆ ಮುರಿಯಲಿಲ್ಲ
ಕುಡಿತ ಎಷ್ಟು ಒಳ್ಳೆಯದು !
ಜೀವದ ಇಡಿಗಾಳನ್ನು
ಹುಟ್ಟು ಸಾವು ಚಿಂತೆ ಭೀತಿ
ಏನೊಂದೂ ಒಡೆಯದು
ಸೆರೆ ಕುಡಿದೇ ಇಂತಾದರೆ
ಸಹಜ ಕುಡಿದು ಇನ್ನೆಂತೋ !
ಕುಡಿ ಕುಡಿ ಕುಡಿ.

ಬೇಂದ್ರೆಯವರ 'ತುತ್ತಿನ ಚೀಲ'

ಒಂದು ವಿಮರ್ಶಾ ಕಮ್ಮಟ

ಕೆ. ವಿ. ನಾರಾಯಣ: ವಿಮರ್ಶೆ ಅಂದರೆ ಏನು ಅನ್ನೋದನ್ನ ಸಂಕ್ಷಿಪ್ತವಾಗಿ ವಿವರಿಸೋದು ಬಹಳ ಕಷ್ಟದ ಕೆಲಸ. ಸಾಹಿತ್ಯ ಕೃತಿಯೊಂದನ್ನು ಅರ್ಥ ಮಾಡಿ ಕೊಳ್ಳೋದು, ಅರ್ಥ ಮಾಡಿಕೊಂಡದ್ದನ್ನು ವಿವರಿಸೋದು, ಮುಖ್ಯವಾಗಿ ವಿಮರ್ಶೆಯ ಕೆಲಸ. ಇದು ಕೆಲವು ಸಂದರ್ಭದಲ್ಲಿ ಸಂಸ್ಕೃತಿಯ ಬೇರೆ ಬೇರೆ ಅಂಗಗಳ ಜೊತೆನೂ ಕೂಡಾ ಸಂಬಂಧವನ್ನ ಪಡೆದುಕೊಳ್ತಾ ಇರ್ತದೆ. ಈ ವಿಮರ್ಶೆಯಲ್ಲಿ ಒಂದು ಸಾಹಿತ್ಯ ಕೃತಿಯನ್ನು ಅರ್ಥಮಾಡಿಕೊಳ್ಳೋವಾಗ ಬೇರೆ ಬೇರೆ ವಿಧಾನಗಳಿರೋದು ಕೂಡಾ ಸಾಧ್ಯ. ಹೀಗೆ ಬೇರೆ ಬೇರೆ ವಿಧಾನಗಳಿವೆ ಅಂದ ಮಾತ್ರಕ್ಕೆ ಅವು ಒಂದಕ್ಕೆ ಇನ್ನೊಂದು ವಿರೋಧಿಗಳಾಗಿರ್ತವೆ ಅಂತಲೂ ಅಲ್ಲ. ಅವು ಒಂದು ಸಾಹಿತ್ಯ ಕೃತಿಯನ್ನು ಹೇಗೆ ಬೇರೆ ಬೇರೆ ರೀತಿಯಿಂದ ಅರ್ಥ ಮಾಡಿಕೊಳ್ಳಬಹುದು ಅನ್ನೋದನ್ನ ತೋರಿಸಿಕೊಡ್ತಾನೂ ಇರಬಹುದು. ಈ ನೆಲೆಯಿಂದ ನಾವು ಇವತ್ತು ಒಂದು ಸಣ್ಣ ಪ್ರಯೋಗವನ್ನ ಮಾಡ್ತಾ ಇದೀವಿ. ಅದು ಬೇಂದ್ರೆಯವರ ಒಂದು ಕವಿತೆಯನ್ನು ತಗೊಂಡು ನಾವು ನಾಲ್ಕು ಜನ ಮಿತ್ರರು ಆ ಕವಿತೆಯನ್ನ ಬೇರೆ ಬೇರೆ ರೀತಿಯಲ್ಲಿ ಅರ್ಥಮಾಡಿಕೊಳ್ಳೋ ಒಂದು ಪ್ರಯತ್ನವನ್ನು ಮಾಡ್ತೇವೆ. ನಾವು ಆರಿಸಿ ಕೊಂಡಿರೋ ಕವನ ಸುಮಾರು 1928ರಲ್ಲಿ ಬೇಂದ್ರೆಯವರು ಬರೆದು ಪ್ರಕಟಿಸಿದಂತಹ 'ತುತ್ತಿನ ಚೀಲ' ಅನ್ನುವ ಕವಿತೆ. ಇದು ಅವರ "ಗರಿ" ಕವನ ಸಂಕಲನದಲ್ಲಿ ಇದೆ:

ಅನ್ನಬ್ರಹ್ಮದ
ದೇಗುಲದಲ್ಲಿ
ಬೆಳಗೂ ಬೈಗೂ
ಛಿಟಿ ಛಿಟಿ ಬೆಂಕಿ
ದೊಂಬರ ಪೂಜೆಯು,
ಕಾಗೆಯ ಮಂತ್ರ,
ಗಾಳಿಯು ಎಡೆಯು,

ಬೊಬ್ಬೆಯು ಗಂಟೆ—
ಅನ್ನಬ್ರಹ್ಮದ
ದೇಗುಲದಲ್ಲಿ !

ನಾದಬ್ರಹ್ಮದ
ಕಗ್ಗವಿಯಲ್ಲಿ
ಮೌನದ ವೀಣೆಗೆ
ಕರುಳಿನ ತಂತಿ,
ಮಿಡಿದೂ ಮಿಡಿದೂ
ಮುರಿದವು ಬೆರಳು.
ಮಿಡುಕೀ ಮಿಡುಕೀ
ನೊಂದಿತು ಎದೆಯು—
ನಾದಬ್ರಹ್ಮದ
ಕಗ್ಗವಿಯಲ್ಲಿ !

ಶಬ್ದಬ್ರಹ್ಮದ
ಗುಮ್ಮಟದಲ್ಲಿ
ಹಗಲೂ ಇರುಳೂ
ವೇದದ ವಾದ,
ಪಾಪಪುಣ್ಯಗಳ
ಜಾಳಿಗೆಯಲ್ಲಿ
ಸೋತಿದೆ ಜೋತಿದೆ
ಜೀವದ ಜೇಡ—
ಶಬ್ದಬ್ರಹ್ಮದ
ಗುಮ್ಮಟದಲ್ಲಿ !

ದೈವವುಳ್ಳವರಿಗೆ
ದಯವೇ ಇಲ್ಲ !
ತಿತ್ತಿರೆ ತುಂಬಿದೆ

ಮಾರ್ಚ್–ಏಪ್ರಿಲ್ ೧೯೯೧/೯

ಕೂಳಿನ ಕೋಟೆ !
ಬಿಡುಗಣ್ಣವರಿಗೆ
ಕಾಣುವದಿಲ್ಲ
ಅಮೃತ ತೇಗಿನ
ಮದವಂತಹದು !
ಹಸಿದವ ಬಲ್ಲ
ಹಸಿವೆಯ ಶೂಲಿ !

ಶಿವಾ ಶಿವಾ ಹೇ
ಶಿವ ಮಾದೇವಾ !
ಅತ್ತಿತು ಕೂಗಿತು
ಚೀರಿತು ಜೀವ
ಬಾಯುಂಗಳದಲಿ
ಹುಟ್ಟಿದ ಮಾತು
ಮುಗಿಲಿನ ಕಿವಿಯನು
ಮುಟ್ಟಲೆ ಇಲ್ಲ ;
ಹಾಡುವ ಸಭೆಯಲಿ
ನರಳುವದುಂಟೆ ?

ಕಿಕ್ಕಿರಿ ತುಂಬಿದೆ
ಭೂಮಿಯು ಕಣಜ
ಕಕ್ಕಸಬಡುತಿದೆ
ಬೊಕ್ಕಸದೊಡಲು
ಬಾಳಿಗಿಂತಲೂ
ಕೂಳೇ ಮೇಲೊ ?
ಬರಿದೋ ಬರಿದು
ತೆರವೋ ತೆರವೂ
ಬಡವರ ಬಗ್ಗರ
ತುತ್ತಿನ ಚೀಲಾ.

ದೇವರದೊಂದು
ಗೋರಿಯು ಕಟ್ಟಿ,
ಧರ್ಮದ ಧೂಪಕೆ
ಬೆಂಕಿಯನಿಕ್ಕಿ,
ಗಣಗಣ ಬಾರಿಸಿ
ಪ್ರಾಣದ ಗಂಟೆಯ,
ಸಾವಿನ ನೋವಿಗೆ
ಕಲಮಲವೆದ್ದು
ನೆಲವನ್ನೆಲ್ಲಾ
ತುತ್ತುವೆನೆಂದು
ಗದರುತ್ತಿಹುದು
ಗರ್ಜಿಸುತಿಹುದು
ಬಡವರ ಬಗ್ಗರ
ತುತ್ತಿನ ಚೀಲದ
ಒಳಗಿನ ಒಳಗಿನ
ಒಳದನಿಯೊಂದು !

ಈಗ ಈ ಕವಿತೆಯನ್ನ ವಿಶ್ಲೇಷಣೆ ಮಾಡುವುದಕ್ಕೋಸ್ಕರ ನನ್ನ ಮೂರು ಜನ ಮಿತ್ರರು ಇಲ್ಲಿದ್ದಾರೆ. ಈ ಮೂರು ಜನ ಮಿತ್ರರು ಕೂಡಾ ಬೇರೆ ಬೇರೆಯಾದ ವಿಮರ್ಶಾ ಮಾನದಂಡಗಳನ್ನು ಬಳಸಿ ಈ ಕವಿತೆಯನ್ನು ವಿಶ್ಲೇಷಣೆ ಮಾಡ್ತಾರೆ. ಮೊದಲು ಭಾರತೀಯ ಕಾವ್ಯಮೀಮಾಂಸೆಯ ದೃಷ್ಟಿಕೋನದಿಂದ ಈ ಕವಿತೆಯನ್ನ ಹೇಗೆ ನೋಡಬಹುದೂಂತ ಅನ್ನೋದನ್ನ ನಂಗಲಿಯವರೇ ನೀವು ಸ್ವಲ್ಪ ಹೇಳೋದಕ್ಕೆ ಸಾಧ್ಯಾನಾ ?

ಚಂದ್ರಶೇಖರ ನಂಗಲಿ: ನಮ್ಮ ಕಾವ್ಯ ಮೀಮಾಂಸೆನಲ್ಲಿ ಅರ್ಥ ವ್ಯಾಪಾರಗಳನ್ನ ವಿವರಿಸ್ತಾ ಅಭಿದ, ಲಕ್ಷಣ, ವ್ಯಂಜನಾವೃತ್ತಿ ಅಂತ ಹೇಳ್ತಾರೆ. ಈ 'ತುತ್ತಿನ ಚೀಲ' ಶೀರ್ಷಿಕೆಯಲ್ಲೇ ಲಕ್ಷಣಾವೃತ್ತಿ ಕಂಡುಬರುತ್ತೆ. ಹಾಗಂದ್ರೆ ಅದರ ವಾಚ್ಯಾರ್ಥ ಅನ್ನದ ಜೋಳಿಗೆ ಅಂತ. ಆದರೆ ಅನ್ನದ ಜೋಳಿಗೆ ಅನ್ನೋ ವಾಚ್ಯಾರ್ಥದಲ್ಲೇ ನಾವು ವಿರಮಿಸೋ ಹಾಗಿಲ್ಲ. ಅದರ ಲಕ್ಷ್ಯಾರ್ಥ ಹೊಟ್ಟೆ ಅಂತ. ಇಂತಹ ಹೊಟ್ಟೆಗೆ ಅತ್ಯವಶ್ಯಕವಾದದ್ದು ಅನ್ನ. ಇದು ಎಲ್ಲರಿಗೂ ಗೊತ್ತಿದೆ. ಆದರೆ ಬಡತನ, ಬರ ಗಾಲಗಳು ಸೃಷ್ಟಿಯಾದ ಕಾಲಕ್ಕೆ ಅನ್ನದ ಕೊರತೆಯನ್ನು ಮುಚ್ಚಿಹಾಕಲು ಯತ್ನಿಸಿ

ದವರು ವೇದಾಂತದ ಕುಯುಕ್ತಿಯನ್ನು ಆಶ್ರಯಿಸಿ 'ಅನ್ನ ಬ್ರಹ್ಮ', 'ನಾದ ಬ್ರಹ್ಮ', 'ಶಬ್ದ ಬ್ರಹ್ಮ'ಗಳೆಂಬ ಗಾಂಭೀರ್ಯದ ಮುಖವಾಡ ತೊಟ್ಟು ಹಸಿದ ಜನತೆಗೆ ತತ್ತ್ವ ಜ್ಞಾನದ ವಿಷಪ್ರಾಶನ ಮಾಡಿಸುತ್ತಾ ಬಂದಿರುವ ಸತ್ಯವನ್ನು ಕವಿ ಬೇಂದ್ರೆ 'ತುತ್ತಿನ ಚೀಲ'ದಲ್ಲಿ ಗುಣೀಭೂತ ವ್ಯಂಗ್ಯದ ಮೂಲಕ ಅನಾವರಣಗೊಳಿಸಿದ್ದಾರೆ. ಇಲ್ಲಿ ಗುಣೀಭೂತ ವ್ಯಂಗ್ಯ ಅನ್ನುವ ಪರಿಭಾಷೆಯನ್ನು ಶಬ್ದಶಕ್ತಿಯಿಂದ ಪೋಷಣೆ ಪಡೆಯುವ ವ್ಯಂಗ್ಯಾರ್ಥ ಅನ್ನುವ ಕಾವ್ಯ ಮೀಮಾಂಸೆಯ ಅರ್ಥದಲ್ಲಿ ಮಾತ್ರವಲ್ಲದೆ, ಗುಣಾತ್ಮಕ ವ್ಯಂಗ್ಯ-Positive Irony-ಎಂಬ ಹೊಸ ದೃಷ್ಟಿಕೋನದಿಂದಲೂ ವಿವರಿಸೋದಕ್ಕೆ ಪ್ರಯತ್ನಪಡ್ತೀನಿ.

ಇಲ್ಲಿ ಅನ್ನಬ್ರಹ್ಮ, ನಾದಬ್ರಹ್ಮ, ಶಬ್ದಬ್ರಹ್ಮ-ಇವುಗಳನ್ನ ವಿವರಿಸ್ತಾ ಬೇಂದ್ರೆ ಯವರು ಕೆಲವು ಪರಿಚಿತವಾಗಿರತಕ್ಕಂತಹ ಜನಪ್ರಿಯ ಪದಗಳನ್ನ ಕೊಡ್ತಾರೆ. ನೋಡಿ –ಪೂಜೆ, ಮಂತ್ರ, ಎಡೆ, ಘಂಟೆ, ವೀಣೆ, ತಂತಿ, ಮಿಡಿವ ಬೆರಳು, ತುಡಿವ ಎದೆ, ವೇದದ ವಾದ, ಪಾಪ–ಪುಣ್ಯಗಳ ಜಾಳಿಗೆ ಹೀಗೆ. ಇಂತಹ ಜನಪ್ರಿಯವಾದ ಪರಿಚಿತ ಪದಗಳನ್ನು ಕೊಡ್ತಾನೇ ಅವುಗಳ ನಿಜಸ್ವರೂಪವನ್ನು ಮರೆಮಾಡಿ, ಅದರ ಮೂಲಕ ಸಮಾಸತ್ಯ ಮಾರ್ಗವನ್ನು ಹಿಡಿದು ಇನ್ನೊಂದು ನಮಗೆ ನೆನಪಿಗೆ ಬರೋ ಹಾಗೆ ಮಾಡ್ತಾರೆ. ನೋಡಿ ಅದನ್ನ ಈ ರೀತಿ ವಿವರಿಸಬಹುದೂಂತ ಕಾಣುತ್ತೆ: ಡೊಂಬರ ಪೂಜೆ, ಕಾಗೆಯ ಮಂತ್ರ, ಗಾಳಿಯ ಎಡೆ, ಬೊಬ್ಬೆಯ ಘಂಟೆ, ಮೌನದ ವೀಣೆ, ಕರುಳಿನ ತಂತಿ, ಹೀಗೆ. ಇಲ್ಲಿ ಈ ಸಮಾಸತ್ಯ ಮಾರ್ಗದ ಮೂಲಕ ಹೇಳ್ತಾ ಇರ ತಕ್ಕಂತಹ ಈ ವಿಚಾರಗಳಿವೆಯಲ್ಲಾ ಇದು, ನಾನು ಆಗಲೇ ಹೇಳಿದೆ–ಗುಣೀಭೂತ ವ್ಯಂಗ್ಯ ಅಂತ. ಅಂದ್ರೆ ಇದು ಶಬ್ದಶಕ್ತಿಯ ಮೂಲಕ ಪ್ರಕಟಗೊಳ್ಳೋ ವ್ಯಂಗ್ಯಾರ್ಥ. ಇಲ್ಲಿ ವಾಚ್ಯಾರ್ಥ, ವ್ಯಂಗ್ಯಾರ್ಥಗಳೆರಡೂ ಕೂಡ ಸಾರ್ಥಕವಾಗಿರತಕ್ಕಂತಹ ಬಗೆಯನ್ನ ಗಮನಿಸಬೇಕು. ಆಮೇಲೆ ಇಡೀ ಮಾನವ ಸಮುದಾಯವನ್ನ ಪ್ರತಿನಿಧಿಸುವ ಜೀವಶಕ್ತಿಯನ್ನು ಇಲ್ಲಿ 'ಜೀವದ ಜೇಡ' ಅಂತ ಬೇಂದ್ರೆ ಕರೀತಾರೆ. ಭಾರತೀಯ ಕಾವ್ಯ ಮೀಮಾಂಸೆಯ ಪರಿಭಾಷೆಯಲ್ಲಿ ಹೇಳೋದಾದ್ರೆ. ಇದು ತಿರ್ಯಗ್ ಆಲಂಭನ. ಅಂದ್ರೆ ಈ ಮನುಷ್ಯ ಜಗತ್ತಿನ ವಿವರಗಳನ್ನು ಪಶು, ಪಕ್ಷಿ, ಕೀಟ–ಇವುಗಳ ಮೂಲಕ ಹೇಳುವ ಬಗೆ. ಇದು ಕೂಡಾ ಇಲ್ಲಿ ಬಹಳ ಅರ್ಥಪೂರ್ಣಾಂತ ನಾನು ತಿಳ್ಕೊಂಡಿ ದೀನಿ. ಏಕೇಂದ್ರೆ ಬಹಳ ಕ್ಷುದ್ರವಾದ ಜೀವನವನ್ನ ನಡೆಸ್ತಿರೋ, ಹಸಿವಿನಿಂದ ಕಂಗೆಟ್ಟು ನರಳ್ತಾ ಇರೋ ಮನುಷ್ಯನಿಗೆ ಇದೊಂದು ಅರ್ಥಪೂರ್ಣವಾದ ವಿನ್ಯಾಸ ವಾಗಿದೇಂತ ನನ್ನ ಭಾವನೆ.

ಹೀಗೆ ಬೇಂದ್ರೆ ಮುಂದುವರೀತಾ, ವೈದೃಶ್ಯ, ವೈರುಧ್ಯಗಳ ಮೂಲಕ ಇದೆ ಎನ್ನಬಹುದಾದ ಭೌತಿಕ ಸಂಪತ್ತಿನ ವಿವರಗಳನ್ನ ನೀಡುತ್ತಲೇ ಇಲ್ಲವಾಗುವ ಹೃದಯ

ದಾರಿದ್ರ್ಯದ ವಿವರಗಳನ್ನ ಕೊಟ್ಟರೋದು ಮನುಷ್ಯ ಸಮಾಜದ ವಿಕೃತಿಗೊಂದು ಸೂಚನೆಯಾಗುತ್ತೆ. ಇದನ್ನ ಕಾವ್ಯ ಮೀಮಾಂಸೆಯ ಪರಿಭಾಷೆಯಲ್ಲಿ 'ವಿಪರೀತ ಲಕ್ಷಣ' ಅಂತ ಕರೀತಾರೆ. ಈ ಸಂದರ್ಭದಲ್ಲಿ 'ಹಸಿವೆಯ ಶೂಲಿ' ಅಂತನ್ನೋ ಮಾತು ಇಲ್ಲಿ ಅಕಾರಾಂತವಾದ ಪದದ ಬಳಕೆ ಇಲ್ಲದೆ, ಇಕಾರಾಂತವಾಗಿರೋದು ಬಹಳ ಉಚಿತ ಅಂತ ನನಗನ್ನಿಸ್ತದೆ.

ಕೆ.ವಿ.ನಾ.: ಶೂಲಿ ಅನ್ನೋ ಪದದ ಬಗ್ಗೆ ಹೇಳ್ತಾ ಇದೀರಾ ನೀವು ?

ನಂಗಲಿ: ಹೌದು. ಏಕೆಂದ್ರೆ ಇಲ್ಲಿ ಶ್ಲೇಷೆ ಸಾಧ್ಯವಾಗಿದೆ. ಇದಕ್ಕೆ ಮೂರು ಅರ್ಥಗಳನ್ನ ನಾವು ಹೇಳಬಹುದು. ಮೊದಲನೆಯದಾಗಿ ತ್ರಿಶೂಲ. ಬಹಳ ಜನಪ್ರಿಯವಾದಂತ ಅರ್ಥ. ಇನ್ನೊಂದು ನೋವು. ಇನ್ನೊಂದು ಶೂಲಿ ಅಂದ್ರೆ ಶಿವ ಅಂತಾನೂ ಅರ್ಥವಾಗುತ್ತೆ. ಇದು ಕೂಡಾ ಬಹಳ ಉಚಿತವಾದದ್ದೂಂತ ನಾನು ತಿಳ್ಕೊಂಡಿದ್ದೀನಿ. ಯಾಕೇಂದ್ರೆ, ಆರಂಭದಲ್ಲೇ ತಿರ್ಯಗ್ ಆಲಂಭನದ ಮೂಲಕ ಜೀವಶಕ್ತಿಯನ್ನು ಒಂದು ಕ್ಷುದ್ರ ಕೀಟಕ್ಕೆ ಹೋಲಿಸಿ ಕ್ಷುದ್ರ ಬದುಕನ್ನು ಸಂಕೇತಿಸಿದಂತಹ ಬೇಂದ್ರೆ ಇಲ್ಲಿ ಆ ಜೀವಶಕ್ತಿಯನ್ನು ಉನ್ನತೀಕರಿಸ್ತಾ ಅವನನ್ನು ಹಸಿವಿನ ಶಿವನಿಗೆ ಹೋಲಿಸ್ತಾ ಹೇಳಿರೋದು ಕೂಡಾ ಬಹಳ ಅರ್ಥಪೂರ್ಣ. ಮುಂದೇನೆ ಇದೆ

'ಶಿವಾ ಶಿವಾ ಹೇ
ಶಿವ ಮಹಾದೇವಾ !

ಅನ್ನೋ ಮಾತು. ಅಂದ್ರೆ ಇಂತಹ ಹಸಿವೆಯ ಶೂಲ ಇದೆಯಲ್ಲಾ, ಅಥವಾ ಹಸಿವೆಯ ಶೂಲಿಗಳ ಪಡೆ ನುಗ್ಗಿ ಬರುತ್ತಲ್ಲಾ, ಈ ಹಸಿವೆಯ ಶೂಲಿಗಳ ಮೂಲಕ ಹಸಿದ ಜನಗಳಲ್ಲಿ ಅಡಗಿರತಕ್ಕಂತಹ ಲಯ ಶಕ್ತಿಯ ಸೂಚನೆಯನ್ನ, ಇನ್ನೂ ಒಂದು ಮಾತಿನಲ್ಲಿ ಹೇಳೋದಾದ್ರೆ, 'ಬಡವರ ಬಗ್ಗರ ತುತ್ತಿನ ಚೀಲದ ಒಳಗಿನ ಒಳಗಿನ ಒಳದನಿಯೊಂದನ್ನ!' ಬೇಂದ್ರೆ ಈ ವ್ಯಂಗ್ಯಾರ್ಥ ಪ್ರತೀತಿಯ ಮೂಲಕ ಸಮರ್ಥವಾಗಿ ಅಭಿವ್ಯಕ್ತಿಗೊಳಸಿದಾರೇಂತ ಅನ್ನಿಸುತ್ತೆ.

ಕೆ.ವಿ.ನಾ.: ಈಗ ಮಿತ್ರ ರಾಘವೇಂದ್ರರಾವ್ ಅವರು ಈ ಕವನವನ್ನು ಒಂದು ಪ್ರಾಯೋಗಿಕ ವಿಮರ್ಶೆಗೆ ಗುರಿಪಡಿಸ್ತಾರೆ.

ಎಚ್. ಎಸ್. ರಾಘವೇಂದ್ರರಾವ್: ಅನೇಕ ಬಾರಿ ಈ ಕವನವನ್ನು ಓದಿದ ಮೇಲೆ ನಾನು ಈ ವಿಮರ್ಶೆಗೆ ಕೊಡಬಹುದಾದ ಹೆಸರು 'ಯಾತನೆಯಿಂದ ಎಚ್ಚರದ ಕಡೆಗೆ' ಅಂತ. ಯಾಕೇಂತಂದ್ರೆ, ಒಂದು ಅನ್ಯಾಯಕ್ಕೆ ಗುರಿಯಾದ ಜನಸಮುದಾಯ ಕವನದ ಪ್ರಾರಂಭದಲ್ಲಿ ಇದ್ದ ಸ್ಥಿತಿ–ನೋವನ್ನ ಅನುಭವಿಸುವ ಸ್ಥಿತಿ, ಆದರೆ ಆ

ನೋವಿಗೆ ಮಾತನ್ನು ಕೊಡಲಾಗದ, ಅದನ್ನ ಪ್ರತಿಭಟಿಸಲಾಗದ ಸ್ಥಿತಿ. ಆದರೆ ಕವನದ ಮುಕ್ತಾಯದ ವೇಳೆಗೆ ಅದು ಪ್ರತಿಭಟಿಸ್ತಾ ಇರೋದನ್ನ, ಘರ್ಜಿಸ್ತಾ ಇರೋರನ್ನ, ಚೀರ್‍ತಾ ಇರೋದನ್ನ, ನಾವು ನೋಡ್ತೀವಿ. ಈ ಸಂಗತಿ ನಮಗೆ ಏನು ಹೇಳ್ತಾ ಇದೆ ಅಂದ್ರೆ, ಯಾವುದೇ ಒಂದು ಒಳ್ಳೆಯ ಕವನ ತಾನು ಪ್ರಾರಂಭವಾದಾಗ ಎಲ್ಲಿತ್ತೋ ಅಲ್ಲಿ ಮುಗಿದಾಗ ಇರೋದಿಲ್ಲ; ಕವನ ತನ್ನನ್ನು ತಾನು ಬೆಳವಣಿಗೆಗೆ ಒಡ್ಡಿಕೊಳ್ತಾ ಹೋಗುತ್ತೆ. ಇದು ಅನೇಕ ಓದುಗಳ ನಂತರ ವಿಮರ್ಶಕನಿಗೆ ಸ್ಪಷ್ಟ ವಾಗುವ ಸಂಗತಿ.

ಈ ಪದ್ಯವನ್ನು ಮೊದಲು ಓದಿದಾಗ ನಮ್ಮ ಗಮನಕ್ಕೆ ನಾಲ್ಕು ಅಂಶಗಳು ಬರುತ್ವೆ. ಅನ್ನ, ನಾದ, ಶಬ್ದ–ಈ ಮೂರು ಶಬ್ದಗಳನ್ನ ಬ್ರಹ್ಮ ಅನ್ನುವ ಶಬ್ದದ ಜೊತೆ ಬೆರೆಸಿ ಅನ್ನಬ್ರಹ್ಮ, ನಾದಬ್ರಹ್ಮ, ಶಬ್ದಬ್ರಹ್ಮ ಅಂತ ಹೇಳಿರೋದು. ಎರಡನೆಯದಾಗಿ ಕವನದ ಮೊದಲಲ್ಲಿ ಒಂದು ಬಗೆಯ ಪೂಜೆಯ ಪ್ರತಿಮೆ ಅಥವಾ ಪೂಜೆಯ ಅಣಕದ ಪ್ರತಿಮೆ ಬರುತ್ತೆ. ಹಾಗೆಯೇ ಕವನದ ಕೊನೆಯಲ್ಲಿ ಮತ್ತೊಂದು ಬಗೆಯ ಪೂಜೆಯ ಪ್ರತಿಮೆ ಬರುತ್ತೆ. ಹಾಗೇನೇ ಕವನದ ಬೇರೆ ಬೇರೆ stanza ಗಳನ್ನು ಗಮನಿಸ್ತಾ ಹೋದಾಗ ಒಟ್ಟು ಜೀವನದಲ್ಲಿ ಸಮೃದ್ಧಿ ಒಂದು ಕಡೆ ಇದ್ದು, ಸಮೃದ್ಧಿ ಇದ್ದರೂ ಕೂಡಾ ಮತ್ತೊಂದು ಕಡೆ ಕೊರತೆ ಇರೋದನ್ನ ಹೇಳಿ, ಈ ಸಮೃದ್ಧಿ ಮತ್ತು ಕೊರತೆ ಒಂದೇ ಕಡೆ ಇರೋದಕ್ಕೆ ಕಾರಣ ಏನಿರಬಹುದು ಅನ್ನೋದನ್ನ ವಿಶ್ಲೇಷಣೆ ಮಾಡೋ ಪ್ರಯತ್ನ ಇದೆ ಅಂತ ನಮಗೆಲ್ಲೋ ಅನ್ನಿಸುತ್ತೆ. ಹಾಗೇ ಕವನದಲ್ಲಿ, ಬಡವರು ದುಃಖಪಡ್ತಾ ಇರೋದು, ಆ ದುಃಖವನ್ನು ಹೋಗ ಲಾಡಿಸಿಕೊಳ್ಳೋದಕ್ಕೆ ಪ್ರಾರ್ಥನೆ ಮಾಡೋದು, ಪ್ರಾರ್ಥನೆ ವಿಫಲವಾದಾಗ ಈ ಪ್ರಾರ್ಥನೆ ನಿಷ್ಪ್ರಯೋಜಕ ಎನ್ನುವ ತೀರ್ಮಾನಕ್ಕೆ ಬರೋದು, ಕೊನೆಗೆ ಪ್ರಾರ್ಥನೆಗೆ ಬದಲಾಗಿ ನಾನೇ ಕ್ರಿಯಾಶೀಲನಾದರೆ – ನಾನು ನನ್ನ ಈ ನೋವನ್ನು ಪರಿಹರಿಸಿ ಕೊಳ್ಳೋಕೆ ಪ್ರಯತ್ನಪಟ್ಟರೆ–ಚೆನ್ನ ಆಗಬಹುದೇನೋ ಅನ್ನೊ ಒಂದು ಆಶಾಭಾವನೆ ಯನ್ನು ನಾವು ಕವನದ ಕೊನೆಯಲ್ಲಿ ನೋಡ್ತೀವಿ. ಇದು ಸ್ಥೂಲವಾದ ತೀರ್ಮಾನಗಳು.

ಈಗ ಮತ್ತೆ ಪದ್ಯದ ಮೊದಲ ಭಾಗಕ್ಕೆ ಬರೋಣ. ಇಲ್ಲಿ ಬೆಂಕಿ, ಗಂಟೆ, ನೈವೇದ್ಯ, ಮಂತ್ರ, ಪೂಜೆ ಇತ್ಯಾದಿ ಪೂಜೆಗೆ ಸಂಬಂಧಪಟ್ಟ ವಿಷಯಗಳೇನೇ–ನಂಗಲಿ ಯವರು ಈಗ ಹೇಳ್ತಾ ಇದ್ದ ಹಾಗೆ–ಬೊಬ್ಬೆ-ಘಂಟೆ ಅಲ್ಲ, ಬೊಬ್ಬೆ; ಈ ನೈವೇದ್ಯ, ಗಾಳಿ; ಈ ಮಂತ್ರ ಕಾಗೆಯ ಕೂಗಿನ ಹಾಗೆ ಅರ್ಥಹೀನ, ಇತ್ಯಾದಿ ಧ್ವನಿಗಳನ್ನು ಕೊಡುವ ವಿವರಗಳನ್ನ ನಾವು ನೋಡ್ತೀವಿ. ಆದರೆ ಎರಡನೇ ಭಾಗ ಹೆಚ್ಚು ಮುಖ್ಯ

ವಾದದ್ದು ಅಂತ ನನಗನ್ನಿಸ್ತದೆ. ನೋಡಿ, ನಾದ ಅನ್ನೋದಕ್ಕೆ ಧ್ವನಿ ಇದೆ, ಆದರೆ ಅರ್ಥ ಇಲ್ಲ. ಶಬ್ದ ಅನ್ನೋದಕ್ಕೆ ಧ್ವನಿ ಇದೆ, ಅರ್ಥ ಕೂಡಾ ಇದೆ. ಎರಡನೇ ಭಾಗದಲ್ಲಿ 'ನಾದ ಬ್ರಹ್ಮದ ಕಗ್ಗವಿ' ಅನ್ನೋ ಮಾತು ಬರುತ್ತೆ. ಈ ನಾದಬ್ರಹ್ಮದ ಕಗ್ಗವಿಯಲ್ಲಿ ವೀಣೆಯ ಸಂಗೀತ ಆಗ್ತಾ ಇದೇಂತ ಅನ್ಕೊಂಡ್ರೆ, ಅದು ಮೌನ ವೀಣೆ ಅನ್ನೋ ಮಾತು ನಮ್ಮನ್ನು ತಕ್ಷಣ ತಡೆಯುತ್ತೆ; ಬೆರಳುಗಳ ಮಿಡಿಯುವಿಕೆ ಇದೆ, ಹೃದಯದ ಮಿಡುಕುವಿಕೆ ಇದೆ. ಆದರೆ ಇದಾವುದರಿಂದಲೂ ಕೂಡಾ ಸಂಗೀತ ಬರ್ತಾ ಇಲ್ಲ–ಅದು ಮೌನದ ವೀಣೆ; ಕರುಳಿನ ತಂತಿಗಳನ್ನೇ ಬಳಸಿಕೊಂಡರೂ ಕೂಡಾ ಮೌನದ ವೀಣೆ. ಹೇಗೆ ಬಡವರ ಸಿಟ್ಟು ಅಥವ ನೋವು ಮಾತನ್ನು ಪಡೆಯಲಾರದ ಒಂದು ಸನ್ನಿವೇಶ ಇದೆಯಲ್ಲ, ಅದನ್ನ ಕೆಲವು ಪದಗಳು ಹೇಳ್ತವೇಂತ ನಾನು ಅನ್ಕೊಂಡಿದ್ದೇನೆ.

ಅದರೆ ಮುಂದಿನ stanzaದಲ್ಲಿ ಈ ವಿವರಣೆಗೆ ಇನ್ನಷ್ಟು ವಿಶೇಷವಾದ ಅರ್ಥ ಬರುತ್ತೆ. ಈ ಗುಮ್ಮಟ ಅಥವಾ dome ಅನ್ನುವುದರ ಲಕ್ಷಣ ಏನೂಂತಂದ್ರೆ, ಅಲ್ಲಿ ಹುಟ್ಟಿದ ಶಬ್ದ ಮತ್ತೆ ಅವರ ಕಿವಿಗಳಿಗೇ ಕೇಳಿಸ್ತಾ ಇರುತ್ತೆ ; ಹೊರಗಿನ ಶಬ್ದ ಅಲ್ಲಿಗೆ ಬರೋದಿಲ್ಲ. ಈ ನಾದಬ್ರಹ್ಮದ ಕಗ್ಗವಿಯ ಶಬ್ದ ಕೇಳಿಸಬೇಕಾದ್ದು ಶಬ್ದಬ್ರಹ್ಮನ ಗುಮ್ಮಟದಲ್ಲಿರುವ ಮಹನೀಯರಿಗೆ. ಆ ಗುಮ್ಮಟದಲ್ಲಿ ಇರೋರಿಗೆ ಕೇಳಿಸ್ತಾ ಇರೋದು ಅವರೇ ಮಾಡ್ತಾ ಇರೋ ವೇದದ ವಾದವೇ ಹೊರತು ಇಲ್ಲಿಂದ ಬರ್ತಿರೋ ನೋವಿನ ಕೂಗು ಅಲ್ಲ. ಗುಮ್ಮಟದ ಲಕ್ಷಣವೇ ಹಾಗಿದೆ ಅನ್ನೋದು: ಹೊರಗಿನ ಧ್ವನಿ ಒಳಗಡೆ ಹೋಗೋದು ಕಷ್ಟ; ಒಳಗಿನ ಧ್ವನಿ ಹೊರಗೆ ಬರೋದು ಕಷ್ಟ ಅನ್ನೋ ಸನ್ನಿವೇಶದಲ್ಲಿ ಇರತಕ್ಕಂತಹ ಗುಮ್ಮಟ, ಇವರ ಮಾತನ್ನು ಕೇಳಬೇಕಾದವರು, ಇವರ ನೋವನ್ನು ಅರ್ಥಮಾಡಿಕೊಳ್ಳಬೇಕಾದವರು ಹೇಗೆ ಮೂಕರಾಗಿದ್ದಾರೆ ಅನ್ನೋದನ್ನ ಹೇಳುತ್ತೇನೋ ಅಂತ ನನಗನ್ನಿಸುತ್ತೆ. ಅವರು ಹಗಲು–ರಾತ್ರಿ ಕೇವಲ ವೇದದ ವಾದದಲ್ಲಿ ಮಗ್ನರಾಗಿರುವ ಜನ. ಆದರೆ ಆ ಹಂತ ದಲ್ಲಿ ಯಾಕೆ ಜನ ಪ್ರತಿಭಟನೆ ಮಾಡೋದಿಲ್ಲ ಅನ್ನೋ ಪ್ರಶ್ನೆ ಬರುತ್ತೆ. ಅದಕ್ಕೆ ಉತ್ತರ ತಕ್ಷಣ ಬೇಂದ್ರೆಯವರು ಕೊಡ್ತಾರೆ–ಈ ಪಾಪ ಪುಣ್ಯಗಳ ಪರಿಕಲ್ಪನೆಯೇ ಪ್ರತಿಭಟನೆ ಮಾಡೋದು ಕೂಡಾ ಪಾಪವೇನೋ ಅನ್ನುವ ಒಂದು ನಂಬಿಕೆಯನ್ನು ಜನರ ಮನಸ್ಸಿನಲ್ಲಿ ಬಿತ್ತಿರೋದ್ರಿಂದ, ಪ್ರತಿಭಟನೆ ಮಾಡದೇ ಇರೋದು ಪುಣ್ಯಕ್ಕೆ ದಾರಿ ಅನ್ನುವ ನಂಬಿಕೆಯನ್ನು ಬಿತ್ತಿರೋದರಿಂದ ಏನಾಗುತ್ತೆ ಅಂದ್ರೆ, ಪಾಪ–ಪುಣ್ಯ ಗಳ ಗೊಡವೆಗೆ ಹೋಗದೆ ಮೌನವಾಗಿದಾರೇನೋ....ಇದು ಒಂದು ಹಂತ ಅಷ್ಟೆ. ಪದ್ಯ ಇಲ್ಲಿಗೇ ನಿಂತಿದ್ರೆ, ಕೇವಲ ವಸ್ತುಸ್ಥಿತಿಯನ್ನು ನಿರೂಪಿಸಿ ಬಿಟ್ಟ ಹಾಗಾಗ್ತಿತ್ತು.

ಆದರೆ ಮುಂದೆ ಏನಾಗಬೇಕು ಅನ್ನೋದನ್ನ ಹೇಳೋ ಉದ್ದೇಶ ಕೂಡಾ ಕವಿಗೆ ಇದ್ದದ್ದರಿಂದ, ಕವನ ಮುಂದುವರೀತಾ ಹೋಗುತ್ತೆ: ಈ ಪಾಪ–ಪುಣ್ಯದ ಜೇಡರ ಬಲೆಯಿಂದ ಜೀವ ಬಿಡಿಸಿಕೊಂಡಾಗಲೇನೇ ಅದಕ್ಕೆ ಎಚ್ಚರದ ಗರ್ಜನೆಯನ್ನು ಮಾಡೋದಕ್ಕೆ ಸಾಧ್ಯವಾಗುತ್ತೆ ಅನ್ನೋದು.

ಮುಂದಿನ ಎರಡು ಮೂರು ಭಾಗಗಳು ದೈವುಳ್ಳವರಿಗೆ' ಅಂತ ಶುರುವಾಗೋದು, 'ಶಿವಾ ಶಿವಾ ಹೇ ಶಿವ ಮಹಾದೇವಾ'ಂತ ಶುರುವಾಗೋದು, 'ಕಿಕ್ಕಿರಿ ತುಂಬಿದೆ ಭೂಮಿಯು ಕಣಜ' ಅಂತ ಪ್ರಾರಂಭವಾಗುವ stanza–ಇಲ್ಲಿ ಸ್ವಲ್ಪಮಟ್ಟಿನ ಪುನರುಕ್ತಿ ಇದೇಂತ ನನಗೆ ಅನಿಸುತ್ತೆ. ನಾಲ್ಕು ಮಾತುಗಳಲ್ಲಿ ಹೇಳಬಹುದಾದನ್ನು ಹದಿನಾಲ್ಕು ಮಾತುಗಳಲ್ಲಿ ಹೇಳುವ ಪ್ರಯತ್ನವನ್ನು ಬೇಂದ್ರೆಯವರು ಮಾಡಿದ್ದಾರೆ. ಸಾಕಷ್ಟು ಪರಿಣಾಮಕಾರಿಯಾಗಿದೆ, ನಿಜ. ಆದರೆ ಅವಧಾರಣೆಗೋಸ್ಕರ ಪುನರುಕ್ತಿಯನ್ನು ಬಳಸೋದು ಅಷ್ಟೊಂದು ಉಚಿತವಾದ ರೀತಿಯಲ್ಲಾಂತ ನಾನು ಅನ್ಕೊಂಡಿದೇನೆ. 'ಕಿಕ್ಕಿರಿ ತುಂಬಿದೆ ಭೂಮಿಯು ಕಣಜ' ಒಂದು ಕಡೆ; 'ತೆರವೋ ತೆರವೂ ಬಡವರ ಬಗ್ಗರ ತುತ್ತಿನ ಚೀಲಾ' ಇನ್ನೊಂದು ಕಡೆ. ಇಲ್ಲಿ 'ತಿತ್ತಿರೆ ತುಂಬಿದೆ ಕೂಳಿನ ಕೋಟೆ' ಅನ್ನೋ ಮಾತು ಬಹಳ ಮುಖ್ಯ ಅನ್ನಿಸುತ್ತೆ. ಕೂಳನ್ನ ಒಳಗಡೆ ಇಟ್ಕೊಂಡು ಕೋಟೆ ಕಟ್ಟಿಬಿಟ್ರೆ ಸುತ್ತ, ಅದನ್ನ ಯಾರೂ ಪಡೆಯದ ಹಾಗೆ ಬಂಧನವನ್ನು ಹಾಕಿದ ಹಾಗೆ ನಾವದನ್ನು ರಕ್ಷಿಸಿಕೊಳ್ಳಬೇಕು ಅನ್ನೋ ಧೋರಣೆಯನ್ನು ಹೇಗೆ ಇರುವವರು ಇಲ್ಲದವರಿಗೆ ಕೊಡದೇ ಇರುವುದನ್ನು, ಇಲ್ಲದವರು ಅದನ್ನು ತೆಗೆದುಕೊಳ್ಳದಂತೆ ರಕ್ಷಿಸುವುದನ್ನೇ ತಮ್ಮ ಗುರಿಯಾಗಿಟ್ಟುಕೊಂಡಿದ್ದಾರೆ ಅನ್ನುವುದನ್ನು ಕೂಡಾ ಈ ಭಾಗಗಳು ಹೇಳುತ್ತೇಂತ ನನಗೆ ಅನಿಸುತ್ತೆ. ಆದರೂ ಕೂಡಾ ನನಗೆ ತೋರೋದು ಈ ಮಾತು stanzaಗಳಲ್ಲಿ ಸ್ವಲ್ಪಮಟ್ಟಿನ ಪುನರುಕ್ತಿಯಿದೆ ಅಂತ.

ಆದರೆ ಈ ಆರು ಭಾಗಗಳಾದ ಮೇಲೆ ಕೊನೆ ಭಾಗದಲ್ಲಿ ಕವಿತೆ ರಚನೆಯ ದೃಷ್ಟಿಯಿಂದ ಒಂದು ಮಹತ್ವದ ತಿರುವನ್ನು ತಗೊಳ್ಳುತ್ತೇಂತ ಕಾಣುತ್ತೆ. ಕಾಲವನ್ನ ತೆಗೆದುಕೊಂಡರೂ ಕೂಡಾ ಮೊದಲಿನ stanzaಗಳಲ್ಲಿ ಹೀಗಿದೆ ಹೀಗಿದೆ ಅನ್ನೋದನ್ನ ಒಂಥರ ಭೂತಕಾಲದ ಕ್ರಿಯೆ ಏನೋ ಅನ್ನುವ ರೀತಿಯಲ್ಲಿ ಹೇಳ್ತಾ ಹೋಗ್ತಾರೆ: ಇಲ್ಲಿ ಮಾತ್ರ ಗರ್ಜಿಸುತ್ತಿಹುದು, ಗದರುತ್ತಿಹುದು. ಈಗ ಏನಾಗ್ತಾ ಇದೆ ಅಂತಾಂದ್ರೆ, ಒಂದು ಬಗೆಯ ಆಶಾಚಿಂತನೇಂತ ನಾವಿದನ್ನು ಕರೆಯಬಹುದು–ಈ ಇಡೀ ಪದ್ಯ ಧರ್ಮ ಅನ್ನುವುದು ಹೇಗೆ ನಮ್ಮ ಸಮಸ್ಯೆಗಳನ್ನು ಪರಿಹಾರ ಮಾಡೋದ್ರಲ್ಲಿ ನಿಷ್ಪ್ರಯೋಜಕವಾಗಿದೆ ಅನ್ನೋದನ್ನ ಕೂಡ ಹೇಳುತ್ತೇಂತ ನಾನು ಅನ್ಕೊಂಡಿ

ದೀನಿ. ಅದಕ್ಕೆ ಈ ಕೊನೆಯ ಭಾಗದ ಈ ಕೋಪದ ಅರ್ಥ ಇರತಕ್ಕಂತಹುದು ಈ ಬಗೆಯ ನಿರಾಶೆಯ ಮತ್ತು ಹೊಸ ಎಚ್ಚರದ ಹಿನ್ನೆಲೆಯಲ್ಲಿ ಅಂತ ನಾನು ಅನ್ಕೊಂಡಿದ್ದೇನೆ. ಹೀಗೆ ಒಟ್ಟು ಪದ್ಯದ ವಸ್ತು ಒಂದು ಬಗೆಯ ಯಾತನೆಯಿಂದ ಮತ್ತೊಂದು ಬಗೆಯ ಎಚ್ಚರದ ಕಡೆ ಬೆಳೀತಾ ಹೋಗುತ್ತೇಂತ ನಾನು ಹೇಳೋದು.

ಈಗ ಇದರ ರಚನೆಗೆ ಬರೋದಾದ್ರೆ ಇಂದಿನ ಬಂಡಾಯ ಚಳುವಳಿಯ ಹಿನ್ನೆಲೆಯಲ್ಲಿ ಬರತಕ್ಕಂತಹ ಸಾವಿರಾರು ಪದ್ಯಗಳನ್ನು ಗಮನಿಸ್ತಾ ಹೋದಾಗ ಇದು ಬಂಡಾಯ ಕವನ ಬರೀತಾ ಇರೋರ್ಗೆ ಒಂದು ಮಾದರಿಯಾಗಬಹುದೂಂತ ನನಗೆ ಅನ್ನಿಸುತ್ತೆ. ಯಾಕೇಂದ್ರೆ ಅವರು ಅಪೇಕ್ಷಿಪಡುವ ಸರಳತೆ, ಅವರು ಅಪೇಕ್ಷಿಪಡುವ ಭಾವನಿರ್ಭರತೆ ಆದರೆ ಭಾವನಿರ್ಭರವಾದರೂ ಕೂಡಾ ಅತಿ ಸಂಕೀರ್ಣವಲ್ಲದ ಒಂದು ಗುಣ ಇದರಲ್ಲಿ ಮತ್ತೆ ಮತ್ತೆ ಇರೋದನ್ನ ನಾವು ನೋಡ್ತೀವಿ. ಈ ಕವಿ ಪ್ರತಿಮೆಗಳಲ್ಲೇ ಮಾತಾಡ್ತಾ ಹೋಗ್ತಾನೆ ದೇಗುಲ, ಕಗ್ಗವಿ, ಪೂಜೆ, ವೀಣೆ, ತಂತಿ, ಗುಮ್ಮಟ, ಕೋಟೆ, ಕಣಜ, ಚೀಲ–ಇವೆಲ್ಲ ಕೂಡಾ ತಮ್ಮ ಮೂಲಾರ್ಥದ ಜೊತೆಗೆ ಹಲವು ಹೊಸ ಅರ್ಥಗಳನ್ನು ಪಡೀತಾ ನಮ್ಮ ಮನಸ್ಸಿನಲ್ಲಿ ಬಿಚ್ಚಿಕೊಳ್ತಾ ಹೋಗುತ್ತೇಂತ ಕಾಣುತ್ತೆ. ಇಲ್ಲಿ ಯಾವ ಹೇಳಿಕೆ ಕೂಡಾ ನೇರವಾದ ಹೇಳಿಕೆಯಾಗಿ ಕಂಡರೂ ಅದು ನೇರವಾದ ಹೇಳಿಕೆ ಆಗಿಲ್ಲ. ಮುಗಿಲಿನ ಕಿವಿ, ಬಿಡಿಗಣ್ಣವರ ಕುರುಡು ಮುಂತಾದ ಧ್ವನ್ಯರ್ಥವುಳ್ಳ ಮಾತುಗಳನ್ನ ಗಮನಿಸ್ತಾ ಹೋಗಬಹೂದೂಂತ ಕಾಣುತ್ತೆ. ಪದ್ಯದಲ್ಲಿರೋದೆಲ್ಲ ಚಿಕ್ಕ ಚಿಕ್ಕ ಸಾಲುಗಳು. ಈ ಚಿಕ್ಕ ಸಾಲುಗಳೆಲ್ಲಾ ಕೂಡಾ ಉಸಿರಾಟದ ಲಯಾಂತ ನಾನು ಅನ್ಕೊಂಡಿದ್ದೇನೆ. ಬೇಂದ್ರೆಯವರು ಆ ಕಾಲದಲ್ಲಿ ಅನೇಕ ಈ ರೀತಿಯ ಕವನಗಳನ್ನು ಬರೆದಿದ್ದಾರೆ.

ಅನ್ನಬ್ರಹ್ಮದ ದೇಗುಲದಲ್ಲಿ
ಬೈಗು ಬೆಳಗು
ಛಿಟಿ ಛಿಟಿ ಬೆಂಕಿ–

ಉಸಿರಾಟದ ಸಹಜವಾದ ಲಯವನ್ನೇ ಪದ್ಯದಲ್ಲಿ ಪದಗಳು ಕಟ್ಕೊಂಡು ಹೋಗ್ತಾ ಇರೋ ಲಯ ಕೂಡಾ ಆಗಿದೆ. ಆದರೆ ಹೊಸದೊಂದು ಅರ್ಥವನ್ನ ಹೇಳಬೇಕು ಅನ್ನಿಸಿದಾಗ ಈ ಮೂರು ಲಯದ ವೈವಿಧ್ಯವನ್ನು ಅವರು ಬದಲಾಯಿಸ್ತಾ ಹೋಗ್ತಾರೆ. ವಿವರಗಳಿಗೆ ನಾನಿಲ್ಲಿ ಹೋಗೋದಿಲ್ಲ. ಆದರೆ ಬರಿದೋ ಬರಿದು ತೆರವೋ ತೆರವು ಅಂತ ಎಳೆದಾಗ ಆ ಮಾತುಗಳು ಹೇಳಬೇಕಾದ ಒಂದು ವಿಶೇಷವಾದ ಅರ್ಥ ಆ ಪದಗಳ ರಚನೆಯಿಂದಾನೇ ಪದ್ಯಕ್ಕೆ ಪ್ರಾಪ್ತವಾಗೋದನ್ನ ನಾವು ನೋಡ್ತೀವಿ.

ಕೊನೆಗೆ ಬರಬಹುದಾದ ಕೆಲವು ತೀರ್ಮಾನಗಳು ಅಂತಾಂದ್ರೆ, ಈ ಪದ್ಯ ಬಡತನದ ಬಗ್ಗೆ ಮಾತಾಡ್ತಾ ಮಾತಾಡ್ತಾನೇ, ಅದನ್ನ ನಿವಾರಿಸಬೇಕಾಗಿಲ್ಲ–ನಿವಾರಿಸುತ್ತೇಂತ ನಂಬಿರತಕ್ಕಂತಹ ಧರ್ಮದಂತಹ ಸಂಸ್ಥೆಗಳು ಹೇಗೆ ನಿರ್ವೀರ್ಯವಾಗಿವೆ ಅನ್ನೋದನ್ನ ಧರ್ಮದ ಪ್ರತಿಮೆಗಳನ್ನ ಬಳಸ್ಕೊಂಡೇ ಒಳಗಿನಿಂದಲೇ ಅದನ್ನ ಸಿಡಿಸಿ ಬಿಡುವ ಪ್ರಯತ್ನವನ್ನ ಈ ಕವಿತೆ ಮಾಡ್ತಾ ಹೋಗುತ್ತೇಂತ ಕಾಣುತ್ತೆ. ಪರಿಣಾಮಕಾರಿಯಾಗದೆ, ಆದ್ರೆ ಸರಳವಾಗಿದೆ–ಬೇಂದ್ರೆಯವರ ಬೇರೆ ಕವನಗಳಲ್ಲಿ ಆಗೋ ಹಾಗೆ ಒಂದು ಬಗೆಯ ಅರ್ಥದ ಸಂದಿಗ್ಧತೆ, ಅರ್ಥ ಕ್ಲಿಷ್ಟತೆ ಇಲ್ಲದ ಕವನ. ಸಂಕೀರ್ಣವಾದ ವಸ್ತು, ಆದರೆ ಸರಳವಾದ ನಿರೂಪಣೆ. ಸಾಮಾಜಿಕವಾದ ಆಶಯಗಳನ್ನೇ ಹೀಗೆ ಚಿತ್ರಮಯವಾಗಿ, ಕವಿತೆಯಪ್ಪ ಇದು ಅಂತ ನಾವು ಒಪ್ಪಿಕೊಳ್ಳುವ ಹಾಗೆ ಹೇಳೋದ್ರಿಂದ ಇದು ತುಂಬಾ ಯಶಸ್ವಿಯಾದ ಬೇಂದ್ರೆಯವರ ಕವನಗಳಲ್ಲಿ ಒಂದೂಂತ ನಾನು ಅಭಿಪ್ರಾಯಃಪಡ್ತೇನೆ.

ಕೆ. ವಿ. ನಾರಾಯಣ: ಈಗ ಡಾ॥ ಬಸವರಾಜ ಕಲ್ಗುಡಿಯವರು ಈ ಕವಿತೆಯನ್ನು ಸಾಮಾಜಿಕ ವಿಮರ್ಶೆಯ ಮಾನದಂಡಗಳಿಂದ ವಿಮರ್ಶೆ ಮಾಡ್ತಾರೆ.

ಬಸವರಾಜ ಕಲ್ಗುಡಿ: ಈ ಕವನದಲ್ಲಿ ಮೂರು ಮೂರು ಪ್ಯಾರಃಗಳಲ್ಲಿ ಅನ್ನಬ್ರಹ್ಮ, ನಾದಬ್ರಹ್ಮ ಹಾಗೂ ಶಬ್ದಬ್ರಹ್ಮ ಎನ್ನುವ ಪರಿಕಲ್ಪನೆಗಳನ್ನು ಕವಿ ಇಡ್ತಾ ಇದಾರೆ. ಬ್ರಹ್ಮ ಅನ್ನೋದು ನಮ್ಮ ಪರಂಪರಾಗತ ಧಾರ್ಮಿಕ ಹಿನ್ನೆಲೆಯಲ್ಲಿ ಸೃಜನಶೀಲತೆಗೆ ಕೂಡಾ ಸಂಕೇತ. ಇಲ್ಲಿ ಏನಾಗಿದೇಂದ್ರೆ ಅನ್ನ, ನಾದ ಮತ್ತು ಶಬ್ದ–ಈ ಮೂರೂ ಸೃಜನಶೀಲತೆಗೆ ವಿರೋಧವಾಗಿರುವ ಅಂಶವನ್ನ ಕವಿ ಸೂಚಿಸ್ತಾನೆ. ವ್ಯಂಗ್ಯಾರ್ಥದಲ್ಲಿ ಲಕ್ಷಣಾರ್ಥದಲ್ಲಿ ವಿವರಿಸ್ತಿದ್ದಾನೆ. ಅದನ್ನ ನಂಗಲಿಯವರು ಚೆನ್ನಾಗಿ ವಿವರಿಸಿದ್ದಾರೆ. ಆದರೆ ಗಮನಿಸಬೇಕಾದ ಒಂದಂಶ ಏನೂಂದ್ರೆ–ಇಲ್ಲಿ ಎರಡು ವರ್ಗಗಳ ಚಿಂತನೆ, ಎರಡು ವರ್ಗಗಳ ವಿವರಣೆ ಕವನದಲ್ಲಿ ಬಿಚ್ಚಿಕೊಳ್ತದೆ. ಒಂದು ವರ್ಗ ದೈವವುಳ್ಳಂಥ ವರ್ಗ, ಇನ್ನೊಂದು ಬಡವರ ವರ್ಗ. ಇವೆರಡರ ನಡುವಿನ ಕಂದರವನ್ನ ಕವನ ವಿವರಿಸ್ತಾ ಇದೆ. ಆದ್ದರಿಂದ ಇಲ್ಲಿ ಏನಾಗಿದೇಂದ್ರೆ, ಈ ವರ್ಗಗಳ ಅಂತರವನ್ನ ವಿವರಿಸುವಾಗ ಬಡತನಕ್ಕೆ ಕಾರಣವಾದ ವರ್ಗ ಯಾವುದೂಂತ ವಿವರಿಸುವಲ್ಲಿ ಅದು ದೈವವುಳ್ಳವರ ವರ್ಗ ಅಂತ ಹೇಳ್ತಾನೆ. ಹೀಗಾಗಿ ಸಾಮಾಜಿಕ ಪರಿಕಲ್ಪನೆಯಲ್ಲಿ ಇದನ್ನ ವಿವರಿಸಿಕೊಳ್ಳೋ ಹಂತದಲ್ಲಿ ಪುರೋಹಿತಶಾಹಿ ಹಾಗೂ ಬಂಡವಾಳವುಳ್ಳಂಥ ವರ್ಗ–ಇವೆರಡೂ ಒಂದೇ ಅನ್ನುವಂತಹ ವಿವರಣೆಗೆ ನಾವು ಬರಬೇಕು ಇಲ್ಲಿ.

ಆದರೆ ಈ ಕವನದ ಒಂದು ದೌರ್ಬಲ್ಯ ನನಗೆ ಅನ್ನಿಸಿರೋದು–ಹಸಿದವ ಬಲ್ಲ ಹಸಿವೆಯ ಶೂಲ ಅಂತ ಹೇಳುವಾಗ, ಕವಿಗೆ ಮಾತ್ರ ಅದು ಖಚಿತ ಅಷ್ಟೆ. ಆದರೆ

ಹಸಿದವರು ಇಲ್ಲಿ ಹಸಿವೆಯ ಶೂಲವನ್ನ ಹೇಗೆ ಅರ್ಥೈಸಿಕೊಂಡಿದ್ದಾರೆ ? ನೋಡಿ:

ಶಿವಾ ಶಿವಾ ಹೇ
ಶಿವ ಮಹಾದೇವಾ !
ಅತ್ತಿತು ಕೂಗಿತು
ಚೀರಿತು ಜೀವ
ಬಾಯುಂಗಳದಲಿ
ಹುಟ್ಟಿದ ಮಾತು
ಮುಗಿಲಿನ ಕಿವಿಯನು
ಮುಟ್ಟಲೆ ಇಲ್ಲ ...

ಅಂದ್ರೆ ಈ ಬಡವರ್ಗವೊಂದು ಹಸಿವಿನ ಕಾರಣಗಳನ್ನ ಗುರುತಿಸುವ ಹಂತದಲ್ಲಿ ವಾಸ್ತವವಾದಂತಹ ಕಾರಣವನ್ನ ಅದು ಹುಡುಕ್ತಾ ಇಲ್ಲಾಂತ. ಒಂದು ರೀತಿಯ ಸಂದಿಗ್ಧತೆಯಿಂದ ಕೂಡಿದ ದೈವದ ಹಿನ್ನೆಲೆಯ ಕಾರಣವನ್ನ ಅದು ಗುರುತಿಸಿಕೊಳ್ತಾ ಇದೆ, ಕವಿಯ ಅರ್ಥ ಮತ್ತು ವಾಸ್ತವವಾಗಿ ಕವನದಲ್ಲಿ ಕಾಣುವಂತಹ ಬಡವರ್ಗದ ಅರ್ಥ–ಬಡವರ್ಗ ಕಂಡುಕೊಳ್ಳುವಂತ ಅರ್ಥವಿನ್ಯಾಸ–ಇವೆರಡಕ್ಕೂ ಒಂದು ರೀತಿಯ ಕಂದರ ಇದೆ ಅಲ್ಲಿ. ಹೀಗಾಗಿ ಏನಾಗುತ್ತೇಂದ್ರೆ, ಮುಖ್ಯವಾದ ಕಾರಣ ಹಸಿವಿಗೆ, ದೇವರು, ದೈವುಳ್ಳವರು ಅನ್ನುವ ನಿಲುವಿನಿಂದ ಕವನ ಹೊರಡ್ತದೆ. ಹೀಗಾಗಿ ಕೊನೆಯ ಪ್ಯಾರಾದಲ್ಲಿ **ದೇವರದೊಂದು ಗೋರಿಯ ಕಟ್ಟಿ....** ಅನ್ನುವಲ್ಲೆಲ್ಲಾ ಒಟ್ಟಾರೆ ಬಂಡಾಯ ಹೇಗಿರಬೇಕೂಂತ ಹೇಳುವಾಗ **ನೆಲವನ್ನೆಲ್ಲಾ ತುತ್ತುವೆನೆಂದು ಗದರುತ್ತಿಹುದು ಗರ್ಜಿಸುತಿಹುದು**–ಇದು ಮುಖ್ಯವಾದ ಕ್ರಿಯೆ ಇಲ್ಲಿ. ಸಮಾಜವಾದೀ ದ್ವಂದ್ವಮಾನದ ಪರಿಭಾಷೆಯಲ್ಲಿ ಈ ಕ್ರಿಯೆ ಏನಿದೆ, ಒಪ್ಪುವಂತಹ ಕ್ರಿಯೆಯಲ್ಲ ಅದು. ಯಾಕೇಂದ್ರೆ ಬಡತನಕ್ಕೆ ಕಾರಣಗಳನ್ನ ಆ ವರ್ಗ ಗುರುತಿಸಿಕೊಳ್ತಾ ಇಲ್ಲ, ಈ ಕವನದಲ್ಲಿ concrete ಆಗಿ. ಹಾಗೆ ಗುರುತಿಸಿಕೊಳ್ಳುವ ಹಂತವೂ ಕೂಡಾ ಕವನದಲ್ಲಿ ಬೆಳವಣಿಗೆ ಆಗಿಲ್ಲ.

ಎರಡನೇ ಘಟ್ಟ ಅದು 'ಶಿವಾ ಶಿವಾ ಹೇ, ಶಿವ ಮಹಾದೇವ !'–ಅನ್ನೋ ಘಟ್ಟ ಇದೆಯಲ್ಲಾ, ಅದು ಒಂದು ರೀತಿ ಆಕ್ರಂದನ, ಒಂದು ರೀತಿಯ ಬೇಡುವಿಕೆ ಅದು. ಆ ಬೇಡುವಿಕೆ ಘಟ್ಟದಿಂದ ಕೊನೇ ಘಟ್ಟದಲ್ಲಿ ಏನಾಗಿಬಿಡುತ್ತೆ ? ಹಠಾತ್ತಾಗಿ ಎಲ್ಲವನ್ನೂ ನಾಶಮಾಡುವಂತಹ ಕ್ರಿಯೆಗೆ ಇಳೀತದೆ. ಕವನದ ಒಂದು ದೌರ್ಬಲ್ಯ ಇದೇಂತ ಕಾಣಿಸುತ್ತೆ. ಸಮಾಜವಾದೀ ವಾಸ್ತವತೆಯ ಹಿನ್ನೆಲೆಯಲ್ಲಿ ನೋಡಿದಾಗ ಕೂಡಾ ಕವನದಲ್ಲಿ ಆರ್ಥಿಕ ವಿನ್ಯಾಸಗಳು, ಅದರ ಮೂಲಕ ಮೂಡುವಂತಹ ಸಮಸ್ಯೆಗಳು–

ಇವುಗಳನ್ನು ಖಚಿತವಾಗಿ ಹಿಡೀಲಿಕ್ಕೆ ಆಗಿಲ್ಲ. ಬಹುಶಃ ಇದಕ್ಕೆ ಕಾರಣ ಇದು ಬರೆದ ಕಾಲವೇ ಇರಬಹುದು. ಏನೂಂತಂದ್ರೆ ಸರ್ವೋದಯದ ಚಳುವಳಿಯಲ್ಲಿ ಬಹುಶಃ ಎಲ್ಲ ವರ್ಗದವರೂ ಸಮಾನರು–ದೈವವಿರುವಂತಹವರು, ದೈವವಿಲ್ಲದಂತಹವರು ಎಲ್ಲರೂ ಕೂಡಾ ಸಮಾನರು–ಅನ್ನೋ ಕಲ್ಪನೆ ಬಂದಾಗ ಬಹುಶಃ ದೈವ, ಧರ್ಮ ಪುರೋಹಿತಶಾಹಿ ಅನ್ನುವುದನ್ನೇ ಮುಖ್ಯವಾದಂತಹ ನಿಲುವನ್ನಾಗಿ ಮಾಡಿಕೊಂಡು ಕವಿ ನೋಡಿದ್ದಾರೆ. ಹಾಗೆ ನೋಡಿದಾಗ ಕವನಕ್ಕೆ ಮಿತಿ ಉಂಟಾಗಿದೇಂತ ನಾನು ಅನ್ಕೊಂಡಿದ್ದೇನೆ.

ಕೆ. ವಿ. ನಾರಾಯಣ: ನನ್ನ ಈ ಮೂರು ಜನ ಮಿತ್ರರೂ ಕೂಡಾ ಈಗ ಕವಿತೆಯನ್ನ ಬೇರೆ ಬೇರೆ ದೃಷ್ಟಿಕೋನಗಳಿಂದ ವಿಶ್ಲೇಷಣೆ ಮಾಡೋದಿಕ್ಕೆ ಪ್ರಯತ್ನಪಟ್ಟಿದ್ದಾರೆ. ಈ ಮೂರೂ ವಿಮರ್ಶಾ ವಿಧಾನಗಳು ಕೂಡಾ ಈ ಕವಿತೆಯನ್ನ ವಿಶ್ಲೇಷಣೆ ಮಾಡಬೇಕಾದ ಸಂದರ್ಭದಲ್ಲಿ ಯಾವ ಯಾವ ಮಾನದಂಡಗಳನ್ನು ಬಳಸಿದರು ಮತ್ತು ಅದರ ಮುಖಾಂತರ ಯಾವ ಯಾವ ನಿರ್ಣಯಗಳನ್ನ ತಲುಪಿದರು, ಆ ನಿರ್ಣಯಗಳೆಲ್ಲಾ ಪರಸ್ಪರ ವಿರೋಧವನ್ನ ಹೊಂದಿವೇಂತ ನನಗನ್ನಿಸೋದಿಲ್ಲ. ಪರಸ್ಪರ ಪೂರಕವಾಗಿವೇಂತ ನನಗೆ ಅನ್ನಿಸುತ್ತೆ. ಆದರೆ ಒಬ್ಬರು ಕವಿತೆಯನ್ನ ಉತ್ತಮವಾದ ಕವಿತೆ ಅಂದರು; ಇನ್ನೊಬ್ಬರು ಕವಿತೆಯಲ್ಲಿ ದೌರ್ಬಲ್ಯ ಇದೇಂತ ಹೇಳಿದರಲ್ಲಾ ? ಅದರಿಂದ ಇದು ಹೇಗೆ ಪರಸ್ಪರ ಪೂರಕವಾದದು ಅಂತ ಕೇಳಬಹುದು. ಯಾವುದೇ ಒಂದು ವಿಚಾರವಾದ್ರೂ ಕೂಡಾ ಅದು ಈ ರೀತಿಯ ವಾಗ್ವಾದಕ್ಕೆ ಒಳಗಾಗ್ತದೆ ಅನ್ನೋದೇ ಅದಕ್ಕಿರುವ ಸಾಮಾಜಿಕ ಮಹತ್ವವನ್ನು ಎತ್ತಿ ಹೇಳುತ್ತೆ. ಹೀಗಾಗಿ ಈ 'ತುತ್ತಿನ ಚೀಲ' ಕವಿತೆ ಈ ರೀತಿಯ ಒಂದು ವಾಗ್ವಾದಕ್ಕೆ ಗುರಿಯಾಗ್ತಾ ಇರೋದೇ ಈ ಕವಿತೆಯ ಒಂದು ಮಹತ್ವ ಕೂಡಾ ಆಗಿದೇಂತ ನಾನು ತಿಳೀತೇನೆ.

ನಾನು ಈ ಕವಿತೆಯ ಬಗ್ಗೆ ಈ ಮೂರೂ ದೃಷ್ಟಿಕೋನಗಳನ್ನ ಸಮನ್ವಯಗೊಳಿಸಿ ಒಂದು ಸಂಗತಿಯ ಕಡೆಗೆ ನಿಮ್ಮ ಗಮನವನ್ನ ಸೆಳೆಯೋದಕ್ಕೆ ಇಷ್ಟಪಡ್ತೀನಿ. ಈ ಕವಿತೆ ಆರಂಭವಾಗೋದು ಕೂಡಾ ಆರಾಧನೆಯಲ್ಲಿ. ಈ ಆರಾಧನೆಯಲ್ಲಿರತಕ್ಕಂತಹ ಪಲ್ಲಟವನ್ನು ರಾಘವೇಂದ್ರರಾವ್ ಗುರುತಿಸಿದರು. ಮೊದಲಲ್ಲಿ ಕೂಡಾ ಪೂಜೆಯ ಸೂಚನೆ ಇದೆ. ಕೊನೆಯಲ್ಲಿ ಕೂಡಾ ಪೂಜೆಯ ಸೂಚನೆ ಇದೆ. ಆ ಮೊದಲ ಪೂಜೆ ನಿರರ್ಥಕವಾದದ್ದು. ಆದರೆ ಕೊನೆಯ ಪೂಜೆ ಸಾರ್ಥಕವಾದದ್ದು. ಅಲ್ಲಿ ಕೂಡ ಬರತಕ್ಕಂತಹ ಪೂಜೆಯ ವಿವರಗಳಿಗೂ ಇಲ್ಲಿಯ ಪೂಜೆಯ ವಿವರಕ್ಕೂನೂ ಎಷ್ಟು ವ್ಯತ್ಯಾಸ ಇದೇ ಅನ್ನೋದನ್ನ ನಾವು ನೋಡಬಹುದು. ಆದರೆ ಕಲ್ಲುಗುಡಿಯವರ ತಕರಾರು ಏನೂಂದ್ರೆ ಇಲ್ಲಿ ಕೂಡಾ ಪೂಜೆಯ ಪ್ರತಿಮೆಯನ್ನೇ–ರಾಘವೇಂದ್ರರಾವ್

ಈ ಮಾತನ್ನು ಬಳಸಿದರು–ಬಳಸಬೇಕಾಗಿ ಬಂತಲ್ಲಾ, ಧಾರ್ಮಿಕವಾದ ಪರಿಕಲ್ಪನೆಯನ್ನು ಬಳಸಿಯೇ ವಿಶ್ಲೇಷಣೆ ಮಾಡಬೇಕಾಗಿ ಬಂತಲ್ಲಾ ಅನ್ನೋದೂಂತ ಕಾಣಿಸುತ್ತೆ. ಇದು ಅವರೇ ಹೇಳಿಕೊಂಡ ಹಾಗೆ ಕವಿ ಯಾವ ಕಾಲದಲ್ಲಿ ಕವಿತೆಯನ್ನ ಬರೆದರು, ಆ ಕಾಲದ ಒಂದು ಸಾಮಾಜಿಕವಾದ ಚಿಂತನೆ ಇಂತಹದನ್ನ ಪ್ರೇರೇಪಿಸಿರಬಹುದು ಅನ್ನುವ ಮಾತನ್ನು ಕೂಡಾ ನಾವು ಗಮನಿಸಬೇಕು.

ಇಲ್ಲಿ ಚರ್ಚಿಸಬೇಕಾದ ಒಂದು ವಿಚಾರ ಇದೆ. ಅದು ಏನೂಂತಂದ್ರೆ, ಒಂದು ಕವಿತೆ ಅದು ಸೃಷ್ಟಿಯಾದ ಕಾಲದ ಸಾಮಾಜಿಕ ಚಿಂತನೆಗಳಿಂದ ಪ್ರೇರಣೆಯನ್ನ ಪಡೆದು ಆ ಮೂಲಕ ಅದು ಬೆಳೆದಿರುತ್ತೇಂತ ನಾವು ಹೇಳೋದಾದ್ರೆ, ಭಿನ್ನ ಕಾಲ–ದೇಶಗಳಲ್ಲಿ ಕುಳಿತು ಚರ್ಚೆ ಮಾಡತಕ್ಕಂತಹವರು ಆ ಕವಿತೆಯನ್ನ ಹೇಗೆ ನೋಡಬೇಕು ? ಆ ಕವಿತೆಯ ಸೃಷ್ಟಿಯ ಕಾಲದ ಹಿನ್ನೆಲೆಯನ್ನಿಟ್ಟುಕೊಂಡು ನೋಡಬೇಕೋ ಅಥವಾ ನಮ್ಮ ಕಾಲದ ಚಿಂತನೆಗಳನ್ನ ಇಟ್ಕೊಂಡು ಅದಕ್ಕೆ ಅರ್ಥಗಳನ್ನ ಹಚ್ಚಬೇಕೋ ಅಥವಾ ಅರ್ಥಗಳನ್ನ ಪಡೀತಾ ಹೋಗಬೇಕೋ ? ಆದರೆ ಯಾವುದೇ ಕವಿತೆ ಕೂಡಾ ತನ್ನ ಕಾಲದ, ತನ್ನ ದೇಶದ, ತನ್ನ ಸಂದರ್ಭದ ಅರ್ಥ ಚೌಕಟ್ಟನ್ನ ಪಡಕೊಂಡಿದ್ದರೂ ಕೂಡಾ ಅದು ನಿಜವಾಗತಕ್ಕಂತಹುದು ನನ್ನ ಕಾಲಕ್ಕೆ. ನನ್ನ ಕಾಲದ ಗ್ರಹಿಕೆಯ ಚೌಕಟ್ಟಿಗೆ ಅದು ಒಗ್ತಾ ಇರ್ತದೇಂತ ನನಗೆ ಕಾಣ್ತದೆ. ಅಂದ್ರೆ ಯಾವ ವಾಗ್ವಾದವನ್ನ ನಾವು ಇವೊತ್ತು ಎತ್ತಿದೇವೋ ಯಾವ ವಾಗ್ವಾದವನ್ನ ಈ 28ರ ಕವಿತೆ ಎತ್ತೋದಕ್ಕೆ ಈ ಅವಕಾಶ ಮಾಡಿಕೊಟ್ಟದೇಂತ ನಾವು ತಿಳೀತೇವೋ, ಆ ವಾಗ್ವಾದ 89ರಲ್ಲೂ ಕೂಡಾ ಇದೆ. ಅಂದ್ರೆ, ಹಸಿವಿಗೆ ಕಾರಣವಾಗತಕ್ಕಂತಹ ಸಂಗತಿಗಳ ಬಗ್ಗೆ ನಾವು ಎಷ್ಟು ಖಚಿತವಾಗಿರ್ತೀವೋ ಹಸಿವಿನ ನಿವಾರಣೆಯ ಬಗೆಗೆ ಕೆಲವರು ಖಚಿತವಾಗಿದ್ದಾರೆ, ಕೆಲವರು ಖಚಿತವಲ್ಲದ ಮಾರ್ಗಗಳನ್ನು ಅನುಸರಿಸ್ತಾ ಇದ್ದಾರೆ ಅನ್ನೋದೇ ಇವೊತ್ತಿನ ಸತ್ಯವೂ ಕೂಡಾ. ಅಂದ್ರೆ ಧರ್ಮ ಅನ್ನೋದು. ಅಥವಾ ಧಾರ್ಮಿಕವಾದ ವ್ಯಾಖ್ಯಾನವನ್ನು ಮಾಡತಕ್ಕಂತಹುದು ಇವೊತ್ತು ಕೂಡಾ ಚಾಲ್ತಿಯಲ್ಲಿರೋ ಚಿಂತನಾಕ್ರಮವಾಗಿರೋದ್ರಿಂದ ಈ ವಾಗ್ವಾದ ಕೇವಲ ಬೇಂದ್ರೆಯವರ ಕವಿತೆ ಒಳಗಡೆ ಇರತಕ್ಕಂತಹ ವಾಗ್ವಾದ ಮಾತ್ರವಾಗದೆ, ನಮ್ಮ ಸಾಮಾಜಿಕ ವಾಸ್ತವವೂ ಕೂಡಾ ಆಗಿರೋದ್ರಿಂದ ಈ ಕವಿತೆ ಇವೊತ್ತು ಕೂಡಾ ನಮ್ಮ ಕನ್ನಡಿಯಾಗಿ ಕೆಲಸ ಮಾಡಬಹುದೂಂತ ನನಗೆ ಅನ್ನಿಸ್ತದೆ. ●

[ಕೃಪೆ: ಆಕಾಶವಾಣಿ, ಬೆಂಗಳೂರು (1989)]

ನಾಲ್ಕು ಸುನೀತಗಳು

● ಹೆಚ್. ಎಸ್. ವೆಂಕಟೇಶಮೂರ್ತಿ

1. ಕೋಡುಗಲ್ಲಿನ ಮೇಲೆ

ವಿರಹಿಗಳು ಮೋಡಗಳ ಹಿಡಿದು ಗೋಗರೆಯುತ್ತ
ಕಳಿಸಿದರು ಸಂದೇಶ ! ಮೇಘಗಳು ಬಾನಲ್ಲಿ
ಹುಡುಕಿಕೊಂಡಲೆಯುತಿವೆ ಗುರುತುಗಳ. ನೇರಿಲೆಯ
ಬಣ್ಣದೀ ಮರಿಮೋಡ ಕೋಡುಗಲ್ಲಿನ ಮೇಲೆ
ಮಂಕಾಗಿ ಕೂತು ಪರಧ್ಯಾನಪರವಾಗಿ ಜೂ–
ಗರಿಸುತಿದೆ. ಕಣ್ಣಲ್ಲಿ ಎರಡು ಹನಿ. ಗಲ್ಲ ಕೈ.
ತುಂಬು ಹಣೆಯಲ್ಲೊಂದು ಪುಟ್ಟ ತಾರಗೆ. ಕೊರಳಿ–
ನಲ್ಲಿ ಒಂದೆಳೆ ಮಿಂಚು. ಗಾಳಿಗಾಡುವ ಕುರುಳು.
ಕೋಡುಗಲ್ಲಿನ ಹಿಂದೆ ಇಳಿದ ಕೆದರಿದ ಹೆರಳು.
ಅಲ್ಲಿ ಕ್ಷಿತಿಜದ ಅಂಚಿನಲ್ಲಿ ತೇಲುವ ಬಣ್ಣ–
ಗಾರ ಮುಗಿಲುಗಳನ್ನು ನೋಡುತ್ತ ನೋಡುತ್ತ
ಬಾಡುವುದು ಮುದ್ದು ಮುಖ. ಹಳೆಯ ನೆನಪುಗಳೀಗ
ಕಾಡುವುವು. ಸಣ್ಣ ನಗು. ಹಿಂದೆಯೇ ಬಿಸಿಯುಸಿರು.
ಬರೆಯುವುದು ಬೆರಳು ಬಾನೊಳಗೆ ಯಾವುದೊ ಹೆಸರು.

2. ಗೃಹಿಣಿಯೊಬ್ಬಳ ಸಂದಿಗ್ಧ

ಯಾವಾಗ ಬಂದೆಯೋ ! ಯಾವಾಗ ಹೋದೆಯೋ !
ಇದ್ದಷ್ಟು ಹೊತ್ತು ಅದು ಗೊತ್ತಾಗಲೇ ಇಲ್ಲ.
ಆಡಿದ್ದು ಆಡಿದ್ದೆ. ಏನೇನೊ ನೆನೆನೆನೆದು
ನಕ್ಕೆವು.... ಅತ್ತೆವು ... ಮತ್ತೆ ಕೋಪಿಸಿಕೊಂಡು

ಗುಮ್ಮಂತ ಕೂತೆವು ಆಮೇಲೆ ಹಿಂದೆ ಅದು
ಎಂದೊ ಆದದ್ದೆಂದು ಹೊಳೆದು ನಾಚಿಕೆ ಮುದ್ದೆ.
ನೋಡಬೇಕಿತ್ತಾಗ ಕಿವಿಯು.... ಒಣಮರಕೊಡೆದ
ಹೊಸ ಚಿಗುರು ! ಮತ್ತೆ ಏನೇನು ನಡೆದಿಲ್ಲೆನುವ
ಹಾಗೆ ಮೆಲ್ಲಗೆ ಬಂದು 'ಕಾಫಿ ರೆಡಿಯಾ' ಎಂದು
ಅಡುಗೆ ಮನೆಯಲ್ಲೇ ಪಟ್ಟಾಂಗ ಹೊಡೆಯುತ್ತ
ಬಿಚ್ಚಿದ್ದು ಹೊಸ ರೀಲು. ಎಷ್ಟೊ ವರ್ಷದ ಬಳಿಕ
ಅವರಿಲ್ಲದಿರುವಾಗ ಹೀಗೆ ಬಾಗಿಲು ತಳ್ಳಿ

ಯಾವಾಗ ಬಂದೆಯೋ.... ಯಾವಾಗ ಹೋದೆಯೋ....
ಒಂವೆ ಇಲ್ಲವೊ... ಅಥವಾ ಇಲ್ಲಿಯೇ ಇರುವೆಯೋ ?!

3. ಸ್ಟೇಡಿಯಂನಲ್ಲಿ

ನೋಡೆ ನೋಡೆಲೆ ಅವನ ! ಹೇಗೆ ನಿಂತಿದ್ದಾನೆ !
ಗೋಪಾಲಕೃಷ್ಣ ! ಕೊಳಲೊಂದಿಲ್ಲ ಕೈಯಲ್ಲಿ !
ಬಿರುಗಾಳಿಯಂತೆ ನುಗ್ಗುವ ಗೂಳಿ ಬೋಲರನ
ಕ್ಯಾರೆ ಅನ್ನುವನೇನೆ ನಿನ್ನೆ ಮೊನ್ನೆಯು ಇವನು ?

ಬಣ್ಣ ನೋಡೆ ! ಅವನ ಕಣ್ಣ ನೋಡೆ ! ಅವನ
ಗತ್ತು ನೋಡೆ ! ಇನ್ನ ಇಪ್ಪತ್ತು ತುಂಬಿಲ್ಲ
ಹೇಗೆ ಬೆಳೆದಿದ್ದಾನೆ ! ಬಾಗಿ ನಿಂತಾಗಲೂ
ಎಷ್ಟು ಎತ್ತರ ! ಅಯ್ಯೊ ! ತಿನ್ನಬೇಕೆನಿಸುತ್ತೆ.

ಎಷ್ಟು ಕೇರ್‌ಫ್ರೀ ಅಂತಿ. ಮೊನ್ನೆ ಸ್ಪೋರ್ಟ್ಸ್‌ವೀಕಲ್ಲಿ
ಪುಟದಗಲ ಫೋಟೊ, ಬರೀ ಷಾರ್ಟಿನಲ್ಲೇ ಕಣೆ.
ಪುಟ್ಟಿ ನೋಡೋ ಮೊದಲೆ ಕತ್ತರಿಸಿ ಮುಚ್ಚಿಟ್ಟೆ.
ತಾಳು ! ಅಗೊ ಅಗೊ ಗೂಳಿ ಕಾಲ್ಕೆದರುತಿದೆ ಈಗ

ಅಬ್ಬಬ್ಬ ! ಬಂತು ಬಿರುಗಾಳಿ ! ಬೌಂಡರಿ ದಾಟಿ
ಹಾರಿದ್ದು ಬಾಲೆ ? ನೀನೇ ಹೇಳೆ ಎದೆಮುಟ್ಟ.

4. ಬೀಳ್ಕೊಡಿಗೆ

ಪರ್ವತವೆ ಹೋಗಿ ಬಾ, ಕಡಲೆ ಮರೆಯದಿರೆನ್ನ.
ಕಣ್ಣೊರೆಸಿಕೋ ಬಾನೆ. ನಕ್ಷತ್ರಗಳೆ ಹೋಗಿ
ಪತ್ರ ಬರೆಯಿರಿ, ಸೇರಿ ನಕ್ಷತ್ರಲೋಕಗಳ.
ಹೂವೆ ಹೂವಿನ ಬಳಿಗೆ . . ಕಾಡೆ ಕಾಡಿನ ಒಳಗೆ....
ದಯಮಾಡಿ. ದಯವಿಟ್ಟು ಮರೆಯದಿರಿ ಇದ್ದಮನೆ.
ಎಷ್ಟು ದಿನ ಪಾಪ ಪರಊರಲ್ಲಿ ಇದ್ದೀರಿ ?
ಸ್ಥಳ ಕಮ್ಮಿ. ಇಕ್ಕಟ್ಟು. ಕಡಲಿನುಪ್ಪಿಗೆ ಹಾಗು
ಬೆಟ್ಟನೆಲ್ಲಿಗೆ ಶರಣು–ಒಟ್ಟಿಗೇ ಇದ್ದುದಕೆ.

ಬಂದದ್ದೆ ಹೆಚ್ಚು ಎಲ್ಲಿಂದಲೋ ಇಲ್ಲಿಗೆ.
ಉಪ್ಪು ತುಂಬೇಸೊಪ್ಪು, ಬಡನುಡಿಯ ಉಪಚಾರ.
ಎದೆಯಿಂದಲೇ ಹೊರಟವಮಾತು. ಎದೆಗಳ ಹೊಕ್ಕು
ಒಂದಕ್ಕೆ ನೂರಾಗಿ ಇರಲಿ ಇರುವಷ್ಟು ದಿನ.
ಆಮೇಲೆ ಇದ್ದೇಇದೆ ತವರು. ಬಾಗಿಲು ತೆರೆದು
ಮಲಗಿರುವೆ. ಬರಲಿ ಇರುಳಲ್ಲಿ ಮಲ್ಲಿಗೆ ಸಲಿದು.

ಅವಳಸ್ಥಿ ಪಂಜರದೊಳಗೆ

● ಮಲ್ಲು ಸಿ. ಕೊತ್ನೂರ್

೧

ಗಿರಿಕಂದರಗಳ ಗುಡಿಸಲೊಳಗ
ಕಾಡು ಸೀಮೆಯ ಹುಡುಗಿ,
ಅವಳೆದೆಯ ಗೋಳಗುಮ್ಮಟದೊಳಗೆ
ಕಾಗೆ–ಗೂಗೆಗಳ ಅಪಶಕುನಗಳಿಂಚರ
ಬಳಲಿ ಬಾಯಾರಿ ಬರುತ್ತಿದ್ದ ಮೂಡುಸೀಮೆಯ
ಹುಡುಗ ಎದುರಾಗಿಯೇ ಬಿಟ್ಟ.
ನೀರು ನೆರಳಿರದ ಜಾಗದಲಿ

ಹುಡುಗಿಯ ಹಸಿರು ಸೀರೆಯ ಸೆಳೆದು
ಅತ್ಯಾಚಾರವೆಸಗಿದಾದಿನ
ಬೇಸಿಗೆಯ ಮಟ ಮಟ ಮಧ್ಯಾಹ್ನ.

೨

ಊರಾಚೆ ನಿಂತ ಬೆತ್ತಲು ಹುಡುಗಿ
ತಲೆ ತಗ್ಗಿಸಿ ಕೇಳಿದಳು ನೀರು.
ಕುರುಚಲು ಗಡ್ಡೆಯ ಕಾಡುಕುರುಬ
ಶೀಲಗೆಟ್ಟವಳ ನಸು ಹಸಿರು ಜೀವಂತ ಶವಕ್ಕೆ
ಮೋಟು ಬೀಡಿಯ ಕೊಳ್ಳಿ ಇಟ್ಟು
ಅವಳಂಗಾಂಗಗಳ ಸುಟ್ಟೇಬಿಟ್ಟ.
ಸತ್ತವಳ ಸ್ಮಶಾನದ ಸುತ್ತೆಲ್ಲಾ
ಮುಳ್ಳುತಂತಿಯ ಹಾರ. ಸರ್ಕಾರದವರ ಸಂಸ್ಕಾರ ಶಾಸನ.

೩

ಸತ್ತವಳಿಗೆ ಶ್ರದ್ಧಾಂಜಲಿ ಸಲ್ಲಿಸ ಬಂದವಳು,
ಮುಂಗಾರಿನ ಮುದುಕಿ ಮಾಟಗಾತಿ
ಉಕ್ಕಿ ಬಂದ ದುಃಖದ ಜೊತೆ ಬಿಕ್ಕಿಬಿಕ್ಕಿ ಅಳುತ್ತಾ,
ಕೊಲೆಗಡುಕರ ಶಪಿಸಿ, ಗುಡುಗು ಕೋಲ್ಮಿಂಚುಗಳ
ಬೈಗುಳದ ಸುರಿಮಳೆಯ ಸುರಿಸಿ ಬಿಟ್ಟಾಗ
ಮಂತ್ರದ ಮೋಜಿಗೆ ಮಾಯದ ನೀರಿಗೆ
ಉದ್ಭವಿಸಿ ಬಂದವಳು
ಮೊಂಡು ಜಡೆಯ ತುಂಡುಲಂಗದ
ಹಸಿರುಟ್ಟ ಪುಟ್ಟ ಎದೆಗಳ ಹುಡುಗಿ

೪

ನೆರೆಹೊರೆಯ ಹಾರೈಕೆಯಿಲ್ಲದ ಹುಡುಗಿ
ಡಿಸೆಂಬರ್ ಚಳಿಗೆ ಮೈನೆರೆದೂ
ಹಸಿರು ಕಂಬಳಿ ಹೊದ್ದು ನಾಚಿ ತಲೆತಗ್ಗಿಸಿದವಳ
ಮೋರೆಯಲಿ ಕೆಂಪು ಹೂಗಳ ಪ್ರಾಯದ ಮೊಡವೆ
ಬೈಗಿನ ಬೆನ್ನಿಂದೆ ಅವಿತಿದ್ದ ಆಕಾರವಿಲ್ಲದ ದಡಿಯ
ಮೆತ್ತ ಮೆತ್ತಗೆ ಬಂದು ಮುತ್ತಿಗೆಯ ಹಾಕಿ
ಅತ್ಯಾಚಾರವೆಸಗಲು ಯತ್ನಿಸಿದ ಆ ದಿನ
ಅರ್ಧರಾತ್ರಿಯ ಅಮಾವಾಸ್ಯೆ.

೫

ಅವಳ ನೇತ್ರದಂಬರದ ನಕ್ಷೆಯಲಿ
ಲಕ್ಷೋಪಲಕ್ಷ ಚುಕ್ಕೆಗಳ ಪಕ್ಕದಲಿ
ಇವನೊಬ್ಬ ಚಿಕ್ಕ ಹುಡುಗ ಹದಿನೈದು ದಿನದಲ್ಲಿ
ಯುವಕನಾಗಿ ಅವಳ ದೃಷ್ಟಿಯ ಗರ್ಭದಲಿ
ತಾನೊಬ್ಬನೇ ಸೃಷ್ಟಿಯಾಗಿ
ಕಳಿಯುನ ಕೊರಳಿಡಿದು ನೂಕಿದಾದಿನ
ಹುಣ್ಣಿಮೆಯ ಬೆಳದಿಂಗಳು.

೬

ಕಾಮುಕರ ಕೋಟಿ ಕಣ್ಗೊಳಗೆ
ಸೊಕ್ಕಿಬಿದ್ದವಳು ಕಾನನದ ಕನ್ಯೆ
ಅವಳಸಿರು ರವಿಕೆಯ ಒಳಗೆ ಕೋಟಿ ರೂಪಾಯಿ ರೊಕ್ಕ
ಅವಳ ನಿಗೂಢಾಂಗದಲಿ ಶ್ರೀಗಂಧದ ಪರಿಮಳ
ಕಣ್ಣು ನೀಟಿದಷ್ಟೂ ಆಕೃತಿಗಳ
ಅವಳ ನೆನಪ ನಿದ್ದೆಯಲ್ಲಿಯೇ ಅಜೀರ್ಣವಾಗಿದ್ದವರು
ಅತ್ಯಾಚಾರಕ್ಕೆ ಹೊರಟು ನಿಂತಾಗ
ಕಪ್ಪುಕಾಗೆ, ಬಿಳಿಯಬೆಕ್ಕು, ಕಂದುನಾಯಿಗಳ ಕೂಗು.

೭

ಕಾಮುಕರ ಸುಡುವ ಬಂದೂಕಿನ
ಕಣ್ಣುಗಳಿಗೆ ರಾತ್ರಿಕುರುಡು
ಕೊಡಲಿ ಮಚ್ಚುಗಳಿಡಿದ ಕಾಡಕಾಮುಕರು
ತುಳುಕಿ ಬಳುಕಾಡುತ್ತಿದ್ದವಳ ಸೆರಗಾಸಿ ಮಲಗಿ
ಮೇಲೆದ್ದು ರಮಿಸಿದ ಹುಡುಗಿಯ ಕೈಕಾಲುಗಳ ಕೊಚ್ಚಿ
ತೊಡೆ ತೋಳುಗಳ ಕೊಯ್ದು
ಅವಳಸ್ಥಿ ಪಂಜರದೊಳಗೆ ಬೆಳಕ ಬೆಳಗಿಸಿಯೇ ಬಿಟ್ಟಾಗ
ಮತ್ತೆ ಬರಲಿಲ್ಲ ಮುಂಗಾರಿನ ಮುದುಕಿ
ಶವವಿಲ್ಲದವಳ ಸ್ಮಶಾನದೊಳಗೆ ನೇತಾಡತೊಡಗಿದವು
ಹಸಿರು ಬೋರ್ಡುಗಳು.

ಶರೀಫನಿಗೆ

● ಶಂಕರ ಕಟಗಿ

ಬಯಲು ನೀರವದೊಳಗೆ
ನಾದ ಬಿಂದುವಿನಲಿ ಒಂದಾದ
ಓ ಶರೀಫ ಎಚ್ಚರವಾಗಿದ್ದೀಯಾ....
ಆ ನಿದ್ದೆ ಗದ್ದುಗೆಯಲಿ.

ಹಾಗಿದ್ದರೆ ಹೇಳಯ್ಯ ಒದ್ದೆಯಾಗಿವೆ ಊರು
ನಿನ್ನ ಬೋಧೆಗಾಗಿ, ಸಾಧನದ ಹಾದಿಗಾಗಿ.

ಮಂದಿರ ಮಸೀದೆಗಳ ಮಧ್ಯ
ವಿರಾಮಗೊಂಡಿದೆ ಕದನವು
ಸಾಗಿಸಲಾವುದೀಗ–
ಕೆಂಡ ಸಂಪಿಗೆ ಹೆಣವ.

ನೊಂದುಕೊಂಡಿದೆ ಊರು ಅಂತ
ಹೇಳುವ ಹಾಗಿಲ್ಲವೊ ಸಂತ
ಶಿಲಾನ್ಯಾಸದ ಬುನಾದಿಯಾಗಿದೆ ನೋವು
ಬಂದಳಿಕೆಯಾಗಿದೆ ಭಾವವು

ಸಾಧ್ಯವಾದರೆ ನುಡಿಸಯ್ಯ ತಂಬೂರಿಯ
ನೆಲದಡಿಯ ನದಿಯ ತೆರದಿ

'ಆದಿ ಪದ' ಗುನುಗುನಿಸು–
ಗುಂಗು ಹಿಡಿಯಲೀ ಭವದ ಬಯಲಿಗೆ.

ಶ್ರದ್ಧಾಂಜಲಿ

ಅನುಪಮಾ ಸಾಹಿತ್ಯ:

ಹೃದಯವಂತಿಕೆಯ ಸಾಮಾಜಿಕ ಚಿಕಿತ್ಸೆ

ಸ. ಉಷಾ

ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಸಂಖ್ಯೆ ಮತ್ತು ಜನಪ್ರಿಯತೆಗಳ ದೃಷ್ಟಿಯಿಂದ ಮಹಿಳೆಯರದೇ ಸಿಂಹಪಾಲು. ಅದೇ ಮಾತನ್ನು ಗುಣಮಟ್ಟದ ಬಗ್ಗೆಯೂ ಹೇಳಲು ಸಾಧ್ಯವಾಗುವುದಿಲ್ಲ. ಕಾದಂಬರಿಕಾರ್ತಿಯರ ಸಲೀಸು ಬರವಣಿಗೆಗೆ ಅಪವಾದವಾಗಿ ಎಂ. ಕೆ. ಇಂದಿರಾ, ತ್ರಿವೇಣಿ, ಅನುಪಮಾ ನಿರಂಜನ, ಸಾರಾ ಅಬೂಬಕ್ಕರ್, ವೈದೇಹಿ ಇಂಥ ಲೇಖಕಿಯರು ತಮ್ಮ ಬರಹಗಳ ಗಟ್ಟಿತನದಿಂದ ಬೇರೆಯಾಗಿ ನಿಲ್ಲುತ್ತಾರೆ.

ಅನುಪಮಾ ಕೇವಲ ಕಾದಂಬರಿಕಾರ್ತಿಯಲ್ಲ. ಸಣ್ಣಕಥೆ, ಮಕ್ಕಳ ಸಾಹಿತ್ಯ, ಪ್ರವಾಸ ಸಾಹಿತ್ಯ, ವೈದ್ಯಕೀಯ ಬರವಣಿಗೆ–ಈ ಎಲ್ಲ ಕ್ಷೇತ್ರಗಳಲ್ಲಿ ಅವರ ಲೇಖನಿ ವಿಹರಿಸಿದೆ. ಆದರೂ ಓದುಗರು ಮುಖ್ಯವಾಗಿ ಅವರನ್ನು ಗುರ್ತಿಸುವುದು ಕಾದಂಬರಿ ಕಾರ್ತಿಯೆಂದು. ಅವರ ಕೆಲವು ಸಣ್ಣಕತೆಗಳು ಬದುಕಿನ ವಾಸ್ತವ ಚಿತ್ರಣವನ್ನು ಕಲಾತ್ಮಕವಾಗಿ ಕೊಟ್ಟಿವೆ.

ವೈದ್ಯವೃತ್ತಿಯಿಂದ ಪಡೆದ ಜೀವನಾನುಭವ, ಮನುಷ್ಯನ ನೋವಿನ ಅರಿವು, ಸಾಮಾಜಿಕ ಕಳಕಳಿ, ಒಳಿತಾದುದು ಹೊಸದಾದುದು ಏನು ತನ್ನ ದಾರಿಯಲ್ಲಿ ಕಂಡರೂ ಅದನ್ನು ಹೀರಿಕೊಂಡು ಬೆಳೆಯುವ ತವಕ ಅನುಪಮಾ ಅವರ ಕಾದಂಬರಿಗಳಿಗೆ ಅವರ ಇಡೀ ಬರಹಕ್ಕೆ ಅವರದೇ ಆದ ವಿಶಿಷ್ಟತೆಯನ್ನು ಕೊಟ್ಟಿತು. ಹೀಗಾಗಿ ಅವರು ಬರೆಯಲು ಪ್ರಾರಂಭಿಸಿದ ಕಾಲದಲ್ಲಿ ಬರೆಯುತ್ತಿದ್ದ ಬೇರೆ ಲೇಖಕಿಯರಿಗಿಂತ ಭಿನ್ನವಾಗಿ ಬರೆಯುವುದು, ಬೆಳೆಯುವುದು ಸಾಧ್ಯವಾಯಿತೆನ್ನಿಸುತ್ತದೆ.

ಅನುಪಮಾರವರು ಕಥೆ-ಕಾದಂಬರಿ ಬರೆಯಲು ಪ್ರಾರಂಭಿಸಿದ ಸಂದರ್ಭದಲ್ಲಿ ವಾಣಿ, ತ್ರಿವೇಣಿ, ಎಂ. ಕೆ. ಇಂದಿರಾ–ಅವರುಗಳು ಕಾದಂಬರಿ ಕ್ಷೇತ್ರದಲ್ಲಿ ಮಾಡಿದ

ಕೃಷಿ ಒಂದು ಒಳ್ಳೆಯ ಹಿನ್ನೆಲೆಯನ್ನು ಒದಗಿಸಿತ್ತು. ಈ ಅನುಕೂಲದ ಜೊತೆಗೇ ಪರಂಪರೆಯ ನೆರಳಲ್ಲಿ ಕೃತಿ ರಚಿಸುವುದಕ್ಕಿಂತ ಭಿನ್ನವಾಗಿ ತನ್ನ ಸತ್ವದಿಂದಲೇ ನಿಲ್ಲ ಬೇಕಾದ ವಿಶಿಷ್ಟ ಕೃತಿಗಳನ್ನು ರಚಿಸಬೇಕಾದ ಸವಾಲು ಸಹ ಹೊಸದಾಗಿ ಬರೆಯಲು ಪ್ರಾರಂಭಿಸಿದ ಲೇಖಕಿಗೆ ಇತ್ತು. ತ್ರಿವೇಣಿ ಮಾರ್ಗದ ಸರಳ ಮೋಹಕತೆ, ವಾಣಿ ಯವರು ಚಿತ್ರಿಸಿದ ಸದಭಿರುಚಿಯ ಮಧ್ಯಮ ವರ್ಗದ ಜೀವನ ಇವೆಲ್ಲವುಗಳಿಗಿಂತ ಭಿನ್ನವಾಗಿ ಅನುಪಮಾ ಬರೆದರು. ಅವರ ಕೃತಿಗಳಲ್ಲಿ ಆರಂಭದ ಕೃತಿಗಳಿಂದ ಹಿಡಿದು ಇತ್ತೀಚಿನ ಕೃತಿಗಳವರೆಗೂ ಶೋಷಣೆಯನ್ನು ಗುರುತಿಸುವ ವಿರೋಧಿಸುವ, ಮನೋ ಧರ್ಮ ಸ್ಥಾಯಿಯಾಗಿರುವಂಥದು. ವರ್ಗ ಶೋಷಣೆ, ಜಾತಿ ಶೋಷಣೆ, ಸ್ತ್ರೀ ಶೋಷಣೆ-ಈ ಎಲ್ಲ ಅಂಶಗಳನ್ನು ಅವರ ಕೃತಿಗಳು ಗುರುತಿಸುತ್ತವೆ. ದೈನಂದಿನ ಜೀವನದ ಸಣ್ಣ ಸಣ್ಣ ಅಂಶಗಳ ನೆಲೆಯಲ್ಲಿ ಈ ಗುರುತಿಸುವ ಕ್ರಿಯೆ ನಡೆಯುವು ದೊಂದು ವಿಶೇಷ.

ಅನುಪಮಾರವರ ಮೊದಲ ಎರಡು ಕಾದಂಬರಿಗಳು **ಅನಂತಗೀತ** ಮತ್ತು **ಸಂಕೋಲೆಯೊಳಗಿಂದ** ಪ್ರಕಟವಾದದ್ದು 1954ರಲ್ಲಿ. 'ಸಂಕೋಲೆಯೊಳಗಿಂದ' ಆ ಕಾಲಕ್ಕೆ ತುಂಬಾ ಮಹತ್ವಾಕಾಂಕ್ಷೆಯಾದ ಆಶಯಗಳುಳ್ಳ ಕೃತಿ. ಮೂರು ಪಾತ್ರ ಗಳ ಮೂಲಕ ಇಲ್ಲಿ ಅನುಪಮಾ ಜೀವನವನ್ನು ನೋಡಲೆತ್ನಿಸಿದ್ದಾರೆ. ವಿಜಯಾಳ ಮುಗ್ಧ ಸೌಂದರ್ಯ ಶಾಲೀನತೆಗಳು ಅವಳನ್ನು ವಿಷಮ ದಾಂಪತ್ಯದ ಸುಳಿಯಲ್ಲಿ ಸಿಕ್ಕಿಸುತ್ತವೆ. ನಂದಾಳ ನಿರ್ಭಯತೆ, ವಿದ್ಯಾಭ್ಯಾಸದ ಮೂಲಕ ಬರುತ್ತದೆ. ನೀಲಾಳ ಸ್ವಾವಲಂಬನೆ ವೃತ್ತಿಯ ಮೂಲಕ ಬರುತ್ತದೆ. ಇಲ್ಲಿ ನಂದಾ–ನೀಲಾ, ವಿಜಯಾಳ ಬದುಕು ಒಡ್ಡುವ ಪ್ರಶ್ನೆಗಳಿಗೆ ಉತ್ತರವಾಗಿ ನಿಲ್ಲುತ್ತಾರೆ ಶ್ರೀಮಂತನ ಕಾರಿನಡಿಯಲ್ಲಿ ಸಿಕ್ಕು ಸಾಯುವ ಬಡವ, ಡಾಕ್ಟರ ಅಲಕ್ಷ್ಯದಿಂದ ಸಾಯುವ ಬಡ ಗರ್ಭಿಣಿ ಇಂಥ ಸಣ್ಣ ಸಣ್ಣ ಪಾತ್ರಗಳು–ಘಟನೆಗಳು ಒಂದು ಸಣ್ಣಗೆರೆಯಿಂದ ಚಿತ್ರ ಪರಿಪೂರ್ಣ ವಾಗುವ ಹಾಗೆ ಕಥಾನಕದ ಸ್ವಯಂಪೂರ್ಣತೆಗಾಗಿ ದುಡಿಯುತ್ತವೆ.

ಅನುಪಮಾರವರ ಕಾದಂಬರಿಗಳಲ್ಲಿ ಸಮಕಾಲೀನ ಚಿಂತನಗಳಿಗೆ ಸ್ಪಂದಿಸುತ್ತಾ ಬೆಳೆಯುವ ಗುಣವಿದೆ. ತಮ್ಮ ಆರಂಭದ ಕಾದಂಬರಿಗಳಲ್ಲಿ ಅನುಪಮಾರವರು ಚಿತ್ರಿಸುವ ಪ್ರಪಂಚ ಶುದ್ಧ ಕೌಟುಂಬಿಕ ಪ್ರಪಂಚ. ಪಾತ್ರಗಳು ತೆಗೆದುಕೊಳ್ಳುವ ನಿರ್ಧಾರಗಳು ಕೇವಲ ತಾತ್ವಿಕ ಬದ್ಧತೆಯ ನೆಲೆಯಲ್ಲಿ ತೆಗೆದುಕೊಳ್ಳುವಂಥವಲ್ಲ. **ಸ್ನೇಹ ಪಲ್ಲವಿ**ಯ ಸರಳೆಯ ಅಂತರ್ಜಾತಿ ವಿವಾಹದ ಸಫಲತೆ, **ಚಿತ್ತಮೋಹನ**ದ ಜಾನಕಿಯ ವಿಧವಾ ವಿವಾಹದ ವಿಫಲ ಬಯಕೆ ಇವೆಲ್ಲ ಪಾತ್ರಗಳ ವೈಯಕ್ತಿಕ ಸುಖದ ನೆಮ್ಮದಿಯ ದೃಷ್ಟಿಯಿಂದ ಬಹುಸಹಜವಾಗಿ ಬರುವಂಥವು. ಇದೇ ರೀತಿ **ನೂಲು**

ನೆಯ್ದ ಚಿತ್ರ ಕಾದಂಬರಿಯಲ್ಲಿ ಶಾಮನ ಬದುಕು ಸೂಚಿಸುವ ವರ್ಗ ಹೋರಾಟದ ಸೂಚನೆ ಒಬ್ಬ ವ್ಯಕ್ತಿಯ ಜೀವನದ ಏರಿಳಿತಗಳನ್ನು ಚಿತ್ರಿಸುವ ಹಾದಿಯಲ್ಲಿ ಬರುವಂಥದು.

ತಾತ್ವಿಕ ಆಶಯಗಳನ್ನು ನಿಧಾನವಾಗಿ ಅರಗಿಸಿಕೊಳ್ಳುತ್ತಾ ಅನುಪಮಾರವರ ಕಥನ ಕಲೆ ಮಹತ್ವಾಕಾಂಕ್ಷಿಯಾಗುತ್ತ ಹೋಗುತ್ತದೆ. ಆ ದೃಷ್ಟಿಯಿಂದ ವರ್ಗ ಹೋರಾಟದ ಅಹಿಂಸಾತ್ಮಕ ಸಫಲತೆಯನ್ನು ಗಟ್ಟಿತನವನ್ನು ಹೇಳುವ **ಎಳೆ** ತಾತ್ವಿಕ ಹೋರಾಟ ಮತ್ತು ವೈಯಕ್ತಿಕ ಬದುಕಿನ ಸುಖ ಈ ಎರಡೂ ಎಳೆಗಳನ್ನು ಬೆಸೆದಿದೆ. ಇಲ್ಲಿನ ರಂಗದಾಸ ವಿವೇಕಿ ಆವೇಶದಿಂದ ಪ್ರತಿಘಟಿಸುವವನಲ್ಲ. ನೇಕಾರನಾಗುವುದನ್ನು ನಿರಾಕರಿಸಿ ವಿದ್ಯಾಭ್ಯಾಸ ನೌಕರಿಗಳ ಕಡೆ ಮುಂದುವರಿದರೂ ನೇಕಾರರ ಹಿತವನ್ನು ಗಮನದಲ್ಲಿರಿಸಿಕೊಂಡಿರುವವನು, ಅರಸಪ್ಪನ ಕೈ ಮುರಿದಾಗ ಬಡ ನೇಕಾರರಿಗೆ ಸಲ್ಲ ಬೇಕಾದ ಸವಲತ್ತುಗಳಿಗಾಗಿ ಒತ್ತಾಯಿಸುವವನು. ವೈಯಕ್ತಿಕ ಜೀವನದಲ್ಲಿ ತಾನು ಒಲಿದ ಗಿರಿಜಾಳ ತಂದೆ ತನ್ನನ್ನು ಬಡವನೆಂದು ತಿರಸ್ಕರಿಸಿ ಶಾಸಕನೊಬ್ಬನಿಗೆ ಅವಳನ್ನು ಮದುವೆ ಮಾಡಿಕೊಟ್ಟಾಗಲೂ ಬದುಕನ್ನು ಕಹಿಮಾಡಿಕೊಳ್ಳದೆ ಅವಳಿಗೆ ಒಳಿತನ್ನು ಹಾರೈಸಬಲ್ಲವನು. ಅವಳಿಗೆ ವೈಧವ್ಯ ಒದಗಿದಾಗ ಅವಳನ್ನು ಅವಳ ಮಗುವಿನೊಡನೇ ತನ್ನ ಬಾಳಿಗೆ ಸ್ವಾಗತಿಸಬಲ್ಲ ಹೃದಯವಂತ. ಹೀಗಿದ್ದೂ ಅವನು ಹೋರಾಟಕ್ಕೆ ಅನಿವಾರ್ಯವಲ್ಲ. ಅವನು ಹಲ್ಲೆಗೊಳಗಾಗಿ ಹಾಸಿಗೆ ಹಿಡಿದಾಗ ತಿಮ್ಮಪ್ಪನೆಂಬುವನ ನೇತೃತ್ವದಲ್ಲಿ ಹೋರಾಟ ಮುಂದುವರಿಯುತ್ತದೆ. ಅದೇ ಹಿಂಸಾತ್ಮಕ ವರ್ಗ ಹೋರಾಟವನ್ನು ಚಿತ್ರಿಸುವ **ಕೊಳಚೆ ಕೊಂಪೆಯ ದಾನಿಗಳು** ಈ ಮಟ್ಟದ ಕಲಾತ್ಮಕ ಯಶಸ್ಸನ್ನು ಪಡೆಯುವುದಿಲ್ಲ.

ಇದೇ ರೀತಿ ಅನುಪಮಾರವರ **ಆಳ, ಮುಕ್ತಿಚಿತ್ರ** ಸಹಾ ಬಂಡಾಯದ ಆಶಯಗಳನ್ನೊಳಗೊಂಡಿವೆ. ಇಲ್ಲಿ ವರ್ಗ ಅಸಮತೆಗಳ ಬದಲು ಲಿಂಗ ಅಸಮತೆ ಮುಖ್ಯವಾಗಿ ಚರ್ಚಿತವಾಗಿದೆ. 'ಆಳ'ದಲ್ಲಿ ಮಾಲಿನಿಯ ಸಂಸಾರ ಒಂದೇ ಮುಖ್ಯ ವಾಗಿದ್ದರೆ 'ಮುಕ್ತಿ ಚಿತ್ರ'ದಲ್ಲಿ ಅನೇಕ ಬಿಡಿ ಬಿಡಿ ಚಿತ್ರಗಳಿವೆ. ಅತ್ತೆ ಮನೆಯವರ ದುರಾಸೆ, ತತ್ಫಲವಾದ ಕ್ರೌರ್ಯಕ್ಕೆ ತುತ್ತಾದ ಶ್ಯಾಮಲೆಯ ಸ್ವಾವಲಂಬನೆಯ ನಿರ್ಧಾರ, ಜಾನಕಿ ಚಿದಾನಂದರ ವಿಷಮ ದಾಂಪತ್ಯ, ಅಲಕಾ ಜಯಪಾಲರ ಪರಸ್ಪರ ಪ್ರೀತಿ ಗೌರವಗಳ ಸಂಬಂಧ, ಸ್ತ್ರೀ ಮುಕ್ತಿ ಕೇಂದ್ರದ ಕೆಲಸಗಳು ಹೀಗೆ ಅನೇಕ ಚಿತ್ರಗಳಿರುವ 'ಮುಕ್ತಿ ಚಿತ್ರ'ದಲ್ಲಿ ಇವುಗಳನ್ನೆಲ್ಲಾ ಸಂಯೋಜಿಸಿ ಒಂದು ಕಲಾತ್ಮಕ ಸ್ವರೂಪಕ್ಕೆ ತರಲು ಸಾಧ್ಯವಾಗಿಲ್ಲ.

'ಆಳ', 'ಮುಕ್ತಿ ಚಿತ್ರ'ಗಳಿಗಿಂತಲೂ ಯಶಸ್ವಿಯಾಗಿ ಕಲಾತ್ಮಕವಾಗಿ ಬಂಡಾಯದ ಆಶಯಗಳನ್ನು ದುಡಿಸಿಕೊಂಡಿರುವ ಅನುಪಮಾ ಅವರ ಇತ್ತೀಚಿನ ಕೃತಿ **ಶೋಧ** ಕಾದಂಬರಿ ರೂಪದಲ್ಲಿ ಪ್ರಕಟವಾಗಿಲ್ಲ. ಸಂಶೋಧಕಿಯೊಬ್ಬಳು ತನ್ನ ಮಹಾ ಪ್ರಬಂಧಕ್ಕಾಗಿ ಮಾಡುವ ಶೋಧ ಅವಳನ್ನು ತನ್ನ ಜನನದ ರಹಸ್ಯ ಶೋಧದ ಹತ್ತಿರಕ್ಕೆ ತರುತ್ತದೆ. ತನ್ನ ಬೇರುಗಳನ್ನು ಹುಡುಕುತ್ತಾ ಹೋಗುವ ಸಂಶೋಧಕಿ ತನ್ನ ನಿಜವಾದ ತಂದೆ ತಾಯಿಗಳು ತಮ್ಮದೇ ಆದ ಬೇರೆ ಬೇರೆ ಸಂಸಾರಗಳಲ್ಲಿ ಸೀಮಿತ ಪ್ರಪಂಚಗಳಲ್ಲಿ ಮುಳುಗಿರುವುದನ್ನು, ಅವರ ಜೀವನ ವಿಧಾನಗಳು ತಾನು ಗೌರವಿಸುವಂಥದ್ದಾಗಿಲ್ಲದಿರುವುದನ್ನು ಗುರ್ತಿಸಿಕೊಂಡು ತನ್ನ ಸಾಕು-ತಾಯಿತಂದೆಯರ ಮಾನವೀಯವಾದ ಪ್ರೀತಿ ವಿಶ್ವಾಸಗಳನ್ನು ಗೌರವಿಸುವ ನಿಲುವನ್ನು ತೋರಿಸುತ್ತಾಳೆ. ಇಲ್ಲಿ ಚಿತ್ರಿತವಾಗಿರುವ ವೈಯಕ್ತಿಕ ಸಂಬಂಧಗಳು ಸಹಾ ಕೃತಕತೆ ಅಥವಾ ತಾತ್ವಿಕತೆಯ ಅನವಶ್ಯಕವಾದ ಭಾರವನ್ನು ಹೊತ್ತಿಲ್ಲ. ಅನುಪಮಾ ಅವರ ಕಾದಂಬರಿಗಳ ಪೈಕಿ, ತಾತ್ವಿಕ ಆಶಯ, ಮಾನವೀಯ ಮೌಲ್ಯಗಳು ಇವುಗಳ ಸಮತೋಲವನ್ನು ಸಾಧಿಸಿರುವ ಮಹತ್ವದ ಕಾದಂಬರಿ ಇದು.

ಅನುಪಮಾರವರ ಉಳಿದೆಲ್ಲ ಕಾದಂಬರಿಗಳಿಗಿಂತಲೂ ಸಮಕಾಲೀನ ಚಿಂತನದ ಸಂವಹನದ ದೃಷ್ಟಿಯಿಂದ, ವಸ್ತು ಮತ್ತು ತಂತ್ರಗಳ ದೃಷ್ಟಿಯಿಂದ ವಿಶಿಷ್ಟವಾಗಿ ನಿಲ್ಲುವ ಪ್ರತ್ಯೇಕ ಪರಿಗಣನೆಯನ್ನು ಬಯಸುವ ಕಾದಂಬರಿಗಳು ಪೌರಾಣಿಕ ಹಿನ್ನೆಲೆಯ **ಮಾಧವಿ** ಹಾಗೂ ತಾತ್ವಿಕ ಆಶಯದ **ಘೋಷ.** ಮಹಾಭಾರತದ ಆದಿಪರ್ವದಲ್ಲಿ ಉಲ್ಲೇಖಗೊಂಡ ಯಯಾತಿ ರಾಜನ ಕಥೆಯಲ್ಲಿ 'ಮಾಧವಿ'ಯ ಮೂಲದ ಒಂದು ಎಳೆ ಸಿಗುತ್ತದೆ. ಕಲ್ಪನೆ, ವಿಚಾರ ಮತ್ತು ಸಂಶೋಧನೆಗಳ ಮೂಲಕ ಈ ಎಳೆಯನ್ನು ಆಧರಿಸಿ ಅನುಪಮಾ ಅಂದಿನ ಸಾಮಾಜಿಕ ಪರಿಸ್ಥಿತಿ ಮತ್ತು ತಂದೆಯಿಂದಲೇ ದಾನವಾಗಿ ಕೊಡಲ್ಪಟ್ಟು ಅನಂತರ ದಾನ ಪಡೆದವನ ಅಗತ್ಯಕ್ಕೆ ತಕ್ಕಂತೆ ಕೈಬದಲಾಯಿಸುತ್ತಾ ಹೋದ ಹೆಣ್ಣಿನ ಮನಃಸ್ಥಿತಿಯನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಈ ಮಹತ್ವದ ಪ್ರಯತ್ನ ಪುರಾಣದ ಮಾಧವಿಯ ಕಥೆಯ ಮೂಲಕ ಸಮಕಾಲೀನ ಪರಿಸ್ಥಿತಿಗೊಂದು ಕಲಾತ್ಮಕ ವ್ಯಾಖ್ಯಾನ ಕೊಡುವಂಥದಾಗಿದೆ.

'ಘೋಷ'ದಲ್ಲಿ ಅನುಪಮಾ ಪ್ರಜ್ಞಾಪೂರ್ವಕವಾದ ಸಾಂಕೇತಿಕತೆ ಮತ್ತು ಫ್ಯಾಂಟಸಿ–ವಾಸ್ತವಗಳನ್ನು ಬೆಸೆದ ತಂತ್ರದ ಮೂಲಕ ಮನುಷ್ಯನ ಹೋರಾಟವನ್ನು ಚಿತ್ರಿಸಲು ಪ್ರಯತ್ನಿಸಿದ್ದಾರೆ. ಕಾದಂಬರಿಯಲ್ಲಿ ಸಾಂಕೇತಿಕತೆ ಧಾರಾಳವಾಗಿದೆ. ಬೆಂಕಿ ಕಾರುವ ಅಗ್ನಿಪರ್ವತ, ಬೇರೆ ಬೇರೆಯ 'ದ್ವೀಪ'ಗಳಲ್ಲಿ ಜನರ ವಾಸ, ಭೂದೇವಿ, ಸ್ವತಂತ್ರಕುಮಾರಿ–ಎನ್ನುವಂಥ ಪಾತ್ರಗಳ ಹೆಸರುಗಳು ಒಂದು ಪ್ರಪಂಚವೇ ಆಗಿರುವ

ಸೆರೆಮನೆ, ಗಿಲ್ಡಾಳ ಕನಸು, ನಿರಾಶ್ರಿತ ಮಿನಾಳನ್ನು ಭೂದೇವಿ ತನ್ನೊಡನೆ ಕರೆದು ಕೊಂಡು ಹೋಗಬಯಸುವುದು, ಜಯತಿಲಕ ಕಾಡು ಮನುಷ್ಯರ ದ್ವೀಪದಿಂದ "ಹೊಸ ಶಕ್ತಿ" ಪಡೆದು ಬರುವುದು–ಇವೆಲ್ಲ ಪ್ರಜ್ಞಾಪೂರ್ವಕ ಸಂಕೇತಗಳಾಗಿವೆ. ಭೂದೇವಿ ಇಲ್ಲಿನ ಬದಲಾವಣೆಗಳಿಗೆಲ್ಲ ಸಾಕ್ಷಿಯೂ ಬದಲಾವಣೆಯಲ್ಲಿ ಪಾಲುದಾರಳೂ ಆಗಿದ್ದಾಳೆ. ಅವಳ ಕ್ರಾಂತಿ ಆಯುಧಗಳದ್ದಲ್ಲ, ಅಕ್ಷರಗಳದ್ದು. ದುಡಿಯುವ ಜನಗಳ ರಾಜ್ಯ ಕೊನೆಗೆ ಬರುತ್ತದೆನ್ನುವುದನ್ನು ಚಿತ್ರಿಸುವ ತಾತ್ವಿಕ ಆಶಯದ 'ಘೋಷ' ಅನುಪಮಾರವರ ಮಹತ್ವದ ಕೃತಿಗಳಲ್ಲೊಂದಾಗಿದೆ. ಆದರೆ ಭಾಷೆ, ಶೈಲಿ, ನಿರೂಪಣೆಗಳ ದೃಷ್ಟಿಯಿಂದ ಸ್ವಲ್ಪ ಪೇಲವವಾಗಿದೆ.

ಕಾದಂಬರಿ ಪ್ರಕಾರದಲ್ಲಿ ಅನುಪಮಾರವರ ಸಾಧನೆಗಿಂತ ಅವರ ಸಣ್ಣಕಥೆಗಳ ಸಾಧನೆ ಕಡಿಮೆಯಾದುದೇನಲ್ಲ. ಮೂರು ದಶಕಗಳಲ್ಲಿ ಒಂಭತ್ತು ಕಥಾಸಂಕಲನ ಗಳನ್ನು ಹೊರತಂದಿರುವ ಅನುಪಮಾರವರ ಕಥನಕಲೆ ಯಾವ ತಾತ್ವಿಕತೆಯನ್ನೂ ಚೀರಿ ಹೇಳದೆ ನಿಶ್ಶಬ್ದವಾಗಿ ಹೀರಿಕೊಂಡು ಪ್ರಗತಿಶೀಲ ನವ್ಯ ಹಾಗೂ ಬಂಡಾಯ ಚಳುವಳಿಗಳ ಮಗ್ಗುಲಲ್ಲೇ ಬೆಳೆದಿದೆ. ಸೂಕ್ಷ್ಮವಾಗಿ ಗಮನಿಸಿದಾಗ ಪ್ರಗತಿಶೀಲ ಚಳುವಳಿಯ ತಾತ್ವಿಕ ಧೋರಣೆಗೆ ನಿಷ್ಠರಾಗಿ ಅನುಪಮಾ ಬರೆದಿದ್ದಾರೆಂಬುದು ಅವರ ಕಾದಂಬರಿಗಳಿಗಿಂತಲೂ ಕಥೆಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಗೋಚರವಾಗುತ್ತದೆ. ಸಾಮಾಜಿಕ ಕಾಳಜಿ, ಶೋಷಣೆಯ ವಿರುದ್ಧ ಶೋಷಿತರ ಹೋರಾಟ, ಸ್ತ್ರೀ ಸಮು ದಾಯದ ವಿವಿಧ ಸಮಸ್ಯೆಗಳ ವಿವೇಚನೆ, ಬದುಕು–ಸಾವುಗಳ ಕುರಿತ ಚಿಂತನೆ–ಈ ಎಲ್ಲ ಅಂಶಗಳನ್ನೂ ಅವರು ಸಣ್ಣಕಥೆಗಾಗಿ ಬಳಸಿಕೊಂಡಿದ್ದಾರೆ. ಈ ತಾತ್ವಿಕ ಅಂಶಗಳ ಸಹಿತ ಸಾಮಾನ್ಯ ಮನುಷ್ಯರ ಸಣ್ಣ ಸಣ್ಣ ಆಶೆಗಳು, ಅವುಗಳಿಗೊದಗುವ ಅಡ್ಡಿ– ಆತಂಕಗಳು ತುಂಬಾ ವಾಸ್ತವಿಕ ನೆಲೆಯಲ್ಲಿ ನಿರೂಪಿತವಾಗಿವೆ. **ರೂವಾರಿಯ ಲಕ್ಷ್ಮಿ**ಯಂಥ ಆರಂಭ ಹಂತದ ಕಥೆಯಲ್ಲಿ ಸರಳವಾಗಿ, ನೇರವಾಗಿ, ಚಕ್ರವರ್ತಿಯ ವೈಭವ ಪ್ರತಿಷ್ಠೆಗಳಿಗಾಗಿ ಶಿಲ್ಪಿ ಮತ್ತು ಅವನ ಮಡದಿಯ ಬದುಕು ಹಾಳಾಗು ವುದನ್ನು ಚಿತ್ರಿಸಿದ್ದರೆ, ನವ್ಯ ಕಥನ ತಂತ್ರದ ಸಾಂಕೇತಿಕತೆ ಮತ್ತು ಭಾಷೆಯ ಬಳಕೆಗಳು **ಚಕ್ರಗಳು, ಕರಿಬಿಳಿ** ಕಥೆಗಳಲ್ಲಿ ಕಾಣುತ್ತವೆ. ಆದರೆ 'ರೂವಾರಿಯ ಲಕ್ಷ್ಮಿ'ಯಿಂದ ಹಿಡಿದು **ಒಂದು ಗಿಣಿಯ ಕಥೆ**ವರೆಗೆ ಎಲ್ಲ ಸಂಕಲನಗಳಲ್ಲಿ ಅನುಪಮಾರವರ ಸಾಮಾಜಿಕ ಕಾಳಜಿ, ಶೋಷಿತರ ಹೋರಾಟದ ಬಗೆಗಿನ ಗೌರವ ಸ್ಥಾಯಿಯಾಗಿದೆ.

ವೈಯಕ್ತಿಕ ಸಂಬಂಧಗಳು ಮತ್ತು ಅವುಗಳ ಮೌಲ್ಯವನ್ನು ವಾಸ್ತವಿಕ ಸತ್ಯಗಳ ದೈನಂದಿನ ಜೀವನದ ಒತ್ತಡಗಳು ಇವುಗಳ ಹಿನ್ನೆಲೆಯಲ್ಲಿ ಶೋಧಿಸುವ ಕಥೆಗಳು **ಕತ್ತಲು, ತಿರುಗು-ಮುರುಗು** ಹಾಗೂ **ಮೌನ.** ಕತ್ತಲು ಒಂದು ಸೀಮಿ

ಅರ್ಥದಲ್ಲಿ ಕಾಫ್ಕನ ರೂಪಾಂತರವನ್ನು ಹೋಲುತ್ತದೆ. ಆದರೆ ಅವರ ಅಂತ್ಯ ಮಾತ್ರ ಅನುಪಮಾ ಅವರ ಜೀವನ ಶ್ರದ್ಧೆಯ ಸಂಕೇತವೇ ಆಗಿದೆ. ಇದ್ದಕ್ಕಿದ್ದಂತೆ ದೃಷ್ಟಿ ಕಳೆದುಕೊಂಡು ಮಡದಿ ಮಕ್ಕಳ ಅಲಕ್ಷ್ಯಕ್ಕೆ ಗುರಿಯಾದ ಉಪಾಧ್ಯಾಯನೊಬ್ಬ ಕೆಲಸದವಳ ಪುಟ್ಟಮಗಳ ಕಾರಣದಿಂದಾಗಿ ಮತ್ತೆ ಬದುಕಿನಲ್ಲಿ ಆಸಕ್ತಿ ತಾಳುವುದನ್ನು ಈ ಕಥೆ ಚಿತ್ರಿಸುತ್ತದೆ.

'ಮೌನ' ಅನುಪಮಾರ ಅತ್ಯುತ್ತಮ ಕಥೆ ಎಂದು ನನ್ನ ಅನ್ನಿಸಿಕೆ. 'ಮೌನ' ಚಿತ್ರಿಸುವ ಜಗತ್ತು 'ಕತ್ತಲು' ಚಿತ್ರಿಸುವ ಜಗತ್ತಿನ ಮುಂದುವರಿಕೆಯೇ ಆಗಿದೆ. ಮೆದುಳಿನ ರಕ್ತಸ್ರಾವದಿಂದಾಗಿ ಪ್ರಜ್ಞೆ ತಪ್ಪಿದ ತಾಯಿ–ಮನೆಯವರಿಗೆ–ಗಂಡ–ಮಕ್ಕಳಿಗೆ ಅಸಹ್ಯವಾಗುವ ಸೇವೆ ಕೆಲಸದವಳಿಗೆ ಪ್ರೀತಿಯ ವಿಷಯವಾಗುವುದು; ತಾಯಿಯ ಜೀವ ಗಂಡಾಂತರದಲ್ಲಿರುವಾಗ ಅವಳ ಸಂಪತ್ತಿಗಾಗಿ ಆಸೆಪಡುವ ಮಕ್ಕಳು –ಇವೆಲ್ಲ ದೈನಂದಿನ ಜೀವನದಲ್ಲಿ ಕಾಣಬರುವ ಘಟನೆಗಳೇ ಆದರೂ ಅವನ್ನು ಅನುಪಮಾ ಒಂದು ದರ್ಶನವನ್ನು ಹೊಮ್ಮಿಸಲು ಬಳಸುವ ರೀತಿ ಅನುಪಮವಾದದ್ದೇ ಆಗಿದೆ. ಒಂದು ಆಕಸ್ಮಿಕ ಘಟನೆಯಿಂದ ಸ್ವೀಕೃತ ಮೌಲ್ಯಗಳು ತೀವ್ರ ಪರೀಕ್ಷೆಗೊಳಗಾಗುತ್ತವೆ. ವೈಯಕ್ತಿಕ ಸಂಬಂಧಗಳು ಅನಿರೀಕ್ಷಿತವಾದ ತಿರುವು ಪಡೆದುಕೊಳ್ಳುತ್ತವೆ, ಕೆಲವೊಮ್ಮೆ ಅರ್ಥ ಕಳೆದುಕೊಳ್ಳುತ್ತವೆ. ಇದರಿಂದಾಗಿ ಅಸಹನೀಯವಾಗಿ ಬಿಡಬಹುದಾದ ಮನುಷ್ಯನ ಒಂಟಿತನದ ದುಃಖಭರಿತ ಜೀವನದಲ್ಲೂ ಒಂದು ಆಶೆಯ ಎಳೆ ಮಾನವೀಯತೆಯ ರೂಪದಲ್ಲಿ ಅನುಕಂಪದ ರೂಪದಲ್ಲಿ ಮಿನುಗುತ್ತದೆ. ಇದು ಅನುಪಮಾ ಕಟ್ಟಿಕೊಡುವ ಅದಮ್ಯ ಆಶಾವಾದದ ದರ್ಶನ.

ಅನುಪಮಾರವರ ಮಕ್ಕಳ ಸಾಹಿತ್ಯ **ದಿನಕ್ಕೊಂದು ಕಥೆ,** ಪ್ರವಾಸ ಸಾಹಿತ್ಯ **ಅಂಗೈಯಲ್ಲಿ ಯುರೋ–ಅಮೆರಿಕಾ,** ಆತ್ಮ ವೃತ್ತಾಂತ **ನೆನಪು ಸಿಹಿ-ಕಹಿ,** ಸುಮಾರು ಒಂಭತ್ತು ಹೊತ್ತಿಗೆಗಳಲ್ಲಿ ಹರಡಿರುವ ಅವರ ವೈದ್ಯಕೀಯ ಸಾಹಿತ್ಯ ಇವೆಲ್ಲ ಪ್ರತ್ಯೇಕ ವಿವೇಚನೆಗೆ ಅರ್ಹವಾದ ಕೃತಿಗಳು.

ಶಿಶು ಸಾಹಿತ್ಯದಲ್ಲಿ ಅನುಪಮಾ ಪ್ರಪಂಚದ ಕಿನ್ನರ, ಜಾನಪದ, ಐತಿಹಾಸಿಕ, ಪೌರಾಣಿಕ ಕಥೆಗಳ ಮೂಲಕ ಮಗುವಿನ ಮನಸ್ಸನ್ನು ಆರೋಗ್ಯಶಾಲಿಯಾಗಿ ಬೆಳಸುವ ಪ್ರಯತ್ನ ಮಾಡಿದ್ದಾರೆ.

'ನೆನಪು ಸಿಹಿ-ಕಹಿ' ಕನ್ನಡದಲ್ಲಿ ಲೇಖಕಿಯೊಬ್ಬರು ಬರೆದಿರುವ ಪ್ರಥಮ ಆತ್ಮಕಥೆ. ಇದರ ಭಾಷೆ ಕವಿತೆಯ ಮಾಧುರ್ಯದಿಂದ ಕೂಡಿ, ವೈಯಕ್ತಿಕ ಅನುಭವ

ಗಳಿಂದ ಆರ್ದ್ರವಾಗಿರುವಂಥದು. ಆತ್ಮಕಥೆಯಲ್ಲಿ ಅನಿವಾರ್ಯವಾದ ಸಣ್ಣ ಪುಟ್ಟ ಅಸಮಾಧಾನಗಳೂ ಅದರಲ್ಲಿ ಹಣಕಿವೆ.

ವೈದ್ಯಕೀಯ ಸಾಹಿತ್ಯದಲ್ಲಿ **ಕೇಳು ಕಿಶೋರಿ, ದಾಂಪತ್ಯ ದೀಪಿಕೆ, ತಾಯಿ–ಮಗು, ಶಿಶುವೈದ್ಯ ದೀಪಿಕೆ** ಶಾಸ್ತ್ರ ಸಾಹಿತ್ಯದ ಅಚ್ಚುಕಟ್ಟು ಮತ್ತು ಸಾಹಿತ್ಯದ ಆಕರ್ಷಕತೆಯನ್ನು ಹೊಂದಿವೆ.

ಅನುಪಮಾ ತಮ್ಮ ವೈದ್ಯವೃತ್ತಿಯಿಂದ ಪಡೆದ ವಿಶಾಲ ಜೀವನಾನುಭವವನ್ನು ಸಾಹಿತಿಯ ಅನುಕಂಪದಿಂದ "ಕೆರೆಯ ನೀರನು ಕೆರೆಗೆ ಚೆಲ್ಲಿ" ಎಂಬಂತೆ ಮತ್ತೆ ಸಮಾಜದ ರೋಗನಿದಾನಕ್ಕಾಗಿ ಸಾಹಿತ್ಯದ ಸಂಜೀವಿನಿಯಾಗಿಸಿ ಮರಳಿ ಕೊಟ್ಟವರು. ಅವರ ಸಾಹಿತ್ಯ ಹೃದಯವಂತಿಕೆಯ ಸಾಮಾಜಿಕ ಚಿಕಿತ್ಸೆ. ●

ನನ್ನ ಸೃಜನಾತ್ಮಕ ಕ್ರಿಯೆಯ ಮೂಲಸೆಲೆ ಎಲ್ಲಿಂದ ಆರಂಭವಾಯಿತು ? ಎಂಬುದನ್ನು ನಾನು ಮೊದಲು ಹೇಳಬೇಕು. ನಾನು ಹುಟ್ಟಿದ್ದು ಬಡ ನೇಕಾರರ ಕುಟುಂಬದಲ್ಲಿ. ನನ್ನ ತಾಯಿಯ ಕಡೆ ಕುಲಕಸಬನ್ನು ನಡೆಸಿಕೊಂಡು ಬರುತ್ತಿದ್ದರು. ತಂದೆಯ ಕಡೆಯವರೆಲ್ಲಾ ಶೈಕ್ಷಣಿಕ ಕ್ಷೇತ್ರಕ್ಕಿಳಿದರು. ಹೀಗಾಗಿ ಎರಡೂ ಕ್ಷೇತ್ರಗಳ ಪರಿಣಾಮ ನನ್ನ ಮೇಲಾಯಿತು. ಬಾಲ್ಯದಿಂದ ಸುತ್ತಲಿನದೆಲ್ಲವನ್ನೂ ಕುತೂಹಲದಿಂದ ವೀಕ್ಷಿಸುವುದು ನನ್ನ ಜಾಯಮಾನ. ಹಾಗೆಯೇ ಜನರ ಮಾತಿಗೂ ಕಿವಿ ಕೊಡುತ್ತಿದ್ದೆ. ನನ್ನ ಅಜ್ಜ ಅಜ್ಜಿಯರು ಹೇಳಿದ ಕತೆಗಳು, ನೆಂಟರಿಷ್ಟರ ಮಾತುಗಳಲ್ಲಿ ನುಸುಳಿದ ಘಟನೆಗಳು ನನ್ನ ಮೇಲೆ ಪರಿಣಾಮ ಬೀರಿದ್ದವು. ಗಳಗನಾಥ, ವೆಂಕಟಾಚಾರ್ಯ, ಬಿ. ಫ, ಕಾಳೆಯವರ ಪತ್ತೇದಾರಿ ಕಾದಂಬರಿಗಳನ್ನು ಓದಿದ್ದೆ. ಕಾರಂತ, ಪುಟ್ಟಪ್ಪನವರ ಕೃತಿಗಳನ್ನು ಓದಿ ಮೋಡಿಗೊಳಗಾಗಿದ್ದೆ. ಪ್ರಕಟವಾಗದಿದ್ದರೂ ಹದಿವಯಸ್ಸಿನಲ್ಲೇ ಕತೆಗಳನ್ನು ಗೀಚಲಾರಂಭಿಸಿದ್ದೆ. ಅದನ್ನು ಬಲ್ಲ ನೆಂಟರಿಷ್ಟರು, "ಪಾಪ ಬಡವರು, ಆದ್ರೆ ಹುಡುಗಿ ಬುದ್ಧಿವಂತೆ, ಕತೆಗಿತೆ ಬರಿತಾಳೆ", ಅನ್ನುತ್ತಿದ್ದರು. ಆಗ ನನಗೆ ಅನ್ನಿಸುತ್ತಿತ್ತು. ಈ ಬಡತನದ ಅಪಮಾನ ಮತ್ತು ಹೀನಾಯವನ್ನು ನಾಶಮಾಡಲಿಕ್ಕೆ ಮತ್ತು ಇವರಿಂದ ಹೊಗಳಿಕೆ ಗಿಟ್ಟಿಸಿಕೊಳ್ಳಬೇಕಾದರೆ ನಾನು ಚೆನ್ನಾಗಿ ಕತೆ ಬರೀಬೇಕು ಅಂತ. ಈ ಆಸೆಗಿಂತ ಒಳಗಿನ ಒತ್ತಡವೇ ಹೆಚ್ಚಾಗಿತ್ತು. ಕಂಡ ಘಟನೆಗಳು ಕತೆಗಳಾಗಿ ನನ್ನ ಮನಸ್ಸಿನಲ್ಲಿ ರೂಪುಗೊಳ್ಳುತ್ತಿದ್ದವು. ಅದನ್ನು ಬರೆಯದಿದ್ದರೆ ಬದುಕಲು ಸಾಧ್ಯವೇ ಇಲ್ಲ ಅನಿಸುತ್ತಿತ್ತು.

—ಅನುಪಮಾ ನಿರಂಜನ

ಸಂವಾದ-೧ರಲ್ಲಿ

ವಿಕ್ಷಿಪ್ತ ಪ್ರಭೇದ : ಹೋಮೋ ಸೇಪಿಯನ್ಸ್

ಮೂಲ : ಆರ್ಥರ್ ಕೊಸ್ಲರ್

ಸಂಗ್ರಹಾನುವಾದ : ರಾಘವೇಂದ್ರ ಪಾಟೀಲ

೧. ಸಾರ್ಥಕಗೊಳ್ಳದ ಕಾಣಿಕೆ

ಜೂಲಿಯಸ್ ಹಕ್ಸ್‌ಲೀ ತನ್ನ ಒಂದು ಪ್ರಬಂಧದಲ್ಲಿ ಮನುಷ್ಯ ಪ್ರಭೇದದ ವೈಶಿಷ್ಟ್ಯಗಳನ್ನು ಪಟ್ಟಿ ಮಾಡುತ್ತಾನೆ. ಭಾಷೆ, ವೈಚಾರಿಕ ಚಿಂತನೆ, ಬರಹದ ಮೂಲಕ ಜ್ಞಾನದ ದಾಖಲೆ ಮತ್ತು ಮುಂದುವರೆಯುವಿಕೆ, ಯಂತ್ರ ಮತ್ತು ಉಪಕರಣಗಳ ತಯಾರಿಕೆ ಮತ್ತು ಬಳಕೆ, ಉಳಿದೆಲ್ಲ ಪ್ರಾಣಿಪ್ರಪಂಚದ ಮೇಲೆ ಹೊಂದಿದ ಪ್ರಾಬಲ್ಯ, ವೈಯುಕ್ತಿಕ ಬದಲಾವಣೆಗಳು, ಹಿಡಿದಾಡಲು ಮುಂಗಾಲುಗಳ ಉಪಯೋಗ, ವರ್ಷಪೂರ್ತಿ ಇರುವ ರತಿಶಕ್ತಿ, ಕಲೆಯ ಸೃಷ್ಟಿ, ಹಾಸ್ಯ, ವಿಜ್ಞಾನ, ಧರ್ಮ–ಇತ್ಯಾದಿ, ಇತ್ಯಾದಿ. ಆದರೆ ವಿಕಾಸವಾದಿಯ ದೃಷ್ಟಿಕೋನದಲ್ಲಿ ಅತ್ಯಂತ ಮಹತ್ವದ್ದಾದ, ಗಮನಾರ್ಹವಾದ ಲಕ್ಷಣವೊಂದು ಈ ಪಟ್ಟಿಯಲ್ಲಿ ಸೇರದೇ ಉಳಿದು ಬಿಟ್ಟಿದೆ. ಈ ಪ್ರಬಂಧದಲ್ಲಷ್ಟೇ ಅಲ್ಲ, ಯಾವ ಜೀವಶಾಸ್ತ್ರಜ್ಞನೂ ಈ ಬಗ್ಗೆ ಗಂಭೀರವಾದ ಚರ್ಚೆ ಮಾಡಿರುವುದು ತಿಳಿಯದು.

ಇಂಥ ಲಕ್ಷಣ ಅದಾವುದು ಎಂದರೆ–ಅಸಂಗತವಾದ, ಬಯಸದೇ ಬಂದ ಕಾಣಿಕೆ! ಇದನ್ನು ಒಂದು ದೃಷ್ಟಾಂತದ ಮೂಲಕ ಸ್ಪಷ್ಟಪಡಿಸಬಹುದು. ಅರಬ್ಬೀ ಮಾರು ಕಟ್ಟೆಯಲ್ಲಿ ಅಲೀ ಎನ್ನುವವನೊಬ್ಬ ವ್ಯಾಪಾರಸ್ಥ. ಅಶಿಕ್ಷಿತನಾದ ಇವನಿಗೆ ಲೆಕ್ಕ ವೆಂದರೆ ಶೂನ್ಯ. ಬರೀ ಅಂಕಿಗಳಷ್ಟು ಮಾತ್ರ ತಿಳಿಯುತ್ತವೆ. ಈ ಲೆಕ್ಕ ಬರದ ದಡ್ಡ ತಲೆಯ ಅಲಿಗೆ ಅವನ ಗಿರಾಕಿಗಳು ಟೋಪಿ ಹಾಕಿದ್ದೇ ಹಾಕಿದ್ದು ! ನಿಜವಾಗಿ ನೋಡಿದರೆ ವ್ಯಾಪಾರಸ್ಥರೇ ಗಿರಾಕಿಗಳಿಗೆ ಟೋಪಿ ಹಾಕುವುದು. ಇಲ್ಲಿ ಅದು ತಿರುಗು ಮುರುಗಾಗಿತ್ತು. ಅಲಿ ತನ್ನ ದಡ್ಡತನಕ್ಕಾಗಿ ತುಂಬ ನೊಂದುಕೊಂಡು–ದೇವರೇ

ನನಗೆ ಲೆಕ್ಕಮಾಡಲು ಸಾಧ್ಯವಾಗುವಂತೆ ಒಂದು ಮಣಿಕಟ್ಟು (ಕೂಡುವ, ಕಳೆಯುವ ಲೆಕ್ಕಕ್ಕೆ ಅನುಕೂಲವಾಗುವಂತಹ, ತಂತಿಯಲ್ಲಿ ಮಣಿಗಳನ್ನು ಪೋಣಿಸಿದ ಒಂದು ಉಪಕರಣ) ದಯಪಾಲಿಸು–ಎಂದು ಅಲ್ಲಾಹ್‌ನಿಗೆ ನಿತ್ಯ ಪ್ರಾರ್ಥನೆ ಸಲ್ಲಿಸತೊಡಗಿದ. ಅಲಿಯ ಈ ಪ್ರಾರ್ಥನೆ ಸ್ವರ್ಗಲೋಕದ ಅಂಚೆ ಕಚೇರಿಯ ತಪ್ಪಿನಿಂದಾಗಿ ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಹೋಗದೇ ಮತ್ತೆಲ್ಲಿಗೋ ಹೋಗಿ ಒಂದು ಬೆಳಿಗ್ಗೆ ಅವನು ತನ್ನ ಅಂಗಡಿಗೆ ಬಂದು ನೋಡಿದರೆ ಅದೇನದು ! ಅದು ಒಂದು ಬಹು ಅಂತಸ್ಥಿನ ಕಟ್ಟಡವಾಗಿ ಕುಳಿತಿದ್ದು ಅದರಲ್ಲಿ ಒಂದು ಅತ್ಯಾಧುನಿಕವಾದ ಐ.ಬಿ.ಎಂ. ಗಣಕಯಂತ್ರ ನಿಂತುಕೊಂಡಿದೆ.... ಗೋಡೆಯ ತುಂಬ ಅದರ ಪೇನೆಲ್ಲುಗಳು, ಸಾವಿರಾರು ಕಣ್ಣು ಕುಕ್ಕುವಂಥ ಬೆಳಕಿನ ಮುಳ್ಳುಗಳು–ಬಿಲ್ಲೆಗಳು....ಮಾಯದ ಕಣ್ಣುಗಳು, ಅದರ ಮುಂದೆ ಅದನ್ನು ಬಳಸಲು ಉಪಯುಕ್ತ ಸೂಚನೆಗಳಿರುವ ನೂರಾರು ಪುಟಗಳ ಪುಸ್ತಕ. ಆದರೆ ಅಲಿಗೆ ಓದು ಬಂದರಲ್ಲವೆ ಆ ಸೂಚನೆಗಳ ಪುಸ್ತಕ ಓದುವುದು ? ಏನೋ ಕೇಳಿದರೆ ಏನೋ ಬಂದಿದೆ ಎನ್ನುವ ಬೇಸರದಲ್ಲಿ ಅಲಿ ಖಾಲಿ ಇದ್ದಾಗಲೆಲ್ಲ ಸುಮ್ಮ ಸುಮ್ಮನೇ ಆ ಈ ಬಿಲ್ಲೆಗಳನ್ನು ತಿರುಗಿಸುವುದು–ಅದು ಇದು ಮಾಡುತ್ತ ಇದ್ದ. ಅವನಿಗೆ ಒಮ್ಮೆ ಅದರ ಮೇಲೆ ಬಹಳ ಸಿಟ್ಟು ಬಂದು ಅದರ ಯಾವುದೋ ಒಂದು ಸೂಕ್ಷ್ಮ ಭಾಗಕ್ಕೆ ಒದೆಯತೊಡಗಿದ. ಅಲಿಯ ಈ ಒದೆತಗಳು ಗಣಕ ಯಂತ್ರದ ಯಾವುದೋ ಒಂದು ಜೋಡಣೆಗೆ ಚಾಲನೆ ಕೊಟ್ಟು ಅಲಿಗೆ ಲೆಕ್ಕ ಒಂದನ್ನು ಮಾಡಿ ತೋರಿಸಿಬಿಟ್ಟಿತು. ಅಲಿ ಒಮ್ಮೆ ಮೂರು ಸಲ ಒದೆ ಕೊಟ್ಟಿದ್ದ ಮತ್ತು ಇನ್ನೊಮ್ಮೆ ಐದು ಸಲ ಒದೆಕೊಟ್ಟಿದ್ದ. ಆಗ ಆ ಬಿಲ್ಲೆ ಎಂಟರ ಸಂಖ್ಯೆಯನ್ನು ತೋರಿಸಿಬಿಟ್ಟಿತು ! ಅಲಿಗೆ ಸಂತೋಷವೋ ಸಂತೋಷ. ಅವನು ತನಗೆ ಇಂಥ ಅದ್ಭುತವಾದ ಮಣಿಕಟ್ಟನ್ನು ಕಳಿಸಿಕೊಟ್ಟಿದ್ದಕ್ಕಾಗಿ ಅಲ್ಲಾಹನಿಗೆ ಭಕ್ತಿಪೂರ್ವಕವಾದ ವಂದನೆಗಳನ್ನು ಸಲ್ಲಿಸಿದ. ಅಲಿ ತನ್ನ ಐದು–ಮೂರು, ನಾಲ್ಕು–ಏಳು ಅಂಕಗಳನ್ನು ಕೂಡಿಸುವಂಥ ಲೆಕ್ಕಕ್ಕೆ ಈ ಯಂತ್ರವನ್ನು ಬಳಸುತ್ತ ಸಂತೋಷವಾಗಿದ್ದನು. ಪಾಪ ! ಈ ಯಂತ್ರ ಐನ್‌ಸ್ಟೀನನ $E = mc^2$ ಸೂತ್ರವನ್ನು ನಿರೂಪಿಸುವಂಥ, ಆಕಾಶದಲ್ಲಿನ ಸಹಸ್ರಾರು ನಕ್ಷತ್ರ, ಗ್ರಹಗಳ ಚಲನೆಯನ್ನು ಅವುಗಳ ಪಥಗಳನ್ನು ಅತ್ಯಂತ ಕರಾರು ವಾಕ್ಕಾಗಿ ತಿಳಿಸುವಂಥ ಶಕ್ತಿ ಹೊಂದಿದೆ ಎನ್ನುವುದು ಅವನಿಗೆ ತಿಳಿದಿರಲೇ ಇಲ್ಲ.

ಅಲಿಯ ಮಕ್ಕಳು, ಮೊಮ್ಮಕ್ಕಳು ಪಿತ್ರಾರ್ಜಿತವಾಗಿ ಪಡೆದ ಈ ಯಂತ್ರವನ್ನು ಇದೇ ರೀತಿಯಾಗಿಯೇ ಉಪಯೋಗಿಸುತ್ತಾ ಬಂದರು. ಈ ಯಂತ್ರದ ಸಹಾಯದಿಂದ ಸರಳ ಗುಣಾಕಾರದ ಲೆಕ್ಕಗಳನ್ನು ಕೂಡ ಮಾಡಬಹುದೆಂದು ನೂರಾರು ಪೀಳಿಗೆಗಳ ನಂತರ ಅವರಿಗೆ ಗೊತ್ತಾಯಿತು, ಅರಬ್ಬೀ ಮಾರುಕಟ್ಟೆಯಲ್ಲಿ ಅಲಿಯ ಈ ಸಂತತಿ ಯವರನ್ನು ಹುಡುಕಲು ಹೊರಟಿದ್ದರೆ.... ಸ್ವಲ್ಪ ನಿಲ್ಲಿ ...ಈ ಅಲಿಯ ಸಂತತಿಯವರು

ಬೇರಾರೂ ಅಲ್ಲ. ನಾವೇ ! ಮನುಷ್ಯ ಪ್ರಭೇದದವರು !.... ಈ ಯಂತ್ರ ವೈವಿಧ್ಯ ಮಯವಾದ ಕೆಲಸಗಳನ್ನು ನಿರ್ವಹಿಸಬಲ್ಲದೆಂದು ಗೊತ್ತಿದ್ದರೂ ಅದರ ಯಾವುದೋ ಒಂದು ಸರಳ ಪ್ರಕ್ರಿಯೆಯನ್ನು ಮಾತ್ರ ಬಳಸುತ್ತಿದ್ದೇವೆ. ಅದರ ಲಕ್ಷಾಂತರ ಜೋಡಣೆಗಳಲ್ಲಿ ಯಾವುದೋ ಒಂದೆರಡನ್ನು ಮಾತ್ರ ಉಪಯೋಗಿಸುತ್ತಿದ್ದೇವೆ ... ಇಂಥ ಅಸಂಗತವಾದ ಸಾರ್ಥಕ್ಯ ಕಾಣದ ಕಾಣಿಕೆ ಮತ್ತಾವುದೂ ಅಲ್ಲ....ನಮ್ಮ ತಲೆ ಬುರುಡೆಯಲ್ಲಿ ಹುದುಗಿ ಕುಳಿತ ನಮ್ಮ ಮೆದುಳೇ ಆಗಿದೆ .. ಹಾಂ.... ಆ ಸೂಚನೆಯ ಪುಸ್ತಕ ? ಅದು ಕಳೆದು ಹೋಗಿದೆ. ಇಷ್ಟರ ಮೇಲೆ ಅದು ಇದ್ದಿತೋ ಇಲ್ಲವೋ ! ಪ್ಲಾಟೋ ಅದು ಇದ್ದಿತೆನ್ನುತ್ತಾನೆ. ಆದರೆ ಅದು ದೈವದ್ರೋಹೀ ಚಿಂತನೆ !

ಈ ಹೋಲಿಕೆ ನಮಗೆಲ್ಲರಿಗೂ ತೋರುವಂತೆ ದೂರಗಮ್ಯವಾದುದೇನೂ ಅಲ್ಲ. ಜೀವಿಗಳ ವಿಕಾಸಕ್ಕೆ ಯಾವುದೇ ಪ್ರೇರಕ ಬಲವಿರಲಿ, ಅದು ಆ ಜೀವ ಪ್ರಭೇದಗಳ ತುರ್ತು ಅಗತ್ಯಗಳ ಬಗ್ಗೆ ಗಮನವೀಯುತ್ತದೆ ಮತ್ತು ಈ ಅಗತ್ಯಗಳು ಆ ಜೀವಿಗಳ ದೇಹರಚನೆ ಮತ್ತು ಕಾರ್ಯವಿಧಾನಗಳಲ್ಲಿನ ಬದಲಾವಣೆಯನ್ನು ನಿಯಂತ್ರಿಸುತ್ತವೆ. ಆದರೆ ಇದೀಗ ಜೀವವಿಕಾಸವೆನ್ನುವುದು ಜೀವಪ್ರಭೇದವೊಂದಕ್ಕೆ ತಾನು ಉಪಯೋಗಿ ಸಲಾರದಂತಹ ಅಂಗವೊಂದನ್ನು ಕೊಟ್ಟುಬಿಟ್ಟಿದೆ ! ಅಲಿಯ ಯಂತ್ರದಂತೆ ಇದೊಂದು ಐಷಾರಾಮೀ ಉಪಕರಣವಾಗಿಬಿಟ್ಟಿದೆ. ಮಾಲೀಕನ ಜುಜುಬೀ ತುರ್ತು ಅವಶ್ಯಕತೆ ಗಳನ್ನು ಮೀರಿ ವಿಪರೀತ ಸಾಧ್ಯತೆಗಳಿರುವಂತಹದು ಈ ಉಪಕರಣ. ಸರಿಯಾಗಿ ಉಪ ಯೋಗಿಸಿದರೆ ಜೀವಪ್ರಭೇದಗಳ ಆಂತರಿಕ ಪರಿಸರದ ಬಗ್ಗೆ ಪೂರ್ಣ ತಿಳುವಳಿಕೆ ಕೊಡ ಬಲ್ಲ, ಅದನ್ನು ಸರಿಪಡಿಸಬಲ್ಲ ಸಾಧ್ಯತೆಗಳಿರುವಂತಹ ಅಂಗವಿದು.

ಹೋಮೋ ಸೇಪಿಯನ್ಸ್ ಎಂಬ ಪ್ರಭೇದದ ಮಾನವನ ಅತ್ಯಂತ ಹಿಂದಿನ ಕಾಲದ ಪ್ರತಿನಿಧಿ ಎಂದರೆ 'ಕ್ರೋ ಮ್ಯಾಗ್ನನ್' ಮನುಷ್ಯ. ಈ ಮನುಷ್ಯ ಸುಮಾರು 50 ಸಾವಿರದಿಂದ 100 ಸಾವಿರ ವರ್ಷಗಳಷ್ಟು ಕಾಲದ ಹಿಂದೆ ಬದುಕಿದ್ದವನು. ಈ ಮನುಷ್ಯನಲ್ಲಿ ಕೂಡ ಇಂದು ನಮ್ಮಲ್ಲಿರುವಂಥ ಮೆದುಳೇ ಇದ್ದಿತು. ಅದೇ ಗಾತ್ರ– ಅದೇ ಆಕಾರ. ಆದರೆ ಈ ನಮ್ಮ ಪೂರ್ವಜ ಅಂಥ ಮೆದುಳನ್ನು ಬಳಸಿದ್ದು ಮಾತ್ರ ಅತ್ಯಂತ ಕನಿಷ್ಠವಾಗಿ. ಇವನು ಗವಿಗಳಲ್ಲಿ ವಾಸವಾಗಿದ್ದುಕೊಂಡು ಬದುಕಿ, ಶಿಲಾ ಯುಗವನ್ನು ಮೀರಿ ಬೆಳೆಯಲಾರದೇ ಹೋದವನು. ಅವನ ತುರ್ತು ಅಗತ್ಯಗಳಿಗೆ ಹೋಲಿಸಿದರೆ ಅವನ ಮೆದುಳಿನ ಹೊಸ ತೊಗಟೆಯು (Neo Cortex) ಸ್ಫೋಟಕ ವೆನ್ನಿಸಬಹುದಾದ ಬೆಳವಣಿಗೆ ನಮ್ಮ ಗ್ರಹಿಕೆಗೆ ಮೀರಿದುದಾಗಿತ್ತು. ನಮ್ಮನ್ನು ಚಂದ್ರನ ಮೇಲೆ ಒಯ್ದು ನಿಲ್ಲಿಸುವ ಸಾಧ್ಯತೆಗಳಿರುವಂತಹ ಮೆದುಳನ್ನು ತಲೆಬುರುಡೆ ಯಲ್ಲಿರಿಸಿಕೊಂಡಿದ್ದ ಈ ನಮ್ಮ ಪೂರ್ವಜರು ಹತ್ತಾರು ಸಾವಿರ ವರ್ಷಗಳಷ್ಟು ಕಾಲ

ಬಿಲ್ಲು, ಬಾಣ ಮತ್ತು ಭರ್ಜಿಗಳನ್ನು ತಯಾರಿಸುವಷ್ಟರಮಟ್ಟಿಗೆ ಮಾತ್ರ ಅದನ್ನು ಬಳಸಿಕೊಳ್ಳುತ್ತಿದ್ದರು.

ಮಾನಸಿಕ ವಿಕಾಸ ಮನುಷ್ಯ ಪ್ರಭೇದದ ವೈಶಿಷ್ಟ್ಯ ಮತ್ತು ಇಂಥ ಮಾನಸಿಕ ವಿಕಾಸವನ್ನು ಇತರ ಪ್ರಾಣಿಗಳಲ್ಲಿ ಕಾಣುವುದಿಲ್ಲ ಎನ್ನುವಾಗ ನಾವು ನಮ್ಮ ತಿಳುವಳಿಕೆಯಲ್ಲಿ ಗೊಂದಲ ಹೊಂದಿದವರಾಗಿರುತ್ತೇವೆ. ಏಕೆಂದರೆ ಪ್ರಾಣಿಗಳು ತಮ್ಮ ಎಲ್ಲ ಅಂಗಗಳನ್ನೂ–ಮೆದುಳನ್ನೂ ಸೇರಿಸಿ–ಸಂಪೂರ್ಣವಾಗಿ ಬಳಸಿಕೊಳ್ಳುತ್ತವೆ. ಉರಗಗಳಾಗಲೀ, ಕೆಳಹಂತದ ಸಸ್ತನಿಗಳಾಗಲೀ ತಮ್ಮ ತಲೆಬುರುಡೆಯಲ್ಲಿ ಹುದುಗಿರುವ ಗಣಕಯಂತ್ರದ ಸಾಧ್ಯತೆಗಳನ್ನು ಬಹುತೇಕ ಸಂಪೂರ್ಣವಾಗಿ ಬಳಸಿಕೊಳ್ಳುತ್ತವೆ. ಇದರಿಂದ ಈ ಪ್ರಾಣಿಗಳಲ್ಲಿ ಕಲಿಯುವ ಶಕ್ತಿ, ಮಾನಸಿಕ ಶಕ್ತಿ ಬೆಳೆಯುವುದಿಲ್ಲ, ಮಿತಗೊಂಡುಬಿಟ್ಟಿರುತ್ತದೆ ಎಂದು ನಮಗೆ ತೋರುತ್ತದೆ. ಆದರೆ ಮನುಷ್ಯನಲ್ಲಿ ಮೆದುಳಿನ ವಿಕಾಸ ಎಷ್ಟೊಂದು ಭಯಂಕರವಾದ ವೇಗದಲ್ಲಿ, ಎಷ್ಟೊಂದು ಪ್ರಮಾಣದಲ್ಲಿ ನಡೆದಿದೆ ಎಂದರೆ ಅವನು ಉಸಿರು ಬಿಗಿ ಹಿಡಿದು ಅದರ ಬಳಕೆಗೊಳ್ಳದ–ಅದರಲ್ಲಿ ಹುದುಗಿರುವ ಸಾಧ್ಯತೆಗಳನ್ನು ಕಂಡುಕೊಳ್ಳಬೇಕಾಗಿವೆ. ಈ ಹಿನ್ನೆಲೆಯಲ್ಲಿಯೇ ವಿಜ್ಞಾನ ಮತ್ತು ತತ್ವಶಾಸ್ತ್ರಗಳ ಇತಿಹಾಸವು ಅತ್ಯಂತ ನಿಧಾನವಾದ ಪ್ರಕ್ರಿಯೆಯಾಗಿದೆ. ಇದು ಮೆದುಳಿನ ಸಾಧ್ಯತೆಗಳನ್ನು ವಾಸ್ತವವಾಗಿಸುವಂತಹ ನಿಧಾನವಾದ ಪ್ರಕ್ರಿಯೆಯಾಗಿದೆ. ಗೆಲ್ಲಬೇಕಾಗಿರುವ ಮೆದುಳಿನ ಈ ಎಲ್ಲ ಅನಾವರಣಗೊಳ್ಳಬೇಕಾದ ಸಾಧ್ಯತೆಗಳು ಅದರಲ್ಲಿ ಹೊಸದಾಗಿ ಬೆಳೆದ ತೊಗಟೆಯ ಮಡಿಕೆಗಳಲ್ಲಿ ಹುದುಗಿವೆ.

೨. ಗಾಢಾಂಧಕಾರದಲ್ಲಿನ ಹುಡುಕಾಟ

ಆದರೆ ಮೆದುಳಿನ ಸಾಧ್ಯತೆಗಳನ್ನು ಅರಿಯುವ ಕ್ರಿಯೆ ಅತ್ಯಂತ ನಿಧಾನವಾದುದು, ತೀವ್ರ ಏರಿಳಿತಗಳನ್ನು ಒಳಗೊಂಡದ್ದು ಮತ್ತು ಕೆಲವೊಮ್ಮೆ ಹಿಂಜರಿಕೆಯನ್ನು ಕೂಡ ಹೊಂದಿರುವಂಥದು ಯಾಕಾಗಿರುತ್ತದೆ ? ಇದು ನಮ್ಮ ಸಮಸ್ಯೆಯ ಕೇಂದ್ರ. ಈ ಪ್ರಶ್ನೆಗೆ ಕಂಡುಕೊಳ್ಳಲಾದ ಒಂದು ಉತ್ತರವೆಂದರೆ–ಹೊಸ ಮತ್ತು ಹಳೆಯ ಮೆದುಳುಗಳ ನಡುವೆ ಇರುವ ಅಸಮರ್ಪಕವಾದ ಸಹಕಾರ. ಹೊಸ ಮೆದುಳಿನೊಳಗೆ ಹುದುಗಿಕೊಂಡಿರುವ ಹಳೆಯ ಮೆದುಳು ಪದೇ ಪದೇ ಹೊಸ ಮೆದುಳಿನ ಕಾರ್ಯದಲ್ಲಿ ಅಡೆ ತಡೆ ಉಂಟುಮಾಡುತ್ತದೆ. ಆಳವಾಗಿ ಬೇರೂರಿದ ಭಾವಾವೇಶದ ನಂಬಿಕೆಗಳು ಹಳೆಯ ಮೆದುಳಿನಲ್ಲಿ ನೆಲೆಗೊಂಡಿರುವಂಥವು. ಇವು ಹೊಸ ಮೆದುಳಿನ ವೈಜ್ಞಾನಿಕ ಪರಿಭಾಷೆಯ ವಿಶ್ಲೇಷಣೆಯ ಧ್ವನಿಯನ್ನು ಕೇಳದಂತೆ ಮಾಡುತ್ತವೆ.

ಇದರ ಪರಿಣಾಮವನ್ನು ನಾವು ನಮ್ಮ ಗೊಂದಲಗೊಂಡಿರುವ ಸಾಮಾಜಿಕ ಇತಿಹಾಸ ದಲ್ಲಿ ನೋಡಬಹುದು. ಆದರೆ ಇಂಥ ಶಾಪದ ಸಂದರ್ಭದಲ್ಲಿಯೇ ಭಾವನಿರ್ಲಿಪ್ತ ವಾದ ವಿಜ್ಞಾನದ ನಿಧಾನವಾದ ಬೆಳವಣಿಗೆಯನ್ನು ಕಾಣುತ್ತೇವೆ. ನಾವು ಅತ್ಯಂತ ಮುಗ್ಧವಾಗಿ ಪ್ರತಿಯೊಂದು ಯುಗದಲ್ಲಿಯೂ ಹೊಸದಾಗಿ ಸೇರುತ್ತ ಬರುವ ವಿಜ್ಞಾನ ವನ್ನು, ಅದರ ನಿಧಾನವಾದ-ಹನಿ ಹನಿ ಕೂಡುತ್ತ ಬೆಳೆಯುವ ವಿಧಾನವನ್ನು ಗಮನಿ ಸುತ್ತೇವೆ. ಅಲಿಯ ಸಂತತಿಯ ಒಂದೊಂದು ಪೀಳಿಗೆಯೂ ಅಲ್ಲಾಹ್ ನೀಡಿದ ಕಾಣಿಕೆಯಾದ ಗಣಕ ಯಂತ್ರದ ಹೊಸ ಹೊಸ ಉಪಯೋಗಗಳನ್ನು ಕಲಿಯುತ್ತಿದೆ. ಹೀಗೆ, ಮಾಟ ಮತ್ತು ಪುರಾಣಪ್ರಜ್ಞೆಪೂರಿತವಾದ ನಾಗರಿಕತೆ ತನ್ನ ಇಂಥ ಶೈಶವ ವನ್ನು ನಿಧಾನವಾಗಿ ದಾಟುತ್ತಾ, ನಿರಪೇಕ್ಷವಾದ ವೈಚಾರಿಕ ಪಕ್ವತೆಯನ್ನು ಗಳಿಸಿ ಕೊಳ್ಳುತ್ತಿದೆ.

ಹಾಗೆ ನೋಡಿದರೆ ಪ್ರಗತಿ-ಬೆಳವಣಿಗೆ ಎನ್ನುವುದು ಎಂದೂ ಸ್ಥಾಯಿಯಾದದ್ದು, ಸಾತತ್ಯ ಹೊಂದಿದ್ದು ಆಗಿಯೇ ಇಲ್ಲ. ತಾತ್ವಿಕ ವಿಕಾಸವು ಅಲ್ಲಲ್ಲಿ ನೆಗೆತಗಳನ್ನು ತೋರುವಂತೆ ಭ್ರಮ ನಿರಸನ, ಹಿಂಜರಿಕೆ ಮತ್ತು ಕುರುಡುತನಗಳ ಅವಧಿಗಳನ್ನೂ ತೋರುತ್ತದೆ. ಯಾವುದನ್ನೋ ಬೆನ್ನಟ್ಟಿ ಏನನ್ನೋ ಕಂಡುಹಿಡಿಯುವಂತಹ ವಿಕ್ಷಿಪ್ತ ಘಟನೆಗಳೇ ಬಹುತೇಕವಾಗಿ ವಿಕಾಸದ ಮಾರ್ಗವನ್ನು ನಿರ್ಧರಿಸುವಂಥದ್ದಾಗಿವೆ. ಇನ್ನು ಕೆಲವು ಕಾಲಾವಧಿಗಳಲ್ಲಿ ಸಂಶೋಧನೆಗಳು ಕೇವಲ ವಿಕಾಸದ ದಾರಿಗೆ ಅಡ್ಡ ವಾಗಿರುವ ಕೊಳೆಯನ್ನು ತೆಗೆದುಹಾಕುವ, ಅದರ ಮಾರ್ಗವನ್ನು ಸುರಳೀತಗೊಳಿಸುವ ಕಾರ್ಯದಲ್ಲಿ ತೊಡಗಿಕೊಂಡಿರುತ್ತವೆ. ಟಾಲೆಮಿಯ ಎಪಿಸೈಕಲ್ಲುಗಳ ಹುಚ್ಚು ವಿಚಾರ ಎರಡು ಸಾವಿರಗಟ್ಟಲೆ ಕಾಲ ಮುಂದುವರಿಯುತ್ತಲೇ ಇತ್ತು. ಆರ್ಕಿಮಿಡಿಸ್‌ನ ಕಾಲದಲ್ಲಿ ಗೊತ್ತಿದ್ದಷ್ಟು ಭೂಮಿತಿಯು 15ನೇ ಶತಮಾನದ ಯುರೋಪಿಗೆ ಗೊತ್ತಿರ ಲಿಲ್ಲ ಬೆಳವಣಿಗೆ ಎನ್ನುವುದು ಸತತವಾದುದು, ಜೀವಂತವಾದುದು ಆಗಿದ್ದರೆ ಸಂಖ್ಯೆ ಗಳ ನಿಯಮ, ಕೋ-ಆರ್ಡಿನೇಟ್ ಜ್ಯಾಮಿತಿಗಳು, ಯೂಕ್ಲಿಡ್‌ನ ನಂತರದ ಕೆಲವೇ ಕೆಲವು ಪೀಳಿಗೆಗಳಷ್ಟೊತ್ತಿಗೆ ಮೂಡಿ ಬರುವುದು ಸಾಧ್ಯವಾಗಬೇಕಾಗಿತ್ತು. ಏಕೆಂದರೆ ಗಣಿತಶಾಸ್ತ್ರದ ಈ ಬೆಳವಣಿಗೆಗಳು ಯಾವ ತಂತ್ರಜ್ಞಾನದ ಮೇಲೆಯೂ ಅವಲಂಬಿತ ವಾದುದಲ್ಲ. ಈ ಜ್ಞಾನದ ಮೂಲವೆಲ್ಲ ಹತ್ತು ಬಿಲಿಯಗಳಷ್ಟು ನರಕೋಶಗಳಿರುವ ಮನುಷ್ಯನ ತಲೆಬುರುಡೆಯಲ್ಲಿರುವ ಕಂಪ್ಯೂಟರ್‌ನಲ್ಲಿ ಅಡಕವಾದದ್ದು. ಏಕಸೂತ್ರ ದಲ್ಲಿಲ್ಲದ ಮತ್ತು ಮೂಲಭೂತವಾಗಿ ವೈಚಾರಿಕತೆಯ ಆಧಾರದ ಮೇಲೆ ವಿವರಿಸ ಲಾಗದ ಮನುಷ್ಯನ ಜ್ಞಾನದ ಬೆಳವಣಿಗೆಯು, ವಿಕಾಸವು ಮನುಷ್ಯನೆಂಬ ಪ್ರಭೇದಕ್ಕೆ ಸರಿಯಾಗಿ ಬಳಸಲು ಬಾರದಂಥ ಅಂಗವೊಂದನ್ನು ನೀಡಿದೆ ಎನ್ನುವುದನ್ನು ಸ್ಪಷ್ಟ ಪಡಿಸುತ್ತದೆ. ನ್ಯೂರಾಲಾಜಿಸ್ಟರು ಲೆಕ್ಕಹಾಕಿದಂತೆ, ಇಂದಿಗೂ ಕೂಡ ನಾವು ನಮ್ಮ ಮೆದುಳಿನ ಒಟ್ಟು ಸಾಧ್ಯತೆಗಳ 2% ಅಥವಾ 3%ರಷ್ಟನ್ನು ಮಾತ್ರ ಬಳಸುತ್ತಿದ್ದೇವೆ!

ವಿಜ್ಞಾನದ ಇತಿಹಾಸವು ಸರಾಗ ಧಾರೆಯಂತಹ ಬೆಳವಣಿಗೆಯನ್ನು ತೋರುವುದಿಲ್ಲ. ಇತಿಹಾಸಪೂರ್ವ ಕಾಲದ್ದು ನಮಗೇನೂ ತಿಳಿಯದು. ಆ ನಂತರ ಕ್ರಿಸ್ತಪೂರ್ವ 6ನೆಯ ಶತಮಾನದಲ್ಲಿ ತತ್ವಶಾಸ್ತ್ರಜ್ಞರ ಸಂತೆ ನೆರೆದಂತಾಯಿತು. ಇವರೆಲ್ಲ ಪ್ರಪಂಚದ ಉಗಮ ಮತ್ತು ವಿಕಾಸದ ಬಗ್ಗೆ, ಇಲ್ಲಿರುವ ಎಲ್ಲ ವೈವಿಧ್ಯತೆಗಳ ಅಡಿಪಾಯವಾಗಿರಬಹುದಾದ ತತ್ವದ ಬಗೆಗೆ ಚರ್ಚಿಸತೊಡಗಿದರು. ಪೈಥಾಗೊರಸ್‌ನ ಅನುಯಾಯಿಗಳು ಮೊಟ್ಟಮೊದಲಬಾರಿಗೆ ಎಲ್ಲ ಜ್ಞಾನಗಳ ಸಂಶ್ಲೇಷಣೆ-ಸಂಯೋಜನೆಗಳ ಮಾರ್ಗದ ಪ್ರಯತ್ನ ಮಾಡಿದರು. ಅವರು ಗಣಿತ. ಸಂಗೀತ, ಖಗೋಲಶಾಸ್ತ್ರ, ಔಷಧಶಾಸ್ತ್ರ ಇವೆಲ್ಲವುಗಳ ಎಳೆಗಳನ್ನು ಹೊಂದಿದ ಹಚ್ಚಡವೊಂದನ್ನು ನೇಯಲು ಪ್ರಯತ್ನಿಸಿದರು. ಈ ಹಚ್ಚಡದ ಚೌಕಟ್ಟು ಅವರ ಕಲ್ಪನೆಯಲ್ಲಿ ಭೂಮಿತಿಯಾಗಿತ್ತು. ಆ ಹಚ್ಚಡದ ಹೆಣಿಕೆ ಇಂದಿಗೂ ಹಾಗೆಯೇ ಮುಂದುವರೆದಿದೆ. ಆದರೆ ಮುಂದೆ ಮ್ಯಾಕೆಡೋನಿಯನ್ ವಿಜಯದ ಕಾಲ. ಅದು ಎಲ್ಲ ವೈಜ್ಞಾನಿಕ ಪ್ರಗತಿಗೆ ಹಿಂಜರಿಕೆಯ ಕಾಲ. ಮುಂದೆ ಅರಿಸ್ಟಾಟಲ್‌ನು ನಿರೂಪಿಸಿದ ರೀತಿಗಳು, ವಿಧಗಳು ಅಸ್ತಿತ್ವದ ವ್ಯಾಕರಣವೆನ್ನಿಸಿಕೊಂಡವು. ಅವನು ನಿರೂಪಿಸಿದಂತಹ ಪ್ರಾಣಿಪ್ರಜ್ಞೆಯು ಭೌತಶಾಸ್ತ್ರವನ್ನು ಆಳುವಂಥದಾಯಿತು. ತಿಳಿದುಕೊಳ್ಳಬೇಕಾದ್ದೆಲ್ಲವೂ ತಿಳಿಯಲ್ಪಟ್ಟಿದೆ ಎಂದೂ, ಶೋಧಿಸಬೇಕಾದುದೆಲ್ಲವೂ ಶೋಧಿಸಲ್ಪಟ್ಟಿದೆ ಎಂದೂ ಭಾವಿಸಲ್ಪಟ್ಟಿತು. ಇಂಥ ಈ ಗ್ರೀಕ್ ಹಿರಾಯಿಕ್ ಯುಗಕ್ಕೆ ರೂಪಕವಾಗಿ ಒದಗಿ ಬಂದದ್ದು—ಪ್ರಾಮಿಥಿಯಸ್‌ನು ದೇವತೆಗಳಿಂದ ಬೆಂಕಿಯನ್ನು ಕದ್ದು ತಂದದ್ದು ! ಆಮೇಲೆ ಹೆಲೆನಿಸ್ಟಿಕ್ ಯುಗದ ತತ್ವಶಾಸ್ತ್ರಜ್ಞರು ಪ್ಲಾಟೋ ನಿರ್ಮಿಸಿದ ಗವಿಯಲ್ಲಿ ಸೇರಿಕೊಂಡು ಗೋಡೆಯ ಮೇಲೆ ಎಪಿಸೈಕಲ್ಲುಗಳನ್ನು ಎಳೆಯತೊಡಗಿದ್ದರು. ಅವರ ಬೆನ್ನು ಬೆಳಕಿನತ್ತ ತಿರುಗಿತ್ತು.....

ಗ್ರೀಕ್ ಹಿರಾಯಿಕ್ ಯುಗದ ನಂತರ ಬಂದದ್ದು ಸುಮಾರು 15 ಶತಮಾನಗಳಷ್ಟು ದೀರ್ಘವಾದ ನಿದ್ರೆಯಕಾಲ. ಆಗ ವಿಜ್ಞಾನದ ನಡೆ ಬರೀ ನಿಂತುಹೋದುದಷ್ಟೇ ಅಲ್ಲ, ಅದರ ದಿಕ್ಕು ಕೂಡ ಪಲ್ಲಟಗೊಂಡದ್ದುಂಟು. ಪೈಕ್ ಎನ್ನುವ ಒಬ್ಬ ತತ್ವಶಾಸ್ತ್ರಜ್ಞನು ವಿಜ್ಞಾನವನ್ನು ಕುರಿತು ಅದು ಹಿಮ್ಮುಖ ಚಲನೆ ಇಲ್ಲದ್ದು ಎಂದು ಹೇಳುತ್ತಾನೆ. ಆದರೆ ಇದು ನಿಜವೆ ? ಕ್ರಿ.ಪೂ. 5ನೆಯ ಶತಮಾನದ ಜನ ಭೂಮಿ ದುಂಡಗಾಗಿದೆ ಮತ್ತು ಅದು ಅಂತರಿಕ್ಷದಲ್ಲಿ ತನ್ನ ಅಕ್ಷದ ಸುತ್ತಲೂ ತಾನೇ ತಿರುಗುತ್ತ ತೇಲುತ್ತದೆ ಎಂದು ನಂಬಿದ್ದರು. ಆದರೆ ಅದಾದ ಸಾವಿರ ವರ್ಷಗಳ ನಂತರ ಜನ ನಂಬಿದ್ದೇನು ? ಈ ಭೂಮಿ ಚಪ್ಪಟೆಯಾದ ಬಿಲ್ಲೆಯ ಹಾಗಿವೆ ಎಂದು !

ಗ್ರೀಕರ ಜ್ಞಾನದ ಕಣಜ ಎನ್ನಿಸಿರುವ ಸೇಂಟ್ ಆಗಸ್ಟಿನ್‌ನ 'ದೇವನ ಪಟ್ಟಣ'ದಲ್ಲಿ ಸೌಂದರ್ಯ ಮತ್ತು ಆಸೆಗಳನ್ನು ನಿಷೇಧಿಸಲಾಗಿದೆ. ಯಾಕೆಂದರೆ ಧರ್ಮ

ಸಂಬಂಧಿಯಲ್ಲದ ಯಾವುದೇ ಜ್ಞಾನವು ಅಶ್ಲೀಲ ಮತ್ತು ನಿಕೃಷ್ಟವಾದ ಪಿಶಾಚಿಗಳ ಪ್ರಭಾವದಿಂದ ಭ್ರಷ್ಟಗೊಂಡುದಾಗಿರುತ್ತದೆ....ಥೇಲ್ಸ್ ತನ್ನ ನೀರಿನೊಂದಿಗೆ, ಅನಾಕ್ಸಿಮೀನ್‌ನು ಗಾಳಿಯೊಂದಿಗೆ, ಸ್ಟ್ವಾಯಿಕ್ಕರು ಬೆಂಕಿಯೊಂದಿಗೆ ಮತ್ತು ಎಪಿಕ್ಯೂರಸ್ ತನ್ನ ಅಣುಗಳೊಂದಿಗೆ ಹೊರಟು ಹೋಗಲಿ....ಅವರು ಹೊರಟೂ ಹೋದರು ! ಮುಂದೆ ಹನ್ನೆರಡನೆಯ ಶತಮಾನದಲ್ಲಿ ನಡೆದ ಅರಿಸ್ಟಾಟಲ್‌ನ ಭೌತಶಾಸ್ತ್ರ ಮತ್ತು ಸೇಂಟ್ ಥಾಮಸ್ ಅಕ್ವನಾಸ್‌ನ ದೈವವಾದಗಳ ನಡುವಿನ ಭಯಂಕರವಾದ ಕೂಡಿಕೆಯಿಂದ ಕಲಿಯುವಿಕೆಯ ಪುನರಾರಂಭವಾಯಿತು. ಆನಂತರ ಮೂರು ಶತಮಾನಗಳಷ್ಟು ಕಾಲ ಬಂಜರುತನ, ದರಿಗಟ್ಟ ನಿಂತ ಕೊಚ್ಚೆ....ಒಣ ಪಾಂಡಿತ್ಯದ ತತ್ವಶಾಸ್ತ್ರ ! ಎರಾಸ್ಮಸ್ ಇಂಥದ್ದರಲ್ಲಿ ಅರ್ಥಪೂರ್ಣತೆಗಾಗಿ ಹುಡುಕಿ ಗಾಬರಿಗೊಂಡು ಕಿರಿಚಿಕೊಳ್ಳುತ್ತಾನೆ–ಈ ಗಾಢಾಂಧಕಾರದಲ್ಲಿ.... ಓಹ್ ! .. ಅದರ ಅಸ್ತಿತ್ವವೇ ಇಲ್ಲ !

ಇಡೀ ಪಾಶ್ಚಿಮಾತ್ಯ ಇತಿಹಾಸದಲ್ಲಿ ನಿಜವಾಗಿಯೂ ಜ್ಞಾನವೆನ್ನುವುದು ಒಟ್ಟುಗೂಡುತ್ತ ಬಂದ ಕಾಲಾವಧಿ ಎಂದರೆ ಗ್ರೀಕರ ಹಿರಾಯಿಕ್‌ಯುಗದ ಆ ಮೂರು ಶತಮಾನಗಳು ಮತ್ತು ಈ ಶತಮಾನದ ಹಿಂದಿನ ಮೂರು ಶತಮಾನಗಳು. ಆದರೆ ಜ್ಞಾನದ ಮೂಲವಾದ ಉಪಕರಣವು ಈ ಮಧ್ಯದ ಎರಡು ಸಾವಿರ ವರ್ಷಗಳಷ್ಟು ಕಾಲ (ಅಂದರೆ ಕ್ರಿ.ಪೂ, 5, 4 ಶತಮಾನಗಳಿಂದ ಈ 18, 19ನೇ ಶತಮಾನಗಳವರೆಗೆ) ಮತ್ತು ಅದಕ್ಕೂ ಹಿಂದಿನ ಮೂವತ್ತು ಸಹಸ್ರ ವರ್ಷಗಳಷ್ಟು ಕಾಲದಿಂದಲೂ ಮನುಷ್ಯನಲ್ಲಿ ಇದ್ದೇ ಇದೆ. ಆದರೆ ಅದರ ಬಳಕೆಯಾಗಲಿಲ್ಲ. ವಿಕ್ಷಿಪ್ತ ಕಲ್ಪನೆಗಳು ಮತ್ತು ಮೂಢನಂಬಿಕೆ, ಅಪರಾಧೀ ಪ್ರಜ್ಞೆ ಮತ್ತು ಭಯ–ಇವುಗಳ ಪರಿಣಾಮದಿಂದ ಉತ್ಪನ್ನವಾದ ಭ್ರಮಾತ್ಮಕ ಸ್ಥಿತಿಯು 'ನಿಕೃಷ್ಟ ಪಿಶಾಚಿಗಳ ಜ್ಞಾನ'ವನ್ನು (ವಿಜ್ಞಾನ) ಮತ್ತೆ ಮತ್ತೆ ಹಿಮ್ಮೆಟ್ಟಿಸಿತು. ಮಾನವ ಇತಿಹಾಸದ ಬಹುತೇಕ ಅವಧಿಯಲ್ಲಿ ಹೊಸ ಮೆದುಳಿನ ಅಮೋಘ ಸಾಧ್ಯತೆಗಳು ಹಳೆಯ ಮೆದುಳಿನ ಭಾವನಾತ್ಮಕ ನಂಬಿಕೆಗಳ ಸೇವೆಗೆ–ಡೊರ್ಡ್ಗೊನ್ ಗವಿಯ ಮಾಟ–ಮಂತ್ರ ಉದ್ದೇಶದ ಚಿತ್ರಗಳಿಗಾಗಿ, ಆದಿಮ ಪ್ರತಿಮೆಗಳನ್ನು ಪುರಾಣಗಳಲ್ಲಿ ಅಳವಡಿಸುವುದಕ್ಕಾಗಿ, ಏಷಿಯ ಮತ್ತು ಮಧ್ಯ ಯುರೋಪಿನ ಧಾರ್ಮಿಕ ಕಲೆಗಳಿಗಾಗಿ ಮಾತ್ರ ಬಳಕೆಗೊಂಡವು. ವೈಚಾರಿಕತೆ ಎನ್ನುವುದು ಭಾವಾವೇಶದ ನಂಬಿಕೆಯ ಆಳಾಗಿತ್ತು. ಆ ನಂಬಿಕೆ ವೈದ್ಯನದಾಗಿರಲಿ, ದೈವವಾದಿಯದಾಗಿರಲಿ, ಪಂಡಿತರದ್ದಾಗಿರಲಿ, ಭೌತಿಕ ದ್ವಂದ್ವವಾದಿಗಳದ್ದಾಗಿರಲಿ ಅಥವಾ ಮಾವೋ ಇಲ್ಲವೇ ಮಾ–ಂಬಾ ರಾಜನ ಅನುಯಾಯಿಗಳದ್ದಾಗಿರಲಿ. ವೈಚಾರಿಕತೆ ಇಂಥ ಎಲ್ಲ ನಂಬಿಕೆಗಳ ಆಳಾಗಿಬಿಟ್ಟಿತ್ತು....ಪ್ರಿಯ ಬ್ರೂಟಸ್ ! ...ತಪ್ಪು ನಮ್ಮ ಗ್ರಹಗತಿಯದಲ್ಲ....ತಪ್ಪಾದುದೆಲ್ಲಿ ಅಂದರೆ ನಾವು ನಮ್ಮ ತಲೆಬುರುಡೆಗಳಲ್ಲಿ ಮೊಸಳೆ–ಕುದುರೆಗಳನ್ನಿಟ್ಟುಕೊಂಡಿದ್ದೇವೆ !....ಮನುಷ್ಯನ ವೈಶಿಷ್ಟ್ಯಗಳಲ್ಲೆಲ್ಲ ಇದು ಅತ್ಯಂತ ವಿಶೇಷವಾದದ್ದಲ್ಲವೆ ?

ಮಾರ್ಚ್–ಏಪ್ರಿಲ್ ೧೯೯೧/೯೧

೩. ಸೌಮ್ಯವಾದ ಪೈಪೋಟಿಗಳು

ಹಕ್ಸ್‌ಲೀ ಮಾಡಿರುವ ಮನುಷ್ಯನ ವೈಶಿಷ್ಟ್ಯತೆಗಳ ಪಟ್ಟಿಯಲ್ಲಿರುವ ಸಂಗತಿಗಳೆಲ್ಲ ಅವನ ಒಳ್ಳೆಯತನಗಳನ್ನು ಸೂಚಿಸುವಂಥವುಗಳಾಗಿವೆ. ಅವನು ಮನುಷ್ಯನ ಭಯಂಕರವಾದ ಒಂದು ವೈಶಿಷ್ಟ್ಯವನ್ನು ಕೈಬಿಟ್ಟಿದ್ದಾನೆ. ಅದೆಂದರೆ, ತನ್ನ ಪ್ರಭೇದದ ಸದಸ್ಯರೊಂದಿಗೇ ನಡೆಸುವ ಯುದ್ಧ.. ಯಾದವೀ ಕಲಹ! ಯುದ್ಧದ ಜೀವಶಾಸ್ತ್ರೀಯ ಚಿಂತನೆಯನ್ನು ಹಕ್ಸ್‌ಲೀ ತನ್ನ ಇನ್ನೊಂದು ಪ್ರಬಂಧದಲ್ಲಿ ಚರ್ಚಿಸುತ್ತಾನೆ. ಆದರೆ ಮನುಷ್ಯನ ವೈಶಿಷ್ಟ್ಯಗಳನ್ನು ಪಟ್ಟಿಮಾಡುವಾಗ ಮಾತ್ರ ಇದನ್ನು ನಿರ್ಲಕ್ಷಿಸಿದ್ದಾನೆ. ಅವನ ಪ್ರಕಾರ ತಮ್ಮ ತಮ್ಮಲ್ಲಿಯೇ ಯುದ್ಧ ಮಾಡುವ ಪ್ರಾಣಿಗಳೆಂದರೆ ಮನುಷ್ಯ ಮತ್ತು ಇರುವೆಗಳು. ಇರುವೆಗಳ ಕೆಲವೇ ಕೆಲವು ಪ್ರಭೇದಗಳು ಇಂಥ ಯುದ್ಧದಲ್ಲಿ ತೊಡಗುತ್ತವೆ. ಇಲಿಗಳು ಕೂಡ ಇಂಥ ಪ್ರಭೇದದೊಳಗಿನ ಯುದ್ಧವನ್ನು ನಡೆಸುತ್ತವೆ. ಇವು ಪಂಗಡ ಪಂಗಡಗಳ ನಡುವೆ ನಡೆಯುವ ಯುದ್ಧಗಳು. ಇಲಿಗಳಾಗಲೀ, ಕೀಟಗಳಾಗಲೀ ತಮ್ಮ ಪ್ರಭೇದದ ಒಂದೊಂದು ಜೀವಿಯನ್ನು ಬಿಡಿಬಿಡಿಯಾಗಿ ಗುರುತಿಸಲಾರವು. ಅವು ತಾವು ವಾಸಿಸುವ ಬಿಲ ಇಲ್ಲವೇ ಗೂಡಿನ ವಾಸನೆಯ ಆಧಾರದಿಂದ ತಮ್ಮ ಗುಂಪಿನ ಜೀವಿಗಳನ್ನು ಗುರುತಿಸುತ್ತವೆ. ಬೇರೊಂದು ಪಂಗಡದ ಜೀವಿಗಳನ್ನು ಇವು ಅವುಗಳ ಭಿನ್ನವಾಸನೆಯಿಂದ ಗುರುತಿಸುತ್ತವೆ. ಮನುಷ್ಯರಲ್ಲಿನ ಅಸ್ಪೃಶ್ಯ ಕಲ್ಪನೆಯಂತೆ ಈ ಪ್ರಾಣಿಗಳಲ್ಲಿ ಅಘ್ರಾಣ್ಯ ಕಲ್ಪನೆ! ಒಂದು ಪಂಗಡದ ಜೀವಿಗಳಿಗೆ ಇನ್ನೊಂದು ಪಂಗಡದ ಜೀವಿಗಳು ದುರ್ನಾತ ಬೀರುವಂಥವಾಗಿರುತ್ತವೆ. ಅದಕ್ಕೇ ಅವು ಒಂದರಮೇಲೊಂದು ಏರಿಹೋಗಿ, ಭಯಂಕರ ಆಕ್ರಮಣ ನಡೆಸಿ ಅವುಗಳನ್ನು ಕೊಲ್ಲಲು ಪ್ರಯತ್ನಿಸುತ್ತವೆ.

ಇಡೀ ಪ್ರಾಣಿಪ್ರಪಂಚದಲ್ಲಿ ಕೊಲ್ಲುವ ಉದ್ದೇಶದಿಂದ ಹೋರಾಟ ನಡೆಯುವುದು ಬೇಟೆ–ಬೇಟೆಗಾರ ಪ್ರಾಣಿಗಳ ನಡುವೆ. 'ಅರಣ್ಯ ಧರ್ಮ' ಇಂಥ ಕೊಲೆಯನ್ನು ಮಾತ್ರ ಮಾನ್ಯ ಮಾಡುತ್ತದೆ. ಇದು ಆಹಾರಕ್ಕಾಗಿನ ಹೋರಾಟ. ಆದರೆ ಈ ಹೋರಾಟ ಬೇರೆ ಬೇರೆ ಪ್ರಭೇದಗಳ ನಡುವಿನ ಹೋರಾಟವಾಗಿರುತ್ತದೆ. ಒಂದೇ ಪ್ರಭೇದದ ಜೀವಿಗಳು ಒಂದು ಪ್ರಬಲವಾದ ಸ್ವಭಾವಜನ್ಯ ಸಂರಕ್ಷಕ ಗುಣದ ಮೂಲಕವಾಗಿ ಪರಸ್ಪರರನ್ನು ಕೊಲ್ಲುವಷ್ಟು ತೀವ್ರವಾಗಿ ಹೋರಾಡುವುದಿಲ್ಲ. ತನ್ನ ಪ್ರಭೇದದ ಬಾಂಧವರನ್ನು ಕೊಲ್ಲಕೂಡದೆನ್ನುವ ನಂಬಿಕೆಯು ಪ್ರಾಣಿಗಳಲ್ಲಿ ಅವುಗಳ ಹಸಿವು, ಲೈಂಗಿಕ ಆಕಾಂಕ್ಷೆ ಮತ್ತು ಭಯಗಳಷ್ಟೇ ತೀವ್ರವಾದ ಪ್ರವೃತ್ತಿಯಾಗಿದೆ. ಸಂಘ ಜೀವನ ನಡೆಸುವ ಪ್ರಾಣಿಗಳಲ್ಲಿ ಇಂಥ ಪರಸ್ಪರ ಸಂರಕ್ಷಕ ನಂಬಿಕೆಯ ಪ್ರವೃತ್ತಿಯ ಮೂಲಕವಾಗಿ ಲೈಂಗಿಕ ಸ್ಪರ್ಧಿಗಳ ನಡುವೆ ನಡೆಯುವ ಹೋರಾಟವು

ಕೇವಲ ಸಾಂಕೇತಿಕವಾದದ್ದಾಗಿ ಮಾರ್ಪಡುತ್ತದೆ. ಇಂಥ ಹೋರಾಟದಲ್ಲಿ ತೊಡಗಿದ ಸ್ಪರ್ಧಿಗಳಲ್ಲಿ ದುರ್ಬಲವಾದ ಪ್ರಾಣಿಯು ತೋರುವ ಯಾವದೋ ಒಂದು ಅಂಗ ಚೇಷ್ಟೆಯು ಹೋರಾಟವನ್ನು ಕೊನೆಗೊಳಿಸಿಬಿಡುತ್ತದೆ. ಉದಾಹರಣೆಗೆ, ನಾಯಿಗಳಲ್ಲಿ ದುರ್ಬಲವಾದ ಸ್ಪರ್ಧಿ ಅಂಗಾತಾಗಿ ಮಲಗಿ ತನ್ನ ನಾಲ್ಕೂ ಕಾಲುಗಳನ್ನು ಮೇಲಕ್ಕೆತ್ತಿ ತನ್ನ ಒಡಲನ್ನು ತೋರಿಸುತ್ತದೆ. ಆಗ ಪ್ರಬಲವಾದ ಸ್ಪರ್ಧಿ ಅದನ್ನು ಕ್ಷಮಿಸಿ ಹೋರಾಟವನ್ನು ಕೊನೆಗೊಳಿಸಿಬಿಡುತ್ತದೆ. ಸಾರಂಗಗಳಲ್ಲಿ ದುರ್ಬಲವಾದದ್ದು ನಿಧಾನವಾಗಿ ಜಾರಿಕೊಂಡು ಹೋಗಿಬಿಡುತ್ತದೆ. ಇದೇ ರೀತಿಯಾಗಿ, ಪ್ರಾಬಲ್ಯದ ಶ್ರೇಣೀಕರಣ (Dominance heirarchy) ತೋರುವ ಕಾಡುಪ್ರಾಣಿಗಳ ಸಂಘ ಜೀವನವು ದುರ್ಬಲ ಪ್ರಾಣಿಗಳ ರಕ್ಷಣೆಗಾಗಿನ ಒಂದು ತಂತ್ರವೂ ಆಗಿರುತ್ತದೆ.

ಮಂಗ, ವಾನರ, ನರ–ಈ ಪ್ರಾಣಿಗಳ ಗುಂಪಿಗೆ ಪ್ರೈಮೇಟ್ಸ್ ಎನ್ನುತ್ತೇವೆ. ಸಸ್ತನಿಗಳಲ್ಲಿ ಇವು ಅತ್ಯಂತ ವಿಕಾಸ ಹೊಂದಿದ ಪ್ರಾಣಿಗಳು. ಹೀಗೆ ಮಂಗಗಳು ಮನುಷ್ಯನ ಪೂರ್ವಜರ ಹತ್ತಿರದ ಸಂಬಂಧಿಗಳಾಗಿರುವುದರಿಂದ ಅವುಗಳ ನಡವಳಿಕೆಗಳ ಅಧ್ಯಯನವು ಮನುಷ್ಯನ ನಡವಳಿಕೆಗಳ ಬಗೆಗೆ ವಿಶೇಷ ಹೊಸನೋಟಗಳನ್ನು ನೀಡು ವಂಥದ್ದಾಗಿದೆ. ದ್ವಿತೀಯ ಮಹಾಯುದ್ಧದ ಮೊದಲು ಸೊಲೀ ಝುಕರ್‌ಮನ್ ಮತ್ತು ಇತರರು ನಡೆಸಿದ ಮಂಗಗಳ ಅಧ್ಯಯನವು ಪ್ರಾಣಿ ಸಂಗ್ರಹಾಲಯದ ಮತ್ತು ಬಂಧನದಲ್ಲಿರಿಸಿದ ಮಂಗಗಳನ್ನು ಆಧರಿಸಿದ್ದಾಗಿತ್ತು. ಈ ಅಧ್ಯಯನಗಳು ಮಹತ್ವ ದ್ದಾಗಿದ್ದವು. ಯಾಕೆಂದರೆ ಇವು ಬಂಧನದಲ್ಲಿ ಅಥವಾ ಶ್ರಮ ಶಿಬಿರಗಳಲ್ಲಿ ಕೂಡಿ ಹಾಕಿದ ಮನುಷ್ಯನ ಪರಿಸ್ಥಿತಿಯನ್ನು ಸೂಚಿಸುವಂಥವುಗಳಾಗಿದ್ದವು...ಬಂಧನದಲ್ಲಿರಿಸಿದ ಮಂಗಗಳು ಯಾವಾಗಲೂ ಪರಸ್ಪರ ಕಾಲುಕೆರೆದು ಜಗಳಾಡುವ, ವಿಪರೀತ ಕಾಮುಕ ಪ್ರವೃತ್ತಿ ತೋರುವವು ...ಈ ಅಧ್ಯಯನಗಳು ಸರ್ವಾಧಿಕಾರಿ ಕೊಲೆಗಡುಕ ನಾಯಕರು ಆಳುವ ದೇಶಗಳ ಜನತೆಯು, ವಿಪರೀತ ಒತ್ತಡಕ್ಕೆ ಸಿಕ್ಕಿಹಾಕಿಕೊಂಡು ಸಿನಿಕತನವನ್ನು ಅನುಭವಿಸುತ್ತ ಆಧುನಿಕ ಸಮಾಜದಲ್ಲಿ ಬದುಕುತ್ತಿರುವ ಮಾನಸಿಕ ರೋಗಿಗಳ ನಡ ವಳಿಕೆಗಳ ಬಗೆಗೆ ನಮಗೆ ತಿಳುವಳಿಕೆಯನ್ನು ನೀಡುತ್ತವೆ. ಆದರೆ, ಈ ಮಂಗಗಳು ತಮ್ಮ ಸಹಜವಾದ ಕಾಡಿನ ಪರಿಸರದಲ್ಲಿಯೂ ಇಂಥದೇ ನಡವಳಿಕೆಯನ್ನು ತೋರು ತ್ತವೆಯೆ ? ಇಂಥ ನಡವಳಿಕೆಯನ್ನು ತೋರುತ್ತಿದ್ದರೆ ಮಂಗಗಳ ಸಂತತಿ ಇಂದು ಭೂಮಿಯ ಮೇಲೆ ಇರಲು ಸಾಧ್ಯವಾಗುತ್ತಿರಲಿಲ್ಲ.

ದ್ವಿತೀಯ ಮಹಾಯುದ್ಧದ ನಂತರ ಮಂಗಗಳ ಅಧ್ಯಯನವು ಕ್ಷೇತ್ರ ವೀಕ್ಷಣೆಯ ಮಾರ್ಗವನ್ನು ಅನುಸರಿಸಿ, ಇವುಗಳ ಅಧ್ಯಯನವು ಪ್ರಾಣಿ ಸಂಗ್ರಹಾ ಲಯದಿಂದ ಕಾಡಿಗೆ ಪಲ್ಲಟಗೊಂಡಿತು. ಇಂಥ ಕಾಡಿನ ಪರಿಸರದಲ್ಲಿನ ಅಧ್ಯಯನ ಗಳಿಂದ: ಕಾರ್ಪೆಂಟರ್‌ನು ಕಾಡು ಗಿಬನ್‌ಗಳು ತಮ್ಮ ತಮ್ಮಲ್ಲಿ ಹೊಡೆದಾಡುವುದು ಅತ್ಯಂತ ಕ್ವಚಿತ್ತಾಗಿ ಮತ್ತು ಕಾಡು ಮಂಗಗಳಲ್ಲಿ ಹೊಡೆದಾಟವೆನ್ನುವುದು ಇಲ್ಲವೇ

ಇಲ್ಲವೆಂದು; ವಾಶ್‌ಬರ್ನ್ ಮತ್ತು ಡಿವೋರ್ ಇವರು ವೀಕ್ಷಿಸಿದ ಏಳು ಗುಂಪಿನ ಪೂರ್ವ ಆಫ್ರಿಕದ ಕಾಡು ಬಬೂನ್‌ಗಳಲ್ಲಿ ಒಂದರಲ್ಲಿ ಮಾತ್ರ ಸ್ವಲ್ಪ ಹೊಡೆದಾಟದ ಲಕ್ಷಣಗಳಿವೆ ಎಂದು; ಸೇಥವಿಕ್ ಮತ್ತು ಜಾಯ್ ಕಾಡುಮಂಗ ಮತ್ತು ಲಂಗೂರ ಗಳಲ್ಲಿ ಗುಂಪಿನೊಳಗಿನ ಅಥವಾ ಗುಂಪುಗಳೊಳಗಿನ ಒಂದೂ ಹೊಡೆದಾಟ ಕಾಣದಿರು ವುದನ್ನು; ಹಾಲ್‌ನು ಕಾಡು ಬಬೂನ್‌ಗಳಲ್ಲಿ ಯಾವ ಹೊಡೆದಾಟದ ಲಕ್ಷಣಗಳಿಲ್ಲ ವೆಂದು–ಸಾಧಾರವಾಗಿ ನಿರ್ಣಯಿಸಿದರು.

ಈ ಎಲ್ಲ ವರದಿಗಳು ಅತ್ಯಂತ ಗಮನಾರ್ಹವೆನಿಸಿದ್ದೇಕೆಂದರೆ ಎಲ್ಲರೂ ಇವುಗಳ ತದ್ವಿರುದ್ಧವಾದ ವರದಿಗಳನ್ನು ನಿರೀಕ್ಷಿಸಿದ್ದರು. ಈ ಸಂಶೋಧಕರೆಲ್ಲರೂ ಆರಂಭದಲ್ಲಿ ತಾವು ವೀಕ್ಷಿಸುತ್ತಿರುವ ಸಂಗತಿಯ ಬಗೆಗೆ ಆಶ್ಚರ್ಯಚಕಿತರಾಗಿ, ತಾವು ವೀಕ್ಷಿಸು ತ್ತಿರುವ ಮಂಗ ಅಥವಾ ವಾನರಗಳು ಅಸ್ವಾಭಾವಿಕವಾದವುಗಳೇನೋ ಎಂದು ಕೊಂಡರು! ಆದರೆ ಕ್ರಮೇಣ ಕಾಡಿನ ಸಹಜ ಪರಿಸರದಲ್ಲಿರುವ ಮಂಗ ಅಥವಾ ವಾನರಗಳು ಶಾಂತ ಸ್ವಭಾವದ್ದಾಗಿವೆ ಎಂದು ಎಲ್ಲರಿಗೂ ಸ್ಪಷ್ಟವಾಯಿತು. ಇಂಥ ಸಹಜ ಪರಿಸರದಲ್ಲಿರುವ ಆರೋಗ್ಯಪೂರ್ಣ ಪ್ರೈಮೇಟ್ ಸಮಾಜವು ತೀವ್ರವಾದ ಹೋರಾಟದ ಲಕ್ಷಣವನ್ನು ತೋರಿಸುವುದಿಲ್ಲ. ಆದರೆ ಸಂಗ್ರಹಾಲಯಗಳಲ್ಲಿ, ಪಂಜರಗಳಲ್ಲಿ ಅಥವಾ ಒತ್ತಡಗಳಲ್ಲಿ ಇರಿಸಿದಾಗ ಇವು ತುಂಬ ಭಿನ್ನವಾದ ಸ್ವಭಾವ ಗಳನ್ನು ತೋರುತ್ತವೆ. ಪರಸ್ಪರ ಕ್ರೂರವಾಗಿ ಹೋರಾಡುತ್ತವೆ...ಅಂದರೆ ಹಿಂಸೆ, ಹೊಡೆದಾಟಗಳು ಒತ್ತಡಗಳಿಗೆ ಸಿಕ್ಕಿಹಾಕಿಕೊಂಡಿರುವ ಸಮಾಜ ತೋರುವ ಲಕ್ಷಣ! ವಾನರಗಳು ತಮ್ಮ ಸಹಜವಾದ ಕಾಡುಜೀವನದಲ್ಲಿ ಫ್ರಾಯ್ಡ್‌ನು ಸೂಚಿಸುವಂತಹ ವಿಧ್ವಂಸಕ ಪ್ರವೃತ್ತಿಯನ್ನು ತೋರಿಸುವುದಿಲ್ಲ. ಬಬೂನ್ ಮತ್ತು ರ್‍ಹಿಸಸ್ ಮಂಗಗಳ ಸಮಾಜಗಳ ಸದಸ್ಯ ಪ್ರಾಣಿಗಳು ತೋರಿಸುವಂತಹ ವ್ಯಕ್ತಿತ್ವವಾದೀ ನಡವಳಿಕೆಗಳು ಅವು ತಮ್ಮ ಕುಟುಂಬ, ನಾಯಕ ಇಲ್ಲವೇ ಗುಂಪಿಗೆ ತೋರಿಸುವ ನಿಷ್ಠೆಯಿಂದ ಸಮ ತೋಲನಗೊಂಡಿರುತ್ತವೆ. ಇಂಥ ಸಮತೋಲನವು ಯಾವುದಾದರೂ ಒತ್ತಡದ ಮೂಲಕ ಭಂಗಗೊಂಡಾಗ ಅವು ಆಕ್ರಮಣಕಾರೀ ಪ್ರವೃತ್ತಿಯನ್ನು ತೋರುತ್ತವೆ.

ಆದರೆ ಈ ಎಲ್ಲ ಅಂಶಗಳೂ ಮನುಷ್ಯನ ಶಾಪಗ್ರಸ್ಥ, ಪರಸ್ಪರ ಹೊಡೆದಾಡು ವಂತಹ ನಡವಳಿಕೆಯ ಉಗಮದ ಬಗ್ಗೆ ಅತ್ಯಂತ ಸರಳವಾದ ಮತ್ತು ಗಂಭೀರವಲ್ಲದ ನೋಟಗಳೆನ್ನಿಸಬಹುದು. ಮನಃಶಾಸ್ತ್ರಜ್ಞರು ಜನರ ವಿಕ್ಷಿಪ್ತತೆ, ಕ್ರೌರ್ಯ ಹಾಗೂ ಮಾನ ಸಿಕ ರೋಗಗಳಿಗೆ ಆಹಾರದ ಕೊರತೆ, ವ್ಯಕ್ತಿತ್ವ ಕಳೆದುಹೋಗುವಂತೆ ವಿಪರೀತ ಒತ್ತಡ ವನ್ನು ಹೇರುವ ಜನನಿಬಿಡತೆ, ಸ್ವಾಭಾವಿಕ ವಿಕೋಪಗಳು, ಕಲ್ಯಾಣರಾಜ್ಯದ ದುರ್ಗಂಧ ಭರಿತ ಆಕಳಿಕೆಗಳಾದ ಪ್ರಾಣಿ ಸಂಗ್ರಹಾಲಯ ಅಥವಾ ಜೈಲಿನಂಥ ಪರಿಸರ ಮತ್ತು ಬಹುದೀರ್ಘಕಾಲದ ನಿರುದ್ಯೋಗದ ಆಲಸಿತನ ಈ ಮುಂತಾದ ಜನನಿಬಿಡ ಪಟ್ಟ

ವಲ್ಲಿನ ಪರಿಸ್ಥಿತಿಗಳು ಕಾರಣವಾಗುತ್ತವೆನ್ನುತ್ತಾರೆ. ಆದರೆ ಈ ಕಾರಣಗಳು ಆಧುನಿಕ ಯುಗದ ಕೊಡುಗೆಗಳಾಗಿದ್ದು ಆದಿಮ ಮಾನವನು ಕ್ರೌರ್ಯದ ವಿಕ್ಷಿಪ್ತ ಮನುಷ್ಯನಾಗಿ ಬೆಳೆಯುವಲ್ಲಿ ಸಂಬಂಧ ಹೊಂದಿದವುಗಳಾಗಿ ತೋರುವುದಿಲ್ಲ. ಯಾಕೆಂದರೆ ಅಂದಿನ ಕಾಲದಲ್ಲಿ ಯಾವ ದೊಡ್ಡ ಪಟ್ಟಣಗಳೂ, ನಗರಗಳ ಜನನಿಬಿಡತೆಯೂ ಇರಲಿಲ್ಲ. ಬಂಧನದಲ್ಲಿ ಇರಿಸಿದ ಮಂಗಗಳಲ್ಲಿ ಮತ್ತು ನ್ಯೂಯಾರ್ಕ್‌ನಂಥ ದೊಡ್ಡ ಪಟ್ಟಣಗಳಲ್ಲಿ ಬದುಕುವ ಮನುಷ್ಯನ ಮಾನಸಿಕ ಅಸಮತೋಲನದ ಸ್ಥಿತಿಯನ್ನು ನಮ್ಮ ಪೂರ್ವಜರ ಪರಿಸ್ಥಿತಿಯೊಂದಿಗೆ ಹೋಲಿಸಲು ಸಾಧ್ಯವಿಲ್ಲ. ಇಲ್ಲಿ ನಾವು ಆಧುನಿಕ ಮನುಷ್ಯನ ಕ್ರೌರ್ಯವನ್ನು ಮಾತ್ರ ಗಮನಿಸುತ್ತ ಹಿಂದಿನ ಮನುಷ್ಯ ಕ್ರೂರಿಯಾಗಿರಲೇ ಇಲ್ಲ ವೆನ್ನುವಂತೆ ಭಾವಿಸುತ್ತಿದ್ದೇವೆ. ಆದರೆ ಏಷಿಯ ಮತ್ತು ಆಫ್ರಿಕದ ಇತಿಹಾಸಗಳನ್ನು ಗಮನಿಸಿದರೆ ಅಲ್ಲಿ ವ್ಯಕ್ತವಾದ ಕ್ರೌರ್ಯದ ಪರಿಚಯ ನಮಗಾಗಬಹುದು. ಇದರಿಂದ ನಿಷ್ಪನ್ನವಾಗುವುದಿಷ್ಟೇ: ಮನುಷ್ಯನ ಕ್ರೌರ್ಯದ ಮೂಲವನ್ನು ಪೂರ್ಣವಾಗಿ ಪರಿಸರ ದಲ್ಲಿ ಹುಡುಕುವುದೆಂದರೆ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಮಾರ್ಗವಾಗುತ್ತದೆ. ಹವಾಮಾನ ವೈಪರೀತ್ಯಗಳಾಗಲೀ, ಪರಿಸರದ ಒತ್ತಡಗಳಾಗಲೀ ಖಂಡಿತವಾಗಿಯೂ ಮಾನವ ವಿಕಾಸದಲ್ಲಿ ಬಹುಮುಖ್ಯವಾದ ಪ್ರೇರಕಗಳಾಗುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಬಹುತೇಕ ಯುದ್ಧಗಳು, ಯಾದವೀ ಕಲಹಗಳು, ಜನಾಂಗೀಯ ವಿದ್ವೇಷಗಳು ಇವೆಲ್ಲಕ್ಕೆ ಇನ್ನೂ ಬೇರೆ ಕಾರಣಗಳಿರಬೇಕು... ಹಾಗಾದರೆ ನಾವು ಈ ಮಾನವ ವಿಕ್ಷಿಪ್ತತೆಯ ಕಾರಣಗಳನ್ನು–ಅಧಃಪತನದ ಕಾರಣಗಳನ್ನು ಎಲ್ಲಿ ಹುಡುಕ ಬೇಕು ?

೪. ನಿರಪಾಯಕಾರಿ ಬೇಟೆಗಾರ

ಅನೇಕರು ಈ ಅಧಃಪತನಕ್ಕೆ ಕಾರಣವನ್ನು ಮನುಷ್ಯನು ಸಸ್ಯಾಹಾರದಿಂದ ಮಾಂಸಾಹಾರಕ್ಕೆ ಬದಲಾದುದರಲ್ಲಿ ಕಾಣುತ್ತಾರೆ. ಪ್ರಾಣಿಶಾಸ್ತ್ರಜ್ಞರು ಸೂಚಿಸುವಂತೆ ಆಹಾರಕ್ಕಾಗಿ ಬೇಟೆಯಾಡುವುದು ಖಂಡಿತವಾಗಿಯೂ ತನ್ನ ಪ್ರಭೇದದ ಸದಸ್ಯರ ಮೇಲೆ ತೋರಿಸುವ ಆಕ್ರಮಣಕಾರಿಯಾದ ಕೊಲೆಗಡುಕ ಪ್ರವೃತ್ತಿಯಿಂದ ಭಿನ್ನ ವಾದುದು. ಕಾನ್ರಾಡ್ ಲಾರೆಂಝ್ ಹೇಳುವಂತೆ ಬೇಟೆಗಾರನ ಪ್ರೇರಣೆ ಮತ್ತು ಯೋಧನ ಪ್ರೇರಣೆ ತುಂಬ ಭಿನ್ನವಾದವುಗಳು. ಕಾಡೆಮ್ಮೆಯ ಕಡೆ ನೆಗೆಯುವ ಸಿಂಹಕ್ಕೆ ಒದಗುವಂಥ ಪ್ರೇರಣೆ ಲಾರೆಂಝನಿಗೆ, ಮಾಂಸದಂಗಡಿಯಲ್ಲಿ ತೂಗುಬಿಟ್ಟ ಟರ್ಕಿಕೋಳಿಯನ್ನು ನೋಡಿದಾಗ ಉಂಟಾಯಿತಂತೆ. ಬೇಟೆ ಮತ್ತು ಹೋರಾಟಗಳ ಹಿಂದಿನ ಆಂತರಿಕ ಪ್ರೇರಣೆಗಳು ತುಂಬ ಭಿನ್ನವಾಗಿರುವುದನ್ನು ಪ್ರಾಣಿಗಳು ಆಯಾ ಸಂದರ್ಭಗಳಲ್ಲಿ ವ್ಯಕ್ತಪಡಿಸುವ ಬಾಹ್ಯ ನಡವಳಿಕೆಗಳು, ಅಂಗಚೇಷ್ಟೆಗಳು ಇವುಗಳ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು. ನಾಯಿಯು ಮೊಲವೊಂದನ್ನು ಹಿಡಿಯು

ವಾಗ ಹೊಂದಿರುವ ಭಾವನೆ ಕ್ರೌರ್ಯ ಪ್ರೇರಿತವಾದುದಾಗಿರುವುದಿಲ್ಲ. ಸಿಂಹವು ತನ್ನ ಬೇಟೆಯ ಮೇಲೆ ನೆಗೆಯುವ ನಾಟಕೀಯ ಸಂದರ್ಭಗಳನ್ನು ಸೆರೆಹಿಡಿದಿರುವ ಅನೇಕ ಛಾಯಾಚಿತ್ರಗಳು ಸಿಂಹವು ಕ್ರೌರ್ಯ ಪ್ರೇರಿತವಾಗಿಲ್ಲದಿರುವುದನ್ನು ತೋರುತ್ತವೆ. ಗುಟುರು ಹಾಕುವುದು, ಕಿವಿಗಳನ್ನು ಹಿಂದಕ್ಕೆ ಚಾಚುವುದು ಈ ಮುಂತಾದ ಹೋರಾಟದ ಲಕ್ಷಣಗಳು ಬೇಟೆಗಾರ ಪ್ರಾಣಿಗಳಲ್ಲಿ ಬೇಟೆಯು ಪ್ರತಿರೋಧವನ್ನು ತೋರಿಸಿದಾಗ ಮಾತ್ರ ಉಂಟಾಗುತ್ತವೆ. ಈ ಲಕ್ಷಣಗಳು ಕೂಡ ಬೇಟೆಯನ್ನು ಹೆದರಿಸುವ ಮಾರ್ಗೋಪಾಯಗಳು ಮಾತ್ರವಾಗಿರುತ್ತವೆ.

ಡಬ್ಲ್ಯೂ.ಎಂ ಎಸ್. ರಸೆಲ್ ಮತ್ತು ಸಿ. ರಸೆಲ್ಲರು ತಿಳಿಸುವಂತೆ ಮಾಂಸಾಹಾರಿಗಳಾದ ಪ್ರೈಮೇಟುಗಳು ಸಸ್ಯಾಹಾರಿಗಳಾದ ಪ್ರೈಮೇಟುಗಳಿಗಿಂತ ಹೆಚ್ಚು ಕ್ರೂರಿಗಳು ಮತ್ತು ಅವು ತಮ್ಮ ಪ್ರಭೇದದ ಸದಸ್ಯ ಪ್ರಾಣಿಗಳನ್ನೇ ಘಾತಿಸುವಂತಹವು ಆಗಿವೆ ಎಂದು ತೋರಿಸಲು ಯಾವ ಆಧಾರಗಳೂ ಇಲ್ಲ. ಮನುಷ್ಯನನ್ನೇ ಕುರಿತು ಹೇಳುವುದಾದರೆ, ಬೇಟೆಯಾಡಿ ಜೀವಿಸುವ ಮನುಷ್ಯ ಪಂಗಡಗಳು ಬೇಸಾಯದಿಂದ ಬದುಕುವ ಸಸ್ಯಾಹಾರಿ ಪಂಗಡಗಳಿಗಿಂತ ಹೆಚ್ಚು ಕ್ರೂರವಾದವುಗಳು ಎಂದು ಹೇಳಲು ಯಾವ ಆಧಾರಗಳೂ ಇಲ್ಲ. ಬೇಟೆಯಾಡುವ ಪಂಗಡಗಳ ಜನ ಕೆಲವೊಮ್ಮೆ ಯೋಧರಂತೆ ತೋರಬಹುದು : ಆದರೆ ಹಳೆಯ ಶಿಲಾಯುಗದಿಂದಲೂ ಬೇಟೆಯಾಡಿಯೇ ಬದುಕುತ್ತಿರುವ ಕೆಲವು ಎಸ್ಕಿಮೋಗಳಿಗಿಂತ ಶಾಂತವಾದ ಮಾನವ ಪಂಗಡಗಳು ಇನ್ನಾವುವೂ ಇಲ್ಲ... ಇನ್ನು ಇತಿಹಾಸದಲ್ಲಿ ದಾಳಿಕೋರತನಕ್ಕೆ ಹೆಸರಾದ ಸುಮೇರಿಯದ ಪಂಗಡ ಇದಕ್ಕೆ ತದ್ವಿರುದ್ಧವಾದ–ಅತ್ಯಂತ ನಿಷ್ಠ ಸಸ್ಯಾಹಾರಿಯಾದುದು ! ಅದರಂತೆ ಹಿಂದೂಗಳಲ್ಲಿನ ಕೆಲವು ಪಂಗಡಗಳು ಕೂಡ... ಆದರೆ ಈ ಪಂಗಡಗಳಲ್ಲಿ ಹಿಂಸೆ ಇಲ್ಲವೇ ? ಯಾದವೀ ಕಲಹಗಳಿಲ್ಲವೇ ?

ಲಾರೆಂಝ್ ಈ ಹಿಂಸ್ರಕ ಪ್ರವೃತ್ತಿಯನ್ನು ಕುರಿತು ಶಿಷ್ಟವಾದ ಇನ್ನೊಂದು ವಾದ ಮಂಡಿಸುತ್ತಾನೆ. ಅವನ ವಾದದ ಸಾರ ಹೀಗಿದೆ: ಮನುಷ್ಯನು ಆಯುಧಗಳನ್ನು ತಯಾರಿಸತೊಡಗಿದಂತೆಯೇ ಅವನ ಪ್ರವೃತ್ತಿ ಮತ್ತು ಬುದ್ಧಿಶಕ್ತಿಗಳು ಪರಸ್ಪರ ಕೊಂಡಿ ಕಳಚಿಕೊಂಡವು. ಆಯುಧಗಳ ತಯಾರಿಕೆಯು ಬುದ್ಧಿಶಕ್ತಿಯ ಸೃಷ್ಟಿಶೀಲತೆ...ಮಿದುಳು ಮತ್ತು ಕೈಗಳ ಸಂತುಲಿತ ಕ್ರಿಯಾಸರಣಿಯ ಫಲ. ನೆನಪು ಮತ್ತು ಯೋಜನಾಶೀಲತೆಯಿಂದ ಪಕ್ವಗೊಂಡ ಕಣ್ಣಿನ ನಿರೀಕ್ಷಣಾ ಶಕ್ತಿ ಮತ್ತು ಬೆರಳುಗಳ ರಚನಾಕೌಶಲ್ಯ ಇವುಗಳ ಪರಸ್ಪರ ಸಹಕಾರದಿಂದ ಆಯುಧಗಳ ರಚನೆ ಸಾಧ್ಯವಾಯಿತು. ಕಣ್ಣು ಮತ್ತು ಬೆರಳುಗಳ ನಡುವಿನ ಸಹಕಾರ ಸಾಧ್ಯವಾದದ್ದು ಮಿದುಳಿನಲ್ಲಿ ಹೊಸದಾಗಿ ಬೆಳೆದ ತೊಗಟೆಯಿಂದ (Neo Cortex). ಆದರೆ ಈ ಹೊಸ ಮಿದುಳಿನ ಕಾರ್ಯಶೀಲತೆಯಿಂದ ಉತ್ಪನ್ನಗೊಂಡ ಆಯುಧಗಳ ಬಳಕೆಯು ಹಳೆಯ

ಮೆದುಳಿನ ಭಾವಾವೇಶ ಮತ್ತು ನಂಬಿಕೆಗಳ ಪ್ರೇರಣೆಗಳಿಂದ ನಿಯಂತ್ರಿತವಾಗಿತ್ತು. ಈ ಹಳೆಯ ಮೆದುಳು ಆಯುಧಗಳ ಬಳಕೆಯ ಬಗೆಗೆ ಸಂಯಮದ ಶಕ್ತಿ ಹೊಂದಿರಲಿಲ್ಲ, ಮತ್ತು ಇಂಥ ಈ ಹಳೆಯ ಮೆದುಳಿನ ಭಾವಪ್ರಕ್ರಿಯೆಯ ಮೇಲೆ ಹೊಸ ಮೆದುಳು ನಿಯಂತ್ರಣ ಹೊಂದಿರಲಿಲ್ಲ. ಅಂದರೆ ಮನುಷ್ಯನ ಹಿಂಸ್ರಕ ಪ್ರವೃತ್ತಿಯ ಬೇರು ಇರುವುದು ಅವನ ಮೆದುಳಿನಲ್ಲಿ. ಇಂಥ ಹಿಂಸ್ರಕ ಪ್ರವೃತ್ತಿಯ ಹಿನ್ನೆಲೆಯಲ್ಲಿರುವುದು ಹಳೆ ಮತ್ತು ವಿಪರೀತವಾಗಿ ಬೆಳೆದ ಹೊಸ ಮೆದುಳು ಇವುಗಳ ನಡುವೆ ಇರುವ ಪರಸ್ಪರ ಅಸಹಕಾರದ ಅನಿಯಂತ್ರಿತವಾದ ಪರಿಸ್ಥಿತಿ.

ಹಾಗೆ ನೋಡಿದರೆ, ಭರ್ಜಿ–ಬಾಣಗಳಿಂದ ಪಡೆದುಕೊಂಡ ಶಕ್ತಿಯ ಅರಿವು ಮನುಷ್ಯನಲ್ಲಿ ತನ್ನ ಬಾಂಧವರನ್ನೇ ಘಾತಿಸುವಂತಹ ಹಿಂಸ್ರಕ ಪ್ರವೃತ್ತಿಯನ್ನು ಬೆಳೆಸಬೇಕಾಗಿರಲಿಲ್ಲ. ಎಸ್ಕಿಮೋಗಳಲ್ಲಿ ಕಂಡುಬರುವಂತೆ ಇದಕ್ಕೆ ವಿರುದ್ಧವಾದ ಪರಿಣಾಮವೇ ಸಾಧ್ಯವಾಗಬೇಕಾಗಿತ್ತು. ಉಳಿದ ಬೇಟೆಯಾಡುವ ಪ್ರಾಣಿಗಳು ತನ್ನ ಪ್ರಭೇದದ ಬಾಂಧವರನ್ನು ಕೊಲ್ಲದಂತೆ ಒಂದು ರೀತಿಯ ನಂಬಿಕೆಯ ಬಂಧನವನ್ನು ವಿಧಿಸಿಕೊಂಡಿರುತ್ತದೆ. ಆದರೆ ಆಯುಧಗಳಿಂದ ವಿಪರೀತವಾದ ಶಕ್ತಿಯನ್ನು ಪಡೆದ ಮನುಷ್ಯ ಇಂಥ ಒಂದು ಭಾವನಾತ್ಮಕವಾದ ನಂಬಿಕೆಯ ಬಂಧನವನ್ನು ಬೆಳೆಸಿಕೊಂಡು, ತಾನು ಕ್ರೂರಿಯಾಗದಂತೆ, ತನ್ನ ಬಾಂಧವರನ್ನೇ ಕೊಲ್ಲದಂತೆ ಜೀವಿಸುವುದು ಯಾಕೆ ಸಾಧ್ಯವಾಗದೇ ಹೋಯಿತೋ ? ಮಾನವಶಾಸ್ತ್ರವು ಸೂಚಿಸುವಂತೆ ಇಂಥ ನಂಬಿಕೆಯ ಬಂಧನಗಳು ಮನುಷ್ಯನಲ್ಲಿಯೂ ಆರಂಭದಲ್ಲಿ ಬೆಳೆದವು. ಆದರೆ ಇಂಥ ನಂಬಿಕೆಗಳು ಕೇವಲ ಪಂಗಡಗಳಿಗೆ, ಜಾತಿ–ಕುಲಗಳಿಗೆ ಮಾತ್ರ ಸೀಮಿತಗೊಂಡವು. ಬೇರೆ ಪಂಗಡಗಳ ಬಗೆಗೆ, ಜಾತಿ–ಕುಲಗಳ ಬಗೆಗೆ ಇಂಥ ನಂಬಿಕೆಗಳು ಪರಿಣಾಮಕಾರಿಯಾಗಿರಲಿಲ್ಲ. ಅಂದರೆ ಸಂಕುಚಿತವಾದ ಬದ್ಧತೆಗಳು ಈ ಸಮಸ್ಯೆಯ ಹಿನ್ನೆಲೆಯಲ್ಲಿವೆ. ತನ್ನ ಪಂಗಡದ ಬಗೆಗಿನ ಬದ್ಧತೆ ಮತ್ತು ಮೋಹಗಳಿಂದ ಮನುಷ್ಯನು ಇನ್ನೊಂದು ಪಂಗಡದ ಬಗೆಗೆ ಹೆಚ್ಚು ಹೆಚ್ಚು ಕ್ರೂರಿಯಾದನು. ಮನುಷ್ಯನಿಗೆ ಪ್ರಭೇದದೊಳಗಿನ ವ್ಯತ್ಯಾಸಗಳು ಮುಖ್ಯವಾದವೇ ಹೊರತು ಪ್ರಭೇದದೊಳಗಿನ ಎಲ್ಲ ಬಾಂಧವರ ನಡುವಿನ ಸ್ನೇಹ ಸಂಬಂಧ ಮುಖ್ಯವಾಗಲಿಲ್ಲಿ. 'ಕೀಳು' ಪ್ರಾಣಿಗಳಲ್ಲಿ ತನ್ನ ಪ್ರಭೇದ ಬಾಂಧವರನ್ನು ಕೊಲ್ಲದಿರುವ ಗುಣವು ಮನುಷ್ಯನಲ್ಲಿ ಕೇವಲ ತನ್ನ ಪಂಗದಡವರನ್ನು ಕೊಲ್ಲದಿರುವಂಥ ಗುಣವಾಗಿ ವ್ಯಕ್ತಗೊಳ್ಳುತ್ತದೆ. ಇಲಿಗಳು ವಾಸನೆಯ ಮೂಲಕ ಯಾರು ತನ್ನ ಪಂಗಡದವರು, ಯಾರು ತನ್ನ ಪಂಗಡದವರಲ್ಲ ಎಂದು ಕಂಡುಕೊಳ್ಳುತ್ತಿದ್ದರೆ ಮನುಷ್ಯನಲ್ಲಿ ವ್ಯತ್ಯಾಸದ ಎಷ್ಟೊಂದು ಮಾರ್ಗಗಳಿವೆ ! ರಾಷ್ಟ್ರ, ಜನಾಂಗಗಳು, ಸಂಸ್ಕೃತಿ, ಧರ್ಮ, ಜಾತಿ, ಭಾಷೆ, ವೈಚಾರಿಕ ಬದ್ಧತೆಗಳು ಹೀಗೆ ನೂರೆಂಟು ಒಡಕುಗಳು. ಇವೆಲ್ಲ ಒಬ್ಬ ಮನುಷ್ಯನನ್ನು ಇನ್ನೊಬ್ಬನಿಗೆ ದುರ್ವಾಸನೆ ಬೀರುವವನನ್ನಾಗಿ ಮಾಡುತ್ತವೆ. ಹಿಂಸ್ರಕ ಪ್ರವೃತ್ತಿಯನ್ನು ಪ್ರೇರೇಪಿಸುತ್ತವೆ ●

ನನ್ನ ನೆನಪುಗಳು

⊕ ಆನಂದ ಕಂದ

ತಂಗಿಯ ಮದುವೆ

೧೯೧೬ರಲ್ಲಿ ಬರುವ ಯುಗಾದಿಯು ಬಂದು ಹೋಯಿತು. ಹೊಸದಿನ ಗಳಿಗೇನು ? ಬರುವ ಹಾಗೆ ಅವು ಬಂದು ಬಿಡುತ್ತವೆ. ಕಾಲಪುರುಷ ಸ್ಥಿತಪ್ರಜ್ಞ. ಯಾವ ದುಃಖದ ಪರಿವೆಯೂ ಅವನಿಗಿಲ್ಲ. ಯಾರ ಸುಖದ ಪರಿವೆಯೂ ಅವನಿಗಿಲ್ಲ. ನಮ್ಮ ಮನೆಯಲ್ಲಿ ಮಾತ್ರ ನಮ್ಮ ಹಣಮಣ್ಣನ ಅಗಲಿಕೆಯ ದುಃಖ ಮರೆಯಲಾರ ದಂತಹದು. ಆದರೂ ಕಾಲರಾಯನು ಹಾಕಿದ ತೆರೆಯ ಮೂಲಕ ದುಃಖದ ಉರಿಯ ಬಿಸಿಯು ಎಷ್ಟೋ ಮಟ್ಟಿಗೆ ತಣ್ಣಗಾಗುತ್ತ ನಡೆಯಿತು. ಈಗ ಹಿರಿಯರೆಲ್ಲರ ಮನಸ್ಸಿನಲ್ಲಿಯೂ ತಂಗಿಯ ಮದುವೆಯ ವಿಚಾರವೇ ವಿಚಾರ.

ನಮ್ಮ ಬಲರಾಮಣ್ಣನು ಮುಲ್ಕಿ ಪರೀಕ್ಷೆಯ ಅಭ್ಯಾಸಕ್ಕಾಗಿ ಮಮದಾಪುರ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಹೆಸರು ಹಚ್ಚಿಸಿ ದಿನದಿನವೂ ಅಲ್ಲಿಗೆ ಹೋಗಿ ಬರ ತೊಡಗಿದನು. ಬೆಟಗೇರಿಯಿಂದ ಮಮದಾಪುರವು ನಾಲ್ಕು ಮೈಲಿ ದೂರ. ನಿತ್ಯವೂ ಬೆಳಗಿನಲ್ಲಿ ಮಧ್ಯಾಹ್ನದ ಊಟ ಕಟ್ಟಿಕೊಂಡು ಎರಡೂ ಹೊತ್ತಿನ ಶಾಲೆಯ ಅಭ್ಯಾಸ ವನ್ನು ಮುಗಿಸಿಕೊಂಡು ಬರುತ್ತಿದ್ದನು. ಅವನ ಈ ನಿರ್ಗಮನ–ಆಗಮನಗಳು ನನಗೊಂದು ಉಪಕಾರವನ್ನು ಮಾಡಿದವು. ಮಮದಾಪುರವು ನಾಲ್ಕು ಸಾವಿರ ಜನ ಸಂಖ್ಯೆ ಇರುವ ಗ್ರಾಮ. ಅಲ್ಲಿ ಕಲಿತವರ ಸಂಖ್ಯೆಯೂ ಗಣನೀಯವಾಗಿತ್ತು. ಅನೇಕ ಜನ ತರುಣರು ಕೂಡಿ ಒಂದು ಚಿಕ್ಕ ವಾಚನಾಲಯವನ್ನು ನಡೆಸುತ್ತಿದ್ದರು. ಆ ವಾಚನಾಲಯದಲ್ಲಿ ಹೆಚ್ಚಾಗಿ ಇರುವುವು ಕತೆ–ಕಾದಂಬರಿಗಳೇ. ಗಂಭೀರ ಪುಸ್ತಕ ಗಳನ್ನು ಓದುವ ಜನರೇ ಕಡಿಮೆ. ನಮ್ಮ ಬಲರಾಮಣ್ಣನು ದಿನದಿನವೂ ಒಂದೋ–ಎರಡೋ ಪುಸ್ತಕಗಳನ್ನು ನನಗೆ ತಂದು ಕೊಡುವನು. ಒಂದೆರಡು ದಿನಗಳಲ್ಲಿಯೇ ನಾನು ಅವುಗಳನ್ನು ಓದಿ ಮರಳಿ ಕೊಡುತ್ತಿದ್ದೆ. ಹೀಗೆ ಮಮದಾಪುರದಿಂದ ಬಂದ ಗ್ರಂಥಗಳು ನನ್ನ ವಾಚನಾಭಿರುಚಿಯನ್ನು ಹೆಚ್ಚಿಸಿದವು.

ದಿ॥ ವಾಸುದೇವಾಚಾರ್ಯ ಕೆರೂರ ಅವರ 'ಇಂದಿರಾ' ಎಂಬ ಸಾಮಾಜಿಕ ಕಾದಂಬರಿಯೂ, 'ಯಮ ಮಹಾರಾಜ' ಎಂಬ ಐತಿಹಾಸಿಕ ಕಾದಂಬರಿಯೂ ನನಗೆ ಓದಲು ದೊರೆತವು. ಇವೆರಡೂ ಕಾದಂಬರಿಗಳಲ್ಲಿ ಭಾಷೆಯ ವೈಶಿಷ್ಟ್ಯವನ್ನು, ಲೇಖನ -ಶೈಲಿಯನ್ನು ನಾನು ಕಂಡುಕೊಂಡೆ. ಬಿಜಾಪುರದ ಶ್ರೀ ಆನೆಕಿಂಡಿ ಎಂಬವರು ಭಾಷಾಂತರಿಸಿದ 'ವ್ರತಧಾರಿಣಿ', 'ಮೃಣಾಲಿನಿ' ಎಂಬ ಕಾದಂಬರಿಗಳೂ ನನಗಲ್ಲಿ ಓದಲು ದೊರೆತವು. ದಿ॥ ಬಿ. ವೆಂಕಟಾಚಾರ್ಯರ 'ವಿಷವೃಕ್ಷ', 'ಮೃತ್ಮಾಯಿ', 'ಕಪಾಲಕುಂಡಲ', 'ಆನಂದಮಠ', 'ಅಡವಿಯ ಹುಡುಗಿ', 'ಕೃಷ್ಣಕಾಂತನ ಉಯಿಲು' ಎಂಬ ಬಂಗಾಲಿ ಭಾಷೆಯ ಅನುವಾದಿತ ಕಾದಂಬರಿಗಳನ್ನೂ ನಾನು ದೊರಕಿಸಿ ಓದಿದೆ. ಅವುಗಳ ಭಾಷೆಯು ನನಗೆ ಚಮತ್ಕಾರವಾದುದೆನಿಸಿತು. 'ರೋಮಾಂಚಿತನಾದನು' ಎಂಬುದಕ್ಕೆ ಪ್ರತಿಯಾಗಿ 'ನಿಗರ್ೂದಲುಳ್ಳವನಾದನು' ಎಂದು ಅದರಲ್ಲಿದ್ದುದ ಕಂಡೆ. ಕೋರ್ಟಿನಲ್ಲಿಯ ನ್ಯಾಯಗಳನ್ನು 'ಮೊಕದ್ದಮೆ' ಎಂದು ಅವರು ಬಳಸಿದ್ದರು. 'ಸಂದೇಹಾಸ್ಪದ' ಎಂಬುದಕ್ಕೆ 'ಗುಮಾನಿ' ಎನ್ನುವರು ಅಲ್ಲದೆ ಕನ್ನಡವಲ್ಲದ, ಮೈಸೂರು ಕಡೆ ಬಳಕೆಯಲ್ಲಿರುವ ಅನೇಕ ಮಾತುಗಳನ್ನು ಅವರು ತಮ್ಮ ಅನುವಾದ ದಲ್ಲಿ ಬಳಸಿಕೊಂಡಿದ್ದರು. ಮೂಲ ಕಾದಂಬರಿಗಳ ಸೊಗಸೇ ಅವುಗಳನ್ನು ಓದಿಸಿ ಕೊಂಡು ಹೋಗುತ್ತಿತ್ತು. ನಮ್ಮ ಉತ್ತರ ಕರ್ನಾಟಕದ ಸಾಮಾನ್ಯ ಜನತೆಗೆ ಅವುಗಳ ಭಾಷೆ ಸುಲಭವಾಗಿ ಅರ್ಥವಾಗುವಂತಿರಲಿಲ್ಲ. ಇನ್ನು ಬೇರೆ ಬೇರೆ ಕಾದಂಬರಿಗಳನ್ನು ಬೆಳಗಾವಿಯಲ್ಲಿ ಪ್ರಾರಂಭವಾದ ಲಿಂಗಾಯಿತ ಎಜುಕೇಷನಲ್ ಸೊಸೈಟಿಯವರ 'ಪ್ರಬೋಧ' ಎಂಬ ಸುಂದರವಾದ ಮಾಸಪತ್ರಿಕೆಯ ಮೂಲಕ ನನಗೆ ಬಲರಾಮಣ್ಣನು ಒದಗಿಸಿದನು. 'ಪ್ರಬೋಧ'-ದಲ್ಲಿಯ ಶ್ರೀ ಸಿ. ರೇ. ಸಬರದ ಎಂಬವರು ಬರೆದ ಕ್ರಮಕ್ರಮವಾಗಿ ಪ್ರಕಟವಾಗುವ 'ಹೇಮಚಂದ್ರ' ಕಾದಂಬರಿಯು ನನಗೆ ಸಿಕ್ಕಿತು. ಅವರೇ ಬರೆದ 'ಚಾಲುಕ್ಯರ ಪುಲಿಕೇಶಿ' ಎಂಬ ಐತಿಹಾಸಿಕ ಕಾದಂಬರಿಯೂ ನನ್ನ ಮನಸ್ಸನ್ನು ರಂಜಿಸಿತು.

ನಮ್ಮ ಬಲರಾಮಣ್ಣನು ಬೇರೆ ಅಪೂರ್ವ ಸಾಮಾನುಗಳನ್ನು ತಂದು ತಂದು ನಮಗೆ ಪರಿಚಯ ಮಾಡಿಕೊಡುತ್ತಿದ್ದನು. ಮಮದಾಪುರದ ಪ್ರಾಥಮಿಕ ಶಾಲೆಯು ಏಳನೇ ತರಗತಿವರೆಗೆ ಇದ್ದು, ಅದಕ್ಕಾಗಿ ಸರ್ಕಾರದಿಂದ ಅನೇಕ ಸಾಮಾನುಗಳನ್ನು ಒದಗಿಸಿದರು. ಒಮ್ಮೆ ಭೂಗೋಳದ ಮಾಡೆಲನ್ನು ನನಗಾಗಿ ತಂದು, ಮೂರು-ನಾಲ್ಕು ದಿನ ಮನೆಯೊಳಗೆ ಇಟ್ಟುಕೊಂಡು ಪೃಥ್ವಿಯಲ್ಲಿರುವ ಬೇರೆ ಬೇರೆ ಪ್ರದೇಶ ಗಳು ಪೂರ್ವ ಗೋಲಾರ್ಧದಲ್ಲಿಯೂ, ಉತ್ತರ ಗೋಲಾರ್ಧದಲ್ಲಿಯೂ ಎಲ್ಲಿ ಎಲ್ಲಿ ಇವೆ ಎಂಬುದನ್ನು ನಾನು ಅರಿತುಕೊಂಡೆನು. ಇನ್ನೊಂದು ಸಲ ದೂರದರ್ಶಕ ಯಂತ್ರ (ಸೇರ್ಬಿನ್)ವನ್ನು ಅದಕ್ಕಾಗಿ ಉಪಯೋಗಿಸುವ ಬೇರೆ ಬೇರೆ ಪ್ರದೇಶಗಳ,

ಬೇರೆ ಬೇರೆ ನಗರಗಳ ಚಿತ್ರಪಟಗಳನ್ನು ನನಗೆ ತಂದುಕೊಟ್ಟ. ಆ ಯಂತ್ರದಲ್ಲಿ ಚಿತ್ರಪಟಗಳನ್ನು ಯಥಾವತ್ತಾಗಿ ಕಂಡು ಅನೇಕ ರೀತಿಯಲ್ಲಿ ದೇಶ–ವಿದೇಶಗಳ ಪರಿಚಯವನ್ನು ಮಾಡಿಕೊಂಡೆನು. ನನ್ನ ಊನಾಂಗದ ಆಯುಷ್ಯವನ್ನು ಶಾಲೆಯಲ್ಲಿ ಕಲಿಯುವುದಕ್ಕೆ ಉಪಯೋಗಿಸದಿದ್ದರೂ ಇಂತಹ ಲೋಕಪರಿಚಯದ ಅನೇಕ ಬಗೆಯ ಪಾಠಗಳನ್ನು ಕೂತಲ್ಲಿಯೇ ಅರಿತುಕೊಂಡೆ. ಬರೆಯುವುದಕ್ಕೆ ಕೈಗಳು ಸಿದ್ಧವಿರಲಿಲ್ಲ. ನಡೆಯುವ ಕಾಲುಗಳೂ ಗದಗದನೆ ನಡುಗುತ್ತಿದ್ದವು. ಇಂತಹದರಲ್ಲಿ ಈ ಬಗೆಯಾಗಿ ನನ್ನ ವಿದ್ಯಾಭ್ಯಾಸವು ಸ್ವಯಂಪ್ರೇರಣೆಯಿಂದಲೇ ನಡೆಯಿತು.

ನಮ್ಮ ತಂಗಿಯ ಮದುವೆಯ ವಿಚಾರವೊಂದು ಗಂಭೀರವಾಗಿ ಎಲ್ಲರ ಮನಸ್ಸಿಗೂ ಅಂಟಿಕೊಂಡಿತೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ನಮ್ಮ ಅಕ್ಕನನ್ನು ಮದುವೆ ಮಾಡಿಕೊಟ್ಟಿದ್ದ ಧರಮಟ್ಟಿಯಲ್ಲಿಯೇ ಒಬ್ಬ ವರನು ಇದ್ದ. ಅವನನ್ನು ನಾವೆಲ್ಲರೂ ನೋಡಿಯೇ ಇದ್ದೆವು. ಒಳ್ಳೇ ಮನ್ಮಥನಂತಹ ರೂಪ. ಗೌರ ವರ್ಣ. ವಯಸ್ಸು ೨೪ಕ್ಕಿಂತ ಹೆಚ್ಚಾಗಿರಲಿಲ್ಲ. ಆದರೆ ಅವರ ಪರಿಸ್ಥಿತಿಯು ಬಡತನದ್ದಾಗಿತ್ತು. ನಾಲ್ಕು ಜನ ಅಣ್ಣ–ತಮ್ಮಂದಿರಿದ್ದರು. ಒಬ್ಬನದೇ ಮದುವೆಯಾಗಿದ್ದಿತು. ಅವನ ಹೆಂಡತಿಯು ವರುವರ್ಷವೂ ಮಕ್ಕಳನ್ನು ಹಡೆದು ನಾಲ್ಕನೇ ಹೆರಿಗೆಗೆ ಮೃತಳಾಗಿ ಹೋಗಿದ್ದಳು. ಆ ವರನ ಅಕ್ಕನ ಹೆಣ್ಣುಮಗುವೊಂದು ತಾಯಿಯಿಲ್ಲದ ತಬ್ಬಲಿಯಾಗಿ ಮಾವಂದಿರ ಮನೆಯಲ್ಲಿಯೇ ಬಳಿಗೆ ಹೊಂದುತ್ತಿತ್ತು. ಅವರ ಬಡತನದ ಮೂಲಕವಾಗಿಯೇ ಯಾರೂ ಹೆಣ್ಣು ಕೊಡಲು ಮುಂದುವರಿದು ಬರುತ್ತಿರಲಿಲ್ಲ. ನಮ್ಮ ಅಕ್ಕ, ಅಕ್ಕನ ಗಂಡ ಸೇರಿ ಆ ವರನ ವಾಸ್ತವ ಪರಿಸ್ಥಿತಿಯನ್ನು ನಮಗೆ ವಿವರಿಸಿ ಹೇಳಿದರು. ಅವನು ಧರಮಟ್ಟಿಯ ಇನಾಮು ಗ್ರಾಮದ ಜಮೀನುಗಳಲ್ಲಿ ಒಂದು–ಮೂರನೇ ಅಂಶದ ಭಾಗದವನಂತೆ. ಧರಮಟ್ಟಿಯಲ್ಲಿ ಅವನಿಗೆ ಭೂಮಿ–ಸೀಮೆಯು ಕಡಿಮೆ ಇಲ್ಲವೆಂದೂ ಆದರೆ ಹಿಂದಿನ ಹಿರಿಯರು ಬಹುಕಾಲದ ಹಿಂದೆ ಅದನ್ನು ಅಡವು ಹಾಕಿ ಸಾಲ ಮಾಡಿರುವರೆಂದೂ, ಇಲ್ಲದಿದ್ದರೆ ಸಾಕಷ್ಟು ಸ್ಥಿತಿವಂತರೆಂದೂ ಹೇಳಿದರು. ನಿಜವಾದ ಪರಿಸ್ಥಿತಿಯೂ ಹಾಗೆಯೇ ಇದ್ದಿತು. ಬಹಳ ಜಮೀನುಗಳು ಸಾಹುಕಾರರ ಸಾಲದಲ್ಲಿ ಅಡಕವಾಗಿದ್ದು, ಒಂದೆರಡು ತೋಟಗಳು ಮಾತ್ರ ಉಳಿದು ಅವುಗಳ ಆದಾಯದಲ್ಲಿ ತಿಟಿಮಿಟಿಯಾಗಿ ಸಂಸಾರವು ಸಾಗುವಂತಿತ್ತು.

ಆದರೆ ಒಂದು ತಮಾಷೆಯ ಸಂಗತಿ. ಅವರು ಆಗಸನಿಗೆ ಒಂದು ಹೊಲವನ್ನು ಕೊಟ್ಟುದರಿಂದ ವರ್ಷದುದ್ದಕ್ಕೂ ಅವನು ಅವರ ಮನೆಯ ಬಟ್ಟೆಗಳನ್ನು ತೊಳೆದು ಕೊಡುವನು. ಒಕ್ಕಲಗಿತ್ತಿಯಾದ ತಾಯವ್ವನೂ ಒಂದು ಹೊಲವನ್ನು ಉಣ್ಣುತ್ತಾ ಅವರ ಮನೆಯ ಎಲ್ಲ ಕೆಲಸ– ಕಾರ್ಯಗಳನ್ನು ಮಾಡುತ್ತಿದ್ದಳು. ಮುಸುರೆಯಾಕೆಗೆ

ಹಿಂದಿನ ಹಿರಿಯರೇ ಒಂದು ಹೊಲವನ್ನು ಕೊಟ್ಟು ಮುಸುರೆಯ ಪಾತ್ರೆಗಳನ್ನು ತೊಳೆಯುವ ಚಿಂತೆಯನ್ನು ಬಿಡಿಸಿದ್ದರು. ಅಲ್ಲದೆ ಓಲೆಕಾರನನ್ನು ಹೊಲ ಕೊಟ್ಟು ಸಲಹಿದ್ದರಿಂದ ಅವನು ಕರೆದಾಗ ಬಂದು, ಹೇಳಿದ ಕೆಲಸಗಳನ್ನು ಮಾಡಿಹೋಗುತ್ತಿದ್ದನು. ಇದೆಲ್ಲವೂ ನಮಗೆ ಗೊತ್ತಾಯಿತು. ಬಾಯಲ್ಲಿ ನಮಗೂ ನೀರು ಬಿಟ್ಟವು, ಆದರೆ ಯಾವ ವೆಚ್ಚವಿಲ್ಲದೆಯೂ ಮದುವೆ ಹೇಗಾಗಬೇಕು ? ಆ ಮನೆಗೆ ಕೊಡಲು ಯಾವ ಆತಂಕಗಳು ಇಲ್ಲವೆನಿಸಿದರೂ ಮದುವೆ ಮಾಡಿಕೊಡುವ ವೆಚ್ಚದ ಭಾರವನ್ನು ವಹಿಸುವಂತಹ ಪರಿಸ್ಥಿತಿಯಲ್ಲಿ ನಾವೆಲ್ಲಿ ಇದ್ದೆವು ? ಇದನ್ನು ತಿಳಿದು ನಮ್ಮ ಅಕ್ಕನ ಗಂಡ, ಅಕ್ಕ ಕೂಡಿ ಅವರೊಂದಿಗೆ ಯೋಚನೆ ಮಾಡಿ ಎರಡೂ ವೆಚ್ಚವನ್ನು ತಾವೇ ನೋಡಿಕೊಳ್ಳುವೆವೆಂದೂ, ನೀವೂ ಕನ್ಯೆಯೊಂದಿಗೆ ಮದುವೆಗೆ ಬಂದರೆ ಸಾಕೆಂದೂ, ಇದಕ್ಕೆ ವರಪಕ್ಷದವರು ಸಂತೋಷದಿಂದ ತಮ್ಮ ಒಪ್ಪಿಗೆ ಇತ್ತಿದ್ದಾರೆಂದೂ ನಮಗೆ ಹೇಳಿದರು. ನಮ್ಮ ಮನಸ್ಸು ನೊಂದುಕೊಂಡಿತಾದರೂ ಅನಿವಾರ್ಯವಾಗಿ ನಮ್ಮ ತಂಗಿಯನ್ನು ಆ ಮನೆತನಕ್ಕೆ ಕೊಡುವುದಾಗಿ ನಾವು ನಮ್ಮ ಒಪ್ಪಿಗೆಯನ್ನಿತ್ತೆವು, ಅವರು ಕಾರ್ತಿಕ ಮಾಸದಲ್ಲಿಯೇ ಬಂದು ಕನ್ಯಾ–ನಿಶ್ಚಯದ ಸಂಪ್ರದಾಯವನ್ನು ಮಾಡಿಕೊಂಡು ಹೋದರು ಬೀಗರಾಗಿ ಬಂದುದರಿಂದ ಅವರಿಗೆ ನಾವು ನಮ್ಮ ಪರಿಸ್ಥಿತಿಯನ್ನು ಗಣಿಸದೆ ಸವಿಯೂಟವನ್ನು ಮಾಡಿ ಸ್ವಾಗತಿಸುವ ಸಮಾರಂಭವನ್ನು ಮಾಡಿದೆವು. ಮುಂದೆ ಮಾರ್ಗಶೀರ್ಷ ಮಾಸದಲ್ಲಿಯೇ ಮದುವೆಯ ಮುಹೂರ್ತವನ್ನು ಗೊತ್ತು ಮಾಡಿದರು. ನಮಗೆ ಮದುವೆಗೆ ಹೋಗುವುದಕ್ಕಾಗಿ ಚಕ್ಕಡಿಗಳನ್ನು ಆ ವರ ಪಕ್ಷದವರೇ ಕಳುಹಿದರು.

ಮದುವೆಗಾಗಿ ಉಡುಪಣ್ಣನನ್ನು ಅವನ ಹೆಂಡತಿಯನ್ನು ಬರಲು ಒತ್ತಾಯ ಪಡಿಸಿದೆವು. ಆದರೆ ಇನ್ನೂ, ಬೇರೆಯಾದ ಜಂಭದಲ್ಲಿಯೇ ಇದ್ದುಕೊಂಡಿದ್ದ ಅವರು ಹೊರಮಾತುಗಳನ್ನಾಡಿ, ತಮಗೆ ಬರಲಾಗುವುದಿಲ್ಲವೆಂದು ಹೇಳಿದರು, ನಾವೆಲ್ಲರೂ ಕನ್ಯೆಯೊಡನೆ ಧರಮಟ್ಟಿಗೆ ಹೋದೆವು. ಮೊದಲ ದಿನ ದೇವರ ಸಮಾರಾಧನೆಯಾಯಿತು. ಅಂದೆಯೇ ರಾತ್ರಿ ಸೀಮಂತ ಪೂಜೆ, ಬಿಸಿಲೂಟಗಳು ನಡೆದವು. ಕನ್ಯಾ ಪಕ್ಷದವರು ವಹಿಸಿಕೊಳ್ಳಬೇಕಾದ ಆ ಹೊಣೆಯನ್ನು ವರಪಕ್ಷದವರೇ ವಹಿಸಿಕೊಂಡು ಮಾಡಿದರು. ಒಂದು ಸಮಸ್ಯೆಯು ಕಾಡತೊಡಗಿತು. ಮರುದಿನ ಬೆಳಗಿನಲ್ಲಿ ಮುರಗೆಯ ಸ್ನಾನವಾದ ಮೇಲೆ ಪುಣ್ಯಾಹವಾಚನ ಕಾರ್ಯವು ನಡೆಯಬೇಕಾಗಿತ್ತು. ಅದಕ್ಕೆ ದಂಪತಿಗಳ ಜೋಡೊಂದು ಬೇಕಲ್ಲ. ನಮ್ಮ ಮನೆಯಲ್ಲಿ ಮಂಗಲವತಿಯರು ಒಬ್ಬರೂ ಇರಲಿಲ್ಲ. ನಮ್ಮ ರಾಘಣ್ಣನ ಹೆಂಡತಿಯು ಅಲ್ಲಿಯೇ ಇದ್ದಳು. ಅವಳನ್ನು ಪುಣ್ಯಾಹವಾಚನಕ್ಕೆ ಕುಳಿತುಕೊಳ್ಳಬೇಕೆಂದು ಒಪ್ಪಿಗೆಯನ್ನು ಕೇಳಲಾಯಿತು. ಆದರೆ

ವಿಷಸರ್ಪದ ದ್ವೇಷವು ಹೃದಯದೊಳಗೆ ಇದ್ದ ಆ ಹೆಣ್ಣುಮಗಳು ಅದಕ್ಕೆ ಒಪ್ಪಲಿಲ್ಲ. ಕೊನೆಗೆ ಪ್ರಯತ್ನಮಾಡಿ ಆ ಊರಲ್ಲಿರುವ ಕನ್ನಡ ಶಾಲೆಯ ಮಾಸ್ತರರನ್ನು ಒಪ್ಪಿಸಿದೆವು. ಅವರ ಹೆಸರು ಗೋಪಾಲಾಚಾರ್ಯ ಕಟ್ಟಿ ಎಂದು. ಅವರು ತಮ್ಮ ಹೆಂಡತಿಯೊಂದಿಗೆ ಬಂದು ಪುಣ್ಯಾಹವಾಚನದಂತಹ ಪುಣ್ಯದ ಕಾರ್ಯವನ್ನು ಜರುಗಿಸಿ ಕೊಡಲು ಒಪ್ಪಿದರು. ಆ ಸಮಸ್ಯೆಯೂ ಬಗೆಪರಿವಂತಾಯಿತು. ಮುಂದೆ ಮಂಟಪ ದೇವತಾ ಸ್ಥಾಪನೆಯನ್ನು ನಾವು ಉಳಿದುಕೊಂಡ ಮನೆಯಲ್ಲಿಯೇ ಮಾಡಿ ಮುಹೂರ್ತದ ವೇಳೆಗೆ ಸರಿಯಾಗಿ ತಂಗಿಯನ್ನು ವರನ ಮನೆಗೆ ಕರೆದುಕೊಂಡು ಹೋಗಲಾಯಿತು. ಸಂಪ್ರದಾಯದಂತೆ ಮದುವೆಯ ಕಾರ್ಯಗಳೆಲ್ಲ ಯಥಾಕ್ರಮವಾಗಿ ನಡೆದವು. ಅಂದಿನ ಊಟವೂ ಆಯಿತು.

ಮರುದಿನವೇ ಕಳುಹೂಟ. ಅದರ ವೆಚ್ಚವೂ ನಮ್ಮ ತಲೆಯ ಮೇಲೆ ಬೀಳಲಿಲ್ಲ. ಮದುವೆಯ ಕಾರ್ಯ ಮುಗಿಯಿತಾದರೂ ಒಂದು ವಿಷಯವನ್ನು ಮರೆಯುವಂತಿಲ್ಲ. ಆ ವರನ ತಮ್ಮನ ಬಳಿಯಲ್ಲಿ ಕನ್ನಡ ಏಳನೇ ಪುಸ್ತಕವೊಂದಿದ್ದಿತು. ನಾನು ಮನೆಯಲ್ಲಿಯೇ ಕುಳಿತು ಮುಲ್ಕಿ ಪರೀಕ್ಷೆಯ ಅಭ್ಯಾಸ ನಡೆಯಿಸಬೇಕೆಂದು ಮನಸ್ಸಿದ್ದುದರಿಂದ ಆ ಪುಸ್ತಕವನ್ನು ತೆಗೆದುಕೊಂಡು ಬೆಟಗೇರಿಗೆ ಮರಳಿ ಬಂದೆನು. ಬಂದೆನು ಎಂದು ಏಕವಚನದಲ್ಲಿಯೇ ಏಕೆ ಹೇಳಬೇಕು ? ಮದುವೆಗೆ ಹೋದವರೆಲ್ಲರೂ ಮರಳಿ ಬಂದೆವೆಂದು ಸ್ಪಷ್ಟವಾಗಿಯೇ ಹೇಳಬಹುದು. ನಮ್ಮ ಬಲರಾಮಣ್ಣನ ಮುಲ್ಕಿ ಪರೀಕ್ಷೆಯ ಅಭ್ಯಾಸವು ನಾಲ್ಕು ದಿನ ತಡೆದು ನಿಂತಿದ್ದರೂ, ಮದುವೆ ಮುಗಿಸಿಕೊಂಡು ಮರಳಿ ಬಂದ ಮೇಲೆ ಅವನ ಮಮದಾಪುರದ ನಿರ್ಗಮನ–ಆಗಮನಗಳು ಮೊದಲಿನಂತೆಯೇ ಸಾಗಿದವು.

ನಮ್ಮ ಬಲರಾಮಣ್ಣನ ಸ್ವಭಾವವನ್ನು ನಾನು ಎಂದಿನಿಂದಲೋ ಅರಿತುಕೊಂಡಿದ್ದೆ. ಅವನಿಗೆ ಅಭ್ಯಾಸದ ಪುಸ್ತಕಗಳನ್ನು ತೆರೆದು ತಾನೇ ಓದುವ ರೂಢಿಯೇ ಇರಲಿಲ್ಲ. ಆದರೆ ಅವನ ನೆನಪಿನ ಶಕ್ತಿ ಅಗಾಧವಾದುದು. ಯಾರಾದರೂ ಒಂದು ವಿಷಯವನ್ನು ಅವನ ಮುಂದೆ ಓದಿ ಹೇಳಿದರೆ ಸಾಕು. ಅದು ಅವನ ಮನಸ್ಸಿನ ಮೇಲೆ ವಜ್ರಲೇಪದಂತೆ ನೆಲೆಸುತ್ತಿತ್ತು. ಆದರೆ ಮಮದಾಪುರದ ಎಲ್ಲ ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಗಳೂ ತಮ್ಮ ತಮ್ಮ ಅಭ್ಯಾಸದಲ್ಲಿ ತೊಡಗಿರುವಾಗ ಇವನ ಮುಂದೆ ಅಭ್ಯಾಸದ ಪುಸ್ತಕಗಳನ್ನು ಯಾರು ಓದಿ ಹೇಳಬೇಕು ? ನನಗೆ ಮೊದಲೇ ಎನಿಸಿದ್ದಿತು–ಅವನು ಮುಲ್ಕಿ ಪರೀಕ್ಷೆಯಲ್ಲಿ ಪಾಸಾಗುವುದು ಶಕ್ಯವೇ ಇಲ್ಲವೆಂದು. ಅದರಂತೆಯೇ ಆ ಸಪ್ಟಂಬರದಲ್ಲಿ ನಡೆದ ಮುಲ್ಕಿ ಪರೀಕ್ಷೆಯ ಪರಿಣಾಮ ಪತ್ರಿಕೆಯಲ್ಲಿ ಅವನು ಉತ್ತೀರ್ಣನಾದ ಬಗ್ಗೆ ಹೆಸರೇ ಬಂದಿರಲಿಲ್ಲ. ಅದಕ್ಕಾಗಿಯೇ ಊನಾಂಗದ

ನಾನಾದರೂ ಅಭ್ಯಾಸ ಮಾಡಿ ಆ ಪರೀಕ್ಷೆಯನ್ನು ಪಾಸಾಗಬೇಕೆಂದು ನಿರ್ಣಯಿಸಿದೆನು. ಅದಕ್ಕಾಗಿ ಗೋಖಲೆ ಗಣಿತ ಮೂರನೇ ಭಾಗದೊಳಗಿನ ಎಲ್ಲ ಲೆಕ್ಕಗಳನ್ನೂ ಬಿಡಿಸ ತೊಡಗಿದೆನು. ತಿಳಿಯದ ಲೆಕ್ಕಗಳಿಗಾಗಿ ನಮ್ಮ ಚಿಕ್ಕಮ್ಮನ ಮಗನನ್ನು ಕೇಳಿ ತಿಳಿದು ಕೊಳ್ಳುತ್ತಿದ್ದೆನು. ನಮ್ಮ ಚಿಕ್ಕಮ್ಮನ ಮಗನು ಟ್ರೇನಿಂಗ್ ಕಾಲೇಜಿನಲ್ಲಿ ಎರಡನೇ ವರ್ಷದ ಪರೀಕ್ಷೆಯಲ್ಲಿ ಪಾಸಾದವನು. ಆದರೆ ಕಾಲೇಜಿನ ಪರೀಕ್ಷೆಯಲ್ಲಿ ಪಾಸಾದರೂ ಅದಾದ ಮೇಲೆ ನಡೆಯುವ ಡಾಕ್ಟರ್ ಪರೀಕ್ಷೆಯಲ್ಲಿ ಫೇಲಾಗಿದ್ದನು. ಅವರ ಡಾಕ್ಟರರು ಒಂದು ಅವಧಿಯನ್ನು ಕೊಟ್ಟು ಅಷ್ಟರಲ್ಲಿಯೇ ದೃಷ್ಟಿದೋಷವನ್ನು ಸುಧಾರಿಸಿಕೊಳ್ಳಬೇಕೆಂದು ಅಲ್ಲದೆ ಕಣ್ಣಿಗೆ ಹತ್ತುವ ನಂಬರಿನ ಕನ್ನಡಕವನ್ನು ತೆಗೆದು ಕೊಳ್ಳಬೇಕೆಂದು ಹೇಳಿದ್ದರಿಂದ ಅವಧಿ ಮುಗಿಯುವವರೆಗೆ ಆತ ನಮ್ಮೂರಲ್ಲಿಯೇ ಬಂದು ವಾಸವಾಗಿದ್ದನು. ಅವನ ಡಾಕ್ಟರ್ ಪರೀಕ್ಷೆಯ ಅನುತ್ತೀರ್ಣತೆಯು ನನಗೆ ಉಪಕಾರಕವಾಗಿ ಪರಿಣಮಿಸಿತು. ನನಗೆ ತಿಳಿಯದ ವಿಷಯಗಳನ್ನೆಲ್ಲ ಅವನಿಂದ ಕೇಳಿ ತಿಳಿದುಕೊಂಡು ಅಭ್ಯಾಸವನ್ನು ಮುಂದುವರಿಸಿದೆನು.

ನಮ್ಮ ಬಲರಾಮಣ್ಣನು ಆ ವರ್ಷವೂ ಮುಲ್ಕಿ ಪರೀಕ್ಷೆಗೆ ಕುಳಿತುಕೊಳ್ಳ ಬೇಕೆಂಬ ಯೋಚನೆಯಲ್ಲಿದ್ದ. ನಮ್ಮ ಊರವನೇ ಆದ ಇನ್ನೊಬ್ಬ ವಿದ್ಯಾರ್ಥಿ ಪ್ರ. ಗೋ. ಕುಲಕರ್ಣಿ ಎಂಬ ವಿದ್ಯಾರ್ಥಿಯೂ ನಮ್ಮ ಜೊತೆಗೆ ಅಭ್ಯಾಸಕ್ಕಾಗಿ ಬರ ತೊಡಗಿದನು. ಅವನು ಕ್ರಮವಾಗಿ ಶಾಲೆಯಲ್ಲಿ ಓದುತ್ತ ಬಂದವನಾದುದರಿಂದ ಯಾವ ವಿಷಯವೂ ಅವನಿಗೆ ಕಠಿಣವಾಗಿರಲಿಲ್ಲ. ನಾನು ಮಾತ್ರ ೧೯೧೨ರಲ್ಲಿಯೇ ಶಾಲೆಬಿಟ್ಟು ಮನೆಯಲ್ಲಿ ಕುಳಿತುದರಿಂದ ಎಲ್ಲ ವಿಷಯಗಳೂ ನನಗೆ ಕಠಿಣವಾಗಿ ತೋರಿ ದವು. ಆದರೂ ಉತ್ಕಟವಾದ ಭಾವನೆಯಿಂದ ಪುಸ್ತಕಗಳನ್ನು ಅಭ್ಯಸಿಸತೊಡಗಿದೆ, ನನಗೆ ಕನ್ನಡ ಭಾಷೆಯ ಅಭ್ಯಾಸವು ಕಠಿಣವಾಗಿರಲಿಲ್ಲ. ಗಣಿತದಲ್ಲಿಯಂತೂ ನಾನು ನಮ್ಮ ಹಣಮಣ್ಣನ ಸ್ನೇಹಿತರಿಂದ 'ಆಧುನಿಕ ರಾಮಾನುಜಂ' ಎಂಬ ಬಿರುದನ್ನು ಪಡೆದಿದ್ದೆ. ನಿಬಂಧ ಲೇಖನವೂ ನನಗೆ ಬೇಕಾದ ವಿಷಯವಾಗಿದ್ದಿತು. ಮಿಕ್ಕ ಇತಿ ಹಾಸ, ಭೂಗೋಲ, ಆರೋಗ್ಯ ವಿಜ್ಞಾನ, ಜಮಾ-ಖರ್ಚು ಈ ವಿಷಯವನ್ನೆಲ್ಲ ನಾನು ಬಲ್ಲವರಿಂದ ಕೇಳಿ ಕಲಿತುಕೊಳ್ಳಬೇಕಾಗಿತ್ತು. ನಮ್ಮ ಚಿಕ್ಕಮ್ಮನ ಮಗನಿಂದಲೂ ನನ್ನ ಗೆಳೆಯನಾದ ಪ್ರ. ಗೋ. ಕುಲಕರ್ಣಿ ಎಂಬುವರ ಸಹಕಾರದಿಂದಲೂ ಆ ಎಲ್ಲ ವಿಷಯಗಳನ್ನು ನನ್ನವಾಗಿ ಮಾಡಿಕೊಂಡೆ. ಮನೆಯಲ್ಲಿ ಅಭ್ಯಾಸ ಮಾಡುವಾಗ ನಾನು ಮತ್ತು ಪ್ರ. ಗೋ. ಕುಲಕರ್ಣಿಯವರು ಗಟ್ಟಿಯಾಗಿಯೇ ಪುಸ್ತಕಗಳನ್ನು ಓದುತ್ತಿದ್ದೆವು. ಅದು ನಮ್ಮ ಬಲರಾಮಣ್ಣನಿಗೆ ತುಂಬ ಪಥ್ಯಕರವಾಗಿ ತೋರಿತು. ಏಕೆಂದರೆ ನಾವು ಒಮ್ಮೆ ಓದಿದರೆ ಸಾಕು ಅದನ್ನು ಕೇಳಿದ ಅವನು ಜ್ಞಾಪಕದಲ್ಲಿಟ್ಟು ಕೊಳ್ಳುತ್ತಿದ್ದನು.

ಪರೀಕ್ಷೆಯ ಅರ್ಜಿಯನ್ನು ಕಳಿಸುವುದಕ್ಕೆ ಮೊದಲು ಮೂರು-ನಾಲ್ಕು ತಿಂಗಳ ಕಾಲವನ್ನಾದರೂ ನಾವು ಅಧಿಕೃತವಾದ ಶಾಲೆಯೊಂದರಲ್ಲಿ ಹೆಸರು ಹಚ್ಚಿ ವಿಷಯ ವನ್ನು ಅಭ್ಯಸಿಸಬೇಕಾಗಿತ್ತು. ಅದಕ್ಕಾಗಿ ನಾವು ಮೂವರು ಮಮದಾಪುರದ ಶಾಲೆಗೆ ಹೆಸರನ್ನು ಹಚ್ಚಿದೆವು. ಆಗ ನಮ್ಮ ಮೂವರಿಗೂ ಊಟದ್ದೊಂದು ಒಡೆಯಲಾರದ ಒಗಟೇ ಆಯಿತು ನಾವು ಹೋಗಿ ಅಲ್ಲಿಯ ಒಬ್ಬ ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಯ ಒಡೆತನದ ಒಂದು ಕೋಣೆಯಲ್ಲಿಯೇ ವಾಸವಾಗಿದ್ದೆವು. ನನಗಂತೂ ನಿತ್ಯವೂ ಬೆಟಗೇರಿಯಿಂದ ಮಮದಾಪುರಕ್ಕೆ ಹೋಗಿ ಬರಲು ಸಾಧ್ಯವಿರಲಿಲ್ಲ. ಪ್ರ. ಗೋ. ಕುಲಕರ್ಣಿ ಕೂಡ ಸ್ವಂತದ ಮನೆಯಿಲ್ಲದೆ ತಮ್ಮ ಚಿಕ್ಕಮ್ಮನ ಮನೆಯಿಂದ ಊಟವನ್ನು ತಂದು ವಾಸಿಸಬೇಕಾಗಿತ್ತು. ನಮ್ಮ ಬಲರಾಮಣ್ಣನು ನಡೆದಾಟಕ್ಕೆ ಬಲು ಗಟ್ಟಿಗನು. ಆದುದರಿಂದ ಪ್ರತಿ ರವಿವಾರಕ್ಕೊಮ್ಮೆ ಅವರು ಬೆಟಗೇರಿಗೆ ಹೋಗಿ ಅನ್ನವನ್ನೂ, ರೊಟ್ಟಿಯನ್ನೂ ಮಾಡಿಸಿಕೊಂಡು ಬರುತ್ತಿದ್ದರು. ಮೊದಲೆರಡು ದಿನ ಅನ್ನವನ್ನು ಉಂಡು ಮುಂದೆ ಐದು ದಿನ ತಂಗುಳ ರೊಟ್ಟಿಯನ್ನೇ ತಿಂದು ಆಗ ನಾವು ಜೀವಿಸು ತ್ತಿದ್ದೆವು. ಒಂದು ತಮಾಷೆ ಸಂಗತಿಯೆಂದರೆ ಪ್ರ. ಗೋ. ಕುಲಕರ್ಣಿಯವರ ಚಿಕ್ಕಮ್ಮನಿಗೆ ಬಹುಕಾಲ ಬಾಳುವಂತಹ ರೊಟ್ಟಿಯನ್ನು ಮಾಡಲು ಬರುತ್ತಿರಲಿಲ್ಲ. ಒಂದೆರಡು ದಿನಗಳಲ್ಲಿಯೇ ಅವು ಬೂಸರುಗಟ್ಟಿ ಮುಗ್ಗುಮುಗ್ಗಲಾಗಿ ನಾರುತ್ತಿದ್ದವು. ಆದುದರಿಂದ ಬಂದಕೂಡಲೇ ಆ ರೊಟ್ಟಿ, ಆ ಅನ್ನವನ್ನು ಮೊದಲು ತೀರಿಸಿ ಆಮೇಲೆ ನಮ್ಮ ರೊಟ್ಟಿಗಳಿಗೆ ಕೈಹಚ್ಚುತ್ತಿದ್ದೆವು. ಒಂದು ದಿನವೂ ನಮಗೆ ಬಿಸಿಯೂಟವು ಸಿಕ್ಕುತ್ತಿರಲಿಲ್ಲ. ನಿತ್ಯವೂ ತೋಟದ ಬಾವಿಗಳಲ್ಲಿ ತಣ್ಣೀರು ಸ್ನಾನ. ನಮ್ಮ ಬಟ್ಟೆ ಗಳನ್ನು ನಾವೇ ತೊಳೆದುಕೊಳ್ಳಬೇಕು. ಈ ಕಷ್ಟದೊಂದಿಗೆ ನಮ್ಮ ಮುಲ್ಕಿ ಪರೀಕ್ಷೆಯ ಅಭ್ಯಾಸವೂ ಸಾಗಿತು.

ನಮಗೆ ಕಲಿಸುವ ಶಿಕ್ಷಕರು ಮೊದಲಿನಿಂದಲೂ ನಮಗೆ ಗುರುತಿನವರು. ನಮ್ಮ ಹಣಮಣ್ಣನ ಜೊತೆಯಲ್ಲಿಯೇ ಟ್ರೇನಿಂಗ್ ಕಾಲೇಜಿನಲ್ಲಿದ್ದು ಅಭ್ಯಾಸ ಮಾಡಿದವರು. ತುಂಬ ಮುತುವರ್ಜಿಯಿಂದ ನಮಗೆ ಪಾಠಗಳನ್ನು ಕಲಿಸುತ್ತಿದ್ದರು, ಶಾಲೆಯಲ್ಲಿ ಅಷ್ಟೇ ಅಲ್ಲ, ರಾತ್ರಿಯಲ್ಲಿ ತಮ್ಮ ಮನೆಯಲ್ಲಿ ಕರೆದು ಕೂಡಿಸಿ ಸ್ವಲ್ಪ ಹೊತ್ತು ಮಾರ್ಗ ದರ್ಶನವನ್ನು ಮಾಡಿ, ಆಮೇಲೆ ನಮಗೇ ಓದಿಕೊಳ್ಳಲು ಹೇಳಿ ತಾವು ಮಲಗಲು ಹೋಗುತ್ತಿದ್ದರು. ವಾರಪರೀಕ್ಷೆಗಳು, ತಿಂಗಳ ಪರೀಕ್ಷೆಗಳು ಅನೇಕ ನಡೆದವು. ಎಲ್ಲದರಲ್ಲಿಯೂ ನಾನು ಉತ್ತೀರ್ಣನಾದೆ. ನನಗಿಂತ ಹೆಚ್ಚು ಗುಣಗಳನ್ನು ಪ್ರ. ಕುಲಕರ್ಣಿ ಪಡೆಯುತ್ತಿದ್ದ. ನಮ್ಮ ಬಲರಾಮಣ್ಣನು ಮಾತ್ರ ಖಚಿತವಾಗಿ ಆ ಪರೀಕ್ಷೆಗಳಲ್ಲಿ ಪಾಸಾಗುತ್ತಿದ್ದ. ಹೀಗೆಯೇ ಮೂರು-ನಾಲ್ಕು ತಿಂಗಳನ್ನು ಕಳೆದು

ಪರೀಕ್ಷೆಯ ಅರ್ಜಿಯನ್ನು ಕಳಿಸಿದ ಮೇಲೆ ಬೆಟಗೇರಿಗೆ ಮರಳಿ ಬಂದು ಅಲ್ಲಿಯೇ ಅಭ್ಯಾಸವನ್ನು ನಡೆಸಿದೆವು.

ಸಪ್ಟಂಬರ ತಿಂಗಳು ಬಂದಿತು. ಪರೀಕ್ಷೆಯ ದಿನಾಂಕವೂ ಸಮೀಪಿಸಿತು. ಮುಲ್ಕಿ ಪರೀಕ್ಷೆಯ ಬೆಳಗಾವಿ ಜಿಲ್ಲೆಯ ಕೇಂದ್ರವು ಬೆಳಗಾವಿಯ ಸರಕಾರಿ ಹೈಸ್ಕೂಲ್‌ನಲ್ಲಿಯೇ ನಡೆಯುತ್ತಿದ್ದಿತು. ಅದಕ್ಕಾಗಿ ನಮ್ಮ ರಾಘಣ್ಣನೂ, ನಾವಿಬ್ಬರೂ ಬೆಳಗಾವಿಗೆ ಹೊರಟೆವು. ಆಗ ಗೋಕಾಕ ರೋಡ್ ಸ್ಟೇಷನ್ನಿನಿಂದ ಬೆಳಗಾವಿಯ ಸ್ಟೇಷನ್ನಿಗೆ ಐದೂವರೆ ಆಣೆಯ ರೈಲ್ವೆ ವೆಚ್ಚವು ಇದ್ದಿತು. ನಾವು ಮೂವರೂ ಬೆಳಗಾವಿಗೆ ಹೋಗಿ ಅಲ್ಲಿ ವಾಸ ಮಾಡದೆ ಶಹಪುರದಲ್ಲಿ ಇರುವ ನಮ್ಮ ದೂರದ ನೆಂಟರಲ್ಲಿ ಬಿಡಾರ ಮಾಡಿದೆವು. ಶಹಪುರ ಮನೆಯಿಂದ ನಾವು ಪರೀಕ್ಷೆಗೆ ಕೂಡುವ ಸರಕಾರಿ ಹೈಸ್ಕೂಲೆಂದರೆ ಮೂರುವರೆ ಮೈಲು, ನಿತ್ಯವೂ ಮಳೆಯಲ್ಲಿ ನಡೆದುಕೊಂಡು ಹೋಗಬೇಕಾಗಿತ್ತು. ಆದರೆ ನಾವು ಸಮೀಪವೆಂದು ಬೆಳಗಾವಿಯಲ್ಲಿಯೇ ಬೀಡು ಬಿಟ್ಟಿದ್ದರೆ ನಮಗೆ ಇರಲು ಸ್ಥಳವೆಲ್ಲಿ ಸಿಕ್ಕುತ್ತಿತ್ತು ? ಪುಕ್ಕಟೆಯಾಗಿ ಊಟವೆಲ್ಲಿ ದೊರೆಯುತ್ತಿತ್ತು ? ಎಂತಲೇ ದೂರದ ತೊಂದರೆಯನ್ನು ಲಕ್ಷಿಸದೆ ಶಹಪುರದಲ್ಲಿಯೇ ಮನೆ ಮಾಡಿದೆವು.

ಮರುದಿನವೇ ಪರೀಕ್ಷೆಗೆ ಆರಂಭ. ನಾವು ಬೇಗನೆ ಊಟ ತೀರಿಸಿಕೊಂಡು ಹನ್ನೊಂದು ಗಂಟೆಗೆ ಸರಿಯಾಗಿ ಪರೀಕ್ಷಾ ಸ್ಥಳಕ್ಕೆ ಹೋಗಬೇಕಾಗಿತ್ತು. ಆಗ ಸಪ್ಟಂಬರ ತಿಂಗಳು. ದೊಡ್ಡ ದೊಡ್ಡ ಸೆಳಕುಗಳಿಂದ ಕೂಡಿದ ಮಳೆ ಒಂದೇ ಸವನೆ ಸುರಿಯುತ್ತಲಿತ್ತು. ಹಳ್ಳಿಯಿಂದ ಹೋದ ನಮಗೆ ಬೆಳಗಾವಿಯಲ್ಲಿ ಈಗ ಕೊಡೆಗಳ ಅಗತ್ಯವಿದೆ ಎಂಬುದು ತಿಳಿದಿರಲಿಲ್ಲ. ಊಟ ಮಾಡಿಕೊಂಡು ಮಳೆಯ ಸೆಳಕುಗಳನ್ನು ಗಣಿಸದೆ ನೆನೆದ ಬಟ್ಟೆಯಿಂದ ಹಾಗೆಯೇ ಪರೀಕ್ಷೆಗೆ ನಡೆದೆವು. ನಮ್ಮ ನಂಬರುಗಳನ್ನು ನೋಡಿಕೊಂಡು ಆ ನಂಬರುಗಳನ್ನು ಹಾಕಿದ ಸ್ಥಳದಲ್ಲಿ ಕುಳಿತುಕೊಂಡೆವು. ನಮ್ಮ ಮೂವರ ನಂಬರುಗಳೂ ಒಬ್ಬರ ಹಿಂದೆ ಒಬ್ಬರಂತೆ ಸಾಲಾಗಿ ಬಂದಿದ್ದವು. ಅಂದಿನ ಗಣಿತ ಪರೀಕ್ಷೆಯ ಪ್ರಶ್ನಪತ್ರಿಕೆಯನ್ನು ವಿದ್ಯಾರ್ಥಿಗಳಿಗೆ ಹಂಚಲಾಯಿತು. ವಿದ್ಯಾರ್ಥಿಗಳು ತಲೆಬಾಗಿ ಕುಳಿತು ವಿಚಾರ ಮಾಡುತ್ತ; ತಮ್ಮ ಉತ್ತರ ಪತ್ರಿಕೆಯಲ್ಲಿ ಗಣಿತಗಳನ್ನು ಬಿಡಿಸತೊಡಗಿದರು. ಮೂರು ತಾಸುಗಳ ಪ್ರಶ್ನಪತ್ರಿಕೆಯದು. ಎಲ್ಲರಂತೆ ಮೇಲ್ವಿಚಾರಕರ ಕೈಯಲ್ಲಿ ನಮ್ಮ ಪತ್ರಿಕೆಗಳನ್ನು ಕೊಟ್ಟು ನಾವೂ ಮನೆಗೆ ಹೊರಟೆವು.

ಅನೇಕ ವಿದ್ಯಾರ್ಥಿಗಳು ಹೋಟಲಿಗೆ ಹೋಗಿ ತಿನಿಸು ತಿಂದು ತಮ್ಮ ಹೊಟ್ಟೆಯ ಹಸಿವನ್ನು ತಗ್ಗಿಸಿಕೊಂಡರು. ಆದರೆ ನಮ್ಮ ಬಳಿಯಲ್ಲಿ ಹೋಟೆಲಿಗೆ ಹೋಗುವುದಕ್ಕೆ ರೊಕ್ಕವೆಲ್ಲಿದ್ದಿತು ! ಬೆಳಗಿನ ಊಟ ಮಾಡಿ ಹೋದವರು ರಾತ್ರಿ ೯ ಗಂಟೆಗೆ ಊಟವನ್ನು ಕಂಡೆವು. ಹೊಟ್ಟೆಯಲ್ಲಿ ಹಸಿವೆಯ ದೊಂಬರಾಟ ನಡೆದೇ ಇದ್ದಿತು. ಊಟ ತೀರಿಸಿ ಮಲಗಿ ಮರುದಿನದ ನಿಬಂಧ ಪ್ರಶ್ನಪತ್ರಿಕೆಯು ಎಂತಹದು ಬೀಳುವುದೋ

ಎಂಬ ಆಲೋಚನೆಯಲ್ಲಿಯೇ ನಿದ್ರೆಯಲ್ಲಿ ಮೈಮರೆತೆವು. ಒಂದರ ಹಿಂದೊಂದು ಪ್ರಶ್ನೆ ಪತ್ರಿಕೆಗಳು ದಿನದಿನವೂ ನಡೆದವು. ಎಲ್ಲವನ್ನೂ ನಾನು ಸರಿಯಾಗಿಯೇ ಬಿಡಿಸುತ್ತಿದ್ದೆ. ಆದರೆ ಕಂಪಿಸುವ ಕೈಗಳಿಂದ ಬರೆದ ನನ್ನ ಅಕ್ಷರಗಳು ಬಾಲಕರ ಬರಹಗಳಿಗೆ ಸಮೀಪವಾಗಿದ್ದವು. ಇಂತಹ ಬರಹವನ್ನು ನೋಡಿ ನನ್ನನ್ನು ಪಾಸು ಮಾಡಬಹುದೇ ? ಎಂಬ ಹೆದರಿಕೆ ಮತ್ತೆ ಮತ್ತೆ ನನ್ನ ಎದೆಯನ್ನು ಜುಮ್ಮೆನಿಸುತ್ತಿದ್ದಿತು.

ಭೂಗೋಲ ಪ್ರಶ್ನಪತ್ರಿಕೆ ಇದ್ದ ದಿನವಂತೂ ನಮಗೆ ಊಟ ಬೇಗನೆ ಸಿಕ್ಕಲಿಲ್ಲ. ವಿಲಂಬವಾಗಿ ಊಟವಾಗಿ ಪರೀಕ್ಷಾ ಭವನಕ್ಕೆ ಹೋಗುವುದರಲ್ಲಿಯೇ ಎಲ್ಲ ವಿದ್ಯಾರ್ಥಿಗಳಿಗೂ ಪ್ರಶ್ನಪತ್ರಿಕೆಗಳನ್ನು ಹಂಚಲಾಗಿದ್ದಿತು. ಅವರು ಪ್ರಶ್ನೆ ಪತ್ರಿಕೆಗಳನ್ನು ಮುಂದಿಟ್ಟುಕೊಂಡು ತಮ್ಮ ಉತ್ತರಗಳನ್ನು ಬರೆಯುತ್ತಿದ್ದರು. ತಡವಾಗಿ ಹೋದ ನಾವು ಹೆದರುತ್ತಲೇ ಪರೀಕ್ಷಾಭವನವನ್ನು ಪ್ರವೇಶಿಸಿದೆವು. ತಡವಾದುದರಿಂದ ನಮಗೆ ಪರೀಕ್ಷೆಗೆ ಕೂಡಲು ಎಲ್ಲಿ ತೊಂದರೆಯಾಗುವುದೋ ಎಂಬ ಹೆದರಿಕೆಯಿಂದಲೇ ನಮ್ಮ ಸ್ಥಳಕ್ಕೆ ಹೋದೆವು. ಆದರೆ ಪರೀಕ್ಷೆಯ ಮೇಲ್ವಿಚಾರಕನು ಒಳ್ಳೆಯವನಾಗಿದ್ದನು. ಯಾವ ವಿಚಾರವನ್ನೂ ಮಾಡದೆ ಪ್ರಶ್ನೆ ಪತ್ರಿಕೆಗಳನ್ನು ನಮಗೆ ಕೊಟ್ಟು ಬೇಗಬೇಗನೆ ಇದಕ್ಕೆ ಉತ್ತರಗಳನ್ನು ಬರೆಯಿರಿ ಎಂದು ಹೇಳಿದನು. ಅರ್ಧ ತಾಸು ವಿಲಂಬವಾಗಿತ್ತು. ಮೂರು ತಾಸಿನ ಪ್ರಶ್ನೆ ಕಾಗದವದು. ಉಳಿದ ವೇಳೆಯಲ್ಲಿಯೇ ಭೂಗೋಲ, ಇತಿಹಾಸ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಬೇಕು. ದೇವರ ಕರುಣೆಯಿಂದಲೋ, ನಮ್ಮ ಶ್ರಮಕ್ಕಾಗಿಯೋ ಪ್ರಶ್ನೆಗಳೆಲ್ಲವೂ ನಮಗೆ ಸುಲಭವಾಗಿ ತೋರಿದವು. ಸರಸರನೆ ಎಲ್ಲವುಗಳಿಗೂ ಉತ್ತರಗಳನ್ನು ಬರೆದೆ. ನನ್ನ ಜೊತೆಗಾರರೂ ಉತ್ತರಗಳನ್ನು ಬರೆದರು. ಮರುದಿನವೇ ಕೈ ಬರಹಗಳ–ಹಳೆಯ ಕಾಗದಗಳನ್ನು ಓದಿಸಿ ಕೇಳುವ ಪರೀಕ್ಷೆ. ನನಗೇನೂ ಅದರ ಭಯವಿರಲಿಲ್ಲ. ಏಕೆಂದರೆ ನಮ್ಮ ಮನೆಯಲ್ಲಿಯೇ ಮೂರು ಹಳ್ಳಿಯ ಕುಲಕರ್ಣಿಕೆಯ ದಫ್ತರುಗಳು. ನಮ್ಮ ಅಣ್ಣನ ಕೆಲಸವನ್ನು ಹೆಚ್ಚಾಗಿ ನಾನೇ ಮಾಡಿಕೊಡುತ್ತಿದ್ದೆ. ಆದುದರಿಂದ ಕೈ ಬರಹದ ಹಳೆಯ ಕಾಗದಗಳನ್ನು ನಾನು ಸುಲಭವಾಗಿಯೇ ಓದಿಬಿಡುತ್ತಿದ್ದೆ. ಆಯಿತು. ಆ ಪರೀಕ್ಷೆಯೂ ಮುಗಿಯಿತು,

ಮರುದಿನ ನಾವು ಬೆಟಗೇರಿಗೆ ಹೊರಡಬೇಕು, ನಮ್ಮ ರಾಘಣ್ಣ ಶಹಪುರ ನಾಯಕರ ಅಂಗಡಿಯಲ್ಲಿಯೇ ಕಾರಕೂನನಾಗಿ ಇರುವ ಮಾತನ್ನಾಡಿ ನಿರ್ಣಯಿಸಿದ್ದ. ನಾನು, ಬಲರಾಮಣ್ಣ ಇಬ್ಬರೇ ಬೆಟಗೇರಿಗೆ ಹೊರಡುವದಾಯಿತು. ನಮ್ಮ ಹಾಸಿಗೆ, ಅಭ್ಯಾಸದ ಪುಸ್ತಕಗಳ ಸಣ್ಣಪೆಟ್ಟಿಗೆ ಇವುಗಳನ್ನೆಲ್ಲ ಹೆಗಲ ಮೇಲೆ ಹೊತ್ತುಕೊಂಡೇ ನಡೆಯುತ್ತ ರೈಲ್ವೆ ಸ್ಟೇಷನ್ನಿಗೆ ಹೋದೆವು. ರೈಲು ಬಂಡಿ ಅಲ್ಲಿಂದ ಏಳೂವರೆ ಗಂಟೆಗೆ

ಹೊರಡುವದಿತ್ತು. ನಮ್ಮ ರಾಘಣ್ಣ ಶ್ರಮವಹಿಸಿ ಎರಡು ರೈಲ್ವೆ ಟಿಕೇಟುಗಳನ್ನು ಪಡೆದು ನಮ್ಮಿಬ್ಬರ ಕೈಯಲ್ಲಿಯೂ ಒಂದೊಂದನ್ನು ಕೊಟ್ಟು, ಬೀಳ್ಕೊಂಡು ಹೊರಟು ಹೋದನು. ನಾವು ಗೋಕಾವಿ ರೋಡ್ ಸ್ಟೇಷನ್ನಿನಿಂದ ೨೦ ಮೈಲು ನಡೆದುಕೊಂಡು ಹೋಗಬೇಕಾಗಿತ್ತು. ಕೈಯಲ್ಲಿ ಕೊಟ್ಟದನ್ನು ನೋಡಿದರೆ ಬರಿಯ ಎರಡು ರೈಲು ಟಿಕೇಟು. ಸ್ಟೇಷನ್ನಿನಿಂದ ಗೋಕಾವಿಗೆ ಹೋಗಲು ಟಾಂಗಾಗಳು ಇದ್ದುದು ನಮ್ಮ ರಾಘಣ್ಣನಿಗೂ ಗೊತ್ತಿತ್ತು. ಆದರೆ ಅದನ್ನು ಕೊಡುವ ವಿಚಾರವನ್ನೇ ಅವನು ಮಾಡಿರಲಿಲ್ಲ. ನಾವು ಬರಿಗೈ ಬಂಟರಾಗಿಯೇ ಉಗಿಬಂಡಿಯಲ್ಲಿ ಕುಳಿತು ಗೋಕಾವಿ ಸ್ಟೇಷನನ್ನು ತಲುಪಿ ರೈಲುಗಾಡಿಯಿಂದ ಕೆಳಗಿಳಿದೆವು.

ಸ್ಟೇಷನ್ನಿನ ಹೊರಗೆ ಹೋಗಿ ನೋಡಿದಾಗ "ಟಾಂಗಾ, ಟಾಂಗಾ" ಎಂದು ಕುದುರೆ ಗಾಡಿಯವರು ಗಿರಾಕಿಗಳನ್ನು ಕರೆಯುತ್ತಿದ್ದರು. ನಮ್ಮ ಜೊತೆಯಲ್ಲಿಯೇ ರೈಲಿಗೆ ಬಂದಿದ್ದ ನಮ್ಮ ತರಗತಿಯ ಮಿಕ್ಕ ವಿದ್ಯಾರ್ಥಿಗಳು, ಅಧ್ಯಾಪಕರು ಬಾಡಿಗೆ ಯನ್ನು ಗೊತ್ತು ಮಾಡಿ ಟಾಂಗಾಗಳಲ್ಲಿ ಕುಳಿತು ಗೋಕಾವಿಗೆ ಹೊರಟು ನಡೆದರು. ನಮ್ಮ ಕೈಯಲ್ಲಿ ಟಾಂಗಾಕ್ಕೆ ಕೊಡಲು ಹಣವೇ ಇರಲಿಲ್ಲ. ಒಬ್ಬರನ್ನೊಬ್ಬರು ನಿರು ಪಾಯದ ದೃಷ್ಟಿಯಿಂದ ನಾವು ನೋಡಿದೆವು. ಇನ್ನೇನನ್ನೂ ಮಾಡುವಂತಿರಲಿಲ್ಲ. ಆಗ ನಮ್ಮ ಬಲರಾಮಣ್ಣ ಹೋಗಿ ಒಂದು ಟಾಂಗಾ ಗಾಡಿಯನ್ನು ಗೊತ್ತು ಮಾಡಿದನು. ಅದರಲ್ಲಿ ಕುಳಿತುಕೊಳ್ಳೆಂದು ನನಗೂ ಹೇಳಿದನು. 'ಹಣವೇ ಇಲ್ಲ, ಹೇಗೆ ಕೊಡುವುದು ?' ಎಂಬ ಸಂದೇಹದಿಂದಲೇ ನಾನು ಸುಮ್ಮನೆ ನಿಂತಿರುವಾಗ ನಮ್ಮ ಬಲರಾಮಣ್ಣನು ಒತ್ತಾಯದಿಂದ ನನ್ನನ್ನು ಟಾಂಗಾದಲ್ಲಿ ಕೂಡಿಸಿದನು. ತಾನೂ ಕುಳಿತು, ಹೊಡೆಯಲು ಹೇಳಿದನು. ಒಬ್ಬೊಬ್ಬರಿಗೆ ನಾಲ್ಕಾಣೆಯಂತೆ ಕೊಡ ಬೇಕಾಗಿತ್ತು. ಮಧ್ಯೆ ರಾತ್ರಿಯಲ್ಲಿ ಹತ್ತಿದ ಗೋಕಾಕ ಮಿಲ್ಲಿನಲ್ಲಿ ನಾವೆಲ್ಲರೂ ಸ್ವಲ್ಪ ಹೊತ್ತು ತಡೆದವು.

ನಮ್ಮ ಜೊತೆಯ ವಿದ್ಯಾರ್ಥಿಗಳೂ, ಅಧ್ಯಾಪಕರೂ ಅಲ್ಲಿ ಸಿಕ್ಕುವ ತಿಂಡಿಗಳನ್ನು ಕೊಂಡು ತಿನ್ನತೊಡಗಿದರು. ನಮ್ಮ ಅಣ್ಣ. ನಾನು ಮಿಕಿ ಮಿಕಿ ಮೋರೆ ನೋಡುತ್ತ ನಿಂತುಕೊಂಡೆವು. ಜೊತೆಯವರಾರೂ ನಮಗೆ ತಿಂಡಿ ಇರಲಿಲ್ಲವೆಂಬುದನ್ನು ವಿಚಾರಿ ಸಲಿಲ್ಲ. ತಿಂಡಿಯನ್ನು ತಿಂದಾದ ಮೇಲೆ ಎಲ್ಲರೂ ಟಾಂಗಾದಲ್ಲಿ ಕುಳಿತುಕೊಂಡರು. ಎಲ್ಲರೂ ಹೋಗಿ ಗೋಕಾಕದಲ್ಲಿ ಇಳಿದೆವು. ಟಾಂಗಾದವನಿಗೆ ಕೊಡಲು ನಮ್ಮ ಬಲ ರಾಮಣ್ಣನಿಗೆ ಹಣವೆಲ್ಲಿಂದ ಬರುವುದು ? ಬಾಡಿಗೆ ಹಣ ಕೊಡಲು ಟಾಂಗಾದವನು ಅವಸರ ಮಾಡತೊಡಗಿದ. ಆಗ ಬಲರಾಮಣ್ಣ ಅಲ್ಲಿಯೇ ನಮ್ಮ ಶಿಕ್ಷಕರನ್ನು ಎಂಟಾಣೆ ಕೊಡಲು ಕೇಳಿದ. ಆಗ ಶಿಕ್ಷಕರು "ಹೇಗೂ ನಾವು ಗೋಕಾವಿಗೆ ಬಂದಿದ್ದೇವೆ. ಇಲ್ಲೇ ಸಂತೇಪೇಟೆ ಮಾಡಬೇಕಾಗಿದೆ. ನನ್ನ ಹತ್ತಿರವೂ ಸ್ವಲ್ಪವೇ ಹಣವಿದೆ. ಈ ಎಂಟಾಣೆಗಳನ್ನು ಕೂಡಲೇ ನನಗೆ ಕೊಡಬೇಕು" ಎಂದು ಹೇಳಿದರು.

ನಾವು ನಮ್ಮ ದಾಯಾದಿಗಳೊಬ್ಬರು ಅಲ್ಲಿಯೇ ವಕೀಲಿ ಮಾಡುತ್ತಿದ್ದುದರಿಂದ ಅವರ ಮನೆಗೆ ಉಳಿದುಕೊಳ್ಳಲು ಹೋದೆವು. ನಾವು ನಡೆದುಕೊಂಡು ಹೋಗಿ ವಕೀಲರ ಮನೆಯಲ್ಲಿ ಕುಳಿತುಕೊಳ್ಳುವುದೇ ತಡ ಹಣ ಕೊಟ್ಟ ಆ ಶಿಕ್ಷಕರ ತಮ್ಮ ಎಂಟಾಣೆಗಳನ್ನು ಕೇಳಲು ಬಂದ. ಆಗ ನಮ್ಮ ಬಲರಾಮಣ್ಣನಿಗೆ ಏನು ಮಾಡ ಬೇಕೆಂಬುದೇ ತಿಳಿಯಲಿಲ್ಲ. ಆ ವಕೀಲರ ಮನೆಯಲ್ಲಿಯೇ ನಮ್ಮ ಅಣ್ಣುವಿನ ತಮ್ಮ ಇಂಗ್ಲಿಷ್ ಕಲಿಯಲು ಇದ್ದ. ಆಗ ಅವನಿಂದ ಎಂಟಾಣೆ ಪಡೆದು ಆ ಶಿಕ್ಷಕರ ಕೈಗಡದ ಹಣವನ್ನು ಕೊಟ್ಟು ನಿಶ್ಚಿಂತನಾದ ಬಲರಾಮಣ್ಣ. ಅಂದು ನಮ್ಮ ಊಟ ವಕೀಲರ ಮನೆಯಲ್ಲಿಯೇ ಆಯಿತು. ವಕೀಲರು ಒಳ್ಳೆಯ ಜನ. ಬಾವೆಯಲ್ಲಿ ನಮಗವರು ಅಣ್ಣನಾಗಬೇಕು. ನಾವು ಪರೀಕ್ಷೆಗೆ ಹೋದ ಸಂಗತಿಯನ್ನು, ಉತ್ತರ ಪತ್ರಿಕೆಗಳು ಚೆನ್ನಾಗಿ ಆಗಿವೆಯೇ ? ಎಂಬುದನ್ನು ಕೇಳಿ ಅರಿತುಕೊಂಡರು. ಬೇಗನೆ ಕೋರ್ಟಿಗೆ ಹೋಗಬೇಕಾದುದರಿಂದ ಅವರು ಹೊರಟು ಹೋದರು.

ಹಗಲು ಮೂರು ಗಂಟೆಗೆ ನಾವು ನಡೆಯುತ್ತಲೇ ಗೋಕಾಕದಿಂದ ಬೆಟಗೇರಿಗೆ ಹೊರಟೆವು. ಗೋಕಾಕದಿಂದ ಬೆಟಗೇರಿ ೧೨ ಮೈಲುಗಳ ಅಂತರದಲ್ಲಿದೆ. ಅಲ್ಲಿಯ ವರೆಗೆ ನಾವು ನಮ್ಮ ಹಾಸಿಗೆ, ಪುಸ್ತಕದ ಪೆಟ್ಟಿಗೆಗಳನ್ನು ಹೊತ್ತುಕೊಂಡೇ ಹೋಗಿ ಆದರಲ್ಲಿಯೇ ನಮ್ಮೂರ ವೆಂಕಣ್ಣ ಮಾಸ್ತರರು ಒಂದು ಉಪಕಾರವನ್ನು ಮಾಡಿದರು. ತಾವು ಬರುವಾಗ ಬೆಳಗಾವಿಯಲ್ಲಿ ಒಂದು ಬಿದಿರ ತೊಟ್ಟಿಲನ್ನು ಖರೀದಿ ಮಾಡಿಕೊಂಡು ಬಂದಿದ್ದರು. ಅದನ್ನು ನಮಗೆ ಸರತಿಯಂತೆ ಸ್ವಲ್ಪಸ್ವಲ್ಪ ದಾರಿ ಹೊತ್ತು ತರಬೇಕೆಂದು ನಮಗೆ.ಆಜ್ಞೆ ವಿಧಿಸಿದರು. ಎಳೆಯತನದಲ್ಲಿ ನಮಗೆ ಪಾಠ ಹೇಳಿದ ಶಿಕ್ಷಕರವರು. ಆದುದರಿಂದ ಅವರ ಮಾತನ್ನು ಮೀರುವಂತಿರಲಿಲ್ಲ. ಎಲ್ಲ ಸಾಮಾನುಗಳೊಂದಿಗೆ ಕಂಪಿಸುತ್ತಲೇ ನಡೆಯುತ್ತ ಸಂಜೆಯ ವೇಳೆಗೆ ಬೆಟಗೇರಿಯನ್ನು ತಲುಪಿದೆವು. ಆಗಿನ ನಮ್ಮ ಪರಿಸ್ಥಿತಿಯನ್ನು ತಾಯಿ ದೂರದಿಂದಲೇ ನೋಡಿ ಕಂಬನಿಗರಿಯುತ್ತ ಹತ್ತಿರ ಓಡಿಬಂದು ಹೊತ್ತಿದ್ದ ಸಾಮಾನುಗಳನ್ನ ಕೆಳಗಿಳಿಸಿಕೊಂಡು ನಮ್ಮನ್ನು ಪ್ರೀತಿಯಿಂದ ಕರೆದುಕೊಂಡು ಮನೆಯೊಳಗೆ ಹೋಗಿ ಬೆಳಗಾವಿಯ ಸಮಾಚಾರವನ್ನೆಲ್ಲ ಕೇಳಿಕೊಂಡರು. ಪರೀಕ್ಷೆಯ ಪ್ರಶ್ನಪತ್ರಿಕೆಗಳು ಚೆನ್ನಾಗಿ ಆಗಿವೆಯೆಂದು ನಾನು ಹೇಳಿದೆನು. ನಮ್ಮ ಬಲರಾಮಣ್ಣನ ಮಾತನ್ನು ಆಕೆ ನಂಬುವಂತಿರಲಿಲ್ಲ. ಏಕೆಂದರೆ ಅವನು ಯಾವಾಗಲೂ ಗಂಭೀರನಾಗಿ ಪ್ರಾಮಾಣಿಕನಾಗಿ ನಡೆದುಕೊಳ್ಳುತ್ತಲೇ ಇರಲಿಲ್ಲ. ನಾನು ಹೇಳಿದ ಮಾತನ್ನು ಅವಳು ನಂಬಿದಳು. ಮತ್ತೆ ಆಗಲೂ ತನ್ನ ಅಗಲಿದ ಮಗನಿಗಾಗಿ ನೆನಪು ತೆಗೆದು ಕಣ್ಣೀರಿಟ್ಟಳು. ಗೋಕಾಕ ಸ್ಟೇಷನ್ನಿನಿಂದ ಇಲ್ಲಿಯವರೆಗೆ ನಾವು ಬಂದು ಮುಟ್ಟಿದ ವರ್ತಮಾನವನ್ನು ಕೇಳಿ ಕಳವಳಗೊಂಡಳು. ರಾಘಣ್ಣನ ಸಂಕುಚಿತ ಬುದ್ಧಿಗಾಗಿ ಮನಸ್ಸಿನಲ್ಲಿಯೇ ನೊಂದುಕೊಂಡಳು. ಇದು ನಮ್ಮ ಮುಲ್ಕಿ ಪರೀಕ್ಷೆಯ ಕಥೆ.

(ಸಶೇಷ)

ಹೊಸ ಓದು

ನವ್ಯ ಸಾಹಿತ್ಯ ದರ್ಶನ (ವಿಮರ್ಶೆ) 1991

ಲೇಖಕರು: **ಡಾ|| ಶಾಂತಿನಾಥ ದೇಸಾಯಿ**
ಪ್ರಕಾಶಕರು: **ಪರಿಸರ ಪ್ರಕಾಶನ, ಶಿವಮೊಗ್ಗ**
ಪುಟ: xviii + 246 ಬೆಲೆ: ರೂ. 65/-

1990ರಲ್ಲಿ ಪ್ರಕಟವಾದ ಡಾ॥ ಶಾಂತಿನಾಥ ದೇಸಾಯಿಯವರ "ನವ್ಯ ಸಾಹಿತ್ಯ ದರ್ಶನ"ದಲ್ಲಿ 1965ರಿಂದ 1989ರ ಅವಧಿಯಲ್ಲಿ ಬರೆದ ದೇಸಾಯಿಯವರ ಸಮಗ್ರ ಲೇಖನಗಳು ಸೇರಿವೆ. ಹೆಸರಿಗೆ ತಕ್ಕಂತೆ ಬಹಳಷ್ಟು ಲೇಖನಗಳು ನವ್ಯ ಸಾಹಿತ್ಯದ ದರ್ಶನ ಮಾಡಿಕೊಡುವಷ್ಟು ಯಶಸ್ವಿಯಾಗಿದೆ. ದೇಸಾಯಿಯವರು ಒಬ್ಬ ಪ್ರಮುಖ ನವ್ಯ ಸಾಹಿತಿಯಾಗಿರುವುದರಿಂದ, ನವ್ಯ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅವರು ಹೇಳುವ ಕೆಲವು ವಿಚಾರಗಳು ಏಕಪಕ್ಷೀಯವೆನಿಸುತ್ತವೆ. ನವ್ಯ ಸಾಹಿತ್ಯದ ಕೃತಿಗಳ ವರ್ಣನೆ ವಿಜೃಂಭಣೆಗಳೇ ಹೆಚ್ಚಾಗಿ ವಿಮರ್ಶಕರು ಗುರುತಿಸಬಹುದಾಗಿದ್ದ ಆ ಕೃತಿಗಳ ಮಿತಿಗಳು ಮತ್ತು ವೈಫಲ್ಯತೆ ಕಾಣದಾಗಿವೆ. ವಸ್ತುನಿಷ್ಠ ವಿಮರ್ಶೆಗೆ ಬದಲು ನವ್ಯನಿಷ್ಠ ವಿಮರ್ಶೆಯೇ ಎದ್ದು ಕಾಣುತ್ತದೆ. ರೇಡಿಯೋ ಸಂದರ್ಶನ, ಚರ್ಚೆ, ಸಮೀಕ್ಷೆ, ವಿಶ್ಲೇಷಣೆ, ವಿವರಣೆಗೆ ಮೀಸಲಾಗಿರುವ ಇಲ್ಲಿಯ ಬಹಳಷ್ಟು ಲೇಖನಗಳು ವಿಮರ್ಶೆಯ ಗುಣವನ್ನು ತಾಳದೆ ತಣ್ಣಗೆ ಕಾಣುತ್ತವೆ. **ಪ್ರತಿಮಾವಾದ, ಅಸ್ತಿತ್ವವಾದಕ್ಕೆ** ಸಂಬಂಧಿಸಿದ ಲೇಖನಗಳೆಲ್ಲ ಅಧ್ಯಯನ ಪೂರ್ಣವಾಗಿವೆ. ರಿಚರ್ಡ್ಸ್‌ನ ಮೌಲ್ಯ ನಿರ್ಣಯ ಸಿದ್ಧಾಂತವನ್ನು ಹೇಳುವ ಕೊನೆಯ ಲೇಖನ ಗಂಭೀರವಾದ ಆಲೋಚನಾ ಕ್ರಮವೊಂದನ್ನು ದಾಖಲಿಸುತ್ತದೆ.

ಒಟ್ಟು ಮೂವತ್ತೆರಡು ಲೇಖನಗಳನ್ನೊಳಗೊಂಡ ಈ ಕೃತಿಯ ಲೇಖನಗಳನ್ನು ಅಧ್ಯಯನದ ದೃಷ್ಟಿಯಿಂದ ಒಟ್ಟು ನಾಲ್ಕು ಭಾಗಗಳಲ್ಲಿ ವಿಂಗಡಿಸಬಹುದಾಗಿದೆ. ಕನ್ನಡ ನವ್ಯ ಕಾವ್ಯದಲ್ಲಿಯ ಮನೋಧರ್ಮ, ಆಧುನಿಕ ಕನ್ನಡ ಕಾವ್ಯ, ಕನ್ನಡ ಸಣ್ಣ ಕಥೆಗಳಲ್ಲಿ ನವ್ಯತೆ, ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ವಿಮರ್ಶೆ, ವಿಮರ್ಶೆಯಲ್ಲಿ ಪ್ರಭಾವಗಳ ಅಭ್ಯಾಸ. ಅನ್ಯದೇಶೀಯ ಸಾಹಿತ್ಯ ಹಾಗೂ ತಾತ್ವಿಕ ಪ್ರಭಾವಗಳು,

ಆಧುನಿಕ ಪಾಶ್ಚಾತ್ಯ ವಿಮರ್ಶೆಯ ಒಲವು-ನಿಲವುಗಳು-ಈ ಏಳು ಲೇಖನಗಳಲ್ಲಿ ನವ್ಯ ಸಾಹಿತ್ಯದ ಸಾಧನೆ-ಸಿದ್ಧಿಗಳನ್ನು ಹೇಳುವುದರ ಜತೆಗೆ ಅನ್ಯ ದೇಶೀಯ ಸಾಹಿತ್ಯದ ಪ್ರಭಾವಗಳನ್ನು ಗುರುತಿಸಲಾಗಿದೆ. ಇಲ್ಲಿ ಆನ್ವಯಿಕ ವಿಮರ್ಶೆ ಹೆಚ್ಚು ಸಶಕ್ತವಾಗಿ ಕಾರ್ಯನಿರ್ವಹಿಸಿದೆ. ಈ ಲೇಖನಗಳು ಕನ್ನಡ ಸಾಹಿತ್ಯದ ದೃಷ್ಟಿಯಿಂದ ಮುಖ್ಯ ವಾಗುತ್ತವೆ. ಈ ಏಳು ಲೇಖನಗಳನ್ನು ಮೊದಲನೇ ಭಾಗದಲ್ಲಿ ಜೋಡಿಸಬಹುದಿತ್ತು.

ಈ ಕೃತಿಯ ಅತ್ಯಂತ ದೊಡ್ಡ ಭಾಗವೆಂದರೆ ನವ್ಯ ಕೃತಿಗಳ ಬಗೆಗೆ ನಡೆಸಿದ ಪ್ರಾಯೋಗಿಕ ವಿಮರ್ಶೆ. ಹತ್ತೊಂಬತ್ತು ಲೇಖನಗಳನ್ನು ಈ ಭಾಗದಲ್ಲಿ ಸೇರಿಸ ಬಹುದು. ಕಣವಿಯವರ 'ಎರಡು ದಡ', ಅಡಿಗರ 'ಭೂತ', ರಾಮಚಂದ್ರಶರ್ಮರ 'ಹೇಸರಗತ್ತೆ', ಗಂಗಾಧರ ಚಿತ್ತಾಲ ಹಾಗೂ ಸಿದ್ಧಲಿಂಗ ಪಟ್ಟಣಶೆಟ್ಟಿಯವರ 'ಕಾವ್ಯ', ಜಯಂತ ಕಾಯ್ಕಿಣಿಯವರ 'ರಂಗದೊಂದಿಷ್ಟು ದೂರ', ಯಶವಂತ ಚಿತ್ತಾಲರ 'ಕಥಾ ಸಿದ್ಧಿ' ಮತ್ತು 'ಮೂರು ದಾರಿಗಳು', ಲಂಕೇಶರ 'ನಾನಲ್ಲ', ವೀಣಾ ಅವರ 'ಮುಳ್ಳು ಗಳು', ಲಂಕೇಶ್-ಸದಾಶಿವರ 'ಆಯ್ದ ಕಥೆಗಳು', ದಿವಾಕರರ 'ಇತಿಹಾಸ', ಅನಂತ ಮೂರ್ತಿಯವರ 'ಸಂಸ್ಕಾರ', ಲಂಕೇಶರ 'ಬಿರುಕು', ಕುಸುಮಾಕರರ 'ನಾಲ್ಕನೆಯ ಆಯಾಮ', ಗೋಕಾಕರ 'ವಿಮರ್ಶೆ'-ಈ ಎಲ್ಲಾ ಲೇಖನಗಳಲ್ಲಿ ಬರುವ ಕೃತಿ ವಿಮರ್ಶೆ ವಸ್ತುನಿಷ್ಠವಾಗಿದೆ. ಲಂಕೇಶ, ಅನಂತಮೂರ್ತಿ, ಚಿತ್ತಾಲ, ರಾಮಚಂದ್ರ ಶರ್ಮ, ವೀಣಾ ಇವರ ಕೃತಿಗಳ ಆಶಯಗಳನ್ನು ಕಟ್ಟಿಕೊಡುವಲ್ಲಿ, ಸಾಧನೆ-ಸಿದ್ಧಿ ಹೇಳುವಲ್ಲಿ ಸಮತೂಕದ ಮಾತುಗಳನ್ನು ಬಳಸುತ್ತಾರೆ.

ಮೂರನೆಯ ಭಾಗದಲ್ಲಿ ಪರಿಚಯ, ಸಂದರ್ಶನ, ಚರ್ಚೆಗೆ ಸಂಬಂಧಿಸಿದ ಲೇಖನ ಗಳನ್ನು ಸೇರಿಸಬಹುದು. ಎಂ ಜಿ.ಕೆ. ಮತ್ತು ಲಿಯನಲ್ ಟ್ರಿಲ್ಲಿಂಗ್ ಇವರನ್ನು ನಿಷ್ಠ ವಿಮರ್ಶಕರನ್ನಾಗಿ ಲೇಖಕರು ಪರಿಚಯಿಸುತ್ತಾರೆ. ಕಾರ್ನಾಡರೊಡನೆ 'ಹಯವದನ' ಕೃತಿಯ ಬಗೆಗೆ ನಡೆಸಿದ ರೇಡಿಯೋ ಸಂದರ್ಶನವಿದೆ. ಅದರಂತೆ ಕನ್ನಡ ನವ್ಯ ಕಾವ್ಯ ದಲ್ಲಿಯ ಮನೋಧರ್ಮ ಕುರಿತು ಅದೇ ಕಾರ್ನಾಡರ ಜತೆ ನಡೆಸಿದ ಚರ್ಚೆ ಹೆಚ್ಚು ಕುತೂಹಲಕಾರಿಯಾಗಿದೆ.

ನಾಲ್ಕನೆಯ ಭಾಗದಲ್ಲಿ ವಾದಗಳಿಗೆ ಸಂಬಂಧಿಸಿದ ಲೇಖನಗಳನ್ನು ಕೂಡಿಸ ಬಹುದು. ಪ್ರತಿಮಾವಾದ, ಅಸ್ತಿತ್ವವಾದ, ಅಸಂಗತವಾದ ಮತ್ತು ಮೌಲ್ಯ ನಿರ್ಣಯ ಸಿದ್ಧಾಂತಕ್ಕೆ ಸಂಬಂಧಿಸಿದ ಲೇಖನಗಳು ಸಾಹಿತ್ಯದ ವಿದ್ಯಾರ್ಥಿಗಳಿಗೆ ಹೆಚ್ಚು ಉಪ ಯುಕ್ತವೆನಿಸುತ್ತವೆ. "ನನಗನಿಸುವ ಮಟ್ಟಿಗೆ, ಪ್ರಗತಿಶೀಲ ಸಾಹಿತ್ಯದ ಒಲವೇ ವಾದವಾಗಿ ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಮೊದಲಿಗೆ ಸೇರಿದ್ದು ನಾಲ್ವತ್ತರ ದಶಕದಲ್ಲಿ"

–(ಪುಟ: 209) ಎನ್ನುವ ದೇಸಾಯಿಯವರ ಇಂತಹ ಅನೇಕ ನಿರ್ಣಯಗಳಲ್ಲಿ ಹೊಸತನ ಕಂಡುಬರುತ್ತದೆ.

ನವ್ಯ ಸಾಹಿತ್ಯದ ಪ್ರೇರಣೆ–ಧೋರಣೆಗಳ ಬಗೆಗೆ, ಅದರ ಸಿದ್ಧಾಂತದ ಬಗೆಗೆ, ಕೃತಿಗಳನ್ನು ಕುರಿತು ಇಡೀ ಪುಸ್ತಕದ ತುಂಬ ಚರ್ಚೆ ನಡೆದಿದೆ. ಇಷ್ಟೆಲ್ಲಾ ಓದಿದ ನಂತರವೂ, ಕಾರ್ನಾಡರು ಹೇಳುವಂತೆ 'ನವ್ಯತೆ ಎಂದರೇನು ?' ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ. "ಶಾಂತಿನಾಥರಂತೂ ಇದಕ್ಕೆ ಕನ್ನಡದ ತೀರಾ ಸ್ವತಂತ್ರ ವಾದ, ಯಾವುದೇ ಪರದೇಶದ ಪ್ರಭಾವಕ್ಕೆ ಸಂಬಂಧವಿಲ್ಲದ ಉತ್ತರ ಕೊಟ್ಟಿಲ್ಲ ಎಂದು ನನಗನ್ನಿಸುತ್ತದೆ". – (ಪುಟ: 11) ಎನ್ನುವ ಕಾರ್ನಾಡರ ಮಾತು ಮತ್ತೆ–ಮತ್ತೆ ಆಲೋಚನೆಗೆಡೆಮಾಡಿಕೊಡುತ್ತದೆ. 1965ರ ಸಂದರ್ಭದಲ್ಲಿ 'ಸಂಕ್ರಮಣ' ಪತ್ರಿಕೆಯ ಏಳನೆಯ ಸಂಚಿಕೆಯಲ್ಲಿ ಪ್ರಕಟವಾದ ದೇಸಾಯಿಯವರ 'ಕನ್ನಡ ನವ್ಯ ಕವಿತೆಯಲ್ಲಿಯ ಮನೋಧರ್ಮ' ಲೇಖನ ಕುರಿತು ಕಾರ್ನಾಡರು ಅಂದು ಎತ್ತಿದ ಪ್ರಶ್ನೆಗಳು ಇಂದಿಗೂ ಮುಖ್ಯವೆನಿಸುತ್ತವೆ. ಅದಕ್ಕೆ ದೇಸಾಯಿಯವರು ಕೊಡುವ ಉತ್ತರಗಳು ಹೆಚ್ಚು ಸಮರ್ಪಕವೆನಿಸುವುದಿಲ್ಲ. ಅವರ ಮಾತುಗಳಲ್ಲಿ ನವ್ಯ ಸಾಹಿತ್ಯದ ಪ್ರಚಾರಕರ ಹುಮ್ಮಸ್ಸು ಎದ್ದು ಕಾಣುವುದೇ ಹೊರತು ವಸ್ತುನಿಷ್ಠ ಆಲೋಚನೆಯಲ್ಲ. ದೇಸಾಯಿಯವರು ನವ್ಯದ ಲೇಬಲ್‌ನ್ನೇ ಮುಂದೆ ಬಿಟ್ಟು ತಾವು ಹಿಂದೆ ಉಳಿಯುತ್ತಾರೆ. ಹಿಂದಿನ ರಸಸಂಪ್ರದಾಯವನ್ನು ಬದಿಗೊತ್ತುವುದಾಗಲಿ, ದ್ವಂದ್ವಗಳಲ್ಲೇ ತೇಲುವುದಾಗಲಿ, ಗೋಜಲುಗಳನ್ನೇ ಸಿದ್ಧಿಯೆಂದು ಭಾವಿಸುವುದಾಗಲಿ ನವ್ಯ ಸಾಹಿತ್ಯದ ಸಾಧನೆಗಳಲ್ಲ.

"ಆಧುನಿಕ ಕನ್ನಡ ಕಾವ್ಯ–ಉತ್ತರ ಕರ್ನಾಟಕದ ಕೊಡುಗೆ" ಲೇಖನ ಆ ಭಾಗದ ಲೇಖಕರ ಸಂಕ್ಷಿಪ್ತ ಪರಿಚಯವನ್ನು ಮಾತ್ರ ಮಾಡುತ್ತದೆ. ಅಲ್ಲಿಯ ಸಾಹಿತ್ಯದ ಒಟ್ಟು ಕಾಣ್ಕೆಯನ್ನು ಕುರಿತು ಇನ್ನಷ್ಟು ಹೇಳಬಹುದಾಗಿತ್ತು. 'ಕನ್ನಡ ಸಣ್ಣ ಕಥೆಗಳಲ್ಲಿ ನವ್ಯತೆ' ಲೇಖನದಲ್ಲಿ ನವ್ಯತೆಯನ್ನು ಕೆಲವು ಕಥೆಗಳಲ್ಲಿ ಉದ್ದೇಶಪೂರ್ವಕವಾಗಿ ಆರೋಪಿಸಲಾಗಿದೆ. ಶ್ರೀನಿವಾಸರ 'ಮೊಸರಿನ ಮಂಗಮ್ಮ', ತ.ರಾ.ಸು. ಅವರ '0—0 = 0' ಈ ಕಥೆಗಳಲ್ಲಿ ಲೇಖಕರು ಅದೆಂತಹ ನವ್ಯತೆಯನ್ನು ಕಂಡಿರುವರೋ ತಿಳಿಯದು. 'ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ವಿಮರ್ಶೆ'–ಈ ಲೇಖನ ಅತ್ಯಂತ ಮಹತ್ವದ್ದಾಗಿದೆ. ಕನ್ನಡ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದ ಅಧ್ಯಯನ ಪೂರ್ಣ ಲೇಖನವಿದು. 'ವಿಮರ್ಶೆಯಲ್ಲಿ ಪ್ರಭಾವಗಳ ಅಭ್ಯಾಸ' ಲೇಖನ ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಇನ್ನಷ್ಟು ವಿವರಗಳನ್ನೊಳಗೊಳ್ಳಬಹುದಾಗಿತ್ತು. 'ಅನ್ಯ ದೇಶೀಯ ಸಾಹಿತ್ಯಕ ಹಾಗೂ ತಾತ್ವಿಕ ಪ್ರಭಾವಗಳು' ಲೇಖನ ಸಂಕ್ಷಿಪ್ತವಾಗಿದ್ದರೂ ಸಮರ್ಪಕ

ವಾಗಿದೆ. ಆಧುನಿಕ ಪಾಶ್ಚಾತ್ಯ ವಿಮರ್ಶೆಯ ಒಲವು-ನಿಲವುಗಳನ್ನು ಕುರಿತು ವಿಶ್ಲೇಷಿಸುವ ಲೇಖನ ಕೂಡಾ ತೃಪ್ತಿ ಕೊಡುತ್ತದೆ. ಪ್ರಾಯೋಗಿಕ ವಿಮರ್ಶೆಗೆ ಸಂಬಂಧಿಸಿದಂತೆ ದೇಸಾಯಿಯವರು ನವ್ಯದ ಅನೇಕ ಕೃತಿಗಳನ್ನು ಇಲ್ಲಿ ಅಧಿಕ ಸಂಖ್ಯೆಯಲ್ಲಿ ವಿಶ್ಲೇಷಣೆಯ ತೆಕ್ಕೆಗೆ ತೆಗೆದುಕೊಂಡಿರುವುದು ಗಮನಾರ್ಹ. ಕಾವ್ಯ, ಕಥೆ, ಕಾದಂಬರಿ, ನಾಟಕ, ಸಾಹಿತ್ಯ ವಿಮರ್ಶೆ ಈ ಎಲ್ಲಾ ಪ್ರಕಾರದ ನವ್ಯ ಕೃತಿಗಳ ಬಗೆಗೆ ಚರ್ಚೆ ನಡೆಸಿರುವುದು ಸ್ವಾಗತಾರ್ಹ.

ಈ ಕೃತಿಯಲ್ಲಿ ಹಿಂದಿನ ಮೂರು ದಶಕಗಳಲ್ಲಿ ಬರೆಯಲ್ಪಟ್ಟ ಲೇಖನಗಳು ಸೇರಿವೆ. ನವ್ಯದ ಸಂಭ್ರಮದ ಕಾಲದಲ್ಲಿಯೇ ಈ ಕೃತಿ ಬಂದಿದ್ದರೆ ಹೆಚ್ಚಿನ ಪರಿಣಾಮ ಬೀರಬಹುದಿತ್ತೇನೋ. ಆದರೂ ದೇಸಾಯಿಯವರು ಕೊನೆಗೂ ಇವೆಲ್ಲವುಗಳನ್ನು ಕೂಡಿಸಿಕೊಟ್ಟಿರುವುದು ಸಾಹಿತ್ಯದ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತವಾಗಿದೆ. ಹೇಳಬೇಕಾದುದನ್ನು ಸ್ಪಷ್ಟವಾಗಿ ಮತ್ತು ನೇರವಾಗಿ ಹೇಳುವ ದೇಸಾಯಿಯವರ ಶೈಲಿ ಆಕರ್ಷಕವಾಗಿದೆ. ನವ್ಯ ಕೃತಿಗಳು ಬಹಳ ಗೋಜಲು, ಅವುಗಳಿಗಿಂತ ಅವುಗಳ ವಿಮರ್ಶೆ ಇನ್ನೂ ಗೋಜಲು ಎಂದು ನಂಬಿದ್ದ ಸಂದರ್ಭದಲ್ಲಿ ದೇಸಾಯಿಯವರ ಲೇಖನಗಳು ಹೆಚ್ಚು ಸ್ಪಷ್ಟವಾಗುವುದರ ಮೂಲಕ ನವ್ಯ ಸಾಹಿತ್ಯದ ಆಗು ಹೋಗುಗಳನ್ನು ಪರಿಚಯಿಸುತ್ತವೆ.

ದೇಸಾಯಿಯವರಿಗೆ ಇಂಗ್ಲೀಷ್ ಸಾಹಿತ್ಯದ ಆಳವಾದ ಅಧ್ಯಯನವಿದೆ. ಅದರ ಜತೆಗೆ ಅವರು ಕನ್ನಡದ ಹೆಸರಾಂತ ಸೃಜನಶೀಲ ಸಾಹಿತಿಗಳೂ ಹೌದು. ಹೀಗಾಗಿ ಅವರ ವಿಮರ್ಶೆ ಕೇವಲ ಯಾಂತ್ರಿಕವಾಗದೆ, ಬದುಕಿನ ಅದಮ್ಯ ಚೇತನದ ಸೆಲೆಯಾಗಿದೆ. ಬರವಣಿಗೆಯ ಅನಿವಾರ್ಯತೆಗಾಗಿ ಸೃಜನಶೀಲ ಸಾಹಿತ್ಯವನ್ನು ಸೃಷ್ಟಿಸಿರುವ ದೇಸಾಯಿಯವರು, ಸಾಹಿತ್ಯ ವಿಮರ್ಶೆಯ ಬೆಳವಣಿಗೆಗಾಗಿ ತೋರಿಸುವ ಕಾಳಜಿ ಗಮನಾರ್ಹವಾಗಿದೆ. ಅವರ ತೂಕಬದ್ಧ ನಿರ್ಣಯ, ಸಂವಹನದ ಸ್ಪಷ್ಟತೆ, ಅಧ್ಯಯನದ ಆಳ, ಸಮರ್ಪಕವಾದ ತುಲನೆ ಈ ಕೃತಿಯ ಪ್ರಾಮುಖ್ಯತೆಯನ್ನು ಹೆಚ್ಚಿಸಿವೆ. 'ನವ್ಯ ಸಾಹಿತ್ಯ ದರ್ಶನ' ನಿಜಕ್ಕೂ ಕನ್ನಡದ ಆಕರ ಗ್ರಂಥವಾಗಿದೆ. ದೇಸಾಯಿಯವರು ತಾವೊಬ್ಬ ಸಮರ್ಥ ಸಾಹಿತಿಯಾಗಿ ಬೆಳೆಯುತ್ತಾ ತಮ್ಮ ಸಮಕಾಲೀನ ಸಾಹಿತ್ಯದ ವಿಮರ್ಶೆಯನ್ನು ದಾಖಲಿಸಿರುವುದು ಮಹತ್ವದ ಸಂಗತಿಯಾಗಿದೆ.

—ಡಾ|| ಬಸವರಾಜ ಸಬರದ

ರಾಜ ಮತ್ತು ಹಕ್ಕಿ (ಕಥಾ ಸಂಕಲನ)

ಲೇಖಕರು: **ಜಿ. ಪಿ. ಬಸವರಾಜು**

ಪ್ರಕಾಶಕರು: ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ

ಪುಟ: 110, ಬೆಲೆ: ರೂ. 20/-

ಬದುಕಿನ ಒಳಸುಳಿಗಳನ್ನು ಗ್ರಹಿಸಲು ವಾಸ್ತವಮಾರ್ಗ ಅಸಮರ್ಥವೆಂಬ ಚಿಂತನೆ ಹಲವಾರು ಲೇಖಕರನ್ನು ಸಾಹಿತ್ಯದ ಇತಿಹಾಸದ ಉದ್ದಕ್ಕೂ ಕಾಡುತ್ತಾ ಬಂದಿದೆ. ಇವರಿಗೆಲ್ಲ ವಾಸ್ತವ ಮಾರ್ಗದ ಎಲ್ಲೆಗಳನ್ನು ಮೀರಿಕೊಂಡು ಚಿಮ್ಮುವ ಅನಿವಾರ್ಯತೆ ಒದಗಿದೆ. ಸತ್ಯದ ಕಾಣ್ಕೆಗಾಗಿ ನಡೆಯುವ ಈ ಪ್ರಯತ್ನ ಕಲೆಯಲ್ಲಿ ಹೊಸರೂಪ ಆವಿಷ್ಕಾರಗಳಿಗೆ ಕಾರಣವಾಗಿವೆ. ಇವು ಲ್ಯಾಟಿನ್ ಅಮೇರಿಕಾದ ಸಾಹಿತ್ಯದಲ್ಲಿ ಮಾತ್ರ ಲಭ್ಯವೆಂದು ಹುಡುಕಿಕೊಂಡು ಹೋಗಬೇಕಿಲ್ಲ. ನಮ್ಮ ಪರಂಪರೆಯಲ್ಲೇ ಇಂತಹ ಪ್ರಯೋಗಗಳು ಶ್ರೀಮಂತವಾಗಿವೆ. ಬಸವರಾಜು ಅವರ 'ರಾಜ ಮತ್ತು ಹಕ್ಕಿ' ಸಂಕಲನದ ಕಥೆಗಳೂ ಈ ದಿಕ್ಕಿನಲ್ಲಿ ಒಂದು ಪ್ರಯೋಗ. ಇಲ್ಲಿ ಸಂಕಲಿತವಾಗಿರುವ ಬಹುಪಾಲು ಕಥೆಗಳು ವಾಸ್ತವ ನೆಲೆಯಲ್ಲಿ ತೊಡಗಿಕೊಂಡು ಅದ್ಭುತ, ರಮ್ಯ ನೆಲೆಗೆ ಜಿಗಿಯುತ್ತವೆ. ಹೀಗಾದಾಗಲೆಲ್ಲ ಕಥೆಯ ವಿವರಗಳಿಗೆ ಸಾಂಕೇತಿಕತೆಯ ಆಯಾಮ ಪ್ರಾಪ್ತವಾಗುತ್ತದೆ. ತಮ್ಮ ದೃಷ್ಟಿಕೋನವನ್ನು ಸ್ಪಷ್ಟಪಡಿಸಲು, ಅರ್ಥವನ್ನು ಹೊಳೆಯಿಸಲು ಲೇಖಕರಿಗೆ ಇದು ಅವಶ್ಯಕವಾಗಿದೆ. ಮುಖ್ಯ ಪ್ರಶ್ನೆ ಎಂದರೆ ಅದ್ಭುತ ರಮ್ಯ ಶೈಲಿ ಮತ್ತು ಇದರ ಒಡಲಲ್ಲೇ ಹುಟ್ಟಿಬರುವ ಸಾಂಕೇತಿಕತೆ ಸಹಜವಾಗಿದೆಯೋ ಕೃತಕವಾಗಿದೆಯೋ ಎಂಬುದು. ಈ ಪ್ರಶ್ನೆ ಲೇಖಕರ ಕೌಶಲ್ಯಕ್ಕಷ್ಟೇ ಸಂಬಂಧಪಡದೆ ಒಟ್ಟಾರೆ ಅವರ ವೈಚಾರಿಕತೆ ಮತ್ತು ಕಲಾವಂತಿಕೆಗೆ ಸಂಬಂಧಪಟ್ಟಿದ್ದು. ಎರಡು ಕಥೆಗಳನ್ನು ನಿದರ್ಶನಕ್ಕೆ ಎತ್ತಿಕೊಂಡು ಈ ವಿಚಾರವನ್ನು ಪರಿಶೀಲಿಸಬಹುದು.

ಒಬ್ಬ ಆದರ್ಶವಾದಿ ಜಾಣ ಪದವೀಧರ ಯುವಕ ತನ್ನ ಕೆಲಸಕ್ಕಾಗಿ ಭ್ರಷ್ಟ ಮಂತ್ರಿಯೊಬ್ಬನ ಮೇಲೆ ಪರಾವಲಂಬಿಯಾಗಬೇಕಾದ ಅಸಹಾಯಕತೆಯನ್ನು 'ನಿರುದ್ಯೋಗ ಪರ್ವ' ಚಿತ್ರಿಸುತ್ತದೆ. ಮಹಾನಗರದಲ್ಲಿ ಮಂತ್ರಿ 'ಪ್ರಭು'ವಾಗಿದ್ದಾನೆ, ಅವನ ಮನೆ 'ಭವನ'ವಾಗಿದೆ. ಹಲವು ಸುತ್ತಿನ ಕೋಟೆಯನ್ನು ಸೀಳಿಕೊಂಡು ಎಲ್ಲರೂ ಮಂತ್ರಿಯನ್ನು ಕಾಣಬೇಕಾಗಿದೆ. ಉದ್ದಕ್ಕೂ ಜನ, ಡೇರೆ, ಹಾರ, ಲಂಚ, ಶಿಫಾರಸ್, ಕ್ರೌರ್ಯ, ಅಮಾನವೀಯತೆ. ಕೊನೆಗೆ ಮಂತ್ರಿಯ ಹೊಟ್ಟೆ ಮಾತ್ರ ಕಾಣುತ್ತದೆ. ಯುವಕ ನಡುಗಿ ಓಡಿಹೋಗುತ್ತಾನೆ. ಇಲ್ಲಿ ಮೂಡುವ ರಾಜಕೀಯ ಸ್ಥಿತಿ, ಮಂತ್ರಿ ಮನೆಯ ಪರಿಸರ, ಅವನ ಕಪಟತನ, ಯುವಕನ ಸ್ಪಂದನ ಎಲ್ಲವೂ ನಿರೀಕ್ಷಿತ. ಸಿದ್ಧ ಅಚ್ಚಿನೊಳಗೆ ಪಾತ್ರಗಳು ಓಡಾಡುತ್ತವೆ. ಮೊದಲೇ ನಿರ್ಮಿತ

ವಾದ ಚೌಕಟ್ಟಿನಲ್ಲಿ ಕ್ರಿಯೆಗಳು ಘಟಿಸುತ್ತವೆ. ತಮ್ಮ ಅನಿಸಿಕೆಗಳನ್ನು ಹೊಸ ರೀತಿಯಲ್ಲಿ ಹೇಳಬೇಕೆಂಬ ಅಪೇಕ್ಷೆಯನ್ನು ಮಾತ್ರ ಲೇಖಕರ ಭಾಷೆ ಮತ್ತು ಶೈಲಿ ಪೂರೈಸುತ್ತವೆ. ಹೀಗಾಗಿ ತಂತ್ರಗಾರಿಕೆ ಅಗತ್ಯ ಮೀರಿ ಬೆಳೆದುಬಿಟ್ಟಿದೆ, ವಸ್ತುವಿನ ಮೇಲೆ ಭಾರವಾಗಿಬಿಟ್ಟಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಕಥೆ ತೀರಾ ಪ್ರಜ್ಞಾಪೂರ್ವಕವಾಗಿ ರಚನೆಯಾಗಿರುವುದು. ಲೇಖಕರ ಹಿಡಿತದಿಂದ ಬಿಡಿಸಿಕೊಂಡು ಕೊಂಚ ಸಲೀಸಾಗಿ ಉಸಿರಾಡುವ ಕಥೆ ಯಶಸ್ವಿಯಾಗಬಲ್ಲದು ಎಂಬುವಕ್ಕೆ ಇವರದೇ 'ಸುಗಂಧಪುರದ ವೃತ್ತಾಂತವು' ಎಂಬ ಕಥೆಯನ್ನು ನೋಡಬಹುದು. ಪ್ರಾರಂಭದಲ್ಲೇ ಊರನ್ನು ಪೌರಾಣಿಕ ಆವರಣದಲ್ಲಿಟ್ಟು ವಾಸ್ತವ ನೆಲೆಯನ್ನು ಮೀರಿದ ಒಂದು ಆಯಾಮವನ್ನು ಕಥೆಗೆ ದೊರಕಿಸುವ ಪ್ರಯತ್ನವಿದೆ. ಕಾಟಜ್ಜನೆಂಬುವನು ಆಲದ ಮರದಲ್ಲಿ ಅರಳಿಯನ್ನು ಕಾಣುತ್ತಾನೆ. ಇದೇ ಕಾರಣವಾಗಿ ಊರು ಅವನತಿಯ ಹಾದಿ ಹಿಡಿದು ಅದರ ಚಹರೆಯೇ ಬದಲಾಗಿ ಹೋಗುತ್ತದೆ. ಅಲ್ಲಿಯ ಜನಜೀವನ ಜಾಡು ತಪ್ಪಿ ಕುಸಿದುಹೋಗುತ್ತದೆ. ಈ ದುರಂತದ ಪ್ರಕ್ರಿಯೆ ಮತ್ತು ಅಂತ್ಯ ಪೂರ್ವನಿಯೋಜಿತ ಚೌಕಟ್ಟನ್ನು ಮೀರಲಾರದೇ ಹೋದರೂ ಕಥೆ ತನ್ನ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಆಶಯವನ್ನು ಪ್ರಕಾಶಿಸುತ್ತದೆ. ಇದರ ಸಲುವಾಗಿ ಲೇಖಕರ ಭಾಷೆ ಮತ್ತು ಶೈಲಿ ದುಡಿಯುತ್ತವೆ.

ಅದ್ಭುತ ರಮ್ಯ ಶೈಲಿಯ ಬಳಕೆ ಬಸವರಾಜು ಅವರ ಕಥೆಗಳಲ್ಲಿ ಪ್ರಯೋಗಶೀಲತೆಯ ಹಂತದಲ್ಲಿದೆ. ಬದುಕಿನ ಕಟುಸತ್ಯಗಳ ಸೂಕ್ಷ್ಮ ಗ್ರಹಿಕೆಗಾಗಿ ಇದರ ಎಲ್ಲ ಸಾಧ್ಯತೆಗಳನ್ನು ಬಳಸಿಕೊಂಡಾಗ ಇನ್ನೂ ಹೆಚ್ಚಿನ ಅರ್ಥಪೂರ್ಣ ಕೃತಿ ಹುಟ್ಟಬಲ್ಲದು. ಈ ಹಾದಿಯಲ್ಲಿ ಲೇಖಕರು ಇದ್ದಾರೆ ಎಂಬುದಕ್ಕೆ 'ರಾಜ ಮತ್ತು ಹಕ್ಕಿ' ಸೂಚನೆಗಳನ್ನು ನೀಡುತ್ತದೆ.

—ಎ. ಆರ್. ನಾಗಭೂಷಣ

ಅಮೀನಪುರದ ಸಂತೆ (ಕಥಾ ಸಂಕಲನ)

ಲೇಖಕರು: **ಮಲ್ಲಿಕಾರ್ಜುನ ಹಿರೇಮಠ**
ಪ್ರಕಾಶಕರು: ಚೈತನ್ಯ ಪ್ರಕಾಶನ, ಹುನಗುಂದ
ಪುಟ: viii + 94, ಬೆಲೆ: ರೂ. 20/-

ಮಲ್ಲಿಕಾರ್ಜುನ ಹಿರೇಮಠರ "ಅಮೀನಪುರದ ಸಂತೆ" ಕಥಾ ಸಂಗ್ರಹದ ಕೆಲವು ಮುಖ್ಯ ಕಥೆಗಳು ದಲಿತೇತರ ಲೇಖಕನೊಬ್ಬ ದಲಿತ–ವಾಸ್ತವವನ್ನು ಕಾಣುವ ಮತ್ತು ಕಾಣಿಸುವ ವಿಶಿಷ್ಟ ಪ್ರಯತ್ನಗಳಾಗಿವೆ. ಮುಖ್ಯವಾಗಿ ಜಾತಿ, ಜನಾಂಗಗಳ ನೆಲೆಯಲ್ಲಿ

ಸ್ಪಷ್ಟವಾಗಿ ದಲಿತರಾಗಿ ಕಾಣುವ 'ಲಕ್ಕವ್ವನ ಮಂದಿ'ಯ ಸಂಕಟಗಳನ್ನು ಗುರುತಿಸುವದರ ಜೊತೆಯಲ್ಲಿಯೇ, ತನ್ನ ಆರ್ಥಿಕ ಹಿಂದುಳಿಯುವಿಕೆಯ ಮೂಲಕ ಯಾವ ಜಾತಿಮೂಲ ದಲಿತನಿಗಿಂತಲೂ ಕಡಿಮೆಯಲ್ಲದ ಸಂಕಟವನ್ನು ಅನುಭವಿಸುತ್ತಿರುವ ಬಸಪ್ಪನಂಥವರ ಮತ್ತೊಂದು ಬಗೆಯ ದಲಿತತ್ವವನ್ನು ಗುರುತಿಸಿರುವರು. ಇಷ್ಟೇ ಅಲ್ಲ, ಆಧುನಿಕತೆಯ ಪ್ರಭಾವದಿಂದ ವಿಘಟಿತಗೊಂಡ ಕುಟುಂಬದಲ್ಲಿ, ಸುಶಿಕ್ಷಿತ, ನಾಗರಿಕ ಬಡಿವಾರದ ಜನರಿಗೆ ಅದೇ ಕುಟುಂಬದ ಅಶಿಕ್ಷಿತ ವ್ಯಕ್ತಿಯೇ 'ದಲಿತ'ನಂತೆ ಕಾಣುತ್ತಾನೆಂಬುದು 'ಮಾವ' ಕಥೆಯಲ್ಲಿ ಮಾರ್ಮಿಕವಾಗಿ ಮೂಡಿ ಬಂದಿದೆ. 'ಮಾತೃ ದೇವೋ ಭವ' ಕಥೆಯ ತಾಯಿ ಕೂಡ ಆಧುನಿಕ ಪರಿಸರದಲ್ಲಿ ಅವಜ್ಞತೆಗೆ ಒಳಗಾದ 'ಮೌಲ್ಯ'ಗಳ ಸಂಕೇತವೇ ಆಗಿದ್ದಾಳೆ. ಹೀಗೇ ಕೇವಲ ಲಕ್ಕವ್ವನ ಮಂದಿ ಮಾತ್ರವಲ್ಲ, ಬಡವನಾದ ಬಸಪ್ಪ, ಅಶಿಕ್ಷಿತನಾದ 'ಮಾವ', ಅಸಹಾಯಕಳಾದ 'ತಾಯಿ' ಇವರೆಲ್ಲ ಬೇರೆ ಬೇರೆ ಕಾರಣಗಳಿಂದ ಬೇರೆ ಬೇರೆ ನೆಲೆಯಲ್ಲಿ ಅನುಭವಿಸುತ್ತಿರುವ ವಿಶಿಷ್ಟ ರೀತಿಯ 'ದಲಿತ'ತ್ವವನ್ನು ಹಿರೇಮಠರು ಈ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಬಾಳಿನ ಸಂಕಟ–ಅದು ಯಾವ ನೆಲೆಯಲ್ಲಿಯೇ ಇರಲಿ–ಅದನ್ನು ಗುರುತಿಸುವ ಉದಾರವಾದ ಪ್ರಜ್ಞೆ ಮತ್ತು ಸಂವೇದನೆ ಇರುವುದರಿಂದಲೇ, ಹಿರೇಮಠರು ಕಂಡರಿಸಿದ 'ದಲಿತ–ವಾಸ್ತವ'ದ ವ್ಯಾಖ್ಯೆ ವಿಶಾಲವಾಗಿದೆ. 'ದಲಿತ ಲೋಕ'ದ ಹರಹೂ ಕೂಡ ವಿಸ್ತೃತವಾಗಿದೆ.

ಎಲ್ಲ ದೃಷ್ಟಿಯಿಂದಲೂ 'ಲಕ್ಕವ್ವನ ಮಂದಿ' ಈ ಸಂಕಲನದ ಶ್ರೇಷ್ಠ ಕಥೆಯಾಗಿದೆ. ಬೀಸುವ ಕಲ್ಲಿಗೆ 'ಹೊಳಿ' ಹಾಕುವ ವೃತ್ತಿಯ ನಾಗವ್ವನ ಅಲೆಮಾರಿ ಬದುಕಿನ ಅನಾಥತೆಯೇ ಕತೆಯ ಸ್ಥಾಯಿಭಾವವಾಗಿದೆ. ಅವಳಲ್ಲಿರುವ ಪ್ರೀತಿ–ಅಂತಃಕರಣ, ತನ್ನಂತೆಯೇ ಅನಾಥಳಾದ ಹನುಮವ್ವ ಹಾಗೂ ಅವಳ ಮಗನಿಗೆ ನೀಡುವ ಆಸರೆ, ತೋರುವ ಅನುಕಂಪ, ಎಲ್ಲವೂ ಅವಳ ವ್ಯಕ್ತಿತ್ವಕ್ಕೊಂದು ಉದಾತ್ತತೆಯನ್ನು ನೀಡುತ್ತದೆ. ಈ ಉದಾತ್ತತೆಯ ಹಿನ್ನೆಲೆಯಲ್ಲಿ ಅವಳಿಗೊದಗಿದ ಅನಾಥ ಸ್ಥಿತಿ ಇನ್ನೂ ಹೆಚ್ಚು ಮರ್ಮವೇಧಕವಾಗಿ ಮಿಡಿಯುತ್ತದೆ.

'ಅಮೀನಪುರದ ಸಂತೆ' ಕಥೆಯ ಕಡು ಬಡವನಾದ ಬಸಪ್ಪ, ಮತ್ತೊಂದು ರೀತಿಯ ದಲಿತನೇ. ಭೀಕರ ಬರಗಾಲ ಅವನ ಸ್ಥಿತಿಗೆ ಕಾರಣವೆಂಬುದು ನಿಜವಾದರೂ ಗ್ರಾಮೀಣ ಸಮಾಜದ ಸಾವಯವ ಸಂಬಂಧದಲ್ಲೂ ಆತ ಒಂಟಿಯಾಗಿದ್ದಾನೆಂಬುದು ಇಲ್ಲಿ ಮುಖ್ಯವಾಗಿದೆ. ಅವನ ಇದ್ದ–ಬಿದ್ದ ಚೂರೂ ಹೊಲ ಒತ್ತೆಯಾಗಿ ಹೋಗಿದೆ. ಏನಾದರೂ ಮಾಡಿ ಮತ್ತೆ ಹೊಲ ಬಿಡಿಸಿಕೊಂಡು ಸ್ವಂತದ ವ್ಯವಸಾಯವನ್ನು ಮಾಡುವ ಆಶೆಯಿಂದ ಕೊಂಡ ಎತ್ತು ಭೀಕರ ಬರಗಾಲದಿಂದಾಗಿ ಅವನಿಗೇ ಹೊರೆ

ಯಾಗಿದೆ. ಏನಾದರೂ ಮಾಡಿ ಅಮೀನಪುರದ ಸಂತೆಯಲ್ಲಿ ಅದನ್ನು ಮಾರಿ ಗೋವಾಕ್ಕೋ, ಮಂಗಳೂರಿಗೋ ಕೂಲಿ ಮಾಡಲು ಹೋಗುವ ನಿರ್ಣಯವೊಂದಿಗೆ ಬಸಪ್ಪ ಸಂತೆಗೆ ಬರುತ್ತಾನೆ. ಎತ್ತನ್ನು ಮಾರದೇ ಗತಿಯಿಲ್ಲ. ಆದರೆ ಎತ್ತನ್ನು ಕೊಳ್ಳಲು ಬರುವವರು ಕಟುಕರಲ್ಲದೇ ಬೇರಿಲ್ಲ. ಬಂದವರೆಲ್ಲ ಈ ಬಡಕಲು ಎತ್ತಿನಲ್ಲಿಯೂ ಎಷ್ಟು ಮಾಂಸ ಸಿಕ್ಕೀತೆಂದು ನೋಡುವವರೇ ಹೊರತು, ಸಾಕುವ, ಪ್ರೀತಿ ಉಳ್ಳವರಲ್ಲ. ಏನಿದ್ದರೂ ಸಾವು ಅನಿವಾರ್ಯ. ಆದ್ದರಿಂದ ತಾನೇ ತನ್ನ ಎತ್ತಿನೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಬಸಪ್ಪ. ಗ್ರಾಮೀಣ ಬಡವನ ದಲಿತತೆ ಈ ಬಗೆಯದಾದರೆ, 'ಮಾವ' ಕಥೆಯ ಮಾವ ಇನ್ನೊಂದು ಬಗೆಯ ದಲಿತನಾಗಿದ್ದಾನೆ. ಗಂಟು ಮುಸುಡಿಯೇ ಪ್ರತಿಷ್ಠೆಯ ಲಕ್ಷಣವೆಂದು ತಿಳಿದವರ ಮನೆಯಲ್ಲಿ, ಮಾವನಂಥ ಕುಳ್ಳ ವ್ಯಕ್ತಿಯ, ಕಗ್ಗ ಹೊಲಸು ಧೋತರ, ಕಸಿಯ ಅಂಗಿ, ಎಲೆಯಡಿಕೆಯ ಕೆಂಪು ಬಾಯಿ, ಹೆಡಿಗೆ ರುಮಾಲು, ಎಲ್ಲವೂ ಅನಾಗರಿಕವಾಗಿ ಕಾಣುತಾವೆ. ಗಂಡ ಮಾತಾಡಿಸಲೂ ಕೂಡ ಅಸಹ್ಯಪಡುವ ಈ ಮಾವನನ್ನು, ಮನೆಯ ಮಂದಿ ತಮ್ಮೊಡನೆ ಊಟಕ್ಕೆ ಕೂಡ ಕರೆಯಲು ಹೋಗದೆ, ಎಲ್ಲರ ಊಟವಾದ ಮೇಲೆ 'ಸೆಲವಾರ' ತಾಟದಲ್ಲಿ ನೆಲದ ಮೇಲೆ ಊಟಕ್ಕೆ ಕೂಡಿಸುತಾರೆ. ಕಥಾನಾಯಕಿ ಬಾಲ್ಯದಿಂದಲೂ ಈ ಮಾವನೊಂದಿಗೆ ಬೆಳೆದವಳು. ಅವನಲ್ಲಿ ಉಕ್ಕುತ್ತಿದ್ದ ಪ್ರೀತಿ–ಲವಲವಿಕೆ–ಜೀವನೋತ್ಸಾಹ–ಸರಳ ಬದುಕು–ಇದನ್ನೆಲ್ಲ ಕಂಡುಕೊಂಡವಳು. ಆದರೆ ಮದುವೆಯ ನಂತರ ಗಂಡನ ಮನೆಯ ಆಧುನಿಕ ಪರಿವೇಶದಲ್ಲಿ ಅನಿವಾರ್ಯವಾಗಿಯೇ ಗಂಡನ ಸಂಸ್ಕೃತಿಗೆ ಅಧೀನರಾದವಳು. 'ಮಾವ' ಬಂದಾಗ ತನಗೆ ಅವನ ಬಗೆಗಿದ್ದ ಪ್ರೀತಿ–ಗೌರವಗಳನ್ನು ವ್ಯಕ್ತಪಡಿಸುವುದಕ್ಕೆ ಸ್ವತಂತ್ರವಿಲ್ಲದೇ ಚಡಪಡಿಸುವಳು. 'ಮಾವ'ನಂಥ ಅರ್ಥಪೂರ್ಣ ವ್ಯಕ್ತಿತ್ವವೂ, ಕೇವಲ ಆಧುನಿಕ ಬಡಿವಾರಗಳಿಲ್ಲವೆಂಬ ಕಾರಣಕ್ಕಾಗಿ ಅಸ್ಪೃಶ್ಯವಾಗಿ ಕಾಣುವ ದುರಂತ ಒಂದು ಬಗೆಯದಾದರೆ, ತನ್ನ ನೈಜ ಪ್ರೀತಿ–ಗೌರವಗಳನ್ನು ವ್ಯಕ್ತಪಡಿಸಲಾಗದ ಕಥಾನಾಯಕಿಯ ಸಂಕಟ ಇನ್ನೊಂದು ಬಗೆಯ ದುರಂತವಾಗಿದೆ.

"ಮಾತೃದೇವೋ ಭವ" ಕಥೆಯ ತಾಯಿ ಕೂಡ ಹೀಗೆಯೇ ವಿದ್ಯಾವಂತ ಗಂಡ–ಹೆಂಡತಿಯರ ಮಧ್ಯ ಅಲಕ್ಷಿತಳಾಗಿದ್ದಾಳೆ. ಜೀವನದುದ್ದಕ್ಕೂ ತ್ಯಾಗ-ಸಹನೆಗಳಿಂದ ತನ್ನನ್ನು ಬೆಳೆಸಿದ ಅವಳ ಬಗೆಗೆ ಕಥಾನಾಯಕನಿಗೆ ಪ್ರೀತಿ ಇದೆಯಾದರೂ ಹೆಂಡತಿಯ ಅಗತ್ಯಗಳಿಗೆ ಗಮನಕೊಡುವ ಭರದಲ್ಲಿ, ಆತ ಕೊಡಬೇಕಾದಷ್ಟು ಲಕ್ಷ್ಯವನ್ನು ತಾಯಿಯ ಬಗೆಗೆ ಕೊಡಲಾರ. ಹೆಂಡತಿಗಂತೂ, ತನ್ನ ಸಿನೇಮಾ-ಹಾಟೆಲ್ಲು, ಇವುಗಳ ಶೋಕೀ ಆಸಕ್ತಿಗಳಲ್ಲಿ ತನ್ನ ಸ್ವಂತದ ಮಗನ ಬಗೆಗೂ ಕಾಳಜಿಯಿಲ್ಲ. 'ತಾಯಿ'ಯ

ಬಗೆಗೂ ಕಾಳಜಿಯಿಲ್ಲ. ತಾಯಿಯ ಅನಾರೋಗ್ಯ, ಅವಳ ಮಾನಸಿಕ ನೆಮ್ಮದಿ, ಇವುಗಳ ಬಗೆಗೆ ಒಂದಿಷ್ಟೂ ಕಾಳಜಿಯಿಲ್ಲದ ಅವಳೂ ಕೂಡ 'ತಾಯಿ'ಯನ್ನು ಕಾಣು ವುದು ಒಂದು ಅಸ್ಪೃಶ್ಯ ಭಾವನೆಯಿಂದಲೇ.

ಹೀಗೇ ಈ ನಾಲ್ಕು ಕಥೆಗಳೂ ಸೂಕ್ಷ್ಮನೆಲೆಯಲ್ಲಿ ಒಂದು ಏಕಸೂತ್ರಿತ, ಕಲ್ಪನೆಯಿಂದ ಬಂಧಿತವಾಗಿವೆ. ಹಿರೇಮಠರ ದಲಿತೇತರ ಪ್ರಜ್ಞೆಯ ಬರವಣಿಗೆ ದಲಿತರ ನೋವನ್ನು ಚಿತ್ರಿಸುವಾಗ ಒಂದು ರೀತಿಯ 'ತಟಸ್ಥ ನಿರೂಪಣೆ'ಯ ಧಾಟಿ ಯನ್ನು ಹಿಡಿಯುವುದು ಅನಿವಾರ್ಯವೇ. ಆದರೆ "ಲಕ್ಕವ್ವನ ಮಂದಿ"ಯೊಳಗಿಂದಲೇ ಒಬ್ಬ ಲೇಖಕ ಮುಂದೆ ಬಂದು ತನ್ನ ಜನಾಂಗದ ನೋವಿನ ಕಥೆಯನ್ನು ಹೇಳತೊಡ ಗಿದ್ದರೆ ಅವನ ಧಾಟಿಯಲ್ಲಿ ಅಷ್ಟೇ ಅನಿವಾರ್ಯವಾಗಿ ಇರುತ್ತಿದ್ದ 'ಚೀರುದನಿ'ಯಿಂದ ಹಿರೇಮಠರ ಕಥೆ–ಪಾರಾಗಿವೆ ಎಂಬುದೂ ಅಷ್ಟೇ ದುಃಖ್ಯವಾದ ಮಾತಾಗಿದೆ ಎಂದು ನನಗೆ ತೋರುತ್ತದೆ.

ಈ ಸಂಕಲನದ ಇನ್ನುಳಿದ ಕಥೆಗಳಲ್ಲಿ "ಸ್ನೇಹಾ" ಮತ್ತು "ಮೌಲ್ಯ" ವ್ಯಕ್ತಿಗತ ಭಾವಲಹರಿಗಳ ಚಿತ್ರಣವಾಗಿ ಸಫಲವಾಗಿವೆ. ಇನ್ನುಳಿದ ಕಥೆಗಳಲ್ಲಿ ಹಿರೇಮಠರು, ತಮ್ಮ ಯಶಸ್ವೀ–ಕಥೆಗಳ ಪೂರ್ವಭಾವಿಯಾಗಿ ಕೆಲವು ಬರವಣಿಯ ವ್ಯಾಯಾಮ ಗಳನ್ನು ಮಾಡುತ್ತಿದ್ದಾರೆ ಎನ್ನಿಸುತ್ತದೆ.

— ಆನಂದ ಝುಂಝುರವಾಡ

ಹೆಜ್ಜೆ ಮೂಡಿದ ಹಾದಿ (ಕಥಾ ಸಂಕಲನ)

ಲೇಖಕರು: **ಬಾನು ಮುಷ್ತಾಕ್**
ಪ್ರಕಾಶಕರು: **ಸಂವಾದ ಪ್ರಕಾಶನ, ಪುಲ್ಲಾಡಿಹಳ್ಳಿ**
ಪುಟ: viii + 110, ಬೆಲೆ: ರೂ.21/-

ಎಪ್ಪತ್ತರ ದಶಕದಲ್ಲಿ ಕನ್ನಡ ಸಾಹಿತ್ಯದ ಹೊಸಧ್ವನಿಯಾಗಿ ಹೊಮ್ಮಿದ ದಲಿತ ಸಾಹಿತ್ಯ ತನ್ನ ತಲ್ಲಣಗೊಳಿಸುವ ಅನುಭವಗಳಿಂದ ಓದುಗ ಲೋಕವನ್ನು ಬೆಚ್ಚಿ ಬೀಳಿಸಿದರೆ, ಎಂಭತ್ತರ ದಶಕದಲ್ಲಿ ಭಿನ್ನ ಧಾರೆಯಾಗಿ ಕಾಣಿಸಿಕೊಂಡ ಮುಸ್ಲಿಂ ಸಾಹಿತ್ಯ ಬೇರೊಂದು ಪ್ರಪಂಚವನ್ನೇ ಓದುಗರ ಮುಂದಿಟ್ಟು ಚಕಿತಗೊಳಿಸಿತು.

ನೋವು ಶೋಷಣೆಗಳಿಂದ ದಿಕ್ಕೆಟ್ಟ ಸಮಾಜದ ಅಂತರಂಗವೇ ಈ ಎರಡೂ ಸಾಹಿತ್ಯ ಪ್ರಾಹಿನಿಗಳ ಮೂಲ ಸೆಲೆಯಾದ್ದರಿಂದ ಇವುಗಳ ಪ್ರವೇಶದಿಂದ ಪಡೆದು ಕೊಂಡ ಕನ್ನಡ ಸಾಹಿತ್ಯ ಹೊಸ ದಿಕ್ಕು ಮತ್ತು ಗುರಿಗಳತ್ತ ಹೆಜ್ಜೆ ಹಾಕತೊಡಗಿತು.

ಬೆರಳೆಣಿಕೆಯಷ್ಟು ದಲಿತ ಲೇಖಕರು, ಅವರಿಗಿಂತಲೂ ಕಡಿಮೆ ಎನ್ನಬಹುದಾದಷ್ಟು ಮುಸ್ಲಿಂ ಲೇಖಕರು ದಿಟ್ಟವಾಗಿ, ಆತ್ಮಸ್ಥೈರ್ಯದಿಂದ ತಮ್ಮ ಅನುಭವ ಪ್ರಪಂಚಕ್ಕೆ ಒಗ್ಗುವ ಹೊಸ ನುಡಿಗಟ್ಟುಗಳನ್ನು, ಪರಿಭಾಷೆಗಳನ್ನು ಕಟ್ಟತೊಡಗಿದರು. ಅದೇನೂ ಇಲ್ಲದೆಯೂ ಇವರ ಅನುಭವದ ತಾಜಾತನವೇ ಓದುಗನ ಹೃದಯದಾಳಕ್ಕೆ ಇಳಿಯ ಬಲ್ಲಷ್ಟು ಸಾಮರ್ಥ್ಯ ಪಡೆದುಕೊಂಡಿತ್ತು.

ಈ ಹಿನ್ನೆಲೆಯಲ್ಲಿ ಬರೆಯುತ್ತಿರುವ ಬಾನು ಮುಷ್ತಾಕ್ ಅವರ "ಹೆಜ್ಜೆ ಮೂಡಿದ ಹಾದಿ" ಏಳು ಕಥೆಗಳ ಸಂಕಲನ. ಒಂದೇ ಕೃತಿಯ ಏಳು ಅಧ್ಯಾಯಗಳಂತೆ ಕಾಣುವ ಈ ಸಂಗ್ರಹದ ಕಥೆಗಳು ದಟ್ಟ ಜೀವನ ವಿವರಗಳಿಂದ, ಅನುಭವದ ತೀವ್ರತೆ ಯಿಂದ, ಕಲಾತ್ಮಕ ನಿರೂಪಣೆಯಿಂದ ಗಮನ ಸೆಳೆದುಕೊಳ್ಳುತ್ತವೆ.

ಬಾನು ಅವರ ಪ್ರಜ್ಞಾವಂತ ಮನಸ್ಸು ಸಹಜವಾಗಿಯೇ ಶೋಷಿತ ಮುಸ್ಲಿಂ ಮಹಿಳೆಯ ಸುತ್ತ ಕೆಲಸ ಮಾಡಿದರೂ, ಈ ಕಥೆಗಳಲ್ಲಿ ಹೆಣ್ಣೊಬ್ಬಳೇ ಶೋಷಣೆಗೆ ಈಡಾಗಿಲ್ಲ. ಅಸಹಾಯಕ ಗಂಡಸರು, ಅನಾಥ ಮಕ್ಕಳು, ಆರ್ಥಿಕ ದುರ್ಬಲರು ಹೀಗೆ ವಿಭಿನ್ನ ಮುಖಗಳು ಬೇರೆ ಬೇರೆಯ ಸಂದರ್ಭ ಮತ್ತು ಸನ್ನಿವೇಶಗಳಲ್ಲಿ ದಾಖ ಲಾಗಿ ಕಥೆಗಳಿಗೆ ಬೇರೆ ಬೇರೆಯ ಆಯಾಮ ತಂದುಕೊಡುತ್ತವೆ. ಹೀಗಾಗಿಯೇ ಇಲ್ಲಿ ಶೋಷಣೆ ಸರಳೀಕೃತ ಗ್ರಹಿಕೆಯಾಗುವುದಿಲ್ಲ. ಸೂತ್ರಬದ್ಧ ಲೆಕ್ಕಾಚಾರವೂ ಆಗುವುದಿಲ್ಲ.

ಈ ಕಥೆಗಳ ಇನ್ನೊಂದು ವಿಶೇಷವೆಂದರೆ, ಶೋಷಣೆಯನ್ನೇ ಪ್ರಧಾನ ವಸ್ತು ವಾಗಿ ಪಡೆದ ಕಥೆಗಳು ಸಾಮಾನ್ಯವಾಗಿ ಪಡೆದುಕೊಳ್ಳುವ ದೊಡ್ಡ ಗಂಟಲಿನ ಆಕ್ರೋಶದ ಧ್ವನಿ ಇಲ್ಲಿ ಕಾಣಿಸದೆ ಇರುವುದು. ಸ್ಥಿಮಿತವನ್ನು ಕಳೆದುಕೊಳ್ಳದೆ, ಇಡಿಯ ಸನ್ನಿವೇಶವನ್ನು ಸಾವಧಾನದಿಂದ ಗಮನಿಸುವ ಪ್ರಬುದ್ಧ ಸ್ಥಿತಿ ಇಲ್ಲಿನ ಕಥೆ ಗಳಲ್ಲಿ ಕಂಡುಬರುತ್ತದೆ. ಇಡೀ ಸನ್ನಿವೇಶವನ್ನು ಅದರ ಸೂಕ್ಷ್ಮ ವಿವರಗಳಲ್ಲಿ ಅರ್ಥ ಪೂರ್ಣ ಗ್ರಹಿಕೆಗಳಿಂದ ಮಂಡಿಸುವ ಕಾರಣ ಇದು ಸಮಾಜದ ಜೀವಂತ ಸ್ಥಿತಿಯನ್ನು ಸಮರ್ಥವಾಗಿ ಬಿಂಬಿಸುವುದರ ಜೊತೆಗೆ, ಆ ಸಮಾಜದ ಶಕ್ತಿ–ದೌರ್ಬಲ್ಯಗಳೆರಡನ್ನೂ ದಾಖಲಿಸುತ್ತದೆ. ಉಸಿರುಕಟ್ಟಿಸುವ ಧರ್ಮ, ವ್ಯಕ್ತಿಯ ಸಹಜ ವಿಕಾಸಕ್ಕೆ ಮಾರಕ ವಾಗುವ ಸಮಾಜದ ಕೃತಕ ಕಟ್ಟುಪಾಡುಗಳು, ಅರ್ಥರಹಿತ ನಂಬಿಕೆಗಳು, ಮೌಢ್ಯ ಗಳು ಒರೆಗೆ ಹಚ್ಚುವ, ಬೆಲೆಕಟ್ಟುವ ಕೆಲಸವನ್ನು ಈ ಕಥೆಗಳು ನಿರುದ್ವಿಗ್ನ ಭಾವದಿಂದ ಮಾಡುತ್ತವೆ. ಕಥೆಯನ್ನು ಓದುಗರ ಬಳಿಗೆ ಒಯ್ಯಲು ಎಲ್ಲ ಜನಪ್ರಿಯ, ರಂಜಕ ಅಂಶಗಳನ್ನು ಬಳಸಿಕೊಂಡರೂ, ಈ ಕಥೆಗಳು ಬದುಕನ್ನು ಗ್ರಹಿಸುವ ಮತ್ತು

ವಿವೇಚಿಸುವ ಪ್ರಬುದ್ಧ ರೀತಿಯಿಂದಾಗಿ ಇಲ್ಲಿ ಜನಪ್ರಿಯ ಕಥೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಸರಳ ಪರಿಹಾರಗಳು, ರೋಚಕ ಅಂತ್ಯಗಳು, ಕೃತಕ ಸನ್ನಿವೇಶಗಳು ಸರಳೀಕರಿಸಿದ ಪಾತ್ರಗಳು ಕಂಡುಬರುವುದಿಲ್ಲ.

ಇಷ್ಟಾಗಿಯೂ ಜನಪ್ರಿಯ ಮಾದರಿಗಳು ಒಡ್ಡುವ ಅಪಾಯದಿಂದ ಬಾನು ಸಂಪೂರ್ಣವಾಗಿ ಪಾರಾಗಿರುವಂತೆಯೂ ಇಲ್ಲ. ಈ ಸಂಕಲನದ 'ಲವ್ ಬರ್ಡ್' ಇಂಥ ಅಪಾಯಕ್ಕೆ ಬಲಿಯಾದ ಕಥೆ. ರಂಜಕ ಕಥೆಗಳು ಒಡ್ಡುವ ಆಮಿಷಕ್ಕೆ ಕಥೆಗಾರರು ಬಲಿಯಾದರೆ ಏನಾಗಬಹುದು ಎಂಬುದಕ್ಕೆ ಈ ಕಥೆ ಒಳ್ಳೆಯ ಉದಾಹರಣೆಯೂ ಆಗಬಲ್ಲದು. ಹಾಗೆಯೇ ಶೋಷಣೆಯನ್ನು ಅದರೆಲ್ಲ ಹಿನ್ನೆಲೆಯಲ್ಲಿ ಗ್ರಹಿಸದೆ, ಸರಳವಾಗಿ ನೋಡಿದರೆ, ಏಕಮುಖವಾಗಿ ಚಿತ್ರಿಸ ಹೊರಟರೆ ಆಗುವ ಅಪಾಯವೇ ಇಲ್ಲೂ ಆಗಿದೆ. ಶೋಷಣೆ ಸಾರ್ವಕಾಲಿಕ ಸತ್ಯದಂತೆ ಮಾನವ ಜನಾಂಗವನ್ನೇ ವ್ಯಾಪಿಸಿಕೊಂಡಿದ್ದರೂ, ಅದನ್ನು ಸ್ಪಷ್ಟ ಹಿನ್ನೆಲೆಯಲ್ಲಿ ಗ್ರಹಿಸದೆ ಹೋದರೆ ನೀರಿನಲ್ಲಿ ಬರೆದ ಚಿತ್ರದಂತೆ ಅದು ಏನನ್ನೂ ಹೇಳದೆ, ಎಲ್ಲವನ್ನೂ ಹೇಳಿದ ಭ್ರಮೆಯಲ್ಲಿ ಲೇಖಕರನ್ನು–ಓದುಗರನ್ನು ಇರಿಸುತ್ತದೆ.

ಸಂಕಲನದ ಕೊನೆಯ ಕಥೆ 'ಹೆಜ್ಜೆ ಮೂಡಿದ ಹಾದಿ' ಬಾನು ಹೊಸ ರೀತಿಯ ಪ್ರಯೋಗವೊಂದನ್ನು ನಡೆಸಿರುವುದರ ದಾಖಲೆ. ಬುದ್ಧಿಜನ್ಯವಾದ ಇಂಥ ಕಥೆಗಳು ಏನನ್ನೂ ಹೇಳಬಹುದು. ಆದರೆ ಎಷ್ಟು ತೀವ್ರವಾಗಿ ಹೇಳುತ್ತವೆ ಎಂಬುದು ಮುಖ್ಯ. ಜೊತೆಗೆ ಒಬ್ಬ ಕಥೆಗಾರ ಯಾಕಾಗಿ ತನ್ನ ಅನುಭವವನ್ನು ಹೇಳಲು ಈ ಕ್ರಮ ಅನುಸರಿಸಿದ್ದಾನೆ ಎಂಬ ಪ್ರಶ್ನೆಯೂ ಏಳುತ್ತದೆ. ಅಪಾರ ಜೀವನ ಸಾಮಗ್ರಿಯನ್ನು ಮುಂದಿಟ್ಟುಕೊಂಡು ಓದುಗರ ಮುಂದೆ ನಿಂತಿರುವ ನಮ್ಮ ಕೆಲವೇ ಕೆಲವು ಮುಸ್ಲಿಂ ಬರಹಗಾರರು ತಮ್ಮ ಬೊಗಸೆಗಳಿಗೆ ದಕ್ಕಿದಷ್ಟನ್ನು ಎತ್ತಿ ಎತ್ತಿ ಓದುಗರಿಗೆ ಕೊಡಬೇಕಾದ ಈ ಸಂದರ್ಭದಲ್ಲಿ, ಬುದ್ಧಿಜನ್ಯ ಕಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಪ್ರಯೋಗಶೀಲರಾಗುವುದು ವ್ಯರ್ಥ ಕಾಲಹರಣ. ಒಂದು ಕಥೆಯ ಸೌಂದರ್ಯ, ಕಲಾವಂತಿಕೆ, ಬರಹ ಸೌಷ್ಠವ ಇತ್ಯಾದಿ ಎಲ್ಲ ಅಂಶಗಳೂ ಅದರ ಸರಳತೆಯಲ್ಲಿ, ಪ್ರಾಮಾಣಿಕತೆಯಲ್ಲಿ ಮತ್ತು ಬದುಕಿನ ನಿಷ್ಠೆಯಲ್ಲಿ ಕಾಣಿಸಿಕೊಳ್ಳುತ್ತವೆ. ಬರಹಗಾರರು ಪ್ರಯೋಗಶೀಲರಾಗಬೇಕಾಗಿರುವುದು ಈ ನಿಟ್ಟಿನಲ್ಲಿ ಮಾತ್ರ.

—ಜಿ. ಪಿ. ಬಸವರಾಜು

ಮಾರ್ಚ್–ಏಪ್ರಿಲ್ ೧೯೯೧/೬೯

ಮೊದಲ ನೋಟ

ಪ್ರವೇಶ (ಕಥಾ ಸಂಕಲನ)
ಲೇಖಕರು: ವೈ ಮಂಜುಳಾ, ಕೆ. ವೆಂಕಟೇಶ್, ಮಮತಾ ಜಿ. ಸಾಗರ

ಈ ಪುಟ್ಟ ಪುಸ್ತಿಕೆಯಲ್ಲಿ ಮೂವರು ಹೊಸ ಕಥೆಗಾರರ ಐದು ಕಥೆಗಳು ಸಂಗ್ರಹವಾಗಿವೆ. ಯುವ ಬರಹಗಾರರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಪ್ರತಿಭಾ ಯುವ ವೇದಿಕೆಯು ಹಮ್ಮಿಕೊಂಡಿರುವ ಪುಸ್ತಕ ಪ್ರಕಾಶನದ ಕಾರ್ಯದಲ್ಲಿ ಇದು ಎರಡನೆಯ ಹೆಜ್ಜೆಯಾಗಿದೆ. ಕೆ. ವೆಂಕಟೇಶ್ ಅವರ 'ಸಣ್ಣ ಸಂಗತಿ' ವಿಶಿಷ್ಟವಾದ ಪ್ರಯೋಗವಾಗಿದ್ದು ಇವರ ಬಗ್ಗೆ ಆಸೆ ಹುಟ್ಟಿಸುತ್ತದೆ. ಮಮತಾ ಜಿ. ಸಾಗರ ಅವರ 'ಪುಟ ತಿರುವಿದಾಗ' ಅಚ್ಚುಕಟ್ಟಾದ ನಿರೂಪಣೆಯು ಕಥೆಗಾರಿಕೆಯನ್ನು ತೋರುತ್ತದೆ.

ಶ್ರಾವಣ (ಬೇಂದ್ರೆ ವಿಮರ್ಶೆ)
ಲೇಖಕರು: **ಯುವ ಬರಹಗಾರರು**

ಬೆಂಗಳೂರಿನ ಪ್ರತಿಭಾ ಯುವ ವೇದಿಕೆಯ ಇನ್ನೊಂದು ವಿಶಿಷ್ಟ ಪ್ರಯೋಗವಿದು. ಈ ಪುಸ್ತಕವು ವೇದಿಕೆಯ ಉತ್ಸಾಹವನ್ನು, ಸದಭಿರುಚಿಯನ್ನು ಸ್ಪಷ್ಟಪಡಿಸುತ್ತದೆ. ಈ ಪುಸ್ತಿಕೆಯಲ್ಲಿ ಬೇಂದ್ರೆಯವರ 'ತುಂಬಿತ್ತು ಹಾಲಗೇರಿ', 'ಚಿಗರಿಗಂಗಳ ಚೆಲುವಿ', 'ಜೋಗಿ' ಮತ್ತು 'ಪುಟ್ಟ ವಿಧವೆ' ಕವನಗಳ ಪ್ರಾಯೋಗಿಕ ವಿಮರ್ಶೆಯ ಪ್ರಯತ್ನಗಳಿವೆ. ಬೇಂದ್ರೆಯವರ 'ಶ್ರಾವಣ' ಮತ್ತು 'ಪ್ರಣಯ ಕವಿತೆಗಳು' ಕುರಿತು ಎರಡು ಲೇಖನಗಳಿವೆ. ಒಟ್ಟು ಇಲ್ಲಿನ ಆರೂ ಲೇಖನಗಳು ಉತ್ಸಾಹಭರಿತ ಪ್ರಯತ್ನಗಳಾಗಿವೆ. ಇವುಗಳಲ್ಲಿ ನಾ ರವಿಕುಮಾರ ಅವರು ಬರೆದ 'ಪುಟ್ಟ ವಿಧವೆ:ಕೆಲ ಟಿಪ್ಪಣಿಗಳು' ಸಹಜ ಸ್ಪಂದನದ ವಿಮರ್ಶೆ ಅನ್ನಿಸುತ್ತದೆ.

ಹಾಲು ಕುಡಿದಾ ಹುಡುಗ (ಕಥೆಗಳು)
ಲೇಖಕರು: **ಅಬ್ದುಲ್ ರಶೀದ್**

ಇದು ಲೇಖಕರ ಮೊದಲ ಕಥಾ ಸಂಕಲನ. ರಶೀದ್ ಪ್ರತಿಭಾನ್ವಿತ ಕಥೆಗಾರ. ಸಹಜ ಕಥೆಗಾರಿಕೆ ಮತ್ತು ಪ್ರಯೋಗಶೀಲತೆ ಎರಡೂ ಮೇಳೈಸಿದ ಇಲ್ಲಿನ ಕಥೆಗಳು ಓದಿನ ಸುಖ ನೀಡುತ್ತವೆ. ರಶೀದ್ ಅವರ ಕಥೆಗಾರಿಕೆಯ ಹಿಂದೆ ಒಂದು ವಿಶಿಷ್ಟವಾದ ಲೀಲಾ ಮನೋಭಾವವಿದ್ದಂತೆ ತೋರುತ್ತದೆ. ಇದರಿಂದ ಕಥಾವಸ್ತುವಿನಲ್ಲಿ ಹುದುಗಿರುವ ದುರಂತವು ನಮಗೆ ಚುರುಗುಟ್ಟದಂತೆ ತಲುಪುತ್ತದೆ. ಆದರೆ ಈ ಮಾರ್ಗದ ಮೂಲಕ ದುರಂತದ ಪರಿಣಾಮಕಾರಿಯಾದ ಸಂವಹನ ಸಾಧ್ಯವಾಗದೆನ್ನಿ

ಸುತ್ತದೆ. ರಶೀದರ ಭಾಷೆಯ ಅಚ್ಚುಕಟ್ಟುತನ, ಕಥೆಗಳಲ್ಲಿ ಕಟ್ಟಿಕೊಡುವ ವಿಶಿಷ್ಟ ಪರಿಸರ–ಸಂಸ್ಕೃತಿಗಳ ಹೊಸತನ ನಮ್ಮ ಗಮನವನ್ನು ತಕ್ಷಣ ಸೆಳೆಯುವಂಥವು ಗಳಾಗಿವೆ. ರಶೀದರಿಂದ ಇನ್ನೂ ಹೆಚ್ಚು ಮಹತ್ವದ್ದನ್ನು ನಿರೀಕ್ಷಿಸಬಹುದು.

ಏನು ಹೇಳಲಿ ಗೆಳೆಯ (ಕವನಗಳು)

ಲೇಖಕರು: **ವಿಜಯ ಸಬ್ಬರಾಜ್**

ಲೇಖಕಿಯ ಈ ಎರಡನೇ ಕವನ ಸಂಕಲನದಲ್ಲಿ ಇಪ್ಪತ್ತೈದು ಕವನಗಳಿವೆ. ಇಲ್ಲಿನ ಬಹುಪಾಲು ಎಲ್ಲ ಕವನಗಳ ಹಿಂದೆ ಇರುವವಳು ಓರ್ವ ತಪ್ತ ಹೆಣ್ಣು. ಆದರೆ ಅದು ಢಾಳಾಗಿ ಕಾಣುತ್ತದೆ; ತಪ್ತತೆ ಕವನ ಕಟ್ಟುವ ಕಸರತ್ತಿನಲ್ಲಿ ಕಂಗೆಟ್ಟು ಹೋಗಿದೆ. 'ಲೆಕ್ಕವಿಲ್ಲದ ಲಕ್ಷ। ನಕ್ಷತ್ರ ದೀಪಗಳ ತಂಪು ಬೆಳಕಿನಲಿ। ಒಳಗೊಳಗೆ ನೂರಾರು ಸಿಡಿಮದ್ದು ಸ್ಫೋಟ'। 'ಗಾಜು ನೀರಿನ ಗಂಗೆಯಂಗದಲಿ। ರೋಮಾಂಚನದ ಅಲೆ ಯುಬ್ಬರ'। ಮುಂತಾದ ಸುಂದರ ಸಾಲುಗಳನ್ನು ಅಲ್ಲಲ್ಲಿ ಗುರುತಿಸಬಹುದಾದರೂ, ಎಲ್ಲೆಲ್ಲೂ ಕ್ಲಿಷ್ಟವಾದ ಮಾತುಗಾರಿಕೆಯದೇ ಮೇಲುಗೈ. ಕವನ ಕಾವ್ಯಾನುಭೂತಿ ಯಲ್ಲಿ ತಂತಾನೆ ಸಹಜವಾಗಿ ಅರಳಲು ಬಿಡಬಲ್ಲಷ್ಟು ತಾಳ್ಮೆ ವಹಿಸಿದರೆ ಈ ಲೇಖಕಿ ಒಳ್ಳೆಯ ಕವನಗಳನ್ನು ಕೊಡಬಲ್ಲರೆಂಬ ಆಶಯವಷ್ಟೇ ಈ ಸಂಕಲನದಲ್ಲಿರುವುದು.

ಕಾನುಗೋಡು ಮನೆ (ಕವನಗಳು)

ಲೇಖಕರು: **ಕೆ. ಎಚ್. ಶ್ರೀನಿವಾಸ**

ಮಾಜಿ ಸಚಿವರ ಮೊದಲ ಸಂಕಲನವಿದು. ಕನ್ನಡ ಪುಸ್ತಕ ಪ್ರಕಾಶನ ಉದ್ಯಮ ಹೆಮ್ಮೆಪಟ್ಟುಕೊಳ್ಳುವಷ್ಟು ಭರ್ಜರಿಯಾಗಿ ಹೊರಬಂದಿದೆ ಈ ಪುಸ್ತಕ. ಶ್ರೀನಿವಾಸರು ಪಾಲ್ಗೊಂಡ ರಾಜಕಾರಣವನ್ನು ನೆನೆಸಿಕೊಂಡಾಗ ಆ ರಾಜಕಾರಣಕ್ಕೂ ಈ ಕವನಗಳಿಗೂ ಎಲ್ಲಿಗೆಲ್ಲಿಯ ಸಂಬಂಧವೆಂದು ಅಚ್ಚರಿಯಾಗುತ್ತದೆ. ಇಲ್ಲಿನ ಬಹುಪಾಲು ಎಲ್ಲ ಕವನಗಳೂ ತಮ್ಮ ಮಿತಿಯಲ್ಲಿಯೇ ಒಂದಿಲ್ಲೊಂದು ಕಾರಣಕ್ಕೆ ಖುಷಿ ಕೊಡು ತ್ತವೆ. ಹಾಗೇ ನವೋದಯದ ರಸಮುಗ್ಧತೆ ಹಾಗೂ ನವ್ಯದ ಜಾಣ್ಮೆಗಳೆರಡೂ ಮೇಳೈಸಿರುವ ಇಲ್ಲಿನ ಬಹುಪಾಲು ಕವನಗಳ ಕೊರತೆ ಎಂದರೆ 'ತೀವ್ರ ಶೋಧ'ವಿಲ್ಲ ದಿರುವುದು. ಶ್ರೀನಿವಾಸರು ರಾಜಕಾರಣದಂತೆ ಕಾವ್ಯವನ್ನೂ 'ಕಡ್ಲೆಕಾಯಿ'ಯಂತೆ ಪರಿಗಣಿಸದಿದ್ದರೆ ಅವರಿಂದ ನಿಜವಾಗಿಯೂ ಒಳ್ಳೆಯ ಕವನಗಳು ಬರಬಲ್ಲವೆಂಬ ಶಂಕೆಯನ್ನು ಈ ಸಂಕಲನ ಹುಟ್ಟಿಸುತ್ತದೆ.

ಸಂಭವ (ಕವನಗಳು)

ಲೇಖಕರು: **ಬಿ. ಎ. ಸನದಿ**

ಇವರ ಈ ಹನ್ನೆರಡನೇ ಕವನ ಸಂಕಲನದಲ್ಲಿ 66 ಪದ್ಯಗಳಿವೆ, ನಿರ್ಮಲ

ಮನಸ್ಸಿನ ನಿರ್ಮಲ ಕವನಗಳಿವು. ತನ್ನ ಅನುಭೂತಿಗೆ ದಕ್ಕಿದಷ್ಟನ್ನೇ ಸರಳವಾಗಿ, ಸುಂದರವಾಗಿ ಹೇಳುವ ಪ್ರಾಮಾಣಿಕ ಪ್ರಯತ್ನವನ್ನು ಇಲ್ಲಿ ಕಾಣಬಹುದು: 'ನಮ್ಮ ಕಾಲಿನ ಕೆಳಗೆ ನಮ್ಮ ಗಮನವೇ ಇಲ್ಲ । ನಮ್ಮ ನೆತ್ತಿಯ ಮೇಲುರಿಯುವ ಸೂರ್ಯ । ನಮ್ಮ ಕಾಲಿನ ಕೆಳಗೂ । ಅವಿತ ನೆರಳಿನ ಒಳಗೂ । ಬೇರೆ ಹೊಡೆದವನೆಂದು ನಮಗೆ ತಿಳಿದೇ ಇಲ್ಲ !' ॥ ಎಂಬಂತಹ ಹಲವಾರು ಬೆಡಗಿನ ಸಾಲುಗಳನ್ನು ಇಲ್ಲಿನ ಹಲವಾರು ಕವನಗಳಲ್ಲಿ ಓದಿ ಆನಂದಿಸಬಹುದು:

'ಲೆಕ್ಕವೆ ಇಲ್ಲದ ಹೆಜ್ಜೆಗಳಿಟ್ಟರು ।
ತಪ್ಪುವ ಲೆಕ್ಕಕೆ ಯಾರು ಹೊಣೆ ? ।
ನೊಸಲ ನೇರಕೇ ಬಯಲ ಬಾಗಿಲು ।
ಅದರೆದುರಿನದೇ ನಮ್ಮ ಮನೆ !' ॥ ಆದರೆ ಈ ಕವಿ ಚಟ ಅಥವಾ

ಆಹ್ವಾನಕ್ಕೆ ಪದ್ಯ ಬರೆಯುತ್ತಾರೆಂಬುದನ್ನು ಬಹಿರಂಗಪಡಿಸುವ ಹಲವು ಕವನಗಳೂ ಇವೆ ಇಲ್ಲಿ: 'ನಾ', 'ಶಾಂತಿಗೊಂದು ಸವಾಲು', 'ರವೀಂದ್ರ ಸ್ಮೃತಿ', 'ಎಲಾ ಶ್ರಾವಣದ ಮೋಡಾ !', 'ಸರ್ವಸತ್ತಾವಾದಿ' ಇತ್ಯಾದಿ....

ಹಸಿವಿನ ಲೋಕ (ಕವನಗಳು)

ಲೇಖಕರು: **ಐ. ಅರ್. ಪೆರುಮಾಳ್**

ಐ. ಎ. ಎಸ್. ಅಧಿಕಾರಿಯೊಬ್ಬರು ತಮಿಳಿನಲ್ಲಿ ಬರೆದಿರುವ ಕವನಗಳನ್ನು ಕನ್ನಡದ ಹಿರಿಯ ಕವಿ ವೀಚಿ ಇಲ್ಲಿ ಭಾವಾನುವಾದ ಮಾಡಿದ್ದಾರೆ. ಸಂಕಲನದ ಶೀರ್ಷಿಕೆಯೇ ಹೇಳುವಂತೆ ಇಲ್ಲಿನ ಕವನಗಳ ಸ್ಥಾಯೀ ಭಾವ: ಹಸಿವು, ನೋವು. ಆದರೆ ನಮ್ಮ ಬಂಡಾಯ ಕವನಗಳಂತೆ ಇವು ಆರ್ಭಟಿಸುವುದಿಲ್ಲ, ಅನ್ಯಾಕ್ರಮಣ ಮಾಡುವುದಿಲ್ಲ. ಬದಲಿಗೆ ಹಸಿವು, ಸಂಕಟಗಳ ತಾಯಿ ಬೇರನ್ನು ಅಲ್ಲಾಡಿಸಲು ಯತ್ನಿಸುತ್ತವೆ: 'ಆಗಸವೆಂಬ ಮಡಕೆಯಲಿ। ತಾರೆಗಳೆಂಬ ಅಗುಳುಗಳು । ಕಣ್ಣಿನ್ನೆಯಲಿ ಕರೆಯುತಲಿಹವು। ಹಸಿವಿನ ಲೋಕಕೆ ಸೆಳೆಯುತಲಿಹವು' ॥ ಆದರೆ ಸಂಕಲನದ ಮೊದಲ ಐದು ಪದ್ಯಗಳಲ್ಲಿ–'ತಿರು ತಾಂಡವ', 'ಆ ಚೆಲ್ವಕ್ಕಿಗಳು', 'ಹಸಿವಿನ ಲೋಕ', 'ಮನೆಗಳು' ಹಾಗೂ 'ಎದೆ ಜೇಂಕಿ'–ಕಾಣುವ ಈ ಕಾವ್ಯ ತನ್ಮಯತೆ ಹಾಗೂ ತೀವ್ರತೆ ಉಳಿದ 24 ಪದ್ಯಗಳಲ್ಲಿ ಕ್ರಮೇಣ ಕಣ್ಮರೆಯಾಗಿ ಸ್ಥೂಲತೆ, ಶಬ್ದಾಡಂಬರ, ಜಾಣ್ಮೆ ಹಾಗೂ ತಮಾಷೆಗಳು ಕಾಣಿಸತೊಡಗಿ ಈ ಕವಿ ಶಕ್ತಿಯನ್ನು ಕೇಂದ್ರೀಕರಿಸಲಾರ ಎಂಬ ಸಂದೇಹವುಂಟಾಗುತ್ತದೆ. ವೀಚಿ ಇಲ್ಲಿ ಬಹು ಒಳ್ಳೆಯ ಅನುವಾದಕರಾಗಿ ಮೆರೆದಿದ್ದಾರೆ.

ನೋಡದಲ್ಲಿ ಒಂದು ಕಣ (ಕವನಗಳು)

ಲೇಖಕರು: ಮಿತಾ ದೇವನೂರ್

ಕನ್ನಡದ ಅತ್ಯಂತ ಪ್ರಸಿದ್ಧ ಎಳೆಯ ಕವಯತ್ರಿ ಎನಿಸಿರುವ ಮಿತಾಳ 28 ಕವನಗಳು ಇಲ್ಲಿವೆ. ಬಾಲ್ಯ ಹಾಗೂ ಎಳೆಹರೆಯದ ಆಟಪಾಠ, ಹರ್ಷೋಲ್ಲಾಸ, ಭಾವಮುಗ್ಧತೆ ಹಾಗೂ ಬೆರಗು-ಬೆಡಗುಗಳು ಇಲ್ಲಿನ ಕವನಗಳಲ್ಲಿ ಸ್ವಚ್ಛಂದವಾಗಿ ಮೈದಳೆದಿವೆ. ಈ ಕವನಗಳ ಶಕ್ತಿ-ದೌರ್ಬಲ್ಯಗಳ ಬಗ್ಗೆ ಬರೆದರೆ ಇದರಿಂದ ಇವಳ ಮುಂದಿನ ಕವನಗಳು ಎಲ್ಲಿ ನಲುಗಿ ಬಸವಳಿಯುವವೋ ಎಂದು ಆತಂಕಪಡುವಷ್ಟು ಸಹಜ ಸೂಕ್ಷ್ಮ ಸಮತೋಲನದಲ್ಲಿವೆ ಈ ಕವನಗಳು. ಬರೆಯಲಿ, ಬೆಳೆಯಲಿ ಎಂದಷ್ಟೇ ಹಾರೈಸಬಹುದು. ಎಷ್ಟಾದರೂ ಅವಳೇ ಬರೆದಿಲ್ಲವೇ: 'ಮೋಡದಲ್ಲಿ ಒಂದು ಕಣ । ಕಣದಲ್ಲಿ ಒಂದು ಮಿಂಚು । ಮಿಂಚಿನಲ್ಲಿ ಒಂದು ಸಿಡಿಲು । ಸಿಡಿಲಿನಲ್ಲಿ ಒಂದು ಬೆಂಕಿ' ॥ ಮತ್ತು 'ಒಂದು ಊರಿನಲ್ಲಿ ಒಂದು ಕವನ । ಕವನದಲ್ಲಿ ಒಂದು ಹುಡುಗಿ । ಹುಡುಗಿಯಲ್ಲಿ ಒಂದು ಹೂವು । ಹೂವಿನಲ್ಲಿ ಒಂದು ಬೀಜ । ಬೀಜದಲ್ಲಿ ಒಂದು ಮನೆ'॥ ಎಂದು?

ಪುಸ್ತಕ ಸ್ವೀಕಾರ

೧. ಮಾಯಾ ದರ್ಪಣ (ಕಥೆಗಳು) ಲೇ: ಎಂ. ಎಸ್. ಶ್ರೀರಾಮ್
ಪ್ರ; ಕನ್ನಡ ಸಂಘ, ಕ್ರೈಸ್ಟ್ ಕಾಲೇಜು. ಬೆಂಗಳೂರು (1991)
ಪುಟ: x + 163, ಬೆಲೆ ರೂ. 26/-

೨. ಮಿಂಚು ಗೊಂಚಲು (ಕವನ ಸಂಕಲನ)
ಸಂ: ರುದ್ರನಾಥ ಕಲ್ಯಾಣಶೆಟ್ಟಿ ಮತ್ತು ಬಸವರಾಜ ಹಣಜಿ
ಪ್ರ: ಸಾಹಿತ್ಯ ವೇದಿಕೆ, ನರಗುಂದ. ಪುಟ: 49, ಬೆಲೆ ಗೂ, 10/-

೩. ಬೆಟ್ಟದಪುರ (ಕಾದಂಬರಿ) ಲೇ: ಆರ್ಚೀ
ಪ್ರ: ಎನ್.ಆರ್.ಎ.ಎಂ.ಎಚ್. ಪಬ್ಲಿಕೇಷನ್, ಕೋಟೇಶ್ವರ-576 222 (1991)
ಪುಟ: iv + 220, ಬೆಲೆ ರೂ. 25/-

೪. ದೇವಿಭೂತ ಕನಸು ಮತ್ತು ವಿಜ್ಞಾನ (ವಿಚಾರ) ಲೇ: ಡಾ॥ ಐ. ಎ. ಲೋಕಾಪೂರ
ಪ್ರ: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ಹರಿಹರ ಘಟಕ (1991)
ಪುಟ: 28, ಬೆಲೆ ರೂ. 7/-

೫. ಹೊಸ ದಿಕ್ಕು (ವಿಮರ್ಶೆ) ಲೇ: ಡಾ॥ ಬಸವರಾಜ ಸಬರದ
ಪ್ರ: ಪಲ್ಲವಿ ಪ್ರಕಾಶನ, ಬೀದರ್-585 401 (1990)
ಪುಟ xii + 152, ಬೆಲೆ ರೂ. 30/-

೬. ಮಣ್ಣು ನೆನಪಿನ ಮೇಲೆ (ಕವನ ಸಂಕಲನ) ಲೇ: ಜಿ. ಸುಬ್ರಾಯಭಟ್ಟ ಬಕ್ಕಳ
ಪ್ರ: ಬಕುಲ ಪ್ರಕಾಶನ. ಬಕ್ಕಳ, ಶಿರಸಿ 581 336 (ಉ.ಕ.) (1991)
ಪುಟ: 46, ಬೆಲೆ ರೂ. 10/-

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗ,

ನಮ್ಮ ನಾಲ್ಕನೇ ಸಂಪುಟದ ಎರಡನೇ ಸಂಚಿಕೆಯನ್ನು ನಾವು ಹೇಳಿದ್ದಂತೆ ಆದಷ್ಟು ಬೇಗ ನೀಡುತ್ತಿದ್ದೇವೆ. ಆದರೆ ಇದೇ ಪ್ರತಿಕ್ರಿಯೆ ನಮ್ಮ ಓದುಗರಿಂದ ಬಂದಿಲ್ಲವೆಂದು ತಿಳಿಸಲು ವಿಷಾದವಾಗುತ್ತದೆ. ಚಂದಾ ಕಳಿಸಿದರಾದೀತೆಂಬ ನಿಮ್ಮ ಔದಾಸೀನ್ಯತೆಯನ್ನು ಎದುರಿಸುವಷ್ಟು 'ಸಂವಾದ' ಭದ್ರವಾಗಿಲ್ಲ. ಆದುದರಿಂದ ಓದುಗರು ಕೂಡಲೇ ಚಂದಾ ಕಳುಹಿಸಿ ಸಹಕರಿಸಬೇಕು. ಚಂದಾ ನವೀಕರಿಸದಿದ್ದರೆ ಮೂರನೇ ಸಂಚಿಕೆಯನ್ನು ಕಳುಹಿಸಲು ನಮಗೆ ಸಾಧ್ಯವಾಗುವುದಿಲ್ಲ ಎಂದು ಈ ಮೂಲಕ ತಿಳಿಸಬಯಸುತ್ತೇವೆ.

ಈ ಬಾರಿ ಕನ್ನಡ ಸಾರಸ್ವತ ಲೋಕಕ್ಕೆ ಎರಡು ಹರ್ಷದ ಸುದ್ದಿಗಳಿವೆ. ಒಂದು ಹೆಗ್ಗೋಡಿನ ಕೆ. ವಿ. ಸುಬ್ಬಣ್ಣನವರಿಗೆ ಮ್ಯಾಗ್ಸಸ್ಸೆ ಪ್ರಶಸ್ತಿ ಬಂದಿರುವುದು. ಇನ್ನೊಂದು ವಿ. ಕೃ. ಗೋಕಾಕರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿರುವುದು. ಈ ಇಬ್ಬರನ್ನೂ ಸಂವಾದ ಅಭಿನಂದಿಸುತ್ತದೆ. ಸುಬ್ಬಣ್ಣ ಹೆಗ್ಗೋಡಿನಲ್ಲಿ ಮಾಡಿರುವ ಸಾಂಸ್ಕೃತಿಕ ಕೆಲಸ ಅದ್ವಿತೀಯವಾದದ್ದು. ಅದನ್ನು ಅಲ್ಲಿಗೆ ಹೋಗಿಯೇ ನೋಡಿ ನಂಬಬೇಕು. ಸರ್ಕಾರದ ಒಂದು ಇಲಾಖೆ ಅಥವಾ ಅಂಗಸಂಸ್ಥೆಯೊಂದು ಮಾಡಲಾಗದ ಕೆಲಸವನ್ನು ಸುಬ್ಬಣ್ಣನವರ ನೇತೃತ್ವದಲ್ಲಿ 'ನೀನಾಸಂ' ಮಾಡಿದೆ. ಆದರೆ ಸುಬ್ಬಣ್ಣ ಫೋರ್ಡ್ ಪ್ರತಿಷ್ಠಾನದಿಂದ ಈ ಕೆಲಸಕ್ಕಾಗಿ ಹಣ ಪಡೆದದ್ದರ ಬಗ್ಗೆ ಮತ್ತು ನೀನಾಸಂ ಬೆಳೆಸುತ್ತಿರುವ ಸಂಸ್ಕೃತಿ ನಿಜವಾಗಿಯೂ ಸರಳತೆಯ, ಸಮಾನತೆಯ ಹಾಗೂ ವಿಕೇಂದ್ರಿತ ಸಂಸ್ಕೃತಿಯೇ ಎಂಬ ಬಗ್ಗೆ ಹಲವಾರು ಪ್ರಶ್ನೆಗಳಿಗೆ ಅವಕಾಶವಿದೆ. ನಮ್ಮ ಮುಂದಿನ ಸಂಚಿಕೆಯಲ್ಲಿ ಈ ಬಗ್ಗೆ ವಿವರವಾದ ಬರೆಹಗಳನ್ನು ಕೊಡಲು ಪ್ರಯತ್ನಿಸುತ್ತೇವೆ.

ಗೋಕಾಕರಿಗೆ ಜ್ಞಾನಪೀಠ ಪ್ರಶಸ್ತಿ ಸಿಗುವ ಸುದ್ದಿ ಅವರ 'ಭಾರತ ಸಿಂಧು ರಶ್ಮಿ' ಹೊರಬಂದಾಗಿನಿಂದ ಇತ್ತು. ಅದು ಈಗ ನಿಜವಾಗಿದೆ. ಗೋಕಾಕರು ನಮ್ಮ ಹಿರಿಯ ಸಾಹಿತಿ, ವಿಮರ್ಶಕರಲ್ಲಿ ಒಬ್ಬರು. ನವ್ಯ ಕಾವ್ಯದ ಪ್ರಥಮ ಪ್ರಯೋಗ

ಮಾಡಿದವರು ಎಂಬ ಹೆಗ್ಗಳಿಕೆಯೂ ಇವರದಾಗಿದೆ. ಆದರೆ ಈವರೆಗೆ ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಕುವೆಂಪು, ಬೇಂದ್ರೆ, ಕಾರಂತ ಹಾಗೂ ಮಾಸ್ತಿಯವರ ಪ್ರತಿಭೆಯೊಂದಿಗೆ ಗೋಕಾಕರ ಪ್ರತಿಭೆಯನ್ನು ಹೋಲಿಸಿ ನೋಡಿದಾಗ ಗೋಕಾಕರಿಗೆ ಜ್ಞಾನಪೀಠ ಪ್ರಶಸ್ತಿ ಸಂದಿರುವುದು ಅವರ ಸಾಹಿತ್ಯ ಪ್ರತಿಭೆಗಿಂತ ಹೆಚ್ಚಾಗಿ ಉನ್ನತ ಸ್ತರಗಳಲ್ಲಿ ಅವರು ಸಮರ್ಥವಾಗಿ ನಡೆಸಿದ ಸಾಹಿತ್ಯ ಸಂಸ್ಥೆಗಳ ಆಡಳಿತ ಹಾಗೂ ಪರಿಚಾರಿಕೆಗೆ ಎಂದು ಹೇಳಬಹುದು. ಅದೇನೇ ಇರಲಿ, ಇದು ಕನ್ನಡಕ್ಕೆ ಸಂದಿರುವ ಐದನೇ ಜ್ಞಾನಪೀಠ ಪ್ರಶಸ್ತಿ. ಕನ್ನಡಿಗರೆಲ್ಲರೂ ಹೆಮ್ಮೆಪಡಬಹುದಾದ ಸಂದರ್ಭ ಇದು. ಆದರೆ ಹೆಮ್ಮೆಯು ಈ ಸಂದರ್ಭದಲ್ಲಿ ನಾವು ಸಾಹಿತ್ಯ ವಿಮರ್ಶೆಯ ಮೂಲ ನಂಬಿಕೆಗಳಿಗೆ ಕುರುಡಾಗುವಂತಾಗಬಾರದು. ಈ ಸಂಬಂಧ ಸಂವಾದ ಚರ್ಚೆಯನ್ನು ಆಹ್ವಾನಿಸುತ್ತದೆ.

ಇನ್ನು ಗುಲ್ಬರ್ಗಾದ ನಮ್ಮ ಇಬ್ಬರು ಸಾಹಿತಿ ಮಿತ್ರರು 'ಆಯ್ದ ಕವನಗಳು' ಮೂಲಕ ಉಂಟು ಮಾಡಿದ ಗದ್ದಲ ಎಷ್ಟು ಅರ್ಥಹೀನ ಎಂಬುದು ಈಗ ಆ ಮಿತ್ರರಿಗೇ ಗೊತ್ತಾಗಿರಬೇಕು. ಗೊತ್ತಾಗಿದ್ದರೆ ಸಂತೋಷ. ಪಠ್ಯ ಪುಸ್ತಕ ಮಾಡಿಸುವ ಉದ್ದೇಶದಿಂದಲೇ ಕಾವ್ಯ ಸಂಪಾದನೆ ಮಾಡುವುದು ಕಾಲೇಜು-ಯೂನಿವರ್ಸಿಟಿಗಳಲ್ಲಿನ ಸಾಹಿತಿ ಮಿತ್ರರ ಹೊಸ ಉದ್ಯೋಗವೇನಲ್ಲ. ಆದರೆ ಈ 'ಸಂಪಾದನೆ' ಹಾಗೂ 'ಉದ್ಯೋಗ'ಗಳ ನಡುವೆ 'ಬಂಡಾಯ'ದ ಬಾವುಟವನ್ನೂ ಹಾರಿಸ ಹೊರಟಿರುವ ಕೆಲವು ಮಿತ್ರರು ಅಂತಿಮವಾಗಿ ಬಂಡಾಯವೆನ್ನುವುದನ್ನು ಒಂದು ಅಗ್ಗದ, ಹುಡುಗಾಟಿಕೆಯ ವಸ್ತುವನ್ನಾಗಿ ಮಾಡುವುದರಲ್ಲಿ ಮಾತ್ರ ಸಫಲರಾಗುತ್ತಿರುವುದು ಖೇದಕರ. ಕಾವ್ಯ ಅದು ನವೋದಯದ್ದೇ ಆಗಿರಲಿ, ನವ್ಯದ್ದೇ ಆಗಿರಲಿ, ಬಂಡಾಯದ್ದೇ ಆಗಿರಲಿ, ಅದರ ಮೂಲ ಪ್ರೇರಣೆ ಜೀವದ ಐಕ್ಯತೆ ಹಾಗೂ ಸಾಮರಸ್ಯವಾಗಿರಬೇಕೆಂಬ ನಂಬಿಕೆ ಇಲ್ಲದೇ ಹೋದಾಗ ಕಾವ್ಯ ರಚನೆ, ಕಾವ್ಯ ಸಂಪಾದನೆಗಳೆರಡೂ ಇಂತಹ ರಾದ್ಧಾಂತವನ್ನು ಮಾತ್ರ ಸೃಷ್ಟಿಸಬಲ್ಲವು. ಹೋಗಲಿ, ಈ ರಾದ್ಧಾಂತದಿಂದ ಆಗಿರುವ ಪರಿಣಾಮವಾದರೂ ಏನು ? ಗೆಳೆಯರು ಯೋಚಿಸಲಿ.

ಇಂತಹುದೇ ರಾದ್ಧಾಂತ ಇತ್ತೀಚೆಗೆ ಸಾಹಿತ್ಯ ಪತ್ರಿಕೆಗಳಲ್ಲಿ ಹೆಚ್ಚಾಗುತ್ತಿರುವ ಖಾಸಗಿ–ಕಂ–ಬಹಿರಂಗ ಪತ್ರಗಳು. ದೇವನೂರ ಮಹಾದೇವರ ಡಾರ್ಲಿಂಗ್–ಡಾರ್ಲಿಂಗ್ ಲವ್ ಲೆಟರ್‌ಗಳು, ಪೋಲಂಕಿ–ಚಂಪಾರ ಡಾರ್ಲಿಂಗ್ ಡಾರ್ಲಿಂಗ್ ಹೇಟ್ ಲೆಟರ್‌ಗಳು ಹಾಗೂ ಶೂದ್ರ–ಶಿವಪ್ರಕಾಶ್ ಡಾರ್ಲಿಂಗ್-ಡಾರ್ಲಿಂಗ್ ಲವ್–ಹೇಟ್ ಲೆಟರ್' ಯಾವ ಮಹತ್ವದ ಸಾಹಿತ್ಯಿಕ ಪ್ರಶ್ನೆಗಳನ್ನು ಎತ್ತಿವೆ ? ಇವರೆಲ್ಲರೂ ಪ್ರೀತಿ-ಸ್ನೇಹಗಳ ಹೆಸರೆತ್ತಿಕೊಂಡೇ ದ್ವೇಷ-ಕ್ರೌರ್ಯಗಳ ಆಟವಾಡುತ್ತಿರುವುದು ಸಣ್ಣ

ಮಗುವಿಗೂ ಗೊತ್ತಾಗುವಂತಿದೆ. ಅಷ್ಟು ವಲಯಗಳಲ್ಲಿ ಎಂದೋ ಆಡಿದ ಸಾಂದರ್ಭಿಕ ಮಾತುಗಳನ್ನು ಬಹಿರಂಗವಾಗಿ ಆಯುಧಗಳಂತೆ ಉಪಯೋಗಿಸುವ ಈ ಪತ್ರಗಳು ಮೂಲತಃ, ಸಾಹಿತ್ಯಿಕ ಚರ್ಚೆಯ ಸೋಗು ಹಾಕಿದ ವೈಯುಕ್ತಿಕ ದ್ವೇಷಾಸೂಯೆಗಳ ಆಸ್ಫೋಟಗಳು ಮಾತ್ರ. ಇಲ್ಲದಿದ್ದರೆ ಇವುಗಳಲ್ಲಿ ಅಪ್ಪಂದಿರನ್ನು, ಹೆಂಡಿರನ್ನು, ಸ್ನೇಹಿತರನ್ನು ಏಕೆ ಎಳೆದು ತರಬೇಕು ? ಅದೂ ಇವರನ್ನು ಎಳೆದು ತರುವುದು ಬುದ್ಧ, ಗಾಂಧಿ, ಬಸವಣ್ಣ, ಅಂಬೇಡ್ಕರರೆಂಬ ಸ್ತಂಭಗಳ ಮೇಲೆ ನಿಂತ ಅಟ್ಟಣಿಗೆಯ ಮೇಲೆ! ಈ ಮಾಯಕಟ್ಟೆಯಲ್ಲಿ ಎಲ್ಲವೂ ಅಗ್ಗ, ನಂನಮ್ಮ ಅಹಂಕಾರಗಳ ಹೊರತಾಗಿ .. ಹೀಗೆ ನಮ್ಮ ಅಹಂಕಾರವೇ ಎಲ್ಲಕ್ಕಿಂತ ಪವಿತ್ರ ಎಂದು ನಂಬತೊಡಗಿರುವ ನಾವು ಕೊನೆಗೆ ಯಾವುದರ ಪಾವಿತ್ರ್ಯವನ್ನೂ ಸಹಿಸದೆ ಹುಳುಗಳಂತೆ ಅಳಿಯುವೆವು.

ಇದು ಮಾಸ್ತಿ ಜನ್ಮಶತಾಬ್ಧಿ ವರ್ಷ. ಈ ವರ್ಷದ ನಮ್ಮ ವಿಶೇಷ ಸಂಚಿಕೆ ಮಾಸ್ತಿ ಸಾಹಿತ್ಯ ವಿಮರ್ಶೆಗೆ ಮೀಸಲಾಗಿರುತ್ತದೆ. ಈ ಸಂಪುಟದ ಕೊನೆಯೆರಡು ಸಂಚಿಕೆಗಳು ಸಂಯುಕ್ತವಾಗಿ ಬರುವ ಈ ವಿಶೇಷ ಸಂಚಿಕೆಯಲ್ಲಿ ಕನ್ನಡದ ಹೆಸರಾಂತ ವಿಮರ್ಶಕರು ಮಾಸ್ತಿ ಸಾಹಿತ್ಯದ ವಿವಿಧ ಮಗ್ಗುಲುಗಳ ಅವಲೋಕನ ಮಾಡಲಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ ನಾವು ಮಾಸ್ತಿ ಕುರಿತು ಕರ್ನಾಟಕದ ಮೂರು ವಿವಿಧ ಸ್ಥಳಗಳಲ್ಲಿ ವಿಚಾರ ಸಂಕಿರಣಗಳನ್ನು ಏರ್ಪಡಿಸುತ್ತಿದ್ದೇವೆ. ಇಂತಹ ಮೊದಲ ವಿಚಾರ ಸಂಕಿರಣ ಸೆಪ್ಟೆಂಬರ್ 8ರಂದು ಹಾಸನದಲ್ಲಿ ಶ್ರೀ ಶಂಕರಮಠದ ಸಭಾಂಗಣದಲ್ಲಿ ಹಾಸನ ಮಿಡ್‌ಟೌನ್ ರೋಟರಿ ಕ್ಲಬ್‌ನ ನೆರವಿನಿಂದ ಏರ್ಪಾಡಾಗಿದೆ. ತಮ್ಮೆಲ್ಲರನ್ನೂ ಈ ವಿಚಾರ ಸಂಕಿರಣಕ್ಕೆ ಸ್ವಾಗತಿಸುತ್ತೇವೆ.

—ಸಂಪಾದಕರು

ಸಂವಾದ

೨೮

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ – ೫೭೭ ೫೩೧ ಚಿತ್ರದುರ್ಗ ಜಿಲ್ಲೆ

ಈ ಸಂಚಿಕೆಯ ಲೇಖಕರು :

- **ಎಸ್. ದಿವಾಕರ್,**
  Kannada Editor, U.S.I.S., Gemini Circle, Madras-600 006

- **ಚೆನ್ನವೀರ ಕಣವಿ,**
  'ಚೆಂಬೆಳಕು', ಕಲ್ಯಾಣನಗರ, ಧಾರವಾಡ–580 007

- **ಕೆ. ಪಿ. ನಟರಾಜ,**
  ನರಸಿಂಹಯ್ಯ ಕಟ್ಟಡ, ಗೋಕುಲ ಬಡಾವಣೆ. ಹೆಚ್.ಎಂ.ಟಿ. ಕಾರ್ಖಾನೆ ಎದುರು,
  ತುಮಕೂರು–572103

- **ಎಸ್. ಆರ್. ವಿಜಯಶಂಕರ,**
  ಪಿ.ಆರ್.ಓ., ಎಚ್.ಎಂ.ಟಿ. , 36, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-560 052.

- **ದಿಲೀಪ್ ಪಡಗಾಂವ್‌ಕರ್,**
  Editor, Times of India, Dr. D. N. Road, Bombay.

- **ಡಿ. ಎಸ್. ನಾಗಭೂಷಣ,**
  ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ ಎಫ್. ಎಂ. ಕೇಂದ್ರ. ಹಾಸನ-573 201

- **ಕೆ. ವಿ. ಸುಬ್ಬಣ್ಣ**
  ಹೊನ್ನೆಸರ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ–577 417

- **ಡಾ|| ಕೆ. ಶಿವರಾಮ ಕಾರಂತ,**
  'ಸುಹಾಸ', ಸಾಲಿಗ್ರಾಮ, ಉಡುಪಿ ತಾಲ್ಲೂಕು (ದ.ಕ.)-576 225

- **ಆನಂದಕಂದ,**
  (ದಿವಂಗತ ಡಾ|| ಬೆಟಗೇರಿ ಕೃಷ್ಣಶರ್ಮರು)

- **ಬಸವರಾಜ ವಕ್ಕುಂದ,**
  ಕನ್ನಡ ಅಧ್ಯಾಪಕರು, ಕ್ರೈಸ್ಟ್ ಕಾಲೇಜು, ಹೊಸೂರು ರಸ್ತೆ, ಬೆಂಗಳೂರು-560 029

- **ರಾಘವೇಂದ್ರ ಪಾಟೀಲ,**
  ಜೀವಶಾಸ್ತ್ರ ಅಧ್ಯಾಪಕರು, ಪ.ಪೂ.ಕಾಲೇಜು, ಮಲ್ಲಾಡಿಹಳ್ಳಿ ಚಿತ್ರದುರ್ಗ ಜಿಲ್ಲೆ-577531

ಸಂಗೀತಾಸ್ವಾದನೆಯ ಮೂಲತತ್ವಗಳು

● ಎಸ್. ದಿವಾಕರ್

ಸಂಗೀತ ನಮ್ಮ ಕಲೆಗಳಲ್ಲೆಲ್ಲ ಅತ್ಯಂತ ವಿಶಿಷ್ಟವಾದ ಕಲೆಯಾಗಿದೆಯಷ್ಟೇ ಅಲ್ಲ, ಅದು "ಶುದ್ಧ ಕಲೆ"ಯೆಂದೂ ಹೆಸರು ಪಡೆದಿದೆ. ತಂಗಾಳಿ ಬೀಸಿದಾಗ ಮರದೆಲೆಗಳು ಹೊಮ್ಮಿಸುವ ಮರ್ಮರ, ಹರಿಯುವ ಹೊಳೆಯ ಜುಳುಜುಳು, ಹಕ್ಕಿಯ ಹಾಡು, ಇವೆಲ್ಲ ನಮ್ಮನ್ನು ಸಂತೋಷಗೊಳಿಸುತ್ತವೆ. "ಆಹಾ ! ಎಂಥ ನಾದ!" ಎಂದು ನಾವು ಉದ್ಗರಿಸಲೂಬಹುದು. ಈ ನೈಸರ್ಗಿಕ ಧ್ವನಿಗಳು ನಮಗೆ ಸಂಗೀತವನ್ನು ಸೂಚಿಸುತ್ತವೆ, ನಿಜ. ಆದರೆ ಅವೇ ಸಂಗೀತವಲ್ಲ-ಒಬ್ಬ ನಿಜವಾದ ವಾಗ್ಗೇಯಕಾರ ಇಂಥ ಧ್ವನಿಗಳಿಗೆ ಒಂದು ವ್ಯವಸ್ಥಿತ ರೂಪ ಕೊಟ್ಟಾಗ, ಗಾಯಕನೊಬ್ಬ ತನ್ನ ಪ್ರತಿಭೆಯ ಬಾನಿನಲ್ಲಿ ಆ ವ್ಯವಸ್ಥಿತ ರೂಪಕ್ಕೆ ಹಲವು ರೀತಿಯ ನಾದಛಾಯೆಗಳನ್ನು ಲೇಪಿಸಿ ಹಾರಿ ಬಿಟ್ಟಾಗ ಮಾತ್ರ ಸಂಗೀತ ಸೃಷ್ಟಿಯಾಗುತ್ತದೆ. ಇದಕ್ಕೆ ಪ್ರಜ್ಞಾ ಪೂರ್ವಕವಾದ ಮಾನವ ಕ್ರಿಯೆ ಅಗತ್ಯ.

ಕತೆ, ಕಾವ್ಯ ಅಥವಾ ವರ್ಣಚಿತ್ರ ಇತ್ಯಾದಿ ಕಲೆಗಳಲ್ಲಿ ವಸ್ತು ಎಂದರೆ content ಮತ್ತು ಆಕೃತಿ ಎಂದರೆ Form ಇವು ಪರಸ್ಪರ ಮೇಳವಿಸುವುದು ತೀರ ಅಪರೂಪ. ಕಲಾತ್ಮಕ ದೃಷ್ಟಿಯಿಂದ ಪರಿಶೀಲಿಸಿದಾಗ ಇದೊಂದು ಬಗೆಹರಿಯದ ಸಮಸ್ಯೆ ಯಾಗಿಯೇ ಉಳಿಯುವಂಥದು. ಆದರೆ ಸಂಗೀತದಲ್ಲಿ ಇದೊಂದು ಸಮಸ್ಯೆಯೇ ಅಲ್ಲ. ಗಾಯಕನೊಬ್ಬ ಹಿಂದೋಳ ರಾಗವನ್ನು ಆಲಾಪನೆ ಮಾಡಿದಾಗ ಅಥವಾ ವೈಣಿಕನೊಬ್ಬ ಇನ್ನಾವುದೇ ರಾಗವನ್ನು ನುಡಿಸಿದಾಗ ನಾವು ಕೇಳುವ ನಾದಮಾಧುರ್ಯ ದಲ್ಲಿ ವಸ್ತು ಯಾವುದು ? ಆಕೃತಿ ಯಾವುದು ? ಎರಡೂ ಒಂದೇ ; ಅಥವಾ ಒಂದ ನ್ನೊಂದು ಬೇರ್ಪಡಿಸಿ ನೋಡುವುದು ಸಾಧ್ಯವೇ ಇಲ್ಲ. ಕಲೆಯ ದೃಷ್ಟಿಯಿಂದ ಹೀಗೆ ವಸ್ತು ಮತ್ತು ಆಕೃತಿಗಳು ಪರಸ್ಪರ ಹಾಸುಹೊಕ್ಕಾಗಿ ರೂಪುಗೊಳ್ಳುವ ಬಗೆ ತೀರ ಅನನ್ಯ ರೀತಿಯದು. ಬಹುಶಃ ಇದೇ ಕಾರಣದಿಂದಲೇ ಸಂಗೀತವನ್ನು 'ಶುದ್ಧ ಕಲೆ' ಎಂದು ಪರಿಗಣಿಸಿರಬೇಕು.

ಸಂಗೀತ ಅಮೂರ್ತ ಸಾಮ್ರಾಜ್ಯದಲ್ಲಿ ಸಾಗುತ್ತಾ ಹೋಗಿ, ಯಾವುದೋ ಅವ್ಯಕ್ತ "ವಸ್ತು"ವಿಗೆ ಮೂರ್ತರೂಪ ಕೊಡುವ ಕಲೆ. ಒಂದು ಅರ್ಥದಲ್ಲಿ ಇದೊಂದು ಹಠಾತ್ ಘಟನೆ. ಈ ಘಟನೆಗೆ ಕಾರಣವಾಗುವ ಅಂಶಗಳೆಂದರೆ ಧ್ವನಿ ಅಥವ ನಾದತರಂಗ ಮತ್ತು ಕಾಲ. ಇವೆರಡು ಅಂಶಗಳಿಲ್ಲದ ಸಂಗೀತವನ್ನು ಊಹಿಸುವುದೂ ಸಾಧ್ಯವಿಲ್ಲ.

ಚಿತ್ರ, ಶಿಲ್ಪಗಳಂಥ ಕಲೆಗಳು ಸೃಷ್ಟಿಯಾಗುವುದು space ಅಥವಾ ಅವಕಾಶ ದಲ್ಲಿ. ಚಿತ್ರದ ಅಥವಾ ಶಿಲ್ಪದ ವಿವಿಧ ವಿವರಗಳನ್ನು ನಿಧಾನವಾಗಿ ಪರಿಶೀಲಿಸುವ ಮುಂಚೆಯೇ ನಮಗೆ ಅದರ ಒಟ್ಟಾರೆ ರೂಪ ಮನವರಿಕೆಯಾಗುತ್ತದೆ. ಆದರೆ ಸಂಗೀತ ವಿಭಿನ್ನ "ಕಾಲ"ಗಳನ್ನು ಅವಲಂಬಿಸಿರುವುದರಿಂದ ನಮ್ಮ ಸ್ಮರಣಶಕ್ತಿ ಹೆಚ್ಚು ಎಚ್ಚರದಿಂದಿರಬೇಕಾಗುತ್ತದೆ. ಅಂದರೆ ಸಂಗೀತದಲ್ಲಿ ಕಾಲ ಒಂದು ಸುವ್ಯವಸ್ಥಿತ ಕ್ರಮದಲ್ಲಿ ಒಡಮೂಡಿರುತ್ತದೆ ಎಂದಾಯಿತು. ಹಾಗಾದರೆ ಕಾಲದಲ್ಲಿ ಆವಿರ್ಭವಿಸುವ ಈ ಕಲೆಯನ್ನು ಅಳೆಯುವುದು ಹೇಗೆ ?

ನಾದತರಂಗಗಳ ಚಲನೆಯನ್ನು ಅಗತ್ಯಕ್ಕೆ ತಕ್ಕಂತೆ ನಿಯಂತ್ರಿಸುವ ಸಾಧನವೇ ಛಂದಸ್ಸು. ಇದರ ಮೂಲಕವೇ ಲಯದ ಸಾಕ್ಷಾತ್ಕಾರ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸಂಗೀತದ ಒಂದು ಘಟಕ ಎಷ್ಟು ಸಮಾನ ಭಾಗಗಳಲ್ಲಿ ವಿಂಗಡನೆ ಯಾಗಬೇಕು ಎಂಬ ಪ್ರಶ್ನೆಗೆ ಛಂದಸ್ಸು ಉತ್ತರಿಸಿದರೆ, ಆ ಸಮಾನ ಭಾಗಗಳು ಒಂದು ನಿರ್ದಿಷ್ಟ ಅಳತೆಯಲ್ಲಿ ಹೇಗೆ ಒಟ್ಟಾಗಬೇಕು ಎಂಬುದನ್ನು ಲಯ ಉತ್ತರಿಸುತ್ತದೆ. ಉದಾಹರಣೆಗೆ ನಾಲ್ಕು ಘಾತಗಳ (beats) ಒಂದು ಅಳತೆ ಎರಡೆರಡು ಘಾತಗಳ ಎರಡು ಗುಂಪಾಗಬಹುದು ; ಇಲ್ಲವೆ ಒಂದು, ಎರಡು, ಒಂದು–ಹೀಗೆ ಮೂರು ಗುಂಪಾಗಬಹುದು. ಈ ಲಯಜ್ಞಾನದ ಸೂಕ್ಷ್ಮಪರಿಚಯವಿದ್ದಷ್ಟೂ ಸಂಗೀತಾನು ಭೂತಿ ದ್ವಿಗುಣಗೊಳ್ಳುತ್ತದೆ.

ಸಂಗೀತ ಪ್ರಾಥಮಿಕವಾಗಿ ನಮ್ಮ ಶ್ರವಣೇಂದ್ರಿಯಕ್ಕೆ ಪ್ರಿಯವಾಗುವಂಥದು. ಹಾಗೆಂದು ಅದು ದೃಶ್ಯ ಅಥವಾ ಇತರ ಇಂದ್ರಿಯಗಳನ್ನು ಕಡೆಗಣಿಸುವುದೆಂದು ಹೇಳ ಲಾಗುವುದಿಲ್ಲ. ಹಾಗೆ ನೋಡಿದರೆ, ಸಂಗೀತ ಪರೋಕ್ಷವಾಗಿ ಇತರ ಇಂದ್ರಿಯಗಳನ್ನೂ ಸ್ಪರ್ಶಿಸಿ ತನ್ನ ಮೇಲುಗೈಯನ್ನು ಸ್ಥಾಪಿಸುತ್ತದೆ. ಅದು ತನ್ನದೇ ಆದ ರೀತಿಯಲ್ಲಿ ನಮ್ಮ ದೃಶ್ಯ ಶಕ್ತಿಗೆ ಇಂಬುಕೊಡಬಲ್ಲುದು. ತನ್ನ ಅನುರಣನಗೊಳ್ಳುವ ನಾದದಿಂದ, ಅಲೆಯಲೆಯಾಗಿ ಹೊಮ್ಮುವ ಲಯದಿಂದ ಅದು ನಮ್ಮ ಖಾಸಗಿ ಅಗತ್ಯಗಳಿಗೆ ತಕ್ಕುದಾದ ದೃಶ್ಯವೈಭವವನ್ನು ಸೃಷ್ಟಿಸುತ್ತದೆ. ಸಂಗೀತ ಹೊಮ್ಮಿಸುವ ದೃಶ್ಯಗಳು ಲಿಪಿಗಿಳಿದ ಶಬ್ದಗಳು ನಿರೂಪಿಸುವುದಕ್ಕಿಂತ ಹೆಚ್ಚು ಕಲ್ಪನೆ ತುಂಬಿಕೊಂಡಿರುತ್ತವೆ.

ಶಿಲ್ಪವೊಂದರ ಮೈಯನ್ನು ಮುಟ್ಟಿನೋಡುವಂತೆ ನಾವು ಬೆರಳುಗಳಿಂದ ಸಂಗೀತವನ್ನು ಸ್ಪರ್ಶಿಸಲಾಗುವುದಿಲ್ಲ. ಆದರೆ ರೇಶಿಮೆಯನ್ನೋ, ಮಕಮಲ್ಲನ್ನೋ ಮುಟ್ಟಿ ನೋಡಿದಾಗ ನಮಗಾಗುವ ಸಂತೋಷವನ್ನು ವರ್ಣಿಸುವ ಧಾಟಿಯಲ್ಲೇ ನಾವು ಸಂಗೀತದ ಒಳನೆಯ್ಗೆಯ ಬಗ್ಗೆ ಮಾತಾಡುವಾಗಲೂ ವರ್ಣಿಸುತ್ತೇವೆ. ಇದೇ ರೀತಿ ಉತ್ತಮ ಸಂಗೀತ ಜೇನಿನ ರುಚಿ ನೋಡುತ್ತಿರುವ, ಹೂವಿನ ಪರಿಮಳವನ್ನು ಆಘ್ರಾಣಿಸುತ್ತಿರುವ ಅನುಭವವನ್ನೂ ನೀಡಬಲ್ಲುದು.

ಸಂಗೀತವನ್ನು ಮನಸ್ಸಿನ ಭಾವನೆಗಳ ಭಾಷೆ ಎಂದು ಕರೆಯುವುದುಂಟು. ಸಂಗೀತಕ್ಕೆ ಮತ್ತು ಶಬ್ದಗಳಿಗೆ ಸಮಾನವಾಗಿರುವ ಕೆಲವು ಲಕ್ಷಣಗಳಿವೆ. ಉದಾಹರಣೆಗೆ ಧ್ವನಿಗಳು, ಲಯ, ಇತ್ಯಾದಿ. ಆದರೆ ಸಂಗೀತ ಭಾಷೆಯಂತೆ ಯಾವುದನ್ನೂ ವಿವರಿಸುವುದಿಲ್ಲ, ವರ್ಣಿಸುವುದಿಲ್ಲ. ಭಾಷೆಯ ಸಹಾಯದಿಂದ ನಾವು ಹೊಗಳಬಹುದು, ಬೈಯಬಹುದು, ಕೂಗಾಡಬಹುದು. ಸಂಗೀತದಿಂದ ನೇರವಾಗಿ ಇಂಥ ಕಾರ್ಯ ಸಾಧ್ಯವೇ ಇಲ್ಲ. ಹೆಚ್ಚೆಂದರೆ ಅದು ಈ ಭಾವಗಳನ್ನು ಧ್ವನಿಸಬಹುದಷ್ಟೆ. ಸಂಗೀತ, ಭಾಷೆಯ ಹಾಗೆ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ನಿರ್ದಿಷ್ಟ ವಿಚಾರಗಳನ್ನು, ಸಂದೇಶಗಳನ್ನು, ಘೋಷಣೆಗಳನ್ನು ಹೊಮ್ಮಿಸಲಾರದು. ಸಂಗೀತ ಹೊಮ್ಮಿಸುವ ಪ್ರತಿಮೆಗಳು ನಮ್ಮ ವೈಯಕ್ತಿಕ ಅನುಭವದೊಡನೆ ಸಂಬಂಧ ಪಡೆದಿರುತ್ತವೆ. ಆದ್ದರಿಂದಲೇ ಒಂದು ಸಂಗೀತ ಕಛೇರಿಯಲ್ಲಿ ಕುಳಿತ ಸಾವಿರ ಜನರ ಅನುಭವಗಳು ಸಾವಿರ ಬಗೆಗಳಲ್ಲಿ ವಿಭಿನ್ನವಾಗಿರುವುದು ಸಾಧ್ಯ.

ಯಾವುದೇ ಕಲೆಯ ಸೃಷ್ಟಿಯಾಗಬೇಕಾದರೂ ತುಂಬ ಪ್ರತಿಭಾವಂತ ಮನಸ್ಸು ಕೆಲಸಮಾಡಬೇಕಾಗುತ್ತದೆ. ಸಂಗೀತದ ವಿಷಯದಲ್ಲಂತೂ ಈ ಮಾತು ನೂರಕ್ಕೆ ನೂರರಷ್ಟು ನಿಜ. ಸಂಗೀತ ತೀರ ಮುಕ್ತವಾದ, ಅತ್ಯಂತ ಅಮೂರ್ತವಾದ, ಇತರ ಕಲೆಗಳಿಗೆ ಯಾವ ರೀತಿಯಲ್ಲೂ ಅಧೀನವಾಗಿರದ ಕಲೆಯಾದ್ದರಿಂದ ಪ್ರತಿಭೆಗೆ ಇಲ್ಲಿ ಅನಂತ ಅವಕಾಶವಿದೆ. ಯಾವುದೇ ಕಥಾವಸ್ತುವಿಲ್ಲ, ಯಾವುದೇ ಚಿತ್ರವನ್ನು ಪ್ರತಿನಿಧಿಸಬೇಕಿಲ್ಲ, ಛಂದಸ್ಸಿನ ನಿಯತಗತಿಯ ಅಗತ್ಯವಿಲ್ಲ. ಭಾಷಾತೀತವಾದ, ವಸ್ತುತಃ ಕೈಗೆ ಸಿಕ್ಕದ, ಮನಸ್ಸಿಗಷ್ಟೇ ವೇದ್ಯವಾಗುವ ಕಲಾರೂಪ ಇದು. ಆದ್ದರಿಂದ ಸಂಗೀತವನ್ನು ಕೇಳಿ, ಆಸ್ವಾದಿಸಲೂ ಒಂದು ರೀತಿಯ ಪ್ರತಿಭೆ, ಪರಿಶ್ರಮ ಅತ್ಯಗತ್ಯ.

ಒಂದು ಸಂಗೀತ ಕಚೇರಿಯಲ್ಲಿ ಕುಳಿತ ಸಾಮಾನ್ಯ ಕೇಳುಗನಿಗೆ ಹೆಚ್ಚೆಂದರೆ ಗಾಯಕ ಶುರುಮಾಡುವ ರಾಗದ ಹೆಸರು ಗೊತ್ತಿರಬಹುದು ಅಥವಾ ಸಂಗೀತ ಕೃತಿಯ ಪರಿಚಯವಿರಬಹುದು. ಅಷ್ಟರಿಂದಲೇ ಅವನು ಇಡೀ ಕಚೇರಿಯ ಅನು

ಭವಕ್ಕೆ ಹೇಗೆ ಪ್ರತಿಕ್ರಿಯಿಸಬಲ್ಲ ಎಂದು ಹೇಳುವುದು ಕಷ್ಟ. ಅವನು ಏನನ್ನು ಆಲಿಸಬೇಕೆಂದು ಹೇಳಲಿಕ್ಕೆ ಏನೂ ಇಲ್ಲ; ಸಂಗೀತದ ಸಂಕೀರ್ಣ ಎಳೆಗಳನ್ನು ಪರಿಚಯಿಸುವ ನಕಾಶೆಯಾಗಲಿ, ಮಾರ್ಗದರ್ಶಿಯಾಗಲಿ ಅವನಿಗೆ ಲಭ್ಯವಿಲ್ಲ. ಇರುವುದು ಅವನ ಅನುಭವದ ಬೆಳಕಿನಲ್ಲಿ ವಿಕಾಸಗೊಂಡಿರುವ ಕಲ್ಪನಾಶಕ್ತಿಯಷ್ಟೆ. ಸಂಗೀತದಂಥ ಅಮೂರ್ತ ಕಲೆಯಲ್ಲಿ ಸೌಂದರ್ಯವನ್ನು ಗುರುತಿಸಬಹುದಾದರೆ ಅದೊಂದು ಸಣ್ಣ ಪವಾಡವೇ. ಮತ್ತೆ ಆ ಸೌಂದರ್ಯದ ವಿವರಣೆ ಭಾಷೆಗೆ ಮೀರಿದ್ದು; ಅದು ಅನಿರ್ವಚನೀಯ.

ಈಗ ಇನ್ನೊಂದು ಪ್ರಶ್ನೆ: ಕೇಳುಗನೊಬ್ಬ ಸಂಗೀತದಿಂದ ಸಂತೋಷಪಟ್ಟನೆಂದರೆ, ಅವನಿಗೇನು ಅರ್ಥವಾಯಿತು? ಈ ಪ್ರಶ್ನೆ ಸೌಂದರ್ಯಾನುಭೂತಿಗೆ ಸಂಬಂಧಪಟ್ಟ ಸಮಸ್ಯೆ. ಸಂಗೀತದ ಅರ್ಥವನ್ನು, ಅಂಥ ಅರ್ಥವೇನಾದರೂ ಇದ್ದಲ್ಲಿ, ಸಂಗೀತದಲ್ಲೇ ಕಂಡುಕೊಳ್ಳಬೇಕು. ಯಾಕೆಂದರೆ ಸಂಗೀತ ನಿಘಂಟಿಲ್ಲದ ಒಂದು ಭಾಷೆ. ಈ ಭಾಷೆಯ ಸಂಕೇತಗಳನ್ನು ಕೇಳುಗನೇ ತನ್ನ ಮನಸ್ಸಿನ ಭಾವಗಳ ಬೆಳಕಿನಲ್ಲಿ ವಿಶ್ಲೇಷಿಸಬೇಕು. ಆದ್ದರಿಂದಲೇ ಸಂಗೀತದ ಅರ್ಥದ ಬಗೆಗೆ ಕರಾರುವಾಕ್ಕಾದ ಉತ್ತರ ಕೊಡುವುದು ಸಾಧ್ಯವೇ ಇಲ್ಲ. ಒಂದು ರೀತಿಯಿಂದ ಈ ಪ್ರಶ್ನೆ ಕೇಳಲೂಬಾರದು. ಬಹುಶಃ ಭಾಷಿಕ ಮಾಧ್ಯಮದಲ್ಲಿ ಪರಿಣತರಾದವರು ಸಂಗೀತದ ಅರ್ಥದ ಬಗ್ಗೆ ತಲೆಕೆಡಿಸಿಕೊಳ್ಳಬಹುದು. ಆದರೆ ನಿಜವಾದ ಸಂಗೀತ ಪ್ರೇಮಿ ಸಂಗೀತ ಭಾಷೆಯ ಸಾಂಕೇತಿಕ ಲಕ್ಷಣದಿಂದ ಬಾಧಿತನಾಗಲಾರ. ಹಾಗೆ ನೋಡಿದರೆ ಭಾಷೆಯೊಂದರಲ್ಲಿ ಥಟ್ಟನೆ ಹೊಳೆಯುವ ಅರ್ಥಕ್ಕೆ–ತೀರ ವಿರುದ್ಧವಾದ ಸಂಗೀತದ ಅರ್ಥರಹಿತ ಸ್ಥಿತಿಯೇ ಕೇಳುಗನ ಕಲ್ಪನಾಶಕ್ತಿಯನ್ನು ಬಡಿದೆಬ್ಬಿಸುತ್ತದೆ. ಹಾಗಾದಾಗ ಭಾಷೆ ವರ್ಣಿಸುವುದು ಹಾಗಿರಲಿ, ಹೆಸರಿಸಲೂ ಸಾಧ್ಯವಾಗದಂಥ ಸೂಕ್ಷ್ಮ ಭಾವಗಳ ಒಂದು ಜಾಲವನ್ನೇ ಕೇಳುಗನು ಅನುಭವಿಸಬಲ್ಲ. ಸಂಗೀತ ಅವನ ಮೂಕ ಭಾವಗಳನ್ನು ತಟ್ಟುತ್ತದೆ. ಕರ್ನಾಟಕ, ಹಿಂದೂಸ್ತಾನಿ ಅಥವಾ ಪಾಶ್ಚಾತ್ಯ–ಹೀಗೆ ಯಾವುದೇ ಪದ್ಧತಿಯ ಸಂಗೀತವಾಗಿರಲಿ, ಸೂಕ್ಷ್ಮ ಶ್ರವಣ ಶಕ್ತಿಯುಳ್ಳ ಕೇಳುಗ ಘರ್ಷಣೆ, ಮುಕ್ತಭಾವ, ಸಾಂದ್ರತೆ, ಪಾರದರ್ಶಕತೆ, ಕ್ಷೋಭೆ, ಹಿಮ್ಮುಖ ಅಥವಾ ಮುಮ್ಮುಖ ಚಲನೆ, ಅದರ ವೇಗ, ಉದ್ವೇ, ಅದರ ಗುಡುಗು, ಪಿಸುಮಾತು, ಅಷ್ಟೇಕೆ ಇತರ ಸಾವಿರಾರು ಬಗೆಯ ಭಾವವೈವಿಧ್ಯವನ್ನು ಪ್ರಜ್ಞೆ ಮತ್ತು ಸುಪ್ತಪ್ರಜ್ಞೆಯ ನಡುವಣ ಹಂತದಲ್ಲಿ ಅನುಭವಿಸುತ್ತಾನೆ. ಮತ್ತೆ ಈ ಭಾವವೈವಿಧ್ಯದ ಸೂಕ್ಷ್ಮಗಳನ್ನು, ನವುರುಗಳನ್ನು ಗ್ರಹಿಸುವುದಕ್ಕೂ ಪರಿಶ್ರಮ ಬೇಕು. ಸಂತೋಷ ಮತ್ತು ದುಃಖದ ರಾಗಗಳ ನಡುವಣ ವ್ಯತ್ಯಾಸವನ್ನು ಯಾರು ಬೇಕಾದರೂ ಹೇಳಬಹುದು.

ಆದರೆ ಒಳ್ಳೆಯ ಪ್ರತಿಭಾವಂತ ಕೇಳುಗ ಒಂದು ಸಂಗೀತ ಕೃತಿಯ ಸಂತೋಷದಾಯಕ ಗುಣವನ್ನಷ್ಟೇ ಕಂಡುಕೊಳ್ಳುವುದಿಲ್ಲ, ಅದು ಯಾವ ಛಾಯೆಯುಳ್ಳ ಸಂತೋಷ? ಸೂಕ್ಷ್ಮವಾದ ಸಂತೋಷವೆ? ಹಗುರವಾದ ಉಲ್ಲಾಸವೇ? ಚಿತ್ತಕ್ಷೋಭೆಯಿಂದ ಹುಟ್ಟಿದ ಹತಾಶ ನಗೆಯೆ? ಎಂದೂ ಅರಿತು ಕೊಳ್ಳುತ್ತಾನೆ. ಮತ್ತೆ ಈ ಅರಿವು, ಈ ಅನುಭವ ಒಂದೊಂದು ಬಾರಿಯೂ ಬೇರೆ ಬೇರೆ ರೀತಿಯಲ್ಲಿ ಹುಟ್ಟಬಹುದು. ಬಹುಶಃ ಇದೇ ಕಾರಣದಿಂದಲೇ ಒಂದು ರಾಗವನ್ನು ಒಂದು ಸಲ ಕೇಳಿದರೆ ಮುಗಿದಂತಾಗುವುದಿಲ್ಲ; ನೂರು ಸಲ, ಸಾವಿರ ಸಲ ಕೇಳಿದರೂ ಅಷ್ಟೆ. ಸೂಕ್ಷ್ಮ ಶ್ರಾವಕನಿಗೆ ಗಾಯಕ ಒಂದು ರಾಗವನ್ನು ಎಷ್ಟು ಬಾರಿಯೇ ಹಾಡಲಿ, ಒಂದೊಂದು ಬಾರಿಯೂ ಅದು ಹೊಸದಾಗಿಯೇ ಕೇಳಿಸುತ್ತದೆ.

……ನಾವು ಶಾಸ್ತ್ರೀಯ ಸಂಗೀತದಿಂದ ನಿರೀಕ್ಷಿಸುವುದು ಗೊಂದಲವಲ್ಲ, ಗಣಿತವಲ್ಲ, ಅಟ್ಟಹಾಸವಲ್ಲ. ಬದುಕಿನ ಸುಖದುಃಖಗಳೆಲ್ಲವನ್ನೂ ಅನುಭವಿಸಿ ಮೆಲುಕುಹಾಕಿದ್ದರಿಂದ ಬರುವ ನೆಮ್ಮದಿ. ಕೆಲವು ವೇಳೆ ನಾವು ಆಲೋಚನಾಪರರಾಗಿ ಬದುಕಿನ ದೃಶ್ಯಾವಳಿಯ ಮೇಲೆ ವಿಸ್ಮಯದ ದೃಷ್ಟಿಯನ್ನು ಬೀಸುತ್ತೇವೆ. ಜಡತೆ–ಉತ್ಸಾಹಗಳ, ಆಸೆ–ನಿರಾಸೆಗಳ, ಸುಖ–ದುಃಖಗಳ ಉಯ್ಯಾಲೆಯಾಟವನ್ನು ಮುಗಿಸಿ ಸ್ವಸ್ಥವಾಗಿ ಕುಳಿತು, "ಹೌದು, ಇದು ವಿಚಿತ್ರ ಬದುಕು, ಆದರೆ ಹಿತ" ಎಂದುಕೊಂಡು–ಕುಣಿದು ಕುಪ್ಪಳಿಸುವುದಿಲ್ಲ–ಮೈಮನಗಳ ಬಿಗುವನ್ನು ಸಡಿಲಿಸಿ ನೆಮ್ಮದಿಯಲ್ಲಿ ನೆಲಸುತ್ತೇವೆ. ಈ ನೆಮ್ಮದಿ ಜಡತೆಯಲ್ಲ; ಅಂತರ್ಗತವಾದ, ಹೃದಯಸ್ಥವಾದ, ವಿಚಾರ ಸಂಪತ್ತುಳ್ಳದ್ದು: ಇಂಥ ನೆಮ್ಮದಿಯನ್ನೇ ನಾವು ಸಂಗೀತದಿಂದ ನಿರೀಕ್ಷಿಸುವುದು. ನಮ್ಮ ಸಂಗೀತ ಕೆಳ ಷಡ್ಜದಿಂದ ಹೊರಟು ವಿಳಂಬ–ಮಧ್ಯಮ–ದ್ರುತ ಗತಿಯಲ್ಲಿ ಪ್ರಯಾಣಮಾಡಿ ಅನುಭವ ಪಡೆದು ಮತ್ತೆ ಯಾವ ಷಡ್ಜದಿಂದ ಹೊರಟಿತೋ ಅಲ್ಲಿಗೇ ಮರಳಿ ಬಂದು ನೆಲಸುತ್ತದೆ. ಆ ಷಡ್ಜ ಮೊದಲಿದ್ದಂತೆಯೇ ಇರುವುದಿಲ್ಲ–ಬಿರುಗಾಳಿ, ಮಿಂಚು ಸಿಡಿಲು, ಮಳೆಗಳು ಮುಗಿದ ಮೇಲೆ ಬಂದ ಬಿಸಿಲಿನಲ್ಲಿರುವ ಪ್ರಸನ್ನತೆ–the calm after storm–ತುಮುಲ ಮುಗಿದ ಮೇಲೆ ಬರುವ ಶಾಂತಿ ಆ ಷಡ್ಜದಲ್ಲಿ ನೆಲಸಿರುತ್ತದೆ. ಶ್ರೋತೃಗಳಿಗೆ ಅದರ ಅನುಭವವಾಗಬೇಕು. ಇದನ್ನೇ ನಾವು ಶಾಸ್ತ್ರೀಯ ಸಂಗೀತದಿಂದ ನಿರೀಕ್ಷಿಸುವುದು.

—ಪ್ರೊ॥ ಎ. ಎನ್. ಮೂರ್ತಿರಾವ್
(ಸುಧಾ ಯುಗಾದಿ ವಿಶೇಷಾಂಕ–1989)

ನಾಲ್ಕು ಕಪ್ಪು ಕವಿತೆಗಳು

ಮೂಲ : ಇತಿಕಾ ಅಂತೂಲಿ

ಕನ್ನಡಕ್ಕೆ : ಚೆನ್ನವೀರ ಕಣವಿ

೧. ನನ್ನ ನಾಡಿನಲ್ಲಿ

ನನ್ನ ನಾಡಿನಲ್ಲಿ
ನಿಮ್ಮನ್ನು ಸೆರೆಮನೆಗೆ ಅಟ್ಟುತ್ತಾರೆ.
ಯಾಕೆ ಗೊತ್ತೆ ?
ನೀವು ಏನು ವಿಚಾರಿಸುತ್ತೀರೆಂದು ಊಹಿಸಿ
ಅವರೂ ಅದರ ಬಗ್ಗೇ ವಿಚಾರ ಮಾಡುತ್ತಾರೆ.

ನನ್ನ ಕಕ್ಕ ನನಗೊಮ್ಮೆ ಹೇಳಿದ:
ನಮ್ಮ ಮನಸ್ಸುಗಳಲ್ಲಿ ಅವರು
ಮೈಕ್ರೊಚಿಪ್ ಇಟ್ಟು
ನಮ್ಮ ಆಲೋಚನೆಗಳನ್ನೂ, ಕನಸುಗಳನ್ನೂ
ಜಾನ್‌ವೋಸ್ಟರ್ ಸ್ಕ್ವೇರ್‌ನಲ್ಲಿಯ ಪರದೆಯ ಮೇಲೆ
ಮೂಡುವಂತೆ ಮಾಡುತ್ತಾರೆ.

ನಾನು ಗಾಬರಿಗೊಂಡೆ :
ಹಗಲು ನನ್ನ ನಾಲಗೆಯ ಮೇಲೆ
ಇರುಳು ನನ್ನ ಕನಸುಗಳ ಬಗ್ಗೆ
ನಿಗಾವಹಿಸಿದೆ.

೨. ಅವರು ಸದಾ ಕೇಳುತ್ತಾರೆ

ನನಗೆ ಇಷ್ಟೊಂದು ಉದ್ದ ನಾಲಗೆ
ಏಕಿದೆ ? ಎಂದು ನನ್ನ ನಾಡಿನಲ್ಲಿ
ಅವರು ಸದಾ ನನ್ನನ್ನು ಕೇಳುತ್ತಾರೆ.

ಇಲ್ಲಿಯ ವ್ಯವಸ್ಥೆ
ಅದನ್ನು ದಿನವೂ ಹೊರಗೆ ಜಗ್ಗಿ
ಅದರ ಕೆಳಗಿನ ಶಬ್ದಗಳನ್ನು ಹುಡುಕುತ್ತಿರುವಾಗ
ಬೇರೆ ಹೇಗಿರಬಲ್ಲುದು ?

ನಮಗೆ ಇಷ್ಟುದ್ದ ಕಿವಿಗಳು
ಏಕಿವೆಯೆಂದು
ಸದಾ ಅವರು ನನ್ನನ್ನು ಕೇಳುತ್ತಾರೆ.
ಬದುಕಿ ಉಳಿಯಲು
ಅವರ ಮಾತಿನ ಸೂಕ್ಷ್ಮಧ್ವನಿಗೆ
ಕಿವಿಗೊಡಲೇಬೇಕಾದಾಗ
ಬೇರೇನು ಸಾಧ್ಯ ?

ದುಃಖದಲ್ಲಿಯೂ ನಾವು ನಗುವುದೇಕೆ
ಎಂದು ಅವರು ಸದಾ ಕೇಳುತ್ತಾರೆ,
ಅವರ ಕಪಿಮುಷ್ಟಿಗಳಿಂದ ನಾವು
ಪಾರಾಗುತ್ತೇವೆಂಬ ತುಂಬು ನಂಬಿಕೆ ನಮಗಿರುವಾಗ
ನಗದಿರುವುದು ಹೇಗೆ ?

೩. ಸೆನ್ಸಾರ್‌ನ ಶಿರಚ್ಛೇದಕದ ಕೆಳಗೆ

ಸಂಜೆಯ ಕಡಾಯಿಯನ್ನು ಕುಡಿಯಲು
ನಾವು ಹವಣಿಸುತ್ತಿರುವಂತೆಯೇ
ನಮ್ಮ ದೇಶದಲ್ಲಿ
ನಮ್ಮ ಯುದ್ಧ ಸುರುವಾಗುತ್ತದೆ—

ನಮ್ಮ ಜಜ್ಜಿಹೋದ ಕಣ್ಣು
ಬೆನ್ನಿಗೆ ಕಟ್ಟಿದ ಕೈಗಳು
ಮೂಲದಲ್ಲಿಯೇ ತುಂಡರಿಸಿದ ನಾಲಗೆಗಳು
ಗಾಳಿಯಲ್ಲಿ ಬೆರೆತು ಹೋದ ನಮ್ಮ ಶಬ್ದಗಳು
ಧ್ವನಿಗಳ ಕಚ್ಚಾ ಸಾಮಾನು.

ವಿಚಾರಗಳನ್ನು ಉಸುರುವ ಮೊದಲೇ
ಪ್ರತಿಧ್ವನಿಗಳನ್ನು ಕೇಳುತ್ತೇವೆ.
ಕಿವಿಯ ಪರದೆಗೆ ಶಬ್ದಗಳು ಬಡಿಯುವ ಮೊದಲೇ
ಉತ್ತರಗಳನ್ನು ಕೆತ್ತಿರುತ್ತೇವೆ.
ಪಿಸುಮಾತಿನ ತೆರೆಗಳಲ್ಲಿ
ನಮ್ಮ ಕವಿತೆಗಳು ತೇಲಿ ಬರುತ್ತವೆ.

೪. ಸರಪಳಿಯಲ್ಲಿಯ ಕೊಂಡಿಗಳು

ಚಲಿಸಬಲ್ಲ ಚಿಲಕತ್ತು
ಮೃತ್ಯುವಿನ ಬೆಂಗಾವಲಾಗಿ ಹೋಗುತ್ತಿರುವ ಕಡೆ
ನಾನು ಬೆರಳೆತ್ತಿ ತೋರಿಸಿದೆ.
ನನ್ನ ಬೆರಳನ್ನೇ ಅವರು ಕತ್ತರಿಸಿದರು.
ಹನಿಯುತ್ತಿರುವ ರಕ್ತದಿಂದಲೇ
ಭರವಸೆಯ ಕವಿತೆ ಬರೆದೆ;
ಅವರ ಸಾವಿನ ಸಂಜೆಯ ವರ್ಣಚಿತ್ರ ಬಿಡಿಸಿದೆ.

ಸೆರೆಮನೆಯ ನನ್ನ ಸಣ್ಣ ಕೋಣೆಯಲ್ಲಿ
ಗೋಡೆಗಾನಿಸಿ
ಸರಪಳಿಯಿಂದ ನನ್ನನ್ನು ಬಿಗಿದರು.
ಅದರ ಪ್ರತಿಯೊಂದು ಕೊಂಡಿಗೂ
ನನ್ನ ತುಟಿಯೊತ್ತಿದೆ,
ನನ್ನ ಕನಸುಗಳನ್ನು ಮೆಲ್ಲಗುಸುರಿದೆ.
ಪ್ರತಿಯೊಂದು ಕೊಂಡಿಯೂ
ಒಂದು ಕವಿತೆ................

[ಈ ಕವಿತೆಗಳನ್ನು ಬರೆದ ಕವಿ ದ. ಆಫ್ರಿಕಾದ Pitika Ntuli ಶಿಲ್ಪಿಯೂ ಹೌದು. ೧೯೬೩ರಿಂದಲೇ ಗಡಿಪಾರಾಗಿ ಲಂಡನ್ನಿನಲ್ಲಿ ವಾಸವಾಗಿದ್ದಾನೆ. ಪರದೇಶಕ್ಕೆ ವಲಸೆ ಹೋಗುವ ಮೊದಲು ಬಂಧನಕ್ಕೊಳಗಾಗಿ ಒಂದು ವರ್ಷ ಸೆರೆಮನೆಯಲ್ಲಿದ್ದ.

ಆಧಾರ: 'Last Mile Together' ಸಂ: ಶಾ. ಬಾಲುರಾವ್]

ಇನ್ನೆರಡು ಕವಿತೆಗಳು

ಕೆ. ಪಿ. ನಟರಾಜ

೧. ಹಾಡ್ತಾ ಇದೀವಿ

ಾನೇನ್ಮಾಡ್ತಿದೀನೀಂತ
ನಾನು
ನೋಡ್ತಾ ಇದೀನಿ;
ವರ್ ಮೂಗನ್ನ
ಳೆ ವೀಳೆಯದೆಲೆ ಮೂಗನ್ನ
ರಳಿಂದ
ಮುಟ್ತಾ ಇದೀನಿ
ಮುತ್
ಟ್ತಾ ಇದೀನಿ
ವರ್ ಹಣೆ
ನನ್ ಕಣ್‌ಅನ್ನ
ಡ್‌ಕೊಂಡಿದೆ
ತ್ತರೂನು ಬರದಲ್ಲೇ
ೋಡ್ತಾ ಇದೀನಿ
ಂದೂ ನೋಡಿರದ
ಈ ಸುಂದರ ಹಣೆ
ಳವಿಗೆ ನಾ ಸಿಕ್ಕಿದೀನಿ....
ಸ್ತದಲಿ
ತ್ತುತ್ತಾ ಇದೀನಿ
ವರ್ ಹಣೇನ
ತ್ತುತ್ತಾ ನಾನಿದೀನಿ
ವರ್ ಕಣ್ಣೊಳಗೆ

ಕಣ್ಣೆಟ್ಟು
ನೋಡತಾ
ಇದೀನಿ
ನಿವಸ್ ತುಟಿ ಮೇಲೆ
ತುಟಿ ಒತ್ತಿ
ನೋಡತಾ
ಇದೀನಿ
ನಿವಸ್ ಕಿವಿ ಮುಚ್ಚಿ–
ಅಂಗೈಲಿ
ಬಿಸಿಯನ್ನ
ಬಂಧಿಸ್ತಿದೀನಿ
ಇನ್ನು–
ಚಳಿಯಿಲ್ಲ
ಭಯವಿಲ್ಲ
ಹಾಡ್ತಾ ಇದೀನಿ
ನಿಮ್ಮಿಂದ ಹಾಡ್ತಾ ಇದೀನಿ
ನೀವೂನು
ಮೈಯುದ್ದಂಬಿ ಹಾಡ್ತಾ ಇದೀರಿ
ಓಹ್
ಹಾಡ್ತಾ ಇದೀರಿ
ನಿವಸ್ ತೋಳಲ್ಲಿ
ಅವುಚುತ್ತಾ ಹಾಡ್ತಾ ಇದೀರಿ
ನಿವಸ್ ಕಾಲಲ್ಲಿ
ಅವುಚುತ್ತ ಹಾಡ್ತಾ ಇದೀರಿ
ನಿಮ
ಕಣ್ಣಲ್ಲಿ–
ಹೂ
ವಾಗಿ ಹಾಡ್ತಾ ಇದೀರಿ
ತುಟಿಯಲ್ಲಿ
ಮೃದುವಾಗಿ

ಹಾಡ್ತಾ ಇದೀರಿ

....

ಬೆಚ್ಚಗೆ ನಾವಿಬ್ರೂ
ಹಾಡ್ತಾ ಇದೀವಿ !
ನಿವ್ ತೋಳೊಳಗೆ
ನಾನಿದ್ದು ಹಾಡ್ತಾ ಇದೀನಿ
ನನ್ ಕೈಯೊಳಗೆ
ನೀವಿದ್ದು ಹಾಡ್ತಾ ಇದೀರಿ
ಹಾಡ್ತಾ ಇದೀವಿ
ಬಿಸಿಯಾಗಿ
ಹಾಡ್ತಾ ಇದೀವಿ
ಬಿಸಿಯಾಗಿ ಹಾಡ್ತಾ
ಇದೀವಿ.

೨. ಒಂದು ದುಃಖ ಗೀತ

ನೀನಿದ್ದೆ.
ಒಳಗೆ:
ಹಾಸಿಗೆಯಿತ್ತು ಬೆಚ್ಚಗೆ
ಹೊದ್ದಿಕೆಯಿತ್ತು ಸ್ವಚ್ಛಗೆ
ಹೂವುಗಳಿರುವುದಕೆ
ಉದ್ದೇಶವಿತ್ತು–
ಅರಳುವುದಕ್ಕೆ.

ದೀಪ
ಸೂಸುವ ಬೆಳಕಿತ್ತು
ಬೆಳಕು !–
ಎನ್ನುವುದ ನೋಡಿದ್ದೇ
ಅವತ್ತು.
ಬೆಳಕೆಂದರೆ–

ಆಪತ್ತು, ನಿನ್ನ ಜೊತೆ–
ಹೊತ್ತು.

ನೀನಿಲ್ಲ.
ಹಬ್ಬುವ ಚಿನ್ನದಲೆ
ಬೆಳಕು :
ಬೆದರುತ್ತಿದೆ
ರೂಹಿರದ ಮೌನ –
ಹೆದರುತ್ತಿದೆ ;
ಗೋಡೆ :
ಮುಖವಾಡ ತೆಗೆದಿಟ್ಟು
ಹೀರುತ್ತಿದೆ.

ನಾನು ?
ನೋಡುತ್ತಿಲ್ಲ
ಯೋಚಿಸುತ್ತಿಲ್ಲ.

ನೀನಿದ್ದೆ.
ಹೊರಗೆ:
ಚಂದ್ರನಿದ್ದನು ಹೇಗೆ !
ಕತ್ತೆತ್ತಿದರೆ
ಎತ್ತಲೂ ಚುಕ್ಕಿ–ಕಣ್ಣಿಗೆ
ನಸುನಗುವ
ನಕ್ಕೂ ನಕ್ಕೂ ಬಿಡುವ ನಮ್ಮ
ನಗುವ
ಶುಭ್ರವಾಗಿಡುವ
ಗಾಳಿ–ಬೀಸಿ ಬರುವ
ಬೆಟ್ಟವ ಬಳಸಿ
ಕಣಿವೆಯಲ್ಲಾಸಿ
ಬೀಸಿ
ಬರುವ

ಬಂದು ಬಳಿ ನಿಂದು
ಸೂಸುವ....
ನೀರು, ಸ್ವಚ್ಛ ನೀರು
ಪ್ರತಿ ಗಿಡವು
ನಕ್ಕಿತ್ತು ;
ಬುಡದ ಬಳಿ !
ಇಂಗಿತ್ತು
ನಿಂತು
ನೀ
ಹುಯ್ದ ನೀರು !
(ನೀನು ತುಳಿಯುತ್ತ
ಹಾಯ್ದ ದಾರಿ !
ಮುಟ್ಟಿದ ಆ ಗಿಡದ
ಒಂದು ಪುಟ್ಟ ಎಲೆ !)

ಆ ಜನ
ಈ ಜನ
ಈ ಬೀದಿಯ ಜನ
ಹೆಸರಿರದ ಬರಿ
ಶಬ್ದಿಸುವ ಈ ಜನ
ಕ್ಕಾಗ ಹೆಸರಿತ್ತು !
ಇತ್ತವರ ತೊಡಗುವಿಕೆಗೂ
ಒಂದು ಅರ್ಥ
ಬದುಕಿಗೆ:
ಭವಿಷ್ಯ !
ಪಟ್ಟ ಪಾಡುಗಳೊಳಗಲ್ಲಲ್ಲೆ
ಒಂದೊಂದು ಪುಟ್ಟ ಕಾವ್ಯ !

ನೀನಿಲ್ಲ.

ನಾನು ಯೋಚಿಸುವುದಿಲ್ಲ
ನಾನು ಯೋಚಿಸುವುದೇ ಇಲ್ಲ.

ಮೇ–ಜೂನ್ ೧೯೯೧/೧೫

ಪುಸ್ತಕ ಪರಿಚಯ

ಕೆ. ವಿ. ತಿರುಮಲೇಶ್‌ರ "ಅಸ್ತಿತ್ವವಾದ"

ಎಸ್. ಆರ್. ವಿಜಯಶಂಕರ

ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ಸಾಹಿತ್ಯ ಪಾರಿಭಾಷಿಕ ಪುಸ್ತಕ ಮಾಲೆ' ಯಲ್ಲಿ ಕೆ. ವಿ. ತಿರುಮಲೇಶ್ ಬರೆದ ಪುಸ್ತಕ 'ಅಸ್ತಿತ್ವವಾದ'. ಈ ಕೃತಿ ಯೂರೋಪಿನಲ್ಲಿ ಸಿದ್ಧಾಂತ ರೂಪವಾಗಿ ಆಚರಣೆಗೆ ಬಂದು, ಕಾಲಕ್ರಮೇಣ ಕನ್ನಡ ಸಾಹಿತ್ಯ ಕ್ಷೇತ್ರದವರೆಗೂ ವ್ಯಾಪಿಸಿದ ಅಸ್ತಿತ್ವವಾದ ಅಥವಾ Existentialism ವಿಚಾರಗಳನ್ನು ವ್ಯವಸ್ಥಿತವಾಗಿ ಕನ್ನಡ ಓದುಗರಿಗೆ ಪರಿಚಯಿಸುವ ಉದ್ದೇಶ ಹೊಂದಿದೆ. ಯು. ಆರ್. ಅನಂತಮೂರ್ತಿ, ಮೀರಾ ಚಕ್ರವರ್ತಿ ಮೊದಲಾದವರ ಬರವಣಿಗೆಗಳಿಂದ ಕನ್ನಡ ಸಾಹಿತ್ಯಕ್ಕೆ ಅಸ್ತಿತ್ವವಾದದ ಪರಿಚಯ ಈ ಮೊದಲೇ ಆಗಿದೆ. ನವ್ಯ ಸಾಹಿತ್ಯ ಸಂದರ್ಭದಲ್ಲಿ ರಚಿತವಾದ ಅನೇಕ ಕೃತಿಗಳ ಹಿಂದೆ ಇದ್ದ ಅಸ್ತಿತ್ವವಾದದ ಪ್ರೇರಣೆ ಬಗೆಗೂ ಕನ್ನಡ ಸಾಹಿತ್ಯದ ಅಧ್ಯಯನ ಆಸಕ್ತರಿಗೆ ತಿಳಿದಿದೆ. ಈ ಹಿನ್ನೆಲೆಯ ಸ್ಪಷ್ಟ ಕಲ್ಪನೆಯೊಂದಿಗೆ ಕೆ. ವಿ. ತಿರುಮಲೇಶ್ ತಮ್ಮ 'ಅಸ್ತಿತ್ವವಾದ' ಪುಸ್ತಕವನ್ನು ರಚಿಸಿದ್ದರಿಂದ, ಪರಿಚಯಾತ್ಮಕವಾಗಿಯೂ ಅತ್ಯಂತ ಸಂಗ್ರಹ ಯೋಗ್ಯವಾದ ಈ ಪುಸ್ತಕ ಅಲ್ಲಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಅನೇಕ ಒಳ ನೋಟಗಳುಳ್ಳ ವಿಮರ್ಶಾ ಕೃತಿಯಾಗಿಯೂ ಉಪಯುಕ್ತವಾಗಿದೆ.

ಕೆ. ವಿ. ತಿರುಮಲೇಶರ 'ಅಸ್ತಿತ್ವವಾದ' ಪುಸ್ತಕ ನಾಲ್ಕು ಮುಖ್ಯ ವಿಭಾಗಗಳಲ್ಲಿ ಹಂಚಿಕೊಂಡಿದೆ. ಮೊದಲನೆಯ ಭಾಗದಲ್ಲಿ ಪೀಠಿಕೆ ರೂಪದಲ್ಲಿ ವಿಷಯ ಪ್ರವೇಶ ಮಾಡಲಾಗಿದೆ. ಆ ಬಳಿಕ ಕೀರ್ಕೆಗಾರ್ಡ್‌ನಿಂದ ಅಬಗ್ನಾನೊ ತನಕ ಯೂರೋಪಿನ ಕೆಲವಾರು ಮುಖ್ಯ ಅಸ್ತಿತ್ವವಾದಿ ಚಿಂತಕರ ಮುಖ್ಯ ವಿಚಾರಗಳನ್ನು ಸಂಗ್ರಹಿಸಿ ನೀಡಲಾಗಿದೆ. ಬಳಿಕ ಆಸ್ತಿತ್ವವಾದ ಹಾಗೂ ಸಾಹಿತ್ಯ ಕೃತಿ ರಚನೆಯ ಹಿನ್ನೆಲೆಯಲ್ಲಿ ವಿವರಗಳನ್ನು ನೀಡಲಾಗಿದೆ. ಈ ಭಾಗದಲ್ಲಿ ರಶ್ಯಾದ ಹಾಗೂ ಯೂರೋಪಿನ ಅನೇಕ

ಲೇಖಕರ ಬರಹಗಳ ಅಸ್ತಿತ್ವವಾದೀ ಅಂಶಗಳನ್ನು ವಿಶ್ಲೇಷಿಸಲಾಗಿದೆ. ನಂತರದಲ್ಲಿ ಲೇಖಕರು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅಸ್ತಿತ್ವವಾದಿ ಚಿಂತನೆಯ ಪ್ರಭಾವವನ್ನು ಕನ್ನಡದ ಕೆಲವಾರು ಮುಖ್ಯ ಕೃತಿಗಳ ಹಿನ್ನೆಲೆಯಲ್ಲಿ ಚರ್ಚಿಸುತ್ತಾರೆ. ಅಸ್ತಿತ್ವವಾದ ತನ್ನ ಉನ್ನತ ಕ್ಷಣಗಳನ್ನು ಕಂಡ ಬಳಿಕ ಉಂಟಾದ ಬದಲಾವಣೆಗಳ ಬಗೆಗೆ 'ಅಸ್ತಿತ್ವ ವಾದದಿಂದೀಚೆಗೆ' ಎಂಬ ವಿಭಾಗದಲ್ಲಿ ಕೆ. ವಿ. ತಿರುಮಲೇಶ್ ಚರ್ಚಿಸುತ್ತಾರೆ,

'ಅಸ್ತಿತ್ವವಾದವೆಂದರೆ ಅದೊಂದು ಮಾನವತಾವಾದ' ಎಂಬ ಹೊತ್ತಗೆಯಲ್ಲಿ ಸಾರ್ತ್ರ್ ಹೇಳುವ ಮಾತು: "ಅಸ್ತಿತ್ವವಾದಿಯ ಪ್ರಕಾರ ಮನುಷ್ಯನು ವಿವರಣೆಗೆ ದೊರಕದೆ ಇದ್ದರೆ ಅದಕ್ಕೆ ಕಾರಣ ಆರಂಭದಲ್ಲಿ ಅವನು ಏನೂ ಅಲ್ಲದೆ ಇರುವುದು. ನಂತರದ ತನಕ ಅವನು ಏನೂ ಅಲ್ಲದೆ ಇರುತ್ತಾನೆ; ಆಮೇಲೆ ತಾನು ಮಾಡಿಕೊಂಡಂತೆ ಇರುತ್ತಾನೆ". ಇಲ್ಲಿಂದ ಅಸ್ತಿತ್ವವಾದದ ಅಂಶಗಳನ್ನು ಒಂದೊಂದಾಗಿ ವಿವರಿಸುತ್ತಾ ಲೇಖಕರು, ಅಸ್ತಿತ್ವವಾದದ ತಾತ್ವಿಕ ಅನ್ವೇಷಣೆಯ ಶೈಲಿಯನ್ನು ಓದುಗರಿಗೆ ಮನದಟ್ಟು ಮಾಡಿಸುತ್ತಾರೆ. ಅಸ್ತಿತ್ವವಾದಿಗಳ ಮುಖ್ಯ ಕಾಳಜಿಯಾದ 'ವ್ಯಕ್ತಿ ಕೇಂದ್ರಿತ ಅರಿವು' ಹಾಗೂ 'ಮನುಷ್ಯನು ಈ ಜಗತ್ತಿನಲ್ಲಿ ಒಂಟಿ ಎಂಬ ಅರಿವು' ಅರ್ಥವಾಗುವಂತೆ ತಾತ್ವಿಕ ವಿವರಗಳನ್ನು ಮೊದಲ ಭಾಗದಲ್ಲಿ ಕೆ. ವಿ. ತಿರುಮಲೇಶ್ ಬಹಳ ಕ್ರಮಬದ್ಧವಾಗಿ ವಿಸ್ತರಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಹೈಡೆಗರ್, ಕೀರ್ಕೆಗಾರ್ಡ್, ಸಾರ್ತ್ರ್ ಮೊದಲಾದವರ ವ್ಯತ್ಯಾಸಗಳನ್ನೂ ಗೋಚರಿಸುತ್ತಾರೆ.

ಅಸ್ತಿತ್ವವಾದಿಗಳನ್ನು ಕ್ರಿಶ್ಚಿಯನ್ ಈಶ್ವರವಾದಿಗಳೆಂದೂ, ನಿರೀಶ್ವರವಾದಿ ಗಳೆಂದೂ ವಿಂಗಡಿಸುವುದು ಸಾಮಾನ್ಯವಾಗಿದೆ. ಅಸ್ತಿತ್ವವಾದಿಗಳಲ್ಲಿ ನಾಸ್ತಿಕರಿರುವಂತೆ, ಆಸ್ತಿಕರಿರುವುದೂ ನಿಜ. ಆದರೆ ಇದು ಕೇವಲ ಸರಳಗೊಳಿಸಿ ಹೇಳುವಷ್ಟು ಸುಲಭ ವಲ್ಲ. ಕೀರ್ಕೆಗಾರ್ಡ್ ಕ್ರಿಶ್ಚಿಯನ್ ಅಸ್ತಿತ್ವವಾದಿಯೆಂದು ಸಾಮಾನ್ಯವಾಗಿ ಎಲ್ಲರೂ ಗುರುತಿಸುತ್ತಾರೆ. ಆದರೆ ನಾಸ್ತಿಕನೆಂದು ಪ್ರಸಿದ್ಧನಾದ ನೀತ್ಚನಲ್ಲೂ ಕ್ರಿಶ್ಚಿಯನ್ ಧರ್ಮದ ಕುರಿತು ಉತ್ಕಟವಾದ ಪ್ರೀತಿ, ದ್ವೇಷಗಳು ಕಂಡುಬರುತ್ತವೆ. ಈ ಎಲ್ಲಾ ಸೂಕ್ಷ್ಮಗಳನ್ನೂ ಕೆ. ವಿ. ತಿರುಮಲೇಶ್ ತಮ್ಮ ವಿಷಯ ಪ್ರವೇಶದಲ್ಲಿ ನೀಡುತ್ತಾರೆ.

ಯಥಾರ್ಥ ಸ್ವಂತಿಕೆಯೆನ್ನುವುದು ವ್ಯಕ್ತಿಯು ಸಕ್ರಿಯ ಒಲವನ್ನು ಹೊಂದಿ ಕೊಂಡದ್ದು" ಎನ್ನುವ ವಿಮರ್ಶಕ ಮೆಕ್ವಾರಿಯ ಮಾತಿನಿಂದ ಪ್ರಾರಂಭಿಸಿ, ಲೇಖಕರು ವ್ಯಕ್ತಿಕೇಂದ್ರಿತವಾದ ಇಂತಹ ದೃಷ್ಟಿಕೋನದ ಗುಣ ಅವಗುಣಗಳನ್ನು ವಿವರವಾಗಿ ವಿಶ್ಲೇಷಿಸುತ್ತಾರೆ. ಇದರ ಚಾರಿತ್ರಿಕ ಹಿನ್ನೆಲೆಯಾಗಿ, ಹೈಡೆಗರ್ ಹೇಳುವ 'ಮನೋ ನಿರ್ಧಾರದಿಂದ ಉಂಟಾಗುವ ಒಂದು ಅವಸ್ಥೆ' ಎಂಬಲ್ಲಿಂದ ಪ್ರಾರಂಭಿಸಿ, ಕ್ರಮಬದ್ಧ

ವಿಶ್ಲೇಷಣೆಯಿಂದ ಲೇಖಕರು ತಲಪುವ ನಿರ್ಧಾರ: "ಅಸ್ತಿತ್ವವಾದವು ಸಂದಿಗ್ಧ ಸ್ಥಿತಿಯ ತತ್ವಜ್ಞಾನ ; ಮನುಷ್ಯನ ಇಡಿಯ ಬದುಕನ್ನೂ, ಹಾಗೆಯೇ ಮನುಷ್ಯನಿಗೆ ಸಂಬಂಧಿಸಿದ ಜಗತ್ತನ್ನೂ ಒಂದು ಸರಮಾಲೆಯೆಂಬಂತೆ ಅದು ಕಾಣುತ್ತದೆ. ಇಲ್ಲಿ ಪ್ರತಿಯೊಂದು ಘಟ್ಟವೂ, ಪ್ರತಿಯೊಂದು ಪರಿಸ್ಥಿತಿಯೂ ಗಂಡಾಂತರದಿಂದ ಕೂಡಿದ್ದು ಇದನ್ನು ನಿಭಾಯಿಸುವುದಕ್ಕೆ ಮನುಷ್ಯನು ತನ್ನೆಲ್ಲ ಶಕ್ತಿಯನ್ನೂ ಉಪಯೋಗಿಸ ಬೇಕಾಗುತ್ತದೆ".

ಅಸ್ತಿತ್ವವಾದ ನಿರಾಶಾವಾದವೇನಲ್ಲ; ಅದು ಆಶಾವಾದವೂ ಅಲ್ಲ. ಆಶೆ–ನಿರಾಶೆಗಳ ದ್ವಂದ್ವದಿಂದ ಬಿಡುಗಡೆಯ ಚಿಂತನಕ್ರಮವನ್ನು ನಾವಿಲ್ಲಿ ಹೇಗೆ ಕಾಣ ಬಹುದು ಎಂಬುದನ್ನು ಲೇಖಕರು ವಿಶ್ಲೇಷಿಸುತ್ತಾರೆ. ಅಸ್ತಿತ್ವವಾದವನ್ನು ತತ್ವ ಜ್ಞಾನ ಎನ್ನುವುದಕ್ಕಿಂತ ತತ್ವಜ್ಞಾನವನ್ನು ನಡೆಸುವ ಒಂದು ವಿಧಾನ ಎಂಬ ಸೂಕ್ಷ್ಮ ನಿಲುವನ್ನು ಸೂಚಿಸುತ್ತಾರೆ. ಆ ಬಳಿಕ, ಅಸ್ತಿತ್ವವಾದವೆಂದು ಭ್ರಮಿಸಲು ಸಾಧ್ಯ ವಿರುವ ಪ್ರಯೋಗವಾದ (Empiricism), ಮಾನವತಾವಾದ (Humanism), ಆದರ್ಶವಾದ (Idealism), ಪ್ರಯೋಜನವಾದ (Pragmatism) ಹಾಗೂ ಶೂನ್ಯ ವಾದ (Nihilism)ಗಳ ಬಗೆಗೆ ಪುಟ್ಟ ಟಿಪ್ಪಣಿಗಳನ್ನು ನೀಡುತ್ತಾರೆ.

ಅಸ್ತಿತ್ತವಾದದ ಮೇಲಿನ ಸ್ಥೂಲ ವಿವರಣೆಗಳೊಡನೆ **ಕೆ. ವಿ. ತಿರುಮಲೇಶ್,** ಕೆಲವಾರು ಮುಖ್ಯ ಅಸ್ತಿತ್ವವಾದಿ ಚಿಂತಕರ ಮುಖ್ಯ ಪರಿಚಯ ನೀಡುತ್ತಾರೆ. ಈ ವಿವರಗಳನ್ನು ಹೀಗೆ ಪಟ್ಟಿಮಾಡಬಹುದು:

ಆಧುನಿಕ ಅಸ್ತಿತ್ವವಾದದ ಮೂಲಪುರುಷನೆಂದು ಹೇಳಬಹುದಾದ ಡೆನ್ಮಾರ್ಕಿನ ತತ್ವಜ್ಞಾನಿ **ಸೊರೆನ್ ಕೀರ್ಕೆಗಾರ್ಡ್** (1813–1855)ನ ವಿಚಾರಗಳು: "ಸತ್ಯ ವೆನ್ನುವುದೊಂದು ಜಾಲ : ಆದರಲ್ಲಿ ಸಿಕ್ಕದೆ ಅದು ಸಿಕ್ಕದು. ನಿಮ್ಮ ಕೈಗೆ ಸಿಗುವಂತೆ ಸತ್ಯ ನಿಮಗೆ ಸಿಗುವುದಿಲ್ಲ. ನಿಮ್ಮನ್ನು ತನ್ನೊಳಗೆ ಸಿಕ್ಕಿಸಿಕೊಳ್ಳುವ ಹಾಗೆ ಮಾತ್ರವೆ ಸಿಗುತ್ತದೆ".

ಸತ್ಯ ಮತ್ತು ನೋವಿಗಿರುವ ಅನನ್ಯವಾದ ಸಂಬಂಧವನ್ನೂ ಕೀರ್ಕೆಗಾರ್ಡ್ ಒತ್ತಿ ಹೇಳುತ್ತಾನೆ. ನೋವಿನ ಅನುಭವವೇ ಸತ್ಯದ ಕಾಣ್ಕೆ. ನೋವಿಲ್ಲದೆ ಮನುಷ್ಯ ಸತ್ಯಕ್ಕೆ ತನ್ನನ್ನು ಸಂಬಂಧಿಸಿಕೊಳ್ಳಲಾರ. 'ಆಯ್ಕೆ' ಪ್ರತಿ ಹಂತದಲ್ಲೂ ಎದುರಾಗುವ ಪ್ರಶ್ನೆ. ವ್ಯವಸ್ಥೆ–ಅದು ಸಮಕಾಲೀನ ಇಗರ್ಜಿಯಾಗಿರಲಿ, ಸರಕಾರವಾಗಿರಲಿ–ವ್ಯಕ್ತಿತ್ವದ ನಾಶವನ್ನೇ ಉದ್ದೇಶವಾಗಿಟ್ಟುಕೊಂಡಿರುತ್ತದೆ. ಕೀರ್ಕೆಗಾರ್ಡ್ ಹೇಳು ತ್ತಾನೆ: "ಯಾವುದೂ, ಯಾವುದೂ, ಯಾವುದೇ ತಪ್ಪೂ, ಯಾವುದೇ ಅಪರಾಧವೂ,

ಅಧಿಕಾರಯುತವಾದ ಯಾವುದರಷ್ಟೂ ದೇವರಿಗೆ ಅಸಹ್ಯವಾದ್ದಲ್ಲ; ಯಾಕೆ ? ಯಾಕೆಂದರೆ, ಅಧಿಕಾರಿಯಾದವನು ವ್ಯಕ್ತಿಸ್ವರೂಪರಹಿತನಾಗಿ (Impersonal) ವರ್ತಿಸುತ್ತಾನೆ; ವ್ಯಕ್ತಿತ್ವಕ್ಕೆ ನೀಡಬಹುದಾದ ಬಹುದೊಡ್ಡ ಅವಮರ್ಯಾದೆ ಇದುವೇ".

ಜರ್ಮನಿಯ ಮಹಾಪ್ರವಾದಿ **ಫ್ರೆಡ್ರಿಶ್ ವಿಲ್‌ಹೆಲ್ಮ್ ನೀತ್ಸೆ** (1844–1900) 'ಅಧಿಕಾರದ ಇಚ್ಛೆಯೇ ಜಗತ್ತು, ಇನ್ನೇನಲ್ಲ ..' ಎಂದವನು. ಮನುಷ್ಯನ ಸಾಧ್ಯತೆಗಳು ಅಪರಿಮಿತವೆನ್ನುವುದು ನೀತ್ಸೆನ ನಂಬಿಕೆ, 'ದೇವರು ಸತ್ತಿದ್ದಾನೆ' ಎಂದು ಘೋಷಣೆ ಮಾಡಿದ್ದ ನೀತ್ಸೆ ಕ್ರಿಶ್ಚಿಯನ್ ಮೌಲ್ಯಗಳನ್ನು ಒಪ್ಪುವುದಿಲ್ಲ. ಅವನು ಸಹಿಷ್ಣುತೆಯನ್ನು ಒಪ್ಪುತ್ತಾನೆ: ಸಹಿಷ್ಣುತೆ ಶಕ್ತಿಯ ಲಕ್ಷಣ. ಅಪಾರವಾದ ಪ್ರತಿರೋಧಗಳನ್ನು, ಕಷ್ಟಗಳನ್ನು ತಾಳಿಕೊಳ್ಳುವ ಮನುಷ್ಯನೇ ಬದುಕುವುದಕ್ಕೆ ಸಮರ್ಥನಾಗುತ್ತಾನೆ. ಅಂಥ ಮನುಷ್ಯನ ಹಾದಿಯಲ್ಲಿ ಅನೇಕ ಎಡರು ತೊಡರುಗಳಿವೆ. ಅವುಗಳಲ್ಲಿ ಪ್ರಮುಖವಾದುದು ಕ್ರಿಶ್ಚಿಯನ್ ಕಲ್ಪನೆಯ ದೇವರು. ಈ ಎಡರನ್ನು ತೊಡೆದು ಹಾಕುವ ಕೆಲಸವನ್ನೇ ನೀತ್ಸೆ ಮೊದಲಿಗೆ ಕೈಗೊಂಡುದು.

ಗೇಬ್ರಿಯಲ್ ಮಾರ್ಸೆಲ್ (1889–1973) ಫ್ರಾನ್ಸಿನ ಇನ್ನೊಬ್ಬ ತತ್ವಜ್ಞಾನಿ. 'ಜ್ಞಾತೃ ಮತ್ತು ಜ್ಞೇಯ, ವಿಚಾರ ಮತ್ತು ಇರುವಿಕೆ, ಬುದ್ಧಿ ಮತ್ತು ಮನಸ್ಸು, ಆತ್ಮ ಮತ್ತು ದೇಹ, ನಾನು ಮತ್ತು ನೀನು, ಅಹಂ ಮತ್ತು ದೇವರು– ಈ ದ್ವಂದ್ವಗಳನ್ನು ತಾರ್ಕಿಕ ರೀತಿಯಿಂದ ಬಗೆಹರಿಸುವುದು ಸಾಧ್ಯವಿಲ್ಲ. ಅಸ್ತಿತ್ವದ ಮೂಲಕ ಮಾತ್ರವೇ ಸಾಧ್ಯ ಎನ್ನುತ್ತಾನೆ ಮಾರ್ಸೆಲ್. ಆತ್ಮ ಮತ್ತು ದೇಹದ ದ್ವಂದ್ವ ಇರುವಿಕೆಯ ಜತೆ ಅಸ್ತಿತ್ವವು ಮುಖಾಮುಖಿಯಾದಾಗ ಉಳಿಯುವುದಿಲ್ಲ'.

ಜರ್ಮನಿಯ **ಕಾರ್ಲ್ ಯಾಸ್ಪರ್ಸ್** (1883–1969) ಮನಃಶ್ಶಾಸ್ತ್ರದ ಅಧ್ಯಾಪಕ. 'ಯಾಸ್ಪರ್ಸ್ ಮನುಷ್ಯನೇ ದೇವರು ಎನ್ನುವುದಿಲ್ಲ. ದೇವರು ಎನ್ನುವ ಕಲ್ಪನೆಯನ್ನು ಅವನು ಒಪ್ಪುವುದಿಲ್ಲವಾದರೂ ಮನುಷ್ಯನಿಗೆ ಅತೀತವಾದುದೇನೋ ಇದೆಯೆಂಬುದನ್ನು ಒಪ್ಪುತ್ತಾನೆ. ಇದಕ್ಕೊಂದು ಹೆಸರಿನ ಅಗತ್ಯವನ್ನು ಮಾತ್ರ ಅವನು ಕಾಣುವುದಿಲ್ಲ'.

ಜರ್ಮನಿಯ **ಮಾರ್ಟಿನ್ ಹೈಡೆಗರ್** (1889–1976) ಬರೆದ "ಇರುವಿಕೆ ಮತ್ತು ಕಾಲ" (Being and Time) ಎಂಬ ಕೃತಿ ಆತನ ತಾತ್ವಿಕ ಜಿಜ್ಞಾಸೆಯಲ್ಲಿ ಬಹಳ ಮುಖ್ಯವಾದ್ದು. 'ಇರುವಿಕೆ ಮತ್ತು ಕಾಲ'ದ ಕೇಂದ್ರ ಸಮಸ್ಯೆ ಮನುಷ್ಯನ ಅಸ್ತಿತ್ವ. ಎಲ್ಲಾ ಸಮಸ್ಯೆಗಳಿಗಿಂತ ಇದುವೇ ಮನುಷ್ಯನಿಗೆ ಸಹಜವಾದ ಸಮಸ್ಯೆ. ಯಾಕೆಂದರೆ ವಸ್ತುಗಳಲ್ಲೆಲ್ಲಾ ಮನುಷ್ಯನು ಮಾತ್ರವೇ 'ಅಸ್ತಿತ್ವವೆಂದರೆ ಏನು ?'

ಎಂಬ ಪ್ರಶ್ನೆಯನ್ನು ಕೇಳಬಲ್ಲವನು. ಅತಿ ಭೌತಿಕವಾದವು ಹೇಗೆ ದೇವರೆಂದರೆ ದೇವರ ಅಸ್ತಿತ್ವವೆನ್ನುವುದೋ ಹಾಗೆಯೇ ಮನುಷ್ಯನೆಂದರೆ ಮನುಷ್ಯನ ಅಸ್ತಿತ್ವವೆಂದು ಹೇಳ ಬಹುದು........... ಅಸ್ತಿತ್ವದ ಅರ್ಥ ತಿಳಿಯದೆ ಇದ್ದರೆ ಇರುವಿಕೆಯ ಇನ್ನೆಲ್ಲಾ ಅರ್ಥಗಳೂ ನಮಗೆ ತಿಳಿಯದೇ ಹೋಗುತ್ತವೆ. ಎಲ್ಲ ವಸ್ತುಗಳಲ್ಲಿ ಮನುಷ್ಯ ನೊಬ್ಬನೇ ಉಳಿದ ವಸ್ತುಗಳ ಇರುವಿಕೆಯ ಅರ್ಥವನ್ನು ತಿಳಿದುಕೊಳ್ಳಬಲ್ಲ; ಆದರೆ ಹೀಗೆ ತಿಳಿದುಕೊಳ್ಳುವುದಕ್ಕೆ ಆತ ತನ್ನದೇ ಅಸ್ತಿತ್ವದ ಪ್ರಶ್ನೆಯನ್ನು ಮೊದಲು ಬಗೆ ಹರಿಸಿಕೊಳ್ಳುವುದು ಅತ್ಯಗತ್ಯ".

ಫ್ರಾನ್ಸಿನ **ಜಾನ್ ಪಾಲ್ ಸಾರ್ತ್ರ** (1905–1980) ಅಸ್ತಿತ್ವವಾದಿ ಚಿಂತಕರಲ್ಲೆಲ್ಲಾ ಕನ್ನಡಿಗರಿಗೆ ಹೆಚ್ಚು ಪರಿಚಿತ ಹೆಸರು. ಅಸ್ತಿತ್ವವಾದವನ್ನು ಅದರ ತಾರ್ಕಿಕ ಪರಿಣಾಮದಲ್ಲಿ ಕಾಣಲು ಸಾರ್ತ್ರ ಅತ್ಯುತ್ತಮ ಉದಾಹರಣೆ. 'ಇರುವಿಕೆ ಯೆನ್ನುವುದು ಯಾವ ಉದ್ದೇಶವೂ ಇಲ್ಲದೆ ಇದೆ. ಇರುವಿಕೆಗೆ ಉದ್ದೇಶವಾಗಲಿ, ಪ್ರೇರಣೆಯಾಗಲಿ, ಸಮರ್ಥನೆಯಾಗಲಿ ಇಲ್ಲ. ಇರುವಿಕೆಯನ್ನು ವೈಚಾರಿಕ ಚೌಕಟ್ಟಿ ನೊಳಗೆ ಇರಿಸುವುದಕ್ಕೆ ಸಾಧ್ಯವಿಲ್ಲ. ಇದಕ್ಕೊಂದು ಅಂತಿಮ ನೆಲೆಯೆನ್ನುವುದೂ ಇಲ್ಲ. ಹಾಗೆ ಇಲ್ಲದಿರುವಿಕೆಯೇ ಇದರ ರಹಸ್ಯ' ಎನ್ನುವ ತನ್ನ 'ನಾಸಿಯಾ' ಕಾದಂ ಬರಿಯ ನಿಲುವಿನಿಂದ ಸಾರ್ತ್ರ ಮುಂದೆ ಬಹಳ ಬೇರೆಯಾಗುತ್ತಾನೆ. "ಇರುವಿಕೆ ಮತ್ತು ಇಲ್ಲದಿರುವಿಕೆಗಳು ಪರಸ್ಪರ ಐಕ್ಯಗೊಳ್ಳಲು ನಿರಂತರವೂ ನಡೆಸುವ ಹೋರಾ ಟವೇ ಮನುಷ್ಯನ ಬದುಕು" ಎಂಬ ಹಂತವನ್ನು ತಲುಪುತ್ತಾನೆ.

ಇಟಾಲಿಯನ್ ಅಸ್ತಿತ್ವವಾದಿ **ನಿಕೊಲಾಸ್ ಅಬಗಾನೊ** (1901–) ಇತರ ವ್ಯಕ್ತಿಗಳ ಕುರಿತಾಗಿ ಮನುಷ್ಯನಿಗಿರುವ ಸಂಬಂಧವನ್ನು ವಾಸ್ತವ ಬದುಕಿನ ನೆಲೆಯಲ್ಲಿ ನೋಡುತ್ತಾನೆ. 'ಆಯ್ಕೆ'ಯ ಅಗಾಧತೆಯನ್ನೂ, ಅನಿವಾರ್ಯತೆಯನ್ನೂ ಅಬಗಾನೊ ಹೇಳುವ ವೈಶಾಲ್ಯ ಹೀಗಿದೆ: 'ಪ್ರಾಣಿಗಳಲ್ಲಾದರೆ ಸಹಜ ಪ್ರವೃತ್ತಿ ಯೆನ್ನುವುದು ಅನಿವಾರ್ಯ ಗುಣ. ಇದು ಯಾವುದೇ ತರದ ಅಪವಾದವನ್ನರಿಯದು. ಮನುಷ್ಯನಲ್ಲಾದರೆ ನಾವು ಯಾವುದನ್ನು ಸಹಜ ಪ್ರವೃತ್ತಿಯೆಂದು ಕರೆಯುತ್ತೇವೆಯೋ ಅದೇನೂ ಹತ್ತಿಕ್ಕಲಾರದ ಪ್ರೇರಣೆಯಲ್ಲ. ಅದರ ಸಾಧ್ಯತೆಗಳು ಕೂಡಾ ನಮ್ಮ ಆಯ್ಕೆಗೆ ಒಳಪಡುವಂಥದೇ'.

ಮೇಲೆ ಹೆಸರಿಸಿದ ಚಿಂತಕರ ಬಗೆಗೆ ಸಂಕ್ಷಿಪ್ತವಾಗಿ ಅಡಕಗೊಂಡು ವಿವರ ನೀಡಿದ ಬಳಿಕ ತಿರುಮಲೇಶ್, ಜೋಸೆ ಓರ್ತೆಗಾ ಗಾಸೆ, ಮಾರ್ಟಿನ್ ಬೂಬರ್, ನಿಕೊಲಾಸ್ ಬದ್ಯೆಯೇವ್, ಮಾರಿಸ್ ಮರ್ಲೊ–ಪೋಂಟಿ ಮುಂತಾದ ಇತರ ಪ್ರಸಿದ್ಧ ಅಸ್ತಿತ್ವವಾದಿ ಚಿಂತಕರನ್ನು ಹೆಸರಿಸಿ, ಸ್ಥಳಾವಕಾಶದ ಕಾರಣದಿಂದ ಅವರ ಕುರಿತು ವಿವರ ನೀಡುವುದಿಲ್ಲ.

ಅಸ್ತಿತ್ವವಾದದ ತಾತ್ವಿಕ ಪರಿಚಯದ ಬಳಿಕ ಯೂರೋಪ್ ಸಾಹಿತ್ಯ ಕ್ಷೇತ್ರದಲ್ಲಿ ಅಸ್ತಿತ್ವವಾದದ ಪ್ರಭಾವಕ್ಕೊಳಗಾದ ಅಥವಾ ಅಸ್ತಿತ್ವವಾದಿ ದೃಷ್ಟಿಕೋನದಿಂದ ಗುರುತಿಸಬಹುದಾದ ಕೆಲವಾರು ಮುಖ್ಯ ಲೇಖಕರ ಪ್ರಾತಿನಿಧಿಕ ಕೃತಿಗಳ ಹಿನ್ನೆಲೆಯಲ್ಲಿ ತಿರುಮಲೇಶ್ ಚರ್ಚಿಸುತ್ತಾರೆ. ಬಹುಶಃ ಅಸ್ತಿತ್ವವಾದಿ ದೃಷ್ಟಿಕೋನದಿಂದ ಯುದ್ಧರಂಗದಲ್ಲಿ ಎರಡು ಸೈನ್ಯಗಳ ನಡುವೆ ನಿಂತ ಅರ್ಜುನನ ಮನಸ್ಥಿತಿಯನ್ನೂ ವಿಶ್ಲೇಷಿಸಲು ಸಾಧ್ಯ ಎನ್ನುವ ಲೇಖಕರು ಆ ಬಳಿಕ ಷೇಕ್ಸ್‌ಪಿಯರ್‌ನ ಹ್ಯಾಮ್ಲೆಟ್‌ನಿಂದ ಉದಾಹರಣೆ ನೀಡುತ್ತಾರೆ. ನಾರ್ವೆಯ ನಾಟಕಕಾರ ಹೆನ್ರಿಕ್ ಇಬ್ಸನ್‌ನ 'ಪಿಯರ್ ಜಿಂಟ್' (Peer gynt-1867) ಗೀತನಾಟಕದ ವಿಶ್ಲೇಷಣೆ ಮಾಡುತ್ತಾರೆ. ಲಿಯೋ ಟಾಲ್‌ಸ್ಟಾಯ್ ರಚಿಸಿದ 'ಯುದ್ಧ ಮತ್ತು ಶಾಂತಿ' (War and Peace) ದೋಸ್ತೋವ್‌ಸ್ಕಿಯ 'ಅಪರಾಧ ಮತ್ತು ಶಿಕ್ಷೆ', 'ಕರಮಜೋವ್ ಸೋದರರು' ಇವುಗಳನ್ನು ಅಸ್ತಿತ್ವವಾದಿ ದೃಷ್ಟಿಕೋನದಿಂದ ಅರ್ಥೈಸುತ್ತಾರೆ. ಜೋಸೆಫ್ ಕಾನ್ರ್ಯಾಡ್‌ನ 'ಲಾರ್ಡ್ ಜಿಮ್', 'ಕತ್ತಲಿನ ಹೃದಯ' ಕಾದಂಬರಿಗಳ ಮೂಲಕ ಎರಡು ಮಾನವ ಸ್ಥಿತಿಗಳನ್ನು ಅಸ್ತಿತ್ವವಾದಿ ಚೌಕಟ್ಟಿನಲ್ಲಿ ತಿರುಮಲೇಶ್ ಹೇಳಿದರೂ 'ದೋಸ್ತೋವ್‌ಸ್ಕಿಯ ಮೇಲಾಗಲೀ, ಕಾನ್ರ್ಯಾಡ್ ಮೇಲಾಗಲೀ ಅಸ್ತಿತ್ವವಾದವು, ಒಂದು ಸಿದ್ಧಾಂತವಾಗಿ, ತತ್ವಜ್ಞಾನವಾಗಿ ಪ್ರಭಾವ ಬೀರಿತು ಎನ್ನುವುದಕ್ಕಾಗುವುದಿಲ್ಲ' ಎಂಬ ಸ್ಪಷ್ಟ ಎಚ್ಚರ ಲೇಖಕರಿಗಿದೆ. ಸಾರ್ತ್ರ, ಕಾಫ್ಕಾ, ಕ್ಯಾಮೂ, ಟಿ.ಎಸ್. ಎಲಿಯೆಟ್, ಬೆಕೆಟ್ ಮೊದಲಾದವರ ಕೃತಿಗಳ ಹಿನ್ನೆಲೆಯಲ್ಲಿ ಉತ್ತಮ ಒಳನೋಟಗಳುಳ್ಳ ಮಾತುಗಳನ್ನು ತಿರುಮಲೇಶ್ ಬರೆಯುತ್ತಾರೆ. ಇದು ಅಸ್ತಿತ್ವವಾದಿ ಚಿಂತನೆಯನ್ನು ಯೂರೋಪಿನ ಸಾಹಿತ್ಯದ ಸಂದರ್ಭದಲ್ಲಿಟ್ಟು ಓದುಗರಿಗೆ ಸ್ಪಷ್ಟಪಡಿಸಿಬಿಡುತ್ತಾರೆ. 'ಮನುಷ್ಯ ಬಹಳವಾಗಿ ಬಯಸುವ ಸ್ಪಷ್ಟೀಕರಣ ಮತ್ತು ಜಗತ್ತಿನ ಅಬೌದ್ಧಿಕತೆ- ಇವೆರಡರ ನಡುವಿನ ಸಂಘರ್ಷವೇ ಅಸಂಗತ್ವಕ್ಕೆ ಕಾರಣ' ಎಂಬ ಕ್ಯಾಮೂನ ಮಾತಿನ ಹಿನ್ನೆಲೆಯಲ್ಲಿ ಅವನ ಕೃತಿಗಳ ಪರಿಚಯವನ್ನೂ ಮಾಡಿ, 'ಅಸಂಗತ್ವ'(Absurd)ದ ವರೆಗಿನ ಬೆಳವಣಿಗೆಯನ್ನೂ ತಿಳಿಸುತ್ತಾರೆ. ಆ ಬಳಿಕ ಕನ್ನಡ ಸಾಹಿತ್ಯ ಅಸ್ತಿತ್ವವಾದಕ್ಕೆ ಯಾವ ರೀತಿಯಲ್ಲಿ ಸ್ಪಂದಿಸಿತು ಎಂಬುದನ್ನು ತಿರುಮಲೇಶ್ ಹೇಳುತ್ತಾರೆ.

ವ್ಯಕ್ತಿ ವಿಶಿಷ್ಟತೆ (individualism) ಭಾರತೀಯ ತತ್ವಜ್ಞಾನದ ಒಂದು ಅಂಗವಾಗಿರುವುದರಿಂದ ಅಸ್ತಿತ್ವವಾದ ನಮಗೆ ತೀರಾ ಅಪರಿಚಿತವಲ್ಲ. ಆದರೆ ಇದು ಆಧುನಿಕ ಪರಿಕಲ್ಪನೆಯ ಅಸ್ತಿತ್ವವಾದ ಎನ್ನುವಂತಿಲ್ಲ. ಕನ್ನಡ ಸಾಹಿತ್ಯದಲ್ಲಿ ಈ ವಿಚಾರ ಆರಂಭವಾದ್ದು ನವ್ಯ ಸಾಹಿತ್ಯದೊಂದಿಗೆ. ಪಾಶ್ಚಾತ್ಯ ಸಾಹಿತ್ಯದ ಪ್ರಭಾವವೂ ನವ್ಯ ಸಾಹಿತ್ಯದ ಮೇಲೆ ಧಾರಾಳವಾಗಿದೆ. ಅಸ್ತಿತ್ವವಾದದ ಒಂದು ವಿಚಾರಧಾರೆ ನವ್ಯ ಸಾಹಿತ್ಯದಲ್ಲಿ ಹರಿಯುವುದನ್ನು ಅಡಿಗ, ಅನಂತಮೂರ್ತಿ, ರಾಮಾನುಜನ್, ಗಿರಿ, ಜಿ. ಎಸ್. ಸದಾಶಿವ ಮೊದಲಾದವರನ್ನು ಓದಿದಾಗ ಸ್ಪಷ್ಟವಾಗಿಯೇ ಇದೆ.

ಯು. ಆರ್. ಅನಂತಮೂರ್ತಿಯವರ "ಸಂಸ್ಕಾರ"ದ ನಾಯಕ ಚಂದ್ರಿಯನ್ನು ಕೂಡಿದ ಬಳಿಕ ದೂರ್ವಾಸಪುರದಿಂದ ಹೊರಟು ಹೋಗುತ್ತ ಅವರ ಮನಸ್ಸಿನಲ್ಲಿ ಮೂಡಿದ ಅಸ್ತಿತ್ವವಾದಿಯೆನ್ನಬಹುದಾದ ವಿಚಾರಗಳಿವು:

"ನನ್ನ ಬಾಳು ಅತ್ತಲಿಗೋ ಇತ್ತಲಿಗೋ ಎಂದು ನಿರ್ಧರಿತವಾಗಬೇಕಾಗಿದ್ದ ಗಳಿಗೆಯಲ್ಲಿ ಚಂದ್ರಿಯ ಜೊತೆ ಸಂಭೋಗಿಸುವ ನಿಶ್ಚಯ ಆಗಿಬಿಟ್ಟಿತು. ಸ್ವಾಧೀನ ತಪ್ಪಿದರೂ ನಿಶ್ಚಯ ಮಾಡುವ ಜವಾಬ್ದಾರಿ ನನ್ನ ಮೇಲೇ ಇತ್ತು. ಮನುಷ್ಯನ ನಿಶ್ಚಯಕ್ಕೆ ಬೆಲೆಯಿರುವುದು ಹೀಗೆ ಸ್ವಾಧೀನ ತಪ್ಪುವುದು ಸಾಧ್ಯವಿರುವುದರಿಂದಲೇ ಹೊರತು ನಿಶ್ಚಯ ನೀರು ಕುಡಿದಷ್ಟು ಸರಾಗವಾದ್ದರಿಂದಲ್ಲ. ನಮ್ಮ ನಿಶ್ಚಯದ ಮೂಲಕ ನಮ್ಮನ್ನು ನಾವು ರೂಪಿಸಿಕೊಳ್ಳುತ್ತೇವೆ. ಹೇಗಾಗಬೇಕೆಂದು ನಾರಣಪ್ಪ ನಿಶ್ಚಯಿಸಿ ಬದುಕಿದನೋ ಅಂತಹ ವ್ಯಕ್ತಿ ಅವನಾದ. ನಾನೂ ಇನ್ನೊಂದಾಗಬೇಕೆಂದು ನಿಶ್ಚಯಿಸಿ ಬದುಕಿದೆ. ಥಟ್ಟನೊಂದು ತಿರುವಿನಲ್ಲಿ ತಿರುಗಿಬಿಟ್ಟೆ. ತಿರುಗಿಬಿಟ್ಟಿದ್ದರ ಜವಾಬ್ದಾರಿಯೂ ನನ್ನದು ಎಂಬುದು ನನಗೆ ಸ್ಪಷ್ಟವಾಗುವ ತನಕ ಸ್ವಾತಂತ್ರ್ಯವಿಲ್ಲ".

ಲಂಕೇಶರ 'ಬಿರುಕು' ಕಾದಂಬರಿಯ ಕಥಾನಾಯಕ ಸುಳ್ಳು ಪ್ರಪಂಚದಲ್ಲಿ ಸುಳ್ಳನಾಗಿ ಬದುಕಬೇಕಾಗುತ್ತದೆ. ನಿಜವಾದ ಅಸ್ತಿತ್ವವೇ ಇಲ್ಲದಂತಿರುವ ಬಸವರಾಜ್ ತನ್ನನ್ನು ತಾನು ಮರಳಿ ಪಡೆಯುವ ಸೂಚನೆ ಕಾದಂಬರಿಯ ಕೊನೆಯಲ್ಲಿ ಬರುತ್ತದೆ. ಗಿರಿಯವರ 'ಗತಿಸ್ಥಿತಿ' ಕಾದಂಬರಿ, ಕಾರ್ನಾಡರ 'ಯಯಾತಿ' ನಾಟಕ, ನ. ರತ್ನ, ಚಂದ್ರಶೇಖರ ಪಾಟೀಲ, ಚಂದ್ರಕಾಂತ ಕುಸನೂರ ಮೊದಲಾದವರ ನಾಟಕಗಳ ಸೂಕ್ಷ್ಮ ವಿಶ್ಲೇಷಣೆಗಳನ್ನು ನೀಡಿ, ಕನ್ನಡ ಸಾಹಿತ್ಯ ಪಡಿಮೂಡಿಸಿರುವ ಅಸ್ತಿತ್ವವಾದಿ ವಿಚಾರಗಳನ್ನು ತಿರುಮಲೇಶ್ ಸ್ಪಷ್ಟಪಡಿಸುತ್ತಾರೆ.

ಈ ಪುಸ್ತಕದ ಕೊನೆಯ ಭಾಗದಲ್ಲಿ ಅಸ್ತಿತ್ವವಾದದ ಇತ್ತೀಚೆಗಿನ ಬೆಳವಣಿಗೆಯ ಅನೇಕ ಅಂಶಗಳಿವೆ. ಇದರಲ್ಲಿ ಮುಖ್ಯವಾಗಿ, ಮಾನವಶಾಸ್ತ್ರದತ್ತ ವಾಲಿದ ಅಸ್ತಿತ್ವವಾದದ ಚಿಂತನೆ, ಅದರ ಮೇಲಾದ ಮಾರ್ಕ್ಸಿಸಂ ಪ್ರಭಾವಗಳನ್ನು ವಿವರಿಸುತ್ತಾರೆ. ಭಾಷೆಯ ಪರಿಮಿತಿಗೆ ಬದ್ಧವಾದ ಸಾಹಿತ್ಯ ಮತ್ತು ತತ್ವಜ್ಞಾನದ ಅಂಶಗಳನ್ನು ಮನದಟ್ಟು ಮಾಡಿಸಲು ಪ್ರಯತ್ನಿಸುವ ಈ ಪುಸ್ತಕ, ಕೆಲವಾರು ಸಾಹಿತ್ಯಕೃತಿಗಳ ಬಗೆಗೆ ತಿರುಮಲೇಶರ ಒಳನೋಟವನ್ನೂ, ಅಸ್ತಿತ್ವವಾದಿ ಚಿಂತನೆ ಬಗ್ಗೆ ಸಾಕಷ್ಟು ಮಾಹಿತಿಯನ್ನೂ ನೀಡಿ, ಪ್ರಬುದ್ಧ ಚಿಂತನೆಯೊಂದರ ಅನುಭವ ನೀಡುತ್ತದೆ.

ಈ ಪುಸ್ತಕದ ಪ್ರಕಾಶಕರು:

ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ,
ನೃಪತುಂಗ ರಸ್ತೆ, ಬೆಂಗಳೂರು – 560 002

ಪುಟಗಳು: **x + 60** ಬೆಲೆ: **ರೂ. 10/–**

ಕಮ್ಯುನಿಸಂ ನಂತರದ ಪ್ರಜಾಪ್ರಭುತ್ವ:

ಪ್ರಾಗ್‌ನಲ್ಲಿ ಕೆಲವು ಸಂವಾದಗಳು

ಮೂಲ : ದಿಲೀಪ್ ಪಡಗಾಂವಕರ್

ಕನ್ನಡಕ್ಕೆ : ಡಿ. ಎಸ್. ನಾಗಭೂಷಣ

ಪ್ರಾಗ್ ನಗರದ ಅತ್ಯಂತ ಹೊಸದಾದ ಮತ್ತು ಪ್ರತಿಷ್ಠಿತ ಹೋಟೆಲ್ 'ಏಟ್ರಿಯಂ' (ಅರ್ಥ: ಹಜಾರ), ಕಮ್ಯೂನಿಸ್ಟ್ ಆಳ್ವಿಕೆಯ ನಂತರದ ಜೆಕೋಸ್ಲಾವಕಿಯಾದ ಪ್ರತೀಕವೆನ್ನಿಸಿಕೊಂಡಿದೆ. ಅಂದರೆ ಇದು ಯಾವಾಗಲೂ, ಇಲ್ಲಿ ಪ್ರವಾಸಿ-ಮಾರ್ಗದರ್ಶಿಗಳು ಹೇಳುವ ಅರ್ಥದಲ್ಲಲ್ಲ. ವ್ಲತಾವಾ ನದಿಯ ದಂಡೆಯ ಮೇಲೆ ಉಕ್ಕು ಮತ್ತು ಗಾಜುಗಳಿಂದಲೇ ನಿರ್ಮಿಸಲ್ಪಟ್ಟ ಈ ಹೋಟೆಲ್, ನಲವತ್ತು ವರ್ಷಗಳ ವಾಸ್ತವ ಸಮಾಜವಾದಕ್ಕೆ ಸಾಕ್ಷಿಯಂತಿರುವ ಗಾತಿಕ್ ಹಾಗೂ ರೂಕ್ಷ ಕಟ್ಟಡಗಳು ಮತ್ತು ಪ್ರೇತ ಸ್ವರೂಪಿಯಾದ ಕಾಂಕ್ರೀಟ್ ರಚನೆಗಳಿಂದಲೇ ತುಂಬಿ ಹೋಗಿರುವ ಈ ನಗರದ ಮಧ್ಯೆ ತನ್ನ ಭವ್ಯತೆಯೊಡನೆ ಎದ್ದು ಕಾಣುತ್ತದೆ.

ಮೊಗಸಾಲೆ, ಅಂಗಡಿ ಮುಂಗಟ್ಟುಗಳು, ಉಪಹಾರ ಮಂದಿರಗಳು ಹಾಗೂ ಗಾಜಿನ ಬುಟ್ಟಿಯಂತಿರುವ ಲಿಫ್ಟ್-ಇವೆಲ್ಲವೂ ಫ್ಲೋರಿಡಾ ಶೈಲಿಯ ವೈಭವ ಮುದ್ರೆಗಳೊಡನೆ ಕಣ್ಣು ಕುಕ್ಕುತ್ತವೆ. ಆದರೆ ಕೊಠಡಿಗಳಲ್ಲಿ ನಲ್ಲಿಗಳು, ಫ್ಲಷ್‌ಗಳು ಹಾಗೂ ಟೆಲಿಫೋನ್‌ಗಳು ಆಗಾಗ ಮಾತ್ರ ಕೆಲಸ ಮಾಡುತ್ತವೆ. ಟೆಲಿವಿಷನ್ ಸೆಟ್, ಹಾಸಿಗೆ ಬದಿಯ ಅಲಾರಂ ಗಡಿಯಾರದಂತೆಯೇ ಇದ್ದಕ್ಕಿದ್ದಂತೆಯೇ ಕ್ರಿಯಾಶೀಲವಾಗಿ ಮತ್ತೆ ಸ್ಥಗಿತಗೊಳ್ಳುತ್ತದೆ. ಕೊಠಡಿ ಪರಿಚಾರಿಕೆ ಸಿಟ್ಟು ಬರುವಷ್ಟು ನಿಧಾನಗತಿಯಲ್ಲಿಲ್ಲದಿದ್ದಾಗ, ನೀವು ಬಯಸದೇ ಇದ್ದ ಭಾಗ್ಯವನ್ನು ತರಬಲ್ಲುದು,

ಚಹಾ ಹಾಗೂ ಕರಿದ ಬ್ರೆಡ್‌ಗೆ ಆದೇಶವಿತ್ತ ನಿಮೀಬಿಯಾದ ಪತ್ರಕರ್ತನ ಮುಂದೆ ಕಟ್ಲೆಟ್, ಹ್ಯಾಂ, ಬೇಯಿಸಿದ ಮೊಟ್ಟೆ ಹಾಗೂ ಕಾಫಿಯಿಂದ ಸಜ್ಜಿತವಾದ ಟ್ರೇ ಹಾಜರಾಗುತ್ತದೆ. ಈ ಬಗ್ಗೆ ನೀವು ಅಸಹನೆಯಿಂದ ದೂರುವಂತಿಲ್ಲ ; ಏಕೆಂದರೆ

ಇಂತಹ ಆಕಸ್ಮಿಕಗಳೆಲ್ಲವನ್ನೂ ಮಾರುಕಟ್ಟೆ ಆರ್ಥಿಕತೆ ಕಡೆಗಿನ ಸ್ಥಿತ್ಯಂತರದ ದುರ್ಭಾಗ್ಯ ಪೂರ್ಣ, ಆದರೆ ಸಾಮಾನ್ಯವಾದ ಆಪತ್ತುಗಳೆಂಬಂತೆ ಇಲ್ಲಿ ಪರಿಗಣಿಸಲಾಗುತ್ತದೆ,

ಸ್ಥಿತ್ಯಂತರದ ಆಪತ್ತುಗಳು: ಇದೇ ಈ 'ಹಜಾರ'ದಲ್ಲಿ ಸೆಪ್ಟೆಂಬರ್ ಮೊದಲ ವಾರದಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನದ ಚರ್ಚಾವಸ್ತು ಕೂಡಾ. ಯುನೆಸ್ಕೋ ಹಾಗೂ ಜೆಕ್ ಮತ್ತು ಸ್ಲಾವಕ್ ಗಣರಾಜ್ಯ ಒಟ್ಟಿಗೆ ಸೇರಿ ಏರ್ಪಡಿಸಿದ್ದ ಈ ಸಮ್ಮೇಳನ ಜಗತ್ತಿನ ಬಹುತೇಕ ಎಲ್ಲ ಭಾಗಗಳ ಅನೇಕ ಲೇಖಕರು, ವಿದ್ವಾಂಸರು, ಸಾರ್ವಜನಿಕ ಜೀವನದ ಗಣ್ಯರು ಹಾಗೂ ಪತ್ರಕರ್ತರನ್ನು ಒಟ್ಟುಗೂಡಿಸಿತ್ತು. (ಎಲ್ಲ ಪ್ರದೇಶಗಳಿಗೂ ಸಮಾನ ಪ್ರಾತಿನಿಧ್ಯವೇನೂ ಇರಲಿಲ್ಲ, ಉದಾಹರಣೆಗೆ ಏಷ್ಯಾದಿಂದ ನಾವು ಆರೇ ಜನ ಇದ್ದುದು, ಚೀನಾದಿಂದ ಪ್ರತಿನಿಧಿಯೇ ಇರಲಿಲ್ಲ–ಸಹಜವಾಗಿ, ಈ ದೇಶಕ್ಕೆ ಹೊಸ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ಥಾನವಿಲ್ಲ).

ಸಮ್ಮೇಳನದ ವಿಷಯ–ಸಂಸ್ಕೃತಿ ಮತ್ತು ಪ್ರಜಾಪ್ರಭುತ್ವ–ವಾಲ್ಟ್ ವಿಟ್‌ಮನ್ ಹೇಳಿದ ಹಾಗೆ ಎಲ್ಲ ವೈರುಧ್ಯಗಳನ್ನೂ ಆವರಿಸಿಕೊಳ್ಳುವಷ್ಟು ವಿಶಾಲ ವ್ಯಾಪ್ತಿಯದು. ಈ ಸಮ್ಮೇಳನದ ಮಿನುಗು ತಾರೆ, ಇದರ ಸಂಚಾಲಕ ಹಾಗೂ ಕಮ್ಯೂನಿಸ್ಟ್ ಆಳ್ವಿಕೆಯನ್ನು ಸತತವಾಗಿ ವಿರೋಧಿಸುತ್ತಾ ಬಂದಿದ್ದ ಗಣ್ಯ ನಾಟಕಕಾರ ವಕ್ಲಾವ್ ಹ್ಯಾವೆಲ್ಲರೇ. ಇವರೀಗ ಈ ಗಣರಾಜ್ಯದ ಅಧ್ಯಕ್ಷರು ಕೂಡಾ. ಇವರೇ ತಮ್ಮ ಉದ್ಘಾಟನಾ ಭಾಷಣದಲ್ಲಿ ಮೂರು ದಿನಗಳ ಕಾಲ ನಡೆದ ಚರ್ಚೆಗೆ ಆರಂಭಿಕ ಗತಿಯನ್ನು ಒದಗಿಸಿದ್ದು.

ಈಗ್ಗೆ ಅನೇಕ ವರ್ಷಗಳ ಕಾಲ ಪ್ರಥಮ ಜಗತ್ತು ಕಮ್ಯೂನಿಸಮ್ಮನ್ನು ಟೀಕಿಸುತ್ತಿತ್ತು; ಅದರ ವಿಸ್ತರಣೆಗೆ ಪ್ರತಿರೋಧ ತೋರಿಸುತ್ತಿತ್ತು ; ಅಲ್ಲಿ ಮಾನವ ಹಕ್ಕುಗಳ ಹಾಗೂ ಪ್ರಜಾಪ್ರಭುತ್ವದ ಜಾರಿಗಾಗಿ ನಡೆಯುತ್ತಿದ್ದ ಎಲ್ಲ ಸಂಘರ್ಷಗಳನ್ನು ಬೆಂಬಲಿಸುತ್ತಿತ್ತು ಎನ್ನುತ್ತಾರವರು. ಆದರೆ ಅದೇ ಸಮಯದಲ್ಲಿ ಇದು ಅದರ ಅಸ್ತಿತ್ವವನ್ನು ಒಪ್ಪಿಕೊಳ್ಳುತ್ತಾ ಹೇಗೋ ಹೊಂದಾಣಿಕೆ ಮಾಡಿಕೊಳ್ಳುತ್ತಾ ಬಾಳುವುದನ್ನೂ ಕ್ರಮೇಣ ರೂಢಿ ಮಾಡಿಕೊಳ್ಳುತ್ತಿತ್ತು. ಆದರೀಗ ಇದು ಕೊಂಚ ಆಶ್ಚರ್ಯಕ್ಕೀಡಾಗಿದೆ, ಕೊಂಚ ಗೊಂದಲಗೊಂಡಿದೆ ಹಾಗೂ ಬಹುಶಃ ಕೊಂಚ ಬೆಚ್ಚಿದೆ ಕೂಡಾ. ಏಕೆಂದರೆ ಈಗ ಆಗುತ್ತಿರುವ ಮಹತ್ತರ ಬದಲಾವಣೆಗಳು ಇದನ್ನು, ತನ್ನ ಇರುವಿಕೆಯ ಹಾಗೂ ನಿಲುವುಗಳ ಸಿದ್ಧಮಾದರಿಗಳನ್ನು ಬೇಗನೆ ಕೈಬಿಡುವಂತೆ ಒತ್ತಾಯಿಸ ತೊಡಗಿವೆ. ಅಲ್ಲದೆ ಈ ಪ್ರಥಮ ಜಗತ್ತು, ತನ್ನನ್ನು ತಾನು ಗುರುತಿಸಿಕೊಳ್ಳಲು ನೆರವಾಗಿದ್ದ ಆ 'ದುಷ್ಟ ಸಾಮ್ರಾಜ್ಯ' ಭೂಮಿಯಿಂದಲೇ ಮಾಯವಾಗುತ್ತಿರುವ

ವಾಸ್ತವವನ್ನು ಎದುರಿಸುವ ಬಗೆ ಹೇಗೆ ? ಎಂಬ ನಿರಪೇಕ್ಷವಾದ ಮತ್ತು ತುಂಬಾ ಮೂಲಭೂತವಾದ ಪ್ರಶ್ನೆಯನ್ನು ಕೂಡಾ ಎದುರಿಸಬೇಕಿದೆ.

ಹ್ಯಾವೆಲ್ ಕಮ್ಯೂನಿಸ್ಟ್ ಪಾಳೆಯದ ಅವನತಿ ಜಗತ್ತಿನಾದ್ಯಂತ ಒಂದು ಹೊಸ ಆಸೆಯನ್ನು ಬಿತ್ತಿದೆ ಎಂದು ವಾದಿಸುತ್ತಾರೆ– ಜಗತ್ತನ್ನೇ ದುರಂತಮಯವಾಗಿ ಆವರಿಸುತ್ತಿದ್ದ ಎರಡು ಧ್ರುವಗಳ ನಿರಂತರ ವೈಷಮ್ಯ ಮತ್ತು ಹುಚ್ಚು ಶಸ್ತ್ರಾಸ್ತ್ರ ಸ್ಪರ್ಧೆಯ ಮುಕ್ತಾಯದ ಆಶೆ; ಹಾಗೇ ವಿಚಾರ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಬಹುತ್ವ, ನ್ಯಾಯ ಹಾಗೂ ಮಾನವತೆಗಳು ಬಾಳಬಲ್ಲ ಅಥವಾ ಕನಿಷ್ಠಪಕ್ಷ ಬಾಳಲು ಅವಕಾಶವಿರುವ ಸಮಷ್ಟಿಯೊಂದರ ಗಣನೀಯ ವಿಸ್ತರಣೆಯ ಮತ್ತು ಅರ್ಥ ಪೂರ್ಣತೆಯ ಆಶೆ ಕೂಡಾ.

ಆದರೆ, ಹ್ಯಾವೆಲ್ ಮುಂದುವರಿದು ಹೇಳುತ್ತಾರೆ: ಕಮ್ಯೂನಿಸಂನ ಅವನತಿ ಹಲವಾರು ಕೇಡುಗಳನ್ನು ತರಬಲ್ಲದು–ರಾಷ್ಟ್ರೀಯತೆಯನ್ನು ಆಧರಿಸಿದ ಜನಾಂಗೀಯ, ರಾಜಕೀಯ ಹಾಗೂ ಸಾಮಾಜಿಕ ಘರ್ಷಣೆಗಳು, ಆರ್ಥಿಕ ಬಿಕ್ಕಟ್ಟುಗಳು, ಸಂಕುಚಿತವಾದಗಳ ಆಸ್ಫೋಟಗಳು, ಅಸಹನೆ ಹಾಗೂ ನೂರಾರು ಹಿತಾಸಕ್ತಿಗಳ ಕಿತ್ತಾಟ. ಈ ಕೇಡುಗಳ ನಿರ್ದಿಷ್ಟ ರೂಪ ಲಕ್ಷಣಗಳು ಹಾಗೂ ವ್ಯಾಪ್ತಿಯ ಬಗ್ಗೆ ಈಗ ಯಾರೂ ಏನೂ ಹೇಳಲಾರರು. ಇದೇ ಈ ಕೇಡುಗಳನ್ನು ಇನ್ನಷ್ಟು ಅಪಾಯ ಕಾರಿಯನ್ನಾಗಿಸಿರುವುದು ಕೂಡಾ.

ಈ ಅಪಾಯಗಳನ್ನು ಎದುರಿಸುವ ಬಗೆ ಹೇಗೆ ? ಹ್ಯಾವೆಲ್ ಉತ್ತರಿಸುತ್ತಾರೆ: ಹೊಣೆಯರಿತ ಪ್ರಜೆತನ ಹಾಗೂ ರಾಜಕೀಯ ಸಂವಾದಗಳ ಸಂಸ್ಕೃತಿ, ನಿಜವಾದ ಪ್ರಜಾಪ್ರಭುತ್ವವಾದಿ ವರ್ತನೆಯ ಮಾದರಿಗಳು ಮತ್ತು ಪ್ರಜಾಪ್ರಭುತ್ವವಾದಿ ಸಂಸ್ಥೆಗಳು ಹಾಗೂ ಕಾನೂನುಗಳ ಪೋಷಣೆ–ಇವೇ ಕಮ್ಯೂನಿಸಂನ ಪಾಳಿನ ಮಧ್ಯೆ ತಲೆ ಎತ್ತುತ್ತಿರುವ ತರ್ಕಹೀನತೆ, ಅಸಹನೆ, ರಾಜಕೀಯ ದುಸ್ಸಾಹಸ, ತುಂಡು ದಾರಿಯ ಪ್ರಯೋಗ, ಅರಾಜಕತೆ ಹಾಗೂ ಪ್ರತಿಹರಗಳಂತಹ ಬಹು ಅಪಾಯದ ಪ್ರವೃತ್ತಿಗಳನ್ನು ಎದುರಿಸಲು ಅತ್ಯುತ್ತಮ ಸಾಧನಗಳು.

"ಈ ವೇದಿಕೆಯಲ್ಲಿನ ನಿಮ್ಮ ಉಪಸ್ಥಿತಿ ನಮ್ಮನ್ನು ಭಾವನಾಮಯಿಗಳನ್ನಾಗಿ ಮಾಡುವ ಪ್ರತಿಧ್ವನಿಯೊಂದನ್ನು ಮೊಳಗಿಸುತ್ತಿದೆ" ಎಂದೆನ್ನುತ್ತಾರೆ ಯುನೆಸ್ಕೋದ ಮುಖ್ಯಸ್ಥ ಫೆಡರಿಕೋ ಮೇಯರ್, ವಕ್ಲಾವ್ ಹ್ಯಾವೆಲ್ಲರನ್ನು ಕುರಿತು. ಈ ಸಮ್ಮೇಳನದ ಕಾರ್ಯಕಲಾಪಗಳುದ್ದಕ್ಕೂ ಈ ಪ್ರತಿಧ್ವನಿ ಒಮ್ಮೆ ಜೋರಾಗಿ, ಸ್ಪಷ್ಟವಾಗಿ ಮೊಳಗಿದರೆ, ಇನ್ನು ಕೆಲವೊಮ್ಮೆ ಬಿಸುಸುಯ್ಲಿನಂತೆ ಕಂಪಿಸುತ್ತದೆ: ಯಾರಾದರೂ

ಇತ್ತೀಚಿನ ಕ್ರೂರ ದಬ್ಬಾಳಿಕೆ ಬಗ್ಗೆ ಮಾತಾಡಿದಾಗ ಅದು ಮೊರೆದರೆ, ಇನ್ಯಾರಾದರೂ ಮುಂದಿನ ಅನಿಶ್ಚಿತತೆಗಳ ಬಗ್ಗೆ ಮಾತಾಡಿದಾಗ ಕುಗ್ಗಿ ಕುಸಿಯುತ್ತದೆ.

ನಾನು ಈ ಹಿಂದಿನ ಪೂರ್ವ ಯೂರೋಪಿನ ಪಾಳೆಯದಲ್ಲಿ ಹಾಗೂ ಆಫ್ರಿಕಾ ಮತ್ತು ದಕ್ಷಿಣ ಅಮೆರಿಕಾ ದೇಶಗಳಲ್ಲಿ ಪ್ರಜಾಪ್ರಭುತ್ವದ ಆಗಮನದಿಂದ ಭಾವಾವಿಷ್ಟ ರಾಗಬಯಸದ ಕೆಲವರೊಡನೆ ಮಾತುಕತೆಯಾಡಲು ಬಯಸಿದೆ. ನನಗೆ ಮೊದಲು ಎದುರಾದ ಇಬ್ಬರಲ್ಲಿ ಒಬ್ಬರು ಅಮೆರಿಕನ್ನರಾದರೆ ಇನ್ನೊಬ್ಬರು ಬ್ರಿಟಿಷರು.

ಪ್ರೊ॥ ಜೇಮ್ಸ್ ಮೆಕ್‌ಗ್ರೆಗಾರ್ ಬರ್ನ್ಸ್ ಅಮೆರಿಕಾದ ವಿಖ್ಯಾತ ರಾಜಕೀಯ ವಿಜ್ಞಾನಿಗಳಲ್ಲೊಬ್ಬರು. ಇವರದು ಸ್ವಲ್ಪ ಠೇಂಕಾರ ಬೆರೆತಂತೆ ತೋರುವ ಬಲ್ಲಿದನ ಠೀವಿ. ಆದರೆ ಈತ ಮಾತನಾಡತೊಡಗಿದನೆಂದರೆ ಸಂಪೂರ್ಣ ಅಮೆರಿಕನ್ನನೇ: ಒರಟೆನ್ನುವಷ್ಟು ನೇರ ಹಾಗೂ ಮೊದಲ ಭೇಟಿಯಲ್ಲೇ ಅಮರ ಸ್ನೇಹದ ಆತ್ಮೀಯತೆ. ಈಗ ಏಕಚಕ್ರಾಧಿಪತ್ಯಗಳಿಂದ ಬಿಡುಗಡೆಗೊಂಡ ದೇಶಗಳು ಸ್ಥಿರ ಹಾಗೂ ಪ್ರಜಾ ಪ್ರಭುತ್ವವಾದಿ ವ್ಯವಸ್ಥೆಗಳನ್ನು ಸ್ಥಾಪಿಸಿಕೊಳ್ಳಬಲ್ಲ ಸ್ಥಿತಿ ತಲುಪುವ ಮುನ್ನ ಅರಾಜಕತೆ ಹಾಗೂ ದೊಂಬಿಗಳಿಗೆ ಒಳಗಾಗುವ ಸಾಧ್ಯತೆ ಇದೆಯೆ ? ಎಂದು ನಾನು ಅವರನ್ನು ಪ್ರಶ್ನಿಸಿದೆ. ಪ್ರೊ॥ ಬರ್ನ್ಸ್, ತಾವು ಕೇವಲ ಈ ದೇಶಗಳಲ್ಲಲ್ಲ, ತಮ್ಮದೇ ದೇಶವಾದ ಅಮೆರಿಕಾದಲ್ಲಿನ ಪ್ರಜಾಪ್ರಭುತ್ವದ ಭವಿಷ್ಯದ ಬಗ್ಗೆಯೂ ಆತಂಕ ಗೊಂಡಿರುವುದಾಗಿ ಹೇಳಿದರು.

ಅವರ ಪ್ರಕಾರ "ನಾವು ಪ್ರಜಾಪ್ರಭುತ್ವವನ್ನು ಅದರ ಸಾಂಸ್ಥಿಕ ರೂಪಗಳಲ್ಲಿ ಒಂದು ವ್ಯವಸ್ಥೆಯಾಗಿ ಹಾಗೂ ಒಂದು ಚೈತನ್ಯ ಶಕ್ತಿಯಾಗಿ–ಈ ಎರಡೂ ನೋಟ ಗಳಲ್ಲಿ ಗ್ರಹಿಸಬೇಕು. ಒಂದು ಚೈತನ್ಯ ಶಕ್ತಿಯಾಗಿ ಪ್ರಜಾಪ್ರಭುತ್ವ ಅಮೆರಿಕಾದಲ್ಲಿ ಗಟ್ಟಿಯಾಗಿದೆ. ಹಲಕೆಲವು ಪರಿಮಿತಗಳ ನಡುವೆಯೂ ಸಹನೆ ಹಾಗೂ ಅನುಸರಣೆಯ ಚೈತನ್ಯ ಕ್ರಿಯಾಶೀಲವಾಗಿಯೇ ಇದೆ. ಆದರೆ ವ್ಯವಸ್ಥೆಯಲ್ಲಿ, ನಮ್ಮ ಸಾಂಸ್ಕೃತಿಕ ರಚನೆಗಳಲ್ಲಿ ಇನ್ನೂ ಹಲವಾರು ನ್ಯೂನತೆಗಳು ಉಳಿದುಕೊಂಡಿವೆ". ಪ್ರಜಾಪ್ರಭುತ್ವದ ಒಂದು ಮುಖ್ಯ ಸಮಸ್ಯೆಯೆಂದರೆ ಜನತೆ ಹಾಗೂ ನಾಯಕರ ನಡುವೆ ಒಂದು ಸಮ ತೋಲನವನ್ನು ಸಾಧಿಸುವುದು ಯಾವಾಗಲೂ ಸುಲಭದ ಕೆಲಸವಾಗದೇ ಇರುವುದು. ಜನತೆ ತಮ್ಮ ನಾಯಕರಿಗೆ ತುಂಬಾ ಅಧಿಕಾರ ಕೊಟ್ಟಾಗ ಮತ್ತು ಕೊಡದಿದ್ದಾಗ ಈ ಎರಡೂ ಸಂದರ್ಭಗಳಲ್ಲಿ ಸಮಸ್ಯೆಗಳು ಉದ್ಭವಿಸುತ್ತವೆಂದು ಅವರು ವಿವರಿಸುತ್ತಾರೆ. ತುಂಬಾ ಅಧಿಕಾರ ಕೊಟ್ಟರೆ ನಾಯಕಮಣಿಗಳಿಗೆ ಜನತೆಯನ್ನು ಮಾತಾಡಿಸುವ ಅಗತ್ಯವೇ ಕಾಣಿಸುವುದಿಲ್ಲ, ಕಡಿಮೆ ಅಧಿಕಾರ ಕೊಟ್ಟರೆ ಜವಾಬ್ದಾರಿಯನ್ನು ಹೊರು

ವುದಿಲ್ಲ: ಜವಾಬ್ದಾರಿ ಒಬ್ಬರಿಂದ ಇನ್ನೊಬ್ಬರ ಹೆಗಲಿಗೆ ಸವಾರಿ ಮಾಡುತ್ತಲೇ ಇರುತ್ತದೆ–ಪ್ರತಿನಿಧಿ ಸಭೆಯಿಂದ ಅಧ್ಯಕ್ಷರಿಗೆ, ನ್ಯಾಯಾಲಯಗಳಿಂದ ಪ್ರತಿನಿಧಿಸಭೆಗಳಿಗೆ, ಹೀಗೆ ಅದು ಸುತ್ತುತ್ತಲೇ ಇರುತ್ತದೆ.

ಪ್ರಜಾಪ್ರಭುತ್ವವೆಂದರೆ ಬಹು ಸಂಖ್ಯಾತರ ಅಧಿಕಾರ ಚಲಾವಣೆ ಹಾಗೂ ಅಲ್ಪ ಸಂಖ್ಯಾತರ ಹಕ್ಕುಗಳ ಸಂರಕ್ಷಣೆ ಎಂದರ್ಥ. ಹೀಗಾಗಿ ನಿಯಂತ್ರಕ ಹಾಗೂ ಸಮತೋಲಕಗಳ ಸರಿಯಾದ ವ್ಯವಸ್ಥೆಯಿಲ್ಲದೆ ಹಲವಾರು ಪ್ರಜಾಪ್ರಭುತ್ವಗಳು ಗೊಂದಲದಲ್ಲಿವೆ, ಬಿರುಕು ಬಿಟ್ಟಿವೆ ಇಲ್ಲವೇ ಒಡೆದು ಹೋಗಿವೆ ಎನ್ನುತ್ತಾರೆ ಪ್ರೊ॥ ಬರ್ನ್ಸ್. ಭಾರತವೂ ಸೇರಿದಂತೆ ಅನೇಕ ಪ್ರಜಾಪ್ರಭುತ್ವಗಳಲ್ಲಿ ಆಟದ ನಿಯಮಗಳನ್ನು ಕರಾರುವಾಕ್ಕಾಗೇನೂ ಪಾಲಿಸಲಾಗುವುದಿಲ್ಲ ಎಂದು ನಾನು ಹೇಳಿದಾಗ ಅವರು ಭಾರತದಲ್ಲಿನ ಸಮಸ್ಯೆಗಳ ಮೂಲ, ಅದರ ಸಾಂಸ್ಕೃತಿಕ ರೂಪಗಳ–ಅಂದರೆ ಅವುಗಳ ಕ್ರಿಯಾಶೀಲತೆಯ – ವೈಫಲ್ಯಗಳಲ್ಲಿದೆಯೋ ಅಥವಾ ದೇಶದಲ್ಲಿನ ಮೂಲಭೂತ ವಿಭಜನೆಗಳಲ್ಲಿಯೇ ಇದೆಯೋ, ತಮ್ಮಿಂದ ಹೇಳಲಾಗದು ಎಂದರು. ಪ್ರಜಾಪ್ರಭುತ್ವ ಅತಿ ಕೋಮಲವಾದದ್ದು. ಅದು ಅನುಷಂಗಿಕವಾಗಿ ಸುಭದ್ರ ಸರ್ಕಾರದ ರೂಪವಲ್ಲ. ಆಳದ ವಿಭಜನೆಗಳುಳ್ಳ ಜನತೆಯಿದ್ದೆಡೆ ಪ್ರಜಾಪ್ರಭುತ್ವ ಆರಂಭದ ಹಂತದಲ್ಲೇ ಅಪಾಯವನ್ನು ಎದುರಿಸಬೇಕಾಗುತ್ತದೆ ಎನ್ನುತ್ತಾರವರು. ಕಟುವಾದ ಧಾರ್ಮಿಕ ದುರಭಿಮಾನ–ಅಂದರೆ ನಮ್ಮದೇ ಆಚಾರ, ಅಭಿಪ್ರಾಯಗಳು ಮಾತ್ರ ಸರಿ ಎಂಬ ಗಾಢ ಸ್ವಯಂ ನಂಬಿಕೆಯಿಂದಾಗಿ ಇತರ ಯಾರ ಮಾತುಗಳನ್ನೂ ಕೇಳದ ಸ್ಥಿತಿ–ಪ್ರಜಾಪ್ರಭುತ್ವ ಬೆಳೆಯುವುದನ್ನು ತಡೆಯುತ್ತದೆನ್ನುವ ಪ್ರೊ॥ ಬರ್ನ್ಸ್, ಹಲ ದಶಕಗಳ ಕಾಲ ಅಸಹನೆ ಹಾಗೂ ಮತಭ್ರಾಂತಿಗಳಲ್ಲಿ ಮುಳುಗಿದ್ದ ಜನವರ್ಗಗಳೇ ಪ್ರಜಾಪ್ರಭುತ್ವವನ್ನು ರೂಢಿಸಿಕೊಂಡ ಉದಾಹರಣೆಗಳೂ ಇವೆ ಎಂದು ಸೂಚಿಸುತ್ತಾರೆ.

ಮುವ್ವತ್ತರ ದಶಕದಲ್ಲಿ ಅಮೇರಿಕಾದ ಕಣ್ಣುಗಳಿಗೆ ಜಪಾನ್ ಅನ್ಯರನ್ನು ತಾಳದ ದೇಶವಾಗಿ ಕಾಣುತ್ತಿತ್ತು. ಆದರೆ ಹೇಗೋ ಆ ದೇಶ ಕೆಲವಾರು ತೊಂದರೆಗಳ ನಡುವೆಯೂ ಬಹುಬೇಗ ಒಂದು ಪ್ರಜಾಪ್ರಭುತ್ವವಾದಿ ವ್ಯವಸ್ಥೆಯನ್ನು ರೂಪಿಸಿಕೊಂಡಿತು. ಪ್ರೊ॥ ಬರ್ನ್ಸ್ ಪ್ರಕಾರ ಅಧ್ಯಾಪಕರು, ಬುದ್ಧಿಜೀವಿಗಳು ಹಾಗೂ ಪತ್ರಕರ್ತರು, ಜನ ಪ್ರಜಾಪ್ರಭುತ್ವವಾದಿ ಗುಣಗಳನ್ನು ರೂಢಿಸಿಕೊಳ್ಳುವಲ್ಲಿ ನೆರವಾಗಬಲ್ಲರು. ಇವನ್ನು ಮನೆಗಳಲ್ಲಿ, ಶಾಲೆಗಳಲ್ಲಿ ಹಾಗೂ ಪೂಜಾಸ್ಥಾನಗಳಲ್ಲಿ ರೂಢಿಗೆ ತರಬೇಕು. ಆಗ ಸ್ವಾತಂತ್ರ್ಯವೆನ್ನುವುದು ಕುಟುಂಬದಿಂದ ಕುಲಕ್ಕೆ, ಕುಲದಿಂದ ಸಮಾಜಕ್ಕೆ ಹಾಗೂ ಸಮಾಜದಿಂದ ರಾಜ್ಯ ವ್ಯವಸ್ಥೆಗೆ ಹರಿಯುವುದು.

ಪ್ರಜಾಪ್ರಭುತ್ವ ಕುರಿತ ಪ್ರಸ್ತುತ ಭೋರ್ಗರೆತದಲ್ಲಿ ಕೊಚ್ಚಿಹೋಗಬಾರದೆನ್ನುವ ತೀವ್ರ ಎಚ್ಚರಿಕೆ ನೀಡಿದವರು ಬಹುಶಃ ಅರ್ನೆಸ್ಟ್ ಗೆಲ್‌ನರ್ ಅವರು. ಇವರು

ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಸಾಮಾಜಿಕ ಮಾನವಶಾಸ್ತ್ರದ ಪ್ರಾಧ್ಯಾಪಕರು. ಕುಳ್ಳನೆಯ, ಉದ್ವಿಗ್ನತೆಯೇ ಮೂರ್ತಿವೆತ್ತಂತಿರುವ ಪ್ರೊ॥ ಗೆಲ್‌ನರ್ ತುಂಬು ಧ್ವನಿಯಲ್ಲಿ, ತಕ್ಷಣವೇ ಗೌರವವನ್ನು ಸೆಳೆಯುವಂಥ ಭಾಷಾ ಘನತೆಯೊಡನೆ ಮಾತಾಡುವರು. ಈ ಸಮ್ಮೇಳನದಲ್ಲಿ ನಡೆದ ಒಂದು ಕಮ್ಮಟದಲ್ಲಿ, 'ಕಳೆದ ಬಾರಿ ಏನಾಯಿತೆಂಬುದನ್ನು ನಿಮಗೆ ನೆನಪಿಸಬಯಸುತ್ತೇನೆ' ಎಂದವರು ಎಲ್ಲರ ಗಮನ ಸೆಳೆದು 'ಅದು ಸರಿಯಾಗಿ ಮುಕ್ತಾಯಗೊಳ್ಳಲಿಲ್ಲ' ಎಂದು ವಿವರಿಸಿದರು: 1918ರ ವಿಜೇತರ ಸ್ವಯಂತೃಪ್ತಿ ತದನಂತರದಲ್ಲೇ ನಾಚಿಕೆಗೇಡಿನ ಅವನತಿಯನ್ನೂ ಕಾಣಬೇಕಾಯಿತು. ಆಗ ಕೂಡಾ ಒಂದು ಸಾಮ್ರಾಜ್ಯ ಹಠಾತ್ತನೆ ಕುಸಿದುಬಿದ್ದಿತ್ತು. ಹಲವಾರು ದೇಶಗಳಲ್ಲಿ ಪ್ರಜಾಪ್ರಭುತ್ವದ ಉದಯವಾಗಿತ್ತು. ಆದರೆ ಅದೆಲ್ಲವೂ ದುರಂತಮಯವಾಗಿ ಕೊನೆಗೊಂಡಿತು. ಇದಕ್ಕೆಲ್ಲಾ ಕಾರಣ 1918ರ ವಿಜೇತರು ಪ್ರಜಾಪ್ರಭುತ್ವ ಗೆದ್ದಿದೆ ಹಾಗೂ ಇಡೀ ವಿಶ್ವ ಇತಿಹಾಸದ ಶಕ್ತಿಗಳು ಹರಿಯುವ ದಿಕ್ಕಿನಲ್ಲಿ ಸಾಗತೊಡಗಿದೆ ಎಂದು ಕಣ್ಣು ಮುಚ್ಚಿ ನಂಬಿದ್ದು.

ಕಮ್ಯುನಿಸ್ಟ್ ಆಳ್ವಿಕೆ ಬಗ್ಗೆ ಅವರು ಮಾತನಾಡುತ್ತಾ, ಇದು ಸಾಮಾಜಿಕ ಬದುಕಿನ ರಾಜಕೀಯ, ತಾತ್ವಿಕ ಹಾಗೂ ಆರ್ಥಿಕ–ಈ ಮೂರೂ ಅಂಶಗಳನ್ನು ಒಂದು ಅಧಿಕಾರ ಶ್ರೇಣಿಯಲ್ಲಿ ಏಕೀಕೃತಗೊಳಿಸುವ ನೈತಿಕ ಸ್ಫೂರ್ತಿಯ ಉದ್ಧಾರಕವಾದವನ್ನು ಆಧರಿಸಿದ ಅತಿ ಕೇಂದ್ರೀಕೃತ ವ್ಯವಸ್ಥೆಯು, ಆರ್ಥಿಕ ಬೆಳವಣಿಗೆಯನ್ನೂ ಕೂಡಾ ಸಾಧಿಸಲಾರದೆಂಬ ಕಟುಸತ್ಯವನ್ನು ಸಾರಿ ತೋರಿಸಿದೆ ಎನ್ನುತ್ತಾರೆ. ಆರ್ಥಿಕವಾಗಿ ದುರಂತಗಳನ್ನು ತಂದೊಡ್ಡುವ ಯಾವ ವ್ಯವಸ್ಥೆಯೂ ಉಳಿಯಲಾರದು. ಅರಿವಿನ ಮೌಲ್ಯಗಳನ್ನು ರಕ್ತದಲ್ಲೇ ಪಡೆದಿರುವ, ನಾಗರಿಕ ಸಮಾಜವೊಂದನ್ನು ಕಟ್ಟಲು ಹಂಬಲಿಸುವ ಸೋವಿಯೆತ್ ಬುದ್ಧಿಜೀವಿ ವರ್ಗವನ್ನು ತಾವು ಬಹು ಇಷ್ಟಪಡುವುದಾಗಿ ಹೇಳುವ ಪ್ರೊ॥ ಗೆಲ್‌ನರ್, ರಾಜಕೀಯ ಉದಾರತೆಯ ಮಾರ್ಗದ ಜೊತೆಗೆ ಶ್ರೇಣೀಕೃತ, ನಿಯಂತ್ರಿತ ಮಿಲಿಟರಿ ಸಮಾಜವನ್ನು ವ್ಯಾಪಾರೀ, ಉತ್ಪಾದನಾಶೀಲ ಹಾಗೂ ತತ್ಫಲವಾಗಿ ಕೈಗಾರಿಕಾ ಸಮಾಜವನ್ನಾಗಿ ಪರಿವರ್ತಿಸಬಲ್ಲ ಪರಿಣಾಮಕಾರಿ ಮಾರ್ಗವಿಲ್ಲದಿರುವ ಬಗ್ಗೆ ತಾವು ಚಿಂತಾಕ್ರಾಂತರಾಗಿರುವುದಾಗಿ ತಿಳಿಸಿದರು. ಪಶ್ಚಿಮ ಯೂರೋಪ್‌ನಲ್ಲಿ ಈ ಪ್ರಕ್ರಿಯೆ ಶತಶತಮಾನಗಳ ಕಾಲ ನಡೆಯಿತು. ಬೂರ್ಜ್ವಾ ಮೌಲ್ಯ ವ್ಯವಸ್ಥೆ ಸೃಷ್ಟಿಯಾಗಲು ವರ್ಷಗಳೇ ಬೇಕಾಯಿತು. ಕಾಳಸಂತೆಕೋರರು ಮಾಜಿ ಪಾರುಪತ್ತೇದಾರರು ನವಬೂರ್ಜ್ವಾ ವರ್ಗವಾಗಿ ಪರಿವರ್ತಿತರಾಗುವರೆ ? ಇದೆಲ್ಲಾ ಆಗದ ಮಾತು.

ಆರ್ಥಿಕ ಸ್ಥಗಿತತೆಯ ಕಾಲದಲ್ಲಿ ತೃತೀಯ ಜಗತ್ತಿನ ದೇಶಗಳ ರಾಜ್ಯವ್ಯವಸ್ಥೆಗಳ ಬಳಿ ದಮನಕಾರೀ ವ್ಯವಸ್ಥೆ ಮೂಲಕ ಸ್ಥಿರತೆಯನ್ನು ಕಾಪಾಡಿಕೊಳ್ಳುವಷ್ಟರ ಮಟ್ಟಿಗೆ

ಹಣವಿತ್ತು. ಮೆಷೀನ್ ಗನ್‌ಗಳಿಗೆ ಬಹಳ ಹಣವೇನೂ ಬೇಕಾಗಿಲ್ಲ ಎನ್ನುತ್ತಾರೆ ಪ್ರೊ॥ ಗೆಲ್‌ನರ್. ಈ ಸಂಬಂಧವಾಗಿ ಅವರು ಮಾರ್ಕ್ಸ್‌ವಾದಿ ಹಾಗೂ ಮುಸ್ಲಿಂ ಸಮಾಜಗಳ ಪ್ರಸ್ತಾಪ ಮಾಡುತ್ತಾ "ಇವೆರಡೂ ಒಂದು ಇನ್ನೊಂದರ ಕನ್ನಡಿ ಬಿಂಬಗಳಿದ್ದಂತೆ" ಎಂದು ಸೂಚಿಸುತ್ತಾರೆ. ಮಾರ್ಕ್ಸ್‌ವಾದಿ ಸಮಾಜ ಸಂಪೂರ್ಣವಾಗಿ ತನ್ನ ನೆಚ್ಚಿಕೆಯನ್ನು ಕಳೆದುಕೊಂಡಿದೆ ನಿಜ. ಆದರೆ ನಾಗರಿಕ ಸಮಾಜದ ಬಗ್ಗೆ ಅದರ ಆಸಕ್ತಿ ಉಜ್ವಲವಾಗಿದೆ. ಮುಸ್ಲಿಂ ಸಮಾಜದ ನೆಚ್ಚಿಕೆ ಸುಭದ್ರವಾಗಿದೆ; ಹಾಗೆ ನೋಡಿದರೆ ಮತ್ತಷ್ಟು ಗಟ್ಟಿಯಾಗತೊಡಗಿದೆ. ಆದರೆ ನಾಗರಿಕ ಸಮಾಜದ ಬಗೆಗಿನ ಅದರ ಹಂಬಲ ಕ್ಷೀಣವಾದುದು. ಒಟ್ಟಾರೆ, ತಾವು ಹುಸಿ ಆಶಾವಾದಿಯಾಗಬಯಸುವುದಿಲ್ಲ ಎನ್ನುವ ಗೆಲ್‌ನರ್ ಪ್ರಕಾರ, ಸೋವಿಯೆತ್ ಒಕ್ಕೂಟದಲ್ಲಿನ ರಾಜಕೀಯ ಉದಾರವಾದ ಮತ್ತು ಆರ್ಥಿಕ ಸ್ಥಗಿತತೆ ಅದರ ಗಣರಾಜ್ಯಗಳೊಳಗೆ ಮತ್ತು ನಡುವೆ ಕುಲಸಂಬಂಧೀ ಘರ್ಷಣೆಗಳಿಗೆಡೆ ಮಾಡುವುದು ಖಚಿತ. ಒಂದು ವೇಳೆ ತೀರಾ ಆರ್ಥಿಕ ಹಿಂಜರಿತ ಉಂಟಾದರಂತೂ ಜನ, 'ಏನಾದರೂ ಮಾಡಿಕೊಳ್ಳಿ, ವ್ಯವಸ್ಥೆ ಕಾಪಾಡಿ' ಅಥವಾ 'ಏನಾದರೂ ಮಾಡಿಕೊಳ್ಳಿ, ಅಂಗಡಿಗಳಿಗೆ ಆಹಾರ ವಸ್ತುಗಳು ಬರಲಿ' ಎಂದು ಕೂಗಿ ಹೇಳುವ ಪರಿಸ್ಥಿತಿ ಉಂಟಾಗುವುದನ್ನು ತಾವು ತಳ್ಳಿಹಾಕುವುದಿಲ್ಲ ಎನ್ನುತ್ತಾರವರು.

ರೆನೆ ದೆಪೆಸ್ತ್ರ, ಪ್ರೊ॥ ಗೆಲ್‌ನರ್ ಅವರ ಈ ಕಟು ಮುನ್ನೋಟವನ್ನು ಒಪ್ಪುವುದಿಲ್ಲ. ಫ್ರಾನ್ಸ್‌ನಲ್ಲಿ ಅನೇಕ ಸಾಹಿತ್ಯಕ ಪ್ರಶಸ್ತಿಗಳನ್ನು ಗೆದ್ದಿರುವ ಹ್ಯಾಟಿಯಾದ ಈ ಕವಿ, ಸಂಕಷ್ಟಗಳ ಮಧ್ಯೆ ಅದ್ಭುತವೆನ್ನಿಸುವ ಬದುಕನ್ನು ಬಾಳಿದ್ದಾನೆ. 19ನೇ ವಯಸ್ಸಿನಲ್ಲೇ, ತನ್ನ ದೇಶದ ಸರ್ವಾಧಿಕಾರಿ ದುವಲಿಯಾನನ್ನು ವಿರೋಧಿಸಿದ್ದಕ್ಕಾಗಿ ದೇಶಭ್ರಷ್ಟನಾಗಬೇಕಾದ ಈತ ಫ್ರಾನ್ಸ್‌ಗೆ ಬಂದ. ವಿಶ್ವವಿದ್ಯಾಲಯದ ಅಧ್ಯಯನ ಮುಗಿದೊಡನೆ ಮತ್ತೆ ತನ್ನ ವಸಾಹತುಶಾಹಿ ವಿರೋಧಿ ಹಾಗೂ ಉಗ್ರ ಎಡಪಂಥೀಯ ಧೋರಣೆಗಳ ಕಾರಣ ಫ್ರಾನ್ಸ್‌ನಿಂದಲೂ ಹೊರಹಾಕಲ್ಪಟ್ಟು ಐವತ್ತರ ದಶಕದಲ್ಲಿ ಪ್ರಾಗ್ ಸೇರಿದ. ಆದರೆ ಅಲ್ಲಿಯೂ ಕಮ್ಯುನಿಸ್ಟ್ ಪಕ್ಷದ ನೀತಿ ಧೋರಣೆಯನ್ನು ಪ್ರಶ್ನಿಸಿ ಅಪ್ರಿಯನಾದ. ಕೊನೆಗೆ ಲ್ಯಾಟಿನ್ ಅಮೆರಿಕಾದ ಸ್ನೇಹಿತರ, ವಿಶೇಷವಾಗಿ ಬ್ರೆಜಿಲ್‌ನ ಲೇಖಕ ಜಾರ್ಜ್ ಅಮಾದೊ ನೆರವಿನಿಂದ, ದಕ್ಷಿಣ ಅಮೆರಿಕಾಕ್ಕೆ ಬರಲು ಸಾಧ್ಯವಾಯಿತು. ಎಲ್ಲಿಯೂ ಹೆಚ್ಚು ಕಾಲ ನಿಲ್ಲದ ಈತ ಚಿಲಿಯಿಂದ ಅರ್ಜೆಂಟೈನಾಕ್ಕೆ, ಅರ್ಜೆಂಟೈನಾದಿಂದ ಬ್ರೆಜಿಲ್‌ಗೆ, ಬ್ರೆಜಿಲ್‌ನಿಂದ ಕೊನೆಗೆ ಕ್ಯೂಬಾಗೆ ಬಂದು ನೆಲೆಸಿ ಕ್ಯಾಸ್ಟ್ರೋನ ಕ್ರಾಂತಿ ಪ್ರಯತ್ನಗಳಲ್ಲಿ ಭಾಗಿಯಾದ. ಆದರೆ ಅಲ್ಲಿ ಕೂಡಾ ಈತ ಭಿನ್ನಮತೀಯ ಕವಿ ಪದಿಲನ ಪರ ಬಹಿರಂಗವಾಗಿ ಮಾತನಾಡಿ ಕ್ಯಾಸ್ಟ್ರೋ ಆಳ್ವಿಕೆಯಲ್ಲೇ ಗೃಹಬಂಧನಕ್ಕೆ ಒಳಗಾದ. ಈಗ ಈತನನ್ನು ಗೃಹಬಂಧನದಿಂದ ಬಿಡಿಸಿಕೊಂಡು ಬಂದು

ತನ್ನ ಪ್ಯಾರಿಸ್ ಮುಖ್ಯ ಕಛೇರಿಯಲ್ಲಿ ಕೆಲಸವೊಂದನ್ನು ಒದಗಿಸಿರುವವರು ಯುನೆಸ್ಕೋದ ಮಹಾನಿರ್ದೇಶಕ ಅಮಾದೊ ಮಹ್ತರ್ ಅಂಬೋ ಅವರು.

"ವಸಾಹತುಗಳ ಮತ್ತು ದುಡಿಯುವ ವರ್ಗದ ಉದ್ಧಾರದ ದಾರಿ ಎಂದು ನಾನು ಕಮ್ಯೂನಿಸಂಗೆ ಒಲಿದೆ" ಎಂದೆನ್ನುತ್ತಾರೆ ರೆನೆ: "ನಾವೊಂದು ನವ ನವೀನ ಪ್ರಜಾಪ್ರಭುತ್ವವನ್ನು, ಹೊಸದೊಂದು ಸಮಾಜವನ್ನು ಕಟ್ಟ ಹೊರಟದ್ದೇವೆ ಎಂದು ಕೊಂಡಿದ್ದೆ. ಆದರೆ ನನ್ನ ಕಣ್ಮುಂದೆಯೇ ನಡೆಯುತ್ತಿದ್ದುದರ ಬಗ್ಗೆ ಬುದ್ಧಿಜೀವಿಯಾಗಿ ನಾನು ಸೂಕ್ಷ್ಮ ಪ್ರಶ್ನೆಗಳನ್ನು ಕೇಳಲೇಬೇಕಾಯಿತು, ಸಂದೇಹಗಳನ್ನು ಹೇಳ ಬೇಕಾಯಿತು. ಇದಕ್ಕಾಗಿ ನಾನು ಸಂಕಷ್ಟಗಳ ಸರಮಾಲೆಯನ್ನೇ ಎದುರಿಸಬೇಕಾ ಯಿತು. ಕಮ್ಯೂನಿಸ್ಟ್ ದೇಶಗಳ ಯಾತ್ರೆಯ ಸಮಯದಲ್ಲಿ ನಾನು ಕಂಡದ್ದು ಹೊಸ ಮನುಷ್ಯನನ್ನೇನಲ್ಲ. ಆತ ಇಡಿಯಾಗಿ ಪಕ್ಷದ ಇಚ್ಛೆಗೆ ದಾಸನಾಗಿರುತ್ತಿದ್ದ. ಆತ ಮಾತನಾಡುವ ಭಾಷೆ ಬರಡಾಗಿತ್ತು, ಮಠದ ಪಂಡಿತೋತ್ತಮರು ಹೊಸೆದು ಕೊಡು ತ್ತಿದ್ದ ಕ್ಲೀಷೆ ಮತ್ತು ಶಬ್ದಾವಳಿಗಳ ಗಿಳಿಪಾಠವನ್ನು ಆತ ಒಪ್ಪಿಸುತ್ತಿದ್ದ".

ಚರಿತ್ರೆಯಲ್ಲಿ ಮೊದಲ ಬಾರಿಗೆ ಚಿಂತನೆ ಮತ್ತು ಕ್ರಿಯೆಗಳನ್ನು ಬೆಸೆಯುವ ಮತ್ತು ಬುದ್ಧಿಜೀವಿ, ರೈತ ಹಾಗೂ ಕಾರ್ಮಿಕರ ಮಧ್ಯೆ ಸಜೀವ ಸಂಬಂಧ ಕಲ್ಪಿಸಿ ಅವರನ್ನು ಸಮಾಜದ ಚಲನೆಯ ಕೇಂದ್ರಕ್ಕೆ ತರುವ ಪ್ರಯತ್ನವನ್ನು ಕಮ್ಯೂನಿಸಂ ಮಾಡಿತು ಎಂದೆನ್ನುವ ರೆನೆ ದೆಪೆಸ್ತ್ರ, ಆದರದು ಈಗ ರಾಜಕೀಯ, ಸಾಮಾಜಿಕ. ಆರ್ಥಿಕ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ದಾರ್ಶನಿಕ–ಈ ಎಲ್ಲ ವಿಷಯಗಳಲ್ಲೂ ದಿವಾಳಿಯೆದ್ದು ಹೋಗಿದೆ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ.

ಆದರೆ ಇಂದೇನಾಗುತ್ತಿದೆ ? ಸಂಸ್ಕೃತಿಗಳು ಪರಸ್ಪರ ಪೂರಕವಾಗಿ ಕ್ರಿಯಾಶೀಲ ವಾಗಬಲ್ಲ ದಿಟವಾದ ಒಂದು ಅಂತಾರಾಷ್ಟ್ರೀಯ ನಾಗರಿಕ ಸಮಾಜವೊಂದರ ಉದಯ ವನ್ನು ನಾವೆಲ್ಲಾ ಕಾಣುತ್ತಿರುವುದಾಗಿ ದೆಪೆಸ್ತ್ರ ಭಾವಿಸುತ್ತಾರೆ: "ಪ್ರಜಾಪ್ರಭುತ್ವ ರಾಷ್ಟ್ರದೊಳಗಷ್ಟೇ ಅಲ್ಲ, ರಾಷ್ಟ್ರಗಳ ನಡುವೆಯೂ ಜಾರಿಗೆ ಬರುವುದು. ರಾಷ್ಟ್ರೀಯ ಅಭಿಮಾನ ಉಳಿದ ಮಾನವತೆಯೊಡನೆ ಸ್ಪರ್ಧಿಸದೆ, ಜೊತೆಗೆ ಹೆಜ್ಜೆ ಹಾಕುವ ಪ್ರವೃತ್ತಿ ತೋರಲಿರುವುದು. ನಾವು ಸಂಪರ್ಕ ಉಪಗ್ರಹದ ಅಂಟೆನಾವನ್ನು ಭದ್ರವಾಗಿ ಹಿಡಿದು ಕೊಂಡೇ ಇಗರ್ಜಿಗಳ, ಮಂದಿರಗಳ ಘಂಟಾನಾದಕ್ಕೆ, ಮಸೀದಿಗಳ ಬೆಳಗಿನ ಪ್ರಾರ್ಥನೆ ಸದ್ದಿಗೆ ನಮ್ಮ ಹೃದಯಗಳನ್ನು ತೆರೆಯುತ್ತೇವೆ" ಎಂದು ನಂಬುವ ಇವರು ನಾವು ತನ್ನ ಬೇರುಗಳನ್ನು ತಾನೇ ಬೆಳೆಸಿಕೊಂಡು ಮತ್ತೊಂದು ಮರವಾಗಿ ಮತ್ತಷ್ಟು ಬೇರುಗಳನ್ನು ಪಡೆಯುವ ಆಲದ ಮರದಂತಾದರೆ ಇನ್ನೂ ಚೆನ್ನ ಎನ್ನುತ್ತಾರೆ.

"ಹಾಗಾದರೆ ಮಾನವತೆಗೆ ಮುಂದೆ ಒಳ್ಳೆಯ ದಿನಗಳಿವೆಯೆ ?" ನಾನು ಪ್ರಶ್ನಿಸಿದೆ.

"ಬೆಳಗಿನ ನನ್ನ ಈ ಆಶಾವಾದವೇ ಸಂಜೆಯ ನನ್ನ ನಿರಾಶಾವಾದವನ್ನು ಮೀರಲು ನೆರವಾಗುವುದು" ಎಂದುತ್ತರಿಸುತ್ತಾರೆ ದೆಪೆಸ್ತ್ರ....

ಈ ಆಶಾವಾದದ ಪ್ರತಿಧ್ವನಿಯನ್ನು ಜಾರ್ಜ್ ಆಮಾದೋ ಅವರೊಡನೆಯ ಮಾತುಕತೆಯಲ್ಲಿ ನಾನು ಆಲಿಸಬಲ್ಲೆ. ತಾವು ಕೂಡಾ ಕಮ್ಯೂನಿಸಂನ ಅವನತಿಯಿಂದ ಸಂತೋಷಗೊಂಡಿರುವುದಾದರೂ ಈ ಸಂತೋಷ, ಅಸಮಾನತೆ, ಶೋಷಣೆ, ದಾರಿದ್ರ್ಯ ಹಾಗೂ ಅನ್ಯಾಕ್ರಾಂತತೆಗಳನ್ನು ಹಡೆಯುವ ಬಂಡವಾಳಶಾಹಿಯ ವಿರುದ್ಧ ಹೋರಾಟ ಸಂಘಟಿಸುವ ತನ್ನ ಬದ್ಧತೆಯಿಂದ ವಿಚಲಿತಗೊಳಿಸಲಾರದು ಎನ್ನುತ್ತಾರವರು. ಪೂರ್ವ ಯೂರೋಪ್ ದೇಶಗಳಲ್ಲಿ ಪ್ರಜಾಪ್ರಭುತ್ವದ ಉದಯ ಬ್ರೆಜಿಲ್ ಜನತೆಯ ಸಂಕಷ್ಟಗಳನ್ನೇನೂ ಕಡಿಮೆ ಮಾಡಲಾರದು. ಬ್ರೆಜಿಲ್‌ನ ಲಕ್ಷಾಂತರ ಮಕ್ಕಳು ಕೇವಲ ಉಸಿರಿಡಿದು ಬದುಕಲು ಅಪರಾಧ ಜಗತ್ತನ್ನು ಪ್ರವೇಶಿಸಿದ್ದಾರೆ. ಪ್ರಜಾಪ್ರಭುತ್ವದ ವಿಜಯದ ಯಾವ ಆವೇಶೋತ್ಸಾಹಗಳೂ ಅವರ ಭವಿಷ್ಯವನ್ನು ಬದಲಾಯಿಸಲಾರವು.

ಸಮಾಜವಾದ ಮನುಷ್ಯನನ್ನು ಅಜ್ಞಾನ, ಹಸಿವು, ಬಿಗುಮಾನಗಳಿಂದ ಮುಕ್ತಗೊಳಿಸುವುದೆಂಬ ನಂಬಿಕೆಯಿಂದಲೇ ಅನೇಕ ಅತ್ಯುತ್ಕೃಷ್ಟ ಮನಸ್ಸುಗಳು ಕಮ್ಯೂನಿಸಂನ ಉತ್ಕರ್ಷಕ್ಕಾಗಿ ದುಡಿದವು. ಆದರೆ ಆದದ್ದೇ ಬೇರೆ. ಚಿಂತನೆ ಮತ್ತು ಕ್ರಿಯೆಗಳ ಏಕತೆ ಮನುಷ್ಯನನ್ನು ಮುಕ್ತಗೊಳಿಸುವ ಬದಲಿಗೆ ಸರ್ವಾಧಿಕಾರ ಹಾಗೂ ಏಕಾಧಿಪತ್ಯಗಳಿಗೆ ದಾರಿ ಮಾಡಿಕೊಟ್ಟಿತು. ಜನತೆಯ ಸಂಕಷ್ಟಗಳ ಪರಿಹಾರಕ್ಕೆ ತುಂಡುದಾರಿಗಳಿರಲಾರವು. ಶಾಂತಿ, ಸಾಮಾಜಿಕ ನ್ಯಾಯ ಹಾಗೂ ಇನ್ನೂ ಹೆಚ್ಚಿನ ಸೋದರತ್ವದ ಜಗತ್ತಿನೆಡೆಗೆ ಮುಂದಿನ ದಾರಿ ತುಂಬಾ ಸಂಕೀರ್ಣವೂ ಕಷ್ಟದಾಯಕವೂ ಆಗಿದೆ. ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನನ್ನ ಕೆಲವು ಸ್ನೇಹಿತರು ಹೋರಾಟವನ್ನೇ ಕೈಬಿಟ್ಟು ಕುಳಿತಿದ್ದಾರೆ. ಇನ್ನು ಕೆಲವರು ಆತ್ಮಹತ್ಯಾತ್ಮಕ ಪ್ರವೃತ್ತಿಗಳನ್ನು ತೋರಿಸತೊಡಗಿದ್ದಾರೆ. ಇದೇಕೆಂದು ನನಗರ್ಥವಾಗುವುದಿಲ್ಲ. ಈಗ ಕುಸಿದು ಬಿದ್ದಿರುವುದು ಸರ್ವಾಧಿಕಾರ. ಇದರಲ್ಲಿ ದುಃಖಪಡುವುದೇನಿದೆ ?

ನಾನು ಇನ್ನೊಬ್ಬ ಜಾರ್ಜ್ ಅವರನ್ನು-ಫ್ರ್ಯಾಂಕೊ ಸ್ಪ್ಯಾನಿಷ್ ಲೇಖಕ ಜಾರ್ಜ್ ಸೆಂಪ್ರುನ್–ಭೇಟಿ ಮಾಡಿದೆ. ನನಗೆ ಅವರು ಈ ಮೊದಲೇ ಎರಡು ಅದ್ವಿತೀಯ ಚಲಚಿತ್ರಗಳ–ಸ್ಪೆಯಿನ್‌ನ ಫ್ರಾಂಕೋ ಸರ್ವಾಧಿಕಾರ ಕುರಿತು ಅಲ್ಯಾನ್ ರೆಸನಾಯರ್ ಮಾಡಿದ್ದ 'ದಿ ವಾರ್ ಈಸ್ ಓವರ್' ಹಾಗೂ ಸ್ಟಾಲಿನ್‌ವಾದಿ ಜೆಕೋಸ್ಲಾವಕಿಯಾದಲ್ಲಿ

ಶಂಕಿತ ದೇಶದ್ರೋಹಿಗಳ ವಿಚಾರಣೆ ಕುರಿತು ಕಾಸ್ಟಾಗಾವ್ರ ಮಾಡಿದ್ದ 'ದಿ ಕನ್‌ಫೆಷನ್' –ಚಿತ್ರಕಥೆಗಾರರಾಗಿ ಪರಿಚಯವಿತ್ತು. ನಾನು ಅವರನ್ನು ಅನೇಕ ವಿಷಯಗಳ ಮಧ್ಯೆ, ಚರಿತ್ರೆ ಹೇಗೆ ಪಶ್ಚಿಮ ಯುರೋಪಿನ, ವಿಶೇಷವಾಗಿ ಫ್ರಾನ್ಸ್‌ನ ಮೂರು ತಲೆಮಾರುಗಳ ಬುದ್ಧಿಜೀವಿಗಳನ್ನು ಅಣಕಕ್ಕೀಡು ಮಾಡಿದೆ ಎಂಬುದರ ಬಗ್ಗೆ ಪ್ರಶ್ನಿಸಿದೆ.

ಅವರ ಉತ್ತರ: "ಬುದ್ಧಿಜೀವಿಗಳು ಎಲ್ಲವನ್ನೂ ಸಾರ್ವತ್ರೀಕರಿಸಲು, ಎಲ್ಲಕ್ಕೂ ಜಾಗತಿಕ ಮಾದರಿಗಳನ್ನು ನಿರ್ಮಿಸಲು, ಎಲ್ಲ ಸಮಸ್ಯೆಗಳಿಗೂ ಪರಿಪೂರ್ಣ ಉತ್ತರಗಳನ್ನು ರೂಪಿಸಲು ಹಾತೊರೆಯುತ್ತಾರೆ. ಇದೆಲ್ಲದಕ್ಕೂ ಆಧಾರ ಅವರದ್ದೇ ಆದ ಜ್ಞಾನ ಹಾಗೂ ಅನುಭವ. ಆದರೆ ಅನುಭವವೇ ನಾವು ತುಂಬಾ ತಪ್ಪಿದ್ದೇವೆನ್ನುವುದನ್ನು ಸಾಬೀತುಪಡಿಸಿದೆ".

ಹಾಗಾದರೆ ಭವಿಷ್ಯದಲ್ಲಿ ಕಾಣುವುದೇನು ?"ಮಾರುಕಟ್ಟೆ ಆರ್ಥಿಕತೆ ಅಥವ ಪ್ರಜಾಪ್ರಭುತ್ವದಾಚೆಗೆ ಹೋಗಲಾಗದು ಎಂಬ ವಾದದಿಂದ ನಾನು ಜಿಗುಪ್ಸೆಗೊಂಡಿದ್ದೇನೆ" ಎಂದೆನ್ನುವ ಸೆಂಪ್ರುನ್ "ನೀವು ಬರೀ ಕಟ್ಟುನಿಟ್ಟಾದ ಮಿತಿಗಳನ್ನು ಅಥವಾ ನಿಯತಾಂಕಗಳನ್ನು ಹಾಕುತ್ತಾ ಅನೂಹ್ಯತೆಯ ಅಂಶವನ್ನು ಕೈಬಿಡುತ್ತಾ ಹೋದರೆ, ಒಂದಲ್ಲ ಒಂದು ದಿನ ಯಾರೋ ಒಬ್ಬರು ನಂದನವನದ ಅಥವಾ ಅವತಾರಪುರುಷನ ಕಾಂಕ್ಷೆಗಳ ರೂಪದಲ್ಲಿ ಈ ಅಂಶವನ್ನು ತಂದೊದಗಿಸುವ ಅಪಾಯವನ್ನು ಎದುರಿಸಬೇಕಾಗುತ್ತದೆ. ಮಾರುಕಟ್ಟೆ ಆರ್ಥಿಕತೆ ಮತ್ತು ಪ್ರಜಾಪ್ರಭುತ್ವಗಳೆರಡೂ ವ್ಯವಸ್ಥಾಪನೆಯ ತಂತ್ರಗಳ ಮಟ್ಟಕ್ಕೆ ಇಳಿದು ಬಿಟ್ಟರೆ ನಾವು ಮುಳುಗಿದಂತೆಯೇ. ಆಗ ಪ್ರಜಾಪ್ರಭುತ್ವವನ್ನು ನಾಯಿಯೂ ಮೂಸದು" ಎಂದು ಎಚ್ಚರಿಸುತ್ತಾರೆ.

ಹೀಗಾಗದಂತೆ ಮಾಡಲು ದಾರಿ ಯಾವುದು ? ಸೆಂಪ್ರುನ್ ಪ್ರಕಾರ ಎಡಪಂಥದ ಹಲವಾರು ಬೌದ್ಧಿಕ ವಿಫಲತೆಗಳ ಬಗ್ಗೆ ಒಂದು ವಿಶಾಲ ವ್ಯಾಪ್ತಿಯ ಸಾಮೂಹಿಕ ಮಥನ ನಡೆಯಬೇಕಿದೆ. ಉದಾಹರಣೆಗೆ, ಮೂಲಭೂತವಾದದ ಬೆಳವಣಿಗೆ ತೃತೀಯ ಜಗತ್ತಿನ ಹಲವಾರು ದೇಶಗಳು ಪಶ್ಚಿಮದಿಂದ ಆಮದುಮಾಡಿಕೊಂಡ ವಿಚಾರಗಳ ಆಧಾರದ ಮೇಲೆ ತಮ್ಮ ಸಮಾಜಗಳನ್ನು ಆಧುನೀಕರಿಸಲಾಗದ ಅಸಹಾಯಕತೆಯೊಡನೆ ಒಂದಲ್ಲ ಒಂದು ರೀತಿಯಲ್ಲಿ ತಳುಕು ಹಾಕಿಕೊಂಡಿದೆ ಎಂಬ ತೀರ್ಮಾನಕ್ಕೆ ನಾವು ಬರಬಹುದಲ್ಲವೇ ? ಸೋವಿಯೆತ್ ಮಾದರಿಯನ್ನು ಅನುಸರಿಸ ಹೋದ ಈ ದೇಶಗಳು, ಅಂತಿಮವಾಗಿ ವಿರುದ್ಧ ಫಲಗಳನ್ನು ಕೊಟ್ಟ ಆಧುನೀಕರಣ ಹಾಗೂ ಧರ್ಮ ನಿರಪೇಕ್ಷತೆಯ ರೂಪಗಳನ್ನು ಜನರ ಮೇಲೆ ಹೇರಿದ್ದು ಈಗ ಸ್ಪಷ್ಟವಲ್ಲವೇ ?

ವಕ್ಲಾವ್ ಹ್ಯಾವೆಲ್ಲರ ಪ್ರಸ್ತಾವನಾ ಭಾಷಣವೊಂದನ್ನು ಬಿಟ್ಟರೆ ನಾನು ಈ ಸಮ್ಮೇಳನದಲ್ಲಿ ಕೇಳಿದ ಅತ್ಯಂತ ಅರ್ಥಪೂರ್ಣ ಹಾಗೂ ಮನೋಜ್ಞ ಭಾಷಣವೆಂದರೆ

ದಕ್ಷಿಣ ಆಫ್ರಿಕಾದ ಮಹಾನ್ ಪ್ರತಿಭೆಯ ಕಾದಂಬರಿಕಾರ ಹಾಗೂ ಪ್ರಬಂಧಕಾರ ಆಂಡ್ರೆ ಬ್ರಿಂಕ್ ಅವರದ್ದು. ಶ್ವೇತ ಆಫ್ರಿಕನ್ನರಾದ ಇವರು ಕಳೆದೆರಡು ದಶಕಗಳಿಗಿಂತ ಹಿಂದಿನಿಂದಲೂ ವರ್ಣಭೇದ ಆಳ್ವಿಕೆಯನ್ನು ದಿಟ್ಟವಾಗಿ ವಿರೋಧಿಸುತ್ತಾ ಬಂದಿದ್ದಾರೆ. ಅವರು ನನ್ನೊಂದಿಗೆ ತಮ್ಮ ದೇಶದಲ್ಲಿನ ಇತ್ತೀಚಿನ ಬದಲಾವಣೆಗಳು, ಈ ಬದಲಾವಣೆಗಳು ದ. ಆಫ್ರಿಕಾದ ಭಿನ್ನಮತೀಯರ ಮೇಲೆ ಮಾಡಿರುವ ಪರಿಣಾಮ, ಲೇಖಕನಾಗಿ ತಮ್ಮ ವಿಕಾಸ ಇತ್ಯಾದಿ ವಿಷಯಗಳ ಬಗ್ಗೆ ಮಾತನಾಡುತ್ತಾ "ನಾನು ಕಳೆದೊಂದು, ಅಲ್ಲ ಎರಡು ದಶಕಗಳ ಹಿಂದೆಯೇ ಪ್ರಸ್ತಾಪಿಸಿದ್ದ ನಿಲುವುಗಳಿಗೆ ಸರ್ಕಾರ ಈಗ ಒಲಿಯುತ್ತಿರುವುದು ಸಂತೋಷದ ವಿಷಯ" ಎಂದರು. "ಆದರೆ ಇಂದು ಹಿಂದೆಂದಿಗಿಂತ ಹೆಚ್ಚು ಆತಂಕಕಾರಿಯಾದ ಅಪಾಯಗಳು ಮತ್ತು ಕಷ್ಟಗಳು ಗೋಚರವಾಗತೊಡಗಿದ್ದು, ಇದರಿಂದಾಗಿ ನಮ್ಮ ಮುಂದಿರುವ ಸವಾಲುಗಳೂ ಬೃಹತ್ತಾಗಿವೆ. ಒಂದೆರಡು ದಿನದ ಮಟ್ಟಿಗೆ ಜನಪ್ರಿಯವೆನಿಸುವ ಘೋಷಣೆಗಳನ್ನು ಕೊಡುವ ಕಾಲ ಇದಲ್ಲ. ಲೇಖಕರಾದ ನಾವು ಒಟ್ಟಾರೆ ಪರಿಸ್ಥಿತಿಯನ್ನು, ಅದು ದಿನದಿಂದ ದಿನಕ್ಕೆ ಬದಲಾಗುತ್ತಿದ್ದಂತೆಯೇ, ನಮಗೆ ಸಾಧ್ಯವಾದಷ್ಟು ಮಟ್ಟಿಗೆ ಮೌಲ್ಯಾಂಕನ ಮಾಡಿ, ಅದರೊಳಗಿನ ಗೂಢ ಸತ್ಯಗಳನ್ನು–ಅವು ಕೆಲವೊಮ್ಮೆ ಅಪ್ರಿಯವೆನಿಸಿದರೂ–ಬಹಿರಂಗಗೊಳಿಸಬೇಕು".

"ಬುದ್ಧಿಜೀವಿಗಳು ತಮ್ಮ ಪ್ರತಿಷ್ಠಿತ ಚರ್ಚಾವಸ್ತುವಾಗಿದ್ದ ಮಾರ್ಕ್ಸ್‌ವಾದ ಸವಕಲಾಗಿ ಹೋಗಿರುವ ಇಂದಿನ ಪರಿಸ್ಥಿತಿಯಲ್ಲಿ ಏನು ಮಾಡಬಹುದು ?" ಎಂದು ನಾನು ಕೇಳಿದೆ. ಅವರ ಉತ್ತರ: "ಸದ್ಯದ ಪರಿಸ್ಥಿತಿಯಲ್ಲಿ ಹೇಳಬಹುದಾದದ್ದು, ಎಲ್ಲ ಸಿದ್ಧಾಂತಗಳ ಭಂಗುರತೆ ಮತ್ತು ಕೆಲವು ವಿಚಾರಗಳ ಕೇಂದ್ರಗುಣದ ಕಲ್ಪನೆ ಕುರಿತಂತೆ ಮಾತ್ರ. ಒಂದು ಕೇಂದ್ರ, ಅದಕ್ಕೊಂದು ವ್ಯಾಪ್ತಿ, ಅದರ ಆಸುಪಾಸು–ಇಂತಹ ಕಲ್ಪನೆಯನ್ನಾಧರಿಸಿದ್ದ ಸಾಮ್ರಾಜ್ಯವಾದದ ಇಡೀ ಜಗತ್ತು ಕುಸಿದು ಹೋಗಿದೆ; ವಸಾಹತುಶಾಹಿ, ಕಮ್ಯೂನಿಸಂ ನಂತರದ ಜಗತ್ತಿನಲ್ಲಿ ಎಲ್ಲದಕ್ಕೂ ನಮಗೀಗ ಹೊಸ ವ್ಯಾಖ್ಯೆಗಳ, ಹೊಸ ಸಂಯೋಜನೆಗಳ ಅಗತ್ಯ ಕಾಣಬರುತ್ತಿದೆ. ಈಗ ಕೇಂದ್ರವಾದಿಯಾದ ಏನೂ ಉಳಿಯಲಾರದು. ತನ್ನ ದಾಯಾದಿಯನ್ನು ಕಳೆದುಕೊಂಡಿರುವ ಪ್ರಥಮ ಜಗತ್ತೀಗ ತೃತೀಯ ಜಗತ್ತಿನೊಡನೆಯ ತನ್ನ ಸಂಬಂಧಗಳನ್ನು ಪುನರ್ವಿನ್ಯಾಸಗೊಳಿಸಿಕೊಳ್ಳಬೇಕಿದೆ".

ಸಮ್ಮೇಳನದಲ್ಲಿನ ಚರ್ಚೆ ಪ್ರಜಾಪ್ರಭುತ್ವದ ನೈತಿಕ ಆಯಾಮ ಮತ್ತು ಹಾಗೇ ಅಧಿಕಾರ ವಿತರಣೆಯ ಸಮೀಕರಣಗಳ ಬಗ್ಗೆ ಔದಾಸೀನ್ಯ ತೋರಿಸಿತೆಂಬ ನನ್ನ ಅಭಿಪ್ರಾಯವನ್ನು ಒಪ್ಪಿದ ಬ್ರಿಂಕ್ ಅಂತಿಮವಾಗಿ ಹೇಳಿದ್ದು: "ಬಹುಮತದ ದಬ್ಬಾಳಿಕೆ

ಬಗ್ಗೆ ಜನತೆ ನಿಜವಾಗಿಯೂ ಚಿಂತಿತರಾಗಿದ್ದಾರೆ. ಕೇಂದ್ರವೆಂದರೇನು ಎಂಬ ಬಗ್ಗೆಯೇ ಮರುಆಲೋಚನೆ ಆರಂಭವಾಗಿರುವ ಜಗತ್ತಿನಲ್ಲಿ ಈಗ ಅಧಿಕಾರವೆಂದರೇನು ಎಂಬುದರ ಮರುವ್ಯಾಖ್ಯಾನವಾಗಬೇಕಿದೆ. ಪ್ರಜಾಪ್ರಭುತ್ವದ ಭೌತಿಕ ಆಧಾರಗಳ- ಅದರ ರಚನೆಗಳು, ವ್ಯವಸ್ಥೆ, ಆರ್ಥಿಕ ಸಂಸ್ಥೆಗಳು-ಬಗ್ಗೆ ಚರ್ಚೆಯಾದದ್ದು ಒಳ್ಳೆಯದು. ಅದೇ ಸಮಯದಲ್ಲಿ ನಮ್ಮ ಪ್ರತಿಯೊಂದು ಕ್ರಿಯೆಯ ನೈತಿಕ ಅಥವಾ ಮೌಲಿಕ ಸ್ಪಂದನಗಳ ಬಗ್ಗೆಯೂ ಚರ್ಚೆಯಾಗಬೇಕಿತ್ತು. ನಮ್ಮ ಮುಂದಿನ ಚರ್ಚೆಗೆ ಇದೇ ಆರಂಭ ಬಿಂದುವೆಂದು ಪರಿಗಣಿಸದೇ ಹೋದಲ್ಲಿ, ಇಡಿಯಾಗಿ ಜಗತ್ತಿಗೇ ಕಷ್ಟಗಳ ಪರಂಪರೆ ಮುತ್ತಲಿದೆ".

ಈ ಸಮ್ಮೇಳನದಲ್ಲಿ ಮಂಡಿತವಾದ ಸಿದ್ಧಭಾಷಣಗಳೆಲ್ಲವನ್ನೂ ಗಮನಿಸಿದಾಗ ಯಾರಿಗಾದರೂ ಒಟ್ಟಾರೆ ಅನ್ನಿಸುವುದಿಷ್ಟು: ಉದಾರವಾದಿ ಮತ್ತು ಎಡಪಂಥೀಯ- ಈ ಎರಡೂ ಒಲವುಗಳ ಬುದ್ಧಿಜೀವಿವರ್ಗವೀಗ ಬಂಡವಾಳವಾದದ ಹಲವಾರು ವಕ್ರತೆಗಳನ್ನು ಖಂಡಿಸುತ್ತಾ, ಸಮಾಜವಾದದಿಂದ ಭ್ರಮನಿರಸನಗೊಳ್ಳುತ್ತಾ, ಶಿಕ್ಷೆ ಅಥವಾ ಪ್ರತೀಕಾರಗಳ ಭಯವಿಲ್ಲದೆ ನೀತಿ-ಆಚರಣೆ-ನಂಬಿಕೆಗಳನ್ನು ನಿರಂತರವಾಗಿ ಪ್ರಶ್ನಿಸಲು ಅವಕಾಶವಿರುವ ಇನ್ನೊಂದು ತೆರನ, ಕಡಿಮೆ ಶಾಸ್ತ್ರಾತ್ಮಕವಾದ ಮತ್ತು ಹೆಚ್ಚು ಮಾನವೀಯವಾದ ಶಾಶ್ವತ ಕ್ರಾಂತಿಯೊಂದರೆಡೆಗೆ ಹೆಜ್ಜೆ ಹಾಕುತ್ತಿದೆ.

'ಹಜಾರ'ದಲ್ಲಿ ಆಶಾಕಿರಣ ಮೂಡಲು ಇನ್ನೂ ಅವಕಾಶವಿದೆ. ●

(ಕೃಪೆ: ಸಂಡೇ ಟೈಮ್ಸ್ ಆಫ್ ಇಂಡಿಯಾ)

ತನ್ನನ್ನು ತಾನು ಹಿಡಿತದಲ್ಲಿ ಇಟ್ಟುಕೊಳ್ಳುವುದೇ ಸ್ವರಾಜ್ಯದ ವಾಸ್ತವವಾದ ಅರ್ಥ. ತನ್ನನ್ನು ತಾನು ಅಂಕೆಯಲ್ಲಿಟ್ಟುಕೊಳ್ಳುವಾತ ನೀತಿಯನ್ನು ಪಾಲಿಸುವನು, ಇತರರನ್ನು ವಂಚಿಸನು, ತಾಯಿ, ತಂದೆ, ಹೆಂಗಸರು, ಮಕ್ಕಳು, ನೌಕರ ಚಾಕರರು, ನೆರೆಹೊರೆಯವರು ಎಲ್ಲರ ವಿಷಯದಲ್ಲಿಯೂ ತನ್ನ ಕರ್ತವ್ಯವನ್ನು ನೆರವೇರಿಸುವನು. ಇಂಥವನು ಯಾವ ನಾಡಿನಲ್ಲಿರಲಿ ಸ್ವರಾಜ್ಯವನ್ನು ಅನುಭವಿಸುವನು. ಇಂಥ ಮನುಷ್ಯರು ಹೆಚ್ಚಾಗಿರುವ ರಾಷ್ಟ್ರಕ್ಕೆ ಸ್ವರಾಜ್ಯ ಸಿಕ್ಕಿದೆಯೆಂದೇ ಭಾವಿಸಬೇಕು.

—ಗಾಂಧೀಜಿ

ಮ್ಯಾಗ್‌ಸೆಸೆ ಪ್ರಶಸ್ತಿಗೆ ಪ್ರತಿಸ್ಪಂದನ*

⊕ ಕೆ. ವಿ. ಸುಬ್ಬಣ್ಣ

ನನ್ನದು ನದಿಗಳ ದೇಶ. ನಿಮ್ಮದು ಸಮುದ್ರದ ದೇಶ, ನದಿಗಳ ದೇಶದ ನನ್ನ ಜನತೆಯಿಂದ ಸಮುದ್ರದ ದೇಶದ ನಿಮ್ಮ ಜನತೆಗೆ ಪ್ರೀತಿ ಶುಭಾಶಯಗಳನ್ನು ಹೊತ್ತು ತಂದಿದ್ದೇನೆ. ಎತ್ತಿಕೊಳ್ಳಿ.

ನಿಮ್ಮದು ಔದಾರ್ಯದ ದೇಶ. ಏಷ್ಯಾ ಖಂಡದ ರಾಷ್ಟ್ರಗಳ ನಡುವೆ ಸ್ನೇಹದ ಬಲೆ ಹೆಣೆಯಲಿಕ್ಕಾಗಿ ಮತ್ತು ನಮ್ಮ ಅನೇಕ ರಾಷ್ಟ್ರಗಳ ಮೂಲೆ ಮೂಲೆಗಳಲ್ಲಿ ಈ ಖಂಡದ ಜೀವಶಕ್ತಿಯು ಹೊಸ ಕುಡಿಯೊಡೆಸುತ್ತಿರುವುದನ್ನು ಗುರುತಿಸಿ ಹೊಗಳಲಿಕ್ಕಾಗಿ ಪ್ರಶಸ್ತಿಯನ್ನು ಸ್ಥಾಪಿಸಿದ್ದೀರಿ. ನಿಮ್ಮ ಔದಾರ್ಯಕ್ಕೆ ತಕ್ಕುದಾದ ಭಾರಿ ಮೊತ್ತದ ಪ್ರಶಸ್ತಿಯನ್ನು ಸ್ಥಾಪಿಸಿದ್ದೀರಿ. ಈ ಪ್ರಶಸ್ತಿಗೆ, ಏಷ್ಯಾ ಖಂಡಕ್ಕೆ ಗಣ್ಯನಾದ ನಿಮ್ಮ ರಾಷ್ಟ್ರನಾಯಕ ದಿ. ರಮೋನ್ ಮ್ಯಾಗ್‌ಸೆಸೆಯ ಹೆಸರಿಟ್ಟು ಹೆಚ್ಚಿನ ಗೌರವ ತುಂಬಿದ್ದೀರಿ. ನನ್ನ ರಾಷ್ಟ್ರದ ಹಲವು ಗಣ್ಯರಿಗೆ ಈಗಾಗಲೇ ಈ ಪ್ರಶಸ್ತಿ ನೀಡಿದ್ದೀರಿ. ಈಗ, ಈ ಉನ್ನತ ಪ್ರಶಸ್ತಿಯನ್ನು ನನ್ನ ಹೆಸರಿಗೆ ಕೊಡುತ್ತಿರುವಾಗ, ನಿಮ್ಮ ಜನತೆಯ ಪ್ರೀತಿ ಔದಾರ್ಯಗಳನ್ನು ಸ್ಮರಿಸುತ್ತ, ಹಿಂದೆ ಇದನ್ನು ಸ್ವೀಕರಿಸಿದ ನನ್ನ ಪುರೋಗಾಮಿಗಳನ್ನು ನೆನೆಯುತ್ತ ಸಂತೋಷದಿಂದ ಸ್ವೀಕರಿಸುತ್ತೇನೆ; ಕೃತಜ್ಞತೆಯಿಂದ ನಮ್ರನಾಗಿ ಸ್ವೀಕರಿಸುತ್ತೇನೆ,

ಪ್ರಜಾಪ್ರಭುತ್ವ ಜೀವನಪದ್ಧತಿಯ ಚೌಕಟ್ಟಿನಲ್ಲಿ ಪ್ರಶಸ್ತಿಗಳನ್ನು ಕೊಡುವುದು ಅಥವಾ ಕೊಳ್ಳುವುದು ಸೂಕ್ತವೇ ಎನ್ನುವ ಬಗ್ಗೆ ನನಗೆ ಸಂದೇಹಗಳಿವೆ, ಹಾಗಿರುವಾಗಲೂ ಈ ಪ್ರಶಸ್ತಿಯು ನನಗೆ ಮಹತ್ತರವಾದ ಸಂತೋಷವನ್ನು ತಂದುಕೊಟ್ಟಿದೆ, ಅದಕ್ಕೆ ಕಾರಣಗಳನ್ನು ಹೇಳುತ್ತೇನೆ.

---

* ಪ್ರಶಸ್ತಿ ಸ್ವೀಕಾರದ ಅನಂತರ ಮಾಡಿದ ಭಾಷಣದ ಮೂಲ ಕನ್ನಡ ರೂಪ—31-8-91 ಮನಿಲಾ (ಫಿಲಿಫೈನ್ಸ್)

ಪ್ರಶಸ್ತಿಯು ನನ್ನ ಹೆಸರಿಗೆ ಸಂದಿದೆಯಾದರೂ ಇದು ನನಗೆ ವೈಯಕ್ತಿಕವಾಗಿ ಸಂದಿದ್ದಲ್ಲ ಎನ್ನುವುದು ನಿಶ್ಚಿತ. ಒಂದು ವೇಳೆ, ಇದಕ್ಕಿಂತ ಸಣ್ಣ ಪ್ರಶಸ್ತಿಯಾಗಿದ್ದರೆ ಇದು ನನಗೇ ಎಂದು ನಾನು ಭ್ರಮೆಗೊಳ್ಳುವ ಸಾಧ್ಯತೆ ಇರಬಹುದಿತ್ತು. ಆದರೆ, ಇದು ಬಹು ದೊಡ್ಡ ಪ್ರಶಸ್ತಿ; ಉಳಿದವರಿರಲಿ, ಸ್ವತಃ ನಾನೇ ನನ್ನ ಕಟ್ಟೇಕಾಂತದಲ್ಲಿ ಕೂತು ಯೋಚಿಸುವಾಗಲೂ ಇದು ನನಗೆ ವೈಯಕ್ತಿಕವಾಗಿ ಸಿಕ್ಕಿದ್ದು ಎಂದು ಭ್ರಮೆಗೊಳ್ಳಲು ಸಾಧ್ಯವಾಗುವುದಿಲ್ಲ – ಅಷ್ಟು ದೊಡ್ಡದು. ನನ್ನ ಹೆಸರಿನ ಸುತ್ತ ನೀನಾಸಮ್, ಅಕ್ಷರ ಪ್ರಕಾಶನ ಸಂಸ್ಥೆಗಳು, ಹೆಗ್ಗೋಡು ಕರ್ನಾಟಕ ಪ್ರದೇಶಗಳು ಸುತ್ತಿಕೊಂಡಿವೆ. ಪ್ರಶಸ್ತಿ ಸಂದಿರುವುದು ನಿಜವಾಗಿ ಅವಕ್ಕೆ. ಮತ್ತು–ಕನ್ನಡದಲ್ಲೇ ನಾಲ್ಕು ದಶಕಕ್ಕೆ ಮೊದಲು ನಮ್ಮ ಮಹಾವ್ಯಕ್ತಿ ಶಿವರಾಮ ಕಾರಂತರು ಒಂದು ಚಿಕ್ಕ ಪಟ್ಟಣದಲ್ಲಿ ಇಂಥದೇ ಸಾಂಸ್ಕೃತಿಕ ಆಂದೋಲನ ನಡೆಸಿದ್ದರು. ಅದಕ್ಕೆ ಮೊದಲು ನಮ್ಮ ಇನ್ನೊಬ್ಬ ಮಹಾವ್ಯಕ್ತಿ ಕುವೆಂಪು ಸಾಹಿತ್ಯವಾಗಿ ಇಂಥದೊಂದು ಕನಸು ಕಟ್ಟಿ ಕೊಟ್ಟಿದ್ದರು. ಪ್ರಶಸ್ತಿಯ ಪಾಲು ಹಾಗೆ ಅನೇಕರಿಗೆ ಸಲ್ಲುತ್ತದೆ. ನನ್ನ ಅಹಂಕಾರವನ್ನು ಪೊಳ್ಳಾಗಿ ಊದಿ ಉಬ್ಬಿಸದೆ, ನನಗೆ ಸಂತೋಷ ಕೊಡುವ ಪ್ರಶಸ್ತಿ ಇದು.

ಇಂಡಿಯಾ ಒಂದು ವಿಶಾಲವಾದ ರಾಷ್ಟ್ರ. 25–30 ಪುಟ್ಟ ದೊಡ್ಡ ರಾಜ್ಯಗಳು ಅದರಲ್ಲಿ ಒಗ್ಗೂಡಿಕೊಂಡಿವೆ. ತೀರಾ ದೊಡ್ಡದೂ ಅಲ್ಲದ, ಅಷ್ಟು ಚಿಕ್ಕದೂ ಅಲ್ಲದ ಮಧ್ಯಮ ಗಾತ್ರದ ರಾಜ್ಯ ನನ್ನ ಕರ್ನಾಟಕ. ಕರ್ನಾಟಕದ ವಿಸ್ತೀರ್ಣ ಜನಸಂಖ್ಯೆಗಳು ಸುಮಾರಾಗಿ ನಿಮ್ಮ ರಾಷ್ಟ್ರದ ಮುಕ್ಕಾಲರಷ್ಟು. ಇಂಡಿಯಾದಲ್ಲಿ ಸುಮಾರು ಒಂದು–ಒಂದೂವರೆ–ಎರಡು ಸಾವಿರಗಳಷ್ಟು ವರ್ಷ ಹಿಂದಿನಿಂದ ಬೆಳೆದುಕೊಂಡು ಬಂದ ಹದಿನೈದು-ಇಪ್ಪತ್ತು ಪ್ರಧಾನ ಪ್ರಾದೇಶಿಕ ಭಾಷೆಗಳಿವೆ. ಅವು ಸಾಹಿತ್ಯ ಸಮೃದ್ಧವಾಗಿವೆ. ನಮ್ಮ ಕರ್ನಾಟಕದ ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ, ಶ್ರೀಮಂತ ಸಾಹಿತ್ಯ ಪರಂಪರೆಯಿದೆ. ಮತ್ತು ನಮ್ಮ ಆಧುನಿಕ ಸಾಹಿತ್ಯವು ಇವತ್ತಿನ ವಿಶ್ವಸಾಹಿತ್ಯದಲ್ಲಿ ಗಣನೀಯವೆನ್ನಿಸಬಲ್ಲ ಸತ್ತ್ವವನ್ನು ಪಡೆದುಕೊಂಡಿದೆ.

ಕರ್ನಾಟಕದ ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳಿವೆ. ಅಲ್ಲಿ ಮಳೆ ಸಮೃದ್ಧವಾಗಿ ಸುರಿಯುತ್ತದೆ ; ನಿತ್ಯಹಸಿರಾಗಿರುವ ಕಾಡುಗಳು ಬೆಟ್ಟಗಳು ಹಬ್ಬಿಕೊಂಡು ನಿಂತಿವೆ. ಘಟ್ಟದ ಏರುವೆಯಲ್ಲಿ, ನಗರಕೇಂದ್ರಗಳಿಂದ ಬಹುದೂರವಾಗಿ, ಕಾಡಿನ ಮಡಿಲಲ್ಲಿರುವ ಒಂದು ಚಿಕ್ಕಹಳ್ಳಿ, ಹೆಗ್ಗೋಡು. ಈ ಚಿಕ್ಕಹಳ್ಳಿಯ ಜನಸಂಖ್ಯೆ ಐದುನೂರು ಕೂಡ ಇಲ್ಲ. ಇದರ ಸುತ್ತ ಇರುವ ಇದಕ್ಕಿಂತಲೂ ಚಿಕ್ಕದಾದ ಹತ್ತಾರು ಹಳ್ಳಿಗಳು ಕೂಡಿ ಒಂದು ಗ್ರಾಮೀಣ ಜನಪದ ಎನ್ನಬಹುದು. ಈ ಗ್ರಾಮೀಣ ಜನಪದ, ಹೊಸ ಇಂಡಿಯಾದ ಕನಸು ಕಾಣುತ್ತ ಅದನ್ನು ತನ್ನ ನೆಲದಲ್ಲೆ ಮೂರ್ತಗೊಳಿಸಿಕೊಳ್ಳಲು ಹೆಣಗಾಡುತ್ತಿರುವುದಕ್ಕೆ ನೀನಾಸಮ್ ರಂಗಸಂಸ್ಥೆ ಒಂದು ಸಾಕ್ಷಿ ಎನ್ನಬಹುದು.

ಶತಮಾನಗಳ ಕಾಲ ವಸಾಹತು ದೇಶವಾಗಿ ದಾಸ್ಯದಲ್ಲಿದ್ದ ನಮ್ಮ ಇಂಡಿಯಾ ಸುಮಾರು ಒಂದು ಶತಮಾನದ ಜನ ಹೋರಾಟದ ಅನಂತರ, 1947ರಲ್ಲಿ–ನಿಮಗೆ ಸ್ವಾತಂತ್ರ್ಯ ದೊರಕಿದ ಮರುವರ್ಷದಲ್ಲಿ–ಸ್ವಾತಂತ್ರ್ಯ ಪಡೆದುಕೊಂಡಿತು. ಇಂಗ್ಲೆಂಡ್ ಶತಮಾನಗಳ ಕಾಲ ನಮ್ಮ ದೇಶವನ್ನು ಭೌತಿಕವಾಗಿ ಆಕ್ರಮಿಸಿಕೊಂಡದ್ದು ಮಾತ್ರವಲ್ಲ; ಈ ಅವಧಿಯ ಉದ್ದಕ್ಕೂ ಮತ್ತು ಅದರಿಂದ ಮುಂದೆ ಈಗ ಇವತ್ತಿನ ತನಕವೂ ಉತ್ತರ ಗೋಲದ ವಿಜ್ಞಾನ ನಾಗರೀಕತೆ ನಮ್ಮ ಮೇಲೆ ಆಕ್ರಮಣ ನಡೆಸುತ್ತಲೇ ಇದೆ. ಅಥವಾ–ಇದನ್ನು ಭೌತಿಕ ಆಕ್ರಮಣದ ಥರದಲ್ಲಿ 'ಆಕ್ರಮಣ' ಎಂದು ನಿಶ್ಚಿತವಾಗಿ ಹೇಳುವುದೂ ಕಷ್ಟವೇ.

ಜಾಪಾನಿನ ಅಕಿರ ಕುರಸೊವ ನಿರ್ಮಿಸಿದ 'ರಶೋಮೋನ್' ಚಿತ್ರ ನೋಡಿದ್ದೀರಲ್ಲ ? ಒಬ್ಬ ಡಕಾಯಿತ ಮತ್ತು ಒಂದು ಸಮುರಾಯ್ ದಂಪತಿಗಳ ಅದರ ಕಥೆಯಲ್ಲಿ ಒಂದು ಸಂಗತಿ ಕಡೆಗೂ ಸ್ಪಷ್ಟವಾಗದೆ ಉಳಿದುಹೋಗುತ್ತದೆ. ಡಕಾಯಿತನು ಸಮುರಾಯ್‌ನ ಹೆಂಡತಿಯ ಮೇಲೆ ಅತ್ಯಾಚಾರ ಮಾಡಿದನೋ ಅಥವಾ ಅವಳೇ ಡಕಾಯಿತನಲ್ಲಿ ಅನುರಕ್ತಳಾಗಿ ಹೋದಳೋ ಎನ್ನುವ ಸಂಗತಿ ಮತ್ತು ಸಮುರಾಯ್‌ನನ್ನು ಡಕಾಯಿತನು ಕೊಲೆ ಮಾಡಿದನೋ ಅಥವಾ ಸಮುರಾಯ್ ತಾನೇ ಆತ್ಮಹತ್ಯೆ ಮಾಡಿಕೊಂಡನೋ ಎನ್ನುವ ಸಂಗತಿ. ಅದೇ ಥರ ನಮ್ಮ ಮತ್ತು ವಿಜ್ಞಾನ ನಾಗರಿಕತೆಯ ನಡುವಣ ಸಂಬಂಧ ಸಂಕೀರ್ಣದ್ದಾಗಿದೆ, ಅಸ್ಪಷ್ಟವಾಗಿದೆ. ಅದು ಆಕ್ರಮಣವೂ ಹೌದು, ಆಕರ್ಷಣೆಯೂ ಹೌದು. ಸಂಘರ್ಷವೂ ಹೌದು, ಸಮ್ಮೇಲವೂ ಹೌದು. ಮಂಥನವೂ ಹೌದು, ಮೈಥುನವೂ ಹೌದು.

ಇಂಡಿಯಾದಲ್ಲಿ ನಡೆದದ್ದನ್ನು ಹೇಳಿದೆ. ಆದರೆ, ಈ ಸಂಘರ್ಷ ಮಂಥನ ಪ್ರಕ್ರಿಯೆ ಇಲ್ಲಿಗೇ ಸೀಮಿತವಾದದ್ದಲ್ಲ. ಇದು ನಿಜವಾಗಿ ಜಾಗತಿಕ ಪ್ರಕ್ರಿಯೆ. ತೃತೀಯ ಜಗತ್ತು ಎಂದು ನಾವು ಸಾಮಾನ್ಯವಾಗಿ ಹೆಸರಿಸುವ ಪ್ರಪಂಚದ ದೊಡ್ಡ ಭಾಗದ ಅನೇಕಾನೇಕ ಹಿಂದುಳಿದ ರಾಷ್ಟ್ರಗಳು ಈ ಸಂಘರ್ಷ ಪ್ರಕ್ರಿಯೆಯಲ್ಲಿ ಭಾಗಿಗಳಾಗಿವೆ ; ತಮ್ಮ ತಮ್ಮ ಪರಂಪರೆಗನುಗುಣವಾಗಿ ತಮ್ಮ ತಮ್ಮ ರೀತಿಯಲ್ಲಿ ಇದಕ್ಕೆ ಪ್ರತಿಕ್ರಿಯೆಗೊಟ್ಟಿವೆ.

ವಿಜ್ಞಾನ ನಾಗರಿಕತೆಗೆ ಪ್ರತಿಯಾಗಿ ತೃತೀಯ ಜಗತ್ತಿನ ರಾಷ್ಟ್ರಗಳು ವಿವಿಧ ರೀತಿಗಳಲ್ಲಿ ಪ್ರತಿಭಟನೆಯನ್ನು ಒಡ್ಡಿದ್ದರೂ ಒಟ್ಟನಲ್ಲಿ, ಈ ಕೆಲವು ಶತಮಾನಗಳ ಕಾಲ ವಿಜ್ಞಾನ ನಾಗರಿಕತೆಯೇ ಮನುಷ್ಯಕುಲದ ಇತಿಹಾಸವನ್ನು ಮುನ್ನಡೆಸುವ ನಾಯಕ ಶಕ್ತಿಯಾಯಿತು ಎನ್ನುವುದು ಸುಳ್ಳಲ್ಲ. ವಿಜ್ಞಾನ, ಯಂತ್ರಸಾಧನೆಗಳು ಮುಂತಾದವುಗಳಲ್ಲದೆ ಸಮಾನತೆ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮುಂತಾದ ಹೊಸ ಮೌಲ್ಯಗಳನ್ನು ಕೂಡ ಅದು ಸೃಷ್ಟಿಸಿಕೊಟ್ಟಿತು. ತೀರ ಪ್ರಾಚೀನ ಕಾಲದಲ್ಲಿ ಕೂಡ ಸ್ವಾತಂತ್ರ್ಯ

ಸಮಾನತೆಗಳಂಥ ಮೌಲ್ಯಗಳು ಮುಖ್ಯವೆಂದು ಪರಿಗಣಿತವಾಗಿದ್ದವು ನಿಜ, ಆದರೆ, ಆ ಮೌಲ್ಯಗಳನ್ನು ಮಾನವ ಜೀವನದ ಕೇಂದ್ರವನ್ನಾಗಿ ಮಾಡಿದ್ದು ಮತ್ತು ಅದನ್ನು ವಾಸ್ತವದಲ್ಲಿ ಕಾರ್ಯಸಾಧ್ಯಗೊಳಿಸಿದ್ದು ವಿಜ್ಞಾನ ನಾಗರಿಕತೆಯೇ.

ನಮ್ಮ ದೇಶದ್ದೇ ಉದಾಹರಣೆ. ದೀರ್ಘ ಸಾಂಸ್ಕೃತಿಕ ಇತಿಹಾಸದ ಮೂಲಕ ನಾವು ಪರಂಪರೆಯ ಸಮೃದ್ಧಿಯನ್ನು ಪಡೆದುಕೊಂಡಿದ್ದೆವು. ಆದರೆ ಅದೇ ಪರಂಪರೆಯು ನಮ್ಮಲ್ಲಿ ಜಾತಿಭಿನ್ನತೆ, ವೈಷಮ್ಯ, ಪಕ್ಷಪಾತಗಳ ಹೀನ ಪಾಪ ಪಾತಕಗಳನ್ನೂ ಸೃಷ್ಟಿಸಿ ನಮ್ಮ ಸಂಸ್ಕೃತಿಯನ್ನು ಅಮಾನವೀಯವಾಗಿಸಿತ್ತು. ನಮ್ಮದೇ ಸಂಸ್ಕೃತಿಯ ಈ ಅಮಾನವೀಯತೆಯನ್ನು ಕಣ್ಣುಬಿಚ್ಚಿಸಿ ನಮಗೆ ಕಾಣಿಸಿಕೊಟ್ಟದ್ದು ವಿಜ್ಞಾನ ನಾಗರಿಕತೆಯೇ.

ಅಂಥ ವಿಜ್ಞಾನ ನಾಗರಿಕತೆಗೆ ಇದೀಗ ದುರಂತ ಪ್ರಾಪ್ತವಾಗಿರುವಂತೆ ಕಾಣುತ್ತದೆ. ಇದಕ್ಕೆ ಕಾರಣ ಪ್ರಾಯಶಃ, ಅದು ತನ್ನಲ್ಲೇ ಬೆಳೆಯಗೊಟ್ಟ ವಿಕೃತಿಗಳು. ಜಗತ್ತಿನ ದೊಡ್ಡ ಭಾಗವನ್ನು ಹೊರಗಿಟ್ಟು ಪ್ರತ್ಯೇಕವಾಗಿ ತಾನೇತಾನಾಗಿ ರೂಪುಗೊಂಡದ್ದು ವಿಜ್ಞಾನ ನಾಗರಿಕತೆಯ ವಿಕೃತಿಗಳಿಗೆ ಬಹುಶಃ ಕಾರಣವಿದ್ದಿರಬಹುದು. ಆ ನಾಗರಿಕತೆಯನ್ನು ರೂಪಿಸಿದ ಜನಪದ, ಲೋಕವೆಂದರೆ ತಾನೇ ಎಂದು ಆಗ ನಂಬಿಕೊಂಡಿತ್ತು. ಉಳಿದೆಲ್ಲ ಭೂಭಾಗವು ತನ್ನ ಸಾಧನೆಗೆ ಮೀಸಲಾಗಿರುವ ಸಂಪನ್ಮೂಲ ಮಾತ್ರ ಎಂದು ನಂಬಿಕೊಂಡಿತ್ತು.

ಸ್ವಾತಂತ್ರ್ಯ ಸಮಾನತೆಗಳು ಒಂದು ದ್ವಂದ್ವ. ಪರಸ್ಪರ ವಿರುದ್ಧವಾಗಿ ಕಾಣಿಸಿಯೂ ಮೂಲತಃ ಒಂದೇ ಆಗಿರುವಂಥವು. ಆ ದ್ವಂದ್ವವನ್ನು ಏಕಕಾಲದಲ್ಲಿ ಏಕತ್ರ ಗ್ರಹಿಸಿ ತೋಲನವನ್ನು, ಸಮತ್ವವನ್ನು ಸಾಧಿಸಿಕೊಳ್ಳಬೇಕಾಗುತ್ತದೆ. ಸಮತ್ವ ಕೊಂಚ ತಪ್ಪಿದರೂ ಸಾಕು, ಎರಡೂ ಮೌಲ್ಯಗಳು ನಾಶವಾಗಿ ಹೋಗುತ್ತವೆ. ಸ್ವಾತಂತ್ರ್ಯ ಸಮಾನತೆಗಳನ್ನು ಕೊರಳೆತ್ತಿ ಉದ್ಘೋಷಿಸಿದ ವಿಜ್ಞಾನ ನಾಗರಿಕತೆಯು ಕ್ರಮೇಣ ಅವೆರಡನ್ನೂ ಕಳೆದುಕೊಳ್ಳುತ್ತ ನಡೆದಿರುವುದನ್ನು ಕಾಣುತ್ತೇವೆ.

ವಿಜ್ಞಾನ ನಾಗರಿಕತೆಯು ಒಂದು ಬಣ (ಬಂಡವಾಳ ಆಧಾರಿತ–ಸ್ವತಂತ್ರ) ಸ್ವಾತಂತ್ರ್ಯಕ್ಕೆ ಒತ್ತುಕೊಟ್ಟಿತು. ಇನ್ನೊಂದು ಬಣ (ಶ್ರಮಗಾರ ಕೇಂದ್ರಿತ–ಸಮಾನತೆ) ಸಮಾನತೆಗೆ ಒತ್ತುಕೊಟ್ಟಿತು. ಆದರೆ ಈಗ ನೋಡುವಾಗ, ಎರಡೂ ಬಣದ ಜನತೆ ಸ್ವಾತಂತ್ರ್ಯ – ಸಮಾನತೆಗಳೆರಡನ್ನೂ ನಾಶಪಡಿಸಿಕೊಂಡಿರುವುದನು ಕಾಣುತ್ತೇವಲ್ಲವೆ ? ಸ್ವತಂತ್ರ ಬಣದಲ್ಲಿ ಅತಿಕೇಂದ್ರಿತ ಬಂಡವಾಳಶಾಹಿ ಉದ್ಯಮ ಸಂಘಟನೆಯು ಜನರ ಉಡುಗೆ ತೊಡುಗೆ ಅನ್ನಾಹಾರಗಳಿಂದ ಹಿಡಿದು ಸಮಸ್ತವನ್ನೂ ಕ್ಲುಪ್ತವಾಗಿ ನಿಯಂತ್ರಿಸುತ್ತ ಅವರನ್ನು ಅತಿದಾಸ್ಯಕ್ಕೆ ತಳ್ಳಿದೆ. ಸಮಾನತೆಯ ಬಣದಲ್ಲಿ

ಅತಿಕೇಂದ್ರಿತ ಅಧಿಕಾರಶಾಹಿ ಆಡಳಿತ ಸಂಘಟನೆಯು ಜನರನ್ನು ಅತಿ ಅಸಮಾನತೆಗೆ ತಳ್ಳಿದೆ. ಎರಡೂ ಬಣಗಳೂ ಪ್ರಜಾಪ್ರಭುತ್ವ ಜನಪ್ರಭುತ್ವಗಳ ಮಾತು ಜಪಿಸುತ್ತ ತದ್ವಿರುದ್ಧವಾದ ದಾರಿಯಲ್ಲಿ ಧಾವಿಸುತ್ತಿವೆ.

ನಮ್ಮ ಬಹುದೊಡ್ಡ ಚಿಂತಕ, ರಾಜಕೀಯ ಕ್ರಿಯಾವಂತ ರಾಮಮನೋಹರ ಲೋಹಿಯಾ ಹೇಳುತ್ತಿದ್ದರು. "ನಮಗೆ, ತೃತೀಯ ಜಗತ್ತಿಗೆ ವಿಜ್ಞಾನ ನಾಗರಿಕತೆಯ ಎರಡು ಬಣಗಳೂ ನಿರುಪಯುಕ್ತ, ಅಯೋಗ್ಯ" ಎಂದು. ತಮ್ಮ ಆಡಳಿತ ವ್ಯವಸ್ಥೆಯಲ್ಲಿ ಇವು ಪರಸ್ಪರ ತೀರ ಭಿನ್ನವೆನ್ನುವಂತೆ ಕಂಡರೂ ಅಂತಿಮವಾಗಿ ಅವುಗಳ ಲಕ್ಷ್ಯ ಒಂದೇ –ಅಭಿವೃದ್ಧಿ. ಅವರ ಕಲ್ಪನೆಯಲ್ಲಿ ಅಭಿವೃದ್ಧಿಯೆಂದರೆ ಮನುಷ್ಯನ ಸುಖ, ಸೌಕರ್ಯ, ಭೋಗಗಳನ್ನು ಗುಣಿತದಲ್ಲಿ ವೃದ್ಧಿಗೊಳಿಸಿಕೊಳ್ಳುತ್ತ ರೇಖಾಗತಿಯಲ್ಲಿ ಮುಂದೆ ಹೋಗುತ್ತಲೇ ಇರುವುದು. ಆಯ್ತು. ಈ ಗುಣಾಕಾರ ನಾಗರಿಕತೆ ಮನುಷ್ಯನನ್ನು ಯಾವ ಸಿದ್ಧಿಗೆ ಒಯ್ಯುತ್ತದೆ ? ಅತಿಶಯ ಸಿದ್ಧಿಯೇ ಮನುಷ್ಯನಿಗೆ ಸಾಧ್ಯವಿರುವ ಮತ್ತು ಅಪೇಕ್ಷಣೀಯವಾದ ಅಂತಿಮ ಸಿದ್ಧಿಯೆ ? ಈ ವೃದ್ಧಿಗೂ ಒಂದು ಕೊನೆಯಿರಬೇಕಲ್ಲ ? ಮನುಷ್ಯನ ಆಸೆ ಆಕಾಂಕ್ಷೆಗಳಿಗೆ ಮಿತಿಯಿಲ್ಲ. ಆದರೆ, ಜಗತ್ತಿನ ಸಂಪನ್ಮೂಲಗಳಿಗೆ ಮಿತಿಯಿದೆಯಲ್ಲವೆ ? ಮತ್ತು ಈ ಥರದ ಪ್ರಗತಿಗೆ ಪ್ರಚೋದನೆ ಸಿಕ್ಕುವುದು ಹಾಗೂ ಇದನ್ನು ಅಳೆಯಲು ಸಾಧ್ಯವಾಗುವುದು ಪರಸ್ಪರ ಸ್ಪರ್ಧೆಯ ಮೂಲಕವೇ. ಸ್ಪರ್ಧೆಯು ಅತ್ಯನಿವಾರ್ಯವಾಗಿ ಅಸೂಯೆ, ದ್ವೇಷ, ಹಿಂಸೆಗಳನ್ನು ಹುಟ್ಟಿಸುತ್ತದೆ.

ದಾರಿತಪ್ಪಿದ ವಿಜ್ಞಾನ ನಾಗಕರಿಕತೆ–ಅದರ ಎರಡೂ ಬಣಗಳೂ–ಅಸೂಯೆ, ದ್ವೇಷ ಹಿಂಸೆಗಳನ್ನು ಬೆಳೆಸಿ ಜಗತ್ತನ್ನು ಸದಾ ಯುದ್ಧ ಸನ್ನದ್ಧವನ್ನಾಗಿ ಮಾಡಿಟ್ಟಿದೆ. ಮನುಷ್ಯನ ದುರಾಶೆಗಳನ್ನು ಪೋಷಿಸಿ ಆತನನ್ನು ಯಂತ್ರನಾಗರಿಕತೆಯ ಅಥವಾ ಸರಕು ಸಂಸ್ಕೃತಿಯ ದಾಸ್ಯದಲ್ಲಿ ಭದ್ರವಾಗಿ ಬಂಧಿಸಿಬಿಟ್ಟಿದೆ. ಅಧಿಕಾರ, ಸಂಪತ್ತುಗಳ ಕೇಂದ್ರೀಕರಣ, ಸಂಯಮವಲ್ಲದ ಅತಿಯಾಸೆ ಇವು ಪ್ರಾಯಶಃ ವಿಜ್ಞಾನನಾಗರಿಕತೆಯ ಸ್ವಯಮುತ್ಪಾದಿತ ನಾಶಬೀಜಗಳಾಗಿವೆ.

ಈ ಹಂತದಲ್ಲಿ ತೃತೀಯ ಜಗತ್ತಿನ ಚಿಂತನೆ, ಪ್ರಯೋಗಗಳು ಮುಖ್ಯವಾಗಬಹುದು. ಉದಾಹರಣೆಗೆ–ಎಂಗೆಲ್ಸ್‌ನಂಥ ಮಹಾಚಿಂತಕ ಕೂಡ ಮನುಷ್ಯನ ಪ್ರಗತಿಗೆ ಕೆಲವೊಮ್ಮೆ ಆತನ ದುರಾಕಾಂಕ್ಷೆಗಳೇ ಕಾರಣವಾಗಿರಬಹುದು ಎಂದು ಅನುಮಾನಿಸುತ್ತಾನೆ. ಆದರೆ, ನಮಗೆ ಇಂಡಿಯಾದವರಿಗೆ, 'ಆಸೆಯೇ ದುಃಖಕ್ಕೆ ಮೂಲ' ಎಂದು ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಪ್ರತಿಪಾದಿಸಿದ ಬುದ್ಧ ಜೀವನ ಮಾತು ಮತ್ತು ಹಿಂದು ಸಂಸ್ಕೃತಿ ಪ್ರತಿಪಾದಿಸಿದ ಸಂಯಮ ಮುಂತಾದವು

ಇನ್ನೂ ಪೂರ್ತಾ ಮರೆತಿಲ್ಲ. ಜನರು ಹಳ್ಳಿಹಳ್ಳಿಯ ಸ್ವಯಮಾಡಳಿತ ವ್ಯವಸ್ಥೆಯಲ್ಲಿ ಹೆಚ್ಚು ಸ್ವತಂತ್ರರಾಗಿ ಬದುಕುತ್ತಿದ್ದರೆಂಬುದು ಮರೆತಿಲ್ಲ. ಈ ಪರಂಪರೆಯ ವಿವೇಕ ದಿಂದ ನಾವು ವಿಜ್ಞಾನ ಯಂತ್ರಜ್ಞಾನಗಳನ್ನು ನಮ್ಮ ಪ್ರಯೋಜನಕ್ಕೆ ಪಳಗಿಸಿ ಕೊಳ್ಳಲು ಪ್ರಾಯಶಃ ಹೆಣಗುತ್ತಿದ್ದೇವೆ. ತೃತೀಯ ಜಗತ್ತಿನ ಇಂಥ ಪ್ರಯೋಗಗಳಿಗೆ ಮಹಾತ್ಮಾ ಗಾಂಧಿ ಪರಳುಗಟ್ಟಿದ ಅಭಿವ್ಯಕ್ತಿಯಾಗಿ ಬಂದರು.

ಗಾಂಧೀಜಿ ಸರ್ವತ್ರ ವಿಕೇಂದ್ರೀಕರಣ ಮತ್ತು ಆಸೆಯ ಸಂಯಮ ಇವುಗಳನ್ನು ಕೇಂದ್ರವಾಗಿ ಪರಿಗಣಿಸಿದರು. ಪರಸ್ಪರ ಸ್ಪರ್ಧೆಗೆ ಬದಲಾಗಿ ಪ್ರೀತಿ, ಸಹಕಾರಗಳನ್ನು ಪ್ರತಿಪಾದಿಸಿದರು. ಅಭಿವೃದ್ಧಿ ಅಥವಾ ಪ್ರಗತಿಯೆನ್ನುವುದನ್ನು ರೇಖಾಗತಿಯಾಗಿ ಪರಿಗಣಿಸಲಿಲ್ಲ; ಬದಲು, ಒಬ್ಬೊಬ್ಬ ವ್ಯಕ್ತಿಯೂ ತನ್ನ ಮಿತಿಯಲ್ಲಿ ಇಡೀ ಅರಳಿ-ಕೊಳ್ಳುತ್ತ ಅಂತಿಮವಾಗಿ ಇಡೀ ಜನಪದ ತನ್ನ ಕಾಲ ದೇಶಗಳ ಚೌಕಟ್ಟಿನಲ್ಲಿ ಸಂಪೂರ್ಣ ಅರಳಿಕೊಳ್ಳುವುದೇ ಪ್ರಗತಿಯೆಂದು ಪ್ರತಿಪಾದಿಸಿದರು. ಆ ಪ್ರಕ್ರಿಯೆಯನ್ನು 'ಸರ್ವೋದಯ' ಎಂದು ಸಂಕೇತಿಸಿದರು.

ನಮ್ಮ ಸಂಸ್ಕೃತಿಯ ಶತಶತಮಾನದ ಜಾತಿ ವೈಷಮ್ಯದ ಕತ್ತಲಗರ್ಭದಿಂದ ಸೀಳಿಕೊಂಡು ಬಂದ ನರಸಿಂಹವ್ಯಕ್ತಿ ಡಾ|| ಅಂಬೇಡ್ಕರ್. ರಾಷ್ಟ್ರದ ಹೊಸ ರಾಜ್ಯಾಂಗ ವನ್ನು ರೂಪಿಸಲಿಕ್ಕೆ ನಮ್ಮ ಜನ ಅವರಿಗೆ ನಾಯಕತ್ವ ಕೊಟ್ಟರು. ನಮ್ಮ ಕರ್ನಾಟಕದಲ್ಲಿ ತೀರ ಸಾಮಾನ್ಯರಿಂದ ಮೇಲೆದ್ದು ಬಂದ ಗೋಪಾಲಗೌಡ ಎನ್ನುವವರು. ಅಷ್ಟಾಗಿ ಇಂಗ್ಲೀಷ್ ಕೂಡ ಬಲ್ಲವರಲ್ಲ. ಕರ್ನಾಟಕದ ಹೊರಗೆ ಹೋಗಿದ್ದೂ ಅಪರೂಪ. ತನ್ನ ಸ್ಥಳದಲ್ಲೇ ಅಲ್ಲಿದ್ದ ಕೃಷಿ ಗೇಣಿದಾರರನ್ನು ಸಂಘಟಿಸಿ ರಾಷ್ಟ್ರಕ್ಕೇ ಮಹತ್ವದ್ದೆನಿಸಿದ ಪ್ರಕ್ರಿಯೆಯೊಂದನ್ನು ಪ್ರಾರಂಭಗೊಳಿಸಿದರು. ನಮ್ಮ ರಾಜ್ಯ ಅವರನ್ನೇ ಅತ್ಯಂತ ಶ್ರೇಷ್ಠ ನಾಯಕನೆಂದು ಪರಿಗಣಿಸುತ್ತದೆ. ರಾಜಕಾರಣದಲ್ಲಿ ನಾವು ಹೊಸ ದಾರಿ ಕಂಡುಕೊಳ್ಳುತ್ತಿರುವುದಕ್ಕೆ ಇವೆಲ್ಲ ಸಾಕ್ಷಿಗಳು.

ಇಂಡಿಯಾ ಮಾತ್ರವಲ್ಲ, ತೃತೀಯ ಜಗತ್ತಿನ ಎಲ್ಲಾ ಭಾಗಗಳಲ್ಲಿ ಬೇರೆ ಬೇರೆ ಅಸಂಖ್ಯಾತ ಕ್ಷೇತ್ರಗಳಲ್ಲಿ ಮೂಲೆಮೂಲೆಗಳಲ್ಲಿ ಇಂಥ ಪ್ರಯೋಗವು ವಿವಿಧ ಹಂತ ಗಳಲ್ಲಿ ನಡೆದಿದೆ ಎನ್ನುವುದು ನನ್ನ ನಂಬಿಕೆ. ಚೀನಾದ ನಾಯಕ ಮಾವೊತ್ಸೆ ತುಂಗ್ ಸೋವಿಯೆತ್ ಬಣದ ರಾಜಕೀಯ ಸಿದ್ಧಾಂತಗಳನ್ನು ಒಪ್ಪಿಕೊಂಡಿದ್ದರು. ಆದರೂ ಅವರು ವಿಶೇಷವಾಗಿ ಶ್ರಮಿಸಿದ್ದು ಸರಕು ಸಂಸ್ಕೃತಿಗೆ ಪರ್ಯಾಯವಾಗಿ ಸಮಸ್ತರಿಗೂ ಲಭ್ಯವಾಗಬಲ್ಲ ಸರಳ ಜೀವನಕ್ರಮವನ್ನು ರೂಪಿಸಲಿಕ್ಕಾಗಿ.

ನಮ್ಮ ಸಹೋದರ ರಾಷ್ಟ್ರವಾದ ನಿಮ್ಮ ಫಿಲಿಫಿನ್ಸ್ ಪಶ್ಚಿಮಕ್ಕಿಂತ ಭಿನ್ನವಾದ ಹೊಸ ಪ್ರಜಾಪ್ರಭುತ್ವ ಪದ್ಧತಿಯನ್ನು ರೂಪಿಸಿಕೊಳ್ಳಲು ಹಲವು ಬಗೆಯ ಪ್ರಯತ್ನ ನಡೆಸಿರುವುದನ್ನೂ, ಮುಖ್ಯವಾಗಿ, ನಿಮ್ಮ ಗ್ರಾಮಾಡಳಿತ (ಬರಾಂಗ್ ಕೌನ್ಸಿಲ್)

ಪ್ರಯೋಗಗಳನ್ನು ನಾನು ಕೇಳಿದ್ದೇನೆ. ನಮ್ಮಲ್ಲಿ ಕೂಡ, ಪ್ರಾಥಮಿಕ ಆಡಳಿತ ಘಟಕವಾಗಿ ಗ್ರಾಮಪಂಚಾಯಿತಿಗಳನ್ನು ಸ್ಥಾಪಿಸಿ ರಾಜಕೀಯದಲ್ಲಿ ಆತ್ಯಂತಿಕ ವಿಕೇಂದ್ರೀಕರಣವನ್ನು ಸಾಧಿಸುವ ಪ್ರಯತ್ನಗಳು ಪ್ರಾರಂಭವಾಗಿವೆ. ನಮ್ಮ ಹಳೆಯ ಗ್ರಾಮಪಂಚಾಯಿತಿಗಳು ಆಡಳಿತದ ಘಟಕಗಳಾಗಿ ಮತ್ತು ನಾವು ಹೊಸದಾಗಿ ತಂದು ಕೊಂಡ ಪಾರ್ಲಿಮೆಂಟ್ ರಾಷ್ಟ್ರೀಯ ಸಹಕಾರ ಘಟಕವಾಗಿ ಎರಡೂ ಒಗ್ಗೂಡಿಕೊಂಡು ಒಂದು ಹೊಸ ಬಗೆಯ ಆಡಳಿತ ವ್ಯವಸ್ಥೆಯನ್ನು ರೂಪಿಸುವುದು ಸಾಧ್ಯವಾದೀತೆ ಅರ್ಥಾತ್, ಆಡಳಿತದ ವಿಕೇಂದ್ರೀಕರಣ ಮತ್ತು ಸಹಕಾರದ ಕೇಂದ್ರೀಕರಣಗಳನ್ನು ಸಾಧಿಸಲಿಕ್ಕಾದೀತೆ ಎಂದು ನಾನು ಆಸೆಯಿಂದ ನಿರೀಕ್ಷಿಸುತ್ತೇನೆ.

ಒಟ್ಟಿನಲ್ಲಿ, ಈ ಇಡೀ ಪ್ರಕ್ರಿಯೆಯನ್ನು ಹೀಗೆ ಹೇಳಬಹುದು : ನಮ್ಮ ನಮ್ಮ ವಿವಿಧ ಪರಂಪರೆಯ ಗತಿ (ಥೆಸಿಸ್) ವಿಜ್ಞಾನಸಂಸ್ಕೃತಿಯ ವಿಗತಿ (ಆಂಟಿ ಥೆಸಿಸ್) ಯೊಡನೆ ಸಂಘರ್ಷಿಸಿ ಹೊಸ ಸಂಗತಿ(ಸಿಂಥೆಸಿಸ್)ಯನ್ನು ಸೃಜಿಸುವ ಪ್ರಕ್ರಿಯೆ ಇದು ಎನ್ನಬಹುದು.

ನಮ್ಮ ರಾಷ್ಟ್ರದ ಒಂದು ಮೂಲೆಯ ಬಹುಪುಟ್ಟ ಹಳ್ಳಿಯೊಂದರಲ್ಲಿ ಅಲ್ಲಿನ ಜನ ನಡೆಸಿರುವ ಪುಟ್ಟದೊಂದು ಪ್ರಯೋಗವನ್ನು ಹುಡುಕಿ ಕಂಡು ಅದಕ್ಕೆ ನನ್ನ ಹೆಸರಲ್ಲಿ ಈಗ ಪ್ರಶಸ್ತಿ ನೀಡುತ್ತಿದ್ದೀರಲ್ಲ, ಇದು ಪ್ರಾಯಶಃ, ತೃತೀಯ ಜಗತ್ತಿನ ಹೊಸ ಸಂಗತಿ(ಸಿಂಥೆಸಿಸ್)ಯ ಪ್ರಕ್ರಿಯೆಗೆ ಸಂದ ಪ್ರಶಸ್ತಿ.

ಮೇಲಿನ ಕೆಲವು ಮಾತುಗಳನ್ನು ಹೇಳುತ್ತಿದ್ದ ಹಾಗೆ, ಅವೇ ಮಾತುಗಳು ಇನ್ನೊಂದು ಮುಖದಿಂದ ನನ್ನನ್ನು ಅಣಕಿಸಿ ತಿಂದು ಕಾಡುತ್ತಿವೆ, ಅದನ್ನೂ ಹೇಳಿ ಕೊಳ್ಳಬೇಕು. ಇಂಡಿಯಾದ ಅಥವಾ ತೃತೀಯ ಜಗತ್ತಿನ ಇವತ್ತಿನ ದೈನಂದಿನ ಜೀವನದಲ್ಲಿ ವಾಸ್ತವವಾಗಿ ಕಾಣುತ್ತಿರುವುದೇನು ? ನಾವೆಲ್ಲ ಏನನ್ನು ಅನುಭವಿಸು ತ್ತಿದ್ದೇವೆ ? ಹಣ, ಅಧಿಕಾರ ಲಾಲಸೆ, ಭ್ರಷ್ಟಾಚಾರ, ಅಮಾನವೀಯತೆ–ಕೇವಲ ಇವೇ. ಒಂದೇ ಮಾತಿನಲ್ಲಿ ಹೇಳುವುದಾದರೆ ನಾವೆಲ್ಲರೂ ಇವತ್ತು ನಮ್ಮ ನೆಲವನ್ನು ಅಸಹ್ಯ ನರಕವನ್ನಾಗಿ ಮಾಡಿಕೊಂಡು ಅಮಾನವೀಯವಾಗಿ ಬದುಕುತ್ತಿದ್ದೇವೆ. ತೀರ ಎದುರಿನ ಈ ವಾಸ್ತವದ ಜತೆ ನಮ್ಮ ಸಮಸ್ತ ತತ್ತ್ವವನ್ನೂ ಬಳಸಿ ಹೋರಾಡ ಬೇಕಾದ್ದು ನಮ್ಮ ಪ್ರಪ್ರಥಮ ಕರ್ತವ್ಯವಾಗಿದೆ. ಅದನ್ನು ಕೊಂಚ ಮರೆತರೂ ನಮ್ಮ ದೇಶಗಳಿಗೆ ಭವಿಷ್ಯವೆಂಬುದೇ ಇಲ್ಲ. ಹಾಗೆ ಹೋರಾಡುವಾಗ, ಈ ನಮ್ಮ ನರಕ ಜೀವನದ ಆಳದ ಸ್ತರದಲ್ಲಿ ಮೇಲೆ ಹೇಳಿದ ಸೃಜನಪ್ರಕ್ರಿಯೆಯೊಂದು ಸುವರ್ಣರೇಖೆ ಯಂತೆ ಮಿಂಚುತ್ತಿರುವುದನ್ನು ಗಮನಿಸದೆ ಹೋಗಬಾರದು. ಒಂದನ್ನು ಮರೆತರೆ ನಾವು ಭೋಳೆಗಳಾಗುತ್ತೇವೆ; ಇನ್ನೊಂದನ್ನು ಮರೆತರೆ ಬರೀ ಸಿನಿಕರಾಗುತ್ತೇವೆ.

ಮೇ–ಜೂನ್ ೧೯೯೧/೪೧

ಹಾಗೆ ಭವಿಷ್ಯದಲ್ಲಿ ಭರವಸೆ ಕಂಡುಕೊಂಡು ಅದರ ಸಾಧನೆಗಾಗಿ ಕಲುಷಿತ ವರ್ತಮಾನದಲ್ಲಿ ತೀವ್ರವಾದ ಹೋರಾಟ ನಡೆಸಿದಂಥವರಿಗೇ ಹೆಚ್ಚಾಗಿ ನಿಮ್ಮ ಗೌರವಯುತ ಪ್ರಶಸ್ತಿ ಈ ಹಿಂದೆ ಸಂದಿದೆ; ಆದರಿಂದಾಗಿ ಈ ಪ್ರಶಸ್ತಿ ನಮ್ಮ ಹೊಸ ನಾಯಕತ್ವವನ್ನು ರೂಪಿಸುತ್ತಿದೆ, ನಿರ್ದೇಶಿಸುತ್ತಿದೆ.

ಮ್ಯಾಗ್‌ಸೆಸೆ ಪ್ರಶಸ್ತಿಯನ್ನು ನೊಬೆಲ್ ಬಹುಮಾನಕ್ಕೆ ಹೋಲಿಸಿ, ಇದು ಏಷ್ಯಾದ ನೊಬೆಲ್ ಬಹುಮಾನ ಎಂದು ಹೆಸರಿಸುವುದುಂಟು. ನೊಬೆಲ್ ಬಹುಮಾನ ನೀಡುವುದು ಹೆಚ್ಚಾಗಿ ಯಾವುದೊಂದು ಕ್ಷೇತ್ರದಲ್ಲಿ ಯಾವನೊಬ್ಬ ವ್ಯಕ್ತಿ ಸಾಧಿಸಿದ ಪರಮಶ್ರೇಷ್ಠತೆಗಾಗಿ. ಆದರೆ ಮ್ಯಾಗ್‌ಸೆಸೆ ಪ್ರಶಸ್ತಿಯು, ನೊಬೆಲ್‌ಗೆ ಪರ್ಯಾಯ ವಾಗಿ, ಯಾವುದೊಂದು ಸಾಧನೆಯ ಮಾರ್ಗವನ್ನು ಅವರ ಸಾಮಾಜಿಕ ವ್ಯಾಪ್ತಿಯನ್ನು ಹೆಚ್ಚಾಗಿ ಪರಿಗಣಿಸುತ್ತದೆ ಎಂದು ನನ್ನ ಅನಿಸಿಕೆ.

ಹಿಂದೆ ಈ ಪ್ರಶಸ್ತಿ ಪಡೆದುಕೊಂಡ ನಮ್ಮ ದಿ॥ ಕಮಲಾದೇವಿ ಚಟ್ಟೋಪಾಧ್ಯಾ ಯರನ್ನೇ ತೆಗೆದುಕೊಳ್ಳಿ. ಅವರು ಯಾವುದೋ ಒಂದು ಕ್ಷೇತ್ರದಲ್ಲಿ ಪರಮಶ್ರೇಷ್ಠತೆ ಯನ್ನು ಸಾಧಿಸಿದವರಲ್ಲ. ಅವರಿಗಿಂತ ಮಿಗಿಲಾದ ರಾಜಕಾರಣಿ, ಸಮಾಜಸುಧಾರಕಿ, ಕಲಾವಿದೆ, ಸಂಘಟನಕಾರ್ತಿ ಇತ್ಯಾದಿ ಬೇಕಷ್ಟಿದ್ದರು. ಆದರೆ ಈ ಎಲ್ಲಾ ಒಗ್ಗೂಡಿರುವ ವ್ಯಕ್ತಿ ಮತ್ತು ತನ್ನ ಸಮಸ್ತವನ್ನೂ ಪ್ರಸ್ತುತ ಸಮಾಜಕ್ಕೆ ಸಂಬದ್ಧಗೊಳಿಸಿದ ವ್ಯಕ್ತಿ ಇನ್ನೊಬ್ಬರಿಲ್ಲ. ಶತಮಾನಗಳ ಕಾಲ ಇಂಡಿಯಾದ ಕವಿಗಳು ಕಲಾವಿದರು ಯಾವ ಧೀರ ಸುಂದರ ಪ್ರೇಮಲ ಸ್ತ್ರೀಮೂರ್ತಿಯನ್ನು ತಮ್ಮ ಕನಸಿನಲ್ಲಿ ತಿದ್ದಿತಿದ್ದಿ ರೂಪಿಸಿದರೋ ಅದು ಜೀವಗೊಂಡು ಬಂದವರು ಆಕೆ.

ಈ ಪ್ರಶಸ್ತಿ ಪಡೆದ ಜಾಪಾನಿನ ಪುಕುವೊಕ ಕೃಷಿಕಾರರು. ನನ್ನ ವೃತ್ತಿಯೂ ಕೃಷಿಯೇ. ನಾನು ಅವರ ಸಹೋದ್ಯೋಗಿ ಎನ್ನುವುದು ನನಗೆ ಹೆಮ್ಮೆ ಪಾಶ್ಚಾತ್ಯ ವಿಜ್ಞಾನನಾಗರಿಕತೆಯಲ್ಲಿ ಅವರು ಒಬ್ಬ ಶ್ರೇಷ್ಠ ಕೃಷಿವಿಜ್ಞಾನಿಯಾಗುತ್ತಿದ್ದರೇನೋ. ಆದರೆ ಪೌರ್ವಾತ್ಯ ಸಂಸ್ಕೃತಿಯಲ್ಲಿ ಅವರು ತಾತ್ತ್ವಿಕರಾದರು; ಕೃಷಿಯ ಉದ್ಯೋಗದಲ್ಲಿ ವಿಶ್ವ ಉದ್ಯೋಗವನ್ನು ಸಾಕ್ಷಾತ್ಕರಿಸಿಕೊಂಡ 'ಋಷಿ'ಯಾದರು.

ಹೀಗೆ, ಈ ಪ್ರಶಸ್ತಿಯು ಪಶ್ಚಿಮದ ವಿಜ್ಞಾನದೃಷ್ಟಿಗೆ ಪರ್ಯಾಯವಾದ ಸಮ್ಯಕ್‌ದೃಷ್ಟಿಯೊಂದನ್ನು ಹುಡುಕಲು, ಹುಡುಕಿ ಗುರುತಿಸಲು, ಗುರುತಿಸಿ ಹೊಗಳಲು ಮೀಸಲಾಗಿದೆ.

ಏಷ್ಯಾದಲ್ಲಿ ಪಶುಪಕ್ಷಿಗಳನ್ನು ಮೊತ್ತಮೊದಲಿಗೆ ಕಿತ್ತೆಸೆದ ನಿಮ್ಮ ಧೀರ ಜನತೆಗೂ ಬೆಳಿಗ್ಗೆ ಪ್ರಪ್ರಥಮವಾಗಿ ಸೂರ್ಯಕಿರಣಗಳನ್ನು ಮೈದುಂಬಿಕೊಳ್ಳುವ ನಿಮ್ಮ ನೆಲ–ಕಾಡು–ಕಡಲುಗಳಿಗೂ ತಲೆಬಾಗಿ ನಮಸ್ಕರಿಸಿ ಈ ಪ್ರಶಸ್ತಿಯನ್ನು ಸ್ವೀಕರಿಸುತ್ತೇನೆ.

ಮಾನವ ಜನ್ಮ ದೊಡ್ಡದು....?

⊕ ಡಾ|| ಕೆ. ಶಿವರಾಮ ಕಾರಂತ

'ಮಾನವ ಜನ್ಮ ದೊಡ್ಡದು'–ಈ ಮಾತನ್ನು ತನಗೆ ತಾನೇ ಹೇಳಿಕೊಂಡವನು ಮಾನವನೇ ಎಂಬುದರಿಂದ, ಅದರಲ್ಲಿ ಆತ್ಮಸ್ತುತಿ ಬಲುಮಟ್ಟಿಗೆ ಸೇರಿಕೊಂಡಿರಬೇಕು. ಈ ಮಾನವರೆಂಬ ಪ್ರಾಣಿವರ್ಗ ಭೂಮಿಯ ಜೀವಿಗಳ ಇತಿಹಾಸದಲ್ಲಿ ತೀರಾ ಈಚೆಗೆ ಕಾಣಿಸಿಕೊಂಡದ್ದು. ಭೂಮಿಯ ಜೀವಿಗಳ ಸಮಗ್ರ ಇತಿಹಾಸವನ್ನು ಒಂದು ದಿನದ ಕಾಲಾವಧಿಗೆ ಹೋಲಿಸಿದರೆ ಅದರಲ್ಲಿ ಅವನು ಇಪ್ಪತ್ತಮೂರನೇ ತಾಸಿನ ಐವತ್ತೊಂಬತ್ತನೇ ನಿಮಿಷದಲ್ಲಿ ಕಾಣಿಸಿಕೊಂಡಂಥ ಒಂದು ಜೀವ ಪ್ರಕಾರ. ಆತನ ಇಂದಿನ ರೂಪ ಅಂದಿನ ಆದಿ ಕಪಿವರ್ಗದಿಂದ ವಿಕಾಸಗೊಳ್ಳುವುದಕ್ಕೇನೇ ಹದಿನೈದೋ ಇಪ್ಪತ್ತೋ ಮಿಲಿಯ ವರ್ಷಗಳು ಸಂದಿವೆ. ಹಾಗಿರುವಾಗ ಜೀವನ ಪ್ರವಾಹದ ಪ್ರಾಮುಖ್ಯತೆಯ ದೃಷ್ಟಿಯಿಂದಲಾಗಲಿ, ಇದೇ ಭೂಮಿಯ ಇತಿಹಾಸದ ದೃಷ್ಟಿಯಿಂದಲಾಗಲೀ ಅವನ ಸ್ಥಾನ ಹಿರಿದು ಆಗದು. ಹಾಗಿದ್ದರೂ ಈ ಮಾತನ್ನು ನಾವು ಆಗಾಗ ಎತ್ತಿಕೊಳ್ಳುತ್ತೇವೆ. ಅದಕ್ಕೇನು ಕಾರಣ ? ಒಂದು ಮುಖ್ಯ ಕಾರಣ ಸಸ್ಯಗಳೇ ಆಗಲಿ, ಅನ್ಯಜೀವಿಗಳೇ ಆಗಲಿ, ಇಂಥ ಒಂದು ಪ್ರಶ್ನೆಯನ್ನು ಎಂದಾದರೂ ತಮಗೆ ತಾವು ಕೇಳಿಕೊಂಡಿರಬಹುದೇ ಎಂಬ ಊಹೆಗೂ ಅವಕಾಶವಿಲ್ಲ. ಅವು ಸಹ ತಮ್ಮ ಚಿಂತನೆ, ಸ್ಮರಣೆ, ಅನುಭವಗಳನ್ನು ಬಳಸಿಕೊಳ್ಳಬಲ್ಲ ಸಾಮರ್ಥ್ಯವನ್ನು ಪಡೆದ ಜೀವಿಗಳು. ತಮ್ಮ ಸುತ್ತಲಿರುವ ವಿಶಾಲ ಜಗತ್ತನ್ನು ನೋಡಿ ಅವು ಏನೆಂದು ಯೋಚಿಸಿರಬಹುದು ? ಅವುಗಳೊಡನೆ ಹೇಗೆ ಹೊಂದಿರಬಹುದು ? ಆದರೆ ಮನುಷ್ಯರಾದ ನಾವು ಅವನ್ನು ಕುರಿತು ಊಹಿಸಬಹುದು, ತರ್ಕಿಸಬಹುದು.

ಹಿಂದಿನ ಒಂದೆರಡು ಲಕ್ಷ ವರ್ಷಗಳ ಅವಧಿಯಲ್ಲಿ ಆಫ್ರಿಕಾ ಖಂಡದ ಸೂಡಾನ್ ಮತ್ತು ಅಬಿಸೀನಿಯಾಗಳಲ್ಲಿ ವಿಕಸಿಸಿದ ಮಾನವನ ಕುಲ ಅತಿ ಶೀತವಲಯದಿಂದ ಕಡು ಉಷ್ಣವಲಯಗಳವರೆಗೆ ಭೂಮಿಯ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ನಡೆದೇ ಹೋಯಿತು. ಹೋದಲ್ಲೆಲ್ಲಾ ಬದುಕಿ ಬಾಳಿ ಉಳಿಯಿತು. ದಕ್ಷಿಣ ಧ್ರುವ ವಲಯವನ್ನು ಬಿಟ್ಟರೆ, ಮಿಕ್ಕೆಲ್ಲಾ ಭೂಖಂಡಗಳ ತನಕ ಸಂಚರಿಸಿ, ವಾಸಿಸಿ ತನ್ನ

ಸಂತಾನವನ್ನು ಹೆಚ್ಚಿಸಿಕೊಂಡ ಜಿಗುಟು ಜೀವ ಮಾನವನದ್ದು. ಅವನಷ್ಟೇ ಅಲ್ಲದೇ ಹೋದರೂ, ಕೆಲವೊಂದು ಪಕ್ಷಿ ಪೂರ್ವಜರು, ಪಶು ಪೂರ್ವಜರು ಸಹ ಯಾವತ್ತೂ ಭೂಖಂಡಗಳಲ್ಲಿ ಹಬ್ಬಿರುವುದನ್ನು ಕಾಣುತ್ತೇವೆ. ಹಾಗೆ ಹಬ್ಬಿದ ಅನ್ಯಜೀವಿಗಳ ನಡುವೆ ಸಮರ್ಥ ಹೋರಾಟವನ್ನು ನಡೆಯಿಸಿ ತಮ್ಮ ಕುಲವನ್ನು ಅವೂ ಉಳಿಸಿ ಕೊಂಡಿವೆ. ಅವು ಸಹ ಮಾನವನಂಥ ಸಾಹಸಿಗಳೇ.

ಹಾಗಿದ್ದರೆ ಮಾನವನ ಹೆಚ್ಚಳ ಇಲ್ಲವೇ ಹಿರಿಮೆಗೆ ಕಾರಣವಾದ ಅಂಶಗಳು ಯಾವುವು ಇರಬಹುದು ? ಇತರ ಪ್ರಾಣಿಗಳಂತೆ ಆಹಾರ ಸಂಪಾದನೆಯಲ್ಲೂ, ವಾತಾವರಣದ ಉಲ್ಲಂಘನೆಯಲ್ಲೂ ಮನುಷ್ಯನಿಗೆ ಸರಿಗಟ್ಟುವ ದಿಟ್ಟತನವನ್ನು ಇನ್ನೂ ಕೆಲವು ಪಕ್ಷಿಗಳು ಮತ್ತು ಪಶುಗಳು ಸಾಧಿಸಿ ಉಳಿದಿವೆ. ಆದರೆ ಅಂತಹ ಪಶು ಪಕ್ಷಿಗಳು ಒಂದರೊಡನೆ ಇನ್ನೊಂದು ಬೆರೆಯಲು ತಂತಮ್ಮ ಅನುಭವಗಳನ್ನು ಇತರರಿಗೆ ತಿಳಿಸಲು ಅನುಕೂಲವಾದ ಭಾಷೆಯನ್ನು ಕಂಡುಹಿಡಿದಿರಲಿಲ್ಲ. ಆದರೇ ಆ ರೀತಿಯ ವಿಚಾರ ವಿನಿಮಯಕ್ಕಾಗಿ ಅನುಕೂಲವಾದ ಭಾಷೆಯನ್ನು ಕಂಡುಕೊಂಡ ಮನುಷ್ಯ ತನ್ನ ಬೌದ್ಧಿಕ ಸಂಪತ್ತನ್ನು ಮುಂದಿನ ಪರಂಪರೆಗೆ ಭಾಷೆಯ ಮೂಲಕ ತಿಳಿಸಲು ಶಕ್ತನಾದ. ಅದೇ ಕೆಲಸವನ್ನು ಪಶುಪ್ರಾಣಿಗಳು ಸ್ವಭಾವಗುಣಗಳ ಮೂಲಕ ಮಿತಪ್ರಮಾಣದಲ್ಲಿ ತಮ್ಮ ಸಂತತಿಗೆ ಒದಗಿಸಿದವು ಮಾನವನ ಮಿದುಳಿನ ಗಾತ್ರ ಹೆಚ್ಚಿತು; ಅಲ್ಲಿ ನೆನಪಿನ ಕಾದಿರಿಸಬಲ್ಲ ತಿಳಿವಿನ ಮೊತ್ತ ಹೆಚ್ಚಿತು. ತನ್ನ ಪೂರ್ವಾನುಭವಗಳಿಂದ ಆತ ತಾನು ಇದಿರಾಗಬಹುದಾದ ಸಮಸ್ಯೆಗಳಿಗೆ ಉತ್ತರ ಕಂಡು ಹಿಡಿಯುವ ಅವನ ತರ್ಕಶಕ್ತಿಯೂ ಅಧಿಕವಾಯಿತು. ಇವುಗಳಿಂದಾಗಿ ಪಕ್ಷಿ–ಪಶುಗಳಂತೆ ಆತ ತನ್ನ ಸಂತಾನಕ್ಕೆ ಹಾಲುಣಿಸಿ ಸಾಕುವುದರ ಜೊತೆಗೆ ನಿತ್ಯಜೀವನದಲ್ಲಿ ಹೋರಾಡಲು ಬೇಕಾದ ಉಪಾಯಗಳ ಜೊತೆಗೆ, ತನ್ನ ಸ್ವಾಭಾವಿಕ ವರ್ತನೆ ಹಾಗೂ ಹೊಣೆಗಳನ್ನು ಮೀರಿ ಹೊಸ ಹೊಸ ಸಮಸ್ಯೆಗಳಿಗೆ ಹೊಸ ಉತ್ತರಗಳನ್ನು ಸಲ್ಲಿಸಬಲ್ಲ ಯೋಗ್ಯತೆ ಅವನ ಮಿದುಳಿಗೆ ಬಂತು. ಬಂದುದರಿಂದ ಅದರ ಗಾತ್ರ ಬೆಳೆಯಿತು ಅಥವಾ ಮಿದುಳಿನ ಗಾತ್ರ ಬೆಳೆದುದರಿಂದ ಮಿದುಳಿನ ಯೋಗ್ಯತೆ ಬಲಿಯಿತು. ಭಾಷೆಯ ಮೂಲಕ ಅವನಿಗೆ ದೊರಕುವ ವಿಶಾಲ ಹಾಗೂ ಸೂಕ್ಷ್ಮ ರೂಪದ ತಿಳಿವನ್ನು ಆತ ಬರೆದಿರಿಸಲು ಕಲಿತ ಬಳಿಕವಂತೂ ಹಿಂದಿನ ತಲೆಮಾರಿನಿಂದ ಮುಂದಿನದಕ್ಕೆ ಹೋಗಬಹುದಾದ ತಿಳಿವು ಹಿಂದಿನಿಂದ ಮುಂದಿನತನಕ ಸಾಗಿಸಬಲ್ಲ ಸಾವಿರಾರು ವರ್ಷಗಳ ತನಕವೂ ಉಳಿಸಬಲ್ಲ ಲೇಖನದ ಮೂಲಕ ದೊರೆಯುವ ಮತ್ತೊಂದು ಸೌಲಭ್ಯವನ್ನು ಮಾನವ ಕಂಡುಹಿಡಿದ.

ಈ ಮಾನವನ ಮಿದುಳು ಎರಡೆರಡು ಕ್ಷೇತ್ರಗಳಲ್ಲಿ ಕೆಲಸಮಾಡತೊಡಗಿದ್ದನ್ನು ನಾವು ಕಾಣುತ್ತೇವೆ. ಅವುಗಳಲ್ಲಿ ಒಂದು ಕ್ಷೇತ್ರ, ನಿತ್ಯಜೀವನದ ಘಟನೆಗಳಿಗೆ ಕಾರ್ಯ

ಕಾರಣ ಮತ್ತು ಪರಿಹಾರಗಳನ್ನು ತಿಳಿಸಬಲ್ಲ ಒಂದು ವರ್ಗದ್ದು ; ಆಹಾರ ಗಳಿಕೆಯ ದಾರಿ, ಸಾವು ನೋವುಗಳನ್ನು ಸಹಿಸಿ ಜೀವನವನ್ನು ನಿರ್ವಹಿಸುವ ಸಮಸ್ಯೆ, ಸಂತಾನ ಪ್ರವಾಹವನ್ನು ಮುಂದಕ್ಕೂ ಹರಿಸುವ ಸಮಸ್ಯೆಗಳೆಲ್ಲ ಅದೇ ವರ್ಗಕ್ಕೆ ಸೇರುವಂತಹವು. ಅವನ ಪಾಲಿನ ಇನ್ನೊಂದು ವರ್ಗದ ಸಮಸ್ಯೆಗಳು, ಹುಟ್ಟಿನೊಡನೆ ಪಡೆದ ಇಂದ್ರಿಯ ಗಳಿಂದ ವಿಶ್ಲೇಷಿಸಲಾರದ, ಅರ್ಥವಿಸಲಾರದ ಕಾರ್ಯ-ಕಾರಣಗಳನ್ನು ತಿಳಿಸಲಾರದ, ಹುಟ್ಟು-ಸಾವು ಮುಂತಾದ ವಿದ್ಯಮಾನಗಳನ್ನು ಕುರಿತು ವಿವರಿಸಲಾರದ ಬಗೆಯವು. ಆತ ತನ್ನ ಇಂದ್ರಿಯಗಳಿಗೆ ಎಟುಕಲಾರದ ದೂರವನ್ನು ಇಣುಕಿ ನೋಡಿ, ಅದೇನು ಇದೇನು, ಹಾಗೇಕಾಯಿತು. ಹೀಗೇಕಾಯಿತು ಎಂದು ತನ್ನ ಮಿತ ಅನುಭವಗಳಿಗೆ ಸಮಾಧಾನ ಕೊಡುವ ರೀತಿಯನ್ನು ತಿಳಿಸಬಲ್ಲ ಕ್ಷೇತ್ರ ಇನ್ನೊಂದು.

ಈ ಜಗತ್ತಿನಲ್ಲಿ ಹುಟ್ಟಿದ ಯಾವತ್ತೂ ಜೀವಿಗಳಿಗೂ ಹುಟ್ಟು ಮತ್ತು ಸಾವು ಗಳನ್ನು ಕುರಿತ ಸಮಸ್ಯೆಗಳು ಇದ್ದೇ ಇವೆ. ಆ ಸಮಸ್ಯೆಗಳು ಜೀವಿಗಳನ್ನು ಸದಾ ಕಾಡುತ್ತಿರುವಂತಹವೇ. ಹುಟ್ಟಿನ ವಿಚಾರದಲ್ಲಿ ಜೀವಿಗಳಲ್ಲಿ ಉಂಟಾಗಬಹುದಾದ ಕುತೂಹಲಗಳನ್ನು, ಸಂಬಂಧಪಟ್ಟ ಕ್ರಿಯೆಗಳನ್ನು ಕಂಡೋ ಊಹಿಸಿಯೋ ತಿಳಿಯುವ ಅವಕಾಶ ಇದೆ. ಅವಕ್ಕೆ ಪ್ರತಿಯಾಗಿ ಸಾವಿನ ವಿಚಾರ. ಅದು ತನಗೆ ಇಷ್ಟವಲ್ಲದ ಒಂದು ಸಂಗತಿಯಾದುದರಿಂದ ಸಾಕಷ್ಟು ಭಯವೂ ಇದೆ. ಸಾವು, ಹುಟ್ಟಿದ ಜೀವದ ಪಾಲಿಗೆ ಸಾಕಷ್ಟು ದೂರ ಇದ್ದರೂ ಅದನ್ನು ಕುರಿತು ತನಗಿರುವ ಭಯದಿಂದ ಮನುಷ್ಯ ಸಾವಿನಾಚೆಗೆ ಏನಿದೆ ಎಂಬ ಚಿಂತೆ ಮಾಡಿಕೊಂಡದ್ದುಂಟು. ಅದೇ ರೀತಿಯಲ್ಲಿ ತನ್ನ ಸುತ್ತಲಿನ ನೆಲ, ನೀರು ಮತ್ತು ಆಕಾಶಗಳಲ್ಲಿ ಸಂಭವಿಸುವ ಎಷ್ಟೋ ವಿದ್ಯ ಮಾನಗಳನ್ನು-ಸಿಡಿಲು, ಮಿಂಚು, ಭೂಕಂಪ, ಜ್ವಾಲಾಮುಖಿಯ ಸ್ಫೋಟ, ಚಂಡ ಮಾರುತದ ಹಾವಳಿ-ಕುರಿತು ಮನುಷ್ಯ ಏನೂ ಮಾಡಲಾರನಾದರೂ ಅವುಗಳನ್ನು ಕುರಿತು ನೆನಪು ಬಂದರೆ ಭಯಭೀತನಾಗುತ್ತಾನೆ. ಆಗ ಸಾವಿನ ಆಚೆ ಏನಿದೆ ಎಂಬ ಪ್ರಶ್ನೆಗೆ ಬೃಹದಾಕಾರ ಉಂಟಾಗುತ್ತದೆ. ಪ್ರಕೃತಿಯ ವಿಚಿತ್ರ ವಿದ್ಯಮಾನಗಳಿಗೆ ಯಾರು ಹೊಣೆ ಎಂದು ಮಾನವ ಚಿಂತಿಸಬೇಕಾಯಿತು. ಈ ಲೇಖನದ ಆಖ್ಯೆ: ಹುಟ್ಟಿದ್ದು ಅಂತಹ ಒಂದು ಕಾರಣದಿಂದ ಅಲ್ಲವೇ ?

ಜೀವನವನ್ನು ಕುರಿತು ಆಳವಾಗಿ ಚಿಂತಿಸಿದ ಯಾವನೋ ಒಬ್ಬ ದಾಸ ಒಂದು ದಿನ "ಮಾನವಜನ್ಮ ದೊಡ್ಡದು, ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ ..." ಎಂದು ಉದ್ಗರಿಸಿದ. ಅವನಿಗಿಂತ ಹಿಂದಿನವರು, ಅವನ ತರುವಾಯದವರೂ ಇಂತಹುದೇ ಅಭಿಪ್ರಾಯವನ್ನು ತಂತಮ್ಮ ಮತಧರ್ಮಗಳ ಮೂಲಕ ಪ್ರಕಟಿಸಿದ್ದಾರೆ. ಸಾವಿನ ನಂತರ ಸ್ವರ್ಗ, ನರಕ, ಮುಕ್ತಿಗಳೆಂಬ ಕಲ್ಪನೆಗಳನ್ನು ನಮ್ಮ ಮುಂದೆ ಇರಿಸಿ

ಹುಟ್ಟಿದ ನಮಗಾಗಿ ಹಿಗ್ಗುವ, ಕುಗ್ಗುವ ಮತ್ತು ಕಣ್ಮರೆಯಾಗುವ ದೃಶ್ಯಪರಂಪರೆಗಳನ್ನು ಜನತೆಯ ಮುಂದೆ ಇರಿಸಿ ಜೀವನ ನಶ್ವರ ಎಂದು ಸಾರಿದ್ದಾರೆ. 'ಮಾನವ ಜನ್ಮ ದೊಡ್ಡದು' ಎಂದು ಮನುಷ್ಯ ಹೇಳಿದ ಮಾತು. ಆದರೆ ಅದಕ್ಕೆ ಇಂದಿಗಿಂತ ನಾಳೆ ಮುಖ್ಯ ಎಂಬ ಅರ್ಥವನ್ನು ಸೂಚಿಸಿ, ಅಧ್ಯಾತ್ಮಿಕತೆಯ ಆಶಯವನ್ನು ಜನತೆಯ ಮುಂದಕ್ಕಿಳಿಸಿ ಮರಣದ ಭೀತಿಯನ್ನು ಕಳೆಯಲು ನರಕದ ನೆನಪು ಹುಟ್ಟಿಸಿ ಭಯ ಹೆಚ್ಚಿಸಿದ್ದುಂಟು. ಹಾಗಾಗಿ ಇಂದಿನ ಬದುಕಿನ ಹಿರಿಮೆ ನಾಳಿನ ಬದುಕಿಗಾಗಿ ದುಡಿಯುವುದರಲ್ಲಿದೆ ಎಂಬರ್ಥವನ್ನು ಹಲವು ಧರ್ಮಗಳು ಹೇಳಿವೆ. ಇಂತಹ ಆದರ್ಶಗಳಿಂದ ತೃಪ್ತಿ ಪಡೆದವರಿದ್ದಾರೆ, ಪಡೆಯದವರೂ ಇದ್ದಾರೆ. ಈ ಬಗೆಯ ಆದರ್ಶಗಳು ನಮ್ಮ ದೇಶದಲ್ಲಿ ಮಾತ್ರವಲ್ಲ, ವಿಶ್ವದ ಇನ್ನಿತರ ದೇಶಗಳಲ್ಲಿಯೂ ರೂಢಿಯಲ್ಲಿವೆ. ಇವನ್ನು ನಾವು ತತ್ವಜ್ಞಾನ ಅಥವಾ ದರ್ಶನಗಳು ಎನ್ನುತ್ತೇವೆ. ಈ ದರ್ಶನಗಳ ಸಂಖ್ಯೆ ಸಾಕಷ್ಟಿವೆ. ಅವುಗಳ ಗಾತ್ರ ಮತ್ತು ಬೋಧನೆಗಳು ಬುದ್ಧಿಜೀವಿಯಾದ ಮನುಷ್ಯನ ಸೃಷ್ಟಿಗಳು ಅವುಗಳಿಂದ ಸಮಾಧಾನ ಪಡೆಯಬೇಕಾದರೆ, ಅವಕ್ಕೆ ತಕ್ಕಂತೆ ಜೀವನದಲ್ಲಿ ವರ್ತಿಸಬೇಕಾದ ಸೂಕ್ಷ್ಮತೆ ಮತ್ತು ಬುದ್ಧಿಯ ಚುರುಕು ಬೇಕೇಬೇಕು. ಆ ಮೂಲಕ ಆ ಬಗೆಯಲ್ಲಿ ಹಿರಿಮೆಯನ್ನು ಸಾಧಿಸಲಾರದವರು ಇಹಕ್ಕಿಂತ ಪರವೇ ಶ್ರೇಷ್ಠವೆಂಬ ಮಾತನ್ನು ನಂಬಿ ಅದಕ್ಕೆ ಉಚಿತ ನಿರ್ವರ್ತಯನ್ನು ನಡೆಯಿಸಬೇಕು. ಹಳೆಗಾಲದ ದಾಸರು ಹೇಳಿದರೆಂದಿರುವ ಮಾನವನ ದೊಡ್ಡಸ್ಥಿಕೆ ಈ ಬಗೆಯದು. ಅಂತಹ ನಡವಳಿಕೆಗೆ ನಂಬಿಕೆಯೇ ಮುಖ್ಯ ಆಕರ್ಷಣೆಯಾದಲ್ಲಿ, ಜೀವನದ ಘಟನೆಗಳ ಕಡೆಗೆ, ವರ್ತನೆಯ ಕಡೆಗೆ, ಅನ್ಯಜೀವ ಮತ್ತು ಕ್ರಿಯೆಗಳ ಕಡೆಗೆ ನಾವು ಇರಿಸಿಕೊಳ್ಳುವ ಆಸಕ್ತಿ, ವೈರಾಗ್ಯ, ಮನ್ನಣೆ, ಆವೇಶ ಮತ್ತು ಉತ್ಸಾಹಾದಿ ಗುಣಗಳು ವಿಸ್ತಾರವನ್ನೂ ಆಳವನ್ನೂ ಪಡೆಯಬಲ್ಲವು. ಅವೆಲ್ಲವೂ ಭಾವನಾ ಜೀವನಕ್ಕೆ ಸಂಬಂಧಪಟ್ಟ ವಿಷಯಗಳು.

ಜೀವನದ ವಸ್ತುಗಳ ಕಡೆಗೆ, ವರ್ತನೆಯ ಕಡೆಗೆ, ವಿದ್ಯಮಾನಗಳ ಕಡೆಗೆ, ಮನಸ್ಸು ತಳೆಯುವ ವಿವಿಧ ರೂಪದ ಆಕರ್ಷಣೆ ಮತ್ತು ನಿರಾಕರ್ಷಣೆಗಳ ದೆಸೆಯಿಂದ ಕಲಾವಿದರಲ್ಲಿ ಹೊಮ್ಮುವ ಭಾವನೆಗಳಿಂದಾಗಿ ತೆರೆತೆರನ ಕಲಾಸೃಷ್ಟಿಗಳು ರೂಪುಗೊಳ್ಳುತ್ತವೆ. ಸಾಹಿತ್ಯ, ಸಂಗೀತ, ನೃತ್ಯ, ಚಿತ್ರ, ಶಿಲ್ಪ ಮೊದಲಾದವು ಅಂಥಹ ಸಾಧನೆಯ ಮಾಧ್ಯಮಗಳು. ಮಾನವನ ದೊಡ್ಡಸ್ಥಿಕೆಯನ್ನು ನಾವು ಆತನ ಕಲಾಸೃಷ್ಟಿಗಳ ಮೂಲಕ ಗುರುತಿಸಬಹುದು. ಇಂತಹ ಸೃಷ್ಟಿಗಳು ಮಾನವನಿಗೆ ಮಾತ್ರ ಸೀಮಿತವಾದ ಕ್ರಿಯೆಗಳೆಂದು ನಾವು ತರ್ಕಿಸಬಹುದು. ಬದುಕಿನ ಉದ್ದಕ್ಕೂ ಯಾವತ್ತೂ ಪ್ರಾಣಿಗಳಲ್ಲಿ ಕಾಣಿಸುವ ಸ್ನೇಹ, ವಾತ್ಸಲ್ಯ, ಶೃಂಗಾರ,ಮಿಲನ ಮುಂತಾದ ಸುಖ–ದುಃಖಗಳು ಮನುಷ್ಯನಲ್ಲಿ ಮಾತ್ರವೇ ಅವು ಸೃಜನಶೀಲ ಸೃಷ್ಟಿಗಳಾಗಿ ಹೊಮ್ಮುತ್ತವೆ.

ಮನುಷ್ಯನ ಇಂದ್ರಿಯಗಳಲ್ಲಿ ಅವನೇ ಕಾಲಕ್ರಮದಲ್ಲಿ ನಿರ್ಮಿಸಿಕೊಂಡ ಕ್ರಿಯಾ ವಿಸ್ತರಣೆಗಳಿವೆ, ಕಣ್ಣು, ದೂರದರ್ಶನ, ಸಮೀಪದರ್ಶನಗಳ ಶಕ್ತಿ ಪಡೆಯಿತು. ಶ್ರವಣ ಅಂತಹ ಶಕ್ತಿ ಪಡೆಯಿತು. ಕೆಲವು ವಿಜ್ಞಾನಗಳ ನೆರವಿನಿಂದ ಅವನ ಜಗತ್ತು ಆ ಮೂಲಕ ಹಿಗ್ಗಿತು. ಹಿಗ್ಗಿಕೊಂಡ ಜಗತ್ತು ಮತ್ತು ವಿಶ್ವಗಳ ಪರಿಚಯದಿಂದ ಅವನ ಬೌದ್ಧಿಕ ಜೀವನ ಎಂಬುದು ಅನ್ಯ ಪಶುಪಕ್ಷಿಗಳಿಗೆ ಎಂದೆಂದೂ ಎಟುಕದ ಮೂರ್ತ ಮತ್ತು ಅಮೂರ್ತ ವಿಷಯ ಮತ್ತು ವಸ್ತುಗಳ ವಿಹಾರಕ್ಷೇತ್ರ ಮನುಷ್ಯನಿಗೆ ಎಟುಕುವಂತಾಯಿತು. ಅದೇ ರೀತಿಯಲ್ಲಿ ಅವನು ನಿರ್ಮಿಸಲು ಕಲಿತ ಅನೇಕ ಉಪಕರಣಗಳ ವಿಸ್ತಾರ ಮತ್ತು ವೈಶಿಷ್ಟ್ಯಗಳು ಅಸಂಖ್ಯವಾಗಿ ಬೆಳೆದವು. ಕೈ ಕೋಲನ್ನು ಹಿಡಿಯಿತು, ಕಲ್ಲನ್ನು ಎಸೆಯಿತು, ಬಾಣ ಬಿಟ್ಟಿತು, ಗುಂಡು ಹಾರಿಸಿತು, ಕೊಟ್ಟ ಕೊಟ್ಟ ಕೊನೆಗೆ ತನ್ನ ಕುಲವನ್ನು ಕ್ಷಣದಲ್ಲಿ ನಾಶಮಾಡಬಲ್ಲ ಪರಮಾಣು ಬಾಂಬನ್ನೂ ತಯಾರಿಸಿತು ನೆಲದಲ್ಲಿ ಹುಟ್ಟಿ ಅದನ್ನು ಅಂಟಿ ಬಾಳಿದ ಆತ ಅಂತರಿಕ್ಷಗಾಮಿಯಾಗಲು ಸಾಧ್ಯವಾಯಿತು.

ಹೀಗೆ ಮನುಷ್ಯ ತನ್ನ ಭಾವನಾ ವೈಖರಿಯಿಂದ ಬುದ್ಧಿಯ ಎಟುಕಿನಿಂದ ಪ್ರಾಣಿಗಳಿಂದ ಸಾಧ್ಯವಾಗದ ಹಲವಾರು ಕಾರ್ಯಗಳನ್ನು ಮಾಡಲು ಸಾಧ್ಯವಾಗಿದೆ. ಇದು ಅವನ ಹಿರಿಮೆಯೇ. ಇವುಗಳಿಂದಾದ ಅವನ ಜನ್ಮ ದೊಡ್ಡದು ಎನ್ನಬೇಕು. ಅವನ ಆ ದೊಡ್ಡಸ್ಥಿಕೆಯನ್ನು ಯಾವುದರಿಂದ ಅಳೆಯುತ್ತೀರಿ ? ಕೇವಲ ತನ್ನ ಶಕ್ತಿ ಮತ್ತು ಸ್ವಾರ್ಥಗಳನ್ನು ಬೆಳೆಯಿಸಿಕೊಂಡಿರುವುದರಿಂದಲೇ ? ಮೊದಲು ಹುಟ್ಟಿದ ತನ್ನ ಜತೆಗೆ ಹುಟ್ಟಿದ ತನ್ನ ನಾಲ್ಕೂ ಸುತ್ತಲೂ ಇರುವ ಜೀವಕೋಟಿಗೂ ಅವನಿಗೂ ಸಂಬಂಧ ಇದೆಯಷ್ಟೆ ? ತಾನು ಅವಕ್ಕೆ ಸಲ್ಲಿಸುವ ಕರ್ತವ್ಯ ಇದೆ ಎಂದು ಎನಿಸಿದಾಗ ಅಲ್ಲವೇ ಆತ ದೊಡ್ಡವನಾಗುವುದು ? ಆತ ತನ್ನ ಸುತ್ತಲೂ ಇರುವ, ಹಿಂದೆ ಇದ್ದ, ನಾಳೆ ಇರಬಲ್ಲ ಜಗತ್ತಿನ ಜೀವಕೋಟಿಯೊಡನೆ ಯಾವ ರೀತಿಯ ಸ್ಪರ್ಧೆ ನಡೆಯಿಸುತ್ತಿದ್ದಾನೆಂದು ಅಳೆಯಬೇಡವೇ ? ಆ ಸ್ಪರ್ಧಾಶಕ್ತಿ ಅವನ ದೊಡ್ಡಸ್ಥಿಕೆಯೇ ಅಥವಾ ಸುತ್ತಲಿನ ಜೀವಕೋಟಿಗೂ ಅವನಿಗೂ ಅನ್ಯೋನ್ಯ ಸಂಬಂಧವಿದೆಯೆಂದು ಅರಿತು ತನ್ನ ಸುಖ ಸಾಧನೆಯ ಕಾರ್ಯದಲ್ಲಿ ಅನ್ಯರ ಸುಖವನ್ನು ಹಾಳುಗೆಡಹದೆ ಸರ್ವಜೀವಿಗಳ ಸುಖಕ್ಕೆ ಹಾನಿ ಬಾರದಂತೆ ಬಾಳುತ್ತಾನೆ ಎಂಬ ಮಾನದಿಂದ ಅವನ ಬದುಕು ದೊಡ್ಡದು ಎನ್ನಲೇ ?

ಮಾನವನ ಹಿರಿಮೆ ಕಾಣಿಸುವುದು ಆತ ತಾನಾಗಿ ಬೆಳೆಯಿಸಿಕೊಂಡ ಮಾನಸಿಕ ಸಂವೇದನಾಶೀಲತೆ, ಚಿಂತನ ಮತ್ತು ಸೃಜನಶೀಲತೆಗಳಿಂದ. ಸ್ವಭಾವ–ಗುಣಗಳನ್ನು ಮೀರಿದ ಬುದ್ಧಿ ಸಂಪತ್ತು ಅವನದು. ಅದರಿಂದಾಗಿ ಆತ ತನ್ನ ಪಂಚೇಂದ್ರಿಯಗಳಿಂದ ಸಾಧ್ಯವಾಗದ ಅಸಂಖ್ಯ ಕಾರ್ಯಗಳನ್ನು ಮಾಡಲು ಶಕ್ತನಾದ. ಬರಿಗಣ್ಣಿಗೆ ಕಾಣದ

ದೂರದ ವಿಶ್ವಗಳನ್ನು ನಿರೀಕ್ಷಿಸಿದ. ದೂರದರ್ಶಕ, ರೇಡಿಯೋ ದೂರದರ್ಶಕ, ವರ್ಣಪಂಕ್ತಿ ವಿಶ್ಲೇಷಕಗಳಂತಹ ಉಪಕರಣಗಳನ್ನು ಅಂತಹ ವಿಶ್ವಗಳನ್ನು ಕುರಿತ ಜ್ಞಾನವನ್ನು ಪಡೆದ. ಕಾಲುನಡೆಯ ಚುರುಕನ್ನು ಓಟದಿಂದ ಹೆಚ್ಚಿಸಿ ತೃಪ್ತನಾಗದೆ ಕುದುರೆ ಸವಾರಿ ಮಾಡಿದ, ಯಂತ್ರ ವಾಹನಗಳನ್ನು ನಿರ್ಮಿಸಿ, ರೈಲು, ವಿಮಾನ, ರಾಕೆಟ್‌ಗಳ ನೆರವಿನಿಂದ ಧ್ವನಿವೇಗವನ್ನು ಮೀರಿ ಸಂಚರಿಸಲು ಕಲಿತ. ಅದೇ ರೀತಿ ಧ್ವನಿಯ ಸಂವೇದನೆಗಳನ್ನು ಕಾಂತ ವಿದ್ಯುತ್ ಅಲೆಗಳನ್ನಾಗಿ ಮಾರ್ಪಡಿಸಿ ಹಲವಾರು ಅದ್ಭುತಗಳನ್ನು ಸಾಧಿಸಿದ. ಕೇವಲ ಸ್ಮರಣಶಕ್ತಿ ಮತ್ತು ಬುದ್ಧಿಶಕ್ತಿಗಳನ್ನು ವಿಸ್ತರಿಸಿ ವೈದ್ಯ, ಗಣಿತ, ತರ್ಕ ಮೊದಲಾದ ಹಲವಾರು ಮೂರ್ತ ಮತ್ತು ಅಮೂರ್ತ ಶಾಸ್ತ್ರಗಳನ್ನು ಬೆಳೆಯಿಸಿದ. ಇವು ಆ ಮಾನವನ ದೊಡ್ಡಸ್ಥಿಕೆ ಅನ್ಯಜೀವಿಗಳಿಗಿಂತ ಎಷ್ಟೋ ಪಾಲು ಹಿರಿದು ಎಂದು ತಿಳಿದುಬರುತ್ತದೆ, ಅದೇ ಬಗೆಯಲ್ಲಿ ಆ ಬುದ್ಧಿಶಕ್ತಿ ಅನ್ಯ ಜೀವಲೋಕಗಳನ್ನು ಮತ್ತು ಸ್ವಂತ ಮಾನವಕುಲವನ್ನೂ ಸ್ವಾರ್ಥಕ್ಕಾಗಿ ಬಳಸುವುದೂ ಸಾಧ್ಯವಾಗಿದೆ. ಅವರಿಂದಾಗಿ ಆತ ತನ್ನ ತಲೆಯ ಮೇಲೆ ತಾನು ಕೈಯಿರಿಸಿಕೊಂಡು ಒಂದು ದಿನ ಭೂಮಿಯ ಮೇಲೆ ಜೀವಸಂಕುಲವೇ ಇಲ್ಲ ಎಂದು ಮಾಡಬಲ್ಲ ಭಸ್ಮಾಸುರನಂತೆ, ಮಿತಿ ಮೀರಿದ ಸ್ವಾರ್ಥವನ್ನೂ ಬೆಳೆಸಿದ್ದಾನೆ. ●

ನಾನು ಬದುಕಿನ ನಾಳೆಯ, ಎಂದರೆ, ಪರದ ಚಿಂತೆಯನ್ನು ಪೊತ್ತವನಲ್ಲ. ಆತ್ಮ, ಪ್ರಾರಬ್ಧ ಕರ್ಮ, ಪರಲೋಕಗಳ ನಂಬಿಕೆಗಳನ್ನು ಬೆಳೆಯಿಸಿ, ಇವನ್ನು ತಾತ್ಸಾರದಿಂದ ಕಂಡವನೂ ಅಲ್ಲ, ಕಾಣುವವನೂ ಅಲ್ಲ, ಆದುದರಿಂದ ಇಹವೇ ನನ್ನೆಲ್ಲ ಸಾಧನೆಗಳ ರಂಗಸ್ಥಳ. ಆ ಇಹದಲ್ಲಿ – ನನ್ನ ಸುತ್ತಣ ನಿಸರ್ಗವನ್ನು. ಅದರಲ್ಲಿ ಜೀವಿಸುತ್ತಿರುವ ಯಾವತ್ತೂ ಜೀವಕೋಟಿಗಳನ್ನು ಕಾಣುತ್ತ ನನ್ನ ಬದುಕಿಗೆ ಸಂಬಂಧಿಸಿದವನ್ನು ಇನ್ನಷ್ಟು ಆಸಕ್ತಿಯಿಂದ ನೋಡಲು ಪ್ರಯತ್ನಿಸುವವ. ಇದು ನನ್ನೊಬ್ಬನಿಂದ ಎಂದೂ ಪೂರೈಸಲಾರದ ಕೆಲಸವಾದರೂ, ಆ ಕುರಿತು ವಿಜ್ಞಾನಿಗಳು ಅನೇಕ ವಿಚಾರಗಳನ್ನು ತಿಳಿಸಿರುವುದನ್ನು ಓದಿ ತಿಳಿಯಲು ಪ್ರಯತ್ನಿಸುತ್ತಿದ್ದೇನೆ. ಆದುದರಿಂದ ನಿಸರ್ಗ ಮತ್ತು ಜೀವಕೋಟಿಗಳ ಸಂಬಂಧ ನಿಡುಗಾಲದ್ದು, ಅದು ಭಾವಿ ತಲೆಮಾರುಗಳಿಂದ ಅರ್ಪಣೆಗೊಂಡದ್ದು, ಎಂದು ತಿಳಿದು ಬಾಳಬೇಕಾಗಿದೆ.

ಮನುಷ್ಯನಾದ ಮೇಲೆ ನನ್ನ ಸುತ್ತಣ ಬದಲಾಗುತ್ತಿರುವ ವ್ಯಕ್ತಿಗಳುಳ್ಳ ಸಮಾಜದ ಜತೆಗೆ ನಾನು ಬಾಳಬೇಕಾಗಿದೆ. ಆ ಸಾಮಾಜಿಕ ನಡತೆ, ನಂಬಿಕೆ, ವರ್ತನೆಗಳಲ್ಲಿ ಕೇವಲ ಒಬ್ಬನ ಇಲ್ಲವೆ ಒಂದು ಗುಂಪಿನವರ ಹಿತ ನನ್ನದೆಂದು ತಿಳಿಯಲಾರೆ. ನೆನ್ನೆಯ ಜನರ ಸಾಮೂಹಿಕ ವರ್ತನೆಗಳ ಪರಿಣಾಮವನ್ನು ಇಂದಿನ ನಾವು ಅನುಭವಿಸಬೇಕಾಗಿದೆ; ಇಂದಿನ ನಮ್ಮ ಸಾಮೂಹಿಕ ವರ್ತನೆ ನಾಳಿನವರನ್ನು ಬಾಧಿಸಿಯೇ ಬಾಧಿಸುತ್ತದೆ. ಕರ್ಮಫಲ ಒಂಟಿ ಜೀವಗಳ ಲೆಕ್ಕಾಚಾರವಲ್ಲ; ಸಾಮೂಹಿಕ ಜೀವನದ ಲೆಕ್ಕಾಚಾರ ಅನಿಸುತ್ತದೆ ನನಗೆ.

– **ಶಿವರಾಮ ಕಾರಂತ**

('ಹುಚ್ಚು ಮನಸ್ಸಿನ ಹತ್ತು ಮುಖಗಳು' – ಆತ್ಮಕಥೆಯಲ್ಲಿ).

ನನ್ನ ನೆನಪುಗಳು

● ಆನಂದಕಂದ

ಗರ್ಭಾದಾನ ಶಾಂತಿ ಮತ್ತು ಪ್ಲೇಗು-ರೋಗದ ಬಾಧೆ

ದೀಪಾವಳಿಯಾದ **ಕೂಡಲೇ** ಮೂಡಲಗಿಯಲ್ಲಿ ಮನೆತನ ನಡೆಸುವುದಕ್ಕಾಗಿ ನಮ್ಮ ತಾಯಿ ನಮ್ಮ ಅಕ್ಕನನ್ನು, ಅಕ್ಕನ ಮಗಳಾದ ನಮ್ಮ ಹಣಮಣ್ಣನ ಹೇಡತಿಯನ್ನು ಮೂಡಲಗಿಗೆ ಕಳಿಸಿದರು. ನಾವೆಲ್ಲ ಬೆಟಗೇರಿಯಲ್ಲಿಯೇ ಇರುತ್ತಿದ್ದೆವು. ದಿವಸಗಳು ಹೋಗುವುದು ಏನು ತಡ. ಕಾರ್ತಿಕ ಮಾಸವು ಹೋಗಿ ಅನೇಕ ಹಬ್ಬಗಳನ್ನು ದಾಟಿ ಫಾಲ್ಗುಣ ಮಾಸವು ತಲೆದೋರಿತು. ಆ ತಿಂಗಳ ಹುಣ್ಣಿಮೆಯೇ ಕಾಮನ ಹುಣ್ಣಿಮೆ. ನಾವೆಲ್ಲರೂ ಆ ಹಬ್ಬದ ಸಂಭ್ರಮದಲ್ಲಿರುವಾಗ ಮೂಡಲಗಿಯಿಂದ ಒಂದು ಕಾಗದ ಬಂದಿತು. ಅದರಲ್ಲಿ ನಮ್ಮ ಅಣ್ಣನ ಹೆಂಡತಿಯು ಋತುಮತಿಯಾಗಿರುವಳೆಂದೂ ನಾವೆಲ್ಲರೂ ಹೊರಟು ಬರಬೇಕೆಂದೂ ಸಂಗತಿ ಇದ್ದಿತು. ನಮ್ಮ ತಾಯಿಗೆ ಸಂತೋಷವೇ ಸಂತೋಷ.

ರೈತ ಜನರು ಸಾಕಷ್ಟು ಇರುವಾಗ ನಮಗೆ ಬಿಟ್ಟಿ-ಚಕ್ಕಡಿಗಳಿಗೆ ಏನು ಕೊರತೆ? ಮರುದಿನವೇ ಒಂದು ಚಕ್ಕಡಿಯನ್ನು ಹೂಡಿಸಿ ಅದರೊಳಗೆ ನಾವೆಲ್ಲರೂ ಮೂಡಲಗಿಗೆ ಹೋದೆವು. ಅಂದು ನಮ್ಮ ಅಣ್ಣನ ಹೆಂಡತಿ ಋತುಮತಿಯಾದ ಮೂರನೆಯ ದಿವಸ, ನಾನು ಹೋಗಿ ನೋಡಿದೆ. ನಮ್ಮ ಮನೆ ಚಿಕ್ಕದಾದುದರಿಂದ ಮಠದಲ್ಲಿಯೇ ಮಂಟಪ ಕಟ್ಟಿ ಅಲ್ಲಿಯೇ ಆ ಋತುಮತಿಯಾದ ಸುಮಂಗಲೆಯನ್ನು ಕೂಡಿಸಿದ್ದರು. ಮೊದಲೇ ಗೌರವರ್ಣದ ಹುಡುಗಿ. ಕಣ್ಣು. ಮೂಗಿನಿಂದಲೂ ಚೆಲುವೆ. ಅದರಲ್ಲಿ ಈಗ ಪ್ರೌಢೆಯಾಗಿ ಹೊಸ ಬಟ್ಟೆಯನ್ನು ಉಟ್ಟುಕೊಂಡು ಮೈತುಂಬ ಅಲಂಕಾರವನ್ನು ತೊಟ್ಟುಕೊಂಡುದರಿಂದ ಆ ಚೆಲುವಿಕೆಗೊಂದು ಹೊಸ ಕಳೆಯೇ ಬಂದಂತಾಗಿತ್ತು.

ನಮ್ಮ ತಾಯಿಯು, ನಮ್ಮ ಚಿಕ್ಕಪ್ಪನ ಶಾಪದ ನುಡಿಗಳಿಂದ ನೊಂದು ಹೋಗಿದ್ದ ಅವಳು, ನಮ್ಮಣ್ಣನ ಮದುವೆಯಾಗಿ ಋತುಮತಿಯಾದ ಹೆಣ್ಣು ಮನೆ ತುಂಬಿದ್ದಕ್ಕಾಗಿ ತುಂಬ ಉಲ್ಲಾಸಗೊಂಡಳು. ಆದರೆ ವೈದಿಕರು ಮನಸ್ಸಿಗೆ ಅಸಮಾಧಾನವಾಗುವ ಸಂಗತಿಯನ್ನು ಹೇಳಿದರು. ನಮ್ಮ ಅಣ್ಣನ ಹೆಂಡತಿ ಋತುಮತಿಯಾದ ನಕ್ಷತ್ರವು ದುಷ್ಟವಾಗಿದೆಯೆಂದೂ ಅದಕ್ಕಾಗಿ ಗರ್ಭಾದಾನ ಹೋಮದೊಡನೆ ಶಾಂತಿ ಹೋಮವನ್ನೂ ಮಾಡಬೇಕಾಗುವುದೆಂದು ಹೇಳಿದರು. ಕೇಳಿ ನಮ್ಮ ತಾಯಿ ಎದೆಗೆ ಆಘಾತವಾದಂತಾಯಿತು. ಆದರೂ ಹೊರಗೇನೂ ತೋರಗೊಡದೆ ಆ ಸಮಾರಂಭದಲ್ಲಿ ಸಂತೋಷದಿಂದಲೇ ಭಾಗವಹಿಸಿದಳು. ಅಂದು ಮೂರನೆಯ ದಿನವೆಂದು ಹೇಳಿದೆನಲ್ಲವೇ ?

ಅಂದು ಸಂಜೆ ಐದೂವರೆ ಗಂಟೆಗೆ ಮರುದಿನ ಮಿಂದೂಟಕ್ಕಾಗಿ ಋತುಮತಿಗೆ ಊರ ಜನರೆಲ್ಲರೂ ಊದುತ್ತ, ಬಾರಿಸುತ್ತ ಸಿದ್ಧಾಯವನ್ನು ತಂದುಕೊಡುವರು. ಅಂದು ಎಲ್ಲ ಬ್ರಾಹ್ಮಣರ ಮನೆಯವರೂ ಅನೇಕ ಬ್ರಾಹ್ಮಣೇತರ ಮಿತ್ರರೂ ಸಿದ್ಧಾಯವನ್ನು ಒಪ್ಪಿಸಿದರು. ಈ ಸಿದ್ಧಾಯಕ್ಕೆ 'ಗೋಸಗೆ' ಎಂದು ಹೇಳುವರು. ಈ ಶಬ್ದವನ್ನು ಕೇಳಿದವರಿಗೆ ಇದರ ವ್ಯುತ್ಪತ್ತಿಯು ಬೇಗನೆ ಹತ್ತಲಿಕ್ಕಿಲ್ಲ. ಸಂಸ್ಕೃತದಲ್ಲಿ 'ಗ್ರಾಸಕ' ಎಂದು ಹೇಳುವ ಪದದ ಅಪಭ್ರಂಶ ರೂಪವೇ 'ಗೋಸಗೆ' ಎಂದಾಗಿದೆ. ಎಲ್ಲ ಜನರೂ ಗೋಸಗೆ ತಂದಾದ ಮೇಲೆ ಋತುಮತಿಗೆ ಮಂಗಲಾರತಿಯಾಯಿತು. ಇನ್ನೂ ಒಂದು ವಿಶೇಷವೆಂದರೆ ಆ ಋತುಮತಿಗಾಗಿ ಆಪ್ತ-ಸ್ನೇಹಿತರು ತಮ್ಮ ಮನೆಯಿಂದ ಸವಿಯೂಟವನ್ನು ಮಾಡಿ ವಡೆಯನ್ನು ಬಡಿಸಿ ಕಳುಹುವರು. ಹೀಗೆ ಮೂರು ದಿನಗಳೂ ಬೇರೆ ಬೇರೆ ಮನೆಯ ಅಡಿಗೆಯಿಂದಲೇ ಋತುಮತಿಯ ಊಟವೂ ನಡೆದಿತ್ತು. ಋತುಮತಿಯಾದ ಆ ನಮ್ಮ ಅಣ್ಣನ ಹೆಂಡತಿಯು ತುಂಬ ಉಲ್ಲಾಸದಿಂದ ನಗುತ್ತಿದ್ದುದು ಕಾಣಿಸಿತು. ಅವಳಿಗೆ ತಾನೊಂದು ಸಂಭ್ರಮದ ದಿನವನ್ನು ಕಂಡೆನೆಂಬ ಸಮಾಧಾನವಾಗಿರಬಹುದು.

ಮರುದಿನವೇ ಋತುಮತಿಯ ಮೀಹ. ಈ ಮೀಹವು ವಾದ್ಯ ವೈಭವದೊಂದಿಗೆ ನಡೆಯಿತು. ಮೀಹವಾದೊಡನೆ ಮಂಗಲಾರತಿ. ಅರಿಶಿಣ, ಕುಂಕುಮ, ಉಡುಗೊರೆಗಳು ನಡೆದವು. ಅಂದು ಮಧ್ಯಾಹ್ನ ಮಿಂದೂಟವಾಗಬೇಕು. ಅದರ ಸಿದ್ಧತೆಯೂ ನಡೆದಿತ್ತು. ಗೋಸಗೆಯನ್ನು ತಂದ ಜನರ ಮನೆಯವರಿಗೆಲ್ಲ ಔತಣ ಕೊಟ್ಟಾಗಿತ್ತು. ಅಡಿಗೆಯವನು ಅಡಿಗೆ ಮಾಡುತ್ತಿದ್ದ. ಸವಿಯೂಟದ ಅಡಿಗೆಯದು. ಎರಡು ಗಂಟೆಗೆ ಎಲ್ಲರೂ ಊಟ ಮಾಡಿ ಸಂತೃಪ್ತರಾದರು. ಇದೆಲ್ಲಕ್ಕೂ ವೆಚ್ಚ ಎಷ್ಟಾಯಿತೆಂಬುದನ್ನು ವಿಚಾರ ಮಾಡುವುದಕ್ಕೆ ಯಾರ ಮನಸ್ಸೂ ಸಿದ್ಧವಿರಲಿಲ್ಲ. ಒಂದು ಮುಂಗಡ ಪತ್ರಿಕೆಯನ್ನಿಟ್ಟುಕೊಂಡು ಇಂತಹ ಮಂಗಲ ಕಾರ್ಯವನ್ನು

ನಡೆಸುವ ಪದ್ಧತಿಯೇ ನಮ್ಮ ಜನರಲ್ಲಿಲ್ಲ. ಆದಾಯವೇನು ಇರದೇ ಹೋದರೂ ವೆಚ್ಚ ಮಾತ್ರ ತಲೆಯನ್ನು ಮೀರಿ ನಡೆಯುವುದು.

ಋತುಮತಿಯಾದ ಹದಿನಾರು ದಿನಗಳಲ್ಲಿಯೇ ಒಂದು ಶುಭ ಮುಹೂರ್ತದಲ್ಲಿ ಗರ್ಭಾದಾನದ ಹೋಮವು ನಡೆಯಬೇಕು. ಜ್ಯೋತಿಷಿಗಳಿಂದ ಮುಹೂರ್ತವನ್ನು ತೆಗೆಸಿ ಗೊತ್ತುಮಾಡಲಾಯಿತು. ಅದೇ ದಿನ ಋತುಮತಿಯ ಶಾಂತಿಹೋಮವು ನಡೆಯಬೇಕು. ಸುಮಾರು ಹನ್ನೆರಡು ಜನ ವೈದಿಕರು ಅದಕ್ಕಾಗಿ ಬೇಕಾಗುತ್ತಿದ್ದರು. ಅವರ ವ್ಯವಸ್ಥೆಯನ್ನು ಮಾಡಲಾಯಿತು. ನಮ್ಮ ಮನೆಯು ತೀರ ಚಿಕ್ಕದಿದ್ದುದರಿಂದ ಮಠದಲ್ಲಿಯೇ ಆ ಹೋಮಹವನಗಳ ಏರ್ಪಾಡು ನಡೆಯಿತು. ಜನರ ಊಟದ ವ್ಯವಸ್ಥೆಯೂ ಆ ಮಠದಲ್ಲಿಯೇ ನಡೆಯಿತು. ಶ್ರೀ ಸ್ವಾಮಿಗಳು ನಮಗೆ ಎಲ್ಲ ಬಗೆಯ ಸ್ಥಳ ಸೌಕರ್ಯವನ್ನು ಒದಗಿಸಿಕೊಟ್ಟರು. ಅಂದು ಸುಮಾರು ನಾಲ್ಕುನೂರು ಜನರ ಭೂರಿ–ಭೋಜನವಾಗಿರಬಹುದು.

ಸಂಜೆಯ ಕಡೆಗೆ ದಂಪತಿಗಳಿಗೆ ಆರತಿ–ಅಕ್ಷತೆ ನಡೆಯುವುದು ಸಂಪ್ರದಾಯ. ಅದೂ ಆಯಿತು. ಮಧ್ಯಾಹ್ನದ ಊಟದಿಂದ ತೃಪ್ತರಾದ ಮನೆಯವರಾರೂ ಸಂಜೆಯ ಊಟವನ್ನು ಮಾಡಲಿಲ್ಲ. ಆದರೆ ದಂಪತಿಗಳು ಉಪವಾಸ ಬೀಳಬಾರದೆಂಬ ಪದ್ಧತಿಯ ಮೂಲಕ ಅವರು ಎಡೆಯ ಮೇಲೆ ಕುಳಿತು ಬಾಯಿ ಮುಸುರೆ ಮಾಡಿದ ನೇಮ ಮಾಡಿ ತಮ್ಮ ಊಟವನ್ನು ತೀರಿಸಿದರು. ಅಂದಿನ ಹೋಮ–ಹವನದ ಹೊಗೆಯಿಂದಲೋ, ವಿಶೇಷವಾಗಿ ಬಿದ್ದ ದೇಹ–ಶ್ರಮದಿಂದಲೋ ನಮ್ಮ ಹಣಮಣ್ಣ ತೀರ ಬಳಲಿಹೋಗಿದ್ದ. ಮುಖದಲ್ಲಿ ನಿತ್ಯದ ಕಳೆಯೇ ಕಾಣುತ್ತಿರಲಿಲ್ಲ.

ಮರುದಿನವೇ ಮರಳು ಮಂಡಲ. ಅಂದು ವಿಶೇಷ ಜನರಿಗೆ ಔತಣ ಕೊಡದೆ ಮನೆಯವರ ಮಟ್ಟಿಗೆ ಸವಿಯೂಟ ನಡೆಯುವುದು. ಋತುಮತಿಯಾದವಳಿಗೆ ನಡೆಯಬೇಕಾದ ಮಂಗಲೋಪಚಾರಗಳೂ ನಡೆದವು. ಆಯಿತು. ಈ ಹೊಸ ದಂಪತಿಗಳ ಸಂಸಾರ ಸುಖವು ಪ್ರಾರಂಭವಾಯಿತು. ಎಲ್ಲರೂ ನಾವು ಬೆಟಗೇರಿಯಿಂದ ಹೋದವರು ಅಲ್ಲಿಯೇ ಉಳಿದುಕೊಂಡೆವು. ಬೆಟಗೇರಿಯಲ್ಲಿ ಒಂದೇ ಒಂದಾಗಿದ್ದ ಹಾಲು ಕರೆಯುವ ಹಸುವನ್ನೂ, ಅದರ ಕರುವನ್ನೂ ಮೂಡಲಗಿಗೆ ನಮ್ಮ ಸಂಸಾರದ ಪ್ರಯೋಜನಕ್ಕೆಂದು ತರಿಸಿಕೊಂಡಾಯಿತು. ಅದಕ್ಕೆ ಅವಶ್ಯಕವಾದ ಜೋಳದ ಕಣಿಕೆಯನ್ನು ಬೆಟಗೇರಿಯಿಂದಲೇ ತರಿಸಿ ಸಂಗ್ರಹಿಸಲಾಯಿತು. ಆ ಆಕಳು ಕರೆದ ಹಾಲಿನ ಉಪಯೋಗವು ನಮ್ಮ ಕುಟುಂಬದ ದಿನದ ಹೈನದ ಪೂರೈಕೆಗೆ ಸಾಲುವಷ್ಟಾಯಿತು.

ಮೇ–ಜೂನ್ ೧೯೬೧/೫೧

ಚೈತ್ರ ಮಾಸವು ಕಳೆಯಿತು. ಯುಗಾದಿಯ ಹಬ್ಬವೂ ಸುಖವಾಗಿ ನಡೆಯಿತು. ಚೈತ್ರ ಮಾಸದ ಗೌರಿಯ ಪ್ರತಿಷ್ಠಾಪನೆಯೂ ಆಗಿ ಪ್ರತಿ ಶುಕ್ರವಾರ, ಮಂಗಳವಾರಗಳಂದು ನಮ್ಮ ಅಣ್ಣನ ಹೆಂಡತಿಯು ಮುತ್ತೈದೆಯರ ಕಾಲು ತೊಳೆದು ಬೇರೆ ಬೇರೆ ತಿನಿಸುಗಳನ್ನು ಮಾಡಿ ಹಂಚುವ ಸಂಭ್ರಮವು ನಡೆಯಿತು. ಈ ಎಲ್ಲ ಸಂತೋಷ ದಿನಗಳ ಹಿಂದಿನಿಂದಲೇ ನಮಗೆ ದುಃಖದ ದಿನಗಳು ಬಂದವು.

ಇದ್ದು ಎದ್ದ ಹಾಗೆಯೇ ನಮ್ಮ ಮನೆಯಲ್ಲಿ ಇಲಿಗಳು ಬೀಳತೊಡಗಿದವು. ಗೋಡೆಯ ಹೋರುಗಳಲ್ಲಿ ಸತ್ತ ಇಲಿಗಳು ಕೊಳೆತು ದುರ್ವಾಸನೆಯನ್ನು ಮನೆತುಂಬ ಹರಡಿದವು. ಕೆಲವು ಜ್ವರದಿಂದ ಸಂತಾಪಗೊಂಡ ಇಲಿಗಳು ಸ್ನಾನ ಮಾಡುವ ಬಚ್ಚಲಲ್ಲಿ ಕುಳಿತು ಬಾಯಿ ಬಾಯಿ ಬಿಡುತ್ತಿದ್ದವು. ಆಗ ಮೇಲಿನಿಂದ ನೀರು ಹನಿಸಿದರೆ ಅವು ಬಾಯಿ ತೆರೆದು ಒಂದೇ ಸಮನೆ ಗುಟುಕರಿಸುತ್ತಿದ್ದವು. ಮುಂದೆ ಐದಾರು ನಿಮಿಷಗಳಲ್ಲಿಯೇ ಅವು ಸಾವನ್ನಪ್ಪುತ್ತಿದ್ದವು. ಈ ಪ್ಲೇಗಿನ ಇಲಿಗಳ ಸಂಬಂಧವನ್ನು ಆದಷ್ಟು ದೂರವಾಗಿಸಬೇಕೆಂದು ಎಲ್ಲರೂ ವಿಚಾರ ಮಾಡಿದೆವು. ಒಬ್ಬ ರೈತರ ಹೆಣ್ಣುಮಗಳಂತೂ ಒಂದು ಗಾದೆಯನ್ನು ಹೇಳಿ. "ಇಲಿ ಬಿದ್ದ ಮನ್ಯಾಗ ತಲಿ ಬೀಳ್ಯಾಕ ಬೇಕು ಅಂತ ಶಾಸ್ತ್ರ ಐತ್ರಿ. ನಿಮ್ಗ ತಿಳಿಯಾಕಿಲ್ಲ. ಬ್ಯಾಗನೆ ಈ ಮನಿ ಬಿಟ್ಟು ನೀವೆಲ್ಲರೂ ಬ್ಯಾರೆಕಡೆ ಹೋಗ್ಬೇಕೊ" ಎಂದು ಪ್ರಾಮಾಣಿಕವಾದರೂ ನಿಷ್ಠುರ ಮಾತಿನಲ್ಲಿಯೇ ಹೇಳಿದಳು.

ಒಮ್ಮೆಲೇ ನಮಗೆ ಮನೆಯೆಲ್ಲಿ ಸಿಕ್ಕಬೇಕು ? ಆದರೆ ಇಲಿ ಬೀಳುವ ಸಂಗತಿಯನ್ನು ತಿಳಿದ ಸ್ವಾಮಿಗಳು ಆ ಊರಿನ ಮುಂದಾಳುಗಳಾದ ದೇಶಪಾಂಡೆ ಗೋವಿಂದ ರಾಯರಿಗೆ ಹೇಳಿ 'ಬೇಗನೆ ಮನೆ ಬಿಡುವ ವ್ಯವಸ್ಥೆ'ಯನ್ನು ಮಾಡಬೇಕೆಂದು ಸೂಚಿಸಿದರು. ಅವರು ಬೇರೆ ಬೇರೆ ಕಡೆ ಶೋಧ ಮಾಡಿ ಮನೆಯು ಸಿಕ್ಕಲಾರದೆ ಕೆಲವು ದಿನ ಹನುಮಂತ ದೇವರ ಗುಡಿಯ ಪೌಳಿಯಲ್ಲಿ ವಾಸಿಸಬೇಕೆಂದು ವ್ಯವಸ್ಥೆ ಮಾಡಿಕೊಟ್ಟರು. ನಾವೆಲ್ಲ ಮನೆಬಿಟ್ಟು ಹನುಮಂತ ದೇವರ ಗುಡಿಗೆ ಹೋಗಿ ಇರಹತ್ತಿದೆವು. ಆದರೆ ಬೆಟಗೇರಿಯಿಂದ ತರಿಸಿಕೊಂಡಿದ್ದ ಆಕಳನ್ನೂ, ಕರುವನ್ನೂ ಮೊದಲಿನ ಮನೆಯಲ್ಲಿಯೇ ಕಟ್ಟುತ್ತಿದ್ದೆವು. ನಮ್ಮ ಅಕ್ಕ ಎರಡು ಸಲ ಹೋಗಿ ಆ ಆಕಳಿನ ಮೇವು-ನೀರಿನ ಏರ್ಪಾಡನ್ನು ಮಾಡಿ ಹಾಲು ಹಿಂಡಿಕೊಂಡು ಬರುತ್ತಿದ್ದಳು.

ಆ ಊರಿಗೆ ಹನುಮಂತ ದೇವರ ಗುಡಿಯು ಪ್ರಮುಖವಾದುದು. ದೇವರ ದರ್ಶನಕ್ಕೆ ಬರುವ ಜನರ ಗದ್ದಲವು ವಿಪರೀತವಾದುದು. ಅಲ್ಲದೆ ಆ ಹನುಮಂತ ದೇವರ ಜಾತ್ರೆಯ ಮಹೋತ್ಸವವು ಬಂದುದರಿಂದ ಗುಡಿಗೆ ಸುಣ್ಣ-ಬಣ್ಣ ಹಚ್ಚುವ ಏರ್ಪಾಡಿನ ಗದ್ದಲವು ವಿಶೇಷವಾಯಿತು. ಎಲ್ಲವನ್ನೂ ಸಹಿಸಿಕೊಂಡು ನಾವು

ಜೀವದಾಸೆಯಿಂದ ಅಲ್ಲಿ ಇರಲೇಬೇಕಾಗಿತ್ತು. ಮನೆಯಲ್ಲಿ ನಾವು ಹತ್ತಾರು ಜನ (ಚಿಕ್ಕ ತಮ್ಮನೂ ಸಹಿತ) ಗಂಡಸರು. ನಾಲ್ಕು ಜನ ಹೆಂಗಸರು. ಅಲ್ಲದೆ ಒಬ್ಬಿಲ್ಲ ಒಬ್ಬ ಅತಿಥಿಯ ಆಗಮನವು ನಿತ್ಯವೂ ಇರುತ್ತಿದ್ದಿತು. ಇಷ್ಟೆಲ್ಲ ಜನರೂ ಆ ಚಿಕ್ಕ ಪೌಳಿಯಲ್ಲಿ ಇರಬೇಕಾದುದು ಅನಿವಾರ್ಯವಾಯಿತು. ಎಂಟು-ಹತ್ತು ದಿನಗಳನ್ನು ಅನಿವಾರ್ಯವಾಗಿ ಅಲ್ಲಿಯೇ ಹೇಗಾದರೂ ಇದ್ದೆವು.

ಇದೇ ಅವಧಿಯಲ್ಲಿ ಹನುಮಂತ ದೇವರ ಜಾತ್ರೆಯ ಸಮಾರಂಭವು ನಡೆಯಿತು. ಐದು ದಿನಗಳ ಜಾತ್ರೆಯದು. ಜನರ ಗೊಂದಲವೇ ಗೊಂದಲ. ಐದನೇ ದಿನ ಜಾತ್ರೆಯ ಸಮಾರಂಭವೆಲ್ಲವೂ ಮುಗಿದು, ರಾತ್ರಿಯಲ್ಲಿ ರಾಮಪುರ ಎಂಬ ಗ್ರಾಮದ ಶ್ರೀ ಕೃಷ್ಣ ಪಾರಿಜಾತ ಎಂಬ ಬಯಲಾಟವು ಆಯಿತು. ನಾವು ಅದನ್ನು ಗುಡಿ ಬಾಗಿಲಲ್ಲಿಯೇ ಕುಳಿತು ನೋಡುವುದಕ್ಕೆ ಅನುಕೂಲವಾಯಿತು. ಅದೆಂತಹ ಶ್ರೀಕೃಷ್ಣ ಪಾರಿಜಾತ ! ಈ ಮೊದಲು ನಾನು ಕುಲಗೋಡ ತಮ್ಮಣ್ಣನ ಪರಂಪರೆಯ ಲಿಂಗವ್ವ, ಬಡಕುಂದ್ರಿ ಬಸಪ್ಪ ಮೊದಲಾದವರ ಆಟಗಳನ್ನು ನಾಲ್ಕೈದು ಸಲ ನೋಡಿದ್ದೆ. ಪೂರ್ವರಂಗ ವಸ್ತು ಕುಲಗೋಡ ತಮ್ಮಣ್ಣನ ಸಂಪಾದನೆ ಇದ್ದಿತು. ಆದರೆ ಉತ್ತರ-ಭಾಗದ ಕಥೆಯೆಲ್ಲವೂ ಮೂಲ ಪಾರಿಜಾತದ ಕತೆಯನ್ನೇ ಒಳಗೊಂಡಿತ್ತು. ನೋಡಲು ಹಿತವಾಗಿರುತ್ತಿತ್ತು. ಈ ರಾಮಪುರ ಗ್ರಾಮದ ಶ್ರೀಕೃಷ್ಣ ಪಾರಿಜಾತವು ಹೆಸರು ಮಾತ್ರ ಶ್ರೀಕೃಷ್ಣ ಪಾರಿಜಾತವೆಂದು. ಅದಕ್ಕೆ ಬಳಸುವ ಪದ-ಪದ್ಯಗಳೆಲ್ಲ ಬೇರೆ ಯಾರಿಂದಲೋ ರಚಿತವಾದುವು. ಆದರೂ ಆ ಆಟವನ್ನು ಬೆಳತನಕ ಕುಳಿತು ನೋಡಿದೆವು. ಬೆಳಗಿನ ವೇಳೆಯಲ್ಲಿ ಎಲ್ಲವನ್ನೂ ನೋಡಿಯಾದ ಮೇಲೆ ನಾನು "ಅಯ್ಯೋ ಶ್ರೀಕೃಷ್ಣ ಪಾರಿಜಾತದ ಹಣೆಬರಹವೇ ! ನಮ್ಮ ಜನರ ಕೈಯಲ್ಲಿ ಸಿಕ್ಕು ಅದು ತನ್ನ ಮೂಲ ಸೌಂದರ್ಯವನ್ನೇ ಕಳೆದುಕೊಂಡಿದೆ" ಎಂದು ಉದ್ಗರಿಸಿದೆನು. ಹೊಸ ಕಾಲದಲ್ಲಿ ನಮ್ಮ ಅನೇಕ ಜೀವನ-ಸಂಸ್ಕೃತಿಗಳು ಬದಲಾವಣೆ ಹೊಂದಿ ತಮ್ಮ ಮೂಲ ಸ್ವರೂಪವನ್ನೇ ಕಳೆದುಕೊಂಡಿವೆ ಎಂದು ನಾನಂದು ಭಾವಿಸಿದೆ.

ಮೂರು-ನಾಲ್ಕು ದಿನಗಳಲ್ಲಿಯೇ ಮುಂದೆ ಒಂದು ತಾತ್ಪೂರ್ತಿಕವಾಗಿ ಒಳ್ಳೇ ಮನೆ ಸಿಕ್ಕಿತು. ಅದು ನಮಗೆ ಬಹಳ ದಿನ ದಕ್ಕುವಂತಿರಲಿಲ್ಲ. 15-20 ದಿನ ಗಳಲ್ಲಿಯೇ ಬೇರೆ ಮನೆ ನೋಡಿಕೊಳ್ಳಿರೆಂದು ಆ ಮನೆಯೊಡೆಯರು ನಮ್ಮ ಮೇಲೆ ವಿಶ್ವಾಸವಿಟ್ಟು ಆ ಮನೆಯನ್ನು ನಮಗೆ ಒಪ್ಪಿಸಿದ್ದರು. ಮನೆಯು ತುಂಬ ಅನುಕೂಲ ವಾಗಿದ್ದಿತು. ಇಂತಹ ಮನೆಯು ನಮಗೆ ಕೊನೆವರೆಗೂ ಸಿಕ್ಕಬಾರದೇ ಎಂದು ಎನಿಸುವಂತಿತ್ತು. ಅಲ್ಲಿ ಎಲ್ಲ ಸಾಮಾನುಗಳನ್ನೊಯ್ದು ಇರತೊಡಗಿದೆವು. ಅಲ್ಲಿರುವಾಗ ಒಂದು ಚಮತ್ಕಾರದ ಸಂಗತಿ ಜರುಗಿತು. ಒಂದು ದಿನ ನಮ್ಮ ಮನೆಗೆ ನಮ್ಮ

ಅನಂತಾಚಾರ್ಯರು ಪೂಜೆಗೆಂದು ಬಂದಿದ್ದರು. ಅಂದು ನಮ್ಮ ತಾಯಿ ಸಂತೃಪ್ತ ಭಾವದವಳಾಗಿ ಅವರಿಗೆ – "ಅಲ್ರಿ ಆಚಾರ್ರ ಅರಿವಿ ಅಂಗಡಿ ಏನೋ ನಡೀತು. ಅದ್ರ ವ್ಯಾಪಾರವೂ ಒಳ್ಳೇದಾಗಿ ನಡೆದಿದೆಯೆಂದು ನೀವು ಬಡಾಯಿ ಕೊಚ್ತೀರಿ. ಆದರೆ ಬೇಗನೆ ನಮ್ಮ ಒಡವೆಗಳನ್ನು ಬಿಡಿಸಿ ತಂದುಕೊಡುವಿರೆಂದು ನನಗೆ ಹೇಳಿದ್ದಿರಲ್ಲ. ಅಂಗಡಿ ಹಾಕಿ ಒಂದು ವರ್ಷದ ಮೇಲಾದರೂ ಇದುವರೆಗೂ ನಮ್ಮ ಚಿನ್ನದ ಒಡವೆಗಳು ನಮ್ಮ ಮನೆಗೆ ಬರಲೇ ಇಲ್ಲ. ಬೇಗನೆ ತಂದುಕೊಡದಿದ್ದರೆ ನಾನು ಸುಮ್ಮನೆ ಬಿಡುವುದಿಲ್ಲ" ಎಂದು ಕೋಪದ ಮಾತುಗಳಲ್ಲಿಯೇ ಹೇಳಿದರು. ಆಗ ಅನಂತಾಚಾರ್ಯರು ಸಾಂತರಾದರು. "ಬೇಗನೆ ನಿಮ್ಮ ಒಡವೆಯನ್ನು ತಂದುಕೊಡುತ್ತೇನೆ. ನೀವು ಸಿಟ್ಟಾಗಬ್ಯಾಡ್ರವ್ವ" ಎಂದು ಹೇಳಿ ಅಂದಿನ ಪೂಜೆ–ಊಟಗಳನ್ನು ಮುಗಿಸಿದರು. ಮರುದಿನವೇ ಅವರು ರಬಕವಿಗೆ ಹೋಗಿ ಚಿನ್ನದ ಬಳೆಯನ್ನು ಮಾತ್ರ ಬಿಡಿಸಿಕೊಂಡು ಬಂದು ನಮ್ಮ ತಾಯಿಗೆ ಒಪ್ಪಿಸಿದರು. "ಬೇಗನೆ ಸರಿಗೆಯನ್ನೂ ತಂದುಕೊಡುವೆ. ನೀವು ಸಿಟ್ಟಾಗದೆ ಸಮಾಧಾನದಿಂದ ತಾಳಿಕೊಂಡಿರಿ. ಇನ್ನೂ ಸ್ವಲ್ಪ ದಿನ ವಿಲಂಬವಾಗಬಹುದು" ಎಂದು ಹೇಳಿದರು. ಚಿನ್ನದ ಬಳೆ ಮನೆಗೆ ಬಂದುದಕ್ಕಾಗಿ ಸಂತಸಗೊಂಡ ನಮ್ಮ ತಾಯಿಯೂ ಸುಮ್ಮನಾಗಿಬಿಟ್ಟಳು. ಅಂದೆಯೇ ಆ ಚಿನ್ನದ ಬಳೆಗಳು ನಮ್ಮ ಅಣ್ಣನ ಹೆಂಡತಿಯ ಕೈಗಳಿಗೆ ಅಲಂಕಾರಗಳಾದವು.

ಆ ಮನೆಯನ್ನು ಬಿಡಬೇಕಾದ ದಿನಗಳು ತೀರ ಸಮೀಪಕ್ಕೆ ಬಂದವು. ಬೇರೆ ಮನೆಯನ್ನು ಹುಡುಕುತ್ತಲೇ ಇದ್ದ ನಮ್ಮ ಹಣಮಣ್ಣನಿಗೆ ನೇಕಾರರ ಓಣಿಯಲ್ಲಿ ಒಂದು ಮನೆಯು ಸಿಕ್ಕಿತು. ಆ ಮನೆಯೆಂದರೆ ಎಂಟು ಅಂಕಣದ ಒಂದು ಬಂಕ. ವಿಭಾಗಗಳೇ ಅದರಲ್ಲಿ ಇರಲಿಲ್ಲ. ಮೂರು ಅಂಕಣಗಳನ್ನು ಒಳಗೂಡಿಸಿ ಒಂದು ಪಟ್ಟಿಯನ್ನು ಕಟ್ಟ ಭಾಗವನ್ನು ಮಾಡಲಾಗಿದ್ದಿತು. ಅದು ನಮ್ಮ ಕೂತುಕೊಳ್ಳುವ ಮನೆ, ಉಗ್ರಾಣ. ಉಳಿದ ಪಡಸಾಲೆಯಲ್ಲಿ ಅಡಿಗೆ ಮಾಡಬೇಕು. ಪಶ್ಚಿಮದ ಗೋಡೆಗೆ ಹೊಂದಿ ಬಚ್ಚಲು ಇದ್ದಿತು. ಅದಕ್ಕೂ ಮರೆ ಬೇಕಾಯಿತು. ಆದುದರಿಂದ ಅಲ್ಲಿಯೂ ತಡಿಕೆಗಳನ್ನು ನಿರ್ಮಿಸಿ ಮರೆ ಮಾಡಲಾಯಿತು. ಪೂರ್ವದ ಗೋಡೆಗೆ ಹೊಂದಿ ಒಲೆಯನ್ನು ಹೂಡಲಾಯಿತು. ಆಗ ನಾವು ೧೧ ಜನ ಮನೆಯಲ್ಲಿರಬೇಕು. ಮನೆ ನೋಡಿದರೆ ಇಷ್ಟೊಂದು ಚಿಕ್ಕದು. ಆ ಮನೆಯ ಮುಂಗಡೆಯಲ್ಲಿ ಒಂದು ಮೂರು ಅಂಕಣದ ಮುಮ್ಮನೆ ಇದ್ದಿತು. ಅದು ಪೂರ್ತಿಯಾಗಿ ನಮಗೆ ಸೇರಿದುದಲ್ಲ.

ಮನೆಯ ಒಡೆಯರಾದ ನೇಕಾರರು ಸಂಜೆಯವರೆಗೂ ಅದರಲ್ಲಿ ಉಂಕಿ, ಕೆಚ್ಚಿಗೆ, ಹಾಸು ಒಯ್ಯುವುದು, ಕಂಡಿಕೆ ಸುತ್ತುವುದು, ನೂಲು ತೋಡುವುದು,

ಇವೆಲ್ಲ ಕೆಲಸಗಳನ್ನು ಅಲ್ಲಿಯೇ ಮಾಡುತ್ತಿದ್ದರು. ತಮ್ಮ ಕೆಲಸವನ್ನು ಮುಗಿಸಿ ಆದಮೇಲೆ ಸಂಜೆಯ ಕಡೆಗೆ ಮಲಗಿಕೊಳ್ಳಲಿಕ್ಕೆ ಮಾತ್ರ ಆ ಸ್ಥಳವನ್ನು ನಮಗೆ ಕೊಡುತ್ತಿದ್ದರು. ನಾನು, ಬಲರಾಮಣ್ಣ, ತಮ್ಮ ಗೋಪಾಲ, ಚಿಕ್ಕ ತಮ್ಮ ವಿಜಯೇಂದ್ರ ಎಲ್ಲರೂ ಅಲ್ಲಿಯೇ ಮಲಗಿ ನಿದ್ರಿಸುತ್ತಿದ್ದೆವು. ಮಿಕ್ಕವರು ತಮ್ಮ ಅನುಕೂಲತೆಯಂತೆ ಒಳಮನೆಯಲ್ಲಿಯೇ ಮಲಗಿಕೊಳ್ಳುವರು. ನಮ್ಮ ರಾಘಣ್ಣನು ಮಾತ್ರ ಅಂಗಡಿಗೆ ಹೋಗಿ ಅಲ್ಲಿಯೇ ನಿದ್ರಿಸುತ್ತಿದ್ದ. ಇಂತಹ ಗೋಳಾಟದಲ್ಲಿಯೂ ನಮ್ಮ ಕುಟುಂಬದ ಜೀವನ ಸುಸೂತ್ರವಾಗಿ ಮುಂದುವರಿಯಿತು.

ಆ ಮನೆಯಲ್ಲಿ ೧೫ದಿನ ಕಳೆದಿರಬಹುದು. ಆಗ ಬೆಟಗೇರಿಯಿಂದ ಮೂಡಲಗಿಯ ಸಂತೆಗೆ ಒಂದು ಚಕ್ಕಡಿ ಬಂದುದರಿಂದ ಅದರಲ್ಲಿ ನಾವಿಬ್ಬರು ಕುಳಿತುಕೊಂಡು ನಾನು ಬಲರಾಮಣ್ಣ ಹೋದೆವು. ೧೭ ಮೈಲುಗಳ ದಾರಿ ಮಧ್ಯೆ ನದಿಯ ಉಸುಕನ್ನೂ, ಪ್ರವಾಹವನ್ನೂ ದಾಟಿ ಹೋಗಬೇಕು. ಆದುದರಿಂದ ಸಂಜೆಯ ಕಡೆಗೆ ಹೊರಟ ನಮ್ಮ ಚಕ್ಕಡಿಯು ಬೆಟಗೇರಿಯನ್ನು ತಲ್ಪಬೇಕಾದರೆ ರಾತ್ರಿಯ ೯ ಗಂಟೆಗಳಾದವು. ಎಲ್ಲಿ ಉಳಿದುಕೊಳ್ಳಬೇಕೆಂಬುದು ನಮ್ಮಿಬ್ಬರಿಗೂ ನಮಗೆ ಸಮಸ್ಯೆಯೇ ಆಯಿತು. ನಮ್ಮ ಮನೆಗೆ ಬಾಡಿಗೆಯಿಂದಿದ್ದ ಶಿಕ್ಷಕನು ನಮಗೆ ಹೊಸಬ. ಹುಡುಗತನದ ಸಂಕೋಚ ಪ್ರವೃತ್ತಿಯ ಮೂಲಕ ಅವನ ಮನೆಗೆ ನಾವು ಹೋಗಲಿಲ್ಲ. ನಮ್ಮ ದಾಯಾದಿಗಳಲ್ಲಿಯೇ ನಮಗೆ ಸಲುಗೆಯವನಾದ 'ಬಂಡೂ ಕಾಕಾ' ಎಂಬುವನ ಮನೆಯಲ್ಲಿ ನಾವು ಬೀಡುಬಿಟ್ಟೆವು.

ಬಂಡೂ-ಕಾಕಾ ನಮ್ಮನ್ನು ಪ್ರೀತಿಯಿಂದ ಸ್ವಾಗತಿಸಿದನಾದರೂ, "ಈಗ ನಾನು ಒಬ್ಬನೇ ಒಬ್ಬ ಮನೆ ಮನೆಯಲ್ಲಿ. ಹೊಸತಾಗಿ ಬಂದ ಹೆಂಡತಿಯು ಬೆಳಗಾವಿಗೆ ಹೋಗಿದ್ದಾಳೆ. ನಾನು ಏಕಾಕಿಯಾದುದರಿಂದ ನಮ್ಮ ಸೋದರಮಾವನ ಮನೆಗೆ ಎರಡೂ ಹೊತ್ತೂ ಊಟಕ್ಕೆ ಹೋಗಿಬರುತ್ತೇನೆ. ಈಗ ನೀವು ಬಂದಿರಿ. ನನ್ನ ಊಟವು ಆಗಿಹೋಗಿದೆ. ಮನೆಯಲ್ಲಿ ಅಡಿಗೆಗೆ ಯಾವ ಸಿದ್ಧತೆಯೂ ಇಲ್ಲ. ಈಗ ಏನು ಮಾಡುವಿರಿ ?" ಎಂದು ಕೇಳಿದ. "ಹಾಗೆಯೇ ಸ್ವಲ್ಪ ಏನಾದರೂ ಉಪಾಹಾರವನ್ನು ಮಾಡಿ ಮಲಗಿಕೊಳ್ಳುವೆವು" ಎಂದು ನಾವು ಹೇಳಿದೆವು. ಆಗ ಬಂಡೂ-ಕಾಕಾ ನಮ್ಮ ಕೈಕಾಲು ತೊಳಕೊಂಡಾದ ಮೇಲೆ ಗಿರಪಾವು ಮೂರು ಕೊಳಿವೆ ಆಗುವಷ್ಟು ಸೇಂಗಾಕಾಯಿಗಳನ್ನು ಒಂದು ಸೇರಿನಷ್ಟು ಹೊಸ ಬೆಲ್ಲವನ್ನು ತಂದು ನಮ್ಮ ಮುಂದೆ ಇಟ್ಟನು. ನಾವು ಮಾತನಾಡುತ್ತಲೇ ನಮ್ಮ ಉಪಾಹಾರವನ್ನು ಮುಗಿಸಿ ನೀರು ಕುಡಿದು ಹರಟೆ ಹೊಡೆಯುತ್ತ ಕುಳಿತುಕೊಂಡೆವು. ಆಗ ಬಂಡೂ-ಕಾಕಾ ತನ್ನ ಹೆಂಡತಿ

ಮನೆಯವರು ಗರ್ಭಾದಾನ ಕಾಲದಲ್ಲಿ ಕೊಟ್ಟ ಉಡುಗೊರೆಯ ಪದಾರ್ಥಗಳನ್ನೆಲ್ಲ ನಮಗೆ ತೋರಿಸಿದನು. ಅಲ್ಲದೆ ಒಂದು ವಿನೋದದ ಮಾತಿನಲ್ಲಿ ತನಗೆ ಹೆಂಡತಿ ಬಂದ ವಿಷಯವನ್ನೂ ತಿಳಿಸಿದನು. ಆ ವಿನೋದದ ಮಾತಿನಲ್ಲಿ ಈಗಿಲ್ಲಿ ಹೇಳಬೇಕೆಂದರೆ ಅದು ಅಶ್ಲೀಲವಾಗಿ ಕಂಡೀತು. ಅದನ್ನು ನಾನೀಗ ಹೇಳುವುದಿಲ್ಲ. ಮುಂದೆ ನಿದ್ರೆ ಬಂದುದರಿಂದ ನಾವು ಮಲಗಿ ನಿದ್ದೆ ಹೋದೆವು. ಮರುದಿನ ಬೆಳಗಿನಲ್ಲಿ ಒಂದು ಸೋಜಿಗದ ಸಂಗತಿ ನಮಗಾಗಿ ಕಾದುಕೊಂಡಿತ್ತು.

ನಮ್ಮ ನಮ್ಮಲ್ಲಿ ಅಷ್ಟೊಂದು ಸೌಹಾರ್ದವು ಇಲ್ಲದಿದ್ದ ನಮ್ಮ ಚಿಕ್ಕಪ್ಪನು ಎಲ್ಲ ಜನರಿಗೂ ತಮ್ಮ ಮನೆಗೆ ಊಟಕ್ಕೆ ಹೇಳಿ ಬಂಡೂ–ಕಾಕಾನ ಮನೆಗೂ ಬಂದನು. ಅವನಿಗೆ ತನ್ನ ಮನೆಯಲ್ಲಿ ದೇವರ ಸಮಾರಾಧನೆ ಇದೆಯೆಂದೂ ಅದಕ್ಕಾಗಿ ಊಟಕ್ಕೆ ಬರಬೇಕೆಂದೂ ಹೇಳಿ ಒಪ್ಪಿಸಿದನು. ಅಲ್ಲಿಯೇ ಕುಳಿತ ನಮ್ಮಿಬ್ಬರನ್ನೂ ನೋಡಿ ಸಂಕೋಚದ ಧ್ವನಿಯಲ್ಲಿ ನಮ್ಮೊಡನೆ ಮಾತನಾಡಿದರು– "ನೀವು ಯಾವಾಗ ಬಂದ್ರಿ ಚಲೋ ಆತು. ಇಂದು ನಮ್ಮ ಮನ್ಯಾಗ ದೇವ್ರ ಸಮಾರಾಧನೆ ಅದ. ಈಗ ಮಾವಿನಹಣ್ಣಿನ ಸುಗ್ಗಿ. ಅದಕ್ಕಾಗಿ ಮಾವಿನಹಣ್ಣಿನ ಸೀಕರಣೆ ಹೋಳಿಗೆ ಇವುಗಳ ಬ್ರಾಹ್ಮಣ ಭೋಜನವಾಗುವುದು. ನೀವೂ ಅಲ್ಲಿಯೇ ಊಟಕ್ಕೆ ಬನ್ನಿರಿ" ಎಂದು ಹೇಳಿದ. ನಮಗೇನು ನಾವು ಸಣ್ಣ ಹುಡುಗರು. ಯಾವ ವಿದ್ವೇಷಭಾವವನ್ನೂ ಮನಸ್ಸಿನಲ್ಲಿ ಇಟ್ಟುಕೊಂಡಿರಲಿಲ್ಲ. ಊಟಕ್ಕೆ ಬರುವೆನೆಂದು ಒಪ್ಪಿಕೊಂಡು ಅವನನ್ನು ಕಳಿಸಿಕೊಟ್ಟೆವು. ಮಧ್ಯಾಹ್ನ ಎರಡು ಗಂಟೆಗೆ ಭೋಜನ ಸಮಾರಂಭ ನಡೆಯಿತು. ಕೌಜಲ್ಗಿಯಿಂದ ಬಂದ ಅನೇಕ ಜನ ವೈದಿಕ ಬ್ರಾಹ್ಮಣರು ಆ ದಿನದ ಊಟಕ್ಕೆ ದಯಮಾಡಿಸಿದರು. ಊರಲ್ಲಿಯ ಎಲ್ಲ ಜನರಿಗೂ ಅಂದು ಔತಣವಿದ್ದಿತು. ಅಂದಿನ ಆ ಊಟದಲ್ಲಿ ನಾವು ನೋಡಿದ ಹೊಸತನವೆಂದರೆ ಆ ವೈದಿಕ ಬ್ರಾಹ್ಮಣರ ಹೋಳಿಗೆ–ಸೀಕರಣೆಗಳ ಊಟ. ಒಬ್ಬೊಬ್ಬರು ಎರಡು ತಂಬಿಗೆಗಿಂತಲೂ ಹೆಚ್ಚಾಗಿ ಹೊಟ್ಟೆಯಲ್ಲಿ ಹಾಕಿದ ಸೀಕರಣೆ ಊಟವನ್ನು ನೋಡಿ ನಾವು ಬೆರಗುಗೊಂಡೆವು. ಎರಡು ಗಂಟೆಗೆ ಊಟವಾದುದರಿಂದಲೂ ಸಿಹಿಯಾದ ಪದಾರ್ಥಗಳಿದ್ದುದರಿಂದಲೂ ನಾವೂ ಹೊಟ್ಟೆತುಂಬ ಊಟ ಮಾಡಿದೆವು. ದಕ್ಷಿಣೆ–ತಾಂಬೂಲಗಳೊಂದಿಗೆ ಅಂದಿನ ಸಮಾರಾಧನೆ ಕಾರ್ಯವು ಮುಗಿಯಿತು.

ನಾವು ಬೆಟಗೇರಿಗೆ ಹೋದ ಕಾರ್ಯವೆಂದರೆ ನಮ್ಮ ಪಾಲಿಗೆ ಬಂದ ನಮ್ಮ ಗಿಡದ ಮಾವಿನಕಾಯಿಗಳನ್ನು ಆಳು ಮಾಡಿ ಹೊರಿಸಿಕೊಂಡು ಹೋಗುವುದಕ್ಕೆ ಮತ್ತು ಮನೆಯಲ್ಲಿದ್ದ ಮೆಂತೆ–ಮೆಣಸಿನಕಾಯಿಗಳ ಡಬ್ಬಿಯೊಂದನ್ನು ತೆಗೆದುಕೊಂಡು ಹೋಗುವದಕ್ಕೆ. ಅದರ ವಿಚಾರವನ್ನೆಲ್ಲ ನಾವು ಮಾಡಿಕೊಂಡೆವು. ಆಳನ್ನು ಮಾವಿನಕಾಯಿಗಳನ್ನು ತೆಗೆದುಕೊಂಡು ಹೋಗುವುದಕ್ಕೂ ಗೊತ್ತು ಮಾಡಿದೆವು.

ನಾವು ಆಟವಾಡುವ ಹೊಸ ಹರೆಯದ ಹುಡುಗರು. ಆಗ ರಾತ್ರಿಯಾಗಲು ಮಧ್ಯಾಹ್ನದ ಊಟದ ಅಂಶವು ನಮ್ಮ ಹೊಟ್ಟೆಯಲ್ಲಿ ಉಳಿದಿರಲಿಲ್ಲ. ಚುರುಚುರು ಹಸಿವೆಯಾಗಿದ್ದಿತು. ನಮ್ಮ ಮನೆಯಲ್ಲಿದ್ದ ಆ ಶಿಕ್ಷಕನು ತಮ್ಮಲ್ಲಿ ಊಟಕ್ಕೆ ಕರೆದರೂ ಅಪರಿಚಯದ ಸಂಕೋಚದ ಮೂಲಕ ನಾವು ಹೋಗಲಿಲ್ಲ. ಬಂಡೂ-ಕಾಕಾನ ಮನೆಯಲ್ಲಿಯೇ ಮಲಗಿಕೊಂಡೆವು. ಅವನು ಕೇಳಿದರೆ ಮಧ್ಯಾಹ್ನದಲ್ಲಿ ನಮಗೆ ಹೊಟ್ಟೆ ತುಂಬ ಊಟವಾಗಿದೆ. ಈಗ ಏನೂ ಬೇಡ ಎಂದು ಸಂಕೋಚಭಾವದ ಸುಳ್ಳನ್ನು ಹೇಳಿ ಅಂದಿನ ರಾತ್ರಿಯನ್ನು ಕಳೆದೆವು. ಮರುದಿನ ಬೆಳಗಿನಲ್ಲಿ ಊರಿಗೆ ಹೊರಡಬೇಕು. ಮಾವಿನಕಾಯಿಗಳನ್ನು ಹೊತ್ತುಕೊಂಡು ಹೊರಟ ಆಳು ನಸುಕಿನಲ್ಲಿಯೇ ಹೊರಟು ಹೋಗಿದ್ದನು. ಆಗ ನಮ್ಮ ಮಾವಿನಗಿಡದ ಕಾವಲಿಗನು ಅವಸರದಿಂದ ಬಂದು ಇವಿಷ್ಟು ಕಾಯಿಗಳು ನಮ್ಮವು ಉಳಿದಿವೆ ನೋಡಿರಿ. ಇವನ್ನೂ ನಿಮ್ಮ ಜೊತೆಗೆ ತೆಗೆದುಕೊಂಡು ಹೋಗಿರಿ ಎಂದು ನಮ್ಮ ಕಡೆಗೆ ಅವುಗಳನ್ನು ಒಪ್ಪಿಸಿದನು. ೨೫ ರಷ್ಟು ಹಸಿಯ ಮಾವಿನಕಾಯಿಗಳವು. ೧೬–೧೭ ಮೈಲು ಹೊತ್ತುಕೊಂಡು ಹೋಗಬೇಕೆಂದರೆ ಅಸಾಧ್ಯವೆಂದು ಕಂಡಿತು. ಆದರೂ ಆ ಮಾವಿನಕಾಯಿಗಳ ಮೇಲಿನ ಮೋಹ ನಮ್ಮನ್ನು ಹೊತ್ತುಕೊಂಡು ಹೋಗಲಿಕ್ಕೆ ಮನಸ್ಸನ್ನು ಸಿದ್ಧಗೊಳಿಸಿತು. ಒಂದು ಗೋಣಿಚೀಲದಲ್ಲಿ ಮಾವಿನಕಾಯಿಗಳನ್ನು ಹಾಕಿ ನಮ್ಮ ಅಣ್ಣ ಹೊತ್ತುಕೊಂಡ. ನಾನು ಆ ಮೆಂತೆ-ಮೆಣಸಿನಕಾಯಿಗಳ ಡಬ್ಬಿಯನ್ನು ಹೊತ್ತುಕೊಂಡೆ. ಇಬ್ಬರೂ ಮೂಡಲಗಿಯತ್ತ ಮುಖ ಮಾಡಿ ದಾರಿ ಹಿಡಿದೆವು. ಅಂದಿನ ಆ ಭಾರ ಹೊರುವ ಶ್ರಮವನ್ನು ಹೊತ್ತುಕೊಂಡ ನಾವೇ ಬಲ್ಲೆವು. ೫ ಮೈಲು ದಾರಿಯನ್ನು ಕ್ರಮಿಸಿದಾಗ ನಮ್ಮ ಭಾರವು ನಮಗೆ ಸಾಕು-ಬೇಕು ಎನ್ನಿಸಿತು. ೮ ಮೈಲಿನ ಮೇಲೆಯೇ ನಮ್ಮ ಅಕ್ಕನ ಊರಾದ ಧರಮಟ್ಟಿ. ಮೊದಲ ದಿನ ರಾತ್ರಿಯಲ್ಲಿಯೂ ನಮಗೆ ಊಟವೇ ಇರಲಿಲ್ಲ. ಮೇಲೆ ಇಷ್ಟೊಂದು ಭಾರ ಹೊರುವುದು. ಆದುದರಿಂದ ನಾನು ನಮ್ಮ ಬಲರಾಮಣ್ಣನಿಗೆ ಹೇಳಿದೆ– "ಹೇಗೂ ಈ ಊರಲ್ಲಿ ನಮ್ಮ ಅಕ್ಕನ ಮನೆಯಿದೆ. ಅಲ್ಲಿ ಹೋಗಿ ಹೊಟ್ಟೆತುಂಬ ಊಟ ಮಾಡಿ ಮುಂದೆ ನಾವು ಸ್ವಲ್ಪ ವಿಶ್ರಾಂತಿ ಪಡೆದು, ಈ ಹೊರೆಯನ್ನು ಹೊತ್ತುಕೊಂಡು ಮೂಡಲಗಿಗೆ ಹೋಗಬೇಕು" ಎಂದು.

ಆದರೆ ನಮ್ಮ ಬಲರಾಮಣ್ಣನ ಮುಂಧೋರಣೆಯ ವಿಚಾರವೇ ಬೇರೆಯಾಗಿದ್ದಿತು. ಈ ಸಾಮಾನುಗಳನ್ನು ಮೂಡಲಗಿಯವರೆಗೆ ಮುಟ್ಟಿಸಿ ಅಲ್ಲಿ ಊಟ ಮಾಡಿ ಧರಮಟ್ಟಿಯಲ್ಲಿ ನಡೆಯಲಿರುವ ಒಬ್ಬ ಪರಿಚಿತರ ಮನೆಯ ಲಗ್ನಕ್ಕೆ ತಾನು ಇಂದೆಯೇ ಧರಮಟ್ಟಿಗೆ ತಿರುಗಿ ಬರಬೇಕೆಂದು ಅವನ ಒಳಯೋಚನೆ. ನನಗಾಗ ಬಾಯಿಬಿಟ್ಟು

ಏನನ್ನೂ ಹೇಳಲಿಲ್ಲವಾದರೂ ಮೂಡಲಗಿಗೆ ಹೋಗಿಯೇ ಊಟ ಮಾಡೋಣವೆಂದು ಅವನು ಹಟದಿಂದ ಹೇಳಿದ. ನಾನು ನಿರ್ವಾಹವಿಲ್ಲದೆ ಅವನ ಬೆನ್ನು ಹತ್ತಿದೆ. ಧರಮಟ್ಟಿಯಿಂದ ಒಂದು ಮೈಲಿನಷ್ಟು ದೂರ ಕ್ರಮಿಸಿರಬಹುದು. ನಮ್ಮ ಇಬ್ಬರ ಹೊಟ್ಟೆಯಲ್ಲಿಯೂ ಹಸಿವೆಯ ಹಾವು ಭುಸುಗುಟ್ಟತೊಡಗಿತು. ಆದರೆ ತಿನ್ನುವುದೇನು ? ಹತ್ತಿರ ದುಡ್ಡೂ ಇರಲಿಲ್ಲ. ಕೊಂಡುಕೊಳ್ಳಲು ಅಂಗಡಿಗಳೂ ಹತ್ತಿರವಿರಲಿಲ್ಲ. ನಾವೀಗ ಹಸಿವೆಯನ್ನು ತಡೆದುಕೊಳ್ಳಲು ಏನು ಮಾಡಬೇಕು ? ನಮ್ಮ ಆಲೋಚನೆ ಬಗೆಹರಿಯಲಿಲ್ಲ.

ಹಸಿದ ಹೊಟ್ಟೆಯೇ ಒಂದು ಸೂಚನೆಯನ್ನು ಮನಸ್ಸಿನಲ್ಲಿ ಮೂಡಿಸಿತು. ಈಗ ನಮ್ಮ ಬಳಿಯಲ್ಲಿ ಮಾವಿನಕಾಯಿಗಳು, ಮೆಂತೆ–ಮೆಣಸಿನಕಾಯಿಯೂ ಇವೆ. ಇವು ತಿನ್ನುವ ಪದಾರ್ಥಗಳೇ ಹೌದು. ಇವನ್ನು ತಿಂದು ನಮ್ಮ ಹೊಟ್ಟೆ ಉರಿಯನ್ನು ತಣಿಸೋಣ ಎಂಬ ವಿಚಾರದಿಂದ ಒಂದು ಹಳ್ಳದ ದಂಡೆಯಮೇಲೆ ಕುಳಿತುಕೊಂಡೆವು. ಡಬ್ಬಿಯ ತಗಡಿಗೆ ಚುಚ್ಚಿ ಮಾವಿನಕಾಯಿಗಳನ್ನು ಸಣ್ಣ ಸಣ್ಣ ಹೋಳು ಮಾಡಿ ತಿನ್ನಲಾರಂಭಿಸಿದೆವು. ರುಚಿಯ ಬದಲಾವಣೆಗಾಗಿ ಮಧ್ಯೆ ಮಧ್ಯೆ ಮೆಂತೆ–ಮೆಣಸಿನ ಕಾಯಿಗಳನ್ನು ಕಚ್ಚಿ ತಿಂದೆವು. ಎರಡೆರಡು ದೊಡ್ಡ ಕಾಯಿಗಳನ್ನು ತಿನ್ನುವುದರಲ್ಲಿ ಹೊಟ್ಟೆಯಲ್ಲಿ ಒಂದು ಸ್ವಲ್ಪ ಹಸಿವೆ ಕಡಿಮೆಯಾದಂತೆ ಎನಿಸತೊಡಗಿತು. ಎದ್ದು ಹೋಗಿ ಒಂತೆಯ ನೀರನ್ನು ಹೊಟ್ಟೆತುಂಬ ಕುಡಿದು, ಬಾಯಾರಿಕೆಯನ್ನು ತಣಿಸಿಕೊಂಡೆವು. ಬಳಿಕ ನಮ್ಮ ಮೂಡಲಗಿಯ ಮಾರ್ಗಕ್ರಮಣ ನಡೆಯಿತು. ಬೇಸಗೆಯ ಏರು-ಬಿಸಿಲು. ಮೈಯಿಂದ ಬೆವರು ಒಂದೇ ಸವನೆ ಸುರಿಯುತ್ತಿತ್ತು. ಹಾಗೆಯೇ ನಾಲ್ಕು ಮೈಲು ದಾರಿಯನ್ನು ಕ್ರಮಿಸಿ, ಮೂಡಲಗಿಗೆ ಹೋದೆವು. ಹೋಗಿ ಸ್ನಾನ ಮಾಡಿ, ಸ್ವಲ್ಪ ವಿಶ್ರಾಂತಿಯನ್ನು ಪಡೆದು ತಾಯಿ ಕೈಯ ಸವಿದುತ್ತನ್ನೂ ಉಂಡು ಆದ ದಣಿವನ್ನೆಲ್ಲ ಕಳೆದುಕೊಂಡೆವು. ಮತ್ತೆ ನಾಲ್ಕು ಗಂಟೆಗೆ ನಮ್ಮ ಬಲರಾಮಣ್ಣನು ಮದುವೆಗೆಂದು ಧರಮಟ್ಟಿಗೆ ಹೊರಟನು. ನನಗೂ ಜೊತೆಗೆ ಬರುವಂತೆ ಹೇಳಿದನು. ಇಬ್ಬರೂ ಕೂಡಿ ಉಲ್ಲಾಸದಿಂದಲೇ ನಮಗಾದ ದಾರಿಯ ಶ್ರಮವನ್ನು ಗಣಿಸದೆ ಅಲ್ಲಿಗೆ ಹೋದೆವು. ಆದರೆ ಅಲ್ಲಿಯ ಪರಿಸ್ಥಿತಿಯೇ ಬೇರೆ. ಮರುದಿನವೇ ಮದುವೆಯ ಸಮಾರಂಭವಿದ್ದು ಅದರಲ್ಲಿ ನಾವು ಭಾಗವಹಿಸಬೇಕಾಗಿತ್ತು. ಆದರೆ ಬೀಗರಾಗಿ ಬರಲಿದ್ದ ಸೂಳೆಭಾಂವಿಯ ದೇಶಪಾಂಡೆಯವರ ಸಂಬಂಧಿಕರಾರೋ ಸತ್ತುಹೋದರೆಂದೂ ಅವರು ಮುಂದಿನ ಮುಹೂರ್ತವನ್ನು ತಿಳಿಸುವವರೆಗೆ ಮದುವೆ ಮುಂದೆ ಬಿದ್ದಿತೆಂದೂ ಈಗ ಮದುವೆ ಮುಂದೆ ಬಿದ್ದುದರಿಂದ ಮದುವೆಗಾಗಿ ಸಿದ್ಧಪಡಿಸಿದ ಸಾಮಗ್ರಿಯು ಮದುವೆಯ ಮುಂದಿನ ಮುಹೂರ್ತದವರೆಗೆ ಉಳಿಯುವುದೇ ಎಂದು ಸಂದೇಹಪಡುತ್ತಲೇ ನಾವು ಮೂಡಲಗಿಗೆ ಹೊರಟುಹೋದೆವು. **(ಸಶೇಷ)**

ವಿಮರ್ಶಾ ಕಮ್ಮಟ: ಒಂದು ಪ್ರತಿಕ್ರಿಯೆ

● ಬಸವರಾಜ ವಕ್ಕುಂದ

ಬೇಂದ್ರೆಯವರ 'ತುತ್ತಿನ ಚೀಲ' ಒಂದು ವಿಮರ್ಶಾ ಕಮ್ಮಟದ ಚರ್ಚೆ(ಸಂವಾದ-೨೦) ಒಂದು ಕವಿತೆಯನ್ನು ಭಿನ್ನ ನೆಲೆಗಳಲ್ಲಿ ಅರ್ಥೈಸುವ ಪ್ರಯತ್ನವಾಗಿದೆ. 'ತುತ್ತಿನ ಚೀಲ' ನಾನು ಪುನಃ ಪುನಃ ಓದಿಕೊಳ್ಳುವ ನನಗೆ ಪ್ರಿಯವಾದ ಕವಿತೆಗಳಲ್ಲೊಂದು. ಈ ಚರ್ಚೆಯನ್ನು ಓದಿದ ನಂತರ ಕವಿತೆಯನ್ನು ಅದರ ಆಂತರಿಕ ವ್ಯವಸ್ಥೆಗನುಗುಣವಾಗಿ ತತ್ವ ಶಾಸ್ತ್ರೀಯ ನೆಲೆಯಲ್ಲಿ ಅರ್ಥೈಸಬಹುದಾದ ಕೆಲ ವಿಚಾರಗಳನ್ನು ಬರೆಯಬೇಕೆನಿಸಿತು. ಬರೆದು ಕಳಿಸುತ್ತಿರುವೆ:

ಈ ಕವಿತೆಯ ಮೊದಲ ಮೂರು ನುಡಿಗಳು ಕ್ರಮವಾಗಿ 'ಅನ್ನ ಬ್ರಹ್ಮದ। ದೇಗುಲದಲ್ಲಿ', 'ನಾದ ಬ್ರಹ್ಮದ। ಕಗ್ಗವಿಯಲ್ಲಿ', 'ಶಬ್ದ ಬ್ರಹ್ಮದ। ಗುಮ್ಮಟದಲ್ಲಿ' ಎಂಬ ಸಾಲುಗಳಿಂದ ಸುರುವಾಗಿ ಅದೇ ಸಾಲುಗಳಿಂದ ಮುಕ್ತಾಯವಾಗಿವೆ. ಇಲ್ಲಿನ ಪುನರಾವರ್ತನೆಯಿಂದ ಬೇಂದ್ರೆಯವರು ಹಸಿವೆಯ ಚಡಪಡಿಕೆ ನಡೆಯುವ ಜೀವ ತ್ರಯದ ಮೂರು ನೆಲೆಗಳನ್ನು (ಸ್ಥಾನಗಳನ್ನು) ಒತ್ತುಕೊಟ್ಟು ನಿರ್ದೇಶಿಸುತ್ತಾರೆ.

ಅನ್ನಬ್ರಹ್ಮದ ದೇಗುಲದಲ್ಲಿ ಅಂದರೆ ಹಸಿವೆಯ ಸ್ಥೂಲ ಪ್ರಪಂಚದಲ್ಲಿ (ಅನ್ನಮಯದಲ್ಲಿ) ಜೀವಾತ್ಮನ ಪೂಜೆ ನಡೆಯಬೇಕು. ಜೀವಾತ್ಮ ತಣಿಸಲ್ಪಡಬೇಕು. ಆದರೆ ಹಾಗಾಗದೆ ಅಲ್ಲಿ ಬೆಳಗೂ ಬೈಗೂ ಹಸಿವೆಯ ಬೆಂಕಿ ದಹಿಸುತ್ತಿದೆ. ಅದನ್ನು ಹಿಂಗಿಸುವುದಕ್ಕಾಗಿ ನಾನಾ ವಿಧದ ಕಸರತ್ತುಗಳು (ದೊಂಬರ ಪೂಜೆ) ಸಾಗಿವೆ. ಆದರೂ ಅಗಳೂ ದಕ್ಕದೆ ಜೀವಾತ್ಮ ಕಾಗೆಯಾಗಿ ಕೂಗುತ್ತಿದ್ದಾನೆ. ಉಸಿರಾಡುತ್ತಿರುವ ಗಾಳಿಯೇ ನೈವೇದ್ಯವಾಗಿದೆ. ಈ ಸ್ಥಿತಿಯಲ್ಲಿ ಅನ್ನಕ್ಕಾಗಿ ಹಲಬುವ ಬೊಬ್ಬೆಯೇ ಗಂಟೆಯಾಗಿದೆ. ಇದು ತಣಿಸುವ ಪೂಜೆಯಲ್ಲ. ಕಂಗೆಡಿಸುವ ಪೂಜೆ.

ನಾದ ಬ್ರಹ್ಮ ಜೀವತ್ರಯದಲ್ಲಿ ಎರಡನೆಯದಾದ ತೈಜಸವನ್ನು ಸಂಕೇತಿಸುತ್ತದೆ. ಇದು ತೇಜೋಮಯವಾದ ಅಂತರಾತ್ಮನ ನೆಲೆ. ಆದರೆ ಜೀವಾತ್ಮನ ಹಿಂಗದ ಹಸಿವೆಯ ದುರವಸ್ಥೆಯಿಂದಾಗಿ ನಾದ ಬ್ರಹ್ಮ ಕಗ್ಗವಿಯಾಗಿದೆ. ಆದ್ದರಿಂದ ಅಲ್ಲಿ ಕೃತಿ ಇದ್ದೂ ಶ್ರುತಿ ಇಲ್ಲವಾಗಿದೆ. ಅಂತರಾತ್ಮ ಅಪಸ್ವರವನ್ನೂ ಹೊರಡಿಸದೆ ತಳಮಳಿಸುತ್ತಿದೆ.

ಜೀವತ್ರಯದ ಮೂರನೆಯ ಅವಸ್ಥೆ ಪ್ರಾಜ್ಞವು ಇಲ್ಲಿ ಶಬ್ದಬ್ರಹ್ಮದ ಗುಮ್ಮಟವಾಗಿದೆ. ಜೀವಾತ್ಮ, ಅಂತರಾತ್ಮರಿಗೆ ಪರಮಾತ್ಮದ ಅರಿವು ಮೂಡಿಸಬೇಕಾದ,ಅಂದರೆ

ಬಿಡುಗಡೆಯ ದಾರಿ ತೋರಬೇಕಾದ ಪ್ರಜ್ಞೆಯ ಹಂತವಿದು. ಆದರೆ ಪ್ರಾಜ್ಞರು ವೇದವನ್ನು ತಮಗೆ ಅನುಕೂಲ ಸಿಂಧುವಾದ ಅರ್ಥ ಬರುವ ಹಾಗೆ ವಾದಿಸಿ ಪ್ರಜ್ಞೆಯ ದಾರಿ ತಪ್ಪಿಸಿದ್ದಾರೆ. ಇದು ಎಷ್ಟು ನಾಜೂಕಾಗಿ ನಡೆದಿದೆ ಎಂದರೆ ಹಸಿವೆಯಿಂದ ಕಂಗೆಟ್ಟಿರುವ ಜೀವಾತ್ಮರು ಜೇಡದ ರೀತಿಯಲ್ಲಿ ತಾವೇ ನೆಲಿಸಿರುವ ಪಾಪ ಪುಣ್ಯಗಳ ಬಲೆಯಲ್ಲಿ ಸ್ವಯಂ ಸಮ್ಮತಿಯಿಂದ ಅತ್ಮಾಹುತಿಗೈಯುವಂತಾಗಿದೆ.

ಈ ಮೂರು ನುಡಿಗಳು ಸ್ಥಿತಿಯನ್ನು ವರ್ಣಿಸಿದರೆ ಮುಂದಿನ ಮೂರು ನುಡಿಗಳು ಈ ಸ್ಥಿತಿಗೆ ಕಾರಣ ಮತ್ತು ಪರಿಣಾಮಗಳನ್ನು ವರ್ಣಿಸುತ್ತವೆ. ಇಲ್ಲಿಯೂ ಒಂದು ಕ್ರಮ ಇದೆ. ೧ನೆಯ ನುಡಿಗೆ ೪ನೆಯ ನುಡಿ, ೨ನೆಯ ನುಡಿಗೆ ೫ನೆಯ ನುಡಿ, ೩ನೆಯ ನುಡಿಗೆ ೬ನೆಯ ನುಡಿ ಕ್ರಮವಾಗಿ ಸಂವಾದಿಯಾಗಿ ಬಂದಿರುವುದನ್ನು ಗಮನಿಸಬೇಕು.

ದೈವವುಳ್ಳವರು ಅಂದರೆ ದೈವಾಸರು, ಅದೃಷ್ಟಶಾಲಿಗಳು. ಇವರಿಗೆ ದಯೆ ಇಲ್ಲವಾಗಿದೆ. ಇವರು ದೈವದ ಹೆಸರಿನಲ್ಲಿ ಕೂಳಿನ ಕೋಟೆ ಕಟ್ಟಿಕೊಂಡಿರುವ ಅದೃಷ್ಟವಂತರು. ಇವರು ಬಿಡುಗಣ್ಣವರು. ಅಂದರೆ ಚಂಚಲಚಿತ್ತರು, ಲೋಲುಪರು. ಅಮೃತದ(?) ತೇಗಿನಿಂದ ಮದಿಸಿದವರು. ಇಂಥವರಿಗೆ ತಾವೇ ಕಾರಣವಾಗಿರುವ 'ಡೊಂಬರ ಪೂಜೆ' ಕಾಣುವುದಿಲ್ಲ. ಹಸಿದವನ ಹಸಿವೆಯ ಶೂಲಿ ಉನ್ಮತ್ತರಿಗೆ ಅರ್ಥವಾಗದಿರುವುದರಿಂದ ಅನ್ನಬ್ರಹ್ಮದ ದೇಗುಲದಲ್ಲಿ ಬೊಬ್ಬೆಯ ಗಂಟೆ ಕೇಳಿಸುತ್ತಿದೆ.

ನಾದ ಬ್ರಹ್ಮದಲ್ಲಿ ಹೊರಡುವ ಶ್ರುತಿ ಅವಕಾಶದಲ್ಲಿ ಪ್ರಕಟವಾಗಬೇಕು. ಅವಕಾಶವೆಂದರೆ ಇಲ್ಲಿ ಮುಗಿಲಿನ ಕಿವಿಯಾಗಿದೆ, ಶ್ರವಣಾಂಗವಾಗಿದೆ. ಈ ಕಿವಿಯೋ 'ಹಾಡುವ ಸಭೆಯಲಿ ನರಳುವುದುಂಟೇ ?' ಎಂದು ಪ್ರಶ್ನಿಸುತ್ತಿರುವುದರಿಂದ ನಾದ ಬ್ರಹ್ಮ ಕಗ್ಗವಿಯಾಗಿದೆ. ಅತ್ತು, ಕೂಗಿ. ಚೀರಿದರೂ ಯಾವ ಧ್ವನಿಯೂ ಹೊಮ್ಮುತ್ತಿಲ್ಲ. ಹೊಮ್ಮಿದರೂ ಕಿವಿ ಕೇಳಲು ನಿರಾಕರಿಸುತ್ತಿದೆ.

'ಕಿಕ್ಕಿರಿ ತುಂಬಿದ ಭೂಮಿಯ ಕಣಜ'ದ ಒಡೆಯರು ಆಳುವ ಪ್ರಭುಗಳು. ಅವರ ಬೊಕ್ಕಸದೊಡಲು ಗಬ್ಬೆದ್ದು ನಾರುತ್ತಿದ್ದರೂ (ಕಕ್ಕಸ ಬಡುತಿದೆ) ಇನ್ನೊಬ್ಬರಿಗೆ ನೀಡುವುದರಿಂದಲೇ 'ಬಡವರ ಬಗ್ಗರ ತುತ್ತಿನ ಚೀಲ ಬರಿದೋ ಬರಿದು ತೆರವೋ ತೆರವು' ಆಗಿದೆ. 'ಬಾಳಿಗಿಂತಲೂ ಕೂಳೇ ಮೇಲೋ ?' ಎಂಬ ವೇದಾಂತಿಗಳ ಬೆಂಬಲವು ಆಳುವವರ ಬೆನ್ನಿಗಿದೆ. ಈ ವೇದಾಂತವೇ ಹಸಿದವರಿಗೆ ಜೇಡದ ಬಲೆ. ಅಥವಾ ಶಬ್ದಬ್ರಹ್ಮದ ಗುಮ್ಮಟ ಹಸಿದವರ ಗೋರಿಯಾಗಿದೆ.

ಈ ಆರು ನುಡಿಗಳಲ್ಲಿ ಅನ್ನದ ಸಮಸ್ಯೆಯಿಂದ ಉಂಟಾಗಿರುವ ಸ್ಥಿತಿ, ಕಾರಣ, ಪರಿಣಾಮಗಳಿದ್ದರೆ ಏಳನೆಯುದರಲ್ಲಿ ಕವಿಯ ಭವಿಷ್ಯದ್ದರ್ಶನವಿದೆ. 'ತುತ್ತಿನ ಚೀಲದ ಒಳಗಿನ ಒಳಗಿನ ಒಳದನಿ'ಯನ್ನು ಕವಿಯು ಒಳಗಿವಿ ಕೇಳಿಸಿಕೊಂಡಿದ್ದರ ವರ್ಣನೆ ಇದೆ. 'ಸಾವಿನ ನೋವಿಗೆ ಕಲಮಲವೇಳುವ'ವರೆಗೆ ಜೀವ ಸುಮ್ಮನೆ ಬಿದ್ದುಕೊಂಡಿರುತ್ತದೆ. ಅಸ್ತಿತ್ವಕ್ಕೇ ಸಂಚಕಾರ ಬಂದಾಗ ನೆಲವನ್ನೇ ತುತ್ತು ತುತ್ತಾಗಿ ಕಬಳಿಸಿಬಿಡುವುದಾಗಿ ಗರ್ಜಿಸುತ್ತದೆ. ತನ್ನ ಅಸಹಾಯಕತೆಯ ಗೋರಿ ಯಿಂದ ಎದ್ದುಬಂದು 'ಶಿವ ಶಿವಾ ಹೇ ಶಿವ ಮಾದೇವಾ' ಎಂದು ಹಲುಬಿದರೂ ಓಗೊಡದ ಆ ದೇವರ ಗೋರಿ ಕಟ್ಟಲು ಮುಂದಾಗುತ್ತದೆ. 'ಧರ್ಮದ ಧೂಪಕೆ ಬೆಂಕಿಯನಿಕ್ಕಿ' ಎಂಬುದನ್ನು ಪ್ರತ್ಯೇಕವಾಗಿ ಅರ್ಥೈಸಿದರೆ– ಧರ್ಮದಲ್ಲಿಯ ಸುಗಂಧ ಪರಿಮಳಿಸುವಂತೆ ಮಾಡುವುದು ಎಂಬ ಅರ್ಥ ಹೊರಡಬಹುದು. ಆದರೆ ಸಂದರ್ಭ ಹಾಗಿಲ್ಲ. ತನ್ನ ದುರವಸ್ಥೆಗೆ ಕಾರಣವಾಗಿರುವ ಧರ್ಮವನ್ನು ನಾಶ ಮಾಡುವುದೇ ಇಲ್ಲಿ ಬೆಂಕಿಯಿಕ್ಕುವುದರ ಉದ್ದೇಶವಾಗಿದೆ. ಇಲ್ಲಿ ಅರ್ಥವನ್ನು ಒಟ್ಟು ಧೋರಣೆಗೆ ಒಗ್ಗಿಸಿಕೊಳ್ಳಬೇಕಾಗಿರುವುದರಿಂದ ಕವಿತೆಯಲ್ಲಿಯೇ ಇವು ಅಸಹಜ ಸಾಲುಗಳೆನ್ನ ಬಹುದು. ಅಸ್ತಿತ್ವಕ್ಕಾಗಿ ಹೋರಾಟವೇ ಇಲ್ಲಿಯ ಪೂಜೆಯಾಗಿದೆ. ಪ್ರಾಣ ಜಾಗೃತ ವಾಗಿ ಗಂಟೆಯೆನಿಸಿದರೆ ಒಡಲಾಳದ ಕಿಚ್ಚು ಚೈತನ್ಯವಾಗಿ ಸ್ಫುರಣಗೊಳ್ಳುತ್ತಿದೆ. ಹೀಗೆ ಕವಿತೆಯ ಕೊನೆಯ ಭಾಗ ಕ್ರಾಂತದರ್ಶಿಯಾಗಿದೆ.

ನುಡಿಗಳಲ್ಲಿರುವ ಈ ಆಂತರಿಕ ವ್ಯವಸ್ಥೆ, ಒಂದು ಇನ್ನೊಂದರಲ್ಲಿ ಪ್ರತಿಫಲನ ಗೊಳ್ಳುತ್ತ ಹೋಗುವ ಪ್ರಕ್ರಿಯೆ 'ತುತ್ತಿನ ಚೀಲ' ಎಂಬ ಶಿರೋನಾಮೆಯನ್ನು ಒಟ್ಟು ಅನ್ನ ಸಮಸ್ಯೆಯ ಕೇಂದ್ರ ಪ್ರತಿಮೆಯಾಗಿಸಿವೆ. ಅಥವಾ ಅನ್ನಸಮಸ್ಯೆಯ ವಿಶ್ವರೂಪವೇ 'ತುತ್ತಿನ ಚೀಲ'ದ ಪ್ರಬಂಧ ಧ್ವನಿಯಾಗಿದೆ.

ಗೆಳೆಯ ಶ್ರೀ ನೆಂಗಲಿಯವರು ಹೇಳುವ ಹಾಗೆ 'ತುತ್ತಿನ ಚೀಲ'ಕ್ಕೆ ಹೊಟ್ಟೆ ಲಕ್ಷ್ಯಾರ್ಥವಲ್ಲ ತುತ್ತಿನ ಚೀಲವೆಂದರೆ ಹೊಟ್ಟೆಯೇ ಆಗಿರುವುದರಿಂದ ಅದು ವಾಚ್ಯಾರ್ಥವೇ ಆಗಿದೆ. ಲಕ್ಷ್ಯಾರ್ಥ ಲಕ್ಷಣವನ್ನೂ ಹೇಳುತ್ತದೆ. ಆದ್ದರಿಂದ ಅದು ಲಕ್ಷಣಾವೃತ್ತಿಯೆನಿಸಿದೆ. ಇಲ್ಲಿ ಹೊಟ್ಟೆಯ ಅಥವಾ ತುತ್ತಿನಚೀಲದ ಲಕ್ಷಣ ಹಸಿವೆ ಆಗಿರುವುದರಿಂದ ಹಸಿವೆಯೇ ತುತ್ತಿನ ಚೀಲದ ಲಕ್ಷಣಾರ್ಥವಾಗಿದೆ. ಇದು ಅನ್ನದ ಸಮಸ್ಯೆ ಎಂಬ ವ್ಯಂಗ್ಯಾರ್ಥಕ್ಕೆ ಪೂರಕವೂ ಆಗಿದೆ. ಉಳಿದಂತೆ ಇಲ್ಲಿ ಪಾಲುಗೊಂಡಿರುವ ಎಲ್ಲರೂ ಕವಿತೆಯ ಭಿನ್ನ ಆಯಾಮಗಳನ್ನು ತಮಗೇ ವಿಶಿಷ್ಟವಾದ ಭಿನ್ನ ನೆಲೆಗಳಲ್ಲಿ ವಿಶ್ಲೇಷಿಸಿರುವುದು ಸ್ಪಷ್ಟ. ●

ಮೇ–ಜೂನ್ ೧೯೯೧/೬೧

ಹಾಸನದಲ್ಲಿ ಮಾಸ್ತಿ ವಿಚಾರಸಂಕಿರಣ: ಒಂದು ವರದಿ

ಹಾಸನ: ಸಂಘರ್ಷದ ಆಳ ಅರಿತಿರುವ ಕಲಾವಿದ ಮಾತ್ರ ತನ್ನ ಕೃತಿಯಲ್ಲಿ ಸಂಘರ್ಷಾತೀತತೆಯನ್ನು ಸಾಧಿಸಬಲ್ಲ. ಕಥೆಗಾರ ಮಾಸ್ತಿ ಅಂತಹ ಕಲೆಗಾರರಲ್ಲೊಬ್ಬರಾಗಿದ್ದರು ಎಂದು ವಿಮರ್ಶಕ ಡಾ॥ ಕೆ. ವಿ. ನಾರಾಯಣ ಇತ್ತೀಚೆಗೆ (ಸೆಪ್ಟಂಬರ್8, 1991) ಇಲ್ಲಿ ಅಭಿಪ್ರಾಯಪಟ್ಟರು. ಅವರು ಮಲ್ಲಾಡಿಹಳ್ಳಿಯ ಸಂವಾದ ಪ್ರಕಾಶನ ಹಾಗೂ ಹಾಸನದ ಮಿಡ್‌ಟೌನ್ ರೋಟರಿ ಕ್ಲಬ್ ಜೊತೆಗೂಡಿ ಏರ್ಪಡಿಸಿದ್ದ ಮಾಸ್ತಿ ಸಾಹಿತ್ಯ ವಿಚಾರ ಸಂಕಿರಣದ ಗೋಷ್ಠಿಯೊಂದರ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಕುವೆಂಪು, ಮಾಸ್ತಿ ಹಾಗೂ ಕಾರಂತರಂತಹ ಶ್ರೇಷ್ಠ ಸಾಹಿತಿಗಳ ಕೃತಿಗಳು ಕಾಲಾನುಕಾಲಕ್ಕೆ ಮರು ಓದಿಗೆ ಒದಗುತ್ತಾ ಆಯಾ ಕಾಲದ ತಾತ್ವಿಕ ನಂಬಿಕೆಗಳಿಗನುಸಾರವಾಗಿ ಮೌಲ್ಯಮಾಪನಕ್ಕೆ ಒಳಗಾಗುತ್ತವಾದ್ದರಿಂದ ಈಗ ಮಾಸ್ತಿ ಸಾಹಿತ್ಯ ಕುರಿತು ಹೊಸ ಮಾತುಗಳನ್ನಾಡುವವರು ಸಂಕೋಚಪಡಬೇಕಿಲ್ಲ ಎಂದು ಡಾ॥ ನಾರಾಯಣ ಸೂಚಿಸಿದರು. ಮಾಸ್ತಿ ಸಾಹಿತ್ಯವನ್ನು ಕುವೆಂಪು ಹಾಗೂ ಕಾರಂತರ ಸಾಹಿತ್ಯದೊಂದಿಗೆ ತುಲನಾತ್ಮಕವಾಗಿ ಅಧ್ಯಯನ ಮಾಡಿ ಸಾಹಿತ್ಯದ ಸಾರ್ಥಕತೆಯ ಹೊಸ ಹೊಳಹುಗಳನ್ನು ಕಂಡುಕೊಳ್ಳಬಹುದಾಗಿದೆ ಎಂದ ಅವರು, ಮಾಸ್ತಿ ಹಾಗೂ ಕಾರಂತರು ಕಟ್ಟಾ ವಾಸ್ತವವಾದಿ ಲೇಖಕರಾಗಿದ್ದರೂ ಕಾರಂತರ ಶೋಧನೆಯ ಮುಖ್ಯ ವಸ್ತು ಮನುಷ್ಯ-ಮನುಷ್ಯರ ನಡುವಣ ಸಂಬಂಧವಾಗಿದ್ದರೆ, ಮಾಸ್ತಿಯವರ ಶೋಧನೆಯ ಮುಖ್ಯ ವಸ್ತು ಇಡಿಯಾಗಿ ಮನುಷ್ಯನೇ ಆಗಿದ್ದ ಎಂದು ಅಭಿಪ್ರಾಯಪಟ್ಟರು.

ಈ ಮುನ್ನ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಕನ್ನಡದ ಇನ್ನೋರ್ವ ವಿಮರ್ಶಕ ಶ್ರೀ ಕಿ. ರಂ. ನಾಗರಾಜ ಅವರು ಕುವೆಂಪು, ಬೇಂದ್ರೆ ಹಾಗೂ ಕಾರಂತರಂತೆ ಮಾಸ್ತಿ ಕನ್ನಡದ ಜನಪದ ನಾಯಕರು, ಸಂಸ್ಕೃತಿಯ ವಕ್ತಾರರು ಎಂದು ಅಭಿಪ್ರಾಯಪಟ್ಟರು. ಗತಕಾಲವನ್ನು ವರ್ತಮಾನದ ಎಚ್ಚರದಿಂದ ನೋಡುವ ಮಾಸ್ತಿ, ಮನುಷ್ಯನ ಸೋಲುಗಳ ನಡುವೆಯೂ ಬದುಕು ಎಷ್ಟು ಅರ್ಥಪೂರ್ಣ ಎಂಬುದನ್ನು ತಮ್ಮ ಬರಹಗಳ ಮೂಲಕ ಸಾದರಪಡಿಸಿದ್ದಾರೆ ಎಂದು ಅವರು ಹೇಳಿದರು. ನಂತರ ಸಂಕಿರಣದ ಎರಡನೇ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಿ.ರಂ., ವಾಸ್ತವವಾದಿ ಬರಹಗಾರರಾದ ಮಾಸ್ತಿ ನಿರ್ದಿಷ್ಟತೆಯನ್ನು ನಂಬಿ ಬರೆಯುವವರಾದ್ದರಿಂದ ಅವರ ಕಾವ್ಯ ಹೊಸ ವಿಸ್ತಾರದ ಪ್ರತಿಮಾ ಲೋಕವನ್ನು ಸೃಷ್ಟಿಸುವ

ಶಕ್ತಿ ಇಲ್ಲದೆ ನಮ್ಮೊಂದಿಗೆ ಅರ್ಥಪೂರ್ಣ ಸಂಬಂಧವನ್ನು ಸ್ಥಾಪಿಸಿಕೊಳ್ಳುವುದಿಲ್ಲ ಎಂದರು. ಚಿಕವೀರ ರಾಜೇಂದ್ರ ಕಾದಂಬರಿ ಕುರಿತು ಸಾಹಿತ್ಯೇತರ ಕಾರಣಗಳಿಂದ ಎಬ್ಬಿಸಿರುವ ವಿವಾದದ ಬಗ್ಗೆ ಪ್ರಸ್ತಾಪಿಸಿದ ಅವರು ಇದು, ವಾಸ್ತವದ ವಿವರಗಳನ್ನು ಜಡವಾಗಿ ನಿರೂಪಿಸುವ ಚರಿತ್ರೆಯನ್ನು ತನ್ನ ಮಾನವೀಯ ದೃಷ್ಟಿಯಿಂದ ಜೀವಂತಗೊಳಿಸುವ ಸಾಹಿತ್ಯದ ಅರ್ಥಪೂರ್ಣತೆಯನ್ನು ಅರಿಯದ ಒಂದು ಕೆಟ್ಟ ಮಾನಸಿಕ ಸ್ಥಿತಿಯ ಅಭಿವ್ಯಕ್ತಿಯಾಗಿದೆ ಎಂದು ವಿಷಾದಿಸಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಕಥೆಗಾರ ಡಾ॥ ಬೆಸಗರಹಳ್ಳಿ ರಾಮಣ್ಣ ಅವರು ನೇರ ಸರಳ ನಡತೆ ನುಡಿಗಳೇ ಸಂದೇಹಾಸ್ಪದ ಸಂಗತಿಗಳೆನ್ನಿಸಿಕೊಳ್ಳುತ್ತಿರುವ ಈ ದಿನಗಳಲ್ಲಿ ಮನುಷ್ಯನ ಉದಾತ್ತ ಗುಣಗಳನ್ನು ಮೆರೆಯಿಸುವ ಮಾಸ್ತಿ ಸಾಹಿತ್ಯದ ಬಗ್ಗೆ ವಿಶೇಷ ಆಸಕ್ತಿ ಕಂಡುಬರುತ್ತಿರುವುದು ಶುಭ ಸೂಚನೆ ಎಂದರು. ಕುವೆಂಪು, ಕಾರಂತ, ಮಾಸ್ತಿ ಹಾಗೂ ಬೇಂದ್ರೆ ಪೀಳಿಗೆಯವರ ನಂತರ ಕನ್ನಡ ಸಾಹಿತ್ಯ ನಿಜವಾಗಿ ಸಾಧಿಸಿರುವುದೇನು ? ಎಂದು ಪ್ರಶ್ನಿಸಿದ ಅವರು ವಿಮರ್ಶಕರು ಈ ಪ್ರಶ್ನೆಯನ್ನು ಗಂಭೀರ ಚರ್ಚೆಗೆ ಈಡು ಮಾಡುವರು ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಈ ವಿಚಾರ ಸಂಕಿರಣದಲ್ಲಿ ಶ್ರೀ ರಾಘವೇಂದ್ರ ಪಾಟೀಲ, ಡಾ॥ ಪುರುಷೋತ್ತಮ ಬಿಳಿಮಲೆ, ಡಾ॥ ಬಿ. ಎನ್. ಸುಮಿತ್ರಾಬಾಯಿ, ಶ್ರೀ ಟಿ. ಪಿ. ಅಶೋಕ ಹಾಗೂ ಶ್ರೀ ಚಂದ್ರಶೇಖರ ನಂಗಲಿ, ಮಾಸ್ತಿಯವರ ಕಥೆ, ಕಾದಂಬರಿ ಹಾಗೂ ಕಾವ್ಯದ ವಿವಿಧ ಮಗ್ಗಲುಗಳನ್ನು ವಿಶ್ಲೇಷಿಸುವ ಒಟ್ಟು ಐದು ಪ್ರಬಂಧಗಳನ್ನು ಮಂಡಿಸಿದರು.

ಇದೇ ಸಂದರ್ಭದಲ್ಲಿ ಸಂವಾದ ಪ್ರಕಾಶನ ಹೊರತಂದಿರುವ ಶ್ರೀ ರಾಘವೇಂದ್ರ ಪಾಟೀಲರ ಪ್ರವಾಸ ಕಥನ 'ಅಜ್ಞಾತ ಮುಂಬೈ' ಪುಸ್ತಕವನ್ನು ಹಾಸನದ ಖ್ಯಾತ ವೈದ್ಯ ಹಾಗೂ ಸಮಾಜಸೇವಾ ಕಾರ್ಯಕರ್ತ ಡಾ॥ ಎ. ಸಿ. ಮುನಿವೆಂಕಟೇಗೌಡರು ಬಿಡುಗಡೆ ಮಾಡಿದರು.

ಈ ಕಾರ್ಯಕ್ರಮದ ಅಂಗವಾಗಿ ಸಂಜೆಗೆ ಏರ್ಪಡಿಸಲಾಗಿದ್ದ ಕವಿಗೋಷ್ಠಿಯಲ್ಲಿ ವೀಚಿ, ಸತ್ಯನಾರಾಯಣರಾವ್ ಅಣತಿ, ಸ. ಉಷಾ, ಸವಿತಾ ನಾಗಭೂಷಣ, ಕೆ. ಸ. ಶಿವತೀರ್ಥನ್, ಎಸ್. ಮಂಜುನಾಥ್, ಚಂದ್ರಶೇಖರ ತಾಳ್ಯ, ಜಿ. ಪಿ. ಬಸವರಾಜು, ಎ. ರಾಮಮೂರ್ತಿ ಹಾಗೂ ಕಬ್ಬಿನಾಲೆ ವಸನ್ತ ಭಾರದ್ವಾಜ್ ತಮ್ಮ ಕವನಗಳನ್ನು ಪ್ರಸ್ತುತಪಡಿಸಿದರು.

(ಈ ವಿಚಾರ ಸಂಕಿರಣದಲ್ಲಿ ಮಂಡಿತವಾದ ಎಲ್ಲ ಪ್ರಬಂಧಗಳೂ ನಮ್ಮ ಮಾಸ್ತಿ ವಿಶೇಷಾಂಕದಲ್ಲಿ ಪ್ರಕಟವಾಗುವುವು.)

ಸಲೂನಿನಲ್ಲಿ ಹುಡುಗ

ಲೇ: ಅರವಿಂದ ನಾಡಕರ್ಣಿ

ಪ್ರ : ಕೃತಿ ಪ್ರಕಾಶನ ಬೆಂಗಳೂರು-70

ಪುಟಗಳು : xii + 72 ಬೆಲೆ : ರೂ. 20/-

ಅರವಿಂದ ನಾಡಕರ್ಣಿಯವರ 'ಸಲೂನಿನಲ್ಲಿ ಹುಡುಗ' ಸಂಕಲನದ ಐವತ್ತೊಂದು ಬಿಡಿ ಕವನಗಳಲ್ಲಿ ದುಡಿಯುವ ಗ್ರಹಿಕೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು 'ಶ್ರಾವಣ ಸ್ಫೂರ್ತಿ ಗೀತ'ವನ್ನು ಗಮನಿಸಬಹುದು. ಈ ಪದ್ಯದಲ್ಲಿ ಶ್ರಾವಣನನ್ನು ನಿರ್ಲಿಪ್ತ ನೋಟಕನನ್ನಾಗಿಸಿ ಅವನ ಮುಂದೆ ಒಪ್ಪುವ ವೈದೃಶ್ಯದ ಘಟನೆಗಳ ಮೂಲಕ ಜೀವನ ಪರಿಸರದ ಅರ್ಥಗ್ರಹಿಕೆಯ ಒಂದು ವಿನ್ಯಾಸವನ್ನು ಸೃಷ್ಟಿಸಲಾಗಿದೆ. ಇಲ್ಲಿ ಬಾಲ್ಯದ ಮುಗ್ಧತೆ ಜೀವಂತಿಕೆಗಳಿಗೆ ಎದುರಾಗಿ ಹಿರಿಯರ ಸ್ವಾರ್ಥದ ಮನೋಭೂಮಿಕೆ ಬರುತ್ತದೆ. ಹಳ್ಳಿಯ ನೈಸರ್ಗಿಕ ಜೀವಂತಿಕೆಗೆ ವಿರುದ್ಧವಾಗಿ ನಗರದ ಕೃತ್ರಿಮತೆ ಬರುತ್ತದೆ. ಸಂಬಂಧಗಳ ಸೆಟೆತ್ವ, ಬುದ್ಧಿಜೀವಿಗಳು ಮತ್ತು ರಾಜಕಾರಣದ ನಿರರ್ಥಕತೆಗಳನ್ನು ಕೂಡ ಪದ್ಯ ಹೇಳುತ್ತದೆ. ಈ ಹಿನ್ನೆಲೆಯಲ್ಲಿ–

> ಅತ್ತ ಹಳ್ಳಿಯಲಿ ಬತ್ತಲು ಮಕ್ಕಳು ನಲಿಯುತ್ತಾರೆ
> ಪುಟ್ಟ ಬೊಗಸೆಯಲಿ ಹಿಡಿದು ಇಡೀ ಶ್ರಾವಣ ಧಾರೆ (ಪುಟ–7)

> ಅಪ್ಪ ಅಮ್ಮಂದಿರು ದಪ್ಪ ಕಂಬಳಿಯಡಿಯ
> ಅಪ್ಪುಗೆಯ ಸುಖದಲ್ಲಿ ಕಣಜದ ಛಪ್ಪರದಿ
> ಕೂತಂತೆ ಕನಸು ... (ಪುಟ–7)

> ಹುಣ್ಣಿಮೆಗೆ ಕಡಲ ತೀರದ ಭಕ್ತಿಗೆ ಒಮ್ಮೆಲೇ ಭರತಿ
> ಮಲಾಯಿ ಇಲ್ಲದ ತೆಂಗು ಅರ್ಪಿಸಿ ಪಡೆದ ಪುಣ್ಯ
> ಸಿಲಾಯಿ ಹರಿದ ಕಿಸೆಗೆ ತುರುಕುತ್ತಾರೆ (ಪುಟ–8)

ಮತ್ತು–

> ರಕ್ಷಾ
> ಕಟ್ಟಿಸಿಕೊಂಡ ಚಾಣಾಕ್ಷ ಅಣ್ಣ ಉಡುಗೊರೆ
> ತರುತ್ತೇನೆಂದು ಸೋದರಿಗೆ ಹೇಳಿ ಹೋದವ
> ಮರಳಿ ಬರಲೇ ಇಲ್ಲಾ ... (ಪುಟ–8)

–ಈ ಸಾಲುಗಳನ್ನು ಗಮನಿಸಬಹುದು.

'ಸಲೂನಿನಲ್ಲಿ ಹುಡುಗ' ಸಂಕಲನದ ಪದ್ಯಗಳು ನಾಡಕರ್ಣಿಯವರ ಬಹಿರ್ಮುಖ ಪ್ರಜ್ಞೆಯ ಫಲಗಳಾಗಿವೆ. ಇವು ಹೊಳೆಯುವ ಹೊರಮೈಯನ್ನು ಹೊಂದಿದ ಕವಿಯ ಪ್ರಜ್ಞಾ ಗೋಲಕವು ನಡೆಸುವ ಪ್ರತಿಫಲನದ ರೂಪಗಳಾಗಿವೆ. ಸುತ್ತಲಿನದೆಲ್ಲದರಲ್ಲಿನ ಅಧೋಗತಿಯತ್ತಲಿನ ಪಲ್ಲಟಗಳನ್ನು, ಭ್ರಷ್ಟತೆಯನ್ನು ಎತ್ತಿ ತೋರಿಸುತ್ತಾ ಅವು ವ್ಯಕ್ತಿಗತದಲ್ಲಿ ಹೇಗೆ ನೆಲೆ ನಿಂತಿವೆ ಎಂಬುದನ್ನು ಕಾಣಿಸುವ ಪ್ರಯತ್ನವನ್ನು ಇಲ್ಲಿನ ಬಹುತೇಕ ಪದ್ಯಗಳು ಮಾಡುತ್ತವೆ. ಈ ಸುತ್ತಲಿನದರಲ್ಲಿ ಗಂಗೆ, ಮರಗಳು, ನೈಸರ್ಗಿಕ ಪರಿಸರ, ಭಾರತೀಯ ಮತ್ತು ಜಾಗತಿಕ ಮಟ್ಟಗಳ ಸಾಮಾಜಿಕ ಜೀವನದಲ್ಲಿ ನೆಲೆಯೂರುತ್ತಿರುವ ಕ್ರೌರ್ಯ ಅಸಹನೆಗಳು, ನಿರರ್ಥಕ ವಾಗಿರುವ ಭ್ರಷ್ಟಗೊಂಡಿರುವ ರಾಜಕಾರಣ ಇವೆಲ್ಲ ನಾಡಕರ್ಣಿಯವರ ಕವನಗಳ ಕಣ್ಣಿನಲ್ಲಿ ಮೂಡಿಬರುತ್ತವೆ. 'ಈ ಸಾಲು', 'ಸೀರೆಯ ಇತಿಹಾಸ', 'ಅವರು ಕೊಲ್ಲು ತ್ತಾರೆ', 'ಮರಗಳೇ'–ಈ ಕವನಗಳು ಮಾತುಗಾರಿಕೆಯ ಹಗುರತನವನ್ನು ಮೀರಿದ ತೀವ್ರತೆಯನ್ನು ಹೊಂದಿವೆ.

'ಮರಗಳೇ' ಪದ್ಯದಲ್ಲಿ ಮೂಡುವ ವ್ಯಂಗ್ಯ ಅತ್ಯಂತ ಪರಿಣಾಮಕಾರಿ ಯಾದುದು. ಕಾಂಕ್ರೀಟಿನ ಸಹಾರಾ ಆಗಿರುವ ಮುಂಬಯಿಯ ವಿಮಾನ ನಿಲ್ದಾಣದ ಬಳಿಯ ಓಯಸಿಸ್‌ನಂತೆ ತೋರುವ ಒಂದಿಷ್ಟು ವೃಕ್ಷರಾಶಿಯ ನಡುವೆ ನಿಂತ ನಾಯಕ ಅವುಗಳ ಜೀವಂತಿಕೆಯಿಂದ ಪ್ರಭಾವಿತನಾಗುತ್ತಾನೆ. ಆದರೆ ಅವು ಕೂಡ ಮನುಷ್ಯನ ಕೊಡಲಿಏಟಿನ ನಿರೀಕ್ಷೆಯಲ್ಲಿ ಪರಲೋಕದ ಪ್ರಯಾಣಕ್ಕೆ ಕಾಯುತ್ತಿ ರುವ ಪ್ರವಾಸಿಗರಂತಿವೆ ಎನ್ನುವ ಸತ್ಯ ತೀವ್ರವಾದ ವ್ಯಂಗ್ಯವನ್ನು ಮೂಡಿಸುತ್ತದೆ! ಕೊಡಲಿಗಳ ಯಜಮಾನನಾದ ಮನುಷ್ಯ ಕುಲದ ಪ್ರತಿನಿಧಿ ಅವುಗಳ ಜೀವಂತಿಕೆಯಿಂದ ಪ್ರಭಾವಿತನಾಗಿ ಆಡುವ ಹರಕೆಯ ನುಡಿಗಳು, ಅವುಗಳ ಸಾವಿನ ನಿರೀಕ್ಷೆಯ ಸಂದರ್ಭ ದಲ್ಲಿ ಆಡುವ ಅವುಗಳ ಜೀವಂತಿಕೆಯನ್ನು ಕೊಂಡಾಡುವ ಮಾತುಗಳು ವಿಶಿಷ್ಟವಾದ ಪರಿಣಾಮ ಸಾಧಿಸುತ್ತವೆ. 'ವೈಶಾಖದ ಹೂ' ಪದ್ಯಗಳು ಆಶಾವಾದಿತ್ವವನ್ನು ರುಕ್ಷತೆಯ ನಂತರ ಹೊಡಮರಳಿ ಬರುವ ಸಮೃದ್ಧಿಯ ನಂಬಿಕೆಯನ್ನು ತಿಳಿಸುವ ಪದ್ಯಗಳಾಗಿವೆ.

●

ನನಗನ್ನಿಸುತ್ತದೆ–ನಾಡಕರ್ಣಿಯವರು ನವೋದಯದ ಭಾವಗೀತೆಯ ಪರಂಪರೆ ಯಲ್ಲಿ ಬಂದಿದ್ದರೆ ಅವರಿಂದ ಹೆಚ್ಚು ಘನಿಷ್ಟವಾದ ಕಾವ್ಯ ಸಾಧ್ಯವಾಗುತ್ತಿತ್ತೇನೋ. ನನ್ನ ಈ ಮಾತುಗಳು ಹೈಪೊಥೆಟಿಕಲ್ ಅನ್ನಿಸಬಹುದು. ಆದರೆ ನಾಡಕರ್ಣಿಯವರ ಒಂದೊಂದು ಇಡಿಯಾಗಿ ಕಾವ್ಯದ ರೂಪಕೊಟ್ಟು ಬಿಡಿ ಬಿಡಿಯಾಗಿ ಕಟ್ಟುವುದನ್ನು

ನೋಡಿದರೆ, ಅವರ ಅನೇಕ ಪದ್ಯಗಳಲ್ಲಿ ಮಾತುಗಾರಿಕೆಯ ತರ್ಕದ ರೆಟಾರಿಕ್ಕು ಮತ್ತೆ ಮತ್ತೆ ಹಣಕಕ್ಕುವುದನ್ನು ನೋಡಿದರೆ, ಅರವಿಂದರು ನಿಂತ ಪರಿಸರ ಅವರಿಗೆ ಸರಿ ಹೊಂದದ್ದಾಯಿತೇನೋ ಅನಿಸುತ್ತದೆ. ಇದಲ್ಲದೆ ಅರವಿಂದರು ಹಟದಿಂದ ಕಾವ್ಯಲೋಕ ಪ್ರವೇಶಿಸಿದವರು. ಹೀಗೆ ಇವರು ಕಾವ್ಯಲೋಕ ಪ್ರವೇಶಿಸುವಾಗ ಇದ್ದದ್ದು ಕಣ್ಣು ಕುಕ್ಕಿಸುವ ನವ್ಯದ ಸಾಂದ ಬೆಳಕು. ಒಂದು ರೀತಿಯ ನವೋದಯದ ಮನೋ ಭೂಮಿಕೆಯನ್ನು ಹೊಂದಿದ ಅರವಿಂದರು ಒಂದು ಸೀಳನ್ನು ಧರಿಸಿಯೇ ಕಾವ್ಯಲೋಕ ಪ್ರವೇಶಿಸಿದರು. ಈ ಸೀಳಿನ ಅರಿವಿನಿಂದಲೇ ಇರಬೇಕು, ಅರವಿಂದರು ತಮ್ಮ ಬರಹಗಳಲ್ಲಿ ನವ್ಯದ ಲಕ್ಷಣಗಳನ್ನು ಕುರಿತು ಮತ್ತೆ ಮತ್ತೆ ಮಾತಾಡುತ್ತಾರೆ. ನವ್ಯದ ತಾತ್ವಿಕ ಗ್ರಹಿಕೆಯಲ್ಲಿ ಕೊರತೆಯುಂಟಾಗಿದೆ ಎಂದು ವಾದಿಸುತ್ತ ಹೊಸದಾದ ವ್ಯಾಖ್ಯೆ ನೀಡಲು ಪ್ರಯತ್ನಿಸುತ್ತಾರೆ.

ಪ್ರಸ್ತುತ 'ಸಲೂನಿನಲ್ಲಿ ಹುಡುಗ'ದ ಬಹುತೇಕ ಪದ್ಯಗಳು ಭಾವಗೀತೆಗಳ ರೀತಿ ಬಿಡಿ ಬಿಡಿ ಐಡಿಯಾಗಳನ್ನು ಕಟ್ಟಿಕೊಡಲು ಪ್ರಯತ್ನಿಸುವುದನ್ನು ಕಾಣಬಹುದು. ಸಾವಿನ ಪ್ರಜ್ಞೆ ಕುರಿತ ಒಂದೊಂದು ಬಿಡಿ ವಿಚಾರವು ಒಂದೊಂದು ಪದ್ಯವಾಗುತ್ತ ಏಳು ಪದ್ಯಗಳು ರೂಪುಗೊಂಡಿವೆ. ಇವು ಏಳು ಬಣ್ಣಗಳಾಗಿ ಬಿಡಿಬಿಡಿಯಾಗಿ ನಿಂತು ಕಾಮನಬಿಲ್ಲನ್ನು(!) ಕಟ್ಟುತ್ತವೆಯೇ ಹೊರತು ಏಳು ಬಣ್ಣಗಳೂ ಸೇರಿ ಮೃತ್ಯುವಿಗೆ ಹೊದಿಸುವ ಬಿಳಿಯ ಬಟ್ಟೆಯಾಗುವುದಿಲ್ಲ.

ನಾಡಕರ್ಣಿಯವರ ಕವಿತೆಗಳು ಒಂದು ರೀತಿಯ ಮಾತುಗಾರಿಕೆಯ ತರ್ಕವನ್ನು ಅನುಸರಿಸುವಂತೆ ತೋರುತ್ತವೆ. ಸಂಕಲನದ 'ಯಾರಿಗೆ ತೋರಿಸಲೀ ಮುಖ', 'ಸದ್ದು' ಪದ್ಯಗಳನ್ನು ಇಂಥ ರೀತಿಗೆ ಉದಾಹರಣೆಯಾಗಿ ಕೊಡುತ್ತಿದ್ದೇನೆ. 'ಸದ್ದು' ಸ್ಕಿಡ್ ರೀತಿ ಹೊರಡುತ್ತದೆ. 'ಯಾರಿಗೆ ತೋರಿಸಲೀ ಮುಖ' ಮಾತುಗಾರಿಕೆಯ ಒಂದು ಹಗುರವಾದ ವಾತಾವರಣದಲ್ಲಿ ಕಟ್ಟಿಕೊಳ್ಳುತ್ತದೆ. ಆದ್ದರಿಂದಲೇ ಗಂಗೆಯಲ್ಲಿನ ಯಂತ್ರದಾಪ್ಲು, ಅನ್ನದಲ್ಲಿನ ಹರಳುಗಳಿಗೆ ವೇದಾಂತದಲ್ಲಿನ ಚಾರ್ವಾಕ ಎಂಬ ಹಗುರ ಹೋಲಿಕೆ ಬರಲು ಸಾಧ್ಯವಾಗುತ್ತದೆ. ಕವನದ ನಾಯಕನ 'ಯಾರಿಗೆ ತೋರಿಸಲೀ ಮುಖವ' ಎನ್ನುವ ಮಾತು ರೊಮ್ಯಾಂಟಿಕ್ ಆವೇಶವೆನ್ನಿಸಿದಾಗ ಮುಂದಿನ ಒಂಭತ್ತು ಸಾಲುಗಳು ಬರೀ ಸ್ವಸಮರ್ಥನೆಯ ರೆಟಾರಿಕ್ಕಾಗಿ ಬಿಡುತ್ತವೆ. 'ಕಲ್ಲು ಒಡೆಯಲಿಲ್ಲ', 'ಧಾರಾವಾಹಿ', 'ದಿಂಬು-ದ್ವೀಪ', 'ಶೋಧನೆ', 'ಏನು ಸಮಾಚಾರ' ಪದ್ಯಗಳು ಕೂಡ ಮಾತುಗಾರಿಕೆಯ ವರಸೆಯಲ್ಲಿ ಮೂಡಿಬಂದಂತೆನಿಸುತ್ತವೆ.

●

ನನ್ನ ಈ ಮೇಲಿನ ಮಾತುಗಳು ನಾಡಕರ್ಣಿಯವರ ಕಾವ್ಯದ ಮಹತ್ವವನ್ನು ಕಡಿಮೆ ಮಾಡಲಾರವೆಂದು ನನಗೆ ಗೊತ್ತಿದೆ. ಅವರದು ಸ್ಪಷ್ಟವಾದ, ವಿಶಿಷ್ಟವಾದ

ಕಾವ್ಯಧ್ವನಿಯಾಗಿದೆ. ನಗರ-ಹಳ್ಳಿಯ ನಡುವೆ ತುಯ್ದಾಡುವ ವಿಶಾಲವಾದ ಮಾನಸಿಕ ವ್ಯಾಪ್ತಿ ಅವರ ಕಾವ್ಯದ ಹಿನ್ನೆಲೆಯಾಗಿದೆ. ಆರೋಗ್ಯಪೂರ್ಣವಾದ ರುಚಿ ಇದೆ. ಇವೆಲ್ಲಕ್ಕಿಂತ ಹೆಚ್ಚಾಗಿ Compasion ಇದೆ. ಇವೆಲ್ಲವನ್ನೂ ಗಾಢವಾಗಿ ನಾನು ಅನುಭವಿಸುತ್ತಲೇ ನನ್ನ ಅತೃಪ್ತಿಯ ಮಾತುಗಳನ್ನು ಹೇಳಿದ್ದಕ್ಕೆ ಕಾರಣ ಇಷ್ಟೇ- ನಾಡಕರ್ಣಿಯವರಿಗೆ ಇನ್ನೂ ಘನವಾದ ಕಾವ್ಯದ ಸಾಧ್ಯತೆಗಳಿವೆ ಮತ್ತು ಅಂತಹ ದೊಡ್ಡ ಕಾವ್ಯ ಅವರಿಂದ ಬರಲಿ ಎನ್ನುವ ಉದ್ದೇಶ. ಅದು ಸಾಧ್ಯವಾಗುತ್ತದೆನ್ನುವ ವಿಶ್ವಾಸದಲ್ಲಿ ನಾವು ಕಾಯುತ್ತೇವೆ.

-ರಾಘವೇಂದ್ರ ಪಾಟೀಲ

ಹೊಸ ದಿಕ್ಕು (ಸಾಹಿತ್ಯ ವಿಮರ್ಶೆ)

ಲೇ: ಡಾ|| ಬಸವರಾಜ ಸಬರದ

ಪ್ರ : ಪಲ್ಲವಿ ಪ್ರಕಾಶನ, ಬೀದರ್-585401

ಪು : xii + 152, ಬೆಲೆ : ರೂ. 30/-

ಹತ್ತು ಹನ್ನೆರಡು ವರ್ಷಗಳಷ್ಟು ಕಾಲ ಒಂದು ಸಂಘಟನೆಯನ್ನೂ ಉಳಿಸಿಕೊಂಡು ಬಂದಿರುವ ಬಂಡಾಯ ಸಾಹಿತ್ಯ ಕನ್ನಡಕ್ಕೇನು ಕೊಟ್ಟಿದೆ ಎಂಬುದರ ಬಗ್ಗೆ ಚರ್ಚೆ ನಿರಂತರವಾಗಿ ನಡೆದೇ ಇದೆ. ಈ ಚರ್ಚೆಯಲ್ಲಿ ಬಂಡಾಯ ಸತತವಾಗಿ ತನ್ನ ಆರಂಭದ ರೋಷಾವೇಶ, ಸೈದ್ಧಾಂತಿಕ ಮತ್ತು ಸಾಂಸ್ಥಿಕ ಮಡಿವಂತಿಕೆ ಹಾಗೂ ಧೋರಣಾತ್ಮಕ ಕಟುತ್ವವನ್ನು ಕ್ರಮೇಣ ಸಡಿಲಗೊಳಿಸುತ್ತಾ ಆಧುನಿಕ ಕನ್ನಡ ಸಾಹಿತ್ಯದ ಪ್ರಧಾನ ಧಾರೆಯೊಂದಿಗೆ ತನ್ನನ್ನು ಗುರುತಿಸಿಕೊಳ್ಳುವ ತವಕ ತೋರುತ್ತಿದೆ. ಆದರೆ ಈ ತವಕ ಎಲ್ಲಿ ತನ್ನ ದೌರ್ಬಲ್ಯವೆಂದು ಗುರುತಿಸಲ್ಪಡುವುದೋ ಎಂಬ ಆತಂಕದಿಂದಲೋ ಏನೋ ತನ್ನ ವಿಶಿಷ್ಟ ಹೆಚ್ಚುಗಾರಿಕೆಯ ಡಂಗುರವನ್ನೂ ಆಗಾಗ್ಗೆ ಬಡಿಯುತ್ತಿರುತ್ತದೆ. ಬಂಡಾಯ ಸಾಹಿತ್ಯ ಸಂಘಟನೆಯ ಪ್ರಮುಖ ವಕ್ತಾರರಲ್ಲೊಬ್ಬರಾದ ಸಬರದ ಅವರ ಈ ವಿಮರ್ಶಾ ಸಂಕಲನ ಈ ತವಕ ಮತ್ತು ಆತಂಕಗಳ ನಡುವೆ ಬಡಿಯುವ ಡಂಗುರದಂತಿದೆ.

ಹತ್ತು ಲೇಖನಗಳ ಈ ಸಂಕಲನದಲ್ಲಿ 'ಕನ್ನಡ ಸಾಹಿತ್ಯದಲ್ಲಿ ಕನ್ನಡ ಪ್ರಜ್ಞೆ'. 'ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂಸ್ಕೃತಿಯ ಸಂವೇದನೆಗಳು', 'ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗಳು', 'ನಾಟಕ ಸಾಹಿತ್ಯದಲ್ಲಿ ಇತ್ತೀಚಿನ ಬೆಳವಣಿಗೆ' ಇತ್ಯಾದಿ

ಸಾರ್ವತ್ರಿಕ ಶೀರ್ಷಿಕೆಗಳುಳ್ಳ ಲೇಖನಗಳಿವೆಯಾದರೂ, ಒಟ್ಟಾರೆ ಎಲ್ಲ ಲೇಖನಗಳ ಹಿಂದೆ ಇರುವ ನೋಟ ಬಂಡಾಯದ್ದೇ. ಇಲ್ಲಿ ಬಂಡಾಯವೆಂದರೆ ಬಡಬಗ್ಗರ, ಕೆಳ ಜಾತಿ ಜನರ, ಮಹಿಳೆಯರ ಹಾಗೂ ಅಲ್ಪಸಂಖ್ಯಾತರ ಪರ ಸಹಾನುಭೂತಿಯಿಂದ ಬರೆಯುವುದು. ಮತ್ತು ಆ ಮೂಲಕ ಇವರನ್ನೆಲ್ಲಾ ಒಗ್ಗೂಡಿಸಿ ಅನ್ಯಾಯ ಅಸಮಾನತೆಗಳ ವಿರುದ್ಧ ಬಂಡೇಳಿಸುವ ಸ್ಫೂರ್ತಿ ಒದಗಿಸುವುದು. ('ಕನ್ನಡದಲ್ಲಿ ಬಂಡಾಯ ಸಾಹಿತ್ಯ' ಲೇಖನದಲ್ಲಿ ಬಂಡಾಯ ಸಾಹಿತ್ಯದ ವೈಶಿಷ್ಟ್ಯತೆಗಳೆಂದು ಪಟ್ಟಿ ಮಾಡಲಾಗಿರುವ ಹದಿನೈದು ಅಂಶಗಳ ಸಾರವಿದು.) ಈ ಸಂಕಲನದ ಬಹುಪಾಲು ಎಲ್ಲ ವಿಮರ್ಶೆಯೂ ಈ ಎರಡು ಪರತ್ತುಗಳನ್ನಿಟ್ಟುಕೊಂಡೇ ಸಾಗಿದೆ. ಹೀಗಾಗಿ ಇಲ್ಲಿನ ವಿಮರ್ಶೆಯ ದಾರಿಯೆಂದರೆ ಕೃತಿಯ ಕಥೆ ಅಥವಾ ವಿವರಗಳು ಮತ್ತು ಸಂದೇಶವನ್ನು ಈ ಎರಡು ಪರತ್ತುಗಳೊಂದಿಗೆ ತಾಳೆ ನೋಡುತ್ತಾ ಹೋಗುವುದೇ ಆಗಿದೆ. ಇದರ ಪರಿಣಾಮವೆಂದರೆ, ಇವರು ಬಂಡಾಯ ಕೃತಿಗಳೆಂದು ಹೆಸರಿಸಿ ವಿಶ್ಲೇಷಿಸಿರುವ ಕನ್ನಡದ ಹಲವಾರು ಒಳ್ಳೆಯ ಕೃತಿಗಳು ಈ ವಿಮರ್ಶೆಯ ಹಿನ್ನೆಲೆಯಲ್ಲಿ ಸಿದ್ಧರೂಪದ ಕೃತಿಗಳಂತೆ ಕಾಣತೊಡಗುತ್ತವೆ. ಅಲ್ಲದೆ ಕೃತಿಯ ಒಳವಿವರಗಳ ಧ್ವನಿ ಮತ್ತು ಅರ್ಥಗಳೇ ಪಲ್ಲಟಗೊಂಡು ಸಿದ್ಧ ಸೂತ್ರಗಳ ಕುಣಿಕೆಯೊಳಕ್ಕೆ ಬೀಳತೊಡಗುತ್ತವೆ. ಉದಾಹರಣೆಗೆ 'ಒಡಲಾಳ'ದಲ್ಲಿ 'ಪುಟಗೌರಿ ನವಿಲು ಬಿಡಿಸುವುದು ದಲಿತರ ಕಲಾ ಪ್ರತಿಭೆಗೆ ಸಾಕ್ಷಿಯಂತಿದೆ' ಎಂಬ ಮಾತು.

ಸಂಕಲನದಲ್ಲಿನ ಎಲ್ಲ ಲೇಖನಗಳ ಧೋರಣೆಯನ್ನು ಪ್ರತಿಬಿಂಬಿಸುವ ಲೇಖನ 'ಶಿಷ್ಟ ಸಂಸ್ಕೃತಿ–ಜನಪದ ಸಂಸ್ಕೃತಿ' ಎಂಬುದು. ಶಿಷ್ಟ ಸಂಸ್ಕೃತಿಯನ್ನು ಯದ್ವಾತದ್ವಾ ತೆಗಳುತ್ತಾ ಜನಪದ ಸಂಸ್ಕೃತಿಯನ್ನು ಮನಸಾರೆ ಹೊಗಳುತ್ತಾ ಹೋಗುವ ಈ ಲೇಖನ ಕೊನೆಯಲ್ಲಿ ಹೀಗೆ ಮುಗಿಯುತ್ತದೆ : 'ಶಿಷ್ಟ ಹಾಗೂ ಜನಪದ ಸಂಸ್ಕೃತಿಗಳ ಮುಂದುವರಿಕೆಯಾಗಿ, ಜನಪರ ಸಂಸ್ಕೃತಿ ಅರಳಬೇಕಾಗಿದೆ.' ಅಂದರೆ ಶಿಷ್ಟ ಹಾಗೂ ಜಾನಪದ ಅಂಶಗಳೆರಡೂ ಬೆರೆತುಕೊಂಡೇ ಸಂಸ್ಕೃತಿಯೊಂದು ಸಂಶ್ಲೇಷಣೆಗೊಳ್ಳುತ್ತಾ ಹೋಗುತ್ತದೆಂಬ ಅರಿವು ಲೇಖಕನಿಗಿದೆ. ಆದರೆ ಬಂಡಾಯದ ಭಾರ ಈ ಅರಿವನ್ನು ಹೇಳಿಕೆಯ ಮಟ್ಟಕ್ಕಷ್ಟೇ ಅದುಮಿಟ್ಟುಬಿಟ್ಟಿದೆ. ಇದರಿಂದಾಗಿಯೇ ಈ ಸಂಕಲನದ ತುಂಬಾ ಅನೇಕ ಸುಲಭದ ತೀರ್ಮಾನಗಳು ಹರಡಿಕೊಂಡಿವೆ. ಉದಾ : "ಕನ್ನಡ ಸಾಹಿತ್ಯ ಚರಿತ್ರೆಯನ್ನು ನೋಡಿದಾಗ ಅಲ್ಲಿ ಕಾಣುವುದು ಅಂಧಾಭಿಮಾನ, ಆತ್ಮಾಭಿಮಾನವೇ ಹೆಚ್ಚು. ಪ್ರಜ್ಞಾಪೂರ್ವಕವಾಗಿ ಕನ್ನಡವನ್ನು ಸಾಹಿತ್ಯದಲ್ಲಿ ಬಳಸಿದ್ದು ಕಡಿಮೆ", "ಶಿಷ್ಟ ಸಂಸ್ಕೃತಿ ಕೇವಲ ಬೊಗಳೆ ಮಾತುಗಳನ್ನು ಹೇಳಿದರೆ, ಜನಪದ ಸಂಸ್ಕೃತಿ ಪ್ರತ್ಯಕ್ಷ ಪ್ರಮಾಣದ ಬದುಕನ್ನು ಪ್ರಮಾಣೀಕರಿಸುತ್ತದೆ", "ಜನಸಾಮಾನ್ಯ

ರಿಗೆ ದಾರಿದೀಪವಾಗಬೇಕಿದ್ದ ಇವರೇ (ನವೋದಯ - ಹಾಗೂ ನವ್ಯದವರು) ಕಲ್ಪನೆಯ ಗುಂಗಿನಲ್ಲಿ, ಆಧ್ಯಾತ್ಮದ ಅಮಲಿನಲ್ಲಿ, ರತಿ ಸುಖದ ಕಾಮನೆಯಲ್ಲಿ ತಲ್ಲೀನರಾಗಿದ್ದರಿಂದ ಇವರಿಗೆ ಜನಸಾಮಾನ್ಯರ ನೋವು–ನಿರಾಶೆಗಳು ತಿಳಿಯಲಿಲ್ಲ", "ಘಟಶ್ರಾದ್ಧದ ಯಮುನಕ್ಕ ಬಾಲವಿಧವೆಯಾಗಿ ಅನುಭವಿಸುವ ಯಾತನೆಯನ್ನು ಲೇಖಕರು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಆದರೆ ಈ ಯಾತನೆಗೆ ಕಾರಣವಾದ ವವಸ್ಥೆ ಬಗ್ಗೆ ಸಿಟ್ಟಿಲ್ಲ.", "ನವೋದಯುದ ರಮ್ಯ ಕವಿತೆಗಳಲ್ಲಿ ಪ್ರಕೃತಿಯ ವರ್ಣನೆ ವೈಭವೀಕೃತವಾಗಿದ್ದರೆ ಬಂಡಾಯ ಕಾವ್ಯದಲ್ಲಿ ಅದು ಬದುಕಿನ ಸೆಲೆಯಾಗಿದೆ" ಇತ್ಯಾದಿ. ವಿಮರ್ಶೆಯೂ ಸೇರಿದಂತೆ ಬಂಡಾಯ ಸಾಹಿತ್ಯದ ಸಮಸ್ಯೆ ಈ ತೆರನ ತೀರ್ಮಾನಗಳಿಗೆ ತಲುಪಿಸುವ ಅದರ ಬೀಜ ನಂಬಿಕೆಯೇ ಆಗಿದೆ : ಸಾಹಿತ್ಯ ಕೂಡಾ ಅಗತ್ಯ ಮತ್ತು ಶ್ರಮಗಳಿಂದ ಬಂಧಿತವಾದ ಒಂದು ಗ್ರಾಹಕ ವಸ್ತು.

ಈ ಸಂಕಲನದ ಉಪಯುಕ್ತ ಲೇಖನವೆಂದರೆ "ಕಾದಂಬರಿ ಸಾಹಿತ್ಯದಲ್ಲಿ ಮುಸ್ಲಿಂ ಸಂಸ್ಕೃತಿಯ ಸಂವೇದನೆಗಳು". ಈ ಲೇಖನದಲ್ಲೂ "ಮುಸ್ಲಿಂ ಜನಾಂಗದ ಸಂಸ್ಕೃತಿಯಿಂದ ಬಂದ ಲೇಖಕನೊಬ್ಬ ಈ ಧರ್ಮ–ಮತಗಳ ಗೊಡ್ಡುತನಗಳನ್ನು ವಿನೋದದಿಂದ ತಿರಸ್ಕರಿಸುತ್ತಲೇ ಮಾನವೀಯತೆಯನ್ನು ಅಪ್ಪಿಕೊಳ್ಳುವುದು, ಪ್ರೀತಿಯ ಅನಂತತೆಯನ್ನು ಒಪ್ಪಿಕೊಳ್ಳುವುದು ಈ ದೇಶದ ಚರಿತ್ರೆಯಲ್ಲಿ ತುಂಬಾ ಮಹತ್ವದ ಸಂಗತಿಯಾಗುತ್ತದೆ. ಈ ಕಾರಣಗಳಿಂದಾಗಿಯೇ ನಮಗೆ ಕುಂಞ ಒಬ್ಬ ದೊಡ್ಡ ಸಾಹಿತಿಯಾಗಿ- ದೊಡ್ಡ ಮನುಷ್ಯನಾಗಿ ಕಾಣಿಸುವುದು" ಎಂಬಂತಹ ದೊಡ್ಡ ಶಬ್ದಗಳ ಮಾತುಗಳಿವೆಯಾದರೂ, ಈವರೆಗೆ ಕನ್ನಡದಲ್ಲಿ ಬಂದಿರುವ ಮುಸ್ಲಿಂ ಲೇಖಕರ ಕಥನ ಸಾಹಿತ್ಯದ ಅಚ್ಚುಕಟ್ಟಾದ ಪರಿಚಯ ಮಾಡಿಕೊಡುತ್ತದೆ. ಆದರೆ ಇಂತಹುದೇ ಪ್ರಯತ್ನ ಮಾಡುವ 'ಕನ್ನಡ ಸಾಹಿತ್ಯ ಮತ್ತು ಮಹಿಳಾ ಸಂವೇದನೆಗಳು' ಹಾಗೂ 'ನಾಟಕ ಸಾಹಿತ್ಯದಲ್ಲಿ ಇತ್ತೀಚಿನ ಬೆಳವಣಿಗೆಗಳು' ಎಂಬ ಲೇಖನಗಳು ಮಾಹಿತಿಯನ್ನು ಒಟ್ಟಿಹಾಕುವಲ್ಲಿ ಮಾತ್ರ ಯಶಸ್ವಿಯಾಗಿವೆ. 'ಮಹಿಳೆಯ ಕಾವ್ಯದಲ್ಲಿ ಲೈಂಗಿಕ ಸ್ವಾತಂತ್ರ್ಯ' ಎಂಬ ಲೇಖನ ಕವಿಯತ್ರಿಯವರ ಶಬ್ದ ಸ್ವಾತಂತ್ರ್ಯವನ್ನೇ ಲೈಂಗಿಕ ಸ್ವಾತಂತ್ರ್ಯವೆಂದು ಅಪಾರ್ಥ ಮಾಡಿಕೊಂಡಂತಿದೆ. ಇನ್ನು 'ಕನ್ನಡ ಸಾಹಿತ್ಯದಲ್ಲಿ ಕನ್ನಡ ಪ್ರಜ್ಞೆ' ಮತ್ತು 'ದಲಿತ–ಬಂಡಾಯ ಕಾವ್ಯದಲ್ಲಿ ಜನಪರ ನಿಲುವುಗಳು' ಎಂಬ ಲೇಖನಗಳು ಶೀರ್ಷಿಕೆಗಳ ಮಟ್ಟದಲ್ಲೇ ಅನುಮಾನಾಸ್ಪದವೆನ್ನಿಸುತ್ತವೆ.

ಸಬರದ ಅವರ ಎಲ್ಲ ಲೇಖನಗಳಲ್ಲೂ ಎದ್ದುಕಾಣುವ, ಆಸೆಯುಟ್ಟಿಸುವ ಒಂದಂಶವಿದೆ : ಅವರು ಒಳ್ಳೆಯ ಸಾಹಿತ್ಯವನ್ನು ಗುರುತಿಸಬಲ್ಲರು. ಆದರೆ

ಏನಾದರೊಂದು ನೆಪ ಮಾಡಿಕೊಂಡು ಅದನ್ನು ಬಂಡಾಯ ಸಾಹಿತ್ಯ ಪರಂಪರೆಗೆ ಸೇರಿಸಿಬಿಟ್ಟು ಅದರ ಆಧಾರದ ಮೇಲೆ ಇನ್ನಿತರ ಸಾಧಾರಣ ಕೃತಿಗಳನ್ನು ಎತ್ತರಕ್ಕೆ ಏರಿಸಿ, ಒಟ್ಟಾರೆಯಾಗಿ ಬಂಡಾಯ ಸಾಹಿತ್ಯದ ಬಾವುಟವನ್ನು ಹಾರಿಸುವ ಕೆಟ್ಟಚಟವೂ ಇದರೊಡನೆ ಸೇರಿಬಿಟ್ಟಿದೆ. ಇವರು ಬಹುವಾಗಿ ಪ್ರೀತಿಸುವ ಬಂಡಾಯ ಸಾಹಿತ್ಯ ಇಂತಹ ಚಟದಿಂದ ಬೆಳೆಯಲಾರದು. ಪ್ರೀತಿಯೂ ಚಟವಾಗಿ ಹೋದರೆ ವಿಮರ್ಶೆಯಲ್ಲಿ ಉಳಿಯುವುದಾದರೂ ಏನು ?

– ಡಿ. ಎಸ್. ನಾಗಭೂಷಣ

ಮೊದಲ ನೋಟ

ಕುದುರೆಗಳೂ ಕೇಳಿದವು ಗೀತೋಪದೇಶ (ಕವನ)

ಲೇ. : **ಪ್ರೊ. ಮಲ್ಲಿಕಾರ್ಜುನ ಬಿ. ಪಿ.**

ಇಂಜಿನಿಯರಿಂಗ್ ಪ್ರೊಫೆಸರರೊಬ್ಬರು ಬರೆದು ಹೊರತಂದಿರುವ ಮೂರನೆಯ ಕವನ ಸಂಕಲನವಿದು. ಇಲ್ಲಿರುವ ಐವತ್ತಕ್ಕೂ ಹೆಚ್ಚು ಕವಿತೆಗಳಲ್ಲಿ 'ಹೆಣ್ಣು ಮತ್ತು ಗುಲಾಬಿಗಿಡ', 'ಕವಿತೆ ಮುನಿದಾಗ', 'ನನ್ನ ಸೂರ್ಯ' ಕವಿತೆಗಳಲ್ಲಿ ಕವಿತೆಯಾಗುವ ಸೂಚನೆಗಳಿವೆ. ಉಳಿದ ಕವಿತೆಗಳು ಆಲೋಚನೆಗಳನ್ನು ಭಾವನೆಗಳನ್ನು ತೀರಾ ಸರಳವಾದ ಜಾಳುಜಾಳಾದ ಭಾಷೆಯಲ್ಲಿ ನಿರೂಪಿಸುವ ಪ್ರಯತ್ನಗಳು.

ಬೇರುಗಳು (ಕವನ)

ಲೇ. : **ಶಂಕರಗೌಡ ಸಾತ್ಮಾರ**

ಬೇರುಗಳು ಶಂಕರಗೌಡ ಸಾತ್ಮಾರರ ಪ್ರಥಮ ಕವನ ಸಂಕಲನ. ಬದುಕಿನ ವಿಪರ್ಯಾಸಗಳನ್ನು ಗುರುತಿಸುವ, ಚೆಲುವನ್ನು ಗ್ರಹಿಸುವ ಬದಲಾವಣೆಗಾಗಿ ತುಡಿಯುವ ಮನಸ್ಸೊಂದು ಈ ಕವನಗಳ ಹಿಂದೆ ಇದೆ. ಸದಾಶಯಗಳನ್ನು ಹೊಂದಿರುವ ಸರಳವಾದ ಚಿಂತನಗಳು– ತುಂಟತನದ ಕೆಲವು ಕವಿತೆಗಳೂ ಇಲ್ಲಿವೆ. ಅನುಭವದ ಮೂಸೆಯಲ್ಲಿ ಚಿಂತನಗಳನ್ನು ಕರಗಿಸಿ, ಸೋಸಿ ಕಾವ್ಯಶಿಲ್ಪವಾಗಿಸುವ ಕಲೆಯನ್ನು ಸಿದ್ಧಿಸಿಕೊಳ್ಳಲು ಸಾತ್ಮಾರರು ಇನ್ನೂ ದೂರ ನಡೆಯಬೇಕಿದೆ.

ಕಲೆ ಮತ್ತು ಮನುಷ್ಯ ಸಂಸ್ಕೃತಿ (ವಿಮರ್ಶಾ ಲೇಖನಗಳು)
ಲೇ : **ಬಿ. ಎ. ಸನದಿ**

ಬಿ. ಎ. ಸನದಿಯವರ ಈ ಲೇಖನ ಸಂಕಲನವನ್ನು ವಿಮರ್ಶಾ ಲೇಖನಗಳು ಎಂದು ಕರೆಯುವುದಕ್ಕಿಂತ ವೈಚಾರಿಕ ಲೇಖನಗಳು ಎಂದು ಕರೆದರೆ ಹೆಚ್ಚು ಸರಿಯಾಗುತ್ತದೆ. ಕೇವಲ ಸಾಹಿತ್ಯ ಕೃತಿಗಳ ಬಗ್ಗೆಯಷ್ಟೇ ಅಲ್ಲದೆ ಸಾಮಾಜಿಕ, ಸಾಂಸ್ಕೃತಿಕ ವಿಚಾರಗಳ ಬಗ್ಗೆಗೂ ಇಲ್ಲಿ ವಿವೇಚಿಸಿದ್ದಾರೆ. 'ಮುಂಬೈ ಕನ್ನಡಿಗನ ದ್ವಂದ್ವ', 'ಕನ್ನಡ ಕವಿಗಳು ಮತ್ತು ರಾಷ್ಟ್ರೀಯ ಭಾವೈಕ್ಯ'– ಈ ಲೇಖನಗಳು ಮಹತ್ವದ ಸಾಂಸ್ಕೃತಿಕ ಪ್ರಶ್ನೆಗಳನ್ನೆತ್ತಿಕೊಂಡು ವಿವೇಚಿಸಿವೆ. 'ಪರಂಪರೆಯ ಪರೆ ಹರಿದ ಭವ್ಯ ಮಾನವ' ಹೆಚ್ಚು ಚರ್ಚಿತವಾಗದ ರಾಜಶೇಖರ ಭೂಸನೂರ ಮಠರ ಮಹಾಕಾವ್ಯದ ಬಗೆಗೆ ಬರೆದ ಲೇಖನ. ಆ ಕಾವ್ಯದ ಹೆಚ್ಚು ಚರ್ಚೆಯಾಗದ ಕಾರಣದಿಂದ ಸ್ವಾಗತಾರ್ಹವಾಗಿದೆ. ಲೇಖಕರ ಅಧ್ಯಯನ ಮತ್ತು ಜೀವನಾನುಭವಗಳ ಪಕ್ವತೆ ಇಡೀ ಸಂಕಲನದಲ್ಲಿ ಗೋಚರವಾಗುತ್ತದೆ.

ಬೆಟ್ಟದಪುರ (ಕಾದಂಬರಿ)
ಲೇ : **ಅರ್ಚಿ**

ಒಂದು ಹಳ್ಳಿಯಲ್ಲಿ ಬಂದು ನೆಲಸಿದ ವೈದ್ಯ ದಂಪತಿಗಳ ಜೀವನದ ಮೂಲಕ ಹಳ್ಳಿಯ ಆರ್ಥಿಕ ವ್ಯವಸ್ಥೆ, ಅನಕ್ಷರಸ್ಥರ ಸಮಸ್ಯೆಗಳನ್ನು ಪರಿಹರಿಸುವ ನೆಪದಲ್ಲಿ ತಾವು ಲಾಭ ಮಾಡಿಕೊಳ್ಳುವ ಮಧ್ಯಸ್ಥಗಾರರು, ಬೇರೆ ಬೇರೆ ವೈದ್ಯ ಪದ್ಧತಿಗಳು, ಗುಣವಾಗದ ರೋಗಗಳನ್ನು ಗುಣಪಡಿಸಿ ಅದಕ್ಕಿಂತ ತೀವ್ರವಾದ ಸಮಸ್ಯೆಗಳನ್ನು ಹುಟ್ಟುಹಾಕುವ ನಾಟಿ ಮದ್ದುಗಳು, ಆಧುನಿಕತೆಯೊಡನೆ ಬರುವ ಲಂಚಕೋರತನ, ಗೂಂಡಾ ರಾಜ್ಯ, ಇಂಥ ಅನೇಕ ಸಾಮಾಜಿಕ ಆಯಾಮವುಳ್ಳ ವಿಷಯಗಳನ್ನು ಕಾದಂಬರಿಯ ಚೌಕಟ್ಟಿನಲ್ಲಿ ನಿರೂಪಿಸಿರುವ ಕಥಾನಕ ಬೆಟ್ಟದಪುರ, ಸರಳವಾದ, ನೇರವಾದ ಕಥೆಯ ನಿರೂಪಣೆಯಲ್ಲಷ್ಟೇ ಸಫಲವಾಗಿದೆ.

ದೇವಿ ಭೂತ ಕನಸು ಮತ್ತು ವಿಜ್ಞಾನ
ಲೇ : **ಡಾ॥ ಲೋಕಾಪೂರ**

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಆಶ್ರಯದಲ್ಲಿ ಪ್ರಕಟವಾಗಿರುವ ಈ ಕಿರುಹೊತ್ತಿಗೆ ಸಮಾಜದಲ್ಲಿ ಪ್ರಚಲಿತವಾಗಿರುವ ಮೂಢನಂಬಿಕೆಗಳು ಮತ್ತು ರೂಢಿಸಿಕೊಳ್ಳಬೇಕಾಗಿರುವ ವೈಜ್ಞಾನಿಕ ಮನೋಧರ್ಮ ಕುರಿತ ಕೆಲವು ಲೇಖನ–ಉಪನ್ಯಾಸ

ಗಳನ್ನು ಪೊಂದಿದೆ. ಕೆಲವಕ್ಕೆ ಸ್ವಾನುಭವದ ಮೆರುಗಿದೆ. ಕೆಲವು ಫ್ರಾಯ್ಡನ ಕಾಲದ ಮನಶ್ಶಾಸ್ತ್ರ ದೃಷ್ಟಿಯಿಂದ ಬರೆಯಲ್ಪಟ್ಟವು.

ಮಣ್ಣ ನೆನಪಿನ ಮೇಲೆ (ಕವನ)

ಲೇ : ಜಿ. ಸುಬ್ರಾಯಭಟ್ ಬಕ್ಕಳ

ಬಕ್ಕಳರ ಪ್ರಥಮ ಕವನ ಸಂಕಲನವಿದು. ರೂಢ ಮೌಲ್ಯಗಳನ್ನು ಪರೀಕ್ಷಿಸಿ ಒಪ್ಪಿಕೊಳ್ಳುವ ಜಿಗುಟು, ಭಾವುಕತೆಯನ್ನು ಪೂರ್ತಿ ಕಳಕೊಂಡು ಸಿನಿಕನಾಗದ ಒಂದು ಸಮತೋಲ ಇವರ ಕವಿತೆಗಳಲ್ಲಿದೆ. 'ತಂಗಿ ಬಳಿಗಿನ ಹಗೆ'ಯಲ್ಲಿ ಈ ಜಿಗುಟಿನ ವಿಕಾಸದಲ್ಲಿ ಭಾವದ ಆರ್ದ್ರತೆಯಿದೆ. ಒಂದೆರಡು ಗಝಲ್‌ಗಳು ಗಮನಾರ್ಹವಾಗಿವೆ. ಆರೋಗ್ಯಕರ ಧೋರಣೆಗಳ ಈ ಕವಿ ಅಭಿವ್ಯಕ್ತಿಯ ಕಲಾತ್ಮಕತೆಯನ್ನೂ ರೂಢಿಸಿಕೊಳ್ಳಬೇಕಿದೆ.

ಹೊಸ ಹೆಜ್ಜೆಗಳು (ಕಾದಂಬರಿ)

ಲೇ : ಬಿ. ಚಂದ್ರೇಗೌಡ

ಹೊಸ ಹೆಜ್ಜೆಗಳು ಬಿ. ಚಂದ್ರೇಗೌಡರ ಮೊದಲ ಕಾದಂಬರಿ. ಆದರೆ ಮೊದಲ ಕಾದಂಬರಿಯ ಪೈಚಳಿ ಇಲ್ಲಿ ಕಾಣುವುದಿಲ್ಲ. ದೃಢವಾದ ಶೈಲಿಯಲ್ಲಿ ಸಾಗುವ ಚಂದ್ರೇಗೌಡರ ಈ ಕಾದಂಬರಿಯ ಮೇಲೆ ಲಂಕೇಶರ 'ಮುಸ್ಸಂಜೆಯ... ನೆರಳು ಚಾಚಿಕೊಂಡಂತೆನಿಸುತ್ತದೆ. ಚಂದ್ರೇಗೌಡರು ಸ್ವಲ್ಪ ಕಾನ್ಸಿಯಸ್ ಆಗಿದ್ದರೂ ಇದನ್ನು ಸುಲಭವಾಗಿ ನಿವಾರಿಸಿಕೊಳ್ಳಬಹುದಾಗಿತ್ತು. ಹಾಗೆ ನೋಡಿದರೆ ಈ ರೀತಿ ಇಲ್ಲಿ ಹೆಚ್ಚು ಸಮರ್ಥವಾಗಿಯೇ ಬಂದಿದೆ. 'ಮುಸ್ಸಂಜೆ'ಗೆ ಹೋಲಿಸಿದರೆ ಈ ಕಾದಂಬರಿಯ ವ್ಯಾಪ್ತಿ ತುಂಬ ಕಿರಿದಾಗಿರುವುದರಿಂದ ಈ ಭಾವನೆ ನಮಗೆ ಬರಲಿಕ್ಕೂ ಸಾಕು.

ಬಿದರಹಳ್ಳಿ ಎನ್ನುವ ಹಳ್ಳಿ ಈ ಕಾದಂಬರಿಯ ಕೇಂದ್ರ. ಇಲ್ಲಿನ ಜನರ ಮನಸ್ಸುಗಳು ಹೋಳಾಗಿವೆ. ಪರಸ್ಪರ ದ್ವೇಷಿಸುತ್ತವೆ. ಈ ಒಡೆಯುವಿಕೆಯ ಹಿನ್ನೆಲೆಗೆ ಧರ್ಮ ಜಾತಿಗಳಿವೆ. ಆಸ್ತಿ, ಪಣಗಳಿವೆ. ಕ್ಷುಲ್ಲಕ ರಾಜಕಾರಣಗಳಿವೆ. ಆದರೆ ಈ ಹೋಳುಗಳಲ್ಲಿ ತನ್ಮಯತೆಯಿಂದ ಭಾಗವಹಿಸುವ ಹಳ್ಳಿಯ ಬಡವರು ಅದರಲ್ಲಿಯೂ ಹೆಣ್ಣು ಹೇಗೆ ತಮ್ಮ ಮೈಸುಟ್ಟುಕೊಳ್ಳುತ್ತವೆನ್ನುವುದನ್ನು ಕಾದಂಬರಿ ಮನೋಜ್ಞವಾಗಿ ಚಿತ್ರಿಸುತ್ತದೆ. ಈ ಎಲ್ಲ ಕ್ಷುಲ್ಲಕತೆಯನ್ನು ಮೀರಿ, ಧೈರ್ಯದಿಂದ ಹೊಲೆಯರ ಗಂಗಯ್ಯನೊಂದಿಗೆ ಬಾಳಲು ನಿರ್ಧರಿಸಿ ಅವನೊಂದಿಗೆ ಬಿದರಹಳ್ಳಿಯ ಎಲ್ಲ ಸಂಕುಚಿತಗಳನ್ನು ದಾಟಿ ಹೋಗುವ ಜಾನಕಿಯ ಕ್ರಿಯೆಯ ಆಶಾವಾದದಿಂದ ಕಾದಂಬರಿ ಹೊಸದಿಕ್ಕಿನತ್ತಲಿನ ಸೂಚನೆ ನೀಡುತ್ತದೆ. ಚಂದ್ರೇಗೌಡರದು ಆಸಕ್ತಿಯಿಂದ ಓದಿಸಿಕೊಳ್ಳುವ ಶೈಲಿ.

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗ,

'ಸಂವಾದ'ದ ಇಪ್ಪತ್ತೊಂದನೇ ಸಂಚಿಕೆಯನ್ನು ನಿಮ್ಮ ಕೈಲಿಡುತ್ತಿದ್ದೇವೆ. ಈ ಸಂಪ್ರುಟದ ಆರಂಭ ಸಂಚಿಕೆಯೊಂದಿಗೇ ನಮ್ಮ ಬೆನ್ನು ಬಿದ್ದ ವಿಳಂಬರಾಯ ನಮ್ಮೆಲ್ಲಾ ಪ್ರಯತ್ನಗಳ ಹೊರತಾಗಿಯೂ ನಮ್ಮನ್ನು ಕಾಡುತ್ತಲೇ ಇದ್ದಾನೆ. ನಮ್ಮೊಡನೆ ಸಹಕರಿಸುವಿರಿ ಎಂಬ ಆಶಯ ನಮಗಿದೆ. ಈ ಆಶಯ ಬರೀ ಆಶಯವಲ್ಲ ಎಂಬುದನ್ನು ಕರ್ನಾಟಕದ ಹಾಗೂ ಹೊರಗಿನ ಅನೇಕ ಹಿರಿಯ ಸಾಹಿತಿ ಮಿತ್ರರು ಹಾಗೂ ಸಾಹಿತ್ಯಾಭಿಮಾನಿಗಳು 'ಸಂವಾದ'ವನ್ನು ಕನ್ನಡದ ಅತ್ಯುತ್ತಮ ಸಾಹಿತ್ಯ ಪತ್ರಿಕೆಯೆಂದು ಮೆಚ್ಚಿ ಬರೆದಿರುವ ಪತ್ರಗಳು ನಮಗೆ ಮನವರಿಕೆ ಮಾಡಿಕೊಟ್ಟಿವೆ. ಈ ಧೈರ್ಯದೊಡನೆಯೇ, ಅನೇಕ ತೊಂದರೆ ಹಿಂಸೆಗಳ ನಡುವೆಯೂ, ನಾವು 'ಸಂವಾದ'ವನ್ನು ಹೊಸ ಸಾಹಿತ್ಯ ಸಂಸ್ಕೃತಿಯೊಂದರ ಪೋಷಕ ವೇದಿಕೆಯಾಗಿ ಕಟ್ಟಿ ಬೆಳೆಸುವ ನಮ್ಮ ಪ್ರಯತ್ನವನ್ನು ಮುಂದುವರೆಸಿದ್ದೇವೆ.

ಕಳೆದ ಹಾಗೂ ಈ ಸಂಚಿಕೆಯ ನಡುವಣ ಕಾಲಾವಧಿಯಲ್ಲಿ ಕನ್ನಡ ಸಾರಸ್ವತ ಲೋಕದ ಮೂವ್ವರು ಹಿರಿಯರು ನಮ್ಮನ್ನಗಲಿ ಹೋಗಿದ್ದಾರೆ. ಪ್ರಖರ ವಿಚಾರ ಶೀಲತೆಯ ವಿಶಿಷ್ಟ ವಿದ್ವಾಂಸ ಡಾ॥ ಶಂಬಾ ಜೋಷಿ, ಕನ್ನಡದ ವಿನೋದ ಸಾಹಿತ್ಯಕ್ಕೆ ಮಣ್ಣಿನ ಕಂಪು ಬೆರೆಸಿ ಅದನ್ನು ಹದಗೊಳಿಸಿದ ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಈ ಕ್ಷೇತ್ರದಲ್ಲಿ ಇವರ ಜೊತೆಯವರೂ, ವಿದ್ಯಾರ್ಥಿಪ್ರಿಯ ಅಧ್ಯಾಪಕರೂ ಆದ ಪ್ರೊ॥ ಕೆ. ವೆಂಕಟರಾಮಪ್ಪ– ಇವರ ನೆನಪಿಗೆ ಸಂವಾದ ತುಂಬು ಹೃದಯದ ಶ್ರದ್ಧಾಂಜಲಿ ಅರ್ಪಿಸುತ್ತದೆ.

ಕಳೆದ ಸಂಚಿಕೆಯಲ್ಲಿ ನಾವು. ಮ್ಯಾಗ್ಸಸ್ಸೆ ಪ್ರಶಸ್ತಿ ವಿಜೇತರಾದ ಕೆ. ವಿ. ಸುಬ್ಬಣ್ಣ ಹಾಗೂ ಅವರ ನೀನಾಸಂ ಕುರಿತು ಈ ಸಂಚಿಕೆಯಲ್ಲಿ ಬರಹಗಳನ್ನು ಕೊಡುವುದಾಗಿ ಹೇಳಿದ್ದೆವು. ಸುಬ್ಬಣ್ಣ ಅವರನ್ನೇ ಮುಖತಃ ಭೇಟಿಯಾಗಿ ನೀನಾಸಂ ಕುರಿತಂತೆ ಕೆಲವು ಪ್ರಶ್ನೆಗಳಿಗೆ ಉತ್ತರ ದೊರಕಿಸಿಕೊಳ್ಳುವ ಇರಾದೆ ನಮ್ಮದಾಗಿತ್ತು. ಆದರೆ ಅವರ ಕೆಲಸ ಕಾರ್ಯಗಳು ಹಾಗೂ ನಮ್ಮ ಬಿಡುವು– ಇವುಗಳು ಹೊಂದಿಕೆಯಾಗದೆ,

ನಮ್ಮ ಈ ಉದ್ದೇಶ ಈಡೇರಲಿಲ್ಲ. ಆದರೆ ನಾವು ಸುಬ್ಬಣ್ಣನವರಿಗೆ ಕೆಲವು ಪ್ರಶ್ನೆಗಳನ್ನು ಸಿದ್ಧಮಾಡಿ, ಉತ್ತರ ಬರೆದು ಕಳಿಸಿಕೊಡಲು ಕೇಳಿಕೊಂಡೆವು. ನಮ್ಮ ಪ್ರಶ್ನೆಗಳು ಉತ್ತರಕ್ಕೆ ಅನರ್ಹವೆನಿಸಿದರೆ ಹಾಗೇ ತಿಳಿಸಲೂ ಸೂಚಿಸಿದೆವು. ಸುಬ್ಬಣ್ಣ, ತೋಟ ಹಾಗೂ ಸಂಸ್ಕೃತಿ ಶಿಬಿರಗಳ ಕೆಲಸವಿರುವುದಾಗಿ ಹೇಳಿ ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡಲಸಾಧ್ಯವಾಗಿದೆಯೆಂದು ತಿಳಿಸಿದ್ದಾರೆ. ಜೊತೆಗೆ ಮಾಗ್ಸಸ್ಸೆ ಪ್ರಶಸ್ತಿ ಸ್ವೀಕಾರ ಸಂದರ್ಭದಲ್ಲಿ ತಾವು ಮಾಡಿದ ಭಾಷಣದ ಕನ್ನಡ ಅವತರಣಿಕೆಯ ಹಾಗೂ ನೀನಾಸಂನ ಹಣಕಾಸು ತಃಖ್ತೆಯ ಪ್ರತಿಗಳನ್ನು ವಿಶ್ವಾಸದಿಂದ ನಮಗೆ ಕಳಿಸಿಕೊಟ್ಟಿದ್ದಾರೆ. ಸುಬ್ಬಣ್ಣನವರ ಪ್ರಶಸ್ತಿ ಸ್ವೀಕಾರ ಭಾಷಣ ಸದ್ಯದ ನಮ್ಮ ರಾಜಕೀಯ ಹಾಗೂ ಸಾಂಸ್ಕೃತಿಕ ಸಂದರ್ಭಕ್ಕೆ ಸಂಬಂಧಿಸಿದ ಹಲವು ಮುಖ್ಯ ಪ್ರಶ್ನೆಗಳೊಡನೆ ತಡಕಾಡಿದೆ. ಅದನ್ನು ನಾವು ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ಹಾಗೂ ಸುಬ್ಬಣ್ಣನವರಿಗೆ ನಾವು ಬರೆದು ಕಳಿಸಿದ ಹತ್ತು ಮುಖ್ಯ ಪ್ರಶ್ನೆಗಳನ್ನೂ ಇಲ್ಲಿ ಕೊಡುತ್ತಿದ್ದೇವೆ:

೧. ನೀನಾಸಂಗೆ ಗ್ರಾಮಾಂತರ ಪ್ರದೇಶದಲ್ಲಿ ಸಂಸ್ಕೃತಿ ಪ್ರಸಾರಕ್ಕಾಗಿ ಮ್ಯಾಗ್ಸಸ್ಸೆ ಪ್ರಶಸ್ತಿ ಬಂದಿದೆ, ಸಂತೋಷ. ಆದರೆ ನೀನಾಸಂ ಗ್ರಾಮಾಂತರ ಪ್ರದೇಶದಲ್ಲಿದೆ ಎಂಬುದರ ಹೊರತಾಗಿ ಮತ್ಯಾವ 'ಗ್ರಾಮಾಂತರತೆ'ಯೂ ಅಲ್ಲಿ ಕಾಣುವುದಿಲ್ಲ. ಒಪ್ಪುತ್ತೀರಾ ?

೨. ನೀನಾಸಂ ನಿರ್ಮಿಸುವ ನಾಟಕಗಳು, ತೋರಿಸುವ ಚಲನಚಿತ್ರಗಳು ಹಾಗೂ ಅವುಗಳ ಬಗ್ಗೆ ನಡೆಯುವ ಚರ್ಚೆ–ಸಂವಾದಗಳು, ಇವೆಲ್ಲವುಗಳಿಂದ ಒಟ್ಟಾರೆಯಾಗಿ ಪ್ರತಿಬಿಂಬಿತವಾಗುವ ಸಂಸ್ಕೃತಿ ಕುರಿತ ನಿಲುವುಗಳು ದೆಹಲಿ–ಮುಂಬೈ–ಕಲ್ಕತ್ತಾ–ಬೆಂಗಳೂರಿನ ಬುದ್ಧಿಜೀವಿಗಳ 'ಸ್ಥಾಪಿತ'ವೆನ್ನಬಹುದಾದ ನಿಲುವುಗಳಿಗಿಂತ ಭಿನ್ನವೇನೂ ಅನ್ನಿಸುವುದಿಲ್ಲ. ಈ ಹಿನ್ನೆಲೆಯಲ್ಲಿ, ನೀವು ಬಹುವಾಗಿ ಪ್ರಸ್ತಾಪಿಸುವ ಸಮಾಜವಾದಿ ಸಂಸ್ಕೃತಿಯ ಕೇಂದ್ರವೆಂದು ಪರಿಗಣಿಸಲಾಗುವ ವಿಕೇಂದ್ರೀಕರಣದ ಕಲ್ಪನೆ ಕೇವಲ ಸ್ಥಳಕ್ಕೆ ಸೀಮಿತಗೊಂಡಂತಾಗಿದೆಯಲ್ಲವೇ ? ಅಲ್ಲವಾದರೆ ಹೇಗಲ್ಲ ?

೩. ನೀವು ನಿಮ್ಮ ನಾಟಕಗಳು, ಚಲನಚಿತ್ರ ಪ್ರದರ್ಶನಗಳು ಹಾಗೂ ರಸಗ್ರಹಣ ಶಿಬಿರಗಳ ಮೂಲಕ ಮಾಡುತ್ತಿರುವ ಕೆಲಸಕ್ಕೂ ಹೆಗ್ಗೋಡಿನ ಒಬ್ಬ ಸಾಮಾನ್ಯನಿಗೂ- ಆತ ಈ ಎಲ್ಲವನ್ನೂ ಕುತೂಹಲದಿಂದ ನೋಡಬಹುದು ಎಂಬುದರ ಹೊರತಾಗಿ- ಯಾವ ರೀತಿಯ ಸಂಬಂಧವನ್ನು ಕಲ್ಪಿಸುವಿರಿ ?

೪. ನೀನಾಸಂ ಕೆಲಸದ ಅಮೂಲ್ಯತೆ ಹಾಗೂ ಅರ್ಥಪೂರ್ಣತೆ ದೆಹಲಿ–ಮುಂಬೈ–ಕಲ್ಕತ್ತಾ–ಬೆಂಗಳೂರುಗಳನ್ನು ದಾಟಿ ಫಿಲಿಫೈನ್ಸನ್ನು ತಲುಪಿದೆಯಾದರೂ

ಶಿವಮೊಗ್ಗ ಜಿಲ್ಲೆಯು, ಏಕೆ ಸಾಗರ ತಾಲ್ಲೂಕಿನ ಜನತೆಯು ಎಚ್ಚರವನ್ನೇ ಮುಟ್ಟಿಲ್ಲ. ಒಪ್ಪುತ್ತೀರಾ ? ಈ ಬಗ್ಗೆ ಯೋಚಿಸಿದ್ದೀರಾ ?

೫ ಕರ್ನಾಟಕದ ಗ್ರಾಮಾಂತರ ಪ್ರದೇಶದಲ್ಲಿ ಕಳೆದೊಂದು ದಶಕದಲ್ಲಿ ನಡೆದ ರೈತ, ದಲಿತ, ಕನ್ನಡ ಹಾಗೂ ಪರಿಸರ ಚಳುವಳಿಗಳ ಸಾಂಸ್ಕೃತಿಕ ಅಂಶಗಳಿಗೆ ನೀನಾಸಂ ಸ್ಪಂದಿಸಲಾಗದಿದ್ದರೂ, ಈ ಎಲ್ಲ ಚಳುವಳಿಗಳನ್ನೂ ನಿರ್ನಾಮ ಮಾಡಲೆಣಿಸಿದ ಜನತಾ ಸರ್ಕಾರದೊಡನೆ ಮಾತ್ರ ಗಾಢವಾಗಿ ಸ್ಪಂದಿಸಿತು ಎಂಬ ಮಾತಿದೆ. ಏನನ್ನುತ್ತೀರಿ ?

೬. ನೀನಾಸಂ ತನ್ನ ಸಾಂಸ್ಕೃತಿಕ ಆಧಾರಕ್ಕಾಗಿ ಬಹುಪಾಲು (ಹವ್ಯಕ) ಬ್ರಾಹ್ಮಣ ಹುಡುಗ–ಹುಡುಗಿಯರನ್ನೇ ಅವಲಂಬಿಸಿದಂತಿದೆ. ಸಮಾಜವಾದಿ ಆಂದೋಳನದೊಂದಿಗೆ ೨೫ ವರ್ಷಗಳಿಂದಲೂ ಗಾಢ ಸಂಬಂಧ ಹೊಂದಿರುವ ತಮಗೆ ಇದು ಕೇವಲ ಆಕಸ್ಮಿಕ ಅಥವಾ ಅನಿವಾರ್ಯ ಅಥವಾ ಅಮುಖ್ಯ ಅನಿಸುತ್ತದೆಯೇ ?

೭. ಗೋಪಾಲಗೌಡರನ್ನು ತಮ್ಮ ನಾಯಕನೆಂದು ಗುರುತಿಸುವ ನೀವು ಗೋಪಾಲ ಗೌಡರಿಂದ ಕಲಿತದ್ದನ್ನು 'ನೀನಾಸಂ'ನಲ್ಲಿ ಅಳವಡಿಸಿರುವ ಬಗೆ ಹೇಗೆ ?

೮. ನೀನಾಸಂ ಬೆಳವಣಿಗೆಯಲ್ಲಿ ಹಣದ ಪ್ರಾಮುಖ್ಯತೆ ಎಷ್ಟು ? ಅದನ್ನು ಹೊಂದಿಸಿದ್ದು ಹೇಗೆ ? ಹಾಗೆ ಹೊಂದಿಸುವಾಗ ತಾತ್ವಿಕ ಕಿರಿಕಿರಿಗಳೇನೂ ಆಗಲಿಲ್ಲವೇ ?

೯. ಫೋರ್ಡ್ ಪ್ರತಿಷ್ಠಾನದಿಂದ ಹಣ ಸ್ವೀಕರಿಸುವಾಗ ನಿಮ್ಮ ಮನಸ್ಸಿನಲ್ಲಿ ಸಂದೇಹಗಳೇನಾದರೂ ಇದ್ದುವೇ ? ಈ ಹಣದಿಂದ ನೀನಾಸಂಗೆ ಎಷ್ಟು ಪ್ರಯೋಜನವಾಗಿದೆ ? ಈ ಹಣವಿಲ್ಲದಿದ್ದರೆ ನೀನಾಸಂ ಈ ಮಟ್ಟಿಗೆ ಬೆಳೆಯುವಲ್ಲಿ ತೊಂದರೆಯಾಗುತ್ತಿತ್ತೇ ?

೧೦. ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲೂ 'ನೀನಾಸಂ' ತರಹದ ಸಂಸ್ಕೃತಿ ಕೇಂದ್ರಗಳನ್ನು (ಯಾರಾದರೂ ಮನಸ್ಸು ಮಾಡಿದರೆ) ಸ್ಥಾಪಿಸಲು ಸಾಧ್ಯವೆ ? ಸಾಧ್ಯವಾದಲ್ಲಿ ಕರ್ನಾಟಕದ ಜನಜೀವನದ ಮೇಲೆ ಏನು ಪರಿಣಾಮವಾದೀತು?

ನಾವು ಸುಬ್ಬಣ್ಣನವರನ್ನು ಈ ಪ್ರಶ್ನೆಗಳನ್ನು ಕೇಳಿದ್ದು ಅವರು ಸಾರ್ವಜನಿಕವಾದ ಪ್ರಶಸ್ತಿಯೊಂದನ್ನು ಸ್ವೀಕರಿಸಿದ್ದಾರೆ ಮತ್ತು ಈ ಪ್ರಶಸ್ತಿ ಗ್ರಾಮಾಂತರ ಪ್ರದೇಶದಲ್ಲಿ ಸಂಸ್ಕೃತಿ ಪ್ರಸಾರಕ್ಕಾಗಿ ಲಭಿಸಿದೆ ಎಂಬ ಹಿನ್ನೆಲೆಯಲ್ಲಿ. ಸುಬ್ಬಣ್ಣ ಬಿಡುವು ಮಾಡಿಕೊಂಡು ಉತ್ತರಿಸುವರೆಂದು ನಾವು ಭಾವಿಸಿದ್ದೆವು. ನಮ್ಮ ಭಾವನೆ ಸದ್ಯಕ್ಕಂತೂ ಹುಸಿಯಾಗಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಅಂತೂ ಅಧ್ಯಕ್ಷರೊಬ್ಬರನ್ನು ನೇಮಕ ಮಾಡಲಾಗಿದೆ. ಸಾಹಿತಿ ಮಿತ್ರರ ನಡುವೆ ಸರಳ ಮನುಷ್ಯರೆಂದೇ ಹೆಸರಾಗಿರುವ

ಬರಗೂರು ರಾಮಚಂದ್ರಪ್ಪ ಬಂಡಾಯ ಸಾಹಿತ್ಯದ ಉಗ್ರ ಪ್ರತಿಪಾದಕರೂ ಹೌದು! ಹೀಗಾಗಿ ಅಕಾಡೆಮಿಯ ಚಟುವಟಿಕೆಗಳನ್ನು ಕುತೂಹಲದಿಂದ ಕಾದು ನೋಡಬೇಕಾಗಿದೆ.... ಅಧ್ಯಕ್ಷ ಸ್ಥಾನ ಬರಗೂರರಿಗೆ ತಮ್ಮ ಮಿತಿಗಳನ್ನು ಮೀರುವ ಶಕ್ತಿ ನೀಡಲಿ ಎಂದಷ್ಟೇ ಸಂವಾದ ಹಾರೈಸಬಲ್ಲುದು.

ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆ ಸ್ಥಾಪನೆಗೆ ಸಂಬಂಧಿಸಿದ ವಿವಾದ ಜಿಗುಪ್ಸೆಕರವಾದ ಹಂತವನ್ನು ತಲುಪಿದೆ. ತಿರುವಳ್ಳುವರ್ ದಲಿತ ಸಾಹಿತಿಯೆಂದು ಹುಯಿಲೆಬ್ಬಿಸುತ್ತಾ, ವಿವಾದಕ್ಕೆ ಜಾತೀಯ ಬಣ್ಣ ಬಳಿಯಲೆತ್ನಿಸುತ್ತಿರುವುದೇ ಈ ವಿವಾದ ಎಂತೆಂತಹ ಶಕ್ತಿಗಳು ಕೈಗೂಡಿಸಿದೆ ಎಂಬುದು ಗೊತ್ತಾಗುತ್ತದೆ. ಇವರೊಂದಿಗೆ ದನಿಗೂಡಿಸಿರುವವರು ಯಾವಾಗಲೂ ತಲೆ ಮೇಲೇ ನಡೆಯುವ ನಮ್ಮ ಸಾಹಿತಿ ಮಿತ್ರರು. ಸಮಸ್ಯೆಯನ್ನು ಸಂದರ್ಭದೊಡನೆ ಗ್ರಹಿಸದೆ ಅಸಂಬದ್ಧ ಆದರ್ಶ ಮಾತುಗಳ ಗಿಳಿಪಾಠ ಹೇಳುವುದನ್ನೆ ಗೀಳು ಮಾಡಿಕೊಂಡಿರುವ ಈ ಮಿತ್ರರು ಬೀದಿ ರಾಜಕೀಯಕ್ಕೆ ತಾತ್ವಿಕ ಮುಖವಾಡ ತೊಡಿಸುವ ಪ್ರಯತ್ನವನ್ನಷ್ಟೇ ಮಾಡುತ್ತಿದ್ದಾರೆ. ಬೆಂಗಳೂರಿನ ಬೀದಿಯಲ್ಲಿ ತಿರುವಳ್ಳುವರ್ ಪ್ರತಿಮೆಯನ್ನು ಸ್ಥಾಪಿಸಿಯೇ ತೀರಬೇಕೆನ್ನುವವರ ಉದ್ದೇಶವಾದರೂ ಏನು? ಸಾಹಿತ್ಯಾಭಿಮಾನವೇ? ಕನ್ನಡ–ತಮಿಳು ಬಾಂಧವ್ಯ ವೃದ್ಧಿಯೇ ? ಸ್ಥಳೀಯ ಭಾಷೆ ಸಂಸ್ಕೃತಿಗಳೊಂದಿಗೆ ಎಣ್ಣೆ–ಸೀಗೆಕಾಯಿ ಸಂಬಂಧವನ್ನೇ ಇಟ್ಟುಕೊಂಡು ಬಂದು, ಆ ಸಂಬಂಧದ ಸಾಕ್ಷಿಯೆಂಬಂತೆ ಬೀದಿಯಲ್ಲಿ ಸಾಹಿತಿಯೊಬ್ಬರ ಪ್ರತಿಮೆ ಸ್ಥಾಪಿಸಬಯಸುವುದು ಸಾಹಿತ್ಯ ಸಂಸ್ಕೃತಿಗಳಿಗೆ ಮಾಡುವ ಅಪಮಾನವಷ್ಟೆ. ಈ ತಿರುವಳ್ಳುವರ್ ಪ್ರತಿಮೆ ಸಾಹಿತ್ಯ ಸಂಸ್ಕೃತಿಗಳ ಪ್ರತೀಕವೇ ಆದರೆ ಸದ್ಯಕ್ಕೆ (ಬೀದಿ ಪ್ರತಿಮೆಗಳ ಸಂಸ್ಕೃತಿಯಿಲ್ಲದ) ಕರ್ನಾಟಕದಲ್ಲಿ ಅದಕ್ಕೆ ಉಚಿತವಾದ ಸ್ಥಾನವಿರುವುದು ನಮ್ಮ ವಿಶ್ವವಿದ್ಯಾಲಯವೊಂದರ ಭಾಷಾ ವಿಭಾಗದಲ್ಲಿ, ಬೆಂಗಳೂರಿನ ತಮಿಳು ಸಂಘದವರಿಗೆ ಪ್ರತಿಮೆ ಸ್ಥಾಪನೆ ಬಗ್ಗೆ ಸದುದ್ದೇಶವೇ ಇದ್ದಲ್ಲಿ ಅದನ್ನು ನಮ್ಮ ವಿಶ್ವವಿದ್ಯಾಲಯವೊಂದಕ್ಕೆ ಒಪ್ಪಿಸಲಿ.

ಸಂವಾದದ ಮಾಸ್ತಿ ವಿಶೇಷಾಂಕಕ್ಕಾಗಿ ನಾವು ಮೂರು ವಿಚಾರಸಂಕಿರಣಗಳನ್ನು ಹಮ್ಮಿಕೊಂಡಿರುವುದನ್ನು ಈಗಾಗಲೇ ಹೇಳಿದ್ದೇವೆ. ಹಾಸನದಲ್ಲಿ ಸೆಪ್ಟಂಬರ್ 8ರಂದು ನಡೆದ ಮೊದಲ ವಿಚಾರಸಂಕಿರಣದ ಸಂಕ್ಷಿಪ್ತ ವರದಿಯೊಂದನ್ನು ಈ ಸಂಚಿಕೆಯಲ್ಲಿ ನೀಡಿದ್ದೇವೆ. ಎರಡನೇ ವಿಚಾರಸಂಕಿರಣ ನವೆಂಬರ್ 9 ಹಾಗೂ 10 ರಂದು ಚಳ್ಳಕೆರೆಯಲ್ಲಿ ನಡೆದಿದೆ. ಇದಕ್ಕೆ ನೆರವು ನೀಡಿರುವವರು ಸ್ಥಳೀಯ ರವೀಂದ್ರ ಪದವಿಪೂರ್ವ ಕಾಲೇಜಿನ ಆಡಳಿತ ವರ್ಗ.

—ಸಂಪಾದಕರು

ಪುಸ್ತಕ ಸ್ವೀಕಾರ

೧. ಸಿಸ್ಟರ್ ಮಿರಾಂಡಾಳ ಕಪ್ಪು ರವಿವಾರ (ಕಥೆಗಳು) ಲೇ : ಕುಮಾರ ಜೋಶಿ
ಪ್ರ : ಗೀತಾ ಬುಕ್‌ಹೌಸ್, ಮೈಸೂರು
ಪುಟಗಳು : viii + 110 ಬೆಲೆ : ರೂ. 20/- (1991)

೨. ಬ್ಯಾಳಿಕಾಳನ ಕನಸು ಮತ್ತು ಇತರ ಕಥೆಗಳು ಲೇ : ದುರ್ಗಾಸುತೆ
ಪ್ರ : ಲೀಲಾ ಪ್ರಕಾಶನ, ಬೆಂಗಳೂರು-40
ಪುಟಗಳು : viii + 110 ಬೆಲೆ : ರೂ. 20/- (1991)

೩. ತರಾಂಗಾಂತರ (ಕಾದಂಬರಿ) ಲೇ : ಕೆ. ವಿ. ತಿರುಮಲೇಶ್
ಪ್ರ : ಕಲ್ಯಾಣಿ ಪ್ರಕಾಶನ, ಶ್ರೀನಗರ, ಬೆಂಗಳೂರು–50
ಪುಟಗಳು : viii + 108 ಬೆಲೆ : ರೂ. 18/- (1990)

೪. ಸಮಾಧಿಯ ಮೇಲೆ (ವಿಚಾರ) ಲೇ : ಶ್ರೀಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು
ಪ್ರ : ತರಳಬಾಳು ಪ್ರಕಾಶನ, ಸಿರಿಗೆರೆ
ಪುಟಗಳು : ix + 103 ಬೆಲೆ : 20/- (1991)

೫. ಅಜ್ಞಾತ ಮುಂಬಯಿ (ಪ್ರವಾಸ ಕಥೆ) ಲೇ : ರಾಘವೇಂದ್ರ ಪಾಟೀಲ
ಪ್ರ : ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ
ಪುಟಗಳು : x + 94 ಬೆಲೆ : ರೂ. 10/- (1991)

೬. ರಸ್ತೆಯಂಚಿನ ಗಾಡಿ (ಕವಿತೆ) ಲೇ : ಪ್ರತಿಭಾ ನಂದಕುಮಾರ್
ಪ್ರ : ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು
ಪುಟಗಳು : viii + 128 ಬೆಲೆ ರೂ. 25/- (1991)

೭. ಆಸಕ್ತಿ (ಸಾಂಸ್ಕೃತಿಕ ಬರಹಗಳು) ಲೇ : ಕೆ. ಸತ್ಯನಾರಾಯಣ
ಪ್ರ : ಹಂಸಧ್ವನಿ ಪ್ರಕಾಶನ, ಬೆಂಗಳೂರು–10
ಪುಟಗಳು : 284 ಬೆಲೆ : ರೂ. 30/- ಮತ್ತು ರೂ. 45/- (1991)

೮. ಲಕ್ಷ್ಮಣರೇಖೆ ದಾಟಿದವರು (ಕವನಗಳು) ಲೇ : ಡಾ॥ ವಿಜಯಶ್ರೀ ಸಬರದ
ಪ್ರ : ಪಲ್ಲವಿ ಪ್ರಕಾಶನ, ಬೀದರ್
ಪುಟಗಳು : viii + 52 ಬೆಲೆ : ರೂ. 15/- (1991)

೯. ಅರ್ಥ (ಕಥೆಗಳು) ಲೇ : ಭಾಗೀರಥಿ ಹೆಗಡೆ
ಪ್ರ : ಸೂರ್ಯ ಪ್ರಕಾಶನ, ಮಂಚಿಕೇರಿ (ಉ. ಕ.)
ಪುಟಗಳು : xii + 160 ಬೆಲೆ ರೂ. 20/- (1991)

(ಸೂಚನೆ : ವಿಮರ್ಶೆಗಾಗಿ ಪುಸ್ತಕದ ಎರಡು ಪ್ರತಿಗಳನ್ನು ಕಳುಹಿಸಬೇಕು)

ಸಂವಾದ ಪುಸ್ತಕ ಪ್ರಕಾಶನ: ಮಲ್ಲಾಡಿಹಳ್ಳಿ-577531

ಡಿ.ಎಸ್. ನಾಗಭೂಷಣ ಅವರ ಗಮನ (ವಿಮರ್ಶೆ-ವಿಚಾರ) ಕುರಿತು...

ಸಾಹಿತ್ಯದ ಬಗ್ಗೆ ಗಾಢವಾದ ಪ್ರೀತಿಯಿಂದ ಮಾಡುವ ವಿಮರ್ಶೆಗೆ ಯಾವ ಒಂದು ಹದ ಹಾಗೂ ಸೃಜನಶೀಲತೆ ಇರಬಲ್ಲುದೆಂಬುದಕ್ಕೆ ಶ್ರೀ ಡಿ. ಎಸ್. ನಾಗಭೂಷಣ ಅವರ ಈ ಬರಹಗಳು ಸಾಕ್ಷಿಯಾಗಿವೆ ಕನ್ನಡದ ಕೆಲವು ಪ್ರಮುಖ ಲೇಖಕರ ಮೂಲವಾನದಲ್ಲಿ ಇಲ್ಲಿ ನಡೆದಿರುವ ಚರ್ಚೆಗಳು ಪ್ರಸ್ತುತ ಸಾಹಿತ್ಯ ವಿಮರ್ಶೆಗೆ ಹೊಸ ಆಯಾಮವನ್ನು ಕಲ್ಪಿಸುವಂಥವುಗಳಾಗಿವೆ.

–ಜಿ. ಎಸ್. ಶಿವರುದ್ರಪ್ಪ

ಇಂಥ ನಿಷ್ಪಕ್ಷಪಾತ, ನಿರ್ಭೀತ ವಿಮರ್ಶೆ ಓದಿ ತುಂಬಾ ಸಮಯವೇ ಆಯಿತು.... ಇಂದಿನ ಬಹುತೇಕ ವಿಮರ್ಶೆಯಲ್ಲಿ ಬೌದ್ಧಿಕ ಕಸರತ್ತೇ ಅತಿಯಾಗಿ ಹೃದಯವಂತಿಕೆ ಶೂನ್ಯವಾಗಿರುವುದರಿಂದ ಸಾಹಿತ್ಯ ಕೃತಿಗೆ ನ್ಯಾಯ ಸಲ್ಲದೇ ಹೋಗುವಂಥ ಪರಿಸ್ಥಿತಿ ಉದ್ಭವವಾಗಿದೆ. ನಿಮ್ಮ ನಿಲುವು ಆರೋಗ್ಯಕರವಾದದ್ದು–ಚಿಕಿತ್ಸಕವಾಗಿ ನೋಡಿಯೂ ಕೃತಿಗೆ ಅಪಚಾರವಾಗದಂತೆ ಎಚ್ಚರ ವಹಿಸಿದ್ದೀರಿ. ನಿಮಗೆ ಯಾರೂ ಮುಖ್ಯರಲ್ಲ, ಕೃತಿ ಮುಖ್ಯ ಎಂಬುದನ್ನು ಸಾಬೀತುಪಡಿಸಿದ್ದೀರಿ.

–ಚದುರಂಗ

ಮೊದಲು ನಿಮ್ಮನ್ನು ಅಭಿನಂದಿಸಬೇಕು. ಹೇಳುವುದನ್ನು ಸ್ಪಷ್ಟವಾಗಿ, ಆಧಾರಪೂರ್ವಕವಾಗಿ ಹೇಳಿದ್ದೀರಿ. ವೈಯುಕ್ತಿಕ ಬೇಕು ಬೇಡಗಳನ್ನು ದೂರವಿಟ್ಟು, ಅಧ್ಯಯನದ, ವ್ಯಾಖ್ಯಾನದ ತತ್ವಗಳನ್ನು ಆಧರಿಸಿ ಬರೆದಿದ್ದೀರಿ.... ಮುಖ್ಯವಾದ ಸಂಗತಿ, ನಿಮ್ಮ ವಿಮರ್ಶೆ ಬುದ್ಧಿವಂತಿಕೆಯ ಜಾಹೀರಾತಾಗದೆ, ಸೂಕ್ಷ್ಮ ಸಂವೇದನೆಗಳ ಪ್ರತಿಕ್ರಿಯೆಯಾಗಿದೆ ಎನ್ನುವುದು. **–ಎಲ್. ಎಸ್. ಶೇಷಗಿರಿರಾವ್**

'ಗಮನ' ಓದಿ ನಿಜಕ್ಕೂ ಸಂತೋಷವಾಯಿತು....ಪ್ರಸ್ತುತ ಸಾಹಿತ್ಯ ವಿಮರ್ಶೆಗೆ ಹೊಸ ಆಯಾಮವನ್ನು ನಿಮ್ಮ ಬರವಣಿಗೆ ಕಲ್ಪಿಸಿದೆ. ನಾನು ಮೆಚ್ಚಿಕೊಂಡಿದ್ದು ಇಲ್ಲಿನ ಸ್ವಂತಿಕೆ ಮತ್ತು ಅದನ್ನು ಪ್ರತಿಪಾದಿಸುವ ಹೊಸ ರೀತಿ. ಓದುಗರ, ವಿಮರ್ಶಕರ ಹಾಗೂ ಸಾಹಿತ್ಯಾಸಕ್ತರೆಲ್ಲರ ಗಮನ ಸೆಳೆಯಲೇಬೇಕಾದ ಕೃತಿ ಇದು.

–ಚೆನ್ನವೀರ ಕಣವಿ

ಮಾಸ್ತಿಯವರ ಮೇಲಿನ ಲೇಖನ ನಾನು ತುಂಬಾ ಮೆಚ್ಚಿಕೊಂಡ ಲೇಖನ-ಅದರ ಭಾಷೆಯ, ವಿಚಾರಗಳ ತಾಜಾತನದಿಂದಾಗಿ. ಇಂದಿನ ವಿಮರ್ಶೆಯ ಚರ್ವಿತ ಚರ್ವಣದಿಂದ ಸಂಪೂರ್ಣವಾಗಿ ಮುಕ್ತವಾದ ಈ ಬರವಣಿಗೆ ನನಗೆ ಅತ್ಯಂತ ಪ್ರಿಯವಾದದ್ದು, ಖುಷಿ ಕೊಡುವಂಥದ್ದು....ಕನ್ನಡ ವಿಮರ್ಶೆಗೆ ನೀವು ಮೌಲಿಕವಾದುದನ್ನು ಕೊಡಬಲ್ಲಿರಿ ಎಂಬುದರಲ್ಲಿ ನನಗೆ ಸಂಶಯವಿಲ್ಲ. **–ಯಶವಂತ ಚಿತ್ತಾಲ**

ನಿಮ್ಮ ಬರವಣಿಗೆಯಲ್ಲಿ ತಾಜಾತನವಿದೆ, ಸೂಕ್ಷ್ಮವಾಗಿ ಗಮನಿಸುವ ಶಕ್ತಿಯಿದೆ. ಕನ್ನಡ ಸಾಹಿತ್ಯದಲ್ಲಿ ಹೆಚ್ಚಾಗಿ ಸದ್ಯದ್ದೂ, ಶಾಶ್ವತವಾದದ್ದೂ ಹೆಣೆದಿರುತ್ತದೆ. ಸದ್ಯದ ಸಂಕಟಗಳಿಂದ ನೋಡುವುದೇ ಮೇಲೆಂದು, ಅಗತ್ಯವೂ ಎಂದು ತಿಳಿದವನು ನಾನು. ಹೀಗೆ ಮಾಡುತ್ತಿರುವಾಗಲೂ ಮೂಡಿಬರುವ 'ಶಾಶ್ವತ' ಮಾತ್ರ ನೈಜವಾದದ್ದು. ಹೀಗೆ ನೋಡಬಲ್ಲ ಗುಣಪಡೆದ ವಿಮರ್ಶಕ ನೀವು.

–ಯು. ಆರ್. ಅನಂತಮೂರ್ತಿ

Congrats ! 'ಗಮನ' ಎಲ್ಲರ ಗಮನ ಸೆಳೆಯಲಿ ಎಂದು Pun ಮಾಡದೆ ನಿರ್ವಾಹವಿಲ್ಲ ... ಅಡಿಗರ ಈಚಿನ ಕಾವ್ಯ ಕನ್ನಡದ ಹೊಸ ಕಾವ್ಯಕ್ಕೆ ನಿರ್ದೇಶಕವಾಗುತ್ತವೆಂಬ ನಿಮ್ಮ ಮಾತನ್ನು ಒಪ್ಪುವುದು ಕಷ್ಟ. ಕಾವ್ಯಕ್ಕೆ ಸಿದ್ಧಮಾರ್ಗವಿಲ್ಲ.

–ಕೆ. ವಿ. ತಿರುಮಲೇಶ್

ನಿಮ್ಮ ವಿಚಾರ ಕ್ರಮ ನನಗೆ ಮೆಚ್ಚುಗೆಯಾಯಿತು. ಯಾವುದೇ ಪೂರ್ವೋದ್ದೇಶವಿಲ್ಲದೆ, ಯಾರನ್ನು ಒಲಿಸಿಕೊಳ್ಳಲೆತ್ನಿಸದೆ ನಿರ್ಭಯವಾಗಿ, ನಿಷ್ಪಕ್ಷಪಾತವಾಗಿ ವಿಮರ್ಶೆ ಮಾಡಿರುವುದಕ್ಕೆ ನಿಮಗೆ ನನ್ನ ಹಾರ್ದಿಕ ಅಭಿನಂದನೆಗಳು.

–ತೀ. ನಂ. ಶಂಕರನಾರಾಯಣ

ಕನ್ನಡ ವಿಮರ್ಶೆಯಲ್ಲಿ ಈಗ ನಡೆಯುತ್ತಿರುವ ಚಟುವಟಿಕೆಗೆ ಇನ್ನೊಂದು ಮಗ್ಗುಲನ್ನು ನೀಡುವಂಥ ಕೃತಿಯನ್ನು ರಚಿಸಿರುವುದಕ್ಕೆ ಅಭಿನಂದನೆಗಳು. ಸಮಾಜವಾದದ ಖಚಿತ ಹಿನ್ನೆಲೆ ಹಾಗೆಯೇ ಸಾಹಿತ್ಯ ಕೃತಿಯ ಬಗೆಗಿನ ಗೌರವ ಎಂದು ನಿಮ್ಮ ವಿಮರ್ಶೆಯ ವಿಶಿಷ್ಟತೆಗಳೆಂದು ಗುರುತಿಸಬಹುದೇನೋ.

–ಎಚ್. ಎಸ್. ರಾಘವೇಂದ್ರರಾವ್

'ಗಮನ' ಚೆನ್ನಾಗಿದೆ. ಎಲ್ಲಕ್ಕಿಂತ ಹೆಚ್ಚು ಸರಲ ಹಾಗೂ ಋಜುವಾಗಿದೆ. ಈ ಗುಣಗಳಿಂದಲೇ ಮನಸ್ಸನ್ನು ತಟ್ಟುತ್ತದೆ. **–ಲಕ್ಷ್ಮೀಶ ತೋಳ್ಪಾಡಿ**

ನನಗೆ ಖುಷಿ ಕೊಟ್ಟ ವಿಚಾರವೆಂದರೆ, ಇಂದಿನ ಅನೇಕ ವಿಮರ್ಶಕರಿಗಿಂತ ಭಿನ್ನವಾಗಿ, ಕೃತಿಯನ್ನು ಡಿಸೆಕ್ಷನ್ ಟೇಬಲ್ಲಿಗೆ ಬಂದ ಒಂದು 'ವಸ್ತು'ವಾಗಿ ಪರಿಗಣಿಸದೆ, ಅದನ್ನೊಂದು ಜೀವಂತ ಕೃತಿಯಾಗಿ ನೋಡಿ ಆಸ್ವಾದಿಸುತ್ತೀರಿ; ಆಮೇಲೆ ಆ ಕೃತಿ ಕೊಟ್ಟ ಸಂತೋಷಕ್ಕೋ, ಅತೃಪ್ತಿಗೋ ಕಾರಣಗಳನ್ನು, ಅದು ವ್ಯಕ್ತಪಡಿಸುವ ದರ್ಶನವನ್ನು–ಅರ್ಥದ ವಿಭಿನ್ನ ಮೈಗಳ ಮೂಲಕ ಒಟ್ಟಾಗಿ ಕಾಣಲು– ಬರಹದ ಮೂಲಕ ಕಾಣಿಸಲು ಯತ್ನಿಸುತ್ತೀರಿ ಎಂಬುದು. ನಿಮ್ಮ ತೀರ್ಮಾನವನ್ನು ನಾವು ಒಪ್ಪದೇ ಇರಬಹುದು: ಆದರೆ ಆ ಕೃತಿಯೊಂದಿಗೆ ನೀವು ನಡೆಸುವ ತೀವ್ರ ಹಾಗೂ ಆಪ್ತ ಅನುಸಂಧಾನದ ಬೆಚ್ಚಗಿನ ಅನುಭವವನ್ನು ಪಡೆಯದಿರಲು, ಮೆಚ್ಚದಿರಲು ಸಾಧ್ಯವೇ ಇಲ್ಲ. **–ಸುಬ್ರಾಯ ಚೊಕ್ಕಾಡಿ**

ಮೇ–ಜೂನ್ ೧೯೯೧/೭೯

You are a breath of fresh air ! ಭಾಷೆಯ ಮೂಲಕವೇ 'ಎಲ್ಲ'ವನ್ನೂ ತಿಳಿದುಕೊಳ್ಳುತ್ತೇನೆ ಎನ್ನುವ ಅಹಂಕಾರವನ್ನು ನೀಗಿಕೊಂಡ ಸಂಪನ್ನ ಲಕ್ಷಣಗಳು ನಿಮ್ಮ ಸಂವೇದನೆಯಲ್ಲಿವೆ. ಅಂದರೆ ಕೃತಿಯ ನಿಲುಕುಗಳನ್ನು ಹಿಗ್ಗಿಸುವ, ಕೃತಿಗೆ ಹೆಚ್ಚಿನ space ಕಲ್ಪಿಸಿಕೊಡುವ Positive ನೆಲೆಯಲ್ಲಿ ನಿಮ್ಮ ನಿಲುವು ಇದೆ. ಇದು ನಿಮಗಷ್ಟೇ ಅಲ್ಲ, ಸಾಹಿತ್ಯವೆಂಬ ಆ ಮಹಾರಥಕ್ಕೂ ಅಲ್ಲ, ಕೃತಿಕಾರರ ಚೇತನಗಳಿಗೂ ಚೇತೋಹಾರಿಯಾದ ಸಂಗತಿ.

–ಜಯಂತ ಕಾಯ್ಕಿಣಿ

ಒಂದು ಕೃತಿಯಲ್ಲಿ, ಸಾಂಸ್ಕೃತಿಕ ವಾತಾವರಣದಲ್ಲಿ ಭಾಗವಹಿಸಲೆಂದೆ ಬರೆಯುವ ನಿಮ್ಮಂತಹವರ, ಜಿ. ರಾಜಶೇಖರರಂತಹವರ ಬರವಣಿಗೆಗಳೇ ಹೆಚ್ಚು ತುರ್ತಿನಿಂದ, ಪ್ರಾಮಾಣಿಕ ತುಡಿತದಿಂದ ಕೂಡಿರುತ್ತದೆ... ಎಲ್ಲಕ್ಕಿಂತ ಮುಖ್ಯವಾಗಿ ನಿಮ್ಮ ವಿಮರ್ಶೆ, ಬರವಣಿಗೆ ಓದಲು ಸುಸ್ತೆನಿಸುವುದಿಲ್ಲ, ಬೋರೆನಿಸುವುದಿಲ್ಲ. ಈಪೊತ್ತಿನ ವಿಮರ್ಶೆಯ ವಾತಾವರಣದಲ್ಲಿ ಅದೂ ಕೂಡಾ ಮುಖ್ಯವಲ್ಲವೇ ?

–ಕೆ. ಸತ್ಯನಾರಾಯಣ

ವಿಚಾರ ವಿಮರ್ಶೆ ನಡೆಯುತ್ತಿದೆ ಎಂದರೆ ಏನೋ ಗಲಾಟೆ ಆಗುತ್ತಿದೆ ಅನ್ನುವಂತಿರುವ ಈ ಸಂದರ್ಭದಲ್ಲಿ ನಿಮ್ಮ ವಿಮರ್ಶೆ ಒಳ್ಳೆಯ ಕಾವ್ಯದ ಸೆಳತದೊಂದಿಗೆ ನಮ್ಮನ್ನು ಸಮೀಪಿಸಿಬಿಡುತ್ತದೆ.

–ಹಿ. ಶಿ. ರಾಮಚಂದ್ರೇಗೌಡ

ಭಾಷೆಯ ಸೊಗಸು, ಖಚಿತ ಅಭಿಪ್ರಾಯ ಹಾಗೂ ವಿಭಿನ್ನ ಒಳನೋಟಗಳು ನಿಮ್ಮ ವಿಮರ್ಶೆಯ ವಿಶೇಷ.

–ಜಿ. ಪಿ. ಬಸವರಾಜು

'ಗುತ್ತಿ-ಹೂವಯ್ಯ' ನಿನ್ನ ಪ್ರಚಂಡಶಕ್ತಿಗೆ ನಿದರ್ಶನವಾಗಿದೆ.... ಮಾಸ್ತಿಯವರ ಕಥೆಗಳು ನಿನ್ನ ನಿರ್ಮಲ ಪ್ರೇಮದ ಬೆಳಕಿನಲ್ಲಿ ಉಜ್ವಲವಾಗಿ ಹೊಳೆಯುತ್ತವೆ.

–ಬಿದರಹಳ್ಳಿ ನರಸಿಂಹಮೂರ್ತಿ

ವಿಮರ್ಶೆ ಒಂದು ಪ್ರಬಂಧ ಬರೆದಂತೆ, ಅನಿಸಿದಂತೆ, ಹೇಳುತ್ತಾ ಹೋಗುವ ರೀತಿ ನಮ್ಮಲ್ಲಿ ತುಂಬಾ ಬಳಕೆಯಲ್ಲಿಲ್ಲ. ಹೀಗಾಗಿ 'ಗಮನ'ದ ಶೈಲಿ ಬಳಕೆಗೆ ಬರಬೇಕಾದ, ಬರಬಹುದಾದ ಶೈಲಿ ಅನ್ನಿಸುತ್ತದೆ.

–ಎಸ್. ಆರ್. ವಿಜಯಶಂಕರ

ಈವರೆಗೆ ನಮ್ಮ ವಿಮರ್ಶಕ ಪಂಡಿತರಿಗೆ ಹೊಳೆಯದ ಕೆಲ ಹೊಸ ಮಹತ್ವದ ಹೊಳಹುಗಳು ಗಮನದಲ್ಲಿ ಕಾಣಿಸಿಕೊಂಡಿವೆ. **–ಬಿ. ರಾಜಣ್ಣ**

ಸಂವಾದ

೨೨

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ – ೫೭೭ ೫೩೧
ಚಿತ್ರದುರ್ಗ ಜಿಲ್ಲೆ

ಈ ಸಂಚಿಕೆಯ ಲೇಖಕರು :

- **ನ್ಯಾಡಿನ್ ಗಾರ್ಡಿಮರ್,**
  ನೊಬೆಲ್ ಪ್ರಶಸ್ತಿ ವಿಜೇತ ದ. ಆಫ್ರಿಕದ ಲೇಖಕಿ
- **ಸ. ಉಷಾ,**
  ಕನ್ನಡ ಪ್ರವಾಚಕರು, ಹೊಯ್ಸಳೇಶ್ವರ ಕಾಲೇಜು, ಅರಸೀಕೆರೆ - ೫೭೩ ೧೦೩
- **ಸವಿತಾ ನಾಗಭೂಷಣ,**
  ಅಂಚೆ ಸಹಾಯಕರು, ಪ್ರಧಾನ ಅಂಚೆ ಕಛೇರಿ, ಹಾಸನ - ೫೭೩ ೨೦೧
- **ಎನ್. ಎಸ್. ಶ್ರೀಧರಮೂರ್ತಿ,**
  ಬಿನ್ ಎನ್. ಎಸ್. ಸೀತಾರಾಮರಾವ್, ೧ನೇ ಮೇನ್, ೪ನೇ ಕ್ರಾಸ್,
  ಕೆ. ಬಿ. ಬಡಾವಣೆ, ದಾವಣಗೆರೆ-೫೭೭ ೦೦೨
- **ಶಂಕರ ಪಾಟೀಲ,**
  ಕಲಾಭವನ, ವಿದ್ಯಾನಗರ, ದಾವಣಗೆರೆ - ೫೭೭ ೦೦೪
- **ಶೈಲಾ ನಾಗರಾಜ್**
  ಜಿಲ್ಲಾ ವಿಮಾಧಿಕಾರಿಗಳ ಕಛೇರಿ, ಕೆ. ಜಿ. ಐ. ಡಿ., ತುಮಕೂರು
- **ಡಾ|| ತೀ. ನಂ. ಶಂಕರನಾರಾಯಣ,**
  ಕನ್ನಡ ವಿಭಾಗದ ಮುಖ್ಯಸ್ಥರು, ಕುವೆಂಪು ವಿಶ್ವವಿದ್ಯಾಲಯ, ಬಿ. ಆರ್. ಪ್ರಾಜೆಕ್ಟ್
  ಶಿವಮೊಗ್ಗ ಜಿಲ್ಲೆ
- **ಲಕ್ಷ್ಮೀಶ ತೋಳ್ಪಾಡಿ,**
  ಶಾಂತಿಗೋಡು ಅಂಚೆ, ಪುತ್ತೂರು ತಾ|| (ದ. ಕ.)
- **ರಾಘವೇಂದ್ರ ಪಾಟೀಲ**
  ಜೀವಶಾಸ್ತ್ರ ಉಪನ್ಯಾಸಕರು, ಪ. ಪೂ. ಕಾಲೇಜು, ಮಲ್ಲಾಡಿಹಳ್ಳಿ - ೫೭೭ ೫೩೧
- **ಆರ್. ಪಿ. ವೆಂಕಟೇಶಮೂರ್ತಿ,**
  ಸಂಪಾದಕರು: ಜನತಾ ಮಾಧ್ಯಮ, ಆರ್. ಸಿ. ರಸ್ತೆ, ಹಾಸನ - ೫೭೩ ೨೦೧
- **ಆನಂದ ಕಂದ,**
  (ದಿವಂಗತ ಡಾ|| ಬೆಟಗೇರಿ ಕೃಷ್ಣಶರ್ಮರು)
- **ಡಾ|| ಪುರುಷೋತ್ತಮ ಬಿಳಿಮಲೆ,**
  ಉಪನ್ಯಾಸಕರು, ಕನ್ನಡ ವಿಭಾಗ, ಮಂಗಳ ಗಂಗೋತ್ರಿ, ಕೊಣಾಜೆ (ದ. ಕ.)

ನೊಬೆಲ್ ಪ್ರಶಸ್ತಿವಿಜೇತ ಲೇಖಕಿ

ನ್ಯಾಡಿನ್ ಗಾರ್ಡಿಮರ್: ಒಂದು ಪರಿಚಯ

● ಸ. ಉಷಾ

ಇಂಗ್ಲೀಷಿನಲ್ಲಿ ಈಗ ಬರೆಯುತ್ತಿರುವ ಬರಹಗಾರರಲ್ಲಿ **ನ್ಯಾಡಿನ್ ಗಾರ್ಡಿಮರ್** ಅಪರೂಪದ ವೈಶಿಷ್ಟ್ಯವುಳ್ಳವಳು. ದಕ್ಷಿಣ ಆಫ್ರಿಕಾದ ಜೊಹಾನ್ಸ್ ಬರ್ಗಿನ ಬಳಿಯ ಸ್ಪ್ರಿಂಗ್ಸ್ ಎಂಬ ಸಣ್ಣ ಪಟ್ಟಣದಲ್ಲಿ ೧೯೨೩ ರಲ್ಲಿ ಕೆಳ ಮಧ್ಯಮ ವರ್ಗದ ತಂದೆ ತಾಯಿಗಳ ಮಗಳಾಗಿ ಹುಟ್ಟಿದರು. ಇವರ ತಾಯಿ ತಂದೆಯರು ದಕ್ಷಿಣ ಆಫ್ರಿಕಾಗೆ ವಲಸೆ ಬಂದವರು. ತಾಯಿ ಇಂಗ್ಲೆಂಡಿನಲ್ಲಿ ತಂದೆ ಅಥುವೇನಿಯದಲ್ಲಿ ಹುಟ್ಟಿದವರು. ಸ್ಪ್ರಿಂಗ್ಸ್‌ನಲ್ಲೇ ಕಾನ್ವೆಂಟ್ ವಿದ್ಯಾಭ್ಯಾಸ ಪಡೆದ ನ್ಯಾಡಿನ್ ಸಣ್ಣ ವಯಸ್ಸಿನಲೇ ಬರವಣಿಗೆ ಪ್ರಾರಂಭಿಸಿದಳು. ಈಕೆ ತನ್ನನ್ನು ತಾನು ಸಹಜ ಲೇಖಕಿ ಎಂದು ಕರೆದುಕೊಳ್ಳುತ್ತಾಳೆ.

ಸ್ಪ್ರಿಂಗ್ಸ್ ಉಳಿದ ಪ್ರಪಂಚದಿಂದ ಬೇರ್ಪಟ್ಟ ಸಣ್ಣ ಪಟ್ಟಣವಾಗಿತ್ತು. ಈ ದ್ವೀಪವಾಸ ನ್ಯಾಡಿನ್‌ಗೆ ಒಂದು ವಿರೋಧಾಭಾಸದ ಸ್ವಾತಂತ್ರ್ಯವನ್ನು ತಂದುಕೊಟ್ಟಿತ್ತು. ಯಾರ ಮಾರ್ಗದರ್ಶನ, ಬುದ್ಧಿವಾದಗಳಿಲ್ಲದೆ 'ಹುರುಳಿಯ ಹೊಲದಲ್ಲಿ ಮೇಯುವ ಕರುವಿನಂತೆ' ಆ ಪುಟ್ಟ ಊರಿನ ಲೈಬ್ರರಿಯಲ್ಲಿ ಹತ್ತೊಂಬತ್ತನೇ ಶತಮಾನದ ಅನೇಕ ರಶಿಯನ್, ಫ್ರೆಂಚ್ ಕಾದಂಬರಿಗಳನ್ನು ಇಂಗ್ಲಿಷ್ ಅನುವಾದದಲ್ಲಿ ಓದಿಕೊಂಡಳು. ಅವುಗಳ ಸಾರವನ್ನು ಹೀರಿಕೊಂಡಳು.

ತಾನು ಬದುಕುತ್ತಿರುವ ಪ್ರಪಂಚ ತಾನು ಓದಿಕೊಂಡ ಪ್ರಪಂಚಕ್ಕಿಂತ ಭಿನ್ನವಾದು ದೆಂದು ಬಹುಬೇಗ ಆಕೆಗೆ ಅರಿವಾಯಿತು. ಅವಳಲ್ಲಿ ಒಂದು ಸಂಸ್ಕೃತಿ ಸಂಘರ್ಷವಿತ್ತು. ದಕ್ಷಿಣ ಆಫ್ರಿಕಾದಲ್ಲಿ ಬದುಕುತ್ತಿದ್ದರೂ ಬಿಳಿಯಳಾದ್ದರಿಂದ ಅಲ್ಲಿಯ ನಾಡು ಜನ ಅವಳಿಗೆ ಬೇರೆಯೆನಿಸುತ್ತಿತ್ತು. ಸಾಂಸ್ಕೃತಿಕವಾಗಿ ತನ್ನನ್ನು ತಾನು ಇಂಗ್ಲೆಂಡಿನೊಡನೆ ಗುರುತಿಸಿಕೊಂಡಿದ್ದರೂ ಅಲ್ಲಿ ಬದುಕದೇ ಇರುವುದರಿಂದ ಆ ನಾಡಿಗೂ ಅವಳು ಅಪರಿಚಿತಳಾಗಿದ್ದಳು. ತನ್ನನ್ನು ತಾನು ಗುರುತಿಸಿಕೊಳ್ಳುವ ಈ ಸಂದಿಗ್ಧ ನ್ಯಾಡಿನ್‌ಳ ಸಾಹಿತ್ಯಿಕ ಜೀವನದ ಆರಂಭದಲ್ಲಿ ಬಹು ಮುಖ್ಯವಾಗಿದೆ.

ಆವಳ ಮೊದಲ ಕಥೆ 'Face to Face' ೧೯೪೯ ರಲ್ಲಿ ಪ್ರಕಟವಾಯಿತು. ದಕ್ಷಿಣ ಆಫ್ರಿಕಾದ ಜೀವನದಲ್ಲಿ ಅತ್ಯಂತ ಖಾಸಗಿಯಾದ, ವೈಯಕ್ತಿಕವಾದ ಅಂಶಗಳ ಮೇಲೆ ಸಹಾ ಸಾಮಾಜಿಕ ಸ್ಥಿತಿಗತಿಗಳ ನೆರಳು ಬೀಳುವುದನ್ನು ಎಲ್ಲ ಸಂಬಂಧಗಳ ಮೇಲೂ ಅಪಾರ್ಥೀಡ್ ಚಳುವಳಿಯ, ವರ್ಣಭೇದ ನೀತಿಯ ಪ್ರಭಾವವುಂಟಾಗುವುದನ್ನು ಗಾರ್ಡಿಮರ್ ಚಿತ್ರಿಸಿದ್ದಾಳೆ. ಸಾಮಾಜಿಕ ತರ್ಕ ಮೇಲುಗೈಯಾದಾಗ ಆತ್ಮೀಯತೆ ಮತ್ತು ಔದಾರ್ಯಗಳು ಸೋಲುತ್ತವೆಂಬುದು ಗಾರ್ಡಿಮರ್ ಕೊಡುವ ಎಚ್ಚರಿಕೆ. ಇದರ ಜೊತೆಗೇ ಬದಲಾಗುತ್ತಿರುವ ಪ್ರಪಂಚದ ಚಿತ್ರವನ್ನು ಒಪ್ಪಿಕೊಳ್ಳಲು ಆಫ್ರಿಕದ ಬಿಳಿಯರು ಹಿಂಜರಿಯುತ್ತಿರುವುದನ್ನು ಗಾರ್ಡಿಮರ್ ನಿರ್ಭಿಡೆಯಿಂದ ಚಿತ್ರಿಸುತ್ತಾಳೆ.

ತನ್ನ ಬರವಣಿಗೆಯ ಆರಂಭದ ದಿನಗಳಲ್ಲಿ ತನ್ನನ್ನು ತಾನು ದಕ್ಷಿಣ ಆಫ್ರಿಕನ್ ಸಂಸ್ಕೃತಿಯೊಡನೆ ಗುರ್ತಿಸಿಕೊಂಡ ಗಾರ್ಡಿಮರ್ ಕಪ್ಪು ವಿಮೋಚನಾ ಚಳುವಳಿಗೆ ಹೆಚ್ಚು ನಿಷ್ಠರಾಗಿ ಬೆಳೆದರು

'A Guest of Honour' ಎಂಬ ಆವರ ಕೃತಿಗೆ ಜೇಮ್ಸ್‌ಟೇಟ್ ಸ್ಮಾರಕ ಬಹುಮಾನ ಬಂದಿತು. ಈ ವಾಸ್ತವಿಕತೆಯ ಅರಿವಿನ ಬರವಣಿಗೆ ಪ್ರತಿಯೊಂದು ಕಾದಂಬರಿಯೊಡನೆಯೂ ಬೆಳೆಯುತ್ತಾ ಹೋಯಿತು. 'Conservationist' ಕೃತಿಗೆ ಬೂಕರ್ ಪ್ರಶಸ್ತಿ ಬಂದಿದೆ. ಇವಳ ಇತ್ತಿಚಿನ ಕೃತಿಗಳಲ್ಲಿ 'Burgers Daughter' ಇದರಲ್ಲಿ ಸುಧಾರಣಾವಾದಿಯಾದ ಒಬ್ಬ ಬಿಳಿಯ ಯುವತಿ ರೋಸಾ-ಬರ್ಗರ್‌ಳ ಆಂತರಿಕ ಮತ್ತು ಬಾಹ್ಯ ಪ್ರಪಂಚದೊಡನೆಯ ಹೋರಾಟವನ್ನು ಚಿತ್ರಿಸಲಾಗಿದೆ. ಆಫ್ರಿಕಾವನ್ನು ಬಿಟ್ಟು ಅಮೆರಿಕೆಗೆ ಹೋದ ರೋಸಾ ಬರ್ಗರ್‌ರ ಪಾತ್ರದಲ್ಲಿ ಗಾರ್ಡಿಮರ್ ತನ್ನ ಯಹೂದಿ ಪರಂಪರೆಯನ್ನು, ದಕ್ಷಿಣ ಆಫ್ರಿಕಾವನ್ನು ತೊರೆಯದಿರುವ ತನ್ನ ನಿಶ್ಚಯವನ್ನೂ ಸಹಾ ಸೂಚಿಸುತ್ತಾಳೆ. ಅವರು ಮದುವೆಯಾಗಿದ್ದು, ತನ್ನ ಮಕ್ಕಳನ್ನು ಬೆಳಸಿರುವುದೂ ಸಹಾ ದಕ್ಷಿಣ ಆಫ್ರಿಕಾದಲ್ಲೇ ಆಗಿದೆ.

ಈ ದಿನ ಎಲ್ಲೆಡೆಯಲ್ಲೂ ಗಾರ್ಡಿಮರಳ ಬರಹವನ್ನು ಮೆಚ್ಚಿಕೊಳ್ಳುವ, ಗೌರವಿಸುವ ಪ್ರವೃತ್ತಿಯಿದೆ. ೧೯೭೫ ರ ಶ್ರೇಷ್ಠ ಫ್ರೆಂಚ್ ಸಾಹಿತ್ಯಕ ಬಹುಮಾನ "ದಿ ಗ್ರಾಂಡ್ ಆಗೈಲ್ – ದಿಯೋರ್" ಜರ್ಮನಿಯ ನೆಲ್ಲಿ ಸಾಕ್ಸ್ ಪ್ರಶಸ್ತಿ, ಲ್ಯೂವೆನ್‌ನ ಬೆಲ್ಜಿಯನ್ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಅವಳಿಗೆ ಸಂದಿದೆ. ಪೆನ್ ಇಂಟರ್ ನ್ಯಾಷನಲ್ ಮತ್ತು ಅಮೆರಿಕನ್ ಅಕ್ಯಾಡೆಮಿ ಆಫ್ ಆರ್ಟ್ಸ್ ಅಂಡ್ ಲೆಟರ್ಸ್‌ನಲ್ಲಿ ಸಕ್ರಿಯವಾಗಿ ಪಾತ್ರ ವಹಿಸುತ್ತಿರುವ ಗಾರ್ಡಿಮರಳ ಪ್ರಶಸ್ತಿಗಳ ಕಿರೀಟಕ್ಕೆ ಈ ವರ್ಷ ನೊಬೆಲ್ ಬಹುಮಾನದ ಗರಿಯೂ ಸೇರಿಕೊಂಡಿದೆ.

(ಆಧಾರ : ಲಾಂಗ್‌ಮನ್ ಆಂಥಾಲಜಿ ಆಫ್ ವರ್ಲ್ಡ್ ವುಮನ್-ಆರ್ಕಿನ್ ಮತ್ತು ಶೊಲರ್)

ಳ/ಸಂಪಾದ

ರ್‍ಹೊಡೀಸಿಯಾದಿಂದ ಬಂದ ರೈಲು

ಇಂಗ್ಲೀಷ್ ಮೂಲ : ನ್ಯಾಡಿನ್ ಗಾರ್ಡಿಮರ್

ಪ್ರಸ್ತುತ ಕಥೆ 'Train To Rhodesia' ೧೯೫೩ ರಲ್ಲಿ ಪ್ರಕಟವಾದ 'Soft Voice of the Serpent' ಎಂಬ ಕಥಾ ಸಂಕಲನದಿಂದ ಆರಿಸಿದ್ದು ದೈನಂದಿನ ಜೀವನದ ಒಂದು ಸಾಧಾರಣ ಘಟನೆಯ ಮೂಲಕ ದೈತ್ಯ ಯಾಂತ್ರಿಕ ಸಂಸ್ಕೃತಿಯೊಂದು ಆಫ್ರಿಕದ ಬದುಕನ್ನು, ಸಂಸ್ಕೃತಿಯನ್ನು ತನ್ನ ವ್ಯಾವಹಾರಿಕ ಅಳತೆಗೋಲುಗಳಲ್ಲಿ ಅಳೆಯುವ ಮಾನವ ಘನತೆಯ ಅಪಮಾನವನ್ನು ಚಿತ್ರಿಸುತ್ತದೆ. -ಸಂ.

ಆ ರೈಲು ಕೆಂಪಾದ ದಿಗಂತದೊಳಗಿಂದ ಹೊರಬಂದು ನೇರವಾದ ಒಂದೇ ಜೊತೆ ಹಳಿಯ ಮೇಲೆ ಅವರ ಕಡೆಗೆ ಧಾವಿಸಿ ಬಂತು. ಚೂಪಾದ ಇಳಿಜಾರಾದ ಮರದ ಚಾವಣಿಯಿದ್ದ ಇಟ್ಟಿಗೆಯ ಪುಟ್ಟ ಗುಡಿಸಿಲಿನಂತಹ ಸ್ಟೇಷನ್ನಿನಿಂದ ಸ್ಟೇಷನ್ ಮಾಸ್ಟರ್ ಹೊರಗೆ ಬಂದ. ಅವನ ಸರ್ಜ್ ಬಟ್ಟೆಯ ಇಸ್ತ್ರೀ ಹೊಡೆದ ಗೆರೆಗಳು ಅವನ ಕಾಲಿನೊಳಗೂ ಇಸ್ತ್ರಿಯ ಅನುಭವವನ್ನು ಉಂಟುಮಾಡುತ್ತಿದ್ದವು. ಆ ಮುಚ್ಚಂಜೆಯ ಹೊತ್ತಿನಲ್ಲಿ ರೈಲಿಗಾಗಿ ಕಾಯುತ್ತಿದ್ದ ಹೊತ್ತು ಮಾರುವವರ ಗುಂಪಿನಲ್ಲಿ ನಿರೀಕ್ಷಣೆಯ ಅಲೆಯೊಂದು ಹಾಯ್ದಿತು. ಮರದ ಕೆತ್ತನೆ ಕೆಲಸ ಮಾಡಿದ ಮುಖವೊಂದು ಹೊತ್ತು ಮಾರುವವನ ಕೈಚೀಲದಿಂದ ಇಣಿಕಿನೋಡಿತು. ಸ್ಟೇಷನ್ ಮಾಸ್ಟರನ ಬರಿಗಾಲ ಮಕ್ಕಳು ಅಲ್ಲೇ ಅಲೆಯುತ್ತಿದ್ದರು. ಅಲ್ಲಿದ್ದ ಮಂಕು ಬಣ್ಣದ ಕೊಳಕು ಗುಡಿಸಿಲುಗಳೊಳಗಿಂದ ಬಡಕಲಾಗಿ ಮೂಳೆ ಬಿಟ್ಟುಕೊಂಡಿದ್ದ ನಾಯಿಗಳು, ಕೋಳಿ ಮರಿಗಳು, ಕಪ್ಪು ಚಿಳ್ಳೆಪಿಳ್ಳೆ ಮಕ್ಕಳು ಹೊರ ನುಗ್ಗಿ ಹಳಿಯ ಕಡೆಗೆ ಓಡಿದವು. ನಾಚಿ ಕೆಂಪೇರಿ ಬೆವರುತ್ತಿದ್ದ ಪಶ್ಚಿಮವು ಕ್ಷೀಣವಾದ ಕಾವು ಇರದ ಬೆಳಕಿನ ನೆರಳೊಂದನ್ನು ಆ ನಿಲ್ದಾಣದ ಮೇಲೆ ಎಸೆದಿತ್ತು. ಸರಕು ದಾಸ್ತಾನು ಕೋಣೆ, ನಿಲ್ದಾಣದ ಗೋಡೆಗಳು, ಸ್ಟೇಷನ್ ಮಾಸ್ಟರನ ಬೂದು ತಗಡಿನ ಮನೆ ಎಲ್ಲದರ ಮೇಲೂ ನೆರಳು ಬೆಳಕುಗಳು ಲಯಬದ್ಧವಾಗಿ ಹರಡಿದ್ದುವು. ಮರಳು ಸಮುದ್ರದಂತೆ ಕಾಣುತ್ತಿತ್ತು. ಮಕ್ಕಳ ಕಪ್ಪು ಪಾದಗಳ ಗುರುತುಗಳು ಆ ಮರಳಿನಲ್ಲಿ ಮುಚ್ಚಿ ಹೋಗುತ್ತಿದ್ದವು.

ಸ್ಟೇಷನ್ ಕಟ್ಟಡದ ವರಾಂಡದ ತಂತಿ ಬಲೆಯ ಕಟಾಂಜನದ ಹಿಂದೆ ಸ್ಟೇಷನ್ ಮಾಸ್ಟರನ ಮಡದಿ ಕೂತಿದ್ದಳು. ಅವಳ ತಲೆಯ ಮೇಲೆ ಒಂದು ಕುರಿಯ ದೇಹದ ಸ್ವಲ್ಪ ಭಾಗ ನೇತಾಡುತ್ತಿತ್ತು.

ಅವರು ಕಾಯುತ್ತಿದ್ದರು............ ರೈಲು ಆಕಾಶಕ್ಕೆ ಕೂಗಿ ಹೇಳಿತು........ ನಾನು ಬರುತ್ತಿದ್ದೇನೆ .... ನಾನು ಬರುತ್ತಿದ್ದೇನೆ.................... ಆ ಕರೆಗೆ ಉತ್ತರವಿರಲಿಲ್ಲ. ಆದರೂ ಆ ಕರೆ ಕೇಳಿಸುತ್ತಲೇ ಇತ್ತು. ನಾನು ಬರುತ್ತಿದ್ದೇನೆ........ ನಾನು ಬರುತ್ತಿದ್ದೇನೆ................

ಈಗ ಎಂಜಿನ್ ಬೃಹತ್ತಾಗಿ ಹೊಗೆಯುಗುಳುತ್ತಾ, ತನ್ನ ಹಿಂದೆ ತನ್ನ ತೊನೆಯುವ ದೇಹವನ್ನು ಎಳೆತರುತ್ತಾ ಮೂಡಿತು. ರೈಲು ರಸ್ತೆ ಅದಕ್ಕೆ ಹಾದಿ ಮಾಡಿಕೊಟ್ಟಿತು.

ಕಿರುಗುಟ್ಟುತ್ತಾ, ಹಠಾತ್ತನೆ ನಿಲ್ಲುತ್ತಾ, ತೊನೆಯುತ್ತಾ, ಏದುತ್ತಾ ಆ ರೈಲು ಸ್ಟೇಷನ್ನನ್ನು ತುಂಬಿಕೊಂಡಿತು.

ರೈಲಿನ ಹೊರಕಿಟಕಿಯಿಂದ ಚಿಕ್ಕ ವಯಸ್ಸಿನ ಹೆಂಗಸೊಬ್ಬಳು ಬಗ್ಗಿ ನೋಡುತ್ತಾ "ಎಲ್ಲಿ ನೋಡೋಣ" ಎಂದಳು.

ಕೆತ್ತನೆ ಕೆಲಸದ ವಸ್ತುಗಳನ್ನು ಮಾರುವ ಮುದುಕ ತಾನು ಕೈಯಲ್ಲಿ ಹಿಡಿದ ವಸ್ತುಗಳತ್ತ ನೋಡುತ್ತಾ "ಮಿಸ್ಸಸ್" ಎಂದು ನಗು ಮುಖ ಮಾಡಿದ. ಅವನ ಸುಕ್ಕುಗಟ್ಟಿದ ಬೆರಳ ಮೇಲೆ ಹಾದು ಹೋದ ದಾರದಿಂದ ಒಂದು ನೇಯ್ಗೆಯ ಬುಟ್ಟಿ ಇಳಿಬಿದ್ದಿತು. "ಬೇಡ ಬೇಡ" ಎಂದು ಅವನನ್ನು ನಿವಾರಿಸುತ್ತಾ ಅವಳು ತನ್ನ ದೇಹವನ್ನು ಕಿಟಕಿಯಿಂದ ಇನ್ನೊಂದಿಷ್ಟು ಬಗ್ಗಿಸಿ ಹರಕು ಕಂಬಳಿಯ ತುಂಡೊಂದರ ಮೇಲೆ ಕುಳಿತಿದ್ದ ಮುದುಕನತ್ತ ಅಪ್ಪಣೆ ಮಾಡುವವಳಂತೆ ನಿರ್ದೇಶಿಸುತ್ತಾ, "ಅದು.... ಅದು ...." ಎಂದಳು. 'ಅದು' ಮೃದುವಾದ ಮರದ ತುಂಡಿನಲ್ಲಿ ಕೆತ್ತಿದ ಒಂದು ಸಿಂಹವಾಗಿತ್ತು. ಸ್ಪಂಜ್‌ಕೇಕಿನಂತೆ ಕಾಣುತ್ತಿತ್ತು. ಕಪ್ಪು ಬಿಳಿ ಬಣ್ಣಗಳಲ್ಲಿ ಪ್ರತಿಯೊಂದು ವಿವರವೂ ಅಚ್ಚೊತ್ತಿದಂತಿದ್ದ ಅದು ಯಾವುದೋ ಸಂದೇಶವಾಹಕನಂತಿತ್ತು. ಆ ಮುದುಕ ನಗುತ್ತಲೇ ಅವಳ ಕಡೆಗೆ ಅದನ್ನು ಹಿಡಿದು ತೋರಿದ. ಆ ನಗು ಹೃದಯದಿಂದ ಬಂದ ನಗುವಾಗಿರಲಿಲ್ಲ. ಗಿರಾಕಿಯನ್ನು ನೋಡಿ ನಗುವ ವ್ಯಾಪಾರಿಯ ನಗುವಾಗಿತ್ತು. ಸಿಂಹದ ವ್ಯಾನ್‌ಡೈಕ್ ಹಲ್ಲಿನ ನಡುವೆ ಶ್ರವಣ ಭಯಂಕರವಾದ ಅನಂತವಾದ ಗರ್ಜನೆಯಲ್ಲಿ ತೆರೆದುಕೊಂಡ ಅದರ ನಾಲಿಗೆ ಕಪ್ಪಾಗಿತ್ತು.

ಅವಳ ಯುವಕ ಪತಿ "ನೋಡು ನೀನೇನು ತಿಳಿದುಕೊಳ್ಳದಿದ್ದರೆ...." ಎನ್ನುತ್ತಿದ್ದ. ಮತ್ತು ಆ ಸಿಂಹದ ಕೊರಳ ಸುತ್ತ ಒಂದು ಉಣ್ಣೆಯ ತುಂಡು (ಇಲಿಯ ಚರ್ಮದ್ದೋ, ಮೊಲದ ಚರ್ಮದ್ದೋ, ಅಥವಾ ಮೀರ್‌ಕ್ಯಾಟ್‌ದೋ ಇರಬಹುದು, ಒಂದು ನಿಜವಾದ ಆಯಾಲು ! ರಾಜ ಗಾಂಭೀರ್ಯ............ಅದು ಹೇಗೋ ಆ ಆಯಾಲು ಕಲಾವಿದನಿಗೆ ಈ ಸಿಂಹದ ಕೆತ್ತನೆಯಲ್ಲಿ ಆನಂದವಿತ್ತು ಎಂದು ಹೇಳುವಂತಿತ್ತು.

ಆ ಮುಚ್ಚಂಜೆಯಲ್ಲಿ ರೈಲಿನುದ್ದಕ್ಕೂ ಕಲಾವಿದರು ಹೊರ ಹೊಮ್ಮಿದರು, ಬಾಗಿ ನಡೆಯುತ್ತಾ ಅಭಿನಯ ಕಲಿತ ಪ್ರಾಣಿಗಳಂತೆ ತಮ್ಮ ಕಲೆಯ ಕಲ್ಪನೆಯನ್ನು ರೈಲಿನ ಕಡೆಗೆ ಚಾಚಿ ಹಿಡಿದು ಪ್ರದರ್ಶಿಸುತ್ತಾ ನಡೆದರು.

ಚಕಿತಗೊಂಡು ಸೆಡೆದ ಕಾಡೆಮ್ಮೆ, ಕಾಡುಕೋಣಗಳು ತಮ್ಮ ದುಂಡಾದ ಬಿಳಿ ಕಣ್ಣುಗಳಿಂದ ದಿಟ್ಟಿಸುತ್ತಿದ್ದವು. ನೆಟ್ಟಗೆ ನಿಂತ ಅನೇಕ ಸಿಂಹಗಳು ನಿರ್ಭೀತ ದೃಷ್ಟಿಯ ನೀಳಕಾಯದ ಭರ್ಜಿ ಹಿಡಿದ ಯೋಧರೊಡನೆ ಸೆಣಸುತ್ತಿದ್ದವು. ಅವರೆಲ್ಲ ರೈಲಿನಿಂದಲೇ ಕೇಳಿದರು : "ಎಷ್ಟು ? ಎಷ್ಟು ? ಎಷ್ಟು ?"

ಮಾರಲು ಏನೂ ತಾರದಿರುವ ಪುಟ್ಟ ಪುಟ್ಟ ಮಕ್ಕಳು ಒಂದು ಪೆನ್ನಿ ಕೊಡಿ ಎಂದು ಬೇಡುತ್ತಾ ಓಡಿ ಬಂದರು. ಈರುಳ್ಳಿಯ ಜೊತೆ ಬೇಯುತ್ತಿದ್ದ ಮಾಂಸದ ವಾಸನೆ ಹೊರ ಬರುತ್ತಿದ್ದ ಡೈನಿಂಗ್ ಕಾರ್ ಬೋಗಿಯ ಬಳಿ ನಾಯಿಗಳು ಅಲುಗಾಡದೆ ಕುಳಿತುವು.

ಹಣ ಕೊಡಲು ಚಾಚಿದ ಬಿಳಿ ಕೈಗಳ, ಹಣ ಪಡೆಯಲು ಚಾಚಿದ ಕರಿ ಕೈಗಳ ಕಮಾನುಗಳ ನಡುವೆ ವ್ಯಕ್ತಿಯೊಬ್ಬ ನುಸುಳಿ ರೈಲಿನುದ್ದಕ್ಕೂ ನಡೆದುಹೋದ. ಚೌಕಾಸಿ ಮಾಡುತ್ತಿದ್ದ ಧ್ವನಿಗಳ ನಡುವೆ ಹಾದು, ಊಟದ ಬೋಗಿಯ, ಗಾಜಿನ ಹಿಂದೆ ಏಕರೂಪದ ಹೂದಾನಿಗಳಲ್ಲಿ ಬಿಳಿಚಿಕೊಂಡು ನಿರ್ಜೀವವಾಗಿದ್ದ ಹೂಗಳ ಎದುರು ಬದುರಾಗಿ, ಜೋಡಿ ಜೋಡಿಯಾಗಿ ಬೀರು ಕುಡಿಯುತ್ತ ಕೂತ ಮುಖಗಳತ್ತ ನೋಡುತ್ತ, ಕೊಟ್ಟ ಕೊನೆಗೆ ಗಾರ್ಡನ ಬಂಡಿಯ ತನಕ ಸ್ಟೇಷನ್ ಮಾಸ್ಟರನ ಮಕ್ಕಳು ತಮ್ಮ ತಾಯಿಗೆ ಸಲ್ಲಬೇಕಾಗಿದ್ದ ಎರಡು ಪೌಂಡ್ ಬ್ರೆಡ್ಡನ್ನು ಪಡೆದುಕೊಂಡು ಹೋಗುತ್ತಿದ್ದಲ್ಲಿಗೆ........ ಕೊನೆಗೆ ಎಂಜಿನ್ನಿನ ಬಳಿಗೆ............... ಸ್ಟೇಷನ್ ಮಾಸ್ಟರನೂ ಡ್ರೈವರನೂ ಮಾತಾಡುತ್ತಾ ನಿಂತಲ್ಲಿಗೆ ಬುಸುಗುಡುತ್ತಾ, ದೂರಿಡುತ್ತಾ ವಿಶ್ರಮಿಸುತ್ತಿದ್ದ ಬೃಹತ್ ಮೃಗದಂತಿದ್ದ ರೈಲಿನ ತಲೆಯ ಬಳಿಗೆ ಹೋದ.

ಆ ಮನುಷ್ಯ ಅವರಿಗೇನನ್ನೋ ಜೋರಾಗಿ, ಲೇವಡಿಯಾಗಿ ಕೂಗಿ ಹೇಳಿದ. ಅವರು ನಗುತ್ತಾ ಇತ್ತ ತಿರುಗಿದರು. ಇಬ್ಬರು ಮಕ್ಕಳು ಬ್ರೆಡ್ಡನ್ನು ಅವುಚಿ ಹಿಡಿದು ಮರಳಿನ ಮೇಲೆ ಹೋಗಿ ಕಬ್ಬಿಣದ ಗೇಟಿನೊಳಗಿಂದ ಏನೂ ಬೆಳೆಯದ ಮನೆಯ ಮುಂದಿನ ಕೈತೋಟದ ನಡುವೆ ನಡೆದು ಹೋದರು.

ಪ್ರಯಾಣಿಕರು ರೈಲಿನ ಹೊರಕಿಟಕಿಗಳಿಂದ ತಂತಮ್ಮ ಕೂಪೆಗಳೊಳಗೆ ಸರಿದು ಹೋದರು, ಕೆಲವರು ಹಣ ತರಲು, ಕೆಲವರು ಯಾರಿಗೋ ಏನನ್ನೋ ತೋರಿಸಲು– "ಈ ಕಿತ್ತಳೆ ಹಣ್ಣನ್ನು ಆ ನಿಗ್ರೋ ಮಗುವಿಗೆ ಕೊಟ್ಟು ಬಿಡೋಣವೇ ? ಚಾಕಲೇಟುಗಳು ಅವೇನು ಅಷ್ಟು ಚೆನ್ನಾಗಿಲ್ಲ............"

ಒಬ್ಬ ಹುಡುಗಿ ಯಾರಿಗೂ ಬೇಡದ ಒಂದು ಹಿಡಿ ಚಾಕಲೇಟುಗಳನ್ನು ಡಬ್ಬಿಯಿಂದ ತೆರೆದು ನಾಯಿಗಳತ್ತ ಎಂಚಿದಳು. ಆದರೆ ಕೋಳಿಗಳು ಕರಾರುವಾಕ್ಕಾಗಿ ಚುರುಕಾಗಿ ಹಾರಿ ಅವುಗಳನ್ನು ಕೆಳಗೆ ಬೀಳುವ ಮೊದಲೆ ಕಬಳಿಸಿದವು. ಅಪ್ರತಿಭವಾದ ನಾಯಿಗಳು ಬೇರೇನನ್ನೂ ನಿರೀಕ್ಷಿಸಿದೆ ಸುಮ್ಮನೆ ತಮ್ಮ ಕಂದು ಕಣ್ಣುಗಳಿಂದ ನೋಡಿದವು.

ಆ ಯುವತಿ "ಬೇಡ........ ಬಿಡು ಅದನ್ನು ತೆಗೆದುಕೊಳ್ಳಬೇಡ" ಎಂದಳು. ತುಂಬಾ ದುಬಾರಿ, ಅತಿ ಎನ್ನುವಂತೆ ತಲೆಯಲ್ಲಾಡಿಸಿ ಸಿಂಹವನ್ನು ಹಿಂತಿರುಗಿಸುತ್ತಾ ಆ ಮುದುಕನ ಕಡೆಗೆ ದನಿಯೆತ್ತರಿಸಿದಳು. ಆತ ಅಲ್ಲೇ ಅದನ್ನು ಎತ್ತಿ ಹಿಡಿದು ನಿಂತೇ ಇದ್ದ. ಅವಳು ತಲೆಯಲ್ಲಾಡಿಸಿ ಬೇಡ ಬೇಡ ಎಂದಳು. ಅವಳ ಪತಿ "ಮೂರೂವರೆ" ಎಂದು ಒತ್ತಾಯಿಸುತ್ತ "ಎಸ್ ಬಾಸ್" ಎಂದು ಮುದುಕ ಜೋರಾಗಿನಕ್ಕ "ಮೂರೂವರೆ" ಈ ಹೈದನಿಗೆ ಬುದ್ಧಿಯಿಲ್ಲ ಎನ್ನುವಂತೆ. "ಓಹ್ ಬೇಡ ಬಿಡು" ಎಂದಳವಳು. 'ನಿನಗದು ಬೇಡವೇ' ಎಂದ ಯುವಕ. "ಇಲ್ಲ ಪರವಾಗಿಲ್ಲ ಬಿಟ್ಟು ಬಿಡು" ಎಂದಳವಳು. ಆ ನೇಟಿವ್ ಮುದುಕ ಸಿಂಹವನ್ನು ಕೈಯಲ್ಲಿ ಹಿಡಿದೇ ತನ್ನ ತಲೆ ಪಕ್ಕಕ್ಕೆ ತಿರುಗಿಸಿಕೊಂಡು ಅವರಿಬ್ಬರ ಕಡೆಗೆ ಆಗಾಗ ಓರೆಗಣ್ಣಿನಿಂದ ನೋಡುತ್ತಿದ್ದ. ಮುದುಕರು ಆಗಾಗ ಮಾಡುವ ಹಾಗೆ ತನ್ನಲ್ಲಿ ತಾನೇ 'ಮೂರೂವರೆ' ಎಂಧು ಗೊಣಗಿಕೊಂಡ.

ಆ ಯುವತಿ ತಲೆಯನ್ನು ಒಳಗೆಳೆದುಕೊಂಡು ಕೂಪೆಯೊಳಗೆ ಹೋಗಿ ಕುಳಿತಳು. ಕಿಟಕಿಯ ಇನ್ನೊಂದು ಕಡೆ ಏನೂ ಇರಲಿಲ್ಲ. ಮರಳು ಮತ್ತು ಪೊದೆಗಳು ಮಾತ್ರ ಕಾಣುತ್ತಿದ್ದವು. ಒಂದು ಮುಳ್ಳು ಗಿಡವಿತ್ತು ಅವಳ ಗಂಡನ ಚಿತ್ರದಾಚೆಗೆ ರೈಲ್ವೇ ಸ್ಟೇಷನ್ ಇತ್ತು–ದನಿಗಳಿದ್ದವು– ಮರದಲ್ಲಿ ಕೆತ್ತಿದ ಪ್ರಾಣಿಗಳು ಓಡಾಡುವ ಕಾಲುಗಳು. ಸ್ಟೇಷನ್ನಿನ ಮರದ ಚಾವಣಿ ತಮಾಷೆಯಾಗಿ ಕಾಣುತ್ತಿತ್ತು. ಅವಳು ಸಿಂಹದ ಬಗ್ಗೆಯೇ

ಯೋಚಿಸುತ್ತ ಮುಗುಳ್ನಕ್ಕಳು. ಆಹಾ ಕತ್ತಿನ ಸುತ್ತ ಇದ್ದ ಆ ಅಯಾಲು! ಅವರ ಸೀಟಿನ ಕೆಳಗೆ, ತಲೆಯ ಮೇಲೆ, ಸಾಮಾನು ಹಲಗೆಯ ಮೇಲೆ, ಬುಟ್ಟಿಗಳಲ್ಲಿ ಕಿಕ್ಕಿರಿಯುತ್ತ ಕಂದು ಕಾಗದದಿಂದ ಬಿರಿಯುತ್ತ ಸೂಸುತ್ತ ಇದ್ದ ಕಾಡುಕೋಣ, ಖಡ್ಗ ಮೃಗ, ಆನೆಗಳು ಅವುಗಳನ್ನೆಲ್ಲ ಊರಿಗೊಯ್ಯುವುದು ಹೇಗೆ ? ಮನೆಯಲ್ಲಿ ಅವು ಹೇಗೆ ಕಾಣಬಹುದು, ಅವುಗಳನ್ನು ಎಲ್ಲಿಡುವುದು, ಅವು ಸಿಕ್ಕಿದ ಜಾಗದಿಂದ ಅಷ್ಟು ದೂರದ ಸ್ಥಾನದಲ್ಲಿ ಅವುಗಳಿಗೇನರ್ಥ ? ಆ ಪ್ರಯಾಣದ ಕೊನೆಯ ವಾರಗಳ ಭ್ರಾಮಕತೆಯಿಂದ ದೂರವಾಗಿ ಹೊರಗೆ ನಿಂತ ಆ ಯುವಕ. ಆದರೆ ಅವನೇನೂ ಭ್ರಮೆಯಲ್ಲ. ಈಗವನು ಸತ್ಯ. ಹೇಗೋ ಏನೋ ಅವನೊಟ್ಟಿಗಿನ ಬದುಕು ಸಹಾ ಈ ಆರಾಮ ಪ್ರಯಾಣದ ವಿಚಿತ್ರ ಸ್ಥಳಗಳ ಒಂದು ಭಾಗವಾದಂತೆ ಅವಳಿಗನಿಸಿತು.

ಹೊರಗೆ ಗಂಟೆ ಹೊಡೆಯಿತು. ಸ್ಟೇಷನ್ ಮಾಸ್ಟರು ರೈಲಿನ ತುದಿಗೆ ಒರಗಿ ನಿಂತಿದ್ದ. ಹಸಿರು ಬಾವುಟ ಸಿದ್ಧವಾಗಿ ಅಲುಗಾಡಿತು. ಕೈಕಾಲಾಡಿಸಲೆಂದು ಇಳಿದಿದ್ದವರು. ಮೆಟ್ಟಿಲ ಮೇಲೆ ನಿಂತವರು, ಸುಮ್ಮನೇ ಪ್ಲಾಟ್‌ಫಾರ್ಮಿನ ಮೇಲೆ ನಿಂತವರೆಲ್ಲ ಒಮ್ಮೆಲೆ ರೈಲಿಗೆ ಜಿಗಿದರು. ಆದರೆ ರೈಲಿನೊಳಗೆ ಧೂಳು ತುಂಬಿದ ಪ್ಲಾಟ್ ಫಾರ್ಮಿನಿಂದ ಸುರಕ್ಷಿತವಾದ ದೂರದಲ್ಲಿ ಆ ತಗಡಿನ ಮನೆ.... ಆ ಬೋಳು ಮರಳು....

ರೈಲು ಗುರುಗುಟ್ಟಿತು ಮುಗ್ಗರಿಸಿತು... .... ಬೀರು ಕುಡಿಯುತ್ತಿದ್ದ ಜನ ಕಿಟಕಿಯಿಂದಾಚೆ ನೋಡಿದರು. ಅದರಾಚೆಗೆ ನೋಡಲು ಆಗುವುದಿಲ್ಲವೋ ಎಂಬಂತೆ- ಸ್ಟೇಷನ್ನಿನ ವರಾಂಡದಲ್ಲಿ ನೊಣ, ಸೊಳ್ಳೆ ಬಾರದ ಹಾಗೆ ಕಟ್ಟಿದ ತಂತಿ ಬಲೆಯ ಹಿಂದೆ ನೇತುಹಾಕಿದ ಕಪ್ಪಾಗುತ್ತಿದ್ದ ಮಾಂಸದ ತುಂಡಿನ ಕೆಳಗೆ ಸ್ಟೇಷನ್ ಮಾಸ್ಟರನ ಮಡದಿ ಅವರನ್ನೇ ನೋಡುತ್ತ ಕೂತಿದ್ದಳು. ಆಗೊಂದು ಶಿಳ್ಳೆ ಕರೆಯಿತು. ಬಾವುಟ ಬಿದ್ದಿತು. ಬಿಡಿ ಬಿಡಿಯಾಗಿ ವಿಶ್ರಮಿಸಿಕೊಳ್ಳುತ್ತಿದ್ದ ಬೋಗಿಗಳನ್ನೆಲ್ಲ ಚಲನೆಗೆ ಸಜ್ಜುಗೊಳಿಸುತ್ತ ರೈಲಿನ ಬೃಹತ್ ದೇಹ ತನಗೆ ತಾನೇ ಢಿಕ್ಕಿ ಹೊಡೆದುಕೊಂಡಿತು. ಚಲಿಸತೊಡಗಿತು. ನಿಧಾನವಾಗಿ ಚಾವಣಿ ಮರೆಯಾಯಿತು. ಗಾಳಿಯಲ್ಲಿ ಮಾರಾಟಗಾರರ ಕೂಗುಗಳು ತೇಲುತ್ತಾ ದೂರವಾದವು. ಮರದ ಕೆತ್ತನೆಯ ಮುಖಗಳು ಕುಡಿದವರಂತೆ ತೂರಾಡಿದವು. ಕೊನೆಯ ಬಾರಿ ರೈಲಿನ ಕಿಟಕಿಗಳಲ್ಲಿ ಪ್ರಶ್ನಿಸುತ್ತಾ ಇಣುಕಿದವು- "ಇಗೋ ಬಾಸ್ ಒಂದು ಶಿಲ್ಲಿಂಗ್ ಆರು ಪೆನ್ನಿ". ಹೊರಗೆ ಎಸೆಯುವ ಹಣವನ್ನು ಹಿಡಿಯಲು ಮುಷ್ಟಿಯೊಂದು ಅಗಲವಾಗುತ್ತಿದ್ದಂತೆ ಯುವಕ ತನ್ನ ಜೇಬಿನಲ್ಲಿ ತಡಕಾಡಿ ಒಂದು ಶಿಲ್ಲಿಂಗ್ ಆರು

ಪೆನ್ನಿ ಹುಡುಕಿ ಹೊರಗೆಸೆದ. ಕಡ್ಡಿಕಾಲುಗಳನ್ನು ನಡುಗಿಸುತ್ತಾ ಏದುತ್ತಾ ಮರಳು ತನ್ನ ಸುತ್ತ ಚೆಲ್ಲಾಡುತ್ತಿರಲು ಆ ಮುದಿ ಆಫ್ರಿಕನ್ ಸಿಂಹವನ್ನು ಒಳಗೆಸೆದ.

ಕರಿಯ ಚಿಳ್ಳೆ ಪಿಳ್ಳೆಗಳು ಕೈ ಬೀಸತೊಡಗಿದವು. ನಾಯಿಗಳು ಬಾಲವಾಡಿಸುವುದೋ ಬೇಡವೋ ಎಂಬ ಸಂದಿಗ್ಧದಲ್ಲಿ ರೈಲು ಹೋಗುವುದನ್ನು ನೋಡುತ್ತಾ ನಿಂತವು. ಮಣ್ಣಿನ ಗುಡಿಸಿಲುಗಳನ್ನು ದಾಟಿ ಹೋಗುತ್ತಿರುವಾಗ ಬೆಂಕಿಯೆದುರಿಗೆ ಕೂತಿದ್ದ ಹೆಂಗಸೊಬ್ಬಳು ಸೊಂಟದ ಮೇಲೆ ಕೈಯಿಟ್ಟುಕೊಂಡು ನೋಡುತ್ತಾ ನಿಂತಳು.

ಸ್ಟೇಷನ್ ಮಾಸ್ಟರು ನಿಧಾನವಾಗಿ ಒಳಗೆ ಹೋದ. ಆ ಮುದುಕ ಅಳ್ಳೆ ಬಿರಿಯುವವನಂತೆ ಏದುತ್ತಾ ಕಾಲುಗಳನ್ನು ಸೆಟೆದು ನಗುತ್ತಾ, ಮರಳ ಮೇಲೆ ಜೋಲಿ ಹಿಡಿಯುತ್ತಾ ನಿಂತ. ಅವನ ತೆರೆದ ಅಂಗೈಯಲ್ಲಿ ಒಂದು ಶಿಲಿಂಗ್ ಆರು ಪೆನ್ನಿಗಳಿದ್ದವು. ರೈಲಿನ ಕುರುಡು ಹಿಂಭಾಗ ಅಸಹಾಯಕವಾಗಿ ಸ್ಟೇಷನ್ನಿನಿಂದ ಹೊರ ಹೋಗುತ್ತಲಿತ್ತು.

ಆ ಯುವಕ ಕಾರಿಡಾರಿನಿಂದ ತೇಕುತ್ತಾ, ತಲೆಯಲ್ಲಾಡಿಸುತ್ತಾ, ನಗುತ್ತಾ, ಬೀಗುತ್ತಾ ಒಳಗೆ ಬಂದ."ಇಗೋ...."ಎಂದು ಸಿಂಹವನ್ನು ಅವಳೆದುರು ಅಲುಗಾಡಿಸಿದ.

"ಒಂದೂ ಆರು"

"ಏನು ? !" ಎಂದಳವಳು.

ಆತ ನಕ್ಕ. "ನಾನು ಸುಮ್ಮನೆ ಅವನೊಡನೆ ಚೌಕಾಸಿ ಮಾಡುತ್ತಿದ್ದೆ. ರೈಲು ಹೊರಟಾಗ ಅವನು ಓಡಿಬಂದ 'ಒಂದೂ – ಆರು ಬಾಸ್' ಎನ್ನುತ್ತಾ. ಇದೋ ನಿನ್ನ ಸಿಂಹ"

ಅವಳು ಸಿಂಹವನ್ನು ಸಾಧ್ಯವಾದಷ್ಟೂ ದೂರ ಸರಿಸಿದಳು. ಆ ತೆರೆದ ಬಾಯ್ದವಡೆಗಳು, ಆ ಕಪ್ಪು ನಾಲಿಗೆ, ಕತ್ತಿನ ಮೇಲೆ ಆ ಅದ್ಭುತ ಅಯಾಲು.... ಅವಳು ಶೂನ್ಯ ದೃಷ್ಟಿಯಿಂದ ನೋಡಿದಳು ಬೇರೇನನ್ನೋ ನೋಡುತ್ತಿರುವಂತೆ ಅವಳ ಮುಖ ಒಣಗಿ ಹೋಗಿತ್ತು. ನೆಮ್ಮದಿ ಕಳಕೊಂಡ ಮಗುವಿನ ಹಾಗೆ ಅವಳ ಬಾಯಿ ಆತಂಕದಿಂದ ತುದಿಯಲ್ಲಿ ಮುದುಡಿಕೊಂಡಿತು. ನಿಧಾನವಾಗಿ ಬೆರಳೆತ್ತಿ ಒಂದು ಬೆರಳಿನಿಂದ ಅಯಾಲನ್ನು ಸವರಿದಳು

"ಆದರೆ ನೀನು ಹೀಗೆ ಮಾಡಬಹುದೇ" ಎಂದಳು. ಅವಳ ಮುಖದ ಮೇಲಿದ್ದ ಹತಾಶೆಯಿಂದ ಅವನಿಗೆ ಆಘಾತವಾಯಿತು "ಅಯ್ಯೋ ದೇವರೇ ಏನಾಯಿತು" ಎಂದ ಆತ. "ನಿನಗದು ಬೇಕಾಗಿದ್ದರೆ ನೀನೇಕೆ ಮೊದಲೇ ಅದನ್ನು ಕೊಳ್ಳಲಿಲ್ಲ. ಯಾಕೆ

ಗೌರವದಿಂದ ಕೊಳ್ಳಲಿಲ್ಲ ? ಅವನು ರೈಲಿನ ಹಿಂದೆ ಓಡಿ ಬರುವವರೆಗೂ ಕಾದು ಒಂದು ಶಿಲಿಂಗ್ ಆರು ಪೆನ್ನಿ ಕೊಡಬೇಕಿತ್ತೆ ಒಂದೂ ಆರು" ?

ಅವಳು ಸಿಂಹವನ್ನು ಆವನ ಕಡೆ ತಳ್ಳುತ್ತಿದ್ದಳು. ಅವನು ಅದನ್ನು ವಾಪಸು ತೆಗೆದುಕೊಳ್ಳಲಿ ಎಂಬಂತೆ ಅವನು ಚಕಿತನಾಗಿ ನಿಂತ ಅವನ ಕೈಗಳು ಅವನ ಅಕ್ಕಪಕ್ಕ ಗಳಲ್ಲಿ ಜೋತುಬಿದ್ದಿದ್ದವು.

"ಆದರೆ ನೀನು ಅದನ್ನು ಬಯಸಿದೆ ಅದನ್ನು ಇಷ್ಟಪಟ್ಟೆ". "ಇದೊಂದು ಸುಂದರ ಕಲಾಕೃತಿ" ಎಂದವಳು ಭಯಂಕರ ರೋಷದಿಂದ ಅದನ್ನು ಅವನಿಂದ ರಕ್ಷಿಸುವಳೋ ಎಂಬಂತೆ ಹೇಳಿದಳು.

"ನೀನು ಅದನ್ನು ಎಷ್ಟೊಂದು ಇಷ್ಟಪಟ್ಟೆ ! ಅದು ದುಬಾರಿಯೆಂದು ನೀನೇ ಹೇಳಿದೆ.... ಓಹ್ ನೀನು........ನೀನು........!!" ಹತಾಶೆಯಿಂದ ರೋಷದಿಂದ ಅವಳು ಸಿಂಹವನ್ನು ಸೇಡಿನ ಮೇಲೆ ಎಸೆದಳು.

ಅವನು ಅವಳನ್ನು ನೋಡುತ್ತಾ ನಿಂತ.

ಮುಖವನ್ನು ಬೊಗಸೆಯಲ್ಲಿ ಹುಗಿದು– ಕಿಟಕಿಯಾಚೆ ದೃಷ್ಟಿಸುತ್ತ ಅವಳು ಮತ್ತೆ ಮೂಲೆಯಲ್ಲಿ ಕುಳಿತಳು. ಅವಳೊಳಗೆ ಎಲ್ಲವೂ ಗಿರ್ರನೆ ಸುತ್ತುತ್ತಿತ್ತು– ಒಂದೂ ಆರು– ಒಂದೂ ಆರು– ಆ ಮರಕ್ಕೆ ಕೆತ್ತನೆಗೆ– ಕಾಲುಗಳ ಸುಪುಷ್ಟ ಬಾಗಿಗೆ, ಬಾಲದ ಸುರುಳಿಗೆ– ಆ ತೆರೆದ ಬಾಯಿಗೆ ಅಂಥ ಹಲ್ಲಿಗೆ ಅಲೆಯಂತೆ ಸುರುಳಿ ಸುತ್ತಿಕೊಂಡಿದ್ದ ಕಪ್ಪು ನಾಲಗೆಗೆ ಕೊರಳಿನ ಸುತ್ತ ಇದ್ದ ಅಯಾಲಿಗೆ........ ಒಂದೂ ಆರು . ನಾಚಿಕೆಗೇಡು !

ಅವಮಾನದ ಕಾವು ಅವಳ ದೇಹವನ್ನು ವ್ಯಾಪಿಸಿತು. ಅವಳ ಕಿವಿಗಳಲ್ಲಿ ಮರಳ ರಾಶಿ ಜಲಪಾತದಂತೆ ಭೋರ್ಗರೆಯುತ್ತ ಸುರಿಯುತ್ತಿದೆಯೇನೋ ಎನ್ನಿಸಿತು. ಅವಳು ಅಸ್ವಸ್ಥಳಾಗಿ ಕುಳಿತೇ ಇದ್ದಳು. ಒಂದು ನಿರ್ವಿಣ್ಣತೆ ಅವಳನ್ನು ಆವರಿಸಿ ಕೊಂಡಿತು ಒಂದು ಶೂನ್ಯದ ಅರಿವಿನಿಂದ ಅವಳ ಕೈಗಳ ಹಿಡಿತ ಸಡಿಲಾಯಿತು. ಈ ಕ್ಷಣವು ಅವಳ ಕೈಗಳ ಹಿಡಿತಕ್ಕೆ ಅರ್ಹವಲ್ಲವೋ ಎಂಬಂತೆ. ಅವಳಿಗೆ ಮತ್ತೆ ಮತ್ತೆ ಅದೇ ಅನುಭವವಾಗುತ್ತಿತ್ತು. ಈ ಅನುಭವ ಒಂಟಿಯಾಗಿರುವುದಕ್ಕೆ ತನ್ನೊಳಗೇ ತಾನು ಮುದುರಿಕೊಂಡಿರುವುದಕ್ಕೆ ಬಂದಿದೆಯೆಂದು ಇಲ್ಲಿಯವರೆಗೆ ಅವಳೆಂದುಕೊಂಡಿದ್ದಳು.

ಯಾವುದನ್ನೂ ನೋಡಬಯಸದೆ, ಅಲುಗಬಯಸದೆ, ಮಾತಾಡಬಯಸದೆ ಅವಳು ಕುಳಿತಳು. ಯಾವ ದೃಶ್ಯ, ಮಾತು ವಸ್ತು ಸಹಾ ಈ ಅನುಭವ ಮರುಕಳಿಸುವಂತೆ ಮಾಡುವುದು ಬೇಡ ಎಂಬಂತೆ ನಿಶ್ಚಲಳಾಗಿ– ಆ ಯುವಕನಿಗೆ ಬೆನ್ನು ಮಾಡಿ ಕುಳಿತಳು. ಆ ಸಿಂಹ ಅಲ್ಲೇ ಮಗ್ಗುಲಾಗಿ ಬಿದ್ದಿತ್ತು.

ಆ ರೈಲು ಸ್ಟೇಷನ್ನನ್ನು ಒಂದು ಚರ್ಮದ ಪೊರೆಯಂತೆ ತ್ಯಜಿಸಿಬಿಟ್ಟಿತ್ತು. ಅದು ಮತ್ತೆ ಆಕಾಶಕ್ಕೆ ಕೂಗಿ ಹೇಳಿತು, ನಾನು ಬರುತ್ತಿದ್ದೇನೆ...., ನಾನು ಬರುತ್ತಿದ್ದೇನೆ.... ಮತ್ತೆ ಅದಕ್ಕೆ ಯಾವುದೇ ಉತ್ತರವಿರಲಿಲ್ಲ.

[ಕನ್ನಡಕ್ಕೆ : ಸ. ಉಷಾ]

o

ಕಪ್ಪು ಬೆರಳು

ಈಗಷ್ಟೆ ಚಂದವಾದುದನ್ನ ಕಂಡೆ
ನೀಳ, ನಿಶ್ಚಲ, ಸೂಕ್ಷ್ಮಾತಿಸೂಕ್ಷ್ಮ
ಊರ್ಧ್ವಗಾಮಿ ಕಪ್ಪು ಬೆರಳು
(ಹೊನ್ನ ಆಗಸದೆಡೆ ಮುಖ ಮಾಡಿ ನಿಂತ
ಶೋಕ ವೃಕ್ಷದ ಹಾಗೆ)

ಯಾಕೆ, ನಿಶ್ಚಲ - ನೀಳ ಚೆಂದದ ಬೆರಳೆ
ನೀನು ಕಪ್ಪಗಿದ್ದೀಯ,
ಯಾಕೆ ಆಗಸದೆಡೆ ಮುಖ ಮಾಡಿದ್ದೀಯ ?

–ಆ್ಯಂಜಲೀನಾ ಬ್ರೂಕ್
(ಕನ್ನಡಕ್ಕೆ : ಎಂ. ಆರ್. ಕಮಲ)

ಮೂರು ಹಾಡುಗಳು

● ಸವಿತಾ ನಾಗಭೂಷಣ

೧ ಎಲ್ಲ ಹುಡುಗಿಯರ ಕನಸು

ಅವ್ವ ಕೇಳೇ ನಾನೊಂದ ಕನಸ ಕಂಡೇ....
ಅವ್ವ ಕೇಳೇ ಕನಸೊಂದ ನಾ ಕಂಡೆನೆ....
ಮುಂಗೋಳಿ ಕೂಗಿತ್ತು ಮೂಡಲ್ಲಿ ಕೆಂಪಿತ್ತು
ಬೆಳ್ಳಿಯೂ ಮರಳಿತ್ತು ಹಕ್ಕಿಯೂ ಹಾಡಿತ್ತು
ಮಲ್ಲಿಗೆ ಸಂಪಿಗೆ ಘಮ್ಮೆಂದು ಬಿರಿದಿತ್ತು
ಹಾದೀಲಿ ಇಬ್ಬನಿಯು ಮುತ್ತಾಗಿ ಸುರಿದಿತ್ತು ‖ ಅವ್ವ ‖

ಕಣ್ಣ ರೆಪ್ಪೆ ಬಿಗಿಯೆ ಕದತಟ್ಟಿ ಒಳಬಂದ
ಕಾರಿರುಳ ಕೆಂಜಡೆಗೆ ಚಂದಿರನ ಮುಡಿದಿದ್ದ
ಕಾಲ್ಗೆಜ್ಜೆ ಕುಣಿಸುತ್ತ ಶರಣು ಶರಣು ಅಂದ
ಮುಕ್ಕಣ್ಣ ತಾನೆಂದು ಮುಂಗೈಗೆ ಮುತ್ತಿಟ್ಟ
ಕೀಟಲೆ ನಗೆನಕ್ಕು ಕಪ್ಪುರವ ಮುಂದಿಟ್ಟ
ಒಲ್ಲೆ ಎಂದರೂ ಬಿಡದೆ ಒಲವು ಬೇಡಿದನವ್ವ
ಮುದ್ದಾಗಿ ಮಾತಾಡಿ ಮರುಳು ಮಾಡಿದನವ್ವ ‖ ಅವ್ವ ‖

ತುಂಬೆಯ ಹೂಬಿಡಿಸಿ ತುರುಬಿಗೆ ಮುಡಿಸೀದ
ಒಂದೊಂದು ಕಿವಿಯಲ್ಲೂ ದುಂಬಿಯ ಇರಿಸೀದ
ಮಿಂಚಿನ ಹುಳುವಲ್ಲೆ ಮೂಗುತಿಯ ಮಾಡೀದ
ನೇರಳೇ ಹಣ್ಣಿನ ಹಾರವೇ ತೊಡಿಸೀದ
ಕೀಟಲೆ ನಗೆನಕ್ಕು ಕಪ್ಪುರವ ಮುಂದಿಟ್ಟ
ಒಲ್ಲೆ ಎಂದರೂ ಬಿಡದೆ ಒಲವು ಬೇಡಿದನವ್ವ
ಮುದ್ದಾಗಿ ಮಾತಾಡಿ ಮರುಳು ಮಾಡಿದನವ್ವ ‖ ಅವ್ವ ‖

ಹುಲಿ ಚರ್ಮ ಹೊದ್ದರೂ ಹಾಲು ಮನಸಿನ ಹುಡುಗ
ಡೊಳ್ಳ ಬಾರಿಸಿ ಡಮರುಗ ನುಡಿಸಿದ
ನವಿಲ ಹಾಗೆ ಕುಣಿದು ಮಿಂಚುಮಳೆ ಕರೆದ
ಹಕ್ಕಿಪಿಕ್ಕಿಯಂಗೆ ಕೂಗಿ ನಕ್ಕೂ ನಗಿಸಿದ
ಕೀಟಲೆ ನಗೆನಕ್ಕು ಕಪ್ಪರವ ಮುಂದಿಟ್ಟ
ಒಲ್ಲೆ ಎಂದರೂ ಬಿಡದೆ ಒಲವು ಬೇಡಿದನವ್ವ
ಮುದ್ದಾಗಿ ಮಾತಾಡಿ ಮರುಳು ಮಾಡಿದನವ್ವ ॥ ಅವ್ವ ॥

ಚಪ್ಪರ ತೋರಣ ಒಡವೆ ಓಲಗವಿಲ್ಲ
ಮಂಟಪ ಮಂಡಿಗೆ ಧಾರೆ ದಿಬ್ಬಣವಿಲ್ಲ
ಆರತಿ ಎತ್ತಲು ಮುತ್ತೈದೆಯರಿಲ್ಲ
ಮಂತ್ರಗಳಿಲ್ಲ........ಶಾಸ್ತ್ರಗಳಿಲ್ಲ........
ಮಸಣದೊಳಗೆ ಮದುವಣಗಿತ್ತಿ ನಾನಾಗಿ
ಬೂದಿ ಬಡುಕನ ಬಾಳ ಬೆಳಗಿದೆನವ್ವ ॥ ಅವ್ವ ॥

ಕದಳಿಯ ಬನದೊಳಗೆ ಕಾದಿಹನವ್ವ....
ಕಣಗಿಲೆ ಹೂಹಾಸಿ ಕಾದಿಹನವ್ವ....
ಕಣ್ಣ ಬತ್ತಿಯ ಉರಿಸಿ ಕಾದಿಹನವ್ವ....
ಜನುಮ ಜನುಮದ ಒಲವು ಫಲಗೂಡಿತವ್ವ....
ತಪ್ಪೋ ಒಪ್ಪೋ ಮನ್ನಿಸಿ ಹರಸವ್ವ ...
ತಪ್ಪೋ ಒಪ್ಪೋ ಹರಸಿ ನೀ ಕಳಿಸವ್ವ.... ॥ ಅವ್ವ ॥

೨ ಬಿಸಿಲು ಕುದುರೆಯನೇರಿ

ಬಿಸಿಲು ಕುದುರೆಯನೇರಿ ಹೋಗಾಬೇಡೊ ಗೆಳೆಯಾ
ಬೆಂಗಾಡಿನಲಿ ಸುತ್ತಿ ಬೆವರ ಸುರಿಸಲು ಬೇಡ
ಬಯಕೆ ಬೆಟ್ಟವ ಹತ್ತಿ ಹೋಗಾಬೇಡೊ ಗೆಳೆಯಾ
ಬಂಡೆಯಂತೆ ಉರುಳಿ ಬೆರಗಾಗಲು ಬೇಡ

ಬಿಸಿಲು ಮಚ್ಚಿನ ಮೇಲೆ ಬಿರಿದಿರಲು ಬಿಳಿ ಸೂರ್ಯ
ಕಿಸುರ ಕಣ್ಣ ಒರೆಸಿ ತುಂಬಿಕೊ ಬೆಳಕ ಪೂರ
ಬಿದಿರು ಮೆಳೆಯಲ್ಲಿ ಅಡಗಿಹನು ಪಿಳ್ಳಂಗೋವಿಯ ಒಡೆಯ
ನವಿಲುಗಣ್ಣ ತೆರೆದು ನೋಡೊ ಒಮ್ಮೆ ಗೆಳೆಯಾ ॥ ಬಿಸಿಲು ॥

ಬಿದಿರು ಕಡ್ಡಿಯೆ ಬೇರೆ ಬಿಸಿಲು ಕೋಲೆ ಬೇರೆ
ಬಿದಿರು ಕಡ್ಡಿಯಂದೆ ಬಗೆದು
ಬಿಸಿಲ ಕೋಲ ನುಡಿಸಲು ಬೇಡ ॥ ಬಿಸಿಲು ॥

ಅಂಬರದ ಹಕ್ಕಿಗೆ ಆಕಾಶದಗಲದ ರೆಕ್ಕೆ
ರೆಕ್ಕೆ ಬೀಸಿ ಹಕ್ಕಿ ಮೆರೆದರೂ ಬಾನೊಳಗೆ
ಕಾಳುಕಡ್ಡಿ ಹೆಕ್ಕಿ ಬೆಚ್ಚನೆ ಗೂಡ ಕಟ್ಟಿ
ಬಣ್ಣದ ಹಾಡ ಹೆಣೆದು ಹಣ್ಣಾಯಿತು ನೆಲದೊಳಗೆ ॥ ಬಿಸಿಲು ॥

ಮಿಂಚು ಹುಳುವೇ ಬೇರೆ ಮಿನುಗೊ ಚುಕ್ಕಿಯೇ ಬೇರೆ
ಮಿಂಚು ಹುಳುವೆಂದೆ ಬಗೆದು
ಮಿನುಗೊ ಚುಕ್ಕಿಯ ಹಿಡಿಯಲು ಬೇಡ ॥ ಬಿಸಿಲು ॥

ನೀರೊಳಗಿನ ನೈದಿಲೆಗೂ ನೀರಡಿಕೆ ತಪ್ಪಿಲ್ಲ
ಚಿಪ್ಪಿನ ಮುತ್ತಿಗೆ ನತ್ತಾದರೂ ನೆಮ್ಮದಿಯಿಲ್ಲ
ಕಾಲು ಕಂಗಾಲಾದರೂ ಕನಸಿಗೆ ಬರವಿಲ್ಲ
ನಡೆದಷ್ಟೂ ದಾರಿಯು ನಿಲ್ಲೊ ಮಾತೆ ಇಲ್ಲ ॥ ಬಿಸಿಲು ॥

ಒಡಲೊಳಗುರಿದೂ ಬೆಂಕಿ
ಒಲೆಯೊಳಗುರಿದರೂ ಬೆಂಕಿ
ಬೆಂಕಿಯೊಳಗೆ ಬೆಂದು ಬಯಲು ಕಾಣೊ ಗೆಳೆಯಾ ॥ ಬಿಸಿಲು ॥

ಜುಲೈ-ಆಗಸ್ಟ್ ೧೯೯೧/೧೪

೩ ದುಃಖ

ಮುಳ್ಳು ಬಿತ್ತಿದ ಕೈಗೆ ಹೂವು ನೀಡಕ್ಕ....
ಹಾವು ಹೆಡೆ ಬಿಚ್ಚಿದರೆ ಹಾಲು ನೀಡಕ್ಕ....

ಸೀದ ಮಡಿಕೆಗೂ ದುಃಖ ಸುಟ್ಟ ಕಟ್ಟಿಗೆಗೂ ದುಃಖ
ಬೆಂದ ಬೆಳ್ಳಿಯಂತೆ ಬದುಕು ಕಣಕ್ಕ.... || ಮುಳ್ಳು ||

ಉದುರಿದ ಎಲೆಗಳಿಗೂ ದುಃಖ ಆದುರಿದ ಭೂಮಿಗೂ ದುಃಖ
ಏರಿಳಿವ ಅಲೆಯಂತೆ ಬದುಕು ಕಣಕ್ಕ.... || ಮುಳ್ಳು ||

ಉರಿವ ಬೆಂಕಿಗೂ ದುಃಖ ಹರಿವ ನೀರಿಗೂ ದುಃಖ
ಬೀಸೋ ಗಾಳಿಯಂತೆ ಬದುಕು ಕಣಕ್ಕ.... || ಮುಳ್ಳು ||

ಮಿಡಿವ ತಂತಿಗೂ ದುಃಖ ನುಡಿವ ಮದ್ದಲೆಗೂ ದುಃಖ
ನೇಯೊ ಮಗ್ಗದಂತೆ ಬದುಕು ಕಣಕ್ಕ.... || ಮುಳ್ಳು ||

ಬಲೆಯೊಳಗಿದ್ದರೂ ದುಃಖ ಬಯಲೊಳಗಿದ್ದರೂ ದುಃಖ
ಬೇವಿನ ಕಹಿಯಂತೆ ಬದುಕು ಕಣಕ್ಕ.... || ಮುಳ್ಳು ||

ಬಲೆಯೊಳಗಿದ್ದರೂ ದುಃಖ ಬಯಲೊಳಗಿದ್ದರೂ ದುಃಖ
ಬೀಸೊ ಕಲ್ಲಿನ ನಡುವೆ ಬದುಕು ಕಣಕ್ಕ ... || ಮುಳ್ಳು ||

(ಲೇಖಕಿಯ ಇತ್ತೀಚಿನ ಕವನ ಸಂಕಲನ "ಚಂದ್ರನನ್ನು ಕರೆಯಿರಿ ಭೂಮಿಗೆ"ಯಿಂದ ಆಯ್ದ ಹಾಡುಗಳು)

o

ಮೂರು ಕವನಗಳು

ಆರು ಕನ್ನಿಕೆಯರು

ಆರು ನೀವಾರೆಂದು, ಆರು ಕನ್ನಿಕೆಯರ ಕೇಳಿದರೆ
ನೀನರಿಯೆಯ ? -ಎಮ್ಮ ಎಂದು ನನ್ನನ್ನೇ ಕೇಳಿದರು
ನಮ್ಮರೆಯ ಮುಂದಿಕ್ಕದರೆ ವಿರಸ ಹಿಂದಿಕ್ಕಿದರೆ ಸರಸ
ಪಾದ ಮೇಲ್ಮುಖವಾಗೆ ಅದುವೆ ನವರಸದ ಹರುಷ
ಆರಾ ನಾವಾರು ? ನಿನ್ನೊಡನೆ ಇದ್ದವರು ನಿನ್ನಲ್ಲೆ ಬೆಳೆದವರು
ನೀನೇ ನಮಗೆಲ್ಲ ಸಖ, ನಲ್ಲ, ಸೋದರ, ಸರ್ವ ಆಧಾರ.

ಮರೆತೆಯಾ ಎನ್ನ ಮೊದಲ ಕನ್ನಿಕೆ ಕೇಳಿದಳು –
ಜಗವ ನೀ ಕಣ್ತೆರೆದು ನೋಡುವಾಗ ನಾನಿದ್ದೆ ನಿನ್ನ ಬಳಿ
ಅಂದು ಇರ್ವರು ಬೆರಗಾಗಿ ನೋಡಿ, ಹಾಡಿ ಕುಣಿದೆವು
ಹಾಡಿದ್ದೆವು ಹಕ್ಕಿಗಳಂತೆ, ಜಿಂಕೆಗಳ ಪರಿಯಲಿ ನಲಿದಿದ್ದೆವು
ಬಾಲ್ಯ ಕಳಚಿದೊಡನೆ ಘರ್ಷಿಸಿತು ಅಹಂಮಿಕೆಯ ಬಿಂದು
ತಾಜಮಹಲ ವೈಭವದಲ್ಲಿ ಮುಮ್ತಾಜಳ ಹೆಸರೆ ಮರಿತಿತ್ತು.

ಬಾಲ್ಯದ ತೆರೆ ಕಳಚಿ ಯೌವನಕೆ ಕಾಲಿಕ್ಕೆ ನಾನಿದ್ದೆ ನಿನ್ನ ಬಳಿ
ಎಂದಳು ಎರಡನೆಯು ಕನ್ನಿಕೆ, ಅಂದು ಮೌನದಲಿ ನೀ ನೆನೆದೆ ಎನ್ನ
ಮೌನವೆ ಮುತ್ತೆಂದು ಒಲುಮೆಯಲೆ ಎದೆಯಲ್ಲಿ ನನ್ನಂದು ಬಿತ್ತಿದೆ
ಮಾತು ಮೈಲಿಗೆಯೆಂಬ ನೆಪದಲ್ಲಿ ಮಾತನಾಡದೆ ಉಳಿದೆ
ವಸಂತ ಬಂದಲ್ಲದೆ ಹಾಡುವುದೆ ಕೋಕಿಲ ಎಂದೆ ತಾನೆ ?
ಮತ್ತದೆಷ್ಟೊ ವಸಂತಗಳು ವಸಂತಗಳು ಸವೆದರು ನನ್ನ ನೆನೆದೆಯಾ ನೀನು ?

ತಪ್ಪ ಮನ್ನಿಸುವ ಧರಿತ್ರಿ ಹೆಣ್ಣೆಂದವ ಮರೆತೆಯಾ ನನ್ನ
ಹೌದು ಕೆಣಕಲಾರೆ, ಅದಕ್ಕೆ ಮನ್ನಿಸುವೆ ಎಂದಳು ಮೂರನೆಯವಳು
ಪ್ರಜ್ಞೆ ವಿಲಾಸವ ಜಗಿದು, ಕಾಲವನೆ ಪ್ರಶ್ನಾರ್ಥಕವಾಗಿಸಿಟ್ಟು
ಕಡಲಾಳದ ಬೆರಗಾಗಿ. ಶ್ರುತಿ ಮೀರಿದ ಹಾಡ ಹೊನಲಾಗಿ,
ದೂರ ತೀರದ ನಂದಾದೀಪ ನೀನೆಂದವ ನನ್ನ ಮರೆತೆಯಾ ?

ಹಕ್ಕಿ ಹಾಡಿಗೆ ರಾಗವ ಹಾಕಿದವ ಮರೆತೆಯಾ ನನ್ನ
ಎಂದಳು ನಾಲ್ಕನೆಯ ಕನ್ನಿಕೆ. ಆರಬರ ರಾತ್ರಿಗಳಲಿ ತೇಲಿ
ಅಜ್ಜಿ ಕತೆಯಲ್ಲಿನ ಏಳು ಸಾಗರದಾಚೆ ಕಾವಲಲ್ಲಿನ
ರಾಜಕುವರಿಯ ನೆನೆದು, ಚುಕ್ಕಿ ಚಂದ್ರಮರ ನಾಡಲ್ಲಿ
ಮೋಡಗಳ ಅಂಬಾರಿ ಏರಿ ಕನಸುಗಳ ಮಳೆ ಚೆಲ್ಲಿ
ಸ್ವಚ್ಛಂದ ಹಾಡಿಗೆ ಇಬ್ಬರು ಹಾಕಿದ ರಾಗ ಮರೆತೆಯಾ ?
ಸಾಸಿರ ಕಂಬದ ಬೆನ್ನಲ್ಲಿ ಪಾವಟಿಗೆ ಇಳಿದುದ ನೆನೆಯುಯಾ
ಬಲಿಕೊಡಲೆಂದು ತಂದ ಹಿಟ್ಟಿನ ಹುಂಜಕ್ಕೆ ಜೀವ ಬಂದುದ
ಆಯಾಮಗಳ ಬೆನ್ನಲ್ಲಿ ಪ್ರಜ್ಞೆಯು ಹಿಡಿತ ತಪ್ಪಿದುದ
ಕನ್ನಡಿಯ ಗಂಟಾದರೂ ಜೀವಂತಿಕೆಯ ಭ್ರಮೆಯ ನಂಟಾದುದ
ಮರೆತೆಯಾ ಎಂದಳು ಪಂಚಮ ಸ್ವರದಲಿ ಪಂಚಮಳು

ನೀನೆಂದು ನನ್ನವಳೆಂದು ಜಗವ ತೋರಿದುದ
ಮರೆತೆಯಾ ಎಂದಳು ಜಗದಾಳ ದಕ್ಕದ ಆರನೆಯವಳು
ಮೊಗ್ಗಾಗಿಹೆ ಇಂದು ನಿಜ, ಕಾಯುವೆ ನಾ ಹೂವಾಗುವನಕ
ನಾಳೆಯ ಸೊಗಸಿಗೆ ಇಂದಿನದೀ ಕಾಯುವ ತವಕ
ಬಿರಿವೆ ಇಂದಲ್ಲ ನಾಳೆ ಪಡೆವೆಯಾ ಎನ್ನ ಸವಾಲೆಸೆದಳು.

ಈಗ ಕೇಳಿದರು ಆರು ಕನ್ನಿಕೆಯರು ನಾವಾರೆಂದು
ಅಂದು – ಇಂದು ನಾಳಿನ ಕತೆಯ ನೆನೆಯೆಂದು
ನಕ್ಕರು ನಗಿಸಿದರು ಆ ಚಂದಿರನ ಇರುಳಲ್ಲಿ
ಆರು ? ಅವರಾರು ಹೌದು ನಾನಲ್ಲದೆ ಅವರಿನ್ನಾರು ?

–ಎನ್. ಎಸ್. ಶ್ರೀಧರಮೂರ್ತಿ

ವೇಗವೇ ಗೆಲುವಲ್ಲ

ಸಾವಿನವರೆಗೂ ಸಾವಿರ ಸುಳ್ಳಿನ
ಸ್ವಾರಸ್ಯಮಯ ಸಂಗಾತಿ ಜೀವನ
ಹಲವು ಸತ್ಯಗಳರಸಿ
ಸಾಗಿರುವ ಜನಗಳಿಗೆ
ಕರೆದೊಯ್ಯಲೆಂದೇ
ಬಂದನವ ಕೈಚಾಚಿ ಮುಂದೆ

ಸತ್ಯಕ್ಕೆ ದೂರಾದ
ನಮ್ಮೆಲ್ಲ ಸಂಬಂಧ
ನೇರ ಸಂಪರ್ಕಕ್ಕೆ
ವಹಿವಾಟು ಮಾಡಿರುವ
ಸಾಟಿ ಇಲ್ಲದ ಈ ಸಗಟು ಸೌಜನ್ಯ

ಸೋತರೂ ಸೋಲದೆ
ಗೆಲುವಿನೆಡೆ ಸಾಗದೆ
ಸಮತೋಲ ಸಾಧಿಸದೆ
ಸಮರ ಒಂದೇ ನಮಗೆ
ಈಗಿರುವ ಅನಿವಾರ್ಯ ಮಾರ್ಗ

ಸಾಗಿದೆ ಹೇಗೋ ನಮ್ಮ
ಸಾಕಾರ ಸಂಬಂಧ
ಎಂದಿಲ್ಲದ ದಾರಿದೀಪವಾಗಿ
ಉರಿಯುತಿದೆ ಬತ್ತಿ
ಕರಗುತಿದೆ ಎಣ್ಣೆ
ಸಾಗುತಿದೆ ದಾರಿ ಕಾಲ್ನಡಿಗೆಯಲ್ಲೇ

ಓಡೋಡಿ ಹೋಗುವದು
ಗೆಲುವಿನಾಸೆ ಹಿಂದೆ
ಮೈಲಿಗಲ್ಲಿನ ಮುಂದೆ ಮಲಗಲೇದೇ

ಮೊಲವಾಗಿ ಪಂದ್ಯದಲಿ
ಮೊದಲು ಬರಲಾಗಿಲ್ಲ
ವೇಗವೇ ಗೆಲುವಲ್ಲ ಎಂಬುದಕೆ ಸಾಕ್ಷಿ
ಚೆಲುವಾಗಿ ಹಾರುತಿವೆ ಬಾನಲ್ಲಿ ಪಕ್ಷಿ

–ಶಂಕರ ಪಾಟೀಲ

ನನ್ನ ಪ್ರೀತಿಯ ಹುಡುಗನಿಗೆ........

ಕನಸುಗಳ ಕೋಟೆಯೊಳಗೆ
ಬದುಕ ಚಿತ್ರಿಸುವುದು
ಬೇಡ ಹುಡುಗಾ !
ವಾಸ್ತವದ ವಿಶಾಲತೆಗೆ

ಮೈಯೊಡ್ಡೋಣ !
ಸೂರ್ಯ, ಚಂದ್ರ, ನಕ್ಷತ್ರಗಳ
ಎಣಿಕೆ ಸಾಕು !
ಹೊದ್ದ ಬಟ್ಟೆ, ಉಂಡ ಅನ್ನ,
ಕುಳಿತ ನೆಲ ವಿಷವಾಗುವ ಮುನ್ನ
ಎಚ್ಚರವಾಗೋಣ !
ಭೂತದ ವ್ಯಥೆಗಳ
ವರ್ತಮಾನದ "ಪ್ರೀತಿಯಲಿ"
ಮುಚ್ಚಿಬಿಡು !
ಮೌನದ ನಿಟ್ಟುಸಿರುಗಳ
ವ್ಯರ್ಥ ಆಲಾಪಗಳ
ಸುಟ್ಟುಬಿಡು !
ಮತ್ತೆ ಮುಗ್ಧತೆಯಲಿ
"ನಾನು ನೀನಾಗಿ, ನೀನು ನಾನಾಗಿ
ರಸಗಂಗೆಯಲಿ ಮೀನಾಗುವ" ಮಾತು
ಒತ್ತಟ್ಟಿಗಿರಲಿ !
ಮೊದಲು ನಾವು ನಾವಾಗೋಣ !
ಕುರುಡು ಹಮ್ಮುಗಳ ತೊರೆಯೋಣ
ಹುಸಿ ನಂಬಿಕೆಗಳ ಒದೆಯೋಣ
ಗೆದ್ದಲು ಹಾದಿಗಳಿಗೆ
ಗೆಜ್ಜೆ ಕಾಲುಗಳ ಊರೋಣ
ಬೇವು ಮನಸುಗಳ
ಮಾವು ಚಿಗುರುಗಳಲಿ
ಹದ ಮಾಡೋಣ !
ಹಕ್ಕಿ ಬದುಕಿಗೆ ನಾಂದಿ
ಹಾಡೋಣ ಗೆಳೆಯಾ !
ಹಕ್ಕಿ ಬದುಕಿಗೆ
ನಾಂದಿ ಹಾಡೋಣ !

—ಶೈಲಾ ನಾಗರಾಜ್

ಯುನೆಸ್ಕೋದಲ್ಲಿ ಜಾನಪದ

● ಡಾ|| ತೀ. ನಂ. ಶಂಕರನಾರಾಯಣ

ವಿಶ್ವದಲ್ಲಿ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಕಾರ್ಯಗಳಿಗಾಗಿ ಸದಸ್ಯರಾಷ್ಟ್ರಗಳಿಗೆ ಸಹಾಯ – ಸಲಹೆ ನೀಡುವ ಸಂಸ್ಥೆ ಯುನೆಸ್ಕೊ. ಈ ಸಂಸ್ಥೆಯಲ್ಲಿ ಈಚೆಗೆ ಅದರ ಸದಸ್ಯ ರಾಷ್ಟ್ರಗಳ ಸತತ ಒತ್ತಡದಿಂದಾಗಿ ಜಾನಪದದ ಸಂರಕ್ಷಣೆಗಾಗಿ ಒಂದು ಮಸೂದೆ ಅಂಗೀಕೃತವಾಯಿತು. ಇದನ್ನು Unesco Reccommendation for Safeguarding of Folklore and Traditional Culture ಎಂದು ಕರೆಯಲಾಗಿದೆ. ಜಗತ್ತಿನಾದ್ಯಂತ ವಿವಿಧ ದೇಶಗಳಲ್ಲಿ ಜಾನಪದ ಸಂಗ್ರಹ, ಸಂಶೋಧನೆ, ಸಂರಕ್ಷಣೆ – ಇವುಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಬೆಳವಣಿಗೆಗೆ ಈ ಮಸೂದೆ ನೆರವಾಗುವುದೆಂದು ನಿರೀಕ್ಷಿಸಲಾಗಿದೆ. ಸುಮಾರು ಎರಡು ದಶಕಗಳ ನಿರಂತರ ಚರ್ಚೆ – ಪ್ರತಿ ಚರ್ಚೆ, ಭಿನ್ನಾಭಿಪ್ರಾಯಗಳು, ರಾಜೀ–ಸೂತ್ರ– ಇವುಗಳಿಂದಾಗಿ ಈ ಮಸೂದೆ ಅಂಗೀಕೃತವಾಗಿದ್ದು ಯಾವುದೇ ಸದಸ್ಯ ರಾಷ್ಟ್ರವೂ ಕೂಡಾ ತನ್ನ ರಾಷ್ಟ್ರದ ಜಾನಪದದ ಅಭಿವೃದ್ಧಿಗೆ ಯುನೆಸ್ಕೋದಿಂದ ನೇರವಾಗಿ ಧನಸಹಾಯವನ್ನೂ ಹಾಗೂ ತಾಂತ್ರಿಕ ನೆರವನ್ನೂ ಪಡೆಯಬಹುದಾಗಿದೆ. ಇದಕ್ಕೆ ಹಿನ್ನೆಲೆಯಾಗಿ ಜಗತ್ತಿನಾದ್ಯಂತ ಜಾನಪದದ (Folklore) ಸಂಗ್ರಹ, ಸಂಶೋಧನೆ ಮತ್ತು ಸಂರಕ್ಷಣೆಯ ಕಾರ್ಯ ಹೇಗೆ ಬೆಳೆದು ಬಂದಿದೆ ಎಂಬುದನ್ನು ಸ್ಥೂಲವಾಗಿ ಗಮನಿಸಬೇಕಾಗುತ್ತದೆ.

೨

ಎಲ್ಲಾ ದೇಶಗಳಲ್ಲಿಯೂ ಶಿಷ್ಟ ಮತ್ತು ಜನಪದ ಎಂಬ ವ್ಯತ್ಯಾಸ ಇರುವುದು ಕಂಡುಬರುತ್ತದೆ. ಕನ್ನಡದಲ್ಲಿಯ ಮಾರ್ಗ, ದೇಸೀ – ಇವುಗಳ ವ್ಯತ್ಯಾಸವನ್ನು ಗಮನಿಸಬಹುದು. ಸಮಾಜದಲ್ಲಿ ಆಳುವ ವರ್ಗ, ಅದರ ಭಾಷೆ ಹಾಗೂ ಆಳಿಸಿಕೊಳ್ಳುವ

ವರ್ಗ, ಅದರ ಭಾಷೆ, ಸಾಹಿತ್ಯ, ಸಂಸ್ಕೃತಿ – ಇವುಗಳ ನಡುವೆ ತುಂಬಾ ಅಂತರ-ವಿರುವುದನ್ನು ಕಾಣಬಹುದು. ಶಿಷ್ಟ ಸಂಸ್ಕೃತಿಯ ಜನ ಜನಪದ ಸಂಸ್ಕೃತಿಯನ್ನು ತಾತ್ಸಾರದಿಂದ ಕಂಡಿರುವುದು ಇತಿಹಾಸದಿಂದಲೂ ಈಗಲೂ ಕಾಣುತ್ತಿರುವುದು ವರ್ತಮಾನ ಸಂದರ್ಭದಿಂದಲೂ ತಿಳಿದುಬರುತ್ತದೆ. ರಾಜಮನೆತನಗಳು ಆಳುತಿದ್ದ ಕಾಲದಲ್ಲಿ ಗ್ರಾಮೀಣ ಹಾಗೂ ಅನಕ್ಷರಸ್ಥ ಜನರ ಸಂಸ್ಕೃತಿಗೆ ಮಹತ್ವ ದೊರಕಲಿಲ್ಲ. ೧೯ ನೆಯ ಶತಮಾನದಿಂದೀಚೆಗೆ ಜಗತ್ತಿನ ವಿವಿಧ ದೇಶಗಳಲ್ಲಿ ಜಾನಪದದ ಸಂಗ್ರಹ, ಸಂಶೋಧನೆ ಮತ್ತು ಸಂರಕ್ಷಣೆಯ ಕಾರ್ಯ ಆರಂಭವಾಯಿತು. ಮೊದಲಿಗೆ ಯುರೋಪಿನ ಫಿನ್ಲೆಂಡ್, ಜರ್ಮನಿ, ಇಂಗ್ಲೆಂಡ್ ಹಾಗೂ ಪೂರ್ವ ಯುರೋಪಿನ ದೇಶಗಳಲ್ಲಿ ಆರಂಭಗೊಂಡ ಈ ಪ್ರಕ್ರಿಯೆ ಇತರ ದೇಶಗಳ ಮೇಲೆಯೂ ಪರಿಣಾಮವನ್ನುಂಟಮಾಡಿದೆ. ಭಾರತ, ಚೈನಾ, ಅಮೆರಿಕಾ, ರಶ್ಯಾ ಲ್ಯಾಟಿನ್ ಅಮೆರಿಕಾದ ದೇಶಗಳು, ಆಫ್ರಿಕಾ ಹಾಗೂ ಆಸ್ಟ್ರೇಲಿಯಾದ ದೇಶಗಳಲ್ಲಿಯೂ ಈ ಶತಮಾನದಲ್ಲಿ ಈ ಸಂಬಂಧವಾಗಿ ಸಾಕಷ್ಟು ಕೆಲಸ ನಡೆದಿದೆ. ಸ್ಕಾಟ್ಲೆಂಡ್ ಮತ್ತು ಅಮೆರಿಕಾ ದೇಶಗಳಲ್ಲಿ ಲಾವಣಿಗಳ ಸಂಗ್ರಹ, ಜರ್ಮನಿಯಲ್ಲಿ ಕಿನ್ನರ ಕಥೆಗಳ ಸಂಗ್ರಹ, ಫಿನ್ಲೆಂಡಿನಲ್ಲಿ ಕಾಲೇವಾಲಾದ ಮಹಾಕಾವ್ಯದ ಪ್ರಕಟಣೆ – ಈ ಹಂತದಲ್ಲಿನ ಪ್ರಮುಖವಾದ ಘಟನೆಗಳು. ಇವುಗಳ ಹಿಂದೆ ರಾಷ್ಟ್ರೀಯ ಮನೋಭಾವ (Nationalism) ಕೆಲಸ ಮಾಡಿರುವುದನ್ನು ಕಾಣಬಹುದು. ಕೆಲವು ರಾಷ್ಟ್ರಗಳಲ್ಲಿ ವಸಾಹತುಶಾಹೀ ಪ್ರಭಾವದಿಂದ ಬಿಡಿಸಿಕೊಳ್ಳಲು ಆಯಾ ದೇಶಗಳ ಜಾನಪದ ನೆರವಾಗಿರುವುದೂ ಉಂಟು. ಫಿನ್ಲೆಂಡಿನಲ್ಲಂತೂ ಆ ದೇಶ ಸ್ವಾತಂತ್ರ್ಯಗಳಿಸಲು ಜನರನ್ನು ಒಗ್ಗೂಡಿಸುವ ಸಲುವಾಗಿ ಜಾನಪದ ನೆರವಾಗಿದೆ. ಹೀಗಾಗಿ ಪ್ರಜಾಪ್ರಭುತ್ವದ ಕಲ್ಪನೆ ಹಾಗೂ ವಸಾಹತುಶಾಹಿ ಹಿಡಿತದಿಂದ ಬಿಡುಗಡೆ-ಇವು ಜಾನಪದ ಸಂಗ್ರಹಕ್ಕೆ ಮೊದಲನೆಯ ಹಂತದಲ್ಲಿ ಮುಖ್ಯವಾದ ಪ್ರೇರಣೆಯಾಗಿದೆ. ಹಾಗೆಯೇ ರಾಷ್ಟ್ರೀಯತೆಯ ಕಲ್ಪನೆ ಬರಲು ತನ್ನ ರಾಷ್ಟ್ರಕ್ಕೂ ಒಂದು ಸಾಂಸ್ಕೃತಿಕ ಪರಂಪರೆ ಇದೆ ಎಂಬುದನ್ನು ಪ್ರಚುರಪಡಿಸುವ ಸಲುವಾಗಿ ಜಾನಪದದ ಅಧ್ಯಯನ ನಡೆದಿದೆ. ಮೊದಲ ಹಂತದಲ್ಲಿ ಕೆಲವು ಆಸಕ್ತ ವ್ಯಕ್ತಿಗಳ ಹಾಗೂ ಖಾಸಗಿ ಸಂಘ ಸಂಸ್ಥೆಗಳ ಪ್ರಯತ್ನದಿಂದಾಗಿ ಈ ಬಗೆಯ ಸಂಗ್ರಹ ಕಾರ್ಯ ಆರಂಭವಾಯಿತು. ಜರ್ಮನಿಯ ಗ್ರಿಮ್ ಸಹೋದರರು, ಫಿನ್ಲೆಂಡಿನ ಲೋನ್ರಾಟ್ ಇಲಿಯಾಸ್, ಅಮೆರಿಕಾದ ಫ್ರಾನ್ಸಿಸ್ ಚೈಲ್ಡ್, ಭಾರತದಲ್ಲಿ ವಿದೇಶೀ ವಿದ್ವಾಂಸರು ಮತ್ತು ದೇಶೀಯ ವಿದ್ವಾಂಸರು ಈ ಕಾರ್ಯದಲ್ಲಿ ತೊಡಗಿದರು. ಕನ್ನಡದಲ್ಲಿ ಮಾಸ್ತಿ, ಬೇಂದ್ರೆ, ಬಿ. ಎಂ. ಶ್ರೀ ಮೊದಲಾದವರ ಪ್ರೇರಣೆಯಿಂದ ಅನೇಕ ಹಿರಿಯರು ಜನಪದ ಸಾಹಿತ್ಯದ ಸಂಗ್ರಹ ಮಾಡಿದ್ದನ್ನು. ಜನಪದ ಸಾಹಿತ್ಯ ಶಿಷ್ಟ ಸಾಹಿತ್ಯದ ಮೇಲೆ ಬೀರಿದ ಪ್ರಭಾವಗಳನ್ನು ಗಮನಿಸಬಹುದು. ಫಿನ್ಲೆಂಡಿನಲ್ಲಿ ೧೮೩೫ರಲ್ಲಿ

ಆರಂಭವಾದ ಫಿನ್ನಿಶ್ ಲಿಟರೇಚರ್ ಸೊಸೈಟಿ, ೧೮೭೮ ರಲ್ಲಿ ಆರಂಭವಾದ ಇಂಗ್ಲೆಂಡಿನ Folklore Society ೧೮೮೮ ರಲ್ಲಿ ಅಮೇರಿಕಾದಲ್ಲಿ ಆರಂಭವಾದ American Folklore Society – ಮೊದಲಾದುವು ಈ ಕ್ಷೇತ್ರದಲ್ಲಿ ಗಣನೀಯವಾದ ಕೆಲಸ ಮಾಡಿವೆ. ಗ್ರಾಮೀಣ ಜನ ನಗರದ ವಿದ್ಯಾವಂತ ಜನರಿಗಿಂತ ಕಡಿಮೆ ಏನೂ ಅಲ್ಲ, ಅವರ ಸಂಸ್ಕೃತಿಯಲ್ಲಿಯೂ ಕಲಿಯಬೇಕಾದ ಮಹತ್ವದ ಅಂಶಗಳಿವೆ ಎಂಬ ಕಲ್ಪನೆ ರೂಪುಗೊಳ್ಳಲು, ಮನುಷ್ಯರೆಲ್ಲ ಸಮಾನರು ಎಂಬ ಪ್ರಜಾಪ್ರಭುತ್ವವಾದಿ ಕಲ್ಪನೆ ಕೆಲಸ ಮಾಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ರಾಜಪ್ರಭುತ್ವವಿದ್ದಷ್ಟು ಕಾಲ ಜಾನಪದಕ್ಕೆ ಪ್ರೋತ್ಸಾಹ ಸಿಗಲಿಲ್ಲ. ಅದನ್ನು ತಾತ್ಸಾರದಿಂದಲೇ ಕಾಣಲಾಗುತ್ತಿತ್ತು.

ಜಾನಪದದ ಸಂಗ್ರಹಕ್ಕೆ ಕಾರಣವಾದ ಎರಡನೆಯ ಮುಖ್ಯವಾದ ಘಟನೆ ಎಂದರೆ ಯೂರೋಪಿನ ದೇಶಗಳಲ್ಲಿ ಹಾಗೂ ಅನಂತರ ಅಮೇರಿಕಾ ಮೊದಲಾದ ಅಭಿವೃದ್ಧಿ ಹೊಂದಿದ ದೇಶಗಳು ಹಾಗೂ ಭಾರತ, ಚೈನಾ ಮೊದಲಾದ ಅಭಿವೃದ್ಧಿಶೀಲ ದೇಶಗಳಲ್ಲಿ ಕೈಗಾರಿಕೀಕರಣದಿಂದಾಗಿ ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ಜನ ವಲಸೆ ಬಂದದ್ದು ನಗರಕ್ಕೆ ಬಂದ ಗ್ರಾಮೀಣ ಜನ ತಮ್ಮ ಪಾರಂಪರಿಕ ವೃತ್ತಿಗಳನ್ನೂ, ಆ ವೃತ್ತಿಗಳ ಕಾರಣದಿಂದ ರೂಪುಗೊಳ್ಳುತ್ತಿದ್ದ ಜಾನಪದವನ್ನು ಕೈಬಿಟ್ಟು, ವಿಜ್ಞಾನ ತಂತ್ರಜ್ಞಾನಗಳಿಂದ ನಿರ್ದೇಶಿತವಾದ ಏಕರೂಪಿಯಾದ ನಗರ ಸಂಸ್ಕೃತಿಯನ್ನು ರೂಪಿಸಿ ಕೊಂಡರು. ಇದರ ಪರಿಣಾಮವಾಗಿ ಪರಂಪರಾನುಗತವಾಗಿ ರೂಪುಗೊಂಡಿದ್ದ ಜನಪದ ಸಾಹಿತ್ಯ ಕಲೆ, ಸಂಪ್ರದಾಯ, ಜನಪದ ವೈದ್ಯ, ನಂಬಿಕೆ ಮೊದಲಾದವು ಕಣ್ಮರೆಯಾಗುತ್ತಾ ಬಂದವು. ಹೀಗೆ ಕೈಗಾರಿಕೀಕರಣದಿಂದ ಹಾಗೂ ನಗರೀಕರಣದಿಂದ ನಾಶವಾಗುತ್ತಿರುವ ಜಾನಪದವನ್ನು ರಕ್ಷಿಸಬೇಕು ಎನ್ನುವ ಅಭೀಪ್ಸೆ ಜಾನಪದ ಸಂಗ್ರಹ, ಸಂಶೋಧನೆ ಮತ್ತು ಸಂರಕ್ಷಣಾ ಕಾರ್ಯಗಳಿಗೆ ಮುಖ್ಯವಾದ ಪ್ರೇರಕ ಶಕ್ತಿಯಾಯಿತು. ಅಮೇರಿಕಾದಲ್ಲಿ ಜಗತ್ತಿನ ವಿವಿಧ ದೇಶಗಳಿಂದ ವಲಸೆ ಬಂದ ಭಿನ್ನ ಭಾಷೆಗಳಿಗೆ, ಭಿನ್ನ ಜನಾಂಗಗಳಿಗೆ, ಭಿನ್ನ ಧರ್ಮಗಳಿಗೆ ಸೇರಿದ ಜನ ತಮ್ಮ ಮೂಲ ಸಂಸ್ಕೃತಿಯ ಅನನ್ಯತೆ ಯನ್ನು ಕಾಪಾಡಿಕೊಂಡು ಬರಬೇಕೆಂಬ ಉದ್ದೇಶದಿಂದ ಈ ಸಂಬಂಧವಾದ ಅಧ್ಯಯನ ನಡೆಯಿತು. ಇಲ್ಲೆಲ್ಲ ಮುಖ್ಯವಾದದ್ದು ಭಾಷಾ ಗುಂಪುಗಳು (Linguistic groups), ವೃತ್ತಿ ಗುಂಪುಗಳು (Occupational groups), ಧಾರ್ಮಿಕ ಗುಂಪುಗಳು (Religious groups) – ಮೊದಲಾದುವು ತಮ್ಮ ಅನನ್ಯತೆಯನ್ನು ಸ್ಥಾಪಿಸುವುದಕ್ಕಾಗಿ ತಮ್ಮ ವೈಶಿಷ್ಟ್ಯವನ್ನು ಸಮಾಜಕ್ಕೆ ಸ್ಪಷ್ಟಪಡಿಸುವುದಕ್ಕಾಗಿ

ಈ ಬಗೆಯ ಪ್ರಯತ್ನ ನಡೆಯಿತು. ಈವರೆಗೆ ಈ ಬಗೆಯಾದ ಕೆಲಸಗಳಿಗೆ ದೊರೆತಿರುವ ಆರ್ಥಿಕ ನೆರವು, ಪ್ರೋತ್ಸಾಹ ಆಯಾ ಸಾಮಾಜಿಕ ವರ್ಗಗಳಿಂದ ಹಾಗೂ ರಾಜ್ಯಗಳಿಂದ ಮತ್ತು ಸಂಬಂಧಪಟ್ಟ ದೇಶಗಳಿಂದ, ಪ್ರತಿಯೊಂದು ದೇಶವೂ ತನ್ನ ಸಾಂಸ್ಕೃತಿಕ ಪರಂಪರೆಯನ್ನು ದಾಖಲು ಮಾಡುವ ಆ ಮೂಲಕ ಸಂರಕ್ಷಣೆ ಮಾಡುವ ಕಾರಣದಿಂದಾಗಿ ಈ ಬಗೆಯ ಪ್ರಯತ್ನ ನಡೆದಿದೆ. ಜಾನಪದವನ್ನು ವೈಜ್ಞಾನಿಕ ಅಧ್ಯಯನದ ವಿಷಯ ವಾಗಿ ಈಗ ವಿಶ್ವವಿದ್ಯಾನಿಲಯಗಳಲ್ಲಿ ಒಪ್ಪಿಕೊಳ್ಳಲಾಗಿದೆ. ಇದರಿಂದಾಗಿ ಜಾನಪದದ ಬೋಧನೆ – ಸಂಶೋಧನೆ, ಜಾನಪದ ವಿಜ್ಞಾನ (Folkloristics) ಎಂಬ ಶಿಸ್ತಿನ ವ್ಯಾಪ್ತಿಯಲ್ಲಿ ಒಂದು ಸಮಾಜ ವಿಜ್ಞಾನವಾಗಿ ಬೆಳೆಯುತ್ತಿದೆ.

೩

ಜಾನಪದ ಕ್ಷೇತ್ರದಲ್ಲಿ ಒಂದು ದೇಶದ ಜಾನಪದವನ್ನು ಆ ದೇಶದ ಹಿನ್ನೆಲೆಯಲ್ಲಿ ಮಾತ್ರ ಅಧ್ಯಯನ ಮಾಡುವುದು ಒಂದು ಬಗೆಯಾದರೆ, ವಿವಿಧ ದೇಶಗಳ ಜಾನಪದ ಕ್ಕಿರುವ ಸಾಮಾನ್ಯ ಅಂಶಗಳಾವುವು, ವಿಶಿಷ್ಟ ಅಂಶಗಳಾವು ಎಂದು ವಿಚಾರ ಮಾಡುವುದು ತೌಲನಿಕವಾದ ವಿಧಾನವಾಗುತ್ತದೆ. ಹಾಗೆಯೇ ಜಗತ್ತಿನ ಎಲ್ಲಾ ಭಾಷೆಗಳ, ಎಲ್ಲಾ ಬಗೆಯ ವರ್ಗಗಳ ಜಾನಪದವನ್ನು ತೌಲನಿಕವಾಗಿ ನೋಡಿದಾಗ ಜಗತ್ತಿನ ಜಾನಪದದಲ್ಲಿ ಕಂಡು ಬರುವ ಸಾಮಾನ್ಯವಾದ ಅಂಶಗಳೇನು, ವಿಶಿಷ್ಟವಾದ ಅಂಶಗಳೇನು ಎಂಬುದನ್ನು ಅಭ್ಯಾಸ ಮಾಡುವುದು ಅಗತ್ಯವಾಗುತ್ತದೆ. ಜಾನಪದ ಎಷ್ಟು ಪ್ರಾದೇಶಿಕವಾದದ್ದೋ ಎಷ್ಟು ರಾಷ್ಟ್ರೀಯವಾದದ್ದೋ ಅಷ್ಟರಮಟ್ಟಿಗೆ ಅಂತರರಾಷ್ಟ್ರೀಯವಾದದ್ದೂ ಹೌದು. ಈ ದೃಷ್ಟಿಯಿಂದ ಜಾನಪದ ವಿಜ್ಞಾನ ಒಂದು ಅಂತರ್ಶಿಸ್ತಿನ ಅಧ್ಯಯನವೂ ಹೌದು. ಹಾಗೂ ಅಂತರರಾಷ್ಟ್ರೀಯ ಅಧ್ಯಯನದ ವಿಷಯವೂ ಹೌದು. ಈ ರೀತಿಯ ರಾಷ್ಟ್ರೀಯ, ಅಂತರರಾಷ್ಟ್ರೀಯ ಕೊಳು–ಕೊಡೆಗಳು ಆರಂಭವಾದ ಮೇಲೆ ತೃತೀಯ ಜಗತ್ತಿನ ದೇಶಗಳ ಜಾನಪವ ವ್ಯಾಪಾರೀಕರಣಕ್ಕೆ ಒಳಗಾಯಿತೆಂದು ಹಾಗೂ ಈ ದೇಶಗಳ ಜಾನಪದ ವನ್ನು ವಿಕೃತ ರೂಪದಲ್ಲಿ ಅಲ್ಲಲ್ಲಿ ಪ್ರದರ್ಶಿಸಲಾಗುತ್ತಿದೆ ಎಂಬ ಆಕ್ಷೇಪಗಳು ಬಂದವು. ವಿಶ್ವರಾಷ್ಟ್ರಸಂಸ್ಥೆಯಲ್ಲಿ ಎರಡು ದಶಕಗಳ ಹಿಂದೆಯೇ ಈ ರೀತಿ ಆಕ್ಷೇಪಗಳು ಬರಲಾರಂಭಿಸಿದವು. ಈ ರೀತಿ ಜಾನಪದವನ್ನು ಪ್ರದರ್ಶಿಸುವುದಕ್ಕೆ ಸಂಬಂಧಪಟ್ಟ ಒಂದು ನಿಯಮಾವಳಿ (ಸಾಹಿತ್ಯ ಕೃತಿಗಳಿಗಿರುವಂತೆ Copyright) ಇರಬೇಕೆಂಬ ಪ್ರಸ್ತಾಪ ಬಂದಿತು. ಜಾನಪದವನ್ನು ರಕ್ಷಣೆ ಮಾಡಬೇಕು ಹಾಗೂ ಅದರ Copyrightಗೆ ಸಂಬಂಧಿಸಿದಂತೆ ಒಂದು ನಿಯಮಾವಳಿ ರೂಪಿಸಬೇಕು ಎಂಬ ವಿಷಯವನ್ನು ಮೊದಲ

ಬಾರಿಗೆ ಬೊಲಿವಿಯಾ ದೇಶ ೧೯೭೩ ರಲ್ಲಿ ಯುನೆಸ್ಕೋದಲ್ಲಿ ಮಂಡಿಸಿತು. ಹೀಗೆ ಪ್ರತಿಯೊಂದು ಸಮಾಜದ, ದೇಶದ, ಜಾನಪದದ ಪರಂಪರೆ ಹಾಗೂ ಅದರ ರಕ್ಷಣೆಗೆ ಸಂಬಂಧಿಸಿದ Copyright ಸಮಸ್ಯೆ ಸಾಕಷ್ಟು ಚರ್ಚೆಗೆ ಅವಕಾಶ ಮಾಡಿಕೊಟ್ಟಿತು. ಜಾನಪದದ ವಿವಿಧ ಘಟಕಗಳಾದ ಕಲೆ, ಸಾಹಿತ್ಯ ಮೊದಲಾದುವನ್ನು ಅವುಗಳ ಪ್ರಯೋಗದ (Performance) ಸಹಜ ಸಂದರ್ಭದಿಂದ (Natural Context) ಕೃತಕವಾದ ಸಂದರ್ಭದಲ್ಲಿ (Artificial Context) ಬಳಕೆ ಮಾಡುವಾಗ ಆ ಸಂಸ್ಕೃತಿಗೆ ಅಪಚಾರವಾಗದಂತೆ ಮಾಡಬೇಕೆಂಬ ವಾದವನ್ನು ಮಂಡಿಸಲಾಯಿತು. ಇದೇ ಕಾಲಾವಧಿಯಲ್ಲಿ ಕೈಗಾರಿಕೀಕರಣಕ್ಕೆ ಅತಿ ಹೆಚ್ಚು ಪ್ರಮಾಣದಲ್ಲಿ ಒಳಗಾದ ಪಾಶ್ಚಾತ್ಯ ದೇಶಗಳಲ್ಲಿ ಒಂದು ರೀತಿಯ ಸಾಂಸ್ಕೃತಿಕ ಕೊರತೆ ಕಂಡು ಬಂದು ಆ ದೇಶಗಳಲ್ಲಿಯೂ ಜಾನಪದವನ್ನು ಸಂರಕ್ಷಿಸಬೇಕೆಂಬ ವಾದ ಹುಟ್ಟಿಕೊಂಡಿತು. ಈ ಸಂಬಂಧವಾಗಿ ನಡೆದ ಪ್ರಯೋಗಗಳು ಎರಡು ರೀತಿಯಲ್ಲಿ ಸಾಗಿದವು ಎಂದು ಹೇಳಬಹುದು. ಜಾನಪದವನ್ನು ಈಗಿರುವ Copyright Act ವ್ಯಾಪ್ತಿಯಲ್ಲಿ ತಂದು ಅದರ ದುರ್ಬಳಕೆಯನ್ನು ತಪ್ಪಿಸಲು ಸಾಧ್ಯವೇ ಎಂಬುದರ ಬಗ್ಗೆ ಪರಿಶೀಲಿಸುವುದು. ಈ ಕಾರ್ಯವನ್ನು World Intellectual Property Organization (WIPO) ಎಂಬ ಸಂಸ್ಥೆಗೂ ಜಾನಪದವನ್ನು ಅದರ ಎಲ್ಲಾ ಸಮಗ್ರತೆಯಲ್ಲಿ ರಕ್ಷಿಸುವ ಹಾಗೂ ಅದರ ಅಧ್ಯಯನ, ಸಂಶೋಧನೆಗಳಿಗೆ ಹೇಗೆ ಪ್ರೋತ್ಸಾಹ ನೀಡಬೇಕೆಂಬ ವ್ಯಾಪಕವಾದ ವಿಷಯವನ್ನು ಯುನೆಸ್ಕೋಗೆ ವಹಿಸಲಾಯಿತು. ೧೯೮೨ರಲ್ಲಿ ಈ ಎರಡೂ ಸಂಸ್ಥೆಗಳೂ ಈ ಬಗ್ಗೆ ಚರ್ಚೆ ನಡೆಸಿದವು. ೧೯೮೨ ರಲ್ಲಿ ಮೆಕ್ಸಿಕೋ ನಗರದಲ್ಲಿ ನಡೆದ World Conference on Cultural Policies ಎಂಬಲ್ಲಿಯೂ ವಿವರವಾಗಿ ಚರ್ಚಿಸಲಾಯಿತು. ಕಾಲಕ್ರಮದಲ್ಲಿ ಜಾನಪದವನ್ನು Copyright Actನ ವ್ಯಾಪ್ತಿಯಲ್ಲಿ ತರುವುದು ಕಾನೂನಿನ ದೃಷ್ಟಿಯಿಂದ ಕಷ್ಟವಾಗುತ್ತದೆ ಎಂದು ಸ್ಪಷ್ಟವಾಯಿತು. ಜಾನಪದದ ಮುಖ್ಯ ಲಕ್ಷಣವೆಂದರೆ ಅದರ ಮೂಲ ಕರ್ತೃ ಯಾರು ಎಂದು ತಿಳಿಯದೆ ಇರುವುದು. ಉದಾಹರಣೆಗೆ ಒಬ್ಬ ವ್ಯಕ್ತಿ ಒಂದು ಜನಪದ ಕಥೆಯನ್ನು ಹೇಳಿದರೆ ಅವನೇ ಅದರ ಕರ್ತೃ ಎಂದು ಸಾಧಿಸುವುದು ಕಷ್ಟವಾಗುತ್ತದೆ. ಅವನು ಕಲಿತಿರುವ ಕಥೆ ಅವನಿಗೆ ಅನೇಕ ತಲೆಮಾರುಗಳಲ್ಲಿ ಬೇರೆ ಬೇರೆ ಕಥೆಗಾರರ ಮೂಲಕ ಸಾಗಿ ಬಂದಿರುವಂತಹದು. ಆದ್ದರಿಂದ ಇದರ ಪೂರ್ಣ ಹಕ್ಕು ಕಥೆಗಾರನಿಗೆ ಲಭ್ಯವಾಗುವುದಿಲ್ಲ. ಹೀಗೆ ಪರಿಮಿತವಾದ ಈ ವಿಷಯವನ್ನು ಅಷ್ಟಕ್ಕೇ ಕೈಬಿಟ್ಟು ಜಾನಪದವನ್ನು ಸಂರಕ್ಷಿಸುವ ಹಾಗೂ ಅದರ ಅಧ್ಯಯನಕ್ಕೆ ಪ್ರೋತ್ಸಾಹ ನೀಡುವ ವ್ಯಾಪಕ ವಿಷಯಗಳ ಕಡೆಗೆ ಹೆಚ್ಚು ಗಮನ ಕೊಡಲಾಯಿತು.

ಈ ಹಂತದಲ್ಲಿ ಫಿನ್ಲೆಂಡ್ ದೇಶ ಮಧ್ಯೆ ಪ್ರವೇಶ ಮಾಡಿತು. ಫಿನ್ಲೆಂಡಿನ ಪರಿಸ್ಥಿತಿ ತೃತೀಯ ಜಗತ್ತಿನ ದೇಶಗಳಿಗಿಂತ ಮತ್ತು ಯೂರೋಪಿನ ಮುಂದುವರಿದ ದೇಶಗಳು ಮತ್ತು ಅಮೆರಿಕಾಕ್ಕಿಂತ ಭಿನ್ನವಾದುದಾಗಿತ್ತು. ಜಾನಪದ ವಿಜ್ಞಾನ ಕ್ಷೇತ್ರದಲ್ಲಿ ಫಿನ್ಲೆಂಡಿಗೆ ವಿಶಿಷ್ಟವಾದ ಸ್ಥಾನವಿದೆ. ಈ ದೇಶದ ಜಾನಪದ ಅಧ್ಯಯನಕ್ಕೆ 150 ವರ್ಷಗಳಿಗೂ ಹೆಚ್ಚಿನ ದೀರ್ಘವಾದ ಇತಿಹಾಸವಿದೆ. Finnish Literature Society ಮತ್ತು ಫಿನ್ಲೆಂಡಿನ ವಿಶ್ವವಿದ್ಯಾನಿಲಯದ ಮೂಲಕ ಈ ದೇಶದಲ್ಲಿ ಜಾನಪದ ಸಂಗ್ರಹ ಹಾಗೂ ಸಂಶೋಧನೆ ವಿಶೇಷವಾಗಿ ನಡೆದಿದೆ. ಫಿನ್ಲೆಂಡ್, ಸ್ವೀಡನ್, ಡೆನ್ಮಾರ್ಕ್ ನಾರ್ವೆ ಮತ್ತು ಐಸ್‌ಲ್ಯಾಂಡ್– ಈ ಐದು ದೇಶಗಳನ್ನು "ನಾರ್ಡಿಕ್ ದೇಶಗಳು" ಎಂದು ಯೂರೋಪಿನಲ್ಲಿ ಕರೆಯುತ್ತಾರೆ. ಈ ದೇಶಗಳ ಪರಸ್ಪರ ಸಹಕಾರದಿಂದ ಹುಟ್ಟಿಕೊಂಡ ಸಂಸ್ಥೆ Nordic Institute of Folklore ಪ್ರೊ ಲೌರಿಹಾಂಕೊ ಎಂಬ ಅಂತರ ರಾಷ್ಟ್ರೀಯ ಖ್ಯಾತಿಯ ಜಾನಪದ ವಿದ್ವಾಂಸರು ಈ ಸಂಸ್ಥೆಯ ನಿರ್ದೇಶಕರಾಗಿದ್ದರು. ಈ ಸಂಸ್ಥೆಯ ಪ್ರತಿನಿಧಿಯಾಗಿ ಅವರು ಯುನೆಸ್ಕೋದಲ್ಲಿ ಜಾನಪದ ಸಂಬಂಧವಾಗಿ ನಡೆಯುತ್ತಿದ್ದ ಚರ್ಚೆಗೆ ಒಂದು ಹೊಸ ಆಯಾಮವನ್ನು ಕೊಟ್ಟರು. ಯುನೆಸ್ಕೋದಲ್ಲಿ ಚರ್ಚೆ ಮತ್ತು ಒಪ್ಪಿಗೆಗಾಗಿ ಕೆಲವು ಶಿಫಾರಸುಗಳನ್ನು ಒಳಗೊಂಡ ಮಸೂದೆಯ ಕರಡೊಂದನ್ನು ಅವರು ರೂಪಿಸಿ ಮಂಡಿಸಿದರು. ಇದು ತುಂಬಾ ವ್ಯಾಪಕವಾದ ರೀತಿಯಲ್ಲಿ ಜಾನಪದದ ರಕ್ಷಣೆ ಹಾಗೂ ಅಧ್ಯಯನಕ್ಕೆ ನೆರವಾಗುತ್ತದೆ. ಈ ಸಂಬಂಧವಾಗಿ ಚರ್ಚೆಗಳು ನಡೆಯುವಾಗ ಸಾಕಷ್ಟು ಭಿನ್ನಾಭಿಪ್ರಾಯಗಳು ವ್ಯಕ್ತವಾದವು. ಜಾನಪದವನ್ನು ಸಂರಕ್ಷಿಸುವ ಮೊದಲು ಜಾನಪದ ಎಂದರೇನು ಎಂಬುದನ್ನು ಎಲ್ಲಾ ದೇಶಗಳಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಸ್ಪಷ್ಟಪಡಿಸಬೇಕಾದುದು ಅಗತ್ಯವಾಯಿತು. "Folklore or traditional and popular culture is the totality of tradition-based creations of– a community, expressed by a group of individuals and recognized as reflecting as the expectation of a community, in so far as reflect its cultural and social identity; its standards and values are transmitted orally, by imitation or other means. Its form include among other language, literature, music, dance, games, mythology, rituals, customs, handicrafts, architecture and other arts" (Nordic Institute of Folklore News Letter Vol 17 2-3/1989 June Page 8) ಜಾನಪದ

ಎಂದರೇನು ಎಂಬುದರ ಬಗ್ಗೆ ಒಂದೊಂದು ದೇಶದಲ್ಲಿ ಒಂದೊಂದು ರೀತಿಯ ಸೂತ್ರವನ್ನು ಕೊಡುತ್ತಾರೆ. ಇವುಗಳ ನಡುವೆ ಎಲ್ಲಾ ದೇಶಗಳಿಗೂ ತಕ್ಕಮಟ್ಟಿಗಾದರೂ ಒಪ್ಪಿಗೆಯಾಗಬಲ್ಲ ಸೂತ್ರವನ್ನು ಮೇಲೆ ಕೊಡಲಾಗಿದೆ. (ಭಾರತದಂತಹ ಗ್ರಾಮೀಣ ಸಂಸ್ಕೃತಿ ಪ್ರಧಾನ ದೇಶದಲ್ಲಿ ಜಾನಪದ ಗ್ರಾಮೀಣರಿಗೆ ಮುಖ್ಯವಾಗಿ ಸಂಬಂಧಿಸಿದ್ದು ಎಂಬ ಅಭಿಪ್ರಾಯವಿದ್ದರೆ ಅಮೇರಿಕಾದಂತಹ ನಗರ ಕೇಂದ್ರಿತ, ಕೈಗಾರಿಕೀಕರಣಗೊಂಡ ಹಾಗೂ ವಿವಿಧ ದೇಶ ಭಾಷೆ ಧರ್ಮಗಳ ವಲಸೆಗಾರರಿಂದ ಕೂಡಿದ ದೇಶದಲ್ಲಿ ಜಾನಪದದ ಸೂತ್ರ ಬದಲಾಗುತ್ತದೆ. ಜಾನಪದ ನಿತ್ಯ ಪರಿವರ್ತನಶೀಲವಾದದು. ಆದಿವಾಸಿಗಳಲ್ಲಿ, ಗ್ರಾಮೀಣರಲ್ಲಿ ಮಾತ್ರವಲ್ಲದೆ, ನಗರಗಳಲ್ಲಿಯೂ ಜಾನಪದ ಸೃಷ್ಟಿಯಾಗುತ್ತದೆ ಎಂಬುದನ್ನು ಅಮೇರಿಕಾದಲ್ಲಿ ಒಪ್ಪಿಕೊಳ್ಳಲಾಗಿದೆ. ಇದರಲ್ಲಿ ಸತ್ಯಾಂಶವೂ ಇದೆ. ಜಾನಪದ ಯಾವುದೋ ಕಾಲದಲ್ಲಿ ಸೃಷ್ಟಿಯಾಗಿತ್ತು. ಕೈಗಾರಿಕೀಕರಣದಿಂದ ನಾಶವಾಗುತ್ತಿದೆ ಎಂಬ ವಾದವನ್ನು ಅನೇಕರು ಒಪ್ಪುವುದಿಲ್ಲ. ಕೈಗಾರಿಕೀಕರಣದಿಂದ ಜಾನಪದದ ಸೃಷ್ಟಿ ಹೊಸ ಹೊಸ ರೂಪಗಳನ್ನು ಪಡೆಯುತ್ತದೆ ಎಂಬ ಅಭಿಪ್ರಾಯವೂ ಇದೆ)

೪

೧೯೮೦ ರಲ್ಲಿ ನಡೆದ ಯುನೆಸ್ಕೋ ವಾರ್ಷಿಕಾಧಿವೇಶನದಲ್ಲಿ ಈ ಶಿಫಾರಸುಗಳನ್ನೊಳಗೊಂಡ ಮಸೂದೆಯನ್ನು ಒಪ್ಪಿಕೊಳ್ಳಲಾಯಿತು. ಇದರಿಂದಾಗಿ ಎಲ್ಲಾ ದೇಶಗಳೂ ಅನುಸರಿಸಬಹುದಾದ ಏಕರೂಪದ ಸಂಹಿತೆಯೊಂದು ರೂಢಿಗೆ ಬಂದಂತಾಗುತ್ತದೆ. ಇದರಿಂದಾಗಿ ವಿವಿಧ ದೇಶಗಳ ನಡುವೆ ಸಮಾನತೆಯ ಆಧಾರದ ಮೇಲೆ ಪರಸ್ಪರ ಕೊಳು-ಕೊಡೆಗಳು ಸಾಧ್ಯವಾಗುವ ನಿರೀಕ್ಷೆ ಇದೆ. ಇದರಲ್ಲಿ ಜಾನಪದದ ಮಹತ್ವವನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಜಗತ್ತಿನ ಸಂಸ್ಕೃತಿಯನ್ನಾಗಲಿ, ಇತಿಹಾಸವನ್ನಾಗಲಿ ಅದರ ಪೂರ್ಣ ಸ್ವರೂಪದಲ್ಲಿ ಅರ್ಥ ಮಾಡಿಕೊಳ್ಳಲು ಮತ್ತು ವಾಸ್ತವ ಸ್ಥಿತಿಯನ್ನು ತಿಳಿಯಲು ಶಿಷ್ಟ ಸಂಸ್ಕೃತಿ ಹಾಗೂ ಶಿಷ್ಟ ಸಂಸ್ಕೃತಿಗಳಷ್ಟೇ ಜನಪದ ಸಂಸ್ಕೃತಿ ಮತ್ತು ಜನಪದ ಇತಿಹಾಸವೂ ಮುಖ್ಯವಾದವು. ಸಾಹಿತ್ಯ, ಸಂಗೀತ, ಕಲೆ, ವೈದ್ಯ ಸಂಪ್ರದಾಯ, ನಂಬಿಕೆ, ಭೌತಿಕ ಸಂಸ್ಕೃತಿ – ಮೊದಲಾದ ಎಲ್ಲಾ ಸಂಸ್ಕೃತಿಗಳಿಗೂ ಇದು ಅನ್ವಯವಾಗುತ್ತದೆ. ಶಿಷ್ಟ ಸಂಸ್ಕೃತಿಗೆ ಜನಪದ ಸಂಸ್ಕೃತಿ ಪೂರಕವಾದುದು ಹಾಗೂ ಅಷ್ಟೇ ಮುಖ್ಯವಾದುದು. ವಿಭಿನ್ನ ಸಂಸ್ಕೃತಿಗಳ ಜನರನ್ನು ಒಟ್ಟಿಗೆ ತರಲು ಹಾಗೂ ಅವರ ಸಾಂಸ್ಕೃತಿಕ ಅನನ್ಯತೆಯನ್ನು ದೃಢೀಕರಿಸಲು ಜಾನಪದ ಬಹಳ ಮುಖ್ಯವಾದುದು

ಎಲ್ಲಾ ದೇಶಗಳ ಸರ್ಕಾರಗಳೂ ತಮ್ಮ ಜನಪದ ಸಂಸ್ಕೃತಿಯನ್ನು ರಕ್ಷಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕೆಂದು ಈ ಮಸೂದೆಯಲ್ಲಿ ಅಂಗೀಕರಿಸಲಾಗಿದೆ. ಜಾನಪದ ಸಂರಕ್ಷಣೆಗೆ ಸಂಬಂಧಿಸಿದಂತೆ ಎರಡು ಬಗೆಯ ಪರಿಕಲ್ಪನೆಗಳನ್ನು ಒಪ್ಪಿಕೊಳ್ಳಲಾಗಿದೆ.

1 Conservation : ಇದು ಜಾನಪದದ ದಾಖಲಾತಿಗೆ ಸಂಬಂಧಪಟ್ಟಿದ್ದು. ದಾಖಲು ಮಾಡುವುದರ ಮೂಲಕ ಜಾನಪದವನ್ನು ಒಂದು ರೀತಿಯಲ್ಲಿ ಹಿಡಿದಿಡಬಹುದು ಅಷ್ಟೇ. ಜೀವಂತವಾದ ಜಾನಪದವನ್ನು ಅದರ ನಿರಂತರ ಪರಿವರ್ತನೆಯನ್ನು ಎಲ್ಲಾ ಹಂತಗಳಲ್ಲಿಯೂ ಸಂರಕ್ಷಿಸಲು ಸಾಧ್ಯವಿಲ್ಲ ಎಂಬುದನ್ನು ಒಪ್ಪಿಕೊಳ್ಳಲಾಗಿದೆ. ಆದರೆ ದಾಖಲಾತಿ ಮಾಡುವುದರಿಂದ ಒಂದು ರೀತಿಯಲ್ಲಿ ಮುಂದಿನ ಅಧ್ಯಯನಗಳಿಗಾಗಿ ಜಾನಪದವನ್ನು ಸಂರಕ್ಷಿಸಿದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ದೇಶವೂ ತನ್ನ ಜಾನಪದವನ್ನು ಪ್ರಾದೇಶಿಕ ಹಾಗೂ ರಾಷ್ಟ್ರೀಯ ಸಾಂಸ್ಕೃತಿಕ ಆಸ್ತಿ ಎಂದು ಪರಿಗಣಿಸಿ ಪ್ರಾದೇಶಿಕ ವಸ್ತು ಸಂಗ್ರಹಾಲಯಗಳನ್ನೂ (Museum) ಮತ್ತು ದಾಖಲಾತಿ ಸಂಗ್ರಹಾಲಯಗಳನ್ನೂ (Archives) ರೂಪಿಸಬೇಕು. ರಾಷ್ಟ್ರಮಟ್ಟದಲ್ಲಿ ಆ ರಾಷ್ಟ್ರದ ಎಲ್ಲಾ ಪ್ರಾದೇಶಿಕ ವಸ್ತು ಸಂಗ್ರಹಾಲಯ ಮತ್ತು ದಾಖಲಾತಿ ಸಂಗ್ರಹಾಲಯಗಳಲ್ಲಿರುವ ಮಾಹಿತಿಯನ್ನು ಕುರಿತ ಕೇಂದ್ರೀಯ ವ್ಯವಸ್ಥೆಯನ್ನು ರೂಪಿಸಬೇಕು. ಒಂದು ರಾಷ್ಟ್ರದ ಜಾನಪದವನ್ನು ಅಭ್ಯಸಿಸುವಾಗ ಕೇಂದ್ರೀಯ ಮಾಹಿತಿ ಸಂಗ್ರಹಾಲಯದಲ್ಲಿ ವಿಷಯವನ್ನು ತಿಳಿದು ತಮಗೆ ಅಗತ್ಯಬೀಳುವ ಪ್ರಾದೇಶಿಕ ವಸ್ತು ಸಂಗ್ರಹಾಲಯ ಅಥವಾ ದಾಖಲಾತಿ ಸಂಗ್ರಹಾಲಯಗಳಿಗೆ ಹೋಗಿ ಅಭ್ಯಾಸ ಮಾಡಬೇಕು.

Preservation : ಇದರ ಕಲ್ಪನೆ Conservationಗಿಂತಲೂ ಭಿನ್ನವಾದುದು. ಜನಪದ ಸಾಹಿತ್ಯ, ಸಂಗೀತ, ಕಲೆ ಮೊದಲಾದುವು ಜನಜೀವನದಲ್ಲಿ ಮುಂದುವರಿಯಲು ಪ್ರೋತ್ಸಾಹ ನೀಡುವುದು. ಈ ಮೂಲಕ ಜಾನಪದದ ಸೃಜನಶೀಲ ನೆಲೆಗಳನ್ನು ಪ್ರೋತ್ಸಾಹಿಸುವುದು. ಪ್ರತಿಯೊಂದು ಸಮಾಜಕ್ಕೂ ವಿಶಿಷ್ಟವಾದ ಲೋಕದೃಷ್ಟಿ (World view) ಇರುತ್ತದೆ ಎಂಬುದನ್ನು ಒಪ್ಪುವುದು ಮತ್ತು ಗೌರವಿಸುವುದು. ವಿಭಿನ್ನತೆಯಲ್ಲಿ ಏಕತೆ ಎಂಬ ತತ್ವದ ಮೇಲೆ ಇದು ಅವಲಂಬಿತವಾಗಿದೆ.

ಈ ಮಸೂದೆಯಲ್ಲಿ ಜಾನಪದಕ್ಕೆ ಸಂಬಂಧಿಸಿದ ನಿರೂಪಕ (Informant), ಕಲಾವಿದ (Artist), ಸಂಗ್ರಹಕಾರ (Collector) ಹಾಗೂ ದಾಖಲಾತಿ

ಸಂಗ್ರಹಾಲಯ (Archive) - ಇವುಗಳಲ್ಲಿ ಪ್ರತಿಯೊಬ್ಬರ ಹಕ್ಕನ್ನು ರಕ್ಷಿಸುವುದು. ಹಾಗೆಯೇ ಜಾನಪದ ಸೃಷ್ಟಿಗೊಂಡ ಸಮಾಜದ ಹಕ್ಕನ್ನೂ ರಕ್ಷಿಸುವುದು, ಆ ಸಮಾಜದೊಳಗೆ ನಿರೂಪಕ ಮತ್ತು ಕಲಾವಿದನ ಹಕ್ಕನ್ನು ಗೌರವಿಸುವುದು. ಜಾನಪದದಲ್ಲಿ ಇವರೆಲ್ಲರ ಹಕ್ಕನ್ನು ರಕ್ಷಿಸಬೇಕಾದದ್ದೂ ಅಗತ್ಯವಾಗಿದೆ. ವಿವಿಧ ದೇಶಗಳ ನಡುವೆ ಜಾನಪದ ಸಂಬಂಧವಾದ ಸಾಂಸ್ಕೃತಿಕ ವಿನಿಮಯಗಳು ವಿಚಾರ ಸಂಕಿರಣಗಳು, ಕಾರ್ಯಾಗಾರಗಳೂ ಮೊದಲಾದುವನ್ನು ಪ್ರೋತ್ಸಾಹಿಸುವ ಅಂಶಗಳೂ ಸೇರಿವೆ.

ಈ ಮಸೂದೆ ಅಂಗೀಕೃತವಾಗಿರುವುದರಿಂದ ಮುಂದಿನ ದಿನಗಳಲ್ಲಿ ಪ್ರತಿಯೊಂದು ಸದಸ್ಯ ರಾಷ್ಟ್ರವೂ ಜಾನಪದ ಕ್ಷೇತ್ರಕ್ಕೆ ಯುನೆಸ್ಕೋ ನೆರವಿನಿಂದ ಹೆಚ್ಚು ಗಮನ ಕೊಡುವುದು ಸಾಧ್ಯವಾಗುತ್ತದೆ. ಜಾನಪದದಲ್ಲಿ ಮೂಢನಂಬಿಕೆಗಳಿವೆ ನಿಜ. ಆದರೆ ಎಲ್ಲವೂ ಮೂಢನಂಬಿಕೆಗಳಲ್ಲ. ಜಾನಪದ ಅಧ್ಯಯನದಿಂದ ಕಲಿಯ ಬೇಕಾದ ಅಂಶಗಳೂ ಇವೆ. ಜಾನಪದದಲ್ಲಿ ಮೌಢ್ಯವನ್ನು ಪುಷ್ಟೀಕರಿಸುವ ಸಮಾಜದ ಹಿತಕ್ಕೆ ಮಾರಕವಾಗುವ ಅಂಶಗಳನ್ನು ಕೈಬಿಟ್ಟು ಒಳ್ಳೆಯ ಅಂಶಗಳನ್ನು ಉಳಿಸಿಕೊಳ್ಳ ಬಹುದು. ಸಂರಕ್ಷಣೆ ಎಂದರೆ ಎಲ್ಲವನ್ನೂ ರಕ್ಷಿಸಬೇಕೆಂಬ ಅರ್ಥವಲ್ಲ. ಇದು ಆಯಾ ಸಮಾಜದ, ಆಯಾ ದೇಶದ ವಿವೇಚನೆಗೆ ಬಿಟ್ಟ ವಿಷಯವೆಂದು ಯುನೆಸ್ಕೋ ಪರಿಗಣಿಸುತ್ತದೆ. ಈ ದೃಷ್ಟಿಯಿಂದ ಯುನೆಸ್ಕೋದ ಈ ಮಸೂದೆ ಜಗತ್ತಿನ ಜಾನಪದದ ಸಂಗ್ರಹ, ಸಂರಕ್ಷಣೆ ಮತ್ತು ಸಂಶೋಧನೆಯ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣ ಘಟನೆಯಾಗಿದೆ. ಇದು ಕೇವಲ ಧನ ಸಹಾಯದ ವಿಷಯ ಮಾತ್ರವಲ್ಲ. ಜಾನಪದ ಸಂಸ್ಕೃತಿ ಶಿಷ್ಟ ಸಂಸ್ಕೃತಿಗೆ ಪೂರಕವಾದದ್ದು ಇದು ಜಗತ್ತಿನ ಬೌದ್ಧಿಕ ಆಸ್ತಿ, (Intellectual Property of the World) ಎಂದು ಯುನೆಸ್ಕೋ ಒಪ್ಪಿಕೊಂಡು ಕೊಟ್ಟಿರುವ ಉನ್ನತ ಸ್ಥಾನಮಾನದ ವಿಷಯವೂ ಆಗಿದೆ. ಇದರಿಂದಾಗಿ ಜಾನಪದಕ್ಕೆ ಹಾಗೂ ಅದರ ಅಧ್ಯಯನದ ವಿಷಯವಾದ ಜಾನಪದ ವಿಜ್ಞಾನಕ್ಕೂ (Folkloristics) ಮಹತ್ವ ದೊರೆತಂತಾಗಿದೆ. ಜಾನಪದ ವಿಜ್ಞಾನ ಇತರ ಸಮಾಜ ವಿಜ್ಞಾನಗಳಾದ ಸಮಾಜ ವಿಜ್ಞಾನ, ಮಾನವ ವಿಜ್ಞಾನ, ಭಾಷಾ ವಿಜ್ಞಾನ ಗಳಂತೆ ಒಂದು ಸಮಾಜ ವಿಜ್ಞಾನವಾಗಿ ಬೆಳೆಯಲು ನೆರವಾಗುತ್ತದೆ. ಜಗತ್ತಿನಲ್ಲಿರುವ ೩೦೦೦ ಕ್ಕೂ ಹೆಚ್ಚು ಭಾಷೆಗಳಲ್ಲಿ ೨೫೦೦ ಕ್ಕೂ ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ಭಾಷೆಗಳಿಗೆ ಲಿಪಿಯಿಲ್ಲ. ಹೀಗಾಗಿ ಈ ಭಾಷೆಗಳಲ್ಲಿರುವ ಏಕೈಕ ಸಾಹಿತ್ಯ ಎಂದರೆ ಜನಪದ ಸಾಹಿತ್ಯ, ಸಂಸ್ಕೃತಿ ಎಂದರೆ ಜನಪದ ಸಂಸ್ಕೃತಿ, ಕಲೆ ಎಂದರೆ ಜನಪದ ಕಲೆ

ಎಂದು ಹೇಳಬೇಕು. ಈ ಭಾಷೆಗಳನ್ನಾಡುವ ಜನರಿಗಿರುವ ಪರಂಪರೆ ಎಂದರೆ ಜನಪದ ಪರಂಪರೆ. ಇದು ಅವರ ಅನನ್ಯತೆಯ (Identity) ಪ್ರಶ್ನೆಯೂ ಆಗಿದೆ. ನಗರೀಕರಣದಿಂದ ಹಾಗೂ ಕೈಗಾರಿಕೀಕರಣದಿಂದ ರೂಪುಗೊಂಡಿರುವ ಅಂತರ ರಾಷ್ಟ್ರೀಯ ಯಜಮಾನ ಸಂಸ್ಕೃತಿಯ ಪ್ರವಾಹದಲ್ಲಿ ಈ ಸಂಸ್ಕೃತಿಗಳು ಕೊಚ್ಚಿಹೋಗದೆ ಧೃಢವಾಗಿ ನಿಲ್ಲಲು ಹಾಗೂ ಈ ಸಾಮಾಜಿಕ ವರ್ಗಗಳು ತಮ್ಮ ಜಾನಪದದಿಂದಲೇ ಸ್ಫೂರ್ತಿ ಪಡೆದು ಅನನ್ಯತೆಯನ್ನು ಉಳಿಸಿಕೊಳ್ಳಲು ಯುನೆಸ್ಕೋ ಶಿಫಾರಸುಗಳ ಮಸೂದೆ ನೆರವಾಗುವುದೆಂದು ಆಶಿಸಲಾಗಿದೆ.

ಆಧಾರ ಸಾಮಗ್ರಿ :

1. ಪ್ರೊ. ಲೋರಿಪಾಂಕೊ The Final Text of the Recommendation for the Safeguarding of Folklore NIF News Letter Vol 17, 2-3/ June 1989.
2. ಪ್ರೊ. ಲೋರಿಹಾಂಕೊ The UNESCO Process of Folklore. NIF News Letter 3/1984.

O

ನಮ್ಮ ಸಮಕಾಲೀನರಾದ ಕೆಲವು ಲೇಖಕರು ಜಾನಪದ ತಂತ್ರಗಳನ್ನು ಬಳಸಿ ನಾಟಕ, ಕವಿತೆ ಮುಂತಾದವನ್ನು ಬರೀತಾ ಇದ್ದಾರೆ. ಆದರೆ ಇವು ನಮ್ಮ ಗ್ರಾಮೀಣ ಪರಿಸರದಲ್ಲಿ ಪ್ರಭಾವ ಬೀರ್‍ತವೆ ಅನ್ನೋದು ಅನುಮಾನ. ಏಕೆಂದ್ರೆ, ಇಡೀ ರಾತ್ರಿ ನಾಟಕ ವೊಂದನ್ನು ನೋಡುವ ಶಕ್ತಿಯನ್ನು ಪಡೆದುಕೊಂಡಿರೋ ಗ್ರಾಮೀಣ ಪ್ರೇಕ್ಷಕನನ್ನು ಅಷ್ಟು ಹೊತ್ತು ಹಿಡಿದು ಕೂಡಿಸುವಂತಹ ಆಧುನಿಕ ಜಾನಪದ ಪ್ರಜ್ಞೆಯುಳ್ಳ ನಾಟಕವೊಂದನ್ನು ನಾವು ಕಾಣೋಕೆ ಸಾಧ್ಯವಾಗ್ತಾ ಇಲ್ಲ. ಇದಕ್ಕೆ ಇನ್ನೊಂದು ಕಾರಣವನ್ನೂ ಕೊಡಬಹುದು. ನಮ್ಮ ಗ್ರಾಮೀಣ ಪರಿಸರದಲ್ಲಿಯ ತುಂಬಾ ಸಮರ್ಥವಾದಂತಹ ರೂಪಕ ಶಕ್ತಿ ಇರುವಂತಹ ಅಭಿವ್ಯಕ್ತಿ, ವಿಶಿಷ್ಟವಾದ ಲಯಗಾರಿಕೆ ಇರುವಂತಹ ನೆಲೆ ಇವುಗಳೆಲ್ಲ ಸಂಪದ್ಭರಿತವಾದದ್ದೇ ಆಗಿದೆ. ಆದರೆ ಒಬ್ಬ ಆಧುನಿಕ ಲೇಖಕ ಸೃಷ್ಟಿಸೋ ಕೃತಿ ಅಷ್ಟೆಲ್ಲಾ ಸಂಪದ್ಭರಿತವಾಗದೆ ಇರೋದರಿಂದ ಸಂವಹನ ಕಷ್ಟವಾಗ್ತಿದೆ........ ಆದ್ದರಿಂದ ಇವೊತ್ತು ಜಾನಪದ ಅನ್ನೋದು ಕೇವಲ ಮ್ಯೂಸಿಯಂನ ರೀತಿಯಲ್ಲಿ ಬರ್‍ತಿದೆಯೇ ಹೊರತು, ಅದರ ವಿಶಿಷ್ಟವಾದ ಕ್ರಿಯಾತ್ಮಕ ನೆಲೆಯಲ್ಲಿ ಅಲ್ಲ....

ಕಿ. ರಂ. ನಾಗರಾಜ

(ಭಾರತೀಯತೆ ಮತ್ತು ಕನ್ನಡ ಲೇಖಕ)

ಪುರಾಣ ಮತ್ತು ಆಧುನಿಕ ಕನ್ನಡ ಸಾಹಿತ್ಯ

● ಲಕ್ಷ್ಮೀಶ ತೋಳ್ಪಾಡಿ

ಮಲ್ಲಾಡಿಹಳ್ಳಿಯಲ್ಲಿ ಜರುಗಿದ ಶ್ರೀ ರಾಘವೇಂದ್ರ ಸ್ವಾಮೀಜಿಯವರ ಶತಮಾನೋತ್ಸವ ಸಂದರ್ಭದ ಸಂಸ್ಕೃತ ಸಮ್ಮೇಳನದಲ್ಲಿ 'ಪುರಾಣ ಮತ್ತು ಆಧುನಿಕ ಕನ್ನಡ ಸಾಹಿತ್ಯ, ಎಂಬ ವಿಷಯವನ್ನು ಕುರಿತು ನಾನು ಮಾತನಾಡಬೇಕಾಗಿತ್ತು. ಅದಕ್ಕಾಗಿ ನಾನು ಮಾಡಿಕೊಂಡ ಟಿಪ್ಪಣಿಗಳು ಇವು. ಇವುಗಳನ್ನು ಬೆಸೆದು ಒಂದು ಲೇಖನವಾಗಿಸುವುದಕ್ಕಿಂತ, ಹೀಗೆ ಟಿಪ್ಪಣಿಗಳ ರೂಪದಲ್ಲೇ ಮಂಡಿಸಿದರೂ, ಒಳಗಿನ ಸಮನ್ವಯ ಸ್ಪಷ್ಟವಾಗುವುದರಿಂದ, ಅನುಚಿತವಾಗಲಾರದು ಎಂದು ತಿಳಿದಿದ್ದೇನೆ. -ಲೇ

'ಪುರಾಣ' ಎಂದರೆ ಹಳೆಯದು, ಪ್ರಾಚೀನ ಎನ್ನುವುದು ಶಬ್ದಶಃ ಅರ್ಥ. ಪುರಾಣ ಎಂಬ ವಾಙ್ಮಯ ಪ್ರಕಾರ ಕೂಡ ಇದೆ. ಅಲ್ಲೂ 'ಹಳೆಯದು' ಎನ್ನುವ ಅರ್ಥದ ಭಾರ ಇದೆ. 'ಮಹಾಭಾರತ'ವೇನೋ ಇತಿಹಾಸವೆಂದೇ ಪ್ರಖ್ಯಾತ. ಜಯೋನಾಮ ಇತಿಹಾಸೋಯಂ.. ಆದರೆ ಮಹಾ ಭಾರತದಲ್ಲೂ ಪೌರಾಣಿಕ ಅಂಶಗಳು ಬೇಕಾದಷ್ಟಿವೆ. ಹಾಗೆಯೇ ಭಾಗವತಾದಿ ಪುರಾಣಗಳಲ್ಲಿ ಇತಿಹಾಸದ ಅಂಶಗಳೂ ಸೇರಿದ್ದಾವೆ. ಮತ್ತು ಪುರಾಣೇತಿಹಾಸಗಳ ರಚನೆ ವ್ಯಾಸರೇ, ಓರ್ವ ವ್ಯಾಸರೇ ಮಾಡಿದ್ದು ಎಂದು ಪರಂಪರೆ ಹೇಳುತ್ತದೆ. ಇದು ತಪ್ಪಿರಬಹುದು. ಅಡ್ಡಿ ಇಲ್ಲ. ಅರ್ಥವೇನೆಂದರೆ ಇವೆಲ್ಲ ಒಂದೇ ಸೃಜನಶೀಲ ಪರಂಪರೆ ಎಂಬುದು.

ಇದೇ ಚಿಂತನೆಯ ಇನ್ನೊಂದು ಮಗ್ಗಲು, ಪುರಾಣ ಮತ್ತು, ಆಧುನಿಕ ಎಂದು ಕಾಲಖಂಡಗಳ ಸ್ಪಷ್ಟ ವ್ಯತ್ಯಾಸದಿಂದ ನೋಡುವುದು ಭಾರತೀಯ ದೃಷ್ಟಿಗೆ ತಾತ್ವಿಕವಾಗಿ ಒಪ್ಪಿತವಾದದ್ದಲ್ಲ ಎನ್ನುವುದು. ಐತಿಹಾಸಿಕವಾಗಿಯೇ ಪ್ರಾಚೀನತಮ ರಚನೆಗಳಾದ ವೇದಗಳನ್ನು 'ಪುರಾಣ' 'ಹಳೆಯದು' ಎಂದು ಯಾರೂ ಕರೆದದ್ದಿಲ್ಲ. ಬದಲಾಗಿ "ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬ್ರಂಹಯೇತ್"—ಇತಿಹಾಸ ಮತ್ತು ಪುರಾಣ ಗಳಲ್ಲಿ ವೇದಗಳನ್ನೇ ವಿಸ್ತರಿಸಿ ಎಂದೇ ಸೂತ್ರ. ಉಪಬ್ರಂಹಣ ಎಂದರೆ ಸೂಕ್ಷ್ಮವಾಗಿ

ಬೀಜರೂಪವಾಗಿ ಇದ್ದುವನ್ನು ವಿಸ್ತಾರವಾಗಿ ಬೆಳೆಸುವುದು ಎಂದರ್ಥ. ಇತಿಹಾಸದಲ್ಲಿ ವೇದಾರ್ಥ ವಿಸ್ತಾರವೇ ಗುರಿಯಾದರೆ, ವೇದಗಳ ಗತಿ ಹೇಗೂ ಆಗಲಿ. ಆ ಇತಿಹಾಸದ ಗತಿ ಏನು?

ಎಂದರೆ ಒಬ್ಬ ಮನುಷ್ಯನ ಕಾಣ್ಕೆ ಮನುಕುಲದ ಕಾಣ್ಕೆಯಾಗಬಲ್ಲದು ಎನ್ನುವುದೇ ಇಂಗಿತ. ಒಳನೋಟದಲ್ಲಿ ತಿಳಿವ ಸತ್ಯ ಮಾನವ ಸಮಾಜದ ಸತ್ಯವಾಗಿರುತ್ತದೆ. ಈ ನಿಲುವು ಜ್ಞಾನದ ಹರಿಗೆಡದ ಪರಂಪರೆಯನ್ನು ಸೃಜಿಸುವುದರ ಜತೆಗೆ; ಸ್ವಲ್ಪ ಜಡ ಗೊಂಡಾಗ, ಜ್ಞಾನದ ವ್ಯವಸ್ಥಿತ ಕೇಂದ್ರೀಕರಣವೂ ಆಗಿಬಿಡಬಲ್ಲುದು. ಆಗಿದೆ. ಇರಲಿ.

ಅಚ್ಚರಿ ಎಂದರೆ ಸಾಹಿತ್ಯಕ್ಕು ಇದೇ ಮಾತು ಅನ್ವಯಿಸುತ್ತದಲ್ಲವೆ ? ಕವಿಯ ಕಾಣ್ಕೆ ಓರ್ವ ವ್ಯಕ್ತಿಯ ಕಾಣ್ಕೆ ಅಲ್ಲ. ಅದು ಒಂದು ಜನಾಂಗದ ಕಾಣ್ಕೆ ಕೂಡ.

ಮಹಾಭಾರತವನ್ನು 'ಪಂಚಮೋವೇದಃ' ಎಂದು ಕರೆದರು. ಉಳಿದಂತೆ ಯಾವ ಕೃತಿಗೂ ಈ ಪ್ರಶಸ್ತಿ ಇಲ್ಲ. ರಾಮಾಯಣಕ್ಕೂ ಕೂಡಾ ಇಲ್ಲ. ಮಹಾಭಾರತ ಇತಿಹಾಸ ವೆಂದು, ಅತಏವ ಲೌಕಿಕದ ಜಟಿಲ, ಸಂಕೀರ್ಣ ಚಿತ್ರವೆಂದು ಎಲ್ಲರೂ ಬಲ್ಲರು. ಇಂಥ ಒಂದು ಚಿತ್ರಣಕ್ಕೆ ಐದನೆಯ ವೇದ ಎಂದು ಮಹತಿ. ಇದು ಅಚ್ಚರಿಯಲ್ಲವೆ ?

ಹೌದು. ಲೌಕಿಕ ಮತ್ತು ಆಧ್ಯಾತ್ಮಿಕ ಎಂದು ನೀವು ಖಂಡ ವಿಭಾಗ ಮಾಡಿಯೆ ನೋಡುವವರಾದರೆ ಅಚ್ಚರಿಯೇ. ಆದರೆ ಆಧ್ಯಾತ್ಮಿಕ ಎನ್ನುವುದು ಮನುಷ್ಯನ ಲೌಕಿಕ ಅಸ್ತಿತ್ವದ್ದೇ ಒಂದು ಆಯಾಮ ಎನ್ನುವಿರಾದರೆ ಏಕೆ ಅಚ್ಚರಿ ?

ವಿಭಜಿಸುವುದೇ ವಿಷಾದನೀಯವಾದ ಅಚ್ಚರಿ. ಲೌಕಿಕ ಮತ್ತು ಅಧ್ಯಾತ್ಮ ಎಂದು ಬೇರ್ಪಡಿಸಿ ನೋಡುವ ನೋಟಕ್ಕೆ ಭಾರತೀಯತೆ ತನ್ನನ್ನು ತಾನು ತೆರೆದುಕೊಳ್ಳಲಾರದು. ಆದರಿಂದಲೇ ಆಚಾರ್ಯತ್ರಯರಲ್ಲಿ ಓರ್ವರಾದ ಆನಂದತೀರ್ಥರು 'ಭಾರತ' ಎಂಬ ಇತಿಹಾಸವನ್ನು ಇದು ಇಡಿಯಾಗಿ ಅಧ್ಯಾತ್ಮನಿಷ್ಠವಾದುದು ಎಂದು ಕರೆದರು. (ಏವಂ ಅಧ್ಯಾತ್ಮನಿಷ್ಠಂ ಹಿ ಭಾರತಂ ಸರ್ವಮುಚ್ಯತೆ) ಇತಿಹಾಸ ಪುರಾಣಗಳಲ್ಲಿ ವೇದವೇ ವಿಸ್ತೃತವಾಗಿ ಹಬ್ಬಿರುವುದು ಎಂದರೆ ಅದು ಇದೇ ನೋಟವೇ.

ಹೇಗೆ 'ವರ್ತಮಾನ' ಎನ್ನುವುದು ಭೂತ ಭವಿಷ್ಯತ್‌ಗಳು ಬೆಸೆದ ಒಂದು ಕಾಲಖಂಡವಾಗಿ ನಮ್ಮ ಅನುಭವಕ್ಕೆ ಬರುವುದೋ ಹಾಗೇ ನಮ್ಮ ಅನುಭವಕ್ಕೆ ಬರುತ್ತಿರುವ 'ಆಧುನಿಕತೆ'ಯಲ್ಲಿ 'ಪುರಾಣ' ಉದ್ದಕ್ಕೆ ಮೈಚಾಚಿರುತ್ತದೆ.

ರಾಜಾ ರಾಮಮೋಹನರಾಯ್, ಸಂಪ್ರದಾಯ ಜಡಗೊಂಡ ಭಾರತೀಯನ ದೃಷ್ಟಿಕೋನದಲ್ಲಿ ತೀವ್ರ ಬದಲಾವಣೆ, ಜೀವನಪರ ಬದಲಾವಣೆ, ಕ್ರಾಂತಿಕಾರೀ ಬದಲಾವಣೆಯಾಗಬೇಕೆಂದು ಬಯಸಿ ಹೋರುತ್ತಿರುವಾಗ 'ಉಪನಿಷತ್'ಗಳನ್ನು ಮಾರ್ಗದರ್ಶಕವಾಗಿ ಸೂಚಿಸಿದ್ದರು. ಸಮಾಜ ಸೇವಕ ಈಶ್ವರಚಂದ್ರ ವಿದ್ಯಾಸಾಗರ, ವಿಧವಾ ವಿವಾಹದ ತಮ್ಮ ಪ್ರಯತ್ನದಲ್ಲಿ 'ಪರಾಶರಸ್ಮೃತಿ'ಯ ಸಹಾಯ ಪಡೆದಿದ್ದರು. ಜಾತಿಯನ್ನು ಲೆಕ್ಕಿಸದ ದಯಾನಂದ ಸರಸ್ವತಿ ವೇದ ಧರ್ಮದ ಉಜ್ಜೀವನವನ್ನು ಹೇಳುತ್ತಿದ್ದರು. ಆಧುನಿಕತೆಯ ಮೈಯಲ್ಲಿ ಪುರಾಣ ಹೊಳೆಯುತ್ತಿದೆಯಾದರೂ, ಇಲ್ಲಿ ಗೋಜಲು, ವಿರೋಧಾಭಾಸ ಕೂಡ ತಪ್ಪಿದ್ದಲ್ಲ. ಅತ್ಯಂತ ಆಧುನಿಕನಾದ ಗಾಂಧಿ ಈ ಗೋಜಲನ್ನು ತಪ್ಪಿಸಿಕೊಳ್ಳಲೋ ಎಂಬಂತೆ 'ಅಂತರ್ವಾಣಿ'ಯ ಆಲಂಬನವನ್ನು ಹೇಳುತ್ತಿದ್ದರು. ಲೌಕಿಕ ಮತ್ತು ಅಧ್ಯಾತ್ಮ ಗಾಂಧಿಯಲ್ಲಿ ಮರಳಿ ತನ್ನ ಒಮ್ಮೈಯನ್ನು ಪಡೆಯಿತು. ಮತ್ತು 'ಅಂತರ್ವಾಣಿ' ಎಂಬ ಮಾತು ವೇದೋಪನಿಷತ್‌ಗಳಿಗೂ ಸಮುಚಿತವಾಗಿ ಅನ್ವಯವಾಗುವಂಥದೇ. (ಶೃತಿ ಎಂದರೆ ಕೇಳಿ ಬಂದದ್ದೇ) 'ಒಳದನಿ' ಎಂಬ ಈ ಮಾತನ್ನು ಹೆಚ್ಚು ಲೌಕಿಕಗೊಳಿಸುತ್ತ, ಇತಿಹಾಸವಾಗಿಯೂ ಪುರಾಣಗಳಲ್ಲಿ ಪುರಾಣವಾದ ಮಹಾಭಾರತ ಈ ಮಾತನ್ನು ಹೇಳುತ್ತದೆ :

"ವೇದಾಂಶ್ಚ ವೇದ್ಯಂಚ ವಿಧಿಂಚ ಕೃತ್ಸ್ನಂ
ಅಥೋ ನಿರುಕ್ತಂ ಪರಮಾರ್ಥತಾಂ ಚ
ಸರ್ವಂ ಶರೀರಾತ್ಮನಿ ಯಃ ಪ್ರವೇದ
ತಸ್ಯ ಸ್ಮ ದೇವಾಃ ಸ್ಪೃಹಯಾತಿ ನಿತ್ಯಂ" (ಶಾಂತಿಪರ್ವ)

"ವೇದಗಳು, ವೇದಗಳಿಂದ ತಿಳಿಯಲ್ಪಡಬೇಕಾದುದು ಅದಕ್ಕಾಗಿ ಇರುವ ಆಚರಣೆಗಳು, ನಿರುಕ್ತ, ಅದರಿಂದ ಹೊಳೆಯುವ ನಿಜಾರ್ಥ–ಈ ಎಲ್ಲವನ್ನು ಯಾರು ತನ್ನ ದೇಹದಲ್ಲಿ (ಶರೀರ ಎಂಬ ಆತ್ಮದಲ್ಲಿ), ಜೈವಿಕ ಅನುಭವದಲ್ಲಿ ತಿಳಿಯುತ್ತಾನೆ, ಅಂಥವನನ್ನು ದೇವತೆಗಳೂ ಬಯಸುತ್ತಾರೆ. ಇದಕ್ಕಿಂತ ಕ್ರಾಂತಿಕಾರಕವಾದುದು ಇನ್ನೇನಿದೆ?

ಜ್ಞಾನದ ಎಲ್ಲ ಬಗೆಯ ಕೇಂದ್ರೀಕರಣವನ್ನೂ, ವ್ಯವಸ್ಥೆಯನ್ನೂ ಧಿಕ್ಕರಿಸಿ, ವಿಕೇಂದ್ರೀಕರಣದ ಕಟ್ಟಕಡೆಯ ಹಂತದಲ್ಲಿ ಹೊಳೆಯುವ ಜ್ಞಾನವೇ ನಿಜವಾದುದೆಂಬ ಉದ್ಘೋಷ ಇದು. ಲಕ್ಷಶ್ಲೋಕಗಳ ಮಹಾಭಾರತದ ಮಾತಿದು. ಪುರಾಣ ಎಲ್ಲಿ ಹೋಯಿತು ! ಆಧುನಿಕತೆ ಎಲ್ಲಿ ಬಂತು ! ಏನು ಕತೆ ! ಇನ್ನೊಂದು ಅಚ್ಚರಿ ಎಂದರೆ ಬುದ್ಧದೇವನ ಮಾತುಗಳಲ್ಲಿ ಇದಕ್ಕೆ ಸಂವಾದಿಯಾದ ಮಾತುಗಳಿವೆ. "ನ ತಾವತಾ

ಧಮ್ಮ ಧರೋ ಯಾವತಾ ಬಹುಭಾಸತಿ. ಯೋಚ ಅಪ್ಪಂ ಪಿ ಸುತ್ವಾನ, ಧರ್ಮಂ ಕಾಯೇನ ಪಸ್ಸತಿ" (ಧಮ್ಮಪದ)–ಧರ್ಮದ ಬಗ್ಗೆ ಬಹು ಮಾತಾಡುವವನು ಧರ್ಮವನ್ನು ತಿಳಿದವನಾಗಿರಬೇಕಿಲ್ಲ. ಅದರ ಬಗ್ಗೆ (ಧರ್ಮದ ಬಗ್ಗೆ) ಕೇಳಿಯೇ ಇರದಿದ್ದರೂ, ಯಾರು ಧರ್ಮವನ್ನು ತನ್ನ ದೇಹದಲ್ಲೇ (ಕಾಯೇನ) ಕಾಣುತ್ತಾನೆ, ಅವನೇ ನಿಜವಾಗಿ ತಿಳಿದವನು.

ವ್ಯಾಸ; ಬುದ್ಧರ ಅನುಭವದ ಹಿನ್ನೆಲೆಯಲ್ಲಿ ಅಲ್ಲದೆ ಸ್ವಲ್ಪ ಎಚ್ಚರಗೆಟ್ಟು ಈ ಮಾತುಗಳನ್ನು ನೋಡಿದರೆ ಇದು ಇಂದ್ರಿಯ ಪ್ರಪಂಚದ ಕೊಂಡಾಟವಾಗಿ ಜಡಲೋಕಾಯುತವಾಗಬಹುದು. ಹೌದು, ಲೋಕಾಯುತವೂ ಜಡವಾಗಬಹುದು. ಇನ್ನೂ ಒಂದು ಅಚ್ಚರಿ ಎಂದರೆ ದೇಹದ ಮೂಲಕವೇ ಜ್ಞಾನದ ಪರಮಸೀಮೆಯನ್ನು ಮುಟ್ಟಬಹುದೆನ್ನುವ ಈ ಸಂಸ್ಕೃತಿಯಲ್ಲಿ ಅದೇ ದೇಹವನ್ನು ಕೇಂದ್ರವಾಗಿಟ್ಟುಕೊಂಡು 'ಅಸ್ಪೃಶ್ಯತೆ' ಹುಟ್ಟಿದ್ದು.

ಭಕ್ತಿಯನ್ನು ಕೊಂಡಾಡುವಾಗ ಭಾಗವತಪುರಾಣ ಅಸ್ಪೃಶ್ಯತೆಯನ್ನು ನಿರಾಕರಿಸುತ್ತದೆ ಎನ್ನುವುದು ನಿಜ. ಆದರೆ ಇಂಥಲ್ಲಿ ಆಧುನಿಕ ಪ್ರಜ್ಞೆಯೇ ಹೆಚ್ಚು ಅಧ್ಯಾತ್ಮನಿಷ್ಠವಾದದ್ದು. ಅಸ್ಪೃಶ್ಯತೆಯ ಕುರಿತಾದ ಸಾಮಾಜಿಕವಾದ ಕ್ರೋಧವೇ ನಿಜವಾಗಿ ಆಧ್ಯಾತ್ಮಿಕವಾದುದು. ಏಕೆಂದರೆ ಸದ್ಯದ ಅರಿವನ್ನು ಮೀರಿ ಅದು ಹೊಸ ಅರಿವನ್ನು ಹಂಬಲಿಸುತ್ತದೆ. ಮತ್ತು ಅದು ದೇಹದ ಮೂಲಕವೇ ಪಡೆದ ಕಾಣ್ಕೆ.

ಪುರಾಣಗಳಲ್ಲಿ ಮತ್ತು 'ಭಾರತ'ದಲ್ಲಿ ಸ್ಫುಟವಾಗುವ ಸೃಜನಶೀಲತೆಯ ಸ್ವರೂಪ ಹೇಗಿದೆ ಮತ್ತು ಅದು ಸಾಹಿತ್ಯದಲ್ಲಿ ವ್ಯಕ್ತವಾಗುವ ಸೃಜನಶೀಲತೆಗೆ ಹೇಗೆ ಸಂವಾದಿಯಾಗಿದೆ ಎನ್ನುವುದು ನೋಡಬೇಕಾದದ್ದು. ಭಾಗವತ ಪುರಾಣದಲ್ಲಿ ಧ್ರುವನ ಕತೆ ಬರುತ್ತದಲ್ಲ. ಬಾಲಕ ಧ್ರುವ ತಪಸ್ಸು ಮಾಡಿದ. ಅದು ಫಲಿಸಿತು. ಆರಾಧ್ಯದೈವ ಕಣ್ಣೆದುರು ನಿಂತಾಗ ಧ್ರುವನ ಕರಣಗಳೆಲ್ಲ ನಿಶ್ಚಲವಾಗಿ ಆತ ಏನು ಮಾಡುವುದೆಂದೇ ತಿಳಿಯದೆ ನಿಂತ. ಆಗ ವಿಷ್ಣು ತನ್ನ ಶಂಖವನ್ನು ಧ್ರುವನ ಕಪೋಲಕ್ಕೆ ಮುಟ್ಟಿಸಿದ. ಧ್ರುವನ ಕಂಠದಿಂದ ಮಾತು ಹೊಮ್ಮಿತು. ಅದು ಹೀಗಿದೆ.

"ಯೋಂತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ
ಸಂಜೀವಯತಿ ಅಖಿಲ ಶಕ್ತಿಧರಃ ಸ್ವಧಾಮ್ನಾ
ಅನ್ಯಾಂಶ್ಚ ಹಸ್ತಚರಣ ಶ್ರವಣ ತ್ವಗಾದೀನ್
ಪ್ರಾಣಾನ್ ನಮೋ ಭಗವತೇ ಪುರುಷಾಯ ತುಭ್ಯಂ"

"ಯಾರು ನನ್ನೊಳ ಹೊಕ್ಕು ಮಲಗಿದೀ ಮಾತನ್ನು
ಉಸಿರಾಡುವಂತೆಸಗಿ ಮಹಿಮೆಯಿಂದ,
ನಡೆಯುವುದು; ಕೇಳುವುದು; ಮುಟ್ಟುವುದು – ಯಾರ ಕೃಪೆ
ಉಸಿರ ಉಸಿರಾಗಿಸಿದ ಅಧಿದೈವ, ಓ, ನಿನಗೆ ನಮನ"

ಮಾತು ಮೂಕ ಮೂಢವಾಗಿತ್ತು. ಅದೀಗ ಸಪ್ರಾಣಿಸಲ್ಪಟ್ಟು ಸೃಜನಶೀಲ ವಾಗಿದೆ. ಮಾತು ಮಾತ್ರವಲ್ಲ ಎಲ್ಲ ಇಂದ್ರಿಯ ವ್ಯಾಪಾರಗಳೂ, ಬಯಲ ಗಾಳಿ ಜೀವದ ಉಸಿರಾದದ್ದು ಕೂಡ ದೈವದ ಕರುಣೆ ಎಂದ.

ಇಲ್ಲಿ ಒಂದು ಸೂಕ್ಷ್ಮ ಇದೆ. ಮಾತು ಸೃಜಶೀಲವಾಯಿತು ಎಂದ. ಹಾಗೆ ಸೃಜನಶೀಲವಾದ ಈ ಮಾತು ಏನನ್ನು ಹೇಳುತ್ತದೆ ಎಂದರೆ ತನ್ನೊಳಗೂ ಇರುವ ಪ್ರೇರಕ ತತ್ವವೊಂದು ಹೀಗೆ ತನ್ನನ್ನು ಸೃಜನಶೀಲನನ್ನಾಗಿ ಮಾಡುತ್ತಿದೆ ಎಂದು.

ತನ್ನೊಳಗಿನ ಪ್ರೇರಣೆಯನ್ನು ತಿಳಿಯುವುದೇ ಸೃಜನಶೀಲತೆ. ಇದು ಏಕಕಾಲ ದಲ್ಲಿ ಅಂತರ್ಮುಖವೂ ಹೌದು ! ಬಹಿರ್ಮುಖವೂ ಹೌದು. ತನ್ನ ಪರಿಸರ, ಸಂಸ್ಕೃತಿ, ಸಮಾಜಗಳನ್ನು ತಿಳಿಯುವ ಪ್ರತಿಕ್ರಿಯೆಯಲ್ಲಿ ಈ ಸೃಜನಶೀಲ ಸಂಬಂಧ ಎರಡು ಮುಖಗಳಲ್ಲಿರಬಹುದು. ತಾದಾತ್ಮ್ಯದ ಮುಖ ಮತ್ತು ವಿಮರ್ಶಾತ್ಮಕ ಮುಖ. ಎರಡೂ ಜತೆಗೂಡಿಕೊಂಡೂ ಇರಬಹುದು. ಇರುತ್ತವೆ.

ಕನ್ನಡದ ಮಹಾ ಪುರಾಣ ಎಂದು ನಾನು ತಿಳಿದಿರುವ "ಮಲೆಗಳಲ್ಲಿ ಮದುಮಗಳು" ಕೃತಿಯಲ್ಲಿ ಕಾಣುತ್ತಿರುವ ತಾದಾತ್ಮ್ಯ ಸಂಬಂಧ. "ರಾಮಾಯಣ ದರ್ಶನಂ" ನೇರವಾಗಿ ರಾಮಾಯಣವನ್ನೇ ಆಧರಿಸಿದ್ದಾದರೂ, ಆಧುನಿಕ ದೃಷ್ಟಿಕೋಣ ಉಳ್ಳದ್ದಾದರೂ ನಿಜಕ್ಕೂ ಆಧುನಿಕವಾದದ್ದು, ಅಥವಾ ಆಧುನಿಕ – ಪುರಾಣ ಎಂಬ ಭೇದವನ್ನೆ ಅಳಿಸಿಬಿಡುವಷ್ಟು ಸಮೃದ್ಧವಾದದ್ದು "ಮಲೆಗಳಲ್ಲಿ ಮದುಮಗಳೇ"

ತನ್ನೊಳಗಿನ ಪ್ರೇರಣೆಯನ್ನು ಬಗೆಯುವುದೇ ಸೃಜನಶೀಲತೆ ಎಂಬ ಮಾತು ಎಂಥ ವಿಸ್ತಾರಕ್ಕೂ ಹಬ್ಬಬಹುದು. ಇದಕ್ಕೆ ವ್ಯಾಸರೇ ಸಾಕ್ಷಿ. 'ಭಾರತ'ದ ವಸ್ತು 'ಕಾಲ'. ಒಂದು ಯುಗವನ್ನೇ ಪ್ರೇರಿಸಬಲ್ಲ, ಪ್ರೇರಿಸುತ್ತಿರುವ 'ಕಾಲ'. ಧರ್ಮರಾಯನಿಗೆ ರಾಜಧರ್ಮವನ್ನು ಉಪದೇಶ ಮಾಡುತ್ತ ಭೀಷ್ಮ ಒಂದು ಕುತೂಹಲದ ಸಂಗತಿ

ಹೇಳುತ್ತಾನೆ. "ನ ರಾಜ್ಯಂ ನ ಚ ರಾಜಾಸೀತ್, ನ ದಂಡ್ಯೋನ ಚ ದಾಂಡಿಕಃ। ಧರ್ಮೇಣೈವ ಪ್ರಜಾಃ ಸರ್ವಾಃ ರಕ್ಷಂತಿಸ್ಮ ಪರಸ್ಪರಂ"॥ ಹಿಂದೇ ಒಂದು ಕಾಲ ಇತ್ತು. 'ರಾಜ್ಯ' ಎನ್ನುವುದೇ ಇರಲಿಲ್ಲ. ಆದ್ದರಿಂದ ರಾಜ ಎಂಬುವನೂ ಇರಲಿಲ್ಲ. ದಂಡಿಸುವವನಾಗಲೀ, ದಂಡನೆಗೆ ಒಳಗಾಗುವವನಾಗಲೀ ಇರಲಿಲ್ಲ. ಧರ್ಮದಿಂದಲೇ ಜನ ಪರಸ್ಪರ ರಕ್ಷಿಸಿಕೊಳ್ಳುತ್ತಿದ್ದರು. ಇದು ಒಂದು ಘಟ್ಟ. ತಾನು ಕಾಲ ಸ್ವರೂಪಿಯೇ ಎಂದು ಹೇಳಿಕೊಳ್ಳುವ ಕೃಷ್ಣ; ಅರ್ಜುನನಿಗೆ ಸಮಾಧಾನ ಹೇಳುತ್ತಾ "ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ, ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ" ಎನ್ನುತ್ತಾನೆ. 'ಸಾಧುಗಳನ್ನು ರಕ್ಷಿಸಲೆಂದು ಮತ್ತು ದುಷ್ಟರನ್ನು ಶಿಕ್ಷಿಸಲೆಂದು' ಇದು ಸ್ಪಷ್ಟವಾಗಿ ರಾಜಕೀಯ ಪರಿಭಾಷೆ ಇದು ಒಂದು ಘಟ್ಟ. ಹೀಗೆ ಹೇಳಿದ ಕೃಷ್ಣ ಏನನ್ನು ಸಾಧಿಸಿದರೂ, ಕೊನೆಗೆ ತನ್ನ ಕುಲದ ಜತೆ ತಾನೇ ನಾಶವಾಗಿ (ತಾನು ಯಾದವನೇ ಆದುದರಿಂದ) ಕಾಲದ ವಿನಾಶಕವಾದ ಪ್ರೇರಣೆ ಎದುರಿಲ್ಲದ್ದೆಂದು ಸೂಚಿಸಿದ. ಇದು ಒಂದು ಘಟ್ಟ. ಹಿಂಸೆಯ ಇಂಥ ಪ್ರೇರಣೆಗಳನ್ನು ಕೊಡುತ್ತಿರುವ, ಒಳಗಿಟ್ಟುಕೊಂಡಿರುವ ಕಾಲದ ಮುಂದೆ ಯಾವುದು ಸೃಜನಶೀಲತೆ ? ನಿರ್ಮಮವಾಗಿ ಇದಕ್ಕೆ ಸಾಕ್ಷಿಯಾಗಿರುವುದು – ಎನ್ನುವಂತಿದೆ ವ್ಯಾಸ. ನಿರ್ಮಮವಾಗಿ ಆ ಕಾಲವನ್ನು, ಆ ಇತಿಹಾಸವನ್ನು ದಾಖಲು ಮಾಡಿದ್ದರಲ್ಲಿಯೇ ಈ ಉತ್ತರ ಇದೆ.

ದಲಿತ ಲೇಖಕನೊಬ್ಬ ನಿರ್ಮಮನಾಗಿ ಬರೆಯುವುದು ಸಾಧ್ಯವೆ ? (ಕಾಲದ ಮುಂದೆ ಎಲ್ಲರೂ ದಲಿತರೇ ಎಂದು ವ್ಯಾಸ ಸೂಚಿಸುತ್ತಿದ್ದಾನೋ) ನಿಶ್ಚಿತವಾಗಿ ದಲಿತನ ಸ್ಫೂರ್ತಿ ಪ್ರಪಂಚ, ಪ್ರೇರಣಾ ಪ್ರಪಂಚ ಅಕ್ಷರ ಪ್ರಪಂಚವಲ್ಲ. ಆದರಿಂದ, ಅಕ್ಷರ ಪ್ರಪಂಚದ ಹಂಗಿಲ್ಲದೆ, ತನ್ನ ಪ್ರೇರಣೆಗೆ ನಿಷ್ಠನಾಗುವುದೇ ಎಲ್ಲವನ್ನು ಉತ್ತರಿಸುವ ದಾರಿ. ವೇದ ವೇದಾಂತವನ್ನು ತನ್ನ ಧಮನಿಯ ಸ್ಪಂದನದಲ್ಲಿ ತಿಳಿದಂಥ ಅನುಭವ ಅದು. ಇಂಥ ಅನುಭವ; ಪ್ರದರ್ಶನವಾಗಿರುವುದಿಲ್ಲ. ಅಭಿವ್ಯಕ್ತಿ (Expression) ಆಗಿರುತ್ತದೆ. ಮತ್ತು Expression ಆದದ್ದು, ತನ್ನ ಸಹಜತೆಯಿಂದಾಗಿಯೇ ತಾನು ಮಾಡಿದ್ದಲ್ಲ, ತನ್ನ ಮಾಧ್ಯಮದಲ್ಲಿ ಮೂಡಿಬಂತು ಎಂಬಂತೆ ಇರುತ್ತದೆ ನನ್ನ ಸೀಮಿತ ಓದಿನಲ್ಲಿ 'ಕುಸುಮ ಬಾಲೆ' ಮತ್ತು 'ಬಕಾಲ' ಈ ತೆರದ ಕೃತಿಗಳು ಎಂದು ಕಂಡಿದೆ.

ಕನ್ನಡದ ಇಬ್ಬರು ಮಹಾ ಕವಿಗಳನ್ನು ಒಂದು ವಿಶಿಷ್ಟ ಸಂಗತಿಗಾಗಿ ನೆನಪಿಸಿಕೊಂಡು ಈ ಮಾತುಗಳನ್ನು ಮುಗಿಸಬಹುದು. ಈ ಇಬ್ಬರೂ ಆಧುನಿಕರೇ; ತಮ್ಮ

ತಮ್ಮ ಅರ್ಥದಲ್ಲಿ. ಆಗಿದ್ದೂ ಭಾರತನಿಷ್ಠರೇ. ಭಕ್ತನಾದ ಕುಮಾರ ವ್ಯಾಸನಿಗೆ ಎಲ್ಲವೂ ಕೃಷ್ಣನ ಲೀಲೆ. ಲೀಲೆ ಎಂದರೆ ಆಟ. ಮಹಾಭಾರತದ ಆಟ ಒಂದೇ. ಅದು ದ್ಯೂತ. ದುರಂತದ ಬೀಜ ಬೀಳುವುದೂ ಈ ದ್ಯೂತದಲ್ಲಿ. ಆದರೆ ಕುಮಾರವ್ಯಾಸ ಇದು ಭಗವಂತನ ಲೀಲೆ ಎಂದು ಸೂಚಿಸುವುದು ಹೀಗೆ. ದ್ರೌಪದಿ; ತನ್ನ ವಸ್ತ್ರಾಪಹಾರದ ಪ್ರಯತ್ನ ನಡೆದಾಗ ಕೊನೆಗೆ ಕೃಷ್ಣನನ್ನು ಕರೆದಳಲ್ಲ - ಆಗ ಕೃಷ್ಣ ದ್ವಾರಕೆಯಲ್ಲಿ ತನ್ನ ಮಡದಿಯರೊಂದಿಗೆ ಜೂಜನ್ನೇ ಆಡುತ್ತಿದ್ದನಂತೆ. ಅದು ದ್ವಾರಕೆಯಲ್ಲಿ ಆಡುತ್ತಿರುವ ಜೂಜು. ಇದು ಹಸ್ತಿನಾವತಿಯಲ್ಲಿ ಆಡುತ್ತಿರುವ ಇನ್ನೊಂದು ಮಹಾಜೂಜು. ಎರಡೂ ಕೃಷ್ಣನದೇ ಲೀಲೆ ಪ್ರೇರಣೆ. ಆದ್ದರಿಂದ ಪ್ರೇರಕನಿಗೆ ಶರಣಾಗುವುದೇ ದಾರಿ. ಪಂಪ ವೀರ. ಅವನಿಗೆ ದ್ಯೂತ ಬರಿಯ ಲೀಲೆಯಲ್ಲ. ಬರಿಯ ಕ್ರೀಡೆಯೂ ಅಲ್ಲ. ವ್ಯಕ್ತಿತ್ವವನ್ನೇ ರೂಪಿಸಬಲ್ಲ ಚಟುವಟಿಕೆ ಅದು. ಕರ್ಣನನ್ನು ಕೃಷ್ಣ ಪಾಂಡವರೆಡೆಗೆ ಬಾರೆಂದು ಕರೆದಾಗ ಪಂಪನ ಕರ್ಣ ಉದ್ದೇಶಪೂರ್ವಕವಾಗಿ ಒಂದು ದ್ಯೂತವನ್ನು ನೆನಪಿಸುತ್ತಾನೆ. "ನೆತ್ತಮನಾಡಿ ಭಾನುಮತಿ ಸೋಲ್ತೊಡೆ...." ಎಂಬ ಪ್ರಸಿದ್ಧ ಪದ್ಯ ಅದು. ದ್ರೌಪದಿಯನ್ನು ಪಣಕ್ಕಿಟ್ಟ ದ್ಯೂತ ಪ್ರಸಂಗವನ್ನು ವಿವರ ವಿವರವಾಗಿ ನೆನಪಿಸುವಂತೆ ಈ ಪದ್ಯ ಇದೆ. ಅಲ್ಲಿ ದ್ರೌಪದಿ ಸೋತಳು. ಇಲ್ಲಿ ಭಾನುಮತಿ. ಅಲ್ಲಿ ಸೆರಗು ಸೆಳೆದ. ಇಲ್ಲಿ ಲಂಬಣ ಹರಿಯಿತು. ಅಲ್ಲಿ ಕೃಷ್ಣ ದ್ರೌಪದಿಯನ್ನು ಕಾಪಾಡಿ ಶರಣಾಗತ ವತ್ಸಲನಾದರೆ, ಇಲ್ಲಿ ಸ್ವಯಂ ದುರ್ಯೋಧನ ಕರ್ಣನ ಪರವಾಗಿ ನಿಂತು ಸ್ನೇಹವನ್ನು ಮೆರೆದ. ಕರ್ಣ ದುರ್ಯೋಧನರ ಸ್ನೇಹದ ಇನ್ನೊಂದು ಮಜಲನ್ನು ತೋರಿಸಿ ಇದು ಯಾಕೆ ಶ್ರೇಷ್ಠವಲ್ಲ ಎಂದು ಕೇಳುತ್ತಾನೆ ಪಂಪ.

ವ್ಯಾಸನಿಗೆ ದ್ಯೂತ ಕಾಲಕ್ರೀಡೆಯಾಗಿದೆ. ಪಂಪನಿಗೆ ಅದು ರಾಜಕಾರಣದ ನಿಷ್ಠುರ ನಡೆಯಾಗಿರುವಂತೆ ಸುಹೃದ್ ದ್ಯೂತವೂ ಹೌದು. ಮತ್ತೆ ಕುಮಾರ ವ್ಯಾಸನಿಗೆ ಅದು ಲೀಲಾದ್ಯೂತ. ಪುರಾಣ, ಆಧುನಿಕವಾಗಿ ಹೊಸ ಹೊಳಪನ್ನು ಪಡೆದಂತೆ ತೋರಿ ಮರಳಿ ಪುರಾಣವಾಗಿದೆ.

ಪಂಪನಿಗೆ ವ್ಯಾಸರ ಆಲಂಬನ ಯಾಕೆ ಬೇಕೆಂದರೆ; ಮಹಾಭಾರತ ಮಹಾ ಯುದ್ಧವೊಂದರ ಕತೆ. ವೀರರ ಕತೆ. ರಾಜಕಾರಣವೇ ಕೇಂದ್ರವಾಗಿರುವ ಕತೆ. ಅವನ ಭೀಷ್ಮ "ವೀರ ಸಿದ್ಧಾಂತದ ಶಾಸನಂ ಬರೆದ ಪೊತ್ತಗೆ"ಯಂತೆ. ಶಯ್ಯೆ ಶರಶಯ್ಯೆ.

ಭಕ್ತ ಕುಮಾರವ್ಯಾಸನಿಗೂ ಇದೇ ಕತೆ ಬೇಕೆಂದರೆ ಅಚ್ಚರಿಯಲ್ಲವೆ ? ಅವನ ಭಕ್ತ ವತ್ಸಲನಾದ ಕೃಷ್ಣ ತಾನು ಕೊಲ್ಲಿಸಬೇಕೆಂದಿರುವವರನ್ನು ಎಲ್ಲ ಮಾನವೀಯ ಚೌಕಟ್ಟನ್ನು

ಮುರಿದಂತೆ ತೋರಿಸಿ ಕೊಲ್ಲಿಸುತ್ತಾನೆ. ಕೊನೆಗಾಲದಲ್ಲಿ ಕರ್ಣಬಸವಳಿದಿದ್ದಾನೆ. ರಥ ಕುಸಿದಿದೆ ಸಾರಥಿ ಹೊರಟು ಹೋಗಿದ್ದಾನೆ. ಆಯುಧಗಳಿಲ್ಲ. ಸಹಜವಾಗಿ (ಸಹಜನೇ ಆದ) ಅರ್ಜುನನಿಗೆ ಅನುಕಂಪ ಮಿಡಿದಿದೆ. ಆಗ ಕುಮಾರವ್ಯಾಸ ಹೇಳುವ ಮಾತು ಇದು. "ಬೀಸಿದನು ನಿಜಮಾಯೆಯನು, ಡೊಳ್ಳಾಸದಲಿ ಹರಹಿದನು ತಮವನು, ನರನ ಕಲಿಮಾಡಿ" ಅರ್ಜುನನನ್ನು 'ನರ' ಎಂದು ಕರೆಯುವುದು ಇಲ್ಲಿ ಎಷ್ಟು ಸಾರ್ಥಕ. ನರನು ತನ್ನ ನರತ್ವವನ್ನು ದಾಟಿ 'ಕಲಿ'ಯಾಗುವುದು, ವೀರನಾಗುವುದು, ತಮಸ್ಸಿನಿಂದಲಂತೆ. ದೇವರ ಮಾಯೆ ಎನ್ನೋಣ. ಆದರೆ ತಮಸ್ಸು ತಮಸ್ಸೇ. ಭಕ್ತನ ನೋಟಕ್ಕೆ ವೀರ ಹೇಗೆ ಕಾಣುತ್ತಿದ್ದಾನೆ ನೋಡಿ ಇದಕ್ಕಿಂತ ಆಧುನಿಕವಾದ್ದು ಯಾವುದು ?

o

ಸಾಹಿತ್ಯ ಅನ್ನುವುದು ಹುಟ್ಟಿಕೊಳ್ಳುವುದು ಮೂಲತಃ ಈ 'ಇಹ'ದ ಅನುಭವಗಳಿಂದಲೇ ಆದರೂ, ಈ ಲೋಕಜೀವನ, ಆದರ ಅರ್ಥ ಮತ್ತು ಅದು ತಲುಪಬೇಕಾದ ನೆಲೆ ಇತ್ಯಾದಿಗಳನ್ನು ಕುರಿತ ವಿಚಾರಗಳು, ಆಯಾ ಕವಿಗಳು ಹುಟ್ಟಿ ಬೆಳೆದ ಮತಧರ್ಮದ ನಿಲುವುಗಳಿಂದಾಗಿ ಬಹುಮಟ್ಟಿಗೆ ಈ ಲೋಕದಾಚೆಯ 'ಪರ'ದ ಕಡೆಗೇ ಕಾತರಿಸುವ ಸ್ವರೂಪದವುಗಳಾಗಿವೆ- ಎಂಬುದು ಹಿಂದಿನ ಸಾಹಿತ್ಯವನ್ನು ಓದಿದ ಯಾರಿಗಾದರೂ ಸ್ಪಷ್ಟವಾಗುವ ಸಂಗತಿಯಾಗಿದೆ. ಇಹದ ಬದುಕಿಗಿಂತ, ಪರದ ಬದುಕು ಮುಖ್ಯವಾದಾಗ, ಇಂಥ ನಿಲುವಿನಲ್ಲಿ ಕಾವ್ಯ ಬರೆಯಬೇಕಾದ ಕವಿಯ ಧೋರಣೆ ಒಂದು ರೀತಿಯ ದ್ವಂದ್ವಕ್ಕೆ ಸಿಕ್ಕಿಕೊಳ್ಳುತ್ತದೆ. ಇದರಿಂದ ಪಾರಾಗುವ ದಾರಿ ಎಂದರೆ, ಕಾವ್ಯ ಪ್ರಜ್ಞೆಯನ್ನು ಲೌಕಿಕ ಆಗಮಿಕ ಎಂದು ವಿಭಾಗಿಸಿಕೊಂಡು ಕೆಲವು ಜೈನ ಕವಿಗಳಂತೆ ಬದುಕುವುದು ; ಅಥವಾ ಅವೆರಡರ ಸಮನ್ವಯವನ್ನು ಒಪ್ಪಿಕೊಂಡೂ 'ಪರ'ದ ಮಹತ್ವವನ್ನೇ ಕೊನೆಗೆ ಭರತವಾಕ್ಯವನ್ನಾಗಿ ಹೇಳುವುದು ಅಥವ ಇಹವನ್ನು ತುಚ್ಛೀಕರಿಸಿ ಪರವೊಂದೇ ಪರಮವಾದದ್ದೆಂದು ಹಾಡುವುದು. ಇಡೀ ಕನ್ನಡ ಕಾವ್ಯ ಪರಂಪರೆಯನ್ನು ಗಮನಿಸಿದರೆ, ಇದಕ್ಕಿಂತ ಭಿನ್ನವಾದ ನಿಲುವುಗಳನ್ನು ಕಾಣುವುದು ಕಷ್ಟ. ಕಾಲದಿಂದ ಕಾಲಕ್ಕೆ ವಸ್ತುವಿನಲ್ಲಿ, ರೀತಿಯಲ್ಲಿ, ಛಂದಸ್ಸಿನಲ್ಲಿ ಎಷ್ಟೇ ಬದಲಾಗುತ್ತಾ ಬಂದರೂ ಅಂದಂದಿನ ಮತ-ಧರ್ಮಗಳು ರೂಪಿಸಿದ ಜೀವನದೃಷ್ಟಿಯ ಹಿಡಿತದಿಂದ, ಕವಿಗಳೂ - ಕಾವ್ಯಗಳೂ ಹೊರಕ್ಕೆ ಬರಲು ಸಾಧ್ಯವಾಗಲಿಲ್ಲ.

- ಜಿ. ಎಸ್. ಶಿವರುದ್ರಪ್ಪ
(ಬೆಡಗು)

ಸಂಸ್ಕೃತಿಯಲ್ಲಿ ಸೇರಿಬಿಟ್ಟಿರುವ ಬೇಚೈನು...

ಮೂಲ : ಕಾನ್ರಾಡ್ ಲಾರೆಂರ್ಝ್

ಅನುವಾದ : ರಾಘವೇಂದ್ರ ಪಾಟೀಲ

ವೇಗಗಳ ಅಸಮತೋಲನ :

ಮನುಷ್ಯನ 'ಆತ್ಮ' ಅವನ ಮನಸ್ಸಿಗಿಂತ ತುಂಬಾ ಹಳೆಯದಾದದ್ದು ಎಲ್ಲ ವ್ಯಕ್ತಿಗಳ ಅನುಭವಗಳ ಮೊತ್ತವಾದ ಈ ಆತ್ಮವು ಎಂದು ಉದ್ಭವಗೊಂಡಿತೋ ಏನೋ ? ಪ್ರಾಣಿಗಳಲ್ಲಿ ಕೂಡಾ ಆತ್ಮ ಇರುತ್ತದೆ. ಪ್ರಾಣಿಗಳೊಂದಿಗೆ ಒಡನಾಟ ಇರುವವರಿಗೆ ಇದು ತಿಳಿಯುತ್ತದೆ. ಆ ಪ್ರಾಣಿಗಳ ಭಾವನೆಗಳನ್ನು ಅಂಥವರು ಅರ್ಥಮಾಡಿಕೊಳ್ಳ ಬಲ್ಲರು ಒಂದು ನಾಯಿಯನ್ನು ತೆಗೆದುಕೊಂಡರೆ – ಅಥವಾ ಯಾವುದೇ ಒಂದು ಸಾಕು ಪ್ರಾಣಿಯನ್ನು ತೆಗೆದುಕೊಂಡರೆ ಅವುಗಳಲ್ಲಿ 'ಭಾವನೆ' ಅಥವಾ ಆತ್ಮ ಇರುವುದು ಕಂಡು ಬರುತ್ತದೆ. ಅಷ್ಟೇ ಏಕೆ ಅವುಗಳಲ್ಲಿನ ಆತ್ಮವು ನಮ್ಮ ಆತ್ಮಕಿಂತ ಹೆಚ್ಚಿನ ಮಟ್ಟದ ನಿರಪೇಕ್ಷ ಪ್ರೀತಿಯನ್ನು ತೋರುತ್ತದೆ. ಪ್ರಾಣಿಗಳಿಗೆ ಆತ್ಮವಿದೆಯೇಹೊರತು ಮನಸ್ಸೆಂಬು ದಿಲ್ಲ. ಮನುಷ್ಯನಿಗೆ ಹತ್ತಿರವಾದಂತಹ ವಾನರಗಳಲ್ಲಿ ಕೂಡ ಆತ್ಮವಿದೆಯೇ ಹೊರೆತು ಮನಸ್ಸೆಂಬುದಿಲ್ಲ. ಮನುಷ್ಯನಲ್ಲಿ ಮನಸ್ಸೆಂಬುದು ತಾತ್ವಿಕ ಚಿಂತನೆ, ವ್ಯಾಕರಣಬದ್ಧ ಮಾತು ಮತ್ತು ಭಾಷೆಯ ಮೂಲಕ ಸಾಧ್ಯವಾದ ಪರಂಪರಾನುಗತವಾಗಿ ಹರಿದು ಬರುವ ಜ್ಞಾನ ಇವುಗಳಿಂದ ಉಪಸ್ಥಿತಗೊಂಡಿದೆ. ಇದು ಆತ್ಮದ ನಂತರ ಮೂಡಿಬಂದದ್ದೆಂದು ಈಗಾಗಲೇ ಹೇಳಿದೆ. ಆದರೆ ಆತ್ಮದ ನಂತರ ಮೂಡಿಬಂದ ಮನಸ್ಸು ಅತ್ಯಂತ ವೇಗವಾಗಿ ಬೆಳೆಯುತ್ತದೆ. ಹೀಗೆ ವೇಗವಾಗಿ ಬೆಳೆಯುವ, ಬದಲಾಗುವ, ಮನಸ್ಸಿನ ಕಾರಣವಾಗಿಯೇ ಮನುಷ್ಯರು ತಮಗೆ ಮತ್ತು ಇಡೀ ಪ್ರಪಂಚಕ್ಕೇ ಅನಾನುಕೂಲವಾಗುವ ರೀತಿಯಲ್ಲಿ ಜೀವ ಪರಿಸರದಲ್ಲಿ ಹಸ್ತಕ್ಷೇಪ ಮಾಡುತ್ತ ಅದನ್ನು ಮತ್ತೆ ಮತ್ತೆ ಬದಲಿಸುತ್ತಿದ್ದಾರೆ. ಇಂದಿನ ಚಿತ್ರ ಹೆಗಿದೆ ಎಂದರೆ, ಮನುಷ್ಯನು ಭೂಮಿಯ ಮೇಲಿನ ಇಡೀ ಜೀವಸಂಕುಲ ವನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸಿದ್ದಾನೆ. ಮನುಷ್ಯನು ಕೂಡ ಈ ಜೀವಸಂಕುಲದ

ಒಂದಂಶವಾಗಿಯೇ ಇರುವುದರಿಂದ ಅವನು ತನ್ನ ಹಸ್ತಕ್ಷೇಪಗಳ ಮೂಲಕ ಆತ್ಮಹತ್ಯೆಯ ಕ್ರಿಯೆಯಲ್ಲಿ ತೊಡಗಿದ್ದಾನೆ.

ಮನುಷ್ಯನ ಮನಸ್ಸು ಅತ್ಯಂತ ವೇಗವಾಗಿ ಬದಲಾಗುತ್ತದೆ ಈ ಬದಲಾವಣೆಯು ಅವನಿಗೆ ತಂತ್ರಜ್ಞಾನದ ಬೆಳವಣಿಗೆಗೆ ಪ್ರೇರಣೆ ನೀಡಿದೆ. ಅವನು ಬೆಳೆಸುತ್ತಿರುವ ತಂತ್ರಜ್ಞಾನವು ಅವನಿರುವ ಪ್ರಪಂಚವನ್ನು ಅತ್ಯಂತ ವೇಗವಾಗಿ ಪಲ್ಲಟಗೊಳಿಸುತ್ತದೆ. ಇದೀಗ ಇದ್ದ ಪರಿಸರ ಇನ್ನೊಂದು ಕ್ಷಣ ಬಿಟ್ಟು ಇರುವುದಿಲ್ಲ. ಪ್ರಪಂಚ ಪರಿಸರದ ಬದಲಾವಣೆಯು ವೇಗದೊಂದಿಗೆ ಜೀವ ವಿಕಾಸದ ವೇಗವನ್ನು ಹೋಲಿಸಿದರೆ........ಪಾಪ! ಇದರ ಮುಂದೆ ಅದು ಕೆಟ್ಟು ನಿಂತ ಕಾರುಗಾಡಿ !.... ಬದಲಾಗುವ ಪ್ರಪಂಚ-ಪರಿಸರವು ಮನುಷ್ಯನ ಬದುಕಿನ ವಿನ್ಯಾಸವನ್ನು, ಅವನ ಸಂಸ್ಕೃತಿಯನ್ನು ಪಲ್ಲಟಗೊಳಿಸುತ್ತಿರುತ್ತದೆ. ಹಾಗೆ ನೋಡಿದರೆ ಸಂಸ್ಕೃತಿ ಮತ್ತು ಆತ್ಮಗಳು ಮೂಡಿಬಂದಿರುವ ರೀತಿಯು ಒಂದೇ ಆಗಿದೆ. ಆದರೆ ಬದಲಾಗುತ್ತಿರುವ ಸಂಸ್ಕೃತಿ ಅಷ್ಟು ವೇಗವಾಗಿ ಬದಲಾಗದ ಆತ್ಮದ ಮೇಲೆ ಬೇಡಿಕೆಗಳ ವಿಪರೀತವಾದ ಒತ್ತಡವನ್ನು ಹೇರುತ್ತದೆ. ತನಗೆ ಹೊಂದಿಕೊಳ್ಳಲು ನಿತ್ಯ ಆಹ್ವಾನ ನೀಡುತ್ತಿರುತ್ತದೆ

ಅರ್ನೊಲ್ಡ್ ಗೆಹ್ಲೆನ್‌ನು ಮನುಷ್ಯ ಮತ್ತು ಸಂಸ್ಕೃತಿಗಳ ಸಂಬಂಧ ಕುರಿತು ಒಂದು ಮಾತು ಹೇಳುತ್ತಾನೆ. 'ಮನುಷ್ಯನು ಸ್ವಾಭಾವಿಕವಾಗಿಯೇ ಸಾಂಸ್ಕೃತಿಕ ಜೀವಿ' ಎನ್ನುತ್ತಾನವನು. ತುಂಬಾ ಸರಳವೆಂದು ತೋರಬಹುದಾದ ಈ ಮಾತು ತುಂಬ ನಿಜವಾದದ್ದು. ಈ ಮಾತಿನ ಅರ್ಥವೆಂದರೆ ಮಾನವ ಜೀವ ವಿಕಾಸವು ಅವನನ್ನು ಸಹಜವಾದ ಸಾಂಸ್ಕೃತಿಕ ಜೀವಿ ಯನ್ನಾಗಿಸಿದೆ. ಜೀವ ವಿಕಾಸದ ಸಂದರ್ಭದಲ್ಲಿ ಮನುಷ್ಯನಲ್ಲಿ ನೆಲೆಗೊಳ್ಳುತ್ತ ಬಂದ ನಡಾವಳಿಕೆಗಳ ವಿನ್ಯಾಸವು ಅವನು ಸಂಸ್ಕೃತಿಯೊಂದನ್ನು ಹೊಂದಿರುವುದನ್ನು, ಸಾಂಸ್ಕೃತಿಕ ಜೀವಿಯಾಗುವುದನ್ನು ಅನಿವಾರ್ಯವಾಗಿಸುತ್ತದೆ. ನೋಲಿಮ್ ಜಾಮ್ಸ್ಕಿ ಸ್ಪಷ್ಟಪಡಿಸು ವಂತೆ ಮನುಷ್ಯನು ತನ್ನ ತಾರ್ಕಿಕ ಚಿಂತನೆ ಮತ್ತು ಮಾತು ಇವುಗಳನ್ನು ಕುರಿತಂತೆ ಆಂತರಿಕ ವಾದ ವಿನ್ಯಾಸವೊಂದನ್ನು ಹೊಂದಿರುತ್ತಾನಂತೆ. ಓಟ್ಟೋ ಕೊಹ್ಲರ್ ವಿವರಿಸುವಂತೆ ಮಗುವೊಂದು ತಾನು ಹೇಗೆ ಮಾತಾಡುವದೆನ್ನುವದನ್ನು ಕಲಿಯುವುದಿಲ್ಲವಂತೆ. ಅದರ ಬದಲು ಅದು ಸ್ವರಗಳನ್ನು ಗ್ರಹಿಸುತ್ತದಂತೆ. ಮಾತಿನ ವಿನ್ಯಾಸದ ಹಿನ್ನೆಲೆಗೆ ತೀರ ಇತ್ತೀಚಿನ ಸಂಸ್ಕೃತಿ ಇದ್ದು ಆ ಸಂಸ್ಕೃತಿಯು ಮಗುವಿಗೆ ಸ್ವರಗಳನ್ನು ಮತ್ತು ಅವುಗಳ ವೈಶಿಷ್ಟ್ಯಗಳನ್ನು ಮಾತ್ರ ಒದಗಿಸುತ್ತದೆ. ಹೀಗೆ ಮನುಷ್ಯನು ತನ್ನ

ವಿಕಾಸದ ಸಂದರ್ಭದಲ್ಲಿಯೇ ಸಂಸ್ಕೃತಿಯನ್ನು ಅನಿವಾರ್ಯವಾಗಿ ಹೊಂದಿರಬೇಕಾದ ಜೀವಿಯಾಗಿ ಬೆಳೆದಿದ್ದಾನೆ. ಆದರೆ ಹೀಗಿರುವಾಗಲೂ ಸಂಸ್ಕೃತಿ ಮತ್ತು ನಾಗರೀಕತೆಗಳು ಬದಲಾಗುತ್ತಿರುವ ವೇಗಕ್ಕೆ ಅವನು ಹೊಂದಿಕೊಳ್ಳಲಾರದವನಾಗಿದ್ದಾನೆ. ಮನುಷ್ಯನಿಗೆ ವೇಗವಾಗಿ ಬದಲಾಗುತ್ತಿರುವ ಸಾಮಾಜಿಕ ಪರಿಸರದೊಂದಿಗೆ ಹೊಂದಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಸಂಸ್ಕೃತಿ-ನಾಗರಿಕತೆ-ಸಾಮಾಜಿಕ ಪರಿಸರ ಇವುಗಳ ಸಮುಚ್ಚಯ ಮತ್ತು ಈ ಸಂಕೀರ್ಣದಲ್ಲಿ ಬದುಕುವ ಮನುಷ್ಯ ಇವೆರಡರ ನಡುವೆ ಕಂದಕ ಏರ್ಪಡುತ್ತಿದ್ದು ಅದು ವರ್ಷ ವರ್ಷವೂ ಅಗಲವಾಗುತ್ತಾ ಹೋಗುತ್ತದೆ.

ಸಂಸ್ಕೃತಿಯು ಮನುಷ್ಯನ ನಡಾವಳಿಕೆಗಳ ಮಾದರಿ ಒಂದನ್ನು ಸೃಷ್ಟಿಸುತ್ತದೆ. ಈ ಮಾದರಿಯು ಮನುಷ್ಯನ ಆಂತರಿಕ ನಡಾವಳಿಕೆಗಳ ವಿನ್ಯಾಸಕ್ಕೆ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಈ ವಿನ್ಯಾಸವು ಸಂಸ್ಕೃತಿಯ ಸ್ಥಿರತ್ವಕ್ಕಾಗಿ ಅದನ್ನು ಕಾಯ್ದುಕೊಳ್ಳುವುದಕ್ಕಾಗಿ ದುಡಿಯುತ್ತದಲ್ಲದೆ ಸಂಸ್ಕೃತಿಯು ಜಗಿತ ಬೆಳೆಯುತ್ತ ಬದಲಾಗುವುದನ್ನು ಈ ನಡಾವಳಿಕೆಗಳ ವಿನ್ಯಾಸವು ವಿರೋಧಿಸುತ್ತದೆ. ಪರಂಪರೆಯು ಮಾನವ ನಡತೆಗೆ ಸಂಬಂಧಿಸಿದಂತೆ ಸೂಚನೆಗಳನ್ನು ನೀಡುತ್ತದೆ. ಮತ್ತು ಇಂಥ ಸೂಚನೆಗಳು ಮನುಷ್ಯನ ದ್ವಿತೀಯ ಸ್ವಭಾವ ಎನ್ನಿಸಿಕೊಳ್ಳುತ್ತವೆ. ಒಂದು ಸಮಾಜದಲ್ಲಿ ಒಪ್ಪಿತವಾಗಿರುವ ಎಲ್ಲ ಮನುಷ್ಯ ಸ್ವಭಾವ, ನಡಾವಳಿಕೆಗಳ ಹಿನ್ನೆಲೆಯಲ್ಲಿ ಒಂದು ವ್ಯಾಪಕವಾದ ಆಚರಣೆಗಳ ಸಂಕೀರ್ಣವಿರುತ್ತದೆ. ಈ ಆಚರಣೆಗಳ ಸಂಕೀರ್ಣವನ್ನು ಆ ಸಮಾಜದ ಕಟ್ಟುಪಾಡುಗಳೆನ್ನುತ್ತೇವೆ. ವಿವೇಚನಾಯುಕ್ತ ನಡವಳಿಕೆಯು ಬರೀ ಬಾಹ್ಯವಾದ, ಮೇಲ್ಪದರದ ಮತ್ತು ಅಮುಖ್ಯವಾದ ನಡವಳಿಕೆಗಳಲ್ಲ. ಇದು ಬರೀ ಇಂಥದ್ದನ್ನು ಮಾಡಬೇಕು, ಇಂಥದ್ದನ್ನು ಮಾಡಬಾರದು ಎನ್ನುವ ರೀತಿಯ ನಿರೂಪಣೆಯಲ್ಲ. ಈ ವಿನ್ಯಾಸವು ಅಪ್ಪಟ ನೈತಿಕ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಪರಪರವೆಂದು ಮೈಯನ್ನು ಕೆರೆದುಕೊಳ್ಳುವುದು, ಆಕಳಿಸಿ ಮೈಮುರಿಯುವುದು ಇಂತಹ ನಡವಳಿಕೆಗಳು ಸ್ವಭಾವಜನ್ಯವಾದ ನಡವಳಿಕೆಗಳು. ಇವುಗಳಿಗೆ ಆರಾಮದ ನಡವಳಿಕೆಗಳೆನ್ನುವರು. ಈ ಆರಾಮದ ನಡವಳಿಕೆಗಳು ಆಚರಣೆ ಬಾಹಿರವಾದವುಗಳು. ಆದರೆ ಗಾಂಭೀರ್ಯದ ನಡತೆಯು ಅಥವಾ ಸಂಪನ್ನವೆನ್ನಿಸಿಕೊಳ್ಳುವ ನಡತೆಯು ಬರೀ ಇಂತಹ ಅಮುಖ್ಯವಾದ ಅಂಗಚೇಷ್ಟೆಗಳ ದೂರೀಕರಣ ಮಷ್ಟೇ ಅಲ್ಲದೆ ಸಂಕೀರ್ಣವಾದ ನಡವಳಿಕೆಗಳನ್ನು ಒಳಗೊಂಡಿರುತ್ತದೆ. ಸಾಂಸ್ಕೃತಿಕ ಆಚರಣೆಗಳ ರೂಪದ ಈ ನಡವಳಿಕೆಗಳು, ಕಾಂಟನು ವಿವರಿಸಿದ ಸ್ವಯಂ ಪ್ರಶ್ನೆಗಳ ಮೂಲಕ ತನ್ನನ್ನು ತಾನು ಪರಿಶೀಲಿಸಿಕೊಳ್ಳಲು ಒದಗಿಬರುವ ನೈತಿಕ ಮೌಲ್ಯಗಳಿಗಿಂತ (Commandments) ಭಿನ್ನವಾದವುಗಳು. ಮನುಷ್ಯನು ಇಂತಹ ಗಾಂಭೀರ್ಯದ

ನಡಾವಳಿಕೆಯನ್ನು ಉಲ್ಲಂಘಿಸಿದಾಗ ಮತ್ತು ಕಾಂಟನು ನಿರೂಪಿಸುವ ನೈತಿಕ ಮೌಲ್ಯಗಳನ್ನು ಉಲ್ಲಂಘಿಸಿದಾಗ ತನಗೆ ತಾನೇ ಭಾವನಾತ್ಮಕವಾದ ಶಿಕ್ಷೆ ಕೊಟ್ಟುಕೊಳ್ಳುತ್ತಾನೆ. ಈ ಎರಡು ರೀತಿಯ ವಿಭಿನ್ನ ಮೌಲ್ಯಗಳನ್ನು ಉಲ್ಲಂಘಿಸಿದಾಗ ಅವನು ಅನುಭವಿಸುವ ಮಾನಸಿಕ ಶಿಕ್ಷೆ ಮಾತ್ರ ಗುಣಾತ್ಮಕವಾಗಿ ಬೇರೆ ಬೇರೆಯದಾಗಿರುತ್ತದೆ. ಗಾಂಭೀರ್ಯದ ನಡಾವಳಿಕೆಯ ಮೌಲ್ಯವನ್ನು ಮೀರಿದಾಗ ಅವನು ಅನುಭವಿಸುವ ಶಿಕ್ಷೆ ನಾಚಿಕೆ ಆಗಿರುತ್ತದೆ. ಆದರೆ ನೈತಿಕ ಮೌಲ್ಯಗಳನ್ನು (Commandments) ಮೀರಿದಾಗ ಅವನು ಅನುಭವಿಸುವ ಶಿಕ್ಷೆ ತೀವ್ರವಾದ ಪಶ್ಚಾತ್ತಾಪವಾಗಿರುತ್ತದೆ – ತೀವ್ರವಾದ ಮಾನಸಿಕ ವ್ಯಥೆಯಾಗಿರುತ್ತದೆ.

ಇಂದಿನ ಸಂದರ್ಭದಲ್ಲಿ ಬದುಕುತ್ತಿರುವ ಮನುಷ್ಯನು ಸಂಸ್ಕೃತಿ ಮತ್ತು ನಾಗರೀಕತೆಗಳ ಬಂಧನಕ್ಕೆ ಒಳಗಾಗಿದ್ದು ಈ ಬಂಧನವು ದಿನೇ ದಿನೇ ಹೆಚ್ಚು ಹೆಚ್ಚು ಬಿಗಿಯಾಗುತ್ತ ಹೋಗುತ್ತದೆ. ಇದಲ್ಲದೆ ನಾವು ಬದುಕುತ್ತಿರುವ ಸಮಾಜವು ಒಟ್ಟು ಕೃತ್ರಿಮತೆಯ ಸಂಯೋಜನೆ ಹೊಂದಿದ್ದು ಅದು ಸಂಪೂರ್ಣವಾಗಿ ಯಾಂತ್ರಿಕತೆಯಿಂದ ಸಂಕುಚಿತಗೊಳ್ಳುತ್ತದೆ. ಇಂಥ ಸಂದರ್ಭದಲ್ಲಿ ಮನುಷ್ಯನ ಸಹಜ ಜೈವಿಕ ನಡವಳಿಕೆಗಳಾಗಲೀ, ಮನುಷ್ಯನ ದ್ವಿತೀಯ ಸ್ವಭಾವ ಎನ್ನಿಸಿಕೊಳ್ಳುವ ಪರಂಪರೆಯ ಮೂಲಕ ರೂಪುಗೊಂಡ ಸಂಪನ್ನತೆಯ ನಡವಳಿಕೆಗಳಾಗಲೀ ಹೊಂದುವಂಥವುಗಳಾಗಿಲ್ಲ. ಹೀಗಾಗಿ ಮನುಷ್ಯನು ಒಂದು ವಿಕ್ಷಿಪ್ತ ಸನ್ನಿವೇಶಗಳಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ. ಈ ವಿಕ್ಷಿಪ್ತಿಯನ್ನು ಮೀರಲು ಯಾಂತ್ರೀಕರಣದ ಬಂಡವಾಳಶಾಹಿ, ಯಶಸ್ಸಿನ ಬೆನ್ನು ಹತ್ತಿದ ಸಾಮಾಜಿಕ ಸನ್ನಿವೇಶದ ವಿರುದ್ಧ ಪ್ರತಿಭಟನೆಗಳು ರೂಪುಗೊಳ್ಳುತ್ತಿವೆ. ಆದರೆ ಯೌವ್ವನದ ಆವೇಶದ ಇಂಥ ಅನೇಕ ಬಂಡುಕೋರರು ತಪ್ಪು ತಿಳುವಳಿಕೆಯಿಂದ ಜೀವನಕ್ಕೆ ಚೆಲುವನ್ನು ಒದಗಿಸುವ ಮೌಲ್ಯಗಳನ್ನು ವಿನಾಕಾರಣವಾಗಿ ಘಾತಿಸುತ್ತಾರೆ. ಈ ತರುಣ ಬಂಡುಕೋರರು ಜೀವನದ ಇಂಥ ಮೌಲ್ಯಗಳನ್ನು ನಾಶಪಡಿಸದೇ ತಮ್ಮ ಪ್ರತಿಭಟನೆಯನ್ನು ಯಾಂತ್ರಿಕತೆಯ ವಿರುದ್ಧ ಬಂಡವಾಳ ಪ್ರಾಮುಖ್ಯತೆಯ ಯಶಸ್ಸಿನ ಬೆನ್ನು ಹತ್ತಿದ ಸಾಮಾಜಿಕ ಸಂದರ್ಭದ ವಿರುದ್ಧ ಕೇಂದ್ರೀಕರಿಸಿದರೆ ಬಹುಶಃ ಅವರಿಗೆ ಯಶಸ್ಸು ದೊರೆಯಬಹುದು ಎನ್ನುವುದನ್ನು ಅರಿಯದೆ ಹೋಗುತ್ತಾರೆ. ಅವರು ವಿನಾಕಾರಣವಾಗಿ, ವಿವೇಚನೆಯನ್ನು ಜೀವನದ ಗೌರವವನ್ನು ಸೌಂದರ್ಯಾತ್ಮಕವಾದ ಮತ್ತು ನೈತಿಕವಾದ ಮೌಲ್ಯಗಳನ್ನು ಭಂಗಿಸುವುದರಲ್ಲಿ ತೊಡಗುತ್ತಾರೆ. ಆದರೆ ಈ ಎಲ್ಲ ಸಂಗತಿಗಳು ಸತ್ಯದ ಬಗ್ಗೆ ಒಂದು ಪೂರ್ವ ಸೂಚನೆಯನ್ನು ಮಾತ್ರ ಖಂಡಿತವಾಗಿ ಕೊಡುತ್ತವೆ. ಅದೆಂದರೆ ಯಾಂತ್ರೀಕರಣದ ಅಧಃಪತನದ ದಾರಿಯಗುಂಟ ನಮ್ಮನ್ನು ಎಳೆದೊಯ್ಯುತ್ತಿರುವ ನಮ್ಮದೇ ಮನಸ್ಸು ಜೀವವಿರೋಧಿಯಾಗುತ್ತಿದೆ. ಅದು ಕ್ರಮೇಣ ಮನುಷ್ಯನ ಆತ್ಮದ ವಿರೋಧಿಯಾಗಿ ನೆಲೆಗೊಳ್ಳುತ್ತಿದೆ.

ಅಂತಃಪ್ರೇರಣೆ ಮತ್ತು ನೈತಿಕತೆ :

ಬೈಬಲ್ ಹೇಳುತ್ತದೆ– ಮನುಷ್ಯನ ಹೃದಯದ ಕಲ್ಪನಾ ವಿಲಾಸವು ತಾರುಣ್ಯದ ನಂತರ ಕೆಡುಕನ್ನು ಒಳಗೊಳ್ಳುತ್ತ ಹೋಗುತ್ತದಂತೆ. ಇದರಿಂದ ಅವನು ಈಗಾಗಲೇ ಹೇಳಿದ ಸುಶೀಲ ನಡವಳಿಕೆ ಮತ್ತು ಕಾಂಟನು ಹೇಳುವ ನೈತಿಕ ಮೌಲ್ಯಗಳನ್ನು ಮೀರುತ್ತಾನೆ. ಹೀಗೆ ಮೀರಿದಾಗ ಅವನು ನಾಚಿಕೆಪಟ್ಟುಕೊಳ್ಳುತ್ತಲೋ ಅಥವಾ ತೀವ್ರ ವ್ಯಥೆಯ ಪಶ್ಚಾತ್ತಾಪವನ್ನು ಅನುಭವಿಸುತ್ತ ತನಗೆ ತಾನೇ ಶಿಕ್ಷೆ ಕೊಟ್ಟುಕೊಳ್ಳುತ್ತಾನೆ. ನಮ್ಮ ನಾಗರಿಕತೆಯ ಆಚರಣೆಗಳನ್ನು (ಸುಶೀಲ ನಡವಳಿಕೆ) ಮೀರುವವನ ಬಗೆಗೆ ಒಬ್ಬ ನಿರಪೇಕ್ಷ ನೋಟಕನಲ್ಲಿ ಕನಿಕರದ ನಗೆ ಹುಟ್ಟುತ್ತಗೆ. ತಿರಸ್ಕಾರ ಹುಟ್ಟಲಾರದು. ಆದರೆ ಟೆನ್ ಕಮಾಂಡಮೆಂಟ್ಸ್‌ನಂತಹ ನೈತಿಕ ಮೌಲ್ಯಗಳನ್ನು ಧಿಕ್ಕರಿಸಿ ನಡೆಯುವವನ ಬಗೆಗೆ ಒಬ್ಬ ನಿರಪೇಕ್ಷ ನೋಟಕನಲ್ಲಿ ತೀವ್ರವಾದ ತಿರಸ್ಕಾರವನ್ನು ಹುಟ್ಟಿಸುತ್ತದೆ ಇನ್ನು ಈ ನೈತಿಕ ಮೌಲ್ಯಗಳ ಆಚರಣೆಯನ್ನು ಕುರಿತಂತೆ. ಮನುಷ್ಯನು ತನ್ನ ಸ್ನೇಹಿತರ ನಡುವೆ ಇರುವಾಗ ತನ್ನ ಬಂಧುಗಳ ನಡುವೆ ಇರುವಾಗ ನೈತಿಕ ಮೌಲ್ಯಗಳನ್ನು ಸಹಜವಾಗಿ ಅನುಸರಿಸುತ್ತಾನೆ. ತನ್ನ ಸಹಜ ರೀತಿ ಅನ್ನುವಂತೆ ಅವನು ತನ್ನ ಸ್ನೇಹಿತರದ್ದಾದ ಏನನ್ನೂ ಕದಿಯುವುದಿಲ್ಲ, ಅವರಿಗೆ ಸುಳ್ಳು ಹೇಳುವುದಿಲ್ಲ, ಸ್ನೇಹಿತರ ಹೆಂಡತಿಯೊಂದಿಗೆ ಗೌರವದಿಂದ ನಡೆದುಕೊಳ್ಳುತ್ತಾನೆ ಇತ್ಯಾದಿ ಇತ್ಯಾದಿ. ಇನ್ನು ಸ್ನೇಹಿತರನ್ನಾಗಲೀ ಬಂಧುಗಳನ್ನಾಗಲೀ ಕೊಲ್ಲುವ ಮಾತು ದೂರವೇ ಉಳಿಯಿತು. ಆದರೆ ಮನುಷ್ಯನು ಅಪರಿಚಿತರ ನಡುವೆ ಬದುಕುವಾಗ ಅಂದರೆ, ಪರಸ್ಪರ ಗುರುತು ಹೊಂದಿರದ ಮನುಷ್ಯ ಸಮಾಜದಲ್ಲಿ 'ಟೆನ್‌ಕಮಾಂಡಮೆಂಟ್ಸ್' ನಿಷ್ಕ್ರಿಯಗೊಂಡುಬಿಡುತ್ತವೆ. ಮನುಷ್ಯರು ಪರಸ್ಪರ ಅಜ್ಞಾತಗೊಳ್ಳುವ ಸಮಾಜದಲ್ಲಿ ನೈತಿಕ ಮೌಲ್ಯಗಳು ಮನುಷ್ಯನನ್ನು ಕಾಡದೇಹೋಗುತ್ತವೆ.

ಇಮಾನುಅಲ್ ಕಾಂಟ್‌ನು ತನ್ನ ಬಂಧಗಳ ನಡುವೆ ವಾಸಿಸುವಾಗ ಮನುಷ್ಯನು ತೋರುವ ಸಹಜ ನೈತಿಕತೆಗೆ ಯಾವ ಮಹತ್ವವನ್ನೂ ಕೊಡುವುದಿಲ್ಲ. ಅವನ ಪ್ರಕಾರ ಮನುಷ್ಯನಲ್ಲಿನ ಸಹಜ ಪ್ರೇರಣೆಯಿಂದ ನಡೆಯುವ ಅತ್ಯಂತ ತ್ಯಾಗಶೀಲವಾದ, ಇಡೀ ಸಮಾಜವೇ ಕೊಂಡಾಡುವಂತಹ ಸತ್‌ಕೃತಿ, ನೈತಿಕವಾಗಿ ಅಷ್ಟೇನೂ ಶ್ರೇಷ್ಠವಾದದ್ದಲ್ಲ ವಂತೆ ಜರ್ಮನಿಯ ಈ ಶ್ರೇಷ್ಠ ಚಿಂತಕನ ಅಭಿಪ್ರಾಯವನ್ನು ಜರ್ಮನಿಯ ಅಂದಿನ ದೊಡ್ಡ ಕವಿಯೊಬ್ಬ ತಮಾಷೆ ಮಾಡುತ್ತಾನೆ. ಈ ಕವಿ ಫ್ರೆಡರಿಕ್‌ಶಿಲ್ಲರ್, ಕಾಂಟನನ್ನು ತಮಾಷೆ ಮಾಡುವ ಅವನ ಪದ್ಯದ ಅರ್ಥ ಹೀಗಿದೆ:

"ನಾನು ಗೆಳೆಯನೊಬ್ಬನಿಗೆ ಸಹಾಯ ಮಾಡಲು ಇಚ್ಛಿಸುತ್ತೇನೆ ಆದರೆ ದುರ್ದೈವವೆಂದರೆ, ನಾನು ಅದನ್ನು ಸಹಜ ಪ್ರೇರಣೆಯಿಂದ ನೆರವೇರಿಸುತ್ತೇನೆ........ ನಾನು ನೈತಿಕವಾಗಿ ಸರಿಯಾದ ಮಾರ್ಗ ಅನುಸರಿಸುತ್ತಿಲ್ಲವೆಂದು ನನ್ನ ಮನಸ್ಸಿಗೆ ಮುಳ್ಳು ಚುಚ್ಚಿದಂತಾಗುತ್ತದೆ. ಆದ್ದರಿಂದ, ನಾನು ನನ್ನ ಗೆಳೆಯನನ್ನು ದೂರೀಕರಿಸಲು, ದ್ವೇಷಿಸಲು ಕಲಿಯಬೇಕು. ಆಗ ಅಂಥವನಿಗೆ ಸಹಾಯ ಮಾಡಲು ನನ್ನಲ್ಲಿ ಸಹಜ ಅಂತಃಪ್ರೇರಣೆ ಮೂಡುವುದಿಲ್ಲ. ಆಗ ನಾನು ಅವನಿಗೆ ಇಷ್ಟವಿಲ್ಲದೇ ಸಹಾಯ ಮಾಡಿ ನೈತಿಕತೆಯನ್ನು ಮೆರೆಯಬಹುದು."

ಕಾಂಟನಿಗೆ ನೈತಿಕತೆಯ ನಿಜವಾದ ಮತ್ತು ಶ್ರೇಷ್ಠವಾದ ಮಾರ್ಗವೆಂದರೆ, ನೈತಿಕ ಕ್ರಿಯೆಯು ಅತ್ಯಂತ ಯೋಚನಾಬದ್ಧವಾದುದು-ಡೆಲಿಬರೇಟ್ ಆದದ್ದು ಆಗಿರಬೇಕು. ನೈತಿಕ ಕ್ರಿಯೆಯೊಂದರ ಪರಿಣಾಮಗಳ ಸರಣಿಯ ಬಗ್ಗೆ ಕೂಡ ಕರ್ತೃ ಚಿಂತಿಸಿರಬೇಕು. ಕಾಂಟನು ಕ್ರಿಯೆಯೊಂದರ ನೈತಿಕತೆಯ ತೀರ್ಮಾನಕ್ಕೆ ಬರಲು ಇಡುತ್ತಿದ್ದಂತಹ ತಾತ್ವಿಕ ಪ್ರಶ್ನೆ ಹೀಗಿದೆ. ನಾನು ನಡೆಸಲು ಯೋಚಿಸುತ್ತಿರುವ ಕ್ರಿಯೆಯ ತಾತ್ವಿಕ ಮಟ್ಟವನ್ನು ಸ್ವಾಭಾವಿಕ ನಿಯಮದ ಮಟ್ಟಕ್ಕೆ (ನೈತಿಕ ನಿಯಮ) ಎತ್ತರಿಸಲು ಸಾಧ್ಯವಾಗುತ್ತದೆಯೇ? ಅಥವಾ ಇದು ಅಂಥ ತರ್ಕಕ್ಕೆ ವಿರುದ್ಧವಾಗಿ ನಿಲ್ಲುವಂಥದಾಗುತ್ತದೆಯೆ ? ಇದೇ ಪ್ರಶ್ನೆಯನ್ನು ಜೀವ ಸಮಾಜಶಾಸ್ತ್ರೀಯವಾದ ಭಾಷೆಗೆ ತರ್ಜುಮೆ ಮಾಡಿದರೆ- ಅದನ್ನು ಈ ಶಬ್ದಗಳಲ್ಲಿ ಇಡಬಹುದು : ನಾನು ಯೋಚಿಸುತ್ತಿರುವ 'ಕ್ರಿಯೆ'ಯು ಅಂತಿಮ ಸತ್ಯಕ್ಕೆ ಹೊಂದಿಕೊಳ್ಳುವಂಥದೆ ? ಅಂದರೆ - ಯೋಚಿಸುತ್ತಿರುವ 'ಕಾರ್ಯ'ವು ಪ್ರಭೇದ ಸಂರಕ್ಷಕವಾದದ್ದೇ? ಸಮಾಜ ಜೀವನದ ಮುಂದುವರೆಯುವಿಕೆಗೆ ಪೂರಕವಾಗುವಂಥದೇ?

ಅನುವಂಶೀಯವಾಗಿ ನಿರೂಪಿತವಾದ ಅಂತಃಪ್ರೇರಣೆ ಮತ್ತು ಕಾರ್ಯ-ಕಾರಣ ತರ್ಕದಿಂದ ಪಡೆಯುವ ಪ್ರೇರಣೆ ಇವೆರಡರಲ್ಲಿ ವ್ಯತ್ಯಾಸ ಕಾಣಿಸುವ ಕಾಂಟನ ಚಿಂತನೆಯ ರೀತಿ ಸರಿ ಎನ್ನಿಸುವುದಿಲ್ಲ. ಕೇವಲ ಶುದ್ಧ ಸ್ವಭಾವಜನ್ಯ ಅಂತಃಪ್ರೇರಣೆಯಿಂದ ಒಬ್ಬನು ತನ್ನ ಒಬ್ಬ ಗೆಳೆಯನನ್ನು ಅಪಾಯದಿಂದ ರಕ್ಷಿಸಿದನೆಂದು ಇಟ್ಟುಕೊಳ್ಳೋಣ. ಈ ಕ್ರಿಯೆಯ ನಂತರ ನಾವು ಕಾಂಟನು ನಿರೂಪಿಸುವ ತಾತ್ವಿಕ ಪ್ರಶ್ನೆಯನ್ನು ಕೇಳಿಕೊಳ್ಳಬಹುದಲ್ಲವೆ ? ಈಗ ಕೇಳೋಣ – ಈ ಕಾರ್ಯದ ತತ್ವವನ್ನು ಪ್ರಕೃತಿಯ ನಿಯಮದ ಮಟ್ಟಕ್ಕೆ, ಸ್ವಾಭಾವಿಕ ನ್ಯಾಯದ ಮಟ್ಟಕ್ಕೆ ಎತ್ತರಿಸಲು ಸಾಧ್ಯವಾಗಿದೆಯೆ? ಈ ಪ್ರಶ್ನೆಗೆ ದೊರೆಯುವ ಉತ್ತರ ಹೌದು – ಎಂದೇ ಆಗುತ್ತದೆ. ಯಾಕೆಂದರೆ ಸಾಯುವವನನ್ನು ಉಳಿಸುವುದು ಕೊಲ್ಲುವುದನ್ನು ತಪ್ಪಿಸಿದಂತೆ. ಇದು ನೈತಿಕ ನಿಯಮ.

ಆದರೆ ಕಾಂಟನ ರೀತಿಯಲ್ಲಿ ಸತ್ಯವೂ ಅಡಗಿದೆ. ಅನುವಂಶೀಯವಾಗಿ ನಿರೂಪಿತವಾಗಿರುವ ಸಹಜ ಅಂತಃಪ್ರೇರಣೆಗಳು ಲಕ್ಷಾಂತರ ಜನಸಂಖ್ಯೆಯ ಸಾಮಾಜಿಕ ಸಂದರ್ಭದಲ್ಲಿ ಪರಿಣಾಮಕಾರಿಯಾಗಲಾರವು. ಈಗಾಗಲೇ ಹೇಳಿದಂತೆ ಪರಸ್ಪರ ಸ್ನೇಹಿತರ, ಬಂಧುಗಳ ಗುಂಪಿನೊಳಗಡೆಗೆ ಈ ಸಹಜ ಅಂತಃಪ್ರೇರಣೆಗಳು ಕ್ರಿಯಾಶಾಲಿಯಾಗಿರಬಲ್ಲವು ಮತ್ತು ಇಂಥ ಗುಂಪುಗಳಲ್ಲಿ ನೈತಿಕ ನಿಯಮಗಳ ಪಾಲನೆ ಸಾಧ್ಯವಾಗುತ್ತದೆ. ಇಂಥ ಗುಂಪಿನಲ್ಲಿಯ ಪ್ರತಿಯೊಬ್ಬನೂ ತನ್ನ ಗೆಳೆಯನನ್ನು ಅಪಾಯದಿಂದ ರಕ್ಷಿಸಲು ಸ್ವತಃ ಅಪಾಯಕ್ಕೆ ಈಡಾಗಲು ಸಿದ್ಧನಾಗಬಹುದು. ಗೆಳೆತನ, ಬಂಧುತ್ವಗಳಿಂದ ಬಂಧಿಸಲ್ಪಟ್ಟ ಗುಂಪುಗಳಲ್ಲಿ ಇಂಥ ನೈತಿಕತೆ ಸಾಧ್ಯವಾಗುತ್ತದೆ. ಅಮೆರಿಕದ ಸಮಾಜಶಾಸ್ತ್ರಜ್ಞನೊಬ್ಬ ವಿಚಿತ್ರವಾದ ಅಂಕಿ ಸಂಖ್ಯೆಯೊಂದನ್ನು ಮಂಡಿಸುತ್ತಾನೆ. ನಿಕಟ ಸ್ನೇಹಭಾವ ತೋರುವ ಗೆಳೆಯರ ಗುಂಪಿನಲ್ಲಿ ಇರಬಹುದಾದ ಅತ್ಯಂತ ಹೆಚ್ಚಿನ ಸಂಖ್ಯೆ ಎಂದರೆ ಹನ್ನೊಂದು ಜನರು ! ಈ ಸಮಾಜಶಾಸ್ತ್ರಜ್ಞನ ಮಾತು ಬಹುತೇಕ ಆಟಗಳ ಟೀಮುಗಳಲ್ಲಿರುವ ಆಟಗಾರರ ಸಂಖ್ಯೆ ಹನ್ನೊಂದು ಆಗಿರುತ್ತದೆನ್ನುವ ಮಾತನ್ನು ನೆನಪಿಗೆ ತರುತ್ತದೆ. ಅಷ್ಟೇ ಏಕೆ-ಜೀಸಸ್ ಕ್ರಿಸ್ತನ ಹನ್ನೆರಡು ಜನ ಅನುಯಾಯಿಗಳಲ್ಲಿ ಅವನಿಗೆ ನಿಷ್ಠರಾಗಿ ಉಳಿದವರು ಹನ್ನೊಂದು ಜನ ಮಾತ್ರ !

ಕೆಲವರು ಯೋಚಿಸುವಂತೆ, ಮನುಷ್ಯನ ಹೃದಯವು ತಾರುಣ್ಯದ ನಂತರದಲ್ಲಿ ಕೆಡುಕಿನಿಂದ ತುಂಬಿಕೊಳ್ಳುತ್ತಹೋಗುತ್ತದೆನ್ನುವುದು ಸರಿಯಲ್ಲ. ಮನುಷ್ಯರು ಹನ್ನೊಂದು ಜನರ ಗೆಳೆಯರ ಗುಂಪುಗಳಲ್ಲಿ ಒಳ್ಳೆಯವರಾಗಿರುತ್ತಾರೆ. ಆದರೆ ಅವರು ಅಪರಿಚಿತವಾದ, ಅಜ್ಞಾತವಾದ ದೊಡ್ಡ ಸಮಾಜಗಳಲ್ಲಿ ಒಳ್ಳೆಯವರಾಗಿ ಉಳಿಯುವುದಿಲ್ಲ. ತಾನು ಬಲ್ಲ ತನ್ನ ಗೆಳೆಯನಿಗಾಗಿ ಏನನ್ನಾದರೂ ಮಾಡಲು ತಯಾರಾಗುವಂತೆ ಸ್ಫುರಿಸುವ ಒಳ್ಳೆಯತನವು ತಾನು ಅರಿಯದ ಅಜ್ಞಾತನೊಬ್ಬನ ಬಗ್ಗೆ ಮೂಡಲಾರದು.

ಇಷ್ಟರ ಮೇಲೆ, ಸಾಂಸ್ಕೃತಿಕ ವಿಕಾಸದಿಂದ ಉತ್ಪನ್ನವಾದ ಸಾಮಾಜಿಕ ನೀತಿ-ನಿಯಮಗಳು, ಕಟ್ಟುಪಾಡುಗಳು ಮನುಷ್ಯನ ಅಂತಃಪ್ರೇರಣೆಗಳನ್ನು ಬಗ್ಗು ಬಡಿಯಲು ತೊಡಗುತ್ತವೆ. ಇದರಿಂದ ಸಮಾಜದಲ್ಲಿನ ಎಲ್ಲ ಜನರ ಸಮೂಹಕ್ಕೆ ಸಮೂಹವೇ ಸಾಂಸ್ಕೃತಿಕ ನಡಾವಳಿಕೆಗಳ ಕಟ್ಟುಪಾಡುಗಳ ಬಿಗಿಯಾದ ಬಂಧನಕ್ಕೆ ಒಳಪಡುತ್ತ ಸಹಜ ಅಂತಃಪ್ರೇರಣೆಗಳನ್ನು ಹತ್ತಿಕ್ಕಿಕೊಳ್ಳುವ ಒತ್ತಡಗಳಿಗೆ ಸಿಕ್ಕಿಹಾಕಿಕೊಂಡಿದೆ. ಸಂಸ್ಕೃತಿಯು ಬೆಳೆಯುತ್ತ ಹೋದಂತೆ ಅಂಥ ಸಂಸ್ಕೃತಿಯನ್ನು ಬದುಕುವ ಮನುಷ್ಯನ ಅಂತಃಪ್ರೇರಣೆಗಳು ಮತ್ತು ಆ ಸಂಸ್ಕೃತಿಯ ಕಟ್ಟುಪಾಡುಗಳ ನಡುವಿನ ಸಂಘರ್ಷ ಹೆಚ್ಚುತ್ತ

ಹೋಗುತ್ತದೆ. ಇಂದಿನ ಸಮಾಜದಲ್ಲಿ ಬದುಕುವ ಪ್ರತಿಯೊಬ್ಬನೂ ಇಂಥ ಆಂತರಿಕ ಸಂಘರ್ಷಕ್ಕೆ ಸಿಕ್ಕಿಹಾಕಿಕೊಂಡಿರುತ್ತಾನೆ. ಇಂದಿನ ಔದ್ಯೋಗೀಕರಣದ ಸಮಾಜಗಳು ಅತ್ಯಂತ ದೊಡ್ಡ ಸಮಾಜಗಳು, ಅಪಾರವಾದ ಜನಸಮೂಹವನ್ನು ಒಳಗೊಂಡಿರುವಂಥವು. ಇಂಥ ಸಮಾಜದಲ್ಲಿ ಬದುಕುವ ಜನರು ತಮ್ಮ ಮಾನಸಿಕ ಸಂಘರ್ಷವನ್ನು ಸರಿದೂಗಿಸಿಕೊಳ್ಳಲಾರದೇ ಅವರು ಅಸಾಮಾಜಿಕರು ಇಲ್ಲವೆ ಮಾಸಿನಕ ರೋಗಿಗಳಾಗುತ್ತಿದ್ದಾರೆ. ಮಾನಸಿಕ ಕ್ಷೋಭೆಗೆ ಒಳಗಾದವರು ಆತ್ಮಹಿಂಸೆಯಲ್ಲಿ ತೊಡಗಬಹುದು ಇಲ್ಲವೆ, ಬೇರೆಯವರನ್ನು ಹಿಂಸಿಸುತ್ತ ಸಾಮಾಜಿಕ ನೋವನ್ನುಂಟುಮಾಡಬಹುದು. ಹಾಗೆ ನೋಡಿದರೆ ಯಾರೂ ನೋವಿನಿಂದ ಮುಕ್ತರಲ್ಲ ! ಮಾನಸಿಕವಾಗಿ ಆರೋಗ್ಯವಂತ ಮತ್ತು ಮಾನಸಿಕ ರೋಗಿ ಇವರ ನಡುವಿನ ವ್ಯತ್ಯಾಸವನ್ನು ಹೀಗೂ ಹೇಳಬಹುದು. ಒಬ್ಬನಿಗೆ ಹೃದಯದ ನೋವನ್ನು ಸರಿತೂಗಿಸಿಕೊಳ್ಳಬಲ್ಲ ಶಕ್ತಿ ಇದೆ ಮತ್ತು ಇನ್ನೊಬ್ಬನಲ್ಲಿ ಹೃದಯದ ನೋವನ್ನು ಸರಿತೂಗಿಸಿಕೊಳ್ಳಬಲ್ಲ ಶಕ್ತಿ ಇಲ್ಲ.

ಈಗ ನಮಗೆ ಇಮಾನುಅಲ್ ಕಾಂಟ್ ಮತ್ತು ಫ್ರೆಡರಿಕ್ ಶಿಲ್ಲರ್ ಹುಟ್ಟುಹಾಕಿದ ವಿಥ್ಯಾಸಮಸ್ಯೆಯ ಪರಿಹಾರ ಹೊಳೆಯುತ್ತದೆ. ನಾವು ಯಾರೂ ಸಾಕಷ್ಟು ಒಳ್ಳೆಯವರಾಗಿಲ್ಲ ! ಶುದ್ಧ ಅಂತಃಪ್ರೇರಣೆಗೆ ಬದ್ಧರಾಗಿ ಕಾರ್ಯ ಪ್ರವೃತ್ತರಾದರೆ ಸಾಂಸ್ಕೃತಿಕ, ಸಾಮಾಜಿಕ ನೀತಿ ನಿಯಮುಗಳ ಸೆಳವಿಗೆ ಸಿಕ್ಕುಹಾಕಿಕೊಂಡು ಬಳಲಬೇಕಾಗುತ್ತದೆ. ಸಾಮಾಜಿಕ ಕಟ್ಟುಪಾಡುಗಳಿಗೆ ಅಂತಃಪ್ರೇರಣೆಗಳನ್ನು ಹೊಂದಿಸಿಕೊಳ್ಳುವ ಸಮಸ್ಯೆ ಬರುತ್ತದೆ. ಹೀಗೆ ಸಾಮಾಜಿಕ ಕಟ್ಟುಪಾಡುಗಳಿಗೆ ಅಂತಃಪ್ರೇರಣೆಗಳನ್ನು ಹೊಂದಿಸಿಕೊಳ್ಳುವ ಶಕ್ತಿ ಎಲ್ಲರಲ್ಲಿಯೂ ಸಮಾನವಾಗಿರುವುದಿಲ್ಲ. ಕೆಲವರಲ್ಲಿ ಈ ಹೊಂದಾಣಿಕೆ ಕನಿಷ್ಟವಾಗಿರುತ್ತದೆ. ಇನ್ನು ಕೆಲವರಲ್ಲಿ ಇದು ಗರಿಷ್ಟವಾಗಿರುತ್ತದೆ. ಆದ್ದರಿಂದ ಕೆಲವರು ಹೆಚ್ಚು ಸರಿದೂಗಿಸಿಕೊಳ್ಳಬೇಕಾಗುತ್ತದೆ. ಇನ್ನು ಕೆಲವರು ಕಡಿಮೆ ಸರಿದೂಗಿಸಿಕೊಳ್ಳಬೇಕಾಗುತ್ತದೆ.

ಮನುಷ್ಯನು ತನಗೆ ಒಳ್ಳೆಯದನ್ನು ಮಾಡುವವನನ್ನು ಗೌರವಿಸುತ್ತಾನೆ. ಶುದ್ಧ ಅಂತಃಕರಣದ ಪ್ರೇರಣೆಯಿಂದ ಸ್ನೇಹಭಾವದಿಂದ ಸಹಾಯ ಮಾಡುವವನನ್ನು ಅವನು ಒಳ್ಳೆಯವನೆಂದು ಪರಿಗಣಿಸುತ್ತಾನೆ. ಹೀಗೆ ನಿರ್ಧರಿಸುವುದು ಕೂಡ ಸಹಜ ಅಂತಃಪ್ರೇರಣೆಯಿಂದಲೇ. ಹೀಗೆ ಅಂತಃಪ್ರೇರಣೆಯಿಂದ ಪ್ರಚೋದಿತನಾಗಿ ಸಹಾಯ ಮಾಡುವವನನ್ನು ನಾವು ಸಹಜವಾಗಿಯೇ, ತುಂಬ ನಿರ್ಲಿಪ್ತನಾಗಿ, ಸಂಯಮದಿಂದ ನಿರಪೇಕ್ಷನಾಗಿ ನೋಡುತ್ತ ಸಹಾಯ ಮಾಡುವವನಿಗಿಂತ ಒಳ್ಳೆಯವನು ಎಂದುಬಿಡುತ್ತೇವೆ. ಹೀಗೆ ಸಹಜ ಅಂತಃಕರಣೆಯ ರೀತಿಯಲ್ಲದೆ ಕಾಂಟನ ನೈತಿಕತೆಯನ್ನು ಅನುಸರಿಸುತ್ತ ಇವರಿಬ್ಬರಲ್ಲಿ ಯಾರು ಹೆಚ್ಚು ಒಳ್ಳೆಯವರೆಂದು ಹೇಳಬೇಕಾದರೆ ಎರಡನೆಯವನ ಮಾರ್ಗ ಪ್ರಶಂಸಾರ್ಹವಾದ

ದ್ದೆಂದು ಹೇಳಬೇಕಾಗುತ್ತದೆ. ಆದರೆ ಈ ಎರಡನೆಯ ಮಾರ್ಗದ ಅಪಾಯವೆಂದರೆ ನಾವು ನಮ್ಮ ಸಹಜ ಅಂತಃಪ್ರೇರಣೆಯನ್ನು ಬಗ್ಗುಬಡಿಯುತ್ತ ಬರಬೇಕು. ಇದು ಸನ್ಯಾಸದ ದಾರಿ. ಇಂಥ ರೀತಿಯ ಅಪಾಯವೆಂದರೆ ಮನುಷ್ಯನನ್ನು ಇದು ಪ್ರಚೋದನೆ- ಪ್ರತಿಕ್ರಿಯೆಗಳ ಯಂತ್ರವನ್ನಾಗಿಸಿಬಿಡುತ್ತದೆ. ಪ್ರೆಸ್ ಬಟನ್‌ಗಳ ರೀತಿಯಲ್ಲಿ ನಮ್ಮ ಕ್ರಿಯೆಗಳು ಮತ್ತೆ ಮತ್ತೆ ಅದೇ ಜಾಡಿನಲ್ಲಿ ನಡೆಯುವಂತಾಗುತ್ತದೆ. ಇದರಿಂದ ಸಹಜ ಸ್ಫೂರ್ತಿಯ ಚಟುವಟಿಕೆಗಳು ಬತ್ತಿಹೋಗುವಂತಾಗುತ್ತದೆ. ಆದರೆ ಮನುಷ್ಯನ ಮತ್ತು ಬಹುತೇಕ ಪ್ರಾಣಿಗಳ ಸ್ವಭಾವಜನ್ಯವಾದ ಕ್ರಿಯೆಗಳು (Instincts) ಅಂತಃಸ್ಫೂರ್ತಿಯ ಚಟುವಟಿಕೆಗಳಾಗಿರುತ್ತವೆ. ಈ ಅಂತಃಸ್ಫೂರ್ತಿಯು ಬಲವಾಗಿ ಹೊರಹೊಮ್ಮುವಂಥದು. ಇದನ್ನು ತಡೆಹಿಡಿಯುವದಾಗಲೀ, ಮಟ್ಟ ಹಾಕುವದಾಗಲೀ ಅಪಾಯಕಾರಿಯಾದದ್ದು. ಫ್ರಾಯ್ಡ್‌ನು ಈ ಅಪಾಯವನ್ನು ತುಂಬ ಸ್ಪಷ್ಟವಾಗಿ ಗುರುತಿಸುತ್ತಾನೆ. ಫ್ರಾಯ್ಡ್‌ನ ಕಾಲದಲ್ಲಿ ಶೆರಿಂಗ್‌ಟನ್‌ನ ಪರಾವರ್ತಿತ ಪ್ರತಿಕ್ರಿಯೆ ತತ್ವವು ಅಂತಿಮವಾದದ್ದೆಂದು ಮಾನ್ಯತೆ ಹೊಂದಿತ್ತು. ಈ ತತ್ವದ ಅನ್ವಯ ಮನುಷ್ಯನ ನಡಾವಳಿಕೆಗಳೆಲ್ಲವನ್ನೂ ಪ್ರಚೋದನೆ– ಪ್ರತಿಕ್ರಿಯೆಗಳ ಮಾನಸಿಕ ಪ್ರಕ್ರಿಯೆಯಂತೆ ವಿವರಿಸುವುದೇ ಜಾಣತನದ ಮಾರ್ಗ ಅನ್ನಿಸಿತ್ತು. ಇಂಥದ್ದರಲ್ಲಿ ಫ್ರಾಯ್ಡ್‌ನು ಅಂತಃಸ್ಫೂರ್ತಿಯ ಮಹತ್ವವನ್ನು ವಿವರಿಸಿದನು. ಅವನು ಪ್ರೀತಿ ದೇವತೆ- Eros ತಲೆಬರಹದಲ್ಲಿ ಪ್ರಭೇದ ಸಂರಕ್ಷಕವಾದ ಎಲ್ಲ ಸ್ವಭಾವಜನ್ಯ ಅಂತಃಸ್ಫೂರ್ತಿಗಳನ್ನು ಪಟ್ಟಿ ಮಾಡಿದನು.

ಸಂಸ್ಕೃತಿಯ ಬೆಳವಣಿಗೆಯು ಜೀವಿಗಳ ಉತ್ತಮ ಬದುಕಿನ ಬಗ್ಗೆ ಕನಿಷ್ಠ ಆದ್ಯತೆ ನೀಡುತ್ತದೆ. ಬೆಳೆಯುತ್ತಿರುವ ಸಂಸ್ಕೃತಿಯ ಮೇಲೆ ಮಾನವ ಹಕ್ಕುಗಳ ಪರಿಣಾಮ ಕನಿಷ್ಠವಾಗಿರುತ್ತದೆ ಅಥವಾ ಇರುವುದೇ ಇಲ್ಲ. ಸಂಸ್ಕೃತಿ ಯಾವ ದಿಕ್ಕಿನಲ್ಲಿ ಬೆಳೆಯಬೇಕೆನ್ನುವುದನ್ನು ಮಾನವ ಹಕ್ಕುಗಳು ನಿಯಂತ್ರಿಸುತ್ತಿರುವುದಿಲ್ಲ. ಮಾನವ ಹಕ್ಕುಗಳೆಂದು ಕರೆಯುವ ಇವು ಬೇರೇನೂ ಅಲ್ಲ. ಇವು ಅವಶ್ಯವಾಗಿ ತೃಪ್ತಿಪಡಿಸಬೇಕಾದ, ಮನುಷ್ಯನ ಅಂತರಾಳದಲ್ಲಿ ನೆಲೆಗೊಂಡಿರುವ ಆಕಾಂಕ್ಷೆಗಳ ವಿನ್ಯಾಸಗಳು ಇಂಥ ಮಾನವ ಹಕ್ಕುಗಳ ಬದಲು ಸಂಸ್ಕೃತಿಯನ್ನು ರೂಪಿಸುವಲ್ಲಿ, ಅದರ ಬೆಳವಣಿಗೆಯಲ್ಲಿ ಪರಂಪರೆಯ ಮತ್ತು ಪಾರಂಪರಿಕ ಕ್ರಿಯಾವಿಧಿಗಳ ಶಕ್ತಿ ಅಪಾರವಾದದ್ದಾಗಿ ತೋರುತ್ತದೆ. ಇವು ಮನುಷ್ಯನ ಆಕಾಂಕ್ಷೆಗಳನ್ನು, ಅಂತಃಪ್ರೇರಣೆಯ ನೆಲೆಗಳನ್ನು ನಾಶಪಡಿಸುತ್ತವೆ. ಈ ಪ್ರಕ್ರಿಯೆಯ ಸಂದರ್ಭದಲ್ಲಿ ಮನುಷ್ಯನು ತನಗರಿವಿಲ್ಲದೇ ಇದನ್ನು ಪ್ರತಿಭಟಿಸುವ ಶಕ್ತಿಯನ್ನೇ ಕಳೆದುಕೊಂಡುಬಿಟ್ಟಿರುತ್ತಾನೆ ಮತ್ತು ಸಾಂಸ್ಕೃತಿಕ ಸಂರಚನೆಯನ್ನು ಯಥಾವತ್ತಾಗಿ ಒಪ್ಪಿಕೊಳ್ಳುತ್ತಾ ಹೋಗುತ್ತಾನೆ. ಇಂಥಾ

ನಾಗರಿಕತೆಯು ಜನಸಮೂಹದಲ್ಲಿ ಕಿಂಚಿತ್ತು ಪ್ರತಿಭಟನೆಯನ್ನೂ ಮೂಡಿಸದಂತೆ ಆಚರಿಸುತ್ತಿದ್ದ ಕ್ರೌರ್ಯ ಮತ್ತು ದಬ್ಬಾಳಿಕೆಗಳ ಬಗೆಗೆ ತಿಳಿದಾಗ ನಮಗೆ ದಿಗ್ಭ್ರಮೆಯಾಗುತ್ತದೆ. ಮನುಷ್ಯನ ಮೂಲಭೂತ ಹಕ್ಕುಗಳನ್ನು ತೃಣವಾಗಿ ಕಾಣುವ ಇಂದಿನ ಔದ್ಯೋಗೀಕೃತ ಸಮಾಜಗಳನ್ನು ಕಂಡಾಗ ನಮ್ಮ ನಾಗರಿಕತೆಯು ಇಂತಾ ನಾಗರೀಕತೆಗಿಂತ ಯಾವುದೇ ನೆಲೆಯಲ್ಲಾದರೂ ಉತ್ತಮವಾಗಿರುವುದೇ ಎಂದು ಪ್ರಶ್ನಿಸಿಕೊಳ್ಳುವಂತಾಗುತ್ತದೆ. ನಮ್ಮ ಸಮಾಜದ ಎಲ್ಲ ಹಂತಗಳಲ್ಲಿನ ಜನರ ಮೇಲೆ ಒತ್ತಡಗಳು ಹೆಚ್ಚುತ್ತಲೇ ಹೋಗುತ್ತವೆ. ಒತ್ತಡ ಎನ್ನುವ ಶಬ್ದವು ಮನುಷ್ಯನು ಇಂದು ಹೊರಬೇಕಾದ ಎಲ್ಲ ರೀತಿಯ ಭಾರಗಳನ್ನು ಸೂಚಿಸುವಂಥದ್ದಾಗಿದೆ. ಈ ಭಾರವು ಈಗಾಗಲೇ ಹೇಳಿದ ಕ್ರೌರ್ಯ, ದಬ್ಬಾಳಿಕೆಗಳಂತಹ ಹಿಂಸಾತ್ಮಕವಾದ ಬಲಗಳನ್ನಷ್ಟೇ ಒಳಗೊಳ್ಳುವುದಿಲ್ಲ. ಇವುಗಳಷ್ಟೇ ಹಾನಿಕಾರಕವಾದ ಅಥವಾ ಇವುಗಳಿಗಿಂತ ಹೆಚ್ಚು ಹಾನಿಕಾರಕ ಭಾರಗಳೆಂದರೆ–ಮನುಷ್ಯನು ಇಂದು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಪಾಲ್ಗೊಳ್ಳುವ ಪಂಥಾಹ್ವಾನ ಮತ್ತು ವೈವಿಧ್ಯತೆಗಳ ನಾಶ. ಮನುಷ್ಯನು ವೈವಿಧ್ಯರಹಿತ ಮತ್ತು ಪಾಲ್ಗೊಳ್ಳಲು ಆಹ್ವಾನವೀಯದ ಕಪ್ಪು ನೀರಿನಂಥ ಸಂದರ್ಭವನ್ನು ಎದುರಿಸುವಂತಹ ಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ.

(ಕಾನ್ರಾಡ್ ಲಾರೆಂಝನ The Waning of Humaneess ಎಂಬ ಪುಸ್ತಕದಿಂದ)

O

ವಿಜ್ಞಾನ ಎಂದರೆ "ಎಲ್ಲದರ" ಅಭ್ಯಾಸ ಎನ್ನುವ ಬಾಲಿಶ ಭಾವನೆ ನಮ್ಮ ವೈಜ್ಞಾನಿಕರಲ್ಲಿದೆ. ಇದು ಅಸಾಧ್ಯದ ಕೆಲಸ ಕಾರಣ ಅಭ್ಯಸಿಸಬೇಕಾದ ವಸ್ತುಗಳ ಮೊತ್ತ ಅಸಂಖ್ಯವಾಗಿದೆ. ಆದರಿಂದ ಪರಿಶೀಲನೆಗಾಗಿ ಕಾದು ನಿಂತಿರುವ ಅಸಂಖ್ಯ ಮೊತ್ತದ ವಸ್ತುಗಳು, ಪ್ರಾಕೃತಿಕ ಘಟನೆಗಳು ಹಾಗೂ ವಿದ್ಯಮಾನಗಳಲ್ಲಿ ಕೆಲವನ್ನು ಕ್ರಮವಾಗಿ, ಅವುಗಳ ಪ್ರಾಮುಖ್ಯತೆಗೆ ಅನುಗುಣವಾಗಿ ಧರ್ಮ ಎತ್ತಿ ಕೊಡುತ್ತದೆ ; ಯಾವತ್ತೂ ವಿಜ್ಞಾನ ಅಭ್ಯಸಿಸುವುದು ಈ ಧರ್ಮ ಸೂಚಿತವಾದ ವಸ್ತುಗಳನ್ನೆ : ಅದು ಮುಂದೆ ಮಾಡುವುದು ಈ ಬಗೆಯ ಅಭ್ಯಾಸವನ್ನೇ. ಅಂದರೆ, ವಿಜ್ಞಾನ ಎನ್ನುವುದು ಒಂದು ಅವಿಭಾಜ್ಯ ಶಾಸ್ತ್ರವಲ್ಲ : ಎಷ್ಟು ಬಗೆಯ ಧರ್ಮಗಳಿವೆಯೋ ಅಷ್ಟು ಬಗೆಯ ವಿಜ್ಞಾನಗಳಿವೆ. ಪ್ರತಿಯೊಂದು ಧರ್ಮವೂ ಪರಿಶೀಲನೆಗಾಗಿ ಒಂದು ವಸ್ತುಶ್ರೇಣಿಯನ್ನು ಆಯ್ದುಕೊಡುತ್ತದೆ. ಈ ಕಾರಣದಿಂದ ಬೇರೆ ಬೇರೆ ಕಾಲದ ಮತ್ತು ಜನಾಂಗದ ವಿಜ್ಞಾನ ಆಯಾ ಕಾಲದ ಮತ್ತು ಜನಾಂಗದ ಧಾರ್ಮಿಕ ಸ್ವಭಾವವನ್ನು ಹೊಂದಿರುತ್ತದೆ ; ಅದು ಧಾರ್ಮಿಕ ದೃಷ್ಟಿಯಿಂದಲೇ ಈ ವಸ್ತುಗಳನ್ನು ಅಭ್ಯಾಸ ಮಾಡುತ್ತದೆ.

–ಲಿಯೋ ಟಾಲ್‌ಸ್ಟಾಯ್

ಸಮಾಜವಾದದ ಕಾಲ ಮುಗಿಯಿತೆ?

● ಆರ್. ಪಿ. ವೆಂಕಟೇಶಮೂರ್ತಿ

ಸೋವಿಯತ್ ರಷ್ಯಾದಲ್ಲಿ ಮೈಕೆಲ್ ಗೊರ್ಬಚೆವ್ ಅವರು ಆರಂಭಿಸಿದ ಮುಕ್ತತೆ ಹಾಗೂ ಪುನರ್ರಚನೆಯ ಕಾರ್ಯ ಕಮ್ಯುನಿಸ್ಟ್ ಜಗತ್ತಿನಲ್ಲಿ ಕ್ಷಿಪ್ರಗತಿಯ ಬದಲಾವಣೆಗೆ ನಾಂದಿಯಾಗಿದೆ. ಪೂರ್ವ ಯುರೋಪಿನ ಕೆಲವು ಕಮ್ಯುನಿಸ್ಟ್ ದೇಶಗಳಲ್ಲಾದ ಕ್ರಾಂತಿ, ಪೂರ್ವ ಹಾಗೂ ಪಶ್ಚಿಮ ಜರ್ಮನಿಗಳ ವಿಲೀನ, ಚೀನಾದಲ್ಲಿ ವಿದ್ಯಾರ್ಥಿಗಳಿಂದ ನಡೆದ ವಿಫಲ ದಂಗೆ ಹಾಗೂ ಸ್ವತಃ ಸೋವಿಯತ್ ರಷ್ಯಾದಲ್ಲಿ ಈ ವರ್ಷದ ಆಗಸ್ಟ್ 19 ರಂದು ನಡೆದ ವಿಫಲ ಕ್ಷಿಪ್ರಕ್ರಾಂತಿ ಇಡೀ ಕಮ್ಯುನಿಸ್ಟ್ ಜಗತ್ತಿನಲ್ಲಿ ತಳಮಳವನ್ನುಂಟು ಮಾಡಿದೆ.

ಅನೇಕ ರಾಷ್ಟ್ರಗಳಲ್ಲಿ ಕಮ್ಯುನಿಸ್ಟ್ ಆಡಳಿತ ವ್ಯವಸ್ಥೆ ಕುಸಿದುಬಿದ್ದರೆ, ಸೋವಿಯತ್ ಒಕ್ಕೂಟವು ಹಲವು ರಾಷ್ಟ್ರಗಳಾಗಿ ಛಿದ್ರಗೊಂಡಿದೆ. ಇದರಿಂದಾಗಿ ಬಂಡವಾಳಶಾಹಿ ರಾಷ್ಟ್ರಗಳ ಅಗ್ರನಾಯಕ ಅಮೆರಿಕಾ, ಜಾಗತಿಕ ರಾಜಕಾರಣದಲ್ಲಿ ಇನ್ನಷ್ಟು ಪ್ರಬಲ ಗೊಂಡಿದೆ. ಕಮ್ಯುನಿಸ್ಟ್ ಜಗತ್ತಿನ ಈ ಕುಸಿತ ಬಂಡವಾಳಶಾಹಿ ಜಗತ್ತಿನ ವಿಜಯೋತ್ಸಾಹಕ್ಕೆ ಕಾರಣವಾಗಿದೆ.

ಈ ಬೆಳವಣಿಗೆಗಳ ಪ್ರಭಾವ ಪ್ರಪಂಚದ ಹಲವು ರಾಷ್ಟ್ರಗಳ ಮೇಲೆ ಆಗುತ್ತಿದ್ದು, ಭಾರತ ಕೂಡ ಹೊರತಾಗಿಲ್ಲ, ಕೇಂದ್ರ ಸರ್ಕಾರ ಇತ್ತೀಚೆಗೆ ಪ್ರಕಟಿಸಿದ ಹೊಸ ಆರ್ಥಿಕ, ಕೈಗಾರಿಕಾ ಹಾಗೂ ವ್ಯಾಪಾರ ನೀತಿ ಕಳೆದ 40 ವರ್ಷಗಳಲ್ಲಿ ಭಾರತ ಅನುಸರಿಸಿಕೊಂಡು ಬಂದ ಸಮಾಜವಾದೀನೀತಿಯ ಚೌಕಟ್ಟಿಗೆ ಹೊರತಾದದ್ದು ಕೈಗಾರಿಕೆಗಳ ಮೇಲಿನ ನಿರ್ಬಂಧ ಸಡಿಲಿಕೆ, ಮುಕ್ತ ವ್ಯಾಪಾರಕ್ಕೆ ಪ್ರೋತ್ಸಾಹ, ಉದ್ಯಮ ಸ್ಥಾಪನೆಗೆ ವಿದೇಶಿ ಬಂಡವಾಳದ ಆಹ್ವಾನ ಮುಂತಾದ ಕ್ರಮಗಳೇ ಇವಕ್ಕೆ ಉದಾಹರಣೆ, ಅನೇಕ ಕ್ಷೇತ್ರಗಳಲ್ಲಿ ಖಾಸಗೀಕರಣ ಜನಪ್ರಿಯ ಘೋಷಣೆ ಆಗುತ್ತಿದೆ. ಜನತೆ ಕೂಡಾ ಸರ್ಕಾರೀ ಸ್ವಾಮ್ಯದ ಒಡೆತನದ ಬಗ್ಗೆ ಜಿಗುಪ್ಸೆ ಬೆಳೆಸಿಕೊಳ್ಳುತ್ತಿದೆ.

ಈ ಹಿನ್ನೆಲೆಯಲ್ಲಿ "ಸಮಾಜವಾದದ ಕಾಲ ಮುಗಿಯಿತೇ?" ಎಂಬ ಪ್ರಶ್ನೆ ಚರ್ಚಾರ್ಹ ವಾದುದು; ತುಂಬಾ ಕ್ಲಿಷ್ಟಕರ ಪ್ರಶ್ನೆಯೂ ಹೌದು, ಕಮ್ಯುನಿಸಂ ಮತ್ತು ಸೋಷಿಯಲಿಸಂ ವಿರುದ್ಧ ಬಂಡವಾಳಶಾಹಿಗಳಿಂದ ಏಕಮುಖ ದಾಳಿ ನಡೆಯುತ್ತಿರುವ ಈ ಸಂದರ್ಭದಲ್ಲಿ ಸಮಾಜವಾದದ ಪರ ವಾದಿಸುವವರು ಎಲ್ಲೆಡೆ ಅಪಹಾಸ್ಯಕ್ಕೆ ಗುರಿಯಾಗುತ್ತಿರುವುದರಿಂದ ತುಂಬ ಎಚ್ಚರಿಕೆಯಿಂದ ಚರ್ಚೆ ನಡೆಸಬೇಕಾಗಿದೆ.

ಸಮಾಜವಾದವು ಕಮ್ಯುನಿಸಂನ ಸಂಕ್ರಮಣ ಸ್ಥಿತಿ ಅಥವಾ ಮಧ್ಯಂತರ ಘಟ್ಟವೆಂದು ಕಾರ್ಲ್‌ಮಾರ್ಕ್ಸ್ ವಿಶ್ಲೇಷಿಸಿದ್ದಾನೆ. ಉತ್ಪಾದನಾ ಸಾಧನಗಳ ಸಾಮಾಜೀಕರಣದ ಹಂತವನ್ನು ಸಮಾಜವಾದವೆಂದೂ, ಜಗತ್ತಿನಾದ್ಯಂತ ಎಲ್ಲ ರಾಷ್ಟ್ರಗಳ ಗಡಿ ಕಳಚಿ ಜಾಗತಿಕವಾದ ವರ್ಗರಹಿತ ಸಮಾಜದ ಉದಯವನ್ನು ಕಮ್ಯುನಿಸಂ ಎಂದೂ ಸ್ಥೂಲವಾಗಿ ವ್ಯಾಖ್ಯಾನಿಸಬಹುದು. ಆದರೆ ಕಮ್ಯುನಿಸಂ ಹಾಗೂ ಸೋಷಿಯಲಿಸಂ ಪದಗಳು ಪರಸ್ಪರ ತಳುಕೆಯಾಗಿಯೇ ಪ್ರಯೋಗಗೊಂಡು ವ್ಯತ್ಯಾಸ ಗುರ್ತಿಸದಂತಾಗಿದೆ. ಕಮ್ಯುನಿಸಂ ಹಲವು ಶಾಖೆಗಳಾಗಿ ಕವಲೊಡೆದಿದ್ದರೂ ಮಾರ್ಕ್ಸ್, ಏಂಗೆಲ್ಸ್, ಲೆನಿನ್ ಹಾಗೂ ಮಾವೋ ಅವರನ್ನು ಈ ಸಿದ್ಧಾಂತದ ಅಧ್ವರ್ಯುಗಳೆಂದು ಪ್ರಪಂಚದಾದ್ಯಂತ ಗುರ್ತಿಸಲಾಗುತ್ತಿದೆ.

ಸಮಾಜವಾದಿ ಸಿದ್ಧಾಂತ ಕೂಡ ಹಲವು ವ್ಯಾಖ್ಯಾನಗಳಿಂದ ಕವಲೊಡೆದಿದೆ. ಭಾರತದಲ್ಲಿ ಆಚಾರ್ಯ ನರೇಂದ್ರ ದೇವ ಅವರ ಅರೆಮಾರ್ಕ್ಸ್‌ವಾದಿಯಾದ ಜನತಾಂತ್ರಿಕ ಸಮಾಜವಾದ ಮತ್ತು ಡಾ। ರಾಮ ಮನೋಹರ ಲೋಹಿಯಾ ಅವರ ಗಾಂಧಿವಾದ ಪ್ರಣೀತವಾದ ಸಮಾಜವಾದ– ಈ ಎರಡು ತಾತ್ವಿಕ ಶಾಖೆಗಳನ್ನು ಗುರ್ತಿಸಬಹುದು.

ಇವೊತ್ತು ಕಮ್ಯುನಿಸಂನ ಕುರಿತು ಟೀಕೆಗಳೇನೇ ಇದ್ದರೂ, ಜನಗತ್ತಿನ ಶ್ರಮ ಜೀವಿಗಳಿಗೆ ಈ ಸಿದ್ಧಾಂತ ನೀಡಿದ ಕೊಡುಗೆಯನ್ನು ಯಾರೂ ನಿರಾಕರಿಸಲಾಗದು. ಕೇವಲ ಒಂದು ಶತಮಾನ ಈಚೆಗೆ ಹುಟ್ಟಿದ ಈ ಸಿದ್ಧಾಂತ ಪ್ರಪಂಚದ ಮೂರನೇ ಒಂದಕ್ಕಿಂತ ಹೆಚ್ಚು ಭಾಗದಲ್ಲಿ ವ್ಯಾಪಿಸಿಕೊಂಡದ್ದು ಹಾಗೂ ಎಲ್ಲ ಕಡೆ ಕೋಟ್ಯಾಂತರ ಅನುಯಾಯಿಗಳನ್ನು ಹೊಂದಿರುವುದು ಸಾಮಾನ್ಯ ಸಂಗತಿಯಲ್ಲ. ಬಹುಶಃ ಜಗತ್ತಿನ ಇತಿಹಾಸದಲ್ಲಿ ಇಷ್ಟು ಕಡಿಮೆ ಅವಧಿಯಲ್ಲಿ ಇಷ್ಟೊಂದು ಜನಪ್ರಿಯತೆ ಪಡೆದ ಸಿದ್ಧಾಂತ ಇನ್ನೊಂದಿಲ್ಲ. ಧಾರ್ಮಿಕ ಆಂದೋಲನಗಳು ಕೂಡ ಎಲ್ಲ ಕಡೆ ಪ್ರಸಾರಗೊಳ್ಳಲು ಹಾಗೂ ವ್ಯಾಪಕ ನೆಲೆ ಪಡೆಯಲು ಶತಮಾನಗಳನ್ನೇ ತೆಗೆದುಕೊಂಡ ಉದಾಹರಣೆಯನ್ನು ನೆನಪಿಸಿಕೊಂಡಾಗ ಇದು ಅಚ್ಚರಿಯನ್ನುಂಟುಮಾಡುವ ಸಂಗತಿ ಎನ್ನಿಸುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ ಇತಿಹಾಸ ಪೂರ್ತಿ ದಯನೀಯ ಸ್ಥಿತಿಯಲ್ಲಿದ್ದ ಶ್ರಮ ಜೀವಿ ವರ್ಗ ಕಮ್ಯುನಿಸ್ಟ್ ಸಿದ್ಧಾಂತದ ಉಗಮದೊಂದಿಗೆ ಆತ್ಮ ವಿಶ್ವಾಸ ಗಳಿಸಿತೆಂದು ನಿಸ್ಸಂಶಯವಾಗಿ ಹೇಳಬಹುದು. ಮಾನವನ ಮೂಲಭೂತ ಅಗತ್ಯಗಳಾದ ಅನ್ನ, ನೀರು, ವಸತಿ, ಆರೋಗ್ಯ, ಶಿಕ್ಷಣ, ಉದ್ಯೋಗಗಳನ್ನು ಕಮ್ಯುನಿಸ್ಟ್ ರಾಜಕಾರಣ ಜನತೆಗೆ ಒದಗಿಸಿ ಕೊಟ್ಟುದನ್ನು ಮರೆಯಲಾಗದು. ಒಂದು ಶತಮಾನದ ಹಿಂದೆ ಅತ್ಯಂತ ಹೀನಾಯ ಸ್ಥಿತಿಯಲ್ಲಿದ್ದ ಸೋವಿಯತ್ ಗಣರಾಜ್ಯಗಳು ಹಾಗೂ ಕೇವಲ ೫೦ ವರ್ಷಗಳ ಹಿಂದೆ ನಿದ್ರಾವಸ್ಥೆಯಲ್ಲಿದ್ದ ಚೀನಾ ದೇಶ ಇಂದು ಪ್ರಪಂಚದ ಶಕ್ತಿಶಾಲಿ ರಾಷ್ಟ್ರಗಳ ಸಾಲಿಗೆ ಬಂದು ನಿಂತ ಸಾಧನೆ ಅಸಾಧಾರಣವಾದುದು.

ಇಷ್ಟೆಲ್ಲ ಸಾಧನೆಗಳ ದೊಡ್ಡ ಪಟ್ಟಿಯನ್ನೇ ಹೊಂದಿರುವ ಕಮ್ಯುನಿಸ್ಟ್ ದೇಶಗಳು ಕುಸಿದು ಹೋಗುತ್ತಿರುವುದಾದರೂ ಯಾಕೆ ? ಕಮ್ಯುನಿಸಂನ ಕಟ್ಟಾ ಅನುಯಾಯಿಗಳು ಇವೆಲ್ಲ ಸಾಮ್ರಾಜ್ಯಶಾಹಿ ಹಾಗೂ ಬಂಡವಾಳಶಾಹಿಗಳ ಕುತಂತ್ರವೆಂದು ಹೇಳುತ್ತಾರೆ. ಬಂಡವಾಳ ಶಾಹಿ ವ್ಯವಸ್ಥೆ ಉಚ್ಛ್ರಾಯ ಸ್ಥಿತಿಯಲ್ಲಿರುವಾಗ ತನ್ನ ಆಂತರಿಕ ವೈರುಧ್ಯಗಳಿಂದ ಕುಸಿದು ಬಿದ್ದು ಸಮಾಜವಾದೀ ವ್ಯವಸ್ಥೆ ಇತಿಹಾಸದ ಆಂತರಿಕ ತರ್ಕದಿಂದ ತಂತಾನೆ ಜಾರಿಗೆ ಬರುತ್ತದೆಂಬ ಕಾರ್ಲ್‌ಮಾರ್ಕ್ಸ್‌ರ ಭವಿಷ್ಯವಾಣಿಗೆ ವಿರುದ್ಧವಾಗಿ ಕಮ್ಯುನಿಸ್ಟ್ ವ್ಯವಸ್ಥೆ ತನ್ನ ವಿಜೃಂಭಣೆಯ ದಿನಗಳಲ್ಲಿ ಬಿಕ್ಕಟ್ಟಿಗೆ ಸಿಲುಕಲು ಕಾರಣಗಳೇನೆಂದು ಕಮ್ಯುನಿಸ್ಟರು ಗಂಭೀರವಾಗಿ ಚಿಂತಿಸಿ ಉತ್ತರ ಹುಡುಕಿಕೊಳ್ಳಬೇಕಾಗಿದೆ.

"ಉತ್ಪಾದನಾ ಸಾಧನಗಳ ಒಡೆತನ, ರಾಜ್ಯದ ಒಡೆತನದಲ್ಲಿ ಉದ್ಯಮ-ವ್ಯಾಪಾರಗಳ ನಿರ್ವಹಣೆ"- ಇದು ಕಮ್ಯುನಿಸ್ಟ್ ಸಿದ್ಧಾಂತದ ಮುಖ್ಯ ತಿರುಳು. ಕಾರ್ಮಿಕರ, ಶ್ರಮ ಜೀವಿಗಳ ಶೋಷಣೆಗೆ ಖಾಸಗಿ ಆಸ್ತಿಯ ಹಕ್ಕೇ ಮೂಲ ಕಾರಣ ಎಂಬುದು ಮಾರ್ಕ್ಸ್‌ರ ವಿಶ್ಲೇಷಣೆ. ಎಲ್ಲ ಬಗೆಯ ಶೋಷಣೆ ಕೊನೆಗೊಳಿಸಲು ವರ್ಗರಹಿತ ಸಮಾಜ ಸ್ಥಾಪನೆಯೊಂದೇ ದಾರಿ ಎಂದು ಆತ ಪ್ರತಿಪಾದಿಸಿದ. ಈ ಗುರಿ ಸಾಧನೆಗಾಗಿ ಶ್ರಮಜೀವಿಗಳ ಸರ್ವಾಧಿಕಾರದ ಹೆಸರಿನಲ್ಲಿ ಏಕಪಕ್ಷದ ಕೇಂದ್ರೀಕೃತ ಆಡಳಿತ ವ್ಯವಸ್ಥೆ ಜಾರಿಗೆ ಬಂತು.

ಉತ್ಪಾದನಾ ಸಾಧನಗಳ ಸಾಮಾಜೀಕರಣದ ಹೊರತಾಗಿ ಉತ್ಪಾದನಾ ವಿಧಾನದಲ್ಲಾಗಲೀ ಹಾಗೂ ಆ ಮೂಲಕ ಜೀವನ ಸಂಸ್ಕೃತಿಯಲ್ಲಾಗಲೀ ಕಮ್ಯುನಿಸಂ ಹಾಗೂ ಬಂಡವಾಳಶಾಹಿ ನಡುವೆ ವ್ಯತ್ಯಾಸವೇನೂ ಇಲ್ಲ. ಕಮ್ಯುನಿಸ್ಟ್ ತತ್ವದ ಅನುಷ್ಠಾನಕ್ಕೆ ಕೇಂದ್ರೀಕೃತ ರಾಜಕೀಯ ವ್ಯವಸ್ಥೆ ಅನಿವಾರ್ಯ. ಬಂಡವಾಳಶಾಹಿ ವ್ಯವಸ್ಥೆಯಲ್ಲಿನ

ಖಾಸಗಿ ಆಸ್ತಿಯ ಮಾಲಿಕರ ಸ್ಥಾನವನ್ನು ಕಮ್ಯುನಿಸ್ಟ್ ವ್ಯವಸ್ಥೆಯಲ್ಲಿ ಆಡಳಿತಗಾರರು ಹಾಗೂ ಅಧಿಕಾರಶಾಹಿ ಪಡೆಯುತ್ತದೆ. ಒಂದು ಕೇಂದ್ರೀಕೃತ ವ್ಯವಸ್ಥೆ ಆರಂಭದಲ್ಲಿ ಎಷ್ಟೇ ಕ್ರಾಂತಿಕಾರವಾಗಿಯೂ, ಜನಪರವಾಗಿಯೂ ಕಾರ್ಯನಿರ್ವಹಿಸಿದರೂ ಕಾಲಾನುಕ್ರಮದಲ್ಲಿ ಈ ವ್ಯವಸ್ಥೆಯ ಆಯಕಟ್ಟಿನ ಸ್ಥಾನದಲ್ಲಿರುವವರಲ್ಲಿ ಸಹಜವಾಗಿ ಪಟ್ಟಭದ್ರ ಹಿತಾಸಕ್ತಿ ಬೆಳೆಯುತ್ತದೆ. ನಂತರ ಇದು ಭ್ರಷ್ಟವೂ, ಕ್ರೂರಿಯೂ, ಜನವಿರೋಧಿಯೂ ಆಗಿ ಮಾರ್ಪಡುತ್ತದೆ.

ಈ ದೋಷಗಳನ್ನು ಮನಗಂಡ ಗೊರ್ಬಚೇವ್ ಅವರು ಮುಕ್ತತೆ ಹಾಗೂ ಪುನರ್ರಚನೆಯ ಕಾರ್ಯ ಆರಂಭಿಸಿಸಿ ಕಮ್ಯುನಿಸ್ಟ್ ವ್ಯವಸ್ಥೆಯ ಮಾನ ಉಳಿಸಲು ಪ್ರಯತ್ನ ಮಾಡಿದರು. ಆದರೆ ಏಳು ದಶಕಗಳ ಬಿಗಿ ಆಡಳಿತದ ನಂತರ ಮುಕ್ತ ವಾತಾವರಣವನ್ನು ಅನುಭವಿಸಿದ ಜನರಲ್ಲಿ ಹುದುಗಿದ್ದ ಬಯಕೆಗಳು ಆಸ್ಫೋಟಗೊಂಡಾಗ ಗೊರ್ಬಚೆವ್ ಅವರಿಗೆ ವ್ಯವಸ್ಥೆಯನ್ನು ಹಿಡಿದಿಟ್ಟುಕೊಳ್ಳಲಾಗಲಿಲ್ಲ. ಕೇವಲ ಎರಡು ವರ್ಷಗಳ ಹಿಂದೆ ಜಗತ್ತಿನಲ್ಲಿ ಯಾರೂ ನಿರೀಕ್ಷಿಸಿರದ ತೀವ್ರಗತಿಯ ಬದಲಾವಣೆಗಳು ಈಚೆಗೆ ರಷ್ಯಾದಲ್ಲಿ ಸಂಭವಿಸಿವೆ.

ಈ ಹಿನ್ನೆಲೆಯಲ್ಲಿಯೇ ಮಹಾತ್ಮಗಾಂಧೀಜಿಯವರು ರಾಜ್ಯವೆಂಬುದು ಹೃದಯ ಮನಸ್ಸುಗಳಿಲ್ಲದ ಯಂತ್ರವೆಂದು ಕರೆದು ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ವಿರೋಧಿಸಿದ್ದರು. ಬಹುಶಃ ಕಮ್ಯುನಿಸಂನ ಮುಖ್ಯ ಕೊರತೆ ಎಂದರೆ ಅದು ಮನುಷ್ಯನನ್ನು ಮೂಲಭೂತವಾಗಿ ಕೇವಲ ಆರ್ಥಿಕ ಜೀವಿ ಎಂದು ಗ್ರಹಿಸಿ ಹೊರಟದ್ದು. ಹೀಗಾಗಿ ಈ ತತ್ವ ಮನುಷ್ಯನ ಭೌತಿಕ ಅಗತ್ಯಗಳನ್ನಷ್ಟೇ ಪೂರೈಸುವ ಕಡೆಗೆ ತನ್ನ ಗಮನವನ್ನು ಕೇಂದ್ರೀಕರಿಸಿತ್ತು. ಮಾನವನ ಜೀವನ ಸುಲಭದ ವ್ಯಾಖ್ಯಾನಕ್ಕೆ ಒಳಪಡುವಂಥದಲ್ಲ ಎಂದು ಅದು ಅರಿಯಲಿಲ್ಲ. ಒಬ್ಬ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಹಲವು ಆಯಾಮಗಳಿವೆ. ಅರ್ಥ, ಕಾಮ, ಮೋಕ್ಷ ಹೀಗೆ ಹಲವು ಬಗೆಯಲ್ಲಿ ಮನುಷ್ಯ ನಿರಂತರ ಹುಡುಕಾಟದಲ್ಲಿ ತೊಡಗಿರುತ್ತಾನೆ. ಇಂತಹ ಸಂಕೀರ್ಣ ಮನುಷ್ಯನನ್ನು ಕೇವಲ ಒಂದು ಭಾಗವಾದ "ಅರ್ಥ"ದ ಮಟ್ಟಕ್ಕೆ ಇಳಿಸಿ, ಉಳಿದ ಆಯಾಮಗಳ ಹುಡುಕಾಟಕ್ಕೆ, ಅಭಿವ್ಯಕ್ತಿಗೆ ಪರಿಹಾರ ಒದಗಿಸದ ಮತ್ತು ಕೆಲವು ಬಯಕೆಗಳನ್ನು ಹತ್ತಿಕ್ಕಿದುದರ ಫಲ ಕಮ್ಯುನಿಸ್ಟ್ ವ್ಯವಸ್ಥೆಯ ಕುಸಿತಕ್ಕೆ ಮುಖ್ಯ ಕಾರಣವೆಂಬುದು ನನ್ನ ಅನಿಸಿಕೆ.

ಕಮ್ಯುನಿಸ್ಟ್ ರಾಷ್ಟ್ರಗಳ ಕಥೆ ಇದಾದರೆ. ತನ್ನ ಸಂವಿಧಾನದಲ್ಲಿ ಸಮಾಜವಾದಿ "ಗಣತಂತ್ರ" ಎಂದು ಘೋಷಿಸಿಕೊಂಡಿರುವ ಭಾರತದಲ್ಲಿ ಮಿಶ್ರ ಆರ್ಥಿಕ ವ್ಯವಸ್ಥೆಯ

ಅಂಗವಾಗಿ ನಾಮಕಾವಾಸ್ತೆ ಸಮಾಜವಾದ ಜಾರಿಗೆ ಬಂದು, ಇವೊತ್ತು ವಿಕಾರ ರೂಪ ಪಡೆದಿದೆ. ಹಲವು ಸಾರ್ವಜನಿಕ ಉದ್ಯಮಗಳು, ರಾಷ್ಟ್ರೀಕೃತ ಸಂಸ್ಥೆಗಳು ತಮ್ಮ ಅವರ್ಣನೀಯ ಅದಕ್ಷತೆಗೂ ಮಿತಿಮೀರಿದ ನಷ್ಟದ ಬಾಬತ್ತಿಗೂ ಹೆಸರಾಗಿ ಸಮಾಜವಾದದ ವಿಶ್ವಾಸಾರ್ಹತೆಯನ್ನು ಕೆಳಗಿಳಿಸಿವೆ. ಸಮಾಜವಾದವೆಂಬುದು ಹಳೇ ಕಾಲದ ಗೊಡ್ಡು ಪುರಾಣವೆಂದು ಇಲ್ಲಿ ಚಿತ್ರಿತವಾಗುವ ಪರಿಸ್ಥಿತಿ ನಿರ್ಮಾಣ ಆಗಿದೆ. ಈ ಪರಿಸ್ಥಿತಿಗೆ ಘನಘೋರ ಅಶಿಸ್ತು ಹಾಗೂ ಅರಾಜಕತೆಯನ್ನು ಮೈಗೂಡಿಸಿಕೊಂಡ ಇಲ್ಲಿನ ಸಮಾಜವಾದಿಗಳೂ ತಮ್ಮ ಕಾಣಿಕೆ ಸಲ್ಲಿಸಿದ್ದಾರೆ.

ಒಂದು ಉದಾತ್ತ ಧ್ಯೇಯಕ್ಕೆ ಇಂದು ಬಂದೊದಗಿರುವ ದುರ್ಗತಿ ಶುಭ ಸೂಚನೆಯೇನೂ ಅಲ್ಲ. ಸಮಾಜವಾದದ ದುಃಸ್ಥಿತಿಯನ್ನು ಕಂಡು ಕೇಕೆ ಹಾಕುತ್ತಿರುವ ಬಂಡವಾಳಶಾಹಿಗಳು, ಜಗತ್ತು ಇಂದು ಎದುರಿಸುತ್ತಿರುವ ಹಲವಾರು ಭೀಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತಾರೆಯೇ ಎಂದು ಕೇಳಬೇಕಾಗುತ್ತದೆ. ಬಹುಸಂಖ್ಯಾತ ಅಸಹಾಯಕರ ಹಾಗೂ ಬಡರಾಷ್ಟ್ರಗಳ ಶೋಷಣೆಯೇ ಬಂಡವಾಳಶಾಹಿಗಳ ಇತಿಹಾಸ ಆಗಿರುವುದರಿಂದ, ಜಗತ್ತು ಈಗ ಹೊಸ ದಾರಿಯೊಂದನ್ನು ಕಂಡುಕೊಳ್ಳಬೇಕಾಗಿದೆ. ಈಗ ದಾರಿ ಕಾಣದ ಜಗತ್ತು ತಳಮಳಗೊಂಡಿದೆ. ಹಲವು ರಾಷ್ಟ್ರಗಳಲ್ಲಿ ನಡೆದಿರುವ ಜನಾಂಗ ಘರ್ಷಣೆ, ಪ್ರತ್ಯೇಕತಾ ಚಳುವಳಿಗಳು, ಭಯೋತ್ಪಾದಕ ಚಟುವಟಿಕೆಗಳು ಮುಂತಾದ ವಿಧ್ವಂಸಕ ಕೃತ್ಯಗಳು ಸರಿದಾರಿ ಕಾಣದ ಜನರ ಹತಾಶ ಹುಡುಕಾಟವಾಗಿದೆ.

ಇತಿಹಾಸದಲ್ಲಿ ಇಂತಹ ಬಿಕ್ಕಟ್ಟು ಸಂಭವಿಸಿದಾಗಲೆಲ್ಲ ಹೊಸತೊಂದು ತತ್ವಜ್ಞಾನ ಹುಟ್ಟಿ ಜಗತ್ತನ್ನು ಮುನ್ನಡೆಸಿದ ಉದಾಹರಣೆಗಳಿವೆ. ಅಂತುಹದೇ ಸಂಕ್ರಮಣಾವಸ್ಥೆಗೆ ಜಗತ್ತಿಂದು ಒಂದು ತಲುಪಿದೆ. ಎಲ್ಲ ಧಾರ್ಮಿಕ ಆಂದೋಲನಗಳು, ರಾಜಕೀಯ ಚಳುವಳಿಗಳು ತಮ್ಮ ಪ್ರಸ್ತುತತೆಯನ್ನು ಕಳೆದುಕೊಂಡಿರುವ ಈ ಹೊತ್ತಿನಲ್ಲಿ ಸಮಾಜವಾದ ಆತ್ಮಾವಲೋಕನ ಮಾಡಿಕೊಂಡು ತನ್ನ ಹಾದಿಯ ದೋಷಗಳನ್ನು ತಿದ್ದಿಕೊಳ್ಳುವುದಾದರೆ ಒಂದು ವಿಶ್ವಾಸಾರ್ಹ ತತ್ವವಾಗಿ ರೂಪುಗೊಳ್ಳುವ ಅವಕಾಶ ಇದೆ.

ಈ ನಿಟ್ಟಿನಲ್ಲಿ ಕೆಲವು ಅನಿಸಿಕೆಗಳನ್ನು ಪರಿಶೀಲಿಸಬಹುದು :-

೧) ಕೇವಲ ವ್ಯವಸ್ಥೆಯ ಬದಲಾವಣೆಯಿಂದ ಒಟ್ಟು ಸಮಾಜದಲ್ಲಿ ಪರಿವರ್ತನೆ ತರಲು ಸಮಾಜವಾದಿ ಆಂದೋಲನ ಪ್ರಯತ್ನ ನಡೆಸಿತು. ಒಬ್ಬ ವ್ಯಕ್ತಿ ಸಮಾಜದ

ಅಂಗದ ಜೊತೆಗೆ ಪ್ರತ್ಯೇಕ ವ್ಯಕ್ತಿತ್ವವುಳ್ಳ ಘಟಕವೂ ಹೌದು. ಈ ದೃಷ್ಟಿಯಿಂದ ವ್ಯವಸ್ಥೆಯ ಬದಲಾವಣೆಯ ಜೊತೆಗೆ ವ್ಯಕ್ತಿಯ ಪರಿವರ್ತನೆಗೆ ಕೂಡ ಪ್ರಾಮುಖ್ಯತೆ ನೀಡಬೇಕಾಗುತ್ತದೆ.

೨) ಎಂತುಹದೇ ಕ್ರಾಂತಿಕಾರಿ ಆಂದೋಲನವಾದರೂ, ಕಾಲಕ್ರಮದಲ್ಲಿ ಅದು ಭ್ರಷ್ಟಗೊಳ್ಳುವ ಸಾಧ್ಯತೆ ಇರುವುದರಿಂದ ನಿರಂತರ ಜಾಗೃತಿಯ ಕಡೆಗೆ ಗಮನ ನೀಡಬೇಕು.

೩) ಕಮ್ಯುನಿಸ್ಟ್ ದೇಶಗಳು ಉತ್ಪಾದನಾ ಸಾಧನಗಳನ್ನು ಸಾಮಾಜೀಕರಣಗೊಳಿಸುವ ಕಡೆಗಷ್ಟೇ ನೀಡಿದ ಗಮನವನ್ನು, ಸಮಾನತೆ ಸಾಧಿಸಲು ಅಗತ್ಯವಾದ ಜೀವನ ಶೈಲಿ ಹಾಗೂ ಸಂಸ್ಕೃತಿಯನ್ನು ರೂಪಿಸಿಕೊಳ್ಳಬೇಕು. ಉತ್ಪಾದನಾ ಸಾಧನಗಳ ಸಂಬಂಧದ ಜೊತೆಗೆ ಉತ್ಪಾದನಾ ವಿಧಾನಗಳ ಬದಲಾವಣೆ ಕೂಡಾ ಅಗತ್ಯ ಇದೆ. ಈ ನಿಟ್ಟಿನಲ್ಲಿ ಗಾಂಧಿ ವಿಚಾರಧಾರೆಯ ಮೊರೆ ಹೋಗಬಹುದು. ದೊಡ್ಡ ಪ್ರಮಾಣದ ಉತ್ಪಾದನಾ ವಿಧಾನದ ಸಂರಚನೆಯಲ್ಲೇ ಅಸಮಾನತೆಯ ಬೇರುಗಳಿದ್ದು, ಈ ವಿಧದ ತಂತ್ರಜ್ಞಾನದ ಬಳಕೆ ಬಂಡವಾಳಶಾಹಿ ವ್ಯವಸ್ಥೆಗೆ ಪೂರಕವಾಗಿದೆ. ಅಸಮಾನತೆಯನ್ನು ತೊಡೆದು ಹಾಕುವ ಹಾಗೂ ಕಾಲದ ಅಗತ್ಯವನ್ನು ಪೂರೈಸುವ ಮಧ್ಯಂತರ ತಂತ್ರಜ್ಞಾನದ ಆವಿಷ್ಕಾರಕ್ಕೆ ಹೊಸ ಛಲದೊಂದಿಗೆ ಸಮರ್ಪಿಸಿಕೊಳ್ಳುವ ಅಗತ್ಯ ಇದೆ. ಇಂದಿನ ಕಂಪ್ಯೂಟರ್ ಯುಗದಲ್ಲಿ ಮಧ್ಯಂತರ ತಂತ್ರಜ್ಞಾನದ ಮಾತು ಎಷ್ಟೇ ಅಸಂಗತವೆಂದು ಕಂಡರೂ, ಎಲ್ಲರಿಗೂ ಉದ್ಯೋಗ ಒದಗಿಸುವ ಹಾಗೂ ಪರಿಸರ ನಾಶ ಕಡಿಮೆಗೊಳಿಸುವ ದೃಷ್ಟಿಯಿಂದ ಹೊಸ ತಂತ್ರಜ್ಞಾನ ಕಂಡುಕೊಳ್ಳಲೇಬೇಕಾಗಿದೆ.

೪) ಮಿತಿಮೀರಿದ ಜನಸಂಖ್ಯೆಯ ಹೆಚ್ಚಳದಿಂದಾಗಿ ಭೂಮಿಯ ಮೇಲೆ ಒತ್ತಡ ಹೆಚ್ಚಾಗುತ್ತಿದ್ದು, ಸಂಪನ್ಮೂಲಗಳು ಬರಿದಾಗುತ್ತಿರುವುದರಿಂದ ಗ್ರಾಹಕ ಸಂಸ್ಕೃತಿಗೆ ಹೊರತಾದ ಸರಳ ಜೀವನ ಸಂಸ್ಕೃತಿಯೊಂದನ್ನು ರೂಪಿಸಬೇಕಾಗಿದೆ.

೫) ಇಲ್ಲಿಯತನಕದ ಅನುಭವಗಳ ಆಧಾರದ ಮೇಲೆ ಖಾಸಗಿ ಆಸ್ತಿ ಹಾಗೂ ಸಾಮಾಜೀಕರಣದ ನಡುವೆ ಹೊಸ ಸಮತೋಲನ ಸ್ಥಾಪಿಸುವ ಅಗತ್ಯ ಇದೆ.

೬) ಕೇಂದ್ರೀಕೃತ ರಾಜಕೀಯ ಹಾಗೂ ಆರ್ಥಿಕ ವ್ಯವಸ್ಥೆಗೆ ಬದಲಾಗಿ ವಿಕೇಂದ್ರೀಕರಣ ವ್ಯವಸ್ಥೆ ಜಾರಿಗೆ ಬರಬೇಕು.

೭) ಗುರಿಯಷ್ಟೇ ಮಾರ್ಗ ಪರಿಶುದ್ಧವಾಗಿರಬೇಕು.

ಗ್ರಾಹಕ ಸಂಸ್ಕೃತಿಯೇ ಬಂಡವಾಳ ಆಗಿರುವ ಬಂಡವಾಳಶಾಹಿ, ಇಡೀ ಜಗತ್ತನ್ನು ಆವರಿಸಿಕೊಳ್ಳುತ್ತಿದೆ; ಆದರೆ ಅದನ್ನು ತಡೆದುಕೊಳ್ಳುವ ಶಕ್ತಿ ಅಭಿವೃದ್ಧಿ ಶೀಲ ದೇಶಗಳಿಗಿಲ್ಲ. ಈ ಗ್ರಾಹಕ ಸಂಸ್ಕೃತಿ ಈ ದೇಶಗಳ ಸಮಾಜಗಳನ್ನು ಅನತಿ ಕಾಲದಲ್ಲೇ ಉಳ್ಳವರು ಹಾಗೂ ಅಸಹಾಯಕರ ನಡುವೆ ಬಹುದೊಡ್ಡ ಕಂದಕವನ್ನು ಸೃಷ್ಟಿ ಮಾಡಿ ಒಡೆಯಲಿದೆ. ಹೀಗಾಗಿ ಬಂಡವಾಳ ಶಾಹಿಯ ವಿಜಯೋತ್ಸಾಹ ಭಾರತದಂತಹ ಬಡ ದೇಶಗಳಲ್ಲಿ ಬಹಳ ಕಾಲ ಉಳಿಯಲಾರದು. ಆದುದರಿಂದ ಬಂಡವಾಳಶಾಹಿ ಸಂಸ್ಕೃತಿಗೆ ಸಮರ್ಪಕ ಪರ್ಯಾಯವೊಂದನ್ನು ಒದಗಿಸುವ ಆಶಯ ಹೊಂದಿರುವ ಸಮಾಜವಾದದ ಕಾಲ ನಿಜವಾಗಿಯೂ ಮುಗಿದಿಲ್ಲ. ಈಗ ಅದಕ್ಕೆ ನಿಜವಾದ ಆತ್ಮಾವಲೋಕನದ ಕಾಲ. ತನ್ನ ಆಶಯ ಮಾನವೀಯವೂ, ಸರಳವೂ ಆದುದರಿಂದ ಸಮಾಜವಾದ ಧೃತಿಗೆಡದೆ ತನ್ನ ಹಿಂದಿನ ಅನುಭವಗಳ ಆಧಾರದ ಮೇಲೆ ಬಂಡವಾಳ ಶಾಹಿ ಸಂಸ್ಕೃತಿಯನ್ನು ವಿರೋಧಿಸುವಲ್ಲಿ ತಾನೆಲ್ಲಿ ಸೋತೆ ಎಂಬುದನ್ನೂ ಗುರ್ತಿಸಿಕೊಂಡು ಹೊಸ ವಿನಯದೊಡನೆ ವಿಶ್ವಾಸಾರ್ಹತೆ ಗಳಿಸಿಕೊಳ್ಳಬೇಕಾಗಿದೆ. ಕಳೆದ ಆರೇಳು ದಶಕಗಳಲ್ಲಿ ಮುರಿದುಬಿದ್ದಿರುವ ಸೈದ್ಧಾಂತಿಕ ಮಾದರಿಗಳನ್ನು ತೊರೆದು ಬದಲಾದ ಪರಿಸರದಲ್ಲಿ ಹೊಸ ಮಾದರಿಗಳ ಹುಡುಕಾಟವನ್ನು ಆಧರಿಸಿದ ಹೊಸ ರೂಪದೊಡನೆ ಸಮಾಜವಾದ ಜನರ ಮನಸ್ಸನ್ನು ತಟ್ಟಬಹುದಾಗಿದೆ.

(ಕೃಪೆ : **ಆಕಾಶವಾಣಿ, ಹಾಸನ**)

O

ಬಹುಶಃ ಬಹು ದೂರದಲ್ಲಿ ನಡೆವ ಅಪ್ರತ್ಯಕ್ಷ ಪರೀಕ್ಷೆಯಲ್ಲಿ ತನಗಿರುವ ಅಸಾಧ್ಯ ನಂಬಿಕೆಯಿಂದಲೋ ಏನೋ ಆಧುನಿಕ ಜಗತ್ತು ಅತ್ಯಂತ ಭಯಂಕರ ರೂಪದ ದ್ವಂದ್ವಗಳನ್ನು ಪರಸ್ಪರ ವಿರೋಧ ಭಾವಗಳನ್ನೂ ಹುಟ್ಟಿಸಿದೆ: ಭೌತ, ಅಭೌತ; ವೈಯಕ್ತಿಕ, ಸಾಮಾಜಿಕ; ಅನ್ನ, ಸಂಸ್ಕೃತಿ - ಹೀಗೆ. ಈ ದ್ವಂದ್ವಗಳಲ್ಲಿ ಇದೆಯೆಂದು ಭಾವಿಸುವ ವಿರೋಧ ಕೃತಕವಾದದ್ದು, ಅನಾಸ್ತವಾದದ್ದು. ಈ ದ್ವಂದ್ವಗಳು ಆಧನಿಕ ಮನಸ್ಸಿನ ಒಂದು ಘನ ರೋಗ. ಅದು ಕೆಲವು ಕಲ್ಪನಾ ಪಿಶಾಚಗಳನ್ನು ಸೃಷ್ಟಿಸಿಕೊಂಡಿದೆ, ಅವುಗಳನ್ನು ನಾಶಪಡಿಸಲು ಅಸಮರ್ಥ ವಾಗಿದೆ. ಸದ್ಯತೆಯನ್ನು ನಿರಾಕರಿಸಿದ್ದರಿಂದ ಈ ದ್ವಂದ್ವಗಳು ಹುಟ್ಟಿಕೊಂಡಿವೆ. ಏಕೆಂದರೆ ಇತಿಹಾಸ ಕಟ್ಟುಕಥೆಗಳನ್ನು ನಿರಾಕರಿಸುತ್ತದೆ; ಕಟ್ಟುಕಥೆ ಇತಿಹಾಸವನ್ನು ನಿರಾಕರಿಸುತ್ತದೆ.

–ಡಾ|| ರಾಮಮನೋಹರ ಲೋಹಿಯಾ

(ಇತಿಹಾಸ ಚಕ್ರ)

ನನ್ನ ನೆನಪುಗಳು

● ಆನಂದ ಕಂದ

ನನಗೆ ಪ್ಲೇಗು ರೋಗ

ಮದುವೆ ಮುಂದೆ ಬಿದ್ದುದರಿಂದ ಧರಮಟ್ಟಿಗೆ ಹೋದ ನಾವು ಮರಳಿ ಮೂಡಲಗಿಗೆ ಬಂದುದನ್ನು ಈ ಮೊದಲೇ ಹೇಳಿದ್ದೇನೆ. ಬಂದ ದಿನವೇ ದೊಡ್ಡ ಅಡ್ಡ ಮಳೆಯಾಗಿ ನಮ್ಮ ಮನೆಯ ಹಿಂದೆಯೇ ಇದ್ದ ಆ ಊರ ಹಳ್ಳವು ಭೋರ್ಗರೆದು ತುಂಬಿ ಹರಿಯಿತು. ಆದರ ಮರುದಿನ ಪ್ರವಾಹವು ಚಿಕ್ಕದಾಗಿ ಹಳ್ಳದಲ್ಲಿ ಹರಿಯುತ್ತಿದ್ದಿತು. ಅಂದು ನಾನು ತಣ್ಣೀರ ಸ್ನಾನಕ್ಕಾಗಿ ಹಳ್ಳಕ್ಕೆ ಹೋಗಿ ಆ ಹೊಸ ನೀರಲ್ಲಿ ಚಲ್ಲಾಟವಾಡಿ ಸ್ನಾನ ಮಾಡಿದೆನು. ಒಂದು ಗಂಟೆಯಾದರೂ ನನಗೆ ವೇಳೆಯ ಪರಿವೆ ಇರಲಿಲ್ಲ. ಆಮೇಲೆ ಮನೆಗೆ ಬಂದು ಒಣಗಹಾಕುತ್ತಿರುವಾಗಲೇ ಮೈಗೆಲ್ಲ ತಿಂಡಿ ಕಾಣಿಸತೊಡಗಿತು. ಹೊಟ್ಟೆಯಲ್ಲಿಯ ಒಂದು ಬಗೆಯ ಹುರುಹುರು. ತಾಯಿ ಬಂದು ನನ್ನನ್ನು ನೋಡಿದಳು. ಸ್ವಲ್ಪ ವೇಳೆಯಲ್ಲಿಯೇ ಮೈ ತುಂಬ ಗಾದರಿಗಳು. ಅದನ್ನು ನೋಡಿದ ತಾಯಿ ನಿನಗೆ ಪಿತ್ತಗಾದರಿಗಳು ಎದ್ದಿವೆ. ಅದಕ್ಕೆ ತಕ್ಕ ಮದ್ದನ್ನು ಮಾಡಬೇಕೆಂದು ಒಂದು ಬಟ್ಟಲು ತುಂಬ ಅಂಬಟೆ ಸೋರಿನ ನೀರು ಮಾಡಿ ಅದರಲ್ಲಿ ಕಲ್ಲುಸಕ್ಕರೆಯ ಪುಡಿಯನ್ನು ಬೆರೆಸಿ ನನಗೆ ಕುಡಿಯಲು ಕೊಟ್ಟಳು, ಅಲ್ಲದೆ ಆ ಸೋರಿನ ಚರಟವನ್ನೇ ಮೈಗೆಲ್ಲ ಹಚ್ಚಿ ತಿಕ್ಕಿದಳು. ಮುಂದೆ ಅರ್ಧ ತಾಸಿನಲ್ಲಿಯೇ ತಿಂಡಿ ಕಡಿಮೆಯಾಯಿತು, ಮೈಮೇಲೆದ್ದ ಗಾದರಿಗಳು ಒಂದೊಂದಾಗಿ ಅಡಗಲು ತೊಡಗಿದವು. ಅಂದು ಊಟ ಮಾಡಿ ಮಲಗಿಕೊಂಡೆನು.

ಸಂಜೆಯ ಐದೂವರೆ ಗಂಟೆಗೆ ಸ್ವಾಮಿಗಳ ಮಠಕ್ಕೆ ಹೋಗಿ ತಬಲಾ, ಡಗ್ಗಾ ಬಿಚ್ಚಿ ಬಾರಿಸತೊಡಗಿದೆನು. ಐದು ನಿಮಿಷ ಆದು ಸಾಗಿರಬಹುದು. ಇದ್ದುದಿದ್ದ–ಹಾಗೆಯೇ ಹೊಟ್ಟೆಯಲ್ಲಿ ಒಂದು ವಿಧದ ಸಂಕಟವು ಆರಂಭವಾಯಿತು. ಮಠದಲ್ಲಿ ಮರುದಿನ ಒಂದು ಸಮಾರಾಧನೆ ಇದ್ದುದರಿಂದ ಹತ್ತು–ಹನ್ನೆರಡು ಜನ ಒಕ್ಕಲಗಿತ್ತಿಯರು ಅಕ್ಕಿ, ಬೇಳೆಗಳನ್ನು ಹಸನು ಮಾಡುವುದಕ್ಕೆ ತೊಡಗಿದರು. ಇನ್ನೊಂದೆಡೆ ದೊಡ್ಡ ಬೀಸುವ ಕಲ್ಲಿನ ಸುತ್ತಲೂ ಕಲಿತ ಮೂವರು ಹೆಣ್ಣು ಮಕ್ಕಳು ಗೋಧಿಯನ್ನು ಬೀಸುತ್ತಿದ್ದರು. ಅದನ್ನು ನೋಡಿದ ನಾನು, 'ಹಾಗಾದರೆ ನಾಳೆಯ ದಿನ ಮಠದಲ್ಲಿಯೇ ನಮ್ಮ ಊಟ'

ಎಂದು ಭಾವಿಸಿದೆನು. ಆದರೂ ಸಮಾಧಾನವೇನೂ ಆಗದೆ ಮನೆಯ ಕಡೆಗೆ ಹೊರಟೆನು. ಮನೆಯಲ್ಲಿ ಹಾಸಿಗೆಯನ್ನು ಹಾಸಿ ಬಿದ್ದುಕೊಂಡುದಷ್ಟೆ ನೆನಪು. ಆಮೇಲೆ ಎಚ್ಚರ ದಪ್ಪಿಸುವ ಜ್ವರ ತುಂಬಿಕೊಂಡಿತು. ಯಾರ ಪರಿಚಯವನ್ನೂ ನಾನು ಹಿಡಿಯದಂತಾದೆ. ನಮ್ಮ ತಾಯಿ ಮೈಮುಟ್ಟಿ ನೋಡಿದಳು. ಬೆಂಕಿಯಂತಹ ಜ್ವರ. ತೊಡೆಯ ಮೇಲು ಗಡೆಗೆ ಆಗಾಗ ಕೈ ಹಚ್ಚುತ್ತಿದ್ದೆನಂತೆ. ಅಲ್ಲಿ ನೋಡಿದರೆ ಒಂದು ಗಂಟು ಎದ್ದು ಅದರ ನೋವು ಅಸಹನೀಯವಾಗಿತ್ತು. ಹಿರಿಯರೆಲ್ಲರೂ ಭಾವಿಸಿದರು – ಇದು ಪ್ಲೇಗು ರೋಗವೆಂದು. ಎಲ್ಲರೂ ತುಂಬಾ ಹೆದರಿದರು.

ಒಬ್ಬ ದೇಶೀಯ ವೈದ್ಯರು ಬಂದು ನೋಡಿ ಪ್ಲೇಗು ರೋಗಕ್ಕೆ ಔಷಧವೇ ಇಲ್ಲವೆಂದು ನುಡಿದರಂತೆ. ಆದರೂ ನನ್ನ ತೊಡೆಯ ಮೇಲಾದ ಗಂಟಿಗೆ ಎಕ್ಕದ ಹಾಲನ್ನು ತರಿಸಿ ಲೇಪಿಸಿದರಂತೆ. ಅಲ್ಲದೆ ಏನೇನೋ ಮಾತ್ರೆಗಳನ್ನು ಕೊಟ್ಟು ಹೊಟ್ಟೆಯಲ್ಲಿ ಹಾಕಲು ಹೇಳಿದರಂತೆ. 'ಹಾಲಿನ ಹೊರತು ಇನ್ನೇನನ್ನೂ ಹೊಟ್ಟೆಗೆ ಹಾಕಬಾರದು' ಎಂದು ವಿಧಿಸಿದರಂತೆ. ಮೊದಲೆರಡು ಸಲ ಪ್ಲೇಗು ರೋಗದ ಭೀಕರತೆ ಯನ್ನು ಕಂಡಿದ್ದ ನಮ್ಮ ತಾಯಿ ತುಂಬಾಬೆದರಿದಳು. ಏನಾಗುವುದೇನೋ ಎಂದು, ಸಂದೇಹಗೊಂಡರು. ಆದರೆ ಮನೆಯ ಹಿರಿಯರು ತಾನೇ ಆದುದರಿಂದ ಮಿಕ್ಕವರು ಗಾಬರಿಗೊಳ್ಳಬಾರದೆಂದು ಉಕ್ಕೇರಿ ಬರುವ ದುಃಖವನ್ನು ಹತ್ತಿಕ್ಕಿ–ಕೊಂಡಿದ್ದಳಂತೆ. ಮೂರು ದಿನ ಹಾಗೆಯೇ ಜ್ವರವು ಹೆಚ್ಚಾಗುತ್ತಲೇ ನಡೆಯಿತು. ಜ್ವರದ ತಾಪದಿಂದ ಕೊರಡಿಗಿಂತ ಕೊರಡಾಗಿ ನಾನು ಮೈಮರೆದು ಮಲಗಿಕೊಂಡಿದ್ದೆ. ನಾಲ್ಕನೇ ದಿನ ಸನ್ನಿಪಾತಕ್ಕೆ ಸುರುವಾಯಿತು. ಅಂದು ನನ್ನ ಚಟುವಟಿಕೆಗಳು ಹೆಚ್ಚಾದುವಂತೆ. ಹತ್ತಿರ ಕುಳಿತ ಜನರನ್ನು ಹೊಡೆಯುವುದು, ಪಾತ್ರೆಗಳನ್ನು ಎತ್ತಿ ಒಗೆಯುವುದು, ತಂಬಿಗೆ ಯಲ್ಲಿದ್ದ ನೀರನ್ನು ಉರುಳಿಸಿಬಿಡುವುದು. ಇವೆಲ್ಲ ಚೇಷ್ಟೆಗಳನ್ನು ನಾನು ನಡೆಸಿದೆನಂತೆ ಹಳ್ಳಿಯ ಊರಲ್ಲಿ ಇಂತಹ ಸನ್ನಿಪಾತಕ್ಕೆ ಔಷಧಿ ಕೊಡುವವರಾರು? ನಮ್ಮ ತಾಯಿ ಕೈಕಾಲುಗೆಟ್ಟುಹೋದರು.

ಯಾವನೋ ಹಳ್ಳಿಯ ವೈದ್ಯನೊಬ್ಬ ಬಂದು ನುಗ್ಗಿ, ತೊಪ್ಪಲರಸದಲ್ಲಿ ರಾಗಿಯ ಭಕ್ಕರಿಯನ್ನು ಮಾಡಿ ಬಿಸಿಯಾದ ರೊಟ್ಟಿಯನ್ನೇ ನೆತ್ತಿಗೆ ಬಿಗಿದು ಕಟ್ಟಬೇಕು, ಎಂದು ಹೇಳಿದನಂತೆ ಆ ಉಪಾಯವು ಆಯಿತು. ತಲೆಗೆ ರಾಗಿ ರೊಟ್ಟಿಯನ್ನು ಕಟ್ಟಿದರು. ಆವರೆ ಕೂಗಾಟ. ಚೀರಾಟ. ಕುಸ್ತಿ. ಅರಿವೆ ಹರಿಯುವುದು, ಇವುಗಳು ಹೆಚ್ಚಾದವು. ಮತ್ತಾರೋ ಒಬ್ಬ ಅನುಭವಿಕನು ಬಂದು "ನೋಡಿ. ಈ ಹುಡುಗನಿಗೆ

ಜ್ವರ ಹೆಚ್ಚಾಗಿ ವಾಯು ಕೂಡೈತಿ. ಇದಕ್ಕ ಜೀವಂತ ಏಡಿ ತಂದು ಅದನ್ನ ಚೆಚ್ಚಿ ರಸವನ್ನು ತೆಗೆದು ಎರಡು ಚಮಚೆಯಷ್ಟು ಹುಡುಗನಿಗೆ ಕುಡಿಸಬೇಕು" ಎಂದು ಹೇಳಿದನಂತೆ. ಹೊಸದಾಗಿ ಬಂದಿದ್ದ ಹಳ್ಳದ ಪ್ರವಾಹದಲ್ಲಿ ಏಡಿಗಳಿಗೇನು ಕಡಿಮೆ? ಆದರೆ ಅವನ್ನು ಜೀವಂತ ಹಿಡಿದು ತರಬೇಕು. ಏಡಿಗಳ ಕೊಂಡಿಗಳನ್ನು ನೋಡಿದರೆ ಎಂತಹವರೂ ಭೀತಿಗೊಳ್ಳಬಹುದು. ಆದರೂ ಕೆಲವು ಬೇಡರ ಹುಡುಗರು ಹೋಗಿ ಉಪಾಯದಿಂದ ಎರಡು ಏಡಿಗಳನ್ನು ತೆಗೆದುಕೊಂಡು ಬಂದರು. ಅವುಗಳನ್ನು ಚೆಕ್ಕಿ ರಸ ತೆಗೆಯಲಿಕ್ಕೆ ಯಾರಿಗೂ ಧೈರ್ಯವಾಗಲಿಲ್ಲವಂತೆ. ಆದರೆ ಏಡಿಗಳನ್ನು ತಂದ ಹುಡುಗರೇ ಅವುಗಳ ಕೊಂಡಿಯನ್ನು ಉಪಾಯದಿಂದ ಮುರಿದು ಅವುಗಳನ್ನು ಚೆಚ್ಚಿ ರಸ ತೆಗೆದರಂತೆ. ಆ ಮಹಾ ಔಷಧಿಯನ್ನು ನಮ್ಮ ತಾಯಿ ನನಗೆ ಕುಡಿಸಿದರಂತೆ. ಯಾವ ಔಷಧಿಗಳೂ ಯಾವ ರೀತಿಯಿಂದಲೂ ಪ್ರಯೋಜನಕ್ಕೆ ಬರಲಿಲ್ಲ.

ಈ ಸನ್ನಿಪಾತ ವಿಕಾರವು ಮೂರು ದಿನಗಳವರೆಗೆ ಹಾಗೆಯೇ ಇತ್ತು. ಮೂರು ದಿನಗಳಾದ ಮೇಲೆ ನಾನು ಮರಕ್ಕಿಂತ ಮರವಾಗಿ ಸುಮ್ಮನೆ ಬಿದ್ದುಕೊಂಡೆನಂತೆ. ಕಣ್ಣಲ್ಲಿ ನೊಣಗಳು ಕುಳಿತರೂ ಪರಿವೆ ಇರಲಿಲ್ಲ. ಕೈಕಾಲುಗಳು ಅಲ್ಲಾಡುತ್ತಿರಲಿಲ್ಲ. ಮೂಗಿನ ಶ್ವಾಸವು ಮಂದ-ಮಂದಗತಿಯಿಂದ ನಡೆಯಿತಂತೆ. ಕೈಯ ನಾಡಿಗಳು ನೋಡಿದವರ ಕೈಗೆ ಹತ್ತುತ್ತಿರಲಿಲ್ಲವಂತೆ. ಆಗಲೇ ರಂಗಬೋಧ ಸ್ವಾಮಿಗಳವರು ತಾವಾಗಿ ಮನೆಯ ಕಡೆಗೆ ಬಂದು ನನ್ನ ಆರೋಗ್ಯವನ್ನು ನೋಡಿ ವ್ಯಸನಪಟ್ಟರಂತೆ. ಆಮೇಲೆ ಶಿವಬೋಧ ಸ್ವಾಮಿಗಳ ವಿಭೂತಿಯಿಂದ ಮೈಯೆಲ್ಲವೂ ಬೂದಿಯನ್ನು ಹಚ್ಚಿ ನಿಟ್ಟುಸಿರಿಟ್ಟು ಮಠಕ್ಕೆ ಹೊರಟು ಹೋದರಂತೆ. ಆಗ ನಾನು ಬದುಕುವೆನೆಂಬ ಆಶೆ ಯಾರಿಗೂ ಉಳಿದಿರಲಿಲ್ಲ. ನಮ್ಮ ತಾಯಿಯಂತೂ ಅಳುತ್ತಳುತ್ತ ಬಂದ ಜನರೆದುರು ಕಳವಳದಿಂದ ಬಿನ್ನಹ ಮಾಡಿದಳು– "ಹುಡುಗ ಬಹಳ ಒಳ್ಳೆಯ ಮಾರ್ಗದವ. ನೂರಾ–ಎಂಟು ಗಾಯತ್ರಿ–ಜಪ, ಸಂಧ್ಯಾ–ವಂದನೆ, ಮಾಡದೆ ಒಂದು ದಿನವನ್ನೂ ತಪ್ಪುತ್ತಿರಲಿಲ್ಲ. ದಿನವೂ ದೇವರ ಪೂಜೆ ವೈಶ್ವದೇವಗಳನ್ನು ಮಾಡಿಯೇ ಊಟ ಮಾಡುತ್ತಿದ್ದ. ದಯಮಾಡಿ ಇವನ ದೇಹವು ಬಹಳ ಹೊತ್ತು ಬೀಳದಂತೆ ವ್ಯವಸ್ಥೆ ಮಾಡಿರಿ. ಇವನು ಬದುಕೋದಂತೂ ಸಾಧ್ಯವಿಲ್ಲ. ಗಳಿಗೆಯೋ ಎರಡು ಗಳಿಗೆಯೋ. ಮುಂದೆ ಯಾವುದಕ್ಕೂ ವಿಲಂಬವಾಗಬಾರದು. ಆದುದರಿಂದ ಇವನ ಉತ್ತರ-ಕ್ರಿಯೆಯ ವ್ಯವಸ್ಥೆಯನ್ನು ಮೊದಲೇ ಮಾಡಿ ಆದಷ್ಟೂ ಬೇಗನೆ ಜೀವ ಹೋದೊಡನೆಯೇ ಶವವು ಮನೆಯಲ್ಲಿ ಬೀಳದಂತೆ ಒಯ್ದುಬಿಡಬೇಕು" ಎಂದು. ನಾಲ್ಕಾರು ಜನರು ಮುಂದಿನ ವ್ಯವಸ್ಥೆಗಾಗಿಯೂ ಮನೆ ಬಿಟ್ಟು ಹೋದರು.

ನಾನು ಕಗ್ಗಲ್ಲಿನಂತೆ ಬಿದ್ದುಕೊಂಡಿದ್ದೆ. ನಿಧಾನವಾಗಿ ಉಸಿರಾಡುತ್ತಿದ್ದೆ. ಆ ಉಸಿರಾಟದಲ್ಲಿ ಕಫದ ವಿಕಾರವು ಕಂಡುಬಂದಿತಂತೆ. ಎಲ್ಲರೂ ನನ್ನ ಆಶೆಯನ್ನು ಬಿಟ್ಟಿದ್ದರಂತೆ. ಆದರೆ ಅರ್ಧ ಗಂಟೆಯಲ್ಲಿಯೇ ನನ್ನ ಉಸಿರಾಟದಲ್ಲಿ ಸ್ವಲ್ಪ ವೇಗ ಕಂಡುಬಂದಿತಂತೆ. ಕೈಕಾಲುಗಳನ್ನು ಸರಿಸತೊಡಗಿದೆನಂತೆ. ಹೊರಟುಹೋಗಿದ್ದ ಚೈತನ್ಯವೆಲ್ಲವೂ ಮತ್ತೆ ನಿಧಾನವಾಗಿ ಮೈಯಲ್ಲಿ ತುಂಬಿಕೊಳ್ಳತೊಡಗಿತಂತೆ. ಕೈಯ ನಾಡಿಗಳು ಬಿರುಸಾಗಿ ಹೊಡೆದುಕೊಳ್ಳುವುದು ನೋಡಿದವರಿಗೆ ಗೊತ್ತಾಯಿತಂತೆ. ಆಗ ನಾನು ಅರೆ ಎಚ್ಚರದಲ್ಲಿಯೇ ಗೊಣಗಿಕೊಂಡೆನಂತೆ. "ಅವ್ವಾ ನನ್ನನ್ನು ಯಾರೋ ಗಡ್ಡ ಬಿಟ್ಟ ಸಿಪಾಯಿಗಳಿಬ್ಬರು ಟಾಂಗಾದೊಳಗ ಕೂಡಿಸಿಕೊಂಡು ಹೋಗುತ್ತಿದ್ದರು. ನಮ್ಮ ರಾಘಣ್ಣ ಹಿಂದಿಂದ ಬಂದು ನನ್ನ ಕೆಳಗ ಎಳಕೊಂಡ. ನಾನು ಧಪ್ಪನೆ ನೆಲಕ್ಕೆ ಬಿದ್ದೆ" ಎಂದು ಹೇಳಿದೆನಂತೆ. ನನ್ನ ಮಾತನ್ನು ಕೇಳಿದೊಡನೆಯೇ ನಮ್ಮ ತಾಯಿ ನನ್ನನ್ನು ಅಪ್ಪಿಕೊಂಡು ಅಳಲಾರಂಭಿಸಿದಳಂತೆ. ಎಲ್ಲರ ಕಣ್ಣಲ್ಲಿಯೂ ನೀರು. ಬಂದ ಸಾವು ದೂರಾಗಿ ಹೋಯಿತು. ನಾನು ಬದುಕಿ ಉಳಿದೆ. ಪ್ಲೇಗಿನಂತಹ ಭಯಂಕರ ರೋಗದ ಬಾಯಿಂದ ಉಳಿದ ನನ್ನನ್ನು ಜನರೆಲ್ಲರೂ ಶ್ಲಾಘಿಸತೊಡಗಿದರು.

ಎರಡು– ಮೂರು ದಿನಗಳು ಕಳೆದವು. ಜ್ವರದ ಕಾರಣದಿಂದಲೋ ಉಪವಾಸ ವಿದ್ದ ಕಾರಣದಿಂದಲೋ ಹೊಟ್ಟೆಯಲ್ಲಿ ಹಸಿವು ಹೆಚ್ಚಾಗತೊಡಗಿತಂತೆ. ಮತ್ತೆ ಮತ್ತೆ ಏನನಾದರೂ ತಿನ್ನಲು ಬಯಸುತ್ತಿದ್ದೆ. ಎಷ್ಟು ತಿಂದರೂ ಕ್ಷಣದಲ್ಲಿ ಭಸ್ಮವಾದಂತೆ ಎನಿಸುವುದು. ನನಗೂ ವಿಚಿತ್ರವೆನಿಸಿತು. 'ಯಾಕೆ ಇಷ್ಟೊಂದು ಹಸಿವೆ' ಎಂದು. ಆದರೆ ಅಂತಃಕರಣದ ತಾಯಿ ನನಗೆ ಆತಂಕವಿಲ್ಲದೆ ಏನನಾದರೂ ತಿನಿಸನ್ನು ಮಾಡಿ ತಿನಿಸುತ್ತಿದ್ದರು. ಮೈಮೇಲೆ ಸಂಪೂರ್ಣವಾಗಿ ಎಚ್ಚರವು ಬಂದಿತು. ಅದೇ ವೇಳೆಯಲ್ಲಿ ಶಿವಗಂಗಾ ಮಠದ ಸ್ವಾಮಿಗಳು ಮೂಡಲಗಿಗೆ ಚಿತ್ತೈಸಿದರು. ಅವರ ಪೂಜೆ ಮಠದಲ್ಲಿಯೇ ನಡೆಯಿತು. ಎಲ್ಲ ಜನರಿಗೂ ಗೋಧಿಯ ಪಾಯಸ, ಅನ್ನ, ಹುಳಿ, ಪಲ್ಯಗಳ ಮಹಾಪ್ರಸಾದವಾಯಿತು. ನಮ್ಮ ಮನೆಯವರೆಲ್ಲರೂ ಹೋಗಿ ಪ್ರಸಾದ ಸೇವನೆ ಮಾಡಿ, ದೊಡ್ಡ ಸ್ವಾಮಿಗಳ ಪ್ರಸಾದವೆಂದು ನನಗೂ ಸ್ವಲ್ಪ ಅನ್ನವನ್ನು, ಹುಳಿಯನ್ನು ಮನೆಗೆ ತೆಗೆದುಕೊಂಡು ಬಂದರು. ದೇವರ ಪ್ರಸಾದವೆಂಬ ಭಾವನೆಯಿಂದ ನನ್ನ ತಾಯಿ ನನಗೆ ಅದನ್ನು ಉಣ್ಣಿಸಿದಳು. ನನಗದು ಅಮೃತದಂತೆ ರುಚಿಕರವಾಗಿ ಕಂಡಿತು. ತಂದಿದ್ದ ಪ್ರಸಾದವನ್ನೆಲ್ಲ ಹೆದರಿಕೆಯಿಲ್ಲದೆ ನಾನು ಭಕ್ಷಿಸಿದೆ.

ಮರುದಿನದಿಂದ ನನಗೆ ಅನ್ನ ಮಾಡಿ ಸಾರಿನೊಂದಿಗೆ ಊಟಕ್ಕೆ ಹಾಕಲು ಪ್ರಾರಂಭಿಸಿದರು. ದುಃಖಗಳು ಬಂದರೆ ಒಂದರ ಹಿಂದೆ ಒಂದು ಬಂದು ತಟ್ಟುವುದೆಂದು

ಹೇಳುವುದು ನಮಗೇನೂ ಹುಸಿಯಾಗಿ ತೋರಲಿಲ್ಲ. ನನ್ನ ಪ್ಲೇಗಿನ ಮುಕ್ತಿಯಾಗಿ ಏಳೆಂಟು ದಿನವಾಗಿರಬಹುದು. ನಮ್ಮ ಹಣಮಣ್ಣನಿಗೆ ಜ್ವರ, ಕೆಮ್ಮಲು, ಕಫ ಇವು ಉಲ್ಬಣಗೊಂಡು ಹಾಸಿಗೆಯನ್ನೇ ಹಿಡಿದ. ಅವನಿಗಾಗಿ ವಿಶೇಷವಾಗಿ ಲಕ್ಷ್ಯವನ್ನು ಕೊಡಬೇಕಾಗಿದ್ದಿತು. ಗಳಿಸಾಲಿ ಅವನು. ಅಲ್ಲದೆ ಹೊಸತಾಗಿ ಹೆಂಡತಿಯ ಕೈಯನ್ನು ಹಿಡಿದವನು. ಅದಕ್ಕಾಗಿ ನಮ್ಮ ತಾಯಿ ಮತ್ತು ರಾಘಣ್ಣ ಇವರಿಬ್ಬರೂ ಅವನನ್ನು ಕೊಲ್ಹಾಪುರಕ್ಕೆ ವೈದ್ಯರ ಕಡೆಯಿಂದ ಔಷಧಿಯನ್ನು ಕೊಡಿಸಲು ಕರೆದುಕೊಂಡು ಹೋದರು. ಆಗ ರೋಗಿಯನ್ನು ಪರೀಕ್ಷಿಸಿ ವೈದ್ಯರು ಹೆದರಿಕೆ ಬರುವ ರೋಗದ ಹೆಸರನ್ನೇ ಅದಕ್ಕೆ ಇಟ್ಟರು. ಅದು ಕ್ಷಯರೋಗವಂತೆ. ವೈದ್ಯರು ಅವನನ್ನು ತಮ್ಮಬಳಿಯಲ್ಲಿಟ್ಟುಕೊಂಡು ಔಷಧಿ ಕೊಡಲು ಹೆದರಿದರೋ ಏನೋ ಏಳು ದಿನದ ಔಷಧಿಯನ್ನು ಕೊಟ್ಟು ಕಷಾಯ ಮಾಡಿ ಹಾಕಲು ಸಾಮಾನುಗಳನ್ನು ಹೇಳಿ ಅವನನ್ನು ಆದಷ್ಟು ಬೇಗನೆ ಮೂಡಲಗಿಗೆ ಕಳಿಸಿದರು. ಒಂದು ವಾರವಾದ ಮೇಲೆ ತಾವೇ ಅಲ್ಲಿಗೆ ಬಂದು ಮುಂದಿನ ಉಪಚಾರದ ಏರ್ಪಾಡನ್ನು ಮಾಡುವೆನು ಎಂದು ಮಾತು ಕೊಟ್ಟು ವೈದ್ಯರು ಒಂದು ವಾರ ಕಳೆದರೂ ಬರಲೇ ಇಲ್ಲ. ನಮ್ಮ ಭಾವನೆಯೋ ಏನೋ ಮೊದಲಿಗಿಂತ ಹಣಮಣ್ಣನಿಗೆ ಸ್ವಲ್ಪ ವಾಸಿಯೆಂದು ಎನಿಸ ತೊಡಗಿತು. ಕ್ಷಯರೋಗವೆಂಬುದು ಎಷ್ಟು ಘನವಾದುದೆಂಬುದನ್ನು ಚಿಕ್ಕವರಾದ ನಾವು ಹೇಗೆ ತಿಳಿದುಕೊಳ್ಳಬೇಕು. ಆಮೇಲೆ ಪ್ಲೇಗಿನ ಮೂಲಕ ಆ ಊರನ್ನು ಬಿಟ್ಟು ಹೋಗಿ ಕೆಲವು ದಿನ ಬೇರೆ ಊರಲ್ಲಿ ಇರಬೇಕೆಂದು ಊರ ಹಿರಿಯರು ನಿರ್ಣಯಿಸಿದರು. ಮೂಡಲಗಿಯಿಂದ ಹಳ್ಳೂರು ನಾಲ್ಕು ಮೈಲಿ ದೂರ. ಅಲ್ಲಿ ನಮ್ಮ ದೇಶಪಾಂಡೆ ಗೋವಿಂದರಾಯರ ಹೊಲಗಳೂ, ಮನೆಯೂ ಇದ್ದವು. ಅವರು ಸುಲಭವಾಗಿಯೇ ಹೊರಟು ಹೋಗಿ ಅಲ್ಲಿ ಇರತೊಡಗಿದರು. ನಮ್ಮ ರಾಘಣ್ಣ ಹಳ್ಳೂರಿಗೆ ಹೋಗಿ ಮನೆಯೊಂದನ್ನು ಹುಡುಕಿ, ನಮ್ಮೆಲ್ಲರನ್ನೂ ಬೇಕಾಗುವ ಸಾಹಿತ್ಯ-ಸಾಮಗ್ರಿಗಳನ್ನೂ ತೆಗೆದುಕೊಂಡು ಹೋದ.

ರುದ್ರಪ್ಪ ಎಂಬ ರೈತನ ಸ್ವಾಧೀನವಿದ್ದ ಮನೆಯೊಂದನ್ನು ನಮಗಾಗಿ ಗೊತ್ತು ಮಾಡಿದ್ದ. ಮನೆಯ ಸ್ಥಳವೇನೋ ತಕ್ಕಮಟ್ಟಿಗೆ ವಿಶಾಲವಾಗಿ ಇದ್ದಿತು. ನಮ್ಮ ಮೂಡಲಗಿಯಲ್ಲಿಯ ಮನೆಗಿಂತ ಸ್ವಲ್ಪ ಅಚ್ಚುಕಟ್ಟಾಗಿ ಇದ್ದಿತು. ಎಲ್ಲರೂ ಹೋಗಿ ಆ ಮನೆಯಲ್ಲಿ ಇರತೊಡಗಿದೆವು. ಇಲ್ಲಿ ಮತ್ತೊಬ್ಬ ಕುಟುಂಬದ ಸದಸ್ಯನು ಹೆಚ್ಚಾಗಿಬಿಟ್ಟ. ನಮ್ಮ ಹಣಮಣ್ಣನ ಜೊತೆಯಲ್ಲಿ ಟ್ರೇನಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ಶ್ರೀ ಬಳವಂತ ಲಕ್ಷ್ಮಣ ಚಿಕ್ಕೋಡಿ ಎಂಬವನು ಒಬ್ಬನೇ

ಆ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಹೆಣ್ಣು ಮಕ್ಕಳಿದ್ದ ನಮ್ಮ ಮನೆಗೆ ಊಟಕ್ಕೆ ಬರತೊಡಗಿದ. ನಮ್ಮ ಹಣಮಣ್ಣನ ಆರೋಗ್ಯವು ಪೂರ್ಣವಾಗಿ ಸುಧಾರಿಸದಿದ್ದರೂ ಶಾಲೆಯ ಕೆಲಸಕ್ಕಾಗಿ ಮೂಡಲಗಿಗೆ ಹೋಗಿಬರುವ ಕ್ರಮವನ್ನು ಇರಿಸಿಕೊಂಡಿದ್ದ. ಮುಂದೆ ಹದಿನೈದು-ಇಪ್ಪತ್ತು ದಿನಗಳಾಗಿರಬಹುದು. ಅವನೇ ಒಂದು ದುಃಖದ ವರ್ತಮಾನವನ್ನು ತಂದ. ಮೂಡಲಗಿಯ ರಂಗಬೋಧ ಸ್ವಾಮಿಗಳು ಪ್ಲೇಗು ರೋಗದಿಂದ ಮೃತರಾದರೆಂದೂ ಅವರ ಉತ್ತರ-ಕ್ರಿಯೆಗಳೆಲ್ಲ ವಿಜೃಂಭಣೆಯಿಂದ ನಡೆದುವೆಂದೂ ಊರ ದೊಡ್ಡ ದೊಡ್ಡ ಜನರೆಲ್ಲ ಶವದಹನ ಕಾಲದಲ್ಲಿ ಮಸಣಕ್ಕೆ ಬಂದಿದ್ದರೆಂದೂ ಅವನು ಹೇಳಿದನು. ಅದನ್ನು ಕೇಳಿ ನಾನು ಕಳವಳಗೊಂಡೆನು. ಒಬ್ಬ ನನ್ನ ಪ್ರೀತಿಯ ಹಿರಿಯರನ್ನು ನಾನು ಕಳೆದುಕೊಂಡೆನಲ್ಲಾ ಎಂದು ಕಂಬನಿಗರೆದೆನು.

ನಾವು ಹಳ್ಳೂರಲ್ಲಿ ಒಂದರ ಹಿಂದೆ ಒಂದರಂತೆ ದಿನಗಳನ್ನು ಕಳೆಯತೊಡಗಿದೆವು. ಅಲ್ಲಿ ಹೋದರೂ ಪ್ಲೇಗು ರೋಗವು ನಮ್ಮ ಬೆನ್ನು ಬಿಡಲಿಲ್ಲ. ನಮ್ಮ ಬಲರಾಮಣ್ಣನಿಗೂ ಜ್ವರ ಬಂದು ಗಂಟು ಕಾಣಿಸಿಕೊಂಡಿತು. ಆದರೆ ಅದು ಅಷ್ಟೊಂದು ಉಗ್ರವಾದುದಾಗಿರಲಿಲ್ಲ. ಮೂರ್ನಾಲ್ಕು ದಿನ ಮಲಗಿಸಿ ಅವನನ್ನು ಮೇಲಕ್ಕೇಳುವಂತೆ ಹಗುರಾದ ಪ್ರಭಾವವನ್ನು ಅದು ತೋರಿಸಿತು. ನನಗೆ ಮಾತ್ರ ಅದು ತನ್ನ ಉಗ್ರ ರೂಪವನ್ನೇ ತೋರಿಸಿತು. ಇಷ್ಟು ದಿನಗಳು ಕಳೆದರೂ ನನಗೆ ನಡೆಯಲು ಕಾಲುಗಳಿರಲಿಲ್ಲ. ಉಣ್ಣುವುದಕ್ಕೆ ಕೈಗಳು ಪ್ರಯೋಜನಕಾರಿಯಾಗಿರಲಿಲ್ಲ. ಕಣ್ಣು ಕಾಣುತ್ತಿರಲಿಲ್ಲ. ಕಿವಿ ಕೇಳುತ್ತಿರಲಿಲ್ಲ. ಆದರೂ ಹಸಿವೆ ಮಾತ್ರ ನನ್ನನ್ನು ಎಡೆಬಿಡದೆ ಕಾಡುತ್ತಿತ್ತು. ಉಂಡ ಅನ್ನ ಹಾಗೆಯೇ ಏಕೆ ಹೋಗುವುದು? ನನ್ನ ಮೈಯಲ್ಲಿ ಮಾಂಸವು ಹೆಚ್ಚುತ್ತ ನಡೆದು ದೇಹವು ತುಂಬಿಕೊಂಡಿತು. ಆದರೆ ನಡೆಯಲು ಕಾಲುಗಳೆರಡೂ ಅಸಮರ್ಥ. ಆ ಹಳ್ಳೂರಿನ ಜನರು ತಮ್ಮ ತಮ್ಮಲ್ಲಿ ಮಾತಾಡುತ್ತಿದ್ದರಂತೆ– ''ಪಾಪ ಹೊಸದಾಗಿ ಮೂಡಲಗಿ ಮಾಸ್ತರ ಬಂದು ಮನಿ ಮಾಡ್ಯಾರಲ ಅವರ ಮನ್ಯಾಗ ಒಂದು ಹುಡುಗ ಐತಿ. ನೋಡಿದ್ರ ಮುತ್ತಿನಂಥಾ ಹುಡುಗ. ಆದ್ರ ನಡ್ಯಾಕ ಕಾಲ ಇಲ್ಲ. ಕೈ ಎರಡೂ ಗದಗದ ನಡುಗತಾವ'' ನಡೆಯುವುದಕ್ಕೆ ಪ್ರಯತ್ನ ಮಾಡುವ ಸ್ಥಿತಿಯೂ ನನ್ನದಿರಲಿಲ್ಲ. ಏಕೆಂದರೆ ಕಾಲುಗಳೆರಡೂ ಬಿಗಿದು ಹೊಗಿ ನಿಂತುಕೊಳ್ಳಲು ಕೂಡಾ ಆಗುತ್ತಿರಲಿಲ್ಲ.

ಆಷಾಢ ಮಾಸದಲ್ಲಿ ಹಳ್ಳೂರಿಗೆ ಹೋದ ನಾವು ಶ್ರಾವಣ, ಭಾದ್ರಪದಗಳನ್ನು

ಅಲ್ಲಿಯೇ ಕಳೆದೆವು. ಈ ಅವಧಿಯಲ್ಲಿ ಬಂದ ಶ್ರಾವಣದ ಹಬ್ಬ ಹುಣ್ಣಿಮೆಗಳು, ವ್ರತಗಳು ಲೆಕ್ಕವಿರದಷ್ಟು. ಭಾದ್ರಪದದ ಗಣೇಶೋತ್ಸವವು ವೈಭವದಿಂದ ನಡೆಯಿತು. ಆದರೆ ಈ ಗಣೇಶನ ಉತ್ಸವ ಕಾಲದಲ್ಲಿ ನಮ್ಮ ತಾಯಿಯ ಮನಸ್ಸಿಗೆ ಆಘಾತವಾಗುವಂತಹ ಅಪಶಕುನವೊಂದು ಘಟಿಸಿತು.

ನನ್ನ ತಮ್ಮ ಗೋಪಾಲ ಆ ವರ್ಷದ ಗಣೇಶ ಚತುರ್ಥಿಗಾಗಿ ಗಣಪತಿಯನ್ನು ಮಾಡಿ ಬಣ್ಣ ಕೊಟ್ಟು ಇರಿಸಿದ. ಯಾವುದೋ ಒಂದು ಹಬ್ಬದ ದಿನ ಊಟಕ್ಕಾಗಿ ಬಂದ ಅನಂತಾಚಾರ್ಯರೂ, ಅವರ ಶ್ರೀಮತಿಯವರೂ ಮೂಡಲಗಿಯಿಂದ ಬಂದಿದ್ದರು. ನಾವೆಲ್ಲರೂ ಊಟಕ್ಕೆ ಕುಳಿತೆವು. ಅನಂತಾಚಾರ್ಯರ ಹೆಂಡತಿ ಬಡಿಸುವುದಕ್ಕೆ ಸಹಾಯಕಳಾಗಿ ಪಂಕ್ತಿಯಲ್ಲಿ ತಿರುಗಾಡುತ್ತಿದ್ದಳು. ಅವಸರದಿಂದ ಬಡಿಸುವಾಗ ಮೇಲಿನ ಕಟ್ಟೆಯಿಂದ ಕೆಳಗೆ ಜಿಗಿಯುವಾಗ ಅಲ್ಲಿಯೇ ಬಳಿಯಲ್ಲಿಟ್ಟ ಗಣಪತಿ ಮೂರ್ತಿಯ ಸೊಂಡಿಲು ಮುರಿದು ಹೋಯಿತು. ಗಣಪತಿಯ ಅಂಗಾಂಗಗಳಲ್ಲಿ ಯಾವುದು ಮುರಿದುಹೋದರೂ ಅದು ಅಪಶಕುನ. ಈಗ ಸೊಂಡಿಲೇ ಮುರಿದು ಹೋದುದು ದೊಡ್ಡ ಅಪಶಕುನವಾದಂತಾಯಿತು. ನಮ್ಮ ಕುಟುಂಬಕ್ಕೇನೋ ಆಪತ್ತಿ ಬರಬಹುದೆಂದು ನಮ್ಮ ತಾಯಿ ಮನದಲ್ಲಿಯೇ ಮರುಗಿದಳು. ಅಂದಿನ ಹಬ್ಬದೂಟ ಉಣ್ಣುವುದರಲ್ಲಿ ಮೈಮರೆತ ಯಾರಿಗೂ ಇದರ ಎಚ್ಚರವೇ ಇರಲಿಲ್ಲ.

ಮರುದಿನ ನಮ್ಮ ಗೋಪಾಲ ಆ ಸೊಂಡಿಲನ್ನು ನೋಡಿ ಯಾರಿಗೂ ತಿಳಿಯದಂತೆ ಅದನ್ನು ಮೊದಲಿನಂತೆಯೇ ಅಂಟಿಸಿ ಮೇಲೆ ಮತ್ತೆ ಬಣ್ಣ ಹಚ್ಚಿ ಎಲ್ಲವನ್ನೂ ಸರಿಗೊಳಿಸಿದನು. ಗಣೇಶ ಚತುರ್ಥಿ ದಿವಸ ಅದೇ ಮೂರ್ತಿಯ ಸ್ಥಾಪನೆಯಾಗಿ ಪೂಜಾ–ಕರ್ಮಗಳು ನಡೆದವು. ಆದರೂ ನಮ್ಮ ತಾಯಿಯ ಮನಸ್ಸಿಗೆ ಆದ ಅಪಶಕುನವು ಕೆಣಕಿ ಕೆಣಕಿ ಮತ್ತೆ ಮತ್ತೆ ಕೆರಳಿಸುತಲಿತ್ತು. ಗಣೇಶ ಚತುರ್ಥಿ ಜ್ಯೇಷ್ಠಾ–ಗೌರಿಯ ಪೂಜೆಗಳೆಲ್ಲ ಮುಗಿದ ಮೇಲೆ ಏಳು ದಿವಸಗಳಿಗೆ ಗಣೇಶನ ಉತ್ತರ ಪೂಜೆಯು ಜರುಗಿತು. ತೋಟದ ಬಾವಿಯಲ್ಲಿ ಗಣಪತಿಯ ವಿಸರ್ಜನೆಯು ಆಯಿತು.

ಮುಂದೊಂದು ದೊಡ್ಡ ಸಾಂಪ್ರದಾಯಿಕ ಹಬ್ಬ. ಅದಕ್ಕಾಗಿ ನಾವೆಲ್ಲರೂ ಬೆಟಗೇರಿಗೆ ಹೋಗಬೇಕಾಗಿದ್ದಿತು. ಒಂದು ಮಾತನ್ನು ಇಲ್ಲಿ ಮರೆಯುವಂತಿಲ್ಲ. ನಮ್ಮ ಪಸುವನ್ನು ಹಳ್ಳೂರಿಗೆ ಬರುವಾಗ ಅನಿವಾರ್ಯವೆನಿಸಿ ಮೂಡಲಗಿಯಲ್ಲಿಯೇ

ಬಿಟ್ಟು ಬಂದಿದ್ದರು. ಅದನ್ನು ರುದ್ರಪ್ಪನಿಗೆ ಕರುಸಹಿತ ಸಾಕಲು ಕೊಟ್ಟುದರಿಂದ ನಮ್ಮ ಉಪಕಾರ ಭಾರವು ಹೆಚ್ಚಾದಂತೆ ಕಂಡಿತು. ಪುಕ್ಕಟೆಯಾಗಿ ಹಿಂಡುವ ಹಸುವನ್ನೂ, ಬೆಳೆದು ಆಕಳಾಗುವ ಕರುವನ್ನೂ ಕೊಡುವವರಾರು? ನಮ್ಮ ಮನೆಯಲ್ಲಿಯೇ ಹುಟ್ಟಿ ಬೆಳೆದ ಹಸುವು. ಆದುದರಿಂದ ಗೋರಕ್ಷಣೆಯ ಭಾವನೆಯಲ್ಲಿದ್ದ ನಾವು ಅದನ್ನು ಮಾರಾಟ ಮಾಡುವಂತಿರಲಿಲ್ಲ. ಆದುದರಿಂದಲೇ ಅದನ್ನು ಸಾಕಲು ಸಿದ್ಧನಾದ ರುದ್ರಪ್ಪನಿಂದ ನಮಗೆಯೂ ದೊಡ್ಡ ಉಪಕಾರವಾದಂತಾಗಿತ್ತು. ಮುಂದೆ ಭಾದ್ರಪದ ಮಧ್ಯದಲ್ಲಿ ನಾವು ಹಳ್ಳೂರನ್ನು ಬಿಟ್ಟು ಮೂಡಲಗಿಗೆ ಹೊರಟಾಗ ರುದ್ರಪ್ಪನು ತನ್ನ ಚಕ್ಕಡಿಯಲ್ಲಿಯೇ ನಮ್ಮೆಲ್ಲ ಸಾಮಾನು ಸಹಿತ ನಮ್ಮನ್ನು ಮೂಡಲಗಿಯ ಮನೆಯವರೆಗೆ ತಂದು ಮುಟ್ಟಿಸಿದನು. ಅದಕ್ಕಾಗಿ ಅವನು ನಮ್ಮಿಂದ ಬಾಡಿಗೆಯನ್ನು ತೆಗೆದುಕೊಳ್ಳಲಿಲ್ಲ. ನಾವು ಮೂರ್ನಾಲ್ಕುದಿನ ಮೂಡಲಗಿಯಲ್ಲಿಕಳೆದು ನಮ್ಮ ಹಣಮಣ್ಣನನ್ನು ಕರೆದುಕೊಂಡೇ ಬೆಟಗೇರಿಗೆ ಹೋದೆವು. ಆಶ್ವಿನದ ಅಮಾವಾಸ್ಯೆಯ ದಾರಿಯನ್ನು ಎರಡು ಮೂರು–ದಿನ ನೋಡಿದೆವು. ಅಷ್ಟರಲ್ಲಿಯೇ ಬೆಟಗೇರಿಯ ಮನೆಯನ್ನು ಸಾರಿಸುವ, ಸುಣ್ಣ ಹಚ್ಚುವ, ವ್ಯವಸ್ಥೆಯನ್ನು ಮಾಡಿಸಲಾಯಿತು. ಏಕೆಂದರೆ ನವರಾತ್ರಿಯ ಹಬ್ಬಕಾಗಿ ಮನೆಯೆಲ್ಲವೂ ಸ್ವಚ್ಛವಾಗಬೇಕಾಗಿತ್ತು.

(ಸಶೇಷ)

o

ಹರಿವ ನೀರಿನಲ್ಲಿ ಹೊಸತು
ಹಳತೆಂಬುವದು ಇಹುದೇ
ತಿಳಿಯಿದ್ದರೆ ಹೊಸತೆಲ್ಲವು
ಎಲ್ಲೆಲ್ಲಿಯೂ ಹೊಸದೆ

–ಆನಂದಕಂದ

ಹೊಸ ಓದು

ನಿಲುವು (ವಿಮರ್ಶೆ)

ಲೇ : ಎಚ್. ಎಸ್. ರಾಘವೇಂದ್ರರಾವ್
ಪ್ರ : ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು
ಪುಟ : Viii + 320 ಬೆಲೆ: ರೂ. 60/-

ಎಚ್. ಎಸ್. ರಾಘವೇಂದ್ರರಾವ್ ಅವರ ಎರಡನೇ ಮಹತ್ತ್ವದ ವಿಮರ್ಶಾ ಸಂಕಲನವಾದ 'ನಿಲುವು' ಕೃತಿಯಲ್ಲಿ ಎರಡು ಬಗೆಯ ಲೇಖನಗಳಿವೆ. ಮೊದಲನೆಯ ಬಗೆಯಲ್ಲಿ ಕೆಲವು ಸಾಹಿತ್ಯಿಕ ಚಳುವಳಿ ಮತ್ತು ಪಂಥ ಅಥವಾ ವಾದಗಳ ಬಗೆಗೆ ವಿವರಗಳಿದ್ದರೆ ಎರಡನೆಯ ಬಗೆಯಲ್ಲಿ ಹೊಸಗನ್ನಡ ಸಾಹಿತ್ಯದ ಕೆಲವು ಮಹತ್ತ್ವದ ಬರೆಹಗಾರರ ಸಾಹಿತ್ಯಿಕ ಸಾಧನೆಯ ಬಗೆಗೆ ವಿವರವಾದ ವಿಶ್ಲೇಷಣೆಯಿದೆ.

ಮೊದಲನೇ ಬಗೆಯಲ್ಲಿ ಒಟ್ಟು ಐದು ಲೇಖನಗಳಿವೆ. ಅವುಗಳೆಂದರೆ, ಸಾಹಿತ್ಯದ ಅಧ್ಯಯನ ಮತ್ತು ಇತರ ಶೈಕ್ಷಣಿಕ ಶಿಸ್ತುಗಳು, ಜನಪ್ರಿಯ ಸಾಹಿತ್ಯ–ಕೆಲವು ಅನಿಸಿಕೆಗಳು, ಕಾವ್ಯದ ವರ್ಣಪಟಲ–ಕೆಲವು ಟಿಪ್ಪಣಿಗಳು, ವಾಸ್ತವವಾದ ಮತ್ತು ಅತಿ ವಾಸ್ತವವಾದ. ಎರಡನೇ ಬಗೆಯಲ್ಲಿ ಒಟ್ಟು ಹದಿನೈದು ಲೇಖನಗಳಿದ್ದು ಕೃತಿಯ ಮುಖ್ಯ ಭಾಗವನ್ನು ಆಕ್ರಮಿಸಿಕೊಂಡಿದೆ. ಇಲ್ಲಿ ಬಿ.ಎಂ.ಶ್ರೀ, ಪು.ತಿ.ನ, ಕೆ. ಎಸ್. ನರಸಿಂಹಸ್ವಾಮಿ, ಸಿದ್ದಯ್ಯ ಪುರಾಣಿಕ, ಕಣವಿ, ರಾಮಚಂದ್ರ ಶರ್ಮ, ಗಂಗಾಧರ ಚಿತ್ತಾಲ, ಲಂಕೇಶ, ಮಾಸ್ತಿ, ನಿರಂಜನ, ಇನಾಂದಾರ್, ಶಾಂತಿನಾಥ ದೇಸಾಯಿ ಮತ್ತು ಕಾಳೇಗೌಡರು ಪರಿಶೀಲನೆಗೆ ಒಳಗಾಗಿದ್ದಾರೆ.

ಮೊದಲ ಬಗೆಯಲ್ಲಿ ಸೇರ್ಪಡೆಯಾದ ಐದು ಲೇಖನಗಳಲ್ಲಿ ಒಳನೋಟಗಳು ಕಡಿಮೆ. ಬದಲು, ವಿಷಯದ ವ್ಯವಸ್ಥಿತವಾದ ಮಂಡನೆಯಿದೆ. ಈ ಬಗೆಯ ಲೇಖನಗಳು ಬಹುಮಟ್ಟಿಗೆ ವಿದ್ಯಾರ್ಥಿಗಳಿಗೆ ಅನುಕೂಲ. ಬರವಣಿಗೆಯ ಧಾಟಿಯೂ ಅಧ್ಯಾಪಕನದ್ದೆ. ಅಷ್ಟರಮಟ್ಟಿಗೆ ಈ ಲೇಖಗಳು ಉಪಯುಕ್ತವಾಗಿವೆ ಕೂಡಾ. ಈ ಲೇಖನಗಳಿಗೆ ಸಂಬಂಧಿಸಿದಂತೆ ಲೇಖಕರೇ ಹೇಳುವ ಮಾತೊಂದು ಇಂತಿದೆ– "ಅನ್ಯ ಕ್ಷೇತ್ರದ ವಿಚಾರಗಳನ್ನು ಒಡ್ಡೊಡ್ಡಾಗಿ ಬಳಸುವುದರಿಂದ ಯಾವ ಪ್ರಯೋ

ಜನವೂ ಆಗುವುದಿಲ್ಲ. ಅದೂ ಅಲ್ಲದೆ ಇಂತಹ ವಿಮರ್ಶಕರು ಹೆಚ್ಚು ಖಚಿತವೆನಿಸುವ, ಶಾಸ್ತ್ರದ ಪರಿಭಾಷೆಯನ್ನು ಬಳಸುವುದರಿಂದ ಆಕರ್ಷಕರು, ಸ್ವೀಕಾರಾರ್ಹರೂ ಆಗಿಬಿಡುವ ಸಂಭವವೂ ಇದೆ" (ಪುಟ ೮). ಈ ಆಕ್ಷೇಪವು ಸ್ವತಃ ಲೇಖಕರಿಗೆ ಅನ್ವಯುವಾಗುವುದೇ? ಮನಶ್ಶಾಸ್ತ್ರ, ಸಮಾಜಶಾಸ್ತ್ರ, ಅರ್ಥ ಶಾಸ್ತ್ರ, ಚರಿತ್ರೆ, ತತ್ವಶಾಸ್ತ್ರ, ವಾಸ್ತವವಾದ, ಅತಿ ವಾಸ್ತವವಾದ ಮೊದಲಾದುವುಗಳ ಬಗೆಗೆ ಬರೆಯುವಾಗ ಲೇಖಕರು ಅವುಗಳ ಬಗೆಗೆ ಆಳವಾದ ತಿಳಿವಿನಿಂದಲೇ ಬರೆಯುತ್ತಿದ್ದಾರೆಯೇ? ಇದರ ಬಗೆಗೆ ರಾಘವೇಂದ್ರರಾವ್ ಅವರಿಗೆ ಸ್ಪಷ್ಟ ತಿಳಿವಿದೆ. ಅವರು ಬರೆಯುತ್ತಾರೆ– "ನನ್ನದು ಯಾವುದೋ ಕ್ಷೇತ್ರದಲ್ಲಿ ಪರಿಣಿತನಾದವನು ಸಾಹಿತ್ಯದ ಕಡೆಗೆ ಬೀರಿರುವ ನೋಟವಲ್ಲ. ಸಾಹಿತ್ಯದ ಓದುಗ ಮತ್ತು ಸಾಹಿತ್ಯ ವಿಮರ್ಶೆಯ ವಿದ್ಯಾರ್ಥಿಯೊಬ್ಬನು ತನ್ನ ವೈಯಕ್ತಿಕ ತುರ್ತಿನಿಂದ ಓದಿಕೊಂಡ ಸಂಗತಿಗಳಾಗಿ ಮಾತ್ರ ನನಗೆ ಇತರ ಶಾಸ್ತ್ರಗಳ ಪರಿಚಯ" (೨–೩). ಇಂಥ ಪ್ರಾಮಾಣಿಕತೆಯೇ 'ನಿಲುವು' ಸಂಕಲನದ ಶ್ರೇಷ್ಠತೆಗೆ ಕಾರಣವಾಗಿದೆ.

ಇಷ್ಟಿದ್ದರೂ ಈ ಭಾಗದ ಲೇಖನಗಳು ಬಹಳ ಸೀಮಿತವಾದ ಯಶಸ್ಸನ್ನು ಸಾಧಿಸಿವೆ. ಅನ್ಯ ಶಿಸ್ತುಗಳ ಬಳಕೆಯ ಬಗ್ಗೆ ಬರೆಯುವ ಎಚ್. ಎಸ್. ಆರ್. ಅವರು ಅದನ್ನು ಹೀಗೆ ನಿರ್ವಚಿಸುತ್ತಾರೆ : "ಸಾಹಿತ್ಯ ಕೃತಿಯೊಂದರ ಹುಟ್ಟು, ಪರಿಣಾಮ, ಚರಿತ್ರೆ ಮತ್ತು ಮೂಲಗಳಂತಹ ಸಂಗತಿಗಳನ್ನು ಪರಿಶೀಲಿಸುವಾಗ, ಅಥವಾ ಅದರ ವಿಶ್ಲೇಷಣೆ ಹಾಗೂ ಮೌಲ್ಯ ನಿರ್ಣಯ ಮಾಡುವಾಗ ಚರಿತ್ರೆ, ತತ್ವಶಾಸ್ತ್ರ, ಮನಶಾಸ್ತ್ರ, ಸಮಾಜಶಾಸ್ತ್ರ, ಮುಂತಾದ ಇತರ ಅಧ್ಯಯನ ಕ್ಷೇತ್ರಗಳ ಅರಿವು, ನೀಡುವ ತಿಳುವಳಿಕೆ ಮತ್ತು ತಂತ್ರಗಳನ್ನು ಬಳಸಿಕೊಳ್ಳುವುದನ್ನು ಅಂತರ್ಶಾಸ್ತ್ರೀಯ ವಿಮರ್ಶೆಯ ಅತ್ಯಂತ ಸರಳನಿರೂಪಣೆಯೆಂದು ಕರೆಯಬಹುದು". ಈ ನೆಲೆಯಿಂದಲೇ ಅವರು ಮುಂದೆ ಕನ್ನಡದ ಕೆಲವು ಮಹತ್ವದ ಕೃತಿಗಳನ್ನು ಚರ್ಚೆಗೆ ಎತ್ತಿಕೊಳ್ಳುತ್ತಾರೆ. ಇದು ಒಂದು ಬಗೆಯ ಸರಳ ಪ್ರಯತ್ನ. ಮೂಲತಃ ಅಂತರ್ಶಾಸ್ತ್ರೀಯ ವಿಮರ್ಶೆಯು ಅನ್ಯ ಶಿಸ್ತುಗಳನ್ನೆಲ್ಲ ಬಳಸಿಕೊಂಡೂ, ಅವನ್ನು ಮೀರಿ ಹೊಸದಾದ ಕಾಣ್ಕೆಯೊಂದನ್ನು ಪ್ರಕಟಪಡಿಸುತ್ತದೆ. ಎಚ್.ಎಸ್.ಆರ್. ವಿಮರ್ಶೆಯು ಅಂತಹ ಸಾಹಸಕ್ಕೆ ಇಳಿಯುವುದಿಲ್ಲ.

ಎರಡನೇ ಬಗೆಯ ಹದಿನೈದು ಲೇಖನಗಳೂ ಹೊಸಗನ್ನಡ ಸಾಹಿತ್ಯದ ವಿವಿಧ ಘಟ್ಟಗಳಲ್ಲಿ, ವಿವಿಧ ಪ್ರಕಾರಗಳಲ್ಲಿ ಕೆಲಸ ಮಾಡಿದ ಮಹನೀಯರಿಗೆ ಗಂಭೀರವಾಗಿ ಪ್ರತಿಕ್ರಿಯಿಸುತ್ತವೆ. ಇಂಥ ಕಡೆ ರಾಘವೇಂದ್ರರಾವ್ ಅವರ ವಿಶಿಷ್ಟತೆ

ಎದ್ದು ಕಾಣುವುದು– ಅವರು ವಿವಿಧ ಘಟ್ಟಗಳನ್ನು ಮೀರಲು ಮಾಡಿದ ಪ್ರಯತ್ನದಲ್ಲಿ ನವ್ಯ ವಿಮರ್ಶೆ ತಂದು ಕೊಟ್ಟ ಆಕೃತಿ ಸೂಕ್ಷ್ಮಗಳ ಗ್ರಹಿಕೆಯ ಬಗೆಗೆ ಅವರಿಗೆ ಒಲವು ಹೆಚ್ಚಿರುವುದು ಹೌದಾದರೂ, ಅದಕ್ಕೇ ಅವರು ಬದ್ಧರಾಗಿ ಉಳಿದಿಲ್ಲ. ಹೀಗಾಗಿ ಎಲ್ಲ ಹಂತದ ಬರೆಹಗಾರರ ಮಿತಿಗಳನ್ನು ತೋರಿಸಲು ಅವರಿಗೆ ಸಾಧ್ಯವಾಗಿದೆ. ಮಾಸ್ತಿಯವರ ವೈಚಾರಿಕತೆಯ ಮಿತಿಗಳನ್ನು ಅವರು ದಿಟ್ಟವಾಗಿ ಗುರುತಿಸಿದ್ದೇ ಅದಕ್ಕೆ ಸಾಕ್ಷಿ.

ಸಂಕಲನದ ಕೊನೆಯ ಲೇಖನ 'ನಿಲುವು' ವಿನಲ್ಲಿ ಎಚ್.ಎಸ್.ಆರ್. ಅವರು ತಮ್ಮ ವಿಮರ್ಶನ ಗ್ರಹಿಕೆಗಳನ್ನು ಮುಂದಿಟ್ಟಿದ್ದಾರೆ. ಅವುಗಳನ್ನು ಸಂಕ್ಷಿಪ್ತಗೊಳಿಸಿ ಈ ಕೆಳಗಿನಂತೆ ನೀಡಬಹುದು.

೧. ವಿಮರ್ಶಕನ ಸಾಧನೆಗಿಂತ ಸೃಜನಶೀಲ ಸಾಹಿತಿಗಳ ಸೃಷ್ಟಿ ಕಾರ್ಯವು ಮೇಲು ದರ್ಜೆಯದು.

೨. ನಿರ್ದಿಷ್ಟ ಸಾಹಿತ್ಯಕ ಚಳುವಳಿಯ ತತ್ತ್ವಗಳನ್ನು ಸಂಪೂರ್ಣವಾಗಿ ಒಪ್ಪಿ ಕೊಳ್ಳದ, ಸ್ವತಃ ಸೃಜನಶೀಲ ಸಾಹಿತಿಗಳಲ್ಲದ ವಿಮರ್ಶಕರ ತಂಡವೊಂದು ಮೂಡಿಬರುವ ಅಗತ್ಯವಿದೆ.

೩. ಸಾಹಿತ್ಯ ವಿಮರ್ಶೆಗೂ ಇತರ ಅಧ್ಯಯನ ಕ್ಷೇತ್ರಗಳಿಗೂ ಕೊಳುಕೊಡೆಯ ಸಂಬಂಧ ಏರ್ಪಡಬೇಕು.

೪. ತಾನು ಬರೆಯುತ್ತಿರುವ ವಿಷಯದ ಬಗ್ಗೆ ಈಗಾಗಲೇ ಬಂದಿರುವ ಬರವಣಿಗೆ ಯನ್ನು ವಿಮರ್ಶಕ ಗಮನಿಸಬೇಕು.

೫. ವಿಮರ್ಶಕನು ತನ್ನ ವೈಯುಕ್ತಿಕ ವರ್ಣ, ವರ್ಗಗಳ ಮಿತಿಯನ್ನು ದಾಟಿ ಬರೆಯಬಲ್ಲ.

೬. ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಮತ್ತು ಶೈಲಿ ಶಾಸ್ತ್ರಗಳ ಜಾಗರೂಕವಾದ ಅನ್ವಯ ಕನ್ನಡದಲ್ಲಿ ನಡೆಯಬೇಕು.

೭. ವಿಮರ್ಶಕನ ವೈಯುಕ್ತಿಕ ಇಷ್ಟಾ–ನಿಷ್ಟಗಳ ಪ್ರಶ್ನೆ ವಿಮರ್ಶೆಯಲ್ಲಿ ಬರಕೂಡದು

೮. ವಿಮರ್ಶೆಯ ಪರಿಭಾಷೆಯಲ್ಲಿ ಎರಡು ರೀತಿ ಇರಬಹುದು. ಸಾಮಾನ್ಯ ಸಾಹಿತ್ಯಾಸಕ್ತ ಓದುಗರಿಗಾಗಿ ಸರಳ ಭಾಷೆ, ಇನ್ನೊಂದು ಶಾಸ್ತ್ರೀಯ ಭಾಷೆ.

ಬಹಳ ಆಕರ್ಷಕವಾದ ಈ 'ಅಷ್ಟಮಂಗಲ ಸೂತ್ರ'ವನ್ನು ತಮ್ಮ ವಿಮರ್ಶೆಯಲ್ಲಿ ಒಳಗೊಳ್ಳಲು ಎಚ್. ಎಸ್. ಆರ್. ಪ್ರಯತ್ನಿಸಿದ್ದಾರೆ. ಹಾಗಾಗಿ ಕೊನೆಯ ಲೇಖನವನ್ನು 'ನಿಲುವು' ಸಂಕಲನದ ಬಗ್ಗೆ ಲೇಖಕರೇ ಮಾಡಿಕೊಂಡ ವಿಮರ್ಶೆಯೆಂದು ಹೇಳಬಹುದು.

ಕೊನೆಗೊಂದು ಪ್ರಶ್ನೆ : ಲೇಖಕರು ಯಾವುದರ ಬಗ್ಗೆ ಬರೆಯ ಹೊರಡುತ್ತಾರೋ ಅದುವೇ ಅವರ ಇಷ್ಟಾ–ನಿಷ್ಟಗಳನ್ನು ಗಾಢವಾಗಿ ತೆರೆದು ತೋರುವುದಿಲ್ಲವೆ? ಕನ್ನಡ ವಿಮರ್ಶೆ ಬೇಡ– ಬೇರೆ ಯಾವ ವಿಮರ್ಶೆಯಾದರೂ ಇಂಥದ್ದರಿಂದ ಪೂರ್ತಿಯಾಗಿ ಪಾರಾಗಲು ಸಾಧ್ಯವೇ?

–ಡಾ|| ಪುರುಷೋತ್ತಮ ಬಿಳಿಮಲೆ

ಪ್ರೇಯಸಿಗೆ ಪತ್ರಗಳು (ಪತ್ರ ಸಾಹಿತ್ಯ)

ಲೇ: ಕೃಷ್ಣಾನಂದ ಕಾಮತ್

ಪ್ರ: ಮನೋಹರ ಗ್ರಂಥಮಾಲಾ, ಧಾರವಾಡ–1

ಪುಟ: 14+142 ಬೆಲೆ: ರೂ. 25/–

ಪತ್ರ ಸಾಹಿತ್ಯದ ಪ್ರಕಟಣೆ ಕನ್ನಡ ಸಾಹಿತ್ಯದಲ್ಲಿ ಸ್ವಲ್ಪ ವಿರಳವೇ. ಮೂರ್ತಿರಾಯರ ಚಿತ್ರಗಳು, ಪತ್ರಗಳು, ನವರತ್ನರಾಂ ಅವರ 'ಪ್ಯಾರಿಸ್ಸಿನಿಂದ ಪ್ರೇಯಸಿಗೆ', ಮಾಸ್ತಿಯವರ 'ಪತ್ರಗಳು' ಇಂಥ ಪ್ರಕಟಿತ ಪತ್ರ ಸಾಹಿತ್ಯದ ಸಾಲಿಗೊಂದು ಹೊಸ ಸೇರ್ಪಡೆ, ಕೃಷ್ಣಾನಂದ ಕಾಮತರ 'ಪ್ರೇಯಸಿಗೆ ಪತ್ರಗಳು'

ಈ ಕೃತಿ ಪ್ರಕಟಣೆಯ ಸಂದರ್ಭ ಕಾಮತ್ ದಂಪತಿಗಳ 25 ನೇ ವಿವಾಹ ವಾರ್ಷಿಕೋತ್ಸವ. ಮುನ್ನುಡಿ ಬರೆದವರು ಈ ಪತ್ರಗಳನ್ನು ಪಡೆದುಕೊಂಡ ಮೊದಲ ಓದುಗರಾದ ಪ್ರೇಯಸಿ–ಪತ್ನಿ ಶ್ರೀಮತಿ ಜ್ಯೋತ್ಸ್ನಾ ಕಾಮತರು, ಈ ರಮ್ಯ ಹಿನ್ನೆಲೆಯ ಪತ್ರಗಳ ಮುನ್ನುಡಿಯಲ್ಲಿ ಶ್ರೀಮತಿ ಕಾಮತರು ಪತ್ನಿಯಲ್ಲಿ ಪ್ರೇಯಸಿಯನ್ನು ಕಾಣುತ್ತಾ ಪತ್ರ ಬರೆಯುವ ಪತಿಯನ್ನು ಮೆಚ್ಚಿಕೊಂಡು, ಅದಕ್ಕೆ ಮಿತ್ರರ ಪ್ರತಿಕ್ರಿಯೆಗಳನ್ನು ದಾಖಲಿಸುತ್ತ ಹೀಗೆ ಪತ್ರ ಬರೆಯುವ ಪತಿ

ಪತ್ನಿ ಎದುರಿಗಿದ್ದಾಗ "ಪತಿಯು ಸಹಜ ದರ್ಪವನ್ನು" ಪ್ರದರ್ಶಿಸುವುದಕ್ಕೊ ಏನೋ ಆಗಾಗ ಗದರಿಸುತ್ತಲೇ ಇರುತ್ತಾರೆ ಎಂದು ಪತಿಯು ಬಹುರೂಪವನ್ನು ನಾಜೂಕಾಗಿ ಬಯಲು ಮಾಡಿಯೇ ಆಮೇಲೆ ಓದುಗರಿಗೆ ಪತ್ರಗಳನ್ನು ನೀಡಿದ್ದಾರೆ.

ಜೊಬನೇರದಲ್ಲಿ ತಮ್ಮ ಜೀವನದ ಬಗ್ಗೆ ಕಾಮತರು ಈಗಾಗಲೇ 'ನಾ ರಾಜಸ್ಥಾನದಲ್ಲಿ' ಕೃತಿಯಲ್ಲಿ ವಿವರವಾಗಿ ಬರೆದಿದ್ದಾರೆ. ಭವಿಷ್ಯ ಜೀವನವನ್ನು ಕುರಿತ ಆತಂಕಗಳು, ಹಿರಿಯ ದಂಪತಿಗಳು ನವಪ್ರೇಮಿಗಳಂತೆ ಇರುವುದರ ಬಗೆಗಿನ ಮೆಚ್ಚಿಗೆ, ರೂಪ ಲಾವಣ್ಯಗಳ ಬಗೆಗಿನ ವಿಚಾರ ಮೊದಲ ಹಂತದ ಪತ್ರಗಳಲ್ಲಿ ಇದೆ. ಪ್ರೇಮಿಯ ಮನಸ್ಸಿನ ಸ್ಥಿತಿಯ ಬಗ್ಗೆ ಕುಚೋದ್ಯದಿಂದ ತನ್ನನ್ನು ತಾನೇ ಗೇಲಿ ಮಾಡಿಕೊಳ್ಳುವುದೂ ಇದೆ. "ಜ್ಯೋತ್ಸ್ನಾ, ಇಂದಿನ ದಿನಗಳಲ್ಲಿ ನನಗೆ ಜೋಡಿ ಜಡೆ, ಜಂಬ, ಜ್ಯೋತಿ, ಜೋಗುಳ, ಜೋಕುಮಾರಗಳಂತಹ ಶಬ್ದಗಳು ವಿಶೇಷವಾಗಿ ಸೇರುತ್ತವೆ. ನಿನಗೆ ಕಾಗೆ, ಕಾವಿ, ಕಪಿ, ಕತ್ತೆ, ಕೀಟ, ಕೀಲಿ ಮುಂತಾದ ಶಬ್ದಗಳು ಆಕರ್ಷಿಸುತ್ತಿರಬಹುದೆ ? "

ಶುಭವಾರ್ತೆ, ಪರಿವರ್ತನೆ ಬಯಕೆಯೂಟ– ಈ ಅಧ್ಯಾಯಗಳಲ್ಲಿ ಅತಿಥಿ ಸತ್ಕಾರದ ಬಗ್ಗೆ ಹೊಸದಾಗಿ ಸಂಸಾರಸ್ಥನಾದ ಗೃಹಸ್ಥನ ಭಾವನೆಗಳು, ಸ್ವಂತ ಸ್ಥಳದಿಂದ ದೂರವಿರುವ ದಂಪತಿಗಳ ಭಾವನೆಗಳು, ಸುಸಂಸ್ಕೃತನಾದ ವಿದ್ಯಾವಂತನ ವಿದ್ಯಾವಂತನ ಸ್ನೇಹಾರ್ದವಾದ, ಮಾನವೀಯವಾದ ಚಿಂತನಗಳು ವ್ಯಕ್ತಗೊಂಡಿವೆ. 'ಬಯಕೆಯೂಟ'ದ ಸಂದರ್ಭದಲ್ಲಿ ಅತ್ತೆ, ತಾಯಿ, ಪತಿ, ಅಡಿಗೆಯುವ ಮತ್ತು ಛಾಯಾಗ್ರಾಹಕವಾಗಿ ತವರಿನಿಂದ ದೂರದಲ್ಲಿರುವ ಮಡದಿಗೆ ತವರಿನ ಸಂಭ್ರಮದ ಕೊರತೆ ಬಾರದಂತೆ ನೋಡಿಕೊಳ್ಳುವೆನೆಂಬ ಉತ್ಸಾಹ– ಅಪೇಕ್ಷೆಗಳು ಬರಹಗಾರನ ವ್ಯಕ್ತಿತ್ವದ, ಮಾರ್ದವ, ವೈಶಾಲ್ಯ ಅಂತಃಕರಣಗಳನ್ನು ಅನಾವರಣ ಮಾಡುವಂತಿವೆ.

ಈ ಪತ್ರಗಳಲ್ಲಿ ಆನುಷಂಗಿಕವಾಗಿ ವಿಶ್ವವಿದ್ಯಾನಿಲಯದ ರಾಜಕೀಯಗಳು, ನೌಕರಿ–ಸ್ವಾಭಿಮಾನ, ಹಣ ಸಂಪಾದನೆ ಮತ್ತು ಆಸಕ್ತಿಗಳ ತಾಕಲಾಟ, ಮಕ್ಕಳ ವಿದ್ಯಾಭ್ಯಾಸ, ಸರಳ ಜೀವನ, ಪರೋಪಕಾರ– ಈ ಎಲ್ಲ ಅಂಶಗಳ ಬಗೆಗಿನ ವೈಯುಕ್ತಿಕ ನಿಲುವುಗಳು ಸಹಾ ದಾಖಲಾಗಿವೆ.

ಕಾಮತರು ತಾವು ನೋಡಿದ ಬೇರೆ ಬೇರೆ ಸ್ಥಳಗಳ ಅಲ್ಲಿನ ಜೀವನಗಳ ಬಗೆಗೆ ಕ್ಯಾಮರಾ ಮಾದರಿಯ ಸೂಕ್ಷ್ಮತೆಯಿಂದ ವಿವರಗಳನ್ನು ದಾಖಲಿಸುತ್ತಾರೆ.

ಬೇರೆ ಬೇರೆ ಊರುಗಳನ್ನು ಪರಿಚಯಿಸುವಷ್ಟೇ ಆಸಕ್ತಿಯಿಂದ ಬೆಂಗಳೂರ ದರ್ಶನವನ್ನೂ ಮಾಡಿಸುತ್ತಾರೆ. ಕಾಮತರು ವರ್ಣಿಸಿದ ಬೆಂಗಳೂರು ಈಗ ಗತಕಾಲಕ್ಕೆ ಸೇರಿ ಹೋಗಿರುವುದರಿಂದ ಅದರ ಒಂದು ದರ್ಶನ ಮಾಡಬಹುದು.

"ಒಂದೂ ಸಂಪಿಗೆ ಮರವಿಲ್ಲದ ಸಂಪಿಗೆ ಮರದ ರಸ್ತೆಯ ಇಕ್ಕೆಲದಲ್ಲಿ ಹಳೆಯ ಮನೆ ಹೊಸ ಗ್ಯಾರೇಜುಗಳು ಅಂಗಡಿಗಳಾಗಿ ಮಾರ್ಪಟ್ಟಿವೆ. ಅತ್ಯಲ್ಪ ಬೆಲೆಗೆ ಹೊಟ್ಟೆ ತುಂಬ ನಾಶ್ತಾ ಬೇಕಿದ್ದರೆ ಇಲ್ಲಿಯೇ ಬರಬೇಕು. ಇಡ್ಲಿಗೆ ಹತ್ತು ಪೈಸೆ, ಉದ್ದಿನವಡೆಗೆ ಹದಿನೈದು ಪೈಸೆ, ಘಮ ಘಮಿಸುವ ಕಪ್ ಕಾಫಿಗೆ ಇಪ್ಪತ್ತು ಪೈಸೆ"

ಆಹಾ ! ಇಂಥಾ ಬೆಂಗಳೂರಿಗೆ ಹೋಗಬಹುದಿತ್ತು– ಆದರೆ ಅದು ಈಗಿಲ್ಲವಲ್ಲ. ರವೀಂದ್ರರ ಕಲ್ಕತ್ತಾ, ಶತಮಾನದ ಹಿಂದೆ, ಮಾಯವಾದಂತೆ ಕಾಮತರ ಈ ಬೆಂಗಳೂರು ಸಹ ಮಾಯವಾಗಿದೆ.

–ಸ. ಉಷಾ

ಅರ್ಥ (ಕಥಾ ಸಂಕಲನ)

ಲೇ: **ಭಾಗೀರಥಿ ಹೆಗಡೆ**

ಪ್ರ: ಸೂರ್ಯಪ್ರಕಾಶನ, ಮಂಚಿಕೇರಿ 581 347

ಪುಟಗಳು: 160+12 ಬೆಲೆ : ರೂ. 20/–

ಭಾಗೀರಥಿ ಹೆಗಡೆಯವರ ಎರಡನೆಯ ಕಥಾಸಂಕಲನ 'ಅರ್ಥ'ದಲ್ಲಿಯ ಕಥೆಗಳು ಗಂಭೀರವಾದ ಪ್ರಯತ್ನಗಳಾಗಿವೆ. ಈ ಸಂಕಲನದಲ್ಲಿಯ ಬಹುತೇಕ ಕಥೆಗಳು ಬದುಕಿನ ದುರಂತಗಳ ಹೊಣೆಗಾರಿಕೆಯನ್ನು ಕಂಡುಕೊಳ್ಳುವ ದಿಕ್ಕಿನಲ್ಲಿ ತೊಡಗುತ್ತವೆ. 'ಹೊಣೆ' ಕಥೆಯ ಶಂಕರಪ್ಪ ಮಾಸ್ತರು ಬಾವಿಯಿಂದ ನೀರೆಳೆಯುವಾಗ ಗುಬ್ಬಚ್ಚಿಯೊಂದು ಬಾವಿಯಲ್ಲಿ ಬಿದ್ದು ಸಾವಿಗೀಡಾಗುವದರ ಮತ್ತು ತಮ್ಮ ವಿದ್ಯಾರ್ಥಿ ಪ್ರಕಾಶನ ಸಾವು ಈ ಎರಡು ಘಟನೆಗಳ ಹೊಣೆ ಗಾರಿಕೆಯ ಅಪರಾಧಿ ಪ್ರಜ್ಞೆಯಲ್ಲಿ ಬಳಲುತ್ತಾರೆ. ಪರಮೂ ಕೂಡಾ ಪ್ರಕಾಶನ ಸಾವಿನ ಜವಾಬ್ದಾರಿಯಿಂದ ಗಾಬರಿಗೊಳ್ಳುತ್ತಾನೆ. 'ಕೋಳುಗಂಬ' ಕಥೆಯ

ದಿನೂನ ದೊಡ್ಡಪ್ಪ ನಾದಿನಿ ಪಾರ್ವತಿಯ ಬದುಕಿನ ದುರಂತಕ್ಕೆ ಹೊಣೆಗಾರನಾಗಲೇ ಬೇಕಾಗುತ್ತದೆ. 'ಹೊಳೆಯ ಹಾದಿಯ' ಮಠಾಧೀಶರು ತಮ್ಮ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸದೇ ಹೋದದ್ದರಿಂದ ಆ ಕುಟುಂಬ ಅನುಭವಿಸುವ ದುರಂತಕ್ಕೆ ಹೊಣೆಗಾರರಾಗಬೇಕಾಗುತ್ತದೆ. ಈ ಹೊಣೆಗಾರಿಕೆಯನ್ನು ಆ ಮಠಾಧೀಶ ಕಥೆಯ ಅಂತ್ಯದಲ್ಲಿ ಒಪ್ಪಿಕೊಂಡೂಬಿಡುತ್ತಾನೆ. 'ದುಷ್ಟಬುದ್ಧಿ' ಕಥೆಯ ನಾಗಪ್ಪಯ್ಯ ತನ್ನ ತಮ್ಮನ ಕುಟುಂಬವನ್ನು ನಿರಾಶ್ರಿತವಾಗಿಸುತ್ತಾನೆ. ಆ ಮೂಲಕ ತನ್ನ ಬದುಕಿನ ದುರಂತಕ್ಕೆ ಬೀಜ ನೆಟ್ಟಿರುವ ಅರಿವನ್ನು ಪಡೆಯುತ್ತಾನೆ. 'ಪ್ರಶ್ನೆ' ಕಥೆಯಲ್ಲಿ ಇಡೀ ನಿಸರ್ಗವೇ, ಮನುಷ್ಯನ ಬದುಕಿನ ಹಾಗೂ ತಪ್ಪಿಹೋಗಿರುವುದನ್ನು ಕಾಣುತ್ತ ಎಲ್ಲವನ್ನೂ ನೇರ್ಪುಗೊಳಿಸುವ– ಸಮಗೊಳಿಸುವ ಒಡೆಯ ಇದ್ದಾನೋ ಇಲ್ಲವೋ ಎಂದು ಪ್ರಶ್ನಿಸತೊಡಗುತ್ತದೆ.

ಪ್ರಶ್ನೆ ಮತ್ತು ಕೋಳುಗಂಬ ಕಥೆಗಳನ್ನು ಹೊರತುಪಡಿಸಿ ಉಳಿದ ಕಥೆಗಳಲ್ಲಿ ಹೊಣೆಗಾರಿಕೆಯ ಕಲ್ಪನೆ ಅತ್ಯಂತ ಸರಳವಾದದ್ದು ಮತ್ತು ಸುಲಭವಾದದ್ದು ಆಗುತ್ತದೆ. 'ಪ್ರಶ್ನೆ'ಯಲ್ಲಿ ಎಲ್ಲ ದುರಂತಗಳಿಗೂ ಯಾರನ್ನೇ ನಿರ್ದಿಷ್ಟವಾಗಿ ಜವಾಬ್ದಾರರನ್ನಾಗಿಸುವದು ಸಾಧ್ಯವಾಗುವುದಿಲ್ಲ. ಬೇಂದ್ರೆಯವರ 'ಸಾಯೋ ಆಟ' ನಾಟಕವನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಪ್ರಶ್ನೆ ಕಥೆಯ ಅಂತ್ಯದಲ್ಲಿ, ನಿಸರ್ಗದ ಸಾಕ್ಷಿಯಲ್ಲಿ ಪ್ರಜ್ವಲಿಸುವ ಮನೆಯೊಳಗೆ ಮನೆಯೊಡೆಯ ಇದ್ದಾನೋ....ಇಲ್ಲವೋ– ಎಂಬ ಪ್ರಶ್ನೆಯು ಕಥೆಗೆ ತನ್ನನ್ನು ಮೀರಿ ಅದರಾಚೆಗೆ ಬೆಳೆಯಲು ಅವಕಾಶ ಕಲ್ಪಿಸಿಕೊಡುತ್ತದೆ. 'ಕೋಳುಗಂಬ' ಕಥೆಯಲ್ಲಿ ಕೂಡಾ ದುರಂತಗಳೆಲ್ಲಕ್ಕೆ ಹೊಣೆಗಾರನೆಂಬ ಆರೋಪಕ್ಕೆ ಈಡಾಗಿರುವ ದಿನೂನ ದೊಡ್ಡಪ್ಪ ನಿಜವಾಗಿಯೂ ಅಂತಹ ಹೊಣೆಗಾರನೆನ್ನಿಸುವುದಿಲ್ಲ. ಹೀಗಾದಾಗ ದುರಂತವು ನಿಗೂಢದ ಹಿನ್ನೆಲೆಯನ್ನು ಪಡೆದುಕೊಳ್ಳುವಂತಾಗುತ್ತದೆ. ಒಂದೇ ಒಂದು ಕ್ಷಣದ ಮೈಮರೆವು ... 'ಒಂದೇ ಒಂದು ತಪ್ಪು ನಿರ್ಧಾರ...,ಪರಿಣಾಮ ಮಾತ್ರ ಆಯುಷ್ಯವನ್ನೆಲ್ಲ ಚೂರು ಚೂರೇ ಆಗಿ ನೆಕ್ಕುವಂಥದ್ದು'ಎಂದು ದಿನೂನ ದೊಡ್ಡಪ್ಪ ಕೊರಗುತ್ತಾನೆ. ಆದರೆ ಆ ಒಂದೇ ಒಂದು ಕ್ಷಣದ ಮೈಮರೆವನ್ನು– ಒಂದು ಸಣ್ಣ ತಪ್ಪು ನಿರ್ಧಾರವನ್ನು ನಿವಾರಿಸಿಕೊಳ್ಳುವ ಸಾಧ್ಯತೆಯ ನಿಯಂತ್ರಣ ಎಲ್ಲಿ ಇದೆ? ಎನ್ನುವ ಪ್ರಶ್ನೆಮೂಡಿದಾಗ ಬದುಕಿನ ನಿಗೂಢತೆಯ ಕಲ್ಪನೆ ನಮ್ಮಲ್ಲಿ ಮೊಳೆಯಲು ಪ್ರಾರಂಭವಾಗುತ್ತದೆ.

'ಗಾಂಧಾರಿ' ಮತ್ತು 'ಹೂಗ್ಲಿ' ಸಂಕಲನದ ಇನ್ನೆರಡು ಇಷ್ಟವಾಗುವ ಕಥೆಗಳು. 'ಗಾಂಧಾರಿ' ಕಥೆಯ ತಾಯಿಗೆ ಬದುಕೆಲ್ಲವೂ ಚಿತ್ರಹಿಂಸೆ. ಗಂಡ, ಮಗಳು

ಮಗ ನೆರೆಮನೆಯವಾಕೆ ಹೀಗೆ ಎಲ್ಲರೂ ಈ ಚಿತ್ರಹಿಂಸೆಯ ಬೆಂಕಿಗೆ ಗಾಳಿ ಹಾಕುವವರು. ತನ್ನದೆಂದುಕೊಂಡ ಕುಟುಂಬ ತನ್ನದೆನಿಸುವುದಿಲ್ಲ– ತಾನು ಬೇಯಿಸುವ ಅನ್ನ ತನ್ನದಾಗಿರುವುದಿಲ್ಲ– ತನ್ನ ಕರುಳಿನ ಕುಡಿಯೇ ಆದ ಮಗಳು ತನಗೆ ಅನ್ನ ಹಾಕುವ ಪೆರವಳಾಗಿರುತ್ತಾಳೆ. ಇಷ್ಟೆಲ್ಲದರ ನಡುವೆಯೂ ಸಂಬಂಧದ ಸೆಳೆತ ಆ ತಾಯಿಗೆ. ಮನೆ ಬಿಟ್ಟು ಹೊರಟ ಮಗನ ಕೈಹಿಡಿದು ಎಳೆಯುತ್ತ ಒಂದು ತುತ್ತು ಉಂಡು ಹೋಗೆಂದು ಹಪಾಪಿಸುತ್ತಾಳೆ. ಕೆಟ್ಟ ಮಗನನ್ನು ಕಟ್ಟಿಕೊಂಡು ಮನೆ ಬಿಟ್ಟು ಹೊರಡುತ್ತ ಸಂಬಂಧದ ಸಾಂದ್ರತೆಯನ್ನು ಮನದಟ್ಟು ಮಾಡುತ್ತಾಳೆ. ಆದರೆ ಈ ಕಥೆಯ ದೌರ್ಬಲ್ಯವೆಂದರೆ, ಈ ಇಡೀ ದುರಂತವು ಆ ತಾಯಿಯೊಬ್ಬಳದೇ ಎನ್ನುವಂತಾಗುವದು. ಅಲ್ಲೊಬ್ಬ ಗಾಂಧಾರಿ– ಇಲ್ಲೊಬ್ಬಳು ತಾಯಿ ಎನ್ನುವ ಭಾವನೆಯಲ್ಲಿ ಕಥೆಯು ಸೊರಗುತ್ತದೆ. 'ಪ್ರಶ್ನೆ' ಕಥೆಯಲ್ಲಿ ವಿನಾಕಾರಣ ಎನ್ನುವಂತೆ ಸಹಜವಾಗಿ ಘಟಿಸುವ ಎಲ್ಲರನ್ನೂ ಒಳಗೊಳ್ಳುವ ದುರಂತದ ಹಿನ್ನೆಲೆಯಲ್ಲಿ 'ಗಾಂಧಾರಿ' ಕಥೆಯ ದೌರ್ಬಲ್ಯ ಸ್ಪಷ್ಟಗೊಳ್ಳುತ್ತದೆ.

'ಹೂಗ್ಲಿ' ಸಂಕಲನದ ವಿಶಿಷ್ಟವಾದ ಕಥೆ. ಮನೆ–ಮಂದಿ, ಅಡಿಗೆ– ತೀರ್ಥ, ಗಂಡ–ಹಾಸಿಗೆ.... ಇದಲ್ಲ ... ಬದುಕೆಂದರೆ ಇದಲ್ಲವೇ ಅಲ್ಲವೆಂದು, ಬೇರೇನೋ ಇದೆ ಎಂದು, ಹರಿಯುವುದೇ ಅದರ ಗತಿ, ಮೂಲ ಲಕ್ಷಣವಾಗಿರಬೇಕೆಂದು ನದಿಗಳ ಬೆನ್ನು ಹತ್ತುತ್ತಾಳೆ ವಾರಿಧಿ. ಬಿಂದು ಬಿಂದು ಸೇರಿಕೊಂಡು ಸಿಂಧುವಾಗುವ ಕ್ರಮಕ್ಕಾಗಿ, ಹರಿಯುವುದು ನಿಂತು ದರಿಗಟ್ಟಿ ಸಾಯುವುದನ್ನು ತಪ್ಪಿಸಿಕೊಳ್ಳಲು ಓಡುವ ನದಿಯಂತೆ ಓಡಲು ಪ್ರಯತ್ನಿಸುತ್ತಾಳೆ. ಆದರೆ ವಾರಿಧಿಗೆ ಅವಳ ಪ್ರಯತ್ನಕ್ಕೆ ಯಶ ಸಿಕ್ಕಿತೆನ್ನುವಂತಿಲ್ಲ. ತನ್ನ ಇಡೀ ಜನ್ಮವನ್ನು ಪಣಕ್ಕಿಟ್ಟು 'ಭಾರತೀಯ ಮನಸ್ಸುಗಳಲ್ಲಿ ನದಿಗಳ ಅಸ್ತಿತ್ವ' ಕುರಿತು ಬರೆದ ಸಾವಿರದ ಇನ್ನೂರು ಪುಟಗಳ ಹಾಳೆಗಳು, ಪ್ರವಾಸದಿಂದ ಸಂಗ್ರಹಿಸಿದ ಫೋಟೋಗಳು,ಅಂಕಿ ಅಂಶಗಳು ಗೆದ್ದಲುಗಳ ಆಹಾರವಾಗಿಹೋದಾಗ 'ಈ ಸೋಲುಗಳನ್ನು ನನ್ನ ಸಾವಿನಿಂದಾದರೂ ಕೊಂದು ಗೆಲ್ಲಬೇಕು' ಎಂದು ಯಾವುದನ್ನು ಗೆಲ್ಲಲು ಪ್ರಯತ್ನಿಸಿದ್ದಳೋ ಅದನ್ನೇ ಆಶ್ರಯಿಸಲು ಮನಸ್ಸು ಮಾಡುತ್ತಾಳೆ. ಈ ಅಂಶ ಜೀವನದ ಲಯ ತನ್ನಷ್ಟಕ್ಕೆ ತಾನು ಭಿನ್ನವಾದದ್ದು ಅದು ಸೃಷ್ಟಿಯ ಲಯದ ಸರಳ ಅನುಕರಣೆಯಾಗಲಾರದೆನ್ನುವುದನ್ನು ಹೇಳುತ್ತದೆ. ಇಂಥ ಅರಿವಿನ ಹಿನ್ನೆಲೆಯಲ್ಲಿಯೇ ವಾರಿಧಿ ತನ್ನ ಮಗನನ್ನು ಎದುರಿಸಲಾಗದೇ ಬಾಗಿಲನ್ನು ಭದ್ರಪಡಿಸಿಕೊಂಡು ಮುಸುಕು ಹಾಕಿಕೊಳ್ಳುತ್ತಾಳೆ.

'ಅರ್ಘ' ಸಂಕಲನದ ಕಥೆಗಳು ಕೆಲವು ಘನಿಷ್ಟವಾದ ಪ್ರಶ್ನೆಗಳನ್ನು ಎತ್ತುತ್ತವೆ. ಯಾವುದೇ ಒಂದು ಸಾಹಿತ್ಯಕೃತಿ ತಾನು ಎತ್ತುವ ಪ್ರಶ್ನೆಗಳ

ಮಹತ್ವದ ಮೂಲಕವಾಗಿಯೇ ಅರ್ಥಪೂರ್ಣವಾಗುತ್ತದೆನ್ನುವ ಮಾತು ಇದೆ. 'ಅರ್ಥ' ಸಂಕಲನದ ಕಥೆಗಳ ಅವಲೋಕನ ಈ ಮಾತಿನ ಮಿತಿಯನ್ನು ಬಿಂಬಿಸು ವಂಥದಾಗಿದೆ. ಇಲ್ಲಿನ ಕಥೆಗಳ ಓದು ನಮ್ಮಲ್ಲಿ ಅತೃಪ್ತಿಯನ್ನು ಕಟ್ಟುತ್ತಬರುತ್ತದೆ.

ಇಂಥ ಅತೃಪ್ತಿಗೆ ಕಾರಣವೆಂದರೆ ಈ ಕಥೆಗಳು ಎತ್ತುವ ಪ್ರಶ್ನೆಗಳ ಗಾಢತೆಗೆ ತಕ್ಕುದಾದ ವ್ಯಾಪ್ತಿ ಅವುಗಳಿಗೆ ದೊರೆತಿಲ್ಲ-ಅರ್ಥಾತ್ ಕಥಾ ವಸ್ತುವು ಅವುಗಳ ತಂತ್ರದ ತೀವ್ರತೆಗೆ ಹೋಲಿಸಿದಾಗ ತುಂಬ ಪೇಲವವಾದುದಾಗಿ ಕಾಣಿಸುವುದು. ಉದಾಹರಣೆಗೆ 'ಹೊಣೆ' ಕಥೆಯನ್ನು ನೋಡಿ. ಇಡೀ ಕಥೆ ಒಂದು ರೀತಿಯ ಡೆಲಿಬರ ಸಿಯ ನಿಟ್ಟುಸಿರನ್ನು ಬಿಡುತ್ತಿರುವಂತೆ ತೋರುತ್ತದೆ. ಪ್ರಕಾಶ ಆಡುತ್ತಿದ್ದ ಮಾತು ಗಳ ಸತ್ಯದ ಪ್ರಖರತೆಯನ್ನು ಎದುರಿಸಲು ಸಾಧ್ಯವಾಗದ ಶಂಕರಪ್ಪ ಮಾಸ್ತರರು ಆತ್ಮ ವಂಚಕರೆನ್ನುವುದು ಸ್ಪಷ್ಟವಾಗಿ ಹೊಳೆಯುತ್ತದೆ. ಅಂಥವರು ಕಥೆಯ ಆರಂಭದಲ್ಲಿ ಒಂದು ಗುಬ್ಬಚ್ಚಿಯ ಸಾವಿನ ಬಗ್ಗೆ ಅನುಭವಿಸುವ ವಿನಾಕಾರಣವಾದ ಹೊಣೆಗಾರಿಕೆ, ಅಪರಾಧಿ ಪ್ರಜ್ಞೆಗಳು ನಿಜವಾಗಲಾರವು. ಇದು ಕಥೆಯ ತಂತ್ರಗಾರಿಕೆ ಯಾಗಿ ಮಾತ್ರ ಮೂಡಿಬಂದು ಒಂದು ಹುಸಿ ರೂಪಕವಾಗುತ್ತದೆ. ಹಾಗೆಯೇ 'ವಿಕಾಸ' ಕಥೆಯಲ್ಲಿ ಬರುವ ಪ್ರಾಣಿ ಸಂಗ್ರಹಾಲಯ ಕೂಡಾ ಇಂಥದೇ ತಂತ್ರ ಗಾರಿಕೆಯ ಹವಣು ಆಗುತ್ತದೆ. ಯಾಕೆಂದರೆ ಇಲ್ಲಿ ಸಂಗಣ್ಣನಲ್ಲಿ ನಡೆಯುವ ವಿಕಾಸಕ್ಕೆ 'ಪ್ರಾಣಿ ಸಂಗ್ರಹಾಲಯ'ದ ಕಾಣಿಕೆ ತೋರುಗಾಣಿಕೆಯದು ಮಾತ್ರ. ಅವನ ವಿಕಾಸದ ಹಿಂದೆ ಅವನ ಏಕಾಂತ ಚಿತ್ತದ, ಅಂತರ್ಮುಖಿಯಾದ ಚಿಂತನೆ ಇದೆ. ಸಂಗಣ್ಣನನ್ನು ಇನ್ನಾವುದೇ ಬೇರೆ ಪರಿಸರದಲ್ಲಿ ಇರಿಸಿದ್ದರೂ ಅವನಲ್ಲಿ ಇದೇ ರೀತಿಯಾದ ವಿಕಾಸವನ್ನು ಗುರುತಿಸಲು ಸಾಧ್ಯವಾಗಬಹುದಿತ್ತು. ಸಂಗಣ್ಣನು ಮಂಗವೊಂದಕ್ಕೆ ಆಹಾರ ಕೊಡಲು ಹೋದಾಗ ಮಂಗನ ಸ್ವಾತಂತ್ರ್ಯ ಪ್ರೀತಿಯ ಬಗ್ಗೆ ಅವನಲ್ಲಿ ಉಂಟಾದ ಅನುಭೂತಿ ಕೂಡಾ ಧಿಡೀರಾದುದೆಂದು ತೋರುತ್ತದೆ. ಕಥೆಯ ಆರಂಭದಲ್ಲಿ ಸಿಕ್ಕುವ ಸಂಕಣ್ಣನ ಚಿತ್ರ ಮಂಗನ ಪಂಜರಕ್ಕೆ ಬರುವಷ್ಟರಲ್ಲಿ ಎಷ್ಟೊಂದು ಬದಲಾಗಿಬಿಡುತ್ತದೆ! ಹಾವಿನ ಪಂಜರದಿಂದ ಮಂಗನ ಪಂಜರಕ್ಕೆ ಇರುವುದು ಬರೀ ಆರೆಂಟು ಸಾಲುಗಳ ಅಂತರ ಮಾತ್ರ! ಅಷ್ಟರಲ್ಲಿ ಎಂಥ ಬದಲಾವಣೆ! ಹೀಗಾಗುವದು ಪಟಕ್ಕೆ ಬಿದ್ದು ಸಾಂಕೇತಿಕತೆಯ ಬೆನ್ನು ಹತ್ತುವದರಿಂದ. ಇಂಥದು ನವ್ಯ ಕಥೆಗಾರಿಕೆಯ ಅನುಕರಣದಿಂದ ಹುಟ್ಟುವದು. ಇಂಥ ದೌರ್ಬಲ್ಯಗಳನ್ನು ಮೀರಿರುವ ಎರಡು ಮೂರು ಕಥೆಗಳು ಈ ಸಂಕಲನ ದಲ್ಲಿರುವುದರಿಂದ ಅದು ಅರ್ಥಪೂರ್ಣವೆನಿಸುತ್ತದೆ.

-ರಾಘವೇಂದ್ರ ಪಾಟೀಲ

ಮೊದಲ ನೋಟ

ನಿಮ್ಮೆಲ್ಲೊಬ್ಬ (ಕವನ ಸಂಕಲನ)

ಲೇ: **ಡಿ. ಎ. ಶಂಕರ**

ಡಿ. ಎ. ಶಂಕರ ಅವರ ಮೊದಲ ಕವನ ಸಂಕಲನ ಇದಾದರೂ ತಮ್ಮ ವಿಮರ್ಶೆಯ ಮೂಲಕ ಅವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತುಂಬ ಹಳಬರು. ಆಗಂತುಕರಂತೆ ಕಾವ್ಯ ಕ್ಷೇತ್ರಕ್ಕೆ ಬಂದಿದ್ದಾರೆ. ಇಲ್ಲಿನ ಕವಿತೆಗಳು ತೋರುಗಾಣಿಕೆಯ ಗಾಂಭೀರ್ಯವನ್ನು ಪ್ರದರ್ಶಿಸದ ಗಂಭೀರವಾದ ಕವನಗಳಾಗಿವೆ. ಲವಲವಿಕೆಯ ಪದ್ಯಗಳಿವು. 'ಕತ್ತಲ ಬೆಳಕು' 'ಹೊಸ ರುಚಿ' ಕವಿತೆಗಳು ಬರೆಯುವ ಕ್ರಿಯೆಯನ್ನು ಕುರಿತಾದ ಪದ್ಯಗಳು. ಕತ್ತಲ ಬೆಳಕು ಸೃಜನಲಶೀಲ ಕ್ರಿಯೆಯು ಸಾರ್ವಜನಿಕ ಗೊಂದಲದಲ್ಲಿ ಹುಟ್ಟದೆ 'ಹುತ್ತಗಟ್ಟಿದ ಕತ್ತಲಬೆಳಕಿ'ನ ಅಂತರ್ಮುಖೀ ಪ್ರಜ್ಞೆಯಲ್ಲಿ ಮೈದಾಳುವಂಥದೆನ್ನುವ ಮಾತು ಹೇಳುತ್ತದೆ. ಈ ಪದ್ಯಕ್ಕಿಂತ 'ಹೊಸ ರುಚಿ' ಪದ್ಯ ಕಟ್ಟಿಕೊಡುವ ಚಿತ್ರ ಮರ್ಮಭೇದಕವಾದುದು. ಲೇಖಕನ ವ್ಯಕ್ತಿತ್ವ ಸುಟ್ಟು ಹೊರಬರುವ ಕೃತಿ ಹೊಸ ರುಚಿಯ ಸ್ವಾದವನ್ನು ತರುತ್ತದೆನ್ನುವ ಅರಿವು ಒಂದು ರೀತಿಯದಾದರೆ, ಸೃಜನಶೀಲತೆ ಮತ್ತು ಓದು ಅಥವಾ ವಿಮರ್ಶೆ ಇವುಗಳ ನಡುವಿನ ಸಂಬಂಧವನ್ನು ನಿರೂಪಿಸುವ ಇನ್ನೊಂದು ರೀತಿಯನ್ನು ಪದ್ಯವು ಸಾಧಿಸುತ್ತದೆ. ಸಂಕಲನದ ಬಹುತೇಕ ಪದ್ಯಗಳು ಬದುಕು ನಿರಾಯಾಸವಾಗಿ ಮುಪ್ಪು ಸಾವುಗಳ ಉಡಿಗೆ ಜಾರಿಹೋಗುವದನ್ನು ನಿರೂಪಿಸುತ್ತವೆ. ಸಂಕಲನದಲ್ಲಿ 'ವಂಶವೃಕ್ಷ' ಕಾದಂಬರಿಯ ನಾಟಕ ರೂಪಕ್ಕಾಗಿ ಬರೆದ ಏಳು ಹಾಡುಗಳು ಸೇರಿವೆ.

ಸಮಾಧಿಯ ಮೇಲೆ (ವೈಚಾರಿಕ ಲೇಖನಗಳು)

ಲೇ: **ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು**

ಈ ಸಂಕಲನದಲ್ಲಿ ವಿವಿಧ ವಿಷಯಗಳನ್ನು ಕುರಿತ ಹದಿಮೂರು ಲೇಖನಗಳಿವೆ. ಶ್ರೀ ಪಂಡಿತಾರಾಧ್ಯ ಅವರದು ಮಾತುಗಾರಿಕೆಯ ಶೈಲಿ. ಬಹುಶಃ ಅವರು ತಮ್ಮ ಭಾಷಣಗಳನ್ನು ಬರೆಹದ ರೂಪಕ್ಕೆ ಇಳಿಸಿರುವ ಸಾಧ್ಯತೆ ಕೂಡಾ ಇದೆ. ಇಂತಹ ಮಾತುಗಾರಿಕೆಯ ಸರಳ ಶೈಲಿಗೆ ಸಂವಹನದ ಶಕ್ತಿಯು ಅತ್ಯಂತ ಗರಿಷ್ಠವಾಗಿ ಲಭ್ಯವಾಗಿರುತ್ತದೆ. ಆದರೆ ಅದೇ ಸಂದರ್ಭದಲ್ಲಿ ನಿಂತು ಯೋಚಿಸುವ ಅನುಕೂಲವನ್ನು ಅದು ಕಳೆದುಕೊಳ್ಳುತ್ತಿರುತ್ತದೆ. 'ಸಮಾಧಿಯ ಮೇಲೆ' ಸಂಕಲನದ ಕೆಲವು

ಲೇಖನಗಳು ಈ ಅಪಾಯವನ್ನು ಎದುರಿಸಿ ಯಶಸ್ವಿಯಾಗಿರುವುದನ್ನು ಕಾಣ ಬಹುದು. ಇದಕ್ಕಿಂತ ಮುಖ್ಯವಾಗಿರುವುದೆಂದರೆ, ಶ್ರೀ ಪಂಡಿತಾರಾಧ್ಯ ಅವರು ಆಯ್ದುಕೊಂಡ ವಿಷಯಗಳ ವೈಚಾರಿಕ ಪ್ರಖರತೆ ಮತ್ತು ಸಾಮಾಜಿಕ ಮಹತ್ವ. 'ಮಂದಿರ ಮಸೀದಿ' 'ದೇವರುಗಳ ಅವಾಂತರ' 'ಲಿಂಗಾಯತ ತತ್ತ್ವ ಮತ್ತು ಆಚರಣೆ', 'ಮದ್ಯಪಾನ ವಿರೋಧಿ ಚಳುವಳಿ' ಮುಂತಾದ ವಿಷಯಗಳನ್ನು ಕುರಿತು ಅವರು ಅತ್ಯಂತ ವಿಧಾಯಕವಾದ ವಿಚಾರಗಳನ್ನು ನಮ್ಮ ಮುಂದೆ ಇಡುತ್ತಾರೆ. ಇವುಗಳಲ್ಲದೆ ಪರಿಸರ ಸಮಸ್ಯೆಯನ್ನು ಕುರಿತಾದ 'ಹಸಿರು ಜೀವದ ಉಸಿರು', 'ಗೋಮಾಳದಲ್ಲಿ ಅರಣ್ಯಾಭಿವೃದ್ಧಿ'ಯಂತಹ ವಿಷಯಗಳನ್ನು ಕುರಿತಾದ ತಮ್ಮ ಯೋಜನೆಗಳನ್ನು ಮಂಡಿಸಿದ್ದಾರೆ.

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು ಈ ಲೇಖನಗಳಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಮೇಲ್ಪದರದಲ್ಲಿ ಎದುರಿಸಿದಂತೆ ತೋರುತ್ತದೆ. ಮನಃಶಾಸ್ತ್ರ, ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರಗಳ ಹಿನ್ನೆಲೆಯಲ್ಲಿ ಈ ಸಮಸ್ಯೆಗಳನ್ನು ಅವರು ಆಳವಾಗಿ ಎದುರುಗೊಂಡರೆ ಅವರಿಂದ ನಮಗೆ ಅತ್ಯಂತ ಮಹತ್ವಪೂರ್ಣವಾದ ಲೇಖನಗಳು ದೊರೆಯುತ್ತವೆ. ಪಂಡಿತಾರಾಧ್ಯಸ್ವಾಮಿಗಳಿಂದ ಇಂಥ ಲೇಖನ ಗಳನ್ನು ನಾವು ಖಂಡಿತವಾಗಿ ನಿರೀಕ್ಷಿಸಬಹುದಾಗಿದೆ.

ಕೊಂಪಾಯಾತ್ರೆ (ಕವನ ಸಂಕಲನ)

ಲೇ: **ದೇಶ ಕುಲಕರ್ಣಿ**

ಪ್ರಸ್ತುತ ಸಂಕಲನದ ಕವಿತೆಗಳು ನವ್ಯ ಮಾರ್ಗದ ಹಿಡಿತದಿಂದ ಬಿಡಿಸಿಕೊಂಡು ಬದುಕಿನ ಚೆಲುವನ್ನು ಗ್ರಹಿಸುವ, ದಾಖಲಿಸುವ ಹೃದಯ ಕವಿತೆಯ ಕಡೆಗೆ ತುಡಿಯುತ್ತಿರುವುದನ್ನು ಕಾಣಬಹುದು. 'ಇಲ್ಲೇ ಇದ್ದೀನಮ್ಮ' ಕವಿತೆ ಕೆ. ಎಸ್. ನ.ರ ನೆರಳಿನಲ್ಲೇ ಬೆಳೆದಿದೆ. 'ನೆನಪಿಲ್ಲದೂರು' 'ಕೊಂಪಾ ಯಾತ್ರೆ'ಗಳಲ್ಲಿ ಕವಿತೆಯು ಬಂಧದಲ್ಲಿ ಇನ್ನೂ ನವ್ಯತೆಯ ನೆರಳು ಗಾಢವಾಗಿದೆ. ಈ ಸಂಕಲನದ ಕವಿತೆಗಳು ಪಂಪಾಯಾತ್ರೆ ಸಾಧ್ಯವಿಲ್ಲದಾಗ ಕೊಂಪಾಯಾತ್ರೆಯನ್ನಾದರೂ ಮಾಡಿ ಕೋಗಿಲೆಯ ಕುಕಿಲು ಕೇಳುವ, ಬಂಗಾರದ ಜಿಂಕೆಯ ಹಿಂದೆ ಓಡಿ ಮರಳಿ ಬಂದಾಗ ಸೀತೆ ನಾಪತ್ತೆಯಾಗಿರುವುದನ್ನು ಗುರುತಿಸುವ ಆಶಯ ಹೊತ್ತಿವೆ.

ಕಾಯುತ್ತಿದ್ದೇನೆ (ಕವನ ಸಂಕಲನ)

ಲೇ: **ಡಾ|| ಭ. ನಾಗರಾಜ್**

ಯಾವ ಮುನ್ನುಡಿ, ಹಿನ್ನುಡಿ ಬೆನ್ನುಡಿಗಳ ಭಾರವಿಲ್ಲದೇ ಹೊರಬಂದಿರುವ ಈ ಕವನ ಸಂಕಲನದಲ್ಲಿ ನವ್ಯ ಕಾವ್ಯ ಮಾರ್ಗ, ನವ್ಯ ತಾತ್ವಿಕತೆಯನ್ನು ಕುರಿತ

ಭ್ರಮನಿರಸನವನ್ನು ಹೇಳುವಂಥ ಕೆಲವು ಕವಿತೆಗಳಿವೆ. ಇದಕ್ಕೆ ಪರ್ಯಾಯವಾಗಿ ಬಂಡಾಯದ ನಿಲುವನ್ನು ಅಪ್ಪಿಕೊಳ್ಳುವುದು ಒಂದು ಸಿದ್ಧ ಪರಿಹಾರ. ಆದರೆ ನಾಗರಾಜ್‌ರವರು ಬಂಡಾಯದ ನಿಲುವುಗಳನ್ನೂ ಚಿಕಿತ್ಸಕ ದೃಷ್ಟಿಯಿಂದಲೇ ನೋಡುವ ಎಚ್ಚರವನ್ನು 'ಡಂಬಾಯ ಸಾಹಿತಿಗೆ ಬಂಡಾಯ ಗೀತೆ'ಯಲ್ಲಿ ತೋರಿದ್ದಾರೆ. 'ಅಕ್ಕನಿಗೆ', 'ಇವಳು ಸುಶೀಲೆ', 'ಇವಳು' ಈ ಕವಿತೆಗಳಲ್ಲಿ ಕಲ್ಪನೆಯ ರಮ್ಯತೆ ಮತ್ತು ಸ್ವಂತಿಕೆಯ ಹೊಳಹುಗಳಿವೆ.

ಬ್ಯಾಳಿಕಾಳನ ಕನಸು ಮತ್ತು ಇತರ ಕಥೆಗಳು (ಕಥೆಗಳು)
ಲೇ: **ದುರ್ಗಾಸುತೆ**

ಈ ಸಂಕಲನದಲ್ಲಿ ಹದಿಮೂರು ಕಥೆಗಳಿವೆ. ಇವುಗಳಲ್ಲಿ ಹೆಚ್ಚಿನ ಕಥೆಗಳ ವಸ್ತು ಕೌಟುಂಬಿಕವಾದುದು. ಇವುಗಳಲ್ಲಿ ಲೇಖಕಿ ತೋರುವ ಒಲವು ಆರೋಗ್ಯಕರವಾದ ಬದುಕಿನ ಕಡೆಗೆ ತುಡಿಯುವಂಥದು. ಈ ಕೌಟುಂಬಿಕ ವಸ್ತುವನ್ನೇ ಬಳಸಿಕೊಂಡು ಬದುಕಿನ ಗಟ್ಟಿತನವನ್ನು ಅನ್ವೇಷಿಸುವ ಪ್ರಯತ್ನ 'ಪಾರಿತೋಷಕ', 'ಸಂಬಂಧಗಳು' ಕಥೆಗಳಲ್ಲಿದೆ. 'ಬ್ಯಾಳಿಕಾಳನ ಕನಸು' ಈ ಸಂಕಲನದ ಎಲ್ಲ ಕಥೆಗಳಿಗಿಂತ ಭಿನ್ನವಾದ ವಿಲಕ್ಷಣವಾದ ವಸ್ತುವನ್ನುಳ್ಳದು. ಬ್ಯಾಳಿಕಾಳನ ವಿಲಕ್ಷಣವಾದ ಹೆಸರಿನ ಹಿಂದಿರುವ ಬೇಳೆಯ ಬಯಕೆ, ತನ್ನ ಕಾರ್ಪಣ್ಯದ ಜೀವನದಲ್ಲೂ ಹಣ ಕೂಡಿಸಿ ತಿರುಪತಿಗೆ ಹೋಗಬೇಕೆನ್ನುವ ಅವನ ಬಯಕೆ, ನಮ್ಮ ಕಾಲದ ಆರ್ಥಿಕ ಸಾಮಾಜಿಕ ಬದುಕಿನ ಮೇಲೆ ಬೆಳಕು ಚೆಲ್ಲುತ್ತದೆ.

ಕಳಕೊಂಡವರು (ನಾಟಕ)
ಲೇ: **ಚಂದ್ರು ಕಾಳೇನಹಳ್ಳಿ**

ಆರು ದೃಶ್ಯಗಳಲ್ಲಿ ಬೆಳೆದಿರುವ ಈ ನಾಟಕ, ಇಂದಿನ ಸಾಮಾಜಿಕ ವ್ಯವಸ್ಥೆಯ ಕ್ರೌರ್ಯವನ್ನು ಚಿತ್ರಿಸುವ ಪ್ರಯತ್ನ ಮಾಡಿದೆ. 'ಕನಸು ಕಳಕೊಂಡವನು' 'ಹೆಂಡತಿ ಕಳಕೊಂಡವನು', 'ತಲೆ ಕಳಕೊಂಡವನು' ಈ ಮೂರು ಪಾತ್ರಗಳನ್ನು ಪ್ರಪಂಚ ನೋಡಿಕೊಳ್ಳುವ ರೀತಿ ಸಮಾಜ ವ್ಯವಸ್ಥೆಯ ಬಗೆಗಿನ ಕಲಾತ್ಮಕ ಟೀಕೆಯೂ ಆಗುತ್ತದೆ. ನ್ಯಾಯಾಂಗವು ವ್ಯವಸ್ಥೆಯನ್ನು ನಿಯಂತ್ರಿಸಲು ಬಯಸಿದರೂ ಶಕ್ತಿಹೀನವಾಗುವದರಲ್ಲಿ, ಭ್ರಷ್ಟತೆಯು ನ್ಯಾಯಾಂಗಕ್ಕೇ ಸವಾಲಾಗುವುದರಲ್ಲಿ, ನಾಟಕದ ದುರಂತ ಶಿಖರಗಾಮಿಯಾಗುತ್ತದೆ. ಕನ್ನಡ ರಂಗಭೂಮಿಯಲ್ಲಿ ಹೊಸ ಪ್ರಯೋಗಗಳು ವಿರಳವಾಗುತ್ತಿರುವ ಹಿನ್ನೆಲೆಯಲ್ಲಿ ಈ ನಾಟಕ ಸ್ವಾಗತಾರ್ಹವಾಗಿದೆ.

ಸಿಸ್ಟರ್ ಮಿರಾಂಡಳ ಕಪ್ಪು ರವಿವಾರ

ಲೇ : **ಕುಮಾರ ಜೋಷಿ**

ಲೇಖಕರ ಈ ಮೊದಲ ಕಥಾ ಸಂಕಲನದಲ್ಲಿ ಹನ್ನೊಂದು ಕಥೆಗಳಿವೆ. ಇವುಗಳಲ್ಲಿ ಮೊದಲ ಐದು ಕಥೆಗಳು– 'ಗುಮ್ಮ', 'ಉತ್ಸವ', 'ಹೋಲಿಗೆಗಿಂತ ಹರಕು ಮೊದಲು' '.... ಹರಿ ನಿನ್ನ ನಂಬಿ' ಹಾಗೂ 'ರಂಗಕ್ಕೊಂದಿಷ್ಟು ದೂರ' ಯಾವ ವಿಶೇಷ ಭಾವಾರ್ಥಗಳನ್ನು ಸೃಜಿಸದೆ ನವ್ಯ ಮತ್ತು ಬಂಡಾಯಗಳ ಸಿದ್ಧಮಾದರಿಗಳ ಕೊರಕಲುಗಳಲ್ಲಿ ತಮ್ಮ ಸಾರ್ಥಕ್ಯ ಕಂಡುಕೊಳ್ಳುತ್ತವೆ. ಉಳಿದ ಆರು ಕಥೆಗಳು ತಂತಾನೆ ಬೆಳೆಯುತ್ತಾ ಹೋಗುವದಾದರೂ, ಒಂದು ಹೇಳಿ ಇನ್ನೊಂದನ್ನು ಹೊಳೆಸುವ ಪ್ರತಿಫಲನ ಗುಣವಿಲ್ಲದ, ಬರೀ ಸಶಬ್ದ ಕಥೆಗಾರಿಕೆಯಿಂದಾಗಿ, ವಿಶೇಷ ಸಂತೋಷವನ್ನೇನೂ ಉಂಟುಮಾಡುವುದಿಲ್ಲ. 'ಕೆಸರು' ಮತ್ತು 'ಜಂಗು' ತಮ್ಮ ಕಥೆಗಾರಿಕೆಯ ವೇಗದಲ್ಲಿ ಕಳೆದುಹೋದರೆ 'ಗಾಯ' ಮತ್ತು 'ಕಾಡು ಹೊಕ್ಕ ಹಾದಿ' ಕುತೂಹಲ ಕೆರಳಿಸುವುದರಲ್ಲೇ ತಮ್ಮ ಶಕ್ತಿಯನ್ನೆಲ್ಲಾ ವ್ಯಯ ಮಾಡಿಕೊಳ್ಳುತ್ತವೆ. ಇವುಗಳ ಮಧ್ಯೆ 'ಸಿಸ್ಟರ್ ಮಿರಾಂಡಳ ಕಪ್ಪು ರವಿವಾರ' ಹಾಗೂ 'ಅಕಸ್ಮಾತ್' ಗಮನ ಸೆಳೆಯುವುದು, ಅವು ಕಥೆಯಾಚೆಗೂ ಹಬ್ಬಿಸುವ ತಮ್ಮ ಮೌನದಿಂದಾಗಿ.

ಹುತ್ತದೊಳಗಿನ ಹಾವು

ಲೇ : **ವಸಂತ ಕುಮಾರ ಪೆರ್ಲ**

ಪೆರ್ಲರ ಈ ಎರಡನೇ ಕವನ ಸಂಕಲನದ ಕೇಂದ್ರ ವಸ್ತು, ಸಂಕಲನದ ಹೆಸರೇ ಸೂಚಿಸುವಂತೆ ಹಾವು. ಇಲ್ಲಿ ಹಾವು ಕವಿಯನ್ನು 'ವಿಶ್ವತೋಮುಖ'ವಾಗಿ ಕಾಡಿದೆ ಎಂಬ ವಿವರಗಳು ಸಾಕಷ್ಟು ಕವನಗಳಲ್ಲಿ ಸಿಗುವುದಾದರೂ ಜಗತ್ತನ್ನು ಕುಣಿಸುವ 'ಹಾವು' ಎಲ್ಲೂ ತನ್ನ 'ಜೀವಂತ' ಚಲನೆಯೊಂದಿಗೆ ಕಾಣಿಸಿಕೊಳ್ಳದಿರುವುದಕ್ಕೆ ಕಾರಣ ಕವಿಯ ಶಬ್ದ ವ್ಯಸನ. ತುಂಬಾ ಲಯಬದ್ಧವೆನಿಸುವ ಅಚ್ಚುಕಟ್ಟಾದ ಶಬ್ದ ಸರಣಿಯನ್ನು ಸೃಷ್ಟಿಸಬಲ್ಲ ಪೆರ್ಲ ಅವಕ್ಕೆ ಜೀವ ತುಂಬಲು ಸಾಧ್ಯವಾಗುವುದು, ಅವರ 'ಒಂದು ಪದ್ಯ ಪ್ರಸಂಗ' ಎನ್ನುವ ಕವಿತೆಯಲ್ಲಿ ಹೇಳುವಂತೆ 'ಭಾವಾರ್ಥ ಶಬ್ದಕೋಶ ಕಲಸುತ್ತಾ' ಸಿಲ್ಲದೆ 'ಶಬ್ದದೊಳಗೆ ನಿಶ್ಶಬ್ದ ತುಂಬುತ್ತಾ ಹೋದೆ' ಎಂಬುದು ನಿಜವಾಗಿ ಸಾಧಿತವಾದಾಗ. ಇವರು ಇದನ್ನು ಸಾಧಿಸಬಲ್ಲರು 'ಎಂಬುದರ ಸೂಚನೆಗಳು, ಇಲ್ಲಿನ 'ಬೆಳದಿಂಗಳಿಗೆ ದಾರಿ ಎಲ್ಲಿ?' 'ಕಾಗೆ ಕುಕ್ಕುವುದಿಲ್ಲ' 'ನನಗೆ ಗೊತ್ತು', 'ಕರಾವಳಿಯ ಮೀನುಗಳು' 'ಯಾಕೆ ಅಡಗಿಸುತ್ತೀರಿ?' ಹಾಗೂ 'ನಳಿನಾಕ್ಷಿಯ ಕಣ್ಣು' – ಇಂತಹ ಸರಳ ಹಾಗೂ ದಿಟ ಪದ್ಯಗಳಲ್ಲಿ ಸಿಗುತ್ತವೆ.

ಕರಿಬಂಟ (ನಾಟಕಗಳು)

ಲೇ : **ಡಿ. ಎ. ಶಂಕರ**

ದಕ್ಷಿಣ ಕರ್ನಾಟಕದ ಬಯಲು ಸೀಮೆಯಲ್ಲಿ ಜನಪ್ರಿಯವಾಗಿರುವ ಕರಿಬಂಟನ ಜಾನಪದ ಕಥೆಯನ್ನು ಆಧರಿಸಿದ ಒಂದು ನಾಟಕ ಹಾಗೂ ಎರಡು ಕಿರು ಸಾಮಾಜಿಕ ನಾಟಕಗಳನ್ನು ಈ ಪುಸ್ತಕ ಒಳಗೊಂಡಿದೆ. ರಂಗಭೂಮಿಯ ಎಲ್ಲ ಕೌಶಲ್ಯಗಳನ್ನು ಬಳಸಿಕೊಳ್ಳಲಾಗುವಂತೆ ರಚಿತವಾಗಿರುವ ಕರಿಬಂಟ ಇಲ್ಲಿ, ಇದೇ ಕಥೆಯನ್ನಾಧರಿಸಿ ರಚಿತವಾಗಿರುವ ಅನೇಕ ಯಕ್ಷಗಾನಗಳು ಪ್ರಕಟಿಸುವ ಸಾಮಾಜಿಕ ಆಯಾಮವನ್ನು ಕಳೆದುಕೊಂಡಿದೆ. ಕುಲಗಳ ದ್ವಂದ್ವ ಇಲ್ಲಿ ದೈವ ಸಂಕಲ್ಪ ಹಾಗೂ ಮನುಷ್ಯ ಪ್ರಯತ್ನದ ದ್ವಂದ್ವವಾಗಿ ಮಾರ್ಪಾಟಾಗಿದೆ. ಇದರಿಂದಾಗಿ ನಾಟಕದ ದುರಂತ ಸಾಂಸ್ಕೃತಿಕವಾಗುವ ಬದಲು ದೈವೀಕವಾಗುತ್ತದೆ. ಆದರೆ ನಾಟಕದ ಕೋಮಲ ಮೈ ಈ ದೈವೀಕ ದುರಂತದ ಭಾರವನ್ನು ಹೊರಲಾಗದಾಗಿದೆ. 'ವಿಷಾದ ಪ್ರಹಸನ' ಗಳೆಂದು ಕರೆಯಲ್ಪಟ್ಟಿರುವ ಉಳಿದೆರಡು ನಾಟಕಗಳು – 'ಮಾತೆಂಬ ಕನ್ನಡಿಯಲ್ಲಿ' ಹಾಗೂ 'ಕಲ್ಪನಾ ವಿಲಾಸ'– ರಂಜಿಸುವ ಜಾಣ ನಾಟಕಗಳು.

ಲಕ್ಷ್ಮಣರೇಖೆ ದಾಟಿದವರು (ಕವನಗಳು)

ಲೇ : **ವಿಜಯಶ್ರೀ ಸಬರದ**

ಲೇಖಕಿಯ ಈ ಎರಡನೇ ಕವನ ಸಂಕಲನದಲ್ಲಿ ಇಪ್ಪತ್ತೈದಕ್ಕೂ ಹೆಚ್ಚು ಕವನಗಳಿವೆ. ಸ್ತ್ರೀ ಬಂಡಾಯ ಇಲ್ಲಿನ ಬಹುತೇಕ ಕವನಗಳ ಸ್ಥಾಯೀ ಭಾವವಾದರೂ ಈ ಬಂಡಾಯ, ಮೊಲಾಯಿಸ್ ಬೆಂಜಮಿನ್, ಮಂಡೇಲಾ ಹಾಗೂ ಅಂಬೇಡ್ಕರ್‌ರನ್ನೂ ಅರ್ಥ ಮಾಡಿಕೊಳ್ಳಲೆಣಿಸುವ ಸಮಗ್ರ ಬಂಡಾಯದ ಒಂದು ಭಾಗವಾಗುತ್ತದೆ. ಬಹುಶಃ ಅದಕ್ಕೇ ವಿಜಯಶ್ರೀ ಅವರು ಒಮ್ಮೊಮ್ಮೆ ಕಿರುಚುತ್ತಿದ್ದಾರೆ ಅನ್ನಿಸಿದರೂ ದನಿ ಕೀರಲಾಗುವುದಿಲ್ಲ. ಹಲವಾರು ವಾಚ್ಯವೆನಿಸುವ ಸಾಲುಗಳ ಮಧ್ಯೆ 'ನೇಣುಗಂಬದ ಮೇಲೆ/ ಕುಡಿಬಿಟ್ಟ ಮಲ್ಲಿಗೆ ಅರಳಿ ಘಮಘಮಿಸಿದಂತೆ/ ಮೈ ತುಂಬಾ ವಾಸನೆ/' ಎಂಬ ಕಡು ಕಾವ್ಯದ ಸಾಲುಗಳನ್ನು ಅರಳಿಸಬಲ್ಲ ಈ ಕವಯತ್ರಿಯ ನಿಜವಾದ ದ್ವಂದ್ವ 'ಮರೆಯಲಾಗದ ಕವಿತೆ'ಯಲ್ಲಿ ಮೂಡಿದೆ: 'ನಿನ್ನ ಕೆಂಪು ಕಾವ್ಯಕ್ಕೆ ಬೇಸತ್ತು ನನ್ನ ಹೂಬನದಲ್ಲಿ ಹಸಿರಾಗುತ್ತೇನೆ' ಎಂದು ಆರಂಭವಾಗುವ ಈ ಕವಿತೆ 'ಸಂಜೆ ಆಕಾಶ ಕಂಡಾಗ/ ನಿನ್ನ ಪ್ರೀತಿಯ ಕೆಂಪು / ನನ್ನ ಸುತ್ತಲೂ ಮುತ್ತಿದಾಗ/ ಈ ಆಕಾಶವನ್ನು ಹೇಗೆ ಮರೆ ಮಾಡಲಿ?! ಯಾರಿಗೊಯ್ದು ಕೊಡಲಿ' ? ಎಂಬ ಪ್ರಶ್ನೆಯೊಂದಿಗೆ ಮುಕ್ತಾಯವಾಗುತ್ತದೆ. ಇಲ್ಲಿನ ಬಹುತೇಕ ಎಲ್ಲ ಕವಿತೆಗಳ ಹಿಂದೆಯೂ ಈ ದ್ವಂದ್ವ ಒಂದು ಶಕ್ತಿಯಂತೆ ಕೆಲಸ ಮಾಡಿ ಶ್ರೀಮತಿ ಸಬರದ

ಅವರನ್ನು ಬಂಡಾಯದ ಮಹಾಪೂರದಲ್ಲಿ ಕೊಚ್ಚಿಹೋಗದಂತೆ ಉಳಿಸಿದೆ. ಹೊರಗಿನ ಕರೆಯನ್ನು ಒಳಗಿನ ಕರೆಯೊಂದಿಗೆ ಲೀನಗೊಳಿಸಿಕೊಳ್ಳಬಲ್ಲ ಪದ ಸಿಕ್ಕಾಗ ಎಂತಹ ಒಳ್ಳೆಯ ಸಾಲುಗಳು ಮೂಡಬಲ್ಲವೆಂಬುದರ ಸೂಚನೆ ಇಲ್ಲಿನ 'ನೀನು ನಾನು', 'ಹಕ್ಕಿ ಹಾಡು', 'ಆಯ್ಕೆ' ಮತ್ತು 'ಅರಿವು' ಪದ್ಯಗಳಲ್ಲಿ ಸಿಗುತ್ತವೆ. ●

ಪುಸ್ತಕ ಸ್ವೀಕಾರ :

೧. ಕುಂಟೋಬಿಲ್ಲೆ (ಕವನ) ಲೇ: ಎ. ಕೆ. ರಾಮಾನುಜನ್
ಪುಟಗಳು : x + 74 ಬೆಲೆ : ರೂ. 20/- (1990)

೨. ನಿಮ್ಮೊಳಗೊಬ್ಬ (ಕವನ) ಲೇ: ಡಿ. ಎ. ಶಂಕರ
ಪುಟಗಳು : x + 32 ಬೆಲೆ : ರೂ. 15/- (1990)

೩. ಕರಿಬಂಟ (ನಾಟಕ) ಲೇ : ಡಿ. ಎ. ಶಂಕರ
ಪುಟಗಳು : x + 87 ಬೆಲೆ : ರೂ. 20/- (1990)

೪. ಡಾ॥ ಆಲ್ಬರ್ಟ್ ಶ್ವೈಯಿಟ್ಸರ್ (ಜೀವನ ಚರಿತ್ರೆ) ಲೇ : ಡಾ॥ ಎಚ್. ಡಿ. ಚಂದ್ರಪ್ಪಗೌಡ
ಪುಟಗಳು : xv + 256 ಬೆಲೆ : ರೂ. 40/- (1990)

(ಮೇಲಿನ ಈ ನಾಲ್ಕು ಪುಸ್ತಕಗಳ ಪ್ರಕಾಶಕರು : ಮನೋಹರ ಗ್ರಂಥಮಾಲೆ ಧಾರವಾಡ-1)

೫. ಕೊಂಪಾಯಾತ್ರೆ (ಕವನ) ಲೇ : ದೇಶ ಕುಲಕರ್ಣಿ
ಪ್ರ : ಅನುಭವ ಮಂಟಪ, ಬೆಂಗಳೂರು - 40
ಪುಟಗಳು : viii + 48 ಬೆಲೆ : ರೂ. 20/- (1991)

೬. ಸಾಹಿತ್ಯ ಸಂದರ್ಭ (ವಿಮರ್ಶೆ) ಲೇ : ಟಿ. ಪಿ. ಅಶೋಕ,
ಪ್ರ : ಅಕ್ಷರ ಪ್ರಕಾಶನ, ಸಾಗರ
ಪುಟಗಳು : vi + 248 ಬೆಲೆ : ರೂ. 60/- (1991)

೭. ಪ್ರಕ್ರಿಯೆ (ಕಥೆಗಳು) ಲೇ : ಜನಾರ್ಧನ ಎರ್ಪಕಟ್ಟೆ
ಪ್ರ : ಸ್ವಂತಿಕಾ ಪ್ರಕಾಶನ, ಸುಳ್ಯ (ದ. ಕ.)
ಪುಟಗಳು : 14 + 88 ಬೆಲೆ : ರೂ. 15/- (1991)

೮. ಚಂದ್ರನನ್ನು ಕರೆಯಿರಿ ಭೂಮಿಗೆ (ಕವನ ಸಂಕಲನ) ಲೇ : ಸವಿತಾ ನಾಗಭೂಷಣ
ಪ್ರ : ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ - 577 531 (ಚಿತ್ರದುರ್ಗ ಜಿಲ್ಲೆ)
ಪುಟಗಳು : viii + 76 ಬೆಲೆ : ರೂ. 30/- 1991

ತಿದ್ದುಪಡಿ: ಈ ಸಂಚಿಕೆಯ ೪೫ ನೇ ಪುಟದಲ್ಲಿನ ಲೇಖನದ ಶೀರ್ಷಿಕೆಯನ್ನು ಸಮಾಜವಾದದ ಕಾಲ ಮುಗಿಯಿತೆ ? ಎಂದು ಓದಿಕೊಳ್ಳಬೇಕಾಗಿ ವಿನಂತಿ.

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗ,

ನಮ್ಮ ಇಪ್ಪತ್ತೆರಡನೆಯ ಸಂಚಿಕೆಯನ್ನು ನಿಮ್ಮ ಕೈಲಿಡುತ್ತಿದ್ದೇವೆ. ಈ ಮೊದಲೇ ತಿಳಿಸಿದ್ದಂತೆ ಈ ಸಂಪುಟದ ಕೊನೆಯ ಸಂಚಿಕೆ ಸಂವಾದ–೨೩, ೨೪ ಸಂಯುಕ್ತ ಸಂಚಿಕೆಯಾಗಿದ್ದು ಮಾಸ್ತಿ ಸಾಹಿತ್ಯದ ಸಮಗ್ರ ದರ್ಶನದ ಗುರಿ ಇಟ್ಟುಕೊಂಡಿದೆ. ಇದಕ್ಕಾಗಿಯೇ ನಾವು ಈಗಾಗಲೇ ಹಾಸನ, ಚಳ್ಳಕೆರೆ ಹಾಗೂ ಶಿವಮೊಗ್ಗಗಳಲ್ಲಿ ಮಾಸ್ತಿ ಸಾಹಿತ್ಯೋತ್ಸವ ನಡೆಸಿದ್ದು ನಾಡಿನ ಅನೇಕ ಗಣ್ಯ ಲೇಖಕರು ಈ ಸಾಹಿತ್ಯೋತ್ಸವಗಳಲ್ಲಿ ಭಾಗವಹಿಸಿದ್ದಾರೆ. ಮೂರನೇ ವಿಚಾರ ಸಂಕಿರಣ ಜನವರಿ 5 ರಂದು ಶಿವಮೊಗ್ಗದಲ್ಲಿ ನಡೆಯಿತು. ಇದನ್ನು ಆಯೋಜಿಸು ವಲ್ಲಿ ನಮಗೆ ನೆರವಾದದ್ದು ಶಿವಮೊಗ್ಗ ಕರ್ನಾಟಕ ಸಂಘ; ಸಹಕರಿಸಿದ್ದು ಬೆಂಗಳೂರಿನ ಮಾಸ್ತಿ ಜನ್ಮ ಶತಮಾನೋತ್ಸವ ಸಮಿತಿ.

ನಮ್ಮ ಈ ಮೂರು ವಿಚಾರ ಸಂಕಿರಣಗಳಲ್ಲಿ ಕೀರ್ತಿನಾಥ ಕುರ್ತುಕೋಟಿ ಶಂಕರಮೊಕಾಶಿ ಪುಣೇಕರ, ಡಾ॥ ಜಿ. ಎಸ್. ಆಮೂರ, ಕೆ. ನರಸಿಂಹಮೂರ್ತಿ, ಡಾ॥ ಬೆಸಗರಹಳ್ಳಿ ರಾಮಣ್ಣ, ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ, ಡಾ॥ ಕೆ. ವಿ. ನಾರಾಯಣ, ಕಿ. ರಂ. ನಾಗರಾಜ, ಎಚ್. ಎಸ್. ರಾಘವೇಂದ್ರ ರಾವ್, ಡಾ॥ ಬಸವರಾಜ ಕಲ್ಗುಡಿ, ಟಿ. ಪಿ. ಅಶೋಕ, ಡಾ॥ ಬಿ. ಎನ್. ಸುಮಿತ್ರಾಬಾಯಿ, ಡಾ॥ ಪುರುಷೋತ್ತಮ ಬಿಳಿಮಲೆ, ಪ್ರಭುಸ್ವಾಮಿ ಮಠ, ಪಟ್ಟಾಭಿರಾಮ ಸೋಮಯಾಜಿ, ಕೆ. ಸತ್ಯನಾರಾಯಣ, ಚಂದ್ರಶೇಖರ ನಂಗಲಿ, ಲಕ್ಷ್ಮೀಶ ತೋಳ್ಪಾಡಿ, ಚಿ. ಶ್ರೀನಿವಾಸರಾಜು, ಸ. ಉಷಾ, ರಾಘವೇಂದ್ರ ಪಾಟೀಲ ಹಾಗೂ ಡಿ. ಎಸ್. ನಾಗಭೂಷಣ– ಹೀಗೆ ವಿವಿಧ ವಯೋಮಾನಗಳ, ವಿಭಿನ್ನ ಸಾಹಿತ್ಯಿಕ ನಿಲುವುಗಳ ಲೇಖಕರು ಮಾಸ್ತಿ ಸಾಹಿತ್ಯವನ್ನು ತಮ್ಮ ವಿಶಿಷ್ಟ ನೆಲೆಗಳಿಂದ ವಿಮರ್ಶಿಸುವ ಪ್ರಯತ್ನ ಮಾಡಿದ್ದಾರೆ. ಇದರಲ್ಲಿ ಮಾಸ್ತಿ – ಕಾರಂತ ಹಾಗೂ ಮಾಸ್ತಿ – ಕುವೆಂಪು ತುಲನಾತ್ಮಕ ನೋಟಗಳೂ ಒಳಗೊಂಡಿವೆ. ಮಾಸ್ತಿ ಕುರಿತಂತೆ ಇಷ್ಟೊಂದು ಸಮೃದ್ಧ ಸಂಚಿಕೆಯನ್ನು ಹೊರತರುತ್ತಿರುವ ಬಗ್ಗೆ ನಮಗೆ ಹೆಮ್ಮೆ ಯೆನಿಸಿದೆ. ವಿಚಾರ ಸಂಕಿರಣಗಳಲ್ಲಿ ಮಾತನಾಡಿದ ಕೆಲವರಿನ್ನೂ ತಮ್ಮ ಲೇಖನಗಳನ್ನು ಕಳಿಸಿಲ್ಲ. ಅವರೆಲ್ಲರನ್ನೂ ಈ ಮೂಲಕ ಲೇಖನ ಬೇಗನೇ ಕಳಿಸಿ

ಕೊಡಲು ಮತ್ತೊಮ್ಮೆ ಪ್ರಾರ್ಥಿಸುತ್ತೇವೆ. ಹಾಗೇ ಈ ಸಂಚಿಕೆಯನ್ನು ಆದಷ್ಟು ಸಮಗ್ರ ಹಾಗೂ ಸುಂದರವಾಗಿ ಹೊರತರಲು ಬೇಕಾದ ಸಂಪನ್ಮೂಲವನ್ನು, ಬಾಕಿ ಇರಿಸಿಕೊಂಡಿರುವ ಚಂದಾದಾರರು ಚಂದಾ ಕಳಿಸಿಕೊಡುವ ಮೂಲಕ ಕ್ರೋಢೀಕರಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಡಾ॥ ಚಂದ್ರಶೇಖರ ಕಂಬಾರರಿಗೆ ತಮ್ಮ 'ಸಿರಿ ಸಂಪದ' ನಾಟಕಕ್ಕಾಗಿ, ಡಾ॥ ಎಚ್. ಎಸ್. ವೆಂಕಟೇಶಮೂರ್ತಿಯವರಿಗೆ 'ಋತು ವಿಲಾಸ' ಅನುವಾದಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ. ಕನ್ನಡದ ಈ ಇಬ್ಬರು ಪ್ರತಿಭಾವಂತ ಲೇಖಕರನ್ನು ಸಂವಾದ ಅಭಿನಂದಿಸುತ್ತದೆ. ವೆಂಕಟೇಶಮೂರ್ತಿ ಅವರ 'ಋತು ವಿಲಾಸ'ದ ಕೆಲ ಭಾಗಗಳು ಮೊದಲ ಪ್ರಕಟಗೊಂಡದ್ದು 'ಸಂವಾದ'ದಲ್ಲಿ ಎಂಬುದನ್ನು ನಮ್ಮ ಓದುಗರಿಗೆ ಇಲ್ಲಿ ನೆನಪಿಸುವ ಅಗತ್ಯವಿಲ್ಲವೆಂದು ನಾವು ಭಾವಿಸಿದ್ದೇವೆ. ಸಂವಾದ ೨೫ ರಲ್ಲಿ ಕಂಬಾರರ ಸಾಹಿತ್ಯ ಕುರಿತ ಒಂದು ವಿಶ್ಲೇಷಣೆ ಹಾಗೂ ಅವರೊಡನೆ ಒಂದು ಆಳವಾದ ಮಾತುಕತೆ ಪ್ರಕಟಿಸುವ ಆಶಯ ನಮ್ಮದು.

ಇನ್ನು, ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷ ಸ್ಥಾನದಿಂದ ಹಿರಿಯ ಕವಿ ಡಾ॥ ಜಿ. ಎಸ್. ಶಿವರುದ್ರಪ್ಪನವರು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಕುರಿತಂತೆ 'ಪ್ರೀತಿ ಇಲ್ಲದ ಮೇಲೆ' ಎಂದು ಆಡಿರುವ ಮಾತುಗಳು ಬಹು ಸರಳವೆಂಬಂತೆ ತೋರಿದರೂ ಇಂದು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ ಪರಿಹಾರದ ಮೊದಲ ಬಾಗಿಲು ತೆರೆಯುವಷ್ಟು ಅರ್ಥಪೂರ್ಣವಾದವು. ಆದರೆ ಇವರ ಸರೀಕರಾದ ಡಾ॥ ಎಂ. ಚಿದಾನಂದಮೂರ್ತಿ ಅವರಿಗೆ ಬಹುಶಃ ಈ ಬಾಗಿಲು ತೆರೆಯುವುದೇ ಬೇಡವೆಂದು ಕಾಣುತ್ತದೆ. ಕಾವೇರಿ ವಿವಾದದ ಬಂದ್ ಸಮಯದಲ್ಲಿ ನಡೆದ ಗೂಂಡಾಗಿರಿಯನ್ನು ಕನ್ನಡಿಗರ ಶೌರ್ಯವೆಂದು ಪರಿಗಣಿಸಬಾರದೇಕೆ ಎಂದು ಪ್ರಶ್ನಿಸಿರುವ ಡಾ॥ ಚಿದಾನಂದಮೂರ್ತಿ ಅವರ ಮನಸ್ಸಿನ ಎಲ್ಲ ಬಾಗಿಲುಗಳೂ ಮುಚ್ಚಿ ಹೋಗಿರಬೇಕು. ಕ್ಷಾತ್ರತೆಗೂ ಗೂಂಡಾಗಿರಿಗೂ ವ್ಯತ್ಯಾಸವೇ ತಿಳಿಯದಷ್ಟು ಮೌಢ್ಯ ಇವರನ್ನೇಕೆ ಆವರಿಸಿದೆ ?, ಕನ್ನಡ ಶಕ್ತಿ ಕೇಂದ್ರವನ್ನು ಕನ್ನಡ ದುಷ್ಟ ಶಕ್ತಿ ಕೇಂದ್ರವೆಂದು ಬಲ್ಲ ಜನ ಕರೆಯಲಾರಂಭಿಸುವ ಮುನ್ನ ಡಾ॥ ಚಿದಾನಂದ ಮೂರ್ತಿ ಮತ್ತು ಅವರ ಗೆಳೆಯರು ಕುಳಿತು ತಣ್ಣಗೆ ಯೋಚಿಸುವಂತಾಗಲಿ ಎಂದು ಸಂವಾದ ಹಾರೈಸುತ್ತದೆ.

–ಸಂಪಾದಕರು

ಖಾಸಗಿ ಪ್ರಸಾರಕ್ಕಾಗಿ

ಸಂವಾದ

(ಮಾಸ್ತಿ ವಿಶೇಷ ಸಂಚಿಕೆ)

೨೩–೨೪

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ – ೫೭೭ ೫೩೧, ಚಿತ್ರದುರ್ಗ ಜಿಲ್ಲೆ

ಪರಿವಿಡಿ

ಮಾಸ್ತಿ ಕಥಾಲೋಕ : ಒಂದು ಪ್ರವೇಶ

ರಾಘವೇಂದ್ರ ಪಾಟೀಲ

೧೯೭೯ ರ ಒಂದು ಸಂಜೆ. ನನ್ನ ಮೊದಲ ಕಥಾಸಂಕಲನದ ಓಡಾಟದಲ್ಲಿದ್ದೆ. ನಾನು ಮತ್ತು ಗೆಳೆಯ ಎಚ್. ಎಸ್. ವೆಂಕಟೇಶಮೂರ್ತಿ ಇಬ್ಬರೂ ಆಟೋರಿಕ್ಷಾದಲ್ಲಿ ಎನ್ ಆರ್ ಕಾಲನಿಯಿಂದ ಗಾಂಧಿಬಜಾರಿನ ಮಾರ್ಗವಾಗಿ ಚಾಮರಾಜಪೇಟೆಯತ್ತ ಹೊರಟಿದ್ದೆವು. ವೆಂಕಟೇಶಮೂರ್ತಿಯವರು ಒಮ್ಮೆಲೇ ನನ್ನ ಭುಜವನ್ನು ತಟ್ಟಿ ರಿಕ್ಷಾದ ಹೊರಗಡೆಗೆ ಬೆರಳು ತೋರಿಸುತ್ತ – 'ನಮಸ್ಕಾರ ಮಾಡಿರೀ ... ನಿಮ್ಮ ಥಾರ್ಮ್ಮಿನ ಪಿತಾಮಹರು ...' ಎಂದರು. ನಾನು ಆಟೋದ ಹೊರಗಡೆಗೆ, ಅವರ ಬೆರಳು ತೋರಿದತ್ತ ನೋಡಿದರೆ ಬಿಸ್ಕೀಟು ಬಣ್ಣದ (ನೆನಪಿನಲ್ಲಿ ಉಳಿದ ಬಣ್ಣ ... ಇದೇ ತಾನೆ!) ಉದ್ದ ಕೋಟೊಂದನ್ನು ತೊಟ್ಟು ಕಚ್ಚೆ ಪಂಚೆ ಉಟ್ಟುಕೊಂಡ ಪುಟ್ಟ ಮುದುಕನೊಬ್ಬ ಪುಟುಪುಟು ಹೆಜ್ಜೆ ಇಡುತ್ತ ಪುಟಿಯುತ್ತ ಹೊರಟಂತೆ ಹೊರಟಿದ್ದ. ನಾನು ಅನುಮಾನಿಸುತ್ತ ... 'ಮಾಸ್ತೀನಾ?' ಎಂದೆ. ಮೂರ್ತಿಗಳು 'ಹೂಂ ... ಮತ್ತಾರು?' ಅಂದಾಗ ನಾನು ಮತ್ತೊಂದು ವಿಚಾರ ಮಾಡದೇ ಯಾವದೋ ಅಂತಃಪ್ರೇರಣೆಗೆ ಒಳಗಾದವನಂತೆ ತಟ್ಟನೇ ಕೈಮುಗಿದು ಬಿಟ್ಟೆ .. ನನ್ನ ಈ ಅಂತಃಪ್ರೇರಣೆಯ ಕ್ರಿಯೆ ಕುರುಡಾದದ್ದು ಕೂಡ ಆಗಿತ್ತು. ಯಾಕೆಂದರೆ ನಾನು ಅವರ ಬಗ್ಗೆ ತಿಳಿದದ್ದು, ಅವರು ಮಾಸ್ತಿ ಎನ್ನುವದು ಮಾತ್ರ. ಬಹುಶಃ 'ಮಾಸ್ತಿ – ಕನ್ನಡದ ಆಸ್ತಿ' ಎನ್ನುವ ಪ್ರಾಸ, ನಾನು ಓದಿದ ಕನ್ನಡ ಸಣ್ಣ ಕಥೆಯ ವಿಕಾಸ ಕುರಿತ ಐತಿಹಾಸಿಕ ಪ್ರಬಂಧಗಳಲ್ಲಿ ಬರುವ ಮಾಸ್ತಿಯವರ ಬಗೆಗಿನ ಉಲ್ಲೇಖ. ಇವು ನನ್ನ ಮನಸ್ಸಿನಲ್ಲಿ ಮಾಸ್ತಿಯವರನ್ನು ಒಬ್ಬ ಲೆಜೆಂಡರಿ ವ್ಯಕ್ತಿಯಾಗಿ.

ಮೂಡಿಸಿದ್ದವು. ಮಾಸ್ತಿಯವರ ಬಗ್ಗೆ ನಾನು ತಿಳಿದದ್ದು ಇಷ್ಟೇ ಆಗಿತ್ತು. ಇದು ಒಂದು ರೀತಿಯಾಗಿ ಮಾಸ್ತಿಯವರ ಬಗೆಗಿನ ನನ್ನ ಮೂಢ ನಂಬಿಕೆಯಾಗಿತ್ತು ... ಗಾಳಿಯಲ್ಲಿದ್ದ ಅಲೆಗಳು ಹೇಳಿದ ಮಾತುಗಳು ... ನನ್ನೊಳಗೆ ನನ್ನ ಅನುಭವಕೋಶದಲ್ಲಿ ರೂಪುಗೊಂಡ, ನನ್ನ ಭಾವಕೋಶದಲ್ಲಿ ಬೇರುಬಿಟ್ಟ ನಂಬಿಕೆ ಇದಾಗಿರಲಿಲ್ಲ. ಇದಕ್ಕೆ ಕಾರಣ – ಮಾಸ್ತಿಯವರ ಕಥೆಗಳಿಗೆ ನನ್ನನ್ನು ನಾನು ಒಡ್ಡಿಕೊಂಡಿರಲಿಲ್ಲ .. ಇದಕ್ಕೆ ಕಾರಣ ನವ್ಯದ ದಟ್ಟ ವಾತಾವರಣ – ನವ್ಯದ ಪ್ರಖರ ಬೆಳಕು ನನ್ನ ಕಣ್ಣು ಕುಕ್ಕಿಸಿದ್ದು ... ನವ್ಯ ವಿಮರ್ಶೆ ಲಕ್ಷ್ಮಣರೇಖೆಯಾದದ್ದು ... ಇತ್ಯಾದಿ, ಇತ್ಯಾದಿ ...

ಮಾಸ್ತಿಯವರನ್ನು ನಾನು ರಿಡಿಸ್ಕವರ್ ಮಾಡಿಕೊಂಡದ್ದು ಪೂರ್ಣಚಂದ್ರ ತೇಜಸ್ವಿಯವರ ಹೊಸ ಕಥೆಗಳನ್ನು ಮತ್ತು ದೇವನೂರ ಮಹಾದೇವ ಅವರ ಕಥೆಗಳನ್ನು ಓದಿಕೊಂಡಾದ ಮೇಲೆ. ತೇಜಸ್ವಿಯವರು ನವ್ಯದ ತೀವ್ರ ವೈಯಕ್ತಿಕತೆಯ ಮಾರ್ಗದ ಕುದಲಿನಲ್ಲಿ ನಿಂತು ಸಮೂಹಪ್ರಜ್ಞೆಯ ನಿರ್ಲಿಪ್ತೆಯ ಹೊಸದಿಕ್ಕಿನೆಡೆಗೆ ನೋಟ ಬೀರಿದಾಗ ಕಂಡ ಕ್ಷೇತ್ರ ಮಾಸ್ತಿ ಕ್ರಮಿಸಿದ ದಾರಿಯ ಮುಂತುದಿಯಾಗಿತ್ತು.

ಈ ಹಿನ್ನಲೆಯಲ್ಲಿ ಮಾಸ್ತಿಯವರ ಸಣ್ಣ ಕಥೆಗಳ ಲೋಕವನ್ನು ಪ್ರವೇಶಿಸತೊಡಗಿದ ನಾನು, ಅಲ್ಲಿ ಸರ್ವಜ್ಞನ ಮುಗ್ಧತೆಯಿಂದ ಮಗುವಿನಂತಹ ಮುಗುಳುನಗೆ ಬೀರುತ್ತ ನಿಂತ ಮಾಸ್ತಿಯವರ ವ್ಯಕ್ತಿತ್ವವನ್ನು ಕಂಡೆ. ಅದರ ಶಾಂತವಾದ – ಪ್ರಖರವಾದ ಪ್ರಭೆಯನ್ನು ಕಂಡು ಬೆರಗುಗೊಂಡೆ. ಇಂದಿಗೂ ನನ್ನಲ್ಲಿ ಮಾಸ್ತಿಯವರನ್ನು ಕುರಿತು ಬೆರಗೇ ಸ್ಥಾಯಿಯಾದ ಸ್ಪಂದನವಾಗಿದೆ. ಮೊದಲಿಗೆ ನನ್ನಲ್ಲಿ ಮೂಢನಂಬಿಕೆಯ ಸ್ವರೂಪದಲ್ಲಿದ್ದ ಮಾಸ್ತಿಯವರ ಅದ್ಭುತ ವ್ಯಕ್ತಿತ್ವದ ಕಲ್ಪನೆಯು ಈ ಬೆರಗು ಹುಟ್ಟಿಸುವ ಮಾಸ್ತಿ ವ್ಯಕ್ತಿತ್ವದ ನಿತ್ಯನೂತನವಾದ ಕಲ್ಪನೆಯ ಮುಂದೆ ಅತ್ಯಂತ ಸಪ್ಪೆಯಾದುದು ... ನನಗೆ ನಾನೇ ಕಂಡುಕೊಂಡ ಮಾಸ್ತಿಯವರ ಬಗೆಗಿನ ನನ್ನ ಕಲ್ಪನೆ ವಿಶ್ವರೂಪದರ್ಶನದ ಬಗೆಯದು. ಆದರೆ ಈ ದರ್ಶನದಲ್ಲಿ ಮಾಸ್ತಿಯವರು ಸಹಸ್ರಮುಖರಾಗಿ – ಸಹಸ್ರಬಾಹುಗಳಾಗಿ ಒಡೆದಿಲ್ಲ. ಅದೇ ಇಡಿಯಾಗಿ – ಸಮಗ್ರವಾಗಿ ಉಳಿದ ಮಾಸ್ತಿ! ತಲೆಗೆ ಇಷ್ಟುದ್ದದ ಬಣ್ಣದ ಟೊಪ್ಪಿಗೆ ಧರಿಸಿ ಉದ್ದಕೋಟಿನ ಜೋಬುಗಳೊಳಗೆ ಕೈ ಇಳಿಬಿಟ್ಟು , ಅದೇ ಎಲ್ಲ ತಿಳಿದವರ ಮುಗ್ಧನಗೆ ಬೀರುತ್ತ ನಿಂತ ಮಾಸ್ತಿ...ಯಾಕೋ ಏನೋ... ನನಗೆ ಈ ದರ್ಶನದಲ್ಲಿ, ಮಾಸ್ತಿಯವರ ಹಣೆಯಮೇಲೆ ರಾರಾಜಿಸುತ್ತಿದ್ದ ನಾಮ ಮತ್ತು ಚಂದನದ ಕೆಂಪುಗೆರೆ ಕಾಣಿಸುವದೇ ಇಲ್ಲ. ಇದು ಮತ್ತೆ ನನ್ನಲ್ಲಿರುವ ಪೂರ್ವಾಗ್ರಹದ ಮೂಲಕ ಉಂಟಾದ ದೋಷವಲ್ಲ. ಅತ್ಯಂತ ನಿಷ್ಠ ಧಾರ್ಮಿಕ ಮನೋಭಾವವನ್ನು ಹೊಂದಿಯೂ ಧರ್ಮನಿರಪೇಕ್ಷವಾದ ಮನಸ್ಸು ಮಾತ್ರ ಹೊಂದಿರಬಹುದಾದ ಮನುಷ್ಯ ಪ್ರೀತಿಯನ್ನು ತೋರಿಸುವ ರೀತಿ ಮಾಸ್ತಿಯವರದು. ಇದು ಜಾತಿ ಜಾತಿಗಳಲ್ಲಿ ಒಡೆದುಹೋಗದ, ಸಮಗ್ರವಾದ, ಮನುಷ್ಯನ ಬಗೆಗಿನ ಪ್ರೀತಿ. ಇಂಥ ಮನುಷ್ಯಪ್ರೀತಿಯ ಹಿನ್ನಲೆಯಲ್ಲಿಯೇ ನಾನು ಕಂಡುಕೊಂಡ ಮಾಸ್ತಿಯವರ ದರ್ಶನದಲ್ಲಿ ಅವರ ಹಣೆಯಮೇಲಿನ ನಾಮವು ಅಳಿಸಿಹೋಗಿದೆ.

೨

ಮಾಸ್ತಿಯವರ ಕತೆಗಳ ಹಿಂದೆ ಕೆಲಸಮಾಡುವ ಮನಸ್ಸಿನ ಬಗ್ಗೆ ಯೋಚಿಸುವಾಗ ಆರ್ಥರ್ ಕೊಸ್ಲರ್‌ನೆಂಬ ಜರ್ಮನ್ ಚಿಂತಕ, ಮನುಷ್ಯನ ಮೆದುಳಿನ ದ್ವಂದ್ವ ಉಗಮದ ಬಗ್ಗೆ

ಹೇಳಿದ ವಿಚಾರ ನೆನಪಿಗೆ ಬರುತ್ತದೆ. ಮನುಷ್ಯನಲ್ಲಿ ಎರಡು ಮೆದುಳುಗಳಿವೆ ಎನ್ನುತ್ತಾನೆ ಕೊಸ್ಲರ್. ಒಂದು ಹಳೆಯದು – ಉರಗಗಳು – ದನ – ಕುದುರೆ ಮುಂತಾದವುಗಳ ಮೂಲಕ ದಾಟಿ ಬಂದದ್ದು. ಇನ್ನೊಂದು – ಮನುಷ್ಯ ಪ್ರಭೇದಕ್ಕೆ ಸೀಮಿತವಾದ, ಹಳೆಯ ಮೆದುಳಿನ ಹೊರಗೆ, ಅದರ ಸುತ್ತಲೂ ಬೆಳೆದ ಹೊಸ ತೊಗಟೆ. ಇದು ಹೊಸ ಮೆದುಳು. ಲಕ್ಷಾಂತರ ವರ್ಷಗಳ ವಿಕಾಸದ ಅನುಭವಗಳ ನೆನಪುಗಳನ್ನೆಲ್ಲ ತನ್ನಲ್ಲಿಟ್ಟುಕೊಳ್ಳುತ್ತ ಬಂದ ಈ ಹಳೆಯ ಮೆದುಳು ಆದಿಮ ನಂಬಿಕೆಗಳ, ಆದಿಮ ಪ್ರತಿಮೆಗಳನ್ನೊಳಗೊಂಡ ಪೌರಾಣಿಕ ಪ್ರಜ್ಞೆಯ ಮೂಲವಾಗಿದೆ. ಎಲ್ಲವನ್ನೂ ಹಳೆಯ ಅನುಭವ ಲೋಕದೊಂದಿಗೆ ಹೋಲಿಸಿ ನೋಡಿ, ಎಲ್ಲವನ್ನೂ ಸಂಯೋಜಿಸಿ ಪಡೆದುಕೊಳ್ಳುವ ಒಂದು ವಿಶಿಷ್ಟ *common sense* ಈ ಹಳೆಯ ಮೆದುಳಿನ ಕಾರ್ಯವಿಧಾನವಾಗಿರುತ್ತದೆ. ವಿಶ್ಲೇಷಣೆ ಹೊಸ ಮೆದುಳಿನ ಕಾರ್ಯ ವಿಧಾನ. ಅತ್ಯಂತ ತರ್ಕಬದ್ಧ ವೈಚಾರಿಕತೆ – *rationality* – ಎನ್ನುವದು ಹೊಸ ಮೆದುಳಿನ ಮೂಲಕ ಮನುಷ್ಯ ಪಡೆದ ವೈಶಿಷ್ಟ್ಯ. ಈ ವೈಚಾರಿಕತೆ ಹೆಚ್ಚು ಹೆಚ್ಚು ಸೂಕ್ಷ್ಮಗೊಳ್ಳಲು ಹೊಸ ಮೆದುಳು ಪ್ರಯತ್ನಿಸುತ್ತಿರುತ್ತದೆ. ಸ್ಥೂಲವಾಗಿ ಹೇಳುವದಾದರೆ ನವ್ಯಕಥೆಗಳು ನನಗೆ ಹೊಸ ಮೆದುಳಿನ ಉತ್ಪನ್ನಗಳೆಂದು ತೋರುತ್ತವೆ. ಈ ಕಥೆಗಳಲ್ಲಿ ಕೆಲಸ ಮಾಡುವ ಪ್ರಜ್ಞೆ ಸಾಧಾರಣೀಕೃತವಾದ *commonsense* ನ ಮನುಷ್ಯ ಪ್ರಜ್ಞೆಯ ಮೇಲೆ ಆಕ್ರಮಣ ಮಾಡುತ್ತಿರುತ್ತದೆ. ತಾನು ಹೊಸದಾಗಿ ಪಡೆದುಕೊಂಡ ಮೆದುಳಿನ ಹೊಸ ತೊಗಟೆಯ ವೈಶಿಷ್ಟ್ಯವನ್ನು ಸಾಧಿಸುವ ಪ್ರಯತ್ನ ಈ ಕಥೆಗಳಲ್ಲಿ ಕಂಡಂತಾಗುತ್ತದೆ. ಮಾಸ್ತಿಯವರ ಕಥೆಗಳು ಹಳೆಯ ಮೆದುಳಿನ ಹಂಗಿನಲ್ಲಿ, ಹಳೆಯ ಮೆದುಳಿನ ಕ್ರಿಯಾಶೀಲತೆಯ ಪ್ರಖರತೆಯಲ್ಲಿ ಮೂಡಿಬಂದ ಕಥೆಗಳೆನ್ನಿಸುತ್ತವೆ. ಇವುಗಳಲ್ಲಿ ಅಂತರ್ಗತವಾಗಿರುವದು ಸಾಧಾರಣೀಕರಣಗೊಂಡ, ನಂಬಿಕೆಗಳ ಆಧಾರದ ಮೇಲೆ – *common sense* ನ ಆಧಾರದ ಮೇಲೆ – ಕಟ್ಟಿಕೊಂಡಿರುವ ಮಾನವಪ್ರಜ್ಞೆ. ನವ್ಯರಲ್ಲಿ ಮತ್ತು ಮಾಸ್ತಿಯವರಲ್ಲಿ ದುಡಿಯುವ ಮನಸ್ಸುಗಳು ಎದುರಿಸಬೇಕಾದ ಮಿತಿಗಳನ್ನು ಯೋಚಿಸುವಾಗ ಕೊಲರಿಜ್‌ನ ಒಂದು ಮಾತು ನೆನಪಿಗೆ ಬಂದಂತಾಗುತ್ತದೆ : *"I have known some who have been rationally educated as it is styled. They were marked by a microscopic acuteness, but when they looked at great things, all became a blank and they saw nothing .... "*. ಸೂಕ್ಷ್ಮದರ್ಶಕದಿಂದ ಸೂಕ್ಷ್ಮತೆಯನ್ನು ಮಾತ್ರ ನೋಡಲು ಸಾಧ್ಯವಾಗುತ್ತದೆ. ಜೀವನದ ಒಟ್ಟು ಪ್ರವಾಹವನ್ನು ಅದರ ಮೂಲಕ ಗ್ರಹಿಸಲು ಹೊರಟರೆ ನಮಗೆ ಏನೇನೂ ಕಾಣದು. ನವ್ಯದೃಷ್ಟಿಕೋನ ಈ ಪ್ರವಾಹದ ಹನಿ ಹನಿಯನ್ನು ಪ್ರತ್ಯೇಕವಾದ ಘಟಕಗಳಾಗಿ ಕಂಡರೆ ಮಾಸ್ತಿಯವರ ದೃಷ್ಟಿಯು ಈ ಹನಿಗಳನ್ನು ನೋಡುವಾಗ ಅವುಗಳನ್ನು ಒಟ್ಟು ಪ್ರವಾಹದ ಹರವಿನಲ್ಲಿ ಇಟ್ಟು ನೋಡುತ್ತದೆ. ಆದ್ದರಿಂದಲೇ ಪಾತ್ರಚಿತ್ರಣವೇ ಮುಖ್ಯವಾಗಿ ಬರುವ ಮಾಸ್ತಿಯವರ ಅನೇಕ ಕಥೆಗಳು ಆ ಪಾತ್ರಗಳ ವೈಶಿಷ್ಟ್ಯತೆಯನ್ನು ಬಿಂಬಿಸುವ ಬದಲು ಮನುಷ್ಯ ಜೀವನದ ವೈವಿಧ್ಯಪೂರ್ಣವಾದ ಸಾಧ್ಯತೆಗಳ ಸೂಚನೆಯನ್ನು ನೀಡುವಂತಿರುತ್ತವೆ.

ಒಟ್ಟು ಜೀವನದ ಒಂದು ಸಮಗ್ರವಾದ ದರ್ಶನವನ್ನು ಕಟ್ಟಿಕೊಡುವುದು ಮಾಸ್ತಿಯವರ ಪ್ರಯತ್ನವಾಗಿದೆ. ಆದರೆ ಸಣ್ಣಕಥೆಯ ಮಾಧ್ಯಮ ತುಂಬ ಚಿಕ್ಕದಾದ ಕನ್ನಡಿ!

ಇಂಥ ಮಹತ್ವಾಕಾಂಕ್ಷೆಯು ಸಣ್ಣಕಥೆಯ ಸಾಹಿತ್ಯಿಕ ಪ್ರಭೇದದ ಅಳವಲ್ಲ. ಮಾಸ್ತಿಯವರು ಜೀವನದ ಇಂಥ ಸಮಗ್ರ ಅರಿವಿಗಾಗಿ ಲಿಲಿಪುಟ್ಟರು ಗಲಿವರನನ್ನು ಬಂಧಿಸಿ ಕೊಂಡೊಯ್ಯಲು ಬಳಸಿದಂಥ ಮಾರ್ಗವನ್ನು ಬಳಸುತ್ತಾರೆ. ಲಿಲಿಪುಟ್ಟರು, ಭೀಮಕಾಯನಾದ ಗಲಿವರನ ದೇಹದ ಒಂದೊಂದು ಅಂಗುಲ ಅಂಗುಲವನ್ನೂ ಅವರ ಅತ್ಯಂತ ದಪ್ಪವಾದ ಹಗ್ಗಗಳಿಂದ, ಅಂದರೆ ಮಾನವ ದೃಷ್ಟಿ ಮರ್ಯಾದೆಯಲ್ಲಿ ದಾರಗಳಷ್ಟು ತೆಳುವಾದ ಎಳೆಗಳಿಂದ, ಬಂಧಿಸಿ ನೂರಾರು ಗಾಲಿಗಳಿರುವ ಬಂಡಿಯೊಂದರಲ್ಲಿ ಹೇರಿ ಅವನನ್ನು ಕೊಂಡೊಯ್ಯುತ್ತಾರೆ. ಅದೇ ರೀತಿಯಾಗಿ, ತಮ್ಮ ನೂರಾರು ಕಥೆಗಳ ದಾರದಿಂದ ಮಾಸ್ತಿಯವರು ದೈತ್ಯಾಕಾರದ ಮನುಷ್ಯ ಜೀವನದರ್ಶನವನ್ನು ಕಟ್ಟಿಕೊಡಲು ಪ್ರಯತ್ನಿಸುತ್ತಾರೆ. ಅದ್ದರಿಂದ, ಮಾಸ್ತಿಯವರ ಕಥೆಗಳನ್ನು ಬಿಡಿ ಬಿಡಿಯಾಗಿ ಓದುವದರಿಂದಾಗಲೀ – ಒಂದೊಂದು ಕಥೆಯನ್ನು ಒಂದು ಪ್ರತ್ಯೇಕ ಘಟಕವೆಂದುಕೊಂಡು ವಿಶ್ಲೇಷಣೆಗೆ ಒಳಪಡಿಸುವದರಿಂದಾಗಲೀ – ನಮಗೆ ಹೆಚ್ಚು ಲಾಭ ದೊರೆಯಲಾರದು. ಮಾಸ್ತಿಯವರ ಒಂದೊಂದು ಕಥೆಯೂ *contextual* ಆದವುಗಳು. ಜೀವನದ ಬೇರೆ ಬೇರೆ ಕೋನಗಳನ್ನು ಹಿಡಿದುಕೊಡುತ್ತ, ಪರಸ್ಪರ ಹೆಣೆದುಕೊಳ್ಳುತ್ತ ಒಂದು ಸಮಗ್ರವಾದ ಹೆಣಿಗೆಯನ್ನು – *contexture* – ಸಾಧಿಸುವಂಥವುಗಳು. ಈ ಹೆಣಿಗೆಯಲ್ಲಿ ಜೀವನದ ಎಲ್ಲಕ್ಕೂ ಸ್ಥಾನವಿದೆ. ಜೀವನ ಪ್ರವಾಹದ ಎಲ್ಲವೂ ಮುಖ್ಯವೇ. ಒಂದೊಂದು ತಿರುವು, ಒಂದೊಂದು ಘಟನೆಯ ಕಣವೂ ಅದರ ಹರಿವಿನ ಮೇಲೆ ಪರಿಣಾಮ ಬೀರುವಂಥದು. ಈ ಪ್ರವಾಹದ ಕೆಲವು ಭಾಗಗಳಲ್ಲಿ ಆಳ ಹೆಚ್ಚಾಗಿರುವಂತೆ, ಕಡಿಮೆ ಆಳದ ತಾಣಗಳೂ ಇದರಲ್ಲಿರುತ್ತವೆ. ಭಿನ್ನ ಸೆಳವುಗಳು, ತಿರುಗಣಿಗಳು, ಮಡುಗಳು, ಆಳಗಳು ಇವೆಲ್ಲ ಮನುಷ್ಯಜೀವನ ಪ್ರವಾಹದ ಅನಿವಾರ್ಯ ಅಂಶಗಳು. ಈ ಒಂದೊಂದು ಅಂಶದ ಮೇಲೆ ದೃಷ್ಟಿಯಿರಿಸಿದ ಮಾಸ್ತಿ ಕಥೆಗಳು ಆಯಾ ಅಂಶದ ಆಳ ಸೆಳವುಗಳಿಂದ ಪ್ರಭಾವಿತವಾಗಿರುತ್ತವೆ.

೩

ನಾನು *secularism*ನ ಮಾತು ಹೇಳಿದೆ. ಮಾಸ್ತಿಯವರ ದರ್ಶನದಲ್ಲಿ ನನಗೆ ಅವರ ನಾಮ ತೋರದಿರುವ ಮಾತನ್ನು ಹೇಳಿದೆ. ಈ ಹಿನ್ನೆಲೆಯಲ್ಲಿ ಅವರ ಸಾರಿಪುತ್ರನ ಕಡೆಯ ದಿನಗಳು, ವೆಂಕಟಶಾಮಿಯ ಪ್ರಣಯ, ಪಂಡಿತನ ಮರಣಶಾಸನ, ಮಸುಮತ್ತಿ ಮುಂತಾದ ಕಥೆಗಳಲ್ಲಿ ತೊಡಗಿರುವ ಮನಸ್ಸನ್ನು ಗಮನಿಸಬಹುದು. ಈ ಕಥೆಗಳಲ್ಲಿ ಎರಡು ನಂಬಿಕೆಗಳ/ಸಂಸ್ಕೃತಿಗಳ ಉಪಸ್ಥಿತಿಯನ್ನು ನಾವು ಕಾಣುತ್ತೇವೆ. 'ಸಾರಿಪುತ್ರನ ಕಡೆಯ ದಿನಗಳು' ಕಥೆಯಲ್ಲಿ ವೇದಗಳ ಬಗೆಗಿನ ನಂಬಿಕೆ ಮತ್ತು ಬುದ್ಧನ ತತ್ವಗಳ ಬಗೆಗಿನ ನಂಬಿಕೆಗಳು ಎದುರು ಬದುರಾದರೆ, ಮಸುಮತ್ತಿಯಲ್ಲಿ ಎರಡು ಸಂಸ್ಕೃತಿಗಳ ಮೂಲಕವಾಗಿ ಬಂದ ನಂಬಿಕೆಗಳು, ಜೀವನದ ಪರಿಕಲ್ಪನೆಗಳು ಎದುರು ಬದುರಾಗುತ್ತವೆ. ಮಾಸ್ತಿಯವರು ಇಲ್ಲಿ ತಲುಪುವ ನಿಲುವು ಸಂಯೋಜನೆಯ ರೀತಿಯದು. ನಂಬಿಕೆ ಮತ್ತು ಬುದ್ಧಿಗಳೆರಡನ್ನೂ ಪರಸ್ಪರ ಸಹಕಾರಿಯಾಗಿಸುತ್ತ ಜೀವನದ ಉನ್ನತಿಯ ಮಾರ್ಗವನ್ನು ಸ್ಪಷ್ಟಪಡಿಸಿಕೊಳ್ಳುವಂತಹದು. ಬುದ್ಧನ ಚಿಂತನೆಯನ್ನು ಉಪದೇಶಗಳನ್ನು ಸತ್ಯವೆಂದು ಮನಗಾಣುತ್ತಲೇ ಸಾರಿಪುತ್ರನು

ಬುದ್ಧನನ್ನು ದೇವರೆಂದು ಭಾವಿಸುತ್ತಾನೆ. ಅವನನ್ನು ಒಂಭತ್ತನೆಯ ಅವತಾರವಾಗಿ ಭಾವಿಸುತ್ತಾನೆ. ಇದು ಬರೀ ಸಾರಿಪುತ್ರನ ದಿಕ್ಕಿನಿಂದ ಮಾತ್ರ ನಡೆಯುವ ಪ್ರಕ್ರಿಯೆ ಅಲ್ಲ. ಬುದ್ಧನ ದಿಕ್ಕಿನಿಂದಲೂ ನಡೆಯುವಂಥದು. ಬುದ್ಧ 'ಹಾಗಾದರೆ ನಿನಗೊಬ್ಬ ದೇವರು ಬೇಕು?' ಎಂದು ಸಾರಿಪುತ್ರನನ್ನು ಕೇಳಿದಾಗ ಸಾರಿಪುತ್ರನು ಹೌದೆನ್ನುತ್ತಾನೆ. ಆಗ ಬುದ್ಧನು – 'ನನ್ನನ್ನು ದೇವರೆಂದು ಪೂಜಿಸುವದು ಸಾಧ್ಯವೋ?' ಎಂದು ಕೇಳಿ 'ಹಾಗಾದರೆ ಪೂಜಿಸು' ಎನ್ನುತ್ತಾನೆ. ಇದು ಸಂಯೋಜನೆಯ ಮಾರ್ಗ. ನನ್ನ ಸಂಸ್ಕೃತಿಯ ಎಲ್ಲವೂ ಉತ್ಕೃಷ್ಟವಾದದ್ದು – ಬೇರೆ ಸಂಸ್ಕೃತಿಗಳು ಕನಿಷ್ಟವಾದವುಗಳು ಎನ್ನುವ ಮನಸ್ಸುಗಳು ಪೀಡಿತ ಮನಸ್ಸುಗಳು. ಮಾಸ್ತಿ ಮನಸ್ಸು ಇಂಥ ಪೀಡನೆಯಿಂದ ಮುಕ್ತಗೊಂಡುದಾಗಿ ಅವರ ಕಥೆಗಳಲ್ಲಿ ತೋರುತ್ತದೆ. ಜಗತ್ತಿನ ಎಲ್ಲ ಸಂಸ್ಕೃತಿಗಳೂ ಒಳಿತು ಕೆಡುಕುಗಳ ಕಲಸು ಮೇಲೋಗರವಾಗಿವೆ. ಅವೆಲ್ಲವುಗಳಲ್ಲಿನ ಒಳಿತುಗಳನ್ನು ಸಂಯೋಜಿಸಿಕೊಂಡರೆ ಬದುಕು ಹಸನಾಗುತ್ತದೆನ್ನುವದು ಮಾಸ್ತಿಯವರ ಚಿಂತನೆಯ ರೀತಿ. ಅವರು ಬರೆದ ಒಂದು ಪತ್ರದಲ್ಲಿ ಹೀಗೆ ಹೇಳುತ್ತಾರೆ:

> *"ಮುಖ್ಯವಾಗಿ ನಾನು ಹಳೆಯ, ಹೊಸ ಯೋಚನೆಗಳ ಸಮನ್ವಯದಲ್ಲಿ ತೊಡಗಿರುವ ಸಾಹಿತಿ. ಇಂಥ ಮನುಷ್ಯ ಇಂಗ್ಲೀಷ್ ವಚನ ಒಂದು ಹೇಳುವಂತೆ ಎರಡು ಕುರ್ಚಿಗಳ ಮಧ್ಯ ನೆಲಕ್ಕೆ ಬೀಳುವ ಸಂಭವ ಇದೆ. ಮಧ್ಯೆಯೂ ಒಂದು ಕುರ್ಚಿ ಇದೆ ಎಂದು ನನ್ನ ನಂಬಿಕೆ. ನಾನು ಅದರ ಮೇಲೆ ಕೂರುತ್ತೇನೆ ಎಂದು ನನ್ನ ಕಲ್ಪನೆ"*

ಯು.ಆರ್. ಅನಂತಮೂರ್ತಿಯವರು ಮಾಸ್ತಿಯವರ ಬಗ್ಗೆ ಹೇಳುವ ಮಾತು ಹೀಗಿದೆ:

> *"ಶೇಕ್ಸಪೀಯರ್, ವರ್ಡ್ಸ್‌ವರ್ತ್ ಮತ್ತು ವಾಲ್ಮೀಕಿಯವರನ್ನು ಒಟ್ಟಾಗಿ ಮೆಚ್ಚಿಕೊಂಡಿದ್ದ ಮಾಸ್ತಿ ಋತಿದ್ದ ಜಾಗ ಕೇವಲ ಹೊಂದಾಣಿಕೆಯದಲ್ಲ. ರಾಜಿಯ ಅಗತ್ಯಕ್ಕಾಗಿ ಹುಡುಕಿಕೊಂಡ ಅನುಕೂಲ ಸಿಂಧುವಲ್ಲ. ಭಾರತೀಯ ಪರಂಪರೆಯ ಜೀರ್ಣಾಗ್ನಿ ಕನ್ನಡದಲ್ಲಿ ಆರೋಗ್ಯದಾಯಕವಾಗಿ ಉರಿಯುತ್ತದೆ ಎಂಬದನ್ನು ತೋರಿಸುವಂಥದು".*

ಆದರೆ ಮಾಸ್ತಿಯವರ ಈ ಸೆಕ್ಯುಲಾರಿಸಮ್ ಬರೀ ಭಾರತೀಯ ಸಂದರ್ಭಕ್ಕೆ ಮಾತ್ರ ಸೀಮಿತವಾದುದಾಗುವದಿಲ್ಲ. ಭಾರತೀಯ ಸಂಸ್ಕೃತಿಯಲ್ಲಿ ಗುಣಿತಗೊಳ್ಳುತ್ತ ಬೆಳೆಯುವ ಕ್ರೌರ್ಯ ಮತ್ತು ಮೂಢನಂಬಿಕೆಗಳನ್ನು 'ಕಲ್ಮಾಡಿಯ ಕೋಣ'ದಂತಹ ಕಥೆಯಲ್ಲಿ ಹಿಡಿದುಕೊಡುವ ಮಾಸ್ತಿ ಭಾರತೀಯ ಸಂಸ್ಕೃತಿಯ ಬಗೆಗೆ ನಿರಪೇಕ್ಷವಾದ ನಿಲುವನ್ನು ಹೊಂದಿರುವದನ್ನು ತೋರಿಸಿಕೊಳ್ಳುತ್ತಾರೆ. 'ಆ್ಯಟಿಲನ ದಾಕ್ಷಿಣ್ಯ'ದಂತಹ ಕಥೆಯಲ್ಲಿ ಅನಾಗರಿಕ ಕುಲವೆಂದು ಭಾವಿಸಲಾದ ಹೂಣರ ಸಂಸ್ಕೃತಿಯಲ್ಲಿನ ಸಮಾನತೆ ಮತ್ತು ಕರುಣೆಯ ಮೌಲ್ಯಗಳನ್ನು ಎತ್ತಿ ತೋರಿಸುತ್ತಾರೆ. ಎಮಿಲಿ, ಫರುಕುವರಂಥ ಪಾಶ್ಚಿಮಾತ್ಯ ಸಂಸ್ಕೃತಿಯ ಹೃದಯವಂತಿಕೆಯ ಉತ್ಪನ್ನಗಳ ಬಗ್ಗೆ ಮಾಸ್ತಿಯವರು ಪ್ರೀತಿಯಿಂದ ಬರೆಯುತ್ತಾರೆ. ಹೀಗೆ ಮಾಸ್ತಿಯವರು ಜಾಗತಿಕ ಸಂಸ್ಕೃತಿಯ ಉತ್ಕೃಷ್ಟ ಮೌಲ್ಯಗಳೆಲ್ಲವುಗಳ ಬಗೆಗೆ secular ಆದ ಸ್ಪಂದನೆಯನ್ನು ತೋರುತ್ತಾರೆ.

●

ಸ್ಥಿತ್ಯಂತರಗಳ ಶತಮಾನದ ಕತೆಗಾರ ಮಾಸ್ತಿ

ಕೆ. ಸತ್ಯನಾರಾಯಣ

ಕಂಡರಿಯದ ಕೇಳರಿಯದ ಸ್ಥಿತ್ಯಂತರಗಳೇ ಇಪ್ಪತ್ತನೆಯ ಶತಮಾನದ ಮುಖ್ಯ ಗುಣ. ಈ ಸ್ಥಿತ್ಯಂತರಳಿಗೆ ಮನುಷ್ಯ ಹೊಂದಿಕೊಳ್ಳುವುದಿರಲಿ, ಅವುಗಳು ಅವನನ್ನು ತಲುಪಿ ಅವನು ಅವನ್ನು ಅರ್ಥೈಸಿಕೊಳ್ಳುವುದರೊಳಗೆ, ಅವನ ಆಯಸ್ಸು ಮುಗಿದು ಹೋಗಿರುತ್ತದೆ. ಈ ಶತಮಾನದ ಪ್ರಾರಂಭದ ವರ್ಷಗಳಲ್ಲಿ ಮಾಸ್ತಿ ಕತೆ ಬರೆಯಲು ಪ್ರಾರಂಭಿಸಿದಾಗ ಕೂಡ ಇಂತಹ ಸ್ಥಿತ್ಯಂತರಗಳಿದ್ದವು. ಮಾಸ್ತಿ ಅಂತಹ ಸ್ಥಿತ್ಯಂತರಗಳನ್ನು ಹೇಗೆ ನೋಡಿದರು, ಮಂಡಿಸಿದರು ಎಂಬುದನ್ನು ಅವರ ಕತೆಗಳ ಮೂಲಕ ತಿಳಿಯುವುದು ಈ ಬರಹದ ಉದ್ದೇಶ. ಇಂತಹ ಉದ್ದೇಶಕ್ಕೆ ಮಾಸ್ತಿಯ ಕತೆಗಳ ಆಯ್ಕೆಯೇ ಏಕೆ ಎನ್ನುವುದಕ್ಕೆ ನನ್ನ ಉತ್ತರ ಈ ರೀತಿ ಇದೆ–

ಅವರು ಬರೆದ ಕೊನೆಯ ಮತ್ತು ನೂರನೆಯ ಕತೆ 'ಮಾಯಣ್ಣನ ಕನ್ನಡಿ'. ಆ ಕತೆಯೊಳಗೆ ನಾಲ್ಕು ದೃಷ್ಟಾಂತ ಕತೆಗಳು ಅಥವಾ ಪ್ರಸಂಗಗಳು ಎಂದು ಹೇಳಬಹುದಾದ ನಾಲ್ಕು ಘಟನೆಗಳ ವ್ಯಾಖ್ಯಾನ ಇದೆ. ಅದರ ಮುಖ್ಯ ಆಶಯ ಮನುಷ್ಯನಾದವನು ಏನನ್ನು ನೋಡಬೇಕು, ಏನನ್ನು ಕಾಣಬೇಕು, ಹೇಗೆ ಕಾಣಬೇಕು ಮತ್ತು ಹಾಗೆ ಕಂಡದ್ದನ್ನು ತನ್ನ ಜೀವನಕ್ಕೆ ಹೇಗೆ ಪ್ರಸ್ತುತಗೊಳಿಸಬೇಕು ಎಂಬುದು. ಈ ಕತೆಯಲ್ಲಿ ಬರುವ ಗುರುಗಳ ಮಾತಿರಲಿ ಅವರ ವೆಂಕಟಿಗ ಕೂಡ ಈ ಸಮಸ್ಯೆಯನ್ನು ಎದುರಿಸಿದವನು. ಅವರ ಇನ್ನೊಂದು ಕತೆಯಾದ 'ಕುಚೇಲನ ಮರಿಮಗ'ದಲ್ಲೂ 'ಕಾಣುವ' ಮತ್ತು 'ಪ್ರಸ್ತುತಗೊಳಿಸಿಕೊಳ್ಳುವ' ಸಮಸ್ಯೆಯೇ ಮುಖ್ಯವಾಗಿದೆ. ಅಂದರೆ ಮಾಸ್ತಿ ತಮ್ಮ ಬರವಣಿಗೆಯ ಎಲ್ಲ ಘಟ್ಟದಲ್ಲೂ,

ಮನುಷ್ಯನಾದವನು ಇಲ್ಲಿ ಅರ್ಥಪೂರ್ಣ ಬದುಕೆಂಬುದನ್ನು ನಡೆಸಬೇಕಾದರೆ ನಿರಂತರವಾಗಿ ಎದುರಿಸಬೇಕಾದ 'ಕಾಣುವ' ಮತ್ತು ಕಂಡದ್ದನ್ನು 'ಪ್ರಸ್ತುತಗೊಳಿಸುವ' ಸಮಸ್ಯೆಯ ಬಗ್ಗೆಯೇ ಯೋಚಿಸುತ್ತಿದ್ದರು.

ಇಷ್ಟೇ ಆದರೆ ಮಾಸ್ತಿ ಕತೆಗಳನ್ನು ಮತ್ತೆ ಓದುವ ಅಗತ್ಯವಿಲ್ಲ. ಇದರ ಜೊತೆಗೇ ಇನ್ನು ಕೆಲವು ಅಂಶಗಳು ಸೇರಿಕೊಳ್ಳುತ್ತವೆ. ನಾನು ಬದುಕಿದ ಕಾಲವೇ ವಿಶಿಷ್ಟವಾದದ್ದು, ನಾನು ಕಂಡದ್ದೇ ವಿಶಿಷ್ಟವಾದದ್ದು ಎಂದು ಮಾಸ್ತಿ ಹೇಳಿದ್ದರೂ ಅವರ ಕತೆಗಳನ್ನು ಓದಬೇಕಾಗಿರಲಿಲ್ಲ. ಅಷ್ಟೇ ಅಲ್ಲದೆ ಮನುಷ್ಯ ಎಲ್ಲ ಕಾಲದಲ್ಲೂ ಹೀಗೆ ಕಾಣುವ ಮತ್ತು ಪ್ರಸ್ತುತಗೊಳಿಸಿಕೊಳ್ಳುವ ಸಮಸ್ಯೆಯನ್ನು ಎದುರಿಸುತ್ತಲೇ ಇರುತ್ತಾನೆ ಎಂಬ ತಾತ್ವಿಕ ನಿಲುವಿದ್ದರೂ ಅವರ ಕತೆಗಳನ್ನು ಓದಬೇಕಾಗುತ್ತಿರಲಿಲ್ಲ. ಇದೆಲ್ಲದರ ಬದಲಿಗೆ ಇಂತಹ 'ಎದುರಿಸು'ವಿಕೆಯನ್ನು ಮನುಷ್ಯ ಮಾಡಿದ್ದರಿಂದಲೇ ಬದುಕು ಅರ್ಥಪೂರ್ಣವಾಗಿದೆ; ಜೊತೆಗೆ ನಾವು ಮತ್ತು ನಮ್ಮ ಮುಂದಿನವರು ಆ ರೀತಿಯ 'ಎದುರಿಸು'ವಿಕೆಯ ಶಕ್ತಿಯನ್ನು ಪಡೆದಿದ್ದೇವೆ, ಎಂದು ಕೂಡ ಮಾಸ್ತಿ ಸೂಚಿಸುವುದರಿಂದ ಅವರ ಕತೆಗಳನ್ನು ಮತ್ತೆ ಮತ್ತೆ ಓದಬೇಕಾಗಿದೆ. ಇಷ್ಟು ಪೀಠಿಕೆ ಹೇಳುವಾಗಲೇ ಮಾಸ್ತಿ ಕತೆಯ ಮುಖ್ಯ ಆಶಯಗಳಲ್ಲೊಂದು ಸದ್ದಿಲ್ಲದೆ ನಮ್ಮ ಮಾತಿಗೆ ಬಂದು ಸೇರಿಕೊಂಡು ಬಿಟ್ಟಿದೆ. ಅವರ ಕತೆಗಳ ಮನುಷ್ಯ ವರ್ತಮಾನ ಮತ್ತು ಭವಿಷ್ಯ ಎರಡರಲ್ಲೂ ಒಟ್ಟಿಗೆ ಬದುಕುತ್ತಿರುತ್ತಾನೆ. ಆಯ್ಕೆ ಮಾಡಿದ ವೆಂಕಟಿಗ ತನ್ನ ಮತ್ತು ತನ್ನ ಮುಂದಿನ ದಿನಗಳ ಸಹನೀಯ ಸುಂದರ ಬದುಕಿಗೆ ಕಾರಣವಾಗುವಂತೆ, ಆಯ್ಕೆ ಮಾಡಲು ಸಾಧ್ಯವಾಗದೇ ಹೋದ ವೆಂಕಟಶಾಮಿ ನಾಳೆಯಾದರೂ ಹೇಗಿರಬೇಕು ಎಂಬುದನ್ನು ಸೂಚಿಸುತ್ತಿರುತ್ತಾನೆ. ಇಂದು ಸಾರಿಪುತ್ರನಾಗಿರುವ ನರಸಿಂಹ ತನ್ನ ಹಿಂದಿನ ಬದುಕಿನ ಅಗ್ರಹಾರಕ್ಕೆ ಹಿಂತಿರುಗಿದಾಗ ತಾನು ಬುದ್ಧನ ಹತ್ತಿರ ಇದ್ದು ಏನೇನನ್ನು 'ತಿಳಿವಿ'ನಮಟ್ಟದಲ್ಲಿ ಕಂಡಿದ್ದನೋ ಅದೆಲ್ಲವನ್ನು ಬದುಕಿನಲ್ಲಾಗಲೇ ಅರ್ಥೈಸಿಕೊಂಡು ಬದುಕಿರುವ ಅವನ ಹೆಂಡತಿಯೊಡಗೂಡಿ ಭವಿಷ್ಯದೆಡೆಗೆ ಹೊರಡುತ್ತಾನೆ. ಮಂತ್ರೋದಯದ ಋಷಿಗೆ ಸಾವಿನ ಹಿಂದಿನ ಕ್ಷಣದಲ್ಲಿ ನಾಳೆಗೆ ಸೇರುವ, ತಾನು ಸೇರಿಸಬೇಕಾದುದರ ಬಗ್ಗೆ ತವಕವಿದೆ. ಇಷ್ಟು ಹೇಳಿದ ತಕ್ಷಣವೇ ಮಾಸ್ತಿಯ ಕಥಾಲೋಕದ ಇನ್ನೊಂದು ಆಶಯವು ನಮಗೆ ಗೊತ್ತಿಲ್ಲದಂತೆ ಬಂದು ಸೇರಿಕೊಳ್ಳುತ್ತದೆ. ಅವರ ಬಹುಪಾಲು ಮನುಷ್ಯರು ಸಮಾಜದೊಳಗೇ ಮುಕ್ತಿ ಹುಡುಕಲು, ಮುಕ್ತಿ ಪಡೆಯಲು ಯತ್ನಿಸಿದರು. ವ್ಯಕ್ತಿಯಾಗಿ ತಾವು ಕಂಡದ್ದು ತಾವು ಪಡೆದದ್ದು ಒಟ್ಟು ಸಮಾಜದೊಡನೆ ತಮ್ಮನ್ನು ಇನ್ನು ಅರ್ಥಪೂರ್ಣವಾಗಿ ಬೆಸೆಯುವದಕ್ಕೆ ಮಾತ್ರವೇ ಎಂದು ತಿಳಿದವರು. ಮತ್ತೆ ಈ ಮಾತಿಗೂ ಕೂಡ ಅದೇ ಉದಾಹರಣೆಗಳನ್ನು ಕೊಡಬೇಕು– ವೆಂಕಟಿಗ, ಮಂತ್ರೋದಯದ ಋಷಿ, ಯುಗಪುರುಷ ಶ್ರೀಕೃಷ್ಣ, ಗೌತಮಿ, ಶಕುಂತಲೆ, ಎಲ್ಲರೂ ಹೀಗೆಯೇ.

ಈ ಪೀಠಿಕೆಯಿಂದ ಮಾಸ್ತಿ ಕಥೆಗಳ ಒಟ್ಟು ಆಶಯವನ್ನು ಕುರಿತು ಮಾತ್ರ ನಾನು ಹೇಳುತ್ತಿರುವಂತೆ ಭಾಸವಾಗಬಹುದು. ಈಗ ಹೇಳಿದ್ದೆಲ್ಲವೂ ಇನ್ನೂ ವಿಸ್ತೃತವಾದ, ಅರ್ಥಪೂರ್ಣವಾದ ರೂಪದಲ್ಲಿ, ಅವರು ಕತೆ ಹೇಳುವ ರೀತಿಯಲ್ಲಿ , ತಾವು ಬದುಕಿದ ಕಾಲದ

ಬಗ್ಗೆ ತಳೆಯುವ ನಿಲುವಿನಲ್ಲಿ ಮತ್ತು ಅದರ ಚರಿತ್ರೆಯ ಹಾಗೂ ಮನುಷ್ಯನ ಕಲ್ಪನೆಯಲ್ಲಿಯೇ ಹೇಗೆ ವ್ಯಕ್ತವಾಗಿದೆ ಎಂಬುದನ್ನು ನಾವು ನೋಡಬೇಕು. ಈಗ ಹೇಳುತ್ತಿರುವ ರೀತಿಯಲ್ಲಿ ಇವುಗಳೆಲ್ಲ ಬೇರೆ ಬೇರೆ ಸಂಗತಿಗಳಲ್ಲ. ಒಂದರೊಡನೊಂದು ಬೆರೆತಿವೆ. ಒಂದನ್ನು ಹೇಳುವ ಮಧ್ಯದಲ್ಲಿಯೇ ಮತ್ತೊಂದು ಬಂದು ಸೇರಿಕೊಳ್ಳುತ್ತದೆ. ಮಾಸ್ತಿಯ ಕತೆಗಳಲ್ಲಿ ಉಪಕತೆಗಳು ಬಂದು ಸೇರಿಕೊಳ್ಳುವ ಹಾಗೆ. ಉಪಕತೆಯೇ ಕತೆಗಿಂತ ಮುಖ್ಯವಾಗುವ ಹಾಗೆ.

೨

ಮೊದಲು ಅವರು ಕತೆ ಹೇಳುವ ರೀತಿಯನ್ನು ತೆಗೆದುಕೊಳ್ಳೋಣ. ಲೇಖಕನೊಬ್ಬನ ತಾತ್ವಿಕತೆ, ಜೀವನ ದೃಷ್ಟಿ ಎಲ್ಲಕ್ಕಿಂತ ಮುಖ್ಯವಾಗಿ ವ್ಯಕ್ತವಾಗುವುದು ಅವನು ಕತೆ ಹೇಳುವ ರೀತಿಯಲ್ಲಿ ಮತ್ತು ಅದಕ್ಕಿರುವ ಉದ್ದೇಶದಲ್ಲಿ. ಮಾಸ್ತಿ ಕತೆ ಹೇಳುವವರೂ ಅಲ್ಲ– ಹಿಂದಿನ ಪುರಾಣಿಕರುಗಳಂತೆ; ಕತೆ ಕಟ್ಟುವವರೂ ಅಲ್ಲ, ಅವರ ಮುಂದೆ ಬಂದ ನಮ್ಮರಂತೆ. ಅವರು ಕತೆಯನ್ನು ದಾಟಿಸುವವರು, ಒಪ್ಪಿಸುವವರು : "ತಾತ ಹೇಳುವ ಕತೆಗೆ ಮೊಮ್ಮಗ ಶ್ಯಾಮಣ್ಣ ಇನ್ನೊಂದೆರಡು ಮಾತನ್ನು ಈಗ ಸೇರಿಸುತ್ತಾನೆ''. ಕತೆ ಓದುವ ನಿಮ್ಮ ಕರ್ತವ್ಯವಾದರೂ ಕೂಡ ಅದನ್ನು ಓದುವದು ಮಾತ್ರವಲ್ಲ, ಮುಂದಕ್ಕೆ ದಾಟಿಸುವುದು. ಅನೇಕ ಕತೆಗಳ ಕೊನೆಯಲ್ಲಿ ಮಾಸ್ತಿಯೇ ಇದನ್ನು ಸೂಚಿಸಿಬಿಡುತ್ತಾರೆ. ಈ 'ಕತೆ ದಾಟಿಸುವ' ಗುಣಕ್ಕೆ ಪುರಾವೆಯನ್ನು ಅವರ ಕತೆಗಳ ವಿವರಣೆಯ ಸ್ವರೂಪದಿಂದಲೇ ಹುಡುಕಬಹುದು. ಅವರೇನು ನಮಗೆ ಚಿತ್ರವತ್ತಾದ ವಿವರಗಳನ್ನು ಕೊಡುವುದಿಲ್ಲ. ವಿಶೇಷ ಎನ್ನುವಂತಹ ವರ್ಣನೆಯೂ ಇರುವುದಿಲ್ಲ. ಅವರ ಕತೆಗಳ ವಿವರ ಬರುವದು ಸಾರ ಸಂಗ್ರಹ ರೂಪದಲ್ಲಿ – ಸಾರಾಂಶದಲ್ಲಿ, ಒಮ್ಮೊಮ್ಮೆ ವಿಶ್ಲೇಷಣೆಯಲ್ಲಿ. ಕತೆಯನ್ನು ನಾವು ಇನ್ನೊಬ್ಬರಿಗೆ ಹೇಳುವಾಗ, ಇನ್ನೊಬ್ಬರು ಹೇಳಿದ್ದನ್ನು ಕೇಳಿಸಿಕೊಳ್ಳುವಾಗ ನಮ್ಮಗಳ ಮನಸ್ಸಿನಲ್ಲಿ ವಿವರಗಳು ದಾಖಲಾಗುವ ಸ್ವರೂಪವೇ ಇದು. ಕತೆಯ ಪಠ್ಯವನ್ನು ನಮ್ಮೆದುರಿಗೆ ಇಟ್ಟುಕೊಂಡು ಹಿಂದೆ ಮುಂದೆಲ್ಲ ಮಾಡಿಕೊಂಡು ಓದುವಾಗ ನಮ್ಮ ಮನಸ್ಸು ಬಯಸುವ, ದಾಖಲಿಸಿಕೊಳ್ಳುವ ವಿವರಗಳು ಮಾಸ್ತಿ ಕತೆಗಳಲ್ಲಿ ಸಿಗುವುದಿಲ್ಲ. ಲೋಕಾಭಿರಾಮವಾಗಿ ಮಾತಾಡಿ, ಆಯಿತು ಇನ್ನು ಮುಗಿಯಿತು ಎನ್ನುವ ನಿರಾಳದ ಶೈಲಿಯಲ್ಲಿ ಮಾಸ್ತಿ ಹೊರಟು ಬಿಡುತ್ತಾರೆ. ಅವರ ಮಾತಿನಲ್ಲಿಯೇ ಹೇಳುವುದಾದರೆ "ಮಾತು ಮನುಷ್ಯನ ಉಪನಿಷತ್ತು, ಲೋಕ ಈಶನ ಉಪನಿಷತ್ತು''.

ಹೀಗೆ ಕತೆಗಳನ್ನು ದಾಟಿಸುವಾಗ ಮಾಸ್ತಿ ಅನುಭವದ ಆಯ್ಕೆಯಲ್ಲಿ ಅವರ ದೃಷ್ಟಿಕೋನವನ್ನು ಹೇರುತ್ತಾರೆಯೋ? ಅನುಭವವನ್ನು ಆಯುವುದರಲ್ಲಿ ತಾರತಮ್ಯ ಮಾಡುತ್ತಾರೆಯೋ ? ಇದನ್ನು ಕೂಡ ನಾವು ನೋಡಬೇಕು. ನೀವು ಕತೆ ಬರೆಯುವುದಾದರೆ, ಕಟ್ಟುವುದಾದರೆ, ಶಿಲ್ಪಿಸುವುದಾದರೆ ನೀವೇ ನಿಮ್ಮ ಅನುಭವದಲ್ಲಿ, ಕಲ್ಪನೆಯಲ್ಲಿ ಪಡೆದದ್ದೆಷ್ಟು ಬರೆಯುವಾಗಲೇ ವಿಸ್ತರಿಸಿಕೊಂಡದ್ದೆಷ್ಟು ಅದರಲ್ಲಿರುವ ಅಥೆಂಟಿಸಿಟಿಯೆಷ್ಟು ಎಂಬೆಲ್ಲ ಪ್ರಶ್ನೆಗಳು ಏಳುತ್ತವೆ. ಈ ರೀತಿಯ ಪ್ರಶ್ನೆಗಳನ್ನು ಪ್ರಾಮಾಣಿಕವಾಗಿ ಎದುರಿಸಿಯೂ ನೀವು ಬರೆಯಬಹುದಾದ ಕತೆಗಳ ಪ್ರಪಂಚದ ವ್ಯಾಪ್ತಿ, ವೈವಿಧ್ಯ ಎರಡೂ ಬಹು ಸೀಮಿತವಾಗಿರುತ್ತವೆ.

ನೀವು ಕತೆಯನ್ನು ದಾಟಿಸುವುದಾದರೆ ನಿಮ್ಮ ಕಥಾ ಪ್ರಪಂಚದ ವೈವಿಧ್ಯ ವ್ಯಾಪ್ತಿ ಎರಡೂ ಹಿಗ್ಗುತ್ತವೆ.

ಹಾಗೆಂದು ಹೇಳಿದಾಕ್ಷಣಕ್ಕೆ ಕತೆ ದಾಟಿಸುವವನು ಅನುಭವವನ್ನು 'ಒಳಗು' ಮಾಡಿಕೊಳ್ಳದೇ ಬರೆಯುತ್ತಾನೆಂಬ ತೀರ್ಮಾನಕ್ಕೆ ನಾವೇನು ಬರಬೇಕಾಗಿಲ್ಲ ಅನ್ನುವುದನ್ನು ಮೊಸರಿನ ಮಂಗಮ್ಮ, ಪಂಡಿತನ ಮರಣ ಶಾಸನ, ಇಂದಿರೆಯೋ ಅಲ್ಲವೋ, ಗೌತಮಿ ಹೇಳಿದ ಕತೆ – ಇಂತಹ ಕತೆಗಳಲ್ಲಿನ ಸಂಕೀರ್ಣ ಮನೋವ್ಯಾಪಾರ ತೋರಿಸಿಕೊಡುತ್ತದೆ. ಕತೆ ದಾಟಿಸುವವನ ಮುಖ್ಯ ಕರ್ತವ್ಯವೆಂದರೆ ಇನ್ನೊಬ್ಬನ 'ಅನುಭವ'ವನ್ನು ನನ್ನ ಅನುಭವದಷ್ಟೇ ತುರ್ತಿನಲ್ಲಿ, ನಿಜದಲ್ಲಿ ನೋಡಿ ಕತೆ ದಾಟಿಸಬೇಕಾಗುವುದು. ಹೀಗೆ ಇನ್ನೊಬ್ಬರ ಅನುಭವವನ್ನು ನನ್ನ ಅನುಭವದಷ್ಟೇ ಒಳಗು ಮಾಡಿಕೊಳ್ಳುವ ಪ್ರಕ್ರಿಯೆ ಕತೆಗಾರನಿಗೆ, ಕಲಾವಿದನಿಗೆ ಮಾತ್ರ ಅನಿವಾರ್ಯವೆಂದು ಮಾಸ್ತಿ ಭಾವಿಸುವುದಿಲ್ಲ. ಅದು ಎಲ್ಲ ಮನುಷ್ಯರ ಮೊದಲ ಕರ್ತವ್ಯ ಎಂದು ಕೂಡ ಅವರು ತಿಳಿದಂತಿದೆ. 'ಗೌತಮಿ ಹೇಳಿದ ಕತೆ'ಯಲ್ಲಿ ಬರುವ ಮಾತುಗಳನ್ನು ಗಮನಿಸಿ : 'ವಿವರಗಳನ್ನು ನೋಡಿದರೆ ಸ್ವಂತವೆಂಬಂತಿದೆ. ಹೇಳುತ್ತಿರುವುದು ಅನ್ಯವೆಂಬಂತಿದೆ.' 'ನೀನು ಹೇಳಿದ್ದು ಚರಿತ್ರೆಯಂತಿಲ್ಲ ಒಂದು ಕತೆಯಂತಿದೆ'. ಅಂದರೆ ಕತೆ ದಾಟಿಸುವುದರಲ್ಲೇ ಮತ್ತೊಬ್ಬರ ಅನುಭವವನ್ನು 'ಒಳಗು' ಮಾಡಿಕೊಳ್ಳುವುದನ್ನು ಕಲಿಯುವುದು ಕೂಡ ನಡೆಯುತ್ತಿರುತ್ತದೆ. ಅನುಭವ 'ಒಳಗು' ಮಾತ್ರ ಆಗುವುದಿಲ್ಲ. 'ಒಳಗಿನ'ದನ್ನು ಮಾಗಿಸುತ್ತಿರುತ್ತದೆ ಕೂಡ. ಅದೇ ಕತೆಯ ಇನ್ನೊಂದು ವಾಕ್ಯ ನೋಡಿ. ' ನಿಮ್ಮ ಬಾಳು ಇಂಥ ನೋವನ್ನು ಕಂಡದ್ದರಿಂದಲೇ ನೀವು ನಮ್ಮ ನೋವಿಗೆ ಹೀಗೆ ಕರಗುತ್ತೀರಿ'.

ನೋವಿಗೆ ನೀವು ಕರಗಲು ಸಿದ್ಧವಿರುವುದಾದರೆ ಮಾತ್ರ ಕತೆಯ ಅನುಭವವನ್ನು, ಆಶಯವನ್ನು ಸಾರಸಂಗ್ರಹವಾಗಿ ಮಾತ್ರವೇ ಹೇಳಿ ಕತೆಯನ್ನು ದಾಟಿಸಬಹುದು. ನೋವಿರುವ ನಿಮಗೆ ನೈತಿಕ ತೀರ್ಪಿನ ಆತುರವಿರುವುದಿಲ್ಲ. ಅನುಭವಗಳ ತರತಮ ಮಾಡುವ ಬುದ್ಧಿಯಿರುವುದಿಲ್ಲ. ಕತೆ ದಾಟಿಸುವ ಧಾವಂತವಿರುವುದಿಲ್ಲ. ಅವರ ಎರಡು ಪಿಶಾಚಿಗಳ ಕತೆಗಳನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ (ವೆಂಕಟರಾಯನ ಪಿಶಾಚ, ಮಲೆನಾಡಿನ ಪಿಶಾಚಿ). ಎರಡೂ ಪಿಶಾಚಿಗಳನ್ನು ಕುರಿತ ಕತೆಗಳೇ. ಒಂದರಲ್ಲಿ ತಮಾಷೆಯಿದೆ, ಅಸಾಂಗತ್ಯದ ಅಂಶ ಇದೆ. ಇನ್ನೊಂದರಲ್ಲಿ ದುರಂತವಿದೆ, ಅಸಹಾಯಕತೆಯಿದೆ. ಎರಡನ್ನೂ ಮಾಸ್ತಿ ಒಂದೇ ರೀತಿಯ ಸಮತೋಲನದಿಂದೆಂಬಂತೆ ನೋಡುತ್ತಾರೆ. ಎರಡೂ ಕತೆಗಳಲ್ಲೂ ಪಿಶಾಚಿಗೆ, ಪಿಶಾಚಿಯ ಕಲ್ಪನೆಗೆ ಪ್ರತಿಕ್ರಿಯಿಸಿದ ಮನುಷ್ಯರು, ಅವರ ಪಡಿಪಾಟಲುಗಳು ಮುಖ್ಯವಾಗುತ್ತವೆಯೇ ಹೊರತು ಪಿಶಾಚಿ ಇದೆಯೋ ಇಲ್ಲವೋ ಎಂಬ ಮಾಸ್ತಿಯವರ ವಿಶ್ಲೇಷಣೆಯಲ್ಲ. ಆ ವಿಶ್ಲೇಷಣೆ ಸಾಧ್ಯವಾಗಿದ್ದರೆ ಎರಡೂ ಕತೆಗಳನ್ನು ಬರೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಬರೆಯಬಹುದಾಗಿದ್ದ ಒಂದೇ ಕತೆಯ ಧ್ವನಿಯು ಬೇರೆಯಾಗಿಬಿಡಬಹುದಿತ್ತು. ನಮ್ಮ ಶಿಕ್ಷಣ, ಹಿನ್ನೆಲೆ, ಸಾಮಾಜಿಕ ಪ್ರಜ್ಞೆ ಇವೆಲ್ಲದರಿಂದ ಪಡೆಯಬಹುದಾದ, ತಿಳಿಯಬಹುದಾದದ್ದಕ್ಕಿಂತ ತೀರಾ ಭಿನ್ನವಾದ ಹಿನ್ನೆಲೆ, ಲೋಕಗಳನ್ನು 'ಒಳಗು' ಮಾಡಿಕೊಳ್ಳುವ ಮಾಸ್ತಿಯವರ ಶಕ್ತಿಯಿಂದಲೇ ನಮಗೆ ಬೈಚೇಗೌಡ, ಉಪನಿಷತ್ ಋಷಿ, ಕುರುಡಿ ಲಕ್ಷ್ಮಮ್ಮ ಎಲ್ಲರೂ ಒಂದೇ ಎತ್ತರದಲ್ಲಿ ಕಾಣುತ್ತಾರೆ.

ಇವರೆಲ್ಲರೂ ಯಾವುದೋ ಕಾಲದಲ್ಲಿ ,ಯಾವುದೋ ಸಂದರ್ಭದಲ್ಲಿ ಪಡೆದಿರಬಹುದಾದ ಅನುಭವ ನಮ್ಮ ಅನುಭವಕ್ಕೂ ನಿಕಷವಾಗುತ್ತದೆ, ನಮ್ಮ ಕನಸಿಗೂ ಬೀಜವಾಗುತ್ತದೆ.

ಹೀಗೆ ಇನ್ನೊಬ್ಬರ ಬದುಕನ್ನು ಇನ್ನೊಂದು ಕಾಲದ ಬದುಕನ್ನು 'ಒಳಗು' ಮಾಡಿಕೊಳ್ಳುವುದು ನಮ್ಮ ಕಾಲದಲ್ಲಿ, ನಮ್ಮ ಸಂಸ್ಕೃತಿಯಲ್ಲಿ ತೀರಾ ಅನಿವಾರ್ಯವಾದ ಸಂಗತಿಯಾಗಿದೆ. ಸಾಹಿತ್ಯವನ್ನು, ಅದರಿಂದ ಬರುವ ತಿಳುವಳಿಕೆಯನ್ನು ಸಂಸ್ಕೃತಿಯ ಬಹು ಮುಖ್ಯ ಭಾಗವೆಂದು ತಿಳಿದಿರುವ ಇವೊತ್ತಿನ ಬಹುತೇಕ ದೇಶಗಳಿಗೆ ಹೋಲಿಸಿದರೆ, ನಮ್ಮ ಇತಿಹಾಸ ಮತ್ತು ಅದರ ನಮ್ಮ ಅನುಭವ ಎರಡೂ ಪುರಾತನವಾದದ್ದು, ವೈವಿಧ್ಯಮಯವಾದುದು. ಇಂತಹ ಒಂದು ಸನ್ನಿವೇಶದಲ್ಲಿ ನಾವು 'ಹಿಂದಿನದರ' ಬಗ್ಗೆ ತಳೆಯಬಹುದಾದ ನಿಲುವು ಅನ್ಯ ಸಮಾಜಗಳ ನಿಲುವಿಗಿಂತ ಭಿನ್ನವೂ, ಸಂಕೀರ್ಣವೂ ಆಗುವುದು ಅನಿವಾರ್ಯ. ನಮ್ಮ ನಂಬಿಕೆಗಳು, ಬದುಕುವ ಶೈಲಿ, ಒಳ ಬದುಕಿನ ವಿವರಗಳು ಇವೆಲ್ಲವೂ ಹಲವು ರೀತಿಯಲ್ಲಿ ಮಾರ್ಪಾಡಾಗಿವೆ, ಆಗುತ್ತಲೇ ಇವೆ, ಪರೀಕ್ಷೆಗೆ ಒಳಗಾಗುತ್ತಲೇ ಇವೆ. ಇಂದಿನ ಅತಿ ಸ್ಥಿತ್ಯಂತರ ಕಾಲದಲ್ಲೂ ನಾವು ಮಾಡಬಹುದಾದ್ದು ಇದೇ ಹೊರತು ಪೂರ್ತಿಯಾಗಿ ಹಿಂದಿನದನ್ನು ತಿರಸ್ಕರಿಸುವುದಲ್ಲ. ನಮ್ಮ ಕಾಲದಲ್ಲಿ ಆಗಬೇಕಾದ/ಮಾಡಬೇಕಾದ ಏರ್ಪಾಡುಗಳಿಗೆ ಮೊದಲ ಹೆಜ್ಜೆಯೆಂದರೆ ನಮ್ಮ ಕಾಲವನ್ನು ಅರ್ಥಮಾಡಿಕೊಳ್ಳುವುದು. ನಮ್ಮ ಕಾಲ ನಮಗೆ ಸರಿಯಾಗಿ ಅರ್ಥವಾಗಬೇಕಾದರೆ ನಮ್ಮ ಹಿಂದಿರುವ ಎಲ್ಲ ಕಾಲದ ಅನುಭವದ ಅರ್ಥವೂ ಸರಿಯಾಗಿಯೇ ಆಗಬೇಕು. ಅಪಾರವಾದ ಐತಿಹಾಸಿಕ ಅನುಭವವಿರುವ ಒಂದು ಸಂಸ್ಕೃತಿಯಲ್ಲಿ ಪ್ರತಿ ಪೀಳಿಗೆಯ ಕೆಲಸವೇನು ಎಂಬದನ್ನು ಮಾಸ್ತಿ ಆಶ್ಚರ್ಯವೆಂಬಂತೆ ಸಾರಿಪುತ್ರನ ಕತೆಯಲ್ಲಿ ಸೂಚಿಸುತ್ತಾರೆ. ಗುರುದೇವ ಬುದ್ಧ ಹೇಳುವ ಮಾತುಗಳನ್ನು ನೋಡಿ : 'ಹಿರಿಯರು ಹೇಳಿದ್ದಂದು ಅದರಂತೆ ಮಾಡುವುದು ಒಳ್ಳೆಯದೇ. ನಮಗೆ ಏನೆಂದು ತೋರುತ್ತದೆ ಎಂದು ನೋಡುವದು ಒಳ್ಳೆಯದೇ. ಹಿರಿಯರು ನಮಗೆ ಹೊರಗಣ ಗುರುಗಳು, ಅವರ ಧ್ವನಿಯನ್ನು ಕೇಳಿ. ಒಳಗೂ ಒಬ್ಬ ಗುರು ಇದ್ದಾನೆ, ಅವನ ಧ್ವನಿಯನ್ನೂ ಕೇಳಿ. ಅವನನ್ನು ಮುಚ್ಚಿಡಬೇಡಿ. ಎರಡೂ ಧ್ವನಿಗಳ ಶೃತಿ ಸೇರಿದಾಗ ತೋರುವ ಸತ್ಯ ನಿಜವಾದ ಸತ್ಯ. ಅದುವರೆಗಿನ ಸತ್ಯ ವೇಷದ ಸತ್ಯ'. ಮಾಸ್ತಿಯವರ ಈ ನಿಲುವು ಅರ್ಥವಾಗಿದ್ದರೆ ಅವರು ಹೊಸ ಮೌಲ್ಯಗಳ ಅನ್ವೇಷಕರಲ್ಲ ಎಂಬ ಎಂ.ಜಿ.ಕೆ. ಯವರ ಮಾತು ಅಂತಹ ತೂಕವುಳ್ಳದ್ದಾಗಿ ಕಾಣುವುದಿಲ್ಲ. ವೆಂಕಟಶಾಮಿಯ ಪ್ರಣಯದ ಸಾಧ್ಯತೆಗಳನ್ನು ಅವನ ಕಾಲದ ಸಮಾಜ ಸಾಧ್ಯ ಮಾಡಿಸದೇ ಹೋದದ್ದರಿಂದಲೇ ಅವನ ಮತ್ತು ಅನ್ಯಜಾತಿಯ ಪ್ರೇಯಸಿಯ ಸಾವು ಅನಿವಾರ್ಯವಾಯಿತೆಂದು ಹೇಳುವ ಕತೆಯಲ್ಲಿ ಪ್ರತಿಪಾದನೆಯಾಗಿರುವುದಾದರೂ ಏನು ? ಹಣ, ದವಲತ್ತಿಗೆ ಮರುಳಾಗಿ ಹೋಗಿದ್ದ; ತಿರುಗ ಗಂಡನ ಜೊತೆಯಿರಲು ಬಂದ ವೆಂಕಟಿಗನ ಹೆಂಡತಿ ಹಳೆ ಮೌಲ್ಯವನ್ನು ಹೇಳುತ್ತಿದ್ದಾಳೆಯೇ? ಪಶ್ಚಿಮದ ಶಿಕ್ಷಣ, ಅಲ್ಲಿನ ಸಾಂಸ್ಕೃತಿಕ ಪರಿಕರಗಳನ್ನು ಅನುಸರಿಸಿ ಮಾಡಿದ ಇಲ್ಲಿನ ಸಮಾಜದ ವಿಶ್ಲೇಷಣೆ ಮಾತ್ರ ಆಧುನಿಕ ಮೌಲ್ಯಗಳ ಶೋಧನೆಯಾಗಿಬಿಡುತ್ತದೆಯೇ? ಮಾಸ್ತಿಯವರಿಗೆ ಒಂದು ಕಾಲದ ಒಂದು ಚಾರಿತ್ರಿಕ ಸನ್ನಿವೇಶದ ಬದುಕಿಗಿಂತ ಮತ್ತೆ ಮತ್ತೆ ಎದುರಾಗುವ ಮನುಷ್ಯನ ಮೂಲಭೂತ ಆಶಯಗಳಿಗೆ ಸಂಬಂಧಪಟ್ಟಂತಹ ಮಾದರಿಗಳನ್ನು ಬೇರೆ ಬೇರೆ ಸನ್ನಿವೇಶದಲ್ಲಿ ಬೇರೆ ಬೇರೆ ಹಿನ್ನಲೆಯಲ್ಲಿ

ಇಟ್ಟು ನೋಡುವುದೇ ಹೆಚ್ಚು ಅರ್ಥಪೂರ್ಣವಾಗಿ ಕಂಡಂತಿದೆ. ಹಾಗಾಗಿ ಇತಿಹಾಸ, ಪುರಾಣ, ವರ್ತಮಾನ ಹೀಗೆ ಭಿನ್ನ ಭಿನ್ನ ಹಿನ್ನಲೆಯ ಕಥಾ ವಸ್ತುವನ್ನು ತೆಗೆದುಕೊಂಡಾಗಲೂ ಅವುಗಳನ್ನು ನಿರ್ವಹಿಸುವ ಕ್ರಮದಲ್ಲಿ ಒಂದೇ ಧೋರಣೆಯಿರುವುದನ್ನು ನಾವು ನೋಡಬಹುದು. ಹೊಸ ಮೌಲ್ಯಗಳ ಅನ್ವೇಷಣೆ ಖಂಡಿತಾ ತಪ್ಪಲ್ಲ. ಆದರೆ ಅದನ್ನು ತನ್ನ ಬರವಣಿಗೆಯ ಮಹತ್ವದ ಉದ್ದೇಶವೆಂದು ತಿಳಿಯದ ಲೇಖಕನ ಬರವಣಿಗೆಗೆ ಅದೊಂದನ್ನೇ ಮಾನದಂಡ ಮಾಡಿಕೊಳ್ಳುವುದು ಅಷ್ಟು ಉಚಿತವಲ್ಲ. ಹಾಗೆಂದಾಕ್ಷಣಕ್ಕೆ ಮಾಸ್ತಿ ಮನುಷ್ಯ ಬದುಕಿನ ಕಾಲಾತೀತ ಆಯಾಮಗಳಿಗೆ ಮಾತ್ರ ಮಹತ್ವ ಕೊಟ್ಟರು, ಸದ್ಯದ ತುರ್ತಿನಲ್ಲಿ ಅದನ್ನು ನೋಡಲಿಲ್ಲ ಎಂದರ್ಥವಲ್ಲ. ಅವರು ಅದನ್ನು ನೋಡಿದ ಬಗೆಯೇ ಬೇರೆ ಆಗಿತ್ತು. ಅದರ ವಿವರಣೆ ಮುಂದೆ ಇದೆ.

ಬದಲಾವಣೆ, ಸ್ಥಿತ್ಯಂತರಗಳಿಗೆ ಅರ್ಥಪೂರ್ಣವಾಗಿ ಪ್ರತಿಕ್ರಿಯಿಸುವುದರ ಜೊತೆಗೆ ಸಾತತ್ಯವೂ ಅನಿವಾರ್ಯ ಎಂದು ಹೇಳುತ್ತಿರುವ ಮಾಸ್ತಿ ಚರಿತ್ರೆ ಮತ್ತು ಮನುಷ್ಯನ ಬಗ್ಗೆ ಬೇರೆಯದೇ ಆದ, ನಮ್ಮ ಹಿನ್ನಲೆಗೇ ವಿಶಿಷ್ಟವಾದ ಕಲ್ಪನೆಯೊಂದನ್ನು ಮಂಡಿಸುತ್ತಿದ್ದಾರೆ.

ಮಾಸ್ತಿ ಮನುಷ್ಯರ ಕತೆಗಳನ್ನು ಚರಿತ್ರೆಯಂತೆಯೂ, ಚರಿತ್ರೆಯನ್ನು ಮನುಷ್ಯರ ಕತೆಗಳಂತೆಯೂ ಹೇಳುತ್ತಾ ಹೋಗುತ್ತಾರೆ. 'ಸಾಮಾನ್ಯವಾಗಿ ಕತೆ ಇಲ್ಲಿಗೆ ಮುಗಿಯಬೇಕು, ಆದರೆ ವೆಂಕಟಿಗನ ಚರಿತ್ರೆ ಈ ವರ್ಷ ಮುಂದುವರೆಯಿತು' ಎನ್ನುವಾಗ, ಗೌತಮಿ ಹೇಳಿದ ಕತೆಯನ್ನು ಕೇಳಿದ ಪ್ರಿಯಂವದೆ 'ಅಜ್ಜಿ ನೀನು ಹೇಳಿದ್ದು ಚರಿತ್ರೆಯಂತಿಲ್ಲ ಒಂದು ಕತೆಯಂತಿದೆಯಲ್ಲ' ಎನ್ನುವಾಗ, ಅಂಗ್ಲ ಶಕುಂತಲೆ ಕತೆಯಲ್ಲಿ, 'ಶಕುಂತಲೆ ಕತೆಯಲ್ಲಿ ದುಷ್ಯಂತನ ಅಪ್ಪ ಇರಲಿಲ್ಲ. ದುರ್ದೈವ. ದುಷ್ಯಂತ ಮಾತ್ರ ಇದ್ದು ಅವಳ ಮಾತನ್ನು ಒಪ್ಪಲಿಲ್ಲ. ಚೆನ್ನಿಯ ಸುದೈವ. ಇಲ್ಲಿ ದುಷ್ಯಂತ ಇರಲಿಲ್ಲ. ಅವನ ಅಪ್ಪ ಇದ್ದ. ಮಗು ತನ್ನ ಮೊಮ್ಮಗ ಎಂದು ಒಪ್ಪಿಕೊಂಡ' ಅನ್ನುವ ಮಾತುಗಳಲ್ಲಿ, ಕುಚೇಲನ ಮರಿಮಗದಂತಹ ಕತೆಯಲ್ಲಿ ಒಂದೇ ವಸ್ತುವಿಗೆ ಏಕಕಾಲದಲ್ಲಿ ಚರಿತ್ರೆ ಮತ್ತು ಕತೆಯ ಸಾಧ್ಯತೆ ಇರುವುದನ್ನು ತೋರಿಸಿಕೊಡುವಲ್ಲಿ ಮಾಸ್ತಿಯವರ ನಿಲುವು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಅವರಿಗೆ ಕತೆಯೆಂದರೆ ವರ್ತಮಾನದ ಘಟನಾವಳಿ ಮಾತ್ರವಲ್ಲ. ಅದು ಇದುವರೆಗೆ ನಡೆದುಕೊಂಡು ಬಂದಿರುವ ಮನುಷ್ಯ ಸ್ವಭಾವದ ಬಗ್ಗೆ, ನಡಾವಳಿಯ ಬಗ್ಗೆ ಒಂದು ವ್ಯಾಖ್ಯಾನ. ಹೆಣ್ಣನ್ನು ಈ ಸಮಾಜ ಹೇಗೆ ನಡೆಸಿಕೊಂಡು ಬಂದಿದೆ ಎನ್ನುವುದು ಮಾಸ್ತಿಕತೆಗಳಲ್ಲಿ ಮತ್ತೆ ಮತ್ತೆ ಬರುವ ಪ್ರಶ್ನೆ. ಅವರ ಚಿಕ್ಕಮ್ಮ, ಚೆನ್ನಮ್ಮ, ರಾಜಮ್ಮ, ಗೌತಮಿ, ಆಚಾರ್ಯರ ಪತ್ನಿ, ಪುತ್ರಕಾಮೇಷ್ಟಿ ಕತೆಯ ಗೃಹಿಣಿ ಎಲ್ಲರಿಗೂ ಇರುವ ಒಂದೇ ಒಂದು ಆಯ್ಕೆ ಎಂದರೆ ಆತ್ಮನಾಶದ್ದು. ಅವರ ಆತ್ಮನಾಶದ ಪ್ರತಿಯೊಂದು ಕತೆಯೂ, ಇಲ್ಲಿಯ ಸಮಾಜ– ಸಂಸ್ಕೃತಿ ಹೆಣ್ಣಿನ ಬಗ್ಗೆ ರೂಪಿಸಿದ ನಡಾವಳಿಯ, ಧೋರಣೆಯ ವ್ಯಾಖ್ಯಾನ. ಹಾಗಾಗಿ ವರ್ತಮಾನದ್ದೆಂದು ಕಾಣುವ ಅವರ ಕತೆಯ ಬೀಜಗಳಿರುವುದು ಚರಿತ್ರೆಯಲ್ಲಿ, ಅದು ನಡೆದುಕೊಂಡು ಬಂದ ರೀತಿಯಲ್ಲಿ. ಹಾಗೆಯೇ ಚರಿತ್ರೆಯೆಂಬುದು ಹಿಂದೆ ಏನೇನಾಯಿತು ಎಂದು ಹುಡುಕುವ ಸ್ಥೂಲಸ್ವಭಾವದ ದಾಷ್ಟ್ರ್ಯವಾದ ಕೆಲಸವಲ್ಲ. 'ಹಿಂದೆ' ಎಂದು ನಾವು ತಿಳಿದಿರುವಂತಹ

ಕಾಲದಲ್ಲೂ ಯಾವ ಯಾವ ರೀತಿಯಲ್ಲಿ ಮನುಷ್ಯರು ಜೀವನ ನಡೆಸಿದರು. ಅವರ ನಿಟ್ಟುಸಿರಿನ ಆಳ–ಅಗಲ ಎಂತಹದು, ಅವೆಲ್ಲವೂ ಸೇರಿ ಹೇಗೆ ಆ ಕಾಲದ ಜೀವನ ಶೈಲಿಯೂ, ಚರಿತ್ರೆಯೂ ಆಯಿತು ಎನ್ನುವುದೇ ಮುಖ್ಯ. ಅದಕ್ಕೇ ನೋಡಿ ಸಾರಿಪುತ್ರನ ಕತೆ ನಾವು ಓದುವಾಗ ಅವನ ಹೆಂಡತಿ ಬದುಕಿದ ರೀತಿ, ಅವಳ ತ್ಯಾಗ, ಸಂಸಾರ ನಿರ್ವಹಣೆ ಇವು ನಮಗೆ ಮುಖ್ಯವೆನ್ನಿಸುವಂತೆ ಮಾಸ್ತಿ ನೋಡಿಕೊಳ್ಳುತ್ತಾರೆ. ಶ್ರೀಕೃಷ್ಣನ ಹಿರಿಮೆ, ಔದಾರ್ಯ ಹೇಳುತ್ತಲೇ ರುಕ್ಮಿಣಿಯ ತಿಳುವಳಿಕೆಯನ್ನು, ಕುಚೇಲನ ಆಯ್ಕೆಯ ಘನತೆಯನ್ನು ಹೇಳುತ್ತಾರೆ. ದುಷ್ಯಂತನನ್ನು ಕೂಡಿ ರಾಣಿಯಾದ ಮೇಲೂ ಶಕುಂತಲೆ ತನ್ನ ಹಿಂದಿನ ದಿನಗಳ ನಿಟ್ಟುಸಿರನ್ನು ಮತ್ತೆ ಜ್ಞಾಪಿಸಿಕೊಳ್ಳಲೆಂದೇ ಆಶ್ರಮಕ್ಕೆ ಬರುತ್ತಾಳೆ. ಇತಿಹಾಸದ ಪುಟಗಳಿಂದ ಆಯ್ದಂತೆ ಕಾಣುವ ಗೌತಮಿಯ ಕತೆಯ ಸಂತಾಪದ ಬಿಸಿಯುಸಿರಿಗೆ ಇದೀಗ ತಾನೇ ಮದುವೆಯಾಗುವ/ ಆಗಿರುವ ಹುಡುಗಿಯರಿಗೆ ತಿಳುವಳಿಕೆ ನೀಡುವ ಶಕ್ತಿಯಿದೆ. ಇತಿಹಾಸದಿಂದ, ಭೂತದಿಂದ ಆಯ್ಕೆ ಮಾಡಿಕೊಳ್ಳಬೇಕು ಎಂದು ಹೇಳಿದವರಲ್ಲಿ ನಿರ್ದಿಷ್ಟ ಕಾಲಖಂಡದ ಪರ ವಾದಿಸಿದವರಿದ್ದಾರೆ; ನಿರ್ದಿಷ್ಟ ಮೌಲ್ಯಗಳ, ಸಾಮಾಜಿಕ ರಚನೆಗಳ ವಕ್ತಾರರಿದ್ದಾರೆ. ಆದರೆ ಇತಿಹಾಸದಿಂದ ಇವೊತ್ತಿನ ಮನುಷ್ಯನ ತಿಳುವಳಿಕೆಗೆ, ಸ್ವಭಾವಕ್ಕೆ ಏನು ಪಡೆಯಬೇಕೆಂಬುದನ್ನು ತಮ್ಮ ಬರವಣಿಗೆಯುದ್ದಕ್ಕೂ ಯೋಚಿಸಿದವರು ಮಾಸ್ತಿಯೊಬ್ಬರೇ ಎಂದು ಅನ್ನಿಸುತ್ತದೆ.

ಎಲ್ಲವನ್ನೂ ಮನುಷ್ಯ ಚರಿತ್ರೆಯ ವಾಕ್ಯಗಳಾಗಿ, ಪ್ಯಾರಾಗಳಾಗಿ ನೋಡಲು ಸಿದ್ಧರಿದ್ದ ಮಾಸ್ತಿಯವರಿಗೆ ಬ್ರಿಟೀಷರ ಆಗಮನ, ಇಂಗ್ಲೀಷ್ ಶಿಕ್ಷಣ–ಸಂಸ್ಕೃತಿ, ವಸಾಹತುಶಾಹಿಯ ಪ್ರಭಾವ, ಅವರ ಸಮಕಾಲೀನರನ್ನು ಕಾಡಿಸಿದಷ್ಟು ಕಾಡಲಿಲ್ಲ. ಮನುಷ್ಯ ಚರಿತ್ರೆಯ ಬಗೆಗಿರುವ ಅವರ ಆಸ್ಥೆ, ಅವನ ಚರಿತ್ರೆಯ ಕತೆಯನ್ನು ತಿಳಿಯುವ ಕುತೂಹಲ ಮಾತ್ರವಾಗಿರದೆ ಅವನ ಆತ್ಮಸ್ಥೈರ್ಯ ಮತ್ತು ಶಕ್ತಿಯನ್ನು ಕೂಡ ಪರಿಚಯ ಮಾಡಿಕೊಟ್ಟಿತ್ತು; ಮತ್ತು ಮನುಷ್ಯನ ಈ ಶಕ್ತಿಯೇ ಇತಿಹಾಸದಲ್ಲಿ ಶಾಶ್ವತವಾದ ಅಂಶ ಎಂಬುದು ಕೂಡ ಅವರಿಗೆ ತಿಳಿದಿತ್ತು. ಮಸುಮತ್ತಿ ಕತೆಯಲ್ಲಿ ಅಪೂರ್ಣ ಚಿತ್ರವನ್ನು ಪೂರ್ತಿ ಮಾಡಲು ಎಂದಾದರೂ ಸಮುದಾಯದೊಳಗಿಂದಲೇ ಬರುವ ಕಲಾವಿದನಿಗಾಗಿ ಕಾಯುವುದರಲ್ಲಿ ಒಂದು ರೀತಿಯ ಆತ್ಮವಿಶ್ವಾಸವಿದೆ. ಸಂಜೀವನ ಸ್ವಪ್ನ ಕತೆಯಲ್ಲಿ ಅನ್ಯಸಂಸ್ಕೃತಿಯ ಪ್ರವೇಶ, ಬದಲಾವಣೆಗಳಿಂದಾಗಿ ಉಂಟಾಗುವ ಮನಸ್ಸಿನ ಒಳವ್ಯಾಪಾರಗಳನ್ನು ನೋಡುವ ದೃಷ್ಟಿ ಬರೀ ಆತಂಕದ್ದಲ್ಲ, ಭಯದ್ದಲ್ಲ; ಅಲ್ಲಿ ತಿಳಿಹಾಸ್ಯ, ತಮಾಷೆ ಕೂಡ ಸೇರಿಕೊಂಡಿವೆ. ಇಡೀ ಕತೆಯನ್ನು ನೀವು ಅನ್ಯ ಸಂಸ್ಕೃತಿಗೆ ಬಂದ/ಉಂಟಾದ ಪ್ರತಿಕ್ರಿಯೆಯಾಗಿ ಮಾತ್ರವೇ ಓದಕೂಡದೆಂಬಂತೆ ಸೂಚಿಸುವ ವಿವರಗಳು, ಘಟನೆಗಳು ಇವೆ. (ಹೆಂಡತಿಯೇ ಅವನ ಜುಟ್ಟು ಹಿಡಿದಿರುವುದು, ಇತ್ಯಾದಿ) ಇದೆಲ್ಲಕ್ಕಿಂತ ಮಿಗಿಲಾಗಿ ಕಾಲಾನುಕ್ರಮದಲ್ಲಿ ಸಂಜೀವನೇ ಇಂತಹ ಅನುಭವವನ್ನೆಲ್ಲ ಪ್ರಬುದ್ಧ ತಿಳುವಳಿಕೆಯಿಂದಲೂ ನೋಡಬಲ್ಲ ಎಂಬುದನ್ನು ಕೂಡ ಕತೆಯ ಅಂತ್ಯ ಸೂಚಿಸುತ್ತದೆ. ಕತೆಯ ಕೊನೆಯಲ್ಲಿ ಬರುವ ಇರಬಹುದು, ಅಲ್ಲವೆನ್ನುವುದು ಹ್ಯಾಗೆ, ಅಲ್ಲದೇ ಇರಬಹುದು, ಹೌದು ಎನ್ನುವುದು ಹೇಗೆ ಎನ್ನುವ ಮಾತಿನಲ್ಲಿ / ಅನುಮಾನದಲ್ಲಿ ಅವನು ಪಡೆದ/ಪಡೆಯುತ್ತಿರುವ ತಿಳುವಳಿಕೆಯ ಬೀಜ ಸ್ವರೂಪ ಕಾಣಿಸುತ್ತದೆ. ಹೊಸ ಶಿಕ್ಷಣ, ಹೊಸ ನಾಗರೀಕತೆ, ಗಂಡು ಹೆಣ್ಣಿನ ಪ್ರಣಯಾಕಾಂಕ್ಷೆಯಲ್ಲಿ – ಅದರ ಅಭಿವ್ಯಕ್ತಿಯಲ್ಲಿ ಹೊಸ

ಸ್ವರೂಪವನ್ನು ಪಡೆಯಲು ಪ್ರೇರೇಪಿಸುತ್ತದೆ. ಇದನ್ನೆಲ್ಲ ವಸ್ತುವಾಗುಳ್ಳ ಕತೆಗಳನ್ನು ನೋಡಿ. ಮದುವೆ ಕೋರ್ಟ್‌ಶಿಪ್, ದೀಪಾವಳಿ – ಇಂತಹ ಯಾವ ಕತೆಗಳಲ್ಲೂ ನಿರೂಪಣೆಯಲ್ಲಿ ಆತಂಕವಿಲ್ಲ. ಬದಲಾಗಿ ಹಾಸ್ಯವಿದೆ. ತಮಾಷೆಯಿದೆ. ಅದು ಹೊಸರೀತಿಯ ಬದುಕನ್ನು ಲೇವಡಿ ಮಾಡುವುದರಿಂದ ಬಂದ ಹಾಸ್ಯವಲ್ಲ. ಇಂತಹದನ್ನೆಲ್ಲ ಹಿಂದೆ ಇದೇ ಮನುಷ್ಯ ಎದುರಿಸಿದ್ದಾನೆ, ನಾಳೆಯೂ ಇವನೇ ಎದುರಿಸುತ್ತಾನೆ, ಸುಮ್ಮನೆ ಈಗ ಅನಗತ್ಯ ಮೈ ಪರಚಿಕೊಳ್ಳುತ್ತಿದ್ದಾನಲ್ಲ ಎನ್ನುವ ಪ್ರೀತಿಯಿಂದ ಹುಟ್ಟಿದ ಹಾಸ್ಯವಿದು. ಅಥವಾ ಹೊಸ ವಿಚಾರ, ಹೊಸ ಸಂಸ್ಕೃತಿ ಇವುಗಳೆಲ್ಲ ತಳಬುಡವಿಲ್ಲದೆ ಇಲ್ಲಿ ಪ್ರವೇಶಿಸಿದಾಗ ಉಂಟಾಗುವ/ ನಿರ್ಮಾಣವಾಗುವ ವಿಪರ್ಯಾಸದ ಸನ್ನಿವೇಶಗಳ ಹಾಸ್ಯವೂ ಇದೆ.

ಮಾಸ್ತಿಯ ಸಮಕಾಲೀನರ ಬರವಣಿಗೆಗಳಲ್ಲಿ ವ್ಯಕ್ತವಾಗುವ ಹಾಗೆ ಹೊಸ ಶಿಕ್ಷಣ, ಹೊಸ ಸಂಸ್ಕೃತಿ ಇವುಗಳಿಂದಾಗಿ ನಮ್ಮಲ್ಲಿ, ನಮ್ಮ ಬರಹಗಾರರಲ್ಲಿ ನಿಜಕ್ಕೂ ಒಂದು ರೀತಿಯ ಆತಂಕ ಮೂಡಿತ್ತು. ಆ ಆತಂಕದಿಂದಾಗಿಯೇ ಕೆಲವು ಲೇಖಕರಾದರೂ ಇಲ್ಲಿನ ಬದುಕಿನ ಶೈಲಿಯನ್ನು ಉತ್ಪ್ರೇಕ್ಷಿಸಿ ಐತಿಹಾಸಿಕ ಕಾದಂಬರಿಗಳನ್ನು ಬರೆದರು. ಇನ್ನು ಕೆಲವರಿಗೆ ರಾಮಕೃಷ್ಣ, ವಿವೇಕಾನಂದ, ಅರಬಿಂದೋ, ಇವರೆಲ್ಲರ ಮೂಲಕ ಇಲ್ಲಿನ ಬದುಕಿನಲ್ಲಿ ಇಲ್ಲದ ಉದಾತ್ತತೆಯನ್ನು, ಶ್ರೇಷ್ಠತೆಯನ್ನು ಕಾಣುವುದು, ಇತಿಹಾಸದಲ್ಲಿ ಭರತಮಾತೆಯನ್ನು ವಿಜೃಂಭಿಸುವುದು ಅನಿವಾರ್ಯವಾಗಿ ಕಂಡಿತು. ಕೆಲವರಿಗೆ ಪ್ರಕೃತಿಯ ಆರಾಧನೆ ಆಪ್ಯಾಯಮಾನವಾಗಿ ಕಾಣಿಸಿತು. ನಮ್ಮ ಸಂಸ್ಕೃತಿಯ ಬೆನ್ನೆಲುಬಾಗಿದ್ದ ಅಪಾರವಾದ ಐತಿಹಾಸಿಕ, ಸಾಂಸ್ಕೃತಿಕ ಅನುಭವದ ಮೊತ್ತದ ಪರಿಚಯವಿದ್ದ ಮಾಸ್ತಿ ಇಂತಹ ಅಪಾಯಗಳಿಂದ ತಪ್ಪಿಸಿಕೊಂಡರು. ಅವರ ಐತಿಹಾಸಿಕ ಕಾದಂಬರಿಯಾದ 'ಚಿಕವೀರ'ದಲ್ಲೂ ಇವನು ಹೀಗಾದನಲ್ಲ, ಇವನಿಂದ ಕೊಡಗಿಗೆ ಹೀಗಾಯಿತಲ್ಲ ಎಂಬ ಆತಂಕ ಹೆಚ್ಚಾಗಿದೆಯೇ ಹೊರತು ಕೊಡಗಿನ ರಾಜಕೀಯ ಹೆಜ್ಜೆಗಳು ಮಾತ್ರವೇ ಅಲ್ಲ. ಇತಿಹಾಸವನ್ನು, ಭೂತವನ್ನು *Notion* ಆಗಿ ಗ್ರಹಿಸಿದವರಿಗೂ ಅದನ್ನು ಇವೊತ್ತಿಗೂ ಪ್ರಸ್ತುತವಿರುವ ಅನುಭವದ ಮೊತ್ತವಾಗಿ ಪರಿಗಣಿಸಿದವರಿಗೂ ಇರುವ ವ್ಯತ್ಯಾಸ ಮಾಸ್ತಿ ಕತೆಗಳಿಂದ ಗೊತ್ತಾಗುತ್ತದೆ. ಅದಕ್ಕೆಂದೇ ಮಾಸ್ತಿ ಎಲ್ಲಕ್ಕಿಂತಲೂ ಮುಖ್ಯವಾಗಿ ದೇಶದ ಬಗ್ಗೆ, ದೇಶದ ಅಖಂಡತೆಯ ಬಗ್ಗೆ, ಭಾರತಮಾತೆಯ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳಲು ಹೋಗಲೇ ಇಲ್ಲ. ನಮ್ಮ ಊರಿನಲ್ಲಿ ಏನಾಯಿತು, ನಮ್ಮ ಬೀದಿಯಲ್ಲಿ ಏನಾಯಿತು, ಅವಳು ನಮ್ಮ ಸೀಮೆಯಲ್ಲೇ ಚೆಲುವೆಯಲ್ಲವೇ, ನಮ್ಮ ಸುತ್ತಲಿಗೆ ಅವರು ತುಂಬಾ ಬೇಕಾಗಿದ್ದವರಲ್ಲವೇ, ಇಂತಹ ಪ್ರಶ್ನೆಗಳೇ ಅವರಿಗೆ ಬಹುಮುಖ್ಯವಾದವು. ಅವರ ಪಾತ್ರಗಳ ಯಾದಿಯನ್ನೇ ನೋಡಿ: ಮೇಲೂರಿನ ಲಕ್ಷಮ್ಮ, ಹಾದಾರದ ರಾಜಮ್ಮ, ಪೆನುಕೊಂಡೆಯ ಕೃಷ್ಣಮೂರ್ತಿ, ನಿಜಗಲ್ಲಿನ ರಾಣಿ, ರಂಗನಹಳ್ಳಿಯ ರಾಮ, ಹೊಸಹಳ್ಳಿಯ ರಂಗ, ಹೀಗೆ. ಅಷ್ಟೆ ಏಕೆ, ಮಾಸ್ತಿ ಹೇಳುತ್ತಾರೆ : 'ಒಂದೊಂದು ಊರಿಗೂ ಒಂದೊಂದು ಪಿಶಾಚಿ. ಒಂದೊಂದರದೂ ಒಂದೊಂದು ದಾರಿ'. ಮುನೇಶ್ವರನ ಮರದ ಕತೆಯ ಪ್ರಾರಂಭದಲ್ಲಿ ಅವರು ಕೊಡುವ ಹಳ್ಳಿಯ ವಿವರಗಳು ಕತೆಯೊಂದಕ್ಕೆ ಅಗತ್ಯವಾದ ವಿವರಗಳಿಗಿಂತಲೂ ಹೆಚ್ಚಾಗಿ ಆಕಸ್ಮಾತ್ ನೀವು ಊರಿಗೆ ಹೋಗುವುದಾದರೆ ಏನೇನು ಗುರುತು ಹಿಡಿದು ಹೋಗಬೇಕು ಎಂಬ ಸೂಚನೆಗಳ ಯಾದಿಯಂತಿದೆ. ಅವರ ಮೊದಲ ಕತೆ ರಂಗನ ಮದುವೆಯಲ್ಲೇ ಈ ಮಾತು ಬರುತ್ತದೆ–

'ನಮ್ಮೂರು ಹೊಸಹಳ್ಳಿ, ಅದರ ಹೆಸರನ್ನು ನೀವು ಕೇಳಿರುವಿರಲ್ಲವೆ? ಇಲ್ಲವೆ? ಅಯ್ಯೋಪಾಪ! ಅದು ನಿಮ್ಮದು ತಪ್ಪಲ್ಲ. ಭೂವಿವರಣೆಗಳಲ್ಲಿ ಅದರ ಹೆಸರಿಲ್ಲ. ಇಂಗ್ಲೀಷಿನಲ್ಲಿ ಭೂವಿವರಣೆ ಬರೆಯುವ ಸಾಹೇಬು ಜನಗಳಿಗೆ ಹೊಸಹಳ್ಳಿ ಗೊತ್ತಿಲ್ಲದೆ ಅವರು ಸುಮ್ಮನಿದ್ದರೂ ಇರಬಹುದು. ನಮ್ಮ ಜನರೂ ಭೂವಿವರಣೆ ಬರೆಯುವಾಗ ಹೊಸಹಳ್ಳಿಯ ಹೆಸರನ್ನೇ ಮರೆಯುವರು. ಸರಿ. ಕುರಿ ಹಿಂಡಿನ ಸಮಾಚಾರ .... ಇಂಗ್ಲೇಂಡಿನ ಸಾಹೇಬರೂ ನಮ್ಮ ಗ್ರಂಥಕರ್ತರೂ ಮರೆತಮೇಲೆ ಪಾಪ, ಭೂಪಟ ಬರೆಯುವವನು ಅದನ್ನು ನೆನೆಯುವನೇ? ನಕ್ಷೆಯಲ್ಲಿ ನಮ್ಮೂರಿನ ನೆಲೆಯೇ ಇಲ್ಲ!'

ಭೂಪಟದಲ್ಲಿ ಚುಕ್ಕೆಯಾಗಿ ಕಾಣಿಸಿಕೊಳ್ಳದೇ ಹೋದರೇನು ಅಲ್ಲಿ ಜನರಿಲ್ಲವೆ, ಅವರ ಅನುಭವಗಳಿಲ್ಲವೇ, ಎಂದು ತಮಗೆ ತಾವೇ ಹೇಳಿಕೊಂಡಂತಿರುವ ಮಾಸ್ತಿಯೇನು ಇಲ್ಲಿನ ಜನರ ಬದುಕನ್ನು ಉನ್ನತೀಕರಿಸುವುದಿಲ್ಲ. ಅವರ ಪಾತ್ರಗಳ ಮನುಷ್ಯರ ಕಷ್ಟ ನಿಟ್ಟುಸಿರು ಎಷ್ಟಿದೆಯೆಂದರೆ ಅದರ ಮೂಲಕವೇ ಆ ಕಾಲದ ಸಮಾಜದ ವಿಶ್ಲೇಷಣೆಯೂ ಆಗಿ ಬಿಡುತ್ತದೆ. ಅವರ ಪಾತ್ರಗಳಿಗೆ ವಿಶೇಷವಾದ ಧಾರ್ಷ್ಟ್ಯ – ಧಾರಣಾಶಕ್ತಿ ಇದ್ದು ಜೀವನದ ಬಿಕ್ಕಟ್ಟನ್ನು ಅವು ಎಲ್ಲ ಘನತೆಯೊಡನೆ ಎದುರಿಸಬಲ್ಲವಾಗಿದ್ದವು ಎಂಬುದು ಅವರ ಮೌಲ್ಯ ಶ್ರದ್ಧೆಯನ್ನು ಸೂಚಿಸುವುದರ ಜೊತೆಗೆ ವ್ಯಕ್ತಿ – ಸಮಾಜದ ನಡುವೆ ಹೆಚ್ಚುತ್ತಿದ್ದ ಬಿಕ್ಕಟ್ಟನ್ನು ಮತ್ತು ಸಮಾಜದ ವಿಷಮ ಸ್ಥಿತಿಯನ್ನು ಕೂಡ ಸೂಚಿಸುತ್ತದೆ. ಆದರೆ ಇದನ್ನು ಕೂಡ ಆತಂಕ, ಧಾವಂತ ಇಲ್ಲದ ರೀತಿಯಲ್ಲಿ ಮಾಸ್ತಿ ಹೇಳುತ್ತಾರಲ್ಲ? ನಮ್ಮ ಜೀವನವನ್ನು, ನಮ್ಮ ಕಾಲದ ಜೀವನವನ್ನು, ಇನ್ನೊಂದು ಜೀವನ ಮಾದರಿಯ, ಇನ್ನೊಂದು ಕಾಲದ ಜೀವನ ಮಾದರಿಯ ಹಿನ್ನಲೆಯಲ್ಲಿ ಪ್ರತಿಬಿಂಬವಾಗಿ ನೋಡಬಾರದು, ಬಿಂಬವಾಗಿ ನೋಡಬೇಕು ಎನ್ನುವ ಮಾಸ್ತಿಗೆ, ಪ್ರತಿಬಿಂಬ ನೋಡಲು ಹೊರಟಾಗ ಪ್ರತಿಬಿಂಬವನ್ನು ಚೆನ್ನಾಗಿ ನೋಡಿಕೊಳ್ಳಲು– ಪ್ರತಿಬಿಂಬದಲ್ಲಾದರೂ ಚೆನ್ನಾಗಿ ಕಾಣಿಸಿಕೊಳ್ಳಲು ಇರುವ ಆತಂಕ, ಧಾವಂತ, ಅದರಿಂದ ಬರುವ ನೈಚ್ಯಾನುಸಂಧಾನ ಕೂಡ ತಿಳಿದಿದ್ದಂತೆ ಕಾಣುತ್ತದೆ. ತಮ್ಮೆದುರಿಗಿದ್ದ ಸಮುದಾಯ ಇವೊತ್ತಿಗೂ ಸೇರಿದಂತೆ ಇನ್ಯಾವೊತ್ತಿಗೋ ಕೂಡ ಸೇರಿದುದಾಗಿದ್ದು, ಅದು ಚರಿತ್ರೆಯ ಸವಾಲುಗಳನ್ನು ನಿರ್ವಹಿಸಿ ಹಿಂದಿನದನ್ನು ಪರೀಕ್ಷಿಸುತ್ತಾ, ಪರೀಕ್ಷಿಸಿಯೂ ಸಾತತ್ಯವನ್ನು ಮುಂದುವರೆಸುವ ಅದರ ಸಾಮರ್ಥ್ಯವನ್ನೂ, ಧಾರಣಾಶಕ್ತಿಯನ್ನು ಕಂಡಿದ್ದ ಮಾಸ್ತಿಯವರಿಗೆ ಹೊಸ ಶಿಕ್ಷಣ, ಹೊಸ ದೃಷ್ಟಿಕೋನ ಇವುಗಳ ಹಿನ್ನಲೆಯಲ್ಲಿ ಇಲ್ಲಿನ ಬದುಕನ್ನು ಸಾರಾಸಗಟಾಗಿ, ತಲೆಕೆಳಗು ಮಾಡುವಂತೆ ವಿಶ್ಲೇಷಿಸುವ ಪ್ರಸ್ತುತತೆಯೇ ಕಾಣಲಿಲ್ಲ. ಈ ಮಾತನ್ನು ಒಂದು ಸ್ಪಷ್ಟ ಉದ್ದೇಶದಿಂದಲೇ ಹೇಳಲಾಗಿದೆ.ವೆಂಕಟಿಗ, ಮೊಸರಿನ ಮಂಗಮ್ಮ, ಇಂತಹ ಪಾತ್ರಗಳು ಜೀವನದ ಬಿಕ್ಕಟ್ಟನ್ನು ಎದುರಿಸುವಾಗ ತಳೆಯುವ ನಿಲುವು ತೀರ್ಮಾನಗಳನ್ನು ಬೇರೊಂದು ಶಿಕ್ಷಣ, ಬೇರೊಂದು ದೃಷ್ಟಿಕೋನದ ಹಿನ್ನಲೆಯಲ್ಲಿ ಪರೀಕ್ಷಿಸಿದಾಗ ಅವುಗಳಲ್ಲಿನ ನಾಟಕೀಯತೆಯು, ಅಥೆಂಟಿಸಿಟಿಯ ಅಭಾವವು ಕತೆಗಾರನು ದೃಷ್ಟಿಕೋನವನ್ನು ಹೇರಿರಬಹುದು ಎಂಬ ಅನುಮಾನ ಕಾಣಬಹುದು. ವೆಂಕಟಿಗ ಹೇಳುವ 'ನನ್ನ ಸ್ವಬಾವಕ್ಕೆ ನಾನು ಏನು ಮಾಡುತ್ತಿದ್ದೆನೋ ಅದೇ ಸಾಧ್ಯ' ಎಂಬ ಮಾತಿನಲ್ಲಿ, ಬೇರೆ ಬೇರೆ ದೃಷ್ಟಿಕೊನಗಳನ್ನು ಹೇರಿ ಇಲ್ಲಿಯ ಬದುಕನ್ನು ಪರಿಶೀಲಿಸುವ, ತೀರ್ಮಾನಕೊಡುವ

ರೀತಿಯನ್ನು ಪ್ರಶ್ನಿಸುವ ಧಾರ್ಷ್ಟ್ಯವಿದೆ. ತಾಳಿ ಕಿತ್ತಸೆಯುವ, ಗಂಡನ ಹೆಣವನ್ನು ನೋಡಲು ನಿರಾಕರಿಸುವಷ್ಟು ಪ್ರತಿಭಟನೆಯ ಸಾಮರ್ಥ್ಯವಿರುವ ಚೆನ್ನಮ್ಮನನ್ನು ಮಾಸ್ತಿ ಇಂತಹ ಸಮುದಾಯದೊಳಗಿಂದಲೇ ಚಿತ್ರಿಸಿದ್ದಾರೆ. ಈ ಸಮುದಾಯದ ಇತಿಹಾಸ, ಒಳಮನಸ್ಸು ಎರಡರ ಅರಿವೂ ಇಲ್ಲದವರು ಇಂತಹ ಪ್ರತಿಭಟನೆಯನ್ನೆಲ್ಲ ನಗೆಪಾಟಲಾಗಿ ನೋಡಬಹುದು. ಎಂ.ಜಿ.ಕೆ. ಯವರು ಮಾಸ್ತಿಯವರ ಕತೆಗಳ ಸೀಮಿತ ಯಶಸ್ಸಿನ ಬಗ್ಗೆ ಬರೆದಾಗ ಆ ಕತೆಗಳಲ್ಲಿ ಮೂಡಿರುವ ಸಾಹಿತ್ಯ ವಾತಾವರಣವನ್ನು, ಪಠ್ಯವನ್ನು ಮಾತ್ರ ಗಮನದಲ್ಲಿಟ್ಟುಕೊಂಡಂತೆ ಕಾಣುತ್ತದೆ. ಜೀವನದಲ್ಲಿ ಕಾಣಿಸುವ ಬಿಕ್ಕಟ್ಟು, ಅದನ್ನು ಎದುರಿಸುವ ರೀತಿ, ಕತೆಯೊಳಗೆ ಅದು ನಿರ್ವಹಿಸಬೇಕಾದ ರೀತಿ ಇವುಗಳನ್ನೆಲ್ಲ ಕುರಿತು ಅವರ ಮನಸ್ಸಿನಲ್ಲಿ ಮಾದರಿಯೊಂದು ಇದ್ದು ಅದರ ಅನ್ವಯವನ್ನು ಮಾತ್ರ ಮಾಸ್ತಿ ಕತೆಗಳಲ್ಲಿ ಪರಿಶೀಲಿಸಿದ ಹಾಗೆ ಕಾಣುತ್ತದೆ. ಉದಾಹರಣೆಗೆ ಸಮುದಾಯ ಪ್ರಜ್ಞೆ, ಸಾಮಾಜಿಕತೆ ಎರಡೂ ಢಾಳಾಗಿರುವ ನಮ್ಮಂತಹ ಸಮಾಜದಲ್ಲಿ ವ್ಯಕ್ತಿಯೊಬ್ಬ ಜೀವನದ ಬಿಕ್ಕಟ್ಟನ್ನು ಎದುರಿಸುವ ರೀತಿಗೂ, ಪಶ್ಚಿಮದವನೊಬ್ಬನು ಎದುರಿಸುವ ರೀತಿಗೂ ಬಹಳ ವ್ಯತ್ಯಾಸವಿದೆ. ಎಂ.ಜಿ.ಕೆ. ತಮ್ಮ ವಾದಕ್ಕೆ ಭೂಮಿಕೆಯಾಗಿ ಉದ್ಧರಿಸುವ ರವೀಂದ್ರನಾಥ ಠಾಕೂರರ ಮಾತುಗಳು ಈ ರೀತಿ ಇವೆ :

> *"ನಮ್ಮದು ಮೂಲಭೂತ ಸಂಕಲ್ಪಶೀಲತೆಯೇ ಇಲ್ಲದ, ದೇವರು ಕೈ ಬಿಟ್ಟಿರುವ ದುರದೃಷ್ಟವಂತ ದೇಶ. ಇಲ್ಲಿ ಆಲೋಚಿಸುವ, ಭಾವಿಸುವ, ಸಂಕಲ್ಪಿಸುವ ಶಕ್ತಿಗಳು ಕ್ಷಯಗ್ರಸ್ತವಾಗಿವೆ. ಸ್ತ್ರೀ–ಪುರುಷರೆಲ್ಲರೂ ಬರೀ ತಿನ್ನುವ, ಕುಡಿಯುವ, ಯಾಂತ್ರಿಕವಾಗಿ ಕೆಲಸ ಮಾಡುವ, ಸಿಗರೇಟು ಬೀಡಿ ಸೇದುವ, ನಿದ್ದೆ ಹೊಡೆಯುವ ಹಾಗೂ ಕೊನೆಯಿಲ್ಲದೆ ಕಿಚಗುಟ್ಟುವ ನೆರಳುಗಳಂತೆ ಸುಳಿದಾಡುತ್ತಿದ್ದಾರೆ. ಇಲ್ಲಿ ಪ್ರೌಢ ಹೋರಾಟದ ಮತ್ತು ನಿಜ ಜೀವನದ ತುಂಬು ಅಭಾವವಿದೆ!"*

ಇವು ಠಾಕೂರರ ಮಾತುಗಳಾದರೂ ಅವು ಮುಂದು ಮಾಡುವುದು ಯಾರ ಮಾತನ್ನು, ಯಾರ ದೃಷ್ಟಿಕೋನವನ್ನು ಎಂಬುದನ್ನು ಹೇಳಬೇಕಾಗಿಲ್ಲ. ಎಂ.ಜಿ.ಕೆ., ಮಾಸ್ತಿ ಕತೆಗಳಲ್ಲಿ ಈ ಚಿತ್ರಣವನ್ನು, ಇದರಿಂದ ಮೂಡಿಬರುವ ಸಂಘರ್ಷವನ್ನು ನಿರೀಕ್ಷಿಸಿ ನಿರಾಶೆ ಹೊಂದಿರಬೇಕು. ಆದರೆ ಮಾಸ್ತಿಯ ಬರವಣಿಗೆಯ ಹಿನ್ನೆಲೆಯಲ್ಲಿ ಇಂತಹ ದೃಷ್ಟಿಕೋನವಿಲ್ಲ. ಅವರು ಜೆ. ಎಸ್. ವುಡ್‌ರೋಫ್‌ನ *Shakti and Shakta* ಎಂಬ ಪುಸ್ತಕದಿಂದ ಉದ್ಧರಿಸಿರುವ ಈ ಮಾತುಗಳನ್ನು ನೋಡಿ:

> *'ಏನೇ ಇರಲಿ ಇತರರ ಮಾತನ್ನು ಕೇಳಿ ನಾವು ನಿರ್ಣಯಗಳನ್ನು ತೆಗೆದುಕೊಳ್ಳಬಾರದು. ಹೊರಗಿನ ಜನ ಪಂಡಿತರೇ ಆದರೂ ಈ ದೇಶದ ಸಂಸ್ಥೆ ಸಂಸ್ಕೃತಿಗಳನ್ನು ನಿಷ್ಕಲ್ಮಷವಾದ ದೃಷ್ಟಿಯಿಂದ ನೋಡಲಾರರು .... ಈ (ಇಲ್ಲಿಯ) ಪ್ರತಿಬಿಂಬ ತಾನೊಂದು ಬಿಂಬವಾಗುವುದು ಎಂತು? ಎಂದು? ಪ್ರತಿಬಿಂಬ ಪ್ರತಿಬಿಂಬವಾಗಿಯೇ ಮುಗಿಯುತ್ತದೆ.'*

ಹೊರಗಿನಿಂದ ಬಂದ ಬದಲಾವಣೆಗೆ ಪ್ರತಿಕ್ರಿಯೆ ಮಾತ್ರವೇ ಇಲ್ಲಿ ನಡೆಯುತ್ತಿತ್ತು ಎಂದು ಭಾವಿಸಿ ಆ ಪ್ರತಿಕ್ರಿಯೆಯ ಬಗ್ಗೆ ಮಾತ್ರವೇ ಆತಂಕಪಟ್ಟು ಬರೆದದ್ದಲ್ಲ ಮಾಸ್ತಿಯ ಕತೆಗಳು. ಅಂತಹ ಪ್ರತಿಕ್ರಿಯೆ ಕೂಡ ಇಲ್ಲಿಯ ಜೀವನದ ಒಂದು ಭಾಗ. ಅದನ್ನು ನಿರ್ವಹಿಸುವುದಕ್ಕೆ ಇಲ್ಲಿ ತನ್ನದೇ ಆದ ಇತಿಹಾಸ, ದೃಷ್ಟಿಕೋನವಿದೆ ಎಂದು ಭಾವಿಸಿ ಬರೆದ

ಕತೆಗಳು ಅವು. ಹಾಗಾಗಿಯೇ ಅವರ ಪಾತ್ರಗಳಿಗೆ ಕತೆ ಮಾತ್ರವಿದ್ದು ಕತೆಗಾರ ಅವುಗಳಿಗೆ ದೃಷ್ಟಿಕೋನವನ್ನು ದಾನ ಮಾಡುವುದಿಲ್ಲ. ಬದಲಾಗಿ ಪಾತ್ರಗಳಿಗೆ ಒಂದು ನಿರ್ದಿಷ್ಟವಾದ ತಾತ್ವಿಕತೆಯಿರುತ್ತದೆ. ಅವುಗಳ ಜೀವನದ ಹಿನ್ನೆಲೆಯಲ್ಲಿ ಮೂಡಿ ಬಂದಿರುವ ತಾತ್ವಿಕತೆ ಅದು. ತನ್ನ ಜೀವನದ ಒಂದು ಅನುಭವದ ಹಿನ್ನೆಲೆಯಲ್ಲಿ ಜೋಗ್ಯೋರ ಅಂಜಪ್ಪ ಮಂಡಿಸುವ ನ್ಯಾಯ–ಸಾಕ್ಷ್ಯದ ಪರಿಕಲ್ಪನೆಯನ್ನು ಇದಕ್ಕೆ ಉದಾಹರಣೆಯಾಗಿ ನೋಡಬಹುದು: "ಹೇಳೋ ಅಷ್ಟಕ್ಕೆ ನ್ಯಾಯ ಮಾಡೋದಾದ್ರೆ ನಿಮ್ಮಂಥ ಬುದ್ಧಿವಂತ್ರು ಯಾಕೆ ಬೇಕು!" ಇಲ್ಲಿಯ ತೀರ್ಪು ಕತೆಯಲ್ಲಿ ಬರುವ ಒಡ್ಡರ ಸ್ವಭಾವದ ಚಿತ್ರಣದಲ್ಲೂ ಕೂಡ ಈ ದೃಷ್ಟಿಕೋನವಿದೆ–

> "ಧರ್ಮವು ಬಹಳ ಅನನುಕೂಲಕ್ಕೆ ಕಾರಣವಾಗದಿದ್ದರೆ ಧರ್ಮವನ್ನನುಸರಿಸಿಯೇ ನಡೆಯುವರು. ನಮ್ಮಂತವರ ಧರ್ಮವನ್ನಲ್ಲದಿರಬಹುದು. ಅವರಿಗೆ ತಿಳಿದ ಧರ್ಮವನ್ನು! .... ಆದ್ದರಿಂದ ಸ್ವಜಾತಿ ಪ್ರೇಮವು ಈ ಬೋಯಿಗಳಲ್ಲಿ ಅಸಾಧಾರಣವಾದ ತಪ್ಪೆಂದು ಹೇಳಲಾಗುವುದಿಲ್ಲ. ತಪ್ಪೇ ಆಗಲಿ ಸರಿಯೇ ಆಗಲಿ ಈ ಗುಣವೂ ಮೇಲೆ ನಾನು ಹೇಳಿರುವ ಇತರ ಗುಣಗಳೂ ಈ ಜನಕ್ಕೆ ಸಾಮಾನ್ಯವಾದವುಗಳು. ಮೊತ್ತದಲ್ಲಿ ಈ ಒಡ್ಡರು ಯಾವುದೋ ಒಂದು ಧರ್ಮವನ್ನು, ನೀತಿಯನ್ನು ಒಂದು ರೀತಿಯ ಅಕೃತ್ರಿಮವಾದ ಭಕ್ತಿಯಿಂದಲೂ ಶ್ರದ್ಧೆಯಿಂದಲೂ ಅನುಸರಿಸುತ್ತಾ, ಇದ್ದದ್ದರಲ್ಲಿ ತಕ್ಕಮಟ್ಟಿಗೆ ಜನಸಮುದಾಯದಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತಾ ಯೋಗ್ಯರಾದ ಪ್ರಜೆಗಳಾಗಿರುತ್ತಾರೆ. ಸಂಸ್ಕೃತವಾದ ನಮ್ಮ ಬುದ್ಧಿಗೆ ಕ್ಲಿಷ್ಟವಾದ ತತ್ವಗಳೇ ಸಮ್ಮತ. ಸುಲಭವಾದ ತತ್ವಗಳಿಂದ ನಾವು ಜಿತರಾಗುವುದಿಲ್ಲ. ಇದು ನಾಗರೀಕತೆಯ ಹೃದಯ."

ಆತಂಕ, ನ್ಯೂರೋಸಿಸ್, ಧಾವಂತದ ಹಿನ್ನೆಲೆ ಇಲ್ಲದೇ ಇರುವುದರಿಂದಲೇ ಮಾಸ್ತಿಯ ಕತೆಗಳಲ್ಲಿ ಆಧುನಿಕ ಮನಸ್ಸಿಗೆ ಬಹುಪ್ರಿಯವಾದ ಉದ್ವಿಗ್ನತೆ ಅನ್ನುವುದು ಇಲ್ಲವೇ ಇಲ್ಲ. ಬಹುಶಃ ಅದಕ್ಕಾಗಿಯೇ ಅವರು ಅನುಭವದ ಚಿತ್ರಣ / ಮಂಡನೆಗಿಂತ ಅನುಭವವನ್ನು ಮನುಷ್ಯರು ಎದುರಿಸಿದ ಬಗೆ, ಹಾಗೆ ಎದುರಿಸಿದ್ದರಿಂದ ಮಾಗಿದ ರೀತಿ ಇದನ್ನೇ ಹೇಳುತ್ತಾ ಹೋಗುತ್ತಾರೆ. ಧಾವಂತ, ಆತಂಕ, ನ್ಯೂರೋಸಿಸ್ ತನ್ನಲ್ಲಿರುವ, ಹಾಗೂ ಅದರಿಂದಾಗಿ ಹೊರಜಗತ್ತಿನಲ್ಲೂ ಕಾಣುವ ಲೇಖಕನಿಗೆ ಆ ರೀತಿಯ ಮನೋಸ್ಥಿತಿಗೆ ಕಾರಣವಾದ ಚಿಂತನದ/ ಜೀವನದ ಭಾಗ ಮಾತ್ರ ಮುಖ್ಯವಾಗುತ್ತದೆ. ಮತ್ತು ಅಷ್ಟೇ ಕಾಣುತ್ತದೆ. ಮಾಸ್ತಿಯವರಲ್ಲಿ ಹಾಗಾಗುವುದಿಲ್ಲ. ಸಾವು, ಪ್ರಣಯ, ಜಗಳ, ಆಧ್ಯಾತ್ಮ, ರಾಜ್ಯ ನಡೆಸುವ ಕ್ರಮ, ವಿಲಾಸ, ಆಚರಣೆ, ತ್ಯಾಗ ಎಲ್ಲವೂ ಸೇರಿಕೊಳ್ಳುತ್ತವೆ. ಬಿಡಿ ಬಿಡಿಯಾಗಿ ಬೇರೆ ಬೇರೆಯಾಗಿ ಕಾಣುವ ಇವು ಸಮುದಾಯದ ಚರಿತ್ರೆಯ, ಸಮಗ್ರತೆಯ ಭಾಗಗಳು ಕೂಡ. ಸಾವು ಮತ್ತು ಕಾಮವನ್ನು ಲೇಖಕ ನಿರ್ವಹಿಸುವ ದೃಷ್ಟಿಕೋನದಲ್ಲಿ ಇರುವ ಅಂಶಗಳನ್ನು ಪರಿಶೀಲಿಸಿದಾಗ ಅವನು ಆತಂಕ, ನ್ಯೂರೋಸಿಸ್‌ಗಳನ್ನು ಗೆಲ್ಲುವ, ನಿರ್ವಹಿಸುವ ರೀತಿಯು ತಿಳಿಯುತ್ತದೆ.

ಮಂತ್ರೋದಯ ಕತೆಯಲ್ಲಿ ಜೀವನದ ಅಂಚಿನಲ್ಲಿರುವ ಋಷಿ ಬೆಳಕನ್ನು ಕಾಣುತ್ತಾನೆ. ಬೆಳಕನ್ನು ಪ್ರಾರ್ಥಿಸುತ್ತಾನೆ. ಅವನ ಪ್ರಾರ್ಥನೆ 'ಕ್ರತುವನ್ನು ಸ್ಮರಿಸು, ಕೃತವನ್ನು ಸ್ಮರಿಸು, ಧ್ಯೇಯವನ್ನು ಸ್ಮರಿಸು, ಸಾಧಿಸಿದ್ದನ್ನು ಸ್ಮರಿಸು!' ಕ್ರತು ಯಾವುದೆಂದರ 'ನೆಲವೆಲ್ಲ ಇಂಥ ನಂದನವನವಾಗಬೇಕು. ಇದರಂತೆ ಒಳಬಾಳು ಸುಂದರ ಸಫಲ ಆಗಬೇಕು' ಎಂಬ ಸಾರ್ಥಕತೆಯ ಹಂಬಲ.

ಯುಗದ ಅಂತ್ಯದಲ್ಲಿರುವ ಶ್ರೀಕೃಷ್ಣ ಹೇಳುತ್ತಾನೆ : 'ಲೋಕವನ್ನು ಕಾಪಾಡೋ ಧರ್ಮವನ್ನು ತಿಳಿಯಬೇಕು. ತನ್ನ ಸುಖ ಯಾವುದು ಅಂತ ಯೋಚನೆ ಮಾಡಿದ ಮನುಷ್ಯ ದಾರಿ ತಪ್ಪುತ್ತಾನೆ. ಸಮುದಾಯದ ಸುಖ ಯಾವುದು ಅಂತ ಯೋಚನೆ ಮಾಡಿದ – ಸರಿಯಾಗಿ ನಡೆಯುತ್ತಾನೆ. ಆ ಸಮುದಾಯ ಎಷ್ಟು ದೊಡ್ಡದಾದರೆ ಆ ನಡತೆ ಅಷ್ಟು ಒಳ್ಳೆಯದಾಗುತ್ತೆ'. ಪೌರಾಣಿಕ ಪಾತ್ರಗಳಿಂದ ನಾನು ಮೇಲಿನ ಮಾತುಗಳನ್ನು ಆಯ್ದಿದ್ದರೂ ಮಾಸ್ತಿಯವರ ಬಹುತೇಕ ಪಾತ್ರಗಳು, ವಿಶೇಷವಾಗಿ ಸ್ತ್ರೀ ಪಾತ್ರಗಳು ಬದುಕಿನಲ್ಲಿ ಏನನ್ನೋ ಒಂದು ಉತ್ತಮವಾದದ್ದನ್ನು ಎತ್ತಿ ಹಿಡಿಯುವ ಪ್ರಸಂಗ ಬಂದಾಗ ಸದ್ದಿಲ್ಲದೆ ಸಾವನ್ನು ಒಪ್ಪಿಕೊಳ್ಳುವುದನ್ನು ಕಾಣುತ್ತೇವೆ.

ಒಂದು ಹಳೆಯ ಕತೆ, ಸನ್ಯಾಸವಲ್ಲದ ಸನ್ಯಾಸ – ಈ ಕತೆಗಳು, ಕಾಮ, ರುಚಿ, ಆತ್ಮನಿಗ್ರಹದ ಪ್ರಶ್ನೆಯನ್ನು ಎತ್ತಿಕೊಳ್ಳುತ್ತವೆ. ಇವೆರಡೂ ಕತೆಗಳಲ್ಲಿ ಒಂದು ಗಾಂಭೀರ್ಯದ ಧಾಟಿಯ ಮೂಲಕ, ಇನ್ನೊಂದು ಸ್ವಲ್ಪ ತಮಾಷೆಯ ಧಾಟಿಯ ಮೂಲಕ, ಕಾಮದ, ರುಚಿಯ ಶಕ್ತಿಯ, ವಿಲಾಸದ ಆಟದ ದರ್ಶನವಿದೆ. ಸೋತೆನೆಂದು ತಿಳಿದುಕೊಂಡ ಸನ್ಯಾಸಿ ಗೆಲ್ಲುವುದು, ಗೆದ್ದೆನೆಂದು ತಿಳಿದುಕೊಂಡ ಸಂಸಾರಿ ಸೋಲುವುದು, ಇವೆರಡೂ ಅವರ ಸ್ಥಾಯಿಯಾದ ಆತಂಕರಹಿತವಾದ ಸ್ಥಿತಿಗೆ ಅನುಗುಣವಾಗಿಯೇ ಇವೆ. ಸಂಚಾರಿಭಾವದಲ್ಲಿ ಅವರು ಅತ್ತ ಇತ್ತ ಒಲಿದಂತೆ, ಚಲಿಸಿದಂತೆ ಕಂಡರೂ ಹಾಗೆ ಚಲಿಸುವಾಗ ಉಂಟಾಗುವ ಆತಂಕದ ಚಿತ್ರವಿದ್ದರೂ ಅದನ್ನು ನಿರ್ವಹಿಸುವ ದೃಷ್ಟಿಕೋನ ಮಾತ್ರ ಆತಂಕದ್ದಲ್ಲ. ಸಮಾಧಾನದ್ದು, ತಿಳಿವಿನದು.

ನನ್ನ ಇದುವರೆಗಿನ ವಿಶ್ಲೇಷಣೆಯಲ್ಲಿ ಮಾಸ್ತಿ ಸ್ಥಿತ್ಯಂತರಗಳನ್ನು ನೋಡಲು ನಿರ್ವಹಿಸಲು ತಮ್ಮದೇ ಆದ, ಆದರೆ ಈ ಸಂಸ್ಕೃತಿಯ ತಿಳುವಳಿಕೆಯಲ್ಲಿ ಬಲು ಗಾಢವಾಗಿ ಬೇರು ಬಿಟ್ಟಿರುವ ಅನನ್ಯವಾದ ಕ್ರಮವೊಂದನ್ನು ರೂಪಿಸಿಕೊಂಡಿರುವುದನ್ನು ಗುರುತಿಸಿರುವುದಾಗಿ ತಿಳಿದಿದ್ದೇನೆ. ಮೇಲು ನೋಟಕ್ಕೆ ಇದು ಕ್ಲಾಸಿಕಲ್ ಮನೋಧರ್ಮವಾಗಿ ಕಂಡರೂ ನಿಜದಲ್ಲಿ ಇದು ಅದಲ್ಲ. ಕ್ಲಾಸಿಕಲ್ ಮನೋಧರ್ಮಕ್ಕೆ, ಅದನ್ನು ಬಯಸುವ ಮನಸ್ಸಿಗೆ, ಇತಿಹಾಸದ ಒಂದು ನಿರ್ದಿಷ್ಟ ಕಾಲಖಂಡದ ಬಯಕೆ, ಆದರ್ಶ ಇರುತ್ತದೆ. ಎಲ್ಲ ಪೀಳಿಗೆಗಳ ಎಲ್ಲ ಸಮಸ್ಯೆಗಳಿಗೂ ಅಲ್ಲಿ ಉತ್ತರವಿರುವಂತೆ ಕಾಣುತ್ತದೆ. ಇದುವರೆಗೆ ಹೇಳುವ ಮಾತುಗಳಲ್ಲಿ ಮಾಸ್ತಿ ಹಾಗಲ್ಲವೆಂಬುದನ್ನು ಈಗಾಗಲೇ ಸೂಚಿಸಲಾಗಿದೆ. ಈ ಕಾರಣಕ್ಕಾಗಿಯೇ ಮಾಸ್ತಿ ಪರಂಪರಾಗತ ಮೌಲ್ಯಗಳನ್ನು ಆಧರಿಸಿ ಬರೆದವರು ಎಂಬ ಅನುಮಾನ ಬಂದರೂ ಅವರ ಬರವಣಿಗೆಯಲ್ಲಿ ಅವರ ಬರವಣಿಗೆಗೆ ನಮ್ಮ ಪ್ರತಿಕ್ರಿಯೆಯಲ್ಲಿ 'ನಾಸ್ಟಾಲ್ಜಿಕ್' ಆದ ಅಂಶಗಳಿರುವುದಿಲ್ಲ. ಬದಲಾಗಿ ವರ್ತಮಾನದ ಸಹನೀಯತೆಯನ್ನು ಹೆಚ್ಚಿಸಿ ಭವಿಷ್ಯದ ಕಡೆಗೆ ಆಶಾದಾಯಕವಾದ ನೋಟ ಬೀರುವಂತೆ ಮಾಡುತ್ತದೆ.

ಕಾಮನ ಹಬ್ಬದ ಕತೆಯ ವಿವರಗಳಿಂದ ತಿಳಿಯುವಂತೆ, ಮತ್ತೆ ಆ ಹಬ್ಬದ ಆಚರಣೆ, ರಿಚುಯಲ್‌ಗಳು ಹುಟ್ಟಬೇಕೆಂಬ ಬಯಕೆ ಏನೂ ಇಲ್ಲ ಮಾಸ್ತಿಯವರಿಗೆ. ಅವರ ಕಳಕಳಿ ಏನಿದ್ದರೂ ಆ ಕತೆಯ ಸಾವಿತ್ರಮ್ಮನ ಬದುಕು–'ಅಂತರಂಗ ಆಚರಣೆಗಳು ಇದ್ದ ಸಮಾಜದಲ್ಲೂ' ಹೇಗೆ ಅಸ್ತವ್ಯಸ್ತಗೊಂಡಿತ್ತು ಎಂಬುದರ ಬಗ್ಗೆ. ಹಬ್ಬದ ಆಚರಣೆ,

ರಿಚುಯಲ್ ಅರ್ಥಪೂರ್ಣವಾಗಬೇಕಾದರೆ ಎಲ್ಲಕ್ಕಿಂತ ಮುಖ್ಯವಾಗಿ ಮತ್ತು ಮೊದಲಿಗೆ ಸಾವಿತ್ರಮ್ಮನ ಬದುಕು ಅರ್ಥಪೂರ್ಣವಾಗಬೇಕಲ್ಲ!

೪

ಮಾಸ್ತಿ ಈ ಶತಮಾನದ ಸ್ಥಿತ್ಯಂತರಗಳಿಗೆ ಪ್ರತಿಕ್ರಿಯಿಸಲಿಲ್ಲ. ಅವರದು ಪ್ರತಿಕ್ರಿಯಿಸುವುದಕ್ಕಿಂತಲೂ ಮುಖ್ಯವಾಗಿ 'ನೋಡುವಿಕೆ'ಯಾಗಿತ್ತು. ಈಗ ನಾವು ಶತಮಾನದ ಕೊನೆಯ ವರ್ಷಗಳಲ್ಲಿದ್ದೇವೆ. ಮತ್ತೆ ಅದೇ ಆತಂಕ, ಅದೇ ಪ್ರತಿಕ್ರಿಯೆಯ ಧಾವಂತ. ಇಂತಹ ಸಂದರ್ಭದಲ್ಲಿ ನಮಗೆ ಬೇಕಾದ ನಿರುದ್ವಿಗ್ನತೆ, ಆಳವಾದ ಪ್ರೀತಿ, ವಸ್ತು ನಿಷ್ಠತೆ, ಇವೆಲ್ಲವುಗಳನ್ನು ಪಡೆಯಲು ಮಾಸ್ತಿ ಕತೆಗಳ ಪುನರ್‌ಓದು ನೆರವಾಗುತ್ತದೆ ಎಂಬ ವಿಶ್ವಾಸ, ಭರವಸೆಯ ಭಾವನೆಯನ್ನು ನಾನು ಈ ಲೇಖನವನ್ನು ಸಿದ್ಧಪಡಿಸುವಾಗ ಓದಿದ ಬಹುತೇಕ ಮಾಸ್ತಿ ಕತೆಗಳಿಂದ ಪಡೆದೆ ಎಂಬುದನ್ನು ಓದುಗರೊಡನೆ ಹಂಚಿಕೊಂಡು ಈ ಪ್ರಬಂಧ ಮುಗಿಸುತ್ತೇನೆ.

●

ಎಲ್ಲ ಕತೆಗೂ ಯಾವುದೋ ಒಂದು ಮೂಲ ಇರುತ್ತದೆ. ಅದು ಒಮ್ಮೆ ಕೇಳಿದ ಸಂಗತಿ ಆಗಿರಬಹುದು; ಒಮ್ಮೆ ಓದಿದ ಒಂದು ವಿವರ ಆಗಿರಬಹುದು; ಯಾರೋ ಆಡಿದ ಒಂದು ಮಾತು ಆಗಿರಬಹುದು. ಇಂಥ ಸಂಗತಿ, ವಿವರ, ಭಾವಕ್ಕೆ ಒಂದು ಕೇಂದ್ರ ಆಗಿ ಕತೆ ಅದರ ಸುತ್ತ ಕಟ್ಟಿಕೊಳ್ಳುತ್ತದೆ. ಸಕ್ಕರೆ ಪಾನಕದಲ್ಲಿ ಕರಗಿದಷ್ಟು ಕರಗಿ ಇನ್ನು ಅದಕ್ಕೆ ಎಡೆ ಇಲ್ಲ ಎನ್ನುವಷ್ಟು ಜೊತ್ತಾದ ಮೇಲೆ ಪಾನಕದಲ್ಲಿ ಏನೊಂದು ಆವಲಂಬನವನ್ನು ಒದಗಿಸಿದರೆ ಸಕ್ಕರೆ ಅದರ ಮೇಲೆ ಕಲ್ಲು ಕಲ್ಲಾಗಿ ಘನಿಸುತ್ತದೆ, ಹರಳಾಗಿ ಕಾಣುತ್ತದೆ. ಇದನ್ನು ಭೌತಶಾಸ್ತ್ರದಲ್ಲಿ *Crystallisation* ಎನ್ನುತ್ತಾರೆ. ಅವಲಂಬನ ಒಂದು *nucleus*, ಬೀಜ. ನಮ್ಮ ಮನಸ್ಸು ಈ ರೀತಿಯ ಒಂದು ತತ್ವ ಎಂದು ಕಾಣುತ್ತದೆ. ಅದರಲ್ಲಿ ಒಂದು ಭಾವ ಪೂರ್ತಿ ಕರಗಿದ ಮೇಲೆ ಒಂದು ವಿವರ ಸಿಕ್ಕಿದರೆ ಅದರ ಸುತ್ತ ಒಂದು ವಸ್ತು ಕಟ್ಟಿಕೊಳ್ಳುತ್ತದೆ. ಅದು ಕತೆ ಆಗಬಹುದು, ಕವಿತೆ ಆಗಬಹುದು.

—**ಮಾಸ್ತಿ** (ಸಾಹಿತ್ಯ ಪ್ರೇರಣ)

ಮಾಸ್ತಿಯವರ ಕತೆಗಳಲ್ಲಿ ಸಾಮಾಜಿಕ ಘರ್ಷಣೆಯ ನಿರ್ವಹಣೆ

ಪುರುಷೋತ್ತಮ ಬಿಳಿಮಲೆ

'ಸಾಮಾಜಿಕ ಘರ್ಷಣೆ' ಎಂಬ ಪದ ಮೂಲತ: ಸಾಹಿತ್ಯ ವಿಮರ್ಶೆಯ ಪದವೇನೂ ಅಲ್ಲ. ಬದಲು ಅದೊಂದು ಸಾಮಾಜಿಕ ಪ್ರಕ್ರಿಯೆ. 'ಘರ್ಷಣೆ' ಪದಕ್ಕೆ ತಿಕ್ಕುವಿಕೆ, ಉಜ್ಜುವಿಕೆ ಎಂಬಿತ್ಯಾದಿ ಅರ್ಥಗಳಿವೆ. ಹೀಗಿರುವುದರಿಂದ 'ಘರ್ಷಣೆ'ಗೆ ಕನಿಷ್ಠ ಎರಡು ವಸ್ತುಗಳಾದರೂ ಬೇಕು. ಆ ಎರಡೂ ವಸ್ತುಗಳು ಪರಸ್ಪರ ವಿರೋಧವಾದ ಗುಣಗಳನ್ನು ಹೊಂದಿದ್ದಾಗ ಘರ್ಷಣೆಗೆ ತೀವ್ರತೆ ಪ್ರಾಪ್ತಿಸುತ್ತದೆ. ಸಮಾನಾಂತರ ಸ್ಥಿತಿ ತಪ್ಪುತ್ತದೆ. ತೀವ್ರವಾದ ಘರ್ಷಣೆಯ ಅನಂತರ ಮೂಲ ವಿರೋಧಗಳಿಂದ ಜನ್ಯವಾದ ಮೂರನೆಯದಾದ ಸಮನ್ವಯ ಸಾಧಿತವಾಗುತ್ತದೆ. ಆಧುನಿಕ ಸಮಾಜ ರಚನೆಯ ರಚನೀಕರಣ ಪ್ರಕ್ರಿಯೆ ಮತ್ತು ರಚನಾ ನಿರಸನ ಪ್ರಕ್ರಿಯೆಯನ್ನು *(Structuration and De-structuration)* ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಜಾತಿ ಸಮಾಜದಲ್ಲಿ ಇಂಥವುಗಳ ಸೂಕ್ಷ್ಮ ಪರಿಶೀಲನೆಗೆ ಸಾಕಷ್ಟು ತೊಡಕುಗಳಿವೆ ಮತ್ತು ಸಾಕಷ್ಟು ಅವಕಾಶಗಳೂ ಇವೆ. ಚರಿತ್ರೆಯ ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ಅವು ಬಹು ಜನಕ್ಕೆ ಅರ್ಥವಾಗುವಷ್ಟು ಸರಳವಾಗಿ ಅಭಿವ್ಯಕ್ತಗೊಳ್ಳುತ್ತವೆ. ಇಷ್ಟಿದ್ದರೂ ಭಾರತೀಯ ಸಂದರ್ಭದಲ್ಲಿ 'ಸಾಮಾಜಿಕ ಸಂಘರ್ಷ' ಎಂಬುದು ಅತ್ಯಂತ ಸಂಕೀರ್ಣ ಸ್ಥಿತಿಯೊಂದನ್ನು ನಿರ್ಮಿಸಿಬಿಟ್ಟಿದೆ. ಯಾಕೆಂದರೆ ಇಲ್ಲಿ ಅಕ್ಷರ ಮಾಧ್ಯಮದಲ್ಲಿ ಕೆಲಸ ಮಾಡುವ ಹೊಣೆ ಹೊತ್ತವರಲ್ಲಿ ವೈದಿಕರದೇ ನಿರ್ಣಾಯಕ ಸ್ಥಾನ. ಭಾಷೆಯನ್ನು 'ವಾಣಿ' ಎಂದು ಕರೆದವರು. ಸಾಮಾಜಿಕ ಸಂಘರ್ಷದಲ್ಲಿ ಸಾಮಾಜಿಕ ಪ್ರತಿಷ್ಠೆಯನ್ನು ಕಳಕೊಳ್ಳುವವರೂ

ಅವರೇ. ಹಾಗಾಗಿ ಸಾಮಾಜಿಕ ಸಂಘರ್ಷವನ್ನು ಅವರು ಕನಿಷ್ಠ ತಾತ್ತ್ವಿಕ ಹಂತದಲ್ಲಾದರೂ ಒಪ್ಪಿಕೊಳ್ಳಲಾರರು. ಅದಕ್ಕಾಗಿ ಅವರು ಹೊಸ ಹಾದಿ ಹುಡುಕಿದರು. ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿದ್ದನ್ನು ಮಾನಸಿಕವಾಗಿ ತಿರಸ್ಕರಿಸುವ ಜಾಣ್ಮೆ ತೋರಿದರು. ಈ ರೀತಿಯ ಮಾನಸಿಕ ತಿರಸ್ಕೃತ ರಚನೆಗಳು ಬರಹಗಾರ ಮತ್ತು ಸಮಾಜದ ಹೊಂದಾಣಿಕೆಯ ದೃಷ್ಟಿಯಿಂದ ಅಗತ್ಯವಾದುದು ಹೌದಾದರೂ, ಸಮಾಜದ ಬಗೆಗೆ ಗಾಢ ತಿಳುವಳಿಕೆ ಇಲ್ಲದ ಸಂದರ್ಭದಲ್ಲಿ ಅವು ಒಟ್ಟು ಚಿಂತನೆಯನ್ನು ಸುಲಭವಾಗಿ ದಾರಿ ತಪ್ಪಿಸಿಬಿಡುತ್ತವೆ. ವೈದಿಕರು ಇಂಥ ಕೆಲಸವನ್ನು ಇತಿಹಾಸದುದ್ದಕ್ಕೂ ಮಾಡುತ್ತಾ ಬಂದಿದ್ದಾರೆ. ಮೂರ್ತವನ್ನು ಅಮೂರ್ತದಲ್ಲಿ ನಿರಾಕರಿಸುತ್ತಾ, ಅಮೂರ್ತವನ್ನು ಮೂರ್ತದಲ್ಲಿ ಹುಡುಕಿದ್ದಾರೆ.

ಇಂಥಲ್ಲಿ 'ಘರ್ಷಣೆ' ಯ ಬಗೆಗೆ ಉತ್ಸಾಹದ ಚರ್ಚೆ ನಡೆಯಲು ಸಾಧ್ಯವಿಲ್ಲ. ಅದರಲ್ಲೂ ಸಾಂಪ್ರದಾಯಿಕ ಭಾರತೀಯ ಸಂಸ್ಕೃತಿ ಎಂದರೆ ವೈದಿಕ ಸಂಸ್ಕೃತಿಯೇ ಎಂದು ಭಾವಿಸುವ ಮಂದಿಗಂತೂ 'ಸಾಮಾಜಿಕ ಘರ್ಷಣೆ'ಯ ಬಗೆಗೆ ನಂಬಿಕೆ ಇರಲು ಸಾಧ್ಯವೇ ಇಲ್ಲ. ಏಕೆಂದರೆ ಘರ್ಷಣೆಯ ನೆಲೆಗಳಾದ 'ವಿರೋಧ ದ್ವಂದ್ವ'ವನ್ನು ಅವರು ಮಾನಸಿಕ ರಚನೆಗಳಲ್ಲಿ ವ್ಯವಸ್ಥಿತವಾಗಿ ನಿರಾಕರಿಸಿ ಬಿಡುತ್ತಾರೆ. ವೈಚಾರಿಕ ಅಥವಾ ಭಾವುಕ ವಿನ್ಯಾಸಗಳಲ್ಲಿ ಇರುವುದಕ್ಕೆ ವಿರುದ್ಧವಾದ ಭಯಾನಕ ಪರ್ಯಾಯಗಳನ್ನು ವೈದಿಕೇತರರೂ ರೂಪಿಸಿಕೊಂಡದ್ದುಂಟು. ಅಲ್ಲಿ ಕೂಡಾ ಸಂಘರ್ಷ ರಹಿತ ಸ್ಥಿತಿಯೇ ಎದ್ದು ಕಾಣುತ್ತದೆ. ಸ್ಥೂಲವಾಗಿ ಶರಣಾಗತಿ ಅಥವಾ ಆರಾಧನೆಯ ನೆಲೆಗಳವು. ಇದನ್ನೇ 'ವಿಶ್ವತರ್ಕ' ಅಥವಾ 'ವಿಶ್ವಸಂಕಲ್ಪ' ಎಂದು ತತ್ತ್ವಶಾಸ್ತ್ರೀಯ ಗ್ರಂಥಗಳಲ್ಲಿ ವಿವರಿಸಲಾಗಿದೆ. 'ಪರಸ್ಪರ ವಿರೋಧ'ಗಳು ಕೂಡಾ ವಿಶ್ವ ಸಂಕಲ್ಪದ ಒಂದು ಉದ್ದೇಶವೇ ಆಗಿದೆ ಎಂದು ಅವುಗಳಲ್ಲಿ ಹೇಳಲಾಗಿದೆ. ಇಂಥ ವಾದ ಮಂಡನೆಯಿಂದಲೇ ಶ್ರೀಕೃಷ್ಣನಿಗೆ ಅರ್ಜುನನ್ನು ಪ್ರಚೋದಿಸಲು ಸಾಧ್ಯವಾಯಿತು. ಮಾನವನ ಅದಮ್ಯವಾದ ಚೇತನ ಮತ್ತು ಕ್ರಿಯಾಶೀಲತೆಯ ಬಗೆಗೆ ನಂಬಿಕೆ ಕಡಿಮೆಯಾಗಿ, ಅವನಲ್ಲಿ ಚೇತನವನ್ನು ಮತ್ತು ಕ್ರಿಯಾಶೀಲತೆಯನ್ನು ಪ್ರಚೋದಿಸುವ ದೈವಶಕ್ತಿಯ ಬಗೆಗೆ ನಿಷ್ಠೆ ಹೆಚ್ಚಾಯಿತು.

ಇಂಥ ಕಡೆಗಳಲ್ಲಿ ಚರಿತ್ರೆಗೆ ಅತ್ಯಂತ ಅಗತ್ಯವಾದ ಕಾಲ, ಸ್ಥಳ ಮತ್ತು ವ್ಯಕ್ತಿಗಳ ದಾಖಲಾತಿ ಕ್ರಮ ಪ್ರಜ್ಞಾಪೂರ್ವಕವಾಗಿ ನಡೆಯುವದಿಲ್ಲ. ಇವೆಲ್ಲವೂ ಭಗವನ್ನಿಯಮದ ಪ್ರಕಾರ ನಡೆಯುತ್ತವೆ ಎಂಬ ಭಾವ ಒಂದೆಡೆಯಲ್ಲಿದ್ದರೆ, ಇನ್ನೊಂದೆಡೆಯಲ್ಲಿ ಅದಕ್ಕೆ ಪೂರಕವಾಗಿ, ಅವುಗಳು ನಾಶ ಆಗುವುದರ ಬಗೆಗೆ ನಂಬಿಕೆಯೇ ಇಲ್ಲದ ಸ್ಥಿತಿ ಉಂಟಾಗುತ್ತದೆ. ಅಜ್ಜನ ಹೆಸರನ್ನು ಮೊಮ್ಮಗನಿಗೆ ಇಡುವುದರ ಮೂಲಕ ಅಜ್ಜನನ್ನು ಮೊಮ್ಮಗನಲ್ಲಿ ಪುನರ್ ಸ್ಥಾಪಿಸುವ ಪ್ರಯತ್ನ, ಸತ್ತವನನ್ನು ಮರಳಿ ಹುಟ್ಟಿನ ಕಡೆ ಬರಮಾಡಿಕೊಳ್ಳುವ ಸಾವಿನ ಆಚರಣೆಗಳು, ಮಂಡಲಾಕಾರದ ಜನಪದ ಕುಣಿತಗಳು, ತನ್ನ ಬಾಲವನ್ನು ತಾನೇ ನುಂಗುತ್ತಿರುವ ಕಾಲ ಸರ್ಪದ ಚಿತ್ರ, ತನ್ನ ಹೆಬ್ಬೆರಳನ್ನು ತಾನೇ ಚೀಪುವ ಭಗವಂತನ ಚಿತ್ರ...... ಇತ್ಯಾದಿಗಳೆಲ್ಲವೂ ತಮ್ಮಷ್ಟಕ್ಕೆ ತಾವು ಪೂರ್ಣ ಮಾತ್ರವಲ್ಲ ಬೇರೆ ಬೇರೆ ಸಂದರ್ಭದಲ್ಲಿ ಮತ್ತೆ ಮತ್ತೆ ಪುನರಾವರ್ತನೆಗೊಳ್ಳುವವೂ ಹೌದು. ಇವೆಲ್ಲವೂ ಮತ್ತೆ ಪುನರಾವರ್ತನೆಗೊಳ್ಳುವುದು ಹೌದಾದರೆ, ಇವೆಲ್ಲವೂ ತಮ್ಮಷ್ಟಕ್ಕೆ ತಾವು ಪರಿಪೂರ್ಣ ಹೌದಾದರೆ, ಸಂಘರ್ಷಕ್ಕೆ ಅವಕಾಶವೇ ಇಲ್ಲವಾಗುತ್ತದೆ, ಚರಿತ್ರೆಯ ದಾಖಲಾತಿಯೂ ಅನಗತ್ಯವಾಗುತ್ತದೆ. ಇಂಥ ತಾತ್ತ್ವಿಕ

ನೆಲೆಗಟ್ಟಿನ ನಾಡಿನಲ್ಲಿ ಯಾವುದೇ ಬಗೆಯ ಸಂಘರ್ಷಗಳ ಬಗೆಗೆ ಗಂಭೀರ ಚರ್ಚೆ ನಡೆಯುವುದಂತೂ ಸಾಧ್ಯವಿಲ್ಲ. ಅಕ್ಷರ ಮಾಧ್ಯಮದಲ್ಲಿ ಅವುಗಳ ಬಗೆಗೆ ಚರ್ಚೆ ನಡೆದಿಲ್ಲ ಎಂದಾಕ್ಷಣ 'ಸಮಾಜದಲ್ಲಿ ಸಂಘರ್ಷಹೀನ' ಸ್ಥಿತಿ ಇತ್ತು ಎಂದು ಭಾವಿಸಬೇಕಾಗಿಲ್ಲ. ಡ್ಯೂಮೋ *(Dumont)* ವಿವರಿಸುವ ಮಡಿ–ಮೈಲಿಗೆಯ ನಿರಂತರತೆಯ ಈ ನಾಡಿನಲ್ಲಿ ಸೂಕ್ಷ್ಮ ಸ್ಥರದಲ್ಲಾದರೂ ಅದು ಇತ್ತು. ಆದರೆ ಬರಹಗಾರರು ಅದನ್ನು ಅಕ್ಷರಗಳಲ್ಲಿ, ಮಾನಸಿಕ ರಚನೆಗಳಲ್ಲಿ ನಿರಾಕರಿಸಿಬಿಟ್ಟು ಪರಂಪರೆ ಮುಂದುವರಿಯುವಂತೆ ಮಾಡಿಬಿಟ್ಟರು. ಸಹನೆ, ತಾಳ್ಮೆ–ಸಂಯಮ ಮೊದಲಾದ ಪದಗಳು ಪರಂಪರೆಯ ಮುಂದುವರಿಕೆಗೆಂದೇ ಅಸ್ತಿತ್ವಕ್ಕೆ ಬಂದವು.

೨

೨೦ನೇ ಶತಮಾನದ ಬರಹಗಾರರು ತಾತ್ತ್ವಿಕವಾಗಿ ಮತ್ತು ಸಾಮಾಜಿಕವಾಗಿ ಹೊಸ ವಿಧದ ರಚನೀಕರಣಕ್ಕೆ ಒಳಗಾದರು. ವಸಾಹತೀಕರಣ ತಂದ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗೆ ಇವರು ಪ್ರತಿಕ್ರಿಯಿಸಲೇಬೇಕಾಗಿತ್ತು. ವಿಶ್ವತರ್ಕಕ್ಕೆ ತಿರುಗಿ ಬೀಳಬಲ್ಲ ಸಂಶೋಧನೆಗಳು, ವಾದಗಳು ಜನರನ್ನು ಆವರಿಸಿಕೊಳ್ಳುತ್ತಿರುವಾಗ, ಬರಹಗಾರರು ಕಣ್ಣುಮುಚ್ಚಿ ಕುಳಿತುಕೊಳ್ಳುವಂತಿರಲಿಲ್ಲ. (ಕುಳಿತುಕೊಂಡಿದ್ದರೆ ಸಮಾಜ ಅವರನ್ನು ಚರಿತ್ರೆಗೆ ತಳ್ಳಿ ಮುಂದೆ ಹೋಗಿಬಿಡುತ್ತಿತ್ತು ಅಷ್ಟೇ). ಭಾರತದಲ್ಲಂತೂ ವಸಾಹತು ಆಡಳಿತ ತೋರಿಸಿಕೊಟ್ಟ ಹೊಸಲೋಕ ಮತ್ತು ರಚನಾ ನಿರಸನಕ್ಕೆ ಒಳಗಾದ ಸಾಂಪ್ರದಾಯಿಕ ಹಳೆಲೋಕಕ್ಕೆ ಬರಹಗಾರರು ತಮ್ಮನ್ನು ತೆರೆದುಕೊಂಡರು. ಹಳತು ಹೊಸತರ ಸಂಘರ್ಷದ ಕಾಲವದು. ಸಮಾಜದಲ್ಲಿ ತೀವ್ರತರ ಚಲನೆ ಕಾಣಿಸಿದ ಕಾಲವದು. ಇಂಥ ಕಾಲ ಘಟ್ಟದಲ್ಲಿ ಮಾಸ್ತಿಯವರು ಕತೆಗಳನ್ನು ಬರೆದರು. ಚರಿತ್ರೆಯ ಈ ಸಂದರ್ಭವನ್ನು ಮಾಸ್ತಿಯವರು ತಮ್ಮ ಕತೆಗಳಲ್ಲಿ ದಾಖಲಿಸಿದ ಬಗ್ಗೆ ಈಗಾಗಲೇ ಕನ್ನಡದಲ್ಲಿ ತುಂಬ ಮಹತ್ತ್ವದ ಚರ್ಚೆಗಳು ನಡೆದಿವೆ.

ಎಂ. ಜಿ. ಕೃಷ್ಣಮೂರ್ತಿ (೧೯೭೨), ನಾಗರಾಜ ಡಿ. ಆರ್. (೧೯೮೩), ಸತ್ಯನಾರಾಯಣ. ಎಂ. ಆರ್. (೧೯೮೫), ಗಿರಡ್ಡಿ ಗೋವಿಂದರಾಜ (೧೯೮೬), ರಾಜೇಂದ್ರ ಚೆನ್ನಿ (೧೯೮೭), ಅಶೋಕ ಟಿ.ಪಿ. (೧೯೮೬) ಮತ್ತು ಡಿ.ಎಸ್. ನಾಗಭೂಷಣ (೧೯೯೦), ಮೊದಲಾದ ವಿವಿಧ ತಲೆಮಾರಿನ, ವಿವಿಧ ಪಂಥಗಳಿಗೆ ಸೇರಿದ ವಿದ್ವಾಂಸರು ನಡೆಸಿದ ಚರ್ಚೆಗಳು ಮಾಸ್ತಿಯವರ ಬಗೆಗಿನ ನಮ್ಮ ಅರಿವನ್ನು ಗಮನಾರ್ಹವಾಗಿ ಹೆಚ್ಚಿಸಿವೆ. ಕನ್ನಡ ವಿಮರ್ಶೆ ಸ್ಥೂಲವಾಗಿ ಮಾಸ್ತಿಯವರ ಸಾಹಿತ್ಯಕ್ಕೆ ನ್ಯಾಯ ಸಲ್ಲಿಸಿದೆ ಎಂದೇ ತೋರುತ್ತದೆ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಜಿ.ಎಚ್. ನಾಯಕರು, 'ಮಾಸ್ತಿಯವರ ಕತೆಗಳಲ್ಲಿನ ಸಂಘರ್ಷ'ದ ಕುರಿತೇ ಅಧ್ಯಯನ ಪೂರ್ಣ ಗಂಭೀರ ಲೇಖನವೊಂದನ್ನು ಬರೆದಿದ್ದಾರೆ (೧೯೮೬). ನಾಯಕರ ಈ ಲೇಖನದೊಂದಿಗೆ ನನಗೆ ಮೂಲಭೂತವಾದ ಭಿನ್ನಾಭಿಪ್ರಾಯ ಇಲ್ಲದ್ದರಿಂದ, ಅವರ ಒಟ್ಟು ನಿಲುವನ್ನು ಒಪ್ಪಿಕೊಂಡೇ ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಮಾಸ್ತಿಯವರು ಒಂದೆಡೆ ಹೀಗೆ ಹೇಳಿದ್ದಾರೆ : "ನಾನು ತಕ್ಕಷ್ಟು ವಯಸ್ಸಾದ ಒಬ್ಬ ಪ್ರಜೆ. ದೇಶದ ಒಬ್ಬ ಭಕ್ತ ಎಂದು ತಿಳಿದುಕೊಂಡಿರುವವನು. ದೇಶಪ್ರೇಮಿ. ಸರಕಾರದ ಅಧಿಕಾರದಲ್ಲಿದ್ದು, ಜನಜೀವನದ ಹಲವು ಕ್ಷೇತ್ರಗಳಲ್ಲಿ ದುಡಿದು ಒಂದು ರೀತಿಯ ಅನುಭವ ಪಡೆದಿರುವವನು. ಯಾವ ರಾಜಕೀಯ ಪಕ್ಷಕ್ಕೂ ಸೇರಿದವನಲ್ಲ. ಯಾವ ಅಧಿಕಾರವನ್ನು ಬಯಸುವವನಲ್ಲ. ನನ್ನ ಜೊತೆಯ ಲಕ್ಷಾಂತರ ಪ್ರಜೆಗಳ ಮನಸ್ಸನ್ನು ಬಲ್ಲೆ ಎಂದುಕೊಂಡಿರುವವನು. ಇವು ಸಲ್ಲುವುದಕ್ಕೆ ದಾರಿ ಯಾವುದು ಎಂಬ ನಿಸ್ವಾರ್ಥ ಬುದ್ಧಿಯಿಂದ

ಯೋಚಿಸಬಲ್ಲವನು. ರಾಜಕೀಯ ಜೀವನದ ಯಾವ ಸ್ಥಾನವನ್ನು ಬಯಸದಿರುವ ಕಾರಣ ಈ ನನ್ನ ದೃಷ್ಟಿ ನಿಷ್ಪಕ್ಷಪಾತವಾದದ್ದು ಎಂದು ನನ್ನ ತಿಳುವಳಿಕೆ''.

ಮಾಸ್ತಿಯವರು ಸ್ವಯಂ ಘೋಷಿಸಿಕೊಂಡ ಈ ನಿಲುವಿಗೂ ಅವರು ತಮ್ಮ ಕಥಾ ವಸ್ತುವನ್ನು ನಿರ್ವಹಿಸುವ ಬಗೆಗೂ ಸಂಬಂಧ ಇದ್ದಂತೆ ಮೇಲ್ನೋಟಕ್ಕೆ ತೋರುತ್ತದೆ. ಮಾಸ್ತಿಯವರ ಬಗೆಗಿನ ಕನ್ನಡ ವಿಮರ್ಶೆ ಅವರ ಈ ನಿಲುವನ್ನು ಗುರುತಿಸಿ, ಗೌರವಿಸಿದೆ. ಗಿರಡ್ಡಿಯವರು ಬರೆಯುವುದು ಹೀಗೆ:

> *“ಮಾಸ್ತಿಯವರ ಕತೆಗಳ ಈ ನಿರುದ್ವೇಗ, ಸರಳತೆ, ಪ್ರಶಾಂತ ಮನಃಸ್ಥಿತಿಯಲ್ಲಿ ಮರು ನೆನಪಿಸಿಕೊಳ್ಳುವ ರೀತಿ – ಇವೆಲ್ಲ ಕೇವಲ ತಂತ್ರಕ್ಕೆ ಸೀಮಿತವಾದ ಸಂಗತಿಗಳಲ್ಲ. ಅದು ಮಾಸ್ತಿಯವರು ಜೀವನವನ್ನು ಗ್ರಹಿಸುವ ರೀತಿಯೂ ಹೌದು. ಆಕಸ್ಮಿಕ ಆರಂಭ, ಅನಿರೀಕ್ಷಿತ ತಿರುವು, ಆಶ್ಚರ್ಯಕರ ಘಟನೆಗಳು, ವಿಸ್ಮಯ, ಕುತೂಹಲದಂಥ ತೋರಿಕೆಯ ಆಕರ್ಷಣೆಗಳಿಗೆ ಒಲಿಯದ, ಆವಸರ, ಅಬ್ಬರಗಳಿಲ್ಲದ ಸಮಾಧಾನದ ಬರವಣಿಗೆ ಅವರ ಮನೋಧರ್ಮಕ್ಕೆ ಹಿಡಿದ ಕನ್ನಡಿಯಾಗಿದೆ. ಅವರ ಮನೋಧರ್ಮ ಸಂಯಮದಲ್ಲಿ, ಪೂರ್ವದಲ್ಲಿ ರೂಪುಗೊಂಡ ಅಭಿಜಾತ ರೀತಿಯದು'' (೧೯೮೭).*

ಕನ್ನಡ ವಿಮರ್ಶೆ ಮಾಸ್ತಿಯವರ ಬಗೆಗೆ ರೂಢಿಸಿಕೊಂಡ ಧೋರಣೆಯ ಪ್ರಾತಿನಿಧಿಕ ಮಾದರಿ ಇದು. 'ಮಾಗಿದ ಜೀವನಾನುಭವ', 'ಪರಿಪಕ್ವಗೊಂಡ ದೃಷ್ಟಿ', 'ಭಾವೋದ್ರೇಕವಿಲ್ಲದ ಸಮಚಿತ್ತ', 'ನಿರುದ್ವಿಗ್ನ ಅವಲೋಕನ ಶಕ್ತಿ' – ಮೊದಲಾದ ಮಾತುಗಳು ಮಾಸ್ತಿ ಬಗೆಗಿನ ವಿಮರ್ಶೆಗಳಲ್ಲಿ ಆಗಾಗ ಕಾಣಿಸಿಕೊಂಡಿದೆ. ರಾಜೇಂದ್ರ ಚೆನ್ನಿಯವರನ್ನು ಹೊರತುಪಡಿಸಿದರೆ, ಉಳಿದವರೆಲ್ಲ ಈ ಮನೋಭಾವದ ಬಗ್ಗೆ ತಮ್ಮ ಸಮ್ಮತಿಯನ್ನು ಸೂಚಿಸಿದ್ದಾರೆ. ಚೆನ್ನಿ ಮಾತ್ರ ಬಹಳ ಎಚ್ಚರದಿಂದ ಬರೆಯುತ್ತಾರೆ :

> *“.........ಎಲ್ಲವನ್ನು ನಿರುದ್ವಿಗ್ನವಾಗಿ ನೋಡಿ ಪರಿಭಾವಿಸುವ ಅಭಿಜಾತ ಸಂವೇದನೆ ಆ ಗುಣದಿಂದಲೇ ಒಂದು positive ಮೌಲ್ಯ ಪಡೆಯುವದಿಲ್ಲ. ಈ ತಾಳಿಕೆ ಉದಾತ್ತತೆಯ ಸಾಧ್ಯತೆಯನ್ನು ವಿರುದ್ಧ ಪ್ರವೃತ್ತಿಗಳ ಕೆಡುಕಿನ ಜೊತೆ ಕರ್ಷಣಕ್ಕೆ ಳಿಸಿ, ಅದರ ಬೆಲೆಗಟ್ಟುತ್ತ ಬರೆದಾಗ ಮಾತ್ರ ಅದು ಮೌಲಿಕವಾಗುತ್ತದೆ''.*

ಹೀಗಿದ್ದರೂ, ಮಾಸ್ತಿಯವರು ಮತ್ತು ಕನ್ನಡ ವಿಮರ್ಶೆ ಸ್ಥೂಲವಾಗಿ ಹೇಳಿದ್ದು ನಿಜ ಅನ್ನಿಸಲು ಮಾಸ್ತಿಯವರ ನೂರು ಕತೆಗಳೂ ಸಾಕ್ಷಿಯಾಗಿವೆ. ಇಲ್ಲಿ ಒಂದೆರಡು ಉದಾಹರಣೆಗಳನ್ನು ಮಾದರಿಗಾಗಿ ಪರಿಶೀಲಿಸಬಹುದು. 'ಮೊಸರಿನ ಮಂಗಮ್ಮ' ಕತೆಯನ್ನು ಮಾಸ್ತಿಯವರು ಕೊನೆಗೊಳಿಸುವುದು ಹೀಗೆ:

> *“ಇದು ಎಲ್ಲಾ ಕಡೆಯಲ್ಲಿಯೂ ನಡೆಯುತ್ತಿರುವ ವ್ಯಾಪಾರ. ಇದರ ಗೆಲುವು–ಸೋಲು ಹೀಗೆಯೇ ಎಂದು ಹೇಳುವಂತಿಲ್ಲ. ನೀರೊಳಗಿರುತ್ತ ಮಗುವಿನ ಕಾಲು ಹಿಡಿದಿರುವ ಮೊಸಳೆಯ ಹಾಗೆ ಸೊಸೆ, ಮೇಲೆ ನಿಂತು ಮಗುವಿನ ತೋಳನ್ನು ಹಿಡಿದುಕೊಂಡು ಅದನ್ನು ಉಳಿಸುತ್ತೇನೆ ಎನ್ನುವವಳು ತಾಯಿ. ಮಧ್ಯೆ ಆ ಮಗುವಿನ ಪಾಡು ತಾನೇ ಸ್ವಲ್ಪ ಕಷ್ಟ ? ಹಳ್ಳಿಯಲ್ಲಾದರೆ ಮೊಸರು ಮಾರುವ ಮಂಗಮ್ಮನ ಮನೇಲಿ, ಪಟ್ಟಣದಲ್ಲಿ ಮೊಸರು ಕೊಳ್ಳುವ ತಂಗಮ್ಮನ ಮನೇಲಿ ನಡೆಯುತ್ತ ಇದೆ ಈ ವ್ಯಾಪಾರ .... ಕೊನೆಯ ಅಂಕ ಕಾಣದ ನಾಟಕ''.*

ಭಾವಾವೇಶವಿಲ್ಲದ ಈ ಮನೋಸ್ಥಿತಿ ಮಾಸ್ತಿಯವರ ಎಲ್ಲ ಕತೆಗಳಲ್ಲಿಯೂ ಆಗಾಗ ಕಾಣಿಸಿಕೊಳ್ಳುತ್ತದೆ. ಆದರೆ ಜಗತ್ತಿನ ವ್ಯಾಪಾರವನ್ನು ನೋಡಿದಾಗ ಇಂಥದ್ದೇ ಮನಸ್ಥಿತಿ ಇರುವ ಜನರನ್ನು ಕಂಡರೆ, ಅವರ ಪರವಾಗಿಯೇ ಮಾಸ್ತಿಯವರು ನಿಂತು ಬಿಡುತ್ತಾರೆ. ಅವರ ಕತೆಗಳಲ್ಲಿ ಬರುವ ರಂಗ, ರಂಗಪ್ಪ, ವೆಂಕಟರಾಯ, ವೆಂಕಟಿಗ, ವೆಂಕಟಶಾಮಿ, ಮಂಚ – ಮೊದಲಾದವರು ಇಂಥ ವ್ಯಕ್ತಿತ್ವವುಳ್ಳವರು. ಇಂಥವರ ಬಗ್ಗೆ ಬರೆಯುವಾಗ ಮಾಸ್ತಿಯವರ ನಿರ್ಮಲಭಾವ

ಹಿಂದಕ್ಕೆ ಸರಿದು ಸ್ನೇಹಭಾವ ಮುಂದಕ್ಕೆ ಬರುತ್ತದೆ. ಉದಾಹರಣೆಗೆ ಅವರ ಪ್ರಸಿದ್ಧ ಕತೆ 'ವೆಂಕಟಶಾಮಿಯ ಪ್ರಣಯ' ಯಲ್ಲಿ ಅವರು ವೆಂಕಟಶಾಮಿಯ ಪರವಾಗಿ ಮಾತಾಡುತ್ತಾರೆ :

> *"ಇದನ್ನು ಕೇಳಿ ನಿಮಗೆ ಯಾವ ಭಾವ ಮನಸ್ಸಿನಲ್ಲಿ ತಲೆದೋರಿದೆಯೋ ನಾನರಿಯೆ. ಅದು ಬೇಸರ ಆಗಿರಲಾರದೆಂದು ಮಾತ್ರ ನಾನು ಆಶೆಯಿಂದ ಕೋರಿದ್ದೇನೆ. ಸುಮ್ಮನೆ ಕೇಳುವುದರಲ್ಲಿ ಯಾವ ಭಾವ ತಲೆದೋರಿದರೂ, ನಾಯಿಂದರ ಆ ಹುಡುಗನೂ ದೊಂಬರ ಹುಡುಗಿಯೂ ಪರಸ್ಪರ ಪ್ರೇಮದಲ್ಲಿ, ಈ ದಾರಿಯಲ್ಲಿ, ಆ ಕೆರೆಯ ಬಳಿ, ಅಲ್ಲಿ ಕಾರೆಯ ಗಿಡದಲ್ಲಿ, ಇಲ್ಲಿ ಹೊಲದ ಬಳಿಯ ಚೌಕದಲ್ಲಿ ಸುತ್ತಾಡಿದ ರೀತಿಯನ್ನು ನೀವು ಊಹಿಸುವುದಾದರೆ, ಹುಡುಗನಿಗೆ ಜ್ವರ ಬಂದು, ಅವನ ಸಾವಿನಿಂದ ಈ ಪ್ರಣಯ ಮುಗಿಯಿತೆನ್ನುವುದನ್ನು ನೆನೆಯುವಿರಾದರೆ, ಅವನಿಗಾಗಿಯೂ, ಅವನನ್ನು ಕಳೆದುಕೊಂಡ ಆ ಹುಡುಗಿಗಾಗಿಯೂ ನಿಮ್ಮ ಮನಸ್ಸು ಕರಗುವುದೆಂದು ನನ್ನ ನಂಬಿಕೆ".*

'ವೆಂಕಟಿಗನ ಹೆಂಡತಿ' ಕತೆಯಲ್ಲಿಯೂ ಇದೇ ಧಾಟಿ ಇದೆ. ಓಡಿ ಹೋದ ಹೆಂಡತಿ ಮತ್ತೆ ಹಿಂದೆ ಬಂದಾಗ ವೆಂಕಟಿಗ ಆಕೆಯನ್ನು ಸ್ವೀಕರಿಸುತ್ತಾನೆ. ಆ ಸಂದರ್ಭದಲ್ಲಿ ಮಾಸ್ತಿಯವರು ಬರೆಯುವುದು:

> *"ಇಂಥ ಅಸಹ್ಯವಾದ ನೋವಿನಿಂದ ಬದುಕು ಮುಗಿದಿದ್ದರೂ ವೆಂಕಟಿಗ ಹರ್ಷವಾಗಿಯೇ ಇರುವುದನ್ನು ನೋಡಿ ನನಗೆ ಒಂದು ದಿನ ಅವನ ಚೇತನ ಆ ಹಳ್ಳಿಯ ಪಾಳಿನಂತೆ ಅಜೇಯ ಎನ್ನಿಸಿತು. ಅಥವಾ ಎಲೆಯೆಲ್ಲ ಉದುರಿಹೋದರೂ ಕೊಂಬೆ ಕೊಂಬೆಯ ಕೊನೆಗೆ ಹೂವನ್ನು ಧರಿಸಿ ನಿಲ್ಲುವ ದೇವ ಕಣಗಿಲೆಯಂತೆ ಆತ್ಮವಂತ ಸತ್ತ್ವ ಎಂದು ಕಂಡಿತು."*

ಹೀಗೆ ಬರೆಯುವಲ್ಲಿ ಭಾವಾತಿರೇಕ ಇಲ್ಲದಿರುವುದು ಹೌದಾದರೂ, ಒಂದು ನಿರ್ದಿಷ್ಟ ಪಾತ್ರದ ಮೇಲೆ ಭಾವುಕ ಒಲವು ಇರುವುದಂತೂ ಸ್ಪಷ್ಟ . ತಮಗೆ ಯಾವ ವ್ಯಕ್ತಿತ್ವ ಪ್ರಿಯವಾಯಿತೋ ಆ ವ್ಯಕ್ತಿತ್ವ ಓದುಗರಿಗೂ ಪ್ರಿಯವಾಗುವ ಹಾಗೆ ಅವರು ಬರೆಯುತ್ತಾರೆ. ಅಗತ್ಯ ಬಿದ್ದರೆ ಓದುಗನನ್ನು ಒತ್ತಾಯದಿಂದ ತಮ್ಮ ಜೊತೆ ಕರೆದುಕೊಳ್ಳುತ್ತಾರೆ. ಹಾಗಾಗಿಯೇ ಮಾಸ್ತಿಯವರ ಕತೆಗಳಲ್ಲಿನ ಸರಿ–ತಪ್ಪುಗಳ ಬಗೆಗೆ ಓದುಗನಲ್ಲಿಯೂ ಒಂದು ಬಗೆಯ ಎಚ್ಚರ ಮೂಡುತ್ತದೆ. ಮೂಡಬೇಕೆಂಬುದು ಮಾಸ್ತಿಯವರ ಆಶೆ ಕೂಡಾ ಆಗಿದೆ.

ವಿಷಯ ಈಗ ಸ್ಪಷ್ಟವಾಗುತ್ತಿದೆ. ಮಾಸ್ತಿಯವರು ಯಾರ ಪರವಾಗಿ ಮಾತಾಡುತ್ತಾರೋ, ಆ ಪಾತ್ರಗಳೆಲ್ಲ ಘರ್ಷಣಾತೀತ ಸ್ಥಿತಿಯಲ್ಲಿ ಬದುಕಿರುತ್ತಾರೆ. ಸಾಮಾಜಿಕ ಸಂದರ್ಭದ ಬಿಕ್ಕಟ್ಟುಗಳಲ್ಲಿ ಸಹಜವಾಗಿಯೇ ಹುಟ್ಟಿಕೊಳ್ಳಬಹುದಾದ ಘರ್ಷಣೆಯನ್ನು ಈ ನಾಯಕರು ತಮ್ಮ ತಾಳ್ಮೆ–ಸಂಯಮ–ಉದಾತ್ತ ಚರಿತ್ರೆಗಳಿಂದ ಮೀರಿ ಬಿಡುತ್ತಾರೆ. ಇದನ್ನೇ ಸ್ವಲ್ಪ ಬೇರೆ ರೀತಿಯಲ್ಲಿ ಹೇಳಬೇಕೆಂದರೆ 'ಸಾಮಾಜಿಕ ಸಂಘರ್ಷ' ಏರ್ಪಡುವ ಸಂದರ್ಭದಲ್ಲಿ ಮಾಸ್ತಿಯವರು ಅತ್ಯಂತ ಎಚ್ಚರದಿಂದ ಸಂಘರ್ಷಾತೀತ ಸ್ಥಿತಿಯನ್ನು ನಿರ್ಮಿಸಿಬಿಡುತ್ತಾರೆ. ಸಂಘರ್ಷರಹಿತ ಸ್ಥಿತಿಯಲ್ಲಿ ವ್ಯಕ್ತಿತ್ವವನ್ನು ಉದಾತ್ತಗೊಳಿಸಿ, ಓದುಗರನ್ನು ಅದರ ಪರವಾಗಿ ನಿಲ್ಲಿಸಿಬಿಡುತ್ತಾರೆ. ಈಗ ಮಾಸ್ತಿಯವರ 'ನಿರ್ಲಿಪ್ತತೆ'ಯ ಆಳದಲ್ಲಿ ಗಾಢವಾಗಿ ತಳ ಊರಿರುವ ರಾಜಕೀಯ ಆಸಕ್ತಿಗಳು ಗೋಚರಿಸಲು ಆರಂಭವಾಗುತ್ತವೆ. ಅವರ ಘೋಷಿತ ಉದ್ದೇಶವನ್ನು ಮೀರಿ ಕಲಾಕೃತಿಗಳು ಕೆಲಸ ಮಾಡುವ ಬಗೆ ಕುತೂಹಲ ಹುಟ್ಟಿಸುತ್ತದೆ.

ಕೆಲವು ಉದಾಹರಣೆಗಳಿಂದ ಮೇಲಿನ ಮಾತುಗಳನ್ನು ಇನ್ನಷ್ಟು ಸ್ಪಷ್ಟಪಡಿಸಿಕೊಳ್ಳಬಹುದು. ನಾನು ಬೇರೆ ಉದ್ದೇಶಗಳಿಗೆ ಆರಂಭದಲ್ಲಿ ಎತ್ತಿಕೊಂಡ 'ಮೊಸರಿನ ಮಂಗಮ್ಮ' ಕಥೆಯನ್ನು ಇಲ್ಲಿ ಮತ್ತೆ ಚರ್ಚಿಸಬಹುದು. ಮಂಗಮ್ಮ ಮೊಸರು ಮಾರುವ ಹೆಂಗಸು. ಆಕೆಗೂ

ಅವಳ ಸೊಸೆಗೂ ಭಿನ್ನಾಭಿಪ್ರಾಯ ಮೂಡಿ, ಅದು ಜಗಳದಲ್ಲಿ ಮುಕ್ತಾಯವಾಗುತ್ತದೆ. ಸೊಸೆಯ ನೆವದಲ್ಲಿ ಮಂಗಮ್ಮ, ಮಗನಿಗೂ ಬೈದುಬಿಡುತ್ತಾಳೆ. ಮನೆಯೊಳಗೆ ಬಿಕ್ಕಟ್ಟು ಉಂಟಾಗುತ್ತದೆ. ಮಂಗಮ್ಮ ಮನೆಯಿಂದ ಹೊರ ನಡೆಯುವ ತೀರ್ಮಾನ ಕೈಗೊಳ್ಳುತ್ತಾಳೆ. ಪ್ರತ್ಯೇಕವಾಗಿ ವಾಸಿಸುತ್ತಾಳೆ. 'ಹೆಂಗಸು ಒಂಟಿ ಆದಳು ಎಂದರೆ ಜನ ಅವಳ ಮೇಲೆ ಕಣ್ಣು ಹಾಕುವ' ವಿವರವೂ ಕಥೆಯಲ್ಲಿ ಬರುತ್ತದೆ. ಈ ಮಧ್ಯೆ ಮಗುವಿನ ಕಾರಣದಿಂದ ಮತ್ತೆ ಅತ್ತೆ–ಸೊಸೆ ಹತ್ತಿರ ಬರುತ್ತಾರೆ. ಇಡೀ ಕಥೆಗೆ ಸಾಕ್ಷಿಯಾಗಿರುವ ಮೊಸರು ತೆಗೆದುಕೊಳ್ಳುವ ಹೆಂಗಸು ಮಾತ್ರ 'ಮಂಗಮ್ಮ ಸರಿಯೋ, ಸೊಸೆ ಸರಿಯೋ' ಎಂದು ತೀರ್ಮಾನಿಸಲಾಗದೆ ಉಳಿದರೆ, ಕಥಾನಿರೂಪಕ 'ಇದೊಂದು ಕೊನೆಯ ಅಂಕ ಕಾಣದ ನಾಟಕ' ಎಂದು ಕಥೆಯನ್ನು ಮುಗಿಸುತ್ತಾನೆ.

ಈ ಕಥೆಯಲ್ಲಿ ಅತ್ತೆ–ಸೊಸೆಯರ ಸಂಘರ್ಷವನ್ನು ಮಾಸ್ತಿ ನಿರ್ವಹಿಸಿದ ರೀತಿಯನ್ನು ಎಚ್ಚರದಿಂದ ಗಮನಿಸಬೇಕು. ಅತ್ತೆ ಸೊಸೆಯರ ಮಧ್ಯೆ ಬಿಕ್ಕಟ್ಟು ಉದ್ಭವಿಸಿದಾಗ ಅತ್ತೆ–ಸೊಸೆ ಬೇರೆ ಬೇರೆ ಆಗುತ್ತಾರೆ. ಪರಿಣಾಮವಾಗಿ ಸಂಘರ್ಷದ ತೀವ್ರತೆ ಕಡಿಮೆಯಾಗುತ್ತದೆ. ಮಂಗಮ್ಮ ಬೇರೆ ಆದದ್ದೇ ಹೊಸ ವಿಧದ ಸಮಸ್ಯೆಗಳನ್ನು ಇದಿರಿಸಬೇಕಾಗುತ್ತದೆ. ಈ ಸಮಸ್ಯೆ ಮುಖ್ಯವಾಗಿ ನೈತಿಕವಾದುದು ಮತ್ತು ಆರ್ಥಿಕ ಭದ್ರತೆಯದು. ಮನೆಯ ಹೊರಗಡೆ ಆಕೆಗೆ ಎದಿರಾಗುವ ಸವಾಲುಗಳು ಒಳಗಡೆಯ ಸವಾಲುಗಳಿಗಿಂತ ಭೀಕರವಾದುದರಿಂದ ಮಂಗಮ್ಮ ಕೊನೆಗೂ ಮನೆಯತ್ತಲೇ ವಾಲುತ್ತಾಳೆ. ಇಲ್ಲಿ ಮಾಸ್ತಿಯವರು ನಿಷ್ಪಕ್ಷಪಾತಿಯೇನಲ್ಲ. ಅವರು ಅತ್ಯಂತ ಸೂಕ್ಷ್ಮವಾಗಿ, ಸಂಘರ್ಷದ ಹಾದಿಯಲ್ಲಿರುವ ಕಥಾವಸ್ತುವನ್ನು ಸಂಘರ್ಷಾತೀತಗೊಳಿಸಿ, ಮಂಗಮ್ಮನನ್ನು ಮನೆಯೊಳಕ್ಕೆ ಸೇರಿಸಿಬಿಡುತ್ತಾರೆ.

'ವೆಂಕಟಿಗನ ಹೆಂಡತಿ'ಯಲ್ಲಿಯೂ ಬಿಕ್ಕಟ್ಟನ್ನು 'ಸಂಘರ್ಷರಹಿತ' ಸ್ಥಿತಿಗೆ ಎಳೆಯಲಾಗಿದೆ. ವೆಂಕಟಿಗನ ಹೆಂಡತಿಯು ಸಿರಿವಂತ ರೆಡ್ಡಿಯ ಜೊತೆ ಹೋಗಿ ಬಿಡುತ್ತಾಳೆ. ಜಾತಿ ಮತ್ತು ಲೈಂಗಿಕ ವಿಷಯಗಳು ತಳಕು ಹಾಕಿಕೊಂಡಿರುವ ಸಂಕೀರ್ಣ ಸ್ವರೂಪದ ಘಟನೆಯಿದು. ಭಾರತೀಯ ಸಮಾಜ ಬೆಚ್ಚಿ ಬೀಳುವ ಸಂದರ್ಭವಿದು. ಆದರೆ ವೆಂಕಟಿಗ ಅಪಾರವಾದ ಸಂಯಮ, ತಾಳ್ಮೆ, ಸಹನಶೀಲತೆಯಿಂದ ನಡೆದುಕೊಳ್ಳುತ್ತಾನೆ. ಇಡೀ ಸಮಾಜ ಅವನ ಸಹನೆಯನ್ನು ಕೆಣಕುತ್ತದೆ. ಆದರೆ ವೆಂಕಟಿಗ ಮಾತ್ರ 'ಇಂದಿಲ್ಲದಿದ್ದರೆ ಇನ್ನೊಂದು ದಿನ ಈ ಜನ್ಮಕ್ಕಿಲ್ಲದಿದ್ದರೆ ಇನ್ನೊಂದು ಜನ್ಮಕ್ಕಾದರೂ ನಾನು ಇವಳಿಗೆ ದಿಕ್ಕಾಗಬೇಕು' ಎಂಬ ಏಕಪತ್ನೀ ವ್ರತಸ್ಥನಾಗಿ ಊರು ಬಿಡುತ್ತಾನೆ. ಪರಿಪರಿಯ ಕಷ್ಟ ಅನುಭವಿಸುತ್ತಾನೆ. ಕಾಲಕ್ರಮದಲ್ಲಿ ವೆಂಕಟಿಗನ ಹೆಂಡತಿ ಹಿಂದೆ ಬರುತ್ತಾಳೆ. ಬರುವಾಗ ಆಕೆಯ ಪ್ರಿಯಕರ ಕೊಟ್ಟ ಮಗುವೂ ಜೊತೆಯಲ್ಲಿರುತ್ತದೆ. ಈ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ವೆಂಕಟಿಗ ಅತ್ಯಂತ ಘನವಾದ ಮತ್ತು ಪಕ್ವವಾದ ರೀತಿಯಲ್ಲಿ ಹೆಂಡತಿ ಮತ್ತು ಮಗುವನ್ನು ಸ್ವೀಕರಿಸುತ್ತಾನೆ. ಅವನ ಹೆಂಡತಿ ಮಗುವನ್ನು ತೋರಿಸಿ 'ಇದರ ಮೂಗು, ಹುಬ್ಬು ನೋಡು, ನಿನ್ನ ಹಾಗೆಯೇ ಇದೆ' ಎಂದಾಗ ವೆಂಕಟಿಗ 'ಹೌದು' ಎಂದು ಒಪ್ಪಿಕೊಳ್ಳುವಲ್ಲಿ ಆತನ ವ್ಯಕ್ತಿತ್ವ ಇನ್ನಿಲ್ಲದ ಎತ್ತರಕ್ಕೆ ಏರಿಬಿಡುತ್ತದೆ. 'ಮಗುವಿನ ಪ್ರಾಯ ಎಷ್ಟಾಗಿದೆ' ಎಂದು ವಿಚಾರಿಸಿದರೂ ಆಕೆ ನೊಂದುಕೊಂಡಾಳೆಂದು ಆತ ಮಗುವಿನ ಪ್ರಾಯವನ್ನೇ ಕೇಳುವುದಿಲ್ಲ. 'ವೆಂಕಟಿಗ ಅಪ್ಪಟ ಅಪರಂಜಿ' ಅಂತ ಕತೆಯಲ್ಲಿ ಹೇಳಲಾಗಿದೆ.

ತನ್ನ ಹೆಂಡತಿ ಬೇರೆಯವನೊಂದಿಗೆ ಓಡಿ ಹೋದಾಗ, ಓಡಿ ಹೋದವಳು ಮಗುವಿನೊಂದಿಗೆ ಹಿಂದಿರುಗಿದಾಗ ಉಂಟಾಗಬಹುದಾದ ಬಿಕ್ಕಟ್ಟಿನ ಗಳಿಗೆಗಳನ್ನು ಕತೆಯಲ್ಲಿ ಸುಲಭವಾಗಿ ಪರಿಹರಿಸಲಾಗಿದೆ. ಮೊದಲ ಸಂದರ್ಭದಲ್ಲಿ ಆತ ಊರು ಬಿಟ್ಟು ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳುತ್ತಾನೆ. ಎರಡನೇ ಸಂದರ್ಭದಲ್ಲಿ ಉದಾತ್ತವಾಗಿ ವರ್ತಿಸಿ ಘರ್ಷಣೆಗೆ ಅವಕಾಶವಿಲ್ಲದಂತೆ ಮಾಡುತ್ತಾನೆ.

'ವೆಂಕಟಶಾಮಿಯ ಪ್ರಣಯ' ಹೆಸರೇ ಸೂಚಿಸುವಂತೆ ಪ್ರೇಮದ ಕತೆ. ನಾಯಿಂದರ ಹುಡುಗ, ದೊಂಬರ ಹುಡುಗಿಯನ್ನು ಪ್ರೇಮಿಸುತ್ತಾನೆ. ಜಾತಿ ಮತ್ತು ಪ್ರೇಮ ಭಾರತೀಯ ಸಮಾಜದಲ್ಲಿ ಉಂಟು ಮಾಡುವ ಬಿಕ್ಕಟ್ಟುಗಳು ಬಹುತರವಾದುದು. ಆದರೆ ಮಾಸ್ತಿಯವರು ಒಂದೆರಡು ಮಾತುಗಳಲ್ಲಿ ಅದನ್ನು ಮುಗಿಸಿಬಿಡುತ್ತಾರೆ : "ಮಾತು ಊರನ್ನು ಮುಟ್ಟಿತು. ವೆಂಕಟಶಾಮಿಯ ಮನೆಯಲ್ಲಿ ಗೋಳೆದ್ದಿತು. ಊರಿನಲ್ಲಿ ಉಳಿದ ಜನಕ್ಕೆ ಸ್ವಲ್ಪ ಚಿಂತೆಯೇ ಆಯಿತು''. ವೆಂಕಟಶಾಮಿಯ ತಂದೆಯು "ಎರಡು ದಿನ ನೋಡುತ್ತಾನೆ .... ಬರುತ್ತಾನೆ'' ಎಂದು ಸುಮ್ಮನಾಗಿ ಬಿಡುತ್ತಾನೆ. ಊರ ಗೌಡನು ಸಮಸ್ಯೆಯನ್ನು ಲಘುವಾಗಿ ಸ್ವೀಕರಿಸಿದ. ಪ್ರಣಯವನ್ನು ಗಂಭೀರವಾಗಿ ಸ್ವೀಕರಿಸಿದವನೆಂದರೆ ವೆಂಕಟಶಾಮಿ ಮಾತ್ರ. ತನ್ನ ಬದುಕಿನ ಕೊನೆ ಗಳಿಗೆಯಲ್ಲಿ ದೊಂಬರ ಹುಡುಗಿಯ ಜೊತೆ ಮಲಗಿದ ಸ್ಥಳದಲ್ಲಿ ತನ್ನನ್ನು ಹುಗಿಯಲು ಕೇಳಿಕೊಂಡು, ಅಸುನೀಗುತ್ತಾನೆ. ಅವನ ತಂದೆ ತಾಯಿ ಆ ಕೆಲಸ ಮಾಡುತ್ತಾರೆ. ವೆಂಕಟಶಾಮಿ ಉದಾತ್ತ ನಾಯಕನಾಗುತ್ತಾನೆ. ಅಂತರ್ಜಾತೀಯ ಮದುವೆ ತಂದೊಡ್ಡಬಹುದಾದ ಬಿಕ್ಕಟ್ಟುಗಳೆಲ್ಲ ವೆಂಕಟಶಾಮಿಯ ಮರಣದಿಂದ ನಿವಾರಣೆಯಾಗುತ್ತವೆ. ವೆಂಕಟಶಾಮಿಯ ಪರವಾಗಿ ಓದುಗರ ಎದೆ ಕರಗುತ್ತದೆ. ಮಾಸ್ತಿಯವರ ಉದ್ದೇಶವೂ ಅದೇ ಆಗಿದೆ.

'ನಳಿನಿಯ ತಂದೆ' ಕಥೆಯಲ್ಲಿ ನಳಿನಿಯ ತಂದೆ ದುಷ್ಟ. ಸೂಳೆ ಸಹವಾಸ ಅವನಿಗೆ ಪ್ರಿಯವಾದ ಸಂಗತಿ. ಸೂಳೆಗಾಗಿ ಕೈ ಹಿಡಿದ ಹೆಂಡತಿಯನ್ನು ಹಿಂಸಿಸುತ್ತಾನೆ. ಆದರೆ ನಳಿನಿಯ ತಾಯಿ ವಿದ್ಯಾವಂತೆ. ಕಥಾವಸ್ತು ಸಂಘರ್ಷದ ಹಾದಿ ಹಿಡಿಯುವದು ಇಲ್ಲಿಯೇ. ದುಷ್ಟ ಗಂಡ ಮತ್ತು ವಿದ್ಯಾವಂತ ಹೆಂಡತಿ ಸಂಸಾರದಲ್ಲಿ ಜೊತೆಗೂಡಿದಾಗ ಹೆಂಡತಿ ಅದನ್ನು ಹೇಗೆ ಇದಿರಿಸುತ್ತಾಳೆ ಎಂಬುದು ಕುತೂಹಲ ಹುಟ್ಟಿಸುವ ವಿಚಾರ. ಆದರೆ ಇಲ್ಲಿಯೂ ಮಾಸ್ತಿಯವರು ತಮ್ಮ ಎಂದಿನ ಶೈಲಿಯಲ್ಲಿಯೇ 'ಸಂಘರ್ಷಾತೀತ' ಸ್ಥಿತಿಯನ್ನು ನಿರ್ಮಿಸಿ ಬಿಡುತ್ತಾರೆ. ವಿದ್ಯಾವಂತ ಹೆಂಡತಿ ತವರಿಗೆ ಹಿಂದಿರುಗಿ ಘರ್ಷಣೆಯ ತೀವ್ರತೆಯನ್ನು ಕಡಿಮೆ ಮಾಡುತ್ತಾಳೆ. ಅಲ್ಲಿಂದ ಗಂಡನಿಗೆ ತಪ್ಪದೇ ಹಣ ಕಳಿಸುವುದರ ಮೂಲಕ ತನ್ನ ಉದಾತ್ತತೆಯನ್ನು ಪ್ರಕಟಿಸುತ್ತಾಳೆ. ತೀರ ಅಯೋಗ್ಯನಾದ ಗಂಡನು ಮುಂದೆ ಹೆಂಡತಿಯ ಮಾತನ್ನು ವಿಧೇಯನಾಗಿ ಪಾಲಿಸುತ್ತಾನೆ. ಸಂಘರ್ಷಕ್ಕಿಂತ ತಾಳ್ಮೆ – ಸಮಾಧಾನಗಳೇ ಗೆಲ್ಲುತ್ತವೆ.

'ಚೆನ್ನಮ್ಮ' ಕಥೆಯಲ್ಲಿಯೂ ಗಂಡ ವ್ಯಭಿಚಾರಿ. ಆತ ಹೆಂಡತಿಯ ಮೇಲೂ ವ್ಯಭಿಚಾರದ ಆರೋಪ ಹೊರಿಸುತ್ತಾನೆ. ಒಂದು ಹಂತದಲ್ಲಿ ಹೆಂಡತಿಯನ್ನೇ ವ್ಯಭಿಚಾರಕ್ಕೆ ಪ್ರಚೋದಿಸುತ್ತಾನೆ. ಮುಂದೆ ಚೆನ್ನಮ್ಮ ಜೈಲು ಸೇರುತ್ತಾಳೆ. ಜೈಲಿನಿಂದ ಬಂದ ಆಕೆ ತವರಿಗೆ ಹಿಂದಿರುಗುತ್ತಾಳೆ. ಇದೀಗ ಮತ್ತೆ ಬಿಕ್ಕಟ್ಟಿನ ಸಂದರ್ಭ. ಗಂಡ ಇರುತ್ತಲೆ ಹೆಂಡತಿ ತವರಿನಲ್ಲಿ

ಇರುವುದು ಹೇಗೆ ಸಾಧ್ಯ? ಕಥೆಯಲ್ಲಿ ಚೆನ್ನಮ್ಮನ ಗಂಡ ರಾಮಪ್ಪ ಸಾಯುವದರ ಮೂಲಕ ಸಮಸ್ಯೆ ಪರಿಹಾರವಾಗುತ್ತದೆ. ಕತೆ ಸಂಘರ್ಷಾತೀತವಾಗುತ್ತದೆ.

'ಪಕ್ಷಿಜಾತಿ' ಸ್ವಲ್ಪ ಧೈರ್ಯದ ಕಥೆ. ಆಗಮ್ಯ ಗಮನದ ಈ ಕಥೆಯಲ್ಲಿ ಅಣ್ಣ–ತಂಗಿ ಸಂಭೋಗಿಸುತ್ತಾರೆ. ಅದು ಊರಿಡೀ ಸುದ್ದಿಯಾಗುತ್ತದೆ. ನೈತಿಕ ಅವನತಿಯ ಸಂದರ್ಭದ ಬಿಕ್ಕಟ್ಟುಗಳೆಲ್ಲ ತಂಗಿಯ ಗಂಡ ಮಂಚ ಊರು ಬಿಡುವಲ್ಲಿ ಸ್ವಲ್ಪ ಶಮನವಾಗುತ್ತದೆ. ಊರಿನಲ್ಲಿ ಪಂಚಾಯತಿ ನಡೆಯುತ್ತದೆ. ಅಣ್ಣ–ತಂಗಿ ತಪ್ಪು ಒಪ್ಪಿಕೊಳ್ಳುತ್ತಾರೆ. ಮಂಚನ ಕ್ಷಮೆ ಬೇಡಲಾಗುತ್ತದೆ. ಸಂಘರ್ಷರಹಿತ ಉದಾತ್ತ ಸ್ಥಿತಿಯಲ್ಲಿ ಕಥೆ ಮುಗಿಯುತ್ತದೆ.

ಇಂಥದ್ದಕ್ಕೆ ಇನ್ನಷ್ಟು ಉದಾಹರಣೆಗಳನ್ನು ಕೊಡಬಹುದು.'ಬೈಚೇಗೌಡ' ಕಥೆಯಲ್ಲಿ ಶಾನಭೋಗನೊಡನೆ ಸಂಘರ್ಷವನ್ನು ತಪ್ಪಿಸಲು ಬೈಚೇಗೌಡ ಊರು ಬಿಡುತ್ತಾನೆ. ಶಾನುಭೋಗನ ಅನ್ಯಾಯ ಸೆರೆಮನೆಯಲ್ಲಿಯೂ ನಡೆದಾಗ ಮತ್ತೆ ಬೈಚೇಗೌಡ ಜೈಲು ಬಿಡುತ್ತಾನೆ. 'ದೋರನ ಕಂಬಳ'ದಲ್ಲಿ ದೋರನು ಊರು ಬಿಡುವುದರ ಮೂಲಕ ಸಮಸ್ಯೆಯನ್ನು ಪರಿಹರಿಸಿಕೊಳ್ಳುತ್ತಾನೆ. 'ಆಚಾರ್ಯವಂತ ಅಯ್ಯಂಗಾರು'ವಿನಲ್ಲಿ 'ಸಂಸ್ಕಾರ' ಒಂದು ಸಮಸ್ಯೆಯೇ ಆಗುವುದಿಲ್ಲ. ಮಾಸ್ತಿಯವರ ಐತಿಹಾಸಿಕ ವಸ್ತು ವಿನ್ಯಾಸದ ಮತ್ತು ಪೌರಾಣಿಕ ವಸ್ತು ವಿನ್ಯಾಸದ ಕಥೆಗಳಲ್ಲಿಯೂ ಸಂಘರ್ಷಾತೀತ ಸ್ಥಿತಿಯೇ ಎದ್ದು ಕಾಣುತ್ತದೆ.

ಮಾಸ್ತಿಯವರ ಕಥೆಗಳ ತಂತ್ರಯೋಜನೆ ಕೂಡಾ ಘರ್ಷಣಾತೀತ ಸ್ಥಿತಿಗೆ ಪೂರಕವಾಗಿಯೇ ಬರುತ್ತದೆ. ಅವರ ಕತೆಗಳನ್ನು ಯಾರೋ ಯಾರಿಗೋ ಎಲ್ಲಿಯೋ ಹೇಳಿದಂತಿರುತ್ತದೆ. ಅದಿಲ್ಲದಿದ್ದರೆ ಅದೊಂದು ಪತ್ರ ಅಥವಾ ದಿನಚರಿಯ ಭಾಗವಾಗಿ ಬಿಡುತ್ತದೆ. ಕತೆಯ ಆರಂಭದಲ್ಲಿ ರಚನೀಕರಣಗೊಳ್ಳುವ ಅಂಥ ದೂರವು ಕತೆಯ ಅಂತ್ಯದಲ್ಲಿ ನಿರಸನ ಹೊಂದುತ್ತದೆ. ಹಾಗೆ ನಿರಸನ ಹೊಂದಿದಾಗ ಕಥಾನಾಯಕನ ಉದಾತ್ತ ವ್ಯಕ್ತಿತ್ವ ಮಾತ್ರ ಓದುಗನಿಗೆ ಸಂವಹನವಾಗುತ್ತದೆ. ಅಂದರೆ ಕಥಾನಾಯಕ ತನ್ನ ಬದುಕಿನಲ್ಲಿ ಸಂಘರ್ಷವನ್ನು ಮೆಟ್ಟಿನಿಂತ ಬಗೆಯೇ ಆಪ್ತವಾಗಿ ಉಳಿಯುತ್ತದೆ.

೩

ಈಗ ಮತ್ತೆ ನಾನು ಪ್ರಬಂಧದ ಆರಂಭದಲ್ಲಿ ಚರ್ಚಿಸಿದ ವಿಷಯಗಳನ್ನು (ಒಂದನೇ ಭಾಗ) ನೆನಪಿಸಿಕೊಳ್ಳಬಹುದು. ನಮ್ಮ ಸಾಂಪ್ರದಾಯಿಕ ಚಿಂತನೆಯಲ್ಲಿ ಘರ್ಷಣೆಗಳ ಬಗೆಗೆ ಅಷ್ಟೇನೂ ನಂಬಿಕೆಯಿಲ್ಲ. ಕೆಲವರು ಅದನ್ನು ವಿಶ್ವಸಂಕಲ್ಪದ ಒಂದು ಭಾಗವೆಂದು ಗ್ರಹಿಸಿ ತಣ್ಣಗೆ ಇದ್ದು ಬಿಡುತ್ತಾರೆ. ಇನ್ನು ಕೆಲವರು ತಾಳ್ಮೆ, ಸಂಯಮಗಳಿಂದ ಬಿಕ್ಕಟ್ಟನ್ನು ನಿವಾರಿಸಿಕೊಂಡು ಪರಿಸ್ಥಿತಿಯನ್ನು ತಿಳಿಯಾಗಿಸುತ್ತಾರೆ. ಅಂದರೆ ಸಂಘರ್ಷದ ನೆಲೆಗಳಿದ್ದಾಗಲೂ ಅದನ್ನು ಸಂಘರ್ಷಾತೀತ ಸ್ಥಿತಿಗೆ ಪರಿವರ್ತಿಸುವುದೇ ಪರಮ ಸಾಧನೆ ಎಂದು ಅಲ್ಲಿ ಭಾವಿಸಲಾಗಿದೆ. ಮಾಸ್ತಿ ಕತೆಗಳಲ್ಲಿ ಬರುವ ನಾಯಕರೆಲ್ಲ ಹೀಗೆ ಮಾಡುವವರೇ.

ಇದು ಒಂದು ರೀತಿಯಿಂದ, ಹಳೆಯ ತಾತ್ವಿಕ ಗ್ರಹಿಕೆಗಳನ್ನು 'ಹೊಸ ಪರಿಕರ'ಗಳ ಸಂದರ್ಭದಲ್ಲಿ ಸೂಕ್ಷ್ಮವಾಗಿ ಮತ್ತೆ ಪ್ರತಿಷ್ಠಾಪಿಸುವ ಕೆಲಸದಂತೆ ತೋರುತ್ತದೆ. ಇಲ್ಲಿ ಬಳಸಲಾದ 'ಹೊಸ ಪರಿಕರಗಳ ಸಂದರ್ಭ' ಎಂಬ ಮಾತು ೨೦ನೇ ಶತಮಾನದ ಸಾಮಾಜಿಕ ಜೀವನಕ್ಕೆ ಅನ್ವಯಿಸುತ್ತದೆ. ವಸಾಹತೀಕರಣಕ್ಕೊಳಪಟ್ಟ ನಾಡಿನಲ್ಲಿ ಕಾಣಿಸಿಕೊಂಡ ಹೊಸ

ಬಗೆಯ ರಚನೀಕರಣ ಪ್ರಕ್ರಿಯೆ ಉಂಟುಮಾಡಿದ ಸಾಮಾಜಿಕ ಚಲನಶೀಲತೆಯನ್ನು, ಗುರುತಿಸಿಯೇ ಮಾಡಿದ ಕೆಲಸವದು. ಹಾಗೆ ಗ್ರಹಿಸದಿದ್ದರೆ ಮಾಸ್ತಿಯವರಿಗೆ ಸಂಘರ್ಷಾತೀತ ಸ್ಥಿತಿಯೊಂದನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. **ಸಂಘರ್ಷದ ನೆಲೆಗಳ ಅರಿವಿಲ್ಲದೆ ಸಂಘರ್ಷರಹಿತ ಸಮಾಜವನ್ನು ಪ್ರತಿಪಾದಿಸಲಾಗುವುದಿಲ್ಲ.**

ಇನ್ನೊಮ್ಮೆ 'ಮೊಸರಿನ ಮಂಗಮ್ಮ' ಕತೆಯನ್ನೇ ಗಮನಿಸಬಹುದು. ಮನೆಯಿಂದ ಹೊರಗೆ ಬಂದ ಮಂಗಮ್ಮನಿಗೆ ನೈತಿಕ ಮತ್ತು ಆರ್ಥಿಕ ಸಮಸ್ಯೆ ಇದಿರಾಗುತ್ತದೆ. ಮಾಸ್ತಿಯವರಿಗೆ ಈ ಸಮಸ್ಯೆಯ ಗಂಭೀರತೆಯ ಅರಿವು ಗಾಢವಾಗಿ ಇರುವುದರಿಂದಾಗಿಯೇ ಅವರು ಮಂಗಮ್ಮನನ್ನು ಮತ್ತೆ ಮನೆಯೊಳಕ್ಕೆ ಸೇರಿಸುತ್ತಾರೆ. ಅಂದರೆ ಇಲ್ಲಿ ಮಾಸ್ತಿಯವರ ಬರಹದ ತಂತ್ರ ಅಮೂರ್ತವಾದ್ದನ್ನು ಮೌನದಲ್ಲಿಯೇ ದಾಖಲಿಸುವಷ್ಟು ಪ್ರೌಢವಾಗಿರುತ್ತದೆ. 'ವೆಂಕಟಿಗನ ಹೆಂಡತಿ'ಯಲ್ಲಾದರೂ ಅಷ್ಟೇ. ಓಡಿ ಹೋದವಳನ್ನು ವೆಂಕಟಿಗ ನಿರಾಕರಿಸಿ ಬಿಟ್ಟರೆ ಉಂಟಾಗಬಹುದಾದ ಘರ್ಷಣೆ ಮತ್ತು ಸಾಮಾಜಿಕ ಹಾನಿಯನ್ನು ಪೂರ್ತಿಯಾಗಿ ಗ್ರಹಿಸಿಯೇ ಮಾಸ್ತಿಯವರು ಅದನ್ನು ನಿರಾಕರಿಸುತ್ತಾರೆ. ಅಂದರೆ ಕತೆಗಾರ ಯಾವುದನ್ನು ಇಲ್ಲಿ ನೇರವಾಗಿ ತಿರಸ್ಕರಿಸುತ್ತಾನೋ ಅದುವೇ ಪರೋಕ್ಷವಾಗಿ ಸಾಮಾಜಿಕ ಘರ್ಷಣೆಯನ್ನು ಧ್ವನಿಸುತ್ತಿರುತ್ತದೆ. ಮೌನದಲ್ಲಿಯೇ ಮಾತಾಡುವ ಬಗೆಯಿದು. ಹೀಗೆ ನೋಡಿದಾಗ ವೆಂಕಟಶಾಮಿ ಬದುಕುಳಿದಿದ್ದರೆ ಏನಾಗುತ್ತಿತ್ತು? 'ನಳಿನಿಯ ತಂದೆ'ಯಲ್ಲಿ ಆಕೆ ತವರಿಗೆ ಹಿಂದುರುಗದೇ ಇದ್ದಿದ್ದರೆ ಉಂಟಾಗುವ ಸ್ಥಿತಿ ಎಂತಹುದು? 'ಚೆನ್ನಮ್ಮ'ದಲ್ಲಿ ಅವಳ ಗಂಡ ಸಾಯದೇ ಇದ್ದಿದ್ದರೆ ಏನಾಗುತ್ತಿತ್ತು? ಎಂಬಿತ್ಯಾದಿ ಸಂಗತಿಗಳ ಬಗೆಗೆ ಮಾಸ್ತಿಯವರಿಗೆ ಒಂದು ಸ್ಪಷ್ಟ ಕಲ್ಪನೆಯಿತ್ತು ಎಂಬುದು ಖಚಿತವಾಗುತ್ತದೆ.

ಬಹುಶಃ ಮಾಸ್ತಿಯವರ ಶ್ರೇಷ್ಠತೆ ಇರುವುದು ಅಂಥ ಸಂಘರ್ಷದ ನೆಲೆಗಳನ್ನು ಅವರು ಆಯ್ದುಕೊಳ್ಳುವಲ್ಲಿ ಮತ್ತು ಮೌನವಾಗಿ ಅದನ್ನು ಧ್ವನಿಸುವಲ್ಲಿ. ಸಂಘರ್ಷದ ನೆಲೆಗಳನ್ನು ಆಯ್ದುಕೊಳ್ಳುವಾಗ ಅವರು ಹೆಚ್ಚೆಚ್ಚು ಬ್ರಾಹ್ಮಣೇತರ ಪಾತ್ರಗಳ ಕಡೆಗೆ ವಾಲಿಬಿಡುತ್ತಾರೆ. ಇದೂ ಬ್ರಾಹ್ಮಣರನ್ನು ಕ್ಷೇಮ ವಲಯದಲ್ಲಿ ಇರಿಸುವುದರೊಂದಿಗೆ ಲೇಖಕನಿಗೆ ಅಗತ್ಯವಾದ ದೂರವನ್ನು ಸ್ಥಾಪಿಸಿಕೊಡುತ್ತದೆ.

ಹೀಗೆ ಮಾಸ್ತಿಯವರು ತುಂಬ ಸೂಕ್ಷ್ಮವಾಗಿ ಸಾಮಾಜಿಕ ಘರ್ಷಣೆಯನ್ನು ನಿರ್ವಹಿಸಿದ್ದಾರೆ. ೨೦ನೇ ಶತಮಾನದ ಕೊನೆಯ ದಶಕದಲ್ಲಿ ನಿಂತು ಅವರು ಸಾಮಾಜಿಕ ಘರ್ಷಣೆಯನ್ನು ನಿರ್ವಹಿಸಿದ ಬಗೆಯನ್ನು ವೀಕ್ಷಿಸಿದಾಗ ಸ್ವಲ್ಪ ನಿರಾಸೆಯಾಗುತ್ತದೆ. ಇಷ್ಟಿದ್ದರೂ ಮತ್ತೆ ಮತ್ತೆ ಮಾಸ್ತಿಯವರ ಕತೆಗಳನ್ನು ಓದಬೇಕೆನಿಸುತ್ತದೆ. ಇದು ಬಹುಶಃ ನಾವು ಪ್ರಜ್ಞಾಪೂರ್ವಕವಾಗಿ ರೂಪಿಸಿಕೊಂಡಿರುವ ವೈಚಾರಿಕ ವಿನ್ಯಾಸಕ್ಕೂ, ಅಪ್ರಜ್ಞಾ ಪೂರ್ವಕವಾಗಿ ರೂಢಿಸಿಕೊಂಡ ಜೀವನ ವಿನ್ಯಾಸಕ್ಕೂ ಇರುವ ಬಿಕ್ಕಟ್ಟೆಂದೇ ತೋರುತ್ತದೆ. ಏನಿದ್ದರೂ ಸದ್ಯದ ಕನ್ನಡ ಕಥಾಸಾಹಿತ್ಯ, ಮಾಸ್ತಿಯವರು ಏನನ್ನು ಹೇಳಬಾರದೆಂದು ಬಯಸಿದರೋ ಅದನ್ನೇ ಹೇಳಹೊರಟಂತೆ ತೋರುತ್ತದೆ. ಹಾಗಾಗಿಯೇ ತೇಜಸ್ವಿ, ದೇವನೂರು, ರಶೀದ್ ಮೊದಲಾದವರು ಕನ್ನಡ ಕಥಾಸಾಹಿತ್ಯವನ್ನು ಗಟ್ಟಿಯಾಗಿ ಬೆಳೆಸಬಲ್ಲ ಧೀಮಂತರಾಗಿ ತೋರುತ್ತಿದ್ದಾರೆ.

●

ಪರಾಮರ್ಶನ ಕೃತಿಗಳು :

೧. ಅಶೋಕ ಟಿ. ಪಿ. ೧೯೮೬ **ಸಾಹಿತ್ಯ ಸಂಪರ್ಕ**
ಅಕ್ಷರ ಪ್ರಕಾಶನ, ಸಾಗರ

೨. ಕೃಷ್ಣಮೂರ್ತಿ ಎಂ.ಜಿ ೧೯೭೨ **ಮಾಸ್ತಿಯವರ ಸಣ್ಣಕತೆಗಳು**
ಶ್ರೀನಿವಾಸ ಸಂ : ಮಾವಿನಕೆರೆ ರಂಗನಾಥನ್
ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು.

೩. ಗಿರಡ್ಡಿ ಗೋವಿಂದರಾಜ ೧೯೮೬ **ಕನ್ನಡ ಕಥಾ ಪರಂಪರೆ ಮತ್ತು ಮಾಸ್ತಿ**
ಮಾಸ್ತಿಯವರ ಸಾಹಿತ್ಯ ಸಂ : ಜಿ.ಎಸ್. ಶಿವರುದ್ರಪ್ಪ
ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

೪. ನಾಗಭೂಷಣ ಡಿ. ಎಸ್. ೧೯೯೧ **ಗಮನ**
ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ

೫. ನಾಗರಾಜ ಡಿ. ಆರ್. ೧೯೮೩ **ಅಮೃತ ಮತ್ತು ಗರುಡ**
ಪುಸ್ತಕ ಚಂದನ ಬೆಂಗಳೂರು

೬. ನಾಯಕ ಜಿ. ಎಚ್. ೧೯೮೬ **ಮಾಸ್ತಿಯವರ ಸಣ್ಣ ಕತೆಗಳಲ್ಲಿನ ಸಂಘರ್ಷಗಳ ಸ್ವರೂಪ**
ಮಾಸ್ತಿಯವರ ಸಾಹಿತ್ಯ ಸಂ : ಜಿ.ಎಸ್. ಶಿವರುದ್ರಪ್ಪ
ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

೭. ರಾಜೇಂದ್ರ ಚೆನ್ನಿ ೧೯೮೭ **ಅಧ್ಯಯನ**
ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ

೮. ಸತ್ಯನಾರಾಯಣ ಎಂ.ಆರ್. ೧೯೮೫ **ಮಾಸ್ತಿಯವರ ಕಥಾ ಸಾಹಿತ್ಯ**
ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ

ನನ್ನ ಕತೆಗಳನ್ನು ಬರೆಯುನಲ್ಲಿ ನನ್ನ ಉದ್ದೇಶ ಒಂದೇ ಒಂದು, ಎಂದು ನಾನು ಹಲವು ಸಂದರ್ಭಗಳಲ್ಲಿ ಸೂಚಿಸಿದ್ದೇನೆ. ಆ ಉದ್ದೇಶ, ಜೀವನ ನನಗೆ ನೀಡಿರುವ ದರ್ಶನವನ್ನು ವಿವರಿಸುವ ಚಿತ್ರಗಳನ್ನು ಕೊಡುವುದು. ಇಂದಿನ, ಹಿಂದಿನ, ನಮ್ಮ ನಾಡಿನ, ನಮ್ಮ ರಾಷ್ಟ್ರದ, ಬೇರೆ ಹತ್ತು ರಾಷ್ಟ್ರಗಳ, ಬಹು ತೆರನ ಜೀವನ ಚಿತ್ರಗಳು ನನ್ನ ಕತೆಗಳಲ್ಲಿ ಕಾಣುತ್ತವೆ. ಇವು ಸತ್ಯವನ್ನು ಬಿಂಬಿಸಿವೆ, ಸ್ಫುಟವಾಗಿವೆ, ಇಷ್ಟೋ ಅಷ್ಟೋ ರಸಾನುಭವವನ್ನು ನೀಡುತ್ತವೆ ಎಂದು ಓದುವವರಿಗೆ ಕಂಡರೆ ನನ್ನ ಕೆಲಸ ಸಾರ್ಥಕ ಆಯಿತು. ಇದರ ಆಚೆಗೆ ಇವನ್ನು ಓದುವವರು ಇವುಗಳಲ್ಲಿ ಜೀವನವನ್ನು ಕುರಿತು ಇಂಥ ಅಂಥ ನೀತಿ ಮುಂತಾದುವನ್ನು ನಿರೂಪಿಸುವ ಉದ್ದೇಶ ಇದೆ ಎಂದು ಭಾವಿಸಬಹುದು. ದಿಟವಾದ ಜೀವನದಿಂದ ಒಂದು ಭಾವ ತೋರುವಂತೆ ಜೀವನದ ದಿಟವಾದ ಒಂದು ಚಿತ್ರದಿಂದಲೂ ಒಂದು ಭಾವ ತೋರುವುದು ಸಹಜ. ಅದರಿಂದ ಓದುಗರಿಗೆ ಪ್ರಯೋಜನ, ಸಂತೋಷ ಆಗುವುದಾದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ.....

—**ಮಾಸ್ತಿ** (ಮುನ್ನುಡಿ : 'ಸಣ್ಣ ಕತೆಗಳು ೧೪)

ಮಾಸ್ತಿ ಕಥೆಗಳ ಸ್ತ್ರೀ ಪಾತ್ರಗಳು

ಬಿ.ಎನ್. ಸುಮಿತ್ರಾಬಾಯಿ

ಮಾಸ್ತಿ ಬರಹದಲ್ಲಿ ಸ್ತ್ರೀ ಪಾತ್ರಗಳ ದಟ್ಟಣೆಯಿದೆ. ಕೇವಲ ಸಂಖ್ಯೆಯಿಂದಷ್ಟೇ ಅಲ್ಲ. ವಸ್ತು, ರಚನಾತಂತ್ರ, ನಿರೂಪಣೆಯಂಥ ಸಾಹಿತ್ಯ ಪರಿಕರದಿಂದ ಜೀವನದರ್ಶನದ ವರೆಗೆ ಎಲ್ಲೆಲ್ಲೂ ಸ್ತ್ರೀಯ ಇರವು ಅನುಭವಕ್ಕೆ ಬರುತ್ತದೆ.

ಒಬ್ಬ ಸುಬ್ಬಣ್ಣನ ಬಾಳಿನಲ್ಲಿ ತಾಯಿ, ಅಕ್ಕ, ಹೆಂಡತಿ, ಮಗಳು ಹೀಗೆ ಅನೇಕ ಸ್ತ್ರೀಯರು ಬರುತ್ತಾರೆ. ಅವನ ಬದುಕಿಗೆ ತಮ್ಮ ಸತ್ವದ ಒಂದು ಅಂಶವನ್ನು ಕೊಟ್ಟು, ಅವನನ್ನು ತಿದ್ದಿ, ಬೆಳಸಿ ತಾವು ಇಲ್ಲವಾಗುತ್ತಾರೆ.[1] ಇದರ ಸಮಾನಾಂತರ ನೆಲೆಯಲ್ಲಿ ಒಬ್ಬಳೇ ಶೇಷಮ್ಮ ತನ್ನ ಬದುಕಿನ ಹಾದಿಯಲ್ಲಿ ಬಂದ ಎಲ್ಲ ಅಡ್ಡಿ ಆತಂಕಗಳನ್ನು ಎದುರಿಸಿ, ಬದುಕನ್ನು ಬಂದಂತೆ ಸ್ವೀಕರಿಸಿ, ತೊಂದರೆ ಕೊಟ್ಟವರ ಬದುಕನ್ನೂ ಹದಗೊಳಿಸಲು ಯತ್ನಿಸಿ ಮಾನವೀಯ ವಾತ್ಸಲ್ಯ, ನಿರಹಂಕಾರ ಕರುಣೆಗಳ ಮೂರ್ತಿಯಾಗಿದ್ದಾಳೆ. ತನ್ನ ಬದುಕಿನಲ್ಲಿ ಬಂದ ಎಲ್ಲರಿಗೂ ತನ್ನದೊಂದು ಸತ್ವವುಣಿಸಿ, ತನ್ನದೆಂಬದೇನೂ ಇಲ್ಲವಾಗುವ ಮೂಲಕ ಸಾರ್ಥಕತೆ ಪಡೆಯುತ್ತಾಳೆ. ಈ ಎರಡು ಕೃತಿಗಳ ಆಕೃತಿಗಳು ಏನೇ ಇರಲಿ ಲೋಕದ ಬದುಕಿನಲ್ಲಿ ಸ್ತ್ರೀ ಪುರುಷರ ನೆಲೆಯನ್ನು, ಮಹತ್ವವನ್ನು ಮಾಸ್ತಿ ಗುರುತಿಸುವ ಬಗೆಗೆ ಇವು ನಿರ್ದೇಶನ ಮಾಡುವಂತಿವೆ.

ಪತ್ನಿಯನ್ನು ದೇವಿಯಂತೆ, ಲೋಕಮಾತೆಯಂತೆ ಕಂಡು ಗೌರವಿಸುವ ಗಂಡಂದಿರು ಮತ್ತು ಪತಿಯೇ ಪ್ರತ್ಯಕ್ಷ ದೇವತೆಯೆಂದು ಭಾವಿಸಿ, ತನ್ನದೆನ್ನುವ ಭೇದವಿಲ್ಲದೆ ಆತನಿಗೆ ತನ್ನನ್ನು

ಸಮರ್ಪಿಸಿಕೊಳ್ಳುವ ಹೆಂಡತಿಯರು ಮಾಸ್ತಿ ಚಿತ್ರಿಸುವ ಆದರ್ಶ ಸ್ತ್ರೀ–ಪುರುಷರು. ಈ ನಂಬಿಕೆಯ ಅಡಿಯಲ್ಲಿ ಗಂಡಸಿಗೆ ಬದುಕಿನ ಗತಿಯನ್ನು ನಿರ್ಧರಿಸುವ ಇಚ್ಛಾಶಕ್ತಿ, ಕ್ರಿಯೆಗೆ ತೊಡಗುವ ಸ್ವಾತಂತ್ರ್ಯ ಇವೆ. ಆದರೆ ಹೆಂಗಸಿಗೆ ಪತಿಯು ಕೈಗೊಂಡ ದಾರಿಯಲ್ಲೇ ನಡೆಯುವುದು, ಬಂದ ನೋವುಗಳನ್ನು ನುಂಗಿಕೊಳ್ಳುವುದು, ಪರಿಸ್ಥಿತಿ ನೋಡಿ ಅವನನ್ನು ನೆರಳಿನಂತೆ ಅನುಸರಿಸಿಕೊಂಡಿರುವುದೊಂದೇ ದಾರಿ. ಗಂಡಸಿನ ನೆರಳಿನಾಸರೆ ತಪ್ಪಿದಾಗ ಈ ಹೆಂಗಸರಲ್ಲಿ ಪ್ರಬಲರಾದವರು ತಾವೇ 'ಗಂಡಸಿನಂತೆ' ಸಂಸಾರದ ನೊಗ ಹೊತ್ತು, ಮಕ್ಕಳನ್ನು, ಕುಟುಂಬವನ್ನು ಕಾಯುವ ಮಾತೃ ರೂಪಿಣಿಯಾಗಿ ಬೆಳೆಯುತ್ತಾರೆ. ಮತ್ತೆ ಕೆಲವರು ತಮ್ಮ ಸಾಧ್ವಿ ಮೌಲ್ಯಗಳಿಗೆ ಧಕ್ಕೆ ಬಂದಾಗ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ತಮ್ಮ ತಪ್ಪು ಏನೂ ಇಲ್ಲದಿದ್ದರೂ ಸುತ್ತಲಿನವರ ಸ್ವಾರ್ಥ, ಮಾತ್ಸರ್ಯ ಇಲ್ಲವೆ ದುರದೃಷ್ಟಕ್ಕೆ ಸಿಕ್ಕು ದುರಂತಕ್ಕೆ ಗುರಿಯಾಗುವವರು ಇತರರು.

ಮಾಸ್ತಿ ಗ್ರಹಿಸುವ, ನಂಬುವ, ಪ್ರತಿಪಾದಿಸುವ ಸ್ತ್ರೀಸತ್ವ ಮೂಲಭೂತವಾಗಿ ಮಾತೃಗುಣವುಳ್ಳದ್ದು. 'ಸ್ತ್ರೀಯು ಪ್ರೇಯಸಿ ಹೇಗೋ ಅದಕ್ಕಿಂತ ಹೆಚ್ಚಾಗಿ ಮಾತೆಯಾಗಿರುವವಳು. ನೀನು ಯಾರನ್ನು ನಿನ್ನ ಪತ್ನಿಯೆಂದು ಕರೆಯುವಿಯೂ ಅವಳು ಕೂಡ ನಿನ್ನ ಸಂಸಾರಕ್ಕಾಗಿ ಒಂದು ಸಮಯದಲ್ಲಿ ಪತ್ನಿಯಂತೆ ನಡೆದುಕೊಂಡರೂ ಸದಾ ಹೃದಯದಲ್ಲಿ ನಿನ್ನನ್ನೂ ಒಂದು ಮಗುವಿನಂತೆ ನೋಡುವವಳು. ನಾವು ನಮ್ಮ ಗೃಹಿಣಿಯರಲ್ಲಿ ಮೆಚ್ಚುವದೇನು? ಆ ಅವರ್ಣನೀಯವಾದ ಸ್ತ್ರೀವ್ಯಕ್ತಿತ್ವ, ಸಾವಿರ ಸಂದರ್ಭದಲ್ಲಿ ನಾವು ನೋಡಿರುವ ಆ ಪ್ರೇಮ, ಆಶಯ, ಆ ಕನಿಕರ, ಆ ವಿಭ್ರಮ, ಆ ಲಾಲಿತ್ಯ, ಆ ಸೌಕುಮಾರ್ಯ, ಆ ಸ್ತ್ರೀತ್ವ"

ಮಾತೆಯೂ ಆಗದ ಪತ್ನಿಯೂ ಅಲ್ಲದ ಕೇವಲ ಅದಮ್ಯ ಪ್ರಕೃತಿಯ ಪ್ರವೃತ್ತಿಯ ಸ್ತ್ರೀಯ ಇರವು ಪುರುಷನ ಅಹಮಿಕೆಗೆ ದೊಡ್ಡ ಸವಾಲು. ತಾಯಿ ಗುಣವು ಪುರುಷನ ತಾರಕ, ಉದ್ಧಾರಕ ಶಕ್ತಿಯಾಗಿದ್ದರೆ ಈ ಪ್ರಾಕೃತಿಕ ಕಾಮವೇ ಸಾಕಾರವಾದಂಥ ಸ್ತ್ರೀತ್ವ ಅವನನ್ನು ಸರ್ವನಾಶ ಮಾಡಬಲ್ಲ ಸ್ವಯಂಪೂರ್ಣ ಪ್ರಚಂಡಶಕ್ತಿ. ಹೀಗೆ ಧೃವೀಕೃತವಾದ ಸ್ತ್ರೀತ್ವದ ಎರಡು ಆಯಾಮಗಳ ಕಲಾತ್ಮಕ ಜಿಜ್ಞಾಸೆಯನ್ನು 'ಗೌತಮಿ ಹೇಳಿದ ಕಥೆ' ಯಲ್ಲಿ ಗುರುತಿಸಬಹುದು. ಅದಕ್ಕಿಂತ ಮೊದಲು 'ಒಂದು ಹಳೆಯ ಕಥೆ' ಯಲ್ಲೂ ಈ ವಿಷಯದ ಎಳೆಯನ್ನು ಕಾಣಬಹುದು. ತನ್ನ ಬ್ರಹ್ಮಚರ್ಯದ ಮೂಲಕ ತನ್ನ ನಿಗ್ರಹ ಶಕ್ತಿಯ ಬಗ್ಗೆ ಬಹುವಾಗಿ ಅಹಮಿಕೆ ಬೆಳೆಸಿಕೊಂಡ ಪುರುಷ ಸಮಗ್ರ ಹೆಣ್ಣುತನದ ಸೆಳೆತದ ಎದುರು ದುರ್ಬಲನಾಗದೆ ಉಳಿಯುವುದು ಅಸಾಧ್ಯ ಎಂಬ ವಸ್ತುವನ್ನು 'ಒಂದು ಹಳೆಯ ಕಥೆ' ಪುರುಷನ ನೆಲೆಯಿಂದ ಜಿಜ್ಞಾಸೆಗೆ ಒಳಗುಮಾಡುತ್ತದೆ. ಸ್ತ್ರೀ–ದೇವಿ–ತಾಯಿ ಎಂಬ ಅರಿವೇ ಅಲ್ಲಿ ವಿನಯವನ್ನು ತರುತ್ತದೆ.

'ಗೌತಮಿ ಹೇಳಿದ ಕಥೆ' ತೀರಾ ಮಾನವೀಯ ನೆಲೆಯಲ್ಲಿ ಪ್ರಕೃತಿತ್ವವನ್ನು ಮುಂದೊಡ್ಡಿದ ಸ್ತ್ರೀಯ ಎದುರು ಪುರುಷ ಅಸಹಾಯಕ ಎಂಬ ತೀರ್ಮಾನವನ್ನೇ ಸೂಚಿಸಿದರೂ ವಿನಾಶದಿಂದ ಪಾರಾಗಲು ಮಾಲಿನಿಯೇ ತನ್ನನ್ನು ತಾನು ನಿಗ್ರಹಿಸಿಕೊಂಡು, ದತ್ತನನ್ನೂ ಉಳಿಸುವ ಸಾತ್ವಿಕತೆಯ ವಿಜಯವಾಗಿ ಆ ವಸ್ತು ರೂಪು ಪಡೆಯುತ್ತದೆ.

ಅನಂತ ಮೂರ್ತಿಯವರು ಈ ಕಥೆಯಲ್ಲಿ ಪ್ರವೃತ್ತಿ ಮತ್ತು ಸಂಸ್ಕೃತಿಗಳ ಕರ್ಷಣವನ್ನು ಗುರುತಿಸಿದ್ದರೆ ರಾಜೇಂದ್ರ ಚೆನ್ನಿಯವರು ಈ ತೀರ್ಮಾನವನ್ನು ಪ್ರಶ್ನಿಸುತ್ತಾ ಮಾಲಿನಿಯ ಆತ್ಮನಿಗ್ರಹ ಸಾಧ್ಯವಾದದ್ದು ಸಂಪ್ರದಾಯ, ಸಂಸ್ಕೃತಿಗಳ ನೆಲೆಗೆ ಅತೀತವಾದ ನಿಗೂಢವಾದ ಮಾನಸದ ನೆಲೆಯ, ಅಗೋಚರ ಶಕ್ತಿಯಿಂದ ಎಂದು ಸೂಚಿಸುತ್ತಾರೆ. ಕಥೆಯಲ್ಲಿ ಆ ಸಂದರ್ಭವನ್ನು ಮಾಸ್ತಿ ಹೀಗೆ ನಿರೂಪಿಸುತ್ತಾರೆ :

'........ ಮಾಲಿನಿಯ ಪುಣ್ಯ ಚೆನ್ನಾಗಿತ್ತು, ದತ್ತನ ಧ್ವನಿಯಲ್ಲಿ ಕೇಳಿದ ಒಂದು ಅಂಗಲಾಚಿಕೆಯ ಎಳೆ ಅವಳ ಬಾಳಿನ ಯಾವುದೋ ಒಂದು ಕಳೆಯನ್ನು ಮುಟ್ಟಿತು. ಅವಳಿಗೇ ತಿಳಿಯದೆ ಅವಳನ್ನು ಆಸೆ ಅಲ್ಲಿಗೆ ಎಳೆತಂದಂತೆ; ಅವಳಿಗೇ ತಿಳಿಯದೆ ಆ ಕಳೆ ಅವಳ ದೃಷ್ಟಿಯನ್ನು ತಡೆ ಹಿಡಿದಿದ್ದ ಒಂದು ತೆರೆಯನ್ನು ಹರಿಯಿತು. ತನ್ನ ಆಸೆಯನ್ನು ಸಹಿಸಬಲ್ಲ ಹಿರಿಯನೆಂದು ಕಂಡಿದ್ದ ದತ್ತ ಅವಳಿಗೆ ಆ ಕ್ಷಣ ತನ್ನ ಸಹಾಯದಿಂದ ಮಾತ್ರ ಬದುಕಬಲ್ಲ ನಿಸ್ಸಹಾಯ ಬಾಲಕನಾಗಿ ಕಂಡನು'

ಈ ಕಾಣ್ಕೆಯ ನಂತರ ದತ್ತನ ಬಗ್ಗೆ ಮಾಲಿನಿ ಹರಿಸುವ ಪ್ರೀತಿ ತಾಯಿಯ ಪ್ರೀತಿ. ಪುರುಷತ್ವಕ್ಕೆ ಸವಾಲೆಸೆದ ಕಾಮಿನಿಯ ವಿಕಟ ಸೆಳೆತದ ರೂಪ ಹೋಗಿ ಆದಿಮಾತೆ ರೂಪದಲ್ಲಿ ಕರಗುತ್ತದೆ. ಮಾನಸದ ಸ್ತರದಲ್ಲೇ ನಿಗೂಢ ಶಕ್ತಿಗಳಾಗಿ ಬರುವ ಈ ಅರ್ಕಿಟೈಪ್‌ಗಳು ಕೂಡ ಸಂಸ್ಕೃತಿ ಜನ್ಯವೇ. ಪರಂಪರಾಗತ ಸಂಸ್ಕೃತಿಯಲ್ಲಿ ಮಾಸ್ತಿಯವರು ಅಭಿಜಾತ ಮೌಲ್ಯ ಎಂದು ಸ್ವೀಕರಿಸುವ ಹೆಣ್ಣು–ಮಾತೆ ಎಂಬ ಪರಿಕಲ್ಪನೆಯ ಮೂಲಕವೇ ಗೌತಮಿ, ದತ್ತರನ್ನು ಅರ್ಥೈಸುತ್ತಿದ್ದಾರೆಂದು ತೋರುತ್ತದೆ. ಪ್ರವೃತ್ತಿ ವಿನಾಶಕಾರಕ ಎಂಬೂದೂ, ಅದರ ನಿಗ್ರಹ ಅಗತ್ಯವೆನ್ನುವುದೂ ಅದೇ ಸಂಸ್ಕೃತಿಯ ಮೌಲ್ಯಗಳು. ಮಾಸ್ತಿಯವರು ಇಲ್ಲಿ ಕರ್ಷಣವನ್ನು ತಂದರೂ ತೀರ್ಮಾನ ಪೂರ್ವನಿರ್ಧಾರಿತವೇ. ಎಲ್ಲರೂ ದತ್ತನಂಥ ನಿಗ್ರಹಶಕ್ತಿ ಹೊಂದಿರುವುದಿಲ್ಲ. ಎಲ್ಲರಿಗೂ ಗೌತಮಿಯಂಥ ಇಚ್ಛಾಶಕ್ತಿಯ ಹಿರಿಮೆ ಬರಲಾರದು. ಆದುದರಿಂದ ಶಕುಂತಲೆಯ ಹಾಗೆ ಕಷ್ಟಕ್ಕೊಳಗಾಗುವ ಬದಲು ಅನಸೂಯೆ, ಪ್ರಿಯಂವದೆಯರ ಹಾಗೆ ಸಾಮಾನ್ಯ ಹುಡುಗಿಯರು ವಯಸ್ಸಿಗೆ ಬಂದ ಕೂಡಲೆ ಮದುವೆಯಾಗಿ ಬಿಡುವುದು ಒಳ್ಳೆಯದು ಎಂಬ ಮಾತನ್ನು ಗೌತಮಿಯೇ ಹೇಳುವಂತೆ ಕಲ್ಪಿಸಿರುವುದನ್ನು ಗಮನಿಸಬೇಕು. ನಿಗ್ರಹದ ಆತ್ಮಶಕ್ತಿ ಹೊಂದಲಾರದ ಸ್ತ್ರೀಯರು ಪತ್ನಿಯರಾಗಿ ತಾಯಿಯರಾಗಿ, ಮೂಲದ ಮಾತೃಗುಣವನ್ನು ರೂಢಿಸಿಕೊಳ್ಳಬಹುದು. ಇಂಥ ರೂಢಿಗತ ಸ್ತ್ರೀತ್ವದ ಮಾದರಿಗಳೇ ಮಾಸ್ತಿಯವರ ಕಥೆಗಳಲ್ಲಿ ಬಹುವಾಗಿ ವಿಜೃಂಭಿಸುವುದು.

ವೈವಾಹಿಕ ಬದುಕೇ ಮಾಸ್ತಿ ಚಿತ್ರಿಸುವ ಆದರ್ಶಪ್ರಾಯ ಬದುಕು. ಎಲ್ಲ ಜಿಜ್ಞಾಸೆಗಳೂ ಬಂದು ತಲುಪುವುದು ಅಲ್ಲಿಗೇ. ಹೀಗಿದ್ದರೂ ಸಾಂಸಾರಿಕ ಬದುಕಿನ ಕಷ್ಟ ಜವಾಬ್ದಾರಿಗಳನ್ನು ಅಲ್ಲಿಯೇ ನಿಂತು ದೃಢವಾಗಿ ಎದುರಿಸುವವರಿಗಿಂತ ಹೆಚ್ಚಾಗಿ ಮಾಸ್ತಿಯವರ ಕಥೆಗಳಲ್ಲಿ ಮನೆ ಬಿಟ್ಟು ಹೋಗುವ, ಸಂಸಾರತ್ಯಾಗ ಮಾಡುವ ಅಥವಾ ವ್ಯಸನಗಳಿಗೆ ವಶರಾಗಿ ತಮ್ಮ ಹೊಣೆಯಿಂದ ಜಾರಿಕೊಳ್ಳುವ ಅಪ್ರಬುದ್ಧ ಗಂಡಸರೇ ಹೆಚ್ಚು. ಸಹಜವಾಗಿಯೇ ಇಂಥವರ ಹೆಂಡತಿಯರು ಮಾಸ್ತಿಯವರ ಕಥೆಗಳಿಗೆ ವಸ್ತುವಾಗಿದ್ದಾರೆ. 'ಮುನೀಶ್ವರನ ಮರ',

‘ಒಂದು ಕಾಮನ ಹಬ್ಬದ ಕಥೆ’, ‘ಆಚಾರ್ಯರ ಪತ್ನಿ’, ‘ಸಾರಿ ಪುತ್ರನ ಕಡೆಯ ದಿನಗಳು’, ‘ನಳಿನಿಯ ತಂದೆ’, ‘ಚೆನ್ನಮ್ಮ’, ‘ಮೇಲೂರಿನ ಲಕ್ಷಮ್ಮ’ ಮುಂತಾದವು ಇಂಥ ಸನ್ನಿವೇಶಗಳಿರುವ ಕಥೆಗಳು.

‘ಮುನೀಶ್ವರನ ಮರ’ ದಲ್ಲಿ ರಾಜಮ್ಮನ ನಡತೆಯ ಬಗ್ಗೆ ಸಂದೇಹಪಟ್ಟು ಆಕೆಯನ್ನು ಬಿಟ್ಟು ಹೋಗಿ ಸನ್ಯಾಸಿಯಾದ ಗಂಡ ಮತ್ತೆ ಅದೇ ಊರಿಗೆ ಬಂದಾಗ ಆತ ತನ್ನನ್ನು ಕೊನೆಗೂ ಕ್ಷಮಿಸಲಿಲ್ಲವೆಂಬ ಸತ್ಯ ರಾಜಮ್ಮನಿಗೆ ಅರಿವಾಗುತ್ತದೆ. ಈ ಅರಿವಿನಿಂದ ಆಕೆ ಹುಚ್ಚಿಯಾಗುತ್ತಾಳೆ. ‘ಒಂದು ಕಾಮನ ಹಬ್ಬದ ಕಥೆ’ ಯ ಸಾವಿತ್ರಮ್ಮನ ಗಂಡ ಎಳೆಯ ವಯಸ್ಸಿನಲ್ಲೇ ಮನೆ ತೊರೆದು ಹೋದವನು, ಆತ ತೀರಿಕೊಂಡನೆಂಬ ಸುದ್ದಿ ಕೇಳಿ ಆಕೆ ವಿಧವೆಯಾಗಿ ಬದುಕುತ್ತಿರುವುದಲ್ಲದೆ ಮುಂದಿನ ಜನ್ಮದಲ್ಲಾದರೂ ಈ ಸ್ಥಿತಿ ಬಾರದಿರಲೆಂದು ಕಾಮನ ಹಬ್ಬದ ದಿನಗಳಂದು ಪ್ರತಿವರ್ಷ ಹುಡುಗರಿಂದ ಬೂದಿ ಹೊಯ್ಸಿಕೊಳ್ಳುವ ಕಠೋರ ವ್ರತವನ್ನು ಪಾಲಿಸುತ್ತಿರುತ್ತಾಳೆ. ಕೊನೆಗೆ ಗಂಡ ಹಿಂದಿರುಗಿದಾಗ ಆಕೆಯ ವ್ರತ ಅದೇ ಜನ್ಮದಲ್ಲಿ ಫಲಿಸಿದಂತಾಗುತ್ತದೆ. ‘ವೇಲೂರಿನ ಲಕ್ಷಮ್ಮ’ ಕಥೆಯ ನಾಯಕಿ ಹುಟ್ಟುಗುರುಡಿ. ಹಣದಾಸೆಗೆ ಈಕೆಯ ಕೈಹಿಡಿದಾತನಿಗೆ ತನ್ನತನವೆಂಬುದಿಲ್ಲ. ಆತನ ಮನೆಯಲ್ಲಿ ನೂರಾರು ದುಃಖಗಳನ್ನು ನುಂಗಿ, ಹೆತ್ತ ಮಕ್ಕಳನ್ನೂ ಕಳೆದುಕೊಂಡು ಹುಚ್ಚಿಯಾದರೂ ಲಕ್ಷಮ್ಮ ಕಾಶಿಗೆ ಹೋಗಿರುವ ಗಂಡನನ್ನು ಎಂದಾದರೂ ಸೇರಬೇಕೆಂಬ ತವಕದಲ್ಲೇ ಬದುಕು ಸವೆಸುವವಳು.

ಇಂಥವರ ಬದುಕಿನ ವೈಪರೀತ್ಯ, ದುರಂತಗಳ ಬಗ್ಗೆ ಅನುಕಂಪದಿಂದ ನೋಡುವ ಮಾಸ್ತಿ ಮನುಷ್ಯ ಜೀವನ ನಡೆಯುವುದು ದೇವರಿಚ್ಛೆಯಂತೆ, ದೈವನಿಯಾಮಕದಂತೆ ಎಂಬ ತಾತ್ವಿಕನೆಲೆಯಿಂದಲೇ ಇವರ ಬದುಕುಗಳನ್ನು ಪರಿಭಾವಿಸುತ್ತಾರೆ. ಇವರ ಬದುಕು ಹೀಗಿದೆ ಎಂದು ಚಿತ್ರಿಸುವ ಯಥಾವತ್ ದರ್ಶನದ ಆಸಕ್ತಿಗೆ ಒಗ್ಗುವಷ್ಟರ ಮಟ್ಟಿಗೆ ಮನುಷ್ಯರಾಗಿ ಅವರ ದೌರ್ಬಲ್ಯ ಪ್ರಾಬಲ್ಯಗಳನ್ನು ನಿಷ್ಪಕ್ಷಪಾತವಾಗಿ ಚಿತ್ರಿಸುವಂತೆನಿಸುತ್ತದೆ. ಆದ್ದರಿಂದ ಪತಿಯಿದ್ದೂ ರಾಜಮ್ಮ ಬೇರೆ ಸಂಬಂಧ ಬೆಳೆಸುವಂತಾದದ್ದರ ಇನ್ನಿತರ ಆಯಾಮಗಳಾಗಲೀ, ಗಂಡನ ಕ್ರೌರ್ಯವಾಗಲಿ, ರಾಜಮ್ಮನ ಪಶ್ಚಾತ್ತಾಪ ಮತ್ತು ಪತಿ ಪ್ರೇಮಗಳಾಗಲೀ ಯಾವುದೂ ತೀವ್ರ ಕರ್ಷಣಕ್ಕೊಳಗಾಗದೆ ಉಳಿಯುತ್ತವೆ. ‘ವೇಲೂರಿನ ಲಕ್ಷಮ್ಮ’ ಈ ದೃಷ್ಟಿಯಿಂದ ಸ್ವಲ್ಪ ಭಿನ್ನವಾದದ್ದು. ಅದರಲ್ಲಿ ಲಕ್ಷಮ್ಮ ಕುರುಡಿ ಎಂದು ಅಸಡ್ಡೆಯಿಂದ ಕಾಣುವ ಗಂಡ, ಕುರುಡು ಮಗು ಹೆತ್ತಳು ಎಂಬ ಕೊರಗಿನ ಜೊತೆಗೆ ಅತ್ತೆ ಮನೆಯವರ ಹಿಂಸೆ, ತುಳಿತಗಳಿಂದಲೇ ಧೈರ್ಯ ತಳೆದು ತನ್ನನ್ನು ತಾನು ಸಮರ್ಥಿಸಿಕೊಳ್ಳುವಷ್ಟು ಶಕ್ತಿಯಿರುವಾಕೆ:

‘ಕಣ್ಣಿಲ್ಲದೆ ಇದ್ದರೆ ನಾನೇನು ಕಡಿಮೆಯಾದೆ? ಗಂಡನ್ನ ಹೆತ್ತೆ, ಹೆಣ್ಣನ್ನ ಹೆತ್ತೆ. ನನ್ನ ಕೈಯಿಂದ ಏನು ಚಾಕರೀ ಆಗುತ್ತೋ ಅದನ್ನು ಮಾಡುತ್ತೇನೆ. ಕಣ್ಣಿರುವ ಸೊಸೆ ಅತ್ತೆ ಮಾವನಿಗೆ ಇದಕ್ಕಿಂತ ಏನು ಚಾಕರಿ ಮಾಡುತ್ತಾಳೆ? ಕೈ ಹಿಡಿದ ಗಂಡ ಬೇಕಾದರೆ ಅಯ್ಯೋ ಹೆಂಡತಿಗೆ ಕಣ್ಣಿಲ್ಲವಲ್ಲ ಎನ್ನಬಹುದು. ಕಣ್ಣಿರುವ ಹೆಂಗಸರು ಗಂಡ ಎಲ್ಲೆಲ್ಲಿ ಹೋದ ಅಂತ ನೋಡ್ತಾ ಇರಬಹುದು. ನನ್ನಂಥ ಪುಣ್ಯಾತ್ಮಗಿತ್ತಿಗೆ ಇಂಥ ಯೋಚನೆ ಇಲ್ಲ. ಗಂಡನಿಗೆ ನನ್ನಿಂದ ಒಂದು ತೊಂದರೆ ಇಲ್ಲ. ನನ್ನನ್ನು ಸಿಕ್ಕಿದೋರು ಸಿಕ್ಕಿದ ಹಾಗೆ ಅನ್ನಬೇಡಿ’’[೮]

ಹೀಗೆ ದಬಾಯಿಸುವಷ್ಟಾದರೂ ಶಕ್ತಿಯಿದ್ದ ಈಕೆ ಗಂಡನೂ ತನ್ನನ್ನು ತೊರೆದು ಕುರುಡು ಮಗಳೂ ಬಾವಿಗೆ ಬಿದ್ದು ಸತ್ತಾಗ ದು:ಖಾತಿರೇಕದಿಂದ ಹುಚ್ಚಿಯಾಗುತ್ತಾಳೆ.

'ನಳಿನಿಯ ತಂದೆ' ಕಥೆಯಲ್ಲಿ ಗಂಡ ಹುಟ್ಟು ಜೂಜುಕೋರ, ಕುಹಕಿ, ಹೆಂಡತಿಯ ಹಂಗಿನಲ್ಲಿ ಬದುಕುವ, ಸ್ವಾಭಿಮಾನವಿಲ್ಲದ ದುರ್ಬಲ ಮನುಷ್ಯ. ಇವನನ್ನು ಸುಧಾರಿಸಲು ಮಾಡಿದ ಯತ್ನವೆಲ್ಲ ವಿಫಲವಾಗಿ, ತನ್ನ ಪಿತ್ರಾರ್ಜಿತ ಆಸ್ತಿಯೆಲ್ಲ ಕರಗತೊಡಗಿದಾಗ ಮಗಳ ಭವಿಷ್ಯದ ಹೊಣೆ ಹೊತ್ತ ಹೆಂಡತಿ ಈತನಿಂದ ದೂರವಾಗುತ್ತಾಳೆ. ಓದು ಮುಂದುವರೆಸಿ, ಕೆಲಸ ಗಳಿಸಿ, ಮಗಳನ್ನು ಬೆಳೆಸಿ, ಉತ್ತಮ ಬದುಕಿಗೆ ಸಿದ್ಧವಾಗಿಸುತ್ತಾಳೆ. ಮಗಳ ಮದುವೆ ನಿಶ್ಚಯವಾಗುವ ಹೊತ್ತಿನಲ್ಲಿ ಈ ತಂದೆಯ ನೆರಳು ಎಲ್ಲಿ ತನ್ನ ಮಗಳ ಭವಿಷ್ಯವನ್ನು ಹಾಳು ಮಾಡೀತೋ ಎಂದು ಎಚ್ಚರ ವಹಿಸುತ್ತಾಳೆ. ಇಷ್ಟೆಲ್ಲ ಸ್ವತಂತ್ರ ಶಕ್ತಿ ತೋರಬಲ್ಲ ಲಕ್ಷ್ಮಿ ಕತೆಗಾರರ ಕೇಂದ್ರ ಆಸಕ್ತಿಯಾಗುವುದಿಲ್ಲ. ಬದಲಾಗಿ ಆ ದಾರಿ ತಪ್ಪಿದ ತಂದೆ ಕೂಡ ತನ್ನ ಕರುಳ ಕುಡಿಯ ಬಗ್ಗೆ ಸೆಳೆತಕ್ಕೊಳಗಾದ, ಅದಕ್ಕಾಗಿ ಅವಳ ಹಾದಿಯಿಂದ ಮರೆಯಾಗಲೂ ಸಿದ್ಧನಾದ ಎಂಬುದು ಕಥೆಯ ಮುಖ್ಯ ಆಸಕ್ತಿಯಾಗಿದೆ. ಕಥೆಯ ಹೆಸರು ಅದನ್ನೇ ಧ್ವನಿಸುತ್ತದೆ.

ವಿವಾಹ ಸಂಸ್ಥೆಯ ನೈತಿಕ ನಿಯಮಾವಳಿಗಳ ಒಳಗೆ ಹೀಗೆ ಸತ್ವಯುತ ಸ್ತ್ರೀಯರನ್ನು ಕುರಿತು ಬರೆದ ಮಾಸ್ತಿ ಆ ಸ್ತ್ರೀಯರ ಯೋಚನೆ, ನಂಬಿಕೆಗಳನ್ನು ಪರಂಪರಾಗತ ಶ್ರದ್ಧೆಯ ಮೂಲಕವೇ ಚಿತ್ರಿಸುವಂತೆನಿಸುತ್ತದೆ. 'ಚೆನ್ನಮ್ಮ' ಕಥೆಯನ್ನು ಇಲ್ಲಿ ಗಮನಿಸಬಹುದು. ನಗರದ ಶೋಕಿಗೆ ಬಿದ್ದ ಹಳ್ಳಿ ಯುವಕ ಹೆಂಡತಿಯನ್ನು ಬಲವಂತವಾಗಿ ಗಿರಣಿ ಕೆಲಸಕ್ಕೆ ತೊಡಗಿಸಿ, ತಾನು ಮಾಡಿದ್ದ ಸಾಲಕ್ಕೆ ಹೆಂಡತಿಯನ್ನೇ ಮೇಸ್ತ್ರಿಗೆ ಒಪ್ಪಿಸಲೂ ಸಿದ್ಧನಾಗುತ್ತಾನೆ. ಫೋರ್ಜರಿ ಮಾಡಿ ಹಣ ತಿಂದ ತನ್ನ ತಪ್ಪಿಗೆ ಹೆಂಡತಿಗೇ ಜೈಲಾಗುವಂತೆ ಮಾಡಿದ ಇವನನ್ನು ಮತ್ತೆ ಹಳ್ಳಿಗೆ ಕರೆದೊಯ್ದು ತಿದ್ದಬಹುದೆಂಬ ದೂರದಾಸೆಯಿಂದ ಕೊನೆಯವರೆಗೆ ಸಹಿಸಿದ ಚೆನ್ನಮ್ಮ ಜೈಲಿನಿಂದ ಬಂದ ಮೇಲೆ ಇವನ ಮುಖವನ್ನೂ ನೋಡುವ ಇಚ್ಛೆಯಿಲ್ಲದೆ ಊರಿಗೆ ಹೋಗುತ್ತಾಳೆ. ಚೆನ್ನಮ್ಮನಂಥ ಹೆಣ್ಣಿನ ಮನದ ಒಳತೋಟಿಯನ್ನು ಮಾಸ್ತಿ ಚಿತ್ರಿಸುವ ಬಗೆಯಿದು.

> *"ಚೆನ್ನಮ್ಮನಿಗೆ ಗಂಡನ ವಿಷಯದಲ್ಲಿ ಅಸಮಾಧಾನ ಪಟ್ಟುಕೊಳ್ಳಲು ಇಷ್ಟವಿಲ್ಲ. ಇದು ನಮ್ಮ ಹೆಣ್ಣು ಮಕ್ಕಳಲ್ಲಿ ಸಂಪ್ರದಾಯ ಸಾಮಾನ್ಯವಾಗಿ ಮೂಡಿಸುವ ದಾಕ್ಷಿಣ್ಯ. ಗಂಡಸು ಹತ್ತು ಕಡೆ ಹೋಗಬೇಕು. ಮನೆಯ ಹೆಂಗಸಿಗಾಗಿ ಅವನು ಆಡುತ್ತಿರುವ ಮಾತನ್ನು ಅರ್ಧದಲ್ಲಿ ಬಿಟ್ಟು ಮಾಡುತ್ತಿರುವ ಕೆಲಸವನ್ನು ನಾಳೆಯ ದಿನಕ್ಕೆ ಉಳಿಸಿ, ಮನೆಗೆ ಮುಂದಾಗಿ ಓಡಿ ಬರುವದಕ್ಕಾಗುವುದಿಲ್ಲ, ಇಷ್ಟಕ್ಕೆ ಅವನು ಈ ಕಷ್ಟವನ್ನೆಲ್ಲ ಪಡುವುದು ಯಾರಿಗಾಗಿ? ಮನೆಯ ಹೆಂಗಸಿಗಾಗಿ, ತಮ್ಮ ಮಕ್ಕಳಿಗಾಗಿ. ಅವನು ಬರುವ ಹೊತ್ತಿಗೆ ಸಮಾಧಾನವಾಗಿ ಇದ್ದು ನೋಡಿಕೊಂಡು ಅದೂ ಒಂದು ಮಗು ಎಂಬಂತೆ ಸಾಕುವುದು ಹೆಣ್ಣಿನ ಕೆಲಸ. ತಂದು ಹಾಕಿದ್ದನ್ನು ಉಂಡು ನೆರಳಲ್ಲಿ ಕುಳಿತಿರುವ ಜೀವ ಇಷ್ಟನ್ನು ಮಾಡಲಾರದೆ ಹೋದರೆ ಮಳೆಯಲ್ಲಿ, ಬಿಸಿಲಲ್ಲಿ ನಡೆದಾಡಿ, ಹೊತ್ತು ಗೊತ್ತು ಎನ್ನದೆ ದುಡಿದು ಬರುವ ಗಂಡು ಸಂಸಾರವನ್ನು ನಡೆಸುವುದು ಹೇಗೆ?"*[5]

ನೂರು ಸಂದರ್ಭದಲ್ಲಿ ಹಿರಿಯರು ಹೇಳಿದ್ದ ಇಂಥ ಮಾತುಗಳು ಹೆಂಗಸರ ವ್ಯಕ್ತಿತ್ವಗಳನ್ನು ತಿದ್ದಿ ರೂಪಿಸಿರುವ ಬಗೆಯನ್ನು ಹೇಳಿ ಮಾಸ್ತಿ ನಿರೂಪಕರಾಗಿ ಈ ನುಡಿಗಳಿಂದ ತಮ್ಮ ಅಂತರವನ್ನು ಕಾಯ್ದುಕೊಳ್ಳುವ ತಂತ್ರಗಾರಿಕೆ ತೋರುತ್ತಾರೆ. ಆದರೆ 'ಸಂಸ್ಕೃತಿಯಿಂದ ಬಂದ ಸಂಸ್ಕಾರ' ಇದು ಎಂಬ ಶ್ರದ್ಧೆ ಮಾಸ್ತಿಯವರದೂ ಆಗಿರುವುದರಿಂದ ಚೆನ್ನಮ್ಮನಂಥ ಗೃಹಿಣಿಯರು ಈ ಸಂಸ್ಕಾರದ ಬಲದಿಂದ ತೋರುವ ವರ್ತನೆಗಳೇ ಅವರ ಕತೆಗಳಲ್ಲಿ ಮೆಚ್ಚುಗೆ, ಗೌರವಗಳಿಂದ ಚಿತ್ರಿತವಾಗುತ್ತವೆ. ಹೆಣ್ಣಿನಿಂದ ಸಾಂಪ್ರದಾಯಿಕ ಸಮಾಜ ನಿರೀಕ್ಷಿಸುವ ಅತಿ ಉದಾರವಾದ ವರ್ತನೆಯನ್ನು ಮಾಸ್ತಿಯವರೂ ಸ್ತ್ರೀಯರ ನಿಜವಾದ ಸತ್ವವೆಂದು ತೋರಿಸುವುದಕ್ಕೆ ಶೇಷಮ್ಮ, ವೇದವತಿ, ರಾಮಶೆಟ್ಟಿಯ ಅಜ್ಜಿಯಂಥ ಪಾತ್ರಗಳು ಸೂಚನೆ ನೀಡುತ್ತವೆ.

ಪ್ರೀತಿಯ ತಂದೆತಾಯಿಯರ ಸಾವು, ಮಮತೆಯ ಗೆಳತಿ ಅಚ್ಚಮ್ಮನ ಸಾವು, ನಂಬಿಕೆಗೆ ದ್ರೋಹ ಬಗೆದ ಗಂಡನ ಸಾವು, ಅತ್ತೆಯ ಜಿಪುಣತನ, ನೆರೆಯವರ ಚಾಡಿಕೋರತನ, ನಾದಿನಿಯ ಅಸಹನೆ ಎಲ್ಲವನ್ನೂ ಎದುರಿಸಿ ತನ್ನ ಮಕ್ಕಳ ಬದುಕನ್ನು ತಿದ್ದಿ ರೂಪಿಸಬೇಕೆಂಬ ಒಂದೇ ಧ್ಯೇಯ ಶೇಷಮ್ಮನ ಬದುಕನ್ನು ಕಾಯ್ದಿಟ್ಟ ಶಕ್ತಿಯಾಗಿದೆ. ಅವಳ ಸಹನಾಶಕ್ತಿ ಚಂದ್ರಮತಿಯಂಥಾದ್ದೆಂದು, ಅವಳ ಪಾತಿವ್ರತ್ಯ ಸೀತೆಗೆ ಸಮಾನವಾಗಿದ್ದೆಂದು ಕೃತಿ ಚಿತ್ರಿಸುತ್ತದೆ.

"ತನಗಾಗಿ ಬಾಳು ಎಂದರೆ ಜೀವ ಇಷ್ಟನ್ನು ಸಹಿಸುತ್ತದೆಯೋ ಇಲ್ಲವೋ ಹೇಳುವಂತಿಲ್ಲ, ಗಂಡನಿಗಾಗಿ, ಮಗುವಿಗಾಗಿ ಎಂದರೆ ಹೆಣ್ಣು ಇಂಥ ಕಷ್ಟವನ್ನೂ ಇದಕ್ಕಿಂತ ಹೆಚ್ಚಿನ ಕಷ್ಟವನ್ನೂ ಲೆಕ್ಕಿಸದೆ ನಿರಾಯಾಸವಾಗಿ –ಇಲ್ಲಿ ನಿರಾಯಾಸವಾಗಿ ಅಲ್ಲ. ಆಯಾಸ ಪಟ್ಟುಕೊಂಡೇ ಸಹಿಸಿಕೊಂಡು ಬಿಡುತ್ತದೆ''[೧೦] ಎಂಬ ಲೇಖಕರ ವಿವರಣೆ, ಫಿರಂಗಿ ಅಧಿಕಾರಿಯೊಬ್ಬನು ಹೇಳುವ "ನಿಮ್ಮಲ್ಲಿ ಸೀತೆ ಅನ್ನುತ್ತಾರಲ್ಲ ಅಂಥವರು ಆ ತಾಯಿ'' ಮತ್ತು "ನಿಮ್ಮ ಸಂಸ್ಕೃತಿ ದೊಡ್ಡದು, ಅದರ ಬೆಲೆ ನಿಮಗೆ ತಿಳಿದಿಲ್ಲ'' ಎಂಬ ಮೆಚ್ಚುಗೆಯ ಮಾತುಗಳು ಇಲ್ಲಿ ಗಮನಾರ್ಹ.

ಮಕ್ಕಳಿಗಾಗಿ ಗಂಡನಿಗಾಗಿ ಹೆಣ್ಣು ಜೀವ ಹಿಡಿದು ಬದುಕಿ ಗಟ್ಟಿಯಾಗುವ ಇಂಥದೇ ಮಾದರಿ "ಶೇಷಮ್ಮ'' ಕಾದಂಬರಿಯಲ್ಲಿಯೇ ರಾಮಶೆಟ್ಟಿಯ ಅಜ್ಜಿಯ ಪಾತ್ರದಲ್ಲಿ ಪುನರಾವೃತವಾಗುತ್ತದೆ. ಭಾರತೀಯ ನಾರಿಯರ ಈ ಸಹಿಷ್ಣುತೆ, ತ್ಯಾಗಪರತೆ, ಜೀವನಾಸಕ್ತಿಗಳೇ ಅವರ ಶಕ್ತಿಯೆಂದು, ಒಂದು ಸಂಸ್ಕೃತಿಯ ಹಿರಿಮೆಯೆಂದು ಮಾಸ್ತಿಯವರ ರಚನೆಗಳು ಪ್ರತಿಪಾದಿಸುವುದಷ್ಟೇ ಅಲ್ಲ, ಇದು ಕಾಲ, ದೇಶ, ಜಾತಿ, ಜನಾಂಗ, ವರ್ಗ ಮುಂತಾದ ಎಲ್ಲ ಹೊರಗಿನ ಮಿತಿಗಳಿಗೆ ಮೀರಿದ ಸಾರ್ವತ್ರಿಕ ಸ್ತ್ರೀ ಮೌಲ್ಯವಾಗಿಯೂ ಅವರ ಕೃತಿಗಳಲ್ಲಿ ಗೃಹೀತವಾಗುವುದನ್ನು 'ಚಟ್ಟಿಕ್ಕಾರ ತಾಯಿ', 'ಆಚಾರವಂತ ಅಯ್ಯಂಗಾರ್ರು' ಮುಂತಾದ ಕಥೆಗಳಲ್ಲಿ ಕಾಣಬಹುದು. 'ಆಚಾರವಂತ ಅಯ್ಯಂಗಾರ್ರು' ಎಂಬ ಕಥೆಯಲ್ಲಿ ವಿಧುರ ಅಯ್ಯಂಗಾರರೊಂದಿಗೆ ಬದುಕುತ್ತಿದ್ದ ಅವಿವಾಹಿತೆ ಕ್ರಿಶ್ಚಿಯನ್ ನರ್ಸ್ ಸುಶೀಲಮ್ಮ ವಿವಾಹಿತೆಯರಿಗಿಂತಲೂ ಹೆಚ್ಚಿನ ನಿಷ್ಠೆಯಿಂದ, ಪ್ರೇಮದಿಂದ ಆತನ ಸೇವೆ ಮಾಡುತ್ತಾಳೆ. ಆತ ಸತ್ತಾಗ, ಆತನ ಕೊನೆಯ ಆಸೆಯಂತೆ ಅಯ್ಯಂಗಾರರ ಮೂಲಕವೇ ಆತನ ಅಂತ್ಯ ಸಂಸ್ಕಾರಗಳನ್ನು ಭಯ ಭಕ್ತಿಗಳಿಂದ ನಡೆಸುತ್ತಾಳೆ. "ಮದುವೆಯಾದ ಹೆಂಡತಿಯಲ್ಲ.

ಆದರೂ ನಾನು ಇವರ ಕಣ್ಣೆದುರಿಗೆ ಸಾಯಬೇಕು ಅಂತ ದೇವರನ್ನ ಬೇಡುತಾ ಇದ್ದೆ'' ಎನ್ನುವ ಸುಶೀಲಮ್ಮ ಜಾತಿಯಿಂದ ಕ್ರಿಶ್ಚಿಯನ್ ಇರಬಹುದು. ಆದರೆ ಆಕೆ ಪ್ರದರ್ಶಿಸುವುದು ಹಿಂದೂ ಸಾಧ್ವಿಯ ನಿರೀಕ್ಷಿತ ಮೌಲ್ಯವನ್ನು. ಹೀಗೆ ಸಾಧ್ವಿತನವನ್ನು ಎಲ್ಲ ಹೆಣ್ಣುಗಳ ಮೂಲಭೂತವಾದ ಸಾರ್ವತ್ರಿಕ ಗುಣವೆಂದು ವ್ಯಾಖ್ಯಾನಿಸುವ ಯತ್ನಕ್ಕೆ ಕಥೆಯ ನಿರೂಪಕನ ಮಾತುಗಳನ್ನು ನೋಡಬಹುದು:

> *"ಇದು ಏನು ಈ ಹೆಣ್ಣಾದ ಜೀವದ ತನ್ನ ಗಂಡು ಎನ್ನೋದರ ಅಭಿಮಾನ? ನಾನು ಇಬ್ಬರು ಹೆಂಡತಿಯರನ್ನು ಕಳೆದುಕೊಂಡು ನನ್ನ ಈಗಿನ ಸಂಸಾರವನ್ನು ಮೂರನೆಯ ಮದುವೆ ಆಗಿದ್ದೇನೆ. ಮೊದಲ ಹೆಂಡತಿಯರು ಇಬ್ಬರೂ ಹೀಗೆಯೇ ಇದ್ದರು. ಮೂರನೆಯ ಹೆಂಡತೀನೂ ಹೀಗೆಯೇ ಇದ್ದಾರೆ. ಈ ಹೆಂಗಸರು ತಾನೇ ಹೇಳುತಾ ಇದ್ದಾರೆ, ಮದುವೆಯೇ ಆಗಿಲ್ಲ. ಆದರೂ ಮದುವೆ ಆದದ್ದಕ್ಕಿಂತ ರವೆ ಅಷ್ಟು ಕಡಿಮೆಯಿಲ್ಲ. ತನ್ನ ಗಂಡ ಸುಖ ಪಡಬೇಕು. ತನ್ನ ಗಂಡಿನ ಇಷ್ಟ ನಡೆಯಬೇಕು ಅನ್ನೋ ಈ ಅಪೇಕ್ಷೆ''[೩೮]*

ಮಾಸ್ತಿಯವರು ಸ್ತ್ರೀಸ್ವಭಾವೆಂದು ಗುರುತಿಸಿ, ಹೀಗೆ ಮೆಚ್ಚುಗೆ, ವಿಸ್ಮಯ ಬೆರೆಸಿ ವ್ಯಾಖ್ಯಾನಿಸುವ ಸಾಧ್ವಿತನ ಪರಂಪರಾಗತ ಸ್ತ್ರೀ ಮೌಲ್ಯವೇ ಆಗಿದ್ದು, ಅದರ ನಿಜವನ್ನು ಶೋಧಿಸುವುದಕ್ಕಿಂತ ಇರುವಂತೆಯೇ ಎತ್ತಿ ಹಿಡಿಯುವುದು/ಅದು ಕಳೆದು ಹೋದಲ್ಲಿ ಹಳ ಹಳಿಸುವುದು ಮುಖ್ಯವಾಗಿರುವುದನ್ನು ಕಾಣುತ್ತೇವೆ. ಕೃತಿಕಾರನ ಆಶಯವನ್ನು ಪಾತ್ರಗಳೂ ಬೆಂಬಲಿಸುವಂತಿದ್ದಾಗ ಮೇಲಿನ ಪರಿಣಾಮವನ್ನು ಕಾಣುತ್ತೇವೆ. ಆದರೆ ಹಲವು ಸಂದರ್ಭಗಳಲ್ಲಿ ಮಾಸ್ತಿಯವರ ಉದ್ದೇಶಿತ ಆಶಯಕ್ಕಿಂತ ಭಿನ್ನವಾದ ಅರ್ಥಗಳನ್ನು ಅವರ ಪಾತ್ರಗಳು ಓದುಗರಿಗೆ ತಲುಪಿಸುವಂತೆ ತೋರುತ್ತವೆ. ಅಂಥ ಸಂದರ್ಭಗಳಲ್ಲಿ ಕತೆಗಾರರ ಉದ್ದೇಶವಿಲ್ಲದೆಯೂ ಸ್ತ್ರೀಪರತೆ ಹೊಳೆಯುವುದನ್ನು ಕಾಣುತ್ತೇವೆ. "ಸಾರಿಪುತ್ರನ ಕೊನೆಯ ದಿನಗಳು'' ಕಥೆಯನ್ನು ಈ ದೃಷ್ಟಿಯಿಂದ ವಿವೇಚಿಸಬಹುದು. ಗಂಡ ಜ್ಞಾನದಾಹಿ. ಸಂಸಾರ ತ್ಯಜಿಸಿ ಗೌತಮ ಬುದ್ಧನ ಶಿಷ್ಯನಾಗಿ, ಸಾರಿಪುತ್ರನೆನಿಸಿ ಖ್ಯಾತನಾದ. ಆತನ ಹೆಂಡತಿ ವೇದವತಿ, ಪತಿ ತೊರೆದುಹೋದ ಮನೆಯಲ್ಲಿ ಆತನ ವೃದ್ಧತಂದೆ ಮತ್ತು ಮಗಳ ಜವಾಬ್ದಾರಿಗಳನ್ನು 'ಮನೆಯ ಮಗನಂತೆ' ಹೊತ್ತು ನಿಭಾಯಿಸುತ್ತಾಳೆ. ಸಾರಿಪುತ್ರ ಕಡೆಯ ಬಾರಿಗೆ ತನ್ನ ಊರನ್ನು ಕಾಣಲು ಬಂದಾಗ ಪತ್ನಿಯ ಸಾಧನೆ, ಹಿರಿಮೆಗಳನ್ನು ಗುರುತಿಸಿ ಗೌರವಿಸುತ್ತಾನೆ. ಆಕೆಗೂ ಸನ್ಯಾಸ ದೀಕ್ಷೆ ನೀಡಿ ಸಮಾಜೋದ್ಧಾರಕ್ಕೆ ಪ್ರೇರೇಪಿಸುತ್ತಾನೆ. ಸಾರಿಪುತ್ರನ ಬೌದ್ಧಿಕ ಸಾಧನೆಯನ್ನೂ ಆತನ ಪತ್ನಿಯು ಜವಾಬ್ದಾರಿಯರಿತು ಬದುಕು ನಡೆಸಿದ್ದನ್ನೂ ಕತೆಗಾರರು ಸಮಾನ ಗೌರವದಿಂದ, ಸಮತೋಲ ದಿಂದ ಚಿತ್ರಿಸಿದ್ದಾರೆ. ಆದರೆ ಈ ವೇದವತಿಯು ಹೊಣೆಗಾರಿಕೆಯನ್ನು ಸ್ವೀಕರಿಸಿದ ಬಗೆಯಲ್ಲಿ, ಪತಿನಿಷ್ಠೆ ಮತ್ತು ಕುಟುಂಬ ನಿಷ್ಠೆಗಳೇ ಪ್ರಧಾನವಾಗಿದ್ದು, ಸಾರಿಪುತ್ರ ಗೌರವಿಸುವುದೂ ಇದನ್ನೇ ಎಂಬುದು ಗಮನಾರ್ಹ.

ಇದರಂತೆ 'ಆಚಾರ್ಯರ ಪತ್ನಿ' ಕಥೆಯಲ್ಲಿ ಮತಾಚಾರ್ಯ ರಾಮಾನುಜಾರ್ಯರು ಹೆಂಡತಿಯ ಸಣ್ಣತನಗಳಿಂದ ರೋಸಿ ಹೋಗಿ ಸನ್ಯಾಸ ಕೈಗೊಂಡರೆಂಬ ಐತಿಹ್ಯವನ್ನು ಆಧರಿಸಿ ಮಾಸ್ತಿ, ಸಣ್ಣ ತಪ್ಪಿಗೆ ದೊಡ್ಡ ಶಿಕ್ಷೆ ವಿಧಿಸಿದಂತಾಗಲಿಲ್ಲವೆ? ತಿಳಿಯದ ಹೆಂಗಸಿಗೆ ಹಿರಿಯರಾದ

ಅವರು ಬುದ್ಧಿ ಹೇಳಿ ತಿದ್ದಿಕೊಳ್ಳಬಹುದಿತ್ತಲ್ಲ? ಎಂಬ ಪ್ರಶ್ನೆಗಳನ್ನು ನಿರೂಪಕನಿಂದ ಕೇಳಿಸುತ್ತಾರೆ. ಆದರೆ ಕಥೆಯ ಒಳಮೈಯಲ್ಲಿ ವೈಭವೀಕೃತವಾಗಿರುವುದು ಆ ಸಾಧ್ವಿ ಪತ್ನಿ ಆಚಾರ್ಯರನ್ನು ನೆರಳಿನಂತೆ ಹಿಂಬಾಲಿಸಿ ಬಂದು, ಅವರು ಜ್ವರದ ತಾಪದಿಂದ ಪ್ರಾಣಾಂತಿಕ ಸ್ಥಿತಿಯಲ್ಲಿದ್ದಾಗ, ಸಂಕಲ್ಪ ಬಲದಿಂದ ಆ ಖಾಯಿಲೆಯನ್ನು ತಾನು ಸ್ವೀಕರಿಸಿ, ಸುಮಂಗಲಿಯಾಗಿ ಮರಣಿಸಿ, ಅವರನ್ನು ಲೋಕ ಕಲ್ಯಾಣಕ್ಕಾಗಿ ಉಳಿಸಿದಳು ಎಂಬ ಸಂಗತಿಯೇ ಹೊರತು ಆಚಾರ್ಯರ ನಡವಳಿಕೆಯಲ್ಲ.

'ನಿಜಗಲ್ಲಿನ ರಾಣಿ' ಕಥೆಯ ಹಿರಿಯ ರಾಣಿ ಲಕುಮವ್ವೆ ವೇದವತಿಯಂಥ ವ್ಯಕ್ತಿ; ಎರಡನೆಯ ರಾಣಿ ಗಿರಿಜವ್ವೆ ಶೀಲಕ್ಕೆ ಧಕ್ಕೆ ಬರುವಂತಾದಾಗ ಆತ್ಮಹತ್ಯೆ ಮಾಡಿಕೊಂಡ ಸತಿ. 'ಪೆನುಕೊಂಡೆಯ ಕೃಷ್ಣಮೂರ್ತಿ' ಕಥೆಯ ರಾಜಮಾತೆ ಲಕ್ಷುಮಾಂಬೆ 'ಚಿಕ್ಕವೀರರಾಜೇಂದ್ರ' ದ ಗೌರಮ್ಮಾಜಿಯನ್ನು ನೆನಪಿಗೆ ತರುವ ಪಾತ್ರ. ಈ ಬಗೆಯಲ್ಲಿ 'ಮಾತೆಯರು', 'ಸಾಧ್ವಿಯರು' ಮಾಸ್ತಿಯವರ ಕಥೆಗಳಲ್ಲಿ ಸತ್ವಯುತರಾಗಿ ನಿರೂಪಿಸಲ್ಪಡುತ್ತಾರೆ. ಕುಟುಂಬ, ದೇಶಗಳ ಸಂದರ್ಭದಲ್ಲಿ ಎಲ್ಲ ಜವಾಬ್ದಾರಿಯನ್ನು ಹೊತ್ತು, ಪರಂಪರಾಗತ ಸ್ತ್ರೀಧರ್ಮಕ್ಕೆ ಎರವಾಗದಂತೆ ಬದುಕುವುದರಿಂದ ಇವರೆಲ್ಲ 'ಘನತೆ'ಯುಳ್ಳವರಾಗಿ ಪ್ರತಿಪಾದಿತರಾಗುತ್ತಾರೆ. ಈ ಚೌಕಟ್ಟಿಗೆ ಹೊರತಾದವರು 'ಚೆನ್ನಬಸವ ನಾಯಕ'ದ ರಾಣಿಯಂತೆ, ವಿಡಂಬನೆ, ಅವಹೇಳನದ ಮೂಲ ವಾದಾರು.......

ಸ್ತ್ರೀಯರ ಸಮಸ್ಯೆಯನ್ನೇ ಮುಖ್ಯ ವಸ್ತುವಾಗಿಟ್ಟುಕೊಂಡು ಮಾಸ್ತಿಯವರು ಬರೆದ ಕಥೆಗಳಲ್ಲಿ 'ಚಿಕ್ಕವ್ವ' 'ಕೃಷ್ಣಮೂರ್ತಿಯ ಹೆಂಡತಿ' ಯಂಥ ಕಥೆಗಳ ಕೇಂದ್ರ ವ್ಯಕ್ತಿಗಳು ತಮ್ಮ ಸತೀತ್ವವನ್ನು ಉಳಿಸಿಕೊಳ್ಳಲು ಮರಣವಪ್ಪುತ್ತಾರೆ. ಮಾಸ್ತಿ ಕಾಣಿಸುವ ಜೀವನ ಶ್ರದ್ಧೆಯೊಳಗೆ ಮದುವೆ ಒಂದು ಶಾಶ್ವತ ಬಂಧನ. ಆದ್ದರಿಂದ ಒಮ್ಮೆ ಅದರೊಳಗೆ ಬಂದವರಿಗೆ, ಅದರಲ್ಲೂ ಸ್ತ್ರೀಯರಿಗೆ ಎಂಥದೇ ಸ್ಥಿತಿಯಲ್ಲೂ ಆ ಬಂಧನದ ಹಂಗು ತೊರೆಯಲಾರದ್ದು. ಗಂಡನೊಡನೆ ಬದುಕು ಅಸಹನೀಯವಾದಾಗ, ಸಾಯಬಹುದು, ದೂರವಾಗಬಹುದು, ಅನ್ಯಾಯದ ವಿರುದ್ಧ ರೊಚ್ಚಿಗೇಳಲಾರದೆ ಹುಚ್ಚಿಯರಾಗಬಹುದು. ಆದರೆ ವಿಚ್ಛೇದನ, ಮತ್ತು ಬೇರೆ ಬದುಕುವ ವಿಧಾನಗಳಿಗೆ ಇಲ್ಲಿ ಅವಕಾಶವಿಲ್ಲ.

ಬಹಳ ಚರ್ಚೆಗೆ ಒಳಗಾಗಿರುವ 'ವೆಂಕಟಿಗನ ಹೆಂಡತಿ' 'ವೆಂಕಟಶಾಮಿಯ ಪ್ರಣಯ' 'ಆಂಗ್ಲನೌಕಾ ಕ್ಯಾಪ್ಟನ್' 'ಪಕ್ಷಿಜಾತಿ' ಮುಂತಾದ ಕಥೆಗಳಲ್ಲಿ ವಿವಾಹ ಬಂಧನದ ಹೊರಗಿನ ಸಂಬಂಧಗಳತ್ತ ಒಲಿದ ಸ್ತ್ರೀಯರ ವಿಷಯಗಳನ್ನು ವಸ್ತುವಾಗಿಸಿಕೊಂಡು ಮಾನವೀಯ ಉದಾರತೆ, ಅನುಕಂಪಗಳಿಂದ ಅವರ ನಡತೆ ಕ್ಷಮ್ಯವೆಂದು ಮಾಸ್ತಿಯವರು ಚಿತ್ರಿಸಿದ್ದರೂ, ಈ ಸ್ತ್ರೀಯರೂ ವರ್ಗ, ಜಾತಿಗಳ ನೆಲೆಯಿಂದ ಸಮಾಜದ ಕೆಳಹಂತವನ್ನು ಪ್ರತಿನಿಧಿಸುವುದು ಗಮನಾರ್ಹ. ಅಲ್ಲಿಯೂ ವಿವಾಹ ಸಂಸ್ಥೆಯನ್ನು ಉಳಿಸಿಡುವುದಕ್ಕಾಗಿ ಇವರ ಬಗ್ಗೆ ಗಂಡಂದಿರ ಉದಾರತೆ ಪ್ರಕಟವಾಗುವುದೂ ಗಮನಾರ್ಹ. 'ಮೊಸರಿನ ಮಂಗಮ್ಮ' ಕಥೆಯಲ್ಲಿ ಈ ಬೇರೆ ಸ್ತರದ ಸ್ತ್ರೀಯರ ಬದುಕನ್ನು ಚಿತ್ರಿಸುವ ಯತ್ನವಿದ್ದರೂ, ವೃದ್ಧಾಪ್ಯದಲ್ಲೂ ಮನೆಯ ಯಜಮಾನಿಯಾಗಿ ಉಳಿಯ ಬಯಸುವ ಮಂಗಮ್ಮ ಎಲ್ಲ ಪರಿತಾಪದ ಕೊನೆಯಲ್ಲಿ ಹಟ ಬಿಟ್ಟು ರಾಜಿಯಾಗಿ ಕುಟುಂಬದೊಳಗೇ ತನ್ನ ಭದ್ರತೆ ಕಂಡುಕೊಳ್ಳುವುದನ್ನೇ ಕಥೆ ಸಾಧಿಸುತ್ತದೆ.

ಈ ವರೆಗಿನ ವಿವೇಚನೆಯನ್ನು ಗಮನಿಸಿದರೆ ಮಾಸ್ತಿಯವರ ಸ್ತ್ರೀಪಾತ್ರಗಳ ಪ್ರಪಂಚ ಗರತಿಯ ಪ್ರಪಂಚಕ್ಕಿಂತ ಭಿನ್ನವಾದದ್ದಲ್ಲ ಎನ್ನುವುದನ್ನು ಗುರುತಿಸಬಹುದು. ಮನುಸ್ಮೃತಿಯ ಷಡ್ಗುಣಗಳ ಮಾಲೆಯಲ್ಲಿ ಮಾಸ್ತಿ ವಿಶೇಷ ಒತ್ತು ನೀಡುವುದು ಮಾತೆಯ ಮತ್ತು ಕ್ಷಮೆಯ ಗುಣಗಳಿಗೆ, ಹಾಗೂ ದಾಸಿಯ ಅಂಶಗಳಿಗೆ. ಸ್ತ್ರೀಯನ್ನು ಭೋಗದ ವಸ್ತುವಾಗಿ ನೋಡುವುದು ಅವರಿಗೆ ಒಪ್ಪಿತವಲ್ಲ. "ಮುಪ್ಪಿನ ಚಾಪಲ್ಯ'' ಕಥೆಯಲ್ಲಿ ಎಂಬತ್ತು ತೊಂಬತ್ತು ವಯಸ್ಸಾದರೂ ಗಂಡಸರು ಮೊಮ್ಮಕ್ಕಳಾಗಬಹುದಾದ ಹುಡುಗಿಯರನ್ನು ಕಾಮದೃಷ್ಟಿಯಿಂದಲೇ ಭಾವಿಸುವುದು ಬೆಳೆಯಲಾಗದ ಮನಸ್ಸುಗಳ ರೋಗಗ್ರಸ್ಥ ಸ್ಥಿತಿಯೆಂದು ಒಂದು ಸ್ತ್ರೀ ಪಾತ್ರದ ಮೂಲಕವೇ ಹೇಳಿಸುತ್ತಾರೆ. ಆಧ್ಯಾತ್ಮಿಕ ನೆಲೆಯಲ್ಲಿ ಸ್ತ್ರೀ–ಪುರುಷರ ಸಮಾನತೆಯನ್ನು ಒಪ್ಪಿ ಯಶೋಧರೆಯ ಮೂಲಕ ಒಬ್ಬ ಪತ್ನಿಯ ತಳಮಳ, ಆಸೆ, ಸಂಕಟಗಳಿಗೆ ಬಾಯಿ ಕೊಡಬಲ್ಲರು. 'ಗೌಡರ ಮಲ್ಲಿ'ಯ ಮೂಲಕ ಕೇವಲ ತೊತ್ತಾಗಿ ಪ್ರೀತಿಯ ಪರಾಕಾಷ್ಠೆ ಮೆರೆವ ಹೆಣ್ಣನ್ನು ಕಾಣಿಸಬಲ್ಲರು. ಆದರೆ ಸ್ತ್ರೀವ್ಯಕ್ತಿತ್ವದ ಪರಿಪಾಠವೆಂದು ಅವರು ಚಿತ್ರಿಸುವ ಶೇಷಮ್ಮನ ಈ ವಿಚಾರಗಳನ್ನು ಗಮನಿಸಬೇಕು.

> *"ಗಂಡು ಆಡಿದಂತೆಲ್ಲ ಹೆಣ್ಣು ಆಡಬಹುದು ಎನ್ನುವುದು ಎಲ್ಲಿಯ ಮಾತು? ಮೈ ಬೇರೆ ರೀತಿ ಇರುವಂತೆ ಮನಸ್ಸು ಬೇರೆ ರೀತಿ. ಜೀವಗಳು ಬೇರೆ ಬೇರೆ ರೀತಿ. ಪಾತ್ರೆಗಳು ಬೇರೆ ಆದ ಹಾಗೆ ಶುದ್ಧಿ ಬೇರೆ. ಜಾತಿ ಬೇರೆ ಆದ ಹಾಗೆ ಆಚಾರ ಬೇರೆ. ಬಚ್ಚಲು ಮನೆಯ ಪಾತ್ರೆಯ ಶುದ್ಧಿ ನಿನಗೆ ಸಾಲದು ಎಂದು ದೇವರು ಹೆಂಗಸಿಗೆ ಹೆಚ್ಚಿನ ಶಾಸ್ತ್ರವನ್ನು ಮಾಡಿದ್ದಾನೆ.''*[೧೩]

ಪರಂಪರಾಗತ ಸ್ವೀಕೃತಿಯಲ್ಲಿ ಎಲ್ಲವೂ ತಣ್ಣಗಿದೆ ಎಂಬಂತೆ ಮಾಸ್ತಿ ಚಿತ್ರಿಸುವ ಸ್ತ್ರೀಲೋಕ ಕೇವಲ ತೋರಿಕೆಯದು; ಇದರಾಚೆಗೆ ಕಥೆಗಾರನಿಗೆ ಬೆನ್ನು ತಿರುಗಿಸಿ ಈ ಭಗ್ನ ಬದುಕಿನ ಹೆಣ್ಣು ಪಾತ್ರಗಳು ಓದುಗರೊಂದಿಗೆ ಸಂವಾದಿಸುತ್ತವೆ. "ಕಥೆಯೊಳಗಿನ ಚೆಪ್ಪು ಕೇವಲ ತೋರಿಕೆಯದು. ಆದರೆ ಅವುಗಳ ನಿಜರೂಪ ಚಲನಶೀಲ. ಇಂಥ ಸಾಧ್ಯತೆಗಳುಳ್ಳ ಸಾಮಾಜಿಕ ನೆಲೆಗಳನ್ನು ಶೋಧಿಸಿ ಹೊರಗಿಟ್ಟದ್ದೇ ನಮಗೆ ಮುಖ್ಯವಾಗಬೇಕು''[೧೪] ಎನ್ನುವ ಕೆ.ವಿ. ನಾರಾಯಣರ ವಿಚಾರವನ್ನು ಗಮನಿಸಬೇಕು.

ಕಥೆಯಲ್ಲಿ ಪಾತ್ರಗಳು ಆರಿಸಿಕೊಂಡ ದಾರಿಯೇ ಕಥೆಯ ಕೊನೆಯಲ್ಲ ಎಂಬುದು ನಿಜ. ಆದರೆ ಒಂದೇ ಗುರಿಯತ್ತ ಈ ಎಲ್ಲ ಬದುಕುಗಳನ್ನು ನಡೆಸುವುದು, ಅಂಥ ಗುರಿಯ ಆಯ್ಕೆಗಾಗಿ ಅವರನ್ನು ದೇವಿಯರೆಂದು ವೈಭವೀಕರಿಸುವುದು ಅಷ್ಟು ಸುಲಭವಾಗಿ ಕಿತ್ತೊಗೆಯ ಬಹುದಾದ ಚೆಪ್ಪನ್ನು ನಿರ್ಮಿಸುವುದಿಲ್ಲ. ಅದನ್ನು ಕೇವಲ ಮಾಸ್ತಿಯವರ ವೈಯಕ್ತಿಕ ಶ್ರದ್ಧೆಯೆಂದು ತಳ್ಳಿ ಹಾಕಲೂ ಸಾಧ್ಯವಿಲ್ಲ. ವಸಾಹತು ಶಾಹಿಯ ಅಡಿಯಲ್ಲಿ ಭಗ್ನವಾಗತೊಡಗಿದ ಸಾಂಸ್ಕೃತಿಕ ಆವರಣದ ಸಂಕ್ರಮಣ ಸ್ಥಿತಿಯಲ್ಲಿ ಈ ಭಗ್ನ ಸ್ತ್ರೀಯರ ಬದುಕುಗಳನ್ನು ಮಾಸ್ತಿ ದಾಖಲಿಸಿದರು. ಆ ಪಾತ್ರಗಳ ವಿವಿಧ ಸಾಮಾಜಿಕ ನೆಲೆಗಳ ಶೋಧನೆಗಿಂತಲೂ ಕಳೆದು ಹೋಗುತ್ತಿರುವ ಹಳೆಯ ಮೌಲ್ಯಗಳ ಹಿರಿಮೆಯ ಮರು ಸ್ಥಾಪನೆಗೆ ಸಾಧನಗಳಾಗಿ ಈ ಸ್ತ್ರೀ ಪಾತ್ರಗಳು ಸೃಷ್ಟಿಯಾಗಿರುವುದೂ ಸಾಧ್ಯ. ಆದ್ದರಿಂದಲೆ ವೈದಿಕವೆನ್ನಬಹುದಾದ ಸಾಂಸ್ಕೃತಿಕ

ಮೌಲ್ಯಗಳನ್ನು ಜಾತಿ, ಕುಲ, ಜನಾಂಗ ವರ್ಗ, ದೇಶ ಕಾಲಗಳೆಲ್ಲದರ ಮಿತಿಗಳಾಚೆಗೆ ಸಾರ್ವತ್ರಿಕಗೊಳಿಸಿ ಪುನಃ ಸೃಷ್ಟಿಸಬೇಕಾದ್ದು ಅವರಿಗೆ ಅನಿವಾರ್ಯವಾಗುತ್ತದೆ. ವೆಂಕಟಿಗ ಅಥವಾ ಆಂಗ್ಲನೌಕಾ ಕ್ಯಾಪ್ಟನ್ ನಡುವಿನ ಅಂತರ ಹೀಗೆ ನಿವಾರಣೆಯಾಗುತ್ತದೆ.

"ಹೆಣ್ಣಿನ ಚಿತ್ರ ಮಾಸ್ತಿಯವರ ಕಥಾ ಸಾಹಿತ್ಯದಲ್ಲಿ ಯಾವತ್ತೂ ಏಕಮುಖವಾಗಿಲ್ಲ. ಎಲ್ಲ ಬಗೆಯ ಸರಳೀಕರಣ, ಆದರ್ಶೀಕರಣಗಳನ್ನು ಬದಿಗೊತ್ತಿ ಮಾಸ್ತಿ ಹೆಣ್ಣುಗಳನ್ನು ಜೀವಂತ ಪಾತ್ರಗಳಾಗಿ ಚಿತ್ರಿಸಿದ್ದಾರೆ. ಹೀಗಾಗಿ ಹೆಣ್ಣು, ಮಾಸ್ತಿ ಕಥೆಗಳಲ್ಲಿ ಸಂಕೇತ, ಪ್ರತಿಮೆಗಳಲ್ಲಿ ಕಳೆದು ಹೋಗದೆ ರಕ್ತ ಮಾಂಸಗಳಿಂದ ತುಂಬಿದ ಮನುಷ್ಯರೆಂಬಂತೆ ಕಾಣುತ್ತಾರೆ. ಸಹಾನುಭೂತಿಯಿದ್ದೂ ಹೆಣ್ಣುಗಳನ್ನು ಕೇವಲ ಪ್ರತೀಕಗಳೆಂಬಂತೆ ದುಡಿಸಿಕೊಳ್ಳದಿರುವುದು ಮಾಸ್ತಿಯವರ ಕತೆಗಳ ವಿಶೇಷಗುಣ"[೫] ಎಂದು ಹೇಳುತ್ತಾರ ಟಿ.ಪಿ. ಅಶೋಕ.

ಆದರೆ ಈ ಹಿಂದೆ ಪ್ರಸ್ತಾಪಿಸಿದ ಭಾರತೀಯ ಮೌಲ್ಯಗಳ ಮರು ಸ್ಥಾಪನೆಯ ವಿಶಾಲ ಚೌಕಟ್ಟಿನಡಿಯಲ್ಲಿ ಅದನ್ನು ಸ್ಥಿರಗೊಳಿಸುವವರು, ಅದರ ಅಸ್ಥಿರ ರೂಪಗಳಾಗಿ ಇವರ ಕತೆಗಳ ಸ್ತ್ರೀ ಪಾತ್ರಗಳು ವಿಘಟಿತವಾಗುತ್ತಿರುವ ಮೌಲ್ಯಗಳ ಪ್ರತೀಕವಾಗಿಲ್ಲವೆ? ಅವರ ಸ್ತ್ರೀ ಪಾತ್ರಗಳು ವೈವಿಧ್ಯಪೂರ್ಣವಾಗಿರುವ ಹಂತ ಪರಿಮಿತವಾಗಿದ್ದು, ಅವು ಎತ್ತಿ ಹಿಡಿವ ಅಂಶಗಳು ನಿರ್ದಿಷ್ಟ ಮೌಲ್ಯಗಳಿಗಾಗಿ ದೊಡ್ಡ ಚೌಕಟ್ಟಿನೊಳಗೆ ಸರಳೀಕೃತವಾಗುವುದಿಲ್ಲವೆ, ಎಂಬ ಪ್ರಶ್ನೆಗಳು ಉಳಿಯುತ್ತವೆ. ಬದುಕಿನಿಂದ ಪಲಾಯನ ಮಾಡುವ ಪುರುಷರಿಗೆ ಎದುರಾಗಿ ಜೀವನಕ್ಕೆ ಅಂಟಿ ನಿಲ್ಲುವ ಗಟ್ಟಿಗಿತ್ತಿಯರು, ಮತ್ತು ಅಂಥ ಸತ್ವಕ್ಕೆ ಏರಲಾರದವರು ಎಂಬ ಸೂತ್ರಕ್ಕೆ ದೊಡ್ಡ ಸವಾಲೆನ್ನುವಂಥ ಪಾತ್ರಗಳನ್ನು ಅವರು ಸ್ತ್ರೀಯರಲ್ಲಿ ಗುರುತಿಸಿದ್ದಾರೆಯೇ? ಎಂಬ ಪ್ರಶ್ನೆಗೆ ಹೊಳೆವ ಉತ್ತರದಲ್ಲಿ ಮಾಸ್ತಿ ಶೋಧಿಸಿರುವ ಸ್ತ್ರೀಯಾತ್ಮಕ ಆಯಾಮದ ಶಕ್ತಿ–ಮಿತಿಗಳೆರಡೂ ಅಡಗಿವೆ.

●

ಟಿಪ್ಪಣಿಗಳು :

೧. 'ಸುಬ್ಬಣ್ಣ ಎಷ್ಟು ಅಧಿಕೃತ?' : ಕೆ.ವಿ. ನಾರಾಯಣ : ಸಾಹಿತ್ಯ ವಿಮರ್ಶೆ ೧೯೮೪. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೮೫, ಪು. ೨೦೩.

೨. 'ಸುಬ್ಬಣ್ಣ : ಶ್ರೀನಿವಾಸ : ಜೀವನ ಕಾರ್ಯಾಲಯ ಬೆಂಗಳೂರು–೧೯೮೩.

೩. 'ಮಾಸ್ತಿಯವರ ಸಣ್ಣ ಕತೆಗಳು : ಒಂದು ಅಧ್ಯಯನ' : ರಾಜೇಂದ್ರ ಚೆನ್ನಿ, ಸಾಹಿತ್ಯ ವಿಮರ್ಶೆ ೧೯೮೪.

೪. ಪೂರ್ವೋಕ್ತ ಪು. ೧೬೭.

೫. ಸಣ್ಣ ಕಥೆಗಳು : ಭಾಗ ೨ : ಶ್ರೀನಿವಾಸ : ಜೀವನ ಕಾರ್ಯಾಲಯ, ಬೆಂಗಳೂರು ನಾಲ್ಕನೆಯ ಮುದ್ರಣ ೧೯೭೬ ಪು. ೩೪.

೬. *Aspects of Feminine : C.G. Jung : ARK Paper backs London and Newyork 1986. Ch. II. P. 101 onwards.*

೭. 'ಮಾಸ್ತಿಯವರ ಸಣ್ಣ ಕಥೆಗಳಲ್ಲಿನ ಸಂಘರ್ಷಗಳ ಸ್ವರೂಪ' :ಜಿ.ಎಚ್. ನಾಯಕ : ನಿಜದನಿ : ಅಕ್ಷರ ಪ್ರಕಾಶನ ಹೆಗ್ಗೋಡು. ೧೯೮೮ ಪು. ೧೭೪–೧೯೩.

೮. ನಾಲ್ಕು ಸಣ್ಣ ಕತೆಗಳು; ಸಣ್ಣ ಕತೆ ಭಾಗ ೪, ೫, ೬ : ಶ್ರೀನಿವಾಸ : ಜೀವನ ಕಾರ್ಯಾಲಯ ಬೆಂಗಳೂರು. ಆರನೆಯ ಮುದ್ರಣ ೧೯೮೫ ಪು. ೯.

೯. ಸಣ್ಣಕತೆಗಳು ಭಾಗ ೯, ೧೦ : ಶ್ರೀನಿವಾಸ : ಜೀವನ ಕಾರ್ಯಾಲಯ, ಬೆಂಗಳೂರು ಮೂರನೆಯ ಮುದ್ರಣ ೧೯೭೯ ಪು. ೧೦೭.

೧೦. ಶೇಷಮ್ಮ : ಶ್ರೀನಿವಾಸ. ಜೀವನ ಕಾರ್ಯಾಲಯ ಬೆಂಗಳೂರು ದ್ವಿ. ಮುದ್ರಣ ೧೯೮೯ ಪು. ೭೬.

೧೧. ಅದೇ ಪು. ಮತ್ತು ಪು. ೨೩೦.

೧೨. ಸಣ್ಣ ಕತೆಗಳು ಭಾಗ ೧೪: ಶ್ರೀನಿವಾಸ, ಜೀವನ ಕಾರ್ಯಾಲಯ, ಬೆಂಗಳೂರು ೧೯೭೯. ಪು. ೧೧೩

೧೩. ಶೇಷಮ್ಮ ಪೂರ್ವೋಕ್ತ ಪು. ೮೮.

೧೪. 'ನವೋದಯ ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು' : ಕೆ.ವಿ. ನಾರಾಯಣ : ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು : ಸಂ. ಪ್ರೊ. ಕೆ. ಜಿ. ನಾಗರಾಜಪ್ಪ – ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೮೯, ಪು. ೬೩.

15. 'ಮಾಸ್ತಿಯವರ ಕತೆಗಳು' : ವಸ್ತು ಮತ್ತು ತಂತ್ರ : ಟಿ. ಪಿ. ಅಶೋಕ, ಸಾಹಿತ್ಯ ವಿಮರ್ಶೆ ೧೯೮೭; ಸಂ. ಬುದ್ದಣ್ಣ ಹಿಂಗಮಿರೆ : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೮೮, ಪು. ೧೦೯–೧೧೦.

.... ನಭದಿಂದಿಳಿದ ನೀರು ನೂರೊಂದು ಮುಖವಾಗಿ ಹರಿಯುವ ರೀತಿ ನರರ ಮನ, ಅವರವರ ಅವತಾರದೆಡೆ, ಅವರ ಜೀವನದ ಪರಿಸರವನನುಸರಿಸಿ ಹರಿಯುವುದು. ಒಂದೊಂದು ಬೊಗಸೆ ನೀರಿಗೂ ಬೇರೆ ಪಥವೆಂತು ಅಂತು ಒಂದೊಂದು ಜೀವಕೂ ಬೇರೆ ಪಥವಿಹುದು.

– ಭಟ್ಟರ ಮಗಳು ನಾಟಕ, ಪುಟ : ೧೧

ಮಾಸ್ತಿ ಕಥೆಗಳಲ್ಲಿ ಧರ್ಮ

ಡಿ. ಎಸ್. ನಾಗಭೂಷಣ

ಮಾಸ್ತಿ ದೇವರು ಹಾಗೂ ಧರ್ಮಗಳಲ್ಲಿ ಅಚಲ ನಂಬಿಕೆ ಉಳ್ಳವರು. ದೇವರು–ಧರ್ಮವೆಂದೊಡನೆ ಗಲಭೆ, ಗೊಂದಲ, ರಕ್ತಗಳಷ್ಟೇ ನೆನಪಾಗುವ ಇತ್ತೀಚಿನ ದಿನಗಳಲ್ಲಿ ಮಾಸ್ತಿಯವರ ಆ ಅಚಲ ನಂಬಿಕೆ ನಮ್ಮನ್ನು ಅವರ ಬಗ್ಗೆ ಒಂದು ವಾರೆಯಾದ ನಿಲುವಿನತ್ತ ದೂಡಬಹುದಾದ ಸಾಧ್ಯತೆಯೂ ಇದೆ. ಕಥೆ–ಕಾದಂಬರಿ–ಕಾವ್ಯಗಳ ಹೊರತಾಗಿ, ತಮ್ಮ ಕಾಲದ ಸಾಮಾಜಿಕ ಬದುಕಿನ ಬಗೆಗಿನ ಅವರ ಬರಹಗಳಲ್ಲಿ (ಉದಾ : ಜೀವನ ಪತ್ರಿಕೆಯ ಸಂಪಾದಕೀಯಗಳು, ಆತ್ಮ ಚರಿತ್ರೆ **ಭಾವ**ದ ಸಂಪುಟಗಳು ಇತ್ಯಾದಿ) ನಮ್ಮ ಈ ವಾರೆನೋಟಕ್ಕೆ ಸಮರ್ಥನೆಯಾಗಿ ಅನೇಕ ಸಾಕ್ಷ್ಯಗಳೂ ದೊರೆಯುತ್ತವೆ. ಇಂತಹ ಬರಹಗಳನ್ನು ಪರಿಶೀಲಿಸಿದ ವಿಮರ್ಶಕರೂ ಕೂಡಾ ಅಲ್ಲಿ ವ್ಯಕ್ತವಾಗುವುದು ಸಂಕುಚಿತವಾದ "ಹಿಂದೂ ರಾಷ್ಟ್ರೀಯತೆ" ಎಂದು ಗುರುತಿಸಿದ್ದಾರೆ. (ಎಚ್. ಎಸ್. ರಾಘವೇಂದ್ರರಾವ್ : ಮಾಸ್ತಿ ಮತ್ತು ಆಧುನಿಕ ಕನ್ನಡದ ವೈಚಾರಿಕತೆ: **ನಿಲುವು**, ಕನ್ನಡ ಸಂಘ, ಕ್ರೈಸ್ಟ ಕಾಲೇಜು, ಬೆಂಗಳೂರು) ನಿಜ ಜೀವನದಲ್ಲಿ ಮಾಸ್ತಿ ಸಂಪ್ರದಾಯವಾದಿಯಾಗಿಯೇ ಬಾಳಿದವರು ಎಂದು ಅವರನ್ನು ಹತ್ತಿರದಿಂದ ಬಲ್ಲವರೂ ಹೇಳುತ್ತಾರೆ. ಹೀಗಿರುವಾಗ, ಕನ್ನಡದ ಸಣ್ಣ ಕಥೆಗಳ ಪಿತಾಮಹರೆಂದೇ ಹೆಸರಾಗಿರುವ ಮಾಸ್ತಿ, ತಾವು ಕತೆ ಬರೆಯುವಲ್ಲಿ ಇರುವ ಏಕೈಕ ಉದ್ದೇಶ ಜೀವನ ತಮಗೆ ನೀಡಿರುವ ದರ್ಶನವನ್ನು ವಿವರಿಸುವ ಚಿತ್ರ ನೀಡುವುದೇ ಆಗಿದೆ ಎಂದಿರುವುದು ಕುತೂಹಲ ಹುಟ್ಟಿಸುತ್ತದೆ (ಮುನ್ನುಡಿ: ಸಣ್ಣ ಕತೆಗಳು–೧೪); ಹಾಗೇ ಬಹು ಮುಖ್ಯ ಪ್ರಶ್ನೆಯೊಂದನ್ನು ಕೂಡಾ: ಸಂಪ್ರದಾಯಬದ್ಧ

ಜೀವನ ನೀಡಿದ ದರ್ಶನಗಳಿಂದ ಸ್ಫೂರ್ತವಾದ ಅವರ ಕಥೆಗಳೂ ಸಂಪ್ರದಾಯವಾದೀ ಕಥೆಗಳೇ ಆಗಿರಬೇಕಲ್ಲವೇ ?

ಈ ಪ್ರಶ್ನೆಗೆ ಉತ್ತರ ಈ ಪ್ರಶ್ನೆಯಲ್ಲಿರುವ ತರ್ಕದಷ್ಟು ಸರಳವಾಗಿರಲಾರದು. ಏಕೆಂದರೆ ನಿಜ ಜೀವನದ ಪಾತಳಿಯಿಂದ ದರ್ಶನದ ಪಾತಳಿಗೆ, ದರ್ಶನದ ಪಾತಳಿಯಿಂದ ಕಥೆಗಾರಿಕೆಯ ಪಾತಳಿಗೆ ತರ್ಕದ ಮೂಲಕ ಜಿಗಿಯಲಾಗದು. ಅಥವಾ ಈ ಮೂರೂ ಪಾತಳಿಗಳಲ್ಲಿ ಕ್ರಿಯಾಶೀಲವಾಗಿರುವ ತರ್ಕಗಳೇ ಬೇರೆ ಬೇರೆ ಸ್ವರೂಪದವಾಗಿರುತ್ತವೆ. ನಿಜ ಜೀವನ ಎನ್ನುವುದು ನಿರ್ಣಾಯಕವಾಗಿ, ತನ್ನನ್ನು ಜೈವಿಕವಾಗಿ ಇಡಿಯಾಗಿ ಸಂರಕ್ಷಿಸಿಕೊಳ್ಳುವ ಕಾಳಜಿಯ ಫಲವಾಗಿದ್ದರೆ, ದರ್ಶನ ಈ 'ತನ್ನನ್ನು ಜೈವಿಕವಾಗಿ ಇಡಿಯಾಗಿ ಸಂರಕ್ಷಿಸಿಕೊಳ್ಳುವ' ಹೋರಾಟದ ಸೋಲು ಗೆಲುವುಗಳೆರಡರಿಂದಲೂ ಹೊರಹೊಮ್ಮುವ ಸಾಮಾನ್ಯ ಸತ್ಯವನ್ನು ಕಂಡುಕೊಳ್ಳುವ ಕಾಳಜಿಯ ಫಲವಾಗಿರುತ್ತದೆ. ಕಥೆಗಾರಿಕೆ ಈ ಎರಡೂ ಕಾಳಜಿಗಳು ಒಟ್ಟೊಟ್ಟಿಗೇ ಕ್ರಿಯಾಶೀಲವಾಗಿರುವುದರ ವಿಶಿಷ್ಟ ಫಲವಾಗಿರುತ್ತದೆ. ಆದರೆ ಒಂದು ಮುಖ್ಯ ವ್ಯತ್ಯಾಸವೆಂದರೆ ಮೊದಲನೇ ಎರಡು ಪ್ರಕ್ರಿಯೆಗಳು ಕಾಲ ದೇಶಗಳ ವಾಸ್ತವ ಬಂಧನಕ್ಕೆ ಬದ್ಧವಾಗಿದ್ದರೆ ಮೂರನೆಯ ಪ್ರಕ್ರಿಯೆ ಈ ವಾಸ್ತವ ಬಂಧನಗಳ ಬದ್ಧತೆಯನ್ನು ಮೀರಿ ನಡೆಯುವಂತಹದ್ದು. ಹೀಗಾಗಿ ಕಥಾಲೋಕ ಕಾಲ ದೇಶಗಳ ಹಣಿಗೆಯನ್ನು ಪುನರ್‍ರೂಪಿಸಬಯಸುವ ಮನುಷ್ಯನ ಹಂಬಲದ ಲೋಕವೂ ಹೌದು. ಮನುಷ್ಯ ಅರ್ಧ ತಾನೇನಾಗಿರುವನೋ ಅದಾಗಿದ್ದರೆ, ಇನ್ನರ್ಧ ತಾನೇನಾಗಲು ಹಂಬಲಿಸುತ್ತಿರುತ್ತಾನೋ ಅದಾಗಿರುತ್ತಾನಂತೆ. ಅಂದರೆ ಮನುಷ್ಯ ತನ್ನ ಪೂರ್ಣತೆಯನ್ನು ಪಡೆಯುವುದು ತನ್ನ ಹಂಬಲದಲ್ಲಿ. ಹೀಗಾಗಿ ಒಬ್ಬ ಮನುಷ್ಯನ ನಿಜವಾದ ನೆಲೆ ಗೊತ್ತಾಗುವುದು ಆತನ ಹಂಬಲ ಲೋಕದಲ್ಲೇ. ವಿಶೇಷತಃ, ನಮ್ಮ ಹಿಂದಿನ ತಲೆಮಾರಿನ ಲೇಖಕನೊಬ್ಬ ನಮಗೆ ಪ್ರಸ್ತುತವಾಗುವುದು ಆತನ ಹಂಬಲ ಲೋಕದ ನೆಲೆಗಳಲ್ಲೇ ಇರಬಹುದು. ಹೀಗಾಗಿ ಮಾಸ್ತಿಯವರ ಹಂಬಲ ಲೋಕವಾದ ಕಥಾ ಲೋಕದಲ್ಲೇ ಬಹುಶಃ, ಅವರ ನಿಜವಾದ ನೆಲೆಗಳು ದಕ್ಕುವುದು. ಹಾಗೇ ಅವರ ದೇವರು ಮತ್ತು ಧರ್ಮಗಳ ನೆಲೆಗಳು ಕೂಡಾ.

ತಾವು ನಿಜ ಜೀವನದಲ್ಲಿ ಕಂಡ ದರ್ಶನವನ್ನು ವಿವರಿಸುವ ಚಿತ್ರ ಕೊಡುವುದೇ ಕಥೆ ಹೇಳುವುದಕ್ಕಿರುವ ಏಕೈಕ ಉದ್ದೇಶವೆನ್ನುವ ಮಾಸ್ತಿಯವರಿಗೆ, ಮೊದಲಾಗಿ ತಮ್ಮ ದರ್ಶನವನ್ನು ಇತರರಿಗೆ ವಿವರಿಸುವ ಹಂಬಲವಾದರೂ ಏಕೆ ಉಂಟಾಯಿತು ? ನಮ್ಮ ಜೊತೆಯ ಜೀವದ ಬಗ್ಗೆ ಬೇರೆ ಜೀವಕ್ಕೆ ಹೇಳುವುದೂ ಒಳ್ಳೆಯ ಕೆಲಸವೆಂಬ ನಂಬಿಕೆಯೇ ಈ ಹಂಬಲಕ್ಕೆ ಪ್ರೇರಣೆ (ಪ್ರಸ್ತಾವನ : ಸಣ್ಣ ಕತೆಗಳು—೧೫). ಅಂದರೆ ಮಾಸ್ತಿಯವರಿಗೆ ಕಥೆ ಹೇಳುವುದು ಒಂದು ಒಳ್ಳೆಯ ಕೆಲಸ. ಒಳ್ಳೆಯ ಕೆಲಸ ಏಕೆಂದರೆ, ಜೊತೆಯ ಜೀವಕ್ಕೆ ಇನ್ನಷ್ಟು ಜೊತೆಗಳನ್ನು ಕಲ್ಪಿಸುವ ಕೆಲಸ ಅದು. ಅಂದರೆ ಮಾಸ್ತಿಯವರ ಪ್ರಕಾರ, ಕಥೆಗಾರಿಕೆಯ ಆತ್ಯಂತಿಕ ಸಾರ್ಥಕತೆ ಇರುವುದು ಜೀವ ಜಗತ್ತಿನ ಅನ್ಯೋನ್ಯತೆಯ ಮೂಲಕ ಏಕತೆಯನ್ನು ಕಲ್ಪಿಸುವಲ್ಲಿ. ಧರ್ಮದ ಮೂಲ ಪ್ರೇರಣೆಯೂ ಇದೇ ಆಗಿರುವುದರಿಂದ, ಮಾಸ್ತಿ ಕಥೆ ಬರೆಯುವುದೇ ಒಂದು ಧಾರ್ಮಿಕ ಆಚರಣೆಯಾಗಿ ಎಂದೂ ಹೇಳಬಹುದು. ಮಾಸ್ತಿ ಕಥೆಗಳಲ್ಲಿ ಧರ್ಮ ಕ್ರಿಯಾಶೀಲವಾಗುವ ಬಗೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾದ್ದು ಈ ಹಿನ್ನೆಲೆಯಲ್ಲಿ.

ಮಾಸ್ತಿ ಧರ್ಮವನ್ನು ಒಂದು ತತ್ವವಾಗಿ ಕಥಾ ಶರೀರದ ಮೂಲಕ ಸ್ವೀಕರಿಸಿರುವ ಬಗೆಯನ್ನು ಅರ್ಥ ಮಾಡಿಕೊಳ್ಳಲು ನಾವು ಅವರ ಶ್ರೀ ಕೃಷ್ಣನ ಅಂತಿಮ ದರ್ಶನ ಕಥೆಯನ್ನು ನೋಡಬೇಕು. ಇಲ್ಲಿ ಧರ್ಮ ಸಂಸ್ಥಾಪನಾಚಾರ್ಯನೆನಿಸಿರುವ, ದೇವರ ಅವತಾರವೇ ಎನಿಸಿರುವ ಶ್ರೀ ಕೃಷ್ಣನ ವಂಶವೇ ಕೆಟ್ಟತನ ಹಾಗೂ ದುಷ್ಟ ಚಟಗಳಿಗೆ ಬಲಿಯಾಗಿ ನಾಶವಾಗುತ್ತಿದೆ. ಶ್ರೀಕೃಷ್ಣ ಇದಕ್ಕೆ ಕೇವಲ ಮೂಕಸಾಕ್ಷಿಯಾಗಿ ಸಾವನ್ನು ಎದುರು ನೋಡುತ್ತಿದ್ದಾನೆ. ಈತನನ್ನು ದೇವರೆಂದೇ ನಂಬಿದ ಅರ್ಜುನ ಇದನ್ನೆಲ್ಲಾ ನೋಡಿ ಸ್ತಂಭೀಭೂತನಾಗಿದ್ದಾನೆ; ದುಃಖಿತನಾಗಿದ್ದಾನೆ. "ಅವತಾರ ಪುರುಷನೇ ಹೀಗೆ ಅಸಹಾಯಕನಾಗಬಹುದೇ ?'' ಎಂಬುದು ಅವನ ಪ್ರಶ್ನೆ. ಆಗ ಕೃಷ್ಣ ಹೇಳುತ್ತಾನೆ :

> "ಲೋಕವನ್ನು ನಡೆಸೋ ಸಂಕಲ್ಪ ಯಾರದು ? ದೇವರದೇ. ದೇವರ ಅವತಾರ ಅದನ್ನು ಪಡೆಯುತ್ತದೆಯೇ ? ನಿಮ್ಮದೇ ಚರಿತ್ರೆಯಲ್ಲಿ ಏನೇನು ಅನರ್ಥ ನಡೆಯಿತು. ಇದೇ ಅವತಾರ ಏಕೆ ಸುಮ್ಮನಿತ್ತು ? ಅನರ್ಥವನ್ನು ತಡೆಯದೆ ಬಿಟ್ಟಿತು ?.... ದೇವರು ಅನ್ನೋದು ಏನಪ್ಪ? ಸೃಷ್ಟಿಯನ್ನು ಮಾಡಿರುವ ತತ್ವ. ಸೃಷ್ಟಿಯಲ್ಲಿ ಎಲ್ಲವನ್ನೂ ಅದರದರ ಸ್ಥಳದಲ್ಲಿ ಇರಿಸಿರುವ ತತ್ವ. ಎಲ್ಲವನ್ನೂ ಅದರದರ ದಾರಿಯಲ್ಲಿ ನಡೆಸುತ್ತಿರುವ ತತ್ವ. ಎಂದರೆ ಸುರರು, ಅಸುರರು ಇಬ್ಬರಿಗೂ ದೊರೆ. ಇಬ್ಬರನ್ನೂ ನಡೆಸುವ ತತ್ವ ನಾನು ಅಂತ ಇಲ್ಲಿ ಕುಳಿತಿರುವ ನಾನು ಇದು ಆಗೋದು ಸಾಧ್ಯವೇ ಅಪ್ಪಾ ? ಸರ್ವವನ್ನೂ ನಡೆಸುತ್ತಿರುವುದು ದೇವರು. ಅವನು ಸರ್ವದಲ್ಲಿಯೂ ಅಂತರ್ಯಾಮಿ ಆಗಿದ್ದಾನೆ. ಇರುತ್ತಾ ಈ ಎಲ್ಲರಲ್ಲಿ ಒಂದಾಗಿರುವ ದೈವದಿಂದ ಪ್ರತ್ಯೇಕವಾದ ಒಂದು ತತ್ವ ಒಟ್ಟು ದೇವರ ಸ್ಥಾನವನ್ನು ಹಿಡಿಯುವುದು ಸಾಧ್ಯವಿಲ್ಲ. ಏಕೆ? ಇದರದೂ ಒಂದು ಆಟ ಇದೆ. ಇದು ಆ ಆಟವನ್ನು ಆಡಬೇಕು. ಎಲ್ಲವನ್ನೂ ನಡೆಸುವ ದೇವರೂ ಆಗಿ, ಆಟವನ್ನು ಆಡುತ್ತಿರುವ ನಾನೂ ಆಗಿ ನಡೆಯುವುದು ದೇವರಿಗೆ ಸಾಧ್ಯ. ನನಗೆ ಅಲ್ಲ. ಈ ತೊಡಕು, ಅವತಾರಗಳ ಕಲ್ಪನೆಯಲ್ಲಿ ಸೇರಿಕೊಂಡಿದೆ. ಮನುಷ್ಯನ ಬುದ್ಧಿಗೆ ಇದನ್ನು ಬಿಡಿಸುವ ಶಕ್ತಿ ಇಲ್ಲ. ದೇವರು ಒಂದೇ ಆಗಿರುತ್ತಾನೆ. ಬೇರೆ ಬೇರೆಯಾದ ಕೋಟಿ ಕೋಟಿಯಾಗಿಯೂ ನಡೆಯುವ ಈ ಕ್ರಮ ಮನಸ್ಸನ್ನು ಸೋಕಬಹುದು. ಆದರೆ ವಿವರವಾಗಿ ತಿಳಿಯಲು ಬರುವುದಿಲ್ಲ''.

ಅರ್ಜುನನ ಪ್ರಶ್ನೆ : "ಹೀಗೆಂದರೆ ಒಂದೊಂದು ಜೀವದ ಜೀವ ತನ್ನ ದಾರಿಯನ್ನು ಹೇಗೆ ಕಾಣಬೇಕು ?'' ಕೃಷ್ಣ ಹೇಳುತ್ತಾನೆ :

> "ಅದು ಪ್ರಶ್ನೆಯೇ ಅಲ್ಲ. ನೀ ಆಗಲಿ, ನಾ ಆಗಲಿ, ಯಾರೇ ಆಗಲಿ, ಯಾವುದೇ ಹೊತ್ತಿನಲ್ಲಿ, ಯಾವುದೇ ಸ್ಥಳದಲ್ಲಿ ಯಾವುದೋ ಸನ್ನಿವೇಶದಲ್ಲಿ ನಿಂತಿದ್ದೇವೆ. ಆಗ ಅಲ್ಲಿ ನನಗೆ ಸರಿ ಎಂದು ಕಂಡ ರೀತಿ ನಡೆಯಬೇಕು. ಬಹು ವೇಳೆ ಇದು ಸ್ಪಷ್ಟವಾಗಿರುತ್ತದೆ. ಅಷ್ಟು ಸ್ಪಷ್ಟವಲ್ಲ ಅನ್ನೋ ಕೆಲವು ವೇಳೆ ಉಂಟು. ಆಗ ಸ್ವಲ್ಪ ಯೋಚನೆ ಮಾಡಿದರೆ ತಿಳಿಯುತ್ತೆ. ಇನ್ನಷ್ಟು ಯೋಚನೆ ಮಾಡಿದವನಿಗೆ ಸ್ಪಷ್ಟವಾಗಿ ಕಾಣುತ್ತೆ. ತನ್ನ ಸುಖ ಯಾವುದು ಅಂತ ಯೋಚನೆ ಮಾಡಿದ ಮನುಷ್ಯ ದಾರಿ ತಪ್ಪುತ್ತಾನೆ. ಸಮುದಾಯದ ಸುಖ ಯಾವುದು ಅಂತ ಯೋಚನೆ ಮಾಡಿದ; ಸರಿಯಾಗಿ ನಡೆಯುತ್ತಾನೆ. ಆ ಸಮುದಾಯ ಎಷ್ಟು ದೊಡ್ಡದಾದರೆ ಆ ನಡತೆ ಅಷ್ಟು ಒಳ್ಳೆಯದಾಗುತ್ತೆ. ತನ್ನ ಗುರಿ ಲೋಕದ ಸುಖ ಎಂದುಕೊಂಡವನು ಲೋಕದ ಸುಖವನ್ನೇ ಬಯಸುತ್ತಾನೆ. ಅದಕ್ಕಾಗಿ ದುಡಿಯುತ್ತಾನೆ. ಅದಕ್ಕಾಗಿ ತನ್ನ ಪ್ರಾಣವನ್ನು ಬೇಕಾದರೂ ಒಪ್ಪಿಸಿಬಿಡುತ್ತಾನೆ. ಈ ಸ್ಥಿತಿಯನ್ನು ಮುಟ್ಟುವುದು ಮನುಷ್ಯ ಪ್ರಾಣಿಯ ಅಪೇಕ್ಷೆ ಆಗಬೇಕು''.

ಹೀಗೆ ದೇವರು, ದೇವರ ಅವತಾರ ಹಾಗೂ ಧರ್ಮಗಳನ್ನು ಆಧ್ಯಾತ್ಮಿಕ ಪರಿಭಾಷೆಯಿಂದ ಜನಸಾಮಾನ್ಯರ ಭಾಷೆಗೆ ತಂದಿರಿಸುವ ಮೂಲಕ ಮಾಸ್ತಿ ಆಧ್ಯಾತ್ಮವನ್ನು

ಸಾಮಾಜೀಕರಿಸುವ ಪ್ರಯತ್ನ ಮಾಡುತ್ತಾರೆ. ಭಾಷೆ ಎಂದರೆ ಇಲ್ಲಿ ಬರೀ ಭಾಷೆಯಲ್ಲ; ಕಥೆಯ ಭಾಷೆ; ಕಥೆಯ ಒಟ್ಟಾರೆ ವ್ಯಕ್ತಿತ್ವ; ಇಲ್ಲಿ ಶ್ರೀಕೃಷ್ಣ, ರುಕ್ಮಿಣಿ, ಸತ್ಯಭಾಮೆ, ಬಲರಾಮ, ಯುಧಿಷ್ಠಿರ, ವ್ಯಾಸ ಎಲ್ಲರೂ ನಮ್ಮ ಮಧ್ಯೆ ಬಾಳುವೆ ಮಾಡುತ್ತಿರಬಹುದಾದ ಮನುಷ್ಯರಾಗುತ್ತಾರೆ. ಹಾಗೆನ್ನಿಸಲು ಕಾರಣ ಕಥೆ ಕಟ್ಟಿಕೊಡುವ ವಾಸ್ತವವಾದಿ ವಿವರಗಳು. ಕೃಷ್ಣನನ್ನು ಕಾಣಲು ಅರ್ಜುನ ಹಸ್ತಿನಾವತಿಯಿಂದ ದ್ವಾರಕೆಗೆ ರಥ ನಿಧಾನ ಎಂದು ಕುದುರೆಯ ಮೇಲೆ ಹೊರಟಿದ್ದು, ಆ ನಗರಗಳಿಗಿರುವ ದೂರ, ಆ ಪ್ರಯಾಣಕ್ಕೆ ಹಿಡಿದ ದಿನಗಳು, ದ್ವಾರಕೆಯಲ್ಲಿ ಸೇವಕರನ್ನು ವಿಚಾರಿಸಿ ಕೃಷ್ಣ ಈಗ ಎಲ್ಲಿದ್ದಾನೆ ಎಂದು ತಿಳಿಯುವುದು, ಕೃಷ್ಣನನ್ನು ಕಾಣಲು ಅರ್ಜುನ ಬಂದಾಗ ಆಗಿದ್ದ ಹೊತ್ತು, ಅಲ್ಲಿ ಕೃಷ್ಣನ ಊಟಕ್ಕಾಗಿ ರುಕ್ಮಿಣಿ ಮಾಡಿದ್ದ ಬುತ್ತಿಯ ಏರ್ಪಾಡು, ಅವರಿಬ್ಬರ ಊಟಕ್ಕಾಗಿ ಅಲ್ಲಿ ನಡೆದ ಸಿದ್ಧತೆ, ಯುಧಿಷ್ಠರನಿಗೆ ವಿಷಯ ತಿಳಿಸಲು ಬೇಹನ್ನು ಅಟ್ಟಲು ನಿರ್ಧರಿಸುವದು, ರುಕ್ಮಿಣಿ ಹಾಗೂ ಕೃಷ್ಣನ ಇತರ ಸತಿಯರನ್ನೂ, ಬಲರಾಮನನ್ನೂ ಅರ್ಜುನ ಭೇಟಿ ಮಾಡಿ ಮಾತಾಡಿಸುವುದು, ಆ ಮಾತುಕತೆಯ ವಿವರ, ಆ ರಾತ್ರಿ ಅರ್ಜುನ ತಂಗಿದ ಭವನದ ಹೆಸರು, ಇತ್ಯಾದಿ ವಾಸ್ತವವಾದೀ ಮಾಹಿತಿಗಳಿಂದ ವಿನ್ಯಾಸಗೊಂಡ ಕಥೆಗಾರಿಕೆಯ ಮೂಲಕ ಒಂದು ಪೌರಾಣಿಕ ಕಲ್ಪನೆಯನ್ನು ಒಂದು ಸಾಮಾಜಿಕ ಘಟನೆಯನ್ನಾಗಿ ಪರಿವರ್ತಿಸಿಬಿಡುತ್ತಾರೆ. ಮಾಸ್ತಿಯವರಿಗೆ ಅಧ್ಯಾತ್ಮ ಆತ್ಮಶಾಸ್ತ್ರ ಮಾತ್ರವಲ್ಲ, ಸಮಾಜಶಾಸ್ತ್ರವೂ ಹೌದು ಎಂಬುದನ್ನು ಕಥೆ ಇಡಿಯಾಗಿ ಧ್ವನಿಸುತ್ತದೆ. ಇಲ್ಲಿ ಗಮನಿಸಬೇಕಾದದ್ದು, ಕಥೆ ಧರ್ಮದ ಆಧ್ಯಾತ್ಮಿಕ ಕಳೆಯನ್ನು ಕಳೆದಿಲ್ಲ. ಆದರೂ ಕಥೆ ಆಧ್ಯಾತ್ಮಿಕ ಕಥೆ ಅನ್ನಿಸುವುದಿಲ್ಲ.

ಹೀಗೆ ಧರ್ಮದ ಆಧ್ಯಾತ್ಮಿಕ ಕಳೆಯನ್ನು ಕಳೆಯದೆಯೇ ಧರ್ಮವನ್ನು ವಾಸ್ತವಗೊಳಿಸುವ ಮಾಸ್ತಿಯವರ ಇನ್ನೆರಡು ರೀತಿಯ ಪ್ರಯತ್ನಗಳನ್ನು ನಾವು ಅವರ ಸಾರಿಪುತ್ರನ ಕಡೆಯ ದಿನಗಳು ಹಾಗೂ ಮಂತ್ರೋದಯ ಕಥೆಗಳಲ್ಲಿ ನೋಡಬಹುದು.

ಒಂದು ಧರ್ಮದ ಅವನತಿ ಮತ್ತು ಮತ್ತೊಂದು ಧರ್ಮದ ಉದಯ ಕಾಲಗಳ ಸಂದರ್ಭವನ್ನು ಚಿತ್ರಿಸುವ ಸಾರಿಪುತ್ರನ ಕಡೆಯ ದಿನಗಳು ಒಂದು ಧರ್ಮದ ಅವನತಿಯೇ ಮತ್ತೊಂದು ಧರ್ಮದ ಉದಯಕ್ಕೆ ಕಾರಣವಾಗುತ್ತದೆ ಎಂಬುದನ್ನು ಸೂಚಿಸುತ್ತದೆ. ಹಾಗೆಯೇ ಇರುವುದೊಂದೇ ಧರ್ಮ, ಅದು ಕಾಲದ ಕಾರ್ಖಾನೆಯಲ್ಲಿ *recycle* ಆಗುತ್ತಿರುತ್ತದೆ ಎಂಬುದನ್ನು ಹೇಳುತ್ತದೆ. ವೈದಿಕ ಧರ್ಮದಲ್ಲಿ ಬೆಳೆದ ನರಸಿಂಹ ಶರ್ಮ ಬೌದ್ಧ ಧರ್ಮದ ಅನುಯಾಯಿಯಾಗಿ ಸಾರಿಪುತ್ರನಾದುದು ವೈದಿಕ ಧರ್ಮ ಅವನ ಕಾಲಕ್ಕಾಗಲೇ ಬರೀ ಪಾಂಡಿತ್ಯವಾಗಿ ಜಡಗೊಂಡಿದ್ದುದರಿಂದ. ಆತ ಬೌದ್ಧ ಧರ್ಮಕ್ಕೆ ಬಂದಾಗ ಗೊತ್ತಾಗುತ್ತದೆ, ವೇದ ಧರ್ಮ ಬುದ್ಧ ಗುರುವಿನ ಮೂಲಕ ತನ್ನ ಕಲ್ಮಶಗಳನ್ನೆಲ್ಲಾ ತೊಳೆದುಕೊಂಡು ಹೊಸ ಜೀವ ಪಡೆದಿದೆ ಎಂದು. ಕಥೆಯಲ್ಲಿ ಬರುವ ಸಾರಿಪುತ್ರ ಹಾಗೂ ಬುದ್ಧನ ನಡುವಣ ಈ ಸಂಭಾಷಣೆಯನ್ನು ಗಮನಿಸಿ :

> "ತಾವು ದೇವರ ಒಂಭತ್ತನೆಯ ಅವತಾರವೇ? ನನಗೆ ತಿಳಿಸಬೇಕು"
>
> "ನೀನು ಬ್ರಾಹ್ಮಣ ಕುಲದಲ್ಲಿ ಜನಿಸಿದವನು. ನಿನಗೆ ಇನ್ನೂ ಈ ರೀತಿಯ ನಂಬುಗೆ ಹೋಗಲಿಲ್ಲ".
>
> "ಮೊದಲು ಸ್ವಲ್ಪ ಅಸ್ಥಿರವಾಗಿತ್ತು. ನಿಮ್ಮನ್ನು ನೋಡಿದ ಮೇಲೆ ಸ್ಥಿರವಾಗುತ್ತ ಬಂದಿದೆ".

"ದೇವರು ಎನ್ನದಿದ್ದರೆ ನಿನಗೆ ತೃಪ್ತಿಯಿಲ್ಲವೋ?"

"ಇಲ್ಲ"

"ಹಾಗಾದರೆ ನಿನಗೊಬ್ಬ ದೇವರು ಬೇಕು"

"ಹೌದು"

"ನನ್ನನ್ನು ದೇವರೆಂದೆಣಿಸಿ ಪೂಜಿಸುವುದು ಸಾಧ್ಯವೋ?"

"ಸಾಧ್ಯ"

"ಹಾಗಾದರೆ ಪೂಜಿಸು"

"ನಾನು ಧನ್ಯ"

ದೈವಶಾಸ್ತ್ರವನ್ನು ಮನಃಶಾಸ್ತ್ರವನ್ನಾಗಿ ಪರಿವರ್ತಿಸಿ ನೋಡುವ ಈ ಸಂಭಾಷಣೆ ವೈದಿಕ ಹಾಗೂಬೌದ್ಧ ಧರ್ಮಗಳ ನಡುವಣ ಸಂಭಾಷಣೆಯೂ ಆಗಿ ಪರಿವರ್ತಿತವಾಗಿದೆ. ಈ ಪರಿವರ್ತನಶೀಲತೆಯ ಅರಿವೇ ಇಡೀ ಕಥೆಯನ್ನು ಕಟ್ಟಿರುವುದು. ಬೌದ್ಧನಾದ ಸಾರಿಪುತ್ರ ಜಡಗೊಂಡದ್ದೆಂದು ತಾನು ಕಂಡುಕೊಂಡ ವೈದಿಕ ಧರ್ಮಕ್ಕೇ ಅಂಟಿಕೊಂಡಿರುವ ತನ್ನ ಸಂಸಾರವನ್ನು ನೋಡಲು ಹೋಗುವ ಪ್ರೇರಣೆಯಾಗುವುದೂ, ನಂತರ ತನ್ನ ಸಂಸಾರವನ್ನು ಕೂಡಿಕೊಂಡು ಬೌದ್ಧ ಧರ್ಮದ ಪ್ರಚಾರಕ್ಕೆ ಹೊರಡುವುದೂ ಇದೇ ಪರಿವರ್ತನಶೀಲತೆಯ ಅರಿವಿನಿಂದ. ಆದರೆ ಈ ಪರಿವರ್ತನಶೀಲತೆಯ ಅರಿವೂ ಮಸುಕಾಗುವ ದಿನ ದೂರವಿಲ್ಲ ಎಂಬುದರ ಸೂಚನೆಯೂ ಈ ಕಥೆಯ ಕೊನೆಯಲ್ಲಿ ಬಂದು ಕಥೆ ಎಲ್ಲಿಂದ ಹೊರಟಿತ್ತೋ ಅಲ್ಲಿಗೇ ಬಂದು ಸೇರಿ ತನ್ನ ಪೂರ್ಣತೆಯನ್ನು ಗಳಿಸಿಕೊಳ್ಳುತ್ತದೆ. ಸಾರಿಪುತ್ರ ತನ್ನ ಸಂಸಾರವನ್ನು ಕೂಡಿಕೊಂಡು ಬೌದ್ಧ ಧರ್ಮದ ಪ್ರಚಾರಕ್ಕೆಂದು ಹೊರಟಿದ್ದಾದರೂ ಎಲ್ಲಿಗೆ? ಪುಳಿಂದ ರಾಜನು ಅಜಂತಾದ ಬಳಿ ಐದು ನೂರು ಜನ ಶ್ರಮಣರನ್ನು ಸಾಕಲು ಕಟ್ಟಿಸಲು ಉದ್ದೇಶಿಸಿದ್ದ ವಿಹಾರಕ್ಕೆ; ಅದರ ಉಸ್ತುವಾರಿ ನೋಡಿಕೊಳ್ಳಲು.... ಕಥೆ ಮತ್ತು ಧರ್ಮ ಒಟ್ಟೊಟ್ಟಿಗೇ ಒಂದು ಸುತ್ತು ಮುಗಿಸಿ ಕಾಲದ ಕಾರ್ಖಾನೆಯಲ್ಲಿ *recycling* ಗೆ ಸಿದ್ಧವಾಗುತ್ತಿವೆ..... ಮಾಸ್ತಿ ಈ ವಿನ್ಯಾಸದ ಮೂಲಕ ಹೇಳುವುದೇನು? ಧರ್ಮ ಮತ್ತು ಕಥೆ ಈ ಎರಡೂ ಕಾಲವಿನ್ಯಾಸಗಳಾಗಿ ಅಭಿನ್ನ ಎಂದೇ? ಹಾಗೇ ಅನ್ನಿಸುತ್ತದೆ ಮಂತ್ರೋದಯ ಕಥೆ ಓದಿದಾಗ. ಇಲ್ಲಿ ಬರುವ ಧರ್ಮ ಸಂಬಂಧಿ ಸಂವಾದಗಳನ್ನಷ್ಟೇ ನೋಡಿದಾಗ ಕಥೆಯೇ ಅಲ್ಲ ಅನ್ನಿಸುವ ಇದು ಕಥೆಯಾಗುವುದು ಧರ್ಮವನ್ನು ಇಲ್ಲಿ ಕಾಲವಿನ್ಯಾಸವನ್ನಾಗಿ ಪ್ರಸ್ತುತ ಪಡಿಸುವ ಮಾಸ್ತಿಯವರ ಸೃಜನಶೀಲತೆಯಲ್ಲಿ. ಇದು ಧರ್ಮದ ಸೃಜನಶೀಲತೆಯೂ ಹೌದು. "ಲೋಕದ ಕರ್ಮ ಮಾಡಿಕೊಂಡು ನೂರು ವರ್ಷ ಬಾಳು" ಎಂಬ ತಂದೆಯ ಅಪ್ಪಣೆಯನ್ನು ವಾಮದೇವ ದ್ವೈಪಾಯನ ಆರುಣೇಯ ಮಹರ್ಷಿ ಆಶೀರ್ವಾದವನ್ನಾಗಿ ಮಾರ್ಪಡಿಸಿಕೊಳ್ಳುವುದು ನೂರು ವರ್ಷಗಳ ಆ ಕಾಲವನ್ನು ಕರ್ಮವನ್ನಾಗಿ ವಿನ್ಯಾಸಗೊಳಿಸಿ ಧರ್ಮವನ್ನು ಕಂಡುಕೊಳ್ಳುವ ಮೂಲಕ. ಆತನಿಗೆ ಕರ್ಮವೇ ಕಾಲದ ಅತ್ಯುತ್ಕೃಷ್ಟ ವಿನ್ಯಾಸ; ಆದುದರಿಂದ ಅದೇ ಧರ್ಮ. ತಮ್ಮದೊಂದು ಉಪನಿಷತ್ತು ಬೇಡವೇ ಎಂದು ಯಾರೋ ಕೇಳಿದಾಗ "ಮಾನವನ ಉಪನಿಷತ್ತು ಮಾತಿನಲ್ಲಿದೆ, ಈಶನ ಉಪನಿಷತ್ತು ಲೋಕದಲ್ಲಿದೆ" ಎನ್ನುವ ಮಹರ್ಷಿ "ಇದೇ ನನ್ನ ಉಪನಿಷತ್ತು" ಎಂದು ತಾನು ಮೈ–ಮನಸ್ಸುಗಳನ್ನು ಏಕತ್ರಗೊಳಿಸಿ ಬೆಳೆಸಿದ ನಂದನವನವನ್ನು ತೋರಿಸುತ್ತಾನೆ. ಜೀವನ

ಪೂರ್ತಿ ಪಾಠ ಕೇಳದೆ, ಚರ್ಚೆ ಮಾಡದೆ "ದಿನ ದಿನದ ಕರ್ಮಚಕ್ರವನ್ನು ಮರಳಿ ಸುತ್ತು"ವುದರಲ್ಲೇ ತಾನು ಕಂಡುಕೊಂಡ ಬದುಕಿನ ಸತ್ಯಗಳನ್ನು (ಇವೇ ಮುಂದೆ ಸಂಗ್ರಹಗೊಂಡು ಈಶೋಪನಿಷತ್ತು ರಚಿತವಾಗುವುದು) ಮಹರ್ಷಿ ತನ್ನ ಇಚ್ಛಾ ಮರಣದ ದಿನ ಸಮೀಪದವರ ಪ್ರಾರ್ಥನೆಯ ಮೇರೆಗೆ ನಿರೂಪಿಸುತ್ತಾನೆ :

"ಎಲ್ಲವೂ ಒಂದೇ ಆತ್ಮ. ಇದನ್ನು ಅಭ್ಯಾಸ ಮಾಡು. ಆಗ ದುಷ್ಟವೆನ್ನುವುದರ ವಿಷಯದಲ್ಲಿ ಕನಿಕರವೇ ಮೂಡುತ್ತದೆ; ಬೇಸರ ಮೂಡುವುದಿಲ್ಲ. ನಿನ್ನ ಕಾಲು ಕೆಸರಾದಾಗ ಕಾಲನ್ನು ನೋಯಿಸದೆ ಕೆಸರನ್ನು ತೊಳೆಯುತ್ತೀಯೆ. ಈ ಎಚ್ಚರದ ಕಾರಣ ಕಾಲು ನೀನೇ, ಬೇರೆ ಅಲ್ಲ ಎಂಬುದರ ಅರಿವು. ಎಲ್ಲ ಜೀವದ ವಿಷಯದಲ್ಲಿ ಇದು ನಾನೇ ಎಂಬ ಭಾವ ಇದೇ ತಾಳ್ಮೆಯನ್ನು ತರುತ್ತದೆ".

"ಎಲ್ಲವೂ ನಾನೇ ಅನ್ನುವಾಗ ಸ್ವಾರ್ಥವೇ ಬೆಳೆದು ಪರಹಿತ ಮರೆಯಬಹುದಲ್ಲವೇ?"

"ಎಲ್ಲವೂ ನಾನೇ ಎನ್ನುವುದು ಚರ್ಚೆ ಮಾತ್ರ ಆದಾಗ ಹೀಗಾಗುವುದು ಸಾಧ್ಯ. ಅನುಭವವಾದಾಗ ಸಾಧ್ಯವಿಲ್ಲ. ಕಾಲನ್ನು ಜಿಗುಟಿ ಕೈ, ಕೈಯನ್ನು ಕಚ್ಚಿ ಬಾಯಿ ಯಾವ ಸುಖವನ್ನೂ ಪಡೆಯುವುದಿಲ್ಲ. ಕಾಲಿಗೆ ಪೆಟ್ಟಾದಾಗ ಕೈ ಅದನ್ನು ಸವರುತ್ತದೆ. ಕೈ ಸುಟ್ಟಾಗ ಬಾಯಿ ಅದನ್ನು ಊದುತ್ತದೆ. ಒಂದು ಎಂದು ಬಾಯಲ್ಲಿ ಹೇಳುವುದಲ್ಲ, ಒಂದು ಎಂದು ಬಾಳುವುದು ಗುರಿ. ಹೀಗೆ ಬಾಳುವ ಜೀವಕ್ಕೆ ಮೋಹ ಮಾತ್ರ ಅಳಿಯುವುದಿಲ್ಲ. ಶೋಕವೂ ಇಲ್ಲವಾಗುತ್ತದೆ".

ಮೋಹ ಅಳಿಯುವ, ಶೋಕ ಇಲ್ಲವಾಗುವ–ಧರ್ಮಸಾಧನೆಯ ಇಂತಹ ಮಾತುಗಳು ಕರ್ಮಸಾಕ್ಷ್ಯದಲ್ಲಿ ಮಾತ್ರ ಸತ್ಯವೆನ್ನಿಸಬಲ್ಲವು. ಹಾಗೆ ನೋಡಿದರೆ, ಮಾಸ್ತಿಯವರ ಎಲ್ಲ ಕಥೆಗಳಲ್ಲಿ ಧರ್ಮ ಪ್ರಕಟವಾಗುವುದು ಕರ್ಮಸಾಕ್ಷ್ಯದಲ್ಲೇ ಎಂಬುದನ್ನು ನಾವು ಗಮನಿಸಬೇಕು. ಕರ್ಮಸಾಕ್ಷ್ಯವಿಲ್ಲದ ಧರ್ಮ ಅಪೂರ್ಣ, ಪಾರ್ಶ್ವವಾಯು ಪೀಡಿತವಾಗಬಲ್ಲುದು ಎಂಬುದನ್ನು ಮಾಸ್ತಿಯವರು ಬಲ್ಲರು. ಒಂದು ಹಳೆಯ ಕತೆ ಇದಕ್ಕೆ ಒಂದು ಸುಂದರ ಉದಾಹರಣೆ. ಸುಂದರ ಏಕೆಂದರೆ ಇಲ್ಲಿ ಧರ್ಮದ ಸೌಂದರ್ಯವೇ ಕಥೆಯ ಸೌಂದರ್ಯವೂ ಆಗಿ ಮೂರ್ತೀಭವಿಸಿದೆ. ಎಲ್ಲ ಮೋಹಗಳ ತಾಯಿಮೋಹವೆನಿಸಿರುವ ಗಂಡು ಹೆಣ್ಣುಗಳ ಮೋಹವನ್ನು ಅದರೆಲ್ಲಾ ಭಾವ ಸೂಕ್ಷ್ಮಗಳೊಂದಿಗೆ ಪರಿಶೀಲಿಸುವ ಈ ಕಥೆ, ಮನುಷ್ಯ ನಿರ್ಮೋಹಿಯಾಗಲು, ಶಾಂತನಾಗಲು ಸಾಧ್ಯವಾಗುವುದು ಮೋಹವನ್ನು ಮಾಯೆಯೆಂದು ನಿರಾಕರಿಸುವುದರಿಂದ ಅಲ್ಲ, ಅದನ್ನು ಕರ್ಮವಾಗಿ ಅನುಭವಿಸಿ ಅರಿಯುವುದರಿಂದ ಎಂಬುದನ್ನು ತನ್ನೆಲ್ಲಾ ಮೋಹಕತೆಯಿಂದಲೇ ಹೇಳುತ್ತದೆ. ಸ್ತ್ರೀ ರೂಪದ ಆಕರ್ಷಣೆಯಿಂದ ಯಾರೂ ಹೊರತಲ್ಲ ಎಂಬ ವ್ಯಾಸ ವಾಕ್ಯವನ್ನು, ಇದರಿಂದ ಸಂನ್ಯಾಸಿ ಮಾತ್ರ ಹೊರತು ಎಂದು ತಿದ್ದಿಸಿದ ಮಹಾಸಂನ್ಯಾಸಿಯೊಬ್ಬ ಸ್ತ್ರೀರೂಪ ತನ್ನೆಲ್ಲಾ ಮೋಹಕತೆಯೊಂದಿಗೆ ಎದುರಾದಾಗ ತನ್ನ ಸಂನ್ಯಾಸಧರ್ಮ ಹೆಳವಾಗಿ ಓಲಾಡುವುದನ್ನು ಕಂಡು ತಲ್ಲಣಗೊಳ್ಳುತ್ತಾನೆ. ಈ ತಲ್ಲಣ ಉಂಟಾಗುವುದು ಈವರೆಗೆ ದೂರದ ನೋಟವಾಗಿ ಮಾತ್ರ ಕಂಡಿದ್ದ ಹೆಣ್ಣಿನ ಸೌಂದರ್ಯ ಈಗ ಹತ್ತಿರ ಬಂದು ದೇಹವನ್ನು ಸ್ಪರ್ಶಿಸಿದಾಗ. ದೂರದಲ್ಲಿದ್ದಾಗ ನಿರ್ಗುಣ ತತ್ವವಾಗಿ ಅಜೀವವಾಗಿದ್ದ ಮೋಹ

ಈಗ ಸಗುಣ ಕರ್ಮವಾಗಿ ದೇಹವನ್ನು ಸೋಂಕಿ ಸಜೀವವಾಗಿದೆ. ಈ ಸಂದರ್ಭವನ್ನು ಮಾಸ್ತಿ ಚಿತ್ರಿಸುವ ರೀತಿ ಎಷ್ಟು ಸಜೀವವಾಗಿದೆ ನೋಡಿ :

> ..... ಅಂದುಗೆಯ ಶಬ್ದ ಹತ್ತಿರ ಹತ್ತಿರ ಬಂದು ಕೊನೆಗೆ ಒಬ್ಬ ಯುವತಿ ಬಾಗಿಲ ಬಳಿ ನಿಂತು "ಅಮ್ಮ ಈ ಮನೆಯಲ್ಲಿ ಯಾರಮ್ಮ" ಎಂದಳು.
>
> ಕತ್ತಲು ಮುಸುಕುತ್ತಾ ಬಂದಿದ್ದುದರಿಂದ ಮಾತನಾಡಿದವಳ ರೂಪು ಮೊದಲಾದುದು ಸಂನ್ಯಾಸಿಗೆ ತಿಳಿಯಲಿಲ್ಲ. ಅಗ್ಗಿಷ್ಟಿಕೆಯ ಬೆಳಕಿನಿಂದ ಸ್ವಲ್ಪ ಮಟ್ಟಿಗೆ ಕಾಣುತ್ತಿತ್ತು. ಹೆಂಗಸು ಸ್ವಲ್ಪ ದೂರದಿಂದ ಮಳೆಯಲ್ಲಿ ನೆನೆದಿರಬೇಕು. ಬಟ್ಟೆ ತೀರ ಒದ್ದೆಯಾದಂತೆ ಕಾಣುತ್ತಿತ್ತು.
>
> ಸಂನ್ಯಾಸಿ "ನೀವು ಯಾರಮ್ಮ" ಎಂದನು.
>
> "ಸ್ವಾಮಿ, ಇದು ಯಾರ ಮನೆ. ತಮ್ಮ ಮನೆಯೇ?"
>
> "ಇದು ದೇವರ ಮನೆ ತಾಯಿ. ಯಾತಕ್ಕೆ? ಇದೊಂದು ಮಠ"
>
> "ಇಲ್ಲಿ ಯಾರಾದರೂ ಹೆಂಗಸರಿದ್ದಾರೆಯೇ?"
>
> "ಇಲ್ಲವಮ್ಮ. ಯಾಕೆ? ನೀನು ಯಾರು ತಾಯಿ? ಇಲ್ಲಿಗೇನು ಬಂದೆ?"
>
> ಸ್ತ್ರೀ ಸ್ವಲ್ಪ ಹತ್ತಿರ ಬಂದು ಕಾವಿಯ ಬಟ್ಟೆಯನ್ನು ನೋಡಿ "ತಾವು ಇಲ್ಲಿಯ ಸ್ವಾಮಿಗಳೋ?" ಎಂದಳು.
>
> "ಹೌದು ತಾಯಿ ನಾನು ಇಲ್ಲಿ ಕಾವಲುಗಾರ"
>
> "ಅಪ್ಪಾ ನನಗೆ ಯಾಕೋ ಭಯವಾಗುತ್ತದೆ. ಇಲ್ಲಿ ಹೆಂಗಸರಿಲ್ಲವೆಂದು ಇನ್ನೂ ಬಹಳ ಭಯವಾಯಿತು. ಆದರೆ ತಮ್ಮನ್ನು ನೋಡಿ ಧೈರ್ಯ ಬಂತು. ನಮ್ಮ ತಂದೆಯ ಹಾಗೆ ಸಿಕ್ಕಿದಿರಿ. ತಾವು ಸಂನ್ಯಾಸಿಗಳು. ಯಾರೂ ಏನೂ ಸಂದೇಹಪಟ್ಟು ನನ್ನ ವಿಷಯದಲ್ಲಿ ಆಡಿಕೊಳ್ಳುವ ಹಾಗೆ ಇಲ್ಲ. ಅಯ್ಯೋ! ನಮ್ಮ ಯಜಮಾನರು ಏನಾದರೋ ತಿಳಿಯಲಿಲ್ಲವಲ್ಲ. ನಾನೇನು ಮಾಡಲಿ" ಎಂದು ಹೆಂಗಸು ಅಳತೊಡಗಿದಳು.
>
> ಸಂನ್ಯಾಸಿಯ ಮನಸ್ಸು ಕಳವಳಗೊಂಡಿತು. ಅವನು "ಅಮ್ಮ, ನಿಮ್ಮ ಯಜಮಾನರು ಏನೋ ಆದರೆಂದರೇನು? ಜೊತೆಯಾಗಿ ಬಂದಿರಾ? ಎಲ್ಲಿಂದ ಬಂದಿರಿ?" ಎಂದು ಕೇಳಿದನು.
>
> ಅವಳ ಕಳವಳವನ್ನು ನೋಡಿ ಸಂನ್ಯಾಸಿಗೆ ಕಳವಳವಾದದ್ದಲ್ಲದೆ ಸ್ತ್ರೀ ರೂಪಿಗೆ ಮನಸ್ಸು ಸೋಲುವುದಿಲ್ಲವೆಂಬುದನ್ನು ತೋರಿಸುವುದಕ್ಕೆ ಒಳ್ಳೆಯ ಅವಕಾಶವಿದು ಎಂದೋ ಏನೋ ಮನಸ್ಸಿನಲ್ಲಿ ಸ್ವಲ್ಪ ಉತ್ಸಾಹವೂ ಉಂಟಾಯಿತು. ಅವಳು ಹತ್ತಿರ ಬಂದಾಗ ಮಳೆಯಿಂದ ತೊಯಿದು ಅವಳ ಮೈಗೆ ಅಂಟಿಕೊಂಡಿದ್ದ ಆ ಸೀರೆಯನ್ನು ಅವನು ಮೇಲಿನಿಂದ ಕೆಳಗಿನವರೆಗೂ ನೋಡಿದನು. ಅಸಹಾಯೆಯಾದ ಸ್ತ್ರೀ ಎಂಬುದರಿಂದ ಅವಳ ಪರವಾಗಿ ಸ್ವಲ್ಪ ಉತ್ಸಾಹವನ್ನೂ ಅನುಭವ ಮಾಡಿದನು. ಸಂನ್ಯಾಸಿ ಹೀಗೆ ಮಾಡಿದ್ದು ತಪ್ಪಾಯಿತು.

ಸಂನ್ಯಾಸಿ ಹೀಗೆ ಮಾಡಿದ್ದು ತಪ್ಪಾಯಿತು ಎಂದು ಇಲ್ಲಿ ಮಾಸ್ತಿ ಹೇಳುತ್ತಿರುವುದು ಕಥೆಯ ಒಂದು ಭಾಗವಾಗಿ ಮಾತ್ರ, ಅದೂ ಸಂನ್ಯಾಸಿ ನಂಬಿಕೊಂಡಿದ್ದ ತತ್ವದ ನೆಲೆಯಿಂದ ಎಂಬುದನ್ನು ನಾವು ಗಮನಿಸಬೇಕು. ಸಂನ್ಯಾಸಿ ಹೀಗೆ ಮಾಡಿದ್ದು ತಪ್ಪು ಏಕೆಂದರೆ, ಹೀಗೆ ಮಾಡಿದ್ದರಿಂದ

ದೇವರ, ಧರ್ಮದ ಕಾವಲುಗಾರನೆಂದು ಹೇಳಿಕೊಂಡ ಈತನೇ ಈಗ ಕಳ್ಳನೂ ಆಗತೊಡಗಿದ್ದಾನೆ. ಕಾರಣ? ಅಹಂಕಾರ ಉದ್ದೀಪನಗೊಂಡಿದೆ. ಅದು ಉದ್ದೀಪನಗೊಳ್ಳಲು ಕಾರಣ? ಮುನ್ನಿರಳ ಶಾಂತಿಯನ್ನು ಕಲಕುತ್ತಾ ಕತ್ತಲನ್ನು ಕವಿಸುತ್ತಾ ಆರಂಭವಾದ ಮಳೆಯ ಮಧ್ಯೆ 'ಶತ್ರು' ಕಿವಿ, ಕಣ್ಣು, ಮೂಗು ನಾಲಗೆ ಚರ್ಮಗಳನ್ನು ಪಡೆದುಕೊಂಡು ಜೀವಂತವಾಗಿ ಹತ್ತಿರ ಹತ್ತಿರಕ್ಕೆ ಸುಳಿಯತೊಡಗಿದೆ. ಇದೆಲ್ಲವನ್ನೂ ಒಟ್ಟಿಗೆ ಎದುರುಗೊಳ್ಳಲು ಸಂನ್ಯಾಸಿಯ ಬಳಿ ಇರುವುದು ಆಗ್ಗಿಷ್ಟಿಕೆಯ ಬೆಳಕು ಮಾತ್ರ. ಅವನು ಅಸಹಾಯಕನಾಗಿ ಅಹಂಕಾರದ ಮೊರೆ ಹೋಗುತ್ತಾನೆ. ಕರ್ಮವನ್ನು ಆಹ್ವಾನಿಸುತ್ತಾನೆ. ಅನುಭವಿಸಿ ಸತ್ಯವನ್ನು ಕಾಣುತ್ತಾನೆ.

ಇದೇ ಲೋಕದ ಧರ್ಮ ಎಂಬುದನ್ನು ಮಾಸ್ತಿ ಕಥೆಯಲ್ಲಿ ಇಡಿಯಾಗಿ ಹೇಳುತ್ತಾರೆ. ಲೋಕದ ಪ್ರತಿಯೊಂದು ಘಟನೆಯಲ್ಲೂ – ಅದು ಸಂಜೆಯಾಗಿರಲಿ, ಮಳೆಯಾಗಿರಲಿ, ಮನುಷ್ಯ ದೇಹವೇ ಆಗಿರಲಿ, ಮನಸ್ಸೇ ಆಗಿರಲಿ – ಮೋಹದ ಸಂಚಿದೆ, ಕರ್ಮದ ಆಹ್ವಾನವಿದೆ, ಸೌಂದರ್ಯದ ಆವಿರ್ಭಾವವಿದೆ, ಶಾಂತಿಯ ನೆಲೆಯಿದೆ, ದೇವಲೋಕದ ಹೊಸ್ತಿಲಿದೆ ಎಂಬುದನ್ನು ಕಥೆಯ ಪ್ರತಿಚಲನೆಯಲ್ಲೂ (ಈ ಕಥೆಯಲ್ಲಿ ಬರುವ ಸಂಜೆಯ, ಹೆಣ್ಣಿನ ಹಾಗೂ ಸ್ಪರ್ಶದ ವರ್ಣನೆಗಳನ್ನು ನೋಡಿ) ತಮ್ಮ ಅದ್ಭುತ ಕಥೆಗಾರಿಕೆಯ ಮೂಲಕ ಕಾಣಿಸಿಕೊಡುವ ಮಾಸ್ತಿ ಇದರ ಮಧ್ಯದಿಂದಲೇ ಲೋಕದ ಧರ್ಮವನ್ನು ಮನುಷ್ಯ ಕರ್ಮದ ಮೂಲಕವೇ (ಅಂದರೆ ಅಹಂಕಾರ ನಷ್ಟದ ಮೂಲಕವೇ) ಕಾಣಬೇಕಾಗುತ್ತದೆ ಎಂದೂ ಸೂಚಿಸುತ್ತಾರೆ.

ಇದೇ ವಸ್ತುವನ್ನು ಮಾಸ್ತಿ ಗೌತಮಿ ಹೇಳಿದ ಕಥೆ ಯಲ್ಲಿ ಇನ್ನಷ್ಟು ಮುಂದಕ್ಕೆ ಒಯ್ಯುತ್ತಾರೆ. ಲೋಕಧರ್ಮವನ್ನು ಒಂದು ವಿಶಿಷ್ಟ ಮನುಷ್ಯ ಸಂದರ್ಭದಲ್ಲಿಟ್ಟು ನೋಡುವ ಪ್ರಯತ್ನ ಮಾಡುತ್ತಾರೆ. ಮೋಹಕ್ಕೆ ಒಳಗಾದ ಮನುಷ್ಯ ಮನಸ್ಸಿನ ಎಚ್ಚರ ಕಳೆದುಕೊಂಡರೆ ಧರ್ಮವನ್ನು ಕಾಣಿಸಿಸುವ ಕರ್ಮವೇ ಆತನನ್ನು/ಆಕೆಯನ್ನು ಅಧರ್ಮಕ್ಕೂ ಎಳೆದೊಯ್ದೀತು ಎಂದು ಸೂಚಿಸುವ ಪ್ರಯತ್ನವನ್ನು ಈ ಕಥೆಯಲ್ಲಿ ನೋಡಬಹುದು. ಜೊತೆಗೆ ಮೋಹವೆಂಬುದು ಪ್ರಕೃತಿಯ ಒಂದು ಚಲನೆ ಹೇಗೋ ಮನಸ್ಸಿನ ಒಂದು ಚಲನೆ ಮಾತ್ರ; ಹೀಗಾಗಿ ಮನಸ್ಸನ್ನು ಜಾಗೃತಗೊಳಿಸಿಕೊಳ್ಳುವ ಕರ್ಮದ ಮೂಲಕವೇ ಮೋಹವನ್ನು ಇಲ್ಲವಾಗಿಸಿಕೊಳ್ಳಬಹುದೆಂಬ ಇಂಗಿತವೂ ಈ ಕಥೆಯಲ್ಲಿ ಪ್ರಕಟವಾಗುತ್ತದೆ:

> ..... ಮಾಲಿನಿ ಕೆಲವು ನಿಮಿಷ ಸುಮ್ಮನಿದ್ದಳು. ತಟ್ಟನೆ ದತ್ತನ ಮುಖವನ್ನು ತನ್ನ ಎದೆಯ ಬಳಿಗೆ ಸೆಳೆಯಲು ಕೈ ಚಾಚಿದಳು.
>
> ದತ್ತನು ಅಷ್ಟೇ ವೇಗದಿಂದ ಹಿಂದಕ್ಕೆ ಸರಿದನು. ನೆಲದ ಮೇಲೆ ದಂಡದಂತೆ ಬಿದ್ದು ಅವಳ ಕಾಲೆರಡನ್ನೂ ತನ್ನ ಎರಡೂ ಕೈಯಿಂದ ಹಿಡಿದುಕೊಂಡನು. 'ನೀನು ನನ್ನನ್ನು ಕಾಪಾಡಬೇಕು. ಪರೀಕ್ಷೆ ಮಾಡಬೇಡ. ನೀನು ಹೆಣ್ಣು, ಆದಿಶಕ್ತಿ; ನಿನಗೆ ಪತನವೆಂಬುದಿಲ್ಲ. ನಾನು ಹೆಣ್ಣಲ್ಲ. ನನಗೆ ನಿನಗಿರುವ ಆತ್ಮಶುದ್ಧಿಯಿಲ್ಲ. ನೀನು ಅನುಗ್ರಹಿಸಿದರೆ ನಾನು ಮುಂದುಗಾಣುತ್ತೇನೆ. ಹಠ ಮಾಡಿದೆಯೋ ನಾನು ಬಟ್ಟೆಗೆಟ್ಟೆ. ನನ್ನ ಮೇಲೆ ಅನುಗ್ರಹ ಮಾಡು. ನನ್ನನ್ನು ಕಾಪಾಡು ಎಂದು ದೈನ್ಯದಿಂದ ಬೇಡಿಕೊಂಡನು.
>
> ಮಾಲಿನಿಯ ಪುಣ್ಯ ಚೆನ್ನಾಗಿತ್ತು. ದತ್ತನ ಧ್ವನಿಯಲ್ಲಿ ಕೇಳಿದ ಅಂಗಲಾಚಿಕೆಯು ಎಳೆ ಅವಳ ಬಾಳಿನ ಯಾವುದೋ ಒಂದು ಕಳೆಯನ್ನು ಮುಟ್ಟಿತು. ಅವಳಿಗೇ

ತಿಳಿಯದಂತೆ ಅವಳನ್ನು ಆಸೆ ಅಲ್ಲಿಗೆ ಎಳೆದು ತಂದಂತೆ ಅವಳಿಗೇ ತಿಳಿಯದೆ ಆಕಳೆ ಅವಳ ದೃಷ್ಟಿಯನ್ನು ತಡೆದಿದ್ದ ಒಂದು ತೆರೆಯನ್ನು ಹರಿಯಿತು. ತನ್ನ ಆಸೆಯನ್ನು ಸಹಿಸಬಲ್ಲ ಹಿರಿಯನೆಂದು ಕಂಡಿದ್ದ ದತ್ತ ಅವಳಿಗೆ ಆ ಕ್ಷಣ ತನ್ನ ಸಹಾಯದಿಂದ ಮಾತ್ರ ಬದುಕಬಲ್ಲ ನಿಸ್ಸಹಾಯ ಬಾಲಕನಾಗಿ ಕಂಡನು. ಗಂಡೆಂದು ಅವನನ್ನು ಅಪ್ಪಿಕೊಳ್ಳಬಯಸಿದ ತೋಳು ಆಗ ಅವನನ್ನು ಮಗುವಂತೆ ಸಂತೈಸಲು ಬಯಸಿತು. ಅವಳು ಅವನನ್ನು ಹತ್ತಿರಕ್ಕೆ ಎಳೆದುಕೊಂಡಳು. ಮಗುವಂತೆ ಕುರುಳಲ್ಲಿ ಬೆರಳಾಡಿಸಿದಳು. ಕೆನ್ನೆಯನ್ನು ಬೆನ್ನನ್ನು ಕೈಯಿಂದ ಸವರಿದಳು. ತಲೆಯನ್ನು ಎತ್ತಿ ಹಿಡಿದು ಮುಖಕ್ಕೆ ಒಂದು ಮುತ್ತನ್ನು ಕೊಟ್ಟಳು. ಅನಂತರ ಕ್ಷಣ ಎದ್ದು ನಿಂತಳು.

ದತ್ತನೂ ನೆಲದಿಂದೆದ್ದು ಇವಳೆದುರು ನಿಂತನು. ಮಾಲಿನಿ, 'ನಿನ್ನ ಮಾತೇ ಸರಿ. ನಾನು ಬರುತ್ತೇನೆ' ಎಂದಳು. ಎದುರು ಮಾತಿಗೆ ಕಾಯದೆ ಸಾವಧಾನವಾಗಿ ತನ್ನ ಕುಟೀರಕ್ಕೆ ಹೋದಳು.

ಇಲ್ಲಿ ನಾವು ಗಮನಿಸಬೇಕಾದ್ದು ಹೆಣ್ಣಿನ ಮೋಹ ಮತ್ತು ತಾಯಿಯ ಪ್ರೇಮ ಒಂದೇ ಚಲನೆಯ ಎರಡು ಭಾವ ಪರಿಣಾಮಗಳು ಎಂಬುದನ್ನು ಮಾಸ್ತಿ ನಿರೂಪಿಸಿರುವ ರೀತಿ. ಹೆಣ್ಣಿನಲ್ಲಿನ ಮೋಹ; ತಾಯಿಯಲ್ಲಿನ ಪ್ರೇಮ ಎರಡೂ ಲೋಕ ಧರ್ಮದ ಅಭಿವ್ಯಕ್ತಿಗಳೇ. ಇಲ್ಲಿ ದ್ವಂದ್ವವಿಲ್ಲ. ದ್ವಂದ್ವವಿರುವುದು ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಮನುಷ್ಯ ಸಂದರ್ಭದಲ್ಲಿ. ಈ ದ್ವಂದ್ವವನ್ನು ಮನುಷ್ಯ, ಮನಸ್ಸನ್ನು ಸ್ವಚ್ಛವಾಗಿಟ್ಟುಕೊಳ್ಳುವ ಮೂಲಕ ಪರಿಹರಿಸಿಕೊಳ್ಳಬಹುದು. ಇಲ್ಲಿ ಮನಸ್ಸಿನ ಸ್ವಚ್ಛತೆ ಎಂದರೆ ಮತ್ತೇನಲ್ಲ; ಅದರಲ್ಲಿ ತನ್ನ ನಿಜ ಮುಖವನ್ನು ಗುರುತಿಸಿಕೊಳ್ಳುವ ಸ್ಪಷ್ಟತೆ. ಇದನ್ನು ಪ್ರಜ್ಞೆ ಎಂದೂ ಕರೆಯಬಹುದೇನೋ. ಅಂದರೆ ದತ್ತ ಈ ಸಂದರ್ಭದಲ್ಲಿ ವರ್ತಿಸಿದ ರೀತಿಯನ್ನು ನಿಯಂತ್ರಿಸಿದ್ದು ಆತನ ಪ್ರಜ್ಞೆ. ಈ ಪ್ರಜ್ಞೆ ಎಲ್ಲಿಂದ ಬಂತು? ಕಥೆಯ ಈ ಭಾಗ ಅದನ್ನು ವಿವರಿಸುತ್ತದೆ:

'ಚಿಕ್ಕಂದು ನಾವು ಜೊತೆಯಾಗಿ ನಡೆದಾಗ ಭಾರದ್ವಾಜನಿಗೆ ಪ್ರತಿಯಾಗಿ ನಿನಗೆ ಗುರುಗಳು ಆಜ್ಞೆ ಮಾಡಿದ್ದರೆ ನೀನು ನನ್ನನ್ನು ಮದುವೆಯಾಗುತ್ತಿರಲಿಲ್ಲವೇ?' ಎಂದು ಇವಳು ಕೇಳಿದಳು. ಅವನು 'ಆಗುತ್ತಿದ್ದನೇನೋ. ಅಣ್ಣ ಆಗಲಿ ಅಂದಂತೆ ನಾನೂ ಅನ್ನಬಹುದಾಗಿತ್ತು. ಆದರೆ ಅದು ಈಗ ಏಕೆ ಬರುತ್ತದೆ? ನೀನು ನನಗೆ ಅತ್ತಿಗೆಯಾದೆ. ನಾನು ನಿನ್ನನ್ನು ಅತ್ತಿಗೆ ಎಂದು ಭಾವಿಸಿ ಬೆಳೆದು ಬಿಟ್ಟಿದ್ದೇನೆ. ಈಗ ಅತ್ತಿಗೆಯನ್ನು ಪತ್ನಿಯೆಂದು ಭಾವಿಸಲಾರೆ' ಎಂದನು. ' ಈ ಅಣ್ಣ ಅತ್ತಿಗೆ ಎಂಬ ಮಾತು ಕಲ್ಪನೆಯಲ್ಲವೇ?' ಎಂದು ಇವಳು ಕೇಳಿದಳು. ಅವನು 'ಹೌದು, ಕಲ್ಪನೆ' ಎಂದು ಒಪ್ಪಿದನು. ಆದರೆ ಆ ಕಲ್ಪನೆ ಬಾಳ ಆಳವನ್ನು ಸೋಕಿತ್ತು. ಅದನ್ನು ತಪ್ಪಿಸುವುದು ಹೇಗೆ? ಅವಳನ್ನು ನೋಡುವ ಕ್ಷಣವೆಲ್ಲ ಅವನಿಗೆ ಪಕ್ಕದಲ್ಲಿ ಭಾರದ್ವಾಜನು ಕಾಣುವನು. ಭಾರದ್ವಾಜ ಕಲ್ಪನೆಯಲ್ಲವಲ್ಲ. ......

ಹಾಗಾದರೆ ಲೋಕಧರ್ಮವೇ ಆಗಿರುವ ಮಾಲಿನಿಯ ಮೋಹಕ್ಕೇನು ಅರ್ಥ? ಅದು ಮನುಷ್ಯ ಸಂದರ್ಭದಲ್ಲಿ ಅಧರ್ಮವಾಗಿ ಬಿಡುವುದೇ? ಹೌದು ಎನ್ನುತ್ತಾರೆ ಮಾಸ್ತಿ. ಯಾಕೆಂದರೆ ಮಾಲಿನಿಯ ಮೋಹ ಇಲ್ಲಿ ಪ್ರಜ್ಞೆ ಇಲ್ಲದೆ ಹಿಂಸೆಯ ರೂಪ ತಾಳಿದೆ. ಜೀವಗಳ ಅನ್ಯೋನ್ಯತೆ ಸಾಧಿತವಾಗದಾಗಿದೆ. ದತ್ತ ತನ್ನ ಪ್ರಜ್ಞೆಯ ನೆಚ್ಚಿಕೆಯಿಂದ ಆ ಹಿಂಸೆಯನ್ನೇ ಪ್ರೇಮವನ್ನಾಗಿ ಪರಿವರ್ತಿಸಿ ಅನ್ಯೋನ್ಯತೆಯನ್ನು ಸಾಧ್ಯ ಮಾಡುತ್ತಾನೆ. ಹೀಗೆ ಮಾಸ್ತಿಯವರ ಪ್ರಕಾರ ಮನುಷ್ಯ

ಲೋಕದಲ್ಲಿ ಧರ್ಮ ಪ್ರಕಟವಾಗುವುದು ಪ್ರಜ್ಞೆಯ ಮೂಲಕ. ಆ ಪ್ರಜ್ಞೆ ಮೂಡುವುದು ಬಾಳ ಆಳವನ್ನು ಸೋಕುವ ಅನುಭವದ ಮೂಲಕ. ಅಂತಹ ಪ್ರಜ್ಞೆ ಎಂತಹ ಹಿಂಸೆಯನ್ನೂ ಪ್ರೇಮವನ್ನಾಗಿ ಪರಿವರ್ತಿಸಬಲ್ಲುದು.

ಈ ಕಥೆಯನ್ನು ಮಾಸ್ತಿ ದತ್ತನ ಪರವಾಗಿ ವಾಲಿಸಿದ್ದಾರೆಂದು ಹೇಳಿ ಮಾಲಿನಿ ಬಗ್ಗೆ ದುಃಖ ಪಡುವವರೂ ಉಂಟು. ಆದರೆ ಕಥೆಯ ಬೆಳವಣಿಗೆಯ ಪ್ರತಿ ಹಂತ ಹಾಗೂ ಪ್ರತಿ ವಿವರವನ್ನು ಪ್ರಜ್ಞೆ ಇಟ್ಟು ಓದಿದವರಿಗೆ ಇವರೆಲ್ಲರಿಗಿಂತ ಹೆಚ್ಚು ಸ್ವತಃ ಮಾಸ್ತಿಯವರೇ ಮಾಲಿನಿ ಬಗ್ಗೆ ದುಃಖಿತರಾಗಿದ್ದಾರೆಂಬುದು ಗೊತ್ತಾಗುತ್ತದೆ. ತನ್ನ ಕಥೆ ಹೇಳುತ್ತ ಹೇಳುತ್ತಾ ಮಾಲಿನಿ (ಗೌತಮಿ) ಗದ್ಗದಿತಳಾಗಿ ಕಣ್ಣೀರೊರಸಿಕೊಳ್ಳಲು 'ಯಾರೋ ಕರೆದಂತಾಯಿತು' ಎಂದು ಹೊರಗೆ ಹೋಗುವುದಾದರೂ ಯಾರ ಬಳಿಗೆ ಎಂದುಕೊಂಡಿದ್ದೀರಿ ? ಮಾಸ್ತಿಯವರ ಬಳಿಗೇ. ಯಾಕೆಂದರೆ ಇಲ್ಲಿ ಸೃಷ್ಟಿಯಾಗಿರುವುದು ಮಾಸ್ತಿಯವರ ಪ್ರಜ್ಞಾ ಲೋಕ.

ಕಥೆಯಲ್ಲಿ ಹುಟ್ಟುವ ದುಃಖ ಕಥೆಯ ಒಂದು ಅವಿಭಾಜ್ಯ ಅಂಗವಾಗಿಯೇ, ಕಥೆಗಾರನ ಹೆಗಲ ಮೇಲೆ ಸಾಂತ್ವನ ಪಡೆಯುವ ಈ ಕಥಾ ವಿನ್ಯಾಸ ಕಥೆಗಾರನಲ್ಲಿ ಅಂತರ್ಗತವಾಗಿರುವ ಪ್ರತಿಭೆ ಮತ್ತು ಪ್ರಜ್ಞೆಗಳೆರಡನ್ನೂ ಅವಿಭಾಜ್ಯವಾಗಿ ಹಿಡಿದಿಡಬಲ್ಲಷ್ಟು ಸೂಕ್ಷ್ಮ ಸಮತೋಲನದಲ್ಲಿದೆ. ಬಹುಶಃ ಇದೇ ಲೋಕವಿನ್ಯಾಸದಲ್ಲಿ ಕಾಣುವ ಮೋಹ ಹಾಗೂ ಶಾಂತಿಗಳ ಮತ್ತು ಕರ್ಮ ಹಾಗೂ ಕರುಣೆಗಳ ಸೂಕ್ಷ್ಮ ಸಮತೋಲನ. ಅಂದ ಹಾಗೆ, ಲೋಕದಲ್ಲಿ ಕಥೆ ಅಥವಾ ಧರ್ಮ ಹುಟ್ಟುವುದು ಈ ಸೂಕ್ಷ್ಮ ಸಮತೋಲನ ಸ್ಥಿತಿಯಲ್ಲಿಯೇ ಅಲ್ಲವೇ ?

ಈ ಸ್ಥಿತಿ ಜಡ ಅಥವಾ ಸಂಪ್ರದಾಯವಾದಿ ಆಗಲು ನಿರಾಕರಿಸುವಂತಹ ಸೃಜನಶೀಲ ಸ್ಥಿತಿ. ಮಾಸ್ತಿಯವರ ಎಲ್ಲ ಕಥೆಗಳನ್ನು ಕಟ್ಟಿರುವುದು ಈ ಸೃಜನಶೀಲತೆಯೇ. ಅವು ಈವರೆಗೆ ವಿಶ್ಲೇಷಿಸಿದ ಇತಿಹಾಸ–ಪುರಾಣ ಕಥೆಗಳೇ ಆಗಿರಬಹುದು ಅಥವಾ ಅವರು ತಾವು ಬದುಕಿದ ಕಾಲದ ಆವರಣದಲ್ಲಿ ಕಟ್ಟಿಕೊಡುವ 'ಸಾಮಾಜಿಕ'ವೆಂದು ಕರೆಯಬಹುದಾದ ಕಥೆಗಳೇ ಆಗಬಹುದು. ಏಕೆಂದರೆ ಮಾಸ್ತಿಗೆ ಇರುವುದೊಂದೇ ಧರ್ಮ, ಇರುವುದೊಂದೇ ಕಥೆ. ಹಾಗೇ ಅವೆರಡೂ ಅವಿಭಾಜ್ಯವಾದವು. ಆಯಾ ಕಾಲದ, ದೇಶದ ವಿವರ ಹಾಗೂ ಭಾಷೆಗಳ ಮೂಲಕ ಅವರು ಈ ಅವಿಭಾಜ್ಯತೆಯನ್ನು ಸಾಧಿಸಲು ಪ್ರಯತ್ನಿಸುತ್ತಾರೆ. ಹೀಗಾಗಿ ಅವರ ಕಥೆಗಳ ವಿವರಗಳನ್ನೋ ಭಾಷೆಗಳನ್ನೋ ಹಿಡಿದುಕೊಂಡು ಅಲ್ಲಾಡಿಸುತ್ತಾ ನಾವು ಮಾಸ್ತಿಯನ್ನು ಯಾವುದೋ ಒಂದು ಗುಂಪಿಗೆ, ಸಂಪ್ರದಾಯಕ್ಕೆ ಸೇರಿಸಲು ಕಾತರಿಸುತ್ತೇವೆ. ಇಂತಹ ಕಾತುರತೆಯ ಮೂಲ ನೆಲೆ ಇರುವುದು ಕಥೆಯನ್ನು ಹೀಗೆ ಭೌತಿಕವಾಗಿ ವಿಭಾಜಿಸಿ ನೋಡುವ ಪಾಶ್ಚಿಮಾತ್ಯ ಕಥಾ ಮೀಮಾಂಸೆಯಲ್ಲಿ. ಇದು ಮಾಸ್ತಿ ಕಥಾ ಧರ್ಮಕ್ಕೆ ಒಗ್ಗಲಾರದು.

ಹಾಗಾದರೆ ಧರ್ಮದ ಕಾಲ ದೇಶಗಳ ವೇಷ ಲಕ್ಷಣಗಳಾದ ನೀತಿ, ನೇಮ, ವಿಧಿ ನಿಷೇಧಗಳನ್ನು ಮಾಸ್ತಿ ತಮ್ಮ ಕಥೆಗಳಲ್ಲಿ ನಿರ್ವಹಿಸುವ ರೀತಿ ಎಂತಹದು ? ಇದಕ್ಕೆ ಉದಾಹರಣೆಗಳಾಗಿ ನಾವು *ವೆಂಕಟಶಾಮಿಯ ಪ್ರಣಯ, ವೆಂಕಟಿಗನ ಹೆಂಡತಿ, ಸಂನ್ಯಾಸವಲ್ಲದ ಸಂನ್ಯಾಸ, ಆಚಾರವಂತ ಅಯ್ಯಂಗಾರ್ರು, ದೂಬಾಯಿ ಪಾದ್ರಿಯ ಪತ್ರ, ಪಂಡಿತನ ಮರಣಶಾಸನ, ಶಾಲೆಯ ಆಚಾರ್ಯರು, ಪಕ್ಷಿಜಾತಿ, ಕರಿಯ ಸವಾರ* ಮುಂತಾದ ಕಥೆಗಳನ್ನು ನೋಡಬಹುದು. ಈ ಕಥೆಗಳಲ್ಲಿ ವರ್ಣಾಶ್ರಮ ಚೌಕಟ್ಟನ್ನು ಮೀರಿ ನಿಂತ ವಿವಾಹೇತರ, ನಿಷಿದ್ಧ ಸಂಬಂಧಗಳು, ಜಾತಿ ಸಂಬಂಧ ಕಟ್ಟಳೆ – ಕಲಹಗಳು, ಶ್ರೇಷ್ಠತೆಯ ಹಮ್ಮುಗಳು, ಹಿಂಸೆ ಮುಂತಾದ ಪ್ರಶ್ನೆಗಳು ಎದುರಾಗುತ್ತವೆ. ಆದರೆ ಮಾಸ್ತಿ ಇಲ್ಲಿ ಎಲ್ಲಿಯೂ ಸಂಪ್ರದಾಯವಾದಿಯಂತೆ ಜಡನಾಗುವುದಿಲ್ಲ. ಶಾಲೆಯ ಆಚಾರ್ಯರು ಕಥೆಯಲ್ಲಿ ಬರುವ ಈ ಮಾತನ್ನು ಗಮನಿಸಿ : "ಮನುಷ್ಯ ಖನೇ ಆದರೂ ಉಳಿಯಬಹುದು, ಸೊಕ್ಕಿ ಉಳಿಯಲಾಗದು. ಆದರಲ್ಲೂ ಬ್ರಾಹ್ಮಣನಾಗಿರುತ್ತೇನೆ ಅನ್ನೋ ಬ್ರಾಹ್ಮಣ ಸೊಕ್ಕಿದನೋ ಚಂಡಾಳನಾದ. ಅವನಿಗೆ ದುರ್ಗತಿ, ಅವನ ಹಿರೇರಿಗೆ ಸ್ವರ್ಗದಿಂದ ಚ್ಯುತಿ''.

ವರ್ಣಾಶ್ರಮದ ಚೌಕಟ್ಟು ಇನ್ನು ಹೆಚ್ಚು ಕಾಲ ಉಳಿಯುವಂತಹದಲ್ಲ ಎಂಬುದು ಮಾಸ್ತಿಯವರಿಗೆ ಗೊತ್ತು. ಡೂಬಾಯಿ ಪಾದ್ರಿಯ ಪತ್ರ ಕಥೆಯಲ್ಲಿ ಪಾದ್ರಿಯೊಬ್ಬ "ಹಿಂದೂ ಧರ್ಮ ಉಳಿಯುವ ಧರ್ಮವಲ್ಲ, ಈ ದೇಶಕ್ಕೆ ಕ್ರೈಸ್ತ ಧರ್ಮವೇ ಗತಿ'' ಎಂದು ಭಾವಿಸುತ್ತಾ ಹೀಗೆ ಬರೆಯುತ್ತಾನೆ :

> "ಈ ಮತದ ಮುಖ್ಯ ವರ್ಗದವರಾದ ಬ್ರಾಹ್ಮಣರು ಡಾಂಭಿಕರು, ಅಹಂಕಾರಿಗಳು, ಮತಾಭಿಮಾನ ವಿಹೀನರು. ತಾವು ಸೃಷ್ಟಿಯಲ್ಲಿ ಉಳಿದ ಎಲ್ಲ ಜನಕ್ಕಿಂತಲೂ ಶ್ರೇಷ್ಠರೆಂದು ಇವರ ಭಾವನೆ...... ಇವರು ಭೂಮಿಗೆ ದೇವತೆಗಳು; ಉಳಿದ ಜನರೆಲ್ಲ ಇವರಿಗೆ ಕಡಿಮೆ; ಜನ್ಮ ಜನ್ಮಾಂತರ ಪ್ರಯತ್ನ ಪಟ್ಟು ಬ್ರಾಹ್ಮಣರಾಗಬೇಕು. ಇಂಥ ಭಾವನೆಯಿಂದ ಇವರು ವರ್ತಿಸುವುದರ ಫಲವೇನೆಂದರೆ ಹಿಂದಿನಿಂದ ನಡೆದಂತೆ ನಡೆಯೋಣವೆನ್ನುವವರು ಇವರ ಅಹಂಕಾರವನ್ನು ಹೇಗೋ ಸಹಿಸಿಕೊಂಡು ಹೋಗುತ್ತಾರೆ. ಉಳಿದವರು ಇವರು ನಮಗೆ ಬೇಡವೆನ್ನುತ್ತಾರೆ.... ಇಷ್ಟಾಗಿ ಇವರನ್ನು ದೊಡ್ಡವರೆಂದೇ ಒಪ್ಪಿಕೊಂಡರ ಉಳಿದವರಿಗೆ ಏನು ಪ್ರಯೋಜನ ಎಂದರೆ ಇವರನ್ನು ದೊಡ್ಡವರೆಂದದ್ದೇ ಪ್ರಯೋಜನ...''

ಹಾಗೆ ನೋಡಿದರೆ ಈ ಎಲ್ಲ ಕಥೆಗಳಲ್ಲಿ ನೀತಿ—ನೇಮ—ವಿಧಿ—ನಿಷೇಧಗಳೆಲ್ಲಾ ಧರ್ಮದ ಪ್ರಶ್ನೆಗಳಾಗಿ ಕಟ್ಟಿಕೊಳ್ಳುವುದೇ ಇಲ್ಲ. ಸಂದರ್ಭದ ಗಾಂಭೀರ್ಯ ಹಾಗೂ ವ್ಯಂಗ್ಯಗಳೇ ಪ್ರಧಾನವಾಗಿ ಈ ಪ್ರಶ್ನೆಗಳು ಮನುಷ್ಯ ಸಂಬಂಧಗಳ ತೀವ್ರತೆ, ನಿಜತ್ವ, ಪಾವಿತ್ರ್ಯ, ಆದರ್ಶಗಳ ಗಟ್ಟಿತನ ಹಾಗೂ ವಿವೇಕದ ಉಜ್ವಲತೆಗಳ ನಿಕಷದಲ್ಲೇ ತೀರ್ಮಾನವಾಗುತ್ತವೆ. ನೀತಿ—ನೇಮ—ವಿಧಿ—ನಿಷೇಧಗಳೇನಿದ್ದರೂ ಧರ್ಮದ ತೊಗಟೆ ಮಾತ್ರವಾಗಿದ್ದು ಅವು ಕಾಲದಲ್ಲಿ ಬಿದ್ದು ಹೋಗಿ ಹೊಸ ತೊಗಟೆ ಮೂಡುವುದು ಪ್ರಕೃತಿಧರ್ಮವೆಂಬ ಅರಿವೇ ಈ ಎಲ್ಲ ಕಥೆಗಳಲ್ಲಿ ಕಾಣುವುದು. ಈ ಅರಿವು ತನ್ನ *climax* ಮುಟ್ಟುವುದು ಕರಿಯ ಸವಾರ ಕಥೆಯಲ್ಲಿ. ಹಿಂಸೆ ನಿಷಿದ್ಧವಾಗಿರುವ ಬೌದ್ಧ ಧರ್ಮದ ಭಿಕ್ಷುವೊಬ್ಬ ಬೌದ್ಧ ಧರ್ಮವನ್ನು ಹಠದಿಂದ ನಾಮಾವಶೇಷ ಮಾಡತೊಡಗಿದ್ದ ಅರಸನನ್ನು ಕೊಂದು ಗುರುವಿನ ಬಳಿ ಕ್ಷಮೆ ಕೋರಲು ಬಂದಾಗ ಆ ಬೌದ್ಧ ಗುರು ಅವನನ್ನು ಬರಮಾಡಿಕೊಳ್ಳುವುದು ಹೀಗೆ : "ಧರ್ಮದ ಹೊರಗಿನ ಅರಸನನ್ನು ಆಡಿಸಿದ ದೆವ್ವಗಳು ಧರ್ಮದ ಒಳಗಿರುವ ನಿನ್ನನ್ನೂ ಬಿಡಲಿಲ್ಲ. ಇದು ನನ್ನ ನಿತ್ರಾಣವೋ, ಇಲ್ಲ ಬುದ್ಧ ಗುರುವೇ ನಿಸ್ಸತ್ವನೋ! ಬಾ, ಕಾಲು ಹಿಡಿದುಕೋ: ಪಾತಕ ಆಡಿಸದಂತೆ ಕಾಪಾಡಬಲ್ಲನೇ ನೋಡೋಣ''.

ಎಂತಹ ಅರಿವು ಇದು? ಧರ್ಮ ಎಲ್ಲವನ್ನೂ ಮೀರುವುದು ತನ್ನನ್ನು ತಾನು ಮೀರುವ ಮೂಲಕ ಎಂಬ ಹೊಳಹುಳ್ಳ ಈ ಅರಿವು ಮಾಸ್ತಿಯವರ ಧಾರ್ಮಿಕ ಅರಿವಿನ ಆಳ ಅಗಲಗಳನ್ನು ಪರಿಚಯಿಸುತ್ತದೆ.

ನಿಜ, ಮಾಸ್ತಿಯವರಿಗೆ ಕೆಡುಕನ್ನು ಮುಖಾಮುಖಿಯಾಗಿ ಎದುರಿಸುವ ಆಸಕ್ತಿ ಇಲ್ಲ. ಒಳಿತನ್ನು ಹುಡುಕುವ ನಿಷ್ಠೆ—ಏಕಾಗ್ರತೆಗಳಲ್ಲೇ ಕೆಡುಕನ್ನು ಇಲ್ಲವಾಗಿಸಬಹುದು ಎಂದು ನಂಬಿದವರು ಅವರು. ಏಕೆಂದರೆ ಕೆಡುಕಿಗೆ ನಿರ್ದಿಷ್ಟ ರೂಪವಿಲ್ಲ; ನಿಜ ಸ್ವರೂಪವೆಂಬುದಿಲ್ಲ. ಹೀಗಾಗಿ ಅದನ್ನು ಪ್ರತ್ಯಕ್ಷವಾಗಿ ಎದುರಿಸುವುದು ಸುಲಭವಲ್ಲವೆಂಬ ಅರಿವಷ್ಟೇ ಅಲ್ಲ, ಮಾಯಾವಿಯಾದ ಕೆಡುಕಿನ ಬಲೆಗೆ, ಅದನ್ನು ಎದುರಿಸುವವನೇ ಆಕಸ್ಮಿಕವಾಗಿ ಬೀಳಬಹುದೆಂಬ ಎಚ್ಚರಿಕೆ ಕೂಡಾ ಮಾಸ್ತಿ ತಮ್ಮ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಕೆಲಸ ಮಾಡಿದೆ. ಕೆಡುಕನ್ನು ಇಲ್ಲವಾಗಿಸುವುದೇ ಮನುಷ್ಯನ ನಿಜವಾದ ತುಡಿತವಾಗಿದ್ದರೆ, ಒಳಿತನ್ನು ಹುಡುಕುತ್ತಾ ಮಾನ್ಯ ಮಾಡುತ್ತಾ ಹೋಗುವುದೇ ಅದಕ್ಕೆ ನಿಜವಾದ ಮಾರ್ಗ ಎಂಬ ಭಾವ ಅವರ ಎಲ್ಲಾ ಕಥೆಗಳಲ್ಲೂ ಅಂತರ್ಗತವಾಗಿ ಹರಿದಿದೆ. ಈ ಮಾರ್ಗ ಸಹನೆಯ, ಸಂಯಮದ, ಪ್ರೀತಿಯ, ಕರುಣೆಯ ಅಂತಃಕರಣದ ಮಾರ್ಗ. ಮಾಸ್ತಿಯವರ ಈ ಮಾರ್ಗದ ಆಯ್ಕೆಯೇ ಅವರ ಕಥೆಗಳಲ್ಲಿನ ಅನುಭವದ ಹಾಗೂ ಶಿಲ್ಪದ ಆಯ್ಕೆಯೂ ಆಗಿದೆ. ಇದನ್ನು ಒಟ್ಟಾರೆಯಾಗಿ ಪಲಾಯನವಾದಿ ಮಾರ್ಗ ಎಂದು ಕರೆಯುವವರೂ ಇದ್ದಾರೆ. ಆದರೆ ಇವರು ಧರ್ಮವನ್ನೂ ಪಲಾಯನವಾದ ಎಂದು ಕರೆಯುವವರಾದ್ದರಿಂದ ಈ ಬಗ್ಗೆ ಇನ್ನು ಹೆಚ್ಚು ಮಾತು ಅನವಶ್ಯಕ ಎಂದು ನಾನು ಭಾವಿಸುತ್ತೇನೆ.

●

ಚೆನ್ನಬಸವನಾಯಕ : ಮಾಸ್ತಿಯವರ 'ಮಲ್ಲಿಗೆ'

ಲಕ್ಷ್ಮೀಶ ತೋಳ್ಪಾಡಿ

ಮಾಸ್ತಿ ಎಲ್ಲವನ್ನೂ ಸ್ವಾಯತ್ತೀಕರಿಸಿಕೊಳ್ಳಬಲ್ಲ ಲೇಖಕ. ಜೀರ್ಣಿಸಿಕೊಳ್ಳಬಲ್ಲ ಲೇಖಕ. ಭಾರತೀಯ ಸಂಸ್ಕೃತಿಯಂತೆ. ಮಾಸ್ತಿಗೆ ಪ್ರಿಯವಾಗಬಹುದಾದ ದೃಷ್ಟಾಂತವೊಂದನ್ನು ನೀಡುವುದಾದರೆ – ಪೂತನಿ ಬಾಲಕೃಷ್ಣನಿಗೆ ಮೊಲೆಯೂಡಿದಳು. ಅದು ವಿಷಸ್ತನ್ಯ. ಮಗು ಕೃಷ್ಣ ಸಹಜವಾಗಿ ಮೊಲೆಯನ್ನು ಹೀರಿದ. ಆ ಹೊತ್ತಿನಲ್ಲಿ, ಕೊನೆಗೆ ಮೊಲೆ ಹಾಲಿನ ಜತೆಗೆ, ವಿಷದ ಜತೆಗೆ, ಅಸುವನ್ನೇ ಹೀರುವ ಹೊತ್ತಿನಲ್ಲಿಯಾದರೂ, ಕ್ಷಣ ಮಾತ್ರವಾದರೂ, ಪೂತನಿ ತಾಯ್ತನವನ್ನು ಅನುಭವಿಸಿರಬೇಕು. ಅಥವಾ ಕೃಷ್ಣ ಅವಳಿಗೆ ತಾಯ್ತನವನ್ನು ತಂದಿರಬೇಕು – ಎನ್ನುವುದು.

ಕೇಡು ಇಲ್ಲಿಗೆ ಮುಗಿಯಿತು. ವಿಷ ಜೀರ್ಣವಾಯಿತು. ಕೊಲ್ಲ ಬಂದ ಹೆಣ್ಣು ಆ ಪ್ರಯತ್ನದಲ್ಲೇ; ಅಂದರೆ ಮೊಲೆಯೂಡಿಸುವಲ್ಲೆ, ತಾಯ್ತನವನ್ನು ಕನಸಿನಂತೆಯಾದರೂ ಅನುಭವಿಸಿದಳಾದರೆ ಕೇಡು ಅಲ್ಲಿಗೆ ಮುಗಿಯಲೇಬೇಕಲ್ಲ. ಇಂಥದು ಮಾಸ್ತಿ ನೋಟ. ವಿಷದ ಜತೆಗೆ ಹಾಲೂ ಇತ್ತಲ್ಲ ಎನ್ನುವವರು ಅವರು. ಆದುದರಿಂದಲೇ ಮಾಸ್ತಿ ಎಲ್ಲರ ಪರ. ಎಲ್ಲ ಪಾತ್ರಗಳ ಪರ. ಎಲ್ಲ ಪಾತ್ರಗಳ ಪರವಾಗಿರಬೇಕಾದದ್ದು ಲೇಖಕನೊಬ್ಬನ ಇಹ–ಪರದ ಪ್ರಶ್ನೆ. ಲೇಖಕನ ಪ್ರಶ್ನೆ ಎಂದಲ್ಲದೆಯೂ ಮಾಸ್ತಿ ಎಲ್ಲ ಪಾತ್ರಗಳ ಬಗ್ಗೆ ಸಹಾನುಭೂತಿ ಪರ ಆಗಿದ್ದೂ ಯಾರ ಪರವೂ ಅಲ್ಲದ ಒಂದು ವಿಧದ ನಿರ್ಮಮಮತೆಯಿಂದ ಆ ಸ್ವಾಯತ್ತೀಕರಣವನ್ನು ಅವರು ಸಾಧಿಸುತ್ತಾರೆ. ಹೀಗೆ ಮಾಡಬಲ್ಲ ಇನ್ನೊಬ್ಬ ಲೇಖಕ ಕುವೆಂಪು. ಆದರೆ ಕುವೆಂಪು ಹೀಗೆ

ಸ್ವಾಯತ್ತೀಕರಿಸಿಕೊಳ್ಳುವುದು, ಜೀರ್ಣಿಸಿಕೊಳ್ಳುವದು ಮಣ್ಣಿನ ಮಟ್ಟದಲ್ಲಿ. ಮಮತೆಯಿಂದಲೇ ಲೀಲೆಯಿಂದೆಂಬಂತೆ ಕುವೆಂಪು ಇದನ್ನು ಸಾಧಿಸುತ್ತಾರೆ. ಮಾಸ್ತಿಗೆ ಈ ಸಹಾನುಭೂತಿ (ಸಹ+ಅನುಭೂತಿ) ಅವರ ಸಂಸ್ಕೃತಿ ಕೋಶದಿಂದ ಬಂದದ್ದು. ಪೂರ್ವ ನಿಶ್ಚಿತವಾದದ್ದು. ಆದುದರಿಂದಲೇ ಮಾಸ್ತಿಯವರ ಕತೆಗಳು ಅವರ ಅಪೂರ್ವ ಕಲೆಗಾರಿಕೆಯಿಂದಾಗಿ ಗಾಢ ಮಾನವೀಯ ಅನುಭವಗಳ ಸರಣಿಯನ್ನೇ ನಮ್ಮಲ್ಲಿ ತೆರೆಯುತ್ತವೆಯಾಗಲಿ, ಒಂದು *transcend* ಆಗುವ ಅನುಭವವನ್ನು ಉಂಟು ಮಾಡುವುದಿಲ್ಲ. ಮಾಸ್ತಿಗೆ ಆ ಉದ್ದೇಶವೂ ಇಲ್ಲ. ಇಲ್ಲ – ಮಾತ್ರವಲ್ಲ, ಮಾಸ್ತಿಯವರ ಸಣ್ಣ ಕತೆಗಳ ಅದ್ಭುತ ಪ್ರಪಂಚದಲ್ಲಿ ಈ ಜೀವನದ ಸಂಸ್ಕೃತಿಯ ದರ್ಶನ ಎಷ್ಟು ಗಾಢವೆಂದರೆ, ಎಷ್ಟು ಪರ್ಯಾಪ್ತವೆಂದರೆ, ಮನುಷ್ಯ *transcend* ಆಗುವ ಸಾಧ್ಯತೆ ಕೂಡ, ಈ ಸಂಸ್ಕೃತಿಯ ನಕಾಶೆಯಲ್ಲಿ ಎಲ್ಲೋ ಒಂದೆಡೆ ಗುರುತಿಸಲ್ಪಟ್ಟಿರುತ್ತದೆ. *Genes* ಗಳ ಗೂಢಲಿಪಿಯಲ್ಲಿ ಜೈವಿಕ ವಿಸ್ತಾರವೆಲ್ಲ ಅಡಗಿರುವಂತೆ ಅಥವಾ ಒಳನೋಟ ಕೂಡ ತಾನು ಸ್ವಯಂಭೂ ಅಲ್ಲದೆ ಯಾವುದೋ ಶ್ರಮಮೂಲವಾಗಿರುವಂತೆ. ಅಥವಾ ಬೆವರಿನ ಹನಿಯಲ್ಲಿ ಆಕಾಶ ಪ್ರತಿಫಲಿಸುವಂತೆ.

ಅಚ್ಚರಿ ಎಂದರೆ, ಕುವೆಂಪು–ಮಣ್ಣಿನ ಮಟ್ಟದಲ್ಲೆ ಎಲ್ಲವನ್ನು ಜೀರ್ಣಿಸಿಕೊಳ್ಳುವ ಕುವೆಂಪು, ಉತ್ತರಣ(*transcendence*)ವನ್ನು ಸಾಧಿಸುವುದು ಬೇಂದ್ರೆಯವರ ಕಾವ್ಯದಲ್ಲಿ ಆಗುವಂತೆ. ಈ ನೆಲೆಯಲ್ಲಿ ಮಾಸ್ತಿ, ಕಾರಂತರಿಗೆ ಹತ್ತಿರ. ಅಥವಾ ಹಿರಿಯರು. ಅವರಿಗೆ ಹಾರುವುದಲ್ಲ, ಈಜುವುದು ಮುಖ್ಯ. ಹನುಮಂತ ಹಾರಿದ್ದನ್ನು ಅವರು ಒಪ್ಪಿಕೊಳ್ಳುವುದಿಲ್ಲ. ಇಂಥ ವಾಸ್ತವವಾದಿಗೆ ಗದ್ಯವೇ ಪ್ರಧಾನ ಅಭಿವ್ಯಕ್ತಿಯಾದದ್ದು ಆಶ್ಚರ್ಯವಲ್ಲ. ಮಾಸ್ತಿ ಗಹನ ಮನುಷ್ಯ. ಅವರ ವಾಸ್ತವವಾದವೇ ಅವರನ್ನು ಎರಡು ಐತಿಹಾಸಿಕ ಕಾದಂಬರಿ ಬರೆಯೋ ಹಾಗೆ ಮಾಡಿತು. ಆದರೆ ಈ ಎರಡು ಕಾದಂಬರಿಗಳಲ್ಲೇ ಮಾಸ್ತಿ ತನ್ನನ್ನು ತಾನು ಮೀರುವ ನೆಲೆಗಳನ್ನು ಕಂಡುಕೊಳ್ಳುವುದು. ಅವರ ಅತ್ಯುತ್ತಮ ಸಣ್ಣಕತೆಗಳಲ್ಲಿ ಕೂಡಾ ಈ ನೆಲಗಳಿಲ್ಲ. ಅವರ ಐತಿಹಾಸಿಕ ಸಣ್ಣಕತೆಗಳಲ್ಲಿಯೂ ಇಲ್ಲ. ಬದುಕಿನ ಗಹನವೂ ಸಂಕೀರ್ಣವೂ ಆದ ಅರ್ಥವನ್ನು ಖಚಿತಪಡಿಸಿಕೊಳ್ಳುವುದೇ ಸಣ್ಣ ಕತೆಗಳಲ್ಲಿ ಮಾಸ್ತಿಯವರ ಗುರಿ. ಹೀಗೆ ಖಚಿತಪಡಿಸಿಕೊಳ್ಳುವುದಕ್ಕೆ ಪಾರಂಪರಿಕ ಸಾಂಸ್ಕೃತಿಕ ಚೌಕಟ್ಟನ್ನು ಅವರು ಇಟ್ಟುಕೊಂಡಿದ್ದಾರೆ. ಈ ಚೌಕಟ್ಟು ಈ ಎರಡು ಕಾದಂಬರಿಗಳಲ್ಲಿಯೂ ಇದೆ ಎಂಬುದು ನಿಜ. ಆದರೆ ಈ ಚೌಕಟ್ಟು ದುರ್ಬಲವೆನ್ನಿಸುವಂತೆ, ಸಾಲದು ಎನ್ನಿಸುವಂತೆ, ಅಪರ್ಯಾಪ್ತವೆನಿಸುವಂತೆ, ಇತಿಹಾಸದ ಗತಿ ಭೋರ್ಗರೆದು ದಿಗ್ಭ್ರಮೆಗೊಳಿಸುತ್ತದೆ. ಇದನ್ನು ಹೀಗೂ ಹೇಳಬಹುದೇನೋ: ವಿಶೇಷಜ್ಞತೆಯಿಂದ ಸಮಗ್ರತೆಯ ಕಡೆಗೆ ನಡೆಯುತ್ತಿರುವ (ನಡೆಯಲೇ ಬೇಕಾದ) ಚಲನೆ ಇದು. ಸಮಗ್ರತೆಯ ಕರೆಯಿಂದಾಗಿಯೇ, ಮೀರಬಲ್ಲ ನೆಲೆಯನ್ನು ಮಾಸ್ತಿ ಇತಿಹಾಸದಲ್ಲಿ ಹುಡುಕಿದರೋ? ಭಾರತೀಯ ಪರಂಪರೆಯಲ್ಲಿ ಇದು ಮೊದಲಿನಿಂದಲೂ ಸಂಭವಿಸಿದೆ. ರಾಮಾಯಣ ಆದರ್ಶವನ್ನು ತೋರಿಸುವ ಕಾವ್ಯ. ಆದರ್ಶ ರಾಜ್ಯ. ಆದರ್ಶ ರಾಜ. ಇಲ್ಲಿ ಸಂಸ್ಕೃತಿಯ ನಿಯತವಾದ ಒಂದು ಚೌಕಟ್ಟಿದೆ. ಇದು ಆದರ್ಶ ಚೌಕಟ್ಟು ಆದುದರಿಂದಲೇ ಈ ಚೌಕಟ್ಟನ್ನು ಕಾಪಾಡುವುದಕ್ಕಾಗಿಯೇ ಒಂದು ರಾಜ್ಯ ವ್ಯವಸ್ಥೆ. ಆದರೆ ಎಷ್ಟೇ ಆದರೂ ಇದು ಹೊರಗಿನ ಚೌಕಟ್ಟು. ಇದು ಒಳಗಿನ ಚೌಕಟ್ಟಾಗದೆ ಸಫಲತೆ ಇಲ್ಲ. ಈ ನೆಲೆಯಲ್ಲಿಯೇ

ರಾಮಾಯಣ ತನ್ನ ಕಾವ್ಯತ್ವವನ್ನು ಬಿಟ್ಟುಕೊಡದೆಯೇ, ಧರ್ಮ, ಅಧ್ಯಾತ್ಮದ ಕಡೆಗೆ ಚಲಿಸಲು ಮೊದಲಿಟ್ಟಿತು. ಕಾವ್ಯ ಆಧ್ಯಾತ್ಮಿಕ ಪ್ರಮಾಣ ಗ್ರಂಥವೂ ಆಯಿತು. ಆಗಿ, ಕಾವ್ಯ ಹೊರಗೆ ಮಾತ್ರವಲ್ಲ ಒಳಗೆ ಕೂಡ ಸಂಭವಿಸುವ, ಚಲನೆ ಪ್ರಾರಂಭವಾಯಿತು. ಕಾವ್ಯದಿಂದ ಮಂತ್ರ ಬಂತು. ಇದು ಕೂಡಾ ಸಮಗ್ರತೆಯ ಕಡೆಗೆ ಚಲನೆಯೇ.

ಮಹಾಭಾರತದಲ್ಲಿ ಇದು, ಈ ಚಲನೆ, ಇನ್ನೊಂದು ಹಂತವನ್ನೇ ಮುಟ್ಟಿಬಿಟ್ಟಿತು. 'ರಾಮರಾಜ್ಯ' ಎನ್ನುವ ಮಾತು ಒಂದು 'ಸುವರ್ಣಯುಗ'ವನ್ನು ಧ್ವನಿಸಿದರೆ, ಸುವರ್ಣಯುಗದ ಕನಸನ್ನೇ ಪುಡಿಪುಡಿ ಮಾಡುವಂತೆ ಮಹಾಭಾರತ, ಗೆದ್ದವರ ದುರಂತವನ್ನು, ಗೆಲುವಿನ ದುರಂತವನ್ನು ತೋರಿಸಿತು. ಭಾರತೀಯ ಮನಸ್ಸಿಗೆ ಸುವರ್ಣ ಯುಗದ ಕಲ್ಪನೆಯೇ, ಕನಸೇ, ಅಸಾಧ್ಯ—ಅದರ ಲೌಕಿಕವಾದ ಅರ್ಥದಲ್ಲಿ. ಸುವರ್ಣಯುಗದ ವಸ್ತುವಿನಿಂದ, ಲೋಕಕ್ಷಯ ಕಾರಿಯಾದ 'ಕಾಲ'ದ ವಸ್ತುವಿನ ಕಡೆಗೆ ನಡೆದ ಮಹಾನ್ ಚಲನೆಯೇ ರಾಮಾಯಣದಿಂದ ಮಹಾಭಾರತದ ಕಡೆಗೆ ನಡೆದ ಚಲನೆ. ಇದನ್ನೇ ಸಮಗ್ರತೆಯತ್ತ ನಡಿಗೆ ಎಂದು ನಾನು ಕರೆಯುವುದು.

ಮಾಸ್ತಿ ಖಂಡಿತ ಈ ನಡಿಗೆಯ ಜತೆ ಹೆಜ್ಜೆ ಹಾಕಿದ್ದಾರೆ. ಅವರ ಎರಡು ಕಾದಂಬರಿಗಳಲ್ಲೂ ಇತಿಹಾಸದ, ಕಾಲದ, ಅಗಮ್ಯವೂ ದುರೂಹ್ಯವೂ ಆದ ಗತಿ ವಿಪರ್ಯಸ್ತ ವಿನ್ಯಾಸ ಒಡೆದು ಕಾಣುತ್ತಿದೆ. "ಚೆನ್ನಬಸವನಾಯಕ'' ವನ್ನೇ ನೋಡಿ:

ತಾನು ಇಚ್ಛಿಸಿದಂತೆ ಬದುಕುವುದು ಹಾಗಿರಲಿ, ತಾನು ಇಚ್ಛಿಸಿದಂತೆ ಬಲಿ ಯಾಗುವುದು ಕೂಡ ಸಾಧ್ಯವಾಗದೆ, ಈ ಅರ್ಥದಲ್ಲೆ, ನಿಜವಾಗಿ ಬಲಿಯಾಗಿ ಹೋದ ರಾಜಪತ್ನಿ ಶಾಂತವ್ವೆ, ಕಾಪಾಡುವ ದೇವರು ಭೈರವನಾದರೆ ಅವನು ಹೀಗೇ ಕಾಪಾಡೋದು— ಎಂದರೆ, ಮದ್ಯ; ಮಾಂಸ; ಬಲಿ – ಇಂಥದು ಆರಾಧನೆಯಾದರೆ, ಕಾಪಾಡುವುದೂ ಸಾವೇ; ಸಾವೇ ಪ್ರಸಾದವಾಗಿ, ಅನುಗ್ರಹವಾಗಿ ಸಿಗೋದು ಎಂದು ತಿಳಿಯದ ಕಾಪಾಲಿ; ಕಾಪಾಲಿಯದು ಸ್ವಾರ್ಥವಾದರೆ, ನಿಃಸ್ವಾರ್ಥವನ್ನು ವ್ರತದಂತೆ ನಡೆಸುವ ನೇಮಯ್ಯನ ನೇಮದ ನಡೆ ಕೂಡ ದುರಂತಕ್ಕೆ ತನ್ನ ಪಾಲು ಸಲ್ಲಿಸಿ, ಇತಿಹಾಸ ಎಂಬ ದೈವ, ಭೈರವನಂತೆ, ಬಲಿತೆಗೆದುಕೊಂಡ ದೈವವಾಗಿ ಬಿಟ್ಟಿತು. ಈ ದೈವದ ಮುಂದೆ, ಎಲ್ಲರೂ, ತಮ್ಮದೇ ಆದ ರೀತಿಯಲ್ಲಿ, ಬಲಿಗಂಬದ ಕಡೆಗೆ ನಡೆಯುತ್ತಿದ್ದಾರೆ.

ಸಾಮಂತ ಸ್ಥಾನದಲ್ಲಿ ಇರಲಾರೆ, ಅಧೀನ ಸ್ವಾತಂತ್ರ್ಯ ಬೇಡ ಎಂದ ಬಿದನೂರು ಇಡಿಯಾಗಿ ಹೈದರನ ತೆಕ್ಕೆಗೆ ಬಿದ್ದು, ತನ್ನ ಸ್ವಾತಂತ್ರ್ಯವನ್ನೇ ಕಳಕೊಂಡಿತು. ಮೈಸೂರು ಮತ್ತು ಬಿದನೂರು ಹತ್ತಿರ ಬಂದ ಗಳಿಗೆಯೇ ಹೈದರ್ ಬಿದನೂರಿನ ಬಗ್ಗೆ ಇನ್ನೊಂದು ರೀತಿಯಲ್ಲಿ ಯೋಚಿಸುವ ಗಳಿಗೆಯಾಯಿತು. ತನ್ನ ಮಗನಿಗಾಗಿ ಮೈಸೂರ ರಾಜಮಾತೆ ಬಿದನೂರಿನ ಸ್ನೇಹ ಬೆಳೆಸಿದಳು. ನಾಯಕನೂ ಕೂಡ ತನ್ನ ಸಮಸ್ಯೆಯ ಇತ್ಯರ್ಥಕ್ಕೇ ಮೈಸೂರಿನ ಕೆಳೆ ಲೇಸೆಂದುಕೊಂಡ. ಹೈದರ್ ಬಿದನೂರನ್ನು ಬಯಸಿದ್ದು ಕೂಡ ತನ್ನ ಮಗನಿಗಾಗಿ; ಅದೂ ಮೈಸೂರು ರಾಜರ ಹಂಗಿಲ್ಲದೆ ಸ್ವತಂತ್ರವಾಗಿರಬೇಕೆಂದೆ. ಈ ವಿಕಟ ವಿಪರ್ಯಾಸದಲ್ಲಿ ಮಾಸ್ತಿ ಏನನ್ನು ಸೂಚಿಸುತ್ತಿದ್ದಾರೆ?

ರಾಜ್ಯಾಧಿಕಾರದ ವಾರಸುದಾರಿಕೆ ಹೇಗೂ ಇರಲಿ; ಇತಿಹಾಸದ ವಾರಸುದಾರಿಕೆ ಜನಸಾಮಾನ್ಯರದ್ದು. ಇತಿಹಾಸವನ್ನು ಸ್ಮೃತಿಯನ್ನಾಗಿಸಿ, ಅದನ್ನು ಸದಾ ಕಾಪಿಟ್ಟು ಅನೂಹ್ಯಗತಿಯ ಇತಿಹಾಸವನ್ನು ಊಹನೀಯವನ್ನಾಗಿ ಮಾಡುವ ಜೀವಶಕ್ತಿ ಅವರದ್ದು. ಕಾದಂಬರಿಯ ಕೊನೆಯಲ್ಲಿ ಬರುವ ಕೋಲಾಟ, ಕುಣಿತಗಳ ಹಾಡುಗಳಲ್ಲಿ ಬರುವ ನಾಯಕ ಮರಳಿ ಬರುತ್ತಾನೆಂಬ, ರಾಣಿಯನ್ನು ಕುರಿತ ಉಲ್ಲೇಖಗಳಿರಲಿ, ಕಾದಂಬರಿಯ ಒಳಗೆ ಮಲ್ಲಿಗೆ ಈ ಜೀವಶಕ್ತಿಯ ಪ್ರತೀಕವಾಗಿದ್ದಾಳೆ. ಸಗುನನನ್ನು ಪಡೆವ ಅವಳ ಹೋರಾಟ, ಅಧಿಕಾರಕ್ಕಾಗಿ ನಡೆವ ಹೋರಾಟವನ್ನು ಮುಸಿನಗುವಿನಿಂದ ನೋಡುವಂತೆ ಮಾಡುತ್ತದೆ. ಈ ಮಲ್ಲಿಗೆ ಮಾಸ್ತಿಯ ಮಾನವೀಯ ಮಲ್ಲಿಗೆ. ಸಗುನನನ್ನು ಮಲ್ಲಿಗೆ ಪಡೆದಂತೆ, ಶಾಂತವ್ವ ಕೂಡ ನಾಯಕನನ್ನು ಪಡೆಯಲಾಗಲಿಲ್ಲ. ನಾಯಕ ಶಾಂತವ್ವನನ್ನೂ ಪಡೆಯಲಾಗಲಿಲ್ಲ. ಇಡೀ ಕಾದಂಬರಿಯಲ್ಲಿ ಪಡೆಯುವುದು ಮಲ್ಲಿಗೆ ಒಬ್ಬಳೇ ಮತ್ತು ಅವಳು ಸಗುನನನ್ನು ಪಡೆದಂತೆ ಯಾರೂ ಏನನ್ನೂ ಪಡೆಯಲಾಗುವುದಿಲ್ಲ.

ಪೀಠದ ಸಿದ್ಧ ಆಗಾಮಿಯನ್ನು, ಮುಂದಿನದನ್ನು ತಿಳಿಯಬಲ್ಲನೇನೋ. ಆದರೆ ತಡೆಯಲಾರ. ಇತಿಹಾಸದ ಮುಂದಿನ ಗತಿಯನ್ನು ತಿಳಿದೂ, ತಡೆಯಲಾರದ, ತಡೆಯಬೇಕೆಂಬ ಮಮತೆಯನ್ನು ಮೀರಿದ ನಿರ್ಮಮ ನಿರ್ಮೋಹ ಒಂದೆಡೆ. ನೇಮಯ್ಯ ಈ ನಿರ್ಮಮಕ್ಕೆ ಹತ್ತಿರವಿದ್ದಾನೆ. ತಾನು ಉತ್ಕಟವಾಗಿ ಹಂಬಲಿಸಿದ್ದನ್ನು ಪಡೆವ ಯತ್ನದಲ್ಲಿ, ಇತಿಹಾಸದಿಂದ ರೂಪಿಸಲ್ಪಟ್ಟೂ ತಾನೂ ಇತಿಹಾಸವನ್ನು ರೂಪಿಸುವ, ಮಮತೆಯ ಬಲದಿಂದಲೇ ಗೆಲ್ಲುವ ಮಲ್ಲಿಗೆ ಒಂದೆಡೆ. ಆದರೆ ಇವೆರಡೂ ವ್ಯಕ್ತಿನಿಷ್ಠ ನೆಲೆಗಳು. ಮತ್ತೆ ಜಗದ್ರಂಗಕ್ಕೆ ಬಂದರೆ ಪಡೆಯುವ ಪ್ರಯತ್ನವೇ ಅಸಂಬದ್ಧವೆನ್ನಿಸುವಂತೆ, ಪಡೆವ ಯತ್ನದಲ್ಲಿ ಎಲ್ಲವನ್ನು ಕಳೆದುಕೊಂಡು ರಿಕ್ತವಾಗುವ ಶೂನ್ಯ. ಇಂಥಲ್ಲಿ, ಇತಿಹಾಸ ಮರಳಿ ಸಂಭವಿಸುತ್ತದೆನ್ನುವ, ಕಳೆದದ್ದನ್ನು ಮರಳಿ ಪಡೆದೇವೆನ್ನುವ, ಆ ಆಸೆಯೇ ಜೀವಂತ ಸಂಪ್ರದಾಯವಾಗಿ ಅದನ್ನು ಕಾಪಿಟ್ಟ ಜನ. ಪಡೆವ ಆಸೆ ಎಷ್ಟು ಜೀವಂತವೆಂದರೆ, ಇತಿಹಾಸ ಈ ದಾರಿಯಲ್ಲೇ ಹೆಜ್ಜೆಹಾಕಬೇಕಷ್ಟೇ. ಇಲ್ಲವಾದರೆ ಈ ಆಸೆ ಇಷ್ಟು ಪ್ರಖರವಾಗಿ ಇರಲೇಬಾರದು ಎಂದು ಅನಿಸುವಷ್ಟು . ಮಲ್ಲಿಗೆ ಇದಕ್ಕೆಲ್ಲ ಸಂಕೇತವಾಗಿದ್ದಾಳೆ. ಕೋಲಾಟಕ್ಕೆ ಕೋಲಾಗಿ, ಕುಣಿತಕ್ಕೆ ಕಾಲ್ಗೆಜ್ಜೆಯಾಗಿ ಮಲ್ಲಿಗೆ ಒದಗಬಲ್ಲಳು. ಮಲ್ಲಿಗೆಯ ಗೆಲವು ಮಾಸ್ತಿಯ ಕಲೆಯ ಗೆಲವು ಕೂಡ. ಯಾರು ಬಲ್ಲರು? ಗೆಲ್ಲುವುದು ಕಲೆ ಮಾತ್ರವೋ ಏನೋ !

"ಚಿಕವೀರ ರಾಜೇಂದ್ರ" ಕಾದಂಬರಿಯಲ್ಲಿ ದುರಂತ ಪ್ರಜ್ಞೆ

ಟಿ.ಪಿ. ಅಶೋಕ

"ಚಿಕವೀರ ರಾಜೇಂದ್ರ" ಕಾದಂಬರಿಯ ವಸ್ತುವನ್ನು ಕುರಿತು ಕಾದಂಬರಿಕಾರ ಮಾಸ್ತಿಯವರು "ಪ್ರಾಸ್ತಾವಿಕ" ದಲ್ಲಿಯೇ ಸೂಚನೆ ಕೊಟ್ಟಿದ್ದಾರೆ: "ಐದು ಯೋಜನ ಉದ್ದದ ಮೂರು ಯೋಜನ ಅಗಲದ ಈ ಮಲೆ ಸೀಮೆ ಒಂದು ವಿಶಿಷ್ಟ ಜನ ಸಮುದಾಯದ ನಿವಾಸವಾಗಿದ್ದಿದೆ. ಈ ಜನರೇ ಕೊಡಗರು. ಈ ಜನ ಒಂದು ಗುಂಪಾಗಿ ಬಾಳಿ ಒಂದು ಜೀವನವನ್ನು ನಡೆಸುವುದರಲ್ಲಿ ಇವರ ನಿವಾಸದ ನೆಲೆ ತಾನೆ ಬೇರೆ ಒಂದು ತೆರದ ದೇಶವಾಯಿತು. ನಾಡಿನ ವಿಶಿಷ್ಟ ನಿವಾಸಿಗಳಾದರೂ ಕೊಡಗರು ಈ ನೆಲವನ್ನು ಎಂದಾಗಲಿ ಆಳಿದಂತೆ ಕಾಣುವುದಿಲ್ಲ. ಕೊಡಗರಲ್ಲದ ಅನೇಕ ರಾಜವಂಶಗಳು ಇಲ್ಲಿ ಆಳಿದವು. ಕದಂಬ, ಗಂಗ, ಚೋಳ, ಚಾಳುಕ್ಯ, ಹೊಯ್ಸಳರು, ಇದರ ಮೇಲೆ ತಮ್ಮ ಪ್ರಭುತ್ವವನ್ನು ಹಾಯಿಸಿದ್ದುಂಟು. ಕೊನೆಯಲ್ಲಿ ಇಕ್ಕೇರಿಯ ರಾಜವಂಶದ ಒಬ್ಬ ಉದ್ದಿನಿ ಇಲ್ಲಿಗೆ ಬಂದು ಹಿಂದಿನ ರಾಜವಂಶವನ್ನು ನಿರ್ಮೂಲ ಮಾಡಿ ಜನರ ಅಪೇಕ್ಷೆಯಿಂದ ತಾನೆ ದೊರೆಯಾದನು. ಇವನ ವಂಶ ಇನ್ನೂರು ವರ್ಷಕ್ಕೆ ಮೇಲೆ ನಡೆಯಿತು.

> *"ಒಂದು ಕಡೆ ಮೈಸೂರು, ಒಂದು ಕಡೆ ಮಲೆಯಾಳ, ಒಂದು ಕಡೆ ಮಂಗಳೂರಿನ ಆಡಳಿತಗಳಿರುತ್ತ ಮಧ್ಯೆ ನಿಂತ ಕೊಡಗಿನ ಅರಸರು ತಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವುದಕ್ಕೆ ಸದಾ ಕಾದಬೇಕಾಯಿತು. ಇದು ಮಲೆ ಸೀಮೆಯಾದ್ದರಿಂದ ಹೊರಗಿನ ಜನರಿಗೆ ಇವರನ್ನು ಗೆಲ್ಲುವುದು ಸಾಧ್ಯವಾಗಲಿಲ್ಲ. ದೊಡ್ಡ ವೀರ ರಾಜೇಂದ್ರ ಎಂಬ*

ಈ ವಂಶದ ಅರಸು ಬಹು ವಿತರಣೆಯಿಂದ ರಾಜ್ಯವನ್ನು ಆಳಿ ತನ್ನ ಕಾಲದ ಜೊತೆಯ ಅರಸರುಗಳ ಗೌರವವನ್ನು ಗಳಿಸಿದನು...

"...ದೊಡ್ಡ ವೀರ ರಾಜನಿಗೆ ತನ್ನ ಮಗಳು ದೇವಮ್ಮಾಜಿ ಆಳಬೇಕೆಂದು ಇಚ್ಛೆ. ದೇವಮ್ಮಾಜಿ ಗಾದಿಯನ್ನೇರಿದಳು. ಆದರೆ ಅವನ ತಮ್ಮ ಲಿಂಗರಾಜ ಇದು ಕೂಡದೆಂದು ಹಠಮಾಡಿ ಮೊದಲು ತಾನು ದಿವಾನನಾಗಿ ಆಮೇಲೆ ದೇವಮ್ಮಾಜಿಯನ್ನು ಗಾದಿಯಿಂದಿಳಿಸಿ ತಾನೇ ರಾಜನಾದನು; ಒಂಭತ್ತು ವರ್ಷ ಆಳಿ ತೀರಿಕೊಂಡನು. ಆಗ ಅವನ ಮಗ ಇಪ್ಪತ್ತು ವರ್ಷ ವಯಸ್ಸಿನ ಚಿಕವೀರರಾಜ ದೊರೆಯಾದನು.

"...ಕೊಡಗಿನ ಈ ರಾಜವಂಶದಲ್ಲಿ ಇವನು ಕೊನೆಯ ಅರಸು. ಇವನ ಆಳ್ವಿಕೆಯ ಹದಿನಾಲ್ಕನೆಯ ವರ್ಷದಲ್ಲಿ ಕೊಡಗು ಅಂಗ್ಲರ ಕೈ ವಶವಾಯಿತು. ಚಿಕವೀರ ರಾಜನು ವಂಶಕ್ಕೆ ಕೀರ್ತಿ ತರಲಿಲ್ಲ. ಅವನ ಕೊನೆಯ ವರ್ಷದ ಆಳ್ವಿಕೆ ನಮ್ಮ ಕಥೆಯ ವಸ್ತು."

(ಪುಟ ೩–೪)

ಸೂಕ್ಷ್ಮವಾಗಿ ನೋಡಿದರೆ ಚಿಕವೀರ ರಾಜೇಂದ್ರ ಕೇವಲ ಒಂದು ಐತಿಹಾಸಿಕ ಕಾದಂಬರಿಯಲ್ಲ; ಅದೊಂದು ಸಂಕೀರ್ಣ ರಾಜಕೀಯ ಕಾದಂಬರಿ ಎಂಬುದು ಪ್ರಾಸ್ತಾವಿಕದಲ್ಲೇ ವ್ಯಕ್ತವಾಗುತ್ತದೆ. ಕೊಡಗು ರಾಜ್ಯ ಅವನತಿ ಹೊಂದಿದ ಪ್ರಕ್ರಿಯೆಯನ್ನು ಕಾದಂಬರಿ ಮುಂದೆ ಶೋಧಿಸಿಕೊಂಡು ಹೋಗುತ್ತದೆಯಷ್ಟೇ. ಈ ಅವನತಿಗೆ ಕನಿಷ್ಠ ಮೂರು ಮುಖ್ಯ ಕಾರಣಗಳನ್ನು ಇಲ್ಲಿ ಸೂಚಿಸಲಾಗಿದೆ.

೧. ಚಿಕವೀರ ರಾಜೇಂದ್ರ ಪಟ್ಟವೇರುವ ಮೊದಲೇ ಹಲವರ ಅಸಮಾಧಾನಕ್ಕೆ ಕಾರಣವಾಗಿರುವ ಅರಮನೆಯ ಒಳ ರಾಜಕಾರಣ.

೨. ಕೊಡಗು ರಾಜ್ಯದ ಆಚೆಗೆ ಬಹು ವಿಸ್ತಾರವಾಗಿ ಹಬ್ಬಿಕೊಂಡಿದ್ದ ಆಂಗ್ಲ ಸಾಮ್ರಾಜ್ಯ ದೇಶೀಯ ಸಂಸ್ಥಾನಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಮಾಡುತ್ತಿದ್ದ ವಸಾಹತುಶಾಹೀ ಸಾಮ್ರಾಜ್ಯಶಾಹೀ ಬಂಡವಾಳಶಾಹೀ ರಾಜಕಾರಣ.

೩. ಒಬ್ಬ ರಾಜನಾಗಿ, ಒಬ್ಬ ವ್ಯಕ್ತಿಯಾಗಿ ಚಿಕವೀರ ತನ್ನನ್ನೂ ಮೀರಿ ಬೆಳೆದಿದ್ದ ಮೇಲಿನ ಎರಡು ರಾಜಕಾರಣಕ್ಕೆ ಸ್ಪಂದಿಸಿದ ರೀತಿ; ಅವನ ವೈಯಕ್ತಿಕ ರಾಜಕಾರಣ.

ಚಿಕವೀರ ರಾಜೇಂದ್ರ ಕಾದಂಬರಿಯ ಶ್ರೇಷ್ಠತೆ ಎಲ್ಲಿದೆ ಎಂದರೆ ಈ ಮೂರು ಮಹತ್ವದ ಅಂಶಗಳನ್ನು ಬಿಡಿ ಬಿಡಿಯಾಗಿ ನೋಡದೆ ಅವುಗಳ ಅಂತರ್ ಸಂಬಂಧಗಳ ಒಳ ನೇಯ್ಗೆಯನ್ನು ಹೆಣೆದಿರುವುದರಲ್ಲಿ. ಅಂದರೆ ಕೊಡಗಿನ ದುರಂತಕ್ಕೆ ಈ ಯಾವ ಒಂದೂ ಬಿಡಿಯಾಗಿ, ಏಕೈಕ ಪರಮ ಕಾರಣವೆಂಬಂತೆ ಚಿತ್ರಿತವಾಗದೆ ಇವೆಲ್ಲವುಗಳ ಇಡಿಯಾದ ಸಂಬಂಧ ಸೃಷ್ಟಿಸಿದ ಸಂಕೀರ್ಣ ಸಂದರ್ಭದ ಒತ್ತಡವೇ ಕಾರಣವಾಗುತ್ತದೆ. ಹಾಗಾಗಿ ವ್ಯಕ್ತಿತ್ವದ ಸರಳ ನೈತಿಕ ಪ್ರಶ್ನೆಗಳಿಗಿಂತ ರಾಜನೈತಿಕ ಪ್ರಶ್ನೆಗಳೇ ಇಲ್ಲಿ ಮುಖ್ಯವಾಗುತ್ತವೆ. ಸೂಕ್ಷ್ಮವಾಗಿ ನೋಡಿದರೆ ಚಿಕವೀರ ವೈಯಕ್ತಿಕವಾಗಿ ಒಳ್ಳೆಯನಾಗಿದ್ದನೋ, ಕೆಟ್ಟವನಾಗಿದ್ದನೋ, ದುರ್ಬಲನಾಗಿದ್ದನೋ, ದೇಶಭಕ್ತನಾಗಿದ್ದನೋ ಎಂಬಂಥ ಪ್ರಶ್ನೆಗಳೂ ಇಲ್ಲಿ ಗೌಣವಾಗಿ ತನ್ನ ಕಾಲದ ರಾಜಕಾರಣದ ಒತ್ತಡಗಳಿಗೆ ಅವನು ಹೇಗೆ ಪ್ರತಿಕ್ರಿಯಿಸಿದ ಎಂಬುದೇ ಮುಖ್ಯ ಸಂಗತಿಯಾಗುತ್ತದೆ. ಏಕೆಂದರೆ ಕೊಡಗಿನ ಪತನ ಅವನು ಪಟ್ಟವೇರುವ ಮೊದಲೇ ಆರಂಭ

ಗೊಂಡಿದೆ. ಅದನ್ನು ಅವನು ನಿಯಂತ್ರಿಸಲಾರದವನಾಗಿದ್ದಾನೆ. ತನ್ನ ಭೂತದ ಅನೇಕ ರಾಜಕೀಯ ಸತ್ಯಗಳು ಅವನ ಗಮನಕ್ಕೇ ಬಂದಿಲ್ಲ.

ಇತ್ತ ಚಿಕವೀರನ ಆಡಳಿತ ಹೇಗೋ ಸಾಗುತ್ತಿದ್ದರೆ ಅತ್ತ ಅವನನ್ನು ಪದಚ್ಯುತಗೊಳಿಸಲು ತೆರೆಮರೆಯ ರಾಜಕಾರಣ ಗುಪ್ತವಾಗಿ ಆದರೆ ನಿರ್ಣಯಾತ್ಮಕವಾಗಿ ನಡೆದೇ ಇದೆ. ಇದರ ಪೂರ್ಣ ಅರಿವು ಚಿಕವೀರನಿಗೆ ಇಲ್ಲವೇ ಇಲ್ಲ. ಇವನ ವೈಯಕ್ತಿಕ ದುಷ್ಟತನ, ಆಡಳಿತದ ರೀತಿ ಆ ರಾಜಕಾರಣವನ್ನು ಕೇವಲ ತೀವ್ರಗೊಳಿಸುತ್ತಿದೆ, ಅಷ್ಟೇ. ಇನ್ನು ಆಂಗ್ಲರ ರಾಜಕಾರಣ ಚಿಕವೀರನ ಕೈ ಮೀರಿದ್ದು. ಅದು ಅವನಿಗೆ ಸರಿಯಾಗಿ ಅರ್ಥವೂ ಆಗುವುದಿಲ್ಲ; ಅರ್ಥವಾದರೂ ಅದನ್ನು ನಿರೋಧಿಸುವ ಚೈತನ್ಯ ಅವನಿಗೆ ಆರ್ಥಿಕವಾಗಿ, ರಾಜಕೀಯವಾಗಿ, ನೈತಿಕವಾಗಿ ಇಲ್ಲ. ಬ್ರಿಟಿಷರು, ತೀರಾ ಹತ್ತಿರದಲ್ಲೇ ನೆರೆ ಮೈಸೂರು ರಾಜ್ಯದ ರಾಜಕೀಯವನ್ನು ಕೈವಶ ಮಾಡಿಕೊಂಡಿದ್ದಾರೆ. ಬೇಕಾದವರನ್ನು ಸಿಂಹಾಸನದ ಮೇಲೆ ಕೂಡಿಸಿದ್ದಾರೆ. ಬೇಡಾದವರನ್ನು ಇಳಿಸಿದ್ದಾರೆ. ಇಲ್ಲಿಯೂ ಚಿಕವೀರನ ವೈಯಕ್ತಿಕ ಕ್ರೌರ್ಯ, ಕಾಮುಕತೆ ಬ್ರಿಟಿಷರಿಗೆ ತಮ್ಮ ರಾಜಕಾರಣದ ಕೇವಲ ಒಂದು ಬಹಿರಂಗ ಸಮರ್ಥನೆ ಅಷ್ಟೇ. ಅಂದರೆ ಅರಮನೆಯ ಒಳಗಣ ರಾಜಕೀಯ ಮತ್ತು ಬ್ರಿಟಿಷರ ಹೊರಗಿನ ರಾಜಕೀಯ ಎಷ್ಟು ಪ್ರಭಾವಶಾಲಿಯಾಗಿದೆ ಎಂದರೆ ಚಿಕವೀರ ಒಂದು ವೇಳೆ ವೈಯಕ್ತಿಕವಾಗಿ ಒಳ್ಳೆಯವನಾಗಿದ್ದಿದ್ದರೂ ಕೊಡಗಿನ ಪತನ ತಪ್ಪುತ್ತಿರಲಿಲ್ಲ ಎಂಬ ಧ್ವನಿ ಕಾದಂಬರಿಯಲ್ಲಿ ಅನುರಣಿತವಾಗುತ್ತದೆ. ಆದ್ದರಿಂದಲೇ ಕೊಡಗಿನ ಕೊನೆಯ ರಾಜನಾದ ಚಿಕವೀರ ರಾಜೇಂದ್ರನ ಜೀವನಚರಿತ್ರೆ ಕಾದಂಬರಿಕಾರರಿಗೆ ಅಷ್ಟೊಂದು ಮುಖ್ಯವಾಗದೆ ಒಂದು ರಾಜಕೀಯ ಪ್ರಕ್ರಿಯೆ ಇಲ್ಲಿ ಮುಖ್ಯವಾಗುತ್ತದೆ. ವ್ಯಕ್ತಿಗಿಂತ ಹೆಚ್ಚಾಗಿ ರಾಜ, ರಾಜತ್ವ, ರಾಜ್ಯ, ರಾಜ್ಯತ್ವ, ರಾಜಕೀಯ, ರಾಜಕಾರಣ ಮಾಸ್ತಿಯವರನ್ನು ಕಾಡುತ್ತದೆ. ಆದರೆ ಮಾಸ್ತಿಯವರು ಇವಾವುದನ್ನು ಅಮೂರ್ತ ನೆಲೆಗಳಲ್ಲಿ ಮಾತ್ರ ನೋಡದೆ ಮನುಷ್ಯ ವ್ಯಾಪಾರಗಳಲ್ಲೇ ಎಲ್ಲವನ್ನೂ ಶೋಧಿಸಿಕೊಳ್ಳುವ ಮಹತ್ವಾಕಾಂಕ್ಷೆಯನ್ನು ತೋರಿಸುತ್ತಾರೆ. ಚಿಕವೀರ ಈ ಎಲ್ಲ ಪ್ರಕ್ರಿಯೆಯ ಕೇಂದ್ರದಲ್ಲಿರುವುದರಿಂದ ಅವನ ಜೀವನದ ಕೆಲ ಮಾರ್ಮಿಕ ಸನ್ನಿವೇಶಗಳು ಮೂಡಿ ಬರುತ್ತವೆ. ಈ ದೃಷ್ಟಿಯಿಂದ ಮಾಸ್ತಿಗೆ ಹೋಲಿಸಬಹುದಾದ ಚಾರಿತ್ರಿಕ ಕಾದಂಬರಿಗಳು ಕನ್ನಡದಲ್ಲಿ ಇಲ್ಲವೇ ಇಲ್ಲ. ಸ್ವಲ್ಪ ಮಟ್ಟಿಗಿನ ಹೋಲಿಕೆ ಸಾಧ್ಯವಾಗುವುದು ಸಂಸ ಮತ್ತು ಗಿರೀಶಕಾರ್ನಾಡರ ಕೆಲವು ನಾಟಕಗಳೊಂದಿಗೆ ಮಾತ್ರ. ಷೇಕ್ಸಪಿಯರ್ ನಿಸ್ಸಂದೇಹವಾಗಿ ಮಾಸ್ತಿಯವರ ಸೃಜನಶೀಲ ಪ್ರೇರಣೆಗಳ ಹಿಂದಿದ್ದಾನೆ. ವ್ಯಕ್ತಿ ಚರಿತವನ್ನು ನಾಡ ಚರಿತದೊಳಗೆ ಬೆಸೆಯುವ ಮಾಸ್ತಿ ಪ್ರತಿಭೆ ನಿಜಕ್ಕೂ ಷೇಕ್ಸಪೀರಿಯನ್.

ಚಿಕವೀರ ರಾಜೇಂದ್ರ ಕಾದಂಬರಿಯಲ್ಲಿ ದುರಂತ ಪ್ರಜ್ಞೆಯನ್ನು ಗಮನಿಸುವಾಗ ಚಿಕವೀರನ ವೈಯಕ್ತಿಕ ಗುಣಾವಗುಣಗಳಷ್ಟನ್ನೇ ಹಿಂಬಾಲಿಸಿಕೊಂಡು ಹೋದರೆ ಹೆಚ್ಚಿನ ಪ್ರಯೋಜನವಿಲ್ಲ ಎಂಬುದನ್ನು ಮೊದಲೇ ಸ್ಪಷ್ಟಗೊಳಿಸಿಕೊಳ್ಳಬೇಕು. ಈ ಬಗ್ಗೆ ಚಾರಿತ್ರಿಕ ದಾಖಲೆಗಳಲ್ಲಿ ಪರಸ್ಪರ ವಿರೋಧವಾದ ವಿವರಗಳಿವೆ ಎಂಬುದನ್ನು ಈಗಾಗಲೇ ಹಲವರು ದಾಖಲಿಸಿದ್ದಾರೆ. ಚಾರಿತ್ರಿಕ ಕಾದಂಬರಿಯೊಂದನ್ನು ಅಭ್ಯಾಸ ಮಾಡುವಾಗ ಚಾರಿತ್ರಿಕ ದಾಖಲೆಗಳನ್ನು ಎಷ್ಟರ ಮಟ್ಟಿಗೆ ಬಳಸಿಕೊಳ್ಳಬೇಕು ಎಂಬುದು ತುಂಬಾ ಗೊಂದಲದ, ವಿವಾದಾಸ್ಪದ

ಅಕಡೆಮಿಕ್ ಸಂಗತಿ. ಆದರೆ ಆ ವಿವರಗಳ ಆಯ್ಕೆ ಕಾದಂಬರಿಕಾರನೊಬ್ಬನ ಸೃಜನಶೀಲ ಆಯ್ಕೆ ಎಂಬುದನ್ನು ನಾವು ಮರೆಯಬಾರದು. ತನ್ನ ಸೃಜನಶೀಲ ಆಗತ್ಯಗಳಿಗಷ್ಟೇ ಅವನು ಪುರಾಣದಿಂದಾಗಲೀ, ಚರಿತ್ರೆಯಿಂದಾಗಲೀ, ಸಮಕಾಲೀನ ಜೀವನದಿಂದಾಗಲೀ ವಿವರಗಳನ್ನು ಆಯ್ಕೆ ಮಾಡಿಕೊಳ್ಳುವುದು. ಈ ಆವರಣವನ್ನು ಸ್ಥೂಲವಾಗಿ ಗುರುತಿಸಲು ಕಾದಂಬರಿಯೊಂದನ್ನು ಪೌರಾಣಿಕ, ಚಾರಿತ್ರಿಕ, ಸಾಮಾಜಿಕ ಎಂದು ಕರೆಯುತ್ತೇವೆಯೇ ಹೊರತು ಪುರಾಣ, ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಮನೋವಿಜ್ಞಾನಗಳಿಗೆ ಅವುಗಳು ಕಥಾರೂಪ ಕೊಡುತ್ತವೆ, ಬದಲಿಯಾಗುತ್ತವೆ ಎಂದಾಗಲೀ ಅಲ್ಲ. ಕಾದಂಬರಿ ಒಂದು ಕಾಲ್ಪನಿಕ ಸೃಷ್ಟಿ ಕಾದಂಬರಿಕಾರನೊಬ್ಬನ ದರ್ಶನ ಕಲಾವಿದನೊಬ್ಬನ ದರ್ಶನ ಅಷ್ಟೇ. ಆದ್ದರಿಂದ ಕಾದಂಬರಿಯನ್ನು ಚರಿತ್ರೆ ಪುರಾಣಗಳಿಗೆ equate ಮಾಡಿ ಓದಬಾರದು. ಷೇಕ್ಸಪಿಯರ್, ಟಾಲ್‌ಸ್ಟಾಯ್, ಡಿಕನ್ಸ್ ಮೊದಲುಗೊಂಡು ಯಾವ ಶ್ರೇಷ್ಠ ಲೇಖಕನೂ ಹಾಗೆ ಚರಿತ್ರೆಗೆ ಪೂರಾ ನಿಷ್ಠನಾಗಿಲ್ಲ. *ಚಿಕವೀರರಾಜೇಂದ್ರ* ಕೊಡಗಿನ ಚರಿತ್ರೆಯಲ್ಲ; ಆದೊಂದು ಕಾದಂಬರಿ. *It is not pure history but a work of fiction.* ಆದ್ದರಿಂದಲೇ ಸಾಹಿತ್ಯ ವಿಮರ್ಶಕ ಕಾದಂಬರಿಯ ಒಳ ಜಗತ್ತಿನಲ್ಲಿ ಮೂಡಿ ಬಂದ ವಿವರಗಳಿಗೆ ಅವುಗಳ ಅಂತರ್ ಸಂಬಂಧದಲ್ಲಿ ಅಷ್ಟೊಂದು ಪ್ರಾಮುಖ್ಯ ನೀಡುವುದು. ಚಾರಿತ್ರಕ ಕಾದಂಬರಿಕಾರ ಇತಿಹಾಸಕಾರನಂತೆ ವಿವರಗಳನ್ನು ಜಡವಾಗಿ ಪೇರಿಸುತ್ತ ಹೋಗುವುದಿಲ್ಲ. ಒಂದು ಐತಿಹಾಸಿಕ ಸತ್ಯಕ್ಕೆ, ನೋಟಕ್ಕೆ, ಕಾಣ್ಕೆಗ ಅಪಚಾರವಾಗದ ಹಾಗೆ ಮತ್ತು ತನ್ನ ಸೃಜನಶೀಲ ಅಗತ್ಯಗಳಿಗೆ ಪೂರಕವಾಗುವಷ್ಟು ಮಾತ್ರ ವಿವರಗಳನ್ನು ಕಾದಂಬರಿಯ ಪರಿಕರಗಳಾಗಿ ಪರಿವರ್ತಿಸಿಕೊಳ್ಳುತ್ತಾನೆ. ಮತ್ತು ಹೀಗೆ ವಿವರಗಳನ್ನು ಪರಿಕರಗಳಾಗಿ ಪರಿವರ್ತಿಸಿಕೊಳ್ಳುವುದರಲ್ಲಿ ಮಾತ್ರ ಸೃಜನಶೀಲನಾಗಿರುತ್ತಾನೆ. ಅವನ ನೋಟದ ಮೂಲ ನೆಲೆ ಇರುವುದೇ ಇಂಥ ಪರಿವರ್ತನೆಗಳಲ್ಲಿ. ಏಕೆಂದರೆ ಸೃಜನಶೀಲ ಲೇಖಕನೊಬ್ಬ ಚಾರಿತ್ರಿಕ ಸತ್ಯವನ್ನು ಮಂಡಿಸುವ ಕ್ರಮಕ್ಕೂ ಇತಿಹಾಸಕಾರನೊಬ್ಬ ಮಂಡಿಸುವ ಕ್ರಮಕ್ಕೂ ಮೂಲಭೂತ ವ್ಯತ್ಯಾಸಗಳಿರುತ್ತವೆ. ಆದ್ದರಿಂದ ಮಾಸ್ತಿ ಲಭ್ಯವಿದ್ದ ಆಕರಗಳಲ್ಲಿ ಯಾವುದನ್ನು ಎಷ್ಟು ಬಳಸಿಕೊಂಡರು ಎಂಬುದು ಇನ್ನೊಂದು ಕುತೂಹಲಕಾರಿ ಅಧ್ಯಯನದ ವಸ್ತು ಆಗಬಹುದು.

ಹಲವು ರಾಜಕೀಯ ವಿದ್ಯಮಾನಗಳು ಸಮಾನಾಂತರವಾಗಿ ನಡೆಯುತ್ತ ಅವುಗಳು ಒಂದು ನಿರ್ಣಯಾತ್ಮಕ ರೀತಿಯಲ್ಲಿ ಸಂಧಿಸಿದಾಗ ಪೂರ್ಣಗೊಳ್ಳುವ ಕೊಡಗಿನ ಅವನತಿ ಹಲವು ದುರಂತಗಳನ್ನು ದಾಖಲಿಸುತ್ತದೆ. ಯಾವುದೇ ಸಮಾಜ ನೆಮ್ಮದಿಯಿಂದ ಇರಲು ಆಡಳಿತ ವ್ಯವಸ್ಥೆಯೊಂದು ಸುಭದ್ರವಾಗಿ ಇರಬೇಕಷ್ಟೇ. ಆಡಳಿತದ ಸೂತ್ರಗಳನ್ನು ಯಾರು ಹಿಡಿಯಬೇಕು ಎನ್ನುವ ಮಾನವೀಯ ಆಯಾಮ ಈ ಪ್ರಶ್ನೆಯನ್ನು ಜಟಿಲಗೊಳಿಸಲು ಸಾಧ್ಯ. ತನ್ನ ತಂದೆಯ ಇಚ್ಛೆಗೆ ವಿರೋಧವಾಗಿ ಲಿಂಗರಾಜ ಕೊಡಗಿನ ಸಿಂಹಾಸನ ಏರುತ್ತಾನಷ್ಟೆ. ವಚನಭಂಗ ಆಗುವುದೇ ಆದರೆ ತಾನು ರಾಜನಾಗಬೇಕೆಂದು ಲಿಂಗರಾಜನ ಅಣ್ಣನ ವಾದ. ಕೊನೆಗೆ ತನ್ನನ್ನು ತನ್ನ ಮಗನನ್ನು ಲಿಂಗರಾಜ ಕೊಲ್ಲಿಸುವನೆಂದು ತಿಳಿದು ರಾಜ್ಯವನ್ನು ತೊರೆಯುತ್ತಾನೆ. ಆದರೆ ತನ್ನ ಸಮಯ ಕಾಯುತ್ತಾನೆ. ಲಿಂಗರಾಜನ ಮಗ ಚಿಕವೀರ ಏಕೆ ರಾಜನಾಗಬೇಕು? ತನ್ನ ಮಗ ಯಾಕಾಗಬಾರದು? ಎಂಬುದು ಇವನ ಪ್ರಶ್ನೆ. ಚಿಕವೀರ ರಾಜನಾಗಿ, ಜನಪ್ರಿಯತೆ ಕಳೆದುಕೊಂಡು,

ಬ್ರಿಟಿಷರು ರಾಜ್ಯ ಕಬಳಿಸುವ ಸಂಚಿನಲ್ಲಿದ್ದಾಗ ಅವನೂ ರಂಗಪ್ರವೇಶ ಮಾಡುತ್ತಾನೆ. ಅವನ ವಾದ ಇದು. "ಈ ಮಗ ಅರಸನಾದ. ಅಪ್ಪನ್ನ ಒಳ್ಳೇನು ಅನ್ನಿಸಿದ. ದೊಡ್ಡಪ್ಪನ ಮಗಳನ್ನ ಕೊಂದ; ಅಪ್ಪನ ಮಗಳನ್ನ ಸೆರೆಯಲ್ಲಿಟ್ಟ . ಇವರು ಬಾಳಿ ನಾಡನ್ನು ಬಾಳಿಸಿದ್ದರೆ ನಾವಿಲ್ಲಿ ಬರಬೇಕಾಗಿರಲಿಲ್ಲ, ಬಿಡು. ಇರುವಲ್ಲಿ ಮರ್ಯಾದೆಯಿಂದ ಬಾಳಿ ಹಿರಿಯರ ಹೆಸರನ್ನ ಮರೆಯಲ್ಲಿ ಬೆಳಗಬಹುದಿತ್ತು. ಇವರೂ ಬಾಳಲಿಲ್ಲ; ಜನಾನ್ನೂ ಬಾಳಿಸಲಿಲ್ಲ. ಮನೆತನದ ಹೊಣೆಯಾಯಿತಲ್ಲ; ಹೊರೋ ಬೆನ್ನಿರತಾ ಅದು ಹೆರವರ ಮೇಲೆ ಬೀಳಬಾರದಲ್ಲ."(ಪು :೧೯) ಅಂದರೆ ಕೊಡಗಿನ ಸಿಂಹಾಸನ ಏರುವ ನೈತಿಕ ಪ್ರಶ್ನೆಗಿಂತ ರಾಜನೈತಿಕ ಪ್ರಶ್ನೆಯೇ ಇಲ್ಲಿಯೂ ಮುಖ್ಯವಾಗುವುದು. ಚಿಕವೀರನ ಜೊತೆ ಸೇರಿ ಕೊಡಗನ್ನು ಬ್ರಿಟಿಷರಿಂದ ಪಾರು ಮಾಡಬೇಕೆ ಎನ್ನುವ ನೈತಿಕ ಪ್ರಶ್ನೆಗಿಂತ ಬ್ರಿಟಿಷರ ಸಹಾಯ ಪಡೆದು ಚಿಕವೀರನನ್ನು ಪದಚ್ಯುತಗೊಳಿಸಬೇಕೆ ಎನ್ನುವ ರಾಜನೈತಿಕ ತಂತ್ರಗಾರಿಕೆಯೇ ಈ ಸಂದರ್ಭದಲ್ಲಿಯೂ ಮುಖ್ಯವಾಗುತ್ತದೆ. ಅಪ್ಪ–ಮಕ್ಕಳಿಗೆ ಬ್ರಿಟಿಷರು ಮೈಸೂರಿನಲ್ಲಿ ಏನು ಮಾಡಿದರು ಎನ್ನುವುದು ಗೊತ್ತಿದೆ. ಬ್ರಿಟಿಷರು ಕೊಡಗನ್ನು ಕಬಳಿಸಿ ಬಿಡಬಹುದೆನ್ನುವ ಭೀತಿಯೂ ಚಿಕವೀರನನ್ನು ಸದೆ ಬಡಿಯುವುದು ಯಾರಿಗಾದರೂ ಸಾಧ್ಯವಿದ್ದರೆ ಅದು ಬ್ರಿಟಿಷರಿಗೆ ಮಾತ್ರ ಸಾಧ್ಯ ಎನ್ನುವ ಲೋಭವೂ ಏಕತ್ರಗೊಂಡು ಅವರ ರಾಜಕಾರಣವನ್ನು ಪ್ರಭಾವಿಸುತ್ತದೆ. ದೀರ್ಘ ಸಂಭಾಷಣೆಯಲ್ಲಿ ಒಂದು ತುಣುಕನ್ನು ನೋಡಿ :

ಕಿರಿಯ : ಅಂತೂ ಈ ಬಿಳೀ ಜನದ್ದು ಪೂರಾ ಉಪಾಯ ಅಪ್ಪಾಜಿ.

ಹಿರಿಯ : ಅದು ಸೈ. ತಂತ್ರಿ ಅಂದರೆ ಇವರದೀಗ ತಂತ್ರ. ತಂತ್ರಾನ ಕಲಿಯಬೇಕು ಬಿಳೀ ಜನದಲ್ಲಿ (ಪು : ೧೭)

ಒಟ್ಟಿನಲ್ಲಿ ಚಿಕವೀರನ ಸಿಂಹಾಸನ ಹೊರಗಿನಿಂದ ಮಾತ್ರವಲ್ಲ, ಒಳಗಿನಿಂದಲೂ ಅಲುಗುತ್ತಿತ್ತು. ಮತ್ತು ಹೀಗೆ ಅಲುಗುತ್ತಿರುವುದೇ ಅದರ ಗುಣ ಎಂದು ಮಾಸ್ತಿ ಸ್ಪಷ್ಟವಾಗಿ ಸೂಚಿಸುತ್ತಿದ್ದಾರೆ. ಅಂದರೆ ಅವರಿಲ್ಲಿ ವ್ಯಕ್ತಿಗಳ ಬಗ್ಗೆ ಪಕ್ಷಪಾತ ತೋರದೆ ರಾಜತ್ವವನ್ನೇ ಅದರೆಲ್ಲ ವಿರೋಧಾಭಾಸಗಳ ನಡುವೆ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಒಳಗಿನ ಆಪತ್ತುಗಳನ್ನು ಚಿಕವೀರ ತನ್ನ ದೊಡ್ಡಪ್ಪ ಮತ್ತು ದಾಯಾದಿಯಿಂದ ಮಾತ್ರ ಎದುರಿಸುತ್ತಿಲ್ಲ. ತನ್ನ ಪರಮಾಪ್ತ ಭಂಟನಾದ ಮಂತ್ರಿ ಕುಂಟ ಬಸವಯ್ಯನ ತಾಯಿ ಭಗವತಿಯಿಂದಲೂ ಎದುರಿಸುತ್ತಿದ್ದಾನೆ. ಈ ಭಗವತಿ ಹಿಂದೆ ಚಿಕವೀರನ ಅಪ್ಪ ಲಿಂಗರಾಜನ ಪ್ರೇಯಸಿಯಾಗಿದ್ದವಳು. ಚಿಕವೀರ ರಾಜನಾಗಬಹುದಾದರೆ ತನ್ನ ಮಗ ಬಸವಯ್ಯ ಏಕೆ ರಾಜನಾಗಬಾರದು ಎಂಬುದು ಅವಳ ತರ್ಕ. ಬಸವಯ್ಯನ ಕಾಲನ್ನು ಆತ ಮಗುವಾಗಿದ್ದಾಗ ತಿರುಚಿ ಕುಂಟು ಮಾಡಿದವನು ಲಿಂಗರಾಜನೇ. ಕೊಡಗಿನ ಬದಲಾಗುತ್ತಿರುವ ರಾಜಕೀಯದಲ್ಲಿ ತನ್ನ ದಾಳ ಎಸೆಯಲು ಭಗವತಿ ಸುಮಾರು ಮುವತ್ತು ವರ್ಷಗಳ ನಂತರ ತವರಿಗೆ ಮರಳಿದ್ದಾಳೆ. ಕ್ರೈಸ್ತಧರ್ಮದ ಎದುರು ಹಿಂದೂ ಧರ್ಮವನ್ನು ಸಮರ್ಥಿಸಿಕೊಳ್ಳುವಲ್ಲಿ ಇವಳ ಸ್ವದೇಶಿ, ಸ್ವಧರ್ಮಿ ಅಭಿಮಾನ ಮಿಂಚಿದರೂ ತನ್ನ ಮಗನನ್ನು ರಾಜನನ್ನಾಗಿ ಮಾಡುವಲ್ಲಿ ಬ್ರಿಟಿಷರ ಸಹಕಾರವನ್ನು ಬಯಸುವುದರಲ್ಲಿ ಅವಳಿಗೆ ತಪ್ಪೇನೂ ಕಾಣುವುದಿಲ್ಲ.

ಇನ್ನು ಚಿಕವೀರ ರಾಜೇಂದ್ರನಿಗೆ ಓರ್ವ ತಂಗಿಯಿದ್ದಾಳೆ. ಇವಳ ಗಂಡ ಚೆನ್ನಬಸವ. ಈ ಚೆನ್ನಬಸವ ಅರಮನೆಯ ಅಳಿಯನಾಗಿದ್ದಕ್ಕೆ ತಾನೊಂದು ವಿಶೇಷ ಪದಾರ್ಥ ಎಂದು ಭ್ರಮಿಸಿದವನು: "ಗಾದಿ ಏರಲು ಚಿಕವೀರನಿಗಿಂತ ತನಗೆ ಯೋಗ್ಯತೆ ಹೆಚ್ಚು, ಅಧಿಕಾರ ಬಹಳವೇನೂ ಕಡಿಮೆಯಿಲ್ಲ, ಎನ್ನುವ ಮನೋಧರ್ಮದಲ್ಲಿ ಬಾಳುತ್ತ ಚೆನ್ನಬಸವಯ್ಯ ರಾಜದ್ರೋಹದ ವಿಷವಾಯು ಸೇವನೆ ಮಾಡುತ್ತ, ಇಂದಿಲ್ಲದಿದ್ದರೆ ಬರುವ ದಿವಸಕ್ಕೆ ತಾನು ದೊರೆಯಾಗಬೇಕು ಎಂದೇ ನಿಶ್ಚಯ ಮಾಡಿಕೊಂಡಿದ್ದನು.'' ಈ ಚೆನ್ನಬಸವ ಉದ್ದಕ್ಕೂ ಚಿಕವೀರನ ವಿರುದ್ಧ ಕಂಪನಿ ಸರ್ಕಾರಕ್ಕೆ ದೂರುಗಳನ್ನು ಸಲ್ಲಿಸುತ್ತಾ ಹೋಗುತ್ತಾನೆ. ಈ ಮನಸ್ತಾಪ ದೇವಮ್ಮಾಜಿಯ ಸೆರೆಗೆ, ಅವಳ ಮಗುವಿನ ಕೊಲೆಗೆ ಕಾರಣವಾಗಿ ಬ್ರಿಟಿಷರು ಚಿಕವೀರನನ್ನು ಪದಚ್ಯುತಗೊಳಿಸಲು ಉಪಯೋಗಿಸಿಕೊಳ್ಳುವ ಪ್ರಮುಖ ಕಾರಣವಾಗುತ್ತದೆ. ಒಟ್ಟಿನಲ್ಲಿ ಇಲ್ಲಿಯೂ ಚಿಕವೀರನ ರಾಜಕೀಯ ಸಮಸ್ಯೆಗಳಿಗೆ ಅರಮನೆಯ ಒಳ ಶತ್ರುಗಳ ಕಾಣಿಕೆಯನ್ನು ಮಾಸ್ತಿ ಅರ್ಥಪೂರ್ಣವಾಗಿ ಚಿತ್ರಿಸುತ್ತಾರೆ. ಇಂಥ ಇನ್ನೂ ಹಲವು ಉದಾಹರಣೆಗಳನ್ನು ಕಾದಂಬರಿಯಿಂದ ಹೆಕ್ಕಿ ಕೊಡಬಹುದು. ರಾಜಕಾರಣ, ಅಧಿಕಾರದ ಆಸೆ ಮನುಷ್ಯ ಸಂಬಂಧಗಳ ಸ್ವರೂಪವನ್ನು ನಿಯಂತ್ರಿಸುವ ಪರಿಯನ್ನು ಕಾದಂಬರಿ ಅದ್ಭುತವಾಗಿ ದಾಖಲಿಸುತ್ತದೆ. ಈ ಅಮಾನವೀಕರಣ ಪ್ರಕ್ರಿಯೆಯೇ ಪ್ರಾಯಶಃ ಕಾದಂಬರಿ ಪ್ರಕಟಿಸುವ ಅತ್ಯಂತ ಉತ್ಕಟವಾದ ದುರಂತ ಪ್ರಜ್ಞೆ. ಏಕೆಂದರೆ ಅರಮನೆಯ ಎಲ್ಲ ಮನುಷ್ಯ ಸಂಬಂಧಗಳೂ ಒಂದಲ್ಲ ಒಂದು ರೀತಿ ಸಿಂಹಾಸನವನ್ನೇ ಕೇಂದ್ರವಾಗಿಟ್ಟುಕೊಂಡಿರುತ್ತವೆ. ಮತ್ತು ಆ ಕಾರಣದಿಂದಲೇ ವಿನಾಶದತ್ತ ಮುಖ ಮಾಡಿಕೊಂಡಿರುತ್ತವೆ. ಆದ್ದರಿಂದ ಸಿಂಹಾಸನ ಯಾವಾಗಲೂ ಅಭದ್ರವಾಗಿರುತ್ತದೆ ಮತ್ತು ಆಡಳಿತ ಶಿಥಿಲವಾಗಿರುತ್ತದೆ. ಇನ್ನು ಸಿಂಹಾಸನದ ಮೇಲೆ ಕೂತವನು ಸ್ವತಃ ದುರ್ಬಲನೂ ದುಷ್ಟನೂ ಆಗಿದ್ದರೆ ಅವ್ಯವಸ್ಥೆ ತನ್ನ ಪರಾಕಾಷ್ಠತೆಯನ್ನು ಮುಟ್ಟಿ ಬಿಡುತ್ತದೆ.

ಚಿಕವೀರ ರಾಜೇಂದ್ರನಲ್ಲೂ ಮಾನವೀಯತೆಯ ನೆಲೆಯಿತ್ತು ಎಂದು ಸೂಚಿಸುವ ಹಲವು ಮನೋಜ್ಞ ಸನ್ನಿವೇಶಗಳನ್ನು ಮಾಸ್ತಿ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಮಾಸ್ತಿಯವರು ಮಾತ್ರ ಚಿತ್ರಿಸಬಲ್ಲರು ಎನ್ನುವಂಥ ಹಲವು ಹೃದಯಸ್ಪರ್ಶಿ ಕ್ಷಣಗಳು ಕಾದಂಬರಿಯಲ್ಲಿವೆ. ಚಿಕವೀರ ತನ್ನ ಮಗಳೊಂದಿಗೆ ಇಟ್ಟುಕೊಂಡ ಪ್ರೀತಿಯ ಸಂಬಂಧ, ಲಕ್ಷ್ಮೀನಾರಾಯಣಯ್ಯನ ತಾಯಿ ಸಾವಿತ್ರಮ್ಮ ಚಿಕವೀರನೊಂದಿಗೆ ಮಾತನಾಡಿ ಪಾಣೆ ಸೂರ್ಯನಾರಾಯಣನ ಹೆಂಡತಿಯನ್ನು ಬಿಡಿಸಿಕೊಂಡು ಬರುವ ಪ್ರಸಂಗ, ದೇವಮ್ಮಾಜಿಯ ಮಗು ಅರಮನೆಗೆ ಬಂದಾಗ ಗೌರಮ್ಮ ಮತ್ತು ಅವಳ ಮಗಳ ಸಂಭ್ರಮ ಮುಂತಾಗಿ ಹಲವು ಉಜ್ವಲವಾದ ಮಾನವೀಯ ಪ್ರಸಂಗಗಳನ್ನು ಮಾಸ್ತಿ ಚಿತ್ರಿಸಿದ್ದಾರೆ. ಚಿಕವೀರ–ಕುಂಟ ಬಸವನ ಸಂಬಂಧವೂ ಸಾಕಷ್ಟು ಸಂಕೀರ್ಣವಾದದ್ದೇ. ಇಷ್ಟಾದರೂ ಚಿಕವೀರನ ದೌರ್ಬಲ್ಯಗಳು, ಪಾಪಗಳು ಅಸಂಖ್ಯ. ಇವುಗಳಿಂದಾಗಿ ಅವನ ಆಡಳಿತ ಹದಗೆಡುತ್ತದೆ. ರಾಜ್ಯದ ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳು ಉಲ್ಬಣಗೊಳ್ಳುತ್ತವೆ. ಅರಮನೆಯ ಸಮಸ್ಯೆಗಳು ಆ ಆವರಣವನ್ನು ದಾಟಿ ಕೊಡಗಿನ ರಸ್ತೆಗಳನ್ನು, ಮನೆಗಳನ್ನು ತಟ್ಟುತ್ತವೆ. ಕೊಡಗಿನ ಜನತೆ ಈ ಸಮಸ್ಯೆಗಳಿಂದ ಬಾಧಿತರಾಗುತ್ತಾರೆ. ರಾಜಕಾರಣವೆನ್ನುವುದು ಅರಮನೆಯೊಳಗಣ ವಾಸ್ತವತೆ ಮಾತ್ರ ಆಗದೆ ಇಡೀ ರಾಜ್ಯದ, ಜನತೆಯ ದೈನಂದಿನ ಬದುಕನ್ನು ಆವರಿಸುವ ಪ್ರಕ್ರಿಯೆ ಆಗುತ್ತದೆ. ಸಹಜವಾಗಿ ಜನಾಭಿಪ್ರಾಯ

ಆಡಳಿತದ ವಿರುದ್ಧ ರೂಪುಗೊಳ್ಳಲು ಆರಂಭವಾಗುತ್ತದೆ. ಹೀಗೆ ಜನಾಭಿಪ್ರಾಯ ರಾಜನ ವಿರುದ್ಧ ರೂಪುಗೊಳ್ಳುವುದು ಅವನ ವೈಯಕ್ತಿಕ ದುರ್ಗುಣಗಳ ವಿರುದ್ಧದ ಸರಳ ನೈತಿಕ ಪ್ರತಿಕ್ರಿಯೆಯಷ್ಟೇ ಆಗುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಪ್ರಜೆಗಳ ರಕ್ಷಣೆ, ಅವರ ದಿನನಿತ್ಯದ ಅರ್ಥವ್ಯವಸ್ಥೆ ಇವುಗಳ ಮೇಲೆ ಆಗುವ ಆಘಾತ ಮುಖ್ಯವಾದದ್ದು. ಜನತೆ ಕೆಟ್ಟ ರಾಜನನ್ನು ಸಹಿಸಿಕೊಂಡೀತು. ಆದರೆ ಕೆಟ್ಟ ಆಡಳಿತವನ್ನು ಹೆಚ್ಚು ಕಾಲ ಸಹಿಸಿಕೊಳ್ಳುವುದಿಲ್ಲ.

> ಜನತೆ ಬೆಚ್ಚುವುದು ರಾಜನ ಕ್ರೌರ್ಯದಿಂದಲ್ಲ, ಅವ್ಯವಸ್ಥೆಯಿಂದ. ಚಿಕವೀರನ ದೌರ್ಬಲ್ಯ ಕಂಡ ಕಂಡ ಹೆಣ್ಣುಗಳನ್ನು ಕಾಮಿಸುವುದಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅವನ ವಿಲಾಸಿ ಜೀವನ ರಾಜ್ಯದ ಬೊಕ್ಕಸದ ಮೇಲೂ ಅಪಾರವಾದ ಪ್ರಭಾವವನ್ನು ಬೀರಿತ್ತು. ಅರಮನೆಯ ವೆಚ್ಚ ಮಿತಿ ಮೀರಿತ್ತು. ಸಹಜವಾಗಿಯೇ ಪ್ರಜೆಗಳು ಅತೃಪ್ತರಾಗಿದ್ದರು; "ಆಳ್ವಿಕೆಯ ಅವ್ಯವಸ್ಥೆ ಹೆಚ್ಚಾದಂತೆ ನಾಡ ಜನ ಅನೇಕರು ಸಹಜವಾಗಿ ವೀರರಾಜನ ವಿಷಯದಲ್ಲಿ ಬೇಸರಗೊಂಡರು. ಕೊಟ್ಟ ಕಂದಾಯವನ್ನು ಮರಳಿ ಕೊಡಬೇಕೆಂಬ ಕಿರುಕುಳಕ್ಕೆ ಸಿಕ್ಕಿದವರು, ಇಷ್ಟವಿಲ್ಲದೆ ಮನೆಯ ಹೆಣ್ಣು ಮಕ್ಕಳನ್ನು ಅರಮನೆಗೆ ಕಳುಹಿಸಬೇಕಾಗಿ ಬಂದವರು, ಒಂದಲ್ಲ ಒಂದು ಸಂದರ್ಭದಲ್ಲಿ ಅರಸನಿಂದಲೊ ಬಸವನಿಂದಲೊ ಕೆಟ್ಟ ಮಾತನ್ನು ಕೇಳಿದವರು, ಇವರು ಬೇಸರಗೊಂಡವರಲ್ಲಿ ಮುಖ್ಯರಾದ ಜನ. ಇಂಥವರು ನಾಡಿನ ಎಲ್ಲ ತಕ್ಕಾಮೆಯಲ್ಲೂ ಇರುವವರು"(ಪು : ೫೩)

ಪಾಣೆ ಸೂರ್ಯನಾರಾಯಣನ ಹೆಂಡತಿಯ ಅಪಹರಣ, ಉತ್ತಯ್ಯ ತಕ್ಕನಿಗೆ ಪಡಿ ನಿಂತದ್ದು, ಚಿಕ್ಕಣ್ಣ ಶೆಟ್ಟಿಯ ಸೊಸೆಯನ್ನು ಅರಸ ಬಯಸಿದ್ದು ಮುಂತಾದ ಪ್ರಕರಣಗಳಲ್ಲಿ ಅರಸನ ಪ್ರವೃತ್ತಿಗಳನ್ನು ಕಾದಂಬರಿ ದಟ್ಟವಾಗಿ, ಮೂರ್ತವಾಗಿ ಚಿತ್ರಿಸಿದರೆ ಕಾವೇರಿ ಮಕ್ಕಳ ಕೂಟದ ಸ್ಥಾಪನೆ, ಬ್ರಿಟಿಷ್ ಅತಿಥಿಗಳ ಮುಂದೆ ಊರವರು ಪ್ರದರ್ಶಿಸುವ ನಾಟಕ, ಊರಿನ ವರ್ತಕರು ಹಾಗೂ ಸ್ವತಃ ಚಿಕವೀರನ ಮಂತ್ರಿಗಳು ಆಗಾಗ ಪ್ರಕಟಿಸುವ ಪ್ರತಿಕ್ರಿಯೆಗಳಲ್ಲಿ ರಾಜನ ವಿರುದ್ಧ ಒಂದು ಬಗೆಯ ಪ್ರತಿಭಟನೆ, ಅಸಹನೆ ವ್ಯಕ್ತವಾಗುತ್ತವೆ. ಅಷ್ಟೇಕೆ ಚಿಕವೀರನ ಐಕೈಕ ಸ್ನೇಹಿತನಾದ ಕುಂಟ ಬಸವನಿಗೆ ಹೇಗನಿಸುತ್ತದೆ ನೋಡಿ :

> "ದೊರೆ ಜಾರು ಬಂಡೆಯಲ್ಲಿ ಕುಳಿತು ಜಾರುತ್ತಿದ್ದಾನೆ, ತನ್ನ ಸ್ಥಾನವನ್ನು ಅತಂತ್ರ ಮಾಡಿಕೊಳ್ಳುತ್ತಿದ್ದಾನೆ ಎಂದು ಬಸವನಿಗೆ ಹಲವು ವೇಳೆ ತೋರಿತು. ಆದರೆ ಅದೇ ಬಂಡೆಯ ಮೇಲೆ ಅವನ ಕಾಲನ್ನು ತನ್ನ ಸೊಂಟಕ್ಕೆ ಕಟ್ಟಿಕೊಂಡು ತಾನೂ ಜಾರುತ್ತಿರುವುದು ಅವನಿಗೆ ಕಾಣುತ್ತಿತ್ತು. ಈ ಪ್ರಯಾಣ ಆರಂಭವಾಯಿತೋ, ಇದಕ್ಕೆ ಒಂದೇ ನಿಲುಗಡೆ: ಬಂಡೆಯ ಬುಡ. ಮಧ್ಯೆ ತಡೆದುಕೊಂಡು ನಿಲ್ಲುವುದು ತಮಗೆ ಸಾಧ್ಯವಿಲ್ಲ ಎಂದೇ ಅವನು ಹಲವು ವೇಳೆ ನಿರಾಶನಾದನು" (ಪು : ೫೨)

ಚಿಕವೀರನ ರಾಜಕೀಯ ವಿರೋಧಿಗಳೆಲ್ಲ ಅಪ್ಪಾಜಿ, ಭಗವತಿ, ಚೆನ್ನಬಸವಯ್ಯ ಇವರೆಲ್ಲ ದೇಶದ್ರೋಹಿಗಳೇನೂ ಅಲ್ಲ. ಆದರೆ ತಮ್ಮ ಉದ್ದೇಶ ಸಾಧನೆಗಾಗಿ ಇವರೆಲ್ಲ ವಸಾಹತು ಶಾಹೀ ರಾಜಕಾರಣವನ್ನು ಒಂದಲ್ಲ ಒಂದು ರೀತಿ ಸಮರ್ಥಿಸುತ್ತ, ಅದರ ನೆರವನ್ನು ಅಪೇಕ್ಷಿಸುತ್ತ ಹೋಗುವುದು ಕೊಡಗಿನ ರಾಜಕೀಯ ದುರಂತವನ್ನು ತೀವ್ರಗೊಳಿಸುತ್ತದೆ. ಚಿಕವೀರನಿಂದ ಸಿಂಹಾಸನವನ್ನು ಕಸಿದುಕೊಂಡು ಕೊಡಗನ್ನು ರಕ್ಷಿಸಬೇಕೆಂಬ ಘೋಷಿತ ಹಂಬಲವೂ ಕ್ರಮೇಣ ಕೊಡಗು ಆಂಗ್ಲರ ಕೈವಶವಾಗುವ ಪ್ರಕ್ರಿಯೆಯನ್ನೇ ಗಟ್ಟಿಗೊಳಿಸುವುದು

ಇಲ್ಲಿನ ದೊಡ್ಡ ವ್ಯಂಗ್ಯ. ಚಿಕವೀರನ ಹಸಿ ಹಸಿ ಕ್ರೌರ್ಯಕ್ಕಿಂತ ಬ್ರಿಟಿಷರ ನಯ ವಂಚಕ ರಾಜಕಾರಣ ನಾಡಿಗೆ ಹೆಚ್ಚಿನ ಅಪಾಯಕಾರಿ ಎನ್ನುವ ಅಸ್ಪಷ್ಟ ತಿಳುವಳಿಕೆ ಕ್ರಿಯೆಯಲ್ಲಿ ಮೂರ್ತವಾಗುವುದಿಲ್ಲ. ಅಂಗ್ಲರ ಕೃಪೆಯಿಂದ ರಾಜ್ಯದ ಅಧಿಕಾರವನ್ನು ಪಡೆದುಕೊಳ್ಳುವುದೆಂದರೆ ಹೊಸ ವಿಪತ್ತೊಂದನ್ನು ಅಹ್ವಾನಿಸಿಕೊಂಡಂತೆಯೇ ಎನ್ನುವ ಸ್ಪಷ್ಟ ತಿಳುವಳಿಕೆಯಲ್ಲಿ ಇವರು ರಾಜಕಾರಣ ಮಾಡುವುದಿಲ್ಲ. ಇಂದು ರಾಜ್ಯವನ್ನು ಕೊಟ್ಟವನು ನಾಳೆ ಅದನ್ನು ಕಸಿದುಕೊಳ್ಳದಿರುತ್ತಾನೆಯೆ? ಎಲ್ಲದಕ್ಕಿಂತ ಒಂದು ರಾಜ್ಯದ ಅಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವ ಅವಕಾಶ, ಅಧಿಕಾರಗಳನ್ನು ಪರಕೀಯರಿಗೆ ಬಿಟ್ಟು ಕೊಡುವಾಗ ಉದ್ಭವಿಸಬಹುದಾದ ದೂರಗಾಮೀ ರಾಜಕೀಯ, ಅರ್ಥಿಕ ಪರಿಣಾಮಗಳನ್ನು ಊಹಿಸುವ ಶಕ್ತಿ ಚಿಕವೀರನ ರಾಜಕೀಯ ವಿರೋಧಿಗಳಿಗೆ ಇಲ್ಲ. ಅವರು ಇವನಿಗಿಂತ ಒಳ್ಳೆಯವರೇ ಇದ್ದಾರೆ ಎಂದು ವಾದಕ್ಕಾಗಿ ಒಪ್ಪಿಕೊಂಡರೂ ಕೇವಲ ಕೊಡಗು ಸಿಂಹಾಸನ ಕೇಂದ್ರಿತ ಇವರ ದೃಷ್ಟಿ ತೀರಾ ಸೀಮಿತವಾಗಿಯೂ, ದೇಶದ ಒಟ್ಟಾರೆ ರಾಜಕೀಯ ಪರಿಸ್ಥಿತಿಯ ಹಿನ್ನಲೆಯಲ್ಲಿ ಸಾಕಷ್ಟು ಅಪಾಯಕಾರಿಯೂ, ಅನೈತಿಕವೂ ಆಗಿದೆ. ಕೇವಲ ರಾಜ್ಯದ ಅಧಿಕಾರವನ್ನು ಕೈ ವಶ ಮಾಡಿಕೊಳ್ಳಬೇಕೆನ್ನುವ ಈ ಮೂಲಭೂತ ಆಶೆಯಲ್ಲಿ ಚಿಕವೀರನೂ ಅವನ ವಿರೋಧಿಗಳೂ, ಬ್ರಿಟಿಷರೂ ಒಂದೇ ಎನಿಸುತ್ತದೆ. ಇವರ ನಡುವಣ ವ್ಯತ್ಯಾಸಗಳೇನಿದ್ದರೂ ಅವರವರ ಸಾಪೇಕ್ಷ ರಾಜಕೀಯ ಹಿನ್ನಲೆ ಮಾತ್ರ. ಸಾಮಾನ್ಯ ಪ್ರಜೆಗಳ ನಿತ್ಯ ಜೀವನದ ಸುಖಗಳು ಈ ರಾಜಕೀಯ ಆಕಾಂಕ್ಷೆಯ ಮುಂದೆ ಗೌಣವಾಗಿ ಬಿಡುತ್ತವೆ. ಹೀಗೆಂದಾಗ ಯಾರು ರಾಜ್ಯ ಆಳಿದರೂ ಒಂದೇ ಎನ್ನುವ ಸಿನಿಕ ನಿಲುವನ್ನು ಕಾದಂಬರಿ ತಾಳುವುದಿಲ್ಲ. ಚಿಕವೀರನ ಆಡಳಿತದ ಸ್ವರೂಪವನ್ನು ಕಾದಂಬರಿ ದಟ್ಟ ವಿವರಗಳಲ್ಲಿ ಚಿತ್ರಿಸುತ್ತದೆ. ಅದರ ಒಳಗಣ ವಿರೋಧೀ ನೆಲೆಗಳನ್ನು ವಿಮರ್ಶಾತ್ಮಕವಾಗಿಯೇ ನೋಡುತ್ತದೆ. ಬ್ರಿಟಿಷರ ಜಾಣತನ, ಸಾಮರ್ಥ್ಯ, ಕುತಂತ್ರ, ಕ್ರೌರ್ಯಗಳನ್ನು ಬಯಲಿಗೆಳೆಯುತ್ತದೆ. ಕೊಡಗಿನ ಪ್ರಜೆಗಳು ಪ್ರತಿಕ್ರಿಯಿಸುವ ಕ್ರಮವನ್ನು ಗಮನಿಸಿ :

> "ಈ ಮಧ್ಯೆ ದೇಶದಲ್ಲಿ ಜನರ ಮನಸ್ಸು ಅರಸನ ವಿಷಯಕ್ಕೆ ತೀರ ಕೆಟ್ಟುಹೋಗಿತ್ತು. ದೇವಮ್ಮಾಜಿ, ಚೆನ್ನಬಸವಯ್ಯ ಜನರಿಗೆ ಬಹಳ ಬೇಕಾಗಿದ್ದವರು ಎಂದಲ್ಲ; ಆದರೆ ಅರಸ ದೇವಮ್ಮಾಜಿಯನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ ಎನ್ನುವುದು ಜನರ ತಿಳಿವಳಿಕೆ. ಹಬ್ಬದ ನಾಟಕದಲ್ಲಿ ಅರಸನನ್ನು ಅಪಹಾಸ್ಯ ಮಾಡಿದ್ದು ಕೆಲವರಿಗೆ ಸಂತೋಷ; ಹಾಗೆಯೇ ಇನ್ನು ಕೆಲವರಿಗೆ ಒಪ್ಪಿಗೆಯಿಲ್ಲ". (ಪು : ೩೮೪)

ಬ್ರಿಟಿಷರು ತಮ್ಮ ರಾಜ್ಯವನ್ನು ಆಕ್ರಮಿಸಿಕೊಳ್ಳುವ ಸೂಚನೆ ಸಿಕ್ಕಾಗ ಕೊಡಗಿನ ಜನತೆ ಯೋಚಿಸುವ ರೀತಿಯೂ ಕೊಡಗಿನ ದುರಂತವನ್ನು ಮಾರ್ಮಿಕವಾಗಿ ಕಟ್ಟುತ್ತದೆ:

> "ಎಲ್ಲರದೂ ಒಂದೇ ಯೋಚನೆ. ಅರಸ ಮುಷ್ಕರ ಮಾಡಿ ಅಂಗ್ಲರನ್ನು ಮೇಲೆ ಹಾಕಿಕೊಂಡರೆ ಅವರು ದಂಡೆತ್ತಿ ಬರುವುದೇ ನಿಜ. ಅವರು ಹಾಗೆ ಮಾಡಿದರೆ ಅರಸ ಮಗುವನ್ನೂ ನಿಯೋಗಿಗಳನ್ನೂ ತೀರಿಸಿಬಿಟ್ಟರೂ ಬಿಟ್ಟನೆ. ಹೆರವರು ಬಂದರೆ ದೇಶದಲ್ಲಿ ಅವ್ಯವಸ್ಥೆ. ಈಗ ಬಹು ವ್ಯವಸ್ಥೆಯಿದೆಯೆಂದಲ್ಲ. ಆದರೆ ಈಗ ಮಡಿಕೇರಿಯಲ್ಲಿ ಅರಮನೆಯ ಬದಿಯಲ್ಲಿ ನಡೆಯುವ ಅವಿವೇಕಕ್ಕೆ ಒಂದು ಎಲ್ಲೆ ಇದೆ. ನಾಡು ಒಟ್ಟಿನಲ್ಲಿ ಒಂದು ಬಾಳು ಬಾಳುತ್ತದೆ. ಹೆರವರು ಬಂದು ಮಾಡುವ ಅವ್ಯವಸ್ಥೆಯಲ್ಲಿ ಯಾರೂ ತಮ್ಮ ಮನೆಯಲ್ಲಿ ತಾವು ನಿಶ್ಚಿಂತೆಯಾಗಿದ್ದೇವೆ ಎನ್ನುವಂತಿಲ್ಲ". (ಪು : ೩೯೫)

ಕ್ಷಿಪ್ರ ಬದಲಾವಣೆಯ ಎಂಥ ಆಮಿಷ ಆಕರ್ಷಣೆಗಳಿದ್ದರೂ ವಸಾಹತುಶಾಹೀ ಶಕ್ತಿಗಳನ್ನು ಏಕೆ ವಿರೋಧಿಸಬೇಕೆಂಬುದಕ್ಕೆ ಬೇರೆ ಕಾರಣಗಳು ಬೇಕಾಗಿಲ್ಲ. ಚಿಕವೀರ ರಾಜೇಂದ್ರ ನಿಸ್ಸಂದೇಹವಾಗಿ ಒಂದು ವಸಾಹತುಶಾಹೀ ವಿರೋಧಿ ಕಾದಂಬರಿ. ಆದರೆ ಈ ವಿರೋಧ ತನ್ನ ಪರಂಪರೆಯನ್ನು ಅನಗತ್ಯವಾಗಿ ಕೀರ್ತಿಸುವುದರಲ್ಲಿ ಕಳೆದು ಹೋಗುವುದಿಲ್ಲ. ಈ ವಿಶ್ಲೇಷಣಾತ್ಮಕ ವಾಸ್ತವವಾದೀ ದೃಷ್ಟಿ ಕಾದಂಬರಿಗೆ ಅಸಾಧಾರಣ ಘನತೆಯನ್ನೂ ಹಿರಿಮೆಯನ್ನೂ ತಂದು ಕೊಟ್ಟಿದೆ.

"ಇದೆಲ್ಲ ಸರಿಯೆ, ಆದರೆ ಇದನ್ನು ತಪ್ಪಿಸುವುದಕ್ಕೆ ಯಾರು ಏನು ಮಾಡಬಹುದು?" ಎಂಬ ತಾತ್ತ್ವಿಕ ಪ್ರಶ್ನೆಯನ್ನು ಕಾದಂಬರಿಕಾರರು ಕೇಳುತ್ತಾರೆ. ಈ ಪ್ರಶ್ನೆಗೆ ಸಮಾಧಾನವನ್ನು ಸೂಚಿಸುವಲ್ಲಿ ಮಾಸ್ತಿ metaphysical ಆಯಾಮಗಳನ್ನು ತಡವುತ್ತಿದ್ದಾರೆ ಎಂದು ಮೇಲು ನೋಟಕ್ಕೆ ಅನ್ನಿಸಿದರೂ ವಾಸ್ತವವಾಗಿ ಅವರು ಇತಿಹಾಸದಲ್ಲಿ ಸಿಕ್ಕಿ ಬಿದ್ದ ಮನುಷ್ಯ ವ್ಯಾಪಾರಗಳ ಜಟಿಲತೆಯ ಬಗ್ಗೆಯೇ ವಿಚಾರ ಮಾಡುತ್ತಿದ್ದಾರೆ:

> 'ಇಂಥ ಸಂದರ್ಭದಲ್ಲಿ ಜೀವನವೆನ್ನುವುದು ವಿಧಾತ ಬರೆದಿಟ್ಟ ಒಂದು ನಾಟಕದಂತೆ ಆಗಿ ಬಿಡುತ್ತದೆ. ಕವಿ ಬರೆದು ಮುಗಿಸಿ ಆಡಿ ಎಂದು ಕೈಗೆ ಕೊಟ್ಟಿರುವ ನಾಟಕ; ನಟ ಅದನ್ನು ಆಡಬಹುದು ಹೊರತು ಬೇರೆ ಮಾಡಲು ಬರುವುದಿಲ್ಲ. ಇದನ್ನೇ ಪೂರ್ವಿಕರು ವಿಧಿಲಿಖಿತ ಎಂದಿರುವುದು. ಕಾಡಿನ ಮಧ್ಯದ ರಾಜ ಮಾರ್ಗದಲ್ಲಿ ಹೊರಟ ರಥ ಎದುರಿಗೆ ಹುಲಿ ಬಂದಿತೆಂದು ಕಾಡಿಗೆ ಹರಿಯುವಂತಿಲ್ಲ. ಮಾರ್ಗದಲ್ಲೆ ಹರಿಯಬೇಕು. ಜೀವನದ ಹರಿವೂ ಅಷ್ಟೇ. ರಥಕ್ಕೆ ಜೀವನಕ್ಕೆ ಒಂದೇ ವ್ಯತ್ಯಾಸ : ಹುಲಿಗೆ ಅಂಜಿ ರಥ ನಿಂತಲ್ಲಿ ನಿಲ್ಲಬಹುದು; ಜೀವನದಲ್ಲಿ ಸಿಕ್ಕಿದವರಿಗೆ ಈ ಭಾಗ್ಯವಿಲ್ಲ'' (ಪು : ೩೯೫)

ಚಿಕವೀರರಾಜ ಕಾದಂಬರಿಯಲ್ಲಿ ಮಾಸ್ತಿಯವರು ಈ ವಿಧಿಯನ್ನು ಇತಿಹಾಸದ ನಿಗೂಢತೆಯಲ್ಲೇ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದಾಗಿ ಕಾದಂಬರಿ ಪ್ರಕಟಪಡಿಸುವ ದುರಂತ ಪ್ರಜ್ಞೆಗೆ ಒಂದು ತಾತ್ತ್ವಿಕ ಆಯಾಮ ತಾನಾಗಿ ಒದಗಿ ಬರುತ್ತದೆ. ಕಾದಂಬರಿಯ ಆರಂಭದಲ್ಲೇ ಪ್ರಾಸ್ತಾವಿಕದಲ್ಲಿ ಮಾಸ್ತಿ ಬರೆಯುತ್ತಾರೆ:

> "ಇಷ್ಟು ವಿಸ್ತಾರವಾದ ಈ ಭೂಮಿ, ಧರ್ಮ, ನೀತಿ, ಸಂಸ್ಕೃತಿಯ ಕಾರಣದಿಂದ ಎಷ್ಟೋ ಕಾಲದಿಂದ ಒಂದಾಗಿದ್ದರೂ ಆಡಳಿತದಲ್ಲಿ ಒಂದಾಯಿತೆನ್ನುವುದು ತೀರಾ ಇತ್ತೀಚಿನ ಮಾತು. ಪ್ರಾಂತ ಪ್ರಾಂತ ತನ್ನದೆ ಬಾಳನ್ನು ಬಾಳಿತು; ಪ್ರಾಂತ ಪ್ರಾಂತಗಳಲ್ಲಿ, ಅನೇಕ ವೇಳೆ ಒಂದೇ ಪ್ರಾಂತದ ಬೇಱೆ ಬೇರೆ ಭಾಗಗಳಲ್ಲಿ, ಬೇರ ಬೇರೆ ರಾಜಮನೆತನಗಳಿದ್ದು ಒಂದೇ ಪ್ರಾಂತದ ಬೇರೆ ಬೇರೆ ಭಾಗಗಳಲ್ಲಿ, ಬೇರ ಬೇರ ರಾಜಮನೆತನಗಳಿದ್ದು ಒಂದೊಂದು ಪ್ರಾಂತದ ಇತಿಹಾಸವೂ ಒಂದು ದೇಶದ ಇತಿಹಾಸದಂತೆ ವಿಪುಲವಾಯಿತು. ಈ ಮಾತಿಗೆ ಅತ್ಯುತ್ತಮ ನಿದರ್ಶನ ರಾಜಪುತ್ರ ಸ್ಥಾನ. ರಾಜಪುತ್ರರ ಆ ನೆಲೆ ಭರತಭೂಮಿಯ ಒಂದು ಸಣ್ಣ ಭಾಗ. ಆದರೆ ಅದರಲ್ಲಿ ಇಪ್ಪತ್ತು ಭಾಗ ಇವೆ;ಒಂದೊಂದರ ಇತಿಹಾಸವೂ ಒಂದು ರಾಷ್ಟ್ರದ ಇತಿಹಾಸದಂತೆ ವಿಸ್ತಾರವಾಗಿ ಕೀರ್ತಿ ವಂತನಾಗಿ ಕಾಣುತ್ತದೆ. ಆ ಶೌರ್ಯ, ಧರ್ಮನಿಷ್ಠೆ ಆ ತೇಜಸ್ಸು, ಆ ಶ್ರದ್ಧೆ ಆ ಭೂಮಿಯಲ್ಲಿ ಅದೆಷ್ಟು ಹುಲುಸಾಗಿ ಬೆಳೆದವು! ಜೊತೆಗೆ ಆ ಕೆಟ್ಟತನ, ಆ ಅವಿವೇಕ, ಆ ಸ್ವಾರ್ಥ, ಆ ಲೋಭ ಎಷ್ಟು''

ಅಂದರೆ ಮನುಷ್ಯ ತನ್ನ ಒಳಿತಿಗಾಗಿ ಕಟ್ಟಿಕೊಳ್ಳುವ ವ್ಯವಸ್ಥೆಯ ಮೂಲದಲ್ಲೇ ಕೆಡುಕೂ ಇದೆ ಎಂದ ಹಾಗಾಯಿತು. ಹಾಗಾಗಿ ಸಂಘರ್ಷ ಇತಿಹಾಸದ ಲಯವೇ ಆಗಿ ಬಿಡುತ್ತದೆ. ಕೊಡಗಿನ ಸಿಂಹಾಸನವನ್ನು ತಮ್ಮ ಸುಪರ್ದಿಗೆ ತೆಗೆದುಕೊಳ್ಳಲು ಆ ರಾಜ್ಯದ ಕೆಲವರು ಮತ್ತು ಹೊರಗಿನ ಬ್ರಿಟಿಷರು ತಮ್ಮದೇ ಆದ ಕಾರಣಗಳನ್ನು ಮುಂದೊಡ್ಡುತ್ತಾರಷ್ಟೇ. ತನ್ನ ಸಿಂಹಾಸನದ ಸಮರ್ಥನೆಗಾಗಿ ಚಿಕವೀರ ಹೂಡುವ ತರ್ಕ ಅತ್ಯಂತ ಭೀಕರವಾದುದಾದರೂ ಈ ರಾಜಕೀಯ ಚದುರಂಗದ ಆಟದಲ್ಲಿ ಕೇವಲ ಮುನ್ನಡೆಯ ತಂತ್ರವೆನ್ನಿಸಿ ಬಿಡುವುದು ಒಂದು ದೊಡ್ಡ ವ್ಯಂಗ್ಯ. ಆದರೆ ಕಾದಂಬರಿ ಇಲ್ಲಿನ ದುರಂತವನ್ನು ದಾಖಲಿಸುವ ಪರಿ ಅನನ್ಯವಾದದ್ದು. ಚೆನ್ನಬಸವಯ್ಯನ ಆಳು ಚೋಮನನ್ನು ಅಮಾನವೀಯವಾಗಿ ಶೂಲಕ್ಕೆ ಏರಿಸಿದ ಪ್ರಸಂಗ ಕೇವಲ ಗಾಢ ವಿಷಾದದಿಂದ ನಮ್ಮನ್ನು ಇರಿದರೆ ಶಿಶುಹತ್ಯೆಯನ್ನು ರಾಜಕೀಯವಾಗಿ, ತಾತ್ತ್ವಿಕವಾಗಿ ಸಮರ್ಥಿಸಿಕೊಳ್ಳಲೆತ್ನಿಸುವ ಚಿಕವೀರನ ತಂತ್ರ ನಮ್ಮನ್ನು ಸಂಪೂರ್ಣ ನಿರಾಯುಧರನ್ನಾಗಿ ಮಾಡುತ್ತದೆ; ದಿಗ್ಭ್ರಾಂತರನ್ನಾಗಿ ಮಾಡುತ್ತದೆ. ಇಲ್ಲಿ ದುರಂತ ಒಟ್ಟೊಟ್ಟಿಗೇ ವ್ಯಕ್ತಿಯದೂ ಹೌದು; ಸಮೂಹದ್ದೂ ಹೌದು. ರಾಜಕೀಯ ವ್ಯವಸ್ಥೆಯದೂ ಹೌದು, ತಾತ್ತ್ವಿಕ ಸ್ವಾತಂತ್ರ್ಯದ್ದೂ ಹೌದು.

"ಜ್ಞಾತಿಗಳನ್ನು ಕೊಂದು ದೊಡ್ಡಪ್ಪ ದೊರೆಯಾಗಿ ಉಳಿದನು. ಜ್ಞಾತಿಗಳನ್ನು ಕೊಂದು ಅಡಗಿಸದೆ ಅಪ್ಪನಿಗೆ ದೊರೆಯಾಗುವುದು ಸಾಧ್ಯವಾಗಲಿಲ್ಲ, ಬಾಳುವುದು ಆಗಲಿಲ್ಲ. ದೊರೆಯಾಗಿ ತಾನು ಧೈರ್ಯವಾಗಿ ಬಾಳಲಾಗಲಿಲ್ಲ. ದೊಡ್ಡಪ್ಪನ ಮಗಳನ್ನು ಕೊಲ್ಲಿಸಬೇಕಾಯಿತು; ಆಗದ ಜ್ಞಾತಿಗಳನ್ನು ನಿರ್ಮೂಲ ಮಾಡಬೇಕಾಯಿತು"(ಪು :೪೦೫) ಎಂದು ಚಿಕವೀರ ಯೋಚಿಸುವಾಗ ಸಹಸ್ರಾರು ವರ್ಷಗಳ ಚರಿತ್ರೆಯ ಕ್ರೌರ್ಯ ಕಣ್ಣನ್ನು ಕುಕ್ಕುತ್ತದೆ. ವ್ಯವಸ್ಥೆಗಾಗಿ ಮನುಷ್ಯ ರೂಪಿಸಿಕೊಂಡ ಅಧಿಕಾರ ಕೇಂದ್ರದಲ್ಲೇ ಅಂತರ್ಗತವಾಗಿರುವ ಹಿಂಸೆ ನಮ್ಮನ್ನು ಬೆಚ್ಚಿ ಬೀಳಿಸುತ್ತದೆ. ಇತಿಹಾಸದ ಒಂದು ಸಂದರ್ಭದ ಬಗ್ಗೆ ಬರೆಯುತ್ತಿರುವಾಗ ಮಾಸ್ತಿ ಆ ಸಂದರ್ಭದ ದುರಂತವನ್ನಷ್ಟೇ ಅಲ್ಲ ಮನುಷ್ಯವ್ಯವಸ್ಥೆಯಲ್ಲಿಯೇ ಇರುವ ದುರಂತದ ಬಗ್ಗೆ ನಮ್ಮ ಪ್ರಜ್ಞೆಯನ್ನು ಎಚ್ಚರಗೊಳಿಸುತ್ತಾರೆ. ಹಾಗಾದರೆ ಆದರ್ಶದ ವ್ಯವಸ್ಥೆ ಯಾವುದು ಎಂಬ ಪ್ರಶ್ನೆ ಎದುರಾಗುತ್ತದೆ. ಇನ್ನೊಂದು ಸಂದರ್ಭದಲ್ಲಿ ಕಾದಂಬರಿಕಾರರು ಚಿಕ್ಕಣ್ಣಶೆಟ್ಟಿಯ ಬಾಯಲ್ಲಿ ಹೇಳಿಸುವ ಮಾತುಗಳು ಈ ದೃಷ್ಟಿಯಿಂದ ತುಂಬಾ ಮಹತ್ತ್ವಪೂರ್ಣ: "ಅರಮನೆಗೆ ಬಂದ ಹರೆಯದ ಹೆಣ್ಣು ಅರಸರ ಮಗಳಂತೆ ಬಾಳಬಹುದಾದರೆ ಊರು ಊರು, ಅರಮನೆ ಅರಮನೆ; ಶೆಟ್ಟಿ ಶೆಟ್ಟಿ, ಒಡೆಯರು ಒಡೆಯರು. ಆದಾಗಲಿಲ್ಲ, ಇದು ಯಾವುದೂ ಆಗಲ್ಲ"(ಪುಟ : ೭೫) ಅಂದರೆ ಕೆಡಕನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು ಒಳಿತಿಗೆ ತಾತ್ತ್ವಿಕವಾಗಿ ಕಷ್ಟಸಾಧ್ಯ ಅಂದ ಹಾಗಾಯಿತು. ಚಿಕವೀರನ ಅಂತಃಕರಣವೂ ಅವನನ್ನು ಆಗಾಗ ಮೃದುಗೊಳಿಸುತ್ತದೆ ಎಂಬುದಕ್ಕೆ ಕಾದಂಬರಿಯಲ್ಲಿಯೇ ಹಲವಾರು ಉದಾಹರಣೆಗಳಿವೆ. ಅಂದರೆ ವ್ಯಕ್ತಿಯಾಗಿ ಚಿಕವೀರನೂ ಬಾಗಬಲ್ಲ. ಆದರೆ ಅವನು ಕೇವಲ ವ್ಯಕ್ತಿಯಲ್ಲ. ಚಿಕವೀರ ವ್ಯವಸ್ಥೆಯೊಂದರ ಅವಿಭಾಜ್ಯ ಅಂಗವಾಗಿರುವುದರಿಂದ ಅಂತಿಮವಾಗಿ ಅವನಿಗೆ ಕೆಡುಕಿನಿಂದ ಬಿಡುಗಡೆಯಿಲ್ಲ. ಯಾವ ಶಿಶುತನದ ಮುಗ್ಧತೆ ಅವನನ್ನು ಮೃದುಗೊಳಿಸುತ್ತಿತ್ತೋ ಅಂಥ ಶಿಶುವನ್ನೇ ಅವನು ರಾಜಕೀಯ

ಕಾರಣಗಳಿಗಾಗಿ ಕೊಲ್ಲಬೇಕಾಗುತ್ತದೆ ಎಂಬುದರಲ್ಲಿ ಮನುಕುಲದ ದುರಂತ ಅಡಗಿದೆ. ಇದು ಚಿಕವೀರನ ಶಿಶುಹತ್ಯೆಯನ್ನು ಸಮರ್ಥಿಸುವ ಮಾತಲ್ಲ. ನಿಜ, ವೈಯಕ್ತಿಕ ಕ್ರೌರ್ಯದ ಪರಾಕಾಷ್ಠತೆ ಕಾದಂಬರಿಯಲ್ಲಿ ಮೂಡಿ ಬರುವುದು ಈ ಸಂದರ್ಭದಲ್ಲಿಯೇ. ಆದರೆ ಸಮಗ್ರವಾಗಿ ನೋಡಿದಾಗ ಲಿಂಗರಾಜನ ಕ್ರೌರ್ಯ, ಚಿಕವೀರನ ವಿರೋಧಿಗಳ ರಾಜಕೀಯ, ಬ್ರಿಟಿಷರ ಸಾಮ್ರಾಜ್ಯಶಾಹೀ ದುರಾಸೆಗಳ ಒಟ್ಟು ಸಂದರ್ಭದಲ್ಲಿ ಚಿಕವೀರ ಇವರೊಂದಿಗೆ ಕೇವಲ ಒಬ್ಬ ಪಾಲುದಾರನಾಗಿ ಕಂಡು ಬರುತ್ತಾನೆ. ತಮ್ಮ ನಾಡನ್ನೇ ಬ್ರಿಟಿಷರಿಗೆ ಮಾರಿಕೊಳ್ಳಲು ಮುಂದಾಗುವ ಚಿಕವೀರನ ವಿರೋಧಿಗಳು ಪರರ ಗಂಟನ್ನು ನಾಚಿಕೆಯಿಲ್ಲದೆ ಕಬಳಿಸಲು ಮುಂದಾಗುವ ಬ್ರಿಟಿಷರು ಇವರ ನಡುವೆ ಕೊಡಗಿನ ಜನತೆಯ ನಿಜವಾದ ಅಸಮಾಧಾನ, ಅತೃಪ್ತಿಗಳು ಸರಿಯಾದ ಅಭಿವ್ಯಕ್ತಿ ದೊರಕದಿರುವುದು ಮತ್ತೊಂದು ದುರಂತ.

ಚಿಕವೀರ ಮತ್ತು ಅವನ ವಿರೋಧಿಗಳ ರಾಜಕಾರಣಕ್ಕೆ ಸಮಾನಾಂತರವಾಗಿ ಕೇವಲ ಕೊಡಗಿನ ಹಿತರಕ್ಷಣೆಯನ್ನೇ ಬಯಸುವ ಸಾತ್ತ್ವಿಕ ಶಕ್ತಿಯ ಮೂಲಗಳೂ ಕೊಡಗಿನಲ್ಲೇ ಇದ್ದಾವೆ. ಸಿಂಹಾಸನವನ್ನು ಮಾತ್ರ ಬಯಸುವ ಶಕ್ತಿಗಳನ್ನು ಕೆಡುಕು ಎಂದೂ ನಾಡಿನ ಕ್ಷೇಮವನ್ನಷ್ಟೇ ಬಯಸುವ ಶಕ್ತಿಗಳನ್ನು ಒಳಿತು ಎಂದೂ ಭಾವಿಸಿದರೆ ಈ ಕಾದಂಬರಿಯ ದುರಂತದ ಸ್ವರೂಪ ನಿಚ್ಚಳವಾಗುತ್ತದೆ. ಚಿಕವೀರನ ಹೆಂಡತಿ ಗೌರಮ್ಮಾಜಿ, ಮಗಳು ಪುಟ್ಟಮ್ಮಾಜಿ, ಸಚಿವರಾದ ಲಕ್ಷ್ಮೀನಾರಾಯಣಯ್ಯ, ಬೋಪಣ್ಣ, ನಾಗರಿಕರಾದ ಉತ್ತಯ್ಯ ತಕ್ಕ ಮೊದಲಾಗಿ ಕೊಡಗಿನ ಬಹು ಸಂಖ್ಯಾತ ಪ್ರಜಾಕೋಟಿಗೆ ಚಿಕವೀರನ ಆಡಳಿತ ಸಮ್ಮತವಿಲ್ಲ. ಹಾಗೆಂದು ಅವರು ಕ್ಷಿಪ್ರ ಕ್ರಾಂತಿಗೆ ಮುಂದಾಗರು. ಬ್ರಿಟಿಷರ ಪ್ರವೇಶವೂ ಇವರಿಗೆ ಸಮ್ಮತವಲ್ಲ. ತಾವೇ ಅಧಿಕಾರವನ್ನು ಕೈಗೆತ್ತಿಕೊಳ್ಳಲು ಇವರು ಸಿದ್ಧರಿಲ್ಲ. ಅದಕ್ಕೆ ಅವರದೇ ಆದ ವೈಯಕ್ತಿಕ, ನೈತಿಕ ಕಾರಣಗಳಿವೆ. ಅಂದರೆ ಒಳಿತು ತನ್ನೆಲ್ಲ ಅಂತರಿಕ ತೇಜಸ್ಸಿನೊಡನೆ ಒಂದು ಮಟ್ಟದಲ್ಲಿ ನಿಷ್ಕ್ರಿಯವಾಗಿದೆ. ಅದರ ನೈತಿಕ ತಾಟಸ್ಥ್ಯ ಇನ್ನೊಂದು ದೃಷ್ಟಿಯಿಂದ ಕೆಡುಕಿನ ಚಲನೆಗೆ ದಾರಿಯನ್ನು ಸುಗಮಗೊಳಿಸುತ್ತದೆ. ಅಂದರೆ ಚಿಕವೀರನ ಆಡಳಿತ ಕೊನೆಗೂ ಕೊನೆಗೊಂಡರೆ ಬ್ರಿಟಿಷರ ಆಡಳಿತ ಪ್ರಾರಂಭವಾಗುತ್ತದೆ. ಬ್ರಿಟಿಷರು ತುಂಬಾ ಸೂಕ್ಷ್ಮವಾಗಿ ಚಿಕವೀರನಿಗೆ ವಿರುದ್ಧವಾದ ಎಲ್ಲ ದುಷ್ಟ, ಶಿಷ್ಟಶಕ್ತಿಗಳನ್ನೂ ಬಳಸಿಕೊಂಡು ಅರಸನ ಸೋಲನ್ನು ನಿರ್ಣಯಾತ್ಮಕ ಹಂತಕ್ಕೆ ಕೊಂಡೊಯ್ಯುತ್ತಾರೆ. ಆದರೆ ರಾಜ್ಯ ಮಾತ್ರ ಸ್ವದೇಶಿಯರ ಕೈಗೆ ಸಿಕ್ಕುವುದಿಲ್ಲ. ಹೀಗೆ ಕೊಡಗಿನ ಸಾತ್ತ್ವಿಕ ಶಕ್ತಿಗಳೂ ಚಿಕವೀರನನ್ನು ಕೆಳಗಿಳಿಸುವ ಸೀಮಿತ ಯಶಸ್ಸನ್ನಷ್ಟೇ ಪಡೆಯುತ್ತವೆ. ಅವುಗಳಿಗೆ ಬ್ರಿಟಿಷರ ಆಗಮನವನ್ನು ತಡೆಯುವಷ್ಟು ಚೈತನ್ಯವಿಲ್ಲ. ಅಂದರೆ ವ್ಯಕ್ತಿಗಳಾಗಿ ಒಳ್ಳೆಯವರಾದರೂ ಗೌರಮ್ಮ, ಲಕ್ಷ್ಮೀನಾರಾಯಣಯ್ಯ, ಬೋಪಣ್ಣ ಇವರೆಲ್ಲ –ಒಳ್ಳೆಯತನದೊಂದಿಗೇ ಇರುವ ಭೋಳೆತನದಿಂದಲೂ, ಬ್ರಿಟಿಷರ ಹರಿತವಾದ ರಾಜಕಾರಣದಿಂದಲೂ ಸಾಂದರ್ಭಿಕ ಒತ್ತಡಗಳಿಂದಲೂ–ಒಳಿತಿನ ವಿಜಯವನ್ನು ಸಾಧ್ಯಮಾಡುವುದಿಲ್ಲ. ಅಂದರೆ ಮಾಸ್ತಿ ಪಾತ್ರಗಳನ್ನಾಗಲೀ ಪ್ರವೃತ್ತಿಗಳನ್ನಾಗಲೀ ಕಪ್ಪು–ಬಿಳುಪು ಸರಳ ವರ್ಗೀಕರಣಕ್ಕೆ ದೂಡದೆ ಅದ್ಭುತವಾದ ನಾಟಕೀಯತೆಯನ್ನು ಸಾಧಿಸುತ್ತಾರೆ. ಹಾಗಾದರೆ ಚಿಕವೀರನ ಆಡಳಿತ ಬ್ರಿಟಿಷರ ಆಗಮನವನ್ನು ಸಹಿಸಿಕೊಳ್ಳುವಷ್ಟು ಅಸಹನೆಯನ್ನು ಕೊಡಗಿನಲ್ಲಿ ಮೂಡಿಸಿತ್ತೆ? ಈ ಎರಡು ಪ್ಯಾರಾಗಳನ್ನು ನೋಡಿ :

“ಕೊಡಗು ನಮ್ಮದು, ಇದರ ಮೇಲೆ ಹೆರವರ ನೀತಿ ನಡೆಯುವುದು ನಮಗೆ ಅವಮಾನ ಎನ್ನುವ ಭಾವನೆ ಪಟ್ಟಣದ ಪ್ರಜೆಯ ಬಹುಭಾಗಕ್ಕೆ ಇಲ್ಲ. ಕೊಡಗು ಅರಸನದು: ಬಿಳಿಯ ಜನ ಅವನ ಮೇಲೆ ದಂಡನ್ನು ಕಳುಹಿಸಿದ್ದಾರೆ. ಅವನನ್ನು ದಂಡಿಸುತ್ತಾರೆ: ದಂಡಿಸಲಿ ಒಳ್ಳೇಯದೇ ಆಯ್ತು. ಇದು ಈ ಬಹು ಜನದ ಕಲ್ಪನೆ. ಕೆಲವರಿಗೆ ಮಾತ್ರ ಈ ಪರಸೇನೆ ಬರುವುದು ಇಷ್ಟವಿಲ್ಲ. ಈ ಕೆಲವರು ಊರಿನ ಆಸ್ತಿವಂತ ಮಂದಿ. ಹೊರಗಿನಿಂದ ಬಂದ ಸೇನೆ ತಪ್ಪಿ ನಡೆದ ದೊರೆಯನ್ನು ದಂಡಿಸುವುದು ಮಾತ್ರವಲ್ಲ; ಊರಿನ ಪುಣ್ಯವಂತರ ಮನೆಗೆ ನುಗ್ಗಲೂಬಹುದು. ನಮ್ಮ ಮನೆಗೆ ನುಗ್ಗಿದರೆ ಏನು ಗತಿ? ಎಂದು ಇವರಿಗೆ ಚಿಂತೆ. ಇನ್ನು ಕೆಲವರಿಗೆ, ಮನೆಯಲ್ಲಿ ಹರೆಯದ ಹೆಣ್ಣುಮಕ್ಕಳು ಇದ್ದಾರಲ್ಲ. ದಂಡಿನ ಜನ ನುಗ್ಗಿ ಬಂದರೆ ಮಾನ ಉಳಿಯುವುದು ಹೇಗೆ?, ಎಂದು ಚಿಂತೆ” (ಪು : ೪೧೫–೪೧೬).

ಮಾಸ್ತಿ ವಸಾಹತೀಕರಣ ಪ್ರಕ್ರಿಯೆಯನ್ನು ಅದರೆಲ್ಲ ಮುಖಗಳಲ್ಲಿ ಹಿಡಿಯುವುದರ ಮೂಲಕ ದುರಂತವನ್ನು ಅಧಿಕೃತಗೊಳಿಸುತ್ತಾರೆ. ಈ ದುರಂತ ವೈಯಕ್ತಿಕ ಗೋಳು ಕರೆಗಳನ್ನು ಮೀರಿದ್ದು ಎಂದು ವಿವರಿಸುವ ಅಗತ್ಯವಿಲ್ಲ. ಗಾದಿಯನ್ನೇರುವ ಅವಕಾಶ ಗೌರಮ್ಮನಿಗೆ ಮತ್ತು ಬೋಪಣ್ಣನಿಗೆ ತಾನಾಗಿ ಒದಗಿ ಬಂದರೂ ತಾವೆಲ್ಲೋ ರಾಜದ್ರೋಹ, ಸ್ವಾಮಿದ್ರೋಹ ಮಾಡುತ್ತಿದ್ದೇವೆಂಬ ಅಳುಕು, ಪರಂಪರೆಯ ಸಾತ್ವಿಕ ಪ್ರಭಾವ ಹಾಗೂ ವೈಯಕ್ತಿಕ ನೈತಿಕ ಎಚ್ಚರಗಳಿಂದಾಗಿ ಅವರು ಅದಕ್ಕೆ ಒಪ್ಪುವುದಿಲ್ಲ. ಆಂತರಿಕ ನೈತಿಕತೆ ಎಷ್ಟೇ ಉನ್ನತ ಮಟ್ಟದ್ದಾದರೂ ಅದಕ್ಕೆ ಚಿಕವೀರನನ್ನು ತಿದ್ದುವ, ಬ್ರಿಟಿಷರನ್ನು ನಿರ್ಣಯಾತ್ಮಕವಾಗಿ ನಿರೋಧಿಸುವ ಶಕ್ತಿ ಇಲ್ಲದಿರುವುದು ತೀರಾ ಕಳವಳಕಾರಿಯಾದ ಅಂಶ. ಇನ್ನು ಲಕ್ಷ್ಮೀನಾರಾಯಣಯ್ಯ, ಉತ್ತಯ್ಯ ತಕ್ಕರ ಒಳ್ಳೆಯತನಕ್ಕೆ ರಾಜಕೀಯ ಶಕ್ತಿ ಇಲ್ಲ. ಹೀಗಾಗಿ ನೈತಿಕ ಎಚ್ಚರ ಪ್ರಬಲ ರಾಜಕೀಯ ಶಕ್ತಿಯಾಗಿ ಪರಿವರ್ತಿತವಾಗದ ಸಂದಿಗ್ಧವೇ ಒಂದು ಸಾಮಾಜಿಕ ವ್ಯವಸ್ಥೆಯ ಮೂಲಭೂತ ದುರಂತಕ್ಕೆ ಕಾರಣ ಎಂದು ಮಾಸ್ತಿ ಸೂಚಿಸುತ್ತಿರಬಹುದು. ಒಳ್ಳೆಯ ಯೋಚನೆ ಸದೃಢ ಕ್ರಿಯೆಯಾಗಿ ಅರಳುವುದು ಹೇಗೆ ಎಂಬ ಮುಕ್ತ ಪ್ರಶ್ನೆಯನ್ನು ಕಾದಂಬರಿಕಾರರು ಓದುಗರ ಮುಂದಿಡುತ್ತಾರೆ.

ಒಳಗಿನ ದೌರ್ಬಲ್ಯ ಹೊರಗಿನ ಆಕ್ರಮಣಕ್ಕೆ ಕಾರಣವಾಗುತ್ತದೆ; ಒಳಿತಿನ ನಿಷ್ಕ್ರಿಯತೆ ಕೆಡುಕಿನ ವಿಜೃಂಭಣೆಗೆ ಕಾರಣವಾಗುತ್ತದೆ ಎಂಬುದನ್ನು ಸೂಚಿಸುವಾಗ ಮಾಸ್ತಿ ವಸಾಹತುಶಾಹೀ ಆಕ್ರಮಣವನ್ನು ಕೇವಲ ಗೃಹೀತವಾಗಿ ಸ್ವೀಕರಿಸದೆ ಬ್ರಿಟಿಷರ ರಾಜಕಾರಣದ ಒಂದು ದಟ್ಟ ಚಿತ್ರವನ್ನೇ ಚಿಕವೀರ ರಾಜೇಂದ್ರದಲ್ಲಿ ಬಿಡಿಸಿಕೊಡುತ್ತಾರೆ. ಈ ಶಕ್ತಿಗಳು ಆಂತರಿಕ ಸಮಸ್ಯೆಗಳನ್ನು ಕೇವಲ ಬಳಸಿಕೊಳ್ಳುವುದಿಲ್ಲ; ಅವುಗಳನ್ನು ಹುಟ್ಟು ಹಾಕುತ್ತವೆ ಮತ್ತು ಅವುಗಳನ್ನು ಪರಿಹರಿಸಲು ಬಂದ ಒಳಿತಿನ ಶಕ್ತಿಗಳ ಸೋಗು ಹಾಕುತ್ತವೆ. ಕಾದಂಬರಿಯ ಸಂದರ್ಭದಲ್ಲೇ ಮೈಸೂರಿನಲ್ಲಿ ಬ್ರಿಟಿಷರು ನಡೆಸಿದ ರಾಜಕೀಯದ ಉದಾಹರಣೆ ಇದೆ. ದೊಡ್ಡ ವೀರರಾಜನೂ ಬ್ರಿಟಿಷರೊಂದಿಗೆ ಸ್ನೇಹವಾಗಿದ್ದವನೇ. ಚಿಕವೀರನು ತನ್ನ ಆಂಗ್ಲ ಸ್ನೇಹಿತರ ಗೌರವಾರ್ಥ ಮನೆರಂಜನೆಯ ಕಾರ್ಯಕ್ರಮ ನಡೆಸಿದಾಗ ಅನೇಕ ನಾಟಕ ಪ್ರದರ್ಶನಗಳು ನಡೆಯುತ್ತವಷ್ಟೆ. ದೊಡ್ಡ ವೀರರಾಜ ಟಿಪ್ಪುವಿಗೆ ವಿರೋಧವಾಗಿ ಆಂಗ್ಲರಿಗೆ ಸಹಾಯ ಮಾಡಿದ ಕಥೆಯನ್ನೇ ನಾಟಕವಾಗಿ ಆಡಲಾಗುತ್ತದೆ. ಆ ಕಥೆಯನ್ನು ಕಾದಂಬರಿಕಾರರು ಹೀಗೆ ಸಂಗ್ರಹಿಸುತ್ತಾರೆ:

"ಟಿಪ್ಪುವಿನ ಕಡೆಯ ಮುಸಲ್ಮಾನ ಫೌಜುದಾರರು ಕೊಡಗಿನ ಜನರನ್ನು ಹಿಂಸಿಸಿದ್ದು; ದೊಡ್ಡ ವೀರರಾಜ ಸೆರೆಯಿಂದ ಬಿಡಿಸಿಕೊಂಡು ಬಂದು ಜನರನ್ನು ಗುಂಪು ಕಟ್ಟಿ ಫೌಜುದಾರರನ್ನ ದುರಿಸಿ ಅವರನ್ನೋಡಿಸಿ ಕೊಡಗನ್ನು ವಶಮಾಡಿಕೊಂಡದ್ದು; ತಲಚೇರಿ ಮಂಗಳೂರಿನಿಂದ ಆಂಗ್ಲರು ದಂಡೆತ್ತಿ ಬಂದಾಗ ಅವರಿಗೆ ಸಹಾಯ ಮಾಡಿದ್ದು; 'ನೀನು ನಮ್ಮ ದೇಶದವನು; ಆಂಗ್ಲರು ಪರದೇಶದವರು; ನಾವಿಬ್ಬರೂ ಅವರನ್ನ ಹೊಡೆದಟ್ಟಬೇಕು. ಗೆದ್ದ ರಾಜ್ಯದಲ್ಲಿ ನಿನಗರ್ಧವನ್ನು ಕೊಡುತ್ತೇನೆ, ಬಾ' ಎಂದು ಟಿಪ್ಪು ವೀರರಾಜನನ್ನು ಕರೆದದ್ದು; ಅವನು 'ಆಂಗ್ಲರು ನನ್ನ ಸ್ನೇಹಿತರಾಗಿದ್ದಾರೆ, ಸಾಲದ್ದಕ್ಕೆ ನೀನು ನನ್ನ ದೇಶವನ್ನು ಹಿಂಸಿಸಿದವನು' ಎಂದು ಅವನ ಆಹ್ವಾನವನ್ನು ನಿರಾಕರಿಸಿದ್ದು; ಆಂಗ್ಲರು ಇದನ್ನು ಮೆಚ್ಚಿ ವೀರರಾಜನಿಗೆ ಗೌರವಾರ್ಥವಾಗಿ ಒಂದು ಕತ್ತಿಯನ್ನು ಕೊಟ್ಟಿದ್ದು; ಇದರ ಕಥೆಯನ್ನು ಆಡಿದರು". (ಪು : ೨೪೧)

ಈ ನಾಟಕವನ್ನು ಆಂಗ್ಲ ಅತಿಥಿಗಳಿರಲಿ ಕೊಡಗಿನ ಜನಗಳೇ *enjoy* ಮಾಡುತ್ತಾರೆ:

"ಕೊನೆಯಲ್ಲಿ, ನಮ್ಮ ದೊಡ್ಡ ವೀರ ರಾಜೇಂದ್ರ ಒಡೆಯರ ಹೆಸರನ್ನು ಹೇಳಿದರೆ ಪರಂಗೀ ಜನ ಟೋಪಿ ತೆಗೆಯುತಾರೆ, ಎಂದಾಗ, ಹೌದು ತೆಗೆಯುತ್ತಾರೆ ಎಂದು ಸುತ್ತಿನ ಜನ ಸಮ್ಮತಿಸಿ ಕೂಗಿದರು. ದುಬಾಷ್ ಇದರ ಅರ್ಥವನ್ನು ರೆಸಿಡೆಂಟ್‌ಗೆ ಹೇಳಿದಾಗ ಅವನು *so, we do saheb* ಎಂದು ಹೇಳಿ ಎದ್ದು ನಿಂತು ತನ್ನ ತಲೆಯ ಮೇಲಿದ್ದ ಟೋಪಿಯನ್ನು ತೆಗೆದು ತಲೆ ಬಾಗಿದನು. ಜೊತೆಯ ಆಂಗ್ಲರೂ ನಿಂತು ಮರ್ಯಾದೆ ತೋರಿದರು. ಜನರ ಸಂತೋಷಕ್ಕೆ ಮಿತಿಯಿಲ್ಲ. ಆಟ ತುಂಬ ಸಂತೋಷದಲ್ಲಿ ಮುಗಿಯಿತು". (ಪು : ೨೪೧–೪೨)

ಅಂದರೆ ಆಂಗ್ಲರು ಆದಾಗಲೇ ಇಂಡಿಯಾದಲ್ಲಿ ತಳವೂರಿದ್ದಾರೆ ಮತ್ತು ಇಲ್ಲಿನ ಪ್ರಾಂತೀಯ ರಾಜಕೀಯದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದಾರೆ. ಆಂಗ್ಲರೊಂದಿಗೆ ಸ್ನೇಹ ಆಂಗ್ಲರೊಂದಿಗಿನ ವಿರಸದಷ್ಟೇ ಪ್ರತಿಷ್ಠೆಯ ವಿಷಯವಾಗಿದೆ. ಆದರೆ ದುರಂತದ ಸಂಗತಿ ಎಂದರೆ ಯಾವ ಕೊಡಗು ಚಿಕವೀರನ ಕಾಲದಲ್ಲಿ ವಸಾಹತುಶಾಹೀ ಸಾಮ್ರಾಜ್ಯಶಾಹೀ ರಾಜಕಾರಣಕ್ಕೆ ಬಲಿಯಾಯಿತೋ ಅಂಥ ರಾಜಕಾರಣವನ್ನು ಚಿಕವೀರನ ಪೂರ್ವಿಕರು ಸಮರ್ಥಿಸಿಕೊಂಡು ಅದರ ಲಾಭ ಪಡೆದುಕೊಂಡು ಬಂದಿದ್ದಾರೆ. ಕೊಡಗು ಚಿಕವೀರನ ಕಾಲಕ್ಕೆ ಕನ್ಯೆಯಾಗಿ ಉಳಿದಿಲ್ಲ. ಈಗ ಚಿಕವೀರ ಒಂದಲ್ಲ ಒಂದು ಕಾರಣಕ್ಕೆ ಆಂಗ್ಲರೊಂದಿಗೆ ವಿರೋಧ ಕಟ್ಟಿಕೊಳ್ಳುತ್ತಿರುವಾಗ ಈ ಚದುರಂಗದಾಟದ ಸಮೀಕರಣಗಳು ಬದಲಾಗುತ್ತಿವೆ ಅಷ್ಟೆ. ಈ ವಿರಸಕ್ಕೆ ಚಿಕವೀರ ಸ್ವತಃ ಎಷ್ಟು ಕಾರಣನೋ ಅವನ ರಾಜಕೀಯ ವಿರೋಧಿಗಳೂ ಅಷ್ಟೇ ಕಾರಣರಾಗಿದ್ದಾರೆ. ಆಂಗ್ಲರು ಇನ್ನೂ ಹೆಚ್ಚಿಗೆ ಕಾರಣರಾಗಿದ್ದಾರೆ. ಏಕೆ? ಏಕೆಂದರೆ ಅವರಿಗೆ ದೊಡ್ಡ ವೀರ ರಾಜೇಂದ್ರನ ಕಾಲದಿಂದಲೂ ಕೊಡಗಿನ ಮೇಲೆ ಕಣ್ಣಿದೆ. ಬ್ರಿಟಿಷರು ಮೈಸೂರನ್ನು ಕಬಳಿಸಿದ ಹಿನ್ನಲೆಯನ್ನೂ, ಕೊಡಗಿನ ಮೇಲೆ ದೃಷ್ಟಿಯಿಟ್ಟದ್ದನ್ನೂ ಕಥೆಯ ಓಟಕ್ಕೆ ಭಂಗ ಬಾರದ ರೀತಿಯಲ್ಲಿ ವಿವರಿಸುವ ಕಾದಂಬರಿಕಾರರು ದೇಶೀಯ ಇತಿಹಾಸದ ಸ್ವರೂಪವನ್ನೇ ಆಂಗ್ಲರು ಬದಲಿಸಿದ ಬಗೆಗೆ ಅಪೂರ್ವ ಒಳನೋಟಗಳನ್ನು ಹೊಳೆಯಿಸುತ್ತಾರೆ. ಟಿಪ್ಪು ಕೊನೆಯ ಸಲ ಸೋತು ಮೈಸೂರು ರಾಜ್ಯದ ಪುನರ್ವ್ಯವಸ್ಥೆಯ ಚರ್ಚೆ ಬಂದಾಗ :

"ಕೊನೆಗೆ ಅದು ಹರಿದದ್ದಾದರೂ ಧರ್ಮ ನ್ಯಾಯಗಳ ದೃಷ್ಟಿಯಿಂದ ಅಲ್ಲ. 'ಟಿಪ್ಪುವನ್ನು ಸೋಲಿಸಬೇಕಾದರೆ ನಿಜಾಮು, ಮರಾಠ, ಅಂಗ್ಲರಿಗೆ ಸಹಾಯ ನೀಡಿದ್ದರು. ಮೈಸೂರನ್ನು ಅರಸರಿಗೆ ಒಪ್ಪಿಸಲಿಲ್ಲವೆಂದರೆ ಟಿಪ್ಪುವಿನ ಕೈಯಲ್ಲಿದ್ದ ಈ ವಿಸ್ತಾರದ ನೆಲವನ್ನು ಅಂಗ್ಲ ಒಬ್ಬನೇ ನುಂಗುವಂತಿಲ್ಲ. ನಿಜಾಮನಿಗೆ ಪಾಲು ಕೊಡಬೇಕು; ಮರಾಠನಿಗೆ ಪಾಲು ಕೊಡಬೇಕು. ಟಿಪ್ಪುವನ್ನು ಸೋಲಿಸಲು ನಾವು ನಿಮಗೆ ಸಹಾಯ ಮಾಡಿದವರು ಎಂದು ಅವರಿಬ್ಬರ ಸೊಕ್ಕು. ಅವರು ಈಗಾಗಲೇ ಪ್ರಬಲರಾಗಿದ್ದಾರೆ. ಮತ್ತಷ್ಟು ನೆಲಕೊಟ್ಟರೆ ಅವರನ್ನು ಹಿಡಿಯುವವರು ಯಾರು? ಒಬ್ಬ ಟಿಪ್ಪುವನ್ನು ಸೋಲಿಸಿ ಇಬ್ಬರು ಟಿಪ್ಪುಗಳನ್ನು ಉತ್ಥಾಪನೆ ಮಾಡಿದಂತಾದೀತು. ಮೈಸೂರು ರಾಜ್ಯವನ್ನು ಹಿಂದೂ ರಾಜನಿಗೆ ಕೊಟ್ಟರೆ ಅಂಗ್ಲರು ಉಪಕಾರ ಮಾಡಿದರು ಎಂದು ಅವನು ಕೃತಜ್ಞತೆಯಿಂದ ನಡೆಯುತ್ತಾನೆ; ನಿಜಾಮನಿಗೆ ಮರಾಠನಿಗೆ ಪ್ರತಿಕಕ್ಷಿಯಾಗಿ ಮೂರನೆಯ ಒಂದು ಶಕ್ತಿಯಾಗಿ ಅವಶ್ಯ ಬಿದ್ದಾಗ ನಮ್ಮ ಪಕ್ಕದಲ್ಲಿ ನಿಲ್ಲುತ್ತಾನೆ' ಹೀಗೆಂಬ ಒಂದು ಯೋಚನೆಯಿಂದ ಅಂಗ್ಲರು ಮೈಸೂರನ್ನು ಹಿಂದೂ ರಾಜನಿಗೆ ಹಿಂದಕ್ಕೆ ಕೊಟ್ಟರು" (ಪು : ೧೦೨)

ಇದು ಅಂಗ್ಲರ ವ್ಯವಹಾರದ ರೀತಿ ನೀತಿ. ಇಲ್ಲಿ ಸ್ನೇಹ ದ್ವೇಷಗಳಿಗೂ ರಾಜಕೀಯ ಲೇಪ ಇಲ್ಲದೇ ಇಲ್ಲ. ಮೂಲತಃ ವ್ಯಾಪಾರಿಗಳಾದ ಈ ಬ್ರಿಟಿಷರು ರಾಜಕೀಯವನ್ನೂ ವ್ಯಾವಹಾರಿಕ ಲಾಭದ ದೃಷ್ಟಿಯಿಂದ ಮಾತ್ರ ಮಾಡುವವರು ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. "ಹೈದರನೊಂದಿಗೆ ಜಗಳ ಮಾಡುವದು ಮೈಸೂರಿನ ಭೂಮಿಯ ಮೇಲೆ ಓಡಾಡಿ, ದೊಡ್ಡ ವೀರರಾಜನೊಂದಿಗೆ ಸಹಕರಿಸುತ್ತ ಕೊಡಗಿನ ಭೂಮಿಯಲ್ಲಿ ಸುತ್ತಿ ಅಂಗ್ಲರು, 'ಮೈಸೂರಾಗಲೀ ಕೊಡಗಿನ ನಾಡಾಗಲೀ ಚೆನ್ನದ ಭೂಮಿ; ಇಂಥ ನೆಲ ಕೈಗೆ ಸಿಕ್ಕುವುದು ಅಪರೂಪದ ಪುಣ್ಯ' ಎಂದು ಮನಗಂಡಿದ್ದರು" ಎಂದು ಕಾದಂಬರಿ ದಾಖಲಿಸುತ್ತದೆ. ಸಹಜವಾಗಿಯೇ, ಸಾಂದರ್ಭಿಕ ಕಾರಣಗಳಿಗಾಗಿ ಮೈಸೂರನ್ನು ಅದರ ಅರಸರ ಕೈಗೆ ಒಪ್ಪಿಸಿದ ಮೇಲೂ "ಅಯ್ಯೋ ಇಂಥ ನೆಲವನ್ನು ನಾವು ಸ್ವಂತಕ್ಕಿಟ್ಟುಕೊಳ್ಳದೆ ಹಿಂದಕ್ಕೆ ಕೊಟ್ಟೆವೇ" ಎಂದು ದುಃಖ ಪಡುತ್ತಾರೆ! ಮತ್ತೆ ಅವಕಾಶ ಸಿಕ್ಕಾಗ ಕೈ ಬಿಡುವುದಿಲ್ಲ: " ಆ ಮೇಲೆ ಇಪ್ಪತ್ತು ವರುಷದಲ್ಲಿ ಟಿಪ್ಪುವಿನ ಸೋಲಿನ ಸಂದರ್ಭದ ಕಾವು ಆರಿ ಅಂಗ್ಲ ಮನೋಧರ್ಮ ಮತ್ತಷ್ಟು ಬೇರೆಯಾಯಿತು. ಆಗ ಪ್ರತಿಕಕ್ಷಿಯಾಗಿದ್ದ ಮರಾಠ ಈಗ ಮಾತಿಗೆ ಬಿದ್ದಿದ್ದ; ಒಬ್ಬಂಟಿಯಾದ ನಿಜಾಮ ಮರಾಠನ ಗತಿ ತನಗೂ ಬಂದೀತೆಂದು ಭೀತಿಯಲ್ಲಿದ್ದ. ಹೆಬ್ಬಾವಿನ ಮನೋಧರ್ಮದ ಅಂಗ್ಲ ಅಧಿಕಾರಿಗಳು ಸಮಯ ಬಂದೀತೇ ಎಂದು ಕಾದರು; ಮೈಸೂರಿನ ಅರಸನ ಅಧಿಕಾರಿಗಳ ಮುಟ್ಠಾಳತನದಿಂದ ರಾಜ್ಯದಲ್ಲಿ ಗೊಂದಲ ಎದ್ದಾಗ ಅದನ್ನೇ ನೆಪ ಮಾಡಿಕೊಂಡರು; ಅರಸನನ್ನು ಗಾದಿಯಿಂದಿಳಿಸಿದರು; ಮೈಸೂರನ್ನು ಕಬಳಿಸಿದರು" (ಪು : ೧೦೨–೧೦೩)

ಬ್ರಿಟಿಷರು ಮೈಸೂರನ್ನಾಗಲೀ, ಕೊಡಗನ್ನಾಗಲೀ ಅಥವಾ ಇನ್ನಾವುದೇ ದೇಶೀಯ ಸಂಸ್ಥಾನವನ್ನಾಗಲೀ ಕಬಳಿಸಿದ್ದು ಒಂದು ರಾಜಕೀಯ ಆಕಸ್ಮಿಕವೇನಲ್ಲ. ಅದರ ಹಿಂದೆ ಒಂದು ದೊಡ್ಡ ಹುನ್ನಾರವೇ ಇದೆ. ಅಷ್ಟೇಕೆ ಏಷ್ಯಾ, ಆಫ್ರಿಕಾ ಖಂಡಗಳಿಗೆ ವ್ಯವಸ್ಥೆಯನ್ನು ನಾಗರಿಕತೆಯನ್ನೂ ಕೊಂಡೊಯ್ಯುವ ಜವಾಬ್ದಾರಿಯನ್ನು ದೇವರು ತಮಗೆ ವಹಿಸಿದ್ದಾನೆಂದೇ ಅವರ ಅಂಬೋಣವಾಗಿತ್ತು. ತಮ್ಮ ಕುಟಿಲ ರಾಜನೀತಿಗೆ ನೈತಿಕ ಸಮರ್ಥನೆಯೊಂದನ್ನು ಸೂಚಿಸಲು

ಅವರು *white man's burden theory* ಯೊಂದನ್ನೇ ಮುಂದು ಮಾಡುತ್ತಿದ್ದರು. ಎಂಥ ತೀವ್ರತೆಯಿಂದ ಈ ಸಿದ್ಧಾಂತವನ್ನು ಅವರು ಪ್ರಚಾರ ಮಾಡುತ್ತಿದ್ದರೆಂದರೆ ಸ್ವತಃ ಅನೇಕ ಬ್ರಿಟಿಷ್ ಅಧಿಕಾರಿಗಳೇ ಅದನ್ನು ಸತ್ಯವೆಂದು ನಂಬಿದ್ದರು! *ಚಿಕವೀರ ರಾಜೇಂದ್ರ* ಕಾದಂಬರಿಯಲ್ಲಿ ಬ್ರಿಟಿಷ್ ಅಧಿಕಾರಿಗಳ ನಡುವಣ ದೀರ್ಘ ಪತ್ರವ್ಯವಹಾರಗಳಿಂದ ಈ ಸಿದ್ಧಾಂತದ ಸ್ಥೂಲ ಚಿತ್ರ ನಮಗೆ ದೊರೆಯುತ್ತದೆ. ಮಾದರಿಗಾಗಿ ಎಂಬಂತೆ ಈ ಎರಡು ಪ್ಯಾರಾಗಳನ್ನು ಗಮನಿಸಬಹುದು.

> "ಈ ಮೊದಲೇ ತಿಳಿದ ಸಂಗತಿಗಳಿಂದ ಮತ್ತು ಈ ಸಂಗತಿಯಿಂದ ನಮಗೆ ತೋರುತ್ತಿರುವುದು, ಈ ದೇಶದ ಜನ ತಮ್ಮ ವ್ಯವಹಾರವನ್ನು ತಾವು ನಡೆಸಿಕೊಳ್ಳಲು ಸಮರ್ಥರಲ್ಲ ಎನ್ನುವುದು. ಹತ್ತು ವಿಷಯಕ್ಕೆ ಇವರು ಅನಾಗರಿಕರು, ವನ್ಯ ಜೀವಿಗಳಂತೆ ತಪ್ಪಿ ನಡೆಯುವವರು, ಕಚ್ಚಿ ಕಾದುವರು. ಇನ್ನು ಹತ್ತು ವಿಷಯಕ್ಕೆ ಇವರು ಹಸು ಮಕ್ಕಳು; ಹಸು ಮಕ್ಕಳಂತೆ ಅಸಹಾಯರಾಗಿರುವರು. ಅರಸನಾದವನು ತಪ್ಪಿ ನಡೆದರೆ ಅಧಿಕಾರಿಗಳು ಅವನನ್ನು ಎದುರಿಸುವುದಿಲ್ಲ. ಈ ಸ್ಥಿತಿಯಲ್ಲಿರುವ ಜನತೆ ಮುಂದುವರಿಯುವದು ಸಾಧ್ಯ ಅಲ್ಲ...
>
> "...ಈ ವಿಷಯವನ್ನು ಕುರಿತು ಆಲೋಚಿಸಿದಷ್ಟೂ ನಮಗೆ ಅಧಿಕಾಧಿಕವಾಗಿ ಒಂದು ಸತ್ಯಾಂಶ ಸ್ಪಷ್ಟವಾಗುತ್ತಿದೆ. ತಿಳಿವಳಿಕೆ ಸಾಲದ ಈ ಜನರನ್ನು ಆಂಗ್ಲ ಜನ ತನ್ನ ರೆಕ್ಕೆಯೊಳಕ್ಕೆ ಕರೆದುಕೊಂಡು ಹೋಗಿ ರಕ್ಷಿಸಬೇಕು, ಬೆಳೆಸಿ ದಕ್ಷರನ್ನಾಗಿ ಮಾಡಬೇಕು ಎನ್ನುವುದು ದೈವ ಸಂಕಲ್ಪ ಇರಬೇಕು. ಇದುವರೆಗೆ ನಡೆದಿರುವ ಇತಿಹಾಸದಿಂದಲೇ ಈ ಸಿದ್ಧಾಂತ ಉದಯವಾಗುತ್ತದೆ. ಇಂಡಿಯಾ ದೇಶದ ಜನ ಎಲ್ಲ ಕಡೆಯಲ್ಲಿಯೂ ಪಕ್ಷ ಪ್ರತಿಪಕ್ಷಗಳಾಗಿ ಕಾದಾಡಿ ಒಂದಾದ ಮೇಲೆ ಒಂದು ಪ್ರಾಂತವನ್ನು ನಮ್ಮ ಕೈಗೆ ಒಪ್ಪಿಸಿಕೊಟ್ಟಿದ್ದಾರೆ. ನಾವು ಆಡಳಿತವನ್ನು ಕೈಗೆ ತೆಗೆದುಕೊಳ್ಳುವವರೆಗೆ ಯಾವ ಪ್ರಾಂತ್ಯದಲ್ಲೂ ಸೌಖ್ಯ ಇಲ್ಲ, ಕ್ಷೇಮ ಇಲ್ಲ. ನಾವು ಆಡಳಿತವನ್ನು ವಹಿಸಿಕೊಂಡ ಮೇಲೆ ಅಂಥ ಎಲ್ಲ ಕಡೆಯೂ ಜನ ಕ್ಷೇಮದಿಂದಿದ್ದಾರೆ, ಸಮಾಧಾನವಾಗಿ ಬಾಳುತ್ತಿದ್ದಾರೆ, ಆಂಗ್ಲರೇ ರಾಜರಾಗಬೇಕೆಂದು ಬಯಸುತ್ತಾರೆ. ಈ ಮಾತಿಗೆ ಉತ್ತರ ಭಾರತವೆಲ್ಲ ನಿದರ್ಶನ. ದಕ್ಷಿಣ ಭಾರತದಲ್ಲಿ ಕರ್ನಾಟಕ, ಪಶ್ಚಿಮ ಸಮುದ್ರತೀರ, ಮೈಸೂರು, ಹಾಗೆಯೇ ಈ ತತ್ತ್ವವನ್ನು ನಿರ್ಧರಿಸುತ್ತವೆ. ತುಂಬ ಈಚಿನ ನಿದರ್ಶನ ಮಹಾರಾಷ್ಟ್ರದ್ದು. ಒಟ್ಟು ಭರತವರ್ಷವೇ ನಮ್ಮ ಕೈಗೆ ಬಂದು ದಕ್ಷ ಮತ್ತು ನೀತಿ ಬದ್ಧ ಆದ ಆಡಳಿತದ ಸುಖವನ್ನನುಭವಿಸಿ ಮುಂಬರಿವಿನ ದಾರಿಯನ್ನು ತಿಳಿಯಬೇಕಾಗಿದೆ ಎನ್ನುವುದು ನನ್ನ ಮನಸ್ಸಿಗೆ ಸುಸಮ್ಮಥಿತ ಸುನಿಷ್ಕೃಷ್ಟ ಸಿದ್ಧಾಂತ ಆಗಿದೆ" (ಪು. ೨೩೦–೨೩೧)

ಕೊಡಗನ್ನು ಆಕ್ರಮಿಸಿಕೊಳ್ಳುವ ಮುನ್ನ ಈ ಬ್ರಿಟಿಷ್ ಅಧಿಕಾರಿಗಳು ಇದೇ ಸಿದ್ಧಾಂತವನ್ನು ಉಪಯೋಗಿಸಿಕೊಳ್ಳುತ್ತಾರೆ. ಆದರೆ ವಾಸ್ತವವಾಗಿ ಬ್ರಿಟಿಷರಿಗೆ ಕೊಡಗಿನ ಮೇಲೆ ಬಹಳ ಹಿಂದಿನಿಂದಲೇ ಕಣ್ಣಿತ್ತು ಎಂಬುದನ್ನು ಕಾದಂಬರಿಕಾರರು ಸ್ಪಷ್ಟ ಪಡಿಸುತ್ತಾರೆ. ಬ್ರಿಟಿಷರ ನಿಲುವಿಗೆ ತದ್ವಿರುದ್ಧವಾದ ನಿಲುವನ್ನು ಮಂಡಿಸಿ ವಸಾಹತುಶಾಹೀ ಸಾಮ್ರಾಜ್ಯಶಾಹಿಯ ಸ್ವಘೋಷಿತ ಸಿದ್ಧಾಂತದ ಖೊಟ್ಟಿತನವನ್ನು ಬಯಲಿಗೆಳೆಯುತ್ತಾರೆ:

> "ಕೊಡಗಿನ ನೆಲ ಒಂದರ್ಥಕ್ಕೆ ಈ ಜನರಿಗೆ ಮೈಸೂರಿಗಿಂತ ಚೆನ್ನ. ಕೊಡಗಿನ ಮಲೆ ವನ, ಹೊಳೆ ಕಣಿವೆ, ಗದ್ದೆ ತೋಟ, ಅದನ್ನು ಅವರ ಬೈಬಲ್ಲಿನ ಗಾರ್ಡನ್ ಆಫ್ ಈಡನ್ ನಂದನವನಕ್ಕೆ ಸಮನಾಗಿ ಮಾಡಿದ್ದುವು. ತಮ್ಮ ದ್ವೀಪದ ಸ್ಕಾಟ್ಲೆಂಡ್ ಪ್ರಾಂತದ ಪರ್ವತ ಪ್ರದೇಶ ತುಂಬ ಸುಂದರ ಎನ್ನುವುದು ಆಂಗ್ಲರ ಒಂದು ತಿಳುವಳಿಕೆ.

ಕೊಡಗಿನ ಚೆಲುವು ಸ್ಕಾಟ್ಲೆಂಡಿನ ಪರ್ವತ ಪ್ರದೇಶದ ಚೆಲುವಿಗೆ ಒಂದು ಕೈ ಮೇಲು ಎಂಬಂತಿತ್ತು. ಮೈಸೂರನ್ನು ಕಬಳಿಸಿದಂತೆ ಕೊಡಗನ್ನು ಕಬಳಿಸುವುದಕ್ಕೆ ಬಹು ಜನ ಆಂಗ್ಲರ ಬಾಯಿ ನೀರೂರುತ್ತಿತ್ತು. ಅರಸನೊಂದಿಗೆ ವಿವಾದಗಳು ಬೆಳೆಯಲಿ ಎಂದು ಇಂಥವರಿಗೆ ಆಸೆ. ಈ ಮೊದಲು ಬಂದಿದ್ದ ಹಲವು ವಿವಾದ ಊಟಕ್ಕೆ ಸಿದ್ಧವಾಗುತ್ತಿದ್ದ ಕಜ್ಜಾಯದ ನರುಗಂಪಿನಂತೆ ಇವರ ಆಸೆಯನ್ನು ಕೆರಳಿಸಿದ್ದವು: ಅರಕಲಗೂಡಿನಿಂದ ಬಂದ ದೂರಿನ ಪತ್ರಗಳಿಂದ ಈ ಜನಕ್ಕೆ ತುಂಬ ಸಂತೋಷವಾಯಿತು.'' (ಪು : ೧೦೩)

ಬ್ರಿಟಿಷರು ತಮ್ಮ ನಿಷ್ಪಕ್ಷಪಾತ ನಡವಳಿಕೆ, ನ್ಯಾಯ ಪರಿಪಾಲನೆ, ಕೇವಲ ತಪ್ಪನ್ನು ಸರಿಪಡಿಸುವ ಋಜುತ್ವ ಇತ್ಯಾದಿಗಳ ಬಗ್ಗೆ ಸದಾ ಬಡಾಯಿ ಕೊಚ್ಚಿಕೊಳ್ಳುತ್ತಾರಷ್ಟೆ. ಚಿಕವೀರನನ್ನು ಪದಚ್ಯುತಗೊಳಿಸುವ ಮೊದಲೇ ಕೊಡಗಿನಲ್ಲಿ ತಮ್ಮ ಆಳ್ವಿಕೆಯನ್ನು ಹೇರುವ ನಿರ್ಧಾರ ಮಾಡಿರುತ್ತಾರೆ! ಮೈಸೂರು ರೆಸಿಡೆಂಟನ ಪತ್ರದ ಕೆಲವು ಸಾಲುಗಳು:

''ಅಂತೂ ಯಾವ ದೃಷ್ಟಿಯಿಂದ ನೋಡಿದರೂ ಈ ಅರಸನನ್ನು ಗಾದಿಯಿಂದ ಇಳಿಸುವುದು ಸರಿ ಎನ್ನುವುದು ಮೊದಲಾಗಿ ನಿಷ್ಪನ್ನವಾಗುವದು ನಿಶ್ಚಯ. ಇದಾದ ಮೇಲೆ ಬರುವ ಪ್ರಶ್ನೆ, ನಾನು ತಾನು ರಾಜನಾಗಬೇಕು ಎಂದು ಬಯಸುವ ಜನರಲ್ಲಿ ಯಾರನ್ನಾದರೂ ಗಾದಿಯ ಮೇಲೆ ಇರಿಸಬಹುದೇ ಎನ್ನುವುದು. ಹೀಗೆ ಹೊಸದಾಗಿ ಗಾದಿಯ ಮೇಲೆ ಕೂಡಿಸಬಹುದಾದ ವ್ಯಕ್ತಿ ಮೈಸೂರಿನ ಗಾದಿಯ ಮೇಲೆ ನಾವು ಕೂಡಿಸಿದ ವ್ಯಕ್ತಿಗಿಂತ ಚೆನ್ನವಾಗಿ ನಡೆದುಕೊಂಡಾನು ಎಂದು ನಿರೀಕ್ಷಿಸಲು ತಕ್ಕ ಆಧಾರವಿಲ್ಲ. ಹಾಗೆ ಒಬ್ಬನನ್ನು ಗಾದಿಯ ಮೇಲೆ ಕೂಡಿಸಿದರೂ ದೇಶ ಪುನಃ ಕೋಟಲೆಗೆ ಸಿಕ್ಕಿದ್ದನ್ನು ನೋಡಿ ನಾವು ಪುನಃ ಮರುಕದಿಂದ ಅದನ್ನು ಕೈಗೆ ತೆಗೆದುಕೊಳ್ಳಬೇಕಾಗಿ ಬಂದೀತೆಂದು ತೋರುತ್ತದೆ'' (ಪು : ೨೩೩)

ಈ ದೃಷ್ಟಿಯಿಂದ ನೋಡಿದರೆ ಚಿಕವೀರನ ಕೊಡಗಿನ ''ವಿಧಿ'' ಪೂರ್ವನಿಶ್ಚಿತವೇ ಆಗಿದೆ. ಅಂದರೆ ಸೂರ್ಯ ಮುಳುಗದ ಚಕ್ರಾಧಿಪತ್ಯದ ಎದುರಿನಲ್ಲಿ ಸಣ್ಣ ಪುಟ್ಟ ರಾಜರ ರಾಜ್ಯಗಳ ಅಭೀಪ್ಸೆಗಳಿಗೆ ಏನೂ ಅರ್ಥವಿಲ್ಲ. ಆದರೆ ಇದನ್ನು ಎದುರಿಸುವಲ್ಲಿ ಚಿಕವೀರನಾಗಲೀ, ಕೊಡಗಾಗಲೀ ತಮ್ಮ ಘನತೆಯನ್ನು ಮರೆಯುವುದಿಲ್ಲ ಎಂಬುದೇ ಬಹು ದೊಡ್ಡ ದುರಂತ. ಚಿಕವೀರ ಬ್ರಿಟಿಷರ ಆಗಮನಕ್ಕಿಂತ ಮೊದಲೇ ತನ್ನವರಿಂದಲೇ ಪದಚ್ಯುತನಾಗಿರುತ್ತಾನೆ! ಅವನನ್ನು ಪದಚ್ಯುತಗೊಳಿಸಿದವರಿಗೆ ಸ್ವತಃ ಸಿಂಹಾಸನದ ಮೇಲೆ ಆಸೆ ಇಲ್ಲ; ಕೊಡಗಿನ ಜನತೆಯನ್ನು ದುಷ್ಟ ಅರಸನ ಆಳ್ವಿಕೆಯಿಂದ ಪಾರು ಮಾಡುವುದು ಅವರಿಗೆ ಮುಖ್ಯವಾಗಿರುತ್ತದೆ. ಚಿಕವೀರನ ಕೈಯಿಂದ ತಪ್ಪಿದ ಕೊಡಗು ಬ್ರಿಟಿಷರಿಗೆ ಸೇರಬಾರದೆಂಬುದೇ ಅವರ ಅಪೇಕ್ಷೆ. ಅದಕ್ಕಾಗಿ ಪ್ರಾಮಾಣಿಕ ಪ್ರಯತ್ನವನ್ನೂ ಮಾಡುತ್ತಾರೆ. ಆದರೆ ಸಂದರ್ಭ ಅವರಿಗೆ ಅನುಕೂಲವಾಗಿಲ್ಲ. ಅಲ್ಲದೆ ಅವರ ಸಾತ್ತ್ವಿಕ ರಾಜಕಾರಣ ಬ್ರಿಟಿಷರ ಕುಟಿಲ ರಾಜಕಾರಣವನ್ನು ಸರಿಗಟ್ಟಲಾರದು! ಆದರೆ ಅವರ ನಿಲುವು ಬ್ರಿಟಿಷರ ನಿಲುವಿನ ನೈತಿಕತೆಯನ್ನು ಪ್ರಶ್ನಿಸುವಂಥದ್ದು; ಬ್ರಿಟಿಷರ ಕ್ರಿಯೆಗಳ ಲಾಲಸೆಗಳನ್ನು ಬಯಲಿಗೆಳೆಯುವಂಥದ್ದು. ಲಕ್ಷ್ಮೀನಾರಾಯಣಯ್ಯ ಪಾರ್ಶಣ್ಣನಿಗೆ ಹೇಳುವ ಮಾತುಗಳನ್ನು ಕೇಳಿ:

''ಅರಸರು ಮಾಡಬಾರದ ಅಕೃತ್ಯವನ್ನು ಮಾಡಿ ಬಿಟ್ಟರು ಪಾರ್ಶಣ್ಣ. ಇನ್ನಿವರನ್ನ ನಾವು ಅರಸರಾಗಿ ಉಳಿಸಿಕೊಳ್ಳುತ್ತೇವೆಂದರೆ ಜನ ಒಪ್ಪುವುದಿಲ್ಲ. ಇವರ ಮೇಲೆ ಕೋಪದಿಂದ

ಬಿಳೀ ಜನ ಬೇರೆ ಸೇನೆ ಶರತಾ ಇದ್ದಾರೆ. ಹೊರಗಿನ ಸೇನೆ ನಾಡ ಮೇಲೆ ಬರೋದು ಒಳ್ಳೆಯದಲ್ಲ. ಅರಸರನ್ನೇ ಬೇಡಬೇಕು: ಗಾದಿ ಬಿಟ್ಟು ಬೇರೆಯವರನ್ನ ದೊರೆ ಮಾಡಿ ಎಂತ. ಬಿಳೀ ಜನವನ್ನ ಗಡಿ ಅಚೆ ನಿಲ್ಲಿಸುವುದಕ್ಕೆ ನಮ್ಮ ಸೈನ್ಯ ಕಳಿಸಬೇಕು. ಬೋಪಣ್ಣ ನಾನು ಹೀಗೆ ಯೋಚಿಸಿದ್ದೇವೆ. ಪೇಟೆಯ ಮಂದಿ ಇದಕ್ಕೆ ಅನುಕೂಲವಾಗಿ ನಡೆದುಕೊಳ್ಳಿ''. (ಪು : ೪೦೭)

ಬೋಪಣ್ಣ ಈ ಕಾದಂಬರಿಯ ಉಜ್ವಲ ಪಾತ್ರಗಳಲ್ಲಿ ಒಂದು. ಲಕ್ಷ್ಮೀನಾರಾಯಣಯ್ಯ ತನಗೇ ಸ್ಪಷ್ಟಪಡಿಸಿಕೊಳ್ಳುವ ಹಾಗೆ ದಾಕ್ಷಿಣ್ಯ ಪ್ರಕೃತಿಯವನಾದರೆ ಬೋಪಣ್ಣ ಯಾವತ್ತೂ ನ್ಯಾಯ ಪಕ್ಷಪಾತಿ. ಅವನಿಗೆ ಇರುವುದು ವ್ಯಕ್ತಿನಿಷ್ಠೆಯಲ್ಲ. ಸಿಂಹಾಸನದ ನಿಷ್ಠೆ. ಆದ್ದರಿಂದ ಚಿಕವೀರ ಕೆಳಗಿಳಿಯುವುದೂ ಬೇರೆ ಯಾರಾದರೂ ಅದರ ಮೇಲೆ ಕುಳಿತುಕೊಳ್ಳುವುದೂ ಅವನಿಗೆ ಅಂಥ ಮಹತ್ವದ ವಿಷಯವಲ್ಲ. ಆದರೆ ಸಿಂಹಾಸನದ ಮೇಲೆ ಕುಳಿತುಕೊಳ್ಳುವವನು ಯೋಗ್ಯನಾಗಿರಬೇಕು ಎಂಬುದು ಅವನ ಖಡಕ್ಕಾದ ನಿಲುವು. ತಾನು ಸಿಂಹಾಸನವನ್ನು ಏರುವವನಲ್ಲ, ಕಾಯುವವನು ಎಂದು ಅವನು ಅನೇಕ ಬಾರಿ ಸ್ಪಷ್ಟ ಪಡಿಸುತ್ತಾನೆ. ಈ ನಿಲುವು ಕೂಡಾ ಬ್ರಿಟಿಷರ ಅಧಿಕಾರ ಲಾಲಸೆಗೆ ಒಂದು ಮುಖ್ಯವಾದ ಹೋಲಿಕೆಯಾಗಿ ಕಾದಂಬರಿಯಲ್ಲಿ ಧ್ವನಿತವಾಗುತ್ತದೆ. ಆದರೆ ಇವನ ಉಗ್ರ ದೇಶಾಭಿಮಾನ ಕೂಡಾ ಬ್ರಿಟಿಷರ ಕುಟಿಲತೆಯನ್ನು ಭೇದಿಸಿಕೊಂಡು ಹೋಗುವಷ್ಟು ಶಕ್ತಿಯುತವಾಗಿಲ್ಲ. ಬೋಪಣ್ಣ ಏನೇ ಮಾಡಿದರೂ ಬ್ರಿಟಿಷರ ಹಸ್ತಕ್ಷೇಪವನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲ. ಇದರರ್ಥ ಇಷ್ಟೆ. ಒಂದು ಬೃಹತ್ ಸಾಮ್ರಾಜ್ಯದ ಮಿಲಿಟರಿ ಸಾಮರ್ಥ್ಯ ಮತ್ತು ತಂತ್ರಗಾರಿಕೆಯ ವಿರುದ್ಧ ಸ್ಥಳೀಯ ಪ್ರತಿಭಟನೆ ಸಾಂಕೇತಿಕವಾಗಿ ಎಷ್ಟೇ ಗಹನವಾಗಿದ್ದರೂ ಅದು ತನ್ನ ವಿರೋಧಿಯನ್ನು ಸದೆ ಬಡಿವಷ್ಟು ಗಟ್ಟಿಯಾಗಿಲ್ಲ. ಇದೊಂದು ಅಸಮ ಬಲ ಹೋರಾಟ. ಇನ್ನು ಸ್ಥಳೀಯ ಶಕ್ತಿಗಳು ಒಂದಾಗಲು ದೇಶೀಯ ಸಂಸ್ಥಾನಗಳ ನಡುವಣ ಮತ್ತು ಒಳಗಣ ಪರಿಸ್ಥಿತಿಗಳು ಪೂರಕವಾಗಿಲ್ಲ. ಮತ್ತು ಅವು ಒಂದಾಗದಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದೇ ಆಂಗ್ಲ ರಾಜಕಾರಣದ ಪ್ರಮುಖ ನೀತಿಯಾಗಿದೆ. ಈ ಕ್ರೌರ್ಯದ ಎದುರು ಗೌರಮ್ಮಾಜಿಯ ದೊಡ್ಡತನ, ಲಕ್ಷ್ಮೀನಾರಾಯಣಯ್ಯನ ಸ್ವಾಮಿನಿಷ್ಠೆ, ಬೋಪಣ್ಣನ ದೇಶಾಭಿಮಾನ ಇಂಥ ಗುಣಗಳು ಅಪ್ರಸ್ತುತವೂ, ಬಲಹೀನವೂ ಆಗುವುದು ಕೊಡಗು ಚರಿತ್ರೆಯ ದೊಡ್ಡ ದುರಂತ. ಬೋಪಣ್ಣ ಲಕ್ಷ್ಮೀನಾರಾಯಣಯ್ಯನಿಗೆ ಹೇಳುವ ಮಾತುಗಳನ್ನು ಕೇಳಿ:

"ನೋಡಿ ಅಯ್ಯನವರೆ ನಮ್ಮ ನಿಮ್ಮ ಮನಸ್ಸು ಒಂದು; ಅದರೆ ನಮ್ಮ ಎಣಿಕೆ ಒಂದಲ್ಲ. ನೀವು ತಿಳಿದಿದ್ದೀರಿ ಕೊಡಗು ಅರಸರದು ಅಂತ. ನಾನು ಹೇಳೋದು ಕೊಡಗು ನಮ್ಮದು ಅಂತ. ಮರ್ಯಾದೆಗೆ ನಿಮ್ಮಂಥವರು ಹೇಳೋ ಮಾತ ನಂಬಿಕೊಂಡು, ಅರಸರಾದವರು ಕೊಡಗು ತಮ್ಮದು ಅಂತ ಕುಣಿದರು. ಆ ಕುಣಿತ ಇನ್ನು ಮುಗಿಯಿತು. ಇನ್ನು ಈ ಅರಸಾಗಿದ್ದವರು ಅರ್ಧ ಇಟ್ಕೋ ಅರ್ಧ ಬಿಟ್ಕೋ, ಬೋಪಣ್ಣನಿಗೆ ಹೇಳು, ಅಂತ ಹೇಳಬೇಕಾಗಿಲ್ಲ. ಇವರು ಹೇಳಲಿಲ್ಲ ಅಂತ ನಾನು ನಮ್ಮ ಜನದ ಗತಿ ಏನು ಅಂತ ನೋಡದೆ ಇರುವುದಿಲ್ಲ." (ಪು: 460).

ಆಡಳಿತ ವ್ಯವಸ್ಥೆ ಬಗ್ಗೆ, ಅಧಿಕಾರದ ಅಗತ್ಯದ ಬಗ್ಗೆ, ಮನುಷ್ಯ ತನ್ನ ಸಾಮೂಹಿಕ ಬದುಕಿನ ಚೆಂದಕ್ಕಾಗಿ ಮತ್ತು ಶಿಸ್ತಿಗಾಗಿ ರೂಡಿಸಿಕೊಂಡ ಸಾಮಾಜಿಕ ಸಂಸ್ಥೆಗಳು ಮತ್ತು

ರಾಜಕೀಯ ಸಂಸ್ಥೆಗಳು ಅವುಗಳ ನಿಜವಾದ ಅಭಿವ್ಯಕ್ತಿಯಲ್ಲಿ ಪಡೆದುಕೊಳ್ಳುವ ದುರಂತದ ತಿರುವುಗಳ ಬಗ್ಗೆ ಮಾಸ್ತಿ ಹಲವು ರೀತಿಗಳಲ್ಲಿ ನಮ್ಮ ಗಮನ ಸೆಳೆದಿದ್ದಾರಷ್ಟೆ. ಅಂದರೆ ಸಿಂಹಾಸನ, ರಾಜತ್ವ, ಆಡಳಿತ ಸೂತ್ರ, ಅಧಿಕಾರ ಕೇಂದ್ರಗಳನ್ನು ವಿವಿಧ ಕೋನಗಳಲ್ಲಿ ನೋಡಿ – ಚಿಕವೀರ, ಚೆನ್ನಬಸವಯ್ಯ, ಕುಂಟ ಬಸವ, ಲಕ್ಷ್ಮೀನಾರಾಯಣಯ್ಯ, ಭಗವತಿ, ಬ್ರಿಟಿಷ್ ಅಧಿಕಾರಿಗಳು, ಗೌರಮ್ಮಾಜಿ, ವರ್ತಕರು, ಸೈನಿಕರು, ಸಾಮಾನ್ಯ ಪ್ರಜೆಗಳು ಇವರ ದೃಷ್ಟಿಕೋನಗಳಲ್ಲಿ ನೋಡಿ–ವ್ಯವಸ್ಥೆಯ ಕರಾಳ ಮುಖಗಳ ದರ್ಶನ ಮಾಡಿಸಿದ್ದಾರಷ್ಟೆ. ಈ ದೃಷ್ಟಿಕೋನಗಳಿಗೆ, ಮುಖ್ಯವಾಗಿ ವಸಾಹತುಶಾಹಿ ದೃಷ್ಟಿಕೋನಕ್ಕೆ ಸಂಪೂರ್ಣ ಭಿನ್ನವಾದ ದೃಷ್ಟಿಕೋನವೊಂದನ್ನು ಬೋಪಣ್ಣನ ಮೂಲಕ ಮಂಡಿಸಿ ಅಧಿಕಾರ ಲಾಲಸೆಯ ಪ್ರೇರಣೆಯ ವಿಕೃತಿಗಳಿಗೆ ಒಂದು *corrective* ನ್ನು ಸೂಚಿಸುವ ಪ್ರಯತ್ನ ಮಾಡುತ್ತಾರೆ. ಕೊಡಗು ರಾಜ್ಯದ ವೈಶಿಷ್ಟ್ಯವೆಂದರೆ ಕೊಡವರು ಸಿಂಹಾಸನ ಏರಲಿಲ್ಲ. ವೀರಶೈವರು ಅರಸರಾದರು; ಬ್ರಾಹ್ಮಣರು ಪ್ರಧಾನರಾದರು. ಕೊಡವರು ಸೈನಿಕರು, ಸೇನಾಧಿಪತಿಗಳಾದರು. ಚಿಕವೀರನ ಪದಚ್ಯುತಿಯಾಗಿ ಮುಂದಿನ ಅರಸ ಯಾರಾಗಬೇಕೆಂಬ ಜಿಜ್ಞಾಸೆ ಶೂನ್ಯವೊಂದನ್ನು ಸೃಷ್ಟಿಸಿದಾಗ ಲಕ್ಷ್ಮೀನಾರಾಯಣಯ್ಯ ಬೋಪಣ್ಣನೇ ಗಾದಿ ಮೇಲೆ ಕೂಡುವಂತೆ ಪ್ರಾರ್ಥಿಸುತ್ತಾನೆ. ಬೋಪಣ್ಣನ ಪ್ರತಿಕ್ರಿಯೆ:

> ಬೋಪಣ್ಣ ಲಕ್ಷ್ಮೀನಾರಾಯಣಯ್ಯನ ಕಡೆ ಬೆಚ್ಚಿ ನೋಡಿದನು. ಅವನು ಈ ಸೂಚನೆಯನ್ನು ನಿರೀಕ್ಷಿಸಿರಲಿಲ್ಲ. ಈ ಬ್ರಾಹ್ಮಣ ಈ ಮಾತನ್ನು ವ್ಯಂಗ್ಯದಲ್ಲಿ ಏನಾದರೂ ಆಡುತ್ತಿದ್ದಾನೋ ಎಂದು ಅವನು ಕ್ಷಣಮಾತ್ರ ಶಂಕಿಸಿದನು. ಲಕ್ಷ್ಮೀನಾರಾಯಣಯ್ಯನ ದೃಷ್ಟಿಯಲ್ಲಿ ಕುಟಿಲ ಇರಲಿಲ್ಲ. ಅವನು ಈ ಸೂಚನೆಯನ್ನು ಶುದ್ಧ ಮನಸ್ಸಿನಿಂದ ಮಾಡಿರುವುದು ಕಂಡಿತು. ಬೋಪಣ್ಣ ಸಮಾಧಾನಗೊಂಡನು. ಅವನ ಮುಖ ಪ್ರಸನ್ನವಾಯಿತು. ಅವನು ನಕ್ಕನು: 'ಒಳ್ಳೇ ಮಾತು ಹೇಳಿದಿರಿ ಅಯ್ಯನವರೇ, ಕೊಡಗ ಇಂಥ ಕೆಲಸ ಮಾಡಿಯಾನೇ? ಬೇರೆ ಏನೂ ಇಲ್ಲ ಎನ್ನಿ. ದೊರೇನ ಬದಿಗಿರಿಸಿದವರು ಗಾದೀ ಮೇಲೆ ಬೇರೆಯೋರನ್ನ ಕೂಡಿಸಿದರೆ, ಒಳ್ಳೇದಕ್ಕೆ ಮಾಡಿದೆವು ಅಂತ ಸಾಧಿಸಬಹುದು. ದೊರೇನ ಬಿಡಿಸಿದ ಗಾದೀಲಿ ನಾವು ಕೂತರೆ ಒಳ್ಳೇದಕ್ಕೋ ದುರಾಶೆಗೋ ಯಾರು ಹೇಳಬಹುದು? ನೀವು ದ್ರೋಹ ಅಂತೀರಲ್ಲ. ಕಂಡವರು ಇದನ್ನು ಆದು ಅಂದರೆ ನಾವು ಆ ಮಾತು ಸುಳ್ಳು ಅನ್ನುವ ಹಂಗಿಲ್ಲ.' (ಪು : ೪೮೫)

ಅರಸ ಕೆಳಗಿಳಿದು, ಅವನ ಹೆಂಡತಿ, ಮಗಳು ಯಾರೂ ರಾಜ್ಯಭಾರ ನಡೆಸಲು ಮುಂದಾಗದ ಸನ್ನಿವೇಶದಲ್ಲೂ ತಾನಾಗಿ ಒದಗಿ ಬಂದ ಅವಕಾಶವನ್ನು ವಿನಯದಿಂದ ನಿರಾಕರಿಸುವ ಬೋಪಣ್ಣನಿಗೂ, ಅಧಿಕಾರ ಹಿಡಿಯಲು ಅದಕ್ಕೆ ಬೇಕಾದ ವಾತಾವರಣವನ್ನು ಕೃತಕವಾಗಿ ಸೃಷ್ಟಿಸುವ ಬ್ರಿಟಿಷರಿಗೂ ಹೋಲಿಕೆಯನ್ನು ಕಾಣಿಸುವ ಮಾಸ್ತಿ ಆ ಮೂಲಕ ರಾಜಕಾರಣದ ಎರಡೂ ಮುಖಗಳನ್ನು ಓದುಗರ ಗಮನಕ್ಕೆ ತರುತ್ತಾರೆ. ಬೋಪಣ್ಣನ ರಾಜಕೀಯಕ್ಕೆ ಇನ್ನೂ ಆಳವಾದ ಆಯಾಮಗಳಿವೆ :

> "ಕೊಡಗರು ಭೂ ತಾಯಿ ಮಕ್ಕಳು. ಭೂಪತಿ ಅನ್ನೊ ಹೆಸರಿಗೆ ಅವರು ಎಂದೂ ಒಪ್ಪಲಿಲ್ಲ. ಯಾರಿಗೆ ಬೇಕು ಈ ಕೇಡು ಮಾತು? ಕೊಡಗ ಅರಸನೇ ಆಗುವುದಾಗಿದ್ದರೆ ಈ ಅರಸನ ಮುತ್ತಜ್ಜನ ಮುತ್ತಜ್ಜನ್ನ ಅರಸು ಅಂತ ಯಾಕೆ ಮಾಡತಾ ಇದ್ದ? ಅವನ

ಹಿಂದಿನ ಅರಸರು ತೀರಿಕೊಂಡರು ಅಂತ ಬೇರೆ ಅರಸನನ್ನ ಮಾಡಬೇಕಾದಾಗ ನಾಡಕರ್ತರು ಎಲ್ಲಾ ಸೇರಿ ಆ ಬೂದಿ ಬಡುಕನ್ನ ದೊರೆ ಅನ್ನಲಿಲ್ಲವೆ? ದೊರೆ ಕೆಲಸಕ್ಕೆ ಬರಬೇಕಾದರೆ ಬಿಕ್ಕೆ ಜನವೇ ಸರಿ, ಕೊಡಗನಲ್ಲ ಅಂದರಲ್ಲವೇ ಹಿರಿಯರು? ಇವತ್ತಾದರೂ ಅದೇ ಮಾತೇ, ಬೇಕಾದ ಅಬ್ಬೇಪಾರಿ ಬರಲಿ; ಗಾದಿ ಮೇಲೆ ಕೂಡಲಿ; ರಾಜ ಅಂತ ನಡೆಸೋಣ. ಮರ್ಯಾದೆಯಲ್ಲಿ ನಡಕೊಳ್ಳಲಿ: ನಾವು ಪಕ್ಕದಾಗ ನಿಂತು ದೇಶಾ ನೋಡಿಕೊಳ್ಳೋಣ. ಇದು ಕೊಡಗನ ಕೆಲಸ, ಹಾರುವರ ಕೆಲಸ. ಗಾದಿ ಏರೋದು ದೊಡ್ಡ ಮಾತಲ್ಲ''. (ಪು : ೪೮೬)

ಆದರ್ಶದ ರಾಜತ್ವವನ್ನು ಸೂಚಿಸುವ ಮೂಲಕ ಮಾಸ್ತಿ ವಿಕೃತಿಗಳ ಚಿತ್ರಣಕ್ಕೆ ಒಂದು ನೈತಿಕ ಆಯಾಮ ತರುತ್ತಾರೆ. ಮಾಸ್ತಿ ಕಾದಂಬರಿಯಲ್ಲಿ *Tragic vision* ಇದೆ. ಆದರೆ ಅದು *Nihilism* ಗೆ ದಾರಿ ಮಾಡಿಕೊಡುವುದಿಲ್ಲ. ಇಂದು ಕ್ರೌರ್ಯದ, ಕೇಡಿನ ಕೈ ಮೇಲಾಗಿದೆ ಎಂದರೆ ಒಳಿತು ಎನ್ನುವುದು ಬದುಕಿನಲ್ಲಿ ಇಲ್ಲವೇ ಇಲ್ಲ ಎಂದಲ್ಲ. ಒಳಿತು ಸದ್ಯದಲ್ಲಿ ನಿಷ್ಕ್ರಿಯವಾಗಿದೆ, ಬಲಹೀನವಾಗಿದೆ ಎಂದರೆ ಅದಕ್ಕೆ ಇನ್ನೂ ಸಂದರ್ಭ ಒದಗಿ ಬಂದಿಲ್ಲ ಅಷ್ಟೆ ಎಂದು ಮಾಸ್ತಿ ಸೂಚಿಸುತ್ತಿರಬಹುದು. ಚಿಕವೀರ ಎಂಥ ಕ್ರೂರಿಯಾಗಿದ್ದರೂ ಅವನ ಹೆಂಡತಿ ಗೌರಮ್ಮಾಜಿ, ಮಗಳು ಪುಟ್ಟಮ್ಮಾಜಿ, ಲಕ್ಷ್ಮೀನಾರಾಯಣಯ್ಯನ ತಾಯಿ ಸಾವಿತ್ರಮ್ಮ, ಉತ್ತಯ್ಯ ತಕ್ಕ ಇವರೆಲ್ಲ ಅವನನ್ನು ಒಂದಲ್ಲ ಒಂದು ಸಲ ಕಾಡುತ್ತಾರೆ, ಕರಗಿಸುತ್ತಾರೆ. ಎಂಥ ವಿರೋಧಗಳ ನಡುವೆಯೂ ಲಕ್ಷ್ಮೀನಾರಾಯಣಯ್ಯ ಸ್ವಾಮಿದ್ರೋಹಿಯಾಗುವುದಿಲ್ಲ. ಬೋಪಣ್ಣ ಕೊಡಗಿನ ಹಿತವನ್ನು ಕಾಪಾಡಲು ಕೊನೆಯವರಿಗೂ ಒದ್ದಾಡುತ್ತಾನೆ. ಗೌರಮ್ಮ ಎಂದೂ ಪತ್ನಿಯಾಗಿ ತನ್ನ ಕರ್ತವ್ಯವನ್ನು ಮರೆಯುವುದಿಲ್ಲ. ಬೋಪಣ್ಣ ಬ್ರಿಟಿಷರನ್ನು ಎದುರಿಸದೆ ಬಿಡುವುದಿಲ್ಲ. ಅಂದರೆ ಕ್ರೌರ್ಯ ಎಷ್ಟೇ ಅಗಾಧವಾಗಿದ್ದರೂ ಒಳಿತಿನ ಸಾಧ್ಯತೆಗಳನ್ನು ಕಾದಂಬರಿ ಕಾಣಿಸದೆ ಬಿಡುವುದಿಲ್ಲ. ಇದು ಕಾದಂಬರಿಯ ದುರಂತ ಪ್ರಜ್ಞೆಗೆ ಒಂದು ಪೌರ್ವಾತ್ಯ ಆಯಾಮವನ್ನು ನೀಡುತ್ತದೆ ಎಂದು ಹೇಳಬಹುದು. ಒಳಿತನ್ನು ಕುರಿತ ಈ ಗಾಢ ನಂಬಿಕೆ ಕಾದಂಬರಿಯ ದುರಂತ ಪ್ರಜ್ಞೆಯನ್ನು ಒಂದಿನಿತೂ ಅಳ್ಳಕಗೊಳಿಸುವುದಿಲ್ಲ ಎಂಬುದು ಮಾಸ್ತಿಯವರ ಕಲಾಪ್ರತಿಭೆಗೆ ಸಾಕ್ಷಿ. ಚಿಕವೀರ ರಾಜೇಂದ್ರ ನಿಸ್ಸಂದೇಹವಾಗಿ ಈ ಶತಮಾನದ ಅತ್ಯುತ್ತಮ ಕಾದಂಬರಿಗಳಲ್ಲಿ ಒಂದು. ತಂತ್ರದ ದೃಷ್ಟಿಯಿಂದಲೂ ಈ ಮಾತು ನಿಜ. ಚಿಕವೀರನ ಕ್ರೌರ್ಯ ಅವನ ವಿರೋಧಿಗಳ ಕ್ರೌರ್ಯ, ಬ್ರಿಟಿಷರ ಕ್ರೌರ್ಯ–ಇವನ್ನು ಕೊಡಗಿನ ದುರಂತದ ಬಿಡಿ ಬಿಡಿ ಕಾರಣಗಳಾಗಿ ನೋಡದೆ, ಯಾವುದನ್ನೂ ಏಕಪಕ್ಷೀಯವಾಗಿ ದೊಡ್ಡದು ಅಥವಾ ಸಣ್ಣದು ಮಾಡದೆ ಅವುಗಳು ಒಂದನ್ನೊಂದು ಪ್ರಚೋದಿಸುವ, ಪರಸ್ಪರ ಪ್ರೇರಣೆ ಪಡೆವ, ಪರಸ್ಪರ ಪ್ರಭಾವಿಸುವ ವಿನ್ಯಾಸವನ್ನು ಮಾಸ್ತಿ ಕಾದಂಬರಿಯಲ್ಲಿ ಹೆಣೆದಿದ್ದಾರೆ. ಉದಾಹರಣೆಗೆ– ಚಿಕವೀರ–ಚೆನ್ನಬಸವಯ್ಯನ ವೈಮನಸ್ಕತೆಗೆ ಇಬ್ಬರೂ ಕಾರಣ. ಬ್ರಿಟಿಷರು ಇದನ್ನು ಬೆಳೆಸುತ್ತಾರೆ. ಅದನ್ನು ತಮ್ಮ ಕ್ರಿಯೆಗೆ ನೆಪವಾಗಿಸಿ ಕೊಳ್ಳುತ್ತಾರೆ. ಬ್ರಿಟಿಷರ ಕ್ರಿಯೆ ಚಿಕವೀರನನ್ನು ಮತ್ತಷ್ಟು ಕ್ರೂರಿಯಾಗಿಸುತ್ತದೆ. ಬ್ರಿಟಿಷರಿಂದ ಕುಮ್ಮಕ್ಕು ಪಡೆದು ಚೆನ್ನಬಸವನೂ ಕೊಬ್ಬುತ್ತಾನೆ. ಹೆಚ್ಚು ಕ್ರೂರಿಯಾಗುವ ಚಿಕವೀರ ಬ್ರಿಟಿಷರನ್ನು ಮತ್ತಷ್ಟು ಕೆಣಕುತ್ತಾನೆ. ಬ್ರಿಟಿಷರು...

ಕಾದಂಬರಿಯಲ್ಲಿ ಕಥೆಯ ಓಟದ, ಬಂಧದ ಚಲನೆಯ ವಿನ್ಯಾಸ ಈ ಬಗೆಯದು. ಅಷ್ಟೇ ಅಲ್ಲ. ಭಿನ್ನ ಭಿನ್ನ ನಿಲುವುಗಳನ್ನೂ, ಮೌಲ್ಯಗಳನ್ನೂ, ದೃಷ್ಟಿಕೋನಗಳನ್ನೂ ಯಾವತ್ತೂ ಮುಖಾಮುಖಿಯಾಗಿಸಿ ಘಟನೆಗಳನ್ನು ನಾಟಕೀಯವಾಗಿಸುವ ಮಾಸ್ತಿ ಗದ್ಯ ಮಹಾಕಾವ್ಯವೆನ್ನುವ ಕಾದಂಬರಿ ಪ್ರಕಾರವನ್ನು ಆಶ್ರಯಿಸಿದ್ದರೂ ಅದಕ್ಕೆ ಷೇಕ್ಸಪಿಯರನ ಸತ್ವವನ್ನು ಧಾರಣ ಮಾಡಿ ಅದ್ಭುತವಾದದ್ದನ್ನು ಸಾಧಿಸುತ್ತಾರೆ. ಚಿಕವೀರನನ್ನು ಏಕಕಾಲದಲ್ಲಿ ವ್ಯಕ್ತಿಯಾಗಿಯೂ ಸಂಸ್ಥೆಯಾಗಿಯೂ ನೋಡುವ ದೃಷ್ಟಿಯಿಂದಾಗಿ ಕಾದಂಬರಿ ಹಲವು ಸ್ತರಗಳಲ್ಲಿ ಅರ್ಥಪೂರ್ಣವಾಗುತ್ತದೆ. ಇಡೀ ಕಾದಂಬರಿ ನಾಟಕೀಯವಾದ ರಾಜಕೀಯ ಕ್ರಿಯೆ ಪ್ರತಿಕ್ರಿಯೆಗಳಿಂದ ಆವೃತವಾಗಿದ್ದರೂ ಒಟ್ಟಾರೆ ಆರೋಗ್ಯಪೂರ್ಣ ಬದುಕಿನ ಸ್ವರೂಪದ ಬಗ್ಗೆ ಮಾಸ್ತಿ ಮಾಡುವ ಸೂಚನೆಗಳಲ್ಲಿ ಕಾದಂಬರಿಯ ಒಟ್ಟು ದರ್ಶನವನ್ನು ನಾವು ಗ್ರಹಿಸಬೇಕು. ಉದಾಹರಣೆಗೆ– ಅರಸನ ಎಗ್ಗಿಲ್ಲದ ಕಾಮಜೀವನಕ್ಕೆ ಉತ್ತಯ್ಯ ತಕ್ಕನ ರಸಿಕ ಜೀವನದ ಶುಚಿತ್ವವನ್ನು ಹೋಲಿಸಿ ಮಾಸ್ತಿ ಅರ್ಥವಂತಿಕೆಯನ್ನು ಹೊಳೆಯಿಸುತ್ತಾರೆ:

> "ಉತ್ತಯ್ಯ ತಕ್ಕ ತನ್ನ ದಿನದಲ್ಲಿ ತುಂಬ ರಸಿಕನೆಂದು ಹೆಸರು ಪಡೆದವನು. ಆದರೆ ಅವನ ಜೀವನ ಅಶುಚಿಯಾಯಿತೆಂದು ಯಾರೂ ಎಂದೂ ಹೇಳಿದ್ದಿಲ್ಲ. ಚೆಲುವಾದ ಮುಖ ಕಂಡಾಗ ಸಂಕೋಚವಿಲ್ಲದೆ ನೋಡಿ ಸಂತೋಷ ಪಡುವುದು ಅವನ ಪದ್ಧತಿ. ಅಷ್ಟೇ ನಿಜವಾಗಿ ಸಮಾಜ ನಿಯಮಿಸಿರುವ ನೀತಿಯ ಯಾವ ಮೇರೆಯನ್ನೂ ಮೀರದೆ ಇರುವುದೂ ಪದ್ಧತಿ. ಸಮಾಜ ಬೇಡವೆನ್ನದಿದ್ದರೂ ಇವನೇ ಹಲವು ವೇಳೆ ಧರ್ಮದ ಒಂದು ದೃಷ್ಟಿಯಿಂದ ಮೇರೆಗಳನ್ನು ಕಲ್ಪಿಸಿಕೊಂಡದ್ದು ಉಂಟು." (ಪು: ೧೯೬)

ತೀರಾ ವೈಯಕ್ತಿಕವಾದ ಕಾಮದಲ್ಲಾಗಲೀ, ಸಾರ್ವಜನಿಕವಾದ ರಾಜಕೀಯದಲ್ಲಾಗಲೀ ಮನುಷ್ಯ ಮತ್ತು ಮನುಷ್ಯ ವ್ಯವಸ್ಥೆಗಳು ಸಾಧಿಸಿಕೊಳ್ಳಬೇಕಾದ ಸಮತೋಲನವನ್ನು ಹೀಗೆ ಕಾದಂಬರಿಕಾರರು ಉದ್ದಕ್ಕೂ ಸೂಚಿಸುತ್ತ ಹೋಗುವುದರಿಂದ ಸದ್ಯದ ದುರಂತದ ಆಚೆಗೂ ಇರುವ ಬದುಕಿನ ಸಾಧ್ಯತೆಗಳನ್ನು ಕಾಣಿಸಲು ಮಾಸ್ತಿಯವರಿಗೆ ಸಾಧ್ಯವಾಗುತ್ತದೆ.

●

> .... ಗೌಡರಮಲ್ಲಿಯಲ್ಲಿ ಹಳ್ಳಿಯ ಗೌಡನಿಂದ ಕೆಡಿಸಲ್ಪಟ್ಟ ಒಬ್ಬ ಹುಡುಗಿಯ ರುದ್ರ–ವಿನೋದ ಕಥೆ ಬರುತ್ತದೆ. ಆಕೆ ಮುಂದೆ ಬುದ್ಧಿವಂತಳಾದ ಮತ್ತು ಪ್ರೌಢ ಸ್ತ್ರೀಯಾಗಿ ಬೆಳೆದು ತಾಯಿಯ ಸ್ಥಾನದಲ್ಲಿ ಇಡೀ ಹಳ್ಳಿಯನ್ನೇ ವಿವೇಚನೆಯಿಂದ ಸಲಹುತ್ತಾಳೆ. ಈ ಕಥೆಯಲ್ಲಿ ವಿಶಿಷ್ಟವಾದ ಮಾಸ್ತಿ ದೃಷ್ಟಿ ಮೂಡಿಬಂದಿದೆ ಎಂದು ಹೇಳಬಹುದು. ಮಾಸ್ತಿಯವರ ಜೀವನಮೌಲ್ಯಗಳಲ್ಲಿ ಅತ್ಯಂತ ಮುಖ್ಯವಾದವುಗಳೆಂದರೆ ಮಾನವೀ ಸ್ನೇಹಸಂಬಂಧ ಹಾಗೂ ಅನುಕಂಪ ಅಥವಾ, ವಿಲ್ಫ್ರೆಡ್ ಓವನ್‌ನ ಮಾತಿನಲ್ಲಿ ಹೇಳುವದಾದರೆ 'ಮನುಷ್ಯ–ಮನುಷ್ಯರ ನಡುವಿನ ಪರಸ್ಪರ ಕಣ್ಣೀರಿನ ಸಂಬಂಧ' (The reciprocity of human tears)
>
> – ಡಾ. ಶಾಂತಿನಾಥ ದೇಸಾಯಿ

ನಾಟಕಕಾರ ಮಾಸ್ತಿ

ಜಿ.ಎನ್. ರಂಗನಾಥರಾವ್

ಮಾಸ್ತಿಯವರು ನವೋದಯ ಕಾಲದ ಕುವೆಂಪು, ದ.ರಾ. ಬೇಂದ್ರೆ, ವಿ.ಸೀ., ಶಿವರಾಮಕಾರಂತ, ಶ್ರೀರಂಗ, ಕೈಲಾಸಂ ಮೊದಲಾದವರ ಸಾಲಿಗೆ ಸೇರುವ ನಾಟಕಕಾರರು. ಪುರಾಣ, ಇತಿಹಾಸ ಮತ್ತು ಸಮಕಾಲೀನ ಸಮಾಜ ನವೋದಯ ಕಾಲದ ನಾಟಕಕಾರರ ವಸ್ತುಭಂಡಾರವಾಗಿದ್ದವು. ಕುವೆಂಪು, ಮಾಸ್ತಿಯವರು ತಮ್ಮ ಬಹುತೇಕ ನಾಟಕಗಳಿಗೆ ಪುರಾಣ, ಇತಿಹಾಸಗಳನ್ನು ಆಶ್ರಯಿಸಿದ್ದರೆ ಬೇಂದ್ರೆ, ಕಾರಂತ, ಶ್ರೀರಂಗ, ಕೈಲಾಸಂ ಹೆಚ್ಚಾಗಿ ಸಾಮಾಜಿಕ ವಸ್ತುವನ್ನು ಆಯ್ದುಕೊಂಡಿದ್ದಾರೆ. ಸಮಾಜದ ಕಟುವಿಮರ್ಶೆ ನವೋದಯ ಕಾಲದ ನಾಟಕಗಳ (ಬೇಂದ್ರೆ, ಕಾರಂತ, ಶ್ರೀರಂಗ, ಕೈಲಾಸಂ) ಒಂದು ಮುಖ್ಯ ಲಕ್ಷಣವಾದರೆ ಪುರಾಣ, ಇತಿಹಾಸಗಳಿಂದ ಆಯ್ದ ಪ್ರಸಂಗ–ಪ್ರಕರಣಗಳನ್ನು ಹೆಚ್ಚಿನ ಅರ್ಥಾಂತರವಿಲ್ಲದೆ ನಾಟಕ ರೂಪದಲ್ಲಿ ಸಾಕ್ಷಾತ್ಕರಿಸುವುದು (ಕುವೆಂಪು), ಮಾಸ್ತಿ, ಸಿ.ಕೆ. ವೆಂಕಟರಾಮಯ್ಯ, ಮತ್ತಿತರರು) ಇನ್ನೊಂದು ಮುಖ್ಯ ಲಕ್ಷಣ.

ಪುರಾಣ ಮತ್ತು ಇತಿಹಾಸಗಳಿಂದ ವಸ್ತುವನ್ನು ಆಯ್ದುಕೊಳ್ಳುವುದರಲ್ಲಿ ಮಾಸ್ತಿಯವರು ನವೋದಯ ಕಾಲದ ನಾಟಕಕಾರರಲ್ಲೇ ಅಗ್ರಗಣ್ಯರು ಎಂದರೆ ಉತ್ಪ್ರೇಕ್ಷೆಯಾಗದು. ಮಾಸ್ತಿಯವರ ಹದಿನಾಲ್ಕು ಸ್ವತಂತ್ರ ನಾಟಕಗಳಲ್ಲಿ 'ಮಂಜುಳಾ' ಒಂದೇ ಸಾಮಾಜಿಕ. ಇತಿಹಾಸ ಮತ್ತು ಪುರಾಣಗಳಿಂದ ವಸ್ತುವನ್ನು ಎತ್ತಿಕೊಂಡಾಗ ಇಂಥ ಆಯ್ಕೆಗೆ ಕಾರಣ, ಪ್ರಭಾವಗಳು ಹಲವಾರು

ಇರುತ್ತವೆ. ಇದು ಮುಖ್ಯವಾಗಿ ನಾಟಕಕಾರನ ದೃಷ್ಟಿ-ಧೋರಣೆಗಳನ್ನು ಅವಲಂಬಿಸಿರುತ್ತದೆ. ಆದರೂ ಪುರಾಣ ಮತ್ತು ಇತಿಹಾಸಗಳಿಂದ ವಸ್ತುವಿನ ಆಯ್ಕೆಗೆ ಸ್ಥೂಲವಾಗಿ ಮೂರು ಕಾರಣಗಳನ್ನು ಗುರುತಿಸಬಹುದು.

೧. ಹೊಸ ಅರ್ಥದ ಹೊಳಹು. ಅಂದರೆ ಪುರಾಣ ಅಥವಾ ಇತಿಹಾಸದ ಘಟನೆಗಳಿಗೆ ಹೊಸ ಅರ್ಥವಿವರಣೆ *(New interpretation)* ನೀಡುವ ಮೂಲಕ ಹೊಸ ಆಯಾಮ ಕಲ್ಪಿಸುವದು. ತನ್ಮೂಲಕ ವಸ್ತುವಿನ ಸಾರ್ವಕಾಲಿಕ ಗುಣವನ್ನು ಎತ್ತಿ ತೋರಿಸುವುದು.

೨. ಸತ್ವ ವಿಶೇಷ ಅಥವಾ ವಿಚಾರಬಲ. ಅಂದರೆ ಪೌರಾಣಿಕ ಅಥವಾ ಐತಿಹಾಸಿಕ ಸಂದರ್ಭದಲ್ಲಿ ಮೌಲಿಕ ಅಥವಾ ಮಹತ್ವಪೂರ್ಣ ಎನಿಸಿದ್ದನ್ನು ಪ್ರತ್ಯೇಕವಾಗಿ ಸಾಹಿತ್ಯಕ ಪುನರ್‌ಸೃಷ್ಟಿ ಮೂಲಕ ಯಾವುದೇ ಬದಲಾವಣೆಯಿಲ್ಲದೆ ಹೇಳಲೇಬೇಕು ಎನ್ನಿಸುವಷ್ಟು ವಸ್ತು-ಸತ್ವದ ದೃಷ್ಟಿಯಿಂದ-ಪ್ರಭಾವಶಾಲಿಯಾಗಿರಬಹುದು.

೩. ವಸ್ತುವಿನಲ್ಲಿ ಅಂತರ್ಗತವಾಗಿರುವ ಸಿದ್ಧ ನಾಟಕೀಯತೆ.

ಹೀಗೆ, ವಸ್ತುವಿನಲ್ಲಿ ಸುಲಭವಾಗಿ ಲಭ್ಯವಿರುವ ನಾಟಕೀಯತೆ ಕೆಲವರಿಗೆ ಪುರಾಣ, ಇತಿಹಾಸಗಳಿಗೆ ಕೈ ಹಚ್ಚಲು ಕಾರಣವಾದರೆ ಇನ್ನು ಕೆಲವರಿಗೆ ಪುರಾಣ, ಇತಿಹಾಸದ ಸಂದರ್ಭಗಳಲ್ಲಿ ಉಪಕತೆಯಾಗಿಯೋ, ಪ್ರಸಂಗವಾಗಿಯೋ ಬಂದು ಹೋಗುವ ಘಟನೆಗಳಲ್ಲಿನ ಸತ್ವ ವಿಶೇಷ ಕಾರಣವಾಗುತ್ತದೆ. ಇನ್ನು ಕೆಲವರಿಗೆ ಇಂಥ ಘಟನೆಗಳಲ್ಲಿ ಹೊಸ ಅರ್ಥ ಸ್ಫುರಿಸಿ ಅವುಗಳ ಪುನರ್ ಸೃಷ್ಟಿಯಾಗುತ್ತದೆ.

ಮಾಸ್ತಿಯವರನ್ನು ಪುರಾಣ-ಇತಿಹಾಸ ತನ್ನ ಯಾವ ಗುಣ ಬೆಡಗಿನಿಂದ ಆಕರ್ಷಿಸಿತು ಎಂದು ಪರಿಶೀಲಿಸಿದಾಗ ಅವರು ಮೇಲೆ ಸೂಚಿಸಿರುವ ಎರಡನೆಯ ವರ್ಗಕ್ಕೆ ಸೇರಿದವರು ಎಂಬುದು ಸ್ಪಷ್ಟವಾಗುತ್ತದೆ. ನಾಟಕೀಯ ಬೆಡಗು ಮೊದಲಾದ ತಾಂತ್ರಿಕ ಒಲವುಗಳಿಗಿಂತ ಹೆಚ್ಚಾಗಿ ಪುರಾಣ ಇತಿಹಾಸಗಳ ವಸ್ತುವಿನ ಸತ್ವ ಬಲ-ಅದರ ಸರ್ವಕಾಲಿಕ ಬಾಳಿಕೆ ಏನೇ ಇರಲಿ-ಮಾಸ್ತಿಯವರನ್ನು ಹೆಚ್ಚಾಗಿ ಆಕರ್ಷಿಸಿರುವಂತೆ ತೋರುತ್ತದೆ. ಆದ್ದರಿಂದಲೇ ಅವರು ಮೂಲಕ್ಕೆ ತುಂಬ ನಿಷ್ಠೆಯಿಂದಿರುತ್ತಾರೆ. ಪುರಾಣ ಅಥವಾ ಇತಿಹಾಸದಿಂದ ಆಯ್ದುಕೊಂಡ ವಸ್ತು ಮಾಸ್ತಿಯವರ ಪ್ರತಿಭೆಯ ಮೂಸೆಯಲ್ಲಿ ಹೊಸ ಹುಟ್ಟು ಪಡೆದಾಗ ಅದರಲ್ಲಿ ಹೊಸ ಅರ್ಥದ ಹೊಳಹು ಏನೂ ಕಾಣುವುದಿಲ್ಲ, ಪ್ರತಿಯಾಗಿ ಅದು ನಾಟಕ ರೂಪದಲ್ಲಿ ಸ್ವತಂತ್ರ ಅಸ್ತಿತ್ವ ಪಡೆದ ಒಂದು ಕೃತಿಯಾಗಿರುತ್ತದೆ. ಪುರಾಣ, ಇತಿಹಾಸಗಳ ಮಹಾಗರ್ಭದಲ್ಲಿ ಒಂದು ಮಿಣುಕು ದೀಪವಾಗಿದ್ದದ್ದು ಮಾಸ್ತಿಯವರ ಪುನರ್‌ಸೃಷ್ಟಿಯಲ್ಲಿ ಒಂದು ಸ್ವತಂತ್ರ ಕೃತಿಯಾಗಿ ಬೆಳಗುವ ಮಹತ್ವವನ್ನು ಪಡೆದುಕೊಳ್ಳುತ್ತದೆ. ಹೀಗೆ ಇತಿಹಾಸ, ಪುರಾಣದಿಂದ ಆಯ್ಕೆಗೊಂಡ ವಸ್ತು-ವಿಚಾರಗಳಲ್ಲಿ ಮಾಸ್ತಿಯವರ ನಿಷ್ಠೆ ಎಷ್ಟು ಅಚಲವಾದುದೆಂದರೆ ಆಯ್ಕೆಮಾಡಿದ ಪ್ರಕರಣದ ಒಡಲಿನಲ್ಲೇ ನಾಟಕೀಯತೆ ತುಂಬಿದ್ದರೂ ಅವರು ಎಲ್ಲಿ ಮೂಲದ ಪಾವಿತ್ರ್ಯಕ್ಕೆ ಭಂಗಬಂದೀತೋ ಎಂಬಂತೆ ನಾಟಕೀಯತೆಯನ್ನು ಬೆಳೆಸುವುದಿಲ್ಲ. ಈ ಮಾತಿಗೆ ನಿದರ್ಶನವಾಗಿ 'ಭಟ್ಟರ ಮಗಳು' ನಾಟಕವನ್ನು ನೋಡಬಹುದು. ಈ ತಾಂತ್ರಿಕ ಯಶಸ್ಸು-ಅಯಶಸ್ಸುಗಳನ್ನು

ನೋಡುವ ಮೊದಲು ವಿಚಾರಬಲ ಅಥವಾ ಸತ್ವದ ದೃಷ್ಟಿಯಿಂದ ಮಾಸ್ತಿಯವರ ಈ ಪುನರ್‌ಸೃಷ್ಟಿಗಳು ನಮಗಿಂದು ಎಷ್ಟರಮಟ್ಟಿಗೆ ಸುಸಂಗತ? ಇವುಗಳ ಸಾರ್ವಕಾಲಿಕ ಬಾಳಿಕೆಯ ಮೌಲ್ಯ ಏನು? ಎಂಬ ಪ್ರಶ್ನೆಗಳನ್ನು ಗಮನಿಸಬೇಕಾಗುತ್ತದೆ.

ಸುಟ್ಟಲ್ಲದೆ ಮುಟ್ಟೆ ಎಂದು ಎಲ್ಲವನ್ನೂ ವೈಜ್ಞಾನಿಕ ಅಗ್ನಿದಿವ್ಯಕ್ಕೊಳಪಡಿಸಿ ನೋಡುವ ವಿಜ್ಞಾನಯುಗಕ್ಕೆ ಮೌಲ್ಯದ ದೃಷ್ಟಿಯಿಂದ ಪುರಾಣದ ಎಷ್ಟೋ ಪ್ರಸಂಗಗಳು ಅರ್ಥಹೀನ, ಅಸಂಗತ ಎನಿಸಬಹುದು. ಋಷ್ಯಶೃಂಗ ಮಳೆ ತರಿಸುವುದಾಗಲೀ, ಸಾವಿತ್ರಿ ಯಮನನ್ನು ಗೆಲ್ಲುವುದಾಗಲೀ ತಿರುಪಾಣಿ ಜೀವಂತವಾಗಿ ದೇವರಲ್ಲಿ ಐಕ್ಯವಾಗುವುದಾಗಲೀ ನಮಗಿಂದು ನಮ್ಮನ್ನು ನಂಬಿಸುವಂಥ ಅರ್ಥಪೂರ್ಣ ಅನುಭವಗಳಾಗದು. ಅಂತೇಯೇ 'ಭಟ್ಟರ ಮಗಳು' ನಾಟಕದಲ್ಲಿ ಮನ್ನಾರ್ ಕೈಗೊಳ್ಳುವ ಸನ್ಯಾಸದ ನಿರ್ಧಾರ ಲೌಕಿಕ ವ್ಯಾಪಾರಗಳ ಹಿನ್ನೆಲೆಯಲ್ಲಿ ವಿವೇಕ ವಾದುದಲ್ಲ ಎನಿಸುತ್ತದೆ. ಮೌಲ್ಯದ ದೃಷ್ಟಿಯಿಂದ ಇವು ಅರ್ಥಪೂರ್ಣವಲ್ಲ ಎನಿಸಿದಾಗ ನಾವು ಇವನ್ನು ಯಾವ ಅಳತೆಗೋಲಿನಿಂದ ನೋಡಬೇಕು? ಮೌಲ್ಯ ನಿರ್ಣಯದ ಪ್ರಶ್ನೆ ಬಂದಾಗ ಮಾಸ್ತಿಯವರ ನಾಟಕಗಳನ್ನು ಯಾವ ನಿಟ್ಟಿನಿಂದ ನೋಡಬೇಕು? ಸತ್ವ ಅಥವಾ ವಿಚಾರ ದೃಷ್ಟಿಯಿಂದ ಅರ್ಥಪೂರ್ಣವಲ್ಲ ಎನಿಸಿದಾಗ ಇತಿಹಾಸ ಅಥವಾ ಪುರಾಣದ ಪುನರ್‌ಸೃಷ್ಟಿಯ ಅಗತ್ಯ ಏನಿತ್ತು ಎಂಬ ಪ್ರಶ್ನೆ ಏಳುತ್ತದೆ. ಹೀಗೆ ಪ್ರಶ್ನಿಸುವಾಗ ಕೃತಿಕಾರನ ಮೌಲ್ಯ ಪ್ರಜ್ಞೆ ಮತ್ತು ಜೀವನ ಧೋರಣೆಗಳನ್ನೂ ಗಮನಿಸಬೇಕಾಗುತ್ತದೆ.

ಮಾಸ್ತಿಯವರದು ಮುಖ್ಯವಾಗಿ ಸಂಪ್ರದಾಯನಿಷ್ಠ ವ್ಯಕ್ತಿತ್ವ. ಧಾರ್ಮಿಕ ಮೌಲ್ಯಗಳ ಬೆಳಕಿನಲ್ಲಿ ಮನುಕುಲ ಬದುಕಿನ ಶ್ರೇಯಸ್ಸನ್ನು ಕಂಡುಕೊಳ್ಳಬೇಕು ಎನ್ನುವ ಚೇತನವನ್ನು ಅವರ ಸಾಹಿತ್ಯಕೃಷಿಯ ಹಿಂದೆ ಕಾಣಬಹುದು. ಧಾರ್ಮಿಕ ಮೌಲ್ಯಗಳು ಮತ್ತು ಜೀವನದ ಪಾವಿತ್ರ್ಯದ ಬಗ್ಗೆ ತೀವ್ರ ಕಳಕಳಿ ಹೊಂದಿರುವ ಮಾಸ್ತಿಯವರ ಚೇತನ ಪುರಾಣ–ಇತಿಹಾಸಗಳಲ್ಲಿ ತನಗೆ ಒಗ್ಗುವಂಥ ವಿಚಾರ ಕಂಡಾಗ ಅದರ ಆಕರ್ಷಣೆಗೆ ಸಿಲುಕಿದ್ದು ಅಸಹಜವೇನಲ್ಲ. ಅದನ್ನು ಕೈಗೆತ್ತಿಕೊಂಡು ತನ್ನ ಕಲೆಗಾರಿಕೆಯಿಂದ ಅದಕ್ಕೊಂದು ವಿಶೇಷ ರೂಪಕೊಟ್ಟು ಜನತೆಗೆ ಎತ್ತಿ ತೋರಿಸುವ ಮೋಹ ಉಂಟಾಗಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಮಾಸ್ತಿಯವರ ಈ ಬಗೆಯ ಪುನರ್‌ಸೃಷ್ಟಿಯನ್ನು–ಆಯ್ದುಕೊಂಡ ವಸ್ತುವಿಗೆ ಸರ್ವಕಾಲಿಕ ಮೌಲ್ಯ ಇಲ್ಲವಾದಾಗ್ಯೂ–ಅವರ ವೈಚಾರಿಕ ಇತಿಮಿತಿಯೊಳಗೆ, ಅವರು ವಸ್ತುವನ್ನು ಕಲ್ಪಿಸಿಕೊಂಡ ರೂಪದ ಚೌಕಟ್ಟಿನಲ್ಲಿ ಒಂದು ಕಲಾಕೃತಿಯಾಗಿ ಯಶಸ್ವಿಯಾಗಿದೆಯೇ ಎಂದು ನೋಡಬೇಕಾಗುತ್ತದೆ. ಈ ಮಾತುಗಳನ್ನು ಅವರ ಕೃತಿಯ ಸಂದರ್ಭದಲ್ಲಿ ಒರೆಗಿಡುವ ಮೊದಲು ಮಾಸ್ತಿಯವರ ನಾಟಕಗಳ ತಾಂತ್ರಿಕಗುಣ ಕುರಿತು ಒಂದು ಅಂಶವನ್ನು ಗಮನಿಸಬೇಕಾಗುತ್ತದೆ. ಅದು ಮಾಸ್ತಿಯವರ ನಾಟಕ ಪ್ರಜ್ಞೆ.

ಮಾಸ್ತಿಯವರಿಗೆ ನಿತ್ಯಜೀವನದಲ್ಲಿನ ನಾಟಕೀಯತೆಯ ಅರಿವು ಇಲ್ಲದಿಲ್ಲ. ನಾಟಕೀಯತೆ ಹುಟ್ಟಿಸುವ ಘರ್ಷಣೆಗಳು, ದ್ವಂದ್ವಗಳು, ನಾಟಕೀಯ ತಿರುವುಗಳು ಬದುಕಿನಲ್ಲಿರುವುದನ್ನು ಮಾಸ್ತಿ ಚೆನ್ನಾಗಿ ಬಲ್ಲರು ಎಂಬುದಕ್ಕೆ ಅವರ ಕತೆ, ಕಾದಂಬರಿಗಳಲ್ಲಿನ

ಹಲವಾರು ಸನ್ನಿವೇಶಗಳನ್ನು ಉದಾಹರಣೆಯಾಗಿ ನೀಡಬಹುದು. ಒಂದು ಪುಟ್ಟ ಉದಾಹರಣೆಯಾಗಿ ಕೃಷ್ಣಮೂರ್ತಿಯ ಹೆಂಡತಿಯನ್ನು ನೋಡಬಹುದು. ಮದುವೆ ಮುಗಿಸಿಕೊಂಡು ಬೊಂಬಾಯಿಗೆ ಓದು ಮುಂದುವರಿಸಲು ಹೋದ ಕೃಷ್ಣಮೂರ್ತಿ ದುರದೃಷ್ಟವಶಾತ್ ತೀರಿಕೊಳ್ಳುತ್ತಾನೆ. ಈ ಕೆಟ್ಟ ಸುದ್ದಿಯನ್ನು ಅವನ ಹೆಂಡತಿಗೆ ತಿಳಿಸಿಲ್ಲ. ಆವಳಿನ್ನೂ ಸೌಭಾಗ್ಯವತಿಯ ಎಲ್ಲ ಮಂಗಳ ದ್ರವ್ಯಗಳನ್ನೂ ಬಳಸುತ್ತಿದ್ದಾಳೆ. ಇಂಥ ಪರಿಸ್ಥಿತಿಯಲ್ಲಿ ಈ ತಾಯಿ–ಮಗಳು ವಾಸಿಸುತ್ತಿರುವ ಎದುರು ಮನೆಗೆ ಕೃಷ್ಣಮೂರ್ತಿಗೆ ಪರಿಚಿತನಾದವನೊಬ್ಬ ಬರುತ್ತಾನೆ. ಕೃಷ್ಣಮೂರ್ತಿ ಸತ್ತದ್ದನ್ನೂ ಈ ಸುದ್ದಿ ಮಗಳಿಗೆ ಇನ್ನೂ ತಿಳಿಯದೇ ಇರುವುದನ್ನು ಎದುರು ಮನೆಯಾತನಿಗೆ ತಾಯಿ ತಿಳಿಸುವ ಸನ್ನಿವೇಶ ಕತೆಯಲ್ಲಿ ಬರುತ್ತದೆ. ಈ ಮಾತುಗಳನ್ನು ಕೇಳುತ್ತಿರುವಾಗ ಕೃಷ್ಣಮೂರ್ತಿಯ ಗೆಳೆಯನಿಗೆ ಮುಂಬಾಗಿಲಲ್ಲಿ ಹಣೆತುಂಬ ಕುಂಕುಮ ಹಚ್ಚಿಕೊಂಡ ಮುತ್ತೈದೆ ಮುಖವೊಂದು ಕ್ಷಣಕಾಲ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ತಾಯಿ ತನ್ನ ದೌರ್ಭಾಗ್ಯದ ಕತೆಯನ್ನು ಹೇಳಿ ಹೋಗುತ್ತಾಳೆ. ಮನೆಯಲ್ಲಿ ಮಗಳಿಲ್ಲ. ಆ ಕ್ಷಣವೇ ಕೃಷ್ಣಮೂರ್ತಿಯ ಹೆಂಡತಿ ಬಾವಿಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಾಳೆ. ಈ ಸನ್ನಿವೇಶ ನೋಡಿ. ಕೃಷ್ಣಮೂರ್ತಿಯ ಹೆಂಡತಿ ತಾಯಿ ಹೇಳುತ್ತಿದ್ದ ವಿಷಯ ಕೇಳಿಸಿಕೊಂಡು ತಾನು ವಿಧವೆ ಎಂಬುದು ಅರಿವಾಗಿ ಆತ್ಮಹತ್ಯೆ ಮಾಡಿಕೊಂಡಳು ಎಂದು ಮಾಸ್ತಿಯವರು ನಾಲ್ಕು ಸಾಲಿನಲ್ಲಿ ಇಡೀ ಘಟನೆಯನ್ನು ನಿರೂಪಿಸಬಹುದಿತ್ತು. ಇಲ್ಲಿ ಮಾಸ್ತಿಯವರು ಹಾಗೆ ಮಾಡುವುದಿಲ್ಲ. ಮುತ್ತೈದೆಯ ಒಂದು ಚಿತ್ರವನ್ನು ದೃಶ್ಯವತ್ತಾಗಿ ಕಟ್ಟಿಕೊಟ್ಟು ಪರಿಣಾಮ ಹೆಚ್ಚಿಸುತ್ತಾರೆ. ಇದು ಮಾಸ್ತಿಯವರ ನಾಟಕ ಪ್ರಜ್ಞೆಗೆ ಸಾಕ್ಷಿ. ಇಂಥ ನಿದರ್ಶನಗಳು ಅವರ ಕತೆ ಕಾದಂಬರಿಗಳಲ್ಲಿ ಹುಡುಕಿದರೆ ಹೇರಳವಾಗಿ ಸಿಗುತ್ತವೆ. ಆದರೆ ಈ ನಾಟಕ ಪ್ರಜ್ಞೆ ಅವರ ಕೆಲವು ನಾಟಕಗಳಲ್ಲೇ ಕೈಕೊಟ್ಟಿರುವುದು ಸೋಜಿಗವೆನಿಸುತ್ತದೆ.

ಮಾಸ್ತಿಯವರ ಪೌರಾಣಿಕ ನಾಟಕಗಳಾದ ಶಾಂತಾ, ಸಾವಿತ್ರಿ, ಉಷಾ, ಭಟ್ಟರ ಮಗಳು, ವಸ್ತು ಹಾಗೂ ತಂತ್ರ ಎರಡೂ ದೃಷ್ಟಿಯಿಂದಲೂ ಪೂರ್ಣ ತೃಪ್ತಿ ಕೊಡುವುದಿಲ್ಲ. "ಶಾಂತಾ", "ಸಾವಿತ್ರಿ", "ಭಟ್ಟರಮಗಳು" ನನ್ನ ಪಾಲಿಗೆ ಮಹತ್ವದ್ದೆನಿಸುವುದು ಅವುಗಳಲ್ಲಿ ಮಿಡಿಯುವ ಜೀವನೋತ್ಸಾಹದಿಂದ. ಸಾವಿತ್ರಿಯ ಸತಿಶಕ್ತಿಯಾಗಲೀ, ಋಷ್ಯಶೃಂಗನ ಮಳೆತರಿಸುವ ಶಕ್ತಿಯಾಗಲೀ, ಮನ್ನಾರ್‌ನ ಸನ್ಯಾಸಬಲವಾಗಲೀ ವೈಜ್ಞಾನಿಕ ವಿವೇಕದ ಹಿನ್ನೆಲೆಯಲ್ಲಿ ಬಾಳಿಕೆ ಎನ್ನಿಸುವುದಿಲ್ಲ, ಮಹತ್ವಪೂರ್ಣ ಎನ್ನಿಸುವುದಿಲ್ಲ. ಮಾಸ್ತಿಯವರು ಈ ನಾಟಕಗಳಲ್ಲಿ ಕಂಡುಬರುವ ಜೀವನೋತ್ಸಾಹ, ಬದುಕಬೇಕೆಂಬ ಛಲ ಮೊದಲಾದ ಮಾನವಸಹಜವಾದ ಅದಮ್ಯ ಆಶೋತ್ತರಗಳನ್ನು ಲೌಕಿಕ ನೆಲೆಯಲ್ಲಿ ಕಾಣುವುದಿಲ್ಲ. ಅಧ್ಯಾತ್ಮಿಕ ನೆಲೆಯಲ್ಲಿ ನೋಡಿ ಅಂಥದೇ ಪರಿಹಾರದತ್ತ ಧಾವಿಸುತ್ತಾರೆ.

ಮಾಸ್ತಿಯವರ ಸಾವಿತ್ರಿ ನಾಟಕವನ್ನು ಕುವೆಂಪು ಅವರ ಯಮನ ಸೋಲು ಮತ್ತು ಶ್ರೀರಂಗರ ಸಾವಿತ್ರಿಯೊಂದಿಗೆ ಹೋಲಿಸಿ ನೋಡಿದಾಗ ನಮ್ಮ ಅತೃಪ್ತಿಯ ಕಾರಣ ಹಾಗೂ ಒಂದು ಕೃತಿಯ ಹಿಂದೆ ಕೆಲಸ ಮಾಡುವ ಪ್ರಜ್ಞೆ ಎಷ್ಟು ಮಹತ್ವದ್ದು ಎಂಬುದು ಸ್ಪಷ್ಟವಾಗುತ್ತದೆ.

ಮಾಸ್ತಿಯವರ ಸಾವಿತ್ರಿ ೧೯೩೪ರಲ್ಲಿ ಕುವೆಂಪು ಅವರ ಯಮನ ಸೋಲು ೧೯೩೮ರಲ್ಲಿ ರಚಿತವಾದದ್ದು. ಈ ಎರಡೂ ನಾಟಕಗಳಲ್ಲಿ ಸಾವಿತ್ರಿಯ ಪಾತ್ರಕ್ಕೆ ಹೆಚ್ಚು ಒತ್ತು ಬಿದ್ದಿದ್ದು ಸಾವಿತ್ರಿ ಯಮನನ್ನು ಸೋಲಿಸಿ ಸತ್ತ ಗಂಡನನ್ನು ಬದುಕಿಸಿದಳು ಎಂಬುದೇ ಇವರಿಬ್ಬರಿಗೂ ಸ್ಫೂರ್ತಿಯಾಗಿದೆ. ಪುರಾಣದ ಚೌಕಟ್ಟಿನಲ್ಲೂ ಕತೆಯ ಮಹತ್ವ ಇದೇ ಆಗಿದೆ. ತಾಂತ್ರಿಕವಾಗಿ ಮಾತ್ರ ಮಾಸ್ತಿ ಮತ್ತು ಕುವೆಂಪು ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡಿದ್ದಾರೆ. ಯಮನ ಸೋಲು ಯಕ್ಷ ಮತ್ತು ದೂತರ ಕಣ್ಣುಗಳ ಮೂಲಕ ನಡೆಯುತ್ತದೆ. ಯಮನ ಸೋಲು ಯಕ್ಷನ ಪ್ರಸ್ತಾವನೆ ಮೂಲಕ ಆರಂಭವಾದರೆ ಸಾವಿತ್ರಿ, ನಾರದರ ಪ್ರಸ್ತಾವನೆ ಮೂಲಕ ಆರಂಭವಾಗುತ್ತದೆ. ಈಎರಡೂ ನಾಟಕಗಳಲ್ಲಿ ಯಕ್ಷ, ನಾರದರು ಸಾಂಪ್ರದಾಯಿಕ ರಂಗಭೂಮಿಯ ಸೂತ್ರಧಾರನ ಕೆಲಸ ಮಾಡುತ್ತಾರೆ ಹಾಗೂ ಇಡೀ ನಾಟಕದ ವಿದ್ಯಮಾನಗಳಿಗೆ ಸಾಕ್ಷಿಭೂತರಾಗುತ್ತಾರೆ. ಯಮನ ಸೋಲು ಸಾವಿತ್ರಿಯ ವಿಜಯದೊಂದಿಗೆ ಮುಗಿಯುತ್ತದೆ. ಆದರೆ ಮಾಸ್ತಿಯವರ ಸಾವಿತ್ರಿ ಇನ್ನೊಂದು ಹೆಜ್ಜೆಮುಂದೆ ಹೋಗಿ ಸೃಷ್ಟಿ ಸ್ಥಿತಿ, ಲಯಗಳನ್ನು ಕೆಣಕುತ್ತವೆ. ನಾಟಕದ ಆರಂಭಕ್ಕೇ ಸಾವನ್ನು ಕಂಡದ್ದಾಗಿದೆ; ಸಾವಿತ್ರಿಯ ವಯಕ್ತಿಕ ಜೀವನದ ಸಂದರ್ಭದಲ್ಲಿ ಸಾವನ್ನು ಗೆದ್ದಾಗಿದೆ. ಆದರೂ ಉತ್ತರ ಸಿಗದ ಪ್ರಶ್ನೆಯೊಂದಿದೆ : "ದೇವ, ದೇವ ಎಲ್ಲವೂ ನೀನೇ ಆಗಿರುವಲ್ಲಿ ವಿಧಿ ಎಂದೂ ಅಧಿಕಾರವೆಂದೂ ಹೇಳುತ್ತಾ ವೈಧವ್ಯದ ದುಃಖವನ್ನು ಲೋಕದಲ್ಲಿ ಏತಕ್ಕೆ ಇರಿಸಿರುವೆ?'' ಇಂಥದೊಂದು ಪ್ರಶ್ನೆ ಹಾಕಿದ ಲೇಖಕರ ಜೀವನದೃಷ್ಟಿ ತಾನೇ ಪರಿಹಾರವನ್ನೂ ನಾರದರ ಬಾಯಲ್ಲಿ ಕಾಣುತ್ತದೆ : "ನೀನು ಕೇಳಿರುವುದು ಈಗ ಉತ್ತರವಿಲ್ಲದ ಪ್ರಶ್ನೆ. ಹೀಗೆ ಬಾ ಅವನು ತೋರಿರುವಷ್ಟು ಕೃಪೆಗೆ ಕೃತಜ್ಞರಾಗಿರೋಣ'' ಈ ಪರಿಹಾರದಲ್ಲಿ ಮಾಸ್ತಿಯವರ ಜೀವನದ ದೃಷ್ಟಿಸಾರ ಅಡಗಿದೆ. ಹೀಗೆ, ಪುರಾಣದ ಒಂದು ಸಂದರ್ಭದಲ್ಲಿ ಸಂಭವಿಸುವ ಘಟನೆಗೆ ಒಂದು ಸಾರ್ವತ್ರಿಕತೆ ದೊರಕಿಸಿಕೊಡುವ ಪ್ರಯತ್ನವನ್ನು ಇಲ್ಲಿ ಕಾಣಬಹುದು. ಇಂಥ ಪ್ರಯತ್ನದಲ್ಲಿ ಮಾಸ್ತಿಯವರು ಮನುಷ್ಯ ಮಿತಿಗಳನ್ನೂ ದೈವೀಶಕ್ತಿಗಳ ಹಿರಿಮೆಯನ್ನೂ ಎತ್ತಿ ತೋರುವ ಮೂಲಕ ಜೀವನದ ಶಾಶ್ವತ ಸತ್ಯಗಳಿಗೆ ಕನ್ನಡಿ ಹಿಡಿಯುತ್ತಾರೆ. ಆದರೆ ಈ ಪ್ರಯತ್ನ ನಾಟಕಕ್ಕೆ ಹೊಸ ಅರ್ಥದ ಆಯಾಮ ಕೊಡದೆ ಮೂಲದಿಂದ ಒಡೆದು ಬೇರೆಯಾಗಿಯೇ ನಿಲ್ಲುತ್ತದೆ. ಅಷ್ಟೇ ಅಲ್ಲದೆ ಸಾವಿತ್ರಿಯಂಥ ನೇಮನಿಷ್ಠ ಜೀವನದಿಂದ ಯಮನನ್ನು ಗೆಲ್ಲುವುದು ಸಾಧ್ಯವಿದ್ದರೂ ಅವಳ ಪ್ರಶ್ನೆ ನಿರುತ್ತರವಾಗಿಯೇ ಉಳಿದು ಲೋಕದ ಎಲ್ಲರಿಗೆ ಇದು ಸಾಧ್ಯವಿಲ್ಲ ಎಂಬ ವಿಪರ್ಯಾಸ ಎದ್ದು ಕಾಣುತ್ತದೆ. ಬದುಕಿನ ಮೂಲ ಸತ್ಯಗಳನ್ನು ಪ್ರಶ್ನಿಸಬಾರದು ಎಂಬುದೇ, ಲೋಕದಲ್ಲಿ ಎಲ್ಲರಿಗೂ ಸಾವನ್ನು ಗೆಲ್ಲಲಾಗದು ಎಂಬುದೇ ಇಲ್ಲಿ ನೀತಿಯಿದ್ದಂತಿದೆ. ಇದು ಹೊರತಾಗಿ ಕೊನೆಯ ಬೆಳವಣಿಗೆಯ ಉದ್ದೇಶ ಏನೆಂಬುದು ಸ್ಪಷ್ಟವಾಗುವುದಿಲ್ಲ. ಪ್ರಶ್ನಿಸುವ ಮನುಷ್ಯ ವಿವೇಚನೆಗೆ ಬುದ್ಧಿ ಹೇಳುವ ಸೂಚನೆ ಮಾತ್ರ ಇದರಿಂದ ಕಾಣುತ್ತದೆ. ಮಾಸ್ತಿಯವರ ಸಾವಿತ್ರಿಯಲ್ಲಿನ ಈ ಬೆಳವಣಿಗೆ ಬಿಟ್ಟರೆ ಇದು ಕುವೆಂಪು ಅವರ ಯಮನ ಸೋಲಿ ಗಿಂತ ಭಿನ್ನವಾದುದೇನಲ್ಲ. ಇಬ್ಬರೂ ಸಾವಿತ್ರಿಯನ್ನು ವೈಭವೀಕರಿಸಿದ್ದಾರೆ.

ಶ್ರೀರಂಗರ ಸಾವಿತ್ರಿ ಇವೆರಡಕ್ಕಿಂತ ಭಿನ್ನವಾಗುವುದು ಜೀವನ ದೃಷ್ಟಿಯಲ್ಲಿ. "ಮುಖ್ಯವಾಗಿ ಇದೊಂದು ಆದರ್ಶ ಪ್ರಣಯದ ಕತೆ ಎಂದೇ ನಾನದನ್ನು ಚಿತ್ರಿಸಿದ್ದೇನೆ.

ಪ್ರಣಯವು ಅಸಾಧ್ಯನಂತವಾದ ಶಕ್ತಿ ಎನ್ನುವಾಗ ಅದು ಮೃತ್ಯು ದೇವತೆಯನ್ನು ಸೋಲಿಸಿತು ಎಂಬುದರಲ್ಲಿ ವಿಶೇಷವೇನಿದೆ'' ಎಂದು ಶ್ರೀರಂಗ ನಾಟಕದ ಮುನ್ನುಡಿಯಲ್ಲೇ ತಿಳಿಸಿದ್ದಾರೆ. ಮಾಸ್ತಿ, ಕುವೆಂಪು ಮೂಲಕತೆಯನ್ನು ಯಥಾವತ್ತಾಗಿ ಒಪ್ಪಿಕೊಂಡಿದ್ದರೆ ಶ್ರೀರಂಗ ಅದನ್ನು ಪ್ರಶ್ನಿಸುವ ಮೂಲಕವೇ ನಾಟಕ ಆರಂಭಿಸುತ್ತಾರೆ. ಶ್ರೀರಂಗರು ಪುರಾಣದ ಸಾವಿತ್ರಿಯನ್ನು ಇಲ್ಲಿ ವೈಭವೀಕರಿಸಿಲ್ಲ; ಅದಕ್ಕೆ ಅಂಧನಿಷ್ಠೆಯನ್ನೂ ತೋರಿಸಿಲ್ಲ. ಶ್ರೀರಂಗರ ವೈಚಾರಿಕತೆ ಇಲ್ಲೂ ತನ್ನೆಲ್ಲ ಹತಾರಗಳಿಂದ ಪುರಾಣದ ವಸ್ತುವನ್ನು ಛಿದ್ರಗೊಳಿಸುತ್ತದೆ. ನಾರದರು ಸತ್ಯವಾನ ಅಲ್ಪಾಯುಷಿ ಎಂದು ತಿಳಿಸಿದರೂ ಸಾವಿತ್ರಿಗೆ "ಅವಿಧವಾ ಭೂಯಾಃ'' ಎಂದೂ ಹರಸಿದರು. ಆದರೆ ಸಾವಿತ್ರಿ ಏಕೆ ಕೆಡಕನ್ನೇ ನೆನೆದಳು. ಶ್ರೀರಂಗರೇ ಇದಕ್ಕೆ ಉತ್ತರ ಕೊಡುತ್ತಾರೆ : "ಪಾಪ; ಪ್ರಣಯದ ಜೀವನ ವೇದನೆಯ ದಾರಿಗುಂಟ''. ಈ ಮಾತುಗಳಲ್ಲಿ ಕಾಣುವ ಸಾವಿತ್ರಿಯ ಮೂರ್ತಿ (ಇಮೇಜ್) ಪತಿಭಕ್ತಿಪರಾಯಣೆಯದಲ್ಲ, ಪ್ರಣಯಿನಿ ಸಾವಿತ್ರಿಯದು. ಸಾವಿತ್ರಿಯನ್ನು ಪ್ರಕೃತಿಯ ಸಂಕೇತವಾಗಿ ಕಂಡಿರುವ ಶ್ರೀರಂಗರು ನಾಟಕದುದ್ದಕ್ಕೂ ನಟಿ, ಸೂತ್ರಧಾರರ ಚರ್ಚೆ ಹಾಗೂ ಸಾವಿತ್ರಿಯ ಕತೆಯನ್ನು ಮೇಳವಿಸುವುದರ ಮೂಲಕ ಪುರುಷ–ಪ್ರಕೃತಿಯ ನಂಟನ್ನೂ ಬದುಕಿನ ಅವಿಚ್ಛಿನ್ನತೆ ಯನ್ನೂ ಪರೀಕ್ಷೆಗೊಡ್ಡಿದ್ದಾರೆ. ಹೀಗಾಗಿ ಇಲ್ಲಿ ಪ್ರೀತಿ, ಸಾವುಗಳು ಬದುಕಿನ ಸಾತತ್ಯದ ದೊಡ್ಡ ತಾತ್ವಿಕ ನೆಲೆಗಟ್ಟಿನಲ್ಲಿ ಚರ್ಚೆಗೊಳ್ಳುತ್ತವೆ ಯಮನಲ್ಲಿ ವರ ಬೇಡುವಾಗ ಪುರಾಣದ ಸಾವಿತ್ರಿ ಕೇವಲ ತನ್ನ ಹೊಟ್ಟೆಯಲ್ಲಿ ಸಂತಾನವಾಗಲಿ ಎಂದು ಬೇಡಿದರೆ ಶ್ರೀರಂಗರ ಸಾವಿತ್ರಿ ಸತ್ಯವಾನನೇ ತನ್ನ ಹೊಟ್ಟೆಯಲ್ಲಿ ಹುಟ್ಟಲಿ ಎಂದು ಕೇಳುತ್ತಾಳೆ. ಜೀವನಕ್ಕೆ ಮಾರಕವಾದ ಸಾವನ್ನು ಪ್ರಶ್ನಿಸುವುದರ ಜೊತೆಗೆ ವರ ಕೇಳುವುದರಲ್ಲಿನ ಈ ಹೊಸ ಬಗೆ ಪುರುಷ ಸಂತತಿಯ ಮುಂದುವರಿಕೆಯ ಅಗತ್ಯವನ್ನು ಬೆರಳು ಮಾಡಿ ತೋರಿಸುವುದಲ್ಲದೆ ಯಮನಿಗೆ ಪ್ರಕೃತಿ–ಪುರುಷರ ಚಿರಸಂಬಂಧವನ್ನೂ ಸೂಚಿಸುತ್ತದೆ. ಹೀಗೆ ಪ್ರಕೃತಿ–ಪುರುಷರ ಸಂಬಂಧಗಳ ಸಂಕೇತವಾಗುವ ಶ್ರೀರಂಗರ ಸಾವಿತ್ರಿ ಯಮನ ಸೋಲಿನಲ್ಲಿ ಪ್ರಣಯದ ಅನಂತತೆಯನ್ನೂ ಬದುಕಿನ ಅವಿಚ್ಛಿನ್ನತೆಯನ್ನೂ ತೋರಿಸುತ್ತದೆ. ಶ್ರೀರಂಗರ ಸಾವಿತ್ರಿಯಲ್ಲಿ ಪ್ರೀತಿ, ಪ್ರಣಯಗಳು; ಪ್ರಕೃತಿ–ಪುರುಷ ಸಂಬಂಧ; ಜೀವನದ ಅವಿಚ್ಛಿನ್ನತೆ ಮುಖ್ಯ ಧ್ವನಿಯಾದರೆ ಮಾಸ್ತಿ, ಕುವೆಂಪು ನಾಟಕಗಳು ಪೌರಾಣಿಕ ಕತೆಯ ಪ್ರತಿಕೃತಿಗಳಷ್ಟೇ ಆಗಿವೆ. ಮಾಸ್ತಿಯವರ ನಾಟಕದಲ್ಲಂತೂ ಸಾವಿತ್ರಿ ಯಮನನ್ನು ಗೆಲ್ಲುವವರೆಗೆ ವ್ರತವೆಂಬಂತೆ ಪ್ರಣಯದಿಂದ ದೂರ ನಿಲ್ಲುತ್ತಾಳೆ. ಪ್ರೀತಿ ಪ್ರಣಯಗಳ ಆಯಾಮದಲ್ಲಿ ಸರ್ವಕಾಲಿಕ ಮೌಲ್ಯ ಪಡೆಯುವ ಶ್ರೀರಂಗರ ಸಾವಿತ್ರಿ ಈ ಕಾರಣದಿಂದಾಗಿಯೇ ಮಾಸ್ತಿ, ಕುವೆಂಪು ಅವರ ಸಾವಿತ್ರಿಗಿಂತ ಹೆಚ್ಚು ಅರ್ಥಪೂರ್ಣವಾಗುತ್ತಾಳೆ. ಮೌಲಿಕವಾಗಿ ಪುರಾಣದ ಚೌಕಟ್ಟನ್ನು ಮೀರಿ ಬೇರೇನೂ ಹೇಳದ ಮಾಸ್ತಿಯವರ ಸಾವಿತ್ರಿ ತಾಂತ್ರಿಕವಾಗಿ ತನ್ನ ದೃಶ್ಯಗುಣಗಳಿಂದ ಯಶಸ್ವಿ ಎನಿಸುತ್ತದೆ.

ಶಾಂತಾ ನಾಟಕದಲ್ಲೂ ಮಾಸ್ತಿಯವರು ಸ್ವಲ್ಪ ಬದಲಾವಣೆ ಮಾಡಿಕೊಂಡಿದ್ದಾರಾದರೂ ಈ ಬದಲಾವಣೆ ಹೆಚ್ಚು ತಾಂತ್ರಿಕವಾದದ್ದು. ಋಷಿಕುಮಾರನ ಬಳಿಗೆ ಸೂಳೆಯ ಬದಲು ರಾಜಕುಮಾರಿಯನ್ನು ಕಳುಹಿಸುವುದಷ್ಟಕ್ಕೇ ಈ ಬದಲಾವಣೆ ಸೀಮಿತಗೊಂಡಿದೆ. ಹಾಗೂ ಇಲ್ಲಿ ಚಂಚಲಾ–ಋಷಿಕುಮಾರರ ಪ್ರಣಯದ ಮೇಲೆ ಸ್ವಲ್ಪ ಹೆಚ್ಚು ಒತ್ತು ಬಿದ್ದಿದೆಯಾದರೂ ಇದು

ಹೊಸ ಅರ್ಥ ಏನನ್ನೂ ಸ್ಫುರಿಸುವುದಿಲ್ಲ. ಋಷಿಕುಮಾರನ ಆಗಮನ ಮತ್ತು ಕ್ಷಾಮನಿವಾರಣೆ ನಾಟಕದ ಕೇಂದ್ರವಾದರೂ ಇದು ಕೇವಲ ಮಾತಿನ ಪ್ರಸ್ತಾಪದ ಹಂತದಲ್ಲೇ ಉಳಿದುಬಿಡುತ್ತದೆ. ಹೀಗಾಗಿ 'ಶಾಂತಾ' ಇತ್ತ ಚಂಚಲಾ–ಋಷಿಕುಮಾರರ ಪ್ರಣಯದ ನಾಟಕವೂ ಆಗದೆ ಅತ್ತ ಋಷಿಕುಮಾರ ಮಳೆ ಬರಿಸುವ ಶಕ್ತಿ ಮತ್ತು ಕ್ಷಾಮನಿವಾರಣೆಯ ಸಾಧ್ಯಶ್ಯವೂ ಆಗದೆ ಸೊರಗಿದೆ. ಋಷಿಕುಮಾರನ ಆಗಮನ, ಕ್ಷಾಮನಿವಾರಣೆ, ಜನತೆಯ ಸಂತಸ, ವಿಭಾಂಡಕ ಮುನಿಯ ಕೋಪ– ಹೀಗೆ ವಸ್ತುವಿನಲ್ಲಿರುವ ನಾಟಕೀಯತೆ ತಾನೇತಾನಾಗಿ ಪೂರ್ಣರೀತಿಯಲ್ಲಿ ಪ್ರಕಟಗೊಂಡಿಲ್ಲ. ಋಷ್ಯಶೃಂಗನನ್ನು ಒಲಿಸಿಕೊಳ್ಳುವುದು, ಅದಕ್ಕೆ ಸೂಕ್ತವಾತಾವರಣ ಕಲ್ಪಿಸುವುದು ಇವುಗಳಲ್ಲಿ ತುಂಬ ಸಮರ್ಪಕವಾಗಿ ಕೆಲಸ ಮಾಡಿರುವ ಮಾಸ್ತಿಯವರ ಪ್ರತಿಭೆ ನಾಟಕದ ಶೃಂಗದಲ್ಲಿ ಸೋತಂತೆ ಕಾಣುತ್ತದೆ. ಕೇವಲ ಒಂದು ಪುರಾಣ ಕತೆಯ ನಾಟಕವಾಗಿಯೇ ಪರಿಣಾಮಕಾರಿಯಾಗಬೇಕಾಗಿದ್ದ 'ಶಾಂತಾ' ಬೆಳವಣಿಗೆಯ ಕ್ರಮ ಕುಂಠಿತಗೊಂಡಿದ್ದರಿಂದ ಉದ್ದೇಶಪೂರ್ವಕವಾಗಿ ಸಂಕುಚಿತಗೊಳಿಸಿದ ಭಾವನೆಯನ್ನುಂಟು ಮಾಡುತ್ತದೆ.

ಭಟ್ಟರ ಮಗಳು ವೈಷ್ಣವ ಸಂಪ್ರದಾಯದ ಗೋದಾದೇವಿ ಚರಿತ್ರೆಯನ್ನು ಆಧರಿಸಿದ ನಾಟಕ. ಕತೆಯಷ್ಟರಿಂದಲೇ ಓದುಗರ ಸಹಾನುಭೂತಿ ಪಡೆಯುವ ಈ ನಾಟಕ ಮೌಲ್ಯ ನಿರ್ಣಯ ಹಾಗೂ ತಾಂತ್ರಿಕ ದೃಷ್ಟಿಯಿಂದ ಅಸಮಾಧಾನ ಉಂಟು ಮಾಡುತ್ತದೆ. ಮೌಲ್ಯದ ದೃಷ್ಟಿಯಿಂದ ಮನ್ನಾರ್ ಪಾತ್ರರಚನೆ ಅಸಮರ್ಪಕ ಎನಿಸುತ್ತದೆ.

ಇಡೀ ನಾಟಕ ನಿಂತಿರುವುದು ಒಂದು ಹುಸಿ ಸಂಗತಿಯ ಮೇಲೆ. ಕಿಡಿಗೇಡಿಗಳು ಹೇಳಿದ ಒಂದು ಸುಳ್ಳು ಸಂಗತಿಯನ್ನು ನಂಬಿ ಮನ್ನಾರ್ ಲೌಕಿಕದಿಂದ ವಿಮುಖನಾಗುತ್ತಾನೆ. ಹೆಂಡತಿ ಸತ್ತ ಸುದ್ದಿ ಸುಳ್ಳೆಂದು ತಿಳಿಯುವ ವೇಳೆಗೆ ಅವನು ಸನ್ಯಾಸಿಯಾಗಿರುತ್ತಾನೆ. ಹೆಂಡತಿಯೇ ಎದುರು ಬಂದು ನಿಂತು ತಪ್ಪು ತಿಳುವಳಿಕೆಯಲ್ಲಿ ಕೈಗೊಂಡ ಸನ್ಯಾಸ ಊರ್ಜಿತವಲ್ಲ ಎಂದು ಸವಾಲು ಹಾಕಿದಾಗ ಮನ್ನಾರ್ ಕೊಡುವ ಉತ್ತರ, ಅವನ ನಡುವಳಿಕೆಗಳಿಗೆ ಮೌಲಿಕವಾದಂಥ ಸಮರ್ಥನೆ ಏನೂ ದೊರೆಯುವುದಿಲ್ಲ. ಮನ್ನಾರ್‌ನ ಸನ್ಯಾಸ ಅಭಾವ ಜನ್ಯವಾದದ್ದು. ತಪ್ಪು ತಿಳುವಳಿಕೆಯಿಂದ ಆದದ್ದೇ ಹೊರತು ಅಂತರಂಗದ ಜರೂರಿಯಿಂದ ಬಂದದ್ದಲ್ಲ ಎಂಬುದು ಸ್ಪಷ್ಟವಿದೆ. ಹೀಗಿರುವಾಗ ಮನ್ನಾರ್ "ಈ ಹುಚ್ಚು ಬಾಳುವೆಗೆ ಅತಿ ಹಚ್ಚಿಕೊಂಡಿಹನು ಇವನು ಸನ್ಯಾಸಿ ಆಗುವುದೊಳಿತು'' ಎಂದು ದೇವರ ಮೇಲೆ ಹೊಣೆ ವರ್ಗಾಯಿಸುತ್ತಾನೆ. ಅವರ ಸನ್ಯಾಸದ ನಿರ್ಧಾರಕ್ಕೆ ಭದ್ರವಾದ ತಳಹದಿ ಇಲ್ಲ ಎನಿಸುತ್ತದೆ. ಸುತ್ತ ಮುತ್ತಣ ಜನ ಹೇಳಿದ ಒಂದು ಸಂಗತಿಯನ್ನು ಪ್ರಮಾಣೀಕರಿಸಿ ನೋಡುವ ಪ್ರಯತ್ನವನ್ನೂ ಮಾಡದ ಅವನ ನಿಲುವು ಪ್ರಶ್ನಾರ್ಹವೆನಿಸುತ್ತದೆ. ಅಥವಾ ಸನ್ಯಾಸ ಅವನಿಗೆ ಸಂಸ್ಕಾರಜನ್ಯವಾಗಿದ್ದು, ಒಂದು ಅವಕಾಶ ಮಾತ್ರದಿಂದ ಅವನು ಆ ಆಶ್ರಮಕ್ಕೆ ಜಿಗಿದ ಎನ್ನುವುದಾದಲ್ಲಿ ಅವನ ವ್ಯಕ್ತಿತ್ವದಲ್ಲಿ ಇಂಥ ಒಂದು ಗುಣವೂ ಕಾಣಿಸಿಕೊಳ್ಳುವುದಿಲ್ಲ. ಅವನ ಪೂರ್ವ ಇತಿಹಾಸ, ವಂಶ, ಸಂಸ್ಕಾರ ಅವನ ವ್ಯಕ್ತಿತ್ವದ ಮೇಲೆ ಇವುಗಳ ಪ್ರಭಾವ ಇದಾವುದೂ ಕುರಿತ ಬೆಳವಣಿಗೆ ಕೃತಿಯಲ್ಲಿಲ್ಲ. ಆದ್ದರಿಂದ ಮನ್ನಾರ್ ನಂಬುವ ಮೌಲ್ಯ ಸಮಂಜಸವೆನಿಸುವುದಿಲ್ಲ. ಅತ್ತುಳಾಯ್ ಅವನ ಸನ್ಯಾಸವನ್ನು ಪ್ರಶ್ನಿಸುವುದು ನಿಜವೆನ್ನಿಸುವಷ್ಟು ಅವನ

ಸನ್ಯಾಸದ ನಿಲುವು ನಿಜವೆನಿಸುವುದಿಲ್ಲ. ಅಂದ ಮಾತ್ರಕ್ಕೆ ಮಾಸ್ತಿಯವರು ಅವನಿಂದ ಸನ್ಯಾಸ ಬಿಡಿಸಿ ಅತ್ತುಳಾಯ್ ಜೊತೆಗೂಡಿಸಬೇಕಾಗಿತ್ತು ಎಂದರ್ಥವಲ್ಲ. ಅವನ ಪಾತ್ರರಚನೆ, ಅವನ ವ್ಯಕ್ತಿತ್ವ, ಅವನ ಸನ್ಯಾಸಗಳಿಗೆ ತಾತ್ವಿಕವಾದ ನೆಲಗಟ್ಟು ಇಲ್ಲವಾದ್ದರಿಂದ ಮನ್ನಾರ್‌ನ ಸನ್ಯಾಸದ ಒಲವನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಹೀಗೆ ಮೌಲ್ಯದ ದೃಷ್ಟಿಯಿಂದ ಅತೃಪ್ತಿ ಉಂಟು ಮಾಡುವ ಭಟ್ಟರ ಮಗಳು ನಾಟಕೀಯ ತಂತ್ರಗಳಲ್ಲೂ ಸೋಲುತ್ತದೆ. ಊರಿನ ಹೊಟ್ಟೆಕಿಚ್ಚಿನ ಮಂದಿ ಸುಳ್ಳು ಹೇಳುವುದು, ಇಲ್ಲಿನ ಘರ್ಷಣೆ, ಮನ್ನಾರ್ ಸನ್ಯಾಸ, ಅನಂತರ ಮನ್ನಾರ್–ಅತ್ತುಳಾಯ್ ಭೇಟಿ ಹೀಗೆ ವಸ್ತು ವಿನ್ಯಾಸದಲ್ಲೇ ನಾಟಕೀಯತೆ ಇದೆಯಾದರೂ ಮಾಸ್ತಿಯವರು ನಾಟಕ ಕ್ರಿಯೆಗೆ ಹೆಚ್ಚು ಗಮನಕೊಟ್ಟಿಲ್ಲ. ಬಹುಪಾಲು ಘಟನೆಗಳನ್ನು ಪಾತ್ರವೊಂದರ ಬಾಯಲ್ಲಿ ಆಡಿಸಿಬಿಡುತ್ತಾರೆ. ದೃಶ್ಯವತ್ತಾಗಿ ನಮ್ಮ ಮನಸ್ಸಿನಲ್ಲಿ ಚಿರಕಾಲ ನಿಲ್ಲಬಹುದಾದಂಥವು ಬಾಯಿ ಮಾತಿನಲ್ಲಿ ಮುಗಿದು ಹೋಗುತ್ತವೆ. ನಾಟಕ ಪ್ರಜ್ಞೆಇದ್ದೂ ಮಾಸ್ತಿಯವರು ವಸ್ತುವಿನಲ್ಲಿನ ನಾಟಕೀಯತೆಯನ್ನು ಒಂದು ಕ್ರಮದಲ್ಲಿ ಬೆಳೆಸದೇ ನಿರೂಪಣಾ ವಿಧಾನ ಅನುಸರಿಸಿರುವುದಕ್ಕೆ ಇದನ್ನು ಪ್ರಸಾರಕ್ಕಾಗಿ ಬರೆದದ್ದೇ ಕಾರಣವಿರಬಹುದೆ ? ಹಾಗಿದ್ದಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸುವಾಗ ವಸ್ತುವಿನ ನಾಟಕೀಯ ಗುಣದತ್ತ ಗಮನ ಕೊಡಬಹುದಿತ್ತು ಎನಿಸುತ್ತದೆ.

ತಾಳೀಕೋಟೆ, ಅನಾರ್ಕಲಿ ನಾಟಕಗಳಲ್ಲೂ ದೈವವೇ ಮಹತ್ವದ ಪಾತ್ರವಹಿಸುವುದನ್ನು ಕಾಣಬಹುದು. ತಾಳಿಕೋಟೆಯ ವಸ್ತು ಕೇವಲ ವಯಕ್ತಿಕ ಸಂಬಂಧಗಳಿಗಷ್ಟೇ ಸೀಮಿತಗೊಂಡಿರದೆ ಧಾರ್ಮಿಕ ಹಾಗೂ ಮತೀಯ ಆಯಾಮಗಳನ್ನೂ ಹೊಂದಿದ್ದು ಇದರಿಂದ ನಾಟಕಕ್ಕೆ ಸಾರ್ವತ್ರಿಕ ವ್ಯಾಪಕತೆಯಿದೆ. ನಾಟಕದಲ್ಲಿನ ಘರ್ಷಣೆಯ ಮೂಲ ರಾಮರಾಯನ ವಿಲಾಸಜೀವನದ ವಯಕ್ತಿಕ ಸಂದರ್ಭದಲ್ಲಿದೆಯಾದರೂ ಇದು ಮುಂದೆ ಧಾರ್ಮಿಕ ರೂಪ ಪಡೆದು ಉಲ್ಬಣಗೊಳ್ಳುತ್ತದೆ. ಕ್ಷಣಕ್ಷಣಕ್ಕೂ ನಾಟಕ ಘರ್ಷಣೆಯ ಹಳಿ ಹರಿದಂತೆ ನೈತಿಕ ಮೌಲ್ಯಗಳು ಪರೀಕ್ಷೆಗೆ ಈಡಾಗುತ್ತವೆ. ಪ್ರಾರಂಭಕ್ಕೇ, ಒಲಿದು ಬಂದ ಹೆಣ್ಣನ್ನು ಬಹಿರಂಗವಾಗಿ ಒಪ್ಪಿಕೊಳ್ಳುವಷ್ಟು ನೈತಿಕಸ್ಥೈರ್ಯ ತೋರದ ರಾಮರಾಯನ ನಡುವಳಿಕೆಯಿಂದಾಗಿ ನೈತಿಕ ಸಮಸ್ಯೆಯೊಂದರತ್ತ ಬಾಗುವ ನಾಟಕ ಮುಂದೆ ಧಾರ್ಮಿಕ ಸ್ವರೂಪ ತಳೆದು ಬಿಕ್ಕಟ್ಟಿಗೆ ಚಾಚಿಕೊಂಡಾಗ ಧರ್ಮ ಮತ್ತು ವಯಕ್ತಿಕ ನೀತಿಗಳು ಎದುರು ಬದುರಾಗುತ್ತವೆ. ಧರ್ಮದ ರಕ್ಷಣೆಗಾಗಿ ತಂದೆಯ ವಿರುದ್ಧ ಮಗನನ್ನು ಎತ್ತಿಕಟ್ಟುವ ಕುತಂತ್ರ ನಡೆಯುತ್ತದೆ. ಈ ಕುತಂತ್ರದ ಹಿನ್ನೆಲೆಯಲ್ಲಿ ಧರ್ಮದ ರಕ್ಷಣೆಯ ಜೊತೆಗೆ ಮಹಮದೀಯ ಹೆಣ್ಣೊಬ್ಬಳ ಗತಿಗೆಡೆಸಿದ ರಾಮರಾಯನ ವಿರುದ್ಧ ಪ್ರತೀಕಾರವೂ ಇದೆ. ಹೆಣ್ಣನ್ನು ವಂಚಿಸಿದ ರಾಮರಾಯನ ನಡುವಳಿಕೆ, ಧರ್ಮದ ಹೆಸರಿನಲ್ಲಿ ತಂದೆಯ ವಿರುದ್ಧ ಮಗನನ್ನು ಎತ್ತಿಕಟ್ಟುವ ಉಸಮಾನನ ನಡುವಳಿಕೆ (ಈ ಉಸಮಾನ ರಾಮರಾಯನಿಂದ ವಂಚಿತಳಾದ ಆಯಷೆಯಲ್ಲಿ ಅನುರಕ್ತನಾಗಿದ್ದವನು ಎಂಬುದನ್ನು ಮರೆಯಲಾಗದು,) ರುಸ್ತುಮನನ್ನು ಧರ್ಮ, ಹೆಣ್ಣುಗಳ ಆಮಿಷಕ್ಕೊಡ್ಡಿ ಬಳಸಿಕೊಳ್ಳುವ ರೀತಿ ಮೊದಲಾದವುಗಳಲ್ಲಿ ನಾಟಕದ ನೈತಿಕ ಸಮಸ್ಯೆ ಗಾಢವಾಗುತ್ತದೆ. ನಾಟಕದ ಗರ್ಭದಲ್ಲಿ ಇಂಥದೊಂದು ನೈತಿಕ ಬಿಕ್ಕಟ್ಟು ಇದೆಯಾದರೂ ಮೌಲ್ಯಗಳ ಬಿಕ್ಕಟ್ಟಿನ ಸ್ಫೋಟಕ ಸ್ಥಿತಿ

ಕಾಣುವುದಿಲ್ಲ. ಮೌಲ್ಯಗಳ ಬಿಕ್ಕಟ್ಟಿನ ಸಂಘರ್ಷದ ಆಳಕ್ಕೆ ಇಳಿಯದೇ ನಾಟಕ ಚರಿತ್ರೆಯ ಘಟನೆಯೊಂದರ ಮೇಲ್ಮೈ ಹಂತದ ಪುನರ್ ಸೃಷ್ಟಿಯಾಗಿ ನಿಲ್ಲುತ್ತದೆ.

ಅನಾರ್ಕಲಿಯೂ ವಿಧಿಯ ಅವಕೃಪೆಯಿಂದಾಗಿ ರಾಜರ ಜನಾನಾ ಸೇರಿದ ನಿರ್ಭಾಗ್ಯ ಹೆಣ್ಣೊಬ್ಬಳ ಚಿತ್ರವನ್ನು ಕೊಡುತ್ತದೆ. ಇಲ್ಲೂ ನೀತಿ, ಅನೀತಿಗಳ ಪ್ರಶ್ನೆ ಇದ್ದರೂ ನಾಟಕ ಮೌಲ್ಯಗಳ ಬಿಕ್ಕಟ್ಟಿನ ಧ್ವನಿ ಪಡೆದುಕೊಳ್ಳುವುದಿಲ್ಲ.

ಭಕ್ತಿ ಮತ್ತು ಮುಕ್ತಿ ಮೌಲ್ಯಗಳು ಪ್ರಧಾನವಾದ ತಿರುಪಾಣಿ, ಪುರಂದರ ದಾಸರು' ಕನಕಣ್ಣ ನಾಟಕಗಳಲ್ಲೂ ಮೌಲ್ಯಗಳ ನೇರ ಸಂಘರ್ಷ ಕಂಡು ಬರುವುದಿಲ್ಲ. ಪುರಂದರದಾಸರು ನಾಲ್ಕು ಭಾಗಗಳಲ್ಲೂ ಮನುಷ್ಯ ಚೇತನವೊಂದು ಕ್ರಮೇಣ ಲೌಕಿಕ ವ್ಯಾಮೋಹಗಳಿಂದ ಕಳಚಿಕೊಂಡು ಮುಕ್ತಿಮಾರ್ಗ ಹಿಡಿದ ಜೀವನದ ನಾಟಕೀಕರಣವಿದೆ. ಇಲ್ಲಿ ಮೌಲ್ಯಗಳನ್ನು ಪ್ರಶ್ನಿಸದೇ ಅದನ್ನು ಆರಾಧಕ ಭಾವದಿಂದ ಅಪ್ಪಿಕೊಳ್ಳುವ ಮನಸ್ಸೊಂದನ್ನು ಕಾಣುತ್ತೇವೆ. ಆಧ್ಯಾತ್ಮ ಸಂಬಂಧವಾದ ಮೌಲ್ಯಗಳು ಇಂದು ನಮಗೆ ನಂಬಿಕೆಗೆ ಅರ್ಹ ಎನಿಸದಿದ್ದರೂ ತೀವ್ರ ಕಾಮನೆಗಳಿಂದ ನೆಲದ ಬದುಕಿಗೆ ಅಂಟಿಕೊಂಡಿದ್ದು ನಂತರ ಪರಿವರ್ತನೆ ಹೊಂದಿದ ದಾಸರ ಶ್ರದ್ಧಾವಂತ ವ್ಯಕ್ತಿತ್ವವೇ ಬೆರಗುಗೊಳಿಸುವಂಥಾದ್ದಾಗಿದೆ. ಇಲ್ಲೂ ಕೂಡ ಘಟನಾ ಪ್ರಧಾನವಾದ ಪುರಂದರದಾಸರ ಜೀವನದಲ್ಲೇ ನಾಟಕೀಯತೆ ಇದ್ದರೂ ಕಥಾ ನಿರೂಪಣೆಯೇ ಎದ್ದುಕಾಣುತ್ತದೆ. ಕನಕಣ್ಣ ನಾಟಕಕ್ಕೂ ಇದೇ ಮಾತುಗಳು ಅನ್ವಯಿಸುತ್ತವೆ. ಕನಕಣ್ಣನ ಪ್ರಸಂಗದಲ್ಲಿ ಜಾತಿಯ ಕೊಂಡಿಯೊಂದು ಸೇರಿದ್ದು ಕೋಮು ಮೌಲ್ಯ ಇದ್ದರೂ ಮಾಸ್ತಿಯವರ ಪ್ರಜ್ಞೆ ಅದನ್ನು ಮುಟ್ಟುವುದಿಲ್ಲ. ಕನಕಣ್ಣ ತನ್ನ ಸ್ಥಾನ ಅರಿತು ನಡೆದುಕೊಂಡಂತೇ ನಾಟಕ ಇದೆ. ಇಲ್ಲಿ ಮಾಸ್ತಿಯವರ ತಟಸ್ಥಭಾವವನ್ನು ಕಾಣಬಹುದು. ಆದರೆ ತಿರುಪಾಣಿಯಲ್ಲಿ ಹಾಗಲ್ಲ. ಮಾಸ್ತಿಯವರು ಈ ನಾಟಕದಲ್ಲಿ ಜಾತಿ–ಮತ; ಮಡಿ–ಮೈಲಿಗೆ; ಆತ್ಮ–ದೇಹಗಳ ನಂಬಿಕೆಗಳನ್ನೂ ಭೇದಗಳನ್ನೂ ಸೂಕ್ಷ್ಮವಾಗಿ ಚುಚ್ಚುತ್ತಾರೆ (ನೋಡಿ–'ತಿರುಪಾಣಿ', ಭಕ್ತಿನಾಟಕಗಳು) ಮಾನವನಿರ್ಮಿತವಾದ ಈ ಅಂತರಗಳನ್ನು ಗೇಲಿ ಮಾಡುವ ತಿರುಪಾಣಿಯಲ್ಲಿ ಪಾಣಿ ಭಗವಂತನಲ್ಲಿ ಐಕ್ಯವಾಗುವುದರೊಂದಿಗೆ ದೇವರ ಕಣ್ಣಲ್ಲಿ ಈ ಭೇದಭಾವ ಇಲ್ಲ ಎಂಬ ಅನಿಸಿಕೆ ಉಂಟು ಮಾಡುವ ಮೂಲಕ ನಾಟಕ ಜಾತಿ–ಮತ ಮೊದಲಾದ ಹಿಂದೂ ನಂಬಿಕೆಗಳನ್ನು ಛೇಡಿಸುವಂಥ ವ್ಯಂಗ್ಯದ ದನಿ ಪಡೆದುಕೊಳ್ಳುತ್ತದೆ. ಆದರೂ ಲೌಕಿಕ ನೆಲೆಯಲ್ಲಿ ಮೂಡಿರುವ ಇಂಥದೊಂದು ಮೌಲ್ಯ ಸಂಘರ್ಷಕ್ಕೆ ದೇವರಲ್ಲಿ ಐಕ್ಯವಾಗುವ ಪರಿಹಾರ ನೇತ್ಯಾತ್ಮಕವಾದದ್ದು ಹಾಗೂ ಭಾವನಾತ್ಮಕವಾದದ್ದು ಎನಿಸುತ್ತದೆ.

ಹೀಗೆ, ಹೆಚ್ಚಿನ ಅರ್ಥವಿಸ್ತಾರಗಳಿಗಾಗಲೀ, ಮೌಲ್ಯಗಳ ಸಂಘರ್ಷಕ್ಕಾಗಲೀ ತೆರೆದು ಕೊಳ್ಳದೆ ಇತಿಹಾಸ/ಪುರಾಣಗಳಿಂದ ಆಯ್ದ ವಸ್ತು ಮಾಸ್ತಿಯವರ ಕೈಯಲ್ಲಿ ಕೇವಲ ನಾಟಕದರೂಪ ಹೊತ್ತು ನಿಲ್ಲುತ್ತವೆ. ಇದು ಮಾಸ್ತಿಯವರ ನಾಟಕಗಳ ಒಂದು ಪರಿ. ಮಾಸ್ತಿಯುವರ ಪ್ರತಿಭೆ ಪುರಾಣ ಮತ್ತು ಇತಿಹಾಸಗಳಿಂದ ಆಯ್ದ ಘಟನೆಗಳ ಯಥಾವತ್ತಾದ ಚಿತ್ರವನ್ನು ಕೊಡುವ ಒಂದು ಮಿತಿಯಲ್ಲಿ ಕೆಲಸಮಾಡುವುದನ್ನು ಈ ನಾಟಕಗಳಲ್ಲಿ ನೋಡಬಹುದು. ಮೇಲಿನ ನಾಟಕಗಳನ್ನು ಓದಿದ ನಂತರ ವಸ್ತುವಿನ ಪೂರ್ಣವಿಕಾಸ ಹಾಗೂ ನಾಟಕೀಯ

ಬೆಳವಣಿಗೆಗೆ ಸಂಬಂಧಿಸಿದಂತೆ ಉಂಟಾಗುವ ಅತೃಪ್ತಿ, ಅಸಮಾಧಾನಗಳಿಗೆ ಮಾಸ್ತಿಯವರು ತಾವಾಗಿ ಹಾಕಿಕೊಂಡಿರುವ ಮಿತಿಯೇ ಕಾರಣವಾಗಿ ತೋರುತ್ತದೆ. ಮಾಸ್ತಿಯವರ ಪ್ರತಿಭೆ ಸ್ವತಂತ್ರವಾಗಿ ಗರಿಗೆದರಿ ಕೆಲಸಮಾಡಿರುವ ಇನ್ನೊಂದು ಪರಿಯನ್ನು ಯಶೋಧರಾ, ಮಂಜುಳಾ,' ಮಾಸತಿ, ಕಾಕನಕೋಟೆ ನಾಟಕಗಳಲ್ಲಿ ಕಾಣಬಹುದು.

ಬುದ್ಧನ ಕತೆ ಇಂದಿಗೂ ನಮ್ಮ ಸಾಹಿತ್ಯಲೋಕದಲ್ಲಿ ಸಲ್ಲುವ ವಸ್ತುವಾಗಿದೆ. ಬುದ್ಧನ ಕತೆ ಆಧರಿಸಿ ನವೋದಯದ ಕುವೆಂಪು, ಶಿವರಾಮಕಾರಂತ ಇವರುಗಳೂ ನಾಟಕಗಳನ್ನು ರಚಿಸಿದ್ದಾರೆ. ಕಾರಂತರ ಕಿಸಾಗೋತಮಿಯಲ್ಲಿ ಬುದ್ಧನ ತತ್ವಗಳನ್ನು ಅಂದಿನ ಸಮಾಜದ ಜೀವಿಗಳ ಮುಖೇನ ವೈಚಾರಿಕ ನೆಲೆಯಲ್ಲಿ ಪರೀಕ್ಷಿಸುವ ಪ್ರಯತ್ನವಿದ್ದರೆ ಕುವೆಂಪು ಅವರ ಮಹಾರಾತ್ರಿಯಲ್ಲಿ ಸಿದ್ಧಾರ್ಥ ಲೌಕಿಕ ಮಮಕಾರಗಳಿಂದ ಮುಕ್ತನಾಗಿ ಮುಕ್ತಿಯಮಾರ್ಗ ಕಂಡುಕೊಂಡು ಬುದ್ಧನಾಗುವ ಹಾದಿಹಿಡಿದ ಮಹಾಸನ್ನಿವೇಶದ ಚಿತ್ರವಿದೆ. ಮಾಸ್ತಿಯವರ ಯಶೋಧರಾ ಹೆಸರೇ ಸೂಚಿಸುವಂತೆ ಯಶೋಧರೆಯ ದೃಷ್ಟಿಯಿಂದ ಇಡೀ ಪ್ರಕರಣವನ್ನು ಶೋಧಿಸುವ ಪ್ರಯತ್ನವಾಗಿದೆ. ಯಶೋಧರೆಯ ಒಳತೋಟಿ, ಅವಳ ವ್ಯಕ್ತಿತ್ವ ಬದುಕಿನ ಏರಿಳಿತಗಳಲ್ಲಿ ಹದಗೊಳ್ಳುವ ರೀತಿ, ಬುದ್ಧ–ಯಶೋಧರೆಯರ ಸಂವಾದದಲ್ಲಿ ಲೌಕಿಕ–ಆಧ್ಯಾತ್ಮಿಕ ಮೌಲ್ಯಗಳು ಘರ್ಷಣೆಗೆ ಬೀಳುವ ಬಗೆ ಈ ಕ್ರಮದಲ್ಲಿ ಯಶೋಧರಾ ವಿವಿಧ ಮಜಲುಗಳಲ್ಲಿ ಒಂದು ದೃಶ್ಯ ರೂಪಕವಾಗಿ ಬೆಳೆಯುತ್ತದೆ. ನಾಟಕದಲ್ಲಿ ಸಂಭವಿಸುವ ಲೌಕಿಕ–ಆಧ್ಯಾತ್ಮಿಕ ಮೌಲ್ಯಗಳ ಸಂಘರ್ಷದಲ್ಲಿ ಆಧ್ಯಾತ್ಮಿಕ ಮೌಲ್ಯಗಳೇ ಗೆಲ್ಲುವುದರ ಜೊತೆಗೆ ನಾಟಕ ಅತಿಸೂಕ್ಷ್ಮವಾಗಿ ಆಧ್ಯಾತ್ಮಕ ಮತ್ತು ಮುಕ್ತಿ ಮಾರ್ಗದಲ್ಲಿ ಮಹಿಳೆಯರ ಸಹಬಾಧ್ಯತೆಯನ್ನೂ ಪ್ರತಿಪಾದಿಸುತ್ತದೆ. ಲೌಕಿಕ–ಆಧ್ಯಾತ್ಮಿಕ ಒಲವು ಕುರಿತ ಯಶೋಧರೆಯ ಅಂತರಂಗದ ತುಮುಲ, ಗಂಡನಂತೆ ಮಗನನ್ನೂ ಕಳೆದುಕೊಳ್ಳುವ ಭೀತಿ, ಬುದ್ಧ ಬಂದಾಗ ಕಾಣುವ ಅವನ ಶೃಂಗಸದೃಶವ್ಯಕ್ತಿತ್ವ, ಬುದ್ಧನ ಜೊತೆ ಸಂವಾದ ಹೀಗೆ ಹಲವು ಹನ್ನೊಂದು ನಿಟ್ಟಿನಿಂದ ಮೌಲ್ಯಗಳು ಪರೀಕ್ಷೆಗೆ ಗುರಿಯಾಗುತ್ತವೆ. ಇಲ್ಲಿ ಗೆಲುವು ಕೇವಲ ಆಧ್ಯಾತ್ಮಿಕ ಮೌಲ್ಯಗಳದ್ದಷ್ಟೇ ಆಗಿರದೆ ಯಶೋಧರೆಯ ಗೆಲವೂ ಆಗಿದೆ. ಎಲ್ಲ ಕಷ್ಟಗಳ ಪೆಟ್ಟಿನಿಂದ ಪೂರ್ಣ ಹಣ್ಣಾದ, ಲೌಕಿಕ ಅನುಭವಗಳಿಂದ ಮಾಗಿದ ಅವಳ ಜೀವ ಕೊನೆಗೆ ಬುದ್ಧನ ಜೊತೆಯ ಸಂವಾದದಲ್ಲಿ ಮುಕ್ತಿ ಮಾರ್ಗದತ್ತ ವಾಲುತ್ತದೆ. ದೀಕ್ಷೆ ಪಡೆಯುವ ತನ್ನ ನಿಲುವಿನಲ್ಲಿ ಬುದ್ಧನನ್ನು ಗೆದ್ದು ಆಧ್ಯಾತ್ಮದ ಹಕ್ಕನ್ನು ಪಡೆಯುತ್ತಾಳೆ. ಈ ಮೂಲಕ ನಾಟಕ ಭೋಗದ ಜೊತೆಗೆ ಸನ್ಯಾಸದ ದೀಕ್ಷೆಗೂ ಹೆಣ್ಣನ್ನು ಅರ್ಹಳನ್ನಾಗಿಸುವ ನವೀನ ದೃಷ್ಟಿಯನ್ನು ಚೆಲ್ಲುತ್ತದೆ. ದೃಶ್ಯಗುಣಗಳಿಂದ ಯಶೋಧರಾ ಹಿಂದೆ ಬೀಳುವುದಾದರೂ ಕಾವ್ಯಗುಣದಲ್ಲಿ ಒಂದು ಸುಂದರ ಪ್ರಯೋಗವಾಗಿದೆ. ವಸ್ತುವಿನ ಬೆಳವಣಿಗೆಯ ದೃಷ್ಟಿಯಿಂದಲೂ ಒಟ್ಟಂದದಲ್ಲಿ ಒಂದು ಉತ್ತಮ ಕಲಾಸೃಷ್ಟಿಯಾಗಿ ನಿಲ್ಲುತ್ತದೆ.

ಮಂಜುಳಾ, ಮಾಸತಿ ಹೆಣ್ಣನ್ನೇ ಕೇಂದ್ರವಾಗುಳ್ಳ ನಾಟಕಗಳು. ಮಂಜುಳಾ ಮಾಸ್ತಿಯವರ ಏಕೈಕ ಸಾಮಾಜಿಕ ನಾಟಕ. ವಸ್ತುವಿನ ಸಾಮಾಜಿಕತೆಯಿಂದಾಗಿಯೋ ಏನೋ ಮಾಸ್ತಿಯವರ ಸೃಜನಾತ್ಮಕ ಪ್ರತಿಭೆ ಇಲ್ಲಿ ಹೆಚ್ಚು ಮುಕ್ತವೂ ವಿವೇಚನಶಾಲಿಯೂ ಆಗಿ ಕೆಲಸ ಮಾಡಿರುವುದನ್ನು ಗಮನಿಸಬಹುದು.

ಮಂಜುಳೆಯ ಗಂಡನಿಗೆ ಎರಡನೆಯ ಮದುವೆ ಮಾಡುವುದನ್ನು ತಪ್ಪಿಸಿ ಅವಳ ಸಂಸಾರವನ್ನು ಒಪ್ಪ ಮಾಡುವುದು ನಾಟಕದ ವಸ್ತು. ಮಗನಿಗೆ ಮತ್ತೊಂದು ಮದುವೆ ಮಾಡಿಸುವ ಲಕ್ಷ್ಮೀದೇವಮ್ಮನ ನಿರ್ಧಾರ; ಅದನ್ನು ತಪ್ಪಿಸಲು ಸೀತಮ್ಮ ನಡೆಸುವ ಪ್ರಯತ್ನ; ಈ ಪ್ರಯತ್ನಗಳ ಫಲವಾಗಿ ಲಕ್ಷ್ಮೀದೇವಮ್ಮ–ಮಂಜುಳೆಯ ತಾಯಿ ಹಾಗೂ ಮಂಜುಳಾ ಮತ್ತು ಅವಳ ಗಂಡ ಇವರುಗಳ ಮುಖಾಮುಖಿ–ಹೀಗೆ ನಾಟಕ ಹಂತ ಹಂತವಾಗಿ ಕ್ರಿಯಾಶೀಲವಾಗಿ ಬೆಳೆಯುತ್ತದೆ. ಕೊನೆಗೆ ನಾಟಕದೊಳಗೆ ಇನ್ನೊಂದು ಮರಿನಾಟಕವೇ ನಡೆದು ಮಂಜುಳೆಯ ಗಂಡನ ಎರಡನೇ ಮದುವೆ ನಿಲ್ಲುತ್ತದೆ, ಮಂಜುಳೆ ಗಂಡನ ಮನೆಗೆ ವಾಪಸಾಗುತ್ತಾಳೆ. ಈ ಕ್ರಿಯಾತ್ಮಕ ಬೆಳವಣಿಗೆಯ ಕ್ರಮದಲ್ಲಿ ಮಾಸ್ತಿಯವರು ಮಾನವ ಸಂಬಂಧಗಳನ್ನು ಶೋಧಿಸುತ್ತಾ ಒಂದೊಂದು ಪಾತ್ರದ ಅಂತರಂಗ ಬಹಿರಂಗಗಳನ್ನು ಜಾಲಾಡಿ ಬಿಸಿಲಿಗೆ ಹಾಕುತ್ತಾರೆ. ಒಂದು ವೈಯಕ್ತಿಕ ಸಂದರ್ಭದಲ್ಲಿ ಗಂಡು ಹೆಣ್ಣಿನ ಸಂಬಂಧಗಳನ್ನು ವಿಶ್ಲೇಷಿಸುವ ನಾಟಕ ಈ ಕ್ರಿಯೆಯಲ್ಲಿ ಮನುಷ್ಯ–ಮನುಷ್ಯರ ನಡುವಣ ಮಾನಸಿಕ ಅಂತರವನ್ನು ತೋರಿಸುತ್ತದೆ; ಗಂಡು–ಹೆಣ್ಣಿನ ಸಂಬಂಧ ಕುರಿತು ಪ್ರಗತಿಪರ ಮೌಲ್ಯವೊಂದನ್ನು ಪ್ರತಿಪಾದಿಸುತ್ತದೆ. ವಸ್ತು ಹಳೆಯದೆನಿಸದರೂ ಅದರ ಹಿಂದಿರುವ ಮೌಲ್ಯವಿವೇಚನೆಯಿಂದಾಗಿ, ಮನುಷ್ಯ ಸಂಬಂಧಗಳಲ್ಲಿನ ಅಂತರಗಳನ್ನು ಗುರುತಿಸಿರುವುದರಿಂದಾಗಿ ಮಂಜುಳಾ ಇಂದಿಗೂ ನಮ್ಮನ್ನು ಸ್ಪಂದಿಸುವಂತೆ ಮಾಡುತ್ತದೆ. ಬೆಳವಣಿಗೆಯ ಕ್ರಮದಲ್ಲಿ ಮಂಜುಳಾ ಮಾಸ್ತಿಯವರ ಉಳಿದ ನಾಟಕಗಳನ್ನು ಹಿಂದೆ ಹಾಕುತ್ತದೆ.

ವಸ್ತುವಿನ ದೃಷ್ಟಿಯಿಂದ ಮಾಸತಿ ಇಷ್ಟೇ ಸಮಕಾಲೀನವಾಗಿ ನಮ್ಮ ಸಂವೇದನೆಗೆ ತಾಕುತ್ತದೆ ಎಂದು ಹೇಳಲಾಗದು. ಮಾಸತಿಯ ವಸ್ತು ಸಹಗಮನ. ಸಹಗಮನದ ಹಿಂದಿನ ಉದಾತ್ತ ಧ್ಯೇಯ, ಅದರ ಪಾವಿತ್ರ್ಯ ಏನೇ ಇದ್ದರೂ ಅದು ಇಂದು ನಮಗೆ ಒಂದು ಜೀವನದ ಮೌಲ್ಯವಲ್ಲ. ವರ್ಷಗಳಷ್ಟು ಹಿಂದೆಯೇ ಅದು ಸಾಮಾಜಿಕವಾಗಿ ಬಹಿಷ್ಕೃತವಾಗಿದೆ. ಮೌಲ್ಯದ ದೃಷ್ಟಿಯಿಂದ ಸ್ವೀಕಾರಾರ್ಹವಲ್ಲ ಎನಿಸುವ ಮಾಸತಿಯನ್ನು ಯಾವ ಮಾನದಂಡದಿಂದ ನೋಡಬೇಕು? ಮಾಸತಿ ಮಾಸ್ತಿಯವರ ಕುಟುಂಬದಲ್ಲಿ ಬಹಳ ಹಿಂದೆ ನಡೆದ ಘಟನೆಯೊಂದರ ನಾಟಕೀಕರಣ. ಮಾಸತಿಯ ಯಶಸ್ಸು ಅದರ ಕಲಾತ್ಮಕ ಸಾಧನೆಯಲ್ಲಿದೆ.

'ಮಾಸತಿ' ವಸ್ತುವಿನೊಳಗಿರುವ ಘರ್ಷಣೆ ನಾಟಕೀಯವಾಗಿ ರೂಪುಗೊಂಡಿರುವ ಬಗೆ ಮಾಸ್ತಿಯವರ ನಾಟಕ ಪ್ರಜ್ಞೆಗೂ ಕಲಾಪರಿಣತಿಗೂ ಉತ್ತಮ ನಿದರ್ಶನವಾಗಿದೆ. ಗಂಡನ ಅನಾರೋಗ್ಯ; ಅದಕ್ಕೆ ಹಿನ್ನಲೆಯಾಗಿರುವ ತೌರಿನ ಪ್ರಯಾಣ, ಅಲ್ಲಿ ಅನಿವಾರ್ಯವಾಗಿ ಜೋಮಾಲೆ ಸರಬಿಟ್ಟು ಬಂದದ್ದು; ಅತ್ತೆ–ಸೊಸೆಯರ ಬಾಂಧವ್ಯ; ಇದೆಲ್ಲಕ್ಕೆ ಶಿಖರಪ್ರಾಯವಾಗಿ ಬರುವ ಸೊಸೆ ತಿರುಮಳೆಯ ಸಹಗಮನ ನಿರ್ಧಾರ; ವಿಧವೆಯ ಗೋಳಿನ ಬಾಳಿಗೆ ಜೀವಂತ ನಿದರ್ಶನವಾಗಿ ನಿಂತ ಅಲುಮೇಲು; ಭವಿಷ್ಯ ನುಡಿಯುವ, ವಿಧಿವೈಚಿತ್ರ್ಯಗಳನ್ನು ವ್ಯಾಖ್ಯಾನಿಸುವ ವಿಚ್ ಮಾದರಿಯ ಪಾಟಿ, ತಾಯ್ತನಕ್ಕೆ ಸವಾಲಾಗಿ ನಿಲ್ಲುವ ಕರುಳ ಬಳ್ಳಿಗಳು–ಈ ವಿನ್ಯಾಸದಲ್ಲಿ ಮಾಸ್ತಿಯವರು ತಿರುಮಳೆಯ ಸಂಕಲ್ಪ ಬಲವನ್ನು ಕ್ಷಣಕ್ಷಣಕ್ಕೂ ವಿವಿಧ ಪಾತ್ರಗಳ ಒಡನಾಟದಲ್ಲಿ, ಬದುಕಿನ ಆಮಿಷಗಳಲ್ಲಿ ಒರೆಗೆ ಹಚ್ಚುತ್ತಾ ಅನಾಯಾಸವಾಗಿ ನಾಟಕವನ್ನು ಶೃಂಗ *(climax)*

ದತ್ತ ಒಯ್ಯುತ್ತಾರೆ. ಈ ಕ್ರಿಯೆಯಲ್ಲಿ ಬದುಕು–ಸಾವು, ಲೌಕಿಕ–ಮುಕ್ತಿಮಾರ್ಗಗಳ ಸೆಳೆತಗಳು, ಆಕರ್ಷಣೆಗಳು ಒಂದಕ್ಕೊಂದು ಸೆಡ್ಡು ಹೊಡೆಯುತ್ತಾ ಪರಸ್ಪರ ತಾಕಲಾಟದಲ್ಲಿ ಬೆಳೆದು ದುರಂತದಲ್ಲಿ ಮುಕ್ತಾಯಗೊಳ್ಳುತ್ತದೆ. ಒಟ್ಟಂದದಲ್ಲಿ ಒಂದು ಅಪೂರ್ವ ಕಲಾ ಸೃಷ್ಟಿಯಾಗಿ ವಿಶಿಷ್ಟ ಅನುಭವಕೊಡುತ್ತದೆ.

ಕಾಕನಕೋಟೆ ವಸ್ತು ಮತ್ತು ತಾಂತ್ರಿಕ ಯಶಸ್ಸು ಎರಡೂ ದೃಷ್ಟಿಯಿಂದಲೂ ನಮ್ಮ ಸಂವೇದನೆಯನ್ನು ಗೆಲ್ಲುವ ಕೃತಿಯಾಗಿದೆ. ಮಾಸ್ತಿಯವರ ಉಳಿದ ಯಾವ ನಾಟಕದಲ್ಲೂ ಕಂಡು ಬರದಂಥ ವಸ್ತುವಿನ ಸಾರ್ವಕಾಲಿಕ ಮೌಲ್ಯ ಹಾಗೂ ವಸ್ತು ಮತ್ತು ತಾಂತ್ರಿಕ ಬೆಳವಣಿಗೆಯ ನಡುವಣ ಅಪೂರ್ವ ಸಂಯೋಗದಿಂದಾಗಿ ಕಾಕನಕೋಟೆ ನಾಟಕಕಾರರಾಗಿ ಮಾಸ್ತಿಯವರ ಸಾಧನೆಯ ಶೃಂಗ ಎನಿಸಿಕೊಳ್ಳುತ್ತದೆ.

ಮನುಕುಲವನ್ನು ಕೇಂದ್ರವಾಗುಳ್ಳ ಕಾಕನಕೋಟೆ ಒಂದು ಜನಾಂಗದ ಸಂಸ್ಕೃತಿಯ ಅವನತಿಯ ಸಮರ್ಥ ಅಭಿವ್ಯಕ್ತಿಯಾಗಿದೆ. ಸಾಂಸ್ಕೃತಿಕ ವಿಘಟನೆಯ ಸಂಧಿಕಾಲದಲ್ಲಿ ನಿಂತಿರುವ ಬೂಡಿನ ಕಾಡು ಕುರುಬರ ಜೀವನವನ್ನು ತೆರೆದುತೋರುವ ನಾಟಕ ಹೆಗ್ಗಡೆಯ ಶೋಷಣೆ ವಿರುದ್ಧ ಪ್ರತಿಭಟಿಸಿ ನಿಂತಾಗ ಬೂಡು ತನ್ನ ಸಾಂಸ್ಕೃತಿಕ ಪ್ರತ್ಯೇಕತೆ *(Cultural identity)* ಯನ್ನೇ ಕಳೆದುಕೊಳ್ಳಬೇಕಾದ ಒಂದು ಜನಾಂಗದ ಮೂಕವೇದನೆಯ ದನಿಯಾಗಿದೆ. ಹೆಗ್ಗಡೆಯ ದುರಾಸೆ, ಕಾಚನ ವಾಪಸಿನೊಂದಿಗೆ ಮಣಿ, ಮುತ್ತು, ಅಂಗರೇಕೆಗಳೊಂದಿಗೆ ಬೂಡನ್ನು ಪ್ರವೇಶಿಸಿರುವ ನಾಗರಿಕತೆ ಕಾಡು ಕುರುಬರಲ್ಲಿ ಹೊಸ ಜೀವನದ ಆಸೆಹುಟ್ಟಿಸಿರುವುದು, ಹೆಗ್ಗಡೆ ವಿರುದ್ಧ ಹೋರಾಟ, ಈ ಹೋರಾಟ ಸಂದರ್ಭದಲ್ಲಿ ಬೂಡಿನೊಳಗಿನ ಆಂತರಿಕ ಕಚ್ಚಾಟ ಬಹಿರಂಗಗೊಳ್ಳುವುದು–ಇವೆಲ್ಲ ಬೂಡನ್ನು ಸಾಂಸ್ಕೃತಿಕ ವಿನಾಶದ ಅಂಚಿಗೆ ದೂಡುತ್ತವೆ. ನಿಶ್ಚಿತ ಬೆಳವಣಿಗೆಯಲ್ಲಿ ಬೂಡಿನ ಸಂಸ್ಕೃತಿ ಹೆಗ್ಗಡೆಯ ವಿರುದ್ಧ ಹೋರಾಡುತ್ತದೆ. ಈ ಹೋರಾಟ ನಗರ ಸಂಸ್ಕೃತಿಯ ವಿರುದ್ಧ ಬೂಡಿನ ಸಂಸ್ಕೃತಿಯ ಸೆಣಸೂ ಆಗುತ್ತದೆ. ಕೊನೆಗೆ ರಣಧೀರರ ಆಗಮನ, ಮೊಲ್ಲೆ–ಹೆಗ್ಗಡೆ ಮಗ ಚಿಕ್ಕಯ್ಯರ ಮದುವೆಯೊಂದಿಗೆ ಬೂಡು ಸಂಪೂರ್ಣವಾಗಿ ನವನಾಗರಿಕತೆಗೆ ತೆರೆದುಕೊಳ್ಳುವುದರಲ್ಲಿ ಒಂದು ವಿಶಿಷ್ಟ ಸಂಸ್ಕೃತಿಯ ವಿನಾಶದ ಚಿತ್ರ ಪೂರ್ಣಗೊಳ್ಳುತ್ತದೆ. ಕೋಟೆ ಕಟ್ಟಿಸುವ ರಣಧೀರನ ಕಾಳಜಿಯಲ್ಲಿ ಬೂಡಿನ ಸಂಸ್ಕೃತಿಗೆ *Antique value* ಬಂದು ಬಿಡುತ್ತದೆ. ಅನ್ಯಾಯದ ವಿರುದ್ಧ ಹೋರಾಡಿದಾಗಲೆಲ್ಲ ಮನುಕುಲ ತೆರಬೇಕಾದ ಬೆಲೆ ಈ ಸಾಂಸ್ಕೃತಿಕ ವಿಶಿಷ್ಟತೆಯ ನಾಶ. ಹೆಗ್ಗಡೆಯ ದುರಾಸೆಯನ್ನು ಸಹಿಸಿಕೊಂಡು ಇವನ ಇಷ್ಟಗಳಿಗೆ ಅಡಿಯಾಳಾಗಿದ್ದಿದ್ದರೆ ಬೂಡು ಇನ್ನಷ್ಟು ದಿನ ತನ್ನ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಕಾಪಾಡಿಕೊಳ್ಳಬಹುದಿತ್ತು. ಈ ಅನ್ಯಾಯದ ಜೊತೆ ರಾಜಿಮಾಡಿ ಕೊಳ್ಳಲಿಚ್ಛಿಸದ ಕಾಚನ ಆದರ್ಶ ಹೋರಾಟಕ್ಕೆ ಇಳಿಯುತ್ತದೆ. ಈ ಹೋರಾಟದಲ್ಲಿ ಬೂಡು ತನ್ನ ಸಂಸ್ಕೃತಿಯನ್ನೇ ಬೆಲೆಯಾಗಿ ತೆರುತ್ತದೆ. "ಆ ಅನ್ಯಾಯವನ್ನೇ ಬೂಡಿನ ದಿನನಿತ್ಯದ ಜೀವನದ ಭಾಗವನ್ನಾಗಿ ಒಪ್ಪಿಕೊಳ್ಳಬೇಕು. ಆದರ್ಶ ಒಂದೆಡೆಗೆ, ಇನ್ನೊಂದೆಡೆಗೆ ಸಾಮರ್ಥ್ಯ. ಇತಿಹಾಸ ಆರಂಭವಾದಾಗಿನಿಂದ ನಾಗರಿಕತೆ ಎದುರಿಸಬೇಕಾದ ಸಂಕಟ ಇದು. ಇಪ್ಪತ್ತನೆಯ ಶತಮಾನ ದಲ್ಲಂತೂ ಅದು ಇನ್ನಷ್ಟು ಭೀಕರವಾಗಿ ನಿಂತಿದೆ. ಮತ್ತು ಈ ಭೀಕರ ಸಮಸ್ಯೆಯನ್ನೇ ಕೇಂದ್ರವಾಗಿಟ್ಟುಕೊಂಡದ್ದರಿಂದ ಕಾಕನಕೋಟೆ ಕೇವಲ ಕುರುಬರಕತೆ ಯಾಗದೆ ನಮ್ಮ ಅನುಭವಕ್ಕೂ ಸಮೀಪದ್ದಾಗಿದೆ." ಇಂಥದೊಂದು ಸತ್ಯದಿಂದಾಗಿಯೇ 'ಕಾಕನಕೋಟೆ' ಎಲ್ಲ

ಕಾಲದ ಜನರನ್ನೂ ಆಕರ್ಷಿಸುತ್ತದೆ. "ಕಾಕನಕೋಟೆ' ಯನ್ನು ನಾಟಕವಾಗಿ ಗಮನಿಸಿದ್ದು ಹೊಸ ಸಂವೇದನೆಗೆ ಸ್ಪಂದಿಸಿದ ಯುವಕರು. 'ಕಾಕನಕೋಟೆ' ಬರೆದ ಮುವತ್ತೈದು ವರ್ಷಗಳ ನಂತರ ಈ ಯುವಕರ ಪ್ರಯತ್ನದ ಫಲವಾಗಿ ಹೆಚ್ಚು ಬಾರಿ ರಂಗದ ಮೇಲೆ ಬಂದು ಜನರ ಮೆಚ್ಚುಗೆ ಗಳಿಸಿತು ಎಂಬುದನ್ನು ನೆನೆದರೆ ಮೇಲಿನ ಮಾತುಗಳ ಮಹತ್ವ ಅರಿವಾಗುತ್ತದೆ.

ಮಾಸ್ತಿಯವರ ನಾಟಕಗಳ ಎರಡು ಪರಿಯನ್ನು ಇಲ್ಲಿಯವರೆಗಿನ ಅಧ್ಯಯನದಲ್ಲಿ ನೋಡಿದ್ದಾಗಿದೆ. ಮುಖ್ಯವಾಗಿ ಮಾಸ್ತಿಯವರು ಪುರಾಣ/ಇತಿಹಾಸದ ವಸ್ತುವಿಗೆ ಮೋಹಗೊಂಡು ವಸ್ತುವನ್ನು ಆಯ್ಕೆ ಮಾಡಿರುವ ಸಂದರ್ಭಗಳಲ್ಲೆಲ್ಲ ಮೂಲಕ್ಕೆ ಅತಿನಿಷ್ಠರಾಗಿದ್ದಾರೆ. ಇತಿಹಾಸ/ಪುರಾಣದ ವಸ್ತುವಿನಲ್ಲಿನ ಗುಣ, ಮೌಲ್ಯ ವಿಶೇಷಗಳಿಂದ ಮೋಹಿತರಾದ ಮಾಸ್ತಿಯವರ ಉದ್ದೇಶ ಇಂಥ ಪ್ರಸಂಗಗಳನ್ನು ಹೆಚ್ಚು ಬದಲಾವಣೆ ಮಾಡದೆ ನಾಟಕ ರೂಪದಲ್ಲಿ ಪ್ರತ್ಯೇಕವಾಗಿ ಕಡೆದು ತೋರಿಸುವುದಷ್ಟೇ ಆಗಿರುವಂತೆ ತೋರುತ್ತದೆ. ಇಂಥ ಸಂದರ್ಭಗಳಲ್ಲೆಲ್ಲ ಮಾಸ್ತಿಯವರ ಪ್ರತಿಭೆ ಈ ಮಿತಿಯೊಳಗೇ ನಿರ್ಧಾರವಾಗಿದೆ. ಆದರೆ ಮಾಸ್ತಿಯವರ ಪ್ರತಿಭೆ ಇಂಥ ಮಿತಿಗಳನ್ನು ದಾಟಿ ಸ್ವತಂತ್ರವಾಗಿ ಕಲಾ ನಿರ್ಮಿತಿಯಲ್ಲಿ ತೊಡಗುವಷ್ಟು ಸೃಜನಶೀಲವಾದದ್ದು ಎಂಬುದಕ್ಕೆ ಪುರಾಣ/ಇತಿಹಾಸಗಳ ಪ್ರಕರಣಗಳ ನಾಟಕಗಳನ್ನು ಬರೆದ ಕಾಲದಲ್ಲೇ ಮಾಸ್ತಿಯವರು ಕಾಕನಕೋಟೆ (೧೯೩೮) ಬರೆದರೆಂಬುದೇ ಒಳ್ಳೆಯ ನಿದರ್ಶನವಾಗಿದೆ.

ಕಾಲಾನುಕ್ರಮಣಿಕೆಯಲ್ಲಿ ನಾಟಕಕಾರರಾಗಿ ಮಾಸ್ತಿಯವರ ಬೆಳವಣಿಗೆಯನ್ನು ಗುರುತಿಸುವುದಾದರೆ ೧೯೨೩ ರಿಂದ ೧೯೩೮ರ ವರೆಗಿನ ಅವಧಿ ಮಾಸ್ತಿಯವರ ಸೃಜನಶೀಲತೆಯ ಒಂದು ಘಟ್ಟ ಎಂದು ಕರೆಯಬಹುದು. ೧೯೨೩ರಲ್ಲಿ 'ಶಾಂತಾ' ಪ್ರಕಟವಾಯಿತು. ಆಗಿನಿಂದ ೧೯೩೮ರ ವರೆಗೆ ಅಂದರೆ 'ಕಾಕನಕೋಟೆ' ಪ್ರಕಟವಾಗುವವರೆಗೆ ಮಾಸ್ತಿಯವರು ಎಂಟು ನಾಟಕಗಳನ್ನು ಬರೆದಿದ್ದು ಈ ಎಂಟೂ ನಾಟಕಗಳ ವಸ್ತು (ಮಂಜುಳಾ ಹೊರತು) ಪುರಾಣ, ಇತಿಹಾಸಗಳಿಂದ ಆಯ್ದದ್ದಾಗಿದೆ. 'ಕಾಕನಕೋಟೆ' ಯಲ್ಲಿನ ಮಾಸ್ತಿಯವರ ಸಾಧನೆ ಗಮನಿಸಿ ದಾಗ ಈ ಎಂಟು ನಾಟಕಗಳು ಮುಂಬರಲಿರುವ ಒಂದು ಒಳ್ಳೆಯ ಕೃತಿಗೆ ನಡೆಸಿದ ಸಿದ್ಧತೆಯಂತೆ ತೋರುತ್ತದೆ. ನಂತರ 'ಮಾಸತಿ' (೧೯೫೩), ಅನಾರ್ಕಲಿ (೧೯೫೫), ಪುರಂದರದಾಸ (೧೯೬೪), ಕನಕಣ್ಣ (೧೯೬೫) ನಾಟಕಗಳು ಬಂದಿವೆ. ಆದರೆ ಕಾಕನಕೋಟೆಯಲ್ಲಿ ಕಂಡು ಬಂದಿರುವಂಥ ಕಲಾಪರಿಣತಿ ಕಾಣಸಿಗುವುದು 'ಮಾಸತಿ' ಒಂದರಲ್ಲೇ.

ನವೋದಯ ಕಾಲದ ನಾಟಕಕಾರರಲ್ಲಿ ಪುರಾಣ/ಇತಿಹಾಸದ ಘಟನೆಗಳನ್ನು ಆಧರಿಸಿ ಹೆಚ್ಚು ನಾಟಕಗಳನ್ನು ಬರೆದಿರುವವರು ಮಾಸ್ತಿಯವರು. ವಸ್ತು, ತಂತ್ರ ಮತ್ತು ಮೌಲ್ಯಗಳ ದೃಷ್ಟಿಯಿಂದ ಇವುಗಳನ್ನು ನೋಡಲಾಗಿದೆ. ಈ ನಾಟಕಗಳ ಇತಿ ಮಿತಿಯನ್ನು ಗುರುತಿಸಲಾಗಿದೆ. ವಸ್ತುವಿನ ಸಾರ್ವಕಾಲಿಕಗುಣ, ತಾಂತ್ರಿಕ ಯಶಸ್ಸು, ಕಲಾಪರಿಣತಿಯ ದೃಷ್ಟಿಯಿಂದ ನೋಡಿದಲ್ಲಿ ಕಾಕನಕೋಟೆ, ಯಶೋಧರಾ, ಮಂಜುಳಾ, ಮಾಸತಿ ನಾಟಕಗಳು ಮಾಸ್ತಿಯವರಿಗೆ ನವೋದಯ ಕಾಲದ ನಾಟಕಕಾರರ ಸಾಲಿನಲ್ಲಿ ಶಾಶ್ವತಸ್ಥಾನ ಗಳಿಸಿಕೊಟ್ಟಿರುವ ಕೃತಿಗಳಾಗಿವೆ. ಈ ಕೃತಿಗಳಿಂದ ನವೋದಯದ ನಾಟಕ ಮಾರ್ಗದಲ್ಲಿ ನಾಟಕಕಾರರಾಗಿ ಮಾಸ್ತಿಯವರು ಸ್ಪಷ್ಟವಾಗಿ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ.

●

ಮಾಸ್ತಿಯವರ ಕಾವ್ಯ : ಒಂದು ಪರಿಶೀಲನೆ

ವಿ. ಚಂದ್ರಶೇಖರ ನಂಗಲಿ

೧೯೨೨ ರಿಂದ ಆರಂಭವಾಗಿ ೧೯೭೨ ರ ವರೆಗೆ ಪ್ರಕಟಗೊಂಡು ಒಟ್ಟು ಹದಿನೇಳು ಕೃತಿಗಳಲ್ಲಿ ಹರಡಿಕೊಂಡಿರುವ ಮಾಸ್ತಿಯವರ ಸಮಗ್ರ ಕಾವ್ಯದ ವಿಮರ್ಶೆ ವಿಶ್ಲೇಷಣೆಗಳು ಈ ಪ್ರಬಂಧದ ಉದ್ದೇಶವಾಗಿದೆ.[೧] ಮಾಸ್ತಿಯವರ ಸಮಗ್ರ ಕಾವ್ಯದ ವಿಶ್ಲೇಷಣೆಯನ್ನು ನಡೆಸುವಾಗ ಒಂದೊಂದು ಕೃತಿಯನ್ನು ಕುರಿತು, ನಿರ್ದಿಷ್ಟವಾಗಿ ನಡೆಯುವ ಪ್ರತ್ಯೇಕ ದೃಷ್ಟಿಯ ಪರಿಶೀಲನೆಗಳನ್ನು 'ಅಕಾಲಿಕ'ವೆಂದು ಭಾವಿಸಿಕೊಂಡಿರುವ ನಾನು ಆ ಬಗೆಯ ಶಿಸ್ತಿನ ಅಭ್ಯಾಸವನ್ನು ಕೈ ಬಿಟ್ಟಿದ್ದೇನೆ. ಬದಲಿಗೆ, ಮಾಸ್ತಿಯವರ ಕಾವ್ಯ 'ಸಮಗ್ರವಾಗಿ' ಪ್ರಕಟಗೊಂಡು ಎರಡು ದಶಕಗಳನ್ನು ಪೂರೈಸುತ್ತಿರುವ ಈ ಸಂದರ್ಭದಲ್ಲಿ ಬಿಡಿ ಬಿಡಿಯಾದ ಪರಿಶೀಲನೆಗಳಿಗಿಂತಲೂ ಇಡಿಯಾಗಿ ನೋಡುವ ಪ್ರಯತ್ನವೇ ಒಳನೋಟಗಳ ಗ್ರಹಿಕೆಗೆ ಹೆಚ್ಚು ಉಪಯುಕ್ತವೆಂದು ನಂಬಿ ಮುಂದಿನ ವಿಚಾರಗಳನ್ನು ಮಂಡಿಸುತ್ತಿದ್ದೇನೆ :

> *"ಹತ್ತು ರೀತಿಯ ಹಕ್ಕಿ ನಿಲವುದಕೆ ಬೀಡಾಗಿ*
> *ನಿಂತ ಮರವನು ನೋಡು. ಅದಕೊಂದು ದನಿಯಿಹುದೆ ?*
> *ಆದರೂ ಉದಯದಲಿ ಸಂಜೆಯಲಿ ಅದರಿಂದ*
> *ಕೇಳುವುದು ಹಕ್ಕಿಗಳ ಗುಂಪು ದನಿ ಹಾಡಾಗಿ"*

(ಕವಿತೆಯ ಪಕ್ಷಿ ಮಲಾರ, ಪು. ೭೫, ೧೯೩೧)

ಇವು ಮಾಸ್ತಿ ಕವಿತೆಯೊಂದರ ಸಾಲುಗಳು. ಇದನ್ನು ಓದಿದಾಗ ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಸಹಜವಾಗಿಯೇ ನೆನಪಿಗೆ ಬರಬಹುದಾದ ಬೇಂದ್ರೆ ಕವಿತೆಯ ಸಾಲುಗಳು ಹೀಗಿವೆ :

"ಗಿಡಗಂಟೆಯ ಕೊರಳೊಳಗಿಂದ
ಹಕ್ಕಿಗಳಾ ಹಾಡು
ಹೊರಟಿತು – ಹಕ್ಕಿಗಳಾ ಹಾಡು" (ಬೆಳಗು ವಿನಯ ೧೯೭೩)

ಇಲ್ಲಿ ಮಾಸ್ತಿ ಮತ್ತು ಬೇಂದ್ರೆ ಇಬ್ಬರೂ ಹೇಳುತ್ತಿರುವುದು ಹಕ್ಕಿಗಳ ಹಾಡನ್ನೆ. ಮರಕ್ಕೊಂದು ಧ್ವನಿಯಿದೆಯೇ ? ಎಂದು ವಾಸ್ತವವಾದಿಯಂತೆ ಆರಂಭದಲ್ಲಿ ಪ್ರಶ್ನಿಸುವ ಮಾಸ್ತಿಯವರು ಕೊನೆಗೆ ಬೆಳಗು ಸಂಜೆಗಳಲ್ಲಿ ಮರದಿಂದ ಕೇಳಿಬರುವ ಹಕ್ಕಿಗಳ ಹಾಡನ್ನು ಒಪ್ಪಿಕೊಂಡಿದ್ದಾರೆ. ಆದರೆ, ಕವಿ ಬೇಂದ್ರೆ ಯಾವುದೇ ಪ್ರಶ್ನೆ ಅಥವಾ ಸಂದೇಹವನ್ನು ವ್ಯಕ್ತಪಡಿಸದೆ ಗಿಡಗಂಟೆಯ ಕೊರಳಿನಿಂದ ಹೊರಟು ಬರುತ್ತಿರುವ ಹಕ್ಕಿಗಳ ಹಾಡನ್ನ ಹೇಳುತ್ತಿದ್ದಾರೆ. ನಿರ್ದಿಷ್ಟ ವಿವರಗಳ ಯಥಾವತ್ತಾದ ವರ್ಣನೆ ಮಾಸ್ತಿಯವರಲ್ಲಿ ಕಂಡುಬಂದರೆ, ನಿರ್ದಿಷ್ಟತೆ ಮತ್ತು ಸಾರ್ವತ್ರಿಕತೆಗಳ ತಿಕ್ಕಾಟದಲ್ಲಿ ರೂಪುಗೊಳ್ಳುವ; ಧ್ವನಿ ರಮ್ಯತೆಯಿಂದ ಕಂಗೊಳಿಸುವ 'ಸತ್ಯದರ್ಶನ' ಬೇಂದ್ರೆಯವರಲ್ಲಿ ಕಂಡು ಬರುತ್ತದೆ. ಹೀಗೆ ಕಾವ್ಯದಲ್ಲಿ ಪ್ರಕಟಗೊಳ್ಳುವ 'ನಿರ್ದಿಷ್ಟತೆ' ಮತ್ತು 'ಸಾರ್ವತ್ರಿಕತೆ'ಗಳ ದ್ವಂದ್ವವು ಆಧುನಿಕ ಸಾಹಿತ್ಯ ಮೀಮಾಂಸೆಯ ಪ್ರಮುಖ ವಾಗ್ವಾದಗಳಲ್ಲಿ ಒಂದಾಗಿದೆ. ಕಾವ್ಯಗತವಾದ ವಿಭಾವಗಳು ನಿರ್ದಿಷ್ಟವೆ? ಅಥವಾ ಸಾರ್ವತ್ರಿಕವೆ ? ಎಂಬ ಪ್ರಶ್ನೆಯನ್ನು ಪೂರ್ವಾಚಾರ್ಯರು ಎತ್ತಿರುವುದೂ ಉಂಟು. ಅರಿಸ್ಟಾಟಲ್ ಕಾವ್ಯ ಮತ್ತು ಚರಿತ್ರೆಗಳನ್ನು ಹೋಲಿಸುತ್ತಾ ಕಾವ್ಯವು ಇತಿಹಾಸಕ್ಕಿಂತಲೂ ಹೆಚ್ಚು ತಾತ್ವಿಕ ಮತ್ತು ಗಂಭೀರವಾದುದೆಂದು ಹೇಳಿದ್ದಾನೆ. ಇದಕ್ಕೆ ಆತ ಕೊಡುವ ಕಾರಣವೇನೆಂದರೆ ಚರಿತ್ರೆಯು ನಿರ್ದಿಷ್ಟ ಸಂಗತಿಗಳೊಂದಿಗೆ ವ್ಯವಹರಿಸುತ್ತಿದ್ದರೆ ಕಾವ್ಯವು ಅವುಗಳ ಹಿಂದೆ ಇರುವ ಸಾರ್ವತ್ರಿಕ ಮಾದರಿಗಳನ್ನು ಅನ್ವೇಷಿಸುತ್ತಿರುತ್ತದೆ. ಆದ್ದರಿಂದ, ನಿರ್ದಿಷ್ಟತೆಯ ಕಡೆಗಿನ ತುಡಿತ ಅಥವಾ ಅತಿರೇಕದ ನಿರ್ದಿಷ್ಟತೆ ಕಾವ್ಯವನ್ನು ಚರಿತ್ರೆಯ ತಮ್ಮನನ್ನಾಗಿ ಮಾಡಿಬಿಡುತ್ತದೆ! ಒಟ್ಟಿನಲ್ಲಿ 'ನಿರ್ದಿಷ್ಟತೆ' ಮತ್ತು 'ಸಾರ್ವತ್ರಿಕತೆ' ಗಳ ದ್ವಂದ್ವವು ಹೊಸಗನ್ನಡ ಕಾವ್ಯದಲ್ಲಿ ಎರಡು ಮಾರ್ಗಗಳನ್ನೇ ನಿರ್ಮಾಣ ಮಾಡಿದೆ. ಮಾಸ್ತಿ ಮತ್ತು ಬೇಂದ್ರೆ ಕವಿತೆಗಳಿಂದ ಆಯ್ದ ಪೂರ್ವೋಕ್ತ ಉಲ್ಲೇಖಗಳಲ್ಲಿ ಇವೆರಡು ಮಾರ್ಗಗಳನ್ನು ಸಮರ್ಥವಾಗಿ ಕಾವ್ಯಾಭ್ಯಾಸದಿಂದ ಪ್ರತೀತವಾಗುವ ವಿಚಾರಗಳನ್ನು ನಿರೂಪಿಸುವುದಕ್ಕಾಗಿಯೂ ಇದಿಷ್ಟು ಹಿನ್ನೆಲೆಯನ್ನಿಲ್ಲಿ ಕಲ್ಪಿಸಲಾಗಿದೆ.

೨

ನೆಲವನ್ನು ಬಿಟ್ಟು ಮೇಲೇರದ ಮಾಸ್ತಿಕಾವ್ಯ ಹೆಚ್ಚು ನಿರ್ದಿಷ್ಟವಾದುದು. ಇಹ ಜೀವನದ 'ಯಾದೃಚ್ಛಿಕ' ಕ್ರಿಯೆಗಳನ್ನೇ ಕಾವ್ಯವನ್ನಾಗಿ ಮಾಡಿದ ಮಾಸ್ತಿಯವರು ಆ ಕಾರಣದಿಂದಲೇ ಒಂದು ನಿರ್ದಿಷ್ಟವಾದ ಘಟನೆ, ಸಂಗತಿಗಳನ್ನೇ ವರ್ಣಿಸುವ ಜೀವನದ ವೈವಿಧ್ಯಮಯ ಕ್ರಿಯೆಗಳು ಯಾದೃಚ್ಛಿಕವಾದವು. ಕವಿಯು ತನ್ನ ಇಚ್ಛಾನುಸಾರವಾಗಿ ಕ್ರಿಯೆಗಳನ್ನು ಅಭಿವರ್ಣಿಸುವ ನೆಲೆಯನ್ನ ಯಾದೃಚ್ಛಿಕವೆಂದು ಕರೆಯಲಾಗಿದೆ. ಸ್ವೇಚ್ಛಾವಶವಾದ

ಈ ಕ್ರಿಯೆಗಳೆಲ್ಲವೂ ಬದುಕಿನ ಗತಿಯಲ್ಲಿ ಸಂಭವಿಸಿದ ನಿರ್ದಿಷ್ಟ ಸಂಗತಿಗಳಾಗಿದ್ದು ಬಿಡಿಬಿಡಿಯಾದ ಚಿತ್ರಗಳಾಗಿ ಕಾಣುತ್ತವೆ. ಇದರ ಬಗ್ಗೆ ಸ್ವತಃ ಮಾಸ್ತಿಯವರೇ ಹೇಳುವ ಮಾತುಗಳು ಹೀಗಿವೆ :

> "ಈ ಗ್ರಂಥದ ಪದ್ಯಗಳನ್ನು ಓದುವಾಗ್ಗೆ ಆಯಾ ಸಂದರ್ಭಗಳನ್ನು ಅಲ್ಲಿಯ ಮಾತುಗಳಿಂದ ಊಹಿಸಿಕೊಳ್ಳಬೇಕು. ತಿರುಪತಿಯ ಬೆಟ್ಟದ ಮೇಲೆ ಆಕಾಶ ಗಂಗೆಯಲ್ಲಿ ಮಾರ್ವಾಡಿಯೊಬ್ಬನು ತನ್ನ ಹೆಂಡತಿಯನ್ನು ಹೊಡೆದನು; ಎಲ್ಲಿಯೋ ಒಂದು ಹರಿಕಥೆ ನಡೆಯಿತು; ಒಂದೂರಿನಲ್ಲಿ ದೇವಾಲಯದ ಮೇಲೆ ಮೇಕೆ ಮಲಗಿತ್ತು; ನಾನು ಒಂದು ಸಂಜೆ ಆ ಊರ ಬಯಲಲ್ಲಿ ನಿಂತಿದ್ದೆನು; ಇನ್ನೊಂದು ಸಂದರ್ಭದಲ್ಲಿ ದಕ್ಷಿಣೇಶ್ವರದ ದೇವಾಲಯದಲ್ಲಿದ್ದೆನು; ಮತ್ತೊಂದರಲ್ಲಿ ಶ್ರೀ ವಿವೇಕಾನಂದರ ಕೋಣೆಯನ್ನು ನೋಡಿದೆನು.ಹೀಗೆ ಒಂದೊಂದು ಪದ್ಯ ಒಂದೊಂದು ಸಂದರ್ಭದಿಂದ ಬಂದದ್ದು." (ಮುನ್ನುಡಿ, ಮಲಾರ, ಪು. ೫, ೧೯೩೩)

ಹೀಗೆ ಯಾದೃಚ್ಛಿಕವಾದ ಒಂದು ನಿರ್ದಿಷ್ಟತೆಯ, ಘಟನೆ, ಸಂಗತಿಗಳ ಮೂಲಕವೇ ಮಾತನಾಡುವ ಕವಿ ವಿಶೇಷವಾಗಿ ಪ್ರತಿಮೆ, ಸಂಕೇತ ರೂಪಕಾದಿಗಳನ್ನು ಸೃಷಿಸಲಾರ! ಏಕೆಂದರೆ, ಈತನಿಗೆ ತಾನು ವರ್ಣಿಸಬೇಕಾದ ಒಂದೊಂದು ನಿರ್ದಿಷ್ಟವಾದ ಕ್ರಿಯೆ, ಘಟನೆ, ಸಂಗತಿಗಳೇ ಪ್ರತಿಮೆಗಳಂತೆ, ಸಂಕೇತಗಳಂತೆ ಕಾಣುತ್ತವೆ. ಈ ಮಾರ್ಗದ ಕವಿ ತನ್ನಿಚ್ಛೆಗೆ 'ಸಮಾನ'ವಾಗಿ ತೋರಿದ ಎರಡು ಘಟನೆಗಳನ್ನು ಉಪಮಾವಾಚಕಗಳ ಮೂಲಕ ನಮ್ಮ ಮುಂದಿಟ್ಟು ಅಷ್ಟರಲ್ಲೇ ತೃಪ್ತಿ ಪಟ್ಟುಕೊಳ್ಳುತ್ತಾನೆ. ಉಪಮಾವಲಯವನ್ನು ಬಿಟ್ಟು ಮೇಲೇರದ ಮಾಸ್ತಿಯವರ ಕಾವ್ಯಮಾರ್ಗದ ಇಕ್ಕಟ್ಟುಗಳಿಗೆ ಅವರು ಆಯ್ದುಕೊಂಡ ನಿರೂಪಣಾಶೈಲಿಯೂ ಒಂದು ಕಾರಣವಾಗಿದೆ.ಎಲ್ಲ ಬಗೆಯ ನಿರೂಪಣೆಗಳನ್ನು ಉತ್ತಮ – ಮಧ್ಯಮ – ತೃತೀಯ ಪುರುಷಾನುಸಾರ ಮೂರು ಬಗೆಯಾಗಿ ವಿಂಗಡಿಸಬಹುದು. ಯಾದೃಚ್ಛಿಕ ಕ್ರಿಯೆಗಳ ವರ್ಣನೆ ಸಹಜವಾಗಿಯೇ ಉತ್ತಮ ಪುರುಷ ಅಥವಾ ಮಧ್ಯಮ ಪುರುಷ ನಿರೂಪಣೆಯನ್ನೇ ಅಪೇಕ್ಷಿಸುತ್ತಿರುತ್ತದೆ. ಈ ಬಗೆಯ ನಿರೂಪಣಾಶೈಲಿಗಳಲ್ಲಿ ಕವಿಯೊಬ್ಬ ಸ್ವಾತ್ಮನಿಷ್ಠತೆಯ ವಲಯದಲ್ಲೇ ಸುತ್ತುತ್ತಿರುತ್ತಾನೆ. ಅಂದರೆ ವರ್ಣಿಸುತ್ತಿರುವ ಕ್ರಿಯೆಗಳ ಬಗ್ಗೆ ತನ್ನ ಅನ್ನಿಸಿಕೆಗಳೇನು? ಅವು ತನ್ನ ಕಣ್ಣಿಗೆ ಹೇಗೆ ಕಾಣುತ್ತಿವೆ? ಎಂಬುದನ್ನೆ ಪ್ರಜ್ಞಾಪೂರ್ವಕವಾಗಿ ಅಭಿವ್ಯಕ್ತಗೊಳಿಸುತ್ತಿರುತ್ತಾನೆ. ಉತ್ತಮ ಪುರುಷ ನಿರೂಪಣೆ ಅಥವಾ ಮಧ್ಯಮ ಪುರುಷ ನಿರೂಪಣೆಯನ್ನು ಆಶ್ರಯಿಸುವ ಲೇಖಕನ ಮನಸ್ಸು ಸಹಜವಾಗಿಯೇ ವ್ಯಕ್ತಿಚಿತ್ರಗಳ ಕಡೆಗೆ, ವ್ಯಕ್ತಿನಿಷ್ಠ ಪ್ರಸಂಗಗಳ ಕಡೆ ಒಲಿದುಬಿಡುತ್ತದೆ. ಹೀಗೆ ಒಂದೊಂದು ನಿರ್ದಿಷ್ಟವಾದ ಕ್ರಿಯೆ, ಘಟನೆ, ಸಂಗತಿ, ವ್ಯಕ್ತಿಚಿತ್ರಗಳು, ವ್ಯಕ್ತಿನಿಷ್ಠ ಪ್ರಸಂಗಗಳನ್ನೇ ಕಾವ್ಯವನ್ನಾಗಿ ಮಾಡುವ ಮಾಸ್ತಿ ದೃಷ್ಟಿಯನ್ನು ಪರಿಶೀಲಿಸಿದರೆ, ಅವರ ಪದ್ಯರಚನೆಗಳನ್ನು 'ಕವನಗಳು' ಮತ್ತು 'ಕಥನ ಕವನಗಳು' ಎಂದು ವಿಂಗಡಿಸುವ ನೆಲೆ ಕೃತಕವೆನಿಸಿಬಿಡುತ್ತದೆ. ಮಾಸ್ತಿಯವರ ಬಹುಸಂಖ್ಯಾತ ಕವಿತೆಗಳಿಗೂ ಕಥನ ಕವನಗಳಿಗೂ ಮೂಲಭೂತವಾದ ವ್ಯತ್ಯಾಸಗಳಿಲ್ಲ. ಕಾಲ – ದೇಶಗಳ ವಿಸ್ತಾರವೊಂದನ್ನು ಬಿಟ್ಟರೆ ಮಾಸ್ತಿಯವರ ಬಹುತೇಕ ಕವಿತೆಗಳು 'ಮಿನಿ ಕಥನಕವನ'ಗಳೇ ಆಗಿವೆ. ಒಟ್ಟಿನಲ್ಲಿ ಉತ್ತಮ ಪುರುಷ – ಮಧ್ಯಮ ಪುರುಷ ನಿರೂಪಣೆಗಳಲ್ಲೆ ಸುತ್ತಾಡುವ ಕವಿ ತಾನು ವರ್ಣಿಸುತ್ತಿರುವ ಕ್ರಿಯೆಗಳ ವಿಷಯದಲ್ಲಿ ಹೆಚ್ಚು

ಉತ್ಸಾಹ, ಆವೇಶಗಳಿಂದಾಗಿ ತಲ್ಲೀನನಾಗಿಬಿಡುತ್ತಾನೆ. ಈ ಬಗೆಯ ತಲ್ಲೀನತೆ ಅಥವಾ ತನ್ಮಯತೆ 'ಮಾನಸಿಕ ದೂರ'ವನ್ನು ಸಾಧಿಸುವಲ್ಲಿ ಕವಿಗೆ ತೊಡರುಗಾಲಾಗುತ್ತದೆ. 'ಮಾನಸಿಕ ದೂರ'ವನ್ನು ಸಾಧಿಸದಿದ್ದರೆ ಆ ಕವಿ ತನ್ನ ವ್ಯಕ್ತಿತ್ವದಿಂದ ಪಾರಾಗಲಾರ! ಕವಿಯೊಬ್ಬ ತನ್ನ ವ್ಯಕ್ತಿತ್ವದಿಂದ ಪಾರಾದಾಗಲೆ ಅವನಿಗೆ ಉತ್ತಮ ಪುರುಷ – ಮಧ್ಯಮ ಪುರುಷ ನಿರೂಪಣೆಗಳ ಆಕರ್ಷಣೆಯಿಂದ ಬಿಡುಗಡೆ ಸಿಗುತ್ತದೆ. ಮಾಸ್ತಿಯವರಿಗೆ ಈ ನಿರೂಪಣಾಶೈಲಿಗಳ ಆಕರ್ಷಣೆ ಎಷ್ಟು ತೀವ್ರವಾಗಿದೆಯೆಂದರೆ 'ಶ್ರೀರಾಮ ಪಟ್ಟಾಭಿಷೇಕ'ದಂತಹ ಮಹಾಕಾವ್ಯದ ರಚನೆಯಲ್ಲಿಯೂ – ಆದರ್ಶಪ್ರಾಯವಾದ ತೃತೀಯ ಪುರುಷ ನಿರೂಪಣೆಯನ್ನು ಕೈಬಿಟ್ಟು – ಹಿನ್ನೋಟ ತಂತ್ರಗಳನ್ನಾಧರಿಸಿ ಉತ್ತಮ ಪುರುಷದ ಮೂಲಕವೇ ಕಥೆಯನ್ನು ನಿರೂಪಿಸಿದ್ದಾರೆ. ಮಾಸ್ತಿಯವರ ಕಾವ್ಯದಲ್ಲಿ ತೃತೀಯ ಪುರುಷ ನಿರೂಪಣೆಯ ಅಭಾವ ಎದ್ದು ಕಾಣುತ್ತದೆ. ಉತ್ತಮ ಪುರುಷ – ಮಧ್ಯಮ ಪುರುಷಗಳ ಮೂಲಕ 'ವಸ್ತು' ನಿರೂಪಣೆ ಮಾಡುವಾಗ ಕಾವ್ಯದಲ್ಲಿ ಎದುರಾಗುವ ಅಪಾಯಗಳು ಹೀಗಿವೆ: ಉತ್ತಮ ಪುರುಷ ನಿರೂಪಣೆಯು ಸ್ವಗತ ಲಹರಿಗಳಾಗಿ ಬೆಳೆಯುತ್ತಾ ಭಾಷಣವಾಗಿ ಬಿಡುತ್ತದೆ. ಮಧ್ಯಮ ಪುರುಷ ನಿರೂಪಣೆಯು ಕರೆ ಕೊಡುತ್ತಾ, ತೀರ್ಪು ನೀಡುತ್ತಾ ಬೋಧನೆಯಾಗಿ ಬಿಡುತ್ತದೆ. ಕವಿತೆಯೊಂದು ಭಾಷಣವಾಗುವ ಅಥವಾ ಬೋಧನೆಯಾಗುವ ಅಪಾಯಗಳನ್ನು ಮೀರಲೇ ಬೇಕಾಗುತ್ತದೆ. ಈ ಮೀರುವಿಕೆ ಸಹಜವಾಗಿಯೇ ಸಾಧ್ಯವಾಗುವುದು ತೃತೀಯ ಪುರುಷ ನಿರೂಪಣೆಯಲ್ಲಿ ಎಂಬುದನ್ನು ಗಮನಿಸಬೇಕು. ಅಂದರೆ, ತೃತೀಯ ಪುರುಷದಲ್ಲಿ ಕ್ರಿಯೆಗಳ ಜೊತೆ ತಾದಾತ್ಮ್ಯಭಾವವಿಲ್ಲದೆ ದೂರ ನಿಂತು ತಟಸ್ಥನಾಗಿ ನೋಡುವ ಪರಿ ಸಹಜವಾಗಿಯೇ ಸಿದ್ಧಿಸುತ್ತದೆ. ತೃತೀಯ ಪುರುಷ ನಿರೂಪಣೆಯನ್ನು *Emotions recollected in tranquility* ಎಂಬ ರೀತಿಗೆ ಹೋಲಿಸಬಹುದು. ಉತ್ತಮ ಪುರುಷ – ಮಧ್ಯಮ ಪುರುಷ ನಿರೂಪಣೆಗಳು ಆತ್ಮಕಥೆ ಹಾಗೂ ನೀತಿಕಥೆಗಳಿಗೆ ಮೀಸಲಾದ ಶೈಲಿಗಳಾಗಿದ್ದು ಇವು ಕವಿತೆಯಲ್ಲಿ ಪ್ರವೇಶ ಪಡೆದರೆ *Spontaneous over flow* ಗಳಾಗಿ ಬಿಡುವ ಸಂಭವವೇ ಹೆಚ್ಚು!

ಇದುವರೆಗೆ 'ಯಾದೃಚ್ಛಿಕ' ಎನ್ನಬಹುದಾದ ಕ್ರಿಯೆಗಳನ್ನು ವರ್ಣಿಸುವ ಕಾವ್ಯಮಾರ್ಗದ ಇಕ್ಕಟ್ಟುಗಳನ್ನು ಪರಿಶೀಲಿಸಲಾಯಿತು. ಮಾಸ್ತಿ ಕಾವ್ಯದ ನೆಲೆ – ಬೆಲೆಗಳನ್ನು ಕನ್ನಡ ಕಾವ್ಯಪರಂಪರೆಯ ಸಂದರ್ಭದಲ್ಲಿ ತಿಳಿಯಬೇಕಾದರೆ ಇದಕ್ಕಿಂತಲೂ ಭಿನ್ನವಾದ ಮತ್ತೊಂದು ಕಾವ್ಯಮಾರ್ಗವನ್ನು ವಿಚಾರಿಸಬೇಕಾಗುತ್ತದೆ. ಇದನ್ನು ಅನುಕೂಲಕ್ಕಾಗಿ 'ಸಂಯೋಜಕ ಕ್ರಿಯಾಸರಣಿಯ ಕಾವ್ಯಮಾರ್ಗ' ಎಂದು ನಿರ್ದೇಶಿಸಬಹುದು. ಈ ಮಾರ್ಗದ ಕವಿಗಳಿಗೆ ಒಂದು ನಿರ್ದಿಷ್ಟವಾದ ಕ್ರಿಯೆ–ಘಟನೆ–ಸಂಗತಿಗಳು ಮುಖ್ಯವೆನಿಸುವುದಿಲ್ಲ. "ನನ್ನ ಪಾಡು ನನಗಿರಲಿ ಆದರ ಹಾಡನ್ನಷ್ಟೇ ನೀಡುವೆನೂ ರಸಿಕಾ ನಿನಗೆ'' ಎಂಬ ಮಾತು ಈ ಕಾವ್ಯಮಾರ್ಗದ ವೈಶಿಷ್ಟ್ಯಗಳನ್ನು ಸಮರ್ಥವಾಗಿ ಹೇಳುತ್ತಿದೆ. ಈ ಕಾವ್ಯಮಾರ್ಗವು ಇಹಜೀವನದ ಕ್ರಿಯಾಸರಣಿಯ ನಡುವೆ 'ಸಂಯೋಜಕ' ಎನ್ನಬಹುದಾದ ದೃಷ್ಟಿಯನ್ನು ಪ್ರತಿಪಾದಿಸುತ್ತದೆ. ಬದುಕಿನ ವೈವಿಧ್ಯಮಯವಾದ ಕ್ರಿಯೆಗಳ ನಡುವೆ ತಮಗೆ ತೋಚಿದಂತೆ 'ಸಂಯೋಜನೆ' ಯನ್ನು ಸಾಧಿಸುವ ಕವಿಗಳು ಬಗೆಬಗೆಯ ಪ್ರತಿಮೆ – ಸಂಕೇತ – ರೂಪಕಾದಿಗಳನ್ನು

ಸೃಷ್ಟಿಸಿಬಿಡುತ್ತಾರೆ. *Wisdom speaks first in images* ಎಂಬ ಮಾತಿನ ಯಥಾರ್ಥತೆಯನ್ನು ಈ ಕಾವ್ಯಮಾರ್ಗದಲ್ಲಿ ಮನಗಾಣಬಹುದು. ಕುಮಾರವ್ಯಾಸ ಮತ್ತು ಬೇಂದ್ರೆ ಇಂತಹ ಕಾವ್ಯಮಾರ್ಗದ ಉನ್ನತ ಉದಾಹರಣೆಯಾಗಿದ್ದಾರೆ. ಬದುಕಿನ ಗತಿಯಲ್ಲಿ ಪರಸ್ಪರ ಪ್ರತ್ಯೇಕ ಎನಿಸುವ ಕ್ರಿಯೆಗಳು – ಘಟನೆಗಳು – ಸಂಗತಿಗಳು ಇವುಗಳೆಲ್ಲದರ ನಡುವೆ ಒಂದು ಅಪೂರ್ವ ಸಂಯೋಜನೆಯನ್ನು ಸಾಧಿಸುವ ಕಾರಣದಿಂದಲೇ ಇವರಿಗೆ ತೃತೀಯ ಪುರುಷ ನಿರೂಪಣೆಯೇ ಬೇಕಾಗುತ್ತದೆ. ಬೇಂದ್ರೆಯವರ ಕವಿತೆಗಳಲ್ಲಿ ಉತ್ತಮ ಪುರುಷ ಅಥವಾ ಮಧ್ಯಮ ಪುರುಷ ನಿರೂಪಣೆ ಇಲ್ಲವೇ ಇಲ್ಲ ಎಂದು ತಿಳಿಯಬಾರದು. ಈ ಬಗೆಯ ನಿರೂಪಣಾಶೈಲಿಗಳು ಕಂಡು ಬರುತ್ತವೆಯಾದರೂ ಕ್ರಿಯೆಗಳನ್ನು ಸಂಯೋಜಿಸಿ ಬಗೆಬಗೆಯ ಪ್ರತಿಮೆ – ಸಂಕೇತಗಳನ್ನು ಸೃಷ್ಟಿಸುವ ಕವಿಯ ವಿಶಿಷ್ಟ ಪ್ರತಿಭೆಯಿಂದಾಗಿ ಉತ್ತಮ ಪುರುಷ – ಮಧ್ಯಮ ಪುರುಷ ನಿರೂಪಣೆಗಳ ಇಕ್ಕಟ್ಟುಗಳೆಲ್ಲ ಸೂರ್ಯನನ್ನು ಕಂಡ ಮಂಜಿನಂತೆ ಮಾಯವಾಗುತ್ತವೆ. 'ಯಾದೃಚ್ಛಿಕ' ಮತ್ತು ಪರಸ್ಪರ ಪ್ರತ್ಯೇಕವಾದ ಕ್ರಿಯೆಗಳ ವರ್ಣನೆಗೆ ತೊಡಗಿದ ಕವಿಗಳಿಗೆ ಈ ಬಗೆಯ ಅನುಕೂಲಗಳಿಲ್ಲವೆಂಬುದನ್ನು ಗಮನಿಸಬೇಕು. ಇವರುಗಳು ಬದುಕಿನ ಗತಿಯಲ್ಲಿ ಪ್ರಕಟಗೊಳ್ಳುವ ಒಂದೊಂದು ಕ್ರಿಯೆ – ಘಟನೆ – ಸಂಗತಿ ಇವುಗಳೆಲ್ಲದರ ನಡುವೆ ಒಂದು ಏಕಸೂತ್ರವನ್ನು ಕಾಣುವುದಿಲ್ಲವೆಂದಲ್ಲ! ಖಂಡಿತವಾಗಿಯೂ ಕಾಣುತ್ತಾರೆ; ಆದರೆ ಅದು ದೈವವಾದಕ್ಕಷ್ಟೇ ಪರಿಮಿತಗೊಳ್ಳುತ್ತದೆ. 'ಯಾದೃಚ್ಛಿಕ'ವಾಗಿ ತೋರುವ, ಪರಸ್ಪರ ಪ್ರತ್ಯೇಕವಾದ ಎಲ್ಲ ಕ್ರಿಯೆಗಳ ಹಿಂದೆ ಸರ್ವಂತರ್ಯಾಮಿಯ ದರ್ಶನವನ್ನು ಪ್ರತಿಪಾದಿಸುತ್ತಾರೆ. ಈ ದೃಷ್ಟಿಕೋನ ಮಾಸ್ತಿ ಕಾವ್ಯದಲ್ಲಿ ಎದ್ದು ಕಾಣುತ್ತದೆ. ಆದರೆ, ಬದುಕಿನ ಗತಿಯಲ್ಲಿ ಪ್ರಕಟಗೊಳ್ಳುವ ಎಲ್ಲ ಕ್ರಿಯೆ – ಘಟನೆ – ಸಂಗತಿಗಳನ್ನು ಬೆಸೆಯುತ್ತಾ, ಅಪೂರ್ವ ಸಂಯೋಜನೆಯೊಂದನ್ನು ಸಾಧಿಸಿ ಪ್ರತಿಮೆ – ಸಂಕೇತಗಳ ಮೂಲಕ ಸಂಭಾಷಿಸುವ ಬೇಂದ್ರೆಯಂತಹ ಕವಿಗಳು ದೈವವಾದವನ್ನು ಮೀರುವುದಲ್ಲದೆ ಅದನ್ನು ಧಿಕ್ಕರಿಸಿಯೂ ನಿಲ್ಲುತ್ತಾರೆ:

"ಮುದ್ರೆಯೊತ್ತುವ ಕಣ್ಣು ಮೋರೆ ನೋಡುತ್ತೊಮ್ಮೆ
ಜಾರ ಕೃಷ್ಣನ ಕಥೆಗೆ ಕೋಡು ಮೂಡಿತ್ತು"

(ಪುಟ್ಟ ವಿಧವೆ ಕುತ್ತಿನ ಚೇಲ)

ಈ ಬಗೆಯ 'ಪರುಷ' ವಾಕ್ಕುಗಳು ಮಾಸ್ತಿ ಕಾವ್ಯದಲ್ಲಿ ಯಾಕೆ ಕಂಡು ಬರುವುದಿಲ್ಲ? ಎಂಬ ಪ್ರಶ್ನೆಗೆ ಉತ್ತರ ಅವರು ಆಯ್ದುಕೊಂಡ ಕಾವ್ಯಮಾರ್ಗದ ಇಕ್ಕಟ್ಟುಗಳಲ್ಲೇ ಅಡಗಿದೆ. ಒಟ್ಟಿನಲ್ಲಿ ನಿರ್ದಿಷ್ಟತೆ ಮತ್ತು ಸಾರ್ವತ್ರಿಕತೆಗಳ ದ್ವಂದ್ವವು ಹೊಸಗನ್ನಡ ಸಾಹಿತ್ಯದಲ್ಲಿ ಎರಡು ಬಗೆಯ ಕಾವ್ಯಮಾರ್ಗಗಳನ್ನು ನಿರ್ಮಾಣ ಮಾಡಿರುವುದು ಸುಸ್ಪಷ್ಟವಾಗಿದೆ.ಪ್ರಸ್ತುತ, ಇವೆರಡು ಪರಸ್ಪರ ಪ್ರತ್ಯೇಕವಾದ ಮಾರ್ಗಗಳೆ? ಅಥವಾ ಇವೆರಡು ಮಾರ್ಗಗಳ ನಡುವೆ ಉತ್ತರೋತ್ತರ ಸಂಬಂಧವಿದೆಯೇ? – ಎಂಬ ಪ್ರಶ್ನೆ ಸಹಜ. 'ಮೈಸೂರು ಮಲ್ಲಿಗೆ'ಯ ಮೂಲಕ ನಿರ್ದಿಷ್ಟ ಎನ್ನಬಹುದಾದ ಸಾಂಸರಿಕ ಚಿತ್ರಗಳಿಂದ ಕಾವ್ಯವನ್ನು ಆರಂಭಿಸಿದ ಕೆ. ಎಸ್. ನರಸಿಂಹ ಸ್ವಾಮಿಯವರು ಕ್ರಮೇಣ ಬದುಕಿನ ಗತಿಯಲ್ಲಿ ಪ್ರಕಟಗೊಳ್ಳುವ ವೈವಿಧ್ಯಮಯ ಕ್ರಿಯೆಗಳನ್ನು ಸಂಯೋಜಿಸಿ ಪ್ರತಿಮೆ – ಸಂಕೇತಗಳ ಮೂಲಕ ಸಾಧಿಸಿದ ಕಾವ್ಯಸೃಷ್ಟಿಯನ್ನು ಗಮನಿಸಿದರೆ, ಮೇಲೆ ಹೇಳಿದ ಎರಡು ಬಗೆಯ ಕಾವ್ಯ ಮಾರ್ಗಗಳು ಪರಸ್ಪರ ಪ್ರತ್ಯೇಕವಾದುದಾಗಿರದೆ

ಉತ್ತರೋತ್ತರ ಸಂಬಂಧವನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಉಪಮಾ ವಲಯವನ್ನು ಬಿಟ್ಟು ಮೇಲೇರದ ಮಾಸ್ತಿಯವರ ಕಾವ್ಯ ನಿರ್ದಿಷ್ಟ ಚಿತ್ರಗಳನ್ನು ಕಾಣಿಸುವಷ್ಟಕ್ಕೆ ಪರಿಮಿತಗೊಳ್ಳುವುದರಿಂದ ಅವರ ಕಾವ್ಯದಲ್ಲಿ ಕ್ರಿಯೆಗಳನ್ನು ಸಂಯೋಜಿಸಿ ಸಾಧಿಸುವ ಪ್ರತಿಮೆ ಸಂಕೇತಗಳು ಕಂಡುಬರುವುದಿಲ್ಲ. ಆ ದೃಷ್ಟಿಯಿಂದ ಮಾಸ್ತಿಯವರ ಕಾವ್ಯಸೃಷ್ಟಿ ಪ್ರಾಥಮಿಕ ಹಂತದಲ್ಲೇ ನಿಂತು ಹೋದಂತೆ ತೋರುತ್ತದೆ. ಈ ಕಾರಣದಿಂದಾಗಿಯೇ ಸಾಹಿತ್ಯಸೃಷ್ಟಿಯಲ್ಲಿ ಅನಿವಾರ್ಯವಾದ ಚಲನಶೀಲತೆಯನ್ನು ಸಾಧಿಸುವದಕ್ಕಾಗಿ ಮಾಸ್ತಿಯವರು ಸಣ್ಣ ಕಥೆಗಳನ್ನೇ ತಮ್ಮ ಅಭಿವ್ಯಕ್ತಿಯ ಮುಖ್ಯ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದಾರೆ.

೩

ಮಾಸ್ತಿಯವರ ಕಾವ್ಯ ಪ್ರಾಥಮಿಕ ಹಂತದಲ್ಲೇ ನಿಂತು ಹೋಗಿದೆ ಎಂಬ ಅಭಿಪ್ರಾಯವನ್ನು ಯಾರೂ ಅನ್ಯಥಾ ಭಾವಿಸಬೇಕಾಗಿಲ್ಲ. ಏಕೆಂದರೆ ಇದರ ಬಗ್ಗೆ ಸ್ಪಷ್ಟವಾದ ಅರಿವು ಸ್ವತ: ಮಾಸ್ತಿಯವರಿಗೆ ಇದೆ. ಹಾರಯಿಕೆ (ಬಿನ್ನಹ, ಪು. ೨, ೧೯೨೨), ಹನುಮನಗಿರಿ (ತಾವರೆ, ಪು. ೩೦, ೧೯೩೦) ಮುಂತಾದ ಕವನಗಳಲ್ಲಿ ತಮ್ಮ ಕಾವ್ಯಪ್ರಜ್ಞೆಯ ಇತಿ-ಮಿತಿಗಳೇನೆಂಬ ಅರಿವನ್ನು ಮಾಸ್ತಿಯವರು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. ಪ್ರತಿಮೆ - ಸಂಕೇತಗಳ ಮೂಲಕ ಅನಾವರಣಗೊಳ್ಳುವ ಕಲ್ಪಕತೆಯ ಅಭಾವದಿಂದಾಗಿ ಮಾಸ್ತಿಯವರ ಕಾವ್ಯ ನೆಲವನ್ನು ಬಿಟ್ಟು ಮೇಲೇರುವುದಿಲ್ಲ ಎಂಬುದನ್ನು ಹಿಂದೆಯೇ ವಿವರಿಸಿದ್ದಾಗಿದೆ. ಆದರೆ, ನೆಲವನ್ನು ಬಿಟ್ಟು ಮೇಲೇರದ ಈ ಪ್ರವೃತ್ತಿಯೇ ಮಾಸ್ತಿಯವರ ಕಾವ್ಯವಸ್ತುವಿಗೊಂದು ಗಟ್ಟಿಯಾದ ತಳಹದಿಯನ್ನೊದಗಿಸಿದೆ ಎಂಬುದನ್ನು ಅವಶ್ಯವಾಗಿ ಗುರುತಿಸಬೇಕಾಗುತ್ತದೆ.

ದೇವರ ಸ್ವರೂಪವನ್ನು ವ್ಯಾಖ್ಯಾನಿಸುವಾಗಲೂ ನೆಲದಿಂದ ಮೇಲೇರದ ಮಾಸ್ತಿ ಕಾವ್ಯ ಗಟ್ಟಿಯಾದ ತಳಹದಿಯನ್ನು ಪಡೆದಿದೆ. ದೇವರನ್ನು ಕುರಿತ ಸ್ವರೂಪದರ್ಶನವು ಮಾಸ್ತಿಯವರ ಕಾವ್ಯದಲ್ಲಿ ಒಂದು ಚಲನಶೀಲ ಪ್ರಕ್ರಿಯೆಯಾಗಿ ಮೂಡಿರುವುದನ್ನು ಗಮನಿಸಬೇಕು. ದೇವರ ಸ್ವರೂಪದ ಬಗ್ಗೆ ಮಾಸ್ತಿಯವರು ಆರಂಭದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು 'ಅಂಗೀಕೃತ ನೆಲೆ'ಯಿಂದ ಮೂಡಿ ಬಂದಿವೆ. ರೂಢಿಯಿಂದ ಬಂದ ನಂಬಿಕೆಗಳನ್ನು, ಆಲೋಚನೆಗಳನ್ನು ಅವಿಚಾರಿತವಾಗಿ 'ನಿರ್ಣಯ'ಗಳಂತೆ ಅಂಗೀಕರಿಸುವ ಪ್ರವೃತ್ತಿ ಮಾಸ್ತಿಯವರ ಮೊದಮೊದಲು ಕವನಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಪರಿಚಿತವಾದ ವಿಶೇಷಣಗಳು, ಪರಿಚಿತವಾದ ಗುಣವಚನಗಳು, ಪರಿಚಿತವಾದ ರೂಢನಾಮಗಳ ಮೂಲಕ ದೇವರನ್ನು ಕೀರ್ತಿಸುವ 'ಲೋಲುಪಭಾವ' ಈ ಬಗೆಯ ಗೀತೆಗಳಲ್ಲಿದೆ:

"ನನ್ನ ತಂದು ಜಗದೊಳಿಟ್ಟವನೆ
ನನ್ನಿ ಯಾವುದೆಂಬುದನು ತೋರಿಸು
ನಿನ್ನ ದಾರಿಯಲಿ ಬಾಳ ನಿಲ್ಲಿಸು
ಚೆನ್ನವಪ್ಪವೋಲ್ ಅದನು ಬೆಳೆಯಿಸು"

(ಅರಿಕೆ, ಚೆಲುವು, ಪು. ೬೨, ೧೯೩೧)

ಮಾನವನ ಸಂಕಲ್ಪಶಕ್ತಿಯ ಅಸ್ತಿತ್ವವನ್ನೇ ನಿರಾಕರಿಸುವ ಇಂತಹ ರಚನೆಗಳಲ್ಲಿ ಸರ್ವಾರ್ಪಣಾ ಮನೋಭಾವ ವ್ಯಕ್ತಗೊಂಡಿದೆ. ಈ ಹಂತದಲ್ಲಿ ಮಾಸ್ತಿಯವರ ಮುಗ್ಧ ಮನಸ್ಸು ಮತ್ತು ಸೀಮಿತ ದೃಷ್ಟಿಗಳು ಎದ್ದು ಕಾಣುತ್ತವೆ. 'ಬಿನ್ನಹ'ದ ಗೀತೆಗಳಲ್ಲಿ 'ಆಡಂಬರ' ಎಂಬ ಕವನವೊಂದಿದೆ. ಪಟ್ಟೆ ಪೀತಾಂಬರಗಳನ್ನುಟ್ಟು, ವಿಧವಿಧ ಆಭರಣಗಳನ್ನು ಧರಿಸಿ ಆಡಂಬರ ದಿಂದ ಮೆರೆಯುವ ದೇವರನ್ನು ಸಂಭ್ರಮದಿಂದ ಸ್ವಾಗತಿಸುವ ವಿಚಿತ್ರ ದೃಷ್ಟಿ ಈ ಕವನದಲ್ಲಿದೆ. 'ಆಡಂಬರ' ಮತ್ತು 'ನಿರಾಡಂಬರ'ಗಳ ಸಂಘರ್ಷವನ್ನು ಅನಾವರಣಗೊಳಿಸಿರುವ ಕನ್ನಡ ಕಾವ್ಯ ಪರಂಪರೆಯ ಹಿನ್ನೆಲೆಯಲ್ಲಿ ನೋಡಿದರೆ ಇದರ ಸಂಕುಚಿತ ದೃಷ್ಟಿ ಮನದಟ್ಟಾಗುತ್ತದೆ. ಇಲ್ಲೆಲ್ಲ ಮಾಸ್ತಿಯವರು ರೂಢಿಗತವಾದ ನಂಬಿಕೆಗಳನ್ನು, ಆಲೋಚನೆಗಳನ್ನು ಅವಿಚಾರಿತವಾಗಿ 'ನಿರ್ಣಯ'ಗಳಂತೆ ಅಂಗೀಕರಿಸಿಬಿಡುತ್ತಾರೆ.

'ಭಕ್ತ' ಮತ್ತು 'ಭಗವಂತ'ನ ಸಂಬಂಧವನ್ನು ಕನ್ನಡ ಕಾವ್ಯ ಪರಂಪರೆಯಲ್ಲಿ ವಾತ್ಸಲ್ಯಭಾವ – ಮಾಧುರ್ಯಭಾವ– ದಾಸ್ಯ ಭಾವ – ಸಖ್ಯಭಾವಾದಿಗಳಿಂದ ನಿರೂಪಿಸಿ ರುವುದು ಎಲ್ಲರಿಗೂ ಗೊತ್ತಿದೆ. ಇದನ್ನೂ ಮುಕ್ತ ಮನಸ್ಸಿನಿಂದ ಅಂಗೀಕರಿಸುವ ಮಾಸ್ತಿಯವರು ಈ ಪರಿಚಿತ ಭಾವಗಳನ್ನಾಶ್ರಯಿಸಿ ಅನೇಕ ಗೀತೆಗಳನ್ನು ರಚಿಸಿದ್ದಾರೆ. ಹೀಗೆ ಪೂರ್ವ ಪರಿಚಿತವಾದ ನಂಬಿಕೆಗಳನ್ನು, ಆಲೋಚನೆಗಳನ್ನು ಒಪ್ಪಿಕೊಳ್ಳುವದರ ಮೂಲಕ ನಾವು ಗುರುತಿಸಿಕೊಳ್ಳುವ ದೇವರ ಸ್ವರೂಪ 'ಸ್ಥಗಿತ'ವಾದುದೆಂಬುದನ್ನು ಮಾಸ್ತಿಯವರು ಮನಗಂಡಿದ್ದಾರೆ. ಅಂಗೀಕೃತ ನೆಲೆಯ ಟೊಳ್ಳುತನವನ್ನು ಮನಗಂಡ ಮಾಸ್ತಿಯವರ ದೃಷ್ಟಿ ಸ್ವೋಪಜ್ಞತೆಯ ಕಡೆ ತಿರುಗಿದೆ. ಈ ಹಂತದಲ್ಲಿ ಅಂಗೀಕೃತ ಎನ್ನಬಹುದಾದ ನಂಬಿಕೆಗಳನ್ನು, ಆಲೋಚನೆಗಳನ್ನು. ಮಾಸ್ತಿಯವರು ಹೊಸ ದೃಷ್ಟಿಕೋನದಿಂದ ವೀಕ್ಷಿಸಿ ಬೇರೊಂದು ಪರಿ ಕಾಣಲು ಇಚ್ಛಿಸಿದ್ದಾರೆ. ಈ ದೃಷ್ಟಿಯಿಂದ **ವಿಪಿನವಿಹಾರಿ** (ಸುನೀತ, ಪು. ೬೭, ೧೯೪೬) **ವಾಮನ** (ಮನವಿ, ಪು. ೧೩, ೧೯೫೧) **ತಾರಕ** (ಅದೇ ಪು. ೩೭) ಎಂಬ ಕವಿತೆಗಳು ಉಲ್ಲೇಖನಾರ್ಹವಾಗಿವೆ. ವಿಷಯ ಗಣಗಳಿಂದ ಕಾಡಾಗಿ ಬೆಳೆದ ಮನುಷ್ಯನ ಹೃದಯವೇ ದಂಡಕಾರಣ್ಯವೆಂದು ಹೇಳುವ ಕವಿತೆ ವಿಪಿನವಾಸ ನಡೆಸುತ್ತಿರುವ ಅಂತರ್ಯಾಮಿಯನ್ನು ಕುರಿತು ''ಇಲ್ಲೇನು ಮೃಗಯೆಗೆಂದೈತಂದೆಯಾ ಸ್ವಾಮಿ'' ಎಂದು ಪ್ರಶ್ನಿಸುತ್ತದೆ. **ವಾಮನ** ಎಂಬ ಕವನ ಭಗವಂತನನ್ನು ಕುರಿತು "ಮೊದಲು ಸ್ವಲ್ಪವನು ಕೇಳು ಹರಿಯೇ! ಮೊದಲು ಸ್ವಲ್ಪವನು ಕೇಳು'' ಎನ್ನುತ್ತದೆ. ಆ ನಂತರ ಕೊಟ್ಟದ್ದನ್ನು ಸ್ವೀಕರಿಸಿ "ಹಿರಿದಾಗು! ಹೃದಯದಾಗಸವನೆಲ್ಲ ನೀನೆ ತುಂಬು'' ಎಂದು ಕೋರಿಕೊಳ್ಳುತ್ತದೆ. ಸೇತುರಚನೆಯಲ್ಲಿ ರಾಮನಾಮ ಮಹಿಮೆಯ ಪುರಾಣವನ್ನು ಬಳಸಿಕೊಂಡಿರುವ **ತಾರಕ** ಎಂಬ ಕವನವು "ಕಲ್ಲಾಗಿದೆ ಮನ, ಭವದಲಿ ತೇಲಲು ಬಲ್ಲೆನೆಂತೊ? ಇದರಲ್ಲಿ ತವನಾಮ ಕೊರೆ..... ರಕ್ಷಿಸು ರಾಮಾ'' ಎಂದು ಅಭಿವ್ಯಕ್ತಿಸಿದೆ. ಇಲ್ಲೆಲ್ಲ ರೂಢಿಗತ ಪುರಾಣಗಳನ್ನು ಬಳಸಿಕೊಳ್ಳುವಾಗ ಸ್ವೋಪಜ್ಞತೆ ಮತ್ತು ನಾವೀನ್ಯತೆಗಳನ್ನು ಸಾಧಿಸಿರುವುದು ಕಂಡು ಬರುತ್ತದೆ. ಪು.ತಿ.ನ ಅವರ ಕವಿತೆಗಳಲ್ಲಿ ಕಂಡುಬರುವ ಪೌರಾಣಿಕ ಪ್ರಸಂಗಗಳ ಜೊತೆ ಇದನ್ನು ಹೋಲಿಸಿ ನೋಡಿದರೆ ಮಾಸ್ತಿಯವರ ಹಿರಿಮೆ ಏನೆಂಬುದು ಸ್ಪಷ್ಟವಾಗುತ್ತದೆ. ಪು.ತಿ.ನ. ಅವರಲ್ಲಿ ಅರ್ಥಪುಷ್ಟಿಗಷ್ಟೇ ಬಳಕೆಯಾಗುವ ಪುರಾಣ ಪ್ರಸಂಗಗಳ ಉಲ್ಲೇಖವಿದ್ದರೆ ಮಾಸ್ತಿಯವರಲ್ಲಿ

'ಪುರಾಣಗಳ ನವೀಕರಣ' ಕಂಡು ಬರುತ್ತದೆ. ಇಲ್ಲೆಲ್ಲ 'ಅಂಗೀಕೃತ' ಎನ್ನಬಹುದಾದ ನಂಬಿಕೆಗಳನ್ನು, ಆಲೋಚನೆಗಳನ್ನು ಹೊಸ ದೃಷ್ಟಿಯಿಂದ ಪುನರ್ ಸೃಷ್ಟಿಸುವ ಪರಿಯೊಂದನ್ನು ಗುರುತಿಸಬಹುದು. ದೇವರ ಸ್ವರೂಪವನ್ನು ರೂಢನಾಮ ಸ್ಮರಣೆಗಳಿಂದ ಕೀರ್ತಿಸುತ್ತಿದ್ದ ಮನಸ್ಸು ಕ್ರಮೇಣ ಪುರಾಣಗಳನ್ನು ನವೀಕರಿಸಿ ನೋಡುವಂತೆ ನೋಡಿರುವುದು ಮಾಸ್ತಿ ಕಾವ್ಯದ ಹಿರಿಮೆಯಾಗಿದೆ. ಇಹಜೀವನದ ಪ್ರತ್ಯಕ್ಷ ಅಭಿಜ್ಞಾನಗಳಲ್ಲಿ ದೇವರನ್ನು ಕಾಣುವ ದೃಷ್ಟಿ ಮಾಸ್ತಿಕಾವ್ಯದಲ್ಲಿವೆ. ಈ ವಿಚಾರವನ್ನು 'ಹಳಸಿದ' ಸರ್ವಾಂತರ್ಯಾಮಿ ತತ್ವದ ಕೂಸೆಂದು ಕಡೆಗಣಿಸುವಂತಿಲ್ಲ! ಏಕೆಂದರೆ, ಇಹಜೀವನದ ಪ್ರತ್ಯಕ್ಷ ಅಭಿಜ್ಞಾನಗಳನ್ನೇ ದೈವವೆಂದು ಸಾರಿ ಹೇಳುವ ಮಾಸ್ತಿಕಾವ್ಯವು ತನ್ಮೂಲಕ 'ಜೀವನ ಮಿಥ್ಯಾವಾದ'ವನ್ನು ತಿರಸ್ಕರಿಸುತ್ತದೆ. ಇಹ ಜೀವನದ ಶಬ್ದ–ಸ್ಪರ್ಶ–ರೂಪ–ರಸ–ಗಂಧಗಳಲ್ಲಿ ದೇವರ ಸ್ವರೂಪ ದರ್ಶನವನ್ನು ಮನ ಗಾಣಿಸಿದ ಕೀರ್ತಿ ಮಾಸ್ತಿ ಕಾವ್ಯಕ್ಕೆ ದಕ್ಕುತ್ತದೆ. ಸ್ಪರ್ಶಾನುಭೂತಿಯನ್ನುಂಟು ಮಾಡಿದ ತಂಗಾಳಿ, ಶ್ರವಣಸುಧೆ ಎನ್ನಬಹುದಾದ ಹಕ್ಕಿಗಳ ಕೂಗು, ಪರಿಮಳಭರಿತ ಪುಷ್ಪಸಂಕುಲ, ಸೃಷ್ಟಿಯ ಸೌಂದರ್ಯಕ್ಕೆ ಮಣಿಮುಕುಟದಂತಿರುವ ಹೆಣ್ಣಿನ ರೂಪ – ಇತ್ಯಾದಿ ಇಂದ್ರಿಯಗಮ್ಯ 'ಸಂಗತಿ'ಗಳಲ್ಲೆ ದೇವರ ಸ್ವರೂಪವನ್ನು ವ್ಯಾಖ್ಯಾನಿಸುವ ಬಹಳಷ್ಟು ಕವಿತೆಗಳು ಮಾಸ್ತಿ ಕಾವ್ಯದಲ್ಲಿದೆ. ಹೀಗೆ ಇಹಜೀವನದ ಪ್ರತ್ಯಕ್ಷ ಅಭಿಜ್ಞಾನಗಳಲ್ಲಿ ದೇವರನ್ನು ಕಾಣುವ ದೃಷ್ಟಿ ಮಾಸ್ತಿಯವರಲ್ಲಿ ದಿಢೀರನೇ ಪ್ರಕಟಗೊಂಡಿಲ್ಲ. ನದಿಯೊಂದು ಮೂಲದಲ್ಲಿ ಸಣ್ಣಗೆ ಸುಳಿದು ಕ್ರಮೇಣ ಹರಿದು ಬಂದಂತಲ್ಲ ತನ್ನ ಪಾತ್ರವನ್ನು ಹಿಗ್ಗಿಸಿಕೊಳ್ಳುವಂತೆ ಪ್ರತ್ಯಕ್ಷಾಭಿಜ್ಞಾನ ದೃಷ್ಟಿಯು 'ಬಿನ್ನಹ'ದ ಗೀತೆಗಳಲ್ಲೆ ಇದೆ. ಈ ದೃಷ್ಟಿಯಿಂದ ಸಣ್ಣ ಹಕ್ಕಿಯ ಇಂಚರವನ್ನು ವರ್ಣಿಸುವ **ಒಂದು ಪಕ್ಷಿ** (ಬಿನ್ನಹ, ಪು. ೩೧, ೧೯೨೨) ಎಂಬ ಕವಿತೆ ಗಮನಾರ್ಹವಾಗಿದೆ: ಬೃಂದಾವನದಲ್ಲಿ ಗೋವು ಗೋಪಿಕೆಯರನ್ನು ನಲಿಸಿದ ಕೃಷ್ಣನ ಕೊಳಲಿನ ಒಂದು ಕಣ್ಣು ಇದೀಗ ಸಣ್ಣ ಹಕ್ಕಿಯ ಕೊರಳಸ್ವರದಲ್ಲಿ ನವ್ಯಗಾನವಾಗಿ ಹೊಮ್ಮುತ್ತಿದೆ ಎಂಬ ಗ್ರಹಿಕೆ "ನೀ ಧರಿಸಿರುವ ರೂಪಿನ ಸಾಸಿರಗಳನರಿಯುವುದ ನೀಡು" (ಬಿನ್ನಹ ಪು. ೪) ಎನ್ನುವ ಅಭೀಪ್ಸೆಗೆ ಅನುಗುಣವಾಗಿದೆ.

'ತಂಗಾಳಿ' (ಅರುಣ, ಪು. ೯, ೧೯೨೪) ಮಾಸ್ತಿಯವರ ಶ್ರೇಷ್ಠ ಕವಿತೆಗಳಲ್ಲೊಂದು. ಬಣ್ಣಗೆಟ್ಟ ಹಣ್ಣೆಲೆ ತಾನು ಉದುರುವುದನ್ನೇ ಹಾರೈಸಿ ಇದಿರು ನೋಡುತ್ತಿರಲು ಅದರ ಮೇಲೆ ಮೆಲುಮೆಲನೆ ಬೀಸಿ 'ಸದಯ' ಬೆಸುಗೆಯ ಬಿಡಿಸಿ, ಅದನ್ನು ಕಡೆ ಹಾಯ್ಸುವ 'ತಂಗಾಳಿ'ಯ ವರ್ಣನೆ ಈ ಕವಿತೆಯಲ್ಲಿದೆ. ಕವಿತೆ ಮುಂದುವರೆದಂತೆಲ್ಲ ಭಕ್ತ – ಭಗವಂತನ ಸಂಬಂಧ, ಸ್ವರೂಪಗಳನ್ನು ಬಿಂಬಿಸುತ್ತಾ ಅಮೂರ್ತವನ್ನು ಮೂರ್ತಗೊಳಿಸುವ ಪರಿಯನ್ನು ಸಹಜವಾಗಿ ಸಾಧಿಸಿದೆ. 'ಚೇತನಾರೋಪಣೆ'ಯಿಂದ ಕಂಗೊಳಿಸುವ ಒಟ್ಟು ಕವಿತೆ ನೆಲದ ಹಸಿರಿನಲ್ಲಿ ಜೀವ ಸಂಕುಲವನ್ನು ಕಾಣುವುದಲ್ಲದೆ, ನೆಲದ ಗಾಳಿಯಲ್ಲಿ ದೇವರನ್ನು ಗುರುತಿಸುವಷ್ಟು ಘನತೆಯನ್ನು ಪಡೆದಿದೆ. ಈ ದೃಷ್ಟಿಯಿಂದ ನೋಡಿದರೆ ಮಾಸ್ತಿಯವರ ಕಾವ್ಯದಲ್ಲಿ 'ಶ್ರೀನಿವಾಸ' ಎಂಬುದು ರೂಢನಾಮವಾಗಿ ಮತ್ತು ಕಾವ್ಯನಾಮಗಳಾಗಿ ಮಾತ್ರನಿಲ್ಲದೆ ಇಹಲೋಕದ ಬದುಕನ್ನೆ 'ಶ್ರೀ–ನಿವಾಸ'ವೆಂದು ಪರಿಭಾವಿಸುವ ನೆಲೆಯನ್ನೂ ಧ್ವನಿಸಿಬಿಡುತ್ತದೆ.

ದೇವರ ಸ್ವರೂಪವನ್ನು ಕುರಿತ ಈ ದರ್ಶನ ಒಂದು ಚಲನಶೀಲ ಪ್ರಕ್ರಿಯೆ ಆಗಿರುವುದರಿಂದ ಮಾಸ್ತಿ ಕಾವ್ಯದಲ್ಲಿ ಪರಸ್ಪರ ವಿರೋಧಾಭಾಸಗಳು, ದೃಷ್ಟಿ ಬೇಧಗಳು ಪ್ರಕಟಗೊಂಡಿವೆ. ಇದರ ಬಗ್ಗೆ ಸ್ವತಃ ಮಾಸ್ತಿಯವರಿಗೆ ಒಂದು ಸೂಕ್ಷ್ಮ ಎಚ್ಚರವಿದೆಯೆಂಬುದನ್ನು ಕೆಳಗಿನ ನುಡಿಗಳು ಸಮರ್ಥಿಸುತ್ತವೆ:

"ಹಗಲು ಇರುಳಲಿ ಗಳಿಗೆ ಚಣದಲಿ
ಜಗವು ಸಂತತ ಚಲಿಸುತಿರ್ಪುದು
ಬಗೆಯೊಳಿನ್ನಲಿ ಅಂತೆ ಸಂತತ
ಒಗೆಯುತಿರ್ಪುದು ದೃಷ್ಟಿಭೇದವು"

(ಅಂಕೆ ಚೆಲುವು, ಪು. ೬೨, ೧೯೩೧)

ಜಗತ್ತಿನ ಚಲನಶೀಲತೆಯೊಂದಿಗೆ ತಮ್ಮ ದೃಷ್ಟಿಭೇಧಗಳನ್ನು ಗುರುತಿಸಿಕೊಳ್ಳುತ್ತಿರುವ ಮಾಸ್ತಿಯವರಿಗೆ 'ಪುರಾಣಗಳು' ಕೂಡ ಚಲನಶೀಲವಾಗಿ ಕಾಣಿಸುತ್ತವೆ. ಜೊತೆಗೆ, ಭಾರತೀಯ ಅಂತಃಶ್ಚೇತನಕ್ಕೆ ತಕ್ಕಂತೆ ಪುರಾಣವನ್ನು ನಿತ್ಯನೂತನವೆಂದೂ ಭಾವಿಸುವ ಮಾಸ್ತಿಯವರು 'ರಾಮನವಮಿ' ಎಂಬ ಕಥನ ಕವನದಲ್ಲಿ ಪುರಾಣವಸ್ತುವೊಂದು ಹೇಗೆ ನಿತ್ಯನೂತನವಾಗುತ್ತದೆ ಎಂಬುದನ್ನು ನಿರೂಪಿಸಿದ್ದಾರೆ.

ಬಸರಿಯ ಮರದಡಿಯಲ್ಲಿ ಕುಳಿತು ವಿಶ್ರಮಿಸಿಕೊಳ್ಳುತ್ತಿರುವ ಬೋವನಹಳ್ಳಿಯ ಮುದುಕ ಜವರಗೌಡ ರಾಮಾಯಣದ ಘಟನೆಗಳೊಂದಿಗೆ ತನ್ನ ಊರು ಪಡೆದುಕೊಂಡಿರುವ ಜೀವಂತ ಸಂಬಂಧವನ್ನು ನಿರೂಪಕನೊಂದಿಗೆ ಹೇಳಿಕೊಳ್ಳುತ್ತಿರುವಂತೆ ಕಥನ ಕವನ ಆರಂಭವಾಗುತ್ತದೆ.

"ಇಲ್ಲಿಯೇ ಕುಳಿತರು ಸೀತಾದೇವಿ
ಇಲ್ಲಿ ರಾಮಚಂದ್ರ
ಬದಿಯಲಿ ನಿಂತರು; ಅಲ್ಲಿ ಲಕ್ಷ್ಮಣ
ಸಕಲಸುಗುಣಸಾಂದ್ರ"

ಮುಂದೆ ಜವರಗೌಡ ಮತ್ತು ನಿರೂಪಕರ ಸಂವಾದಗಳಿಂದ ಬೆಳೆಯುತ್ತಾ ಸಾಗುವ ಕಥನ ಕವನದಲ್ಲಿ ರಾಮ–ಸೀತೆಯರ ಸಂವಾದಗಳೂ ಜವರಗೌಡನ ನಿರೂಪಣೆಯ ದ್ವಾರಾ ಮೂಡಿ ಬರುತ್ತವೆ. ಹಚ್ಚಹಸುರಿನ ಈ ಅರಣ್ಯ ಪರಿಸರದಲ್ಲಿ ಸಿಗುವ ಸುಖ ಶಾಂತಿಗಳು ಅರಮನೆಯಲ್ಲಿ ದೊರೆಯುವುದೇ ಎಂಬ ಪ್ರಶ್ನೆಯನ್ನು ಸೀತೆ ಹಾಕುತ್ತಾಳೆ. ಹಕ್ಕಿಯ ಇಂಚರಕ್ಕೆ ಮನ ಸೋತ ಸೀತೆಯ ಮಾತುಗಳನ್ನು ಕೇಳಿದ ರಾಮ "ಇದಕೂ ಇಂಪಿನ ದನಿ ನಾ ಬಲ್ಲೆ" ಎನ್ನುತ್ತಾನೆ. ಸೀತೆ ಅದೇನೆಂದು ಪ್ರಶ್ನಿಸಿದಾಗ ತುಂಟ ನಗುತ್ತಾ "ನೀ ಎನ್ನನು ರಾಮ ಎನ್ನುವ ದನಿ, ಎನಗದು ಬಹು ಇನಿದು" ಎನ್ನುತ್ತಾನೆ ರಾಮ. ಹೀಗೆ ಸಂಭಾಷಿಸುತ್ತಿರುವಾಗಲೇ ಅಂದು ರಾಮ ಹುಟ್ಟಿದ ದಿನ 'ಶ್ರೀರಾಮ ನವಮಿ' ಎಂಬುದು ಸೀತೆಗೆ ನೆನಪಾಗುತ್ತದೆ. ಹುಟ್ಟುಹಬ್ಬದ ಅಡುಗೆಯನ್ನು ಬಸರಿಯ ಮರದಡಿಯಲ್ಲಿಯೇ ಮಾಡಲು ಸೀತಾ ರಾಮ ಲಕ್ಷ್ಮಣರು ಸಜ್ಜಾಗುತ್ತಾರೆ. ಹಣ್ಣುಹಂಪಲು ತರುವುದಕ್ಕಾಗಿ ಲಕ್ಷ್ಮಣ ಹೊರಟರೆ ರಾಮನು ಅಡುಗೆಗೆಂದು

ಪುಳ್ಳೆಗಳನ್ನು ಸಂಗ್ರಹಿಸುತ್ತಾನೆ. ಎಲ್ಲರೂ ಹಬ್ಬದೂಟ ಮಾಡಿ ಮುಗಿಸಿದ ಮೇಲೆ ಅಲ್ಲಿಂದ ಸೀತಾದೇವಿ ಬಸರಿಯ ಮರವನ್ನು ಎಂದೆಂದೂ ಬಾಡದಿರು ಎಂದೂ ಜಲದ ಬಾವಿಯನ್ನು ಎಂದೆಂದೂ ಬತ್ತದಿರು ಎಂದೂ ಆಶೀರ್ವದಿಸಿ ಹೋದರೆಂದು ಮುದಿಯ ಜವರಗೌಡ ನಿರೂಪಕನಿಗೆ ಅರಹುತ್ತಾನೆ. ಅಲ್ಲದೆ, ಸೀತಾರಾಮ ಲಕ್ಷ್ಮಣರು ಮರಳಿ ಎಂದಾದರೊಮ್ಮೆ ತಮ್ಮನ್ನು ನಲಿಸಿದ ಈ ಚೆಲುವಿನ ತಾಣಕ್ಕೆ ಬಂದೇ ಬರುವರೆಂಬ ಶ್ರದ್ಧೆಯಿಂದ ತಾನು ಪ್ರತಿ ರಾಮನವಮಿಯಂದು ಕಾಯುತ್ತಿದ್ದೇನೆಂದೂ ತಿಳಿಸುತ್ತಾನೆ. ಗೌಡನ ಮಾತನ್ನು ಕೇಳುತ್ತಿದ್ದ ನಿರೂಪಕ ರಾಮಾಯಣದ ಘಟನೆಗಳನ್ನು ಪರಿಭಾವಿಸುತ್ತಾ ಬದಿಯಲ್ಲೇ ಇರುವ ತಗ್ಗಿನ ಮರವೊಂದರ ಕಡೆ ದೃಷ್ಟಿ ಹಾಯಿಸುತ್ತಾನೆ. ಅಲ್ಲಿ ಇಬ್ಬರು ಹರೆಯದ ಹುಡುಗ – ಹುಡುಗಿ ಕಾಣಿಸುತ್ತಾರೆ. ಅವರನ್ನು ನೋಡಿದ ನಿರೂಪಕನಿಗೆ 'ಸೀತಾರಾಮರೇ ಬಂದರೂ ಹೇಗೆ?' ಎನ್ನಿಸುತ್ತದೆ. ನಿರೂಪಕನ ನೋಟವನ್ನು ಕಂಡು ಮುದುಕ ಜವರಗೌಡ ಅವರು ತನ್ನನ್ನು ಕರೆಯಲು ಬಂದಿರುವ ಮಗ ಸೊಸೆ ಎನ್ನುತ್ತಾನೆ. ರಾಮಾಯಣದ ಗುಂಗಿನಿಂದ ಇನ್ನೂ ಬಿಡುಗಡೆ ಪಡೆಯದಿದ್ದ ನಿರೂಪಕನಿಗೆ ಆ ಹರೆಯದ ಜೋಡಿಯನ್ನು, ಆ ಮುದುಕ ಜವರಗೌಡನನ್ನು ಕುರಿತು ಮನಸ್ಸಿನಲ್ಲಿ ಚಿತ್ರವೊಂದು ಮೂಡುತ್ತದೆ :

"ದಶರಥ ಸೀತಾರಾಮರು ಇವರು
ನಾನೆ ಅದೆ ಜನಕ
ಮನದಿಂದಳಿಯದು ಇನ್ನಾ ಚಿತ್ರ
ಈ ಉಸಿರಿರುವತನಕ"

ಹೀಗೆ, ರಾಮಾಯಣದ ಘಟನೆಗಳನ್ನು ಪರಿಭಾವಿಸುತ್ತಾ ಪುರಾಣಪುರುಷರ ಸ್ಥಾನದಲ್ಲಿ 'ಉಸಿರಾಡುವ' ಮಾನವ ಚೇತನಗಳನ್ನು ಗುರುತಿಸುವ ಪರಿ ಅನನ್ಯವಾಗಿದ್ದು ನೆಲವನ್ನು ಬಿಟ್ಟು 'ಮೇಲೇರದ' ಮಾಸ್ತಿಕಾವ್ಯಕ್ಕೆ ಸಹಜವಾದ ಅಭಿವ್ಯಕ್ತಿಯಾಗಿದೆ.

ಪುರಾಣಗಳನ್ನು ಮಾನವೀಕರಿಸಿ ನೋಡುವ ಮಾಸ್ತಿಯವರ ಈ ದೃಷ್ಟಿಕೋನದಿಂದಾಗಿಯೇ ಅವರ ಏಕೈಕ ಮಹಾಕಾವ್ಯ **ಶ್ರೀರಾಮ ಪಟ್ಟಾಭಿಷೇಕ** ಹುಟ್ಟಿಕೊಂಡಿದೆ. ಕಲ್ಪನಾರಮ್ಯವೂ, ಸಾಂಕೇತಿಕವೂ ಆದ ರಾಮಾಯಣದ ಭವ್ಯ ಚಿತ್ರಗಳನ್ನು ಅಳಿಸಿ ಹಾಕುವ ಮಾಸ್ತಿಯವರು ಶುದ್ಧಾಂಗವಾಗಿ ಉಸಿರಾಡುವ ಮಾನವ ಚೇತನಗಳೇ ಇವು ಎಂಬಂತೆ 'ಪಾತ್ರ ನಿರ್ಮಾಣ'ವನ್ನು ಸಾಧಿಸಲು ಯತ್ನಿಸಿದ್ದಾರೆ. ಆದರೂ **ರಾಮನವಮಿ** ಕಥನ ಕವನದ ಜೊತೆ **ಶ್ರೀರಾಮಪಟ್ಟಾಭಿಷೇಕ**ವನ್ನು ಹೋಲಿಸಿದಾಗ (ಇದಕ್ಕೆ ಮಹಾಕಾವ್ಯವೆಂಬ ಹೆಸರಿದ್ದರೂ ಸಹ) ಇದರ ಸಾಧನೆ ತಂಪೆರೆವ ನೀಲಮೇಘವಾಗದೆ ಚದುರಿಹೋಗುವ 'ಹೊಗೆ' ಎನಿಸಿಬಿಡುತ್ತದೆ. ಇದರಿಂದ ಸ್ಪಷ್ಟಗೊಳ್ಳುವ ವಿಚಾರವೆಂದರೆ ಪುರಾಣಗಳ 'ಮಾನವೀಕರಣ' ಅಥವಾ 'ವಾಸ್ತವೀಕರಣ' ದೃಷ್ಟಿಯು ಬಿಡಿಬಿಡಿಯಾದ ಜೀವನಚಿತ್ರಗಳಲ್ಲಿ ಪಡೆಯುವಷ್ಟು ಸಾರ್ಥಕ್ಯತೆಯನ್ನು ಅಖಂಡವಾಗಿ ಪಡೆಯಲಾರದೆಂದು ತೋರುತ್ತದೆ. ಏಕೆಂದರೆ ಪುರಾಣಗಳನ್ನು ಸಮಗ್ರವಾಗಿ ಮತ್ತು ಅಖಂಡವಾಗಿ ವಾಸ್ತವೀಕರಿಸಲು ಹೊರಟ ಕವಿಯೊಬ್ಬ, ಕಲ್ಪನಾರಮ್ಯವೂ ಸಾಂಕೇತಿಕವೂ ಆದ ಭವ್ಯ ಚಿತ್ರಗಳೊಂದಿಗೆ ಸೆಣಸಾಡಬೇಕಾಗುತ್ತದೆ. ಸಮುದ್ರಲಂಘನ –

ಲಂಕಾದಹನ – ಸೇತುಬಂಧನ–ಸಂಜೀವಿನಿ ಉತ್ಪಾಟನ – ರಾಮರಾವಣ ಯುದ್ಧ – ಅಗ್ನಿದಿವ್ಯ ಪ್ರಸಂಗಗಳು ಆದ್ಯಂತವಾಗಿ ಕಲ್ಪನಾರಮ್ಯವಾದ, ಸಾಂಕೇತಿಕವಾದ ಭವ್ಯ ಚಿತ್ರಗಳಾಗಿವೆ. ಈ ಸಂದರ್ಭದಲ್ಲಿ ಕವಿಗಳ 'ವಿಶೃಂಖಲ ಕಲ್ಪಕತೆ'ಯನ್ನು ಎತ್ತಿ ಹಿಡಿಯುವ ನೇಮಿಚಂದ್ರನ ಪ್ರಸಿದ್ಧವಾದ– "ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ"–ಎಂಬ ಪದ್ಯವನ್ನು ನೆನೆಯಬಹುದು. ರಾಮಾಯಣದ ಈ ಪೂರ್ವೋಕ್ತ ಪ್ರಸಂಗಗಳನ್ನು ಮಾಸ್ತಿಯವರು 'ಶ್ರೀರಾಮಪಟ್ಟಾಭಿಷೇಕ'ದಲ್ಲಿ ನಿರ್ವಹಿಸಿರುವ ರೀತಿಯನ್ನು ನೆನೆದರೆ ಪುರಾಣಗಳನ್ನು ಸಮಗ್ರವಾಗಿ ಮತ್ತು ಅಖಂಡವಾಗಿ ವಾಸ್ತವೀಕರಿಸುವ ಪ್ರಯತ್ನದ ನಿಷ್ಫಲತೆ ಮನದಟ್ಟಾಗುತ್ತದೆ. ಆದರೂ ಶ್ರೀರಾಮನನ್ನು 'ದೇವರು' ಎಂದು ಮೆರೆಸುತ್ತಿದ್ದ ಹಾಗೂ ಮೆರೆಸುತ್ತಿರುವ ದಿನಗಳಲ್ಲಿ ಬದುಕಿದ್ದ ಮಾಸ್ತಿಯವರು ಹಾಗೆ ಮಾಡದೆ, ರಾಮನಲ್ಲಿ 'ಶ್ರೇಷ್ಠಮಾನವ'ನೊಬ್ಬನನ್ನು ಗುರುತಿಸಲು ಯತ್ನಿಸಿರುವ ರೀತಿಯಲ್ಲಿ ಆಗಲೇ ಹೇಳಿದಂತೆ ಪ್ರತ್ಯಕ್ಷಾಭಿಜ್ಞಾನ ದೃಷ್ಟಿಯೇ ಕಂಡು ಬರುತ್ತದೆ. ಒಟ್ಟಿನಲ್ಲಿ 'ದೇವರು' ಎಂಬುದು ಮಾಸ್ತಿಯವರಿಗೆ ಒಂದು ಅಮೂರ್ತವಾದ ತಾತ್ವಿಕ ವಿಚಾರವಾಗಿರದೆ ಮೂರ್ತ ರೂಪದ ಭಾವನಾತ್ಮಕ ಸಂಗತಿಯಾಗೇ ಗೋಚರಿಸುತ್ತದೆ. ಇದನ್ನು ಮಾಸ್ತಿಯವರು **ಸೌಭಾಗ್ಯ ದರ್ಶನ** ಎಂಬ ಕವನದಲ್ಲಿ ವಾಚ್ಯವಾಗಿಯೇ ಘೋಷಿಸಿದ್ದಾರೆ:

"ಇವರು ದೇವರು ಎಂಬ ಒಡವೆ
ಎಂಥದೋ ಕಾಣೆ; ಅದು ನನಗೆ ನಿಲುಕದ ಪ್ರಶ್ನೆ
ಬೇಡ ಈ ಬುದ್ಧಿಗಾ ಗೊಡವೆ
ಅನುಭವವ ಹೇಳುವೆನೆ, ಹೆತ್ತ ತಾಯ್ತಂದೆವಿರ
ಹೊರೆದ ಬಳಗದ, ನಾವೆ ಹೆತ್ತು
ಹಿಡಿದ ಮಕ್ಕಳ, ಕೆಳೆಯ, ಒಡಹುಟ್ಟ ಕೃಪೆ ಒಲವು,
ಇದು ಎಷ್ಟು ಎಂದು ಬೇಸತ್ತು
ಕೊಡವಿಕೊಂಡರು ಬಿಡದ ಹೆಂಡತಿಯ ವಾತ್ಸಲ್ಯ;
ಇವು ನನಗೆ ಪ್ರತ್ಯಕ್ಷದೈವ" (ಸಂಕ್ರಾಂತಿ, ಪು ೨೯, ೧೯೬೯)

ಮಾಸ್ತಿಯವರ ಕಾವ್ಯದಲ್ಲಿ ಅನುಭವದ ತೆಕ್ಕೆಗೊಗ್ಗದ 'ಊರ್ಧ್ವಗಾಮಿ' ಎನ್ನಬಹುದಾದ ದೈವವಾದವು ಹಿನ್ನಲೆಗೆ ಸರಿದು ಅದರ ಬದಲಿಗೆ ಮರ್ತ್ಯಗಾಮಿಯಾದ ದೈವವಾದವು ಮುನ್ನಲೆಗೆ ನಿಲ್ಲುತ್ತದೆ. ಈ ದೃಷ್ಟಿಯಿಂದ ನೋಡಿದರೆ ನೆಲವನ್ನೆ ದೇವರೆಂದು ನಂಬಿ ನುಡಿಯುವ ಕೆ.ಎಸ್. ನರಸಿಂಹಸ್ವಾಮಿಯವರ ಕವಿತೆಗಳು ಮಾಸ್ತಿಕಾವ್ಯದ ಚಲನಶೀಲ ಬೆಳವಣಿಗೆಯಾಗಿ ತೋರುತ್ತವೆ. ಆಗಲೇ ಹೇಳಿದ ಮಾತುಗಳ ಮೂಲಕ ಇದನ್ನು ಹೀಗೆ ವಿವರಿಸಬಹುದು; ಯಾದೃಚ್ಛಿಕ ಎನ್ನಬಹುದಾದ, ಪರಸ್ಪರ ಪ್ರತ್ಯೇಕವಾದ ಸಂಗತಿಗಳ ವರ್ಣನೆಯ ಮಟ್ಟದಲ್ಲೆ ನಿಂತುಹೋದ ಮಾಸ್ತಿಕಾವ್ಯವು, ಬದುಕಿನ ವೈವಿಧ್ಯಮಯ ಕ್ರಿಯೆಗಳನ್ನು ಸಂಯೋಜಿಸಿ ಪ್ರತಿಮೆ – ಸಂಕೇತಗಳ ಮೂಲಕ ಸಂಭಾಷಿಸುವ ಕೆ.ಎಸ್. ನರಸಿಂಹಸ್ವಾಮಿಯವರ ಕಾವ್ಯದಲ್ಲಿ ತನ್ನ ಚಲನಶೀಲವಾದ ಬೆಳವಣಿಗೆಯನ್ನು ಕಂಡುಕೊಂಡಿದೆ: ಈ ದೃಷ್ಟಿಗೆ ಪೂರಕವಾಗಿ ಎಚ್.ಎಸ್.ವೆಂಕಟೇಶಮೂರ್ತಿಯವರ ಅಭಿಪ್ರಾಯವೊಂದನ್ನು ಉಲ್ಲೇಖಿಸಬಹುದು:

"ಮಾಸ್ತಿ ಕಾವ್ಯದ ಅತಿ ಮಾತು, ತತ್ವೀಕರಣ, ವಾಚ್ಯತೆಗಳನ್ನು ಕಳೆದುಕೊಂಡು ಪ್ರಬಂಧ ಧ್ವನಿಯನ್ನು ಕಟ್ಟಿಕೊಂಡು, ಕತೆಯನ್ನು ನೆಪಮಾತ್ರಕ್ಕೆ ತಂದು, ಆದರೆ ಕಥನದ ಧಾಟಿಯನ್ನು ಇಟ್ಟುಕೊಂಡು, ಅದ್ಭುತ ಕಾವ್ಯವನ್ನು 'ತೆರೆದ ಬಾಗಿಲು' ಕವಿತೆಗಳಲ್ಲಿ ಸಾಧಿಸಿದ್ದು ಕೆ.ಎಸ್. ನ. ಕಾವ್ಯದ ವೈಶಿಷ್ಟ್ಯ. ಪ್ರಾಯಶಃ ಮಾಸ್ತಿಯವರ ಕಾವ್ಯಕ್ರಮದ ಅತ್ಯುತ್ಕೃಷ್ಟ ಮಾದರಿಗಳೆಂದು ನಾವು **ತೆರೆದ ಬಾಗಿಲು** ಕವಿತೆಗಳನ್ನು ನೋಡಬೇಕಾಗುತ್ತದೆ"[೨]

೪

ತುಂಬೆ–ಹೊಂಗೆ ಹೂಗಳಲ್ಲಿ, ಗುಬ್ಬಚ್ಚಿ – ಬೆಳವನ ಹಕ್ಕಿಗಳಲ್ಲಿ, ಮನುಷ್ಯ – ಮನುಷ್ಯರಲ್ಲಿ (ಅಖಿಲ ಜಗದ ಜೀವಕೋಟಿಯಲ್ಲಿ) ಪ್ರತ್ಯಕ್ಷ ದೈವವನ್ನು ಕಾಣುವ ಮಾಸ್ತಿ ಕಾವ್ಯವು ಈ ಕಾಣ್ಕೆಯನ್ನು ಕೃತಿಯಾಗಿಸಲು ಹೆಚ್ಚು ಮಹತ್ವ ನೀಡುತ್ತದೆ. ಮನುಷ್ಯ ಬಾಳನ್ನು ಒಂದು ಪ್ರಕ್ರಿಯೆ ಎಂದು ಭಾವಿಸುತ್ತಾ ಇಹದಲ್ಲಿ ಸಾಧಿಸಬೇಕಾದ ಆತ್ಮೋನ್ನತಿಯನ್ನು, ಜನ್ಮ ಸಾಫಲ್ಯವನ್ನೂ ಮಾಸ್ತಿ ಕಾವ್ಯ ಎತ್ತಿ ಹಿಡಿದಿದೆ.

ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು!
ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು!
ಆಚಾರವೆಂಬ ಕಾಯಾಯಿತ್ತು! ನಿಷ್ಪತ್ತಿಯೆಂಬ ಹಣ್ಣಾಯಿತ್ತು!
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವನು ತನಗೆ ಬೇಕೆಂದೆತ್ತಿಕೊಂಡನು .....

ಬಸವಣ್ಣನ ಈ ವಚನ ಬಾಳಿನ ಪರಿಪಕ್ವತೆಯನ್ನು, ಒಗರಳಿದು ಜೀವ ಹಣ್ಣಾಗುವ ಪರಿಯನ್ನು ಬಿಂಬಿಸುತ್ತದೆ. ಇದೇ ನಿಲುವು ಮಾಸ್ತಿಯವರದ್ದು! **ಜೀನಿ ಡ ಆರ್ಕ್** (ನವರಾತ್ರಿ–೪) ಕಥನ ಕವನದ ಕೊನೆಯಲ್ಲಿ (ಪು. ೬೪) ಇದೇ ನಿಲುವಿನ ಮಾತುಗಳು ಮೂಡಿಬಂದಿವೆ. ದೇವರು ತನಗೆ ಬೇಕೆಂದೆತ್ತಿಕೊಳ್ಳುವಂತೆ ಮಾನವನ ಬದುಕು ಮಾಗಬೇಕೆಂಬುದನ್ನು ಮಾಸ್ತಿ ಎತ್ತಿ ಹಿಡಿದಿದ್ದಾರೆ. ಮಾಸ್ತಿಯವರ ಕವನ ಸಂಕಲನಗಳಲ್ಲಿರುವ **ಮೊಗ್ಗು, ತೆಂಗಾಳಿ, ತಾವರೆ, ಚೆಲುವದೇವಿ, ಕನ್ನೈದಿಲೆ** ಮುಂತಾದ ಕವನಗಳು ಚೇತನಾರೋಪಣೆಯ ಮೂಲಕ 'ಹಸಿರು' ಮತ್ತು 'ಮನುಷ್ಯ' ಜೀವನಗಳ ಪರಿಪಕ್ವತೆ, ಜನ್ಮ ಸಾಫಲ್ಯತೆಗಳನ್ನು ನಿರೂಪಿಸಿವೆ. ಗಿಡಮರಗಳ ಚಿಗುರೆಲೆ – ಹೊಸರಸ – ಸುಮಫಲ – ಹಣ್ಣೆಲೆಗಳ ಪ್ರಕ್ರಿಯೆಯನ್ನು ಮಾನವ ಜೀವನದಲ್ಲೂ ಕಾಣುವ ಮಾಸ್ತಿಯವರು ಸಫಲತೆಯನ್ನು ಒಂದು ಪ್ರಕ್ರಿಯೆ ಎಂದು ಭಾವಿಸಿದ್ದಾರೆ. ಈ ಪ್ರಕ್ರಿಯೆಗೆ ಭೂಮಿ ಅಥವಾ ಇಹಜೀವನವೇ ಪ್ರಯೋಗಶಾಲೆ ಎಂದು ನಂಬಿರುವ ಮಾಸ್ತಿಯವರು ತನ್ಮೂಲಕ ಇದೇ ದೃಷ್ಟಿಯನ್ನು ಬಿಂಬಿಸುವ ಕನ್ನಡ ಕಾವ್ಯ ಪರಂಪರೆಯ ಚಲನಶೀಲ ವಾಹಿನಿಯ ಜೊತೆ ತಮ್ಮನ್ನು ಗುರುತಿಸಿಕೊಂಡಿದ್ದಾರೆ. **ಪ್ರಮದ್ವರೆ** ಎಂಬ ಕಥನ ಕವನದಲ್ಲಿ ಇಂಥ ಜೀವನ ದರ್ಶನದ ನಿರೂಪಣೆ ಇದೆ. ಇಂದ್ರನೊಡ್ಡಿದ ಪರೀಕ್ಷೆಯ ಪ್ರಕಾರ ಮಾಯಾ ಪ್ರಮದ್ವರೆಯರ ಸಾಲಿನಲ್ಲಿ ಮಾನವಿ ಪ್ರಮದ್ವರೆಯನ್ನು ರುರು ಗುರುತಿಸುವ ಪರಿ

ಸಹಜವಾಗಿ ಮೂಡಿಬಂದಿದೆ. ಸುರಲೋಕದ ವಿಲಾಸ – ವೈಭವಗಳನ್ನು ತಿರಸ್ಕರಿಸುವ ಈ ಕಥನ ಕವನ ನರಲೋಕದ ಒಲುಮೆ – ಮಮತೆಗಳನ್ನು ಎತ್ತಿಹಿಡಿದಿದೆ. ಈ ಸಂದರ್ಭದಲ್ಲಿ ರೆಪ್ಪೆ ಬಡಿಯದ ಕಣ್ಣುಗಳು, ನೆರಳಿಲ್ಲದ ಒಡಲು, ನೆಲದಲ್ಲಿ ಕಾಲೂರದ ಕಾಲುಗಳು ಇತ್ಯಾದಿ ದೇವತಾ ಲಕ್ಷಣಗಳ ಮೂಲಕ ಮಾಯಾ ನಳರನ್ನು ಬೇರ್ಪಡಿಸಿ ತನ್ನಿನಿಯ ನಳನನ್ನೆ ವರಿಸುವ ದಮಯಂತಿಯ ಕಥೆ ನಮಗೆ ನೆನಪಾಗುತ್ತದೆ. ಆದರೆ, ಮಾಸ್ತಿಯವರು ಇಂಥ ಚಮತ್ಕಾರದ ಕಥೆಯನ್ನು ಆಯ್ಕೆ ಮಾಡಿಕೊಳ್ಳದೆ ಮಾನವ ಭಾವಗಳ ಆರ್ದ್ರತೆಯಿಂದಲೇ ಮಾನವೀ ಪ್ರಮದ್ವರೆಯನ್ನು ಗುರುತಿಸಿರುವ ರುರುವಿನ ಕಥೆಯನ್ನು ಆಯ್ಕೆ ಮಾಡಿಕೊಂಡಿರುವುದು ಮಾಸ್ತಿಕಾವ್ಯದ ಹಿರಿಮೆಯ ದ್ಯೋತಕವಾಗಿದೆ. ಮಾಸ್ತಿಕಾವ್ಯವು ವಸ್ತುದೃಷ್ಟಿಯಿಂದ ಈ ನೆಲದ ಬದುಕಿಗೆ ಅಂಟಿಕೊಂಡಿದೆ. **ಕಣ್ಣು** (ತಾವರೆ, ಪು. ೪೮, ೧೯೩೦) ಎಂಬ ಕವನದಲ್ಲಿ ಮಾಸ್ತಿಕಾವ್ಯದ ಸ್ವರೂಪ –ಸ್ವಭಾವಗಳನ್ನು ಗುರುತಿಸಬಹುದು. ಈ ಕವನ ಹೆಣ್ಣಿನ ಕಣ್ಣಿಗೂ ಗಗನದ ತಾರೆಗೂ ಇರುವ ಸಾಂಪ್ರದಾಯಿಕ ದೃಷ್ಟಿಯ 'ಸಾಧಾರಣ ಧರ್ಮ'ಗಳಿಂದ ಆರಂಭವಾಗಿ ಕೊನೆಕೊನೆಗೆ ತಾರೆಗಿಂತಲೂ ಹೆಣ್ಣಿನ ಕಣ್ಣ ಮಿಗಿಲು – ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಇದಕ್ಕೆ ಮಾಸ್ತಿ ಕೊಡುವ ಕಾರಣಗಳು ಹೀಗಿವೆ : ಏಕೋಭಾವದಲ್ಲಿ ಹೊಳೆಯುವ ತಾರೆಗಳಿಗಿಂತಲೂ ನೂರು ಭಾವದಲ್ಲಿ ಹೊಳೆಯುವ ನಿನ್ನ ಕಣ್ಣುಗಳು ಮಿಗಿಲು! ಅಮರ ಭಾವದ, ಬೆಳಕಿನ ಕಳೆಯ ತಾರೆಗಳಿಗಿಂತಲೂ ಮರ್ತ್ಯಭಾವದ ಜೀವಕಳೆಯ ನಿನ್ನ ಕಣ್ಣುಗಳು ಮಿಗಿಲು – ಎಂದು ಹೇಳುವ ಈ ಕವನ ಹೆಣ್ಣೊಬ್ಬಳ ಕಣ್ಣುಗಳ ವರ್ಣನೆಯಾಗಿ ಉಳಿಯದೆ ಮರ್ತ್ಯಜೀವನಕ್ಕೆ ಬದ್ಧವಾದ ಮಾಸ್ತಿಕಾವ್ಯದ ದೃಷ್ಟಿ ಧೋರಣೆಗಳು, ಸ್ವರೂಪ – ಸ್ವಭಾವಗಳನ್ನು ವ್ಯಾಖ್ಯಾನಿಸುತ್ತಿದೆ.

ಜೀವನವನ್ನು ಸಫಲತೆಯ ಪ್ರಕ್ರಿಯೆಯನ್ನಾಗಿ ನೋಡುವ ಮಾಸ್ತಿಯವರು ಇಹಜೀವನವನ್ನು ಪ್ರಯೋಗಶಾಲೆಯಂತೆ ಪರಿಗಣಿಸಿರುವುದು ತಮ್ಮ ಪೂರ್ವಾಗ್ರಹಗಳಿಂದ ಪಡೆದುಕೊಂಡ ಬಿಡುಗಡೆಯೂ ಆಗಿದೆ. ಮಾಸ್ತಿಯವರ ಮೊದಲ ಕವನಸಂಕಲನಗಳಲ್ಲಿ ಸರ್ವಾರ್ಪಣ ಮನೋಭಾವ ಎದ್ದು ಕಾಣುತ್ತದೆ. ಈ ಸರ್ವಾರ್ಪಣಾ ಮನೋಭಾವದಲ್ಲಿ ಮಾನವನ ಸಂಕಲ್ಪ ಬಲವು ನೀರಲ್ಲಿ ಬಿದ್ದ ಅಡಕೆಯಂತೆ ಮುಳುಗಿಹೋಗುತ್ತದೆ. ಅದೇ ಮಾನವ ಜೀವನವನ್ನು ಸಫಲತೆಯ ಪ್ರಕ್ರಿಯೆಯನ್ನಾಗಿ ಕಂಡಾಗ ಸಂಕಲ್ಪ ಬಲವು ತಾನೆ ತಾನಾಗಿ ಮೇಲೇರಿ ಬಿಡುತ್ತದೆ. ಈ ಅಂಶವನ್ನು 'ಮೂಕನ ಮಕ್ಕಳು' ಕಥನ ಕವನದಲ್ಲಿ ಮನಗಾಣಬಹುದು. ಇದು ರಾಮನವಮಿಯ ಜವರಗೌಡರು ನಿರೂಪಕನಿಗೆ ಹೇಳಿದ ಇನ್ನೊಂದು ಸಂಗತಿಯೆಂಬ ಸೂಚನೆಯಿದೆ. ಊರ ಮುಂದಿನ ದಿಣ್ಣೆಯ ಮೇಲಿರುವ ಮೂರು ಮರಗಳನ್ನು ಅಲ್ಲಿನ ಜನ **ಮೂಕನ ಮಕ್ಕಳು** ಎಂದು ಕರೆಯಲು ಕಾರಣವೇನು ಎಂಬುದನ್ನು ಕಥನ ಕವನ ನಿರೂಪಿಸುತ್ತದೆ. ಮದುವೆಯಾಗಿ ಮಕ್ಕಳನ್ನು ಪಡೆಯದಿದ್ದರೂ ಗುರುವೊಬ್ಬನ ಮಾತಿನಂತೆ ಗಿಡ ಮರಗಳನ್ನು ಬೆಳೆಸುತ್ತಾ ತನ್ನ ಬಾಳಿನ ಕೊರತೆಗಳನ್ನು ನೀಗಿಕೊಳ್ಳುವ ಮೂಕನ ಕಥೆಯಲ್ಲಿ ಹಸುರಿಗೂ ಮನುಷ್ಯನಿಗೂ ಇರುವ ನಿಕಟ ಮೈತ್ರಿಯ ಅಭಿವ್ಯಕ್ತಿಯಿದೆ. ಕೂರಿಗೆಯಲ್ಲಿ ಪೌರುಷವನ್ನೂ, ಮಣ್ಣಿನಲ್ಲಿ ಹೆಣ್ತನವನ್ನೂ ಕಾಣುವ ಈ ಕವನ ಉಳುಮೆಯ ಪ್ರಕ್ರಿಯೆಯನ್ನು ಮನುಕುಲದ ಸೃಷ್ಟಿಶೀಲ ಪ್ರಕ್ರಿಯೆಯನ್ನಾಗಿ ಪರಿಭಾವಿಸಿದೆ. 'ಗಂಡು' ಉಸಿರಾಡುವ

ಕೊರಿಗೆಯಾದರೆ 'ಹೆಣ್ಣು' ಉಸಿರಾಡುವ ಪಾತಿಯಿದ್ದಂತೆ ಎಂಬ ಗ್ರಹಿಕೆ ಕವನದಲ್ಲಿದೆ. ಬೀಜವನ್ನು ಧರಿಸುವುದರ ಮೂಲಕ ಬಾಳನ್ನು ಪಡೆಯುವ ಪಾತಿ ಒಂದು ದೃಷ್ಟಿಯಲ್ಲಿ ಜಗದ ತಾಯಿ–ತಂದೆ ತತ್ವದ ಪ್ರಕಟನೆಯೂ ಆಗಿದೆ. ಇಂಥ ತತ್ವದಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ಮೂಕನಿಗೆ ತಾನು ಎಲ್ಲರಂತೆ ಮದುವೆಯಾಗಿ ಸಂತಾನ ಪಡೆಯದ ಕೊರತೆ ನೀಗಿ ಹೋಗುತ್ತದೆ. "ಶ್ರದ್ಧೆಯೇ ತಪ; ಬೇರೆ ತಪ ಇನ್ನಾವುದು" (ಪು. ೨೦) ಎನ್ನುವ ಕಥನ ಕವನ ತನ್ಮೂಲಕ ಮೂಕ ಮಾನವನ ಶ್ರದ್ಧೆ; ಸಂಕಲ್ಪ ಬಲಗಳನ್ನು ಎತ್ತಿ ಹಿಡಿದಿದೆ. ಇದರಿಂದ ಸಹಜವಾಗಿಯೇ ದೈವವಾದದೊಂದಿಗೆ ಸೆಣಸುವ ಮಾತುಗಳನ್ನು ಮಾಸ್ತಿ ಹೇಳಿಬಿಡುತ್ತಾರೆ:

ಬಾಳ ಹಾಸಂಗಿಯಲಿ ಈ ಕಡೆ
ಕಾಯ ತಡೆದಿಹ ಮಾತನು
ನೆನೆದು ನಿಲುವೆಯ ? ನಡೆಸು ಆ ಕಡೆ
ವಂಚಿಸಂತು ವಿಧಾತನ (ಪು. ೨೯)

ವಿಧಾತನನ್ನೇ ವಂಚಿಸುವ ಬಾಳಿನ ಪ್ರತೀಕವಾಗಿ 'ಮೂಕನ ಮಕ್ಕಳು' ಕಥನ ಕವನ ಮೂಡಿಬಂದಿದೆ. ಸಂತಾನ ಪ್ರಾಪ್ತಿಯೊಂದೆ ಜನ್ಮಸಾಫಲ್ಯವಾಗಲಾರದೆಂದು ತಿಳಿಯುವ ಮಾಸ್ತಿಯವರು ಮನುಷ್ಯನ ಬಾಳು ಮಾಗುತ್ತಾ ಹಣ್ಣಾಗಬೇಕೆಂಬುದನ್ನು ಪ್ರತಿಪಾದಿಸಿದ್ದಾರೆ. "*ಮೊದಲು ಹೂವುದು ಆಚೆ ಕಾವುದು ಮರದ ಜಾತಿಗೆ ವಾಡಿಕೆ*" ಎನ್ನುವ ಮಾಸ್ತಿ ತನ್ಮೂಲಕ ಲೋಕ ಸಾಧಾರಣವಾದ ಧರ್ಮವೊಂದನ್ನು ನಮ್ಮ ಮುಂದಿಟ್ಟು "ಹೂವ ತೋರದೆ ಆತ್ತಿ ಕಾವುದು" ಎಂಬ ಲೋಕವಿಶಿಷ್ಟ ಧರ್ಮವನ್ನೂ ನೆನಪು ಮಾಡಿಕೊಡುತ್ತಾರೆ. ಗಿಡ ಮರಗಳ ಬಾಳಿನಲ್ಲಿ ಪ್ರಕಟಗೊಳ್ಳುವ ಫಲವಂತಿಕೆಯ ಸ್ವರೂಪಭೇದಗಳನ್ನು ವ್ಯಾಖ್ಯಾನಿಸುತ್ತಾ ಮನುಷ್ಯ ಜೀವನದ ನಿರಪೇಕ್ಷ ಸತ್ಯಗಳನ್ನು ಮನಗಾಣಿಸಿರುವ ಬಗೆ ಮನನೀಯವಾಗಿದೆ.

ಸಫಲತೆಯ ತತ್ವವನ್ನು ಬಾಳಿನಲ್ಲಿ ಒಂದು ನಿರಪೇಕ್ಷ ಸತ್ಯವೆಂಬಂತೆ ಮಾಸ್ತಿಯವರು ಗ್ರಹಿಸುತ್ತಾರೆಂಬುದಕ್ಕೆ **ಕನ್ನೆ ದಿಲೆ** ಎಂಬ ಕವನ ಉತ್ತಮ ಉದಾಹರಣೆಯಾಗಿದೆ.[4] ಈ ಕವನದಲ್ಲಿ ಕನ್ನೆ ದಿಲೆ ಮತ್ತು **ಜೋಗದ ಜಲಪಾತ** ಇವೆರಡರ ವರ್ಣನೆಯಿದೆ. ಕನ್ನೆ ದಿಲೆಯ ದರ್ಶನದಿಂದ ತನ್ಮಯಗೊಳ್ಳುವ ಕವನದ ನಿರೂಪಕ ಸುತ್ತಣ ಗಿಡ ಹಸುರಿನ ಭಾಗವೇ ತಾನೆಂದು ಭಾವಿಸಿಕೊಳ್ಳುತ್ತಾನೆ. ಹಾಗೆಯೇ ಮುಂದುವರೆಯುತ್ತಾ ಜೋಗದ ಜಲಪಾತವನ್ನು ದರ್ಶಿಸಿದಾಗ "ನರಕುರಿಯ ಪದವಿ ಪದವಿಯೇ ಇದರ ಮುಂದೆ" ಎನ್ನುತ್ತಾ ತನ್ಮಯಗೊಳ್ಳುತ್ತಾನೆ. ಹೀಗೆ ತನ್ನನ್ನು ತನ್ಮಯಗೊಳಿಸಿದ ಇವೆರಡನ್ನು ಒಟ್ಟೊಟ್ಟಿಗೆ ಕವಿ ಪರಿಭಾವಿಸುತ್ತಾನೆ: "ಹಿರಿದು ಕಿರಿದಿಲ್ಲ ಫಲಿಸಿದ ಬಾಳಿಗೆ" ಎಂದು ಸಾರಿಹೇಳುವ ಮಾಸ್ತಿಯವರು

ದಿನಯುಗದ ಹಿರಿಕಿರಿಯದೆಂಬ ನುಡಿ ಜಲ್ಪ
ಫಲಿಸೆ ಕಣವೇ ವಿಶ್ವ ಕ್ಷಣ ಬ್ರಹ್ಮ ಕಲ್ಪ

ಈ 'ನುಡಿ'ಗಳಿಗೆ 'ನಡೆ' ಎಂಬಂತೆ **ಗೌಡರ ಮಲ್ಲಿ** ಕಥನ ಕವನ ಮೂಡಿ ಬಂದಿದೆ. ಹೆಂಡತಿಯ ಮರಣದಿಂದ ಜೀವನದಲ್ಲಿ ಆಕರ್ಷಣೆಯನ್ನೇ ಕಳೆದುಕೊಂಡಿದ್ದ ಊರಗೌಡನನ್ನು 'ಕೂಡುವಳಿ'ಯಾಗುವ ಬೇಡರ ಹೆಣ್ಣು, ಊರ ಬಸವಿ ಮಲ್ಲಿ ತನಗೊದಗಬಹುದಾದ ಸಾಮಾಜಿಕ ಅವಮಾನಗಳನ್ನೆಲ್ಲ ಜೀರ್ಣಿಸಿಕೊಂಡು ಕ್ರಮೇಣ ಊರಗೌಡನ ಕುಟುಂಬಕ್ಕೂ ಇಡೀ ಊರಿನ ಜನತೆಯ ಮೆಚ್ಚಿಗೆಗೂ ಹೇಗೆ ಪಾತ್ರಳಾಗುತ್ತಾಳೆಂಬುದನ್ನು ಮಾಸ್ತಿ ಮನೋಜ್ಞವಾಗಿ ರೂಪಿಸಿದ್ದಾರೆ. ಸಜ್ಜನಿಕೆಯ ಮೌಲ್ಯಗಳು ವಿದ್ಯಾಸಂಸ್ಕಾರವಿಲ್ಲದವರ ಬಾಳಿನಲ್ಲೂ ಕಾಣಿಸಬಲ್ಲವೆಂಬ ಸತ್ಯವನ್ನು ಮಾಸ್ತಿ **ಗೌಡರ ಮಲ್ಲಿ**ಯಲ್ಲಿ ತೋರಿಸಿಕೊಟ್ಟಿದ್ದಾರೆ.

ಮಾನವ ಜೀವನದ ಪರಿಪಕ್ವತೆಗೆ, ಜನ್ಮಸಾಫಲ್ಯಕ್ಕೆ ಮಾಸ್ತಿಯವರು ಕೊಡುವ ಪ್ರಾಶಸ್ತ್ಯದಿಂದಾಗಿಯೇ ಅವರ ಸಾಹಿತ್ಯದಲ್ಲಿ 'ಹೃದಯ ಪರಿವರ್ತನೆ' ಒಂದು ಅವಿಭಾಜ್ಯ ಅಂಗವಾಗಿ ಪ್ರಕಟಗೊಂಡಿದೆ. ಸಾತ್ವಿಕನ ಒಳ್ಳೆತನದಿಂದ ಕೆಟ್ಟವನ ಹೃದಯ ಪರಿವರ್ತನೆಯಾಗುವ ಬಗೆಯನ್ನು ಹೇಳುವ **ಸಾತ್ವಿಕ** (ಚೆಲುವು, ಪು. ೨೦, ೧೯೩೧) ಎಂಬ ಕವನವನ್ನು ಸಂದರ್ಶನವೊಂದರಲ್ಲಿ ಪ್ರಸ್ತಾಪಿಸಿರುವ ಮಾಸ್ತಿಯವರು "ಮನುಷ್ಯ ಜಾತಿ ಇರೋ ರೀತಿ ಒಳಗೆ ಹಿಂಸೆ ತಪ್ಪಿದ್ದಲ್ಲಾ; ಮಗು ಹುಟ್ಟೋದಿಲ್ಲಾ ಹಿಂಸೆ ಇಲ್ಲದೆ'' ಎಂದು ಹೇಳುತ್ತಾ ಹಿಂಸೆಯ ಅನಿವಾರ್ಯತೆಯನ್ನು ಒಪ್ಪಿಕೊಂಡಿದ್ದಾರೆ. **ಭಯಪಟ್ಟ ಅಳಿಲು** (ಅರುಣ ಪು. ೧೨, ೧೯೨೪) ಎಂಬ ಕವನದಲ್ಲಿ ಅಳಿಲನ್ನು ಕಂಡು ಅನುನಯದ ಮಾತಾಡುತ್ತಾ "ಖಳನಲ್ಲವೈಯ್ಯಾ ನಾನಳಿಲ ತಿನ್ನುವ ಮನುಜನಲ್ಲವಯ್ಯಾ'' ಎನ್ನುವ ಮಾಸ್ತಿಯವರು **ಕರಿ** (ಚೆಲುವು, ಪು. ೩೨, ೧೯೩೧) ಎಂಬ ಕವನದಲ್ಲಿ ಅದೇ ಹೆಸರಿನ ನಾಯಿಯನ್ನು ಕುರಿತು "ಪಾರಿವಾಳ ಕೋಳಿ, ಬೇಡ! ಅಳಿಲು ಒಂದ ಹಿಡಿದೂ ತಿಂದೂ ವೀರನೆಂದು ಹೆಸರು ಪಡೆ'' ಎನ್ನುತ್ತಾರೆ. ಹೀಗೆ ಜೀವ ಸರಪಳಿಯ ಹಿಂಸಾ ತತ್ವವನ್ನು ಅಂಗೀಕರಿಸುವ ಮಾಸ್ತಿಕಾವ್ಯವು ಮನುಷ್ಯರ ಸಾಮಾಜಿಕ ಜೀವನದ ಹಿಂಸೆಯ ಚಿತ್ರಣದಲ್ಲಿ ಮೈಮರೆತ ಗುಣಗಾನವಾಗಿ ಬಿಡುತ್ತದೆ. ಹಿಂಸೆಯನ್ನು ಅಥವಾ ಬಲಿದಾನವನ್ನು ವೈಭವೀಕರಿಸುವ **ಚಿಕ್ಕಮಲ್ಲಮ್ಮ, ಮುಸಿಲಮ್ಮ** ಎಂಬ ಕಥನ ಕವನಗಳು ನಿರೂಪಕನ ವ್ಯಾಖ್ಯಾನ – ವಿವರಣೆಗಳಿಂದಾಗಿ ಅಪ್ರಸ್ತುತ ತಾತ್ವಿಕ ದೃಷ್ಟಿಯನ್ನು ಪಡೆದಿವೆ. ಏಕೆಂದರೆ, ಜನ್ಮಸಾಫಲ್ಯ, ಜೀವನ ಪರಿಪಾಕದ ಹೆಸರಿನಲ್ಲಿ ಮಾನವನ ಬಾಳು ಅನಿಷ್ಟ ಮೌಲ್ಯಗಳಿಗೆ ಬೆಳಗಿದ ಕರ್ಪೂರದಾರತಿಯಾಗಬಾರದು! ಹಿಂಸೆಯ ಚಿತ್ರಣದಲ್ಲಿ ಕವಿಯೊಬ್ಬ ಯಾವಾಗಲೂ ನೇತ್ಯಾತ್ಮಕ ನೆಲೆಯಲ್ಲಿರಬೇಕೇ ಹೊರತು ಇತ್ಯಾತ್ಮಕ ನೆಲೆಯಲ್ಲಿರಕೂಡದು.

ಸಾಮಾಜಿಕ ಪಿಡುಗು ಎಂದೆ ಕರೆಯಬೇಕಾದ ಜಾತಿ ಪದ್ಧತಿ ಅಸ್ಪೃಶ್ಯತೆಗಳ ಬಗ್ಗೆ ಮಾಸ್ತಿಕಾವ್ಯದ ಪ್ರತಿಕ್ರಿಯೆಯನ್ನು ಹೃದಯ ಪರಿವರ್ತನೆಯ ಚೌಕಟ್ಟಿನಲ್ಲೇ ನೋಡ ಬೇಕಾಗುತ್ತದೆ. **ನೀಲಗಾರ ಮಾದ** (ಚೆಲುವು, ಪು. ೩೬, ೧೯೩೧) ಎಂಬ ಕವನದ ವಸ್ತು ಹೀಗಿದೆ: ಬಾಬಯ್ಯಗಳ ಹಬ್ಬದ ಸಂದರ್ಭದಲ್ಲಿ ಕಟ್ಟೇ ಮಳಲ್ವಾಡಿಯ ಜನ ಬಗೆಬಗೆಯ ವೇಷ ಹಾಕುತ್ತಾರೆ. ನೀಲಗಾರ ಮಾದಣ್ಣ ಕಟ್ಟಾಳು! ಆದರೆ ವೇಷ ಹಾಕಲು ಒಪ್ಪುವುದಿಲ್ಲ! ಹೈದರಾಲಿ ಸುಲ್ತಾನನಿಗೆ ದೂರು ತಲುಪಿ ವಿಚಾರಣೆ ನಡೆಯುತ್ತದೆ. ವಿಚಾರಣೆಯಲ್ಲಿ ಹೈದರಾಲಿ, ನೀಲಗಾರ ಮಾದಣ್ಣನ ಮಾತಿನ ವೈಖರಿಗೆ ಮೆಚ್ಚಿ ವೀಳ್ಯ ಕೊಟ್ಟು ಕಳುಹಿಸುತ್ತಾನೆ. "ಆವರವರ

ದೇವರಿಗೆ ಅವರವರು ನಡೆಯೋದೆ ಒಪ್ಪ'' ಎಂದು ಹೇಳುವ ಕವನ "ಇದಬಿಟ್ಟು ನಡಕೊಂಡ್ರೆ ಗವುಳಿಗರ ಹೆಣ್ಣಗಳು ಗಾಣಿಗರ ನೆರೆದಂತೆ, ತುಪ್ಪದಲಿ ಎಣ್ಣೆ ಬೆರೆತಂತೆ'' ಎಂಬ ತೀರ್ಪು ನೀಡುತ್ತಾ ಸಂಕರತ್ವದ ವಿರೋಧಿ ನೆಲೆಯಾಗಿ ನಿಲ್ಲುತ್ತದೆ. ಬಾಬಯ್ಯಗಳ ಹಬ್ಬ ಹಿಂದೂ – ಮುಸ್ಲಿಂ ಸಂಸ್ಕೃತಿಯ ಬಾಂಧವ್ಯಕ್ಕೊಂದು ಅಭಿವ್ಯಕ್ತಿಯಾಗಿರುವುದು ಎಲ್ಲರಿಗೂ ಗೊತ್ತಿದೆ. ಇಂಥ ವಸ್ತುವನ್ನು ಮಾಸ್ತಿ ವಿರುದ್ಧವಾಗಿ ನೋಡಿರುವುದು ಸಂಕರ ವಿರೋಧಿ ದೃಷ್ಟಿಯಾಗಿ ತೋರುತ್ತದೆ. ಆದರೆ ಈ ದೃಷ್ಟಿ ಮಾಸ್ತಿಕಾವ್ಯದ ಸ್ಥಾಯಿ ಅಲ್ಲವೆಂಬುದು ಮುಂದಿನ ಕವನಗಳಿಂದ ಸ್ಪಷ್ಟವಾಗುತ್ತದೆ: **ಗುಂಪುಗಳ ಹಮ್ಮನ್ನು ನೆನೆದು** (ಮಲಾರ, ಪು. ೧೫, ೧೯೩೩) **ಹೂಗಳ ವಾದ** (ಸುನೀತ, ಪು. ೨೬, ೧೯೪೬) ಎಂಬ ಕವನಗಳಲ್ಲಿ ಮೊದಲನೆಯದು ವಾಚ್ಯವಾಗಿಯೇ ಮನುಷ್ಯರ ನಡುವಣ ಗುಂಪುಗಳ ಹಮ್ಮನ್ನು ಖಂಡಿಸುತ್ತದೆ. ಮೊದಲನೆಯ ಕವನದಲ್ಲಿ ಚೇತನಾರೋಪಣೆಯ ಮೂಲಕ ಭೇದ ಭಾವಗಳಿಂದ ಕೂಡಿದ ಮಾನವಸಮಾಜದ ಚಿತ್ರಣವನ್ನು ನೀಡುತ್ತಾ ಅಂತ್ಯದಲ್ಲಿ ಹೂಗಳನ್ನು ಉರುಳಿಸಿ ಸಾಗುವ ಗಾಳಿಯ ವೈಹಾಳಿಯನ್ನು ಪ್ರಸ್ತಾಪಿಸಿ ಒಡಕು ವೈಷಮ್ಯಗಳ ನಶ್ವರತೆಯನ್ನು ಮಾಸ್ತಿ ಸೂಚ್ಯವಾಗಿ ಹೇಳಿದ್ದಾರೆ. ದೈಹಿಕ ಅತ್ಯಾಚಾರಕ್ಕೆ ಬಲಿಯಾಗಿ ಹೋದ **ಚಿಕ್ಕಮಲ್ಲಮ್ಮ** ಎಂಬ ಕಥನ ಕವನದಲ್ಲಿ ಕೆಡಕನ್ನೇ ಒಂದು ಅನಿಷ್ಟ ಜಾತಿಯೆಂದು ಪರಿಗಣಿಸುವ ದೃಷ್ಟಿಯಿದೆ: "ಕೆಡಕರ ಜಾತಿಯ ಕೇಳುವೆಯಣ್ಣ? ಬಿಡು ಬಿಡು ಕೆಡಕಿಗೆ ಜಾತಿಯೇ ಮತವೇ'' ಎಂಬ ಪ್ರಶ್ನೆಗಳಲ್ಲಿ ಜಾತ್ಯತೀತ ವ್ಯಾಖ್ಯಾನವಿದೆ. ಈ ದೃಷ್ಟಿಯಿಂದ **ಸುನೀತ** (ಸುನೀತ ಪು. ೧, ೧೯೪೬) ಎಂಬ ಕವನವನ್ನು ನೋಡಬಹುದು. ಸುನೀತ ಒಬ್ಬ ಅಂತ್ಯಜ. ಮಗಧ ನಗರಿಯಲ್ಲಿ ಬೀದಿಯ ಕಸ ಗುಡಿಸುವವನು. ಬುದ್ಧ ಗುರುವಿನ ಭೇಟಿ ಅವನ ಬಾಳಿನ ಸೂರ್ಯೋದಯಕ್ಕೆ ಕಾರಣವಾಗುತ್ತದೆ. ತನ್ನ ಕಾಲಿಗೆ ಬಿದ್ದ ಸುನೀತನನ್ನು ಬುದ್ಧಗುರು ಕೈ ಹಿಡಿದೆತ್ತಿ, ಅಪ್ಪಿಕೊಂಡು ಸಂತೈಸುತ್ತಾನೆ. ಮಡಿ–ಮೈಲಿಗೆ ಎನ್ನದೆ ಅಂತ್ಯಜನೊಬ್ಬನನ್ನು ಮನುಷ್ಯನನ್ನಾಗಿ ನೋಡಿದ ಬುದ್ಧನ ನಡೆಯನ್ನು ಮಾಸ್ತಿ ಹೀಗೆ ವ್ಯಾಖ್ಯಾನಿಸಿದ್ದಾರೆ : "ಹಣತೆಗೆ ಜಿಡ್ಡನೆ ಜಿಡ್ಡೇ ಎಣ್ಣೆ ದೀಪದ ಕುಡಿಗೆ'' ಈ ಮಾತಿನಲ್ಲಿ ಜಾತಿ ಮತಗಳ ಜಿಡ್ಡನ್ನು ಮೀರಿ ನಿಲ್ಲುವ ಬುದ್ಧ ಚೇತನದ ವಿವರಣೆಯಿದೆ. ಆದ್ದರಿಂದಲೇ ಮಾಸ್ತಿ ಮನುಷ್ಯ ದೇಹವನ್ನು "ತೊಳೆದರೆ ದೇಗುಲು; ಬಿಟ್ಟರೆ ನಾರುವ ಬುದ್ದಲಿ'' (ರಾಮನವಮಿ, ಪು. ೩೩, ೧೯೪೧) ಎನ್ನುತ್ತಾರೆ.

ಹೀಗೆ ಹೃದಯಪರಿವರ್ತನೆಯ ತತ್ವವನ್ನು ಎತ್ತಿ ಹಿಡಿಯುವ ಮಾಸ್ತಿಯವರು **ಶ್ರೀರಾಮ ಪಟ್ಟಾಭಿಷೇಕ** ಮಹಾಕಾವ್ಯದಲ್ಲಿ ಕೈಕೆಯಿ ಪಾತ್ರಚಿತ್ರಣದಲ್ಲಿ ಅಂತರ್ ನಿರೀಕ್ಷಣೆಯ ಮೂಲಕ (ಪು. ೨೯) ಚಲನಶೀಲತೆಯನ್ನು ಸಾಧಿಸಿರುವುದು ಅವರ ಮನೋಧರ್ಮಕ್ಕೆ ಸಹಜವಾದ ದೃಷ್ಟಿಯಾಗಿದೆ. ಆದರೆ, ವನವಾಸದ ಅವಧಿಯನ್ನು ಪೂರೈಸಿ ಅಯೋಧ್ಯೆಗೆ ಮರಳಿದ ಶ್ರೀರಾಮನ ಪಟ್ಟಾಭಿಷೇಕ ಮಹೋತ್ಸವದ ಸಿದ್ಧತೆಗಳನ್ನು ಕಂಡು ಒಳಗೊಳಗೆ ಕುದಿಯುವ ಮಂಥರೆಯನ್ನು ಮಾಸ್ತಿಯವರು ಹೀಗೆ ವಿವರಿಸಿದ್ದಾರೆ :

"ಕೈಕಯೀದೇವಿ ಸುಖವಾಗಿ ನಿದ್ರಿಸುತಿರಲು,
ಅವಳ ಹಿರಿಚೇಟಿ ಮಂಥರೆ ಅವಳ ಸಲುವಾಗಿ
ಇಂತು ಚಿಂತಿಸುತ ಇರುಳರ್ಧವನು ಕಳೆದಳು

ಬೇವಿನೆಲೆಯನು ಮೇಯ್ದು ಮೆಲುಕು ಹಾಕುವ ಒಂದು
ಆಡು ಎಂಬಂದ ತನ್ನೊಳಗಿನದು ಕೃಪೆಯನು
ಮರಮರಳಿ ನುರಿನುರಿಸಿ ಉಂಡುಂಡು ನೊಂದಳು.''

(ಶ್ರೀರಾಮಪಟ್ಟಾಭಿಷೇಕ, ಪು. ೩೧೯, ೧೯೭೨)

ಹೃದಯ ಪರಿವರ್ತನೆಗೆ ಹೆಚ್ಚು ಮಹತ್ವ ಕೊಡುವ, ಕೇಡಿನಲ್ಲೂ ಮಂಗಳವನ್ನು ಹಾರೈಸುವ ಮಾಸ್ತಿ ಮಂಥರೆಯ ಪಾತ್ರ ಕಲ್ಪನೆಯನ್ನು ಸ್ಥಗಿತ ಚೌಕಟ್ಟಿನಲ್ಲಿ ವ್ಯಾಖ್ಯಾನಿಸಿರುವುದೊಂದು ಸೋಜಿಗವೆನಿಸುತ್ತದೆ. ಸಂದರ್ಶನವೊಂದರಲ್ಲಿ [5] ಹೃದಯ ಪರಿವರ್ತನೆಯನ್ನು ಸಾತ್ವಿಕ ಮನಸ್ಸಿನ ವಿಶ್ವಾಸವೆಂಬ ನಂಬಿಕೆಯನ್ನು ವ್ಯಕ್ತಪಡಿಸಿರುವ ಮಾಸ್ತಿಯವರು, *evil* ನಲ್ಲೂ ಒಳಿತನ್ನು ಕಾಣುವ, ಆಶಿಸುವ ಮಾಸ್ತಿಯವರು ಮಂಥರೆಯ ವಿಷಯದಲ್ಲಿ ತೋರಿದ ಅನಾದರವನ್ನು 'ಮೂಲ' ವ್ಯಾಧಿ ಎಂದು ಗುರುತಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಕುವೆಂಪು ಅವರ ಶ್ರೀರಾಮಾಯಣದರ್ಶನಂ ಮಹಾಕಾವ್ಯದ ಮಂಥರೆಯ ಪಾತ್ರಕಲ್ಪನೆ ಉಜ್ವಲವಾಗಿದೆ.

●

ಟಿಪ್ಪಣಿಗಳು :

೧ 'ಬಿನ್ನಹ' (೧೯೨೨) ದಿಂದ ಆರಂಭಿಸಿ 'ಸಂಕ್ರಾಂತಿ' (೧೯೬೯) ವರೆಗೆ ಒಟ್ಟು ಹನ್ನೊಂದು ಕವನ ಸಂಕಲನಗಳು, ಐದು ಸಂಪುಟಗಳಲ್ಲಿ ಪ್ರಕಟಗೊಂಡಿರುವ 'ನವರಾತ್ರಿ'ಯ (೧೯೪೪–೧೯೫೩) ಕಥನ ಕವನಗಳು, ಶ್ರೀರಾಮ ಪಟ್ಟಾಭಿಷೇಕ (೧೯೭೨) ಎಂಬ ಕಾವ್ಯ – ಇದಿಷ್ಟು ಪ್ರಸ್ತುತ ಪ್ರಬಂಧದ ವ್ಯಾಪ್ತಿಗೆ ಒಳಪಟ್ಟಿವೆ.

೨. ಮಾಸ್ತಿಯವರ ಸಾಹಿತ್ಯ : ಒಂದು ಅಧ್ಯಯನ ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟಣೆ ಪು. ೧೪೯.

೩ 'ಕನ್ನಡಿಲೆ' ಕವನ (ಪು. ೨೯) ಚೆಲುವು ಕವನ ಸಂಕಲನದಲ್ಲಿ ಇದೆ. ೧೯೩೧.

೪ ಅಂಕಣ, ಮಾಸ್ತಿ ವಿಶೇಷಾಂಕ, ಪು. ೫೦, ೧೯೮೬.

೫ ಅಂಕಣ, ಮಾಸ್ತಿ ವಿಶೇಷಾಂಕ, ಪು.೫೦, ೧೯೮೬.

ಮಾಸ್ತಿಯವರ ವಿಮರ್ಶೆ : ಇತಿಮಿತಿಗಳು

ಪ್ರಭುಸ್ವಾಮಿಮಠ ಸಿ. ವಿ.

ಹೊಸಗನ್ನಡ ಸಾಹಿತ್ಯದ ಅಗ್ರಗಣ್ಯ ಲೇಖಕರಾದ ಮಾಸ್ತಿಯವರು, ತಮ್ಮ ಸಮಕಾಲೀನ ಹಿರಿಯ ಲೇಖಕರಾದ ಬಿ. ಎಂ. ಶ್ರೀ, ಟಿ.ಎಸ್. ವೆಂಕಣ್ಣಯ್ಯ, ಡಿ.ವಿ.ಜಿ. ಅಂಥವರ ಸಹಯೋಗದಿಂದ ಮಾಡಿದ ಸಾಹಿತ್ಯಕ ಕೆಲಸಗಳು ಚಾರಿತ್ರಿಕ ಮಹತ್ವವನ್ನು ಪಡೆದಿವೆ. ಅವರ ಕಾಲ ಕನ್ನಡ ಸಾಹಿತ್ಯದ ನವೋದಯದ ಮೊದಲ ಘಟ್ಟವಾದಂತೆ; ಅವರು ಪ್ರಾರಂಭಿಸಿದ ಲೇಖನ ಕೃಷಿಯೂ ಹೊಸಗನ್ನಡ ಸಾಹಿತ್ಯದ ಮೊದಲ ಹಂತವಾಗಿದೆ. ಈ ದೃಷ್ಟಿಯಿಂದ ಮಾಸ್ತಿಯವರು ತಾವು ಪ್ರಾರಂಭಿಸಿದ್ದ ಸಾಹಿತ್ಯ ಪ್ರಕಾರಗಳ ವೈವಿಧ್ಯತೆಗೆ ಅವರೇ ಮೊದಲಿಗರಾಗಿದ್ದಾರೆ. ಅಂದಿನ ಕನ್ನಡ ಸಾಹಿತ್ಯದ ನವೋದಯದ ಹಂತ ಮುಖ್ಯವಾಗಿ ಆವರ ಗುರುಗಳಾದ ಬಿ.ಎಂ.ಶ್ರೀಯವರು ಪ್ರಾರಂಭಿಸಿದ್ದ:

"ಇವಳ ಸೊಬಗನವಳು ತೊಟ್ಟು
ನೋಡಬಯಸಿದೆ;
ಅವಳ ತೊಡಿಗೆ ಇವಳಿಗಿಟ್ಟು
ಹಾಡ ಬಯಸಿದೆ." [೧]

– ಎಂಬಂಥ ಪೌರ್ವಾತ್ಯ, ಪಾಶ್ಚಿಮಾತ್ಯ ಸಾಹಿತ್ಯಗಳ ಸಮನ್ವಿತ ದೃಷ್ಟಿಯಿಂದ ರೂಪಗೊಂಡದ್ದು. ಕನ್ನಡ ವಿಮರ್ಶಾದೃಷ್ಟಿ ಬಿ.ಎಂ. ಶ್ರೀಯವರ ಆಗಿನ ಕೆಲವು ಭಾಷಣಗಳಲ್ಲಿ ಸೂಚಿತವಾಗುವುದಾದರೂ, ಕನ್ನಡದಲ್ಲಿ ಅಧಿಕೃತವಾಗಿ ವಿಮರ್ಶೆಯನ್ನು ಬರೆದು ಮೊದಲು

ಪ್ರಕಟಿಸಿದವರು ಮಾಸ್ತಿಯವರೆಂದೇ ತಿಳಿಯುತ್ತದೆ.[೨] ಹೀಗೆ ಮಾಸ್ತಿಯವರು ತಾವು ಪ್ರಾರಂಭಿಸಿದ ಸಾಹಿತ್ಯಿಕ– ವಿಮರ್ಶಾತ್ಮಕ ಸಂದರ್ಭವನ್ನು ಕುರಿತು ಅವರು ಹೇಳಿದ ಮಾತುಗಳು ಅಂದಿನ ಸನ್ನಿವೇಶವನ್ನು ಸಮರ್ಪಕವಾಗಿ ತಿಳಿಸುತ್ತವೆ:

"ನಮ್ಮ ಜನದ ಇತಿಹಾಸದ ದುರ್ದೈವದಿಂದ ನಮ್ಮ ಸಾಹಿತ್ಯ ಮುನ್ನೂರು ವರ್ಷದಷ್ಟು ಹಿಂದೆ ಸ್ವತಂತ್ರ ನಿರ್ಮಾಣದ ಪ್ರೇರಣೆಯನ್ನು ಕಳೆದುಕೊಂಡಿತು. ಅದು ಮರಳಿ ಮೂಡಿದ್ದು ಆಂಗ್ಲ ಸಾಹಿತ್ಯದ ಪರಿಚಯ ದೊರೆತಾಗಲೇ. ಆದರೆ ಈ ಶಕ್ತಿ ಮೂಡುವ ಹೊತ್ತಿಗೆ ಸರಿಯಾಗಿ ನಮ್ಮಲ್ಲಿ ನಾವು ಒಂದು ಅಧೀನ ಜನಾಂಗವಾದ ಕಾರಣ ಎಲ್ಲದರಲ್ಲೂ ಅಧೀನವಾಗಿ ನಡೆದುಕೊಳ್ಳುವ ಮನೋಧರ್ಮ ಬೆಳೆದು ಬಿಟ್ಟಿತು. ನಮ್ಮ ಕಾವ್ಯ ನಮ್ಮ ಜೀವನವನ್ನು ಚಿತ್ರಿಸಬೇಕು. ನಮ್ಮ ಜೀವನವನ್ನು ಚಿತ್ರಿಸಿ ನಮ್ಮದೊಂದು ಹೊಸ ಕಾವ್ಯ ಬರಬಹುದೋ? ಈ ಪ್ರಶ್ನೆಗೆ ಸರಿಯಾದ ಉತ್ತರ ಒಂದೇ. ಎಲ್ಲ ಜೀವನಕ್ಕೂ ಅದಕ್ಕೆ ತಕ್ಕ ಸಾಹಿತ್ಯವೊಂದು ಇದ್ದೇ ಇರುತ್ತದೆ. ಎಂಥ ಪರಿಸ್ಥಿತಿಯಲ್ಲಿರುವ ಜನವು ತನ್ನ ಸ್ಥಿತಿಯನ್ನು ಚೇತನಕ್ಕೆ ತಟ್ಟಿದ ಭಾವವನ್ನು ಮಾತಿನಲ್ಲಿ ಪ್ರಕಟಿಸಬಹುದು. ಅದು ಸಾಹಿತ್ಯ ಆಗುತ್ತದೆ. ಆದರೆ ಅಧೀನ ಜನಾಂಗ ಇಂಥ ಉತ್ತರವನ್ನು ಕೊಡುವ ಧೈರ್ಯವನ್ನು ಸುಲಭವಾಗಿ ಬೆಳೆಸಿಕೊಳ್ಳಲಾರದು. ಇದರಿಂದಲೇ ನಮ್ಮ ಸಾಹಿತ್ಯ ಆರಂಭವಾಗುವುದು ೧೯೧೦ ರ ವರೆಗೆ ತಡವಾಯಿತು. ದೇಶದಲ್ಲಿ ಸ್ವಾತಂತ್ರ್ಯದ ಅಭಿಲಾಷೆ ರೂಪುಗೊಂಡಿದ್ದೇ ಸಾಹಿತ್ಯದಲ್ಲಿ ನವೀನ ಸ್ವತಂತ್ರ ಸಾಹಿತ್ಯದ ನಿರ್ಮಾಣದ ಮೊದಲಾಯಿತು. ನಮ್ಮ ನಾಡಿಗೆ ಬಂದ ಈ ಸಾಹಿತ್ಯ ಪ್ರೇರಣೆಯ ಪ್ರಭಾವಕ್ಕೆ ಸಿಕ್ಕಿದವರಲ್ಲಿ ನನ್ನ ತಲೆಮಾರಿನ ಜನ ಮೊದಲಿಗರು. ಇನ್ನು ನನ್ನ ವಿಮರ್ಶೆ ಲೇಖನಗಳನ್ನು ಕುರಿತು ಎರಡು ಮಾತನ್ನು ಹೇಳಬಹುದು. ನಾನು ಬರೆಯುವ ದಿನಗಳ ಆರಂಭದಲ್ಲಿ ನಮ್ಮಲ್ಲಿ ಇಂಗ್ಲೀಷಿನಲ್ಲಿ Essays in Criticism ಎಂದು ಕರೆಯುವ ರೀತಿಯ ಲೇಖನವೊಂದು ಕೂಡಾ ಇರಲಿಲ್ಲ. ನನಗೋ ಮ್ಯಾಥ್ಯೂ ಅರ್ನಾಲ್ಡ್, ಲೆಸ್ಲಿಸ್ಟೀಫನ್ ರ ವಿಮರ್ಶನ ಉಪನ್ಯಾಸಗಳನ್ನು ಓದಿ ಹಿಡಿಯಲಾರದ ಆನಂದ ಆಗಿತ್ತು. ನಮ್ಮಲ್ಲಿ ಇಂಥ ಬರಹ ಬೇಕೆಂದು ಹಿಡಿಯಲಾರದ ಆಸೆ ಮೂಡಿತು. ಇದು ಇಂಗ್ಲೀಷ್ ಬಲ್ಲ ನನ್ನಂಥ ಜನರಿಂದ ಆಗಬೇಕು. ನಾನೇ ಆರಂಭಿಸೋಣ ಎಂದು ಯೋಚಿಸಿದೆನು."[೩]

ಮೇಲಿನ ಮಾತುಗಳು ಮಾಸ್ತಿಯವರಿಗೆ ವಿಮರ್ಶೆ ಬರೆಯಲು ಉಂಟಾದ ತುರ್ತನ್ನು ಸರಿಯಾಗಿ ತಿಳಿಸುತ್ತವೆಂದು ಕಾಣುತ್ತದೆ. ಪ್ರಧಾನವಾಗಿ ಮಾಸ್ತಿಯವರ ವಿಮರ್ಶೆ ತನ್ನ ವ್ಯಾಪ್ತಿಯಲ್ಲಿ ಪ್ರಾಚೀನ ಭಾರತೀಯ ಸಂಸ್ಕೃತ ಕಾವ್ಯಗಳಿಂದ ಪ್ರಾರಂಭಿಸಿ, ಹಳಗನ್ನಡ, ನಡುಗನ್ನಡ, ಜಾನಪದವಲ್ಲದೆ, ಹೊಸಗನ್ನಡ ಸಾಹಿತ್ಯದ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಸಾಹಿತ್ಯದ ಪ್ರಾರಂಭದವರೆಗೂ ಚಾಚಿರುವುದು ಕಂಡುಬರುತ್ತದೆ. ಅವರಷ್ಟು ದೊಡ್ಡ ಮೊತ್ತದಲ್ಲಿ ವಿಮರ್ಶೆಯನ್ನು ಬರೆದವರು ವಿರಳವೆಂದೇ ಹೇಳಬೇಕು. ಈ ದೃಷ್ಟಿಯಿಂದ ಕನ್ನಡ ನವೋದಯ ಕಾಲದ ಮಹತ್ವದ ವಿಮರ್ಶಕರಾದ ಮಾಸ್ತಿಯವರು ತಮ್ಮ ವಿಮರ್ಶೆಯಲ್ಲಿ ಆಯಾ ಕಾಲಕ್ಕೆ ಅನ್ವಯಿಸಿದ ಮಾನದಂಡಗಳು ತಾಳಿದ ಧೋರಣೆಗಳು ಹಾಗೂ ವ್ಯಕ್ತಪಡಿಸಿದ ಆಶಯಗಳನ್ನು ಕುರಿತು ವಿವೇಚಿಸುವುದು ಕುತೂಹಲಕರ ವಿಷಯವಾಗುತ್ತದೆ.

ಹೀಗೆ ಮಾಸ್ತಿಯವರು ತಾವು ವಿಮರ್ಶೆಗೆ ತೊಡಗುವಾಗ ತಮಗಿದ್ದ ಭಾರತೀಯ ಕಾವ್ಯ ಮೀಮಾಂಸೆಯ ಹಿನ್ನಲೆಯೊಂದಿಗೆ, ಇಂಗ್ಲೀಷ್ ಸಾಹಿತ್ಯದ ನಿಕಟ ಅಭ್ಯಾಸದ ಮೂಲಕ ಪಾಶ್ಚಾತ್ಯ ಕವಿ ವಿಮರ್ಶಕರಾದ ವರ್ಡ್ಸ್‌ವರ್ತ್, ಕೋಲ್‌ರಿಜ್, ಷೆಲ್ಲಿ, ಕಾರ್ಲೈಲ್, ಮ್ಯಾಥ್ಯೂ ಅರ್ನಾಲ್ಡ್, ಷೇಕ್ಸಪಿಯರ್, ರಸ್ಕಿನ್, ವಾಲ್ಟೇರ್, ಗಯಟೆ, ಮಿಲ್ಟನ್, ಟೆನಿಸನ್ ಮುಂತಾದವರ

ವಿಚಾರ, ಸಾಹಿತ್ಯ ಸಂಸ್ಕಾರಗಳನ್ನು ತಾವು ಹೇಗೆ ತಂದುಕೊಳ್ಳಲು ಪ್ರಯತ್ನಿಸಿದರೆಂಬುದನ್ನು ತಮ್ಮ **ಪ್ರಸಂಗ : ೩** ಗ್ರಂಥದಲ್ಲಿನ "ಆಂಗ್ಲ ವಿಮರ್ಶನ ಸೂಕ್ತಿಗಳು'' ಎಂಬ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ.

ಭಾರತೀಯ ಕಾವ್ಯ ಮೀಮಾಂಸೆಯ ಅಲಂಕಾರ, ರಸ, ರೀತಿ, ಪ್ರತಿಭೆ, ಔಚಿತ್ಯ, ವ್ಯುತ್ಪತ್ತಿ, ಗುಣ ದೋಷ, ಕವಿಸಮಯ, ಕಾವ್ಯ ಪ್ರಯೋಜನ ಮುಂತಾದವುಗಳನ್ನು ಕುರಿತು ತಮ್ಮದೇ ಆದ ಅನುಭವಸಿದ್ಧವಾದ ನೋಟಗಳನ್ನು ಸೂತ್ರಪ್ರಾಯವಾಗಿ ವ್ಯಕ್ತಪಡಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳನ್ನಾದರೂ ಹೀಗೆ ಸಂಗ್ರಹಿಸಬಹುದೆಂದು ಕಾಣಿಸುತ್ತದೆ. :

೧. ಕಾವ್ಯದ ಮೂಲವೇ ವಿಮರ್ಶೆಯ ಮೂಲ.

೨. ವಿಮರ್ಶೆಯೆಂಬುದು ಕವಿಯಲ್ಲಿಯೇ ಇರತಕ್ಕ ಲಕ್ಷಣ.

೩. ವಿಮರ್ಶೆಯಿಲ್ಲದೆ ಕಾವ್ಯ ರಚನೆಯಾಗುವುದಿಲ್ಲ.

೪. ದುಷ್ಟ ಗ್ರಂಥಗಳನ್ನು ದಮನ ಮಾಡುವುದಕ್ಕೆ ವಿಮರ್ಶೆಯು ಬೇಕಾಗುವುದು.

೫. ವಿಮರ್ಶೆಯ ಮುಖ್ಯ ಲಕ್ಷಣ ಸಹಾನುಭೂತಿ.

೬. ಮೊತ್ತದಲ್ಲಿ ವಿಮರ್ಶೆಯ ಸಾರವು ಹೀಗೆಂದು ತೋರುವುದು: ಅದು ಸಾಹಿತ್ಯರಸದ ಬುದ್ಧಿದ್ವಾರವಾದ ಅನುವಾದವು.

೭. ಪ್ರತಿಭಾಶಾಲಿಯ ವಿಮರ್ಶೆಯಲ್ಲಿ ಕವಿಯ ತತ್ವಬೋಧೆಯಂತೆ ಕಾವ್ಯ ವಿವರಣವು ರಸಯುಕ್ತವಾಗುವದು.

೮. ಉತ್ತಮ ಕವಿಗಳು ಅವರ ವ್ಯಾಖ್ಯಾನಕಾರರಿಗಿಂತ ಅಧಿಕರು.

೯. ಅಲ್ಪಜ್ಞಾನ ಅಲ್ಪ ಪರಿಶ್ರಮದಿಂದ ಉಂಟಾದ ಕಾವ್ಯಕ್ಕಿಂತ ಅಲ್ಪಜ್ಞಾನ, ಅಲ್ಪ ಪರಿಶ್ರಮದಿಂದ ಉಂಟಾಗುವ ವಿಮರ್ಶೆಯಿಂದ ಬರುವ ಹಾನಿ ಹೆಚ್ಚು.

೧೦. ವಿಮರ್ಶಕನು ಕವಿಯ ಭಾವವು ಕಾವ್ಯದಲ್ಲಿ ಎಷ್ಟರ ಮಟ್ಟಿಗೆ ಆಕಾರವನ್ನು ಪಡೆದಿದೆ ಎಂಬುದನ್ನು ಕುರಿತು ಯೋಚಿಸಬೇಕು.

೧೧. ಮೀಮಾಂಸೆಎಲ್ಲದರಲ್ಲೂ ರಸಪರಿಚಯಕ್ಕೆ ರಾಗವನ್ನು, ಅದರ ವಿವರಣಕ್ಕೆ ಬುದ್ಧಿಯನ್ನು ಸಾಧನವಾಗಿ ಉಪಯೋಗಿಸುತ್ತೇವೆ.

೧೨. ಕವಿಯ ಆಶಯವನ್ನು ತಿಳಿಯುವುದಕ್ಕೆ ತಾಳ್ಮೆಯೂ ಔದಾರ್ಯವು ಬೇಕು.

೧೩. ವಿಮರ್ಶಕರು ಸಾಮಾನ್ಯ ಜನಕ್ಕೆ ಬುದ್ಧಿಯ ಸಂಸ್ಕಾರವನ್ನು ಹೆಚ್ಚಿಸಿ ಬಾವಿಗೆ ಸೋಪಾನವನ್ನು ಕಟ್ಟಿ ಅದರ ಜಲವನ್ನು ಸುಗಮವಾಗಿಸುವಂತೆ ಕಾವ್ಯದ ವಿಷಯವನ್ನು ಇತರರಿಗೆ ಸುಲಭವಾಗಿ ಮಾಡುವರು.

೧೪. ವಿಮರ್ಶೆ ಕೌಶಲಾಪೇಕ್ಷೆಯಲ್ಲಿ ನೇತ್ರವೈದ್ಯನಂತೆ.

೧೫. ಸಾಹಿತ್ಯದ ಔನ್ನತ್ಯಕ್ಕೆ ನಿರ್ಮಾಣಶಕ್ತಿ ಹಾಸು, ವಿಮರ್ಶನಶಕ್ತಿ ಹೊಕ್ಕು.

೧೬. ವಿಮರ್ಶಕನು ಪಾಠಕರ ಸಮುದಾಯದಲ್ಲಿ ತಿಳಿವನ್ನುಳ್ಳ ಒಬ್ಬ ಪಾಠಕ.

೧೭. ಹೊಸ ರೀತಿಯ ಕಾವ್ಯಗಳು ಬಂದಂತೆ ಹೊಸ ರೀತಿಯ ವಿಮರ್ಶೆಯು ಬಂದು ಕೆಲವರು ವಿಮರ್ಶಕರು ಕವಿಯನ್ನು ಹಿಡಿದು ತೂಕ ಮಾಡುವುದು ಅಥವಾ ನ್ಯಾಯಾಧಿಕಾರಿ ಅಪರಾಧಿಯ ತಪ್ಪನ್ನು ನಿರ್ಧರಿಸುವ ಹಾಗೆ ಕವಿಯ ಕಾವ್ಯದ ತಪ್ಪನ್ನು ನಿರ್ಧರಿಸುವುದು ತಮ್ಮ ಕೆಲಸ ಎಂದು ತಿಳಿದಿದ್ದಂತೆ ಕಾಣುತ್ತದೆ.

ಈ ಮೇಲಿನಂಥ ಅನುಭವದ ಮಾತುಗಳೊಂದಿಗೆ, ಅಸಂಖ್ಯವಾದ ದೃಷ್ಟಾಂತಗಳೂ ಅದರಲ್ಲಿ ವಿಮರ್ಶೆಯ ಸಂಕೇತಗಳಾಗಿ ಪ್ರಕಟವಾಗುತ್ತವೆ. ಇವುಗಳೊಂದಿಗೆ ಇಂದು ಅಷ್ಟು ಪ್ರಸ್ತುತವಲ್ಲದಿದ್ದರೂ ಸಾಹಿತ್ಯದಲ್ಲಿ ಬುದ್ಧಿರಾಗಗಳ ಸ್ಥಾನ, ಕಲೆ ಮತ್ತು ನೀತಿ, ಕಲೆಗಾಗಿ ಕಲೆ, ಸಿದ್ಧಾಂತ ಮಾರ್ಗ, ಸ್ವತಂತ್ರ ಮಾರ್ಗದಂಥ ಅನೇಕ ವಿಷಯಗಳನ್ನು ಸುದೀರ್ಘವಾಗಿ ಚರ್ಚಿಸಿದ್ದಾರೆ. ಅನ್ವಯಿಕ ವಿಮರ್ಶೆಯ ದೃಷ್ಟಿಯಿಂದ ಸರಳ, ಉದಾರ ಸಮನ್ವಯ ದೃಷ್ಟಿಯೊಂದನ್ನು ಉದ್ದಕ್ಕೂ ಪ್ರತಿಪಾದಿಸಿದ್ದಾರೆ.

ಈ ಹಿನ್ನಲೆಯಲ್ಲಿ ಪ್ರಾತಿನಿಧಿಕವಾಗಿಯಾದರೂ ಮಾಸ್ತಿಯವರ ಕೆಲವು ವಿಮರ್ಶೆಯ ಮಾದರಿಗಳನ್ನು ಗಮನಿಸಬಹುದಾಗಿದೆ. ಪ್ರಧಾನವಾಗಿ ಮಾಸ್ತಿಯವರ ಮನಸ್ಸು ಆರ್ಷೇಯ ಸಂಸ್ಕೃತಿಯಲ್ಲಿ ನೆಟ್ಟದ್ದಾದ್ದರಿಂದ ಮತ್ತು ತಮ್ಮ ಸೃಜನಶೀಲ ಕೃತಿಗಳಲ್ಲಿ, ವಿಮರ್ಶೆಯಲ್ಲಿ ಪರಂಪರೆಯ ಆ ಮೂಲದ ಬೇರಿನಿಂದಲೇ ಸ್ಫೂರ್ತಿ ಬರಬೇಕೆಂಬುದನ್ನು ಪ್ರತಿಪಾದಿಸುವುದರಿಂದ ಭಾರತದ ಪ್ರಾಚೀನ ಕಾವ್ಯಗಳಾದ , ರಾಮಾಯಣ, ಮಹಾಭಾರತ, ಕಾಳಿದಾಸನ ಮೇಘದೂತ ಕಾವ್ಯಗಳಿಂದಲೇ ಅವರ ವಿಮರ್ಶೆ ಪ್ರಾರಂಭವಾಗುತ್ತದೆ. ಮಹಾಭಾರತವನ್ನು ಮಾಸ್ತಿಯವರು ಮುಖ್ಯವಾಗಿ ಇತಿಹಾಸವೆಂದೇ ಗಣಿಸಿದ್ದರಿಂದ, ಅದರ ಪರಿಶೀಲನೆಯನ್ನು ಸಾಮಾಜಿಕ ಹಿನ್ನಲೆಯಲ್ಲಿ ಪಾತ್ರಗಳ ದೃಷ್ಟಿಯಿಂದ ವಿವೇಚಿಸಿದ್ದಾರೆ. ಆದರೆ ರಾಮಾಯಣ ಮತ್ತು ಮೇಘದೂತಗಳನ್ನು ಶುದ್ಧ ಕಾವ್ಯಗಳೆಂದು ಗಮನಿಸಿ ಪರಿಣಾಮಕಾರಿಯಾದ ರಸವಿಮರ್ಶೆಯನ್ನು ಮಾಡಿದ್ದಾರೆ. ರಾಮಾಯಣ, ಭಾರತದ ಪಾತ್ರಗಳನ್ನು ಕುರಿತು ವಿವೇಚಿಸುವಾಗ, ಮಾಸ್ತಿಯವರ ವಸ್ತುನಿಷ್ಠತೆ, ಸಹೃದಯ ಮನೋಭಾವಗಳು ಅನುಭವಕ್ಕೆ ಬರುತ್ತವೆ. **ಆದಿ ಕವಿ ವಾಲ್ಮೀಕಿ** ಗ್ರಂಥದಲ್ಲಿಯ ವಿಮರ್ಶೆ ಎಂಥ ಪರಿಣಾಮವನ್ನುಂಟು ಮಾಡಬಹುದೆಂಬುದಕ್ಕೆ ಅದರ ಔಚಿತ್ಯಪೂರ್ಣವಾದ ವಿಮರ್ಶೆಯೇ ತಮ್ಮ **ರಾಮಾಯಣ ದರ್ಶನಂ**ದಂಥ ಹೊಸ ಕಾವ್ಯ ನಿರ್ಮಾಣಕ್ಕೆ ಕಾರಣವಾಯಿತೆಂಬುದನ್ನು ಕುವೆಂಪು ಅವರು ತಮ್ಮ ಲೇಖನವೊಂದರಲ್ಲಿ ಹೇಳಿಕೊಂಡಿದ್ದಾರೆ.[೪] ಅದರಂತೆ ಮಾಸ್ತಿಯವರು ಕಾಳಿದಾಸನ **ಮೇಘದೂತ** ಕಾವ್ಯದಲ್ಲಿಯ ರಸಸ್ಥಾನಗಳನ್ನು ಸಹೃದಯರ ಗಮನಕ್ಕೆ ತಂದಿದ್ದರಿಂದಲೇ ಅದರಿಂದ ಆಕರ್ಷಿತರಾಗಿ ತಾವು ಕಾಳಿದಾಸನ ಕೃತಿಗಳ ಅನುವಾದಕ್ಕೆ ಮುಂದಾದುದನ್ನು ಶ್ರೀ ಎಸ್.ವಿ. ಪರಮೇಶ್ವರ ಭಟ್ಟರು ಒಂದು ಕಡೆ ಕೃತಜ್ಞತೆಯಿಂದ ಹೇಳಿಕೊಂಡಿದ್ದಾರೆ.[೫] ಬಹುಶ: ಮೇಲಿನ ಈ ಎರಡು ಉದಾಹರಣೆಗಳು ನಮ್ಮ ನವೋದಯ ಕಾಲದ ಉತ್ತಮ ರಸವಿಮರ್ಶೆಯ ಸ್ಫೂರ್ತಿ ಪರಿಣಾಮವನ್ನು ಸೂಚಿಸುತ್ತವೆ.

ಈ ಮಹಾಕಾವ್ಯಗಳ ಸಂದರ್ಭದಲ್ಲಿ ಮುಖ್ಯವಾಗಿ ರಾಮಾಯಣ ಕಾವ್ಯದಲ್ಲಿಯ ರಾವಣನ ಪಾತ್ರವನ್ನು ಗ್ರೀಕ್ ದುರಂತ ನಾಯಕರ ಜೊತೆಗೆ ಹೋಲಿಸಿ ಮಾಡಿರುವ ವಿಮರ್ಶೆಯನ್ನು, ಬೇಂದ್ರೆಯವರಂತೆ ಮಾಸ್ತಿಯವರೂ ತೀವ್ರವಾಗಿ ವಿರೋಧಿಸಿದ್ದಾರಲ್ಲದೆ, ನಮ್ಮ ಸಂಸ್ಕೃತಿ ಪರಂಪರೆಗಳನ್ನು ಅರಿಯದೆ ಪಾಶ್ಚಿಮಾತ್ಯ ದುರಂತನಾಯಕರ ಮಾನದಂಡಗಳಿಂದ ನಮ್ಮ ಪಾತ್ರಗಳನ್ನು ಅಳೆಯುವುದು ಸಮರ್ಪಕವಲ್ಲವೆಂಬ ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ.[೬] ಇತ್ತೀಚಿನ ಕನ್ನಡ ವಿಮರ್ಶೆಯಲ್ಲಿಯೂ ಈ ಅಭಿಪ್ರಾಯವನ್ನು ಪುನ: ಎತ್ತಿಹಿಡಿಯಲಾಗಿದೆ.[೭] ಈ ಬಗೆಯ ಪ್ರಯತ್ನ ಪ್ರಧಾನವಾಗಿ ಬಿ. ಎಂ. ಶ್ರೀಯವರಿಂದ

ಪ್ರಾರಂಭವಾಗಿ ಅವರ ಶಿಷ್ಯರಿಂದಲೂ ಮುಂದುವರಿದಿರುವುದು ಕಂಡುಬರುತ್ತದೆ. ಇದನ್ನು ವಿರೋಧಿಸುವುದಕ್ಕೆ ಮುಖ್ಯ ಕಾರಣ, ಕರ್ಣ, ದುರ್ಯೋಧನ, ರಾವಣರಂಥ ಪಾತ್ರಗಳು ನಮ್ಮ ಕಾವ್ಯ ಮೀಮಾಂಸೆ ರಚನೆ ಚೌಕಟ್ಟಿನಲ್ಲಿ ಪ್ರತಿನಾಯಕ ಪಾತ್ರಗಳು ಮತ್ತು ದುರಂತ ದೃಷ್ಟಿ ನಮ್ಮದಲ್ಲದ್ದು ಎಂಬುದು. ಅದು ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ನಾಟಕಗಳಿಂದ ಬಂದ ಪರಿಕಲ್ಪನೆಯಾಗಿದ್ದು, ನಮ್ಮ ಮಹಾಕಾವ್ಯಗಳ ಹಿಂದಿರುವ ಜೀವನ ದೃಷ್ಟಿಗೂ ಅಲ್ಲಿನ ದುರಂತ ಕಲ್ಪನೆಯ ಹಿಂದಿರುವ ಜೀವನ ದೃಷ್ಟಿಗೂ ಹೊಂದುವುದಿಲ್ಲ ಎಂಬುದು. ಮೇಲಿನ ಅಭಿಪ್ರಾಯಗಳ ಬಗ್ಗೆ ವಿಶ್ಲೇಷಣೆಯ ಅಗತ್ಯವಿರುವುದರಿಂದ ಅದನ್ನು ಗಮನಿಸಬಹುದಾಗಿದೆ.

ಈ ಆಲೋಚನೆಯನ್ನು ಒಟ್ಟಾರೆ ಭಾರತೀಯ ಮಹಾಕಾವ್ಯಗಳಲ್ಲಿನ ಪಾತ್ರಗಳ ಸಂದರ್ಭದಲ್ಲಿ ಮೊದಮೊದಲು ಚಿಂತಿಸಲು ಪ್ರಯತ್ನಿಸಿದರೂ, ಕನ್ನಡದಲ್ಲಿ ಮುಖ್ಯವಾಗಿ ಬಂದದ್ದು ಪಂಪನ ಕಾವ್ಯದಲ್ಲಿಯ ಕರ್ಣ, ರನ್ನನ ದುರ್ಯೋಧನ ಮತ್ತು ನಾಗಚಂದ್ರನ ರಾವಣನ ಪಾತ್ರಗಳ ಸಂದರ್ಭದಲ್ಲಿ. ಭಾರತೀಯ ಕಾವ್ಯಮೀಮಾಂಸೆಕ್ರಮದಲ್ಲಿ ಪಾರಂಪರಿಕ ದೃಷ್ಟಿಯಲ್ಲಿ ಇವರೆಲ್ಲ ಪ್ರತಿನಾಯಕರೇ. ಆದರೆ ಈ ಕಾವ್ಯಗಳನ್ನು ಓದಿದ ಯಾರಿಗಾದರೂ ಆಯಾ ಕವಿಗಳ ಘೋಷಿತ ಉದ್ದೇಶ ಏನೇ ಇದ್ದರೂ ಕಾವ್ಯದಲ್ಲಿ ಕವಿಗಳಿಗೆ ಗೊತ್ತಿಲ್ಲದಂತೆಯೇ ಈ ಪಾತ್ರಗಳು ಓದುಗರ ಅನುಕಂಪ, ಪ್ರೀತಿಗೆ ಪಾತ್ರವಾಗುತ್ತವಲ್ಲದೆ ಆ ಕಾವ್ಯನಾಯಕರಿಗಿಂತಲೂ ಅತ್ಯಂತ ಪರಿಣಾಮಕಾರಿಯಾಗುತ್ತವೆ. ಆ ದೃಷ್ಟಿಯಿಂದ "ಕೃತಿಯನ್ನು ನಂಬು ಕೃತಿಕಾರನನ್ನಲ್ಲ" ಎನ್ನುವುದಾದರೆ ಕೃತಿಯಲ್ಲಿ ನಿಜವಾಗಿ ಸಂಭವಿಸಿರುವುದು ಇವರೇ ನಾಯಕರೆಂಬಂತೆ. ಮೇಲಿನ ವಿಮರ್ಶಕರು ಈ ಪಾತ್ರಗಳನ್ನು ಪಾಶ್ಚಿಮಾತ್ಯ ದುರಂತ ದೃಷ್ಟಿಯಿಂದ ನೋಡಿ ಹೊಸದೊಂದು ನೋಟ ಸಾಧ್ಯವಾಗಿ ನಿಜವಾದ ರಸಾನುಭೂತಿ ಸಾಧ್ಯವಾಗುವುದನ್ನು ಅನುಭವಿಸಿ ಅದನ್ನು ಕಾಣಿಸಲು ಪ್ರಯತ್ನಿಸಿದರು. ಅವರ ದೃಷ್ಟಿಗೆ ಇಲ್ಲಿ ಬೆಂಬಲ ದೊರೆಯಲು ಕಾರಣವೆಂದರೆ, ಮೇಲಿನ ಈ ಮೂರು ಜನ ಕವಿಗಳು ಜೈನರಾಗಿದ್ದು, ಜೈನ ಕವಿಗಳು ಜೀವನವನ್ನು ನೋಡುವ ದೃಷ್ಟಿ ವೈದಿಕ ಕವಿಗಳಿಗಿಂದ ಭಿನ್ನವಾಗಿರುವುದು. ಅವರು ಮನುಷ್ಯನನ್ನು ವಾಸ್ತವ ದೃಷ್ಟಿಯಿಂದ ಅವನ ಎಲ್ಲ ಸಂಕೀರ್ಣತೆಯೊಂದಿಗೆ ಹಿಡಿಯಲು ಪ್ರಯತ್ನಿಸಿದರು. ಹೀಗಾಗಿ ಅವರ ಪಾತ್ರಗಳು ವೈದಿಕ ಕವಿಗಳ ಕಪ್ಪು–ಬಿಳುಪಿನ ಪಾತ್ರಗಳಂತಾಗದೆ ವಿಶೇಷ ಆಯಾಮಗಳನ್ನು ಹೊಂದಿರುವುದೇ ಈ ನೋಟಕ್ಕೆ ಕಾರಣವಾಗಿದೆ. ಆದರೆ ಮಾಸ್ತಿಯವರ ನಿಲುವು ಅವರ ಘೋಷಿತ ನಿಲುವಿನಂತೆ ಸಾಂಪ್ರದಾಯಿಕವಾದ್ದರಿಂದ ಈ ಬಗೆಯ ನೋಟವನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ನೋಟ ಯಾವುದೇ ಸಂಸ್ಕೃತಿಯಮೂಲದಿಂದ ಬಂದಿದ್ದರೂ ಅದನ್ನು ಪಡೆಯುವುದರಿಂದ ಇನ್ನೊಂದು ಹೊಸ ಆಯಾಮದ ಸ್ವಾರಸ್ಯ ಸಾಹಿತ್ಯ ಕೃತಿಯಿಂದ ಸಾಧ್ಯವಾಗುವುದಾದರೆ ಅದು ಸಹೃದಯನ ಪಾಲಿಗೆ ಒಂದು ವಿಶೇಷ ಲಾಭವೆಂದೇ ಹೇಳಬೇಕು. ಇದಲ್ಲದೆ ಪ್ರಾಚೀನ ಕನ್ನಡ ಕಾವ್ಯಗಳ ಸಂದರ್ಭದಲ್ಲಿ ಕಾವ್ಯ ಮತ್ತು ನಾಟಕಗಳೆಂಬ ಪ್ರತ್ಯೇಕ ಸಾಹಿತ್ಯ ಪ್ರಕಾರಗಳೇ ಇಲ್ಲದಿರುವುದು ಆ ಪರಿಕಲ್ಪನೆಯನ್ನು ಕಾವ್ಯಗಳಿಗೆ ಮಾತ್ರ ಅನ್ವಯಿಸಲು ಕಾರಣವಾಗಿರಬೇಕು.

ಇನ್ನು ಮಾಸ್ತಿಯವರು ಕಾವ್ಯದಲ್ಲಿ "ಕವಿ ಸಮಯ ಹೆಚ್ಚಿದಷ್ಟು ಜನತೆಯಲ್ಲಿ ರಸಿಕತೆಯ ಸಾಮಗ್ರಿ ಹೆಚ್ಚಿತೆಂದು ಹೇಳಬಹುದು".[*] ಎಂಬ ಅಭಿಪ್ರಾಯವನ್ನು ಮತ್ತು

"ಪ್ರಯತ್ನಪೂರ್ವಕವಾಗಿ ಸಾಹಿತ್ಯವನ್ನು ಬೆಳೆಸದೆ ಇದ್ದರೆ ಜನರು ಕರ್ತವ್ಯಹೀನರೆಂದು ಹೇಳಬೇಕಾಗುತ್ತದೆ''. ' ಎಂಬುದನ್ನು ಶ್ರೀ ಎ.ಆರ್. ಕೃಷ್ಣಶಾಸ್ತ್ರಿಗಳು ತಮ್ಮ **ಭಾಷಣಗಳು ಮತ್ತು ಲೇಖನಗಳು** ಸಂಗ್ರಹದಲ್ಲಿ ತೀವ್ರವಾಗಿ ಖಂಡಿಸಿದ್ದಾರೆ. ಕವಿಸಮಯಗಳ ಹಾವಳಿಯಿಂದ ಕಾವ್ಯ ಕುಂಠಿತವಾಗುವುದನ್ನು ಅದು ದುರ್ಬಲ ಕವಿಗಳಿಗೆ ಮಾತ್ರ ಊರುಗೋಲಾದದ್ದನ್ನು ತಿಳಿಸಿ, ಪ್ರಯತ್ನದಿಂದ ಪಂಡಿತರಾಗಬಹುದೇ ವಿನ: ಕವಿಗಳಾಗಲು ಸಾಧ್ಯವಿಲ್ಲ ಎಂದಿರುವುದು ಸಮರ್ಪಕವಾಗಿದೆ. ೧೦

ಇನ್ನೊಂದು ಕಡೆ ಮಾಸ್ತಿಯವರು, ಸಾಹಿತ್ಯದಲ್ಲಿ ಸ್ವತಂತ್ರ ಮಾರ್ಗಕ್ಕಿಂತ ಸಿದ್ಧಾಂತ ಮಾರ್ಗದಲ್ಲಿ ಕೃತಿ ರಚನೆ ಉತ್ತಮವಾಗುತ್ತದೆ; ಷೇಕ್ಸಪೀಯರನು ಸ್ವತಂತ್ರ ಮಾರ್ಗ ಅನುಸರಿಸದೆ ಸಿದ್ಧಾಂತ ಮಾರ್ಗವನ್ನನುಸರಿಸಿದ್ದರೆ ಇನ್ನೂ ಉಜ್ವಲ ಕೃತಿರಚನೆ ಮಾಡಬಹುದಿತ್ತೆಂಬರ್ಥದ ಮಾತನ್ನು ಹೇಳುತ್ತಾರೆ.೧೧ ಸಾಹಿತ್ಯ ಪರಂಪರೆಯನ್ನು ಗಮನಿಸಿದವರಿಗೆಲ್ಲ ಸಿದ್ಧಾಂತ ಮಾರ್ಗ ಯಾವಾಗಲೂ ಸಾಮಾನ್ಯ ಸಾಮರ್ಥ್ಯವುಳ್ಳವರಿಗೆ ನಡೆಯಲು ಸಹಾಯಕವಾಗಬಹುದೇ ವಿನ: ಸ್ವತಂತ್ರ ಪ್ರತಿಭೆಯುಳ್ಳ ಸಮರ್ಥ ಕವಿಗಳು ತಮ್ಮದೇ ಆದ ಹೊಸ ಮಾರ್ಗವನ್ನು ರೂಪಿಸಿಕೊಂಡು ತಮ್ಮ ಉದ್ದೇಶದಲ್ಲಿ ಸಫಲರಾಗಿರುವುದನ್ನು ಗಮನಿಸುತ್ತೇವೆ. ಅವರ ಕಾವ್ಯ ಮಾರ್ಗವೇ ಹೊಸ ಸಿದ್ಧಾಂತ ರೂಪಗೊಳ್ಳುವುದಕ್ಕೆ ಕಾರಣವಾಗುವುದರಿಂದ ಈ ಸೌಲಭ್ಯಾಕಾಂಕ್ಷೆ ದುರ್ಬಲ ಲೇಖಕರಲ್ಲಿ ಮಾತ್ರ ಸಫಲವಾಗುತ್ತದೆಯೇ ವಿನ: ಸಮರ್ಥ ಕವಿಗಳಲ್ಲಿ ಅಲ್ಲ.

ಇನ್ನು ಮಾಸ್ತಿಯವರು ಹಳೆಗನ್ನಡ ಕವಿಯಾದ ಪಂಪನಲ್ಲದೆ, ಬಸವಣ್ಣ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರ, ಸರ್ವಜ್ಞ, ಮುದ್ದಣ, ಕೀರ್ತನಕಾರರು, ಆಳ್ವಾರರು, ರವೀಂದ್ರ, ಗಯಟೆ, ಹಾಫೀಜ್, ಅಗಸ್ಟಿನ್ ಅವರನ್ನು ಕುರಿತು ಬರೆದಿರುವ ವಿಮರ್ಶೆಗಳು ಪಾಂಡಿತ್ಯಪೂರ್ಣವಾದ, ಸಹೃದಯ, ರಸಿಕ ವಿಮರ್ಶೆಗಳಾಗಿವೆ. ಇವುಗಳಲ್ಲಿ ಅವರ ಸಂಗ್ರಹ ಗುಣ, ವಿವರಣೆ, ವರ್ಣನಾ ಸಾಮರ್ಥ್ಯಗಳು ವಿಶೇಷವಾಗಿ ಗಮನಕ್ಕೆ ಬರುತ್ತವೆ. ಈ ಎಲ್ಲ ಲೇಖನಗಳ ಹಿಂದೆ ಮುಖ್ಯವಾಗಿ ಕಂಡು ಬರುವ ಒಂದು ಪ್ರಧಾನ ಅಂಶವೆಂದರೆ, ಅನಂತರದ ನಮ್ಮ ಎಲ್ಲ ನವೋದಯ ವಿಮರ್ಶಕರಲ್ಲಿ ಕಂಡು ಬರುವ ಸಂಸ್ಕೃತಿಯ ಪ್ರೀತಿ ಮತ್ತು ರಸಿಕ ಸಹೃದಯತೆಯಿಂದ ಜನಶಿಕ್ಷಣ ಕಳಕಳಿಯಲ್ಲದೆ, ಅಭಿರುಚಿ ನಿರ್ಮಾಣದ ಹಂಬಲ.

ಆದರೆ ಈ ರಭಸದಲ್ಲಿ ಎಂಥ ಸಮತೂಕದ ವಿಮರ್ಶಕರೆಂದು ಹೆಸರಾಗಿರುವ ಮಾಸ್ತಿಯವರು ತಮ್ಮ ತೌಲನಿಕ ದೃಷ್ಟಿಯಲ್ಲಿ ಮೌಲ್ಯಮಾಪನದಲ್ಲಿ ಎಡುವುದನ್ನು ಗಮನಿಸುತ್ತೇವೆ. ಇದಕ್ಕೆ ಉದಾಹರಣೆಯಾಗಿ ಮಾಸ್ತಿಯವರು ಮುದ್ದಣ ಕವಿಯ ಕಾವ್ಯದಲ್ಲಿಯ ನಿಸರ್ಗ ವರ್ಣನೆಯ ಸಾಮರ್ಥ್ಯವು ಕಾಳಿದಾಸ ಮತ್ತು ಷೇಕ್ಸ್‌ಪಿಯರ್ ಕವಿಯ ಕಾವ್ಯದಲ್ಲಿಯ ನಿಸರ್ಗವರ್ಣನೆಗೆ ಸಮಾನವಾಗಿದೆಯೆಂದು ಅಭಿಪ್ರಾಯ ಪಡುತ್ತಾರೆ. ಕಾಳಿದಾಸನ **ಮೇಘದೂತ** ಕಾವ್ಯವನ್ನು ಕುರಿತ ಲೇಖನ ಮುದ್ದಣ ಕವಿಯ ಆ ಲೇಖನದ ಸಂಗ್ರಹದಲ್ಲಿಯೇ ಇರುವುದರಿಂದ, ಓದುಗರಿಗೆ ಮಾಸ್ತಿಯವರ ತೌಲನಿಕ ದೃಷ್ಟಿಯ ಬಗ್ಗೆಯೇ ಅನುಮಾನ ಬರುವಂತಾಗುತ್ತದೆ.

ಅನಂತರ ಹೊಸಗನ್ನಡ ಸಾಹಿತ್ಯಕ್ಕೆ ಬಂದರೆ, ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಮುನ್ನುಡಿಗಳ ಸಂಗ್ರಹವಾದ **ಪೂಜನ**ದಲ್ಲಿ ಕೆಲವು ಗಮನಾರ್ಹವಾದ ಲೇಖನಗಳಿರು

ವುದು ಕಂಡು ಬರುತ್ತದೆ. ಇವುಗಳಲ್ಲಿ ದ.ರಾ. ಬೇಂದ್ರೆಯವರ **ನಾದಲೀಲೆ** ಕವನ ಸಂಕಲನಕ್ಕೆ ಬರೆದ ಮುನ್ನುಡಿ ನಮ್ಮ ನವೋದಯ ಸಂಪ್ರದಾಯದ ಅತ್ಯುತ್ತಮ ಪ್ರಾತಿನಿಧಿಕ ವಿಮರ್ಶೆಯಾಗಿದೆ. ಮುಖ್ಯವಾಗಿ ಆ ಹಂತದಲ್ಲಿಯೇ ಬೇಂದ್ರೆಯವರ ಕಾವ್ಯದ ಮುಂದಿನ ಸಫಲತೆಯನ್ನು ಗುರುತಿಸಿರುವುದು ಅವರ ವಿಮರ್ಶೆಯ ಆಳವಾದ ಒಳನೋಟವನ್ನು ಸೂಚಿಸುವಂಥದಾಗಿದೆ. ಬೇಂದ್ರೆಯವರನ್ನು ಕೇವಲ *Promising* ಕವಿಯಲ್ಲ, *Fulfilment* ಉಳ್ಳ ಕವಿಯೆಂದು ಗುರುತಿಸಿರುವುದನ್ನು ಮೆಚ್ಚಿಕೊಳ್ಳುತ್ತ ಡಾ : ಯು.ಆರ್. ಅನಂತಮೂರ್ತಿ ಅವರು ಆ ಮುನ್ನುಡಿಯನ್ನು ಸಾಹಿತ್ಯ ವಿಮರ್ಶೆಯಲ್ಲಿ ಕ್ಲಾಸಿಕ್ ಎಂದು ಕರೆದು ತಾವು ಬೇಂದ್ರೆಯವರ ಕಾವ್ಯವನ್ನು ಕುರಿತು ಒಂದು ಹಂತದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವನ್ನು ಮಾಸ್ತಿಯವರ ಅಭಿಪ್ರಾಯದ ಜೊತೆಗೆ ಹೋಲಿಸಿ ಆ ಲೇಖನದ ಮಹತ್ವವನ್ನು ಎತ್ತಿ ತೋರಿಸಿರುವುದು ಮಾಸ್ತಿಯವರ ಆ ಮಟ್ಟದ ವಿಮರ್ಶೆಗೆ ಸಂದ ಗೌರವವಾಗಿದೆ. ಇದೇ ಸಂದರ್ಭದಲ್ಲಿ ಮಾಸ್ತಿಯವರು, ನಂಜನಗೂಡಿನ ತಿರುಮಲಾಂಬಾ ಅವರ ಕಾದಂಬರಿಗಳನ್ನು ತಾವು ಹೊಸತರಲ್ಲಿ ಕಟುವಾಗಿ ವಿಮರ್ಶಿಸಿದ್ದನ್ನು ನೆನಪಿಸಿಕೊಂಡು ವ್ಯಕ್ತಪಡಿಸಿದ ಸಂಕೋಚ, ಸೌಜನ್ಯದ ಮನೋಧರ್ಮದಲ್ಲಿ ವಿಮರ್ಶಕನಿಗೆ ಅಗತ್ಯವಾದ ಪುನ:ಪರಿಶೀಲನೆಯ ದೃಷ್ಟಿಯನ್ನು ವ್ಯಕ್ತಪಡಿಸಿದ್ದಾರೆ.

ನವೋದಯದ ಅನಂತರ ಬಂದ ಪ್ರಗತಿಶೀಲ ಮತ್ತು ನವ್ಯ ಸಾಹಿತ್ಯ ಸಂಪ್ರದಾಯಗಳ ಸಾಹಿತ್ಯವನ್ನು ಕುರಿತು ಮಾಸ್ತಿಯವರು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದು ಅವರ ವಿಮರ್ಶೆಯ ಮುಖ್ಯವಾದ ಧೋರಣೆಯನ್ನು ಸೂಚಿಸುವುದರಿಂದ ಅವುಗಳ ಪ್ರಾತಿನಿಧಿಕ ಉದಾಹರಣೆಗಳನ್ನು ಪರಿಶೀಲಿಸಬಹುದಾಗಿದೆ. ನವೋದಯಸಾಹಿತ್ಯ ಸಂದರ್ಭದ ಕೊನೆಯಲ್ಲಿ ಪ್ರಗತಿಶೀಲ ಚಳುವಳಿ ಪ್ರಾರಂಭವಾದಾಗ ಮಾಸ್ತಿಯವರು : "*ಸಾಹಿತ್ಯ ಪ್ರಗತಿಶೀಲವಾಗಬೇಕೆಂದು ಇತ್ತೀಚೆಗೆ ಕೆಲವು ತರುಣ ಲೇಖಕರು ವಾದ ಎತ್ತಿದ್ದಾರೆ. ಇದುವರೆಗೆ ಬರೆದ ಸಾಹಿತ್ಯ ಪ್ರಗತಿಶೀಲ ಅಲ್ಲ. ಇನ್ನು ಮುಂದೆ ಬರುವ ಸಾಹಿತ್ಯ ಪ್ರಗತಿಶೀಲ ಆಗಬೇಕು ಎನ್ನುವುದು ಈ ವಾದದ ಮುಖ್ಯ ಭಾವ*" [೧೩] ಎನ್ನುತ್ತ ಸಾಹಿತ್ಯ ದಲಿತರ ಮುಖವಾಣಿಯಾಗಬೇಕೆಂಬ ಘೋಷಣೆಗೆ ಪ್ರತಿಕ್ರಿಯಿಸುತ್ತ: "*ಹಲವು ಪಕ್ಷದ ಭಾವನೆಗೂ ಸಾಹಿತ್ಯ ರೂಪು ಕೊಡಬೇಕು–ಸಾಹಿತ್ಯ ಕೆಲವು ವೇಳೆ ಯಾವ ಒಂದು ಪಂಗಡಕ್ಕೆ ಸೇರದೆ ಬಹು ಜನರ ಒಪ್ಪಿಗೆಯನ್ನು ಪಡೆಯಲಾರದೆ ಮನುಜಕುಲದ ರಕ್ಷಣೆಗೆ ಆವಶ್ಯಕವೆಂಬ ತತ್ವವನ್ನು ಸಾರಬೇಕಾಗುತ್ತದೆ. ಬಡತನ, ಸಂಪತ್ತು ಮಾನವ ಜೀವನದ ಒಂದು ಭಾಗ ಮಾತ್ರ, ಅಜ್ಞಾನ–ಜ್ಞಾನ, ಸೌಶಿಲ್ಯ–ಶೀಲರಾಹಿತ್ಯ, ಸೌಜನ್ಯ–ದೌರ್ಜನ್ಯ, ಆಸ್ತಿಕ–ನಾಸ್ತಿಕ , ವಿನಯ–ಅವಿನಯ ಇವು ಆ ಜೀವನದಲ್ಲಿ ಮುಖ್ಯಾಂಶಗಳು. ಈ ಎಲ್ಲಾ ವಿಷಯದಲ್ಲೂ ಎಲ್ಲಾ ರೀತಿಯ ವಿಚಾರವು ಸಾಹಿತ್ಯದಲ್ಲಿ ಈಗಲೂ ನಡೆಯಬೇಕಾಗಿದೆ. ಒಂದು ಮುಖದ ಭಾವನೆ ಪ್ರಗತಿಶೀಲವೆಂದು ಹೆಸರಿಟ್ಟು ಅದರ ಹೊರತು ನಮಗೆ ಯಾವುದೂ ಬೇಡವೆಂದರೆ ಪ್ರಗತಿಯ ಒಂದು ಮುಖವನ್ನು ಎಲ್ಲಾ ಪ್ರಗತಿಯೆಂದು ಹೇಳಿದಂತಾಗುತ್ತದೆ*". [೧೪] ಎನ್ನುತ್ತಾರೆ.

ಮೇಲಿನ ಮಾತುಗಳಲ್ಲಿ ಮಾಸ್ತಿಯವರ ಯಾವುದೇ ಆಂದೋಲನ ನಮ್ಮ ಪರಂಪರೆಯ ಒಳಗಿನಿಂದ ಬರಬೇಕು, ಪರದೇಶದ ಅಂಧಾನುಕರಣೆ ಸಲ್ಲದು, ಲೇಖಕನಿಗೆ ಬದುಕಿನ ಸಮಗ್ರ ದೃಷ್ಟಿ ಇರಬೇಕು, ಪರಂಪರೆಯ ಉತ್ತಮಾಂಶಗಳನ್ನು ಅಲ್ಲಗಳೆಯಬಾರದೆಂಬ

ದೃಷ್ಟಿಯು ಕಂಡುಬರುತ್ತದೆ. ಇದೇ ದೃಷ್ಟಿಯಿಂದ ನವ್ಯ ಸಾಹಿತ್ಯ ಸಂಪ್ರದಾಯ ಬಂದಾಗಲೂ ಮಾಸ್ತಿಯವರು ಅದರ ಅನ್ಯದೇಶೀಯ ಪ್ರೇರಣೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ: "ನಮ್ಮ ಹೊಸಲೇಖನ ಬಹುಪಾಲು ಜೀವನನಷ್ಟ , ಕೆಡುಕು, ಅನ್ಯಾಯ, ಹೊಲಸನ್ನು ಹೇಳುವುದರಲ್ಲಿ ತೊಡಗಿವೆ. ಜೀವನದಲ್ಲಿ ಇವೆಲ್ಲ ಇವೆ. ಆದರೆ ಇವನ್ನೆಲ್ಲ ಸಹಿಸಿಕೊಂಡು ಜೀವನ ನಡೆಯುತ್ತಲೇ ಇದೆ. ಕೆಡುಕನ್ನು ತೋರಿಸುವಂತೆ ಒಳಿತನ್ನು ತೋರಿಸಿ ಬಾಳು ಹಸನಾಗುವ ದಾರಿಯನ್ನು ತೆರೆಯುವುದು ಜನಕ್ಕೆ ಹೆಚ್ಚು ಸಹಾಯಕವಾಗುತ್ತದೆ." [೧೪] "ಹೊಸಕವಿತೆಯಲ್ಲಿ ಕೆಲವರು ಹಲವು ವೇಳೆ ಸಂಕೋಚ ಬಿಟ್ಟು ಹೊಲಸು ಮಾತನ್ನು ಬಳಸುತ್ತಾರೆ. ಇದು ಪಶ್ಚಿಮ ದೇಶಗಳ ಹೊಸ ಸಾಹಿತ್ಯದ ಅನುಕರಣದಿಂದ ಬಂದ ಪ್ರವೃತ್ತಿ. ನಮ್ಮ ಜೀವನಕ್ಕೆ ಇದು ಹೊಂದುವುದಿಲ್ಲ. ನಮ್ಮ ಕವಿಗಳು ಇದನ್ನು ಮನಸ್ಸಿಗೆ ತೆಗೆದು ಕೊಳ್ಳಬೇಕು." [೧೫]

ನವ್ಯ ಕಾವ್ಯದಲ್ಲಿಯ ಅಶ್ಲೀಲತೆ ಸಂವಹನದ ಕಾಠಿಣ್ಯತೆಯನ್ನು ಕುರಿತು ಮಾಸ್ತಿಯವರು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿರುವುದಲ್ಲದೆ, ಈ ಸಂವಹನದ ಸಮಸ್ಯೆಯನ್ನು ಕುರಿತು ವಿವೇಚಿಸುತ್ತ **ನಾಕು ತಂತಿ**ಯ ಬೇಂದ್ರೆ ಕವನಗಳು, ನವ್ಯ ಸಂಪ್ರದಾಯದಲ್ಲಿ ಅನಂತರ ಬಂದ ಕೆ.ಎಸ್. ನರಸಿಂಹಸ್ವಾಮಿಗಳ ಕವನಗಳು ತಮಗೆ ಅರ್ಥವಾಗದಿರುವುದನ್ನು, ಬೇಂದ್ರೆಯವರ "ಹಕ್ಕಿ ಹಾರುತಿದೆ ನೋಡಿದಿರಾ?" ಮತ್ತು ನರಸಿಂಹಸ್ವಾಮಿಗಳ "ಮೈಸೂರು ಮಲ್ಲಿಗೆ" ಕವನಗಳ ಜೊತೆಗೆ ಹೋಲಿಸಿ ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಇತ್ತೀಚೆಗೆ ಲೇಖಕನನ್ನು ವೈದಿಕ–ಅವೈದಿಕ ಎಂಬ ದೃಷ್ಟಿಯಿಂದ ನೋಡುವ ಬಗ್ಗೆಯೂ ಮಾಸ್ತಿಯವರು ತಮ್ಮ ಅಸಮ್ಮತಿಯನ್ನು ಸೂಚಿಸಿದ್ದಾರೆ.

ಮಾಸ್ತಿಯವರು ಮೇಲೆ ಎತ್ತಿರುವ ಪ್ರಗತಿಶೀಲ, ನವ್ಯರ ಸಂದರ್ಭದ ಪ್ರೇರಣೆಗಳು ಹೊರಗಿನಿಂದ ಬಂದುವೆನ್ನುವಷ್ಟಕ್ಕೆ ಅವುಗಳನ್ನು ಧಿಕ್ಕರಿಸಬೇಕಾದ್ದಿಲ್ಲ. ಆದರೆ ಅವು ಎಷ್ಟರ ಮಟ್ಟಿಗೆ ನಮ್ಮ ಇಲ್ಲಿನ ಬದುಕಿಗೆ ಸಂಗತವಾಗುತ್ತವೆಂಬುದು ಮುಖ್ಯವಾಗುತ್ತದೆ. ಆದರೆ ಮಾಸ್ತಿಯವರು ಪ್ರತಿಪಾದಿಸಿದ ಸಮಾಜದ ಸಮಗ್ರ ದೃಷ್ಟಿ ಅವಶ್ಯವೆಂಬುದನ್ನು ಅಲ್ಲಗಳೆಯುವಂತಿಲ್ಲ. ಅದರಂತೆ ಅವರು ಕಾವ್ಯದಲ್ಲಿ ಭಾಷೆಯ ಬಳಕೆಯ ಬಗ್ಗೆ ಎತ್ತಿದ ಶ್ಲೀಲ, ಅಶ್ಲೀಲದ ಸಮಸ್ಯೆಯನ್ನು ಕಾವ್ಯದ ಹೊರಗಡೆ ಪರಿಶೀಲಿಸಿ ನಿರ್ಣಯಕ್ಕೆ ಬರುವುದು ಕಷ್ಟ. ಅಂಥ ಅಭಿವ್ಯಕ್ತಿ ಕಾವ್ಯದ ಸಂದರ್ಭದಲ್ಲಿ ಅನಿವಾರ್ಯವೇ? ಅದು ಕವಿಯ ಉದ್ದೇಶಕ್ಕೆ ಸಮರ್ಪಕವಾಗಿದೆಯೇ? ಗಮನಿಸಬೇಕು. ಅಂಥ ಅನುಭವವನ್ನು ಅದಲ್ಲದೆ ಬೇರೆ ರೀತಿಯಲ್ಲಿ ಹೇಳಲು ಸಾಧ್ಯವಿಲ್ಲವೇ ಹೇಗೆ ಎಂಬುದು ಮುಖ್ಯವಾಗುತ್ತದೆ. ಆದರೆ ಕವಿಯ ಉದ್ದೇಶಕ್ಕೆ ಹೊರತಾದ ನೇರ ವಾಚ್ಯ ಅಶ್ಲೀಲ ಪದ ಬಳಕೆ ಆದರ ಕಲಾತ್ಮಕತೆಯನ್ನು ತಳ್ಳಿ ಹಾಕುವುದರಿಂದ ಅದಕ್ಕೆ ಸಮ್ಮತಿ ಇರಲಾರದು.

ಇನ್ನು ಸಂವಹನದ ದೃಷ್ಟಿಯಿಂದ ನವ್ಯರಲ್ಲಿ ಕ್ಲಿಷ್ಟತೆ ಎರಡು ಕಾರಣಗಳಿಂದ ಅವರಿಗೆ ಕಂಡುಬಂದಿರಬಹುದು. ಒಂದು ಮಾಸ್ತಿಯವರಿಗೆ ಅವರ ಅಭಿವ್ಯಕ್ತಿಯ ರೀತಿ ಅಪರಿಚಿತವಾಗಿರುವುದು, ಇನ್ನೊಂದು ಅವರಲ್ಲೇ ಕೆಲವರು ಕಾವ್ಯ ಪ್ರೌಢಿಮೆಯ ಹೆಸರಿನಲ್ಲಿ

ಉದ್ದೇಶಪೂರ್ವಕವಾಗಿ ಕಠಿಣ ಅಭಿವ್ಯಕ್ತಿಯನ್ನು ಮಾಡುತ್ತಿದ್ದುದು. ಆದರೆ ಅವರೇ ಉದಾಹರಿಸಿದ ಬೇಂದ್ರೆಯವರ **ನಾಕು ತಂತಿ**ಯ ಕವನಗಳು; ನರಸಿಂಹಸ್ವಾಮಿಯವರ ಕವನಗಳು, ಈ ರೀತಿಯ ಅಭಿವ್ಯಕ್ತಿ ಕೇವಲ ನವ್ಯರಿಗೆ ಮಾತ್ರ ಸೀಮಿತವಲ್ಲವೆಂಬುದನ್ನು ಶ್ರುತಪಡಿಸುತ್ತವೆ.

ಇನ್ನು ವೈದಿಕ–ಅವೈದಿಕ ಎಂಬ ಮಾತುಗಳನ್ನು ಅನುಭವದ ದೃಷ್ಟಿಯಿಂದ ಬಳಸುವುದಾದರೆ, ಅಂಥ ಭಿನ್ನ ಪರಿಸರಗಳಿಂದ ಅನುಭವದಲ್ಲಿ ವ್ಯತ್ಯಾಸ ಉಂಟಾಗಲು ಸಾಧ್ಯವಿದೆ. ಅದು ಮನಸ್ಸು ಅಂಥ ಆವರಣಗಳಲ್ಲಿ ಪಡೆದುಕೊಳ್ಳುವ ಸಂಸ್ಕಾರಕ್ಕೆ ಸಂಬಂಧಿಸಿದ ಮಾತಾಗುತ್ತದಲ್ಲದೆ, ಆ ಹಿನ್ನಲೆಯಿಂದ ಬಂದ ಕೃತಿಗಳಲ್ಲಿ ಅವರ ಪ್ರಭಾವವು ಕಾಣಿಸುವುದು ಅನಿವಾರ್ಯವಾಗುತ್ತದೆ. ಆದರೆ ಉನ್ನತ ಮಟ್ಟದ ಅಭಿವ್ಯಕ್ತಿಯ ಹಂತದಲ್ಲಿ ಮನಸ್ಸು ಇಂಥ ಮಿತಿಗಳನ್ನು ಮೀರಿ ಒಟ್ಟು ಮಾನವ ಕುಲಕ್ಕೆ ತಟ್ಟಬಲ್ಲ ಸಾಮಾನ್ಯ ಅನುಭವಗಳನ್ನು ಶ್ರೇಷ್ಠ ಮಟ್ಟದಲ್ಲಿ ವ್ಯಕ್ತಪಡಿಸುತ್ತದೆ.

ಆದರೆ ಮಾಸ್ತಿಯವರು ಅಭಿವ್ಯಕ್ತಿಯ ದೃಷ್ಟಿಯಿಂದ ಪ್ರತಿಪಾದಿಸುವ ಉದ್ದೇಶಪೂರ್ವಕವಾದ ಸರಳ, ನೇರ ಅಭಿವ್ಯಕ್ತಿಯನ್ನು ಸೃಷ್ಟಿಶೀಲ ಗಳಿಗೆಯಲ್ಲಿ ಸಾಧಿಸುವುದು ಕಷ್ಟವಾಗುತ್ತದಲ್ಲದೆ, ಅಂಥ ನೇರ ಉದ್ದೇಶಪೂರ್ವಕ ಪ್ರಯತ್ನ ಆ ಕೃತಿಯ ಸೃಷ್ಟಿಶೀಲ ಗುಣವನ್ನೇ ಪ್ರಶ್ನಿಸುವಂತಾಗುತ್ತದೆ. ಒಟ್ಟಾರೆ ಈವರೆಗಿನ ವಿವೇಚನೆಯಿಂದ ಹೇಳುವುದಾದರೆ, ಮಾಸ್ತಿಯವರ ವಿಮರ್ಶೆಯ ಹಿಂದೆ ಸಂಯಮಪೂರ್ಣ, ಉದಾರ, ಪ್ರೀತಿಪೂರ್ಣವಾದ, ಅಂತಃಕರಣಉಳ್ಳ, ಪರಂಪರೆಯಲ್ಲಿ ಗೌರವ ಹೊಂದಿದ, ಸದಭಿರುಚಿಯ ಸಮನ್ವಯ ದೃಷ್ಟಿಯನ್ನು ಹೊಂದಿದ ಮನಸ್ಸೊಂದು ಕೆಲಸ ಮಾಡಿರುವುದು ಕಂಡುಬರುತ್ತದೆ. ●

ಟಿಪ್ಪಣಿಗಳು :

೧. ಸಂ. ಡಾ.ಹಾ.ಮಾ.ನಾಯಕ: ಶ್ರೀಸಂಪುಟ : ಪು : ೫೯

೨. ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಸಾಹಿತ್ಯ : ೧೯೨೪

೩. ಡಾ : ಮಾಸ್ತಿ ವೆಂಕಟೇಶ ಅಯ್ಯಂಗಾರ್ ಸಾಹಿತ್ಯ ಪ್ರೇರಣೆ : ಪು : ೧೧೦–೧೧೨

೪. ಡಾ : ಜಿ.ಎಂ. ಹೆಗಡೆ : ಮಾಸ್ತಿಯವರ ವಿಮರ್ಶೆ ಒಂದು ಅಧ್ಯಯನ ಗ್ರಂಥಕ್ಕೆ ಡಾಃ ಹಾ.ಮಾ. ನಾಯಕ ಅವರ ಮುನ್ನುಡಿ : ಪು : ೧೦–೧೧

೫. ಸಂ. ಡಾ. ಹಾ. ಮಾ. ನಾಯಕ : ಶ್ರೀನಿವಾಸ ಸಾಹಿತ್ಯ : ಗ್ರಂಥದಲ್ಲಿ ಶ್ರೀ ಎಸ್.ವಿ. ಪರಮೇಶ್ವರ ಭಟ್ಟರ ಲೇಖನ : ವಿಮರ್ಶೆ : ಪು : ೧೯೬–೧೯೭

೬. ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಆದಿಕವಿ ವಾಲ್ಮೀಕಿ : ಪು : ೧೩೮–೧೪೧

೭. ಶ್ರೀ ಟಿ.ಪಿ. ಅಶೋಕ : ಸಾಹಿತ್ಯ ಸಂದರ್ಭ : ಪು : ೨೧೦–೨೧೧

೮. ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಸಾಹಿತ್ಯ : ಪುಃ ೧೧

೯. ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಸಾಹಿತ್ಯ ಪು : ೭೭

೧೦. ಶ್ರೀ ಎ.ಆರ್. ಕೃಷ್ಣಶಾಸ್ತ್ರಿಗಳು : ಭಾಷಣಗಳು ಮತ್ತು ಲೇಖನಗಳು ಪು : ೩೭೮–೩೮೧

೧೧. ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಸಾಹಿತ್ಯ : ಪು. ೧೦೯

೧೨. ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಸಾಹಿತ್ಯ ಮತ್ತು ಪ್ರಗತಿಪ್ರಸಂಗ : ೧ ಪು: ೩೨

೧೩. ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಸಾಹಿತ್ಯ ಮತ್ತು ಪ್ರಗತಿಪ್ರಸಂಗ : ೧ ಪು: ೩೪

೧೪. ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಸಾಹಿತ್ಯ ಪ್ರೇರಣೆ : ಪು: ೧೪೩

೧೫. ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಸಾಹಿತ್ಯ ಪ್ರೇರಣೆ : ಪು : ೧೪೬

ಷೇಕ್ಸ್‌ಪಿಯರ್ ವರ್ಡ್ಸ್‌ವರ್ತ್ ಮತ್ತು ವಾಲ್ಮೀಕಿಯರನ್ನು ಒಟ್ಟಾಗಿ ಮೆಚ್ಚಿಕೊಂಡಿದ್ದ ಮಾಸ್ತಿ ಕೂತಿದ್ದ ಜಾಗ ಕೇವಲ ಹೊಂದಾಣಿಕೆಯದಲ್ಲ, ರಾಜಿಯ ಅಗತ್ಯಕ್ಕಾಗಿ ಹುಡುಕಿಕೊಂಡ ಅನುಕೂಲ ಸಿಂಧುವಲ್ಲ–ಭಾರತೀಯ ಪರಂಪರೆಯ ಜೀರ್ಣಾಗ್ನಿ ಕನ್ನಡದಲ್ಲಿ ಆರೋಗ್ಯಕರವಾಗಿ ಉರಿಯುತ್ತಿದೆ ಎಂಬುದನ್ನು ತೋರಿಸಿಕೊಡುವಂಥದು.

–**ಡಾ. ಯು. ಆರ್. ಅನಂತಮೂರ್ತಿ** (ಪೂರ್ವಾಪರ)

ಮಾಸ್ತಿ ಮತ್ತು ಕುವೆಂಪು : ಕೆಲವು ತುಲನಾತ್ಮಕ ಸಂಗತಿಗಳು

ಎಚ್. ಎಸ್. ರಾಘವೇಂದ್ರರಾವ್

ಸಮಕಾಲೀನರಾದ ಇಬ್ಬರು ಮುಖ್ಯ ಸಾಹಿತಿಗಳನ್ನು ಅವರ ಒಟ್ಟು ಬದುಕು ಮತ್ತು ಬರವಣಿಗೆಯ ಹಿನ್ನೆಲೆಯಲ್ಲಿ ಹೋಲಿಸಿ ನೋಡುವುದು, ಸಾಹಿತ್ಯಿಕವಾಗಿ ಹೇಗೋ ಹಾಗೆಯೇ ಸಾಂಸ್ಕೃತಿಕವಾಗಿಯೂ ಮಹತ್ವದ ಕೆಲಸ. ಹೀಗೆ ಮಾಡುವಾಗ, ನಾವು ಕೇವಲ ಸಮಾನವಾದ ಪ್ರೇರಣೆಗಳನ್ನು ಹಾಗೂ ಲಕ್ಷಣಗಳನ್ನು ಮಾತ್ರವಲ್ಲ, ಅಂತರಂಗದಲ್ಲಿಯೇ ಕೆಲಸ ಮಾಡುತ್ತಿದ್ದ ವೈರುಧ್ಯದ ಒಳಸುಳಿಗಳನ್ನೂ ಗುರುತಿಸಲು ಸಾಧ್ಯವಾಗುತ್ತದೆ. ಆಯಾ ಲೇಖಕರ ಮುಖ್ಯವಾದ ಕೃತಿಗಳು ಹೊರಬಂದು ದಶಕಗಳು ಕಳೆದ ಮೇಲೆ ಈ ಪರಿಶೀಲನೆ ನಡೆದರಂತೂ, ಆ ನಂತರದ ಬೆಳವಣಿಗೆಯ ಬೆಳಕಿನಲ್ಲಿ ಪಡೆದ ಹಿನ್ನೋಟಗಳನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಂದು ಪ್ರಧಾನವೆಂದು ತೋರಿದ ಧಾರೆಗಳು, ಸಾಧನೆಗಳು ಇಂದು ಬದಿಗೆ ಸರಿದು, ಅಂದು ನಿರ್ಲಕ್ಷ್ಯಕ್ಕೆ ಗುರಿಯಾಗಿದ್ದ ಕೃತಿಗಳು ಇಂದು ಮುಖ್ಯವೆಂದು ತೋರುವ ಸಂಭವವಿದೆ. ಎಂದರೆ ಇಂಥ ಪರಿಶೀಲನೆಯು ಕೇವಲ ಲೇಖಕರ, ಕೃತಿಗಳ ಅಧ್ಯಯನವಾಗಿ ಉಳಿಯದೆ ಅವರನ್ನು ಸೃಷ್ಟಿಸಿದ ಸಮಾಜವನ್ನೂ ಒಳಗೊಳ್ಳುತ್ತದೆ.

ಮಾಸ್ತಿ ಮತ್ತು ಕುವೆಂಪು ಅವರ ಬರವಣಿಗೆಯು ಸಾಹಿತ್ಯಕ ಚಳುವಳಿಗಳಿಂದ ನಿಬಿಡವಾಗಿದ್ದ ಕೆಲವು ದಶಕಗಳನ್ನೇ ದಾಟಿಬಂದು, ತಮ್ಮ ತಾಳಿಕೆಯ ಗುಣವನ್ನು ತೋರಿಸಿ ಕೊಂಡಿವೆ. ಕಟು ಟೀಕೆ ಮತ್ತು ನಿರ್ಲಕ್ಷ್ಯಗಳ ಅಗ್ನಿದಿವ್ಯವನ್ನು ದಾಟಿಬಂದು ಮತ್ತೆ ತಮ್ಮ

ಗಟ್ಟಿತನವನ್ನು ಸ್ಥಾಪಿಸಿವೆ. ಅವರಿಬ್ಬರೂ ತಾವು ಪ್ರಯೋಗನಿರತರಾಗಿದ್ದ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಅಲ್ಲವಾದರೂ, ಒಂದೆರಡರಲ್ಲಿ ಅತ್ಯಂತ ಮಹತ್ವದ ಕಲಾಸೃಷ್ಟಿಯನ್ನು ಮಾಡಿರುವರೆಂಬ ಸಂಗತಿಯನ್ನು ಯಾರೂ ಅಲ್ಲಗಳೆಯಲಾರರು. ಅವರ ಕೃತಿಗಳ ವಿಭಿನ್ನತೆಯನ್ನು ಗುರುತಿಸುವ ನನ್ನ ಪ್ರಯತ್ನದ ಒತ್ತು ಇರುವುದು, ಯಾರು ಹೆಚ್ಚು ಯಾರು ಕಡಿಮೆ ಎಂದು ನಿರ್ಧರಿಸುವ ಕಡೆಗೆ ಅಲ್ಲ. ಆದರೂ ಸಾಂಸ್ಕೃತಿಕ ಸನ್ನಿವೇಶದ ಹಿನ್ನಲೆಯಲ್ಲಿ ಆ ರೀತಿಯ ತೀರ್ಮಾನಗಳೂ ಅನಿವಾರ್ಯವಾಗಿ ಮೂಡಿಬಂದಿವೆ.

ಹೀಗೆ ಹೋಲಿಸುವ ಕೆಲಸವು ಅನೇಕ ಮಾರ್ಗಗಳನ್ನು ಹಿಡಿಯಬಹುದು. ಈ ಲೇಖಕರ ಸಾಹಿತ್ಯೇತರವಾದ ಜೀವನ, ಕೃತಿಗಳು ಮತ್ತು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಬಗೆಯ ಅಧ್ಯಯನವನ್ನು ಮಾಡಬಹುದು. ಇದು ಬಹುಮಟ್ಟಿಗೆ ತಮ್ಮ ಸುತ್ತಲಿನ ಸಾಮಾಜಿಕ ಚಲನವಲನಗಳಲ್ಲಿ ಅವರು ವಹಿಸಿದ ಪಾತ್ರವನ್ನು ಕುರಿತೋ ಅಥವಾ ಅಂಥ ಸಾಮಾಜಿಕ ಮಹತ್ವದ ಸಂಗತಿಗಳನ್ನು ಕುರಿತು ಅವರು ವ್ಯಕ್ತಪಡಿಸಿದ ವಿಚಾರಗಳನ್ನು ಕುರಿತೋ ಆಗಿರುತ್ತದೆ. ಈ ಲೇಖಕರ ಬಗ್ಗೆ ನಡೆದಿರುವ ಚರ್ಚೆಯು ಈಗಾಗಲೇ ಇಂಥ ಅಂಶಗಳನ್ನು ಒಳಗೊಂಡಿದೆ. ಕುವೆಂಪು ಅವರ **ಶೂದ್ರತಪಸ್ಸಿ** ನಾಟಕದ ಪ್ರಕಟಣೆಯ ಸಂದರ್ಭದಲ್ಲಿ, ಮಾಸ್ತಿಯವರು ಎತ್ತಿದ ವಾಗ್ವಾದವಾಗಲೀ, ಅಥವಾ ಈಚೆಗೆ ಮಾಸ್ತಿಯವರ ಕಾದಂಬರಿಗಳ ಸುತ್ತ ನಡೆದಿರುವ ವಿವಾದಗಳಾಗಲೀ ಇದೇ ಬಗೆಯವು. ಇಂಥ ಕಡೆ ಕೃತಿಯ ಕಲಾತ್ಮಕತೆ ಹಿನ್ನಲೆಗೆ ಸರಿದು, ಸಾರ್ವಜನಿಕರ ಚರ್ಚೆಗೆ ಗ್ರಾಸವಾಗುವುದು ಒಟ್ಟು ಲೇಖಕರ ಮನೋಧರ್ಮವೇ ಆಗಿರುತ್ತದೆ. ಮಾಸ್ತಿ ಮತ್ತು ಕುವೆಂಪುರವರಿಗೆ ಸಂಬಂಧಿಸಿದಂತೆಯೂ ಇಂಥದೊಂದು ಚರ್ಚೆಯು ಖಂಡಿತಾ ಅಗತ್ಯವಾಗಿದೆ. ಆದರೆ ನಾನು ಈ ಪ್ರಬಂಧದಲ್ಲಿ ಆ ಕೆಲಸ ಮಾಡುತ್ತಿಲ್ಲ.

ಎರಡನೆಯ ದಾರಿಯು, ಸ್ಥೂಲವಾಗಿ ಸಾಹಿತ್ಯ ಕೃತಿಗಳನ್ನು ಆಧಾರವಾಗಿಟ್ಟುಕೊಂಡರೂ ಕೃತಿಯೊಳಗಿನ ಆಶಯಗಳಿಗೆ ಮಾತ್ರ ಮಹತ್ವ ಕೊಡುತ್ತದೆ. ಈ ಮಾರ್ಗವು, ಕೃತಿಯು ಓದುಗನಿಗೆ ತಲುಪಿಸುವ ಆಶಯವು, ಅದು ಮೂಡಿಬಂದಿರುವ ಆಕೃತಿಯ ಫಲಿತಾಂಶವೇ ಆಗಿರುವುದೆಂಬ ಸೂಕ್ಷ್ಮವನ್ನು ಗ್ರಹಿಸುವುದಿಲ್ಲ. ಇವರಿಗೆ ಸಾಹಿತ್ಯ ಕೃತಿಯೆಂದರೆ ಅದರಲ್ಲಿ ನೇರವಾಗಿಯೋ, ಪರೋಕ್ಷವಾಗಿಯೋ ಮಂಡಿತವಾಗಿರುವ ವಿಚಾರಗಳ ಮೊತ್ತ ಮಾತ್ರ. ಸಾಹಿತ್ಯ ಕೃತಿಗಳನ್ನು ಅವುಗಳ ತಾತ್ಪರ್ಯದ ಮಟ್ಟಕ್ಕೆ ಇಳಿಸಿಬಿಡುವ ಈ ವಾದವನ್ನೂ ನಾನು ಒಪ್ಪುವುದಿಲ್ಲ; ಬಳಸುವುದಿಲ್ಲ. ಆದರೆ ಸಾಹಿತ್ಯ ಕೃತಿಗಳ ಪರಿಶೀಲನೆಯು ಕೂಡ ಕೊನೆಗೆ ಸಾಂಸ್ಕೃತಿಕವಾಗಿ ಮಹತ್ವಪೂರ್ಣವಾದ ತೀರ್ಮಾನಗಳನ್ನೇ ತಲುಪುತ್ತದೆ. ಏಕೆಂದರೆ ಕೆಲವೊಮ್ಮೆ ಲೇಖಕನ ಸೃಜನಶೀಲತೆಯು ಅವನ ಚರ್ಮದ ಗೋಡೆಗಳನ್ನು ದಾಟಿ ಹಾರುವ ಹಕ್ಕಿಯಾದರೂ ಸಾಮಾನ್ಯವಾಗಿ ಅವನ ಸಮಗ್ರ ವ್ಯಕ್ತಿತ್ವದ ನೆಲೆಗಳೊಂದಿಗೆ ಖಚಿತವಾದ ಸಂಬಂಧಗಳನ್ನು ಹೊಂದಿರುತ್ತದೆ.

ಈವರೆಗೆ ಹೇಳಿದ ಎರಡು ದಾರಿಗಳ ಮೂಲಕ ತಲುಪಿದ ತೀರ್ಮಾನಗಳನ್ನೇ ತಲುಪಬಹುದಾದ, ಹೆಚ್ಚು ಸಾಹಿತ್ಯಕವೂ ಅಧಿಕೃತವೂ ಆದ ದಾರಿಯೆಂದರೆ, ಆಯಾ ಲೇಖಕರ ಕೃತಿಗಳನ್ನೇ ಮುಖಾಮುಖಿಯಾಗಿಸಿ, ವಸ್ತುವಿನ ನಿರ್ವಹಣೆ ಮತ್ತು ಅವರು ರೂಪಿಸಿ

ಕೊಂಡಿರುವ ಅಭಿವ್ಯಕ್ತಿ ತಂತ್ರಗಳ ನೆರವಿನಿಂದ ಅವರಿಬ್ಬರ ನಡುವಿನ ವ್ಯತ್ಯಾಸಗಳನ್ನು ಹುಡುಕುವುದು. ಹೀಗೆ ಮಾಡುವಾಗ ಹಲವಾರು ಹಂತಗಳಿವೆ. ಅದೆಲ್ಲವನ್ನೂ ಬಳಸಿಕೊಂಡು ಕೆಲವು ಸಾಮಾನ್ಯೀಕರಣಗಳನ್ನು ಮಾಡಲು ಸಾಧ್ಯ.

ಮೊದಲನೆಯದಾಗಿ ಭಾವಗೀತೆ, ಕಥನ ಕವನ, ನಾಟಕ, ಸಣ್ಣಕಥೆ, ಕಾದಂಬರಿ ಮುಂತಾದ ಬೇರೆಬೇರೆ ಸಾಹಿತ್ಯ ಪ್ರಕಾಗಳಿಗೆ ಇರುವ ಅವುಗಳದೇ ಆದ ವಿಶಿಷ್ಟತೆಯ ಹಿನ್ನೆಲೆಯಲ್ಲಿ, ಈ ಲೇಖಕರು ಕೆಲಸ ಮಾಡಿರುವ ಬಗೆಯ ಹೋಲಿಕೆ, ವ್ಯತ್ಯಾಸಗಳನ್ನು ಹುಡುಕಬಹುದು. ಎರಡನೆಯದಾಗಿ ಕಾಮ, ಧಾರ್ಮಿಕತೆ, ಸಾಮಾಜಿಕ ರಚನೆ ಮುಂತಾದ ಬೇರೆ ಬೇರೆ ವಸ್ತುಗಳನ್ನು ತಮ್ಮ ಕೃತಿಯೊಳಗೆ ಶೋಧಿಸಿರುವ ಬಗೆಯಿಂದಲೇ ಅವರ ವಿಶಿಷ್ಟತೆಗಳನ್ನು ಪತ್ತೆ ಮಾಡಬಹುದು. ಇಲ್ಲಿಯೂ ನಾವು ಗಮನಿಸುವುದು ಕೃತಿಯ ರಚನೆಯನ್ನೇ ಸರಿ.

ಆಮೇಲೆ ಯಾವುದೇ ಸಾಹಿತ್ಯ ಪ್ರಕಾರದ ಮೂಲಭೂತ ಮಾಧ್ಯಮವಾದ ಭಾಷೆಯನ್ನು ಅಥವಾ ಅದರದೇ ಮೇಲುನೆಲೆಯ ಘಟಕಗಳಾದ ರಚನಾತಂತ್ರಗಳನ್ನು ಆಧಾರವಾಗಿಟ್ಟುಕೊಂಡು ಇನ್ನೊಂದು ರೀತಿಯ ಪರಿಶೀಲನೆಯನ್ನು ನಡೆಸಬಹುದು. ಕಥಾ ಸಾಹಿತ್ಯದಲ್ಲಂತೂ ಈ ದಾರಿಯು ತುಂಬಾ ಉಪಯುಕ್ತವಾದ ಮಾಹಿತಿಗಳನ್ನು ಕೊಡಬಲ್ಲುದು. ಇದೇ ರೀತಿಯಲ್ಲಿ ಸಾಹಿತ್ಯಕೃಷಿಯ ಉಪಕರಣಗಳಾದ ಪ್ರತಿಮೆ, ರೂಪಕ, ಪ್ರತೀಕಗಳ ಬಳಕೆಯ ಮೂಲಕವೂ ಆ ಲೇಖಕರು ಪಡೆಯುವ ಗೆಲುವುಗಳನ್ನು ಗುರುತಿಸಲು ಸಾಧ್ಯ.

ಮಾಸ್ತಿ ಮತ್ತು ಕುವೆಂಪು ಇಬ್ಬರೂ ಹಲವು ಪ್ರಕಾರಗಳಲ್ಲಿ ಬೇಕಾದಷ್ಟು ಕೆಲಸ ಮಾಡಿದ್ದಾರೆ. ಆದರೆ ಅವರ ಬರವಣಿಗೆಯಲ್ಲಿ ಅತ್ಯುತ್ತಮವಾದುದನ್ನು ಗಮನಿಸದಿದ್ದರೆ, ಅವರಿಗೆ ಅನ್ಯಾಯವಾಗಬಹುದೆಂಬ ತಿಳಿವಳಿಕೆಯಿಂದ ಇಲ್ಲಿ ಮಾಸ್ತಿಯವರ ಸಣ್ಣಕಥೆಗಳು ಮತ್ತು ಕುವೆಂಪುರವರ ಕಾದಂಬರಿಗಳನ್ನು ಪರಿಶೀಲನೆಗೆಂದು ಆರಿಸಿಕೊಳ್ಳಲಾಗಿದೆ.

2

ಇನ್ನುಮುಂದೆ ನಾನು ಮಂಡಿಸುವ ಕೆಲವು ಸಂಗತಿಗಳು, ಇದುವರೆಗೆ ನಾನು ಪರಿಚಯ ಮಾಡಿಕೊಟ್ಟ ವ್ಯವಸ್ಥಿತವಾದ ದಾರಿಯ ಫಲಿತಾಂಶದ ಸಾರಾಂಶಗಳೇ ಹೊರತು ನಾನು ತುಳಿದ ನೆಲದ ಸಮಗ್ರ ಪರಿಚಯವಲ್ಲ. ಇಲ್ಲಿನ ಪ್ರತಿಯೊಂದು ನಿದರ್ಶನಕ್ಕೂ ಸರಿಸಮಾನವಾದ ಹಲವು ನಿದರ್ಶನಗಳನ್ನು ಸಾಧಿಸಲು ಸಾಧ್ಯ.

೧. ಮಾಸ್ತಿಯವರು ಬರೆದಿರುವ ಸುಮಾರು ನೂರರಷ್ಟು ಕಥೆಗಳಲ್ಲಿ ಅರ್ಧದಷ್ಟು ತಮ್ಮ ವಸ್ತುವಿಗಾಗಿ ಚರಿತ್ರೆ ಮತ್ತು ಪುರಾಣಗಳನ್ನು ಆಶ್ರಯಿಸುತ್ತವೆ. ದಕ್ಷಿಣ ಅಮೇರಿಕಾದಿಂದ ಹಿಡಿದು ಬೆಬಿಲೋನಿನವರೆಗೆ ಹಲವು ಭೂ ಪ್ರದೇಶಗಳು, ವೇದಗಳ ರಚನೆಯಾದಾಗಿನಿಂದ ಹಿಡಿದು ಇಂದಿನವರೆಗೆ ಹಲವು ಕಾಲಗಳು ಅವರ ಕೃತಿಯೊಳಗೆ ಪ್ರತ್ಯಕ್ಷವಾಗುತ್ತವೆ. ಸಾಮಾಜಿಕವೆನ್ನಬಹುದಾದ ಕಥೆಗಳು ಕೂಡ ಹಲವು ನಿರೂಪಕರ ಜಾಲದ ಮೂಲಕ

ಸೋಸಿಬಂದು, ಕಥೆ ನಡೆದ ಸಮಯ, ಅದನ್ನು ಬರೆದ ಸಮಯ ಹಾಗೂ ಅದನ್ನು ಓದುತ್ತಿರುವ ಕಾಲದ ನಡುವೆ ಒಂದು ಅಂತರವನ್ನು ಉಳಿಸಿಕೊಳ್ಳುವ ವಿಷಯವನ್ನು ವಿಮರ್ಶಕರು ಈಗಾಗಲೇ ಗಮನಿಸಿದ್ದಾರೆ.

ಇಲ್ಲೆಲ್ಲ ಎಡೆಬಿಡದೆ ನಡೆಯುವುದು ಕಥೆಗಾರನ ಸ್ವಂತ ಅನುಭವದ ಅಧಿಕೃತತೆಯನ್ನು ಬೇಕೆಂದೇ ಅಲ್ಲಗಳೆದು, ಅವುಗಳಿಗೆ ಅವನ ಸ್ವಂತ ಪ್ರತಿಕ್ರಿಯೆಗಳ ಜಗತ್ತನ್ನು ಮೀರಿ ನಿಂತಂತೆ ಕಾಣುವ ಬೇರೆಯದೇ ಅಸ್ತಿತ್ವವನ್ನು ಕೊಡುವ ಪ್ರಯತ್ನ. ಇಷ್ಟೇ ಮುಖ್ಯವಾಗಿ ಕಥೆ ನಡೆಯುವ ಸ್ಥಳ – ಕಾಲಗಳ ಅಧಿಕೃತತೆಯನ್ನು ಅಲ್ಲಿನ ವಿವರಗಳ ಐಂದ್ರಿಯಿಕವಾದ ವರ್ಣನೆಯ ಮೂಲಕ ಸಾಧಿಸುವ ಯಾವುದೇ ಪ್ರಯತ್ನವನ್ನು ಕಥೆಗಾರರು ಮಾಡುವುದಿಲ್ಲ. ಎಂದರೆ ಮಾಸ್ತಿಯವರಿಗೆ ಮುಖ್ಯವಾಗುವುದು, ಕಥೆಯೊಳಗಿನ ಘಟನೆಗಳ ಜೋಡಣೆಯ ಮೂಲಕ, 'ತಾನು' ಓದುಗರಿಗೆ ಮನವರಿಕೆ ಮಾಡಿಕೊಡಲು ಬಯಸುವ ದರ್ಶನವೇ ಹೊರತು, ಆ ವಿವರಗಳ ಮೂಲಕ ತನ್ನಿಂದ ತಾನೇ ಮೂಡಿಬರಬಹುದಾದ ಅನುಭವಗಮ್ಯವಾದ ಸತ್ಯವಲ್ಲ. ಎಂದರೆ ಅವರ ಕಥೆಗಳಲ್ಲಿ ನೂರಕ್ಕೆ ತೊಂಬತ್ತು, ಅವರು ನೀಡಲು ಬಯಸುವ ದರ್ಶನಕ್ಕೆ ನಿದರ್ಶನಗಳಾಗಿ ರೂಪಿತವಾಗಿರುತ್ತವೆ. ಕಾವ್ಯಮೀಮಾಂಸೆಯ ಪರಿಭಾಷೆಯಲ್ಲಿ ಹೇಳುವುದಾದರೆ, ಇಡೀ ಕಥೆಯೇ ಬೇರೆ ಏನಕ್ಕೋ ದೃಷ್ಟಾಂತವಾಗಿ ಬಿಡುವ ಪ್ರಬಂಧ ಧ್ವನಿಯ ಮಾದರಿ ಮಾಸ್ತಿಯವರದು.ಹತ್ತು ಹಲವು ಕಥೆಗಳ ಮೂಲಕ ಹೀಗೆ ಮಂಡಿತವಾಗುವ ಕಥೆಗಾರನ ದರ್ಶನವು ಜೀವನವನ್ನು ಕುರಿತ ಅವರ ನಿಲುವುಗಳ ಬಣ್ಣದ ಎಳೆಗಳನ್ನು ಹೆಣೆದು ಮಾಡಿದ ಹಗ್ಗವಾಗಿರುತ್ತದೆ. ಮಾಸ್ತಿಯವರ ಪರವಾಗಿ ಹೇಳಬೇಕಾದ ಮಾತೆಂದರೆ, ಬುದ್ಧಿಪೂರ್ವಕವಾಗಿ, ಹೊರಜಗತ್ತಿನಿಂದ ಆಯ್ದುಕೊಂಡ ಘಟನೆಯೊಂದರ ಮೂಲದ್ರವ್ಯಕ್ಕೆ ಕಲಾಕೃತಿಯ ಆಕಾರವನ್ನು ಕೊಡುವ ಪ್ರತಿಭೆ ಅವರಿಗೆ ಇತ್ತೆನ್ನುವುದು. ಆದರೆ ಅವರ ಯಾವುದೇ ಕಥೆಯಲ್ಲಿ ಈ ದಾರ್ಶನಿಕ ತಿಳುವಳಿಕೆಯು ಎಷ್ಟು ನಿಚ್ಚಳವಾಗಿ ಅಸಂದಿಗ್ಧವಾಗಿ ಮೂಡುವುದೆಂದರೆ ಅಲ್ಲಿ ಸಂವಹನದ ಸಮಸ್ಯೆಗಳಿರುವುದಿಲ್ಲ. ಕಥೆಯು ನೀಡುವ ಅನುಭವವು ನಿಗೂಢವೆಂದಾಗಲೀ, ಅಸಂಭಾವ್ಯವೆಂದಾಗಲೀ ತೋರುವುದಿಲ್ಲ. ಹೆಚ್ಚೆಂದರೆ ಎಷ್ಟೊಂದು ಸಂಕೀರ್ಣವಾದ ವಿಷಯವು ಎಷ್ಟು ಸರಳವಾಗಿ ನಿರೂಪಿತವಾಗಿದೆಯಲ್ಲಾ ಎಂದು ವಿಸ್ಮಯವಾಗಬಹುದು. ಆದರೆ ಮಾಸ್ತಿಯವರ ಕಥೆಗಳ ಲೋಕವು ಸದಾ ಅವರಿಂದ, ಅವರ ವೈಚಾರಿಕ ಅಗತ್ಯಗಳಿಗೆ ತಕ್ಕಂತೆ ನಿಯಂತ್ರಿತವಾಗಿರುತ್ತದೆ. ಓದುಗನಿಗೆ ಆ ಬಗ್ಗೆ ಅನುಮಾನವೂ ಬರದಷ್ಟು ಜಾಣತನದಿಂದ ನಿಯಂತ್ರಿತವಾಗಿರುತ್ತದೆ. ಉದಾಹರಣೆಗೆ ಅತ್ಯಂತ ಪ್ರಸಿದ್ಧವಾದ ಗೌತಮ ಹೇಳಿದ ಕಥೆಯಲ್ಲಿ ಕುಲಪತಿ ಕಣ್ವರು ತಾವು ಬದುಕಿದ, ಗೌತಮಿಗೆ ಬೋಧಿಸಿದ ಸಂಯಮ ಸಹಿತವಾದ ಅಖಂಡ ಬ್ರಹ್ಮಚರ್ಯದ ಜೀವನವೇ ಸರಿಯೆಂಬ ಲೇಖಕರ ನಿಲುವನ್ನು ಬಹುಪಾಲು ಓದುಗರು ಮರುಮಾತಿಲ್ಲದೆ ಒಪ್ಪಿಕೊಂಡು ಬಿಡುತ್ತಾರೆ. ಅವರಿಬ್ಬರಿಗೂ ತೆರೆದಿದ್ದ ಇನ್ನೊಂದು ಸಾಧ್ಯತೆಯಾದ ವೈವಾಹಿಕ ಜೀವನದ ಅಪೇಕ್ಷಣೀಯತೆಯ ಕಡೆಗೆ ನಮ್ಮ ಗಮನ ಹರಿಯದಷ್ಟು ನಿಪುಣತೆಯಿಂದ ಕಥೆಯನ್ನು ಕಟ್ಟಲಾಗಿರುತ್ತದೆ. ಹಾಗೆಯೇ ಉಗ್ರಪ್ಪನ ಉಗಾದಿಯಂಥ ಕಥೆಯಲ್ಲಿ ಹಳ್ಳಿಯೊಂದರ ಪಟೇಲನು ಪಡುವ ಕಷ್ಟ, ತೋರಿಸುವ ಒಳ್ಳೆಯತನ, ಮಾಡುವ ತ್ಯಾಗಗಳ ಮೇಲೆ ಲೇಖಕರ ಸರ್ಚ್‌ಲೈಟ್ ಬೀಳುವಂತೆ, ಅದೇ ಹಳ್ಳಿಯ

ವರ್ಗಸಂಬಂಧಗಳ ವಾಸ್ತವತೆಯ ಕಡೆಗೆ ಹರಿಯುವುದಿಲ್ಲ. ಹಲವು ನಿದರ್ಶನಗಳಿಂದ ಸಮರ್ಥಿಸಬಹುದಾದ ಸತ್ಯವೆಂದರೆ ಮಾಸ್ತಿಯವರು ಕಾಣುವ, ಕಂಡರಿಸುವ ವಾಸ್ತವವು ಅವರ ವೈಚಾರಿಕತೆಯಿಂದ ನಿಯಂತ್ರಿತವಾದುದು ಹಾಗೂ ರೂಪಿತವಾದುದು.

ಇದರೊಂದಿಗೆ ಕುವೆಂಪುರವರ ಕಾದಂಬರಿಗಳ ಜಗತ್ತನ್ನು ಹೋಲಿಸಿ ನೋಡೋಣ. ಅದು ನೂರಕ್ಕೆ ನೂರರಷ್ಟು ಕಾಲ–ದೇಶ–ಸಂದರ್ಭ ಬದ್ಧವಾದುದು. ಪ್ರತಿಯೊಬ್ಬ ವ್ಯಕ್ತಿ, ಕ್ರಿಯೆ ಮತ್ತು ಸನ್ನಿವೇಶಗಳು ಪ್ರತ್ಯಕ್ಷವಾಗುವುದು ತಮ್ಮೆಲ್ಲ ಐಂದ್ರಿಯಿಕವಾದ ವಿವರಗಳೊಂದಿಗೆ. ಇಡೀ ಕಾದಂಬರಿಗಳು ಮಲೆನಾಡಿನ ಕೆಲವು ಹಳ್ಳಿಗಳು ಹೆಚ್ಚೆಂದರೆ ಒಂದು ಊರಿನ ಪರಿಧಿಯಾಚೆ ಒಂದಿಂಚಿನಷ್ಟು ಚಲಿಸುವುದಿಲ್ಲ. ಆದರೆ ಆ ಹಳ್ಳಿಗಳು ತಮ್ಮನ್ನು ಕ್ರಮೇಣ ಬದಲಾವಣೆಯ ಬಿರುಗಾಳಿಗೆ ಒಡ್ಡಿಕೊಂಡಿರುವ ರೀತಿಯು ನಮಗೆ ಮನದಟ್ಟಾಗುತ್ತದೆ. ಕಾದಂಬರಿಕಾರರು ನಮಗೆ ನೀಡುವ ಸಂದೇಶವೆಂದು ಅಲ್ಲ, ಬದಲಾಗಿ ಕೃತಿಯ ವಿವರಗಳ ಮೂಲಕ ಅಲ್ಲಿ ಮೈಪಡೆಯುವ ಸತ್ಯವೆಂದು. ತನ್ನೆಲ್ಲ ಓರೆಕೋರೆಗಳೊಂದಿಗೆ, ಚಲನೆಯ ಪರಿವರ್ತನೆಯ ಕ್ರಿಯೆಯಲ್ಲಿ ಮಗ್ನವಾಗಿರುವ ಸಮಗ್ರ ಸಮುದಾಯವನ್ನು ಕಾದಂಬರಿ ಕಾರನೊಂದಿಗೆ ನಾವು ಸಂಧಿಸುತ್ತೇವೆ. ಅಲ್ಲಿ ಮಂಡಿತವಾಗುವ ಹಲವಾರು ಜೀವನ ಕ್ರಮಗಳಲ್ಲಿ ಯಾವುದೋ ಒಂದು ಉಳಿದವುಗಳಿಗಿಂತ ಹೆಚ್ಚು ಸ್ವೀಕಾರಾರ್ಹವೆಂಬ ಧೋರಣೆಯನ್ನು ಕಾದಂಬರಿಕಾರರು ಎಲ್ಲಿಯೂ ತೋರಿಸುವುದಿಲ್ಲ. **ಕಾನೂರು ಹೆಗ್ಗಡಿತಿ**ಯಲ್ಲಿ ಕನಿಷ್ಠ ಪಕ್ಷ ಹೂವಯ್ಯನ ಮೂಲಕ ಪ್ರತಿಪಾದಿತವಾಗುವ ಜೀವನಮಾರ್ಗವೇ ಉತ್ತಮವೆಂಬ ಹುಸಿ ತಿಳಿವಳಿಕೆಗಾದರೂ ಅವಕಾಶವಿದೆ. (ಹುಸಿ ಏತಕ್ಕೆಂದರೆ, ಕಾದಂಬರಿಯಲ್ಲಿ ಹೂವಯ್ಯನ ಬಗ್ಗೆ ಕೂಡ ಕಾದಂಬರಿಕಾರರು ವಿಮರ್ಶಾತ್ಮಕ ಧೋರಣೆಯನ್ನು ತಳೆದಿರುವುದಕ್ಕೆ ನಿದರ್ಶನಗಳು ದೊರೆಯುತ್ತವೆ. ಅದೂ ಅಲ್ಲದೆ ತನ್ನ ಬದುಕಿನ ಪ್ರಮುಖ ಮನುಷ್ಯ ಸಂಬಂಧಗಳಲ್ಲಿ ಹೂವಯ್ಯನು ಪಡೆಯುವ ಸೋಲುಗಳು ಹಾಗೂ ಅವನ ಒಳಸರಿತಗಳು *(withdrawls)* ಪರೋಕ್ಷವಾಗಿ ಅವನ ಜೀವನಕ್ರಮದ ವಿಮರ್ಶೆಯೂ ಆಗಿವೆ.) ಎರಡನೆಯ ಕಾದಂಬರಿ ಯಲ್ಲಂತೂ ಅದಕ್ಕೂ ಅವಕಾಶವಿಲ್ಲ. ಹಾಗೆ ನೋಡಿದರೆ **ಹೆಗ್ಗಡಿತಿ**ಯಲ್ಲಿ ರೂಕ್ಷವೆಂದೋ, ಅನಾಗರಿಕವೆಂದೋ (ಹೂವಯ್ಯನಿಂದ, ನಿರೂಪಕನಿಂದ ಅಲ್ಲ) ನಿರೂಪಿತವಾದ ಜೀವನಕ್ರಮಗಳೂ ಎರಡನೆಯ ಕೃತಿಯಲ್ಲಿ ಯಾವ ಭಿಡೆಯೂ ಇಲ್ಲದೆ ಮಂಡಿತವಾಗಿರುವುದನ್ನು ಗಮನಿಸಬಹುದು. ಅವೈದಿಕವಾದ ಜೀವನ ವಿವರಗಳ ಬಗೆಗಿನ ಆಕರ್ಷಣೆ–ವಿಕರ್ಷಣೆಗಳ ದ್ವಂದ್ವ ಮತ್ತು ನೈಚ್ಯಾನುಸಂಧಾನವು ಕ್ರಮೇಣ ಕರಗಿ ಹೋಗಿ ಶೂದ್ರ ಜೀವನಕ್ರಮದ ಮುಕ್ತ ಸ್ವೀಕಾರವು ಕುವೆಂಪುರವರ ಬೆಳವಣಿಗೆಯ ಒಂದು ಮುಖ್ಯ ನೆಲೆಯೆಂದೇ ಹೇಳಬೇಕು.

ಅದು ಹಾಗಿರಲಿ, ಈ ಹೋಲಿಕೆಯಿಂದ ಸ್ಪಷ್ಟವಾಗುವಂತೆ, ಕುವೆಂಪುರವರು ಯಾವುದೋ ಒಂದು ಜೀವನದರ್ಶನವನ್ನು ಪೂರ್ವಪಕ್ಷವಾಗಿಟ್ಟುಕೊಂಡು, ಅದನ್ನು ನಿಜ ಮಾಡಲೆಂದು ತಮ್ಮ ಕಥಾ ಜಗತ್ತನ್ನು ಕಟ್ಟಿಕೊಡುವುದಿಲ್ಲ. ಬದಲಾಗಿ ತಮ್ಮ ಪಾತ್ರಗಳ ಮೇಲಿನ ಕಡಿವಾಣವನ್ನು ಸಡಿಲು ಮಾಡಿ, ಅವು ತಮ್ಮ ತಮ್ಮ ಅಂತಃಸತ್ವಗಳು ಕರೆದೊಯ್ಯುವ ದಾರಿಯಲ್ಲಿ, ಅಡ್ಡಿ ಇಲ್ಲದೆ ಚಲಿಸಬಿಡುತ್ತಾರೆ. ಆದರೆ ಯಾವುದೇ ಸಂದರ್ಭದಲ್ಲಿ

ಇರಬಹುದಾದ ಹಲವಾರು ಸಾಧ್ಯತೆಗಳಲ್ಲಿ ಒಂದು ಪಾತ್ರವು ಮಾಡುವ ಆಯ್ಕೆಯು, ಆ ಪಾತ್ರದ ವ್ಯಕ್ತಿ ವಿಶಿಷ್ಟತೆಯಿಂದ ಹೇಗೋ ಹಾಗೆಯೇ, ತಮ್ಮ ವರ್ಣ–ವರ್ಗಗಳ ಇತಿಹಾಸ ದಲ್ಲಿನ ನಿರ್ದಿಷ್ಟ ಹಂತಕ್ಕೆ ಸಹಜವಾದ ಪರಿಮಿತಿಗಳಿಂದಲೂ ನಿಯಂತ್ರಿತವಾಗಿದೆಯೆಂಬ ಸತ್ಯವನ್ನು ಕುವೆಂಪುರವರು ತಪ್ಪದೇ ತೋರಿಸುತ್ತಾರೆ. ಎಂದರೆ ಪೀಂಚಲುಗೆ ಇರುವಂತಹ ಹಿನ್ನಲೆಯಿರುವವರೆಲ್ಲರೂ ಅವಳ ಹಾಗೆ ವರ್ತಿಸದೆ ಇರಬಹುದು. ಆದರೆ ಸ್ವತಃ ಪೀಂಚಲು ಕೂಡ ತಿಮ್ಮಿಯಂತಾಗಲೀ ಅಥವಾ ಚೆನ್ನಮ್ಮನಂತಾಗಲೀ ವರ್ತಿಸಲಾರಳು. ಹೀಗೆ ಕುವೆಂಪು ರವರ ಪಾತ್ರಗಳು ಏಕಕಾಲದಲ್ಲಿ ಪ್ರಾತಿನಿಧಿಕತೆ ಮತ್ತು ವೈಯಕ್ತಿಕತೆಗಳೆರಡನ್ನೂ ರೂಢಿಸಿಕೊಳ್ಳುವುದರಿಂದ ಸಂಕೀರ್ಣವಾಗುತ್ತವೆ. ಒಂದು ನಿರ್ದಿಷ್ಟವಾದ ಸನ್ನಿವೇಶದಲ್ಲಿ ಗುತ್ತಿಯು ಹೇಗೆ ವರ್ತಿಸುವನೆನ್ನುವುದು ಕಾದಂಬರಿಕಾರರಿಗಿರಲಿ ಸ್ವತಃ ಗುತ್ತಿಗೇ ಗೊತ್ತಿರು ವುದಿಲ್ಲ. ಆದ್ದರಿಂದಲೇ ಕುವೆಂಪುರವರದು ವಿವೃತವಾದ ಪಾತ್ರಗಳ ಜಗತ್ತು *(Open ended Characters).*

೨. ಇನ್ನು ಮುಂದೆ ಈ ಲೇಖಕರು ಸೃಷ್ಟಿಸುವ ಪಾತ್ರಗಳನ್ನು ಬೇರೊಂದು ದಿಕ್ಕಿನಲ್ಲಿ ಪರೀಶೀಲಿಸೋಣ. ಶ್ರೀ ರಾಜೇಂದ್ರ ಚೆನ್ನಿಯವರು ತಮ್ಮ ಲೇಖನವೊಂದರಲ್ಲಿ ಸಮರ್ಥವಾಗಿ ತೋರಿಸಿಕೊಟ್ಟಿರುವಂತೆ (**ಅಧ್ಯಯನ** ೧೯೮೭) ಮಾಸ್ತಿಯವರ ಕಥೆಗಳ ಒಂದು ಸರ್ವಸಾಮಾನ್ಯ ಲಕ್ಷಣವೆಂದರೆ ಅಲ್ಲಿರುವ ಸಾಮಾಜಿಕತೆಯ ಗೈರುಹಾಜರಿ. ಇದು ಬೀಸುಮಾತಿನಂತೆಯೂ ವಿವರಣೆಯನ್ನು ಬೇಡುವಂತೆಯೂ ತೋರುತ್ತದೆ.

ಮಾಸ್ತಿಯವರ ಬಹುಪಾಲು ಕಥೆಗಳಲ್ಲಿ, ಯಾವುದೋ ಒಂದು ಪಾತ್ರದ ಒಂದು ವರ್ತನೆಯನ್ನು ಒಟ್ಟು ಸಮುದಾಯದ ನಡವಳಿಕೆಯೊಂದಿಗೆ ಮುಖಾಮುಖಿಯಾಗಿಸುವ ಪ್ರಯತ್ನವಿರುತ್ತದೆ. ಸಹಜವಾಗಿಯೇ ಆ ಪಾತ್ರವು ಕಥೆಯ ಕೇಂದ್ರವಾಗುತ್ತದೆ. ವೆಂಕಟಿಗನಿರಲಿ ನಿಜಗಲ್ಲಿನ ರಾಣಿಯಿರಲಿ, ಅಥವಾ ಗೌತಮಿಯಿರಲಿ ಅಂಥ ಪಾತ್ರವು ಕಥೆಗಾರನು ನಿಜ ಜೀವನದಲ್ಲಿ ಬಯಸುವ, ಆರಾಧಿಸುವ ವರ್ತನೆಯನ್ನು ಒಳಗೊಂಡಿರುತ್ತದೆ. ಅಥವಾ ತನ್ನೊಳಗಾದ ಬೆಳವಣಿಗೆಗಳ ಫಲವಾಗಿ ಅಂಥದೊಂದು ಆದರ್ಶ ಸ್ಥಿತಿಯನ್ನು ತಲುಪುತ್ತದೆ. (**ಸುಬ್ಬಣ್ಣ, ಶೇಷಮ್ಮ** ಇತ್ಯಾದಿ). ಗೌತಮಿ, ಶಕುಂತಲೆಯಂಥವರಲ್ಲಿ ಇಂಥದೊಂದು ಆದರ್ಶದ ಕಡೆಗೆ ಬೆಳೆಯುವ ಪ್ರಕ್ರಿಯೆ ಮತ್ತು ಫಲಿತಾಂಶಗಳೆರಡೂ ಮಂಡಿತವಾಗಿದ್ದರೆ, ಉಗ್ರಪ್ಪ, ಕಣ್ಣ ಮುಂತಾದವರಲ್ಲಿ ಫಲಿತಾಂಶವು ಮಾತ್ರ ಕಂಡುಬರುತ್ತದೆ.

ಅದು ಏನೇ ಇರಲಿ, ಕಥೆಗಾರರ ಒಲವಿರುವುದು, ತಮ್ಮೆಲ್ಲ ಮಿತಿಗಳನ್ನು ಮೀರಿ ವೈಯಕ್ತಿಕವಾದ ಎತ್ತರಗಳನ್ನು ತಲುಪುವ ಇಂಥ ಪಾತ್ರಗಳ ಕಡೆಗೇ ವಿನಾ, ಇವರು ಬದುಕುವ ಸಾಮಾನ್ಯರಿಂದಲೇ ನಿಬಿಡವಾದ ಸಮಾಜದ ಕಡೆಗೆ ಅಲ್ಲ. ಎಂದರೇನಾಯಿತು? ಮಾಸ್ತಿಯವರು ಒಂದು ಸಮುದಾಯದ ಸಾರ್ಥಕತೆಯನ್ನು ಕಾಣುವುದು ಅದರ ಶಿಖರಗಳಲ್ಲಿಯೇ ಹೊರತು ಸಮತಲ ಸಾಮಾನ್ಯತೆಯಲ್ಲಿ ಅಲ್ಲ. ಒಂದು ಹೆಜ್ಜೆ ಮುಂದೆ ಹೋಗಿ, ಅಂಥ ಅಸಾಮಾನ್ಯ ಪಾತ್ರಗಳ ಘನತೆಯು ಅವುಗಳಿಗೆ ಹೇಗೆ ಬಂತು? ಅದು ಅವರಿಗೆ ಒಂದು ಸಂಸ್ಕೃತಿಯಿಂದ,

ಘನವಾದ ಪರಂಪರೆಯಿಂದ ದತ್ತವಾಗಿದೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಂಡಾಗ ನಮಗೆ ದೊರೆಯುವ ಉತ್ತರವು ನಕಾರಾತ್ಮಕವಾಗಿಯೇ ಇರುತ್ತದೆ. ಏಕೆಂದರೆ ಅದೇ ಹಿನ್ನೆಲೆಯಲ್ಲಿ ಚಿಮ್ಮಿದ ಬೇರೆ ಹಲವಾರು ಪಾತ್ರಗಳು ಮಾಸ್ತಿಯವರು ಆರಾಧಿಸುವ ಘನತೆಗೆ ವಾರಸುದಾರರಾಗಿರುವುದಿಲ್ಲ. ಆದರೆ ಇಂಥ ಮಾದರಿ ಪಾತ್ರಗಳಿಗಿರುವ ಶಕ್ತಿಯನ್ನು ಮಾಸ್ತಿಯವರು ಉತ್ಪ್ರೇಕ್ಷಿತವಾಗಿ ನೋಡುತ್ತಾರೆ. ಆ ಪಾತ್ರಗಳ ವರ್ತನೆಯು ಇಡೀ ಸಮುದಾಯಕ್ಕೆ, ಜೀವನ ಕ್ರಮಕ್ಕೆ ಎಲ್ಲ ಆತಂಕಗಳನ್ನೂ ಮೀರಿ ನಿಲ್ಲಬಲ್ಲ ಧಾರಣಸಾಮರ್ಥ್ಯವನ್ನು ಕೊಡಬಲ್ಲುದೆಂಬ ತಪ್ಪು ತಿಳುವಳಿಕೆಯು ಅವರಿಗೆ ಹುಸಿ ಸಮಾಧಾನವನ್ನು ನಿರಾತಂಕ ಸ್ಥಿತಿಯನ್ನು ಕೊಡುತ್ತದೆ. ಪುರಾಣ, ಇತಿಹಾಸ ಮತ್ತು ತಮ್ಮ ಪೂರ್ವ ತಾರುಣ್ಯ ಕಾಲದ ಸಮಾಜದಲ್ಲಿ ಇಂಥ ಪಾತ್ರಗಳನ್ನು ಹುಡುಕಿ ಸೃಷ್ಟಿಸುವ ಮೂಲಕ, ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಎತ್ತಿಹಿಡಿಯುವ ಮಾಸ್ತಿಯವರು, ಈ ಕಾಲದ ಸಮಾಜದ ಚಿತ್ರಣದಲ್ಲಿ ತೊಡಗಿದಾಗಲೂ ಆಂಶಿಕ ಗ್ರಹಿಕೆಯನ್ನೇ ತೋರಿಸುತ್ತಾರೆ. ತಮ್ಮ ದೃಷ್ಟಿಯಲ್ಲಿ ಪತನೋನ್ಮುಖವಾದ ಈ ಸಮುದಾಯದ ಸಂಕೀರ್ಣಗ್ರಹಿಕೆಯ ಬದಲು, ಅಂತಹ ಸನ್ನಿವೇಶದಲ್ಲೂ ಟಾಂಗಾ ಹುಸೇನ, ಚಟ್ಟೇಕಾರ ತಾಯಿ, ಅರ್ವಾಚೀನ ಆಂಗ್ಲ ಕಣ್ವ ಮುಂತಾದ ಅಪವಾದಗಳನ್ನು ಹುಡುಕತೊಡಗಿ ಮರಳಿನಲ್ಲಿ ತಲೆ ಮರೆಸಿಕೊಂಡ ಉಷ್ಟ್ರಪಕ್ಷಿಯಾಗುತ್ತಾರೆ. ಒಂದು ಸಂಸ್ಕೃತಿಗೆ ವಾಸ್ತವದಲ್ಲಿ ಇಲ್ಲದ ಧಾರಣಶಕ್ತಿಯನ್ನು ಆರೋಪಿಸುವ ಮೂಲಕ ಅದರ ವಿಕೃತ ವಾಸ್ತವದ ಬಗೆಗೆ ಕುರುಡರಾಗುತ್ತಾರೆ.

ಕುವೆಂಪುರವರ ಆಶಾವಾದದ ಬೇರುಗಳಿರುವುದು, ಇಂಥ ಆದರ್ಶ ವ್ಯಕ್ತಿಗಳ ಮೂಲಕ ಪರಂಪರಾಗತವಾದ ಸಮಾಜಕ್ಕೆ ಒದಗಿ ಬರುವ ಧಾರಣಶಕ್ತಿಯ ಕನವರಿಕೆಯಲ್ಲಿ ಅಲ್ಲ. ಬದಲಾಗಿ ಅವರು ಹಲವಾರು ಹುನ್ನಾರಗಳನ್ನು ಹಾಕಿಕೊಂಡು ಬದುಕನ್ನು ಮುಂದೆ ಸಾಗಿಸಬೇಕಾದ ಸಾಮಾನ್ಯ ಜನರ ಜೀವನ ಪ್ರೇಮದಲ್ಲಿ ಭರವಸೆಯನ್ನು ಕಂಡುಕೊಳ್ಳುತ್ತಾರೆ. ಅವರ ದಲಿತ ಪಾತ್ರಗಳು, ಯಥಾಸ್ಥಿತಿಯು *(Status Quo)* ಹೇಗಿದ್ದರೂ ನರಕವೆಂದು ಮನಗಂಡಿರುವುದರಿಂದಲೇ, ತಮ್ಮ ತಮ್ಮ ವೈಯಕ್ತಿಕ ಪರಿವರ್ತನೆಗಳ ಕಿರುಗಾಳಿಯೇ, ಒಟ್ಟು ಸಮುದಾಯವನ್ನು ಬದಲಾಯಿಸುವ ಬಿರುಗಾಳಿಯಾಗುವ ಕನಸನ್ನು ಕಾಣುತ್ತಾರೆ. ಸ್ವರ್ಗ ಸಾಧ್ಯತೆಗಳ ದಾರಿಯನ್ನು ಧೀರವಾಗಿ ಕ್ರಮಿಸುತ್ತಾರೆ. ಅವರ ಇಂದಿನ ಬದುಕನ್ನು, ಮಧ್ಯಮ ವರ್ಗದ ನಾವು ನಮ್ಮದೇ ಆದ ಸೀಮಿತಗಳ ಮೂಲಕ ನೋಡಿ ನಿರಾಶಾಪರವಾದ ತೀರ್ಮಾನಗಳನ್ನು ತಲುಪುವುದು ಸರಿಯಲ್ಲ. ಕುವೆಂಪುರವರ ಕಾದಂಬರಿಗಳ ಒಟ್ಟು ಸಮುದಾಯವು ಅಂದಿಗಿಂತ ಇಂದು ಹೆಚ್ಚು ಸ್ವಾತಂತ್ರ್ಯ ಮತ್ತು ಸೌಲಭ್ಯಗಳನ್ನು ಪಡೆದುಕೊಂಡು ಪ್ರಗತಿಪರವಾಗಿದೆಯೆಂಬ ಮಾತಿನಲ್ಲಿಯೇ ಸತ್ಯ ಅಡಗಿದೆ. ಕುವೆಂಪುರವರು ಅಂದು ಚಿತ್ರಿಸಿದ ಅನೇಕರಿಗೆ ಇಂದು ತೆರವಾಗಿರುವ ಅನೇಕ ವಿಕಸನ ಸಾಧ್ಯತೆಗಳನ್ನು ಗಮನಿಸಿದಾಗ, ಅವರ ಆಶಾವಾದವು ಹುಸಿಹೋಗಲಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಗುತ್ತಿ, ತಿಮ್ಮಿ, ಐತ– ಪೀಂಚಲು, ಓಬ, ಚೆಲುವಯ್ಯರ ಮೊಮ್ಮಕ್ಕಳು, ಮರಿಮಕ್ಕಳು, ಇಂದಿನ ಸಾಮಾಜಿಕ ಬದುಕಿನಲ್ಲಿ ಹೆಚ್ಚು ಅರ್ಥಪೂರ್ಣವಾದ ಪಾತ್ರ ವಹಿಸುತ್ತಿದ್ದಾರೆ.

ಹಾಗೆ ನೋಡಿದರೆ, ಮಾಸ್ತಿಯವರು ವ್ಯಕ್ತಿಯ ಬದುಕನ್ನು ಶೋಧಿಸಿದಷ್ಟು ಆಳವಾಗಿ ಸಮಾಜದ ಬದುಕನ್ನು ಶೋಧಿಸಲಿಲ್ಲವೆಂದೇ, ಅವರ ಕೊನೆಕೊನೆಯ ದಿನಗಳು ಹಾಗೂ ಕಥೆಗಳು ಅನುಕ್ತವಾದ ದಿಗ್ಭ್ರಮೆಯಲ್ಲಿ ಲೀನವಾಗಿದ್ದವು. ಅದರ ಫಲವಾಗಿಯೇ ಅವರ ಪಾತ್ರವೊಂದು **ಬಾಳಿನ ಚೌಕಾಬಾರ** ಕಥೆಯಲ್ಲಿ ಬರುವ ಕೆಳಕಾಣಿಸಿರುವ ತೀರ್ಮಾನವನ್ನು ತಲುಪುತ್ತದೆ :

> "ಅಜ್ಜಿ ಅನುಭವದಿಂದ ಹೇಳಿದ ಮಾತು. ನನ್ನ ಮನಸ್ಸು ಅದನ್ನು ಒಪ್ಪಿತು. ನಾನು ಚಿಂತಿಸುವುದನ್ನು ಬಿಟ್ಟು ದೇವರದುರಿಗೆ ನಿಂತು ಪ್ರೇರಣೆ ಕೊಡು ಅಂತ ಕೇಳಿದೆ. ಒಂದು ಪ್ರೇರಣೆ ಅಂತ ಕಂಡಿತು. ಅದರಂತೆ ಮಾಡಿದೆ. ಮಗಳ ಮದುವೆ ಆಯಿತು. ಅವರು ಸುಖವಾಗಿದ್ದಾರೆ.
>
> ಅಜ್ಜಿ ಈಗ ಇಲ್ಲ. ಅವರು ಕೊಟ್ಟ ಬುದ್ಧಿವಾದ ಈಗಲೂ ನನ್ನ ಬಾಳಿನ ಬೆಳಕಾಗಿ ನನ್ನನ್ನು ಕಾಯುತ್ತಿದೆ" (**ಮಾಸ್ತಿಯವರ ಸಮಗ್ರ ಕಥೆಗಳು** ; ಭಾಗ ೨; ಪುಟ ೮೮).

ಈ ನಿಲುವು ಸ್ವತಃ ಮಾಸ್ತಿಯವರದು ಹೌದೋ ಅಲ್ಲವೋ ಎನ್ನುವುದಕ್ಕಿಂತ, ಅವರ ಕೃತಿಗಳಲ್ಲಿನ ಅನೇಕ ನಿರೂಪಕರ ನಿಲುವು ಎನ್ನುವುದು ಹೆಚ್ಚು ಮುಖ್ಯವಾಗುತ್ತದೆ.

೩. ಮೂರನೆಯದಾಗಿ ಇದೇ ಹೋಲಿಕೆಯನ್ನು ಪ್ರಸ್ತುತ ಲೇಖಕರು ಆರಿಸಿ ಕೊಂಡಿರುವ ಸಾಹಿತ್ಯ ಪ್ರಕಾರಗಳ ವಿಶೇಷಗುಣಗಳ ದೃಷ್ಟಿಯಿಂದ ಮುಂದುವರಿಸೋಣ. ಕುವೆಂಪುರವರು ತಮ್ಮ ಬರವಣಿಗೆಯ ಮೊದಲ ದಿನಗಳಲ್ಲಿ ಭಾವಗೀತೆ, ಕಥನ ಕವನ, ಸಣ್ಣಕಥೆ ಮುಂತಾದ ಕಡಿಮೆ ಗಾತ್ರದ ಸಾಹಿತ್ಯ ಪ್ರಕಾರಗಳನ್ನು ಆರಿಸಿಕೊಂಡರು. ಆದರೆ ಅವರು ಕ್ರಮೇಣ ಅಪಾರವಾದ ವ್ಯಾಪ್ತಿ ಹಾಗೂ ಸಂಕೀರ್ಣತೆಗೆ ಅವಕಾಶ ಮಾಡಿಕೊಡುವ ಮಹಾಕಾವ್ಯ ಮತ್ತು ಮಹಾಕಾದಂಬರಿಗಳನ್ನು ಆರಿಸಿಕೊಂಡರು. ೧೯೩೦ರ ನಂತರ ಅವರು ಸಣ್ಣಕತೆಗಳನ್ನು ಬರೆದಂತೆ ತೋರುವುದಿಲ್ಲ. ಹಾಗೆಯೇ ಅವರು ಮಹಾಕಾವ್ಯದ ರಚನೆಯ ನಂತರ ಅವರು ಬಿಡಿಕವಿತೆಗಳ ರಚನೆಯಲ್ಲಿ ವಿಶೇಷವಾದ ಪ್ರತಿಭೆಯನ್ನಾಗಲೀ ಆಸಕ್ತಿಯನ್ನಾಗಲೀ ತೋರಿಸಲಿಲ್ಲ. ತಮಗೆ ಸೂಕ್ತವೆನಿಸಿದ ಸಾಹಿತ್ಯ ಪ್ರಕಾರದ ಆಯ್ಕೆಯಲ್ಲಾದ ಈ ಬದಲಾವಣೆಯು *(Shift)* ಕೇವಲ ತಾಂತ್ರಿಕವಾದ ಕಾರಣಗಳನ್ನು ಹೊಂದಿಲ್ಲ. ಅದು ವೈಯಕ್ತಿಕತೆಯಲ್ಲಿ ಲೀನವಾದ ಮನಃಸ್ಥಿತಿಯಿಂದ, ಕ್ರಮೇಣ ಸಾಮಾಜಿಕವಾದ ತಿಳುವಳಿಕೆಯನ್ನು ಹೊಂದುವ, ಅಂಥ ಸಾಮಾಜಿಕ ಅನುಭವಗಳನ್ನು ಕಲೆಯಾಗಿಸುವ ಸಾಮರ್ಥ್ಯದ ಕಡೆಗೆ ಮಾಡಿದ ಪ್ರಯಾಣವನ್ನು ತೋರಿಸುವುದೆಂದು ನನ್ನ ಅಭಿಪ್ರಾಯ. ಮೊದಲನೆಯ ಕಾದಂಬರಿಯಲ್ಲಾದರೂ ಈ ಎರಡು ಸ್ಥಿತಿಗಳ ನಡುವಿನ ಸಂಕ್ರಮಣಾವಸ್ಥೆಯು ಆಗಾಗ ಇಣುಕಬಹುದು. ಆದರೆ **ಮಲೆಗಳಲ್ಲಿ ಮದುಮಗಳು** ಕಾದಂಬರಿಯು, ಹಲವು ವರ್ಗ ವರ್ಣಗಳಲ್ಲಿ ಹರಿದು ಹಂಚಿಹೋಗಿರುವ ಸಮಾಜದ ಛಿದ್ರಗಳು, ಪರಸ್ಪರ ವಿರೋಧಗಳು ಹಾಗೂ ಅವುಗಳ ಚಲನಶೀಲ ನೆಲೆಗಳನ್ನು ಹಿಡಿದಿಡುವ ಪ್ರಯತ್ನದಲ್ಲಿ ಯಶಸ್ವಿಯಾಗುತ್ತದೆ. ಮಾಸ್ತಿಯವರ ಕಥೆಗಳಲ್ಲಿನಂತೆಯೇ ಇಲ್ಲಿಯೂ ನಿರೂಪಕನು ಭಾವುಕನಾಗಿ, ಯಾವುದೋ ಒಂದು ಗುಂಪಿನ ಪರವಾದ ಪಕ್ಷಪಾತದಿಂದ ಮಾತನಾಡುವುದಿಲ್ಲ. ಆದರೆ ಕುವೆಂಪುರವರ ನಿರ್ಮಮತೆಯು ಸಾಮಾಜಿಕ ಸನ್ನಿವೇಶದ ವಿಷಮತೆಗಳನ್ನು ಗ್ರಹಿಸುವ ಕೆಲಸದಲ್ಲಿ ಅಡ್ಡಿಯಾಗುವುದಿಲ್ಲ. ಅವರ

ಸಂದರ್ಭದಲ್ಲಿ ಹೇಳಲೇಬೇಕಾದ ಮಾತೆಂದರೆ, ಏಕಕಾಲದಲ್ಲಿ ಶೋಷಕ ಮತ್ತು ಶೋಷಿತ ಆಗಿದ್ದ ವರ್ಗ ವರ್ಣಗಳ ಹಿನ್ನೆಲೆಯಿಂದ ಬರೆಯುತ್ತಿದ್ದ ಕುವೆಂಪು ತೋರಿಸಿದ ಅತ್ಯಂತ ತೀವ್ರವಾದ ಸ್ವವಿಮರ್ಶೆಯ ನೆಲೆಗಳು. ಟಾಲ್‌ಸ್ಟಾಯ್ ಅಂಥ ಲೇಖಕರಿಗೆ ಮಾತ್ರ ಸಾಧ್ಯವಾದ, ಎಲ್ಲವನ್ನೂ, ಎಲ್ಲರನ್ನೂ, ಅವರವರ ವಾಸ್ತವಕ್ಕೆ ಧಕ್ಕೆ ಬರದಂತೆ ಗ್ರಹಿಸುವ, ಮಂಡಿಸುವ ಕೆಲಸವು ಕುವೆಂಪುರವರಿಗೂ ಸಾಧ್ಯವಾಯಿತು. ಇಂಥದೊಂದು ಸಾಧನೆಗೆ, ಕೇವಲ ಘಟನಾತ್ಮಕವಾದ ಅಥವಾ ಒಂದೆರಡು ಪಾತ್ರಗಳ ಘನತೆ ಅಥವಾ ಪತನವನ್ನು ಹೇಳಬಲ್ಲ ಸಣ್ಣಕಥೆಯಂಥ ಮಾಧ್ಯಮವು ನಿರುಪಯುಕ್ತವೆಂಬ ಸಂಗತಿಯ ಸೃಜನಶೀಲ ಅರಿಯುವಿಕೆಯೇ ಅವರು ಕಾದಂಬರಿಗಳ ಕಡೆಗೆ ಚಲಿಸಲು ಕಾರಣವಾಯಿತು. ತನ್ನೊಳಗೆ ಅಡಗಿದ್ದ, ಸೂಕ್ತವಾದ ಸಾಂಸ್ಕೃತಿಕ ಸನ್ನಿವೇಶಕ್ಕಾಗಿ ಕಾಯುತ್ತಿದ್ದ ಶೂದ್ರಾನುಭವದ ಜಗತ್ತನ್ನು, ಅಂಥ ಸನ್ನಿವೇಶವನ್ನು ತಾವೂ ರೂಪಿಸಿಕೊಂಡು, ಸರಿಯಾದ ರೂಪ ಮತ್ತು ವ್ಯಾಪಕತೆಗಳಲ್ಲಿ ಪ್ರಕಟಿಸಿದ್ದು ಕುವೆಂಪುರವರ ಹೆಗ್ಗಳಿಕೆ.

ಆದರೆ ಸಣ್ಣ ಕಥೆ ಮತ್ತು ಕಥನ ಕವನಗಳಲ್ಲಿ ಮಾಸ್ತಿಯವರು ತೋರಿಸಿದ ಆಸಕ್ತಿಯಾದರೋ ಆಜೀವಪರ್ಯಂತವಾಗಿ ಉಳಿಯಿತು. ಅವರು ಬರೆದ ಕಾದಂಬರಿಗಳಲ್ಲಿ ಎರಡು ಐತಿಹಾಸಿಕವಾಗಿದ್ದು ಮಹಾಕಾವ್ಯವು ಪೌರಾಣಿಕ ವಸ್ತುಗಳನ್ನು ಒಳಗೊಂಡಿರುವುದು ಕೇವಲ ಆಕಸ್ಮಿಕವಲ್ಲ. ಮಾಸ್ತಿಯವರು ಹೆಚ್ಚಾಗಿ ಸಣ್ಣ ಕಥೆಗಳನ್ನು ಆರಿಸಿಕೊಳ್ಳಲು ಕಾರಣವೆಂದರೆ,ಬದುಕನ್ನು ಶೋಧಿಸುವ, ಗ್ರಹಿಸುವ, ಬೆಲೆಕಟ್ಟುವ ಅವರ ಬಗೆಗೆ, ಒಬ್ಬ ವ್ಯಕ್ತಿಯು ತನ್ನ ಜೀವಮಾನದಲ್ಲಿ ಎದುರಿಸಬೇಕಾಗುವ ಆತಂಕಗಳು ಹಾಗೂ ಪ್ರಶ್ನೆಗಳು ಹೆಚ್ಚು ಸೂಕ್ತವಾದ ವಸ್ತುಗಳಾಗಿದ್ದವು. ಮತ್ತು ಅಂಥ ವಸ್ತುಗಳ ನಿರ್ವಹಣೆಗೆ ಸಣ್ಣ ಕಥೆಯೇ ಹೆಚ್ಚು ಸೂಕ್ತವಾದ ಮಾಧ್ಯಮವಾಗಿತ್ತು.

ಆದರೆ ಸಾಮಾನ್ಯವಾಗಿ ನಮ್ಮ ಸಾಹಿತ್ಯದ ಓದು ಕೂಡ, ವ್ಯಕ್ತಿಯನ್ನು ತನ್ನ ಕೇಂದ್ರದಲ್ಲಿ ಹೊಂದಿರುವ, ಮನುಷ್ಯ ಸಂಬಂಧಗಳಲ್ಲಿ ಮಗ್ನವಾಗಿರುವ ಕೃತಿಗಳಿಗೆ ತಕ್ಷಣ ಸ್ಪಂದಿಸಿಬಿಡುತ್ತದೆ. ಕಾಮ, ಸಾವು, ಜೀವನ ಮೌಲ್ಯಗಳಿಗೆ ಸಂಬಂಧಪಟ್ಟ ಸಮಸ್ಯೆಗಳು, ಮಾಸ್ತಿಯವರ ಕಥಾಸಾಹಿತ್ಯದಲ್ಲಿ ಹೇಗೋ ಹಾಗೆಯೇ ನಮ್ಮ ಬದುಕಿನಲ್ಲಿಯೂ ಮುಖ್ಯವೆನಿಸುವದರಿಂದ ಅವು ಎಂದಿಗೂ ತಮ್ಮ ಆಕರ್ಷಣೆಯನ್ನು ಕಳೆದುಕೊಳ್ಳುವುದಿಲ್ಲ.

ಆದರೆ ವೈಯಕ್ತಿಕವಾದ ಸಂಗತಿಗಳನ್ನು ಅವುಗಳಿಗೆ ಕಾರಣವಾದ ಸಾಮಾಜಿಕ ಸಂಬಂಧಗಳ ಹಿನ್ನೆಲೆಯಲ್ಲಿ ರೂಪಿಸಿಕೊಡುವ ಕೃತಿಯು ನಮ್ಮ ಅಂತರಂಗವನ್ನು ಆಳವಾಗಿ ಕಲಕದಿರುವಾಗಲೂ ಮುಖ್ಯವಾಗುತ್ತದೆ. ಕುವೆಂಪುರವರ ಕಾದಂಬರಿಗಳಾದರೂ ವೈಯಕ್ತಿಕತೆ ಹಾಗೂ ಸಾಮಾಜಿಕತೆಗಳೆರಡನ್ನೂ ಅಷ್ಟೇ ಸಮರ್ಥವಾಗಿ ಕಟ್ಟಿಕೊಡುವುದರಿಂದ ಅವುಗಳ ಆಕರ್ಷಣೆಯು ಇಮ್ಮಡಿಯಾಗುತ್ತದೆ.

ಕೊನೆಗೂ ಸಾಹಿತ್ಯ ಕೃತಿಯೊಂದು ಜೀವಂತವಾಗಿ ಉಳಿಯುವುದು, ಹೊಸ ಹೊಸದಾಗಿ ತನ್ನ ಮೋಡಿಗೆ ಒಳಗಾಗುವ ಬೇರೆ ಬೇರೆ ಹಿನ್ನೆಲೆಯ ಓದುಗರು ತನ್ನಲ್ಲಿ ಕಂಡುಕೊಳ್ಳುವ ಅರ್ಥವಂತಿಕೆಯಲ್ಲಿಯೇ. ಕುವೆಂಪುರವರ ಕೃತಿಗಳು ಇಂದು ಗುತ್ತಿ, ಐತ,

ಗಂಗೆ, ಸುಬ್ಬಮ್ಮ, ಲುಂಗೀಸಾಬ ಮುಂತಾದ ಹತ್ತು ಹಲವು ಪಾತ್ರಗಳ ನಿಜವಾದ ಉತ್ತರಾಧಿಕಾರಿಗಳ ಮನಸ್ಸಿನಲ್ಲಿ ಹೊಸ ವ್ಯಾಖ್ಯಾನಗಳನ್ನು ಪಡೆದುಕೊಳ್ಳುತ್ತಿವೆ.

ಹೀಗೆ ಮಾಸ್ತಿ ಮತ್ತು ಕುವೆಂಪು ಇಬ್ಬರೂ ಬೇರೆ ಬೇರೆ ಕಾರಣಗಳಿಗಾಗಿ ನಮ್ಮ ಜನಸಮುದಾಯದ ಮನಸ್ಸಿನಲ್ಲಿ ಬಹುಕಾಲ ಉಳಿಯಲಿದ್ದಾರೆ.

೪. ಇನ್ನು ಮುಂದೆ ಮಾಸ್ತಿ ಮತ್ತು ಕುವೆಂಪುರವರು ಬಳಸಿರುವ ಕನ್ನಡದ ಸ್ವರೂಪ ಮತ್ತು ಅಲಂಕಾರಿಕತೆಯ ಬಗ್ಗೆ ಕೆಲವು ಸಂಗತಿಗಳನ್ನು ಗಮನಿಸೋಣ. ತಮಗೆ ಸುಪರಿಚಿತವಾಗಿದ್ದ, ಮಲೆನಾಡಿನ ಕನ್ನಡದ ಆಡುಮಾತನ್ನು ಕಥೆ, ಕವಿತೆ ಹಾಗೂ ಮಹಾಕಾವ್ಯಗಳಲ್ಲಿ ಬಳಸುವುದು ಸರಿಯೆಂಬ ತೀರ್ಮಾನವನ್ನು ಕುವೆಂಪು ಅವರು ತಲುಪಲೇ ಇಲ್ಲ. ಆದರೆ ಕಾದಂಬರಿಗಳ ಒಡಲಿನಲ್ಲಿ ಹಾಗೆ ಮಾಡುವುದು ಅವರಿಗೆ ಸಾಧ್ಯವಾಯಿತು. ಅಲ್ಲಿಯೂ ಕೂಡ ನಿರೂಪಣೆಯ ಭಾಷೆ ಮತ್ತು ಸಂಭಾಷಣೆಯ ಭಾಷೆಗಳ ನಡುವಿನ ಅಂತರವನ್ನು ಸದಾ ಕಾಯ್ದುಕೊಳ್ಳುವ ಅವರು ಸಂಭಾಷಣೆಯಲ್ಲಿ ಮಾತ್ರ ಪ್ರಾದೇಶಿಕತೆಯನ್ನು ಉಪಯೋಗಿಸಿಕೊಳ್ಳುತ್ತಾರೆ. ಸಂಭಾಷಣೆಗೆಂದು ಕುವೆಂಪುರವರು ಬಳಸುವ ಆಡುಮಾತಿನ ವೈವಿಧ್ಯ ಗೊತ್ತಾಗುವುದು, ಆ ಎಲ್ಲ ಮಾತುಗಳನ್ನು ನಾವು ಓದಿಕೊಂಡಾಗ ಅಲ್ಲ, ಅವು ಆಯಾ ಪಾತ್ರಗಳ ಬಾಯಲ್ಲಿಹೇಗೆ ಕೇಳಿಸಬಹುದೆಂಬುದನ್ನೂ ಊಹಿಸಿಕೊಂಡಾಗ. ವಿದ್ಯಾವಂತ ಒಕ್ಕಲಿಗರು, ಅವಿದ್ಯಾವಂತ ಒಕ್ಕಲಿಗರು, ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದ ಕೂಲಿಯಾಳುಗಳು, ಮುಸ್ಲಿಮರು, ದಲಿತರು, ಪುರೋಹಿತರು ಮುಂತಾದವರೆಲ್ಲ ಮಾತನಾಡುವ ಕನ್ನಡದ ಪ್ರಭೇದಗಳನ್ನೆಲ್ಲ ಎಚ್ಚರದಿಂದ ಗಮನಿಸಿ, ಅವುಗಳನ್ನು ಹಾಗೆಯೇ ಬಳಸಿದಾಗ ಉಂಟಾಗುವುದು ಅಧಿಕೃತತೆ ಮಾತ್ರವಲ್ಲ. ಪ್ರತಿಯೊಂದು ಪಾತ್ರವೂ ತನ್ನ ಭಾಷಾಶಕ್ತಿಯ ಪರಿಮಿತಿಗಳನ್ನು ಮೀರಿಹೋಗುವುದಿಲ್ಲ. ಆದ್ದರಿಂದಲೇ ಅವು ಲೇಖಕನ ಮುಖವಾಣಿಯಾಗುವ ಅಪಾಯದಿಂದ ತಪ್ಪಿಸಿಕೊಳ್ಳುತ್ತವೆ. ಸೂರ್ಯೋದಯವನ್ನು ನೋಡಿದಾಗ ಗುತ್ತಿಯ ಹೆಂಡತಿ ತಿಮ್ಮಿ, ಸುಬ್ಬಣ್ಣ ಹೆಗ್ಗಡೆ ಮತ್ತು ಹೂವಯ್ಯ ತೋರಿಸುವ ಪ್ರತಿಕ್ರಿಯೆಗಳು ಅವರವರ ಅನುಭವ ಲೋಕವನ್ನು ಮೀರದಿರಲು ಸಾಧ್ಯವಾಗುವುದು ಈ ಭಾಷಿಕ ಐಚ್ಛಿಕದಿಂದಲೇ. ಹಾಗೆಯೇ ಕುವೆಂಪುರವರ ನಿರೂಪಣೆಯ ಭಾಷೆ ಕೂಡ ಒಮ್ಮೆ ವರ್ಣನಾತ್ಮಕವಾಗಿ, ಒಮ್ಮೆ ಕಾವ್ಯಾತ್ಮಕವಾಗಿ, ಒಮ್ಮೆ ವಿವರಗಳಲ್ಲಿ ಮಗ್ನವಾಗುತ್ತಾ ಅಚ್ಚಕನ್ನಡವಾಗಿ, ಮತ್ತೊಮ್ಮೆ ಅಮೂರ್ತವಾದ ವಿಚಾರವನ್ನು ಭಾಷೆಯಲ್ಲಿ ಹೇಳಲೆತ್ನಿಸುತ್ತಾ ಸಂಸ್ಕೃತ ಪರವಾಗಿ ಹಲವು ನೆಲೆಗಳನ್ನು ಪಡೆದುಕೊಳ್ಳುತ್ತದೆ. ಇದು ಅವರ ಕವಿತೆಗಳಲ್ಲಿ ಸಾಧ್ಯವಾಗದ ಕಾದಂಬರಿಯದೇ ವಿಶಿಷ್ಟತೆಯಾಗಿದೆ.

ಮಾಸ್ತಿಯವರ ಕಥೆಗಳ ಶೈಲಿಯದು ಬೇರೆಯ ದಾರಿ. ಅವರ ಕಥೆಗಳ ಕನ್ನಡವು ಅರ್ಥವಾಗದೆ ಉಳಿಯಿತು ಎಂದು ಯಾವ ಕನ್ನಡಿಗನೂ ಹೇಳಲಾರ. ಅವುಗಳ ಹಿಂದೆ ಮಿಡಿಯುವುದು, ಯಾವುದೇ ಪಾತ್ರ ಅಥವಾ ಸನ್ನಿವೇಶದ ಅಂತರಂಗವನ್ನು ಅತ್ಯಂತ ಸರಳವಾಗಿ, ಭಾವನೆ ಮತ್ತು ವಿಚಾರಗಳನ್ನು ನಿಯಂತ್ರಿಸಬಲ್ಲ ಮಾತಿನಲ್ಲಿ ಹೇಳಬೇಕೆಂಬ ಹಂಬಲ. ಇದರ ಫಲವಾಗಿ ಚೆನ್ನಮ್ಮ, ಟಾಂಗಾ ಹುಸೇನ, ಉಗ್ರಪ್ಪ ಅವನ ತಾಯಿ, ಶಕುಂತಲೆ, ಗಯಟೆ, ಟಾಲಸ್ಟಾಯ್ ಎಲ್ಲರೂ ಹೆಚ್ಚು ಕಡಿಮೆ ಒಂದೇ ಬಗೆಯ ಸರಳವಾದ ಕನ್ನಡದಲ್ಲಿ

ಮಾತನಾಡುತ್ತಾರೆ. ಆಲೋಚಿಸುತ್ತಾರೆ. ಪ್ರತಿಕ್ರಿಯೆ ತೋರಿಸುತ್ತಾರೆ. ಅಷ್ಟೇ ಅಲ್ಲ ಅವರ ಕಥೆಗಳ ನಿರೂಪಕರು ಉಪಯೋಗಿಸುವ ಭಾಷೆ ಕೂಡ ಹೆಚ್ಚು ಕಡಿಮೆ ಇದೇ ಬಗೆಯದಾಗಿದ್ದು ಪ್ರತಿಯೊಬ್ಬರಿಗೂ ಅರ್ಥವಾಗುತ್ತದೆ.

ಮಾಸ್ತಿಯವರಲ್ಲಿ ಒಂದು ತಾಂತ್ರಿಕ ಅಗತ್ಯವೋ ಎಂಬಂತೆ ಮೂಡಿಬರುವ ಹತ್ತು ಹಲವು ನಿರೂಪಕರ ಜಾಲವಿದೆಯಲ್ಲ, ಅವರೆಲ್ಲರ ಆಲೋಚನೆಯ ನಿರೂಪಣೆಯ ಕನ್ನಡವನ್ನು ಎಚ್ಚರಿಕೆಯಿಂದ ಗಮನಿಸಿದಾಗ, ಅವರೆಲ್ಲರನ್ನೂ ಒಟ್ಟಿಗೆ ಕಟ್ಟಿ ನಿಲ್ಲಿಸಿರುವ ಏಕೈಕ ನಿರೂಪಕ ಸ್ವತಃ ಮಾಸ್ತಿಯವರೇ ಎಂಬ ಸತ್ಯವು ನಮಗೆ ಮನದಟ್ಟಾಗುತ್ತದೆ.

ಹೀಗೆ ಮಾಡುವುದರಿಂದ ಎಲ್ಲ ಮನುಷ್ಯರಿಗೂ ಸಮಾನವಾದ ಅನುಭವ, ಆಲೋಚನೆ ಹಾಗೂ ಭಾವನೆಗಳನ್ನು ಕಥೆಯಾಗಿ ಕಟ್ಟಿಕೊಡುವುದರಲ್ಲಿ ಮಾಸ್ತಿಯವರು ಖಂಡಿತವಾಗಿಯೂ ಯಶಸ್ವಿಯಾದರು. ಆದರೆ ಅವರ ಪಾತ್ರಗಳು ಮೊದಲು ಭಾಷೆಯ ನೆಲೆಯಲ್ಲಿ ಮತ್ತು ಅದರ ಪರಿಣಾಮವಾಗಿ ಇತರ ನೆಲೆಗಳಲ್ಲಿ ತಮ್ಮ ವಿಶಿಷ್ಟತೆಯನ್ನು ಕಳೆದುಕೊಂಡು ಮಾಸ್ತಿಯವರ ಮನೋಲೋಕದಲ್ಲಿ ಚಲಿಸುವ ಪ್ರತಿಮೆಗಳಾದರು. ಇದು ಏಕಕಾಲದಲ್ಲಿ ಲಾಭವೂ ಹೌದು, ನಷ್ಟವೂ ಹೌದು ಎಂಬುದನ್ನು ಈಗಾಗಲೇ ವಿವರಿಸಲಾಗಿದೆ.

೫. ಇಷ್ಟೆಲ್ಲ ಹೇಳಿದ ಮೇಲೆಯೂ ಒಂದು ಪ್ರಶ್ನೆಯನ್ನು ನಾವು ಎದುರಿಸ ಬೇಕಾಗುತ್ತದೆ. ಮಾಸ್ತಿಯವರ ಕಥೆಗಳು ಕುವೆಂಪುರವರ ಕಥೆಗಳಿರಲಿ, ಕನ್ನಡದ ಬೇರೆ ಯಾವುದೇ ಕಥೆಗಾರನ ಕಥೆಗಳಿಗೆ ಹೋಲಿಸಿದಾಗಲೂ ಅತ್ಯುತ್ತಮವೆನ್ನಿಸಲು ಕಾರಣವೇನು ಎನ್ನುವುದೇ ಆ ಪ್ರಶ್ನೆ. ಇದು ಅವರ ಕಲೆಗಾರಿಕೆಯ ರಹಸ್ಯವನ್ನು ಹುಡುಕಬಯಸುವ ಪ್ರಶ್ನೆ. ಅವರ ಕಥೆಗಳು ಓದಿಸಿಕೊಳ್ಳುವ ಒಂದು ರೀತಿಯೆಂದರೆ, ಓದುಗನ ಮೇಲೆ ತಾತ್ಕಾಲಿಕ ವಾಗಿಯಾದರೂ ಮೋಡಿಹಾಕಿ, ಅವನನ್ನು ಒಪ್ಪಿಸಿಕೊಳ್ಳುವ, ಒಲಿಸುವ ಬಗೆ. ಈ ಕಥೆಗಾರನ ಜೀವನಾನುಭವ, ಬದುಕಿನ ಬಗೆಗಿನ ಪ್ರಬುದ್ಧ ಚಿಂತನೆ, ಭಾವನೆ, ವಿಚಾರ ಮತ್ತು ಅನುಭವಗಳನ್ನು ನಮಗೆ ಮುಖಾಮುಖಿಯಾಗಲು ಬಿಡುವ ಶೈಲಿ ಎಷ್ಟು ಸಮರ್ಥವೆಂದರೆ, ವಾಚಕನು ತನ್ನನ್ನು ಮರೆತು ಅದರಲ್ಲಿ ಮುಳುಗುತ್ತಾನೆ. ಯಾವುದೇ ಶ್ರೇಷ್ಠ ಕಲಾಕೃತಿಗಿರುವ ಮೈಮರೆಸುವ ಗುಣ ಇದು. ತನ್ನ ಈ ಸ್ಥಿತಿಯಲ್ಲಿ ಕಲೆಯು ಆದರ್ಶಗಳನ್ನು ನೀಡಬಲ್ಲುದು, ತಾಳ್ಮೆಯನ್ನು ಕಲಿಸಬಲ್ಲುದು, ನಮ್ಮ ಸುತ್ತಲಿನ ಮನುಷ್ಯರು ಬದುಕುವ, ಭಾವಿಸುವ ಬಗೆಯನ್ನು ಕುರಿತು ಒಳನೋಟಗಳನ್ನು ನೀಡುವುದರ ಮೂಲಕ ನಿಮ್ಮನ್ನು ಆರ್ದ್ರರನ್ನಾಗಿ ಮಾಡಬಲ್ಲುದು. ಇದೆಲ್ಲವೂ ಕೇವಲ ಕಲೆಯಲ್ಲ. ಕಲೆಯ ಮೂಲಕ ಓದುಗನ ಮನಸ್ಸನ್ನು ತಲುಪುತ್ತಿರುವ ಹಿರಿಯನೊಬ್ಬನ – ಸಂಪ್ರದಾಯನಿಷ್ಠೆ ಮತ್ತು ಮಾನವೀಯತೆಗಳಿಂದ ಬೆಳಗುತ್ತಿರುವ ಹಿರಿಯನೊಬ್ಬನ – ಅಂತರಂಗ. ಈ ದೃಷ್ಟಿಯಲ್ಲಿ ಮಾಸ್ತಿಯವರ ಕಥೆಗಾರಿಕೆಯು ಸೋದ್ದಿಶ್ಯವಾದುದು. ಅವರೇ ಹೇಳುವಂತೆ:

"ಆ ಉದ್ದೇಶ ಜೀವನ ನನಗೆ ನೀಡಿರುವ ದರ್ಶನವನ್ನು ವಿವರಿಸುವ ಚಿತ್ರಗಳನ್ನು ಕೊಡುವುದು.......... ಇವು ಸತ್ಯವನ್ನು ಬಿಂಬಿಸಿವೆ, ಸ್ಫುಟವಾಗಿವೆ, ಇಷ್ಟೋ ಅಷ್ಟೋ ರಸಾನುಭವವನ್ನು ನೀಡುತ್ತವೆ ಎಂದು ಓದುಗರಿಗೆ ಕಂಡರೆ ನನ್ನ ಕೆಲಸ ಸಾರ್ಥಕ ಆಯಿತು. ಇದರ ಆಚೆಗೆ ಇವನ್ನು ಓದುವವರು ಇವುಗಳಲ್ಲಿ ಜೀವನವನ್ನು ಕುರಿತು ಇಂಥ ಅಂಥ ನೀತಿ ಮುಂತಾದವನ್ನು ನಿರೂಪಿಸುವ ಉದ್ದೇಶ ಇದೆ ಎಂದು ಭಾವಿಸಬಹುದು"

ಈ ಉದ್ದೇಶದಲ್ಲಿ ಮಾಸ್ತಿಯವರು ಯಶಸ್ವಿಯಾಗಿರುವುದು ನಿಜ. ಮುಖ್ಯವಾದ ಸಂಗತಿಯೆಂದರೆ ಅವರು ತಮ್ಮ ಕಲೆಯು ಕಾಣಿಸುವ ಹಲವು ಸತ್ಯಗಳನ್ನು ಕಂಡುಕೊಳ್ಳುವುದು ತನ್ನ ಸ್ವಂತ ಅನುಭವದ ಸಂಗಡ ತಿಕ್ಕಾಟ ಆಡುವುದರಿಂದ ಅಲ್ಲ. ಬದಲಾಗಿ ಬದುಕನ್ನು ಇತರ ಪಾತ್ರಗಳ ಅನುಭವದ ಬೆಂಕಿಯಲ್ಲಿ ಶೋಧಿಸುವುದುರಿಂದ. ಈ ಬಗೆಯೂ ಕನ್ನಡ ಸಾಹಿತ್ಯದ ಸಂಪ್ರದಾಯಕ್ಕೆ ಸಹಜವಾದ ಬಗೆಯೇ. ಪಂಪ, ಕುಮಾರವ್ಯಾಸ, ಹರಿಹರರಂತಹ ಕವಿಗಳು ಕೂಡ ತಾವು ಕಂಡ ಸತ್ಯಗಳನ್ನು ಕವಿತೆಯಲ್ಲಿ ಕಾಣಿಸುವುದು ಅಥವಾ ಕಾಣದ ಸತ್ಯಗಳನ್ನು ಹುಡುಕುವುದು ಅನ್ಯರ ಅನುಭವಲೋಕದ ಮೂಲಕ ತಾನೇ. ಆದ್ದರಿಂದಲೇ ಮಾಸ್ತಿಯವರು ನಮ್ಮ ಪರಂಪರೆಯ ಬಹಳ ಸಮರ್ಥ ಮುಂದುವರಿಕೆ ಆಗುವುದು.

ಇಂಥದೊಂದು ತಿಳಿವಳಿಕೆ ಹಾಗೂ ವಿಧಾನಗಳನ್ನು ಪಡೆದುಕೊಂಡು ನಮ್ಮ ಸಂಸ್ಕೃತಿ ಹಾಗೂ ಧಾರ್ಮಿಕತೆಯ ಹಲವು ಅಂಶಗಳನ್ನು ಸಾರಾಸಗಟಾಗಿ ಒಪ್ಪಿಕೊಂಡು, ಪ್ರತಿಪಾದಿಸುವ ಕೆಲಸ ಕುವೆಂಪು ಅವರಿಗೆ ಸಾಧ್ಯವಾಗಲಿಲ್ಲ. ಅವರು ಒಟ್ಟು ಸಂಸ್ಕೃತಿಯ ಒಂದು ಭಾಗಕ್ಕಾದರೂ ತಮ್ಮ ವೈಯಕ್ತಿಕತೆಯನ್ನು ಮುಖಾಮುಖಿಯಾಗಿಸುವ ಅಗ್ನಿದಿವ್ಯವನ್ನು ಎದುರಿಸಬೇಕಾಯಿತು. ಮೊದಲು ಇದು ಆದರ್ಶಪ್ರಿಯತೆ ಹಾಗೂ ವಾಸ್ತವದ ಉಪೇಕ್ಷೆಯ ಸ್ವರೂಪದಲ್ಲಿ ಕಾಣಿಸಿಕೊಂಡರೂ, ಕ್ರಮೇಣ ಅವರು ಸಾಂಪ್ರದಾಯಿಕ ದೃಷ್ಟಿಕೋನಕ್ಕಿಂತ ಭಿನ್ನವಾದ ನೆಲೆಯಲ್ಲಿ ಸಮಗ್ರ ಬದುಕನ್ನು ನೋಡುವ ಶಕ್ತಿಯನ್ನು ಪಡೆದುಕೊಂಡರು. ಅವರ ಕಾದಂಬರಿಗಳಲ್ಲಿ ಇದು ಸಾಧ್ಯವಾಯಿತು. ಪರ–ವಿರೋಧ ವಹಿಸದೆ, ಎಲ್ಲವನ್ನೂ ಪ್ರೀತಿಯಿಂದ ನೋಡುವ, ಆದರೆ ವ್ಯಕ್ತಿ ಮತ್ತು ಸಮಾಜಗಳಲ್ಲಿ ತಮಗೆ ಕೆಟ್ಟದೆಂದು ತೋರಿದ್ದನ್ನು ಹಾಗೆಯೇ ಚಿತ್ರಿಸುವ ಸಮಚಿತ್ತವನ್ನು ಅವರು ಸಂಪಾದಿಸಿಕೊಂಡರು. ಅವರ ಕೃತಿಗಳು ಯಾವುದೇ ಘೋಷಿತ ಉದ್ದೇಶಕ್ಕೆ ಅಡಿಯಾಳುಗಳಾಗಿ ಕೆಲಸ ಮಾಡುವುದಿಲ್ಲ. ಬದಲಾಗಿ ಅವರು ಪ್ರತಿಯೊಂದು ಪಾತ್ರಕ್ಕೂ ಅದರದರದೇ ಸಾಧ್ಯತೆಗಳ ದಾರಿ ತೆರೆದು ಪ್ರತಿಯೊಬ್ಬ ಓದುಗನಿಗೆ ಅವನವನ ವ್ಯಾಖ್ಯಾನದ ಬಾಗಿಲುಗಳನ್ನು ತೆರೆದಿಡುತ್ತಾರೆ. ಇದು ಕುವೆಂಪು ಅವರ ರೀತಿ.

೬. ಹೀಗೆ ವಿವರಗಳ ಐಂದ್ರಿಯಿಕತೆಯ ದೃಷ್ಟಿಯಿಂದಲೂ ಕುವೆಂಪು ಮತ್ತು ಮಾಸ್ತಿಯವರ ನಡುವೆ ಕೆಲವು ಖಚಿತವಾದ ವ್ಯತ್ಯಾಸಗಳಿವೆ. ಮಾಸ್ತಿಯವರ ಬಹುಪಾಲು ವಿವರಗಳು ಏನು ಆಯಿತು ಎಂದು ಹೇಳುವ ಘಟನಾತ್ಮಕ ನಿರೂಪಣೆಯನ್ನು ಅನುಸರಿಸಿದರೆ, ಕುವೆಂಪುರವರ ಕಾದಂಬರಿಯ ವಿವರಗಳು, ಹೀಗೆ ಆಯಿತು ಎನ್ನುವ ವರ್ಣನಾತ್ಮಕ ನಿರೂಪಣೆಯ ಕಡೆಗೆ ಒಲಿಯುತ್ತವೆ. ಪ್ರಾಯಶಃ ಕುವೆಂಪುರವರ ಸೃಜನಶೀಲ ಜ್ಞಾಪಕಶಕ್ತಿಯು

ಕಣ್ಣು, ಕಿವಿ, ಮೂಗು, ನಾಲಗೆಗಳ ಅನುಭವಗಳನ್ನು ಜೀವಂತವಾಗಿಟ್ಟುಕೊಂಡು, ಮಾತುಗಳ ಮೂಲಕ ಅವನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತದೆ. ಮಾಸ್ತಿಯವರು ಹೀಗೆ ಮಾಡಲಾರರೆಂದಲ್ಲ. ಆದರೆ ಅವರ ಆಯ್ಕೆಯು ನಡೆದ ಘಟನೆಗಳನ್ನು ನೆನಪು ಮಾಡಿಕೊಂಡು ಪುನಃ ಸೃಷ್ಟಿ ಮಾಡುವುದರ ಬದಲಾಗಿ, ತಮ್ಮ ಸಮಗ್ರ ಅನುಭವದ ಬೆಂಬಲದಿಂದ ಕಥೆಯೊಳಗಿನ ಅನುಭವವನ್ನು ಕಟ್ಟಿಕೊಡುವ ಪ್ರಯತ್ನ. ಈ ಮಾತನ್ನು ವಿವರಿಸಲು ಮಾಸ್ತಿಯವರ ಐತಿಹಾಸಿಕ ಕಥೆಗಳನ್ನು ನೆನಪು ಮಾಡಿಕೊಳ್ಳಬಹುದು. ಅಲ್ಲಿನ ಘಟನೆಗಳನ್ನು ಸ್ವತಃ ಮಾಸ್ತಿಯವರು ನೋಡಿರುವುದು ಸಾಧ್ಯವೇ ಇಲ್ಲ. ಅಷ್ಟೇ ಅಲ್ಲ, ಇಪ್ಪತ್ತನೆಯ ಶತಮಾನದ ಮೊದಲ ಭಾಗದ ಮೈಸೂರು ರಾಜ್ಯದಲ್ಲಿ ಮಾಸ್ತಿಯವರು ಆ ಪೌರಾಣಿಕ ಹಾಗೂ ಐತಿಹಾಸಿಕ ಅನುಭವಗಳಿಗೆ ಸಂವಾದಿಯಾದ ಅನುಭವಗಳನ್ನು ಪಡೆದಿರಲೂ ಸಾಧ್ಯವಿಲ್ಲ. ಆದರೆ ಅವರು ಆ ಕಥೆ, ಕಾದಂಬರಿಗಳು ಅಧಿಕೃತವೆಂಬಂತೆ ಚಿತ್ರಿಸುತ್ತಾರೆ. ಅಲ್ಲಿ ನಡೆದಿರುವುದು ಸ್ವತಃ ಮಾಸ್ತಿಯವರ ಜೀವನಾನುಭವ, ವೈಚಾರಿಕತೆಗಳ ಫಲವಾದ ಅನುಭವದ ಮಾರುವೇಷ ತಳೆದ ಸೃಷ್ಟಿಯೇ ಹೊರತು ವಾಸ್ತವದ ಪುನರ್ನಿರ್ಮಾಣವಲ್ಲ. ಮಾಸ್ತಿಯವರ ಕಾದಂಬರಿಗಳ ಅಧಿಕೃತತೆಯನ್ನು ಕುರಿತಂತೆ ನಡೆದಿರುವ ವಾಗ್ವಾದವನ್ನೂ ಈ ನಿಟ್ಟಿನಲ್ಲಿ ಪುನರಾವಲೋಕನ ಮಾಡಬಹುದೆಂದು ತೋರುತ್ತದೆ. ಸ್ವಾನುಭವವೇ ಬಹುಮಟ್ಟಿಗೆ ಪ್ರಮಾಣವಾದ ಕುವೆಂಪು ರವರು ತಮ್ಮ ಕಥೆ ಕಾದಂಬರಿಗಳಲ್ಲಿ ಇತಿಹಾಸ, ಪುರಾಣಗಳ ಗೊಡವೆಗೆ ಹೋಗುವದಿಲ್ಲ. ಆದರೆ **ಶ್ರೀ ರಾಮಾಯಣ ದರ್ಶನಂ** ಅನ್ನು ಬರೆಯುವಾಗ ಕುವೆಂಪುರವರೂ ವಾಸ್ತವದ ಪುನರ್ನಿರ್ಮಾಣವನ್ನು ಕುರಿತ ಸಮಸ್ಯೆಗಳನ್ನು ಎದುರಿಸುತ್ತಾರೆ.

ಈ ಹಿರಿಯ ಲೇಖಕರ ಸಮಗ್ರವಾದ ತುಲನೆಯು ಒಂದು ಮಹಾಪ್ರಬಂಧದ ವಸ್ತುವಾಗುವ ವ್ಯಾಪ್ತಿಯನ್ನು ಹೊಂದಿದೆ. ಅಂಥ ಸಮಗ್ರತೆಯನ್ನು ಸಾಧಿಸುವ ಮಹತ್ವಾಕಾಂಕ್ಷೆಯು ಈ ಪ್ರಬಂಧಕ್ಕೆ ಇಲ್ಲ. ಆದ್ದರಿಂದ ಇವರಿಬ್ಬರ ನಡುವಿನ ಕೆಲವು ಮಹತ್ವದ ವ್ಯತ್ಯಾಸಗಳ ಮೇಲೆ ಬೆಳಕು ಚೆಲ್ಲಿ ಈ ಪರಿಶೀಲನೆಯನ್ನು ಮುಗಿಸಲಾಗಿದೆ.

.................ಆಸೆಯೋ ಕನಿಕರವೋ? ಗೌತಮನ ವೇಷದಲ್ಲಿ ಬಂದ ಇಂದ್ರನ ಚಂದ ಆಸೆ ಕನಿಕರವಾಗಿ ಕಾಣುವುದು. ಇಂತೆ ಸರಿ ಒಡಲು ಜೀವನದ ಮಾತು. ಇದು ಕುದುರೆ, ಇದು ರಥ. ರಥ ಹರಿದು ಮುಂದಿರುವ ಕುದುರೆಯನು ದೂಡೀತೆ? ಕುದುರೆ ಸೆಳೆದು ಹಿಂದಿದ್ದ ರಥ ಹರಿಯಿತೇ? ಹೊಣೆ ಜೀವನದು ಅಕ್ಕ. ಜೀವ ಇರುವುದನು ಮರೆ ನರರ ಈ ಬಾಳು ಶವಗಳ ಸಂತೆ ಒದನಿತೆ.

— **ಭಟ್ಟರ ಮಗಳು ನಾಟಕ, ಪುಟ : ೪೮**

ಮಾಸ್ತಿ–ಕಾರಂತ : ಸಂಸ್ಕೃತಿ ಚಿಂತನೆ [೧]

ಎಚ್. ಪಟ್ಟಾಭಿರಾಮ ಸೋಮಯಾಜಿ

೧. ಸ್ವ ಎಂಬುದು ಸ್ವರಾಜ್ಯ

ಇಪ್ಪತ್ತನೆಯ ಶತಮಾನದ ಅತ್ಯಂತ ಪ್ರಭಾವಶಾಲಿ ಜರ್ಮನ್ ತತ್ತ್ವಶಾಸ್ತ್ರಜ್ಞ ಮಾರ್ಟಿನ್ ಹೈಡೆಗರ್‌ನ ಪ್ರಕಾರ ಮನುಷ್ಯನೆಂಬವನು ಕೇವಲ ಜೀವಿಯಲ್ಲ. ಅವನು ಪ್ರಪಂಚಜೀವಿ. ಅಂದರೆ, ಮನುಷ್ಯ ಹುಟ್ಟುವುದೇ ಒಂದು ಭಾಷೆಯ, ಸಂಸ್ಕೃತಿಯ, ಜೀವನದ ರಿವಾಜುಗಳ, ಹಲವು ಬಗೆಯ ಜೀವನಕ್ರಮಗಳ, ದಟ್ಟ ಪ್ರಪಂಚಕ್ಕೆ. ಹುಟ್ಟಿದ ನಂತರ ನಿಧಾನವಾಗಿ ಪ್ರಪಂಚ ಅವನ ಕಣ್ಣೆದುರು ಬೆಳೆದು ಆಕಾರ ತಾಳುವುದಲ್ಲ. ಅವನು ಹುಟ್ಟುವುದೇ ಪೂರ್ವನಿರ್ಧಾರಿತವಾದ ಈ ಪ್ರಪಂಚಕ್ಕೆ. ಆದುದರಿಂದ ಪ್ರಪಂಚ ಜೀವಿಯಾದ ಈ ಮನುಷ್ಯನ ಜೀವನವೆಂಬುದು ಕಾಲಕ್ರಮೇಣ ಈ ಪ್ರಪಂಚದ ತಾಳಮೇಳಗಳನ್ನು ನಿರಂತರವಾಗಿ ಗ್ರಹಿಸುವ ಪ್ರಯತ್ನದಲ್ಲಿ ತನ್ನತನವನ್ನು ಉಂಟು ಮಾಡಿಕೊಳ್ಳುವ ಒಂದು ವಿಶೇಷ ಪ್ರಕ್ರಿಯೆ. ಅಲ್ಲದೇ ಮನುಷ್ಯ ಜೀವಿ ಎಂಬ ಒಂದೇ ಕಾರಣದಿಂದ ಅವನಿಗೆ ಹುಟ್ಟಿನಿಂದ ತನ್ನತನವೆಂಬುದು ಬಳುವಳಿಯಾಗಿ, ದೇವರ ದಯೆಯಾಗಿ ಬರುವುದಿಲ್ಲ. ಅವನು ಪ್ರಪಂಚಜೀವಿ ಎಂಬುದರ ಅರ್ಥವೇ, ಅವನು ಈ ಪ್ರಪಂಚದ ವಾಸ್ತವದಲ್ಲಿ *(lebenswelt)* – ಪ್ರಾಪಂಚಿಕತೆಯಲ್ಲಿ – ಒಡ್ಡಲ್ಪಟ್ಟ / ಎಸೆಯಲ್ಪಟ್ಟ *(geworfenheit)* ಜೀವಿ ಎಂದು. ಆದುದರಿಂದ ಮನುಷ್ಯಜೀವಿಯ ನಿರಂತರವಾದ, ಸ್ಥಾಯಿಯಾದ, ಸ್ಥಿತಿ ಎಂದರೆ ಅವನು ತನ್ನನ್ನು, ಸ್ವವನ್ನು, ವ್ಯಾಖ್ಯಾನಿಸಿಕೊಳ್ಳುತ್ತ ಇರುವುದು. ಅಂದರೆ, ಈ ಸ್ವ ಎಂಬುದು ಅರ್ಥಾರ್ಥ ಸಂಬಂಧವಿಲ್ಲದ ಅಸಂಬದ್ಧವಾಗಲೀ,

ಈಗಾಗಲೇ ನಿರ್ದಿಷ್ಟಗೊಳಿಸಲ್ಪಟ್ಟ ಘನೀಕೃತ ಸನ್ನಿವೇಶದೊಳಗೆ ವಿಹರಿಸುವ ಸುಸಂಬದ್ಧತೆಯಾಗಲೀ ಅಲ್ಲ. ಈ ಸ್ವ ಎಂಬುದು ಪ್ರಾಪಂಚಿಕತೆಯನ್ನು ಹೊರತುಪಡಿಸಿದ ಸ್ವ ಅಲ್ಲದಿರುವ ಕಾರಣದಿಂದಾಗಿ, ಈ ಸ್ವ ಎಂಬುದು ಒಂದು ಪೂರ್ವವ್ಯಾಖ್ಯಾನಿತವಾದ ಅರ್ಥದ ಘಟಕವಲ್ಲ: ಸ್ವ ಎಂಬುದಕ್ಕೆ 'ಅರ್ಥ' ಇಲ್ಲ: ಅದು ಅರ್ಥವನ್ನು ಪಡೆಯಬೇಕಾದದ್ದು; ಉಂಟು ಮಾಡಿಕೊಳ್ಳುವಂಥದ್ದು; ಉಂಟಾಗಲಿರುವಂಥದ್ದು; ಉಂಟಾಗುವಂಥದ್ದು (*being is what is yet-to-be*). ಸ್ವದ ಈ ಉಂಟಾಗುವಿಕೆಯು, ಜಗತ್ತಿನ ಅರೆ ತಿಳುವಳಿಕೆಯಿಂದ, ಪಾರ್ಶ್ವ ದೃಷ್ಟಿಯಿಂದ, ಜನಜನಿತ ಅಭಿಪ್ರಾಯಗಳ ದೆಸೆಯಿಂದ, ಗಾಳಿ ಮಾತುಗಳಿಂದ, ಸಂಸ್ಕೃತಿಯ ರೂಢ ಮೂಲವಾದ ಚಟಗಳಿಂದ, ನಿರಂತರವಾಗಿ ಎಡರುತೊಡರುಗಳನ್ನು ಎದುರಿಸುತ್ತಾ, ಮಸುಕಾಗುತ್ತಾ, ದಿಕ್ಕೆಡಬಲ್ಲ ಹಣೆಬರಹದ್ದು. ಅಥವಾ ಜಗತ್ತನ್ನು ನಿರ್ವಹಿಸುವವನು, ಉಂಟು ಮಾಡುವವನು, ನಿಭಾಯಿಸುವವನು, ಅದಕ್ಕೆ ಅರ್ಥವನ್ನು ಕೊಡುವವನು, ತಾನು ಎಂಬ ಅಹಂಭಾವದಲ್ಲಿ, ಆತ್ಮಪ್ರತ್ಯಯದಲ್ಲಿ, ಸ್ವತ್ವವನ್ನು, ಸ್ವಯ *(authenticity)*ವನ್ನು, ಇನ್ನಿಲ್ಲದಂತೆ ಕಳೆದುಕೊಳ್ಳಬಲ್ಲ ದುರಂತವನ್ನು ಹೊತ್ತುಕೊಂಡು ಹುಟ್ಟಿರುವಂಥದ್ದು. ಆದರೆ ಈ ದುರಂತಮಯತೆಯೇ, ಈ ಮೈಮರೆವೇ *(inauthenticity)*, ಅದರಿಂದ ಹೊರಬರಲು ಪ್ರೇರೇಪಣೆಯಾಗಬಲ್ಲುದು ಎಂಬರ್ಥದಲ್ಲಿ ಈ ಸ್ವ ಎಂಬುದು, ಎಲ್ಲ ಅರ್ಥಗಳಲ್ಲೂ, ಪ್ರಪಂಚಜೀವಿ, ಪ್ರಾಪಂಚಿಕ; ಈಗಾಗಲೇ ಇರುವಂಥದ್ದಲ್ಲ, ಉಂಟಾಗಲಿರುವಂಥದ್ದು. ಅಂದರೆ, ಸ್ಥೂಲವಾಗಿ ಹೇಳುವುದಾದರೆ, ಮನುಷ್ಯ ಎರಡು ರೀತಿಯ ಸಂಸ್ಕೃತಿಗಳನ್ನು ಕಟ್ಟಬಲ್ಲ: ತನ್ನನ್ನು ಕೇಂದ್ರವಾಗಿಟ್ಟುಕೊಂಡು, ತನ್ನಿಂದಲೇ ಪ್ರಪಂಚ ಎಂಬ ನಂಬಿಕೆಯಲ್ಲಿ, ಪ್ರಪಂಚಕ್ಕೆ ಅರ್ಥದಾನ ಮಾಡುವವನು ತಾನು, ಎಂದುಕೊಂಡು ಪ್ರಪಂಚದ ಬಗ್ಗೆ ತನ್ನ ಪ್ರಶ್ನೆಗಳು, ತಾನು ಪ್ರಪಂಚವನ್ನು ಉಪಯೋಗಿಸುವ ರೀತಿ, ಎಲ್ಲವೂ ಆವಶ್ಯಕ ಮತ್ತು ಪ್ರಮುಖ ಎಂಬ ತೀರ್ಮಾನದೊಡನೆ ಕಟ್ಟುವ ಸಂಸ್ಕೃತಿ ಒಂದು. ಈತ ತಂತ್ರಜ್ಞಾನವನ್ನು ಬೆಳೆಸುತ್ತಾನೆ; ನಿಸರ್ಗವನ್ನು ಮಣಿಸುತ್ತಾನೆ; ಬೀದಿಯಲ್ಲಿ ನಿಂತು ತನ್ನ ಹಕ್ಕುಗಳಿಗಾಗಿ ಜಗಳಾಡುತ್ತಾನೆ; ನಾನು ಯೋಚಿಸುತ್ತೇನೆ, ಆದುದರಿಂದ ನಾನು ಇದ್ದೇನೆ (*I think and therefore I am*) ಎಂದು ತಿಳಿಯುತ್ತಾನೆ. ಆ ಬದಲು, ಪ್ರಪಂಚ ತನಗಿಂತ ಮೊದಲು ಇದ್ದು ಆ ಮೇಲೆಯೂ ಇರುವಂಥದ್ದು, ತಾನು ಹುಟ್ಟಿದ್ದು ನಿರ್ವಾತದಲ್ಲಲ್ಲ, ದಟ್ಟವಾದ ಪ್ರಾಪಂಚಿಕತೆಯಲ್ಲಿ, ಎಂಬ ನಂಬಿಕೆಯಿಂದ, ಜಗತ್ತಿನ ಅರ್ಥವು ತನ್ನೊಳಗೆ ಹರಡಲಿ ಎಂಬ ವಿನಯದಿಂದ, ಯಾವ ಅನಗತ್ಯ ಪೂರ್ವ ನಿರ್ಧಾರಗಳಾಗಲೀ, ಮನಸ್ಸಿನ ಶಠತ್ವವಾಗಲೀ ನೆಲೆಗೊಳ್ಳದ ರೀತಿಯ ಎಚ್ಚರದಲ್ಲಿ ಜೀವವನ್ನು ಹದ ಮಾಡಿಕೊಳ್ಳುತ್ತ, ಪ್ರಪಂಚದ ತಾಳಮೇಳಗಳ ಜೊತೆಗೆ ತನ್ನನ್ನು ಕೀಲಿಸಿಕೊಳ್ಳಲು, ನಿರಂತರ ವಿಸ್ಮಯದಲ್ಲಿ, ಅನುಮಾನದಲ್ಲಿ, ಆತಂಕದಲ್ಲಿ, ಆರ್ತತೆಯಲ್ಲಿ, ಸ್ವತ್ವದ ಅನ್ವೇಷಣೆಯಲ್ಲಿ, ಪ್ರಪಂಚಜೀವಿಯಾದ ತಾನು ಸ್ವತ್ವವನ್ನು ಪಡೆಯುವುದೇ ತನ್ನ ಪ್ರಪಂಚವು ಸ್ವತ್ವವನ್ನು ಪಡೆಯುವ ರೀತಿಯೂ ಸಹ ಎಂದು ತಿಳಿದು ಕಟ್ಟುವ ಸಂಸ್ಕೃತಿ ಇನ್ನೊಂದು. ಈತ, ಅನುಭಾವಿಯ ವಿನಯದಲ್ಲಿ ಸದಾ ತನ್ನನ್ನು ಹದಮಾಡಿಕೊಳ್ಳುತ್ತ, ತನ್ನ ಸ್ವವು ಒಡ್ಡುವ ಎಡರುಗಳನ್ನು ಮೀರುವುದರಲ್ಲೇ ಸ್ವವನ್ನು ಹುರಿಗೊಳಿಸಿಕೊಳ್ಳುತ್ತ, ಪುನರ್ವ್ಯಾಖ್ಯಾನಿಸಿಕೊಳ್ಳುತ್ತ, ತನ್ನ ಸ್ವಕ್ಕಾಗಿ ತನ್ನ ಸ್ವ ಅಲ್ಲದ ಪೊರೆಗಳನ್ನು ಕಳಚಿಕೊಳ್ಳುತ್ತ,

ಸ್ವಯಕ್ಕೆಂದು ಸ್ವರಾಜ್ಯಕ್ಕಾಗಿ ಹಂಬಲಿಸುವವನಾಗುತ್ತಾನೆ. ತಾನು ಇದ್ದೇನೆ, ಆದುದರಿಂದ, ಆ ಅನಿವಾರ್ಯತೆಯಿಂದ, ತಾನು ಯೋಚಿಸುತ್ತೇನೆ ಕೂಡಾ *(I am and therefore I think)* ಎಂದು ಅತ ತಿಳಿಯುತ್ತಾನೆ. ಮೊದಲನೆಯದರಲ್ಲಿ ಅಹಂಭಾವ, ಆತ್ಮವಿಶ್ವಾಸ, ಆತ್ಮಪ್ರತ್ಯಯಗಳು ಮೂಲದ್ರವ್ಯಗಳಾದರೆ, ಎರಡನೆಯದರಲ್ಲಿ ವಿನಯ ಮತ್ತು ವಿಸ್ಮಯಗಳು ಮೂಲದ್ರವ್ಯಗಳು. ಹೈಡೆಗರ್‌ನ ಪ್ರಕಾರ ಇಡೀ ಪಾಶ್ಚಾತ್ಯ ನಾಗರಿಕತೆ ತನ್ನ ಎಲ್ಲ ಬಗೆಯ ಜೀವನದ ರಿವಾಜುಗಳಲ್ಲೂ, ಮೊದಲನೆಯ ರೀತಿಯ ಸಂಸ್ಕೃತಿಯನ್ನು ಕಟ್ಟಿದೆ. ಅವನ ಪ್ರಕಾರ ಪಾಶ್ಚಾತ್ಯ ಸಂಸ್ಕೃತಿ ಎಂಬುದು, ಪಾಶ್ಚಾತ್ಯ ಮನುಷ್ಯ ತನ್ನ ಸ್ವತ್ವವನ್ನು ಮರೆಯುತ್ತಾ ಬಂದ ಸುದೀರ್ಘ ದುರಂತಮಯ ಚರಿತ್ರೆ. ಸುಸೂತ್ರ ತರ್ಕದ ವಿಚಾರವಾದ, ವೈಜ್ಞಾನಿಕತೆ, ತಂತ್ರಜ್ಞಾನ, ಪೈಪೋಟಿ ಮತ್ತು ಹಿಂಸೆ, ಪರಿಸರದ ಅಸಮತೋಲನ, ಈ ಸಂಸ್ಕೃತಿಯ ಫಲಗಳು ಮತ್ತು ದಿವ್ಯ ಮಂತ್ರಗಳು. ಇದು, ಪ್ರಪಂಚಜೀವಿಯು ಪ್ರಾಪಂಚಿಕತೆಯನ್ನು ಅಪಾರ್ಥಮಾಡಿ ಪಡೆದ ಮೈಮರವು.

ಈ ಮೈಮರೆವನ್ನು ಕಳೆದುಕೊಂಡು ಸ್ವಯವನ್ನು ಅರಸಲು ಹೈಡೆಗರ್ ಸೂಚಿಸುವ ಒಂದು ಉಪಾಯವೆಂದರೆ ಚರಿತ್ರೆಯಲ್ಲಿ ಹಿನ್ನಗೆತ. ಶಾಸ್ತ್ರಾಧಾರಗಳಲ್ಲಿ, ನಂಬಿಕೆ ಕಟ್ಟುಪಾಡುಗಳಲ್ಲಿ, ಜನಜನಿತ ಅಭಿಪ್ರಾಯಗಳಲ್ಲಿ ಮುಚ್ಚಿ ಮಸುಕಾಗಿ ಹೋಗಿರುವ ಇರುವಿಕೆಯನ್ನು ಮೂಲಭೂತ ಬೆರಗಿನಲ್ಲಿ ಎದುರಿಸಿದ ಸಾಕ್ರೆಟಸ್ ಪೂರ್ವದ ಗ್ರೀಕ್ ಚಿಂತನೆಯಲ್ಲಿ ಸತ್ಯ ಎಂಬುದು, ಇರುವಿಕೆಯೆಂಬುದು ನಿಷ್ಕಪಟವಾಗಿ ತನ್ನ ಸ್ನಿಗ್ಧತೆಯಲ್ಲಿ ಇನ್ನೂ ಕೈಗೆಟುಕಬಲ್ಲ ಹಾಗೆ ಇರುವಂತೆ ಅವನಿಗೆ ಅನಿಸುತ್ತದೆ. ಪ್ಲೇಟೋನ ನಂತರ ಸತ್ಯ ಎಂಬುದು, ಇರುವಿಕೆ ಎಂಬುದು, ಶಾಸ್ತ್ರ ಮತ್ತು ವ್ಯವಸ್ಥೆಯ ಸೊತ್ತಾಗಿ, ಆಧುನಿಕ ನಾಗರಿಕತೆಯನ್ನು ತನ್ನ ಸಹಜ ಉತ್ಪನ್ನವಾಗಿ ಸೃಷ್ಟಿಸುವ ಮಟ್ಟಿಗಿನ ಮೈಮರೆವನ್ನು ಪಡೆಯಿತು ಎಂಬುದು ಅವನ ವಾದ. ಈ ಇಡೀ ಚರಿತ್ರೆಯೇ ಇರುವಿಕೆಯನ್ನು ಮರೆಯುವ ಪ್ರಕ್ರಿಯೆ *(forgetting of being)* ಎಂಬುದೇ ಹೈಡೆಗರ್‌ನ ಪ್ರಕಾರ ನಮ್ಮ ಚರಿತ್ರೆ. ಇದು, ಮುನ್ನಗೆತದ ತರಾತುರಿಯ ಮಾರ್ಕ್ಸ್‌ವಾದೀ, ಚರಿತ್ರೆಯ ದಿಕ್ಕನ್ನೇ ತಪ್ಪಿಸುವ/ಪ್ರಶ್ನಾರ್ಥಕಗೊಳಿಸುವ ಚಿಂತನೆ. ಹಳಹಳಿಕೆ, ಚರಿತ್ರೆಗೆ ಹಿನ್ನಗೆತಗಳು ಹಾಗಾಗಿ ಹೈಡೆಗರ್‌ನ ಪ್ರಕಾರ ಸ್ವಯವನ್ನು ಸಾಧಿಸಲು ಇರುವ ಅತಿ ಮುಖ್ಯ ಉಪಾಯಗಳು.

ಸಾಹಿತ್ಯ ಎಂಬುದಂತೂ ಹೇಳಿ ಕೇಳಿ ಉಪಾಯ. ಸ್ವವು ತನಗೆ ಅನ್ಯವಾದ್ದನ್ನು ಪರಿಭಾವಿಸುವುದೇ, ಪರಕಾಯ ಪ್ರವೇಶವೇ, ರೂಪಕಗಳ ಭಾಷೆಯೇ, ತನ್ನ ಜೀವಾಳ ಎಂದು ತಿಳಿಯುವ ನೋಟಕ್ರಮವೇ ಸಾಹಿತ್ಯ. ಆ ಕಾರಣದಿಂದ ಸಾಹಿತ್ಯವೆಂಬುದು ಎಲ್ಲ ರೀತಿಯ ಚಿಂತನೆಗಳ ಒಡಹುಟ್ಟು . ಹಾಗಾಗಿ, ಹೈಡೆಗರ್ ಹೇಳುವಂತೆ, ಯಾವುದೇ ಚಿಂತನಮಾರ್ಗವನ್ನೂ ಅಭಿನ್ನವೆಂಬಂತೆ, ಚಿಂತನೆಯನ್ನು ಶಾಸ್ತ್ರಗಳ ಮಡಿಮೈಲಿಗೆಯಿಂದ ಪಾರು ಮಾಡಿ ಮರು ಪರಿಶೀಲನೆಯಲ್ಲಿ ಹೊಸ ದ್ರವ್ಯವನ್ನೂ, ದಿಕ್ಕನ್ನೂ ಗುರುತಿಸಬೇಕಾದ ಅನಿವಾರ್ಯತೆಯಿದೆ ಎಂದು, ಪರಿಗಣಿಸಬೇಕಾದ್ದೇ ಅತಿ ಮುಖ್ಯ. ಸತ್ಯದ ಹಂಬಲವಿರುವವರಿಗೆ ಅದು ಅತ್ಯಂತ ಜರೂರಿನದೂ ಕೂಡಾ. ಅಲ್ಲದೇ ಚರಿತ್ರೆಯೂ, ಹಳಹಳಿಕೆಯೂ, ಅರಿಯುವಿಕೆಗೆ ಅಗತ್ಯವಿರುವ, ಲಭ್ಯವಿರುವ, ಅನಿವಾರ್ಯವಾಗಿರುವ ಸಾಧನಗಳು ಕೂಡಾ. ಹಾಗೂ ಚರಿತ್ರೆ ಎಂಬ ಹೆಸರಲ್ಲಿ ಮರೆಯುತ್ತಿರುವ ಚರಿತ್ರೆ ಕೇವಲ ವದಂತಿ, ಕಪೋಲಕಲ್ಪನೆ.

೨. ಬಾಕಿ ಇತಿಹಾಸ

ಹತ್ತೊಂಬತ್ತನೆಯ ಶತಮಾನದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು ಕಂಡ ಭಾರತ ಕೊನೆಯ ಪಕ್ಷ ಎರಡು ಬಗೆಯದು. ಒಂದು, ಸಾಧುಗಳ, ಸಂತರ, ಸನ್ಯಾಸಿಗಳ, ಬೈರಾಗಿಗಳ, ಅವಧೂತರ, ಆರ್ತ ಭಕ್ತರ, ಜೀವನದ ಜಂಜಾಟಗಳಲ್ಲಿ ತೊಳಲಾಡುತ್ತಿರುವ ಮುಗ್ಧ ಬಡಜೀವಿಗಳ, ದೈವ ಪ್ರೀತಿ, ಶ್ರದ್ಧೆ, ನಿಯಮ, ಕಟ್ಟುಪಾಡು, ನಂಬಿಕೆಗಳ, ಕಾಮಾರಪುಕುರಕ್ಕೆ ಹೃದಯಸಂಬಂಧಿಯೆನ್ನಿಸುವ ಭಾರತ. ಇನ್ನೊಂದು, ಕೇವಲ ಕೆಲವೇ ಮೈಲುಗಳ ದೂರದಲ್ಲಿರುವ, ಇಂಗ್ಲಿಷ್ ವಿದ್ಯಾಭ್ಯಾಸ ಪಡೆದ, ಪಡೆದು ನಂಬಿಕೆಗಳ ಬುಡಮೇಲಾಟದಲ್ಲಿ ತೊಳಲಾಡುತ್ತಿರುವ, ತಮ್ಮದಲ್ಲದ ಜೀವನಕ್ರಮವನ್ನು ಕೊಡವಿಕೊಳ್ಳುತ್ತಲೇ ಮೈಗಂಟಿಸಿಕೊಂಡ, ಪಾಂಡಿತ್ಯದ ಬಲದ ಮೇಲೇ ಬಹುಮಟ್ಟಿಗೆ ನಿಂತಿರುವ, ನಿರಾಕಾರ ಬ್ರಹ್ಮನ ಬಗ್ಗೆಯೇ ಹೆಚ್ಚಿನ ಒಲವು ತೋರಬಹುದೇನೋ ಎಂಬ ಆತಂಕದ ಕಲ್ಕತ್ತ. ಶ್ರೀ ಪರಮಹಂಸರ ವೈಶಿಷ್ಟ್ಯವೆಂದರೆ ತಮ್ಮ ಸ್ವಭಾವಕ್ಕನುಗುಣವಾಗಿ ಈ ಎಲ್ಲದರೊಡನೆಯೂ ಮಗುವಿನ ಬೆರಗಿನಿಂದ ಅವರು ಒಡನಾಡಿದ್ದು. ಹೃದಯ ಸಂವಾದದಲ್ಲಿ ಪ್ರೀತಿಯ ಬಂಧನವನ್ನೂ, ಮೂಲಭೂತ ಬೆರಗನ್ನೂ *(primal wonder)*, ನಿಷ್ಕಪಟ ಭಾಷೆಯಲ್ಲಿ, ಪರಮಾವಧಿ ವಿನಯದಲ್ಲಿ ಪ್ರಕಟಿಸಲು ಪ್ರಯತ್ನಿಸಿದ್ದು. ಅವರ ಒಲವು ಕಾಮಾರಪುಕುರವು ಪ್ರತಿನಿಧಿಸಬಲ್ಲ ಭಾರತದ ಪ್ರಕಟಿತ ರೂಪವಾಗಿದ್ದಾಗಲೂ, ಅದಲ್ಲದ ಇನ್ನೊಂದನ್ನು, ತನ್ನ ಸ್ವದ ಇನ್ನೊಂದನ್ನು, ಒಳಗುಗೊಳ್ಳುವ ಸ್ವದ ಅನಿವಾರ್ಯ ಅಗತ್ಯವನ್ನು ತಮ್ಮ ಇರುವಿಕೆಯ/ಅರಿಯುವಿಕೆಯ ನೆಲೆಯಲ್ಲಿ ಅನುಭವಿಸಿದವರು. ಸಾಕಾರ ಬ್ರಹ್ಮದಲ್ಲಿ ನಂಬಿಕೆಯಿರುವವರಿಗೆ ನಿರಾಕಾರ ಬ್ರಹ್ಮದ ಕುರಿತೂ, ನಿರಾಕಾರ ಬ್ರಹ್ಮದಲ್ಲಿ ನಂಬಿಕೆಯಿರುವವರಿಗೆ ಸಾಕಾರ ಬ್ರಹ್ಮದ ಕುರಿತೂ ಹೇಳಿದವರು.

ಶ್ರೀ ಪರಮಹಂಸರ ಜೀವನಕ್ರಮವೇ ಸ್ವ ಎಂಬುದು ಸಂವಾದದಲ್ಲಿ ಸಿಲುಕಿರುವ ಜೀವ ಎಂಬ ತಿಳಿವಿನದ್ದು. ಮಹೇಂದ್ರನಾಥ ಗುಪ್ತ (ಮ) ನ ದಾಖಲೆಗಳನ್ನೂ ಒಳಗೊಂಡಂತೆ ಕಾಣಬರುವ ಶ್ರೀ ಪರಮಹಂಸರು,[1] ಸಂವಾದದಲ್ಲೇ ತಮ್ಮ ಎಲ್ಲ ಕಾಲವನ್ನೂ ಕಳೆದವರು: ಬ್ರಾಹ್ಮೊಗಳ ಜೊತೆ, ಮೊದಲ–ಅಪನಂಬಿಕೆಗಳ ತಮ್ಮ ಶಿಷ್ಯರ ಜೊತೆ, ಕಲ್ಕತ್ತದ ಬುದ್ಧಿಜೀವಿಗಳ ಜೊತೆ, ಹಳ್ಳಿಯ ನಿರಾಡಂಬರ ಮುಗ್ಧ ದೈವಭಕ್ತರ ಜೊತೆ, ಸಂಸಾರವನ್ನೇ ಪರಮಸತ್ಯವೆಂದು ಬಗೆದ ಲೌಕಿಕರ ಜೊತೆ, ಅಲ್ಲದೇ, ಕಾಳಿಯ ಮೂರ್ತಿಯ ಜೊತೆ, ಕಾಳಿಯ ಜೊತೆ, ಕೊನೆಗೆ ತನ್ನ ಜೊತೆಗೇ. ಈ ಸಂವಾದವಾದರೂ ಪ್ರೀತಿಯ, ಆರ್ದ್ರ ಭಾವನೆಯ, ಆರ್ತತೆಯ, ಸೋಲು ಕಾಣದ, ಗೆಲುವನ್ನು ಹೊಂಚದ, ಸಂವಾದವೇ. ಈ ಜೀವಜಗತ್ತಿನ ಪ್ರತಿ ವಿವರಗಳಲ್ಲೂ ಒಳಗೆ ಉರಿಯುತ್ತಿರುವ ಚೇತನದ ಜೊತೆ ಸಂವಾದ ಮಾಡುವ ಪ್ರಯತ್ನ ಅದು. ಅವರು ಬಳಸುವ ಭಾಷೆ ರೂಪಕಗಳ ಭಾಷೆ, ಅಂದರೆ ಪ್ರೇಮದ ಭಾಷೆ, ಅಂದರೆ ಕಾವ್ಯದ ಭಾಷೆ, ಅಂದರೆ ಈ ಸ್ವದ ದಿಗ್ಬಂಧನಗಳನ್ನು ಮೀರಲು, ಈ ಸ್ವದ ಇನ್ನೊಂದನ್ನು ಮುಟ್ಟಲು, ಆ ಇನ್ನೊಂದರ ಮೂಲ ಸ್ವರೂಪ *(ontological status)* ವನ್ನು ಅರಿಯಲು ಪ್ರಯತ್ನಿಸುವ ಭಾಷೆ. ಅದು ಹಾಸ್ಯವೂ, ರೂಪಕಗಳೂ, ಕಾವ್ಯ ಗುಣವೂ, ಮಗುವಿನ ಬೆರಗೂ ಸೇರಿ ಪರಿಪಾಕವಾಗಿರುವ ಭಾಷೆ. ಹೊಸಬರನ್ನು ಭೇಟಿ ಮಾಡುವ ಆತುರ ಆತಂಕಗಳು, ಜಿಲೇಬಿ

ತಿನ್ನಲು ಕಾಮಾತುರ ತೀವ್ರತೆಯಿಂದ ಎಳಸುವ ಅವರ ಬಾಯಿ ಚಪಲ, ಕಾಳಿಗಾಗಿ ಅವರ ಆರ್ತ ಹಂಬಲ, ಶಿಷ್ಯರು ಬರಲಿಲ್ಲವೆಂದು ಮಮ್ಮಲ ಮರಗುವುದು, ಈ ಮನೋಭಾವಕ್ಕೆ ಸಹಜ ಅನುಷಂಗಿಕಗಳು. ಶ್ರೀ ಪರಮಹಂಸರ ಈ ಒಟ್ಟು ನಿಲುವನ್ನೇ ಅವರ 'ಭಾಷೆ'ಯೆಂದು ನಾನು ಕರೆದಿರುವುದು; ಭಾಷೆಯೆಂದರೆ ಅವರು ಬಳಸಿದ ಪದಸಮುಚ್ಚಯಗಳು ಎಂಬರ್ಥದಲ್ಲಲ್ಲ.

ಈ ಭಾಷೆಯು ಸ್ವಾಭಾವಿಕವಾಗಿಯೇ ಕಾಮಾರಪುಕುರವು ಪ್ರತಿನಿಧಿಸುವ ಭಾರತದ ಒಡಹುಟ್ಟು. ಆದುದರಿಂದಲೇ ಕಾಮಾರಪುಕುರದ ಬಗ್ಗೆ ಅವರಿಗೆ ಹೆಚ್ಚಿನ ಒಲವಿದ್ದಾಗಲೂ, ಅದು ಸ್ವಜನ ಪಕ್ಷಪಾತವಲ್ಲ; 'ಭಾರತೀಯತೆ'ಯೆಂಬ ಅಮೂರ್ತತೆಯಲ್ಲ; ತನ್ನನ್ನೂ ಹೊರಗಿನವರನ್ನೂ ವಿಭಜನೆಯಲ್ಲಿ ಪರಿಗಣಿಸುವಂಥದಲ್ಲ; ಶ್ರೀ ಪರಮಹಂಸರ ಭಾಷೆಯು ಕ್ರಿಸ್ತನೆದುರು, ಪೈಗಂಬರನೆದುರು ಬಾಯಿಕಟ್ಟುವಂಥದಲ್ಲ. ಶ್ರೀಪರಮಹಂಸರು ಹಾಗಾಗಿಯೇ ಸ್ಪರ್ಶಮಾತ್ರದಿಂದಲೇ ತನ್ನ ಸಂಪರ್ಕಕ್ಕೆ ಬಂದವರನ್ನು ಪ್ರೇಮದಲ್ಲಿ ಗೆಲ್ಲುವವರು; ಮತಾಂತರಗೊಳಿಸುವವರಲ್ಲ. ಯಾವುದೂ, ಹಾಗೆ ನೋಡಿದರೆ, ಅವರಿಗೆ ಹೊರಗಿನದ್ದಲ್ಲ. ಅಂದರೆ ಎಲ್ಲವೂ ತನ್ನ ಸ್ವಂತದ್ದೇ. ಆದರೆ ಈ ಸ್ವ ಎಂಬುದು ಇನ್ನು ಉಂಟಾಗಬೇಕಾಗಿರುವಂಥದು. ಸಂವಾದವೇ ಅದನ್ನು ಉಂಟುಮಾಡುವುದು. ಅಂದರೆ ಎಲ್ಲವೂ ಸ್ವಂತದ್ದಾಗಿದ್ದಾಗಲೂ, ತನ್ನ ಸ್ವಂತದ ರಕ್ತದಲ್ಲಿ ಇನ್ನೊಂದು, ಅನ್ಯವಾದ್ದು, ಬೆರೆಯುವ ಪ್ರಕ್ರಿಯೆಯಲ್ಲೇ ಈ ಸ್ವವು ತನ್ನ *authenticity*ಯನ್ನು, ಸ್ವಯವನ್ನು, ಪಡೆಯಬೇಕಾಗಿರುವಂಥದ್ದು.

ಗಾಂಧೀಜಿಯವರು ಇಪ್ಪತ್ತನೆಯ ಶತಮಾನದಲ್ಲಿ ಕಂಡ ಭಾರತವೂ ಇಂಥ ಇಬ್ಬಗೆಯದೇ. ಹಿಂದ್ ಸ್ವರಾಜ್ ಎಂಬ ಗಾಂಧೀಜಿಯವರ ಅತಿ ಮುಖ್ಯ ಗ್ರಂಥವೂ ಕಾಣುವುದು, ಒಂದು ಕಡೆಯಲ್ಲಿ– ಬಹುಸಂಖ್ಯಾತರಾದ, ತಮ್ಮ ತಮ್ಮ ಜೀವನಕ್ರಮಗಳಲ್ಲಿ ರೂಢರಾದ, ಭಾರತೀಯರನ್ನು; ಹಾಗೂ ಇನ್ನೊಂದು ಕಡೆ– ಇದರ ಜೊತೆ ಕೇವಲ ಮೇಲ್ಪದರದ ಸಂಬಂಧವಿರುವ 'ಭಾರತೀಯತೆ'ಯ, ದೇಶಭಕ್ತಿಯ, ಪರಜನ ಅಸಹಿಷ್ಣುತೆಯ, ಸ್ವಸಂಭಾಷಿಗಳನ್ನು. ಗಾಂಧೀಜಿಯವರನ್ನು ಅರ್ಥಮಾಡಿಕೊಳ್ಳಲು ಬಹುಮುಖ್ಯವಾದ ಗ್ರಂಥವೆಂದರೆ ಹಿಂದ್ ಸ್ವರಾಜ್. ಹಿಂದ್ ಸ್ವರಾಜ್ ಒಂದು ಸುದೀರ್ಘ ಸಂವಾದ. ಪ್ರೀತಿಯ ಸಂವಾದ: ಅಲ್ಲಿ ಹಠವೂ ಪ್ರೀತಿಯ ಹಠ. ಅದು ಆರ್ತತೆಯ ಸಂವಾದ; ಅದು 'ಓದುಗ'ನನ್ನು ಮುಟ್ಟಲು ಬಯಸುವ ಆರ್ತತೆ. ಈ ಒಂದು ಇನ್ನೊಂದರ ಮುಖಾಮುಖಿಯಲ್ಲಿ, ಸಂವಾದದಲ್ಲಿ, ಸ್ವವು ಸ್ವಯವನ್ನು, ಸ್ವರಾಜ್ಯವನ್ನು ಪಡೆಯಲು ಸಾಧ್ಯವಾಗುವಂತೆ ಪ್ರಯತ್ನಿಸುವ ಸಂವಾದ. ಸಂವಾದವಿದ್ದಲ್ಲಿ ಇರುವುದು ಅಹಿಂಸೆ. ಅಹಿಂಸೆಯೆಂಬುದೇ ಪ್ರೇಮ. ಈ ಪ್ರೇಮವೇ ಗೌರವ; ತನಗೆ ಅನ್ಯವಾದ್ದರ ಬಗ್ಗೆ, ಇನ್ನೊಂದರ ಬಗ್ಗೆ ಗೌರವ. ಗಾಂಧೀಜಿಗೆ ಹಾಗಾಗಿ ಬ್ರಿಟಿಷರ ಬಗೆಗೂ ಪ್ರೇಮ. ಆದರೆ ಭಾರತದ ಹಳ್ಳಿಗಳ ಕಡೆಗೆ, ಸ್ವಜನ ಪಕ್ಷಪಾತದ್ದಲ್ಲದ, ದುರಾಗ್ರಹದ್ದಲ್ಲದ, ಸ್ವ ವನ್ನು ದಿಗ್ಬಂಧನಗಳಲ್ಲಿಟ್ಟ ಸಿದ್ಧವಸ್ತುವೆಂಬಂತೆ ಪರಿಗಣಿಸದ, ಹೆಚ್ಚಿನ ಒಲವು.

ಅಂದರೆ ಶ್ರೀ ರಾಮಕೃಷ್ಣರಲ್ಲಾಗಲೀ, ಗಾಂಧೀಜಿಯಲ್ಲಾಗಲೀ, ಪ್ರೇಮವೇ ಅವರ ಭಾಷೆ. ಆರ್ತತೆ ಅದರ ಧಾಟಿ. ಸ್ವಯ ಅದರ ಗುರಿ. ಆಕ್ರಮಣ, ಹಿಂಸೆ, ತಾನು ತಾನೇ ಇನ್ನೊಂದಲ್ಲ ಎನ್ನುವ ಹಠ, ಸ್ವಸಂಭಾಷಣೆ, ಏಕಪಾತ್ರಾಭಿನಯಗಳು ಇಲ್ಲಿ ಸಂಪೂರ್ಣ ವರ್ಜ್ಯ.

ಗಾಂಧೀಜಿಯವರ ಜೀವನದ, ಶ್ರಮದ, ಬಹುಭಾಗ ವ್ಯಯವಾದ್ದು ಪತ್ರಗಳನ್ನು ಬರೆಯುವದರಲ್ಲಿ, ಜನರ ಜೊತೆ ಸಂವಾದದಲ್ಲಿ ಎಂಬುದು ಸುಖಾಸುಮ್ಮನೆ ನಡೆದ ಘಟನೆಯಲ್ಲ. ಸತ್ಯವೇ ಇಬ್ಬರದ್ದೂ ಗುರಿ. ದೇವರಲ್ಲ. ಸತ್ಯವೇ ಅವರಿಗೆ ದೇವರು. ಸತ್ಯೆಂಬುದು ಅವರಿಗೆ ವಾರ್ತೆ. ಅದನ್ನು ಕೇಳಲು ಅವರು ಹಂಬಲಿಸುವುದು. ಉಳಿದವುಗಳೆಲ್ಲ –ಸತ್ಯ ಎಂಬ ಹೆಸರಿನಲ್ಲಿ ಮೆರೆಯುತ್ತಿರುವ ಸುದ್ದಿಗಳೆಲ್ಲ – ಕೇವಲ ವದಂತಿಗಳು. ಹಿಂದ್ ಸ್ವರಾಜ್‌ನ 'ಓದುಗ'ನು ವದಂತಿಯನ್ನೇ ಸತ್ಯ ಎಂದು ನಂಬಿರುವವನು.

ಆದುದರಿಂದಲೇ ಗಾಂಧೀಜಿಗೆ, ರಾಮಕೃಷ್ಣರಿಗೆ, ಪ್ರತಿ ಘಟನೆಯೂ/ವಿವರವೂ/ಜೀವಿಯೂ ಪ್ರೇಮದ 'ಪರವಶತೆ'ಯಲ್ಲಿ ಪ್ರೇಮದಿಂದ ತೊಯ್ದು ತಾದಾತ್ಮ್ಯದಲ್ಲಿ ದೊರೆಯುವಂಥದ್ದಾಗಿದ್ದಾಗಲೂ, ಅದೇ ಸತ್ಯವಲ್ಲ. ಸತ್ಯವೆಂಬುದು ಹೀಗೆ ಕೆಲವು ವರ್ಷಗಳ ತಪಸ್ಸಿನ ಫಲಶ್ರುತಿಯಾಗಿ ಇಡುಗಂಟಿನಂತೆ ದೊರೆಯಬಹುದಾದ್ದಲ್ಲ. ಗಾಂಧೀಜಿಯವರದ್ದು ಸತ್ಯಕ್ಕಾಗಿ ಆಗ್ರಹ; ರಾಮಕೃಷ್ಣರಿಗೆ, ಮಮ್ಮಲ ಮರುಗಿದರೆ ಕಾಳಿ ಕೇಳದೇ ಏನು ಮಾಡಿಯಾಳು ಎಂಬ ಹಠ; ಆದರೂ ಅವರ ಇಡೀ ಜೀವನವೇ ಹುಡುಕಾಟದ ಹೋರಾಟದಲ್ಲಿ ಕಳೆಯುವಂಥದ್ದು. ಅವರಿಗೆ ಸತ್ಯವೆಂಬುದು ಏಕಕಾಲಕ್ಕೆ ಅನತಿದೂರ–ಅತಿದೂರ, ಒಳಗಿನದ್ದು–ಹೊರಗಿನದ್ದು, ಸ್ವದ ಸ್ವಂತದ್ದು–ಪ್ರಿಯರ ಪರವಶದ್ದು, ವಾರ್ತೆ–ಗುಟ್ಟು , ವಾಚ್ಯ–ವಾಚಾಮಗೋಚರ, ಪ್ರಕಟ–ಅಪ್ರಕಟ, ಲೌಕಿಕ–ಅಧ್ಯಾತ್ಮಿಕ, ಇಹ–ಪರ, ವಾಸ್ತವ–ಆದರ್ಶ.

೩. ಸ್ವಧರ್ಮೇ ನಿಧನಂ ಶ್ರೇಯಃ

ಗಾಂಧೀಜಿ ಮತ್ತು ರಾಮಕೃಷ್ಣರಲ್ಲಿ ವ್ಯತ್ಯಾಸವನ್ನು ಕಾಣುವುದು ಮತ್ತು ದಾಖಲಿಸುವುದು ಅಸಾಧ್ಯವಲ್ಲ, ಆದರೆ ಅದು ಅನಗತ್ಯವೆಂಬುದೇ ನನ್ನ ಪ್ರಮುಖ ಇರಾದೆ : ಹಾಗೆ ಅನಗತ್ಯವೆಂದು ಪರಿಗಣಿಸಬಹುದಾದ ಕಾರಣಗಳ ಕಡೆಗೇ ನನ್ನ ಮುಖ್ಯ ಗಮನವಿರುವುದು. ಈ ಸತ್ಯದ ಹಠ ಮತ್ತು ಭಕ್ತಿಯ ವ್ಯಸನದ ಅವರ ಭಾಷೆಯೇ ನಮಗೆ, ನಮ್ಮ ವರ್ತಮಾನಕ್ಕೆ, ಲಭ್ಯವೆನ್ನಿಸುವ ಸ್ಥಿತಿಯಲ್ಲಿ ಉಳಿದಿರಬಹುದಾದ ಭಾರತೀಯತೆ ಇರಬಹುದು ಎಂಬುದು ನನ್ನ ಸದ್ಯದ ವಾದ. ಹಾಗೂ ಈ ಕ್ರಮವು ಪಾಶ್ಚಾತ್ಯ ನಾಗರಿಕತೆಯ ಸದ್ಯದ ತರ್ಕಕ್ಕೆ, ಅದರ ದುರಂತಗಳಿಗೆ, ದುರಹಂಕಾರಗಳಿಗೆ, ಅತಿಮುಖ್ಯ ಎದುರಾಳಿ ಎಂಬುದು ಅದರ ಗುಣವಿಶೇಷ.

ಗಾಂಧೀಜಿಯವರ 'ಸ್ವರಾಜ್ಯ'ದ ಪರಿಕಲ್ಪನೆ ಈ ಶತಮಾನ ಕಂಡ ಅತ್ಯಂತ ಕ್ರಾಂತಿಕಾರಿ ಚಿಂತನೆ. ಕಾಲ ದೇಶಗಳು ಮನುಷ್ಯಜೀವಿಯ ಇರುವಿಕೆ / ಅರಿಯುವಿಕೆಗಳ ಸಾವಯವ ಅಂಗಗಳು ಎಂಬುದೇ, ಸಾರ್ವತ್ರಿಕತೆ, ಸಾರ್ವಕಾಲಿಕತೆಯೆಂಬುದು ಒಂದು ಬಹುದೊಡ್ಡ ಮೋಸ ಎಂಬುದೇ ಸ್ವರಾಜ್ಯ ಎಂಬ ಪರಿಕಲ್ಪನೆಯ ಮೂಲಭೂತ ಗ್ರಹೀತ. ಪ್ರತಿ ಸಮುದಾಯಕ್ಕೂ ತನ್ನ ತನವೆಂಬುದೊಂದಿದೆ. ಆ ವಿಷಯ ಈ ಹೇಳಿಕೆಯಲ್ಲಿ ಕಾಣುವಂತೆ ಸರಳವಲ್ಲ ಎಂಬುದೇ ನಿಜವಾದರೂ, ಈ ತನ್ನತನವೆಂಬುದು, ಕೊನೆಯಲ್ಲಿ, ಸಮುದಾಯಗಳನ್ನು ವ್ಯಾಖ್ಯಾನಿಸಬಲ್ಲ, ಅವುಗಳ ಅನನ್ಯತೆಯನ್ನು ತೋರಬಲ್ಲ ಅಂಶವಾಗಿರುತ್ತದೆ. ಅದನ್ನು ನಮ್ಮ ಸ್ಮೃತಿಗಳು, ಸಾಮುದಾಯಿಕ ವಾಸ್ತವಗಳು, ಕೂಗಿ ಹೇಳುತ್ತಿರುವಂತೆ ಭಾಸವಾಗುವುದು. ಸಾರ್ವತ್ರಿಕ ಮತ್ತು ಸಾರ್ವಕಾಲಿಕ ಮೌಲ್ಯಗಳ ಪ್ರತಿಪಾದನೆಯ ಅತಿರೇಕವನ್ನು ನಾವು ಈಗಾಗಲೇ ಬಹುಕಾಲ

ಕಂಡದ್ದಾಗಿದೆ. ಈ ಅತಿರೇಕಗಳು, ಪಾಶ್ಚಾತ್ಯ ಚಿಂತನೆಗಳು ನಮ್ಮಲ್ಲಿ ಬಿತ್ತಿದ ಎರವಲು ಬೀಜದ ಫಲಗಳು ಎಂಬುದು ನಾವೀಗ ತುರ್ತಾಗಿ ಗಮನಿಸಬೇಕಾದ ವಿಚಾರ. ಧರ್ಮನಿರ್ದೇಶಿತ ಹಳೆಯ ಸಮಾಜದ ಹಲವು ವರ್ಗೀಕರಣಗಳು, ಬಹುರೂಪತೆಗಳು, ಕೈಗಾರಿಕೀಕರಣದ ಪ್ರಭಾವವಾಗಿ ಆಕ್ರಮಣಕ್ಕೆ ತುತ್ತಾದಾಗ, ಇಡೀ ಪ್ರಪಂಚ ಒಂದು, ಜನರೆಲ್ಲಾ ಒಂದು, ಅವರ ಕೈವಲ್ಯವೂ ಒಂದೇ, ಅದಕ್ಕೆ ದಾರಿಯೂ ಒಂದೇ ಎಂಬ ಅನುಕೂಲಸಿಂಧು ಸಮಯಸಾಧಕ ತತ್ತ್ವ ಕೈಗಾರಿಕೀಕರಣ ಮತ್ತು ಅದರ ಆನುಷಂಗಿಕ ಉತ್ಪನ್ನಗಳಾದ ಪಾಶ್ಚಾತ್ಯೀಕರಣ, ಆಧುನೀಕರಣಗಳ ಸಿದ್ಧಾಂತವಾಯಿತು ಎಂಬುದು ಗಮನಿಸಬೇಕಾದ ಅಂಶ. ಶೋರಿಕೆಯ ಈ ಪುರೋಗಾಮಿತ್ವವೇ, ಮುಖ್ಯವಾಗಿ ಮೂರನೆಯ ಜಗತ್ತು ಎಂದು ಕರೆಯಲ್ಪಡುವ ಭೂಭಾಗದ, ಇನ್ನಿಲ್ಲದ ಶೋಷಣೆಗೆ ತಾರ್ಕಿಕ ನೆಲೆಗಳನ್ನು ಒದಗಿಸಿದ್ದರ ದೃಷ್ಟಾಂತಗಳನ್ನು ಎಡ್‌ವರ್ಡ್ ಸೇಯ್ದನ *Orientalism* ಎಂಬ ಗ್ರಂಥದಲ್ಲೂ ಕೂಡಾ ನಾವು ಕಾಣಬಹುದಾಗಿದೆ. ಮಾರ್ಕ್ಸ್‌ನಿಂದ ಹಿಡಿದು ಮಾರ್ಕ್ಸ್‌ವಾದದವರೆಗೆ ಮಾರ್ಕ್ಸೀಯರಿಗೂ ಕೂಡಾ ಈ ಮೂರನೆಯ ಜಗತ್ತು ಪಾಶ್ಚಾತ್ಯರ ದಯೆಯಲ್ಲಿ ಮೋಕ್ಷ ಕಾಣಬೇಕಾದಂಥದ್ದು ಎನ್ನಿಸಿದ್ದೂ ಕೂಡಾ ಈ ಕಾರಣದಿಂದಾಗಿಯೇ.[೩]

ಪದಾರ್ಥ ಪ್ರಪಂಚದ ವಿವರಗಳಲ್ಲಿ ವೈವಿಧ್ಯವನ್ನು ಕಂಡ, ಆಧುನಿಕ ನಾಗರಿಕತೆಯ ಕುಲಪುತ್ರನಾದ, ವಾಸ್ತವವಾದವೂ ಕೂಡಾ ಅಂಥ ವಿವರಗಳನ್ನು ಅಳೆಯಲು ಹೊತ್ತು ತಿರುಗಾಡುತ್ತಿದ್ದ ಮೌಲ್ಯಗಳ ಪಟ್ಟಿಗೆಯಲ್ಲಿ ಇದ್ದದ್ದು ಈ ಸಾರ್ವಕಾಲಿಕ, ಸಾರ್ವತ್ರಿಕ ವ್ಯಾಪ್ತಿಯನ್ನು ಗ್ರಹೀತವಾಗಿರಿಸಿಕೊಂಡ ಮೌಲ್ಯಗಳೇ. ಹಾಗಲ್ಲದೇ, ವಾಸ್ತವವಾದವು ಜಗತ್ತನ್ನು ಗೆಲ್ಲುವ, ಮೂಗು ತೂರಿಸುವ, ಆಕ್ರಮಿಸುವ, ಆಪೋಶನ ತೆಗೆದುಕೊಳ್ಳುವ, ಮಾರ್ಗವಾಗಿ ಪರಿಣಮಿಸುತ್ತಿರಲಿಲ್ಲ. ಈ ವಾಸ್ತವವಾದವನ್ನು, ಅದರ ತರ್ಕವನ್ನು, ಒಂದು ದೊಡ್ಡ ಮೋಸ *(hoax)* ಎಂದೂ, ಈ ವಾಸ್ತವವೇ ದೊಡ್ಡ ಕಟ್ಟುಕತೆಯೆಂದೂ ಕಾಫ್ಕಾನಂಥವರು ನಿರ್ಣಾಯಕವಾಗಿ ಘೋಷಿಸುವವರೆಗೆ ಅದರ ಅತಿರೇಕ ಬೆಳೆಯಿತು; ಪಾಶ್ಚಾತ್ಯ ಸಂಸ್ಕೃತಿಯ ವಸಾಹತುಶಾಹಿತ್ವ ಬೆಳೆಯಿತು; ಪಾಶ್ಚಾತ್ಯರ ಶ್ರೇಷ್ಠತೆ ಮತ್ತು ಪ್ರಾಬಲ್ಯಗಳು ಪ್ರಶ್ನಾತೀತ ಗ್ರಹೀತಗಳಾದವು. ಈ ಸಾರ್ವತ್ರಿಕತೆ ಮತ್ತು ಸಾರ್ವಕಾಲಿಕತೆಯ ಮೌಲ್ಯಗಳ ಬದಲಾಗಿ ಬಂದದ್ದು ಅಷ್ಟೇ ವಿಕೃತವಾದ, ಆದಾಗ್ಯೂ ಪಾಶ್ಚಾತ್ಯ ಕೃಪಾಪೋಷಿತವೇ ಆದ, ವ್ಯಕ್ತಿವಾದ. ಜಗತ್ತೇ ಒಂದು ಎಂದು ಭಾವಿಸಿದ ವಸಾಹತುಶಾಹಿತ್ವವೂ, ಜಗತ್ತಿನ ಪ್ರತಿ ವಿವರವೂ ಅನನ್ಯ ಎನ್ನುವ ನವವಸಾಹತುವಾದವೂ ಮೂಲದಲ್ಲಿ ಒಂದೇ ಉದ್ದೇಶದವು: ನೋಡುಗನಿಗೆ ವಿಶಿಷ್ಟ ಸ್ಥಾನವನ್ನು ಕರುಣಿಸಿ, ಜನರನ್ನು, ಸಮುದಾಯಗಳನ್ನು, ಸಂಸ್ಕೃತಿಗಳನ್ನು, ಕೇವಲ ಯಕಶ್ಚಿತ ಪದಾರ್ಥಗಳೆಂಬಂತೆ ಪರಿಗಣಿಸುವ ಉದ್ದೇಶದವು.

ಸತ್ಯದ ಈ *absolutist* ವ್ಯಾಖ್ಯಾನವನ್ನು ಈ ಹಿಂದೆ ಪ್ರತಿ ಸಂಸ್ಕೃತಿಗಳೂ ತಮ್ಮ ತಮ್ಮದೇ ರೀತಿಯಲ್ಲಿ ಧಿಕ್ಕರಿಸಿವೆ. ವಾಸ್ತವ–ಕಲ್ಪನೆ, ವ್ಯಕ್ತಿ–ಸಮುದಾಯ, ಪರಂಪರೆ–ಹೊಸತನಗಳು ವಿಭಾಜ್ಯಗಳಲ್ಲ, ಒಂದನ್ನು ಬಿಟ್ಟು ಒಂದಲ್ಲ ಎಂಬ ಈ ತರ್ಕವನ್ನೇ ಗಾಂಧೀಜಿಯವರು ಸ್ವರಾಜ್ಯದ ಪರಿಕಲ್ಪನೆಯ ಮೂಲಕ ಮತ್ತೆ ಪ್ರತಿಷ್ಠಾಪಿಸಲು ಪ್ರಯತ್ನಿಸಿದ್ದು.[೪] ಯಾವ ಮೌಲ್ಯಗಳು ನಮ್ಮನ್ನು ಕಾಯಬಲ್ಲವು, ನಮ್ಮದೇ ಸಮುದಾಯದಿಂದ ನಾವು ಆಯಬಹುದಾದ

ಮೌಲ್ಯಗಳು ಯಾವುವು, ಅವು ನಮಗೆ ಈಗಲೂ ಲಭ್ಯವೆನಿಸುವ ಬಗೆ ಹೇಗೆ, ನಮ್ಮ ಸನ್ನಿವೇಶ ಬದ್ಧ ಅಸ್ತಿತ್ವದ ನೆಲೆಯನ್ನು ಪರಿಗಣಿಸಿ ಪೋಷಿಸಬಲ್ಲ ಮೌಲ್ಯಗಳು ಯಾವುವು ಎಂಬ, ಪ್ರದರ್ಶನರತಿಯಾಗಲೀ, ವೈಭವೀಕರಣವಾಗಲೀ ಅಲ್ಲದ, ಇರುವಿಕೆ/ಅರಿಯುವಿಕೆಯ ನಿಜ ನೆಲೆಯ ಅರಸುವಿಕೆಯನ್ನೇ ನಾನು ಸಂಸ್ಕೃತಿ ಚಿಂತನೆ ಎಂದು ಕರೆಯುತ್ತಿದ್ದೇನೆ. ಗಾಂಧೀಜಿ ಯವರ ಸ್ವರಾಜ್ಯಚಿಂತನೆ ಹಾಗೂ ಪಾಶ್ಚಾತ್ಯ ಸಂಸ್ಕೃತಿಯಲ್ಲೇ ಈ ಶತಮಾನದ ಅತ್ಯಂತ ಪ್ರಭಾವಶಾಲಿ ತತ್ತ್ವಶಾಸ್ತ್ರಜ್ಞನಾದ ಮಾರ್ಟಿನ್ ಹೈಡೆಗರನ *fundamental ontology* ಗಳು, ಇದಕ್ಕೆ ಅತ್ಯುತ್ಕೃಷ್ಟ ದೃಷ್ಟಾಂತಗಳು. ಆಯಾ ಸಮುದಾಯಗಳು ತಮ್ಮ ಇರುವಿಕೆಯ ನೆಲೆಯಲ್ಲಿ ಕಂಡುಂಡ ನಂಬಿಕೆಗಳು ಮತ್ತು ಕನಸುಗಳ ಮುಖಾಮುಖಿಯಲ್ಲಿ, ಸಮುದಾಯದ ಸ್ವವನ್ನೂ ಅದರ ಅನ್ಯವನ್ನೂ ಬಹಿರಂಗ ಮುಖಾಮುಖಿಗೆ ಅಣಿಗೊಳಿಸುವ ಡಯಲೆಕ್ಟಿಕ್‌ನಲ್ಲಿ, ಒಂದೊಂದೂ ಸಮುದಾಯವು ವಿಸ್ಮೃತಿಗೆ ಒಳಗಾಗದ, ವಿಕೃತಿಗೆ ಪಕ್ಕಾಗದ, ಹೊಸತಕ್ಕೆ ಬೆನ್ನು ತಿರುಗಿಸದ, ಆರೋಗ್ಯಪೂರ್ಣತೆಯನ್ನು ಪಡೆಯುವಂತೆ ಪ್ರಯತ್ನಿಸುವುದೇ ಸಂಸ್ಕೃತಿ ಚಿಂತನೆಯ ಫಲಶ್ರುತಿ ಎನ್ನಬಹುದು. ಈ ಹುಡುಕಾಟವನ್ನು ಅಸಾಧ್ಯಗೊಳಿಸುವದೇ, ಅದರ ಇರುವಿಕೆಯ ನೆಲೆಗಳನ್ನು ತಪ್ಪಿಸುವುದೇ ಆಧುನಿಕ ನಾಗರಿಕತೆಯು ಉಂಟು ಮಾಡುವ ಪ್ರಭಾವಶಾಲೀ *(dominant / dominating)* ಸಂಸ್ಕೃತಿಯಾಗಿದೆ. ಹೀಗೆ ಸಂಸ್ಕೃತಿಯ ಮುಖ್ಯಧಾರೆಯಿಂದ ನಿಷ್ಕಾರಣವಾಗಿ ವಂಚಿತರಾದ ಜನರ ಅರಿವು, ನಂಬಿಕೆಗಳು, ಜೀವನಕ್ರಮಗಳು ಮತ್ತು ಜೀವನ ದ್ರವ್ಯಗಳ ನೆಲೆಯಲ್ಲೇ ಅವರನ್ನು ತಲುಪಬೇಕಾದ ಅನಿವಾರ್ಯತೆಯನ್ನು ಗಾಂಧೀಜಿಯವರ ಸ್ವರಾಜ್ಯಚಿಂತನೆಯು ಪ್ರತಿಪಾದಿಸುತ್ತದೆ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ನಮ್ಮ ಇರುವಿಕೆ/ಅರಿಯುವಿಕೆಯ ಕ್ರಮಗಳಲ್ಲಿ ನಾವು ನಮ್ಮ ಸಮುದಾಯಗಳ ಜೊತೆ ಸಾತತ್ಯವನ್ನು ಉಳಿಸಿಕೊಳ್ಳಲಾಗದಂಥ ಅರಿಯುವಿಕೆಯ ಮಾದರಿಗಳನ್ನು *(epistemological paradigms)* ಒದಗಿಸುವುದು ಆಧುನಿಕ ನಾಗರಿಕತೆಯ ಅತಿದುಷ್ಟತನವಾಗಿದ್ದು, ಅದನ್ನು ಎದುರಿಸಿ ನಮ್ಮ ಸಮುದಾಯಗಳ ಜೊತೆ ಸಾತತ್ಯವನ್ನು ಪಡೆಯುವ ಕೆಲಸ ನಮ್ಮ ಇರುವಿಕೆಗೇ ಅತ್ಯಂತ ಜರೂರಿನದು ಎಂದು ಸಂಸ್ಕೃತಿ ಚಿಂತನೆ ತಿಳಿಯುತ್ತದೆ.

೪. ಅ(ನ)ನ್ಯ ಚಿಂತೆ

'ವಾಸ್ತವ', 'ವಾಸ್ತವತೆ', 'ವಾಸ್ತವವಾದ', 'ವಸ್ತುನಿಷ್ಠತೆ' ಎಂಬಿತ್ಯಾದಿ ಪರಿಕಲ್ಪನೆಗಳನ್ನು ಅವಲೋಕಿಸಿ. ವಾಸ್ತವವೆಂಬುದು 'ಹೊರ' ಜಗತ್ತು, ನೋಡುವ ಕಣ್ಣಿಗೆ ಒಡ್ಡಿಕೊಂಡ ದೀನ ಪ್ರಪಂಚ, ನೋಡುವ ಕಣ್ಣೇ ಪ್ರಮುಖ, ಎಂಬ ನಂಬಿಕೆಯೇ ವಾಸ್ತವವಾದ ವನ್ನು ಬೆಳೆಸಿದ್ದು ಮತ್ತು ಪೋಷಿಸಿದ್ದು. ಹಾಗಾಗಿಯೇ ಕಾಫ್ಕಾನಂಥವರು ಇಂಥ ವಿವರಗಳ ಜಗತ್ತನ್ನೇ ಮಾಯೆ ಎಂಬಂತೆ ತೋರಿದಾಗ, ಫ್ಯಾಂಟಸಿಯೇ ಸತ್ಯವಾಗಿ ಕಂಡೀತು. ಆದರೆ ಕನ್ನಡದಲ್ಲಿ ಕಾಣುವ ವಾಸ್ತವವಾದವು ನಿಜದಲ್ಲಿ 'ವಾಸ್ತವವಾದ' ವೇ ಅಲ್ಲ. ಯಾಕೆಂದರೆ ನೋಡುವ ಕ್ರಮದಲ್ಲಿ ಕನ್ನಡಕ್ಕೆ ಒಂದು ವಿಶಿಷ್ಟತೆಯಿದೆ. ಈ ವಸ್ತು ಪ್ರಪಂಚವನ್ನು ವ್ಯಾಮೋಹದ ಲ್ಲಲ್ಲದೇ ನೋಡಲು, ಕೇವಲ ಪದಾರ್ಥ ಪ್ರಪಂಚವೆಂಬಂತೆ ನೋಡಲು, ವಾಸ್ತವವಾದಿಗಳೆಂದು ಕರೆಯಲ್ಪಡುವ ನಮ್ಮ ಬರಹಗಾರರಿಗೆ ಸಾಧ್ಯವಾದದ್ದಿಲ್ಲ. ವಸ್ತು ವಿವರಗಳಲ್ಲಿ ಗ್ರಹಿಸಲು

ಹೊರಟರೂ, ಲೇಖಕ ತಾದಾತ್ಮ್ಯದಲ್ಲಿ, ಪ್ರೇಮದಲ್ಲಿ, ಕಂಡದ್ದರ ಜೊತೆ ಬೆರೆಯುವ ಪ್ರಕ್ರಿಯೆಯೇ ನಮ್ಮ ಕನ್ನಡದ ವಾಸ್ತವವಾದದಲ್ಲಿ ಎದ್ದು ಕಾಣುವಂಥದ್ದು.

ಕಾರಂತರ ಮರಳಿ ಮಣ್ಣಿಗೆಯ ಕ್ರಮವನ್ನು ಗಮನಿಸಿ. ಹಳಹಳಿಕೆಯುದೋಷ ಎಂಬ ಗ್ರಹೀತವಿರುವ ಕೆಲವರಿಗೆ ಇದು ಹಳಹಳಿಕೆಯಾಗಿ ಕಾಣುತ್ತದೆ. ಕಳೆದದ್ದರ, ಕಳೆಯುತ್ತಿರುವುದರ ಬಗ್ಗೆ ಹಳಹಳಿಕೆ ಅತಿ ಸಹಜ ಪ್ರತಿಕ್ರಿಯೆ ಎಂದು ಗುರುತಿಸಬಲ್ಲವರಿಗೆ ಹಾಗನ್ನಿಸಬೇಕಿಲ್ಲ.* ಕಾರಂತರ ಮರಳಿ ಮಣ್ಣಿಗೆ ಕಾಣುವ ನೋಟವನ್ನು ಹಳಹಳಿಕೆ ಎಂಬ ಬದಲು ಪ್ರೇಮ *(caring)* ಎಂದು ಕರೆದರೆ ಅದು ಬೇರೆಯೇ ವಸ್ತುವಾಗಿ ಕಂಡೀತು. ಅದೂ ಭಾವುಕತೆ, ಪ್ರೇಮದ ಉನ್ಮಾದಗಳು ಹತ್ತಿರವೂ ಸುಳಿಯಲಾರವು ಎಂದು ನಾವು ಭಾವಿಸುವ ಕಾರಂತರಲ್ಲಿ ಇದು ಗುಣವಿಶೇಷವೇ ಸರಿ. ಕಾರಂತರು ಸರಸೋತಿ, ಪಾರೋತಿ, ನಾಗವೇಣಿಯರನ್ನು ಚಿತ್ರಿಸುವಲ್ಲಿ ಪ್ರೇಮದ *abandon* ನಲ್ಲಿ ವ್ಯವಹರಿಸುತ್ತಿರುವವರು. ಈ ಪ್ರೇಮಮಯತೆಯಿಂದಾಗಿಯೇ ಯಾವ ವಿವರವೂ ಯಕಶ್ಚಿತವಲ್ಲ ಎಂದು ಅವರಿಗೆ ಕಾಣುವುದರಿಂದಲೇ ಒಂದು ವಾಸ್ತವ ಪ್ರಪಂಚ ತನ್ನ ಸಮಗ್ರ ವಸ್ತು ವಿವರದಲ್ಲಿ ಮೈ ತಳೆಯುವುದು ಸಾಧ್ಯವಾಗುತ್ತದೆ. (ಕುವೆಂಪು ಮುಂತಾದ ಬರಹಗಾರರಂತೆ ವಿವರಗಳನ್ನು ಆಯುವ, ಆಯ್ದು ಜೋಡಿಸುವ ಕಸಬುಗಾರಿಕೆ ಕಾರಂತರಿಗೆ ಎಂದೂ ಇಷ್ಟವಾದದ್ದಿಲ್ಲ). ಆಗ ಲಚ್ಚನ ದುಷ್ಟತನವೂ, ರಾಮೈತಾಳರ ಮಿತವ್ಯಯ, ಜಿಪುಣತನ (ಗೋಡೆ ಸಂದುಗಳಲ್ಲಿ ತುರುಕಿಟ್ಟ ಹಣ, ಚಿನ್ನ) ಗಳ ಇನ್ನೊಂದು ಸಾಧ್ಯತೆ, ಅನುಷಂಗಿಕ ಉತ್ಪನ್ನ, ಎಂಬುದು ಕಂಡು, ಅದನ್ನು ದಾಖಲಿಸುವಷ್ಟರ ಮಟ್ಟಿಗೆ ಅದರ ಬಗ್ಗೆ ತಿರಸ್ಕಾರದ್ದಲ್ಲದ, ಆದರೆ ಒಪ್ಪಿಗೆಯದೂ ಅಲ್ಲದ, ನೋಟ ಅವರಿಗೆ ಸಾಧ್ಯವಾಗುತ್ತದೆ. ಲಚ್ಚನನ್ನು ಅವರು *pure abstract* ಈವಿಲ್ ಆಗಿ ಯಾಕೆ ಕಾಣರು ಎಂಬ ಪ್ರಶ್ನೆಯೇ ಹಾಗಾಗಿ ಅಪ್ರಸ್ತುತ : ಯಾಕೆಂದರೆ, ರಾಮೈತಾಳರ ಜಿಪುಣತೆಯಿಲ್ಲದೇ ಲಚ್ಚನ ದುಂದು ಗಾರಿಕೆ ಮತ್ತು ಬೇಜವಾಬ್ದಾರಿಗಳೂ ಇಲ್ಲವಾದ್ದರಿಂದ, ಈ ದುಷ್ಟತನವೆಂಬುದು ಒಂದು ಸ್ವತಂತ್ರ, *pure,* ಅಮೂರ್ತ ವಿಷಯವಲ್ಲ. ಹಾಗೂ, ಅದು ರಾಮೈತಾಳರ ಒಂದು ಸಾಧ್ಯತೆ ಎಂಬ ಕಾರಣದಿಂದಾಗಿ ತಿರಸ್ಕಾರ ಯೋಗ್ಯವೂ ಅಲ್ಲ (ಹಾಗೆ ನೋಡಿದರೆ ಲಚ್ಚನ ಇಂಗ್ಲಿಷ್ ವಿದ್ಯಾಭ್ಯಾಸ ರಾಮೈತಾಳರು ಎಣ್ಣೆ ಎಣ್ಣೆ ಪಡೆದಿರುವಂಥದ್ದು : ರಾಮೈತಾಳರು ತಾವು ಮಾಡಿದ್ದನ್ನು ಲಚ್ಚನಲ್ಲಿ ಉಣ್ಣುತ್ತಿದ್ದಾರೆ). ನಿಜವಾದ ಈವಿಲ್ ಆಧುನಿಕ ನಾಗರಿಕತೆಯಾಗಿರುವುದರಿಂದಲೇ ಲಚ್ಚ ಯಾಕೆ ದುಷ್ಟನಾಗುತ್ತಾನೆ ಎಂಬುದೊಂದು ಪ್ರತ್ಯೇಕ ಪ್ರಶ್ನೆ ಎಂಬಂತೆ ಎತ್ತುವುದು ಸಾಧ್ಯವಲ್ಲ. ಅರಿವು ಇರವುಗಳ ನೆಲೆತಪ್ಪಿದ ಅತಂತ್ರ ಸ್ಥಿತಿಯೇ ಈ ಈವಿಲ್‌ನ ಮೂಲ ಕಾರಣ. ಲಂಪಟರಾದ ಲಚ್ಚ ಮತ್ತು ಚಿಕವೀರರು ತಮ್ಮ ಸಮುದಾಯಗಳ ಸ್ವದ ಇನ್ನೊಂದನ್ನು, ಅಸಹ್ಯವನ್ನು ಮುಖಕ್ಕೆ ಹೊಡೆದಂತೆ ತೋರಿಸುವವರು. ಅವು ತಮ್ಮ ಸಮುದಾಯದವೇ. ಆದ್ದರಿಂದಲೇ ಆ ಸಮುದಾಯಗಳು ಅವುಗಳ ಬಗ್ಗೆ ನಿರ್ದಯಿಯಲ್ಲ, ಬಹುಮಟ್ಟಿಗೆ ಅವುಗಳನ್ನು ಹೊಟ್ಟೆಗೆ ಹಾಕಿ ಕೊಂಡಾವು.

ರಾಮನಲ್ಲಿ ಇನ್ನೂ ಒಂದು ಸಾಧ್ಯತೆಯನ್ನು ಕಾರಂತರು ಹುಡುಕುತ್ತಾರೆ (ರಾಮನಾಗಲೀ ನಾಗವೇಣಿಯಾಗಲೀ ಲಚ್ಚನ ಬಗ್ಗೆ ಪೂರ್ತಿ ಮನಮುರಿದವರಲ್ಲ ಎಂಬ, ಕಾದಂಬರಿಯ,

ಇಂಗಿತವೂ ಇಲ್ಲಿ ಮುಖ್ಯ). ಈ ಎಲ್ಲ ಸಾಧ್ಯತೆಗಳಲ್ಲಿಯೂ ಒಂದು ಮುಖ್ಯ ಸಾತತ್ಯವನ್ನು ಅವರು ಪ್ರತಿಷ್ಠಾಪಿಸಲು ಹೆಣಗುತ್ತಾರೆಯೆಂಬುದು ಇನ್ನಷ್ಟು ಮುಖ್ಯ. ಅದಕ್ಕೆ ರಾಮ ಗಾಂಧೀಜಿ ಚಳವಳಿಗೆ ಸೇರುವುದಿಲ್ಲ. ಆದರೆ ಅವನು ಗಾಂಧೀಜಿ ಚಳವಳಿಗೆ ಸೇರದೆಯೂ ಗಾಂಧೀಜಿ ಹೇಳುವ ಸ್ವರಾಜ್ಯಕ್ಕೆ ಅತ್ಯಂತ ಹತ್ತಿರದವನಾಗಿ ಕಾಣುತ್ತಾನೆ. ರಾಮ ಬದಲಾದ ಪ್ರಪಂಚದಲ್ಲಿ ಬದುಕುವವನು. ಹಾಗಾಗಿ ತಾನೂ ಬದಲಾಗಿರುವವನು. ಆದರೆ ಅವನ ಬದಲಾವಣೆಯೂ ಬದಲಾವಣೆ ಎಂಬ ಅಮೂರ್ತವಲ್ಲ : ಅದಕ್ಕೆ ಅದರದ್ದೇ ನಡಿಗೆ, ಕ್ರಮ, ಭಾಷೆ, ವ್ಯಕ್ತಿತ್ವ (ನಾಗವೇಣಿಯ ಸ್ಥೈರ್ಯದಂತೇ) ಇದೆ. ಅದು ಸಂದುಕಡಿಯದ ಬೆಳವಣಿಗೆ.[೬]

ಇದರ ಸರಿತಪ್ಪುಗಳು, ಕಲಾಕುಶಲತೆ, ಅಕುಶಲತೆಗಳು, ಸಾಹಿತ್ಯ ವಿಮರ್ಶೆಯಲ್ಲಿ ಪ್ರಶ್ನೆಗಳಾದದ್ದಿದೆ.[೭] ಆದರೆ ಈ ಇಡೀ ಕಾದಂಬರಿ ಒಟ್ಟಾಗಿ ಎತ್ತುವುದು ಒಂದು ಪ್ರಶ್ನೆ ಎಂದು ಗ್ರಹಿಸಿದಾಗ ಕಾಣುವ ಸತ್ಯ ಬೇರೆ. ಇಲ್ಲಿ ಮುಖ್ಯವಾಗಿ ಕಾಣುವುದು ಒಂದು ಜೀವನಕ್ರಮದ ಬಗೆಗಿನ ವ್ಯಾಮೋಹ ಮತ್ತು ಪ್ರೇಮ. ಇದೇ ಇಲ್ಲಿ *issue*. ಆದ್ದರಿಂದಲೇ ಇದು ಪಾಶ್ಚಾತ್ಯೀಕರಣ, ಆಧುನೀಕರಣ, ಕೈಗಾರಿಕೀಕರಣಗಳ ವಿರುದ್ಧ ಪ್ರಬಲವಾದ ವಾದವೊಂದನ್ನು ಒಡ್ಡುತ್ತಿದೆ. ಇಲ್ಲೂ ವಾದ ಸರಿಯೇ ತಪ್ಪೇ ಎಂಬುದು ಪ್ರಶ್ನೆಯಲ್ಲ ; ಸರಿತಪ್ಪುಗಳು ಈಗಾಗಲೇ ಗೊತ್ತಿರುವ ವಿಷಯಗಳಲ್ಲ. ಈ ವಾದವಿದೆ ಎಂಬುದೇ, ಈ ವಾದದ ಶಕ್ತಿಯೇ, ಇಲ್ಲಿ issue.

ಈ ರೀತಿ ನೋಡಿದಲ್ಲಿ ಕಾರಂತರಿಗೂ ಮಾಸ್ತಿಗೂ ಸಾಮ್ಯಗಳಿವೆಯೆಂಬುದು ಕೇವಲ ಸಹಜ. ಈ ಸಾಮ್ಯಗಳಿಂದ ಯಾವ ತಾಜಾ, ಸೃಜನಶೀಲ ಚಿಂತನೆಯೂ ಕನ್ನಡದ ಮಟ್ಟಿಗೆ ತಪ್ಪಿಸಿಕೊಳ್ಳಲಾರದು. ಬರಹಗಾರರ ಬಿಡಿ ಬಿಡಿ ಕೃತಿಗಳನ್ನು ಅವು ಬೇರೆ ಬೇರೆ ಎಂಬಂತೆ, ಅಥವಾ ಮಾಸ್ತಿ, ಕಾರಂತ ಮುಂತಾದ ಬರಹಗಾರರು ಬೇರೆ ಬೇರೆ ಎಂಬಂತೆ, ಸಾಹಿತ್ಯ ಚಿಂತನೆಯೆಂಬುದೊಂದು ಮಾತ್ರ ಅಘಟಿತ ಘಟನೆ ಎಂಬಂತೆ ವ್ಯವಹರಿಸುತ್ತಾ, ಯಾವ ಕೃತಿಗಿಂತ ಇನ್ನಾವ ಕೃತಿ, ಯಾವ ಬರಹಗಾರನಿಗಿಂತ ಇನ್ನಾವ ಬರಹಗಾರ, ಯಾವ ಚಿಂತನೆಯ ಶಿಸ್ತಿಗಿಂತ ಇನ್ನಾವ ಚಿಂತನೆಯ ಶಿಸ್ತು, ಶ್ರೇಷ್ಠ ಎಂಬಿತ್ಯಾದಿ ಒಡಕು ಧ್ವನಿಯ ಶ್ರೇಷ್ಠತೆಯ ವ್ಯಸನಗಳು ಗ್ರಹೀತವಾಗಿರುವ ನಮ್ಮ ಸಾಹಿತ್ಯಚಿಂತನೆಯು, ನಮ್ಮ ಸಮುದಾಯದ ಎಲ್ಲ ಚಿಂತನೆಗಳೂ ಒಂದೇ ಕುಟುಂಬ ಎಂಬ ಸತ್ಯವನ್ನು ವಿಧವಿಧವಾಗಿ ಮರೆತಿದೆ.

ಚಿಕವೀರನ ವಿಕೃತಿಯು ದೇವಮ್ಮಾಜಿಯ ಭೋಳೆ ಎಂದೂ ಅನ್ನಿಸಬಹುದಾದ ಒಳಿತಿನ ಒಂದು ಸಾಧ್ಯತೆಯೆಂಬುದನ್ನು ಮುಜುಗರವಿಲ್ಲದಂತೆ ಹೇಳುವ ಶಕ್ತಿಯೇ ಒಂದು ಸಮುದಾಯದ ಕುರಿತು ಇರುವ ವ್ಯಾಮೋಹದ ದ್ಯೋತಕ. ಈ ಸಮುದಾಯವು ಒಳಿತು ಕೆಡುಕುಗಳೆಲ್ಲವನ್ನೂ, ಜೀವಿತದ ಹಲವು ಸಾಧ್ಯತೆಗಳನ್ನು, ತನ್ನ ಗರ್ಭದಲ್ಲಿ ಹೊಂದಿರುವ ಸ್ವಯಂಸಂಪೂರ್ಣ ಘಟಕ. ಆದರೂ ಈ ಸಮುದಾಯದ ಸ್ವ ಎಂಬುದು ಅನ್ಯದ ಅಗತ್ಯವಿಲ್ಲದ ಸಮುದಾಯವಲ್ಲದಿರುವುದರಿಂದಲೇ, ಈ ಸಮುದಾಯದ ಗುಣವಿಶೇಷಗಳಿಗೆ ಹೊರತಾದ ನಯಗಾರಿಕೆಯ ಮೂಲಕ ಬ್ರಿಟಿಷ್ ವಸಾಹತುಶಾಹಿ ಕೊಡಗನ್ನು ಗೆಲ್ಲುತ್ತದೆ.[೮] ಬ್ರಿಟಿಷರ ಆಗಮನವಾಗುವವರೆಗೆ ಕಂಡು ಬರುವ ಈ ಜೀವನದಲ್ಲಿ ಒಳಿತು ಮತ್ತು ಕೆಡುಕಗಳೆರಡೂ ಪ್ರವರ್ಧಮಾನದಲ್ಲಿವೆಯೆಂಬುದು ಕಾದಂಬರಿಯಲ್ಲಿ ನಾವು ಗಮನಿಸಬೇಕಾದ ಅತಿ ಮುಖ್ಯ

ಅಂಶ. ಒಳಿತಿಗೆ, ನೈತಿಕತೆಗೆ, ರಾಜಕೀಯ ಅಧಿಕಾರ ಈಗ ಲುಪ್ತವಾಗಿದೆಯೆಂಬುದು ನಿಜವಾದರೂ, ಇದನ್ನೇ ಒಂದು *absolute* ಎಂದು ಪರಿಗಣಿಸಲು ಯಾರಿಗೂ ಸಾಧ್ಯವಾಗದಂತೆ ಒಳಿತುಗಳು ಸುತ್ತಮುತ್ತಲಲ್ಲೂ, ಸ್ಮೃತಿಯಲ್ಲೂ, ನಂಬಿಕೆಗಳಲ್ಲೂ, ಇವೆ. ಅದು ಆಗೀಗ ಚಿಕವೀರ, ಬಸವನಂಥವರನ್ನೂ ಬಾಧಿಸುವುದೂ ಕೈಕಟ್ಟುವುದೂ ಇದೆ. ಅಂದರೆ ನನ್ನ ವಾದ ಇದು: ಬ್ರಿಟಿಷರ ಆಗಮನದ ಪ್ರಕ್ರಿಯೆ ಕುತೂಹಲಕರವಾಗಿಯೂ, ಆಸಕ್ತಿ ಹುಟ್ಟಿಸುವಂತೆಯೂ ಇದೆ; ಆದರೆ ಬ್ರಿಟಿಷರ ಆಗಮನದ ನಂತರದ ಕೊಡಗಿನ ಜೀವನ ಪೇಲವವಾಗಿದೆ, ಕೇವಲ ಹೊಟ್ಟೆಹೊರೆಯುವಷ್ಟಕ್ಕೆ ಸೀಮಿತವಾಗಿದೆ, ನಮ್ಮ ಜೀವಿತದ ಸಾಧ್ಯತೆಗಳ ಪ್ರವರ್ಧಮಾನವು, ಹೇಳಲಾರದ , ಹೇಳದಿರಲೂ ಆರದ, ಸಾಮಾನ್ಯತೆಯಲ್ಲಿ ಅಡಗಿಹೋಗಿದೆ, ಎಂಬುದು ಕಾದಂಬರಿಯಲ್ಲಿ ನಾವು ಪಡೆಯಬಹುದಾದ ಧ್ವನಿ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಚಿಕವೀರನಲ್ಲಿ ಸ್ವಪರಿಪೂರ್ಣ ದುಷ್ಟತನವನ್ನು, ಈವಿಲ್‌ನ್ನು, ಅದೊಂದು *absolute* ಎಂಬರ್ಥದಲ್ಲಿ, ಅದೊಂದು ಶುದ್ಧ ತತ್ತ್ವಶಾಸ್ತ್ರೀಯ ಪ್ರಶ್ನೆ ಎಂಬರ್ಥದಲ್ಲಿ ಪರಿಗಣಿಸಿಲ್ಲ ಎಂಬುದು ಅತ್ಯಂತ ಗಮನಾರ್ಹವಾದ ವಿಷಯ. ನಮ್ಮ ಸಾಹಿತ್ಯವಿಮರ್ಶೆಯು ಮಾತ್ರ, ನಮ್ಮ ಲೇಖಕರ ರೀತಿಯಲ್ಲಿ, ಇಂಥ *absolute,* ತತ್ತ್ವಶಾಸ್ತ್ರೀಯ ಪ್ರಶ್ನೆಗಳಿರುತ್ತವೆಯೆಂದೂ, ಅದನ್ನು ಮಾಸ್ತಿ ಅತ್ಯಂತ ಸಮರ್ಥವಾಗಿ ಎತ್ತಿದ್ದಾರೆಯೆಂದೂ ತಿಳಿಯುವ ತಪ್ಪು ಗ್ರಹಿಕೆಯನ್ನು ಮುಂದೊಡ್ಡಿದ್ದುಂಟು.[೧೦] ಮತ್ತೂ ಒಮ್ಮೆ ಹೇಳುವುದಾದರೆ, ಚಿಕವೀರನ ಪ್ರವರ್ಧಮಾನವೂ ಒಂದು ಸಾಧ್ಯತೆಯಾಗಿ, ಕುತೂಹಲ ಕೆಡದ ಪರಿಗಣನೆಗೆ ಲಭ್ಯವಾಗುವಂತೆ, ಹಾಗೂ ಈ ಸಾಧ್ಯತೆಯ ಒಡಹುಟ್ಟುಗಳಾದ ಉಳಿದ ಜೀವನ ರೀತಿಗಳನ್ನು ಪ್ರವರ್ಧಮಾನಗೊಳಿಸುವಂತೆ ಇರುವುದರಿಂದಲೇ, ಚಿಕವೀರನೂ ಕಾದಂಬರಿಯ ನಾಯಕನಾಗಬಲ್ಲ : ಚಿಕವೀರನ ಪ್ರಪಂಚವನ್ನು ಬಿಟ್ಟು ಚಿಕವೀರನಿಲ್ಲ, ಚಿಕವೀರನಿಲ್ಲದೇ ಅಲ್ಲಿಯ ಒಳ್ಳೆಯತನಗಳೂ ಇಲ್ಲ. ಚಿಕವೀರ, ಕಾದಂಬರಿಯ ನಾಯಕ ಎಂಬಷ್ಟೇ ಮಾತ್ರಕ್ಕೆ ನಾವು ತಪ್ಪು ವಾದಗಳನ್ನೊಡ್ಡುವುದು ತರವಲ್ಲ. ಅಂದರೆ ಚಿಕವೀರನ ದುಷ್ಟತನದ ಪರಿಗಣನೆಯೂ ಒಂದು ಸಮುದಾಯದ ಬಗೆಗಿನ ವ್ಯಾಮೋಹದ ದ್ಯೋತಕ ಎಂಬ, ಕೇವಲ ತೋರಿಕೆಯ ವಿರೋಧಾಭಾಸದ, ವಾದವನ್ನು ನಾನು ಮುಂದೊಡ್ಡುತ್ತಿದ್ದೇನೆ.

ಆದರೂ ಮಾಸ್ತಿಯನ್ನೂ ಕಾರಂತರನ್ನೂ ಹೋಲಿಸಿದಾಗ, ಮಾಸ್ತಿಯಲ್ಲಿ ಕಾರಂತರ ಈ *abandon* ಇದೆಯೇ ಎಂಬುದು ಪ್ರಶ್ನೆ. ಮಾಸ್ತಿಯವರು, ಜೀವನದ ಜೊತೆ ವ್ಯವಹರಿಸುವ ಕ್ರಮದಲ್ಲೇ ದೂರವನ್ನು ಕಾಯ್ದುಕೊಳ್ಳುವ ಕ್ರಮ ಅಂತರ್ಗತವಾಗಿದೆ. ಎಲ್ಲವನ್ನೂ ನೋಡಿ, ಪರಿಭಾವಿಸಿ, ಪಡೆದ ವಿಹಂಗಮ ನೋಟವನ್ನು ಕೊಡಲು ಬಯಸುವವರು ಅವರು. ಯಾವುದೇ ರೀತಿಯ ದುಡುಕುವಿಕೆಯನ್ನು ಹತೋಟಿಯಲ್ಲಿಡುವ ರೀತಿಯಲ್ಲಿ ಈ ಒಳ–ಹೊರಗು, ಹತ್ತಿರ–ದೂರಗಳು ಬಹು ಸಂಕೀರ್ಣ ರೀತಿಯಲ್ಲಿ ಮಾಸ್ತಿಯವರಲ್ಲಿ ವರ್ತಿಸುತ್ತವೆ. ಆದುದರಿಂದಲೇ ಈ ಒಳಹೊರಗು ಮತ್ತು ಹತ್ತಿರದೂರಗಳನ್ನು ಏಕಕಾಲಕ್ಕೆ ಪ್ರತ್ಯೇಕವೂ, ಏಕವೂ ಆಗಿ ಮಾಡುವ *emotions recollected in tranquitlity* ಯನ್ನು ನೋಟದ ಪ್ರಮುಖ ಕ್ರಮವಾಗಿ ಹೊಂದಿದವರು ಮಾಸ್ತಿ.[೧೧] ಈ *recollection* ನಲ್ಲಿ (ಕಾದಂಬರಿಯ ಮಟ್ಟಿಗೆ ಇದು ಇನ್ನಷ್ಟು ನಿಜ : 'ಇತಿಹಾಸ' ಎಂದು ಕರೆಸಿಕೊಂಡ ದ್ರವ್ಯವನ್ನು ಅದು ಒಳಗೊಂಡಿದೆ) ದೂರವೂ ಇದೆ, ವ್ಯಾಮೋಹವೂ ಇದೆ. ಈ ಹತ್ತಿರ ದೂರಗಳನ್ನು ಆಗ ಬಿಟ್ಟು, ಈಗ ಹಿಡಿದು ಅವರು, ಮನಸ್ಸಿನ,

ನೋಟದ, ಜೀವನದೃಷ್ಟಿಯ ಸ್ತಿಮಿತವನ್ನು ಹೊಂದಲು, ವರ್ಡ್ಸ್‌ವರ್ತ್‌ನಂತೆ, ಪ್ರಯತ್ನಿಸುವವರು. ಹಾಗಾಗಿಯೇ, ಮಾಸ್ತಿಯವರ ದೃಢ ನಂಬಿಕೆಗಳನ್ನು ಧೂಳೀಪಟ ಮಾಡುವುದೇ ಜೀವಿತೋದ್ದೇಶವಾಗಿರುವ ಚಿಕವೀರನೇ ಕಾದಂಬರಿಯ ನಾಯಕನಾಗುವುದು ಮೇಲು ನೋಟಕ್ಕೆ ಕಾಣುವಷ್ಟು ಸರಳ ವಿಷಯವಲ್ಲ.

ಮಾಸ್ತಿ ಧಾರ್ಮಿಕ ಪರಂಪರೆಗೆ ಸೇರಿದವರು : ಅನುಕಂಪ, ಸರ್ವಭೂತದಯ ಅದರ ಮುಖ್ಯ ಗುಣ. ಇದು ದೊಡ್ಡ ಗುಣ. ಅದೂ ಲೌಕಿಕತೆಯ ಜೀವನಕ್ಕಂತೂ ಇದೇ ಶ್ರೇಷ್ಠ ಮಾದರಿ. ಹಾಗಾಗಿಯೇ ಮಾಸ್ತಿಯವರಲ್ಲಿ ದೇವರು, ನ್ಯಾಯ, ನೀತಿಗಳ ಚರ್ಚೆಗಳು ಆಧ್ಯಾತ್ಮಿಕ ಸಮಸ್ಯೆಗಳಲ್ಲ; ಧಾರ್ಮಿಕ ಸಮಸ್ಯೆಗಳು. ಅದೇ, ಕಾರಂತರು ಅನಂತಮೂರ್ತಿ ಹೇಳುವಂತೆ "ಹಿಂಡು ಬಿಟ್ಟಗಲಿದ ಸಲಗ"; ಧಾರ್ಮಿಕ ಪರಂಪರೆ ಅವರಿಗೆ ಸೇರದು. ಹಾಗೆಂದರೆ ಧಾರ್ಮಿಕ ಪರಂಪರೆಯ ಗುಣಗಳು ಅವರಿಗೆ ವರ್ಜ್ಯವೆಂದಲ್ಲ. ಅವರದ್ದು, ಅವರು ಸೃಜನಶೀಲರಾಗಿದ್ದಾಗ, ಪ್ರೇಮದ, ಭಕ್ತಿಯ ಮಾರ್ಗ. ಈ ಭಕ್ತಿಯಲ್ಲಿ ಲೆಕ್ಕಾಚಾರ ಇಲ್ಲ. ಮಾಸ್ತಿಯವರು ಬೇರೆ ಬೇರೆ ಜನರನ್ನು, ಕ್ರಮಗಳನ್ನು, ಜಾತಿಗಳನ್ನು, ಸಂದರ್ಭಗಳನ್ನು ಪರಿಭಾವಿಸಿ ತೀರ್ಮಾನಕ್ಕೆ ಬಂದರೆ, ಕಾರಂತರು ನಾಗವೇಣಿ ಒಬ್ಬಳನ್ನೇ ನೋಡಿ, ಅವಳಲ್ಲಿ ಪ್ರೇಮದಲ್ಲಿ ಸಿಲುಕಬಲ್ಲರು, ದುಡುಕಬಲ್ಲರು. ಈ ಹಿಂಡಗಲುವ ಕ್ರಮ ಅನುಭಾವಿಯ ಕ್ರಮ. ದೇವರು ಇಲ್ಲಿ ಅನುಭಾವ; ಧರ್ಮ ಅಲ್ಲ: ಅವರವರ ನಿಜದಲ್ಲಿ, ಅವರ ನಿಜಗಳ ತುರ್ತಲ್ಲಿ ಎಟಕುವಂಥದ್ದು. ಮಾಸ್ತಿಯವರಿಗಾದರೆ ಸಭ್ಯ ಗೃಹಸ್ಥಿಕೆಯಲ್ಲಿ, ಶುದ್ಧ ಜೀವನದಲ್ಲಿ, ಕೊನೆಯ ಫಲಶ್ರುತಿಯಾಗಿ ಸಿಗಬಹುದಾದ್ದು.

ಇವೆರಡೂ, ಪ್ರತ್ಯೇಕವಾಗಿದ್ದಾಗಲೂ, ಒಂದೇ ಸಂಸ್ಕೃತಿಯ, ಎರಡು ಒಡಹುಟ್ಟಿನ ಸಾಧ್ಯತೆಗಳು. ಇವು ಒಟ್ಟಾಗಿ ಎದುರಿಸುವುದು ಆಧುನಿಕ ನಾಗರಿಕತೆಯೆಂಬ ಭಕ್ತಿ, ಪ್ರೇಮ, ರಹಿತ, God forsaken ಪ್ರಪಂಚವನ್ನು. ●

ಟಿಪ್ಪಣಿಗಳು :

೧. ಸಂಸ್ಕೃತಿಯ ಸ್ವದ ಪ್ರಶ್ನೆಯನ್ನು ಕುರಿತ ಚಿಂತನೆಯಾಗಿರುವ ಈ ಬರಹದಲ್ಲಿ, ಮೊದಲನೆಯದಾಗಿ – ಇರುವಿಕೆ, ಜೀವಿಯ ಪ್ರಾಪಂಚಿಕತೆ, ಸ್ವ ಮತ್ತು ಅನ್ಯದ ಪ್ರಶ್ನೆ, ಸ್ವಯ ಮತ್ತು ಮೈಮರೆವುಗಳ ಪ್ರಶ್ನೆಯನ್ನು ಕುರಿತ ಚಿಂತನೆಯನ್ನು ಕೇಂದ್ರವಾಗಿ ಉಳ್ಳ ಮಾರ್ಟಿನ್ ಹೈಡೆಗರ್‌ನ ಪ್ರಮುಖ ಚಿಂತನ ಸಾಧನಗಳು ಮುಖ್ಯ ಗ್ರಹೀತಗಳಾಗಿ ಇವೆ. ನೋಡುಗನಾದ ಮನುಷ್ಯನನ್ನು ಆತ್ಮ ಪ್ರತ್ಯಯದಲ್ಲಿ ಜಗತ್ತಿನ ಕೇಂದ್ರವನ್ನಾಗಿ ಮಾಡಿ, ಇತಿಹಾಸದ ಬಗ್ಗೆ ಅನುಮಾನ ಮತ್ತು ಅಸಹನೆಯನ್ನೂ, ಮನುಷ್ಯನೆಂದರೆ ಮನುಷ್ಯನ ಭವಿಷ್ಯವೇ ಎಂಬ ಮುನ್ನೋಟದ (ಮುಂದೆ ನೋಡುವ/ಮುಂದೆ ಓಡುವ) ತರಾತುರಿಯನ್ನೂ ರೂಢಿಗೊಳಿಸಿದ್ದು ಆಧುನಿಕ ನಾಗರಿಕತೆಯ ನೋಟಕ್ರಮ ಎಂಬ ಹೈಡೆಗರನ ಪೂರ್ವಪಕ್ಷ; ಹಾಗೂ, ವಿನಯ, ಆರ್ತತೆ, ಕೇಳುವಿಕೆ, ಪ್ರೇಮಗಳಲ್ಲಿ, ಕೈ ತಪ್ಪುತ್ತಿರುವ ಈ ಪ್ರಪಂಚವನ್ನು ಪುನಃ ಪಡೆಯಬಹುದಾದ ಈಗಿಂದೀಗಿನ ಸಾಧ್ಯತೆ, ಮತ್ತು ಚರಿತ್ರೆಯಲ್ಲಿ ಹಿನ್ನಗೆತವು ನಮಗೆ ಲಭ್ಯವಿರುವ, ಸಹಜವಾದ, ಅನಿವಾರ್ಯವಾದ ಉಪಾಯ ಎಂಬ ಹೈಡೆಗರನ ವಾದ, ಇವುಗಳು ಇಲ್ಲಿ ಮುಖ್ಯವಾಗಿ ಗಮನದಲ್ಲಿವೆ. ಈ ಎಲ್ಲ ವಿಚಾರಗಳು

ನನಗೆ ಅತ್ಯಂತ ಆಪ್ತವಿರುವುದರಿಂದ ಪ್ರತ್ಯೇಕವಾಗಿ ಉದ್ಧರಿಸಲು ಸಾಧ್ಯವಾಗದಂತೆ ಹಾಗೂ ಸೂಚ್ಯವಾಗಿ, ಇಲ್ಲಿನ ಚಿಂತನೆಯನ್ನು ಅವು ನಿರ್ದೇಶಿಸುತ್ತಲಿವೆ. ಈ ಗ್ರಹೀತಗಳ ಸಹಜೋತ್ಪನ್ನವಾಗಿ 'ಭಾರತೀಯತೆ'ಯ ಅತಿ ಸಮಸ್ಯಾತ್ಮಕ ಪ್ರಶ್ನೆಯು ಇಲ್ಲಿನ ಚಿಂತನೆಯ ಒಂದಂಶವಾಗಿದೆ.

ಎರಡನೆಯಾಗಿ, ಈ ಬರಹವನ್ನು 'ಮಾಸ್ತಿ ಮತ್ತು ಕಾರಂತ : ಒಂದು ತೌಲನಿಕ ಅಧ್ಯಯನ' ಎಂಬ ವಿಷಯವನ್ನು ಕುರಿತು ನನ್ನನ್ನು ಮಾತನಾಡಲು ಕೇಳಿಕೊಳ್ಳಲಾದ ಸಂದರ್ಭದಲ್ಲಿ ಓದಿದ್ದು. ಚಿಕವೀರ ರಾಜೇಂದ್ರ ಮತ್ತು ಮರಳಿ ಮಣ್ಣಿಗೆಗಳೆರಡನ್ನು ಆಧಾರಗಳನ್ನಾಗಿ ಉಪಯೋಗಿಸಿ ಮೇಲೆ ಪ್ರಸ್ತಾಪಿಸಲಾದ ವಿಷಯಗಳನ್ನೂ, ಆ ವಿಷಯಗಳ ಆಧಾರದ ಮೇಲೆ ಈ ಕಾದಂಬರಿಗಳನ್ನೂ ಇಲ್ಲಿ ಪರಿಗಣಿಸಲಾಗಿದೆ. ಇದು 'ಸಾಹಿತ್ಯ ವಿಮರ್ಶೆ' ಎಂಬ ಕಥಾನುಕಥಿತ ಪ್ರಯತ್ನವಲ್ಲ ಎಂಬುದನ್ನೂ, ಹೀಗಿರುವುದೇ ಸೂಕ್ತವಾದ ಚಿಂತನೆಯ ಕ್ರಮವಿರಬಹುದು ಎಂಬುದನ್ನೂ ಇಲ್ಲಿ ನಾನು ಹೇಳಲು ಪ್ರಯತ್ನಿಸುತ್ತಿದ್ದೇನೆ. ಅಂದರೆ, ಚಿಕವೀರ ರಾಜೇಂದ್ರ ಮತ್ತು ಮರಳಿ ಮಣ್ಣಿಗೆ ಎರಡೂ ಚರಿತ್ರೆಗಳು ಎಂಬುದೂ, ಸಾಂಪ್ರದಾಯಿಕವಾದ ಅರ್ಥದಲ್ಲಿ ಅವು ಚರಿತ್ರೆಗಳಲ್ಲ ಎಂಬುದೂ, ಸಾಂಪ್ರದಾಯಿಕವಾದ 'ಚರಿತ್ರೆ' ಎಂಬುದು ಒಂದು ದೊಡ್ಡ ಮೋಸ ಎಂಬುದೂ—ಸಾಹಿತ್ಯವೂ ಚರಿತ್ರೆಯಷ್ಟೇ ಅ(ನ)ಧಿಕೃತ ಇತಿಹಾಸ—ಚಿಂತನೆಗೆ ಹೊಸ ದ್ರವ್ಯವನ್ನೂ, ದಿಕ್ಕನ್ನೂ, ಹೊಸ ಅರಿವಿನ ಕ್ರಮಗಳನ್ನೂ ಕೊಟ್ಟಾವು ಎಂಬ ಆಶಯವು ಈ ಬರಹದಲ್ಲಿ ಪ್ರಧಾನವಾಗಿದೆ.

ಹೀಗಿದ್ದರೂ, ಈ ಎಲ್ಲ ಅಂಶಗಳು ಮೂಲದಲ್ಲಿ ಅರಿವಿನ ಕ್ರಮವನ್ನು ಕುರಿತ ಪ್ರಶ್ನೆಗಳಾಗಿರುವುದರಿಂದ *(epistemologicalissues)*, ಅವುಗಳ ಪ್ರತ್ಯೇಕ ಚರ್ಚೆಯನ್ನು ವಿಶೇಷವಾಗಿ ಮಾಡದೇ ಈ ಬರಹದ ಅರಿವಿನ ಕ್ರಮದಲ್ಲೇ ಅವು ಅಂತರ್ಗತವಾಗುವಂತೆ ಪ್ರಯತ್ನಿಸಲಾಗಿದೆ.

೧. ಶ್ರೀ ರಾಮಕೃಷ್ಣ ಪರಮಹಂಸರನ್ನು ಕುರಿತು ಕನ್ನಡದಲ್ಲಿ ಗಮನಿಸಲೇ ಬೇಕಾದ ಮುಖ್ಯ ಕೃತಿಗಳೆಂದರೆ, 'ಮ', ಇಷರ್‌ವುಡ್, ಸ್ವಾಮಿ ಪುರುಷೋತ್ತಮಾನಂದ, ಮತ್ತು ಶಿವರಾಮ ಕಾರಂತ, ಇವರವು. ಸ್ವಾಮಿ ಪುರುಷೋತ್ತಮಾನಂದರದು ಸರಳವೂ, ಸುಂದರವೂ, ಸಂಗ್ರಹವೂ ಆಗಿರುವ ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಕತೆಯಾಗಿದೆ.

೨. ಮಾರ್ಕ್ಸ್ ಮತ್ತು ಮಾರ್ಕ್ಸ್‌ವಾದಗಳಲ್ಲಿ ಪಾಶ್ಚಾತ್ಯಪರತೆಯೇ ಕೊನೆಗೂ ಮೇಲುಗೈಯಾಗುವ ವಿರೋಧಾಭಾಸವನ್ನು ಕುರಿತ ಚರ್ಚೆಗಾಗಿ ಸೇಯ್ದನ ಪುಸ್ತಕ ನೋಡಿ.

೩. ಭಾರತದ ಸಾಂಪ್ರದಾಯಿಕ ಅರಿವಿನ ಮಾದರಿಗಳ ವೈಶಿಷ್ಟ್ಯವನ್ನು ಕುರಿತ ಕುತೂಹಲಕರ ವಿವರಗಳಿಗಾಗಿ ಎ.ಕೆ. ರಾಮಾನುಜನ್ನರ ಬರಹ ನೋಡಿ.

೪. ಕಾರಂತರದ್ದು ಮಾನವೀಯ ಮೌಲ್ಯ, ಅವರ ಮಹಿಳಾ ಪಾತ್ರಗಳು ಕಷ್ಟ ಸಹಿಷ್ಣುಗಳು, ದೇವರನ್ನು ನಂಬುವವರ ಬಗ್ಗೆಯೂ ಅವರಿಗೆ ತಕರಾರಿಲ್ಲ, ಎಂಬಿತ್ಯಾದಿ ವಿವರಗಳು ಪಾಶ್ಚಾತ್ಯರಿಂದ ಕಲಿತ ಪಾರಿಭಾಷಿಕ ಪದಗಳಲ್ಲಿ ವ್ಯಕ್ತವಾಗುವ ಅನ್ಯ ಚಿಂತನೆ. ಆದರೆ, ಅನನ್ಯ ಚಿಂತನೆಯೆಂದರೆ, ಇಲ್ಲಿ ಕೆಲಸ ಮಾಡುತ್ತಿರುವುದು ಒಂದು ಸಂಸ್ಕೃತಿ, ಅದರ ನಾಶದ ಹೊಸ ಮಾರ್ಗಗಳಿಂದ ಉಂಟಾಗುತ್ತಿರುವ ಹಳಹಳಿಕೆ.

ಅಲ್ಲದೇ, 'ವಾಸ್ತವ' ಎಂದು ಕರೆಯಲ್ಪಡುವ ವಿವರ ವಿಶೇಷವು ಪಾಶ್ಚಾತ್ಯ ನಾಗರಿಕತೆಗೆ ಹತ್ತೊಂಭತ್ತನೆಯ ಶತಮಾನದಷ್ಟಕ್ಕೆ ಕಳೆದು ಹೋದಂಥದ್ದು. ಹಾಗಾಗಿ ಅವರ ವಾಸ್ತವವಾದ

ಬೇರೆ, ನಮ್ಮದು ಬೇರೆ. ಹಲವು ಕಾಲಗಳು ಒಟ್ಟಿಗೇ ಬದುಕುವ ನಮ್ಮಲ್ಲಿ ವಾಸ್ತವವೆಂಬುದೇ ಒಂದು ವಿಚಿತ್ರ ಪರಿಪಾಕ. ಆದುದರಿಂದ 'ಹಳಹಳಿಕೆ' ಎಂಬ ಪದದಲ್ಲಿ ಸೂಚಿತವಾಗುವ ಕಳೆದು ಹೋದ ಕಾಲವು ಕಳೆದು ಹೋಗಿರುವುದು ನಮ್ಮಲ್ಲಿ ಯಾರಿಗೆ ಮತ್ತು ಯಾಕೆ ಎಂಬ ಪ್ರಶ್ನೆಯನ್ನು ಹೊರತು ಪಡಿಸಿ ಹಳಹಳಿಕೆಯ ಕುರಿತು ಮಾತನಾಡುವುದು ಸಾಧ್ಯವಿಲ್ಲ. ಮರಳಿ ಮಣ್ಣಿಗೆಯುನ್ನೂ ಗಮನಿಸಿದಂತೆ, ಹಳಹಳಿಕೆ ಅಥವಾ ಚರಿತ್ರೆಯಲ್ಲಿ ಹಿನ್ನೆಗೆತವನ್ನು ಕುರಿತ ಇನ್ನಷ್ಟು ಚರ್ಚೆಗಾಗಿ 'ಒಂದು ಮುನ್ನುಡಿ ವೃತ್ತಾಂತ' ಎಂಬ ನನ್ನ ಬರಹವನ್ನು ನೋಡಿ.

೬. ಈ ಪ್ರಶ್ನೆಯನ್ನು ಎತ್ತಿದವರು ಯು.ಆರ್. ಅನಂತಮೂರ್ತಿ, ತಮ್ಮ 'ಕಾರಂತರು: ಒಂದು ಸೃಜನಶೀಲ ಪ್ರತಿಕ್ರಿಯೆ' ಎಂಬ ಬರಹದಲ್ಲಿ. ಆದರೆ, ತಮ್ಮ ಇತ್ತೀಚಿನ ವಾದಗಳಲ್ಲಿ, ಮುಖ್ಯವಾಗಿ ಪೂರ್ವಾಪರ ಮತ್ತು ಸದ್ಯ ಪ್ರಕಟವಾಗಲಿರುವ ಮಿಥುನ ಎಂಬ ಕವನ ಸಂಕಲನದಲ್ಲಿ, ಅನಂತಮೂರ್ತಿಯವರು ಆಧುನಿಕ ನಾಗರಿಕತೆಯೇ ಈವಿಲ್ ಎಂಬ ವಾದವನ್ನು ಮುಂದಿಡುತ್ತಿದ್ದಾರೆ. ಸಂಸ್ಕಾರದಂಥ ಕೃತಿಗಳ ಮೂಲಕ ಆಧುನಿಕ ನಾಗರಿಕತೆಯ ಪರಿಭಾವನೆಯ ಕ್ರಮಗಳಿಗೆ ಪ್ರಾಶಸ್ತ್ಯ ದೊರಕಿಸಿದವರಲ್ಲಿ ಅನಂತಮೂರ್ತಿಯವರೂ ಒಬ್ಬರೆನ್ನುವುದರಿಂದಾಗಿ ಅವರ ಈಗಿನ ವಾದ ಅವರ ಚಿಂತನೆಯ ಹೊಸ ದಿಕ್ಕನ್ನೂ, ಅವರ ಬರಹಗಳ ಬಗೆಗೇ ಬದಲಾಗುತ್ತಿರಬಹುದಾದ ಅವರ ಅಭಿಪ್ರಾಯಗಳನ್ನೂ ಸೂಚಿಸಬಲ್ಲುದಾಗಿದ್ದು, ಸಂಸ್ಕೃತಿ ಚಿಂತನೆಯ ದೃಷ್ಟಿಯಿಂದ ಗಮನಾರ್ಹವಾದ ವಿಷಯವಾಗಿದೆ.

ನಮ್ಮ ಮುಖ್ಯ ಚಿಂತಕರೆಲ್ಲರೂ ಒಂದಲ್ಲ ಒಂದು ರೀತಿಯಿಂದ ನಮ್ಮ ಸಂಸ್ಕೃತಿ ವೈಶಿಷ್ಟ್ಯವನ್ನು ಕಾಯುವ ಕೆಲಸವನ್ನೇ ಮಾಡಿದವರು. ಇವತ್ತು ನಮ್ಮಲ್ಲಿ ತನ್ನ ನ್ಯಾಯಯುತವಾದ ಸಿಟ್ಟನ್ನು ವ್ಯಕ್ತಪಡಿಸುವ ಮತ್ತು ಜಾರಿಗೊಳಿಸುವ ನೈತಿಕ ಹಕ್ಕು ಇರುವ ಸಮುದಾಯವನ್ನು ಕುರಿತ ಅಥೆಂಟಿಕ್ ಆಗಿ ಬರೆಯುವಾಗಲೂ ದೇವನೂರು ಮಹಾದೇವರಿಗೆ ಈ ಸಮುದಾಯದ ನರನಾಡಿಯಲ್ಲಿ ಹರಿಯುತ್ತಿರುವ ಸಂಸ್ಕೃತಿ ಯಾವುದು, ಅದರ ವಿಶಿಷ್ಟತೆ ಏನು, ಅದು ನಮಗೆ ದಕ್ಕಬಹುದಾದ್ದು ಹೇಗೆ, ನಮ್ಮ ಜೀವನಕ್ರಮವನ್ನು ಅದು ಹೇಗೆ ನಡೆಸಿಕೊಟ್ಟೀತು ಎಂಬ ಪ್ರಶ್ನೆಗಳೂ ಮುಖ್ಯವಾಗುವುದರಿಂದ, ನಾವು ಅಸೂಯೆ ಪಡಬಹುದಾದ ರೀತಿಯ ಸಂಸ್ಕೃತಿಯನ್ನು ಧರಿಸಿರುವವರಾಗಿಯೂ ಈ ಸಮುದಾಯ ಕಂಡುಬರುತ್ತದೆ.

೭. ಸಾಹಿತ್ಯವಿಮರ್ಶೆಯೆಂಬ ಶಿಸ್ತಿನ ಗ್ರಹೀತಗಳ ಹಿನ್ನಲೆಯಲ್ಲಿ ನೋಡಿದರೆ ಮರಳಿ ಮಣ್ಣಿಗೆಯು ಕುರಿತು ಈತನಕ ಎತ್ತಲಾದ, ಈಗಲೂ ಎತ್ತಲ್ಪಡುತ್ತಿರುವ, ಹಲವಾರು ಪ್ರಶ್ನೆಗಳಿಗೆ ಜವಾಬ್ದಾರಿಯುತವಾದ ಉತ್ತರವನ್ನು ಆಮೂರರು ಕೊಟ್ಟಿದ್ದಾರೆ.

೮. ಮರಳಿ ಮಣ್ಣಿಗೆ ಸಫಲ ಕೃತಿಯೆಂದೋ, ಸಫಲವಾಗಬಹುದಾಗಿದ್ದ ಕೃತಿಯೆಂದೋ ಕೇವಲ ಸಾಹಿತ್ಯ ವಿಮರ್ಶೆಯ ಪ್ರಶ್ನೆಗಳನ್ನು ಮಾತ್ರ ಈ ವರೆಗಿನ ವಿಮರ್ಶಕರು ಎತ್ತಿದ್ದಾರೆ. ನೋಡಿ: ಎಂ.ಜಿ. ಕೃಷ್ಣಮೂರ್ತಿ, ಕೀರ್ತಿನಾಥ ಕುರ್ತಕೋಟಿ, ಡಿ.ಆರ್. ನಾಗರಾಜ್, ಯು.ಆರ್. ಅನಂತಮೂರ್ತಿ, ಜಿ. ರಾಜಶೇಖರ, ಜಿ.ಎಚ್. ನಾಯಕ, ಮತ್ತು ಕಾರಂತ ಪ್ರಪಂಚ (ಡಿ.ಎಲ್. ನರಸಿಂಹಾಚಾರ್, ಎ.ಎನ್. ಮೂರ್ತಿರಾವ್, ಗುರುರಾಜ ಆಮೂರ, ಯು.ಆರ್. ಅನಂತಮೂರ್ತಿ).

೯. ಬ್ರಿಟಿಷರ ಗುಣವಿಶೇಷವನ್ನು ನಯಗಾರಿಕೆ ಎಂದು ಹೆಸರಿಸಿದವರು ಕೆ.ಪಿ. ವಾಸುದೇವನ್.

೧೦. ಎ.ಎನ್. ಮೂರ್ತಿರಾವ್, ವಿ. ಎಂ. ಇನಾಂದಾರ್, ಕೆ.ಪಿ. ವಾಸುದೇವನ್, ಬಸವರಾಜ ಕಲ್ಗುಡಿ, ಕೀರ್ತಿನಾಥ ಕುರ್ತಕೋಟಿ, ಮುಂತಾದವರು.

೧೧. ಈ ವಿಷಯವನ್ನು ಇನ್ನಷ್ಟು ವಿವರವಾಗಿ 'ಕತೆ ಕತೆ ಕಾರಣ' ಎಂಬ ನನ್ನ ಬರಹದಲ್ಲಿ ಚರ್ಚಿಸಲಾಗಿದೆ.

ಉಲ್ಲೇಖಗಳು :

ಅನಂತಮೂರ್ತಿ, ಯು.ಆರ್. ೧೯೭೭. **ಸಂಸ್ಕಾರ.** ಮೈಸೂರು: ಸುರುಚಿ ಪ್ರಕಾಶನ (ಐದನೆಯ ಆವೃತ್ತಿ).

೧೯೯೧. **ಪೂರ್ವಾಪರ.** ಸಾಗರ : ಅಕ್ಷರ ಪ್ರಕಾಶನ.

೧೯೯೨. **ಮಿಥುನ.** ಸಾಗರ : ಅಕ್ಷರ ಪ್ರಕಾಶನ (ಅಚ್ಚಿನಲ್ಲಿದೆ).

ಅಮೂರ, ಗುರುರಾಜ. ೧೯೭೦. **ಕೃತಿ ಪರೀಕ್ಷೆ (ಸಾಹಿತ್ಯ ವಿಮರ್ಶೆ).** ಧಾರವಾಡ: ಸಮಾಜ ಪುಸ್ತಕಾಲಯ.

ಇನಾಂದಾರ್, ವಿ.ಎಂ. ೧೯೮೦. **ಶ್ರೀನಿವಾಸರ ಕಾದಂಬರಿಗಳಲ್ಲಿ ಜೀವನ ದರ್ಶನ.** ಬೆಂಗಳೂರು : ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.

ಇಷರ್‌ವುಡ್, ಕ್ರಿಸ್ಟೋಫರ್. ೧೯೭೩. **ಶ್ರೀ ರಾಮಕೃಷ್ಣರು ಮತ್ತು ಅವರ ಶಿಷ್ಯರು.** (ಅನುವಾದ: ಸ. ವೆಂಕಟಾಚಲಪತಿ). ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

ಕಾರಂತ, ಶಿವರಾಮ, ೧೯೫೪. **ರಾಮಕಷ್ಣ ಪರಮಹಂಸರು.** ಮಂಗಳೂರು: ರಾಮಕೃಷ್ಣಾಶ್ರಮ.

೧೯೮೩. **ಮರಳಿ ಮಣ್ಣಿಗೆ.** ಬೆಂಗಳೂರು: ರಾಜಲಕ್ಷ್ಮೀ ಪ್ರಕಾಶನ (ಹತ್ತನೆಯ ಆವೃತ್ತಿ).

ಕುರ್ತಕೋಟಿ, ಕೀರ್ತಿನಾಥ. ೧೯೮೨. **ವಿಮರ್ಶೆಯ ವಿನಯ (ಕಾದಂಬರಿ ಪ್ರಕಾರ).** ಧಾರವಾಡ : ಮನೋಹರ ಗ್ರಂಥಮಾಲಾ.

೧೯೮೩. **ಯುಗಧರ್ಮ ಮತ್ತು ಸಾಹಿತ್ಯ ದರ್ಶನ.** ಬೆಂಗಳೂರು : ವಿಶ್ವಕನ್ನಡ ಸಮ್ಮೇಳನ (ಎರಡನೆಯ ಆವೃತ್ತಿ).

ಕೃಷ್ಣಮೂರ್ತಿ, ಎಂ.ಜಿ. ೧೯೭೦. **ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು.** ಸಾಗರ: ಅಕ್ಷರ ಪ್ರಕಾಶನ.

Gandhi, M.K. 1938. **Hind Swaraj or Indian Home Rule.** Ahmedabad : Navajivan Publishing House.

ನಾಗರಾಜ್, ಡಿ.ಆರ್. ೧೯೯೦. **ಅಮೃತ ಮತ್ತು ಗರುಡ.** ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ (ಎರಡನೆಯ ಆವೃತ್ತಿ).

ನಾಯಕ್, ಜಿ.ಎಚ್. ೧೯೮೪. **ನಿರಪೇಕ್ಷ.** ಸಾಗರ : ಅಕ್ಷರ ಪ್ರಕಾಶನ.

'ಮ'. ೧೯೭೪. **ಶ್ರೀ ರಾಮಕೃಷ್ಣ ವಚನವೇದ.** ಮೈಸೂರು : ರಾಮಕೃಷ್ಣಾಶ್ರಮ (ಎರಡು ಸಂಪುಟಗಳು; ಮೂರನೆಯ ಆವೃತ್ತಿ).

ಮಾಸ್ತಿ ವೆಂಕಟೇಶ ಅಯ್ಯಂಗಾರ್. ೧೯೫೭. **ಚಿಕವೀರ ರಾಜೇಂದ್ರ.** ಬೆಂಗಳೂರು : ಜೀವನ ಕಾರ್ಯಾಲಯ.

ಮೂರ್ತಿರಾವ್, ಎ.ಎನ್. ೧೯೭೧. **ಶ್ರೀ ಮಾಸ್ತಿಯವರ ಕತೆಗಳು** (ವಿಮರ್ಶೆ). ಮೈಸೂರು : ಕಾರ್ಯಾಲಯ ಪ್ರಕಾಶಕರು.

ರಾಜಶೇಖರ, ಜಿ. 'ಮುನ್ನಡಿ'. **ಸುವರ್ಣ ಪುತ್ಥಳಿ** : ಎಂ. ಗೋಪಾಲಕೃಷ್ಣ ಅಡಿಗ. ೧೯೯೧. ಬೆಂಗಳೂರು: ಅಪರ್ಣ ಪ್ರಕಾಶನ.

Ramanujan, A.K. 'Is there an Indian way of thinking?" **India through Hindu Categories** : Editor, Mckim Marriot. 1990. New Delhi : Sage Publications.

ವಾಸುದೇವನ್, ಕೆ.ಪಿ. 'ಮಾಸ್ತಿಯವರ ಚಿಕವೀರ ರಾಜೇಂದ್ರ: ವಸಾಹತುಶಾಹಿ ಸಂಘರ್ಷದ ಒಂದು ಅಧ್ಯಯನ ' ಋಜುವಾತು ಜುಲೈ –ಸೆಪ್ಟಂಬರ್ ೧೯೮೧.

ಶಿವರುದ್ರಪ್ಪ, ಜಿ.ಎಸ್. ಸಂಪಾದಕ. ೧೯೮೩. ಕಾದಂಬರಿಕಾರರಾಗಿ ಕಾರಂತ. ಬೆಂಗಳೂರು : ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.

ಸಂಪಾದಕ. ೧೯೮೬. **ಮಾಸ್ತಿಯವರ ಸಾಹಿತ್ಯ: ಒಂದು ಅಧ್ಯಯನ.** ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.

Said, Edward. 1985. **Orientalism.** England: Peregrine -Penguin Books (Second Edition).

ಸೋಮಯಾಜಿ, ಪಟ್ಟಾಭಿರಾಮ ಎಚ್. 'ಒಂದು ಮುನ್ನುಡಿ ವೃತ್ತಾಂತ'. ಶೂದ್ರ ೧೧–೧೨ : ೧೬ ಸೆಪ್ಟಂಬರ್–ಅಕ್ಟೋಬರ್ ೧೯೯೧.

'ಕತೆ ಕತೆ ಕಾರಣ' **ಶೂದ್ರ** ೧೨ : ೧೬ ಜೂನ್ ೧೯೯೧

ಸ್ವಾಮಿ ಪುರುಷೋತ್ತಮಾನಂದ. ೧೯೮೯–೧೯೯೧. **ಯುಗಾವತಾರ ಶ್ರೀ ರಾಮಕೃಷ್ಣ.** ಬೆಂಗಳೂರು: ರಾಮಕೃಷ್ಣಾಶ್ರಮ (ನಾಲ್ಕು ಸಂಪುಟಗಳು).

ಹರಿದಾಸಭಟ್ಟ, ಕು.ಶಿ. ಸಂಪಾದಕ. ೧೯೬೯. **ಕಾರಂತ ಪ್ರಪಂಚ.** ಮೈಸೂರು : ಗೀತಾ ಬುಕ್‌ಹೌಸ್.

"ಮಾಸ್ತಿಯವರ 'ಮೊಸರಿನ ಮಂಗಮ್ಮ', ತಗೊಳ್ಳಿ. ಅದು ನಾನು ಮೆಚ್ಚುವ ಸವತೇಕಾಯಿ ತರಹದ ಕತೆ. ಅತ್ತೆ, ಸೊಸೆ, ಮಗ, ಮೊಮ್ಮಗ – ಇವರ ನಡುವಿನ ಘರ್ಷಣೆಯನ್ನು ಕುರಿತದ್ದು. ತುಂಬಾ ನಾಟಕೀಯವಾಗಿ ಕುತೂಹಲವಕಾರಿಯಾಗಿ ಕತೆ ಹೇಳಿದ್ದಾರೆ. ಜೊತೆಗೆ ಮಾಸ್ತಿಯವರ ಮಾನವೀಯತೆ ಅದಕ್ಕೆ ಮೆರಗು ಕೊಟ್ಟಿದೆ. ಆದರೆ ಅದರ ಹೆಚ್ಚುಗಾರಿಕೆ ಕೆಲವು ಪಾತ್ರಗಳ ಮೇಲೆ, ಅವಕ್ಕೆ ಸಂಬಂಧಿಸಿದ ಒಂದು ಘಟನೆಯ ಮೇಲೆ ನಿಂತಿದೆ. ಈ ಪಾತ್ರಗಳು ಮತ್ತು ಘಟನೆಯನ್ನು ಸುಲಭವಾಗಿ ಇನ್ನೊಂದು ರೀತಿಯಲ್ಲಿ – ಇನ್ನಷ್ಟು ಚೆನ್ನಾಗಿ ಅಥವಾ ಕೆಟ್ಟದಾಗಿ – ಬರೆಯಬಹುದ್ದು. ಇಂಥ ಕಥೆಯನ್ನು ಸಲೀಸಾಗಿ ಹೇಳಿಬಿಡಬಹುದು. ಇದೊಂದು ಥರಗಂಭೀರ *Gossip*.ಅಂದ ಹಾಗೆ ಹೇಳುವುದೂ ತಪ್ಪು – ಯಾಕೆಂದರೆ ಕೇಳಿದವನು ಬರೆದುಬಿಟ್ಟರೆ! ಅದು ನಿಜಕ್ಕೂ ಯಾರ ಕತೆಯೆಂದು ನಿರ್ಧರಿಸುವುದಕ್ಕೆ ಕೋರ್ಟಿಗೆ ಹೋಗಬೇಕಾಗುತ್ತೆ: ಯಾಕೆಂದರೆ ಲೇಖಕನ ರಕ್ತದಿಂದ ಹುಟ್ಟಿದ್ದಲ್ಲ ಆ ಕತೆ....."

– **ಪಿ. ಲಂಕೇಶ್** (ಪ್ರಸ್ತುತ)

‘ಭಾವ’ದಲ್ಲಿ ಮೂಡುವ ಮಾಸ್ತಿ

ಸ. ಉಷಾ

ಭಾವ ಎಂಬುದು ಮೂರು ಭಾಗಗಳಲ್ಲಿ ಬೆಳೆದಿರುವ ಮಾಸ್ತಿಯವರ ಆತ್ಮಕಥಾನಕ ವೃತ್ತಾಂತ. ಇದರ ಪ್ರಾರಂಭದಲ್ಲಿಯೇ ಮಾಸ್ತಿಯವರು “ನನ್ನ ಬಾಳಿನಲ್ಲಿ ತಪ್ಪೇನಾಗಿದೆ ಅದಕ್ಕೆಲ್ಲ ನನ್ನ ಸ್ವಭಾವ ಕಾರಣ; ಒಳಿತೇನಾಗಿದೆ ಅದೆಲ್ಲದರ ಕಾರಣ – ದೈವಕೃಪೆ’’ ಎಂದು ವಿನಯವನ್ನು ತೋರಿದ್ದಾರೆ.

ಭಾವ : ೧ ರಲ್ಲಿ ಮಾಸ್ತಿಯವರ ಬಾಲ್ಯಜೀವನ, ವಿದ್ಯಾಭ್ಯಾಸ, ಮೈಸೂರು ಸಂಸ್ಥಾನದಲ್ಲಿ ಅವರು ಅಧಿಕಾರಿಯಾಗುವವರೆಗಿನ ವಿವರ ಬರುತ್ತದೆ. ಭಾವ : ೨ ರಲ್ಲಿ ಅವರು ಸೆಕ್ರೆಟೇರಿಯಟಿನಲ್ಲಿ ಸೀಮಿತಗೊಂಡಂದಿನಿಂದ ಆರಂಭವಾಗಿ ಅವರ ಅಧಿಕಾರಿ ಜೀವನದ ಏರುಪೇರುಗಳನ್ನು ಹೇಳಿ ಅವರು ಸರ್ಕಾರದ ಅರ್ಥಶಾಖೆಯಲ್ಲಿ ಕಂಟ್ರೋಲರರಾಗುವವರೆಗಿನ ವಿವರವನ್ನು ಹೇಳುತ್ತದೆ. ಭಾವ : ೩ ಅವರು ಕಂಟ್ರೋಲರರಾಗಿ ನೇಮಕಗೊಂಡಂದಿನಿಂದ ಅವರು ಐಚ್ಛಿಕ ನಿವೃತ್ತಿ ಪಡೆದವರೆಗಿನ ಜೀವನವನ್ನು, ಆ ನಂತರದ ಸಾಮಾಜಿಕ ಮತ್ತು ಸಾಹಿತ್ಯಿಕ ಜೀವನವನ್ನು ಚಿತ್ರಿಸುತ್ತದೆ.

ಮಾಸ್ತಿಯವರ ಬರಹಗಳಲ್ಲಿ ಸಾರ ರೂಪವಾದುದು, ಅತ್ಯಂತ ಶ್ರೇಷ್ಠವಾದುದು ಅವರ ಸಣ್ಣ ಕತೆಗಳಲ್ಲಿ ಕೆನೆಕಟ್ಟಿದೆ. ಅವರ ಸಣ್ಣ ಕತೆಗಳಲ್ಲಿರುವುದು ಶಮಭಾವ. ವ್ಯಕ್ತ ವಾಗುವುದು, ತುಂಬು ತಿಳುವಳಿಕೆಯ ಸಹನೆಯ ಜೀವನ. ಅವರ ಜೀವನ ದರ್ಶನ “ಬೆಳಕು’’

ಸಾಲದು, ಇನ್ನೂ ಸ್ವಲ್ಪ ಬೆಳಕಿದ್ದರೆ ಅದರ ತಿಳಿವಿನಿಂದ ಯಾವುದು ಸರಿಯೆಂದು ಹೇಳಬಹುದು ಎನ್ನುವಂಥದು. ತಪ್ಪಿತಸ್ಥರನ್ನು ಕ್ಷಮೆಯಿಂದ ಕಾಣುವಂಥದು. ಸಣ್ಣ ಕತೆಗಳಲ್ಲಿ ವ್ಯಕ್ತವಾಗಿರುವ ಕರುಣಾಮಯಿ ಕ್ಷಮಾಶೀಲ ಶ್ರೀನಿವಾಸರ ಇನ್ನೊಂದು ಮುಖ ಅವರ ಭಾವದಲ್ಲಿ ವ್ಯಕ್ತಗೊಂಡಿದೆ.

ಭಾವವನ್ನು ಬರೆಯಲು ಕಾರಣವನ್ನು ವಿವರಿಸುತ್ತಾ ಮಾಸ್ತಿಯವರು "ನಾನು ಎಂಬುದರ ವಿಷಯದಲ್ಲಿ ಒಂದೊಂದು ಜೀವಕ್ಕೆ ಮಮತೆ ಹೇಗೋ ಹಾಗೇ ಅಭಿಮಾನವೂ ಇರುತ್ತದೆ. ಅದನ್ನು ಕುರಿತು ವಿಚಾರ ಮಾಡುವುದರಲ್ಲಿ ಮನುಷ್ಯನಿಗೆ ಸುಖವುಂಟು. ಹಸುಳೆ ತನ್ನ ಪಾಡಿಗೆ ತಾನು ಕುಳಿತು ತನ್ನ ಕಾಲಿನ ಬೆರಳುಗಳನ್ನು ಹಿಡಿದುಕೊಂಡು ಪರೀಕ್ಷಿಸುವಂತೆ ಮನುಷ್ಯನಿಗೆ ತನ್ನ ಜೀವನದ ವಿಷಯವನ್ನು ತಾನು ವಿಚಾರಿಸಿ ನೋಡುವುದು ಒಂದು ರೀತಿ ಕೇಳಿ ಅಥವಾ ವಿನೋದ ವ್ಯವಹಾರ'' ಎಂದು ಹೇಳುತ್ತಾರೆ.

ಭಾವ : ೧ ರಲ್ಲಿ ಏರು ಇಳಿವುಗಳಿಲ್ಲದ ಲೋಕಾಭಿರಾಮವಾದ ಭಾರತೀಯ ಜೀವನ ಕ್ರಮವನ್ನು ಮಾಸ್ತಿಯವರು ಅದೇ ರೀತಿಯ ಲೋಕಾಭಿರಾಮವಾದ ರೀತಿಯಲ್ಲೇ ನಿರೂಪಿಸುತ್ತ ಹೋಗುತ್ತಾರೆ. ತಮ್ಮ ಪೂರ್ವಜರ ವೈಭವದ ವಿವರವನ್ನು; ದಿವಾನ ಲಕ್ಷ್ಮಯ್ಯನು ಸುಲ್ತಾನನೊಡನೆ ಉಂಟಾದ ವೈಮನಸ್ಯದ ಪರಿಣಾಮವಾಗಿ ಅವನ ಮನೆಯಲ್ಲಿ ಹಾಲು ಕುಡಿದು ಅಸು ನೀಗಿದುದನ್ನು; ಪತಿಯೊಡನೆ ಸತಿ ಹೋದ ವೆಂಕಟಕೃಷ್ಣಯ್ಯನ ಹೆಂಡತಿಯ ಕತೆಯನ್ನು; ಆ ಪತಿ ಪತ್ನಿಯರು ಮತ್ತೆ ಅವಳಿ ಜವಳಿಗಳಾಗಿ ಹುಟ್ಟಿ ವೈಕುಂಠವನ್ನು ಸೇರುವರೆಂಬ ನಂಬುಗೆ ಮತ್ತು ಅದಕ್ಕೆ ಸಮರ್ಥಕವೆಂಬಂತೆ ಮತ್ತೆ ತಮ್ಮ ಮನೆತನದಲ್ಲಿ ಒಂದೆರಡು ಬಾರಿ ಅವಳಿಜವಳಿ ಗಂಡು ಹೆಣ್ಣು ಮಕ್ಕಳು ಹುಟ್ಟಿ ತೀರಿಕೊಂಡ ಕತೆಯನ್ನು; ದಾಸಪ್ಪ ರಂಗಪ್ಪರ ವೈಭವಗಳನ್ನೂ; ಅವರ ಮನೆತನದಲ್ಲಿ ಒಬ್ಬ ಹೆಣ್ಣು ಮಗಳ ಮದುವೆಯಾದಾಗ ಮಗಳ ಹೆಜ್ಜೆಗೊಂದು ಕಂಠೀರಾಯ ವರಹವನ್ನು ಹಾಕುತ್ತಾ ಮಗಳನ್ನು ಅತ್ತೆ ಮನೆಗೆ ಕಳುಹಿಸಿದ ರಾಯಪ್ಪನ ತುಪಾಕಿ – ಕುದುರೆಗಳ ವಿಜೃಂಭಣೆಯನ್ನು ತಮ್ಮ ಆತ್ಮಕಥೆಗೆ ಪ್ರಸ್ತಾವನೆಯಾಗಿ ಹೇಳಿ; ಮಾಸ್ತಿಯವರು ತಮ್ಮ ಮನೆತನದ ಪರಿಚಯ ಮಾಡಿಕೊಡುತ್ತಾರೆ. ಇದನ್ನು ಓದುವಾಗ ಮಾಸ್ತಿಯವರಿಗೆ ಪೆರಿಯಾರ್ ಎಂದು ಕರೆಯಿಸಿಕೊಳ್ಳುತ್ತಿದ್ದ ತಮ್ಮ ಮನೆತನದ ಬಗೆಗಿದ್ದ ಅಪಾರವಾದ ಅಭಿಮಾನ ಸಹ ಗೊತ್ತಾಗುತ್ತದೆ.

ತಮ್ಮ ಜೀವನದ ಕತೆಯನ್ನು ನಿರೂಪಿಸುವುದರ ಜೊತೆ ಜೊತೆಗೆ ಜೀವನದ ಅನೇಕ ಸಂಗತಿಗಳ ಬಗ್ಗೆ ಮಾಸ್ತಿಯವರ ನಿಲುವೇನೆಂಬುದನ್ನು ಅನೇಕ ಸಂದರ್ಭಗಳಲ್ಲಿ ಗುರುತಿಸಬಹುದು. 'ಭಾವದಲ್ಲಿ ಮೂಡುವ ಮಾಸ್ತಿ' ಎಂದರೆ ತಮ್ಮ ಆತ್ಮಕಥೆಯ ಅನೇಕ ಸಂದರ್ಭಗಳಲ್ಲಿ ಮಾಸ್ತಿಯವರು ನಡೆದುಕೊಂಡ ರೀತಿ, ತಾಳಿದ ನಿಲುವುಗಳು, ಆ ಮೂಲಕ ಗೋಚರವಾಗುವ ಮಾಸ್ತಿಯವರ ವ್ಯಕ್ತಿತ್ವವನ್ನು ಗ್ರಹಿಸಲು ನಾನು ಈ ಲೇಖನದಲ್ಲಿ ಪ್ರಯತ್ನಿಸಿದ್ದೇನೆ.

ಭಾವದ ಮೂರು ಸಂಪುಟಗಳಲ್ಲೂ ಮಾಸ್ತಿಯವರ ಬಾಳು ನಿರೂಪಿತವಾದಂತೇ ಬಾಳಿನ ಅನೇಕ ಅಂಶಗಳ ಬಗೆಗೆ ಅವರ ನಿಲುವುಗಳು ಧ್ಯೇಯ ಧೋರಣೆಗಳು ಮೂಡುತ್ತವೆ.

ಬಡತನ, ಅಭಿಮಾನ, ದೈನ್ಯ ಪರೋಪಕಾರಗಳ ಬಗ್ಗೆ; ದೇವರು, ಧರ್ಮ, ಜಾತಿ ಸಂಪ್ರದಾಯಗಳ ಬಗ್ಗೆ; ಸ್ವಾತಂತ್ರ್ಯ ಚಳುವಳಿ, ಭಾರತೀಯತೆಯ ಹೆಮ್ಮೆ, ಬ್ರಿಟಿಷರ ದರ್ಪದ ಬಗ್ಗೆ; ಭಾಷಿಕ ಅಂಶಗಳ ಬಗ್ಗೆ; ಮನುಷ್ಯ ಮನುಷ್ಯನಿಗೆ ಮೋಸ ಮಾಡುವ ಬಗ್ಗೆ; ಸ್ನೇಹದ ಬಗ್ಗೆ; ಇವರ ಶ್ರದ್ಧೆ ಮತ್ತು ಧೋರಣೆಗಳು ಅನಾವರಣಗೊಳ್ಳುತ್ತ ಹೋಗುತ್ತವೆ. ಸಣ್ಣ ಕಥೆಗಳಲ್ಲಿ ವ್ಯಕ್ತವಾಗುವ ಮಾಸ್ತಿಯವರಿಗಿಂತ ಭಿನ್ನವಾದ ಬೇರೊಬ್ಬ ಮಾಸ್ತಿಯನ್ನು ನಾವಿಲ್ಲಿ ನೋಡುತ್ತೇವೆ.

ಬಡತನ, ಅಭಿಮಾನ, ದೈನ್ಯ ಮತ್ತು ಪರೋಪಕಾರಗಳ ಬಗ್ಗೆ ಮಾಸ್ತಿಯವರ ವ್ಯಕ್ತಿತ್ವ ಬೇರೆ ಬೇರೆ ಸಂದರ್ಭಗಳಲ್ಲಿ ವರ್ತಿಸಿದ ರೀತಿಯನ್ನು ನೋಡಬಹುದು.

ಮಾಸ್ತಿಯವರ ಮನೆತನ ಒಂದು ಕಾಲದಲ್ಲಿ ತುಂಬ ವೈಭವದಿಂದ ಬಾಳಿದ ಮನೆತನವಾದರೂ ಅವರು ಓದಲು ಬಂದ ಕಾಲಕ್ಕೆ ಆರ್ಥಿಕವಾಗಿ ತೊಂದರೆಯನ್ನು ಅನುಭವಿಸಿದ ಮನೆತನ ಎಂಬುದನ್ನು ಅವರು ಭಾವದಲ್ಲಿ ನಿರೂಪಿಸಿದ್ದಾರೆ. ತಂದೆ ತಾಯಿಗಳಿದ್ದ ಎಲದೂರಿನಲ್ಲಿ ಓದಿಗೆ ಅಷ್ಟೊಂದು ಸೌಲಭ್ಯವಿಲ್ಲ ಎಂಬ ಕಾರಣದಿಂದ ಅವರ ಅಜ್ಜನವರು ಮಾಸ್ತಿಯವರನ್ನು ತಮ್ಮ ಊರಿಗೆ ಕರೆದೊಯ್ದು ಬೆಳೆಸಿದರು. ಎಲದೂರಿನ ಪ್ರಕೃತಿ ಸೌಂದರ್ಯ, ಗೋಲಿಯಾಡುವುದನ್ನು ಕಲಿತದ್ದು, ಮೊದಲ ಬಾರಿಗೆ ಊರ ಹೊರಗೆ ಹೋಗಿಬಂದದ್ದು, ಅಂಚೆಯಲ್ಲಿ ಮೊದಲ ಪತ್ರವನ್ನು ಪಡೆದದ್ದು, ಅಟ್ಲಾಸು, ಟೈಂಪೀಸು, ಅತ್ತೀಹಣ್ಣು, ದೋರ ಹುಣಸೆಹಣ್ಣು, ಹೊಸ ಜರಿಯ ಪಂಚೆ ಹರಿದು ಹೋದದ್ದು, ಅಲ್ಲಾವುದ್ದೀನ್ ಅದ್ಭುತ ದೀಪದ ಪುಸ್ತಕ, ನಾಮ ಹಚ್ಚಿಕೊಳ್ಳಲು ಕಲಿತದ್ದು, ಈಜು ಕಲಿಯಲು ಹೋಗಿ ಜ್ವರ ಬಂದದ್ದು, ಉಪಾಧ್ಯಾಯರುಗಳ ಅಭಿಮಾನವನ್ನು ಗಳಿಸಿ ಡಬ್ಬಲ್ ಪ್ರಮೋಷನ್ನುಗಳನ್ನು ಪಡೆದು ಐದು ವರ್ಷದ ಓದನ್ನು ಎರಡೂವರೆ ವರ್ಷದಲ್ಲಿ ಮುಗಿಸಿ ಮೊದಲ ಸ್ಥಾನ ಗಳಿಸಿದ್ದು, ಮುಂದೆ ಓದಲು ಮಳವಳ್ಳಿಗೆ ಸೋದರ ಮಾವನ ಮನೆಗೆ ಹೋದದ್ದು– ಈ ಎಲ್ಲ ವಿಷಯಗಳು, ಬಾಲ್ಯದ ವಿವರಗಳು, ಏರು ಇಳಿವುಗಳಿಲ್ಲದ ಲೋಕಾಭಿರಾಮವಾದ ಭಾರತೀಯ ಜೀವನದ ಕ್ರಮವನ್ನು ಲೋಕಾಭಿರಾಮವಾದ ರೀತಿಯಲ್ಲಿಯೇ ಮಾಸ್ತಿ ನಿರೂಪಿಸುತ್ತಾರೆ.

ಅಜ್ಜನ ಮನೆಯಲ್ಲಿದ್ದ ಕಾಲದಲ್ಲಿ, ಮತ್ತು ಮಳವಳ್ಳಿಯಲ್ಲಿ ತಮ್ಮ ಮಾವನ ಮನೆಯಲ್ಲಿದ್ದ ಕಾಲದಲ್ಲಿ ಮಾಸ್ತಿಯವರಿಗೆ ತಮ್ಮ ಮನೆಯ ಬಡತನದ ಅರಿವು ಇದ್ದರೂ ಅದು ಅಭಿಮಾನದೊಡನೆ ತಾಕಲಾಡುವ, ದೈನ್ಯದ ಸ್ಥಿತಿಯ ಅರಿವುಂಟು ಮಾಡುವಷ್ಟು ತೀವ್ರವಾಗಿ ಅನುಭವಕ್ಕೆ ಬಂದಿರಲಿಲ್ಲವೆಂಬುದು ಭಾವ : ೧ ರಲ್ಲಿ ತಿಳಿಯುತ್ತದೆ. ಬಡತನವಿದ್ದರೂ ಅದು ಆತ್ಮಗೌರವಕ್ಕೆ ಕುಂದುಂಟು ಮಾಡಬೇಕಾಗಿಲ್ಲ ಎಂಬ ಕೆಚ್ಚು ಮೂಡಿಸುವ ಘಟನೆಯೊಂದನ್ನು ಮಾಸ್ತಿ ನಿರೂಪಿಸುತ್ತಾರೆ.

ಬಾಲ್ಯದಲ್ಲಿ ಒಬ್ಬರ ಮನೆಯಲ್ಲಿ ಯಾವುದೋ ಸಮಾರಂಭದಲ್ಲಿ ಜೊತೆಯ ಮಕ್ಕಳೆಲ್ಲ ದಕ್ಷಿಣೆಯನ್ನು ಪಡೆದಾಗ ಮನೆಯ ಯಜಮಾನರು ಮಕ್ಕಳ ಜೊತೆಗೆ ದಕ್ಷಿಣೆಯನ್ನು ಪಡೆಯಲು ಬಂದಿದ್ದ ಮಾಸ್ತಿಯವರನ್ನು ಗುರುತಿಸಿ "ಇವರ ಮನೆಯವರಿಗೆ ದಕ್ಷಿಣೆಯನ್ನು ಕೊಡುವರುಂಟೆ?" ಎಂದು ಉಳಿದ ಮಕ್ಕಳಿಗೆಲ್ಲ ದಕ್ಷಿಣೆಯನ್ನು ಕೊಟ್ಟರೂ

ಇವರಿಗೆ ಕೊಡಲಿಲ್ಲವಂತೆ. ಈ ಘಟನೆಯನ್ನು ನಿರೂಪಿಸುತ್ತ ಮಾಸ್ತಿಯವರು ಈ ಘಟನೆ ತತ್ಕಾಲಕ್ಕೆ ತನಗೆ ದಕ್ಷಿಣೆ ಸಿಗಲಿಲ್ಲ ಎಂಬ ಅಸಮಾನಧಾನವನ್ನುಂಟು ಮಾಡಿದರೂ ತಮ್ಮ ಮನೆತನ ದೊಡ್ಡದು ತಾನು ಇತರರೆದುರಿಗೆ ಕೈ ಚಾಚಬಾರದು ಎಂಬ ಕೆಚ್ಚನ್ನು ಮೂಡಿಸಿದ ಘಟನೆಯಾಯಿತು ಎಂದು ನೆನೆಯುತ್ತಾರೆ.

ಇದೇ ರೀತಿ ಭಾವ : ೧ ರ ಪುಟ ೧೬೪ ರಲ್ಲಿ ಒಂದು ಘಟನೆ ಬರುತ್ತದೆ. ಮಾಸ್ತಿಯವರು ಮೈಸೂರಿನಲ್ಲಿ ವಾರಾನ್ನ ಮಾಡಿಕೊಂಡು ಓದುತ್ತಿದ್ದಾಗ ಆ ಮನೆಗೆ ಒಮ್ಮೆ ಮನೆಯೊಡೆಯನ ಮೆಟ್ರಿಕ್ ಓದುತ್ತಿದ್ದ ನಾದಿನಿ ಬಂದಿದ್ದಾಳೆ. ಮನೆಯ ಹೊರಗೆ ಒಂದು ನಲ್ಲಿ ಇದೆ. ಊಟಕ್ಕೆ ಬಂದ ಮಾಸ್ತಿ ಹೊರಗಿನ ನಲ್ಲಿಯಲ್ಲಿ ಕಾಲು ತೊಳೆದುಕೊಂಡು ಒಳಗೆ ಹೋಗುತ್ತಿದ್ದಾಗ, ಆ ಹುಡುಗಿ ಇವರನ್ನು ಕರೆದು ನೀನು ಕಾಲು ಸರಿಯಾಗಿ ತೊಳೆದುಕೊಂಡಿಲ್ಲ ಎಂದು ಹೇಳಿದಳಂತೆ. ಇವರು ಮತ್ತೆ ಕಾಲು ತೊಳೆದುಕೊಂಡು ಒಳಗೆ ಹೋಗುವಾಗ *"The boy is dull"* ಎಂದು ಇವರಿಗೆ ಕೇಳಿಸಲೆಂದೇ ಹೇಳಿದಳಂತೆ. ಮುಂದೆ ಅವರು ಅಧಿಕಾರಿಯಾಗಿದ್ದಾಗ ಆ ಮನೆಯ ಹಿರಿಯರನ್ನು ಕಾಣುವ ಪ್ರಸಂಗ ಬರುತ್ತದೆ. ಆಗ ಮಾಸ್ತಿಯವರು ಆ ಹಿರಿಯರಿಗೆ ತಮ್ಮ ನೆನಪನ್ನು ಮಾಡಿಕೊಡುತ್ತಾರೆ.ಈ ಪ್ರಸಂಗ ಅವರ ಮನಸ್ಸಿನಲ್ಲಿ ಒಂದು ನೋವಿನ ಘಟನೆಯಾಗಿ ಉಳಿದುದರಿಂದಲೋ ಏನೋ ಮಾಸ್ತಿಯವರು ನಾನು ಇಂಥವನು, ನಿಮ್ಮ ಮನೆಗೆ ವಾರಕ್ಕೆ ಬರುತ್ತಿದ್ದೆ, ನಿಮ್ಮ ನಾದಿನಿ ಆ ವರ್ಷ ಮೆಟ್ರಿಕ್ಯುಲೇಷನ್ ಕಟ್ಟಿದರು ಎಂದು ನೆನಪಿಸುತ್ತಾರೆ. ಆ ಮನೆಯ ಒಡೆಯರು "ಎಲಾಪ್ಪ! ಆ ಹುಡುಗನೇ ನೀನು!" ಎಂದು ಪ್ರೀತಿ ಸಂತೋಷ ಆಶ್ಚರ್ಯಗಳನ್ನು ವ್ಯಕ್ತಪಡಿಸಿ ಮಡದಿಗೆ ಪರಿಚಯಿಸಿ, ತಾನು ವಾರಾನ್ನದ ಹುಡುಗನಾಗಿದ್ದೆ ಎಂಬುದನ್ನು ಮರೆಯದ ಹಿರಿಯ ಗುಣವನ್ನು ಕೊಂಡಾಡಿದರಂತೆ.

ಅಭಿಮಾನಕ್ಕೆ ನೋವಾಗುವ ಮಾತು ಬಂದಾಗ ವಿದ್ಯಾರ್ಥಿಜೀವನದ ಒಂದು ಘಟನೆಯನ್ನು ಮಾಸ್ತಿ ನೆನಪು ಮಾಡಿಕೊಳ್ಳುತ್ತಾರೆ. ಮೈಸೂರಿನಲ್ಲಿ ಹೈಸ್ಕೂಲು ಓದುವಾಗ ಒಂದು ಹೋಟಲಿನ ಕೋಣೆಯಲ್ಲಿ ಓದುವ ಹುಡುಗರಿದ್ದುಕೊಂಡು ಇಸ್ಪೀಟು ಆಡುತ್ತಿದ್ದ ಸಂದರ್ಭ. ಅಲ್ಲಿಗೆ ಮಾಸ್ತಿಯವರು ಹೋಗುವುದನ್ನು ಅಭ್ಯಾಸ ಮಾಡಿಕೊಂಡು ದಿನವೂ ಶಾಲೆಗೆ ಹೊತ್ತಾಗಿ ಹೋಗುತ್ತ ಮೊದಲ ಸ್ಥಾನವನ್ನು ಕಳೆದುಕೊಳ್ಳುತಿದ್ದುದರ ವಿವರ ಇಲ್ಲಿ ಬರುತ್ತದೆ. ಆ ಕೋಣೆಗೆ ಒಬ್ಬ ಮುನ್‌ಸೀಫ್ ಕೋರ್ಟಿನಲ್ಲಿ ಸಮನ್ಸ್ ಕೊಡುವ ಪೇದೆಯಾಗಿದ್ದವನ ಮಗ, ಓದುವ ಹುಡುಗ ಇಸ್ಪೀಟಾಡಲು ಬರುತ್ತಿದ್ದನೆಂದೂ, ಒಂದು ಸಂದರ್ಭದಲ್ಲಿ ಮಾತಿಗೆ ಮಾತು ಬೆಳೆದು ತಾವು ಅವನನ್ನು "ಪರಿಚಾರಕನ ಮಗ ನೀನು, ನಿನಗ್ಯಾಕೆ ಈ ಅಹಂಕಾರ?" ಎಂದು ಹೇಳಿದುದಾಗಿ, ಅವನ ಜೊತೆಯ ಹುಡುಗರು ಇದನ್ನು ಕೇಳಿ ಮುಖ ಮುಖ ನೋಡಿಕೊಂಡಾಗ ಅವನು "ತುಂಬ ಮುಖ ಕೆಟ್ಟ" ಎಂದು ಮಾಸ್ತಿಯವರು ನೆನಪು ಮಾಡಿಕೊಳ್ಳುತ್ತಾರೆ. ಈ ಘಟನೆ ನಡೆದ ನಂತರ ತಾವು ಮತ್ತೆ ಅಲ್ಲಿಗೆ ಹೋಗಲಿಲ್ಲವೆಂದು ಹೇಳುವ ಮಾಸ್ತಿಯವರು ಈ ಘಟನೆಯಿಂದ ಆ ಪರಿಚಾರಕನ ಮಗ ಎನಿಸಿಕೊಂಡ ಹುಡುಗನಿಗೆ ಅವಮಾನವಾಯಿತು ಎಂದು ತಿಳಿಯುವುದಿಲ್ಲ. ಅವನ

ಅಭಿಮಾನಕ್ಕೆ ನೋವಾಯಿತೆಂದೂ ತಿಳಿಯುವುದಿಲ್ಲ. "ಜೀವನವನ್ನು ಕುರಿತು ವಿಚಾರ ಮಾಡಿದಾಗಲೆಲ್ಲ ಈಚೆಗೆ ನನಗೆ ಈ ಪ್ರಸಂಗ ನನ್ನ ಬಾಳಿನ ದೈವದ ನಿರ್ಹೇತುಕ ಕೃಪೆಯ ಒಂದು ನಿದರ್ಶನ ಎಂದು ಕಂಡಿದೆ'' ಎನ್ನುತ್ತಾರೆ.

"The boy is dull" ಎಂದು ಹೇಳಿದ ಹುಡುಗಿಯ ಮಾತಿನ ಬಗ್ಗೆ "ತಾನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದ ವಿದ್ಯಾರ್ಥಿನಿ; ನಾನು ಇನ್ನೂ ಪರೀಕ್ಷೆಯ ತರಗತಿಯಲ್ಲಿರುವ ಹುಡುಗ. ತನ್ನ ಪ್ರತಿಷ್ಠೆಯನ್ನು ತೋರಿಸಿಕೊಳ್ಳುವುದಕ್ಕಾಗಿಯೇ ಅವಳು ಹೀಗೆ ಎನ್ನುತ್ತಿದ್ದಳು ಎಂದು ನನ್ನ ಮನಸ್ಸಿಗೆ ತಟ್ಟಿತು. ಆದರೆ ಕೆಟ್ಟ ಮಾತು ಕೇಳುವ ಬಡವ ಏನು ಮಾಡುವಂತಿದ್ದಾನು?'' ಎಂದು ತೀವ್ರವಾಗಿ ತನ್ನ ವ್ಯಥೆಯನ್ನು ತೋಡಿಕೊಳ್ಳುವ; ಆದರೆ ತನ್ನ ಹಾಗೆಯೇ ಬಡತನದಲ್ಲಿದ್ದು ಓದುತ್ತಿದ್ದ ವಿದ್ಯಾರ್ಥಿಯೊಬ್ಬನಿಗೆ ನೋವಾಗುತ್ತದೆ ಎಂಬ ಸೂಕ್ಷ್ಮವನ್ನು ಚಿಂತಿಸದಿರುವ ಮಾಸ್ತಿಯವರ ಈ ತರಹೆಯ ವ್ಯಕ್ತಿತ್ವ ಭಾವದಲ್ಲಿ ಮಾತ್ರ ಮೂಡಿದೆ. ಮಾಸ್ತಿಯವರ ಕಥೆಗಳಲ್ಲಿ ಕಾಣದು.

ಪರೋಪಕಾರ ಮತ್ತು ಸಾಮಾಜಿಕ ಋಣಗಳ ಬಗ್ಗೆ ಮಾಸ್ತಿಯವರ ನಿಲುವನ್ನು ನಿರೂಪಿಸುವಂಥ ಎರಡು ಘಟನೆಗಳನ್ನು ನೋಡಬಹುದು.

ಮಾಸ್ತಿಯವರು ತಾವು ಯಾವುದೋ ಒಂದು ಪರೀಕ್ಷೆಗೆ ಕಟ್ಟಬೇಕಾದ ಸಂದರ್ಭ ಬಂದಾಗ ತಾವು ಮಕ್ಕಳಿಗೆ ಮನೆ ಪಾಠ ಹೇಳಿಕೊಡುತ್ತಿದ್ದ ಮನೆಯ ಒಡೆಯರಾದ ಭಿಕ್ಷಾನ್ನದ ರಾಮಣ್ಣನವರಿಂದ ಪರೀಕ್ಷೆಗೆ ಕಟ್ಟಲು ಹಣವನ್ನು ಪಡೆದುಕೊಳ್ಳುತ್ತಾರೆ. ಆ ಶ್ರೀಮಂತರು ಹಣವನ್ನು ಪಾಠದ ದುಡ್ಡಿಗೆ ಮುರಿದುಕೊಳ್ಳುತ್ತಾರೆಂದಾಗ ಸ್ವಲ್ಪ ಅಸಮಾಧಾನವನ್ನು ಅನುಭವಿಸುತ್ತಾರೆ.

ತನ್ನನ್ನು ಕಾಪಾಡಿದ ತನ್ನ ತಾತನವರಿಗೆ ತನ್ನಿಂದ ಏನೂ ಮಾಡಲಾಗಲಿಲ್ಲ ಎಂಬ ಕೊರಗು ತಮಗಿತ್ತೆಂದು ಮಾಸ್ತಿ ನೆನಪಿಸಿಕೊಳ್ಳುತ್ತಾರೆ. ತಾವು ಅಧಿಕಾರಿಯಾಗಿದ್ದಾಗ ತಮ್ಮನ್ನು ಸಹಾಯಕ್ಕಾಗಿ ಕೇಳಿದ ಒಬ್ಬ ವೃದ್ಧರಿಗೆ ಹಣ ಕೊಟ್ಟದ್ದು, ಅವರಿಗೆ ಒಂದು ಶಾಲು ತೆಗೆದುಕೊಟ್ಟದ್ದು ಭಾವದಲ್ಲಿ ದಾಖಲೆಯಾಗಿದೆ. ಅದೇ ರೀತಿ ತಾನು ಓದುವಾಗ ತನ್ನನ್ನು ಮನೆಯಲ್ಲಿಟ್ಟುಕೊಂಡು ಸಹಾಯ ಮಾಡಿದ ಹಿರಿಯ ಬಂಧುಗಳ ಮಗ, ದೊರೆ ಎಂಬುವವರಿಗೆ, ವಕೀಲಿ ವೃತ್ತಿಯಲ್ಲಿ ಮುಂದೆ ಬರಲು ತಮ್ಮಿಂದ ಸಹಾಯ ಮಾಡಲಾಗಲಿಲ್ಲ ಎಂಬುದನ್ನೂ ಸಹ ಅಷ್ಟೇ ಪ್ರಾಮಾಣಿಕವಾಗಿ ದಾಖಲು ಮಾಡುತ್ತಾರೆ.

ಭಾವದಲ್ಲಿ ಮೂಡುವ ಮಾಸ್ತಿ ಸಂತರಲ್ಲ. ತನ್ನ ಹಕ್ಕಿಗಾಗಿ ಜಗಳ ಕಾಯಬಲ್ಲರು, ಮುನಿಯಬಲ್ಲರು. ತನಗೆ ಸಲ್ಲಬೇಕಾದುದು ಸಲ್ಲಲಿಲ್ಲ ಎಂದಾಗ ರಾಜೀನಾಮೆ ಕೊಡುವಂಥ ಕ್ರಿಯೆಗೂ ಹೋಗಬಲ್ಲರು. ತನ್ನ ಗೆಳೆಯ ವೆಂಕಟರಂಗನ್ ಬಗ್ಗೆ ಅಸಮಾಧಾನ ಉಂಟಾದ ಸಂದರ್ಭದಲ್ಲಿ ಮೊದಲು ಮುನಿದು ಅಸಮಾಧಾನಪಟ್ಟು ಮನೆಗೆ ಬಂದರೂ, ಅಂತಃಕರಣ ಚಡಪಡಿಸಿದಾಗ ಮನೆಯಲ್ಲಿ ಮಾಡಿದ ಸಿಹಿಯನ್ನು ತೆಗೆದುಕೊಂಡು ಹೋಗಿ ಕೊಟ್ಟು, ಕೆಲವೇ ದಿನಗಳ ಹಿಂದೆ ಬೇರೊಬ್ಬ ಗೆಳೆಯ ತೀರಿಕೊಂಡ ಹಾಗೆಯೇ ನಾಳೆ ನೀನಾಗಲೀ ನಾನಾಗಲೀ

ಇಲ್ಲದೇ ಹೋದರೆ ಈ ಅಸಮಾಧಾನವನ್ನು ಹೊತ್ತುಕೊಂಡೇ ಹೋಗಬೇಕೆ ಎಂದು ಕೇಳಿ ಸ್ನೇಹವನ್ನು ಉಳಿಸಿಕೊಳ್ಳಬಲ್ಲರು.

ಭಾವ : ೧ ರ ಒಂದು ಹಂತದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನೂ ಕುರಿತು ಮಾಸ್ತಿಯವರ ಅಭಿಪ್ರಾಯಗಳು ವ್ಯಕ್ತವಾಗಿವೆ. ಅವರು ಮೈಸೂರಿನಲ್ಲಿ ಓದುತ್ತಿದ್ದಾಗ ಅಲ್ಲಿಗೆ ಬಂದ ಕೃಷ್ಣನ್ ನಾಯರ್ ಅವರ ಭಾಷಣಗಳನ್ನು ಕೇಳಿದ ಬಗ್ಗೆ ಬರೆಯುತ್ತಾ ಮಾಸ್ತಿಯವರು "ನಾಯರ್ ಅವರ ಭಾಷಣಗಳು ಮೈಸೂರಿನ ನಮ್ಮ ತಲೆಮಾರಿನ ವಿದ್ಯಾರ್ಥಿಗಳಿಗೆ ಭಾರತ ಪುತ್ರತ್ವದ ದೀಕ್ಷೆಯನ್ನು ಕೊಟ್ಟವು'' ಎಂದು ಹೇಳುತ್ತಾರೆ. ಆದರೆ ಸ್ವಾತಂತ್ರ್ಯ ಚಳುವಳಿಗಾಗಿ ಶಾಲೆ ಕಾಲೇಜುಗಳನ್ನು ಬಿಡದೆ ಅನಂತರವೂ, ನೌಕರಿಯಲ್ಲಿ ಸಿವಿಲ್ ಸರ್ವಿಸ್ ಅನ್ನು ಬಯಸಿ ಆರಿಸಿಕೊಂಡು ಉದ್ಯೋಗಕ್ಕೆ ಹೋದ ವ್ಯಕ್ತಿಯೊಬ್ಬರು ಭಾಷಣಗಳನ್ನು ಕೇಳಿದ ಮಾತ್ರಕ್ಕೆ "ಭಾರತ ಪುತ್ರತ್ವದ ದೀಕ್ಷೆ'' ಎಂದು ಮಾತಾಡುವುದು ಸ್ವಲ್ಪ ಭಾರವಾಯಿತೇನೋ ಎನ್ನಿಸುತ್ತದೆ.

ಇದೇ ಸರಿಸುಮಾರಿನಲ್ಲಿ ಹೊಂಗೇನಹಳ್ಳಿಯಲ್ಲಿ ವೀಳೆಯದೆಲೆಯ ತೋಟಕ್ಕೆ ಚಪ್ಪಲಿ ಹಾಕಿಕೊಂಡು ನುಗ್ಗಲು ಹೋದ ಬಿಳಿಯ ಸೈನಿಕರನ್ನು ಊರಿನ ಜನ ಹೊಡೆದರೆಂಬ ಪ್ರಸ್ತಾಪ ಬರುತ್ತದೆ. ಇದನ್ನು ಸಹ ಮಾಸ್ತಿಯವರು ಒಂದು ಮಟ್ಟದ ಮೆಚ್ಚಿಕೆಯಿಂದಲೇ ಉಲ್ಲೇಖಿಸುತ್ತಾರೆ. ಮುಂದೆ ಅವರು ಅಧಿಕಾರಿಯಾಗಿದ್ದಾಗ ಒಬ್ಬ ವ್ಯಕ್ತಿ ಕನ್ನಡದ ಕೆಲಸ ಮಾಡುವ ನೆವ ಹಾಕಿಕೊಂಡು ತಮ್ಮೊಡನೆ ಸಲಿಗೆ ಬೆಳೆಸಿದ್ದಾಗಿ, ಅವನಿಗೆ ಸ್ವಾತಂತ್ರ್ಯ ಚಳುವಳಿಯ ಸಂಬಂಧವಿದ್ದುದಾಗಿ ಉಲ್ಲೇಖಿಸುತ್ತಾ ಅವರು 'ಬೇರೆ ವಿಚಾರಗಳನ್ನು' – ಅಂದರೆ ಚಳುವಳಿಗೆ ಸಂಬಂಧಿಸಿದ ವಿಚಾರಗಳನ್ನು –ಹೇಳತೊಡಗಿದಾಗ ಕನ್ನಡದ ಕೆಲಸಕ್ಕೆ ಬರುವುದಾದರೆ ನನ್ನಲ್ಲಿಗೆ ಬನ್ನಿ, ಕನ್ನಡದ ಹೆಸರು ಹೇಳಿಕೊಂಡು ಬೇರೆಯ ವಿಷಯ ಎತ್ತುವುದು ಬೇಡ ಎಂದು ಹೇಳಿದುದಾಗಿ ಹೇಳುತ್ತಾರೆ. ಮುಂದೆ ಒಂದು ಸಾಹಿತ್ಯಿಕ ಸಮ್ಮೇಳನಕ್ಕೆ ಹೋದಾಗ ಗಾಂಧಿಯ ವರನ್ನು ಭೇಟಿಯಾದ ಪ್ರಸ್ತಾಪವೂ ಬರುತ್ತದೆ.

ಮಾಸ್ತಿಯವರು ತುಂಬ ಆಚಾರವಂತರೇನೋ, ದೇವರು, ಧರ್ಮ, ಜಾತಿ, ಸಂಪ್ರದಾಯ ಗಳ ಬಗೆಗೆ ಬಹಳ ಗೌರವವಿಟ್ಟವರೇನೋ? ಎಂದು ಅನೇಕರು ಭಾವಿಸಿದ್ದರಂತೆ. ಆದರೆ ತಾವು ಹಾಗಿರಲಿಲ್ಲವೆಂಬುದನ್ನು ಮಾಸ್ತಿ ಒಂದೆರಡು ಘಟನೆಗಳ ಮೂಲಕ ನಿರೂಪಿಸುತ್ತಾರೆ. ಅವರ ಮದುವೆಯಾದ ವರ್ಷದಲ್ಲಿ ಒಂದು ತೀರ್ಥಕ್ಷೇತ್ರಕ್ಕೆ ಹೋದ ಸಂದರ್ಭದಲ್ಲಿ ಕಂಕಣದ ಕೈಯಲ್ಲಿ ತರ್ಪಣ ಬಿಡಬಾರದು ಎಂದು ಜೊತೆಯಲ್ಲಿದ್ದ ಸಂಪ್ರದಾಯಸ್ಥ ಹಿರಿಯರು ಹೇಳಿದರೆ "ಕೈಯಲ್ಲಿ ಕಂಕಣವಿದ್ದರೆ ಹಿರಿಯರನ್ನು ನೆನೆಯುವುದು ಬೇಡ ಎನ್ನುತ್ತದೆಯೇ?'' ಎಂದು ಮಾಸ್ತಿ ತಮ್ಮ ಮನದಂತೆ ನಡೆದರಂತೆ.

ತಮ್ಮ ಔದ್ಯೋಗಿಕ ಜೀವನ ಪ್ರಾರಂಭವಾದಾಗ ತನಗಾಗಿ ಕಾಯುವ ತಾಯಿ ಮತ್ತು ಮಡದಿಯರಿಗೆ ಮಾಸ್ತಿಯವರು ಒಂದು ದಿನ ಎದುರಿಗೆ ಕೂತು ನೀವು ಮೊದಲು ಊಟ ಮಾಡಿ ಆಮೇಲೆ ನಾನು, ಎಂದು ಹಠ ಹಿಡಿದು ಊಟ ಮಾಡಿಸಿ ಅದನ್ನು ಅಭ್ಯಾಸ ಮಾಡಿಸಿದ ಪ್ರಸಂಗ ಬರುತ್ತದೆ.

ಮುಂದೆ ತಮ್ಮ ಅಧಿಕಾರಿ ಜೀವನದ ಬೇರೆ ಬೇರೆ ಸಂದರ್ಭಗಳಲ್ಲಿ ಪ್ರವಾಸ ಹೋದಾಗ ತಮ್ಮ ಜೊತೆಗಿದ್ದ ಬೇರೆ ಜಾತಿಯ ಮಿತ್ರರೊಡನೆ, ಹರಿಜನ ಪ್ರಜಾಪ್ರತಿನಿಧಿಯೊಡನೆ ಸಹಪಂಕ್ತಿಯಲ್ಲಿ ಊಟ ಮಾಡಿದುದನ್ನು, ಹಾಗೆ ನಡೆದುದಕ್ಕೆ ತನ್ನನ್ನು ಸಂಪ್ರದಾಯಸ್ಥನೆಂದು ತಿಳಿದ ಇತರರು ಆಶ್ಚರ್ಯ ವ್ಯಕ್ತಪಡಿಸಿದ ಸಂದರ್ಭಗಳನ್ನು ಮಾಸ್ತಿಯವರು ನೆನೆಯುತ್ತಾರೆ.

ದೇವರು ಮತ್ತು ಧರ್ಮಗಳ ಬಗ್ಗೆ ತಮಗೆ ಪ್ರಾರಂಭದಲ್ಲಿ ಲಘುವಾದ ಹಾಸ್ಯದ ಮನೋಭಾವವಿತ್ತು, ದೆವ್ವ ಮುಂತಾದವುಗಳ ಬಗ್ಗೆ ಬಾಲ್ಯದಲ್ಲಿ ಅನೇಕ ಕತೆಗಳನ್ನು ಕೇಳಿ ಚೇತನದ ಯಾವುದೋ ಮೂಲೆಯಲ್ಲಿ ಆ ಭಯ ಇನ್ನೂ ಉಳಿದಿದೆ ಎಂದು ಮಾಸ್ತಿ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾರೆ. ಒಂದು ಸಂದರ್ಭದಲ್ಲಿ ಸಾಂಪ್ರದಾಯಿಕವಾಗಿ "ತಪ್ತ ಚಕ್ರಾಂಕಣ"ವನ್ನು ಮಾಡಿಕೊಳ್ಳಬೇಕಾದಾಗ, ಚಕ್ರಾಂಕಣ ಮಾಡಿದವರು ನಿಮ್ಮ ಪಾಪಗಳೆಲ್ಲ ಪರಿಹಾರವಾದವು ಎಂದು ಹೇಳಿದಾಗ "ನನಗೆ ನಗುಬಂದಿತು, ನಕ್ಕುಬಿಟ್ಟೆ" ಎಂದು ಮಾಸ್ತಿಯವರು ಹೇಳುತ್ತಾರೆ. ಮುಂದೆ ಈ ಅಪನಂಬಿಕೆ ತಮಗೆ ಆದ ಕೆಲವು ಅನುಭವಗಳ ಫಲವಾಗಿ ಮಾಗುತ್ತ ಬಂತೆಂದು ಸಣ್ಣ ಸಣ್ಣ ಘಟನೆಗಳಲ್ಲಿ ದೈವಕೃಪೆ ಕಂಡು, ಮೂರು ಬಾರಿ ದೇವರು ಉಂಟೆಂದು ಸಿದ್ಧಾಂತವಾಯಿತೆಂದು ಮಾಸ್ತಿ ಹೇಳಿಕೊಳ್ಳುತ್ತಾರೆ.

ಇದರಲ್ಲಿ ಒಂದು ಘಟನೆ ನಂಜನಗೂಡಿಗೆ ದೇವಸ್ಥಾನಕ್ಕೆ ಪೂಜೆ ಮಾಡಿಸಲು ಹೋದಾಗ, ತಡವಾಗಿ ಹೋದರೂ ರೈಲು ಸಿಕ್ಕಿದ್ದು. ಇನ್ನೊಂದು, ಸತ್ತಿದೆ ಎಂದು ತಿಳಿದು ಹಾವೊಂದನ್ನು ದಾಟಲು ಹೋಗಿ ಆ ಹಾವು ಬದುಕಿದೆ ಎಂದು ತಿಳಿದು ದಾಟದೇ ದೂರದಿಂದ ಹೋಗುವಂತಾದದ್ದು. ಮೂರನೆಯದು, ಒಂದು ಬಾರಿ ತಿರುಪತಿಗೆ ಹೋದಾಗ ಅಭಿಷೇಕಕ್ಕೆ ನೀರು ಹೊರುವ ಅವಕಾಶ ಸಿಕ್ಕಿದ್ದು. ಇಂಥ ಸಣ್ಣ ಘಟನೆಗಳು ದೈವ ಕೃಪೆಯ ಸಿದ್ಧಾಂತಗಳಾಗಿ ಮಾಸ್ತಿಯವರಿಗೆ ಕಂಡಿವೆ. ಭವಿಷ್ಯವನ್ನು ಸೂಚಿಸುವಂಥ ಕೆಲವು ದರ್ಶನಗಳು ಸಹ ತಮಗೆ ಆಗಿವೆ ಎಂದು ಮಾಸ್ತಿ ಹೇಳುತ್ತಾರೆ. ಒಬ್ಬ ಅಧ್ಯಾಪಕರ ಮರಣ, ವೆಂಕಣ್ಣಯ್ಯನವರ ಮರುಮದುವೆ ಇಂಥ ಘಟನೆಗಳು ಸ್ವಪ್ನದಲ್ಲಿ ಪೂರ್ವಸೂಚಿತವಾದುದನ್ನು ಮಾಸ್ತಿ ದರ್ಶನ ಎಂದು ಕರೆಯುತ್ತಾರೆ.

ತಾವು ನ್ಯಾಯಾಧೀಶರಾಗಿದ್ದಾಗಿನ ಅನುಭವಗಳಲ್ಲಿ, ಪ್ರಭಾವಶಾಲಿಗಳಾಗಿದ್ದವರಿಗಾಗಿ ಉಳ್ಳವರಿಗಾಗಿ ನ್ಯಾಯ ಬಗ್ಗುವುದಿಲ್ಲ ಎಂಬುದನ್ನು ಮಾಸ್ತಿಯವರು ಅನೇಕ ಸಂದರ್ಭಗಳಲ್ಲಿ ನಿರೂಪಿಸಿದ್ದಾರೆ. ಒಬ್ಬ ಆಂಗ್ಲ ಪ್ಲಾಂಟರ್ ಎಂಬ ಪ್ರಸಂಗ, ಆಂಗ್ಲರ ಕ್ಲಬ್ಬಿನ ಸದಸ್ಯತ್ವವನ್ನು ನಿರಾಕರಿಸಿದ ಘಟನೆ, ಟೆನ್ನಿಸ್ ಮತ್ತು ದಾರಿ ವಿವಾದ ಇತ್ಯಾದಿ ಸಂದರ್ಭಗಳಲ್ಲಿ ಈ ನ್ಯಾಯ ನಿಷ್ಠುರತೆಯನ್ನು ನೋಡುತ್ತೇವೆ.

ಮೋಸಗಾರರಿಗೆ ಜಾತಿಯ ಕಟ್ಟುನಿಟ್ಟಿಲ್ಲ. ಮೋಸಗಾರರು ಎಲ್ಲ ಜಾತಿಯಲ್ಲೂ ಇದ್ದಾರೆ ಎಂಬುದು ಮಾಸ್ತಿಯವರ ಅನುಭವ. ಹಾಸಿಗೆ ಮಾಡುವ ಹೈದರ್‌ಸಾಬಿ, ಹೆಣ ಎತ್ತಲು ಬಂದು ಒಂದು ರೂಪಾಯಿಯನ್ನು ಮೊದಲೇ ಕೊಟ್ಟಿದ್ದರೂ ಹೇಳದೆ ಹೋದ ಶ್ರೀವೈಷ್ಣವ ಬ್ರಾಹ್ಮಣರು, ದುಡ್ಡು ಪಡೆದುಕೊಂಡ ಮೇಲೆ ತಮ್ಮ ಬಳಿ ಬರದೇ ಹೋದ ಕ್ರೈಸ್ತ ಡ್ರೈವರ್,

ಹಣ ಕೊಡದೇ ಕುದುರೆ ಲಪಟಾಯಿಸಿಕೊಂಡು ಹೋದ ಟೆಟ್ ಸಾಹೇಬರ ಶಿಷ್ಯ, ಷೇರು ವ್ಯವಹಾರದಲ್ಲಿ ಮೋಸ ಮಾಡಿದ ಜಾಣ ಬ್ರಾಹ್ಮಣ ತರುಣ ಇವರೆಲ್ಲರನ್ನು ಮಾಸ್ತಿ ಭಾವದಲ್ಲಿ ನೆನೆಯುತ್ತಾರೆ.

ತಾವು ಕಷ್ಟಪಟ್ಟು ಕೆಲಸ ಮಾಡಿದ ಒಂದು ಸೆನ್ಸಸ್ ವರದಿಯಲ್ಲಿ ತಮ್ಮ ಹೆಸರು ಇಲ್ಲ ಎಂಬುದರಿಂದ ಮಾಸ್ತಿಯವರಿಗೆ ಅಸಮಾಧಾನವಾಗುತ್ತದೆ. ಇನ್ನೊಂದು ವರದಿಯನ್ನು ಮೇಲಿನ ಅಧಿಕಾರಿಗಳೊಬ್ಬರು ತಮಗೆ ತೋರಿಸಿ ಅದನ್ನು ಪರಿಷ್ಕರಿಸಿ ಕೊಡಬೇಕೆಂದು ಕೇಳಿದಾಗ ಮಾಸ್ತಿಯವರು *"Will my name appear as co-author?"* ಎಂದು ಪ್ರಶ್ನಿಸುತ್ತಾರೆ. ಆ ಹಿರಿಯರು *"I am afraid it is not possible"* ಎಂದಾಗ ಆ ವರದಿಯನ್ನು ಬರೆಯಲು ನಿರಾಕರಿಸುತ್ತಾರೆ.

ತಮ್ಮ ಮಗಳೊಬ್ಬಳು ಜಾತಿಯ ಮೇರೆಗಳನ್ನು ಮೀರಿ ಅಮೇರಿಕನ್ ತರುಣ ನೊಬ್ಬನನ್ನು ಮದುವೆಯಾದಾಗ ಆ ಅಮೇರಿಕನ್ ಅಳಿಯನನ್ನು ಗೌರವ–ಆದರಗಳಿಂದಲೇ ಕಂಡುದಾಗಿ ಮಾಸ್ತಿಯವರು ಭಾವದಲ್ಲಿ ಉಲ್ಲೇಖಿಸುತ್ತಾರೆ.

ಹೀಗೆ ಮಾಸ್ತಿಯವರು ತಮ್ಮ ಸಣ್ಣ ಕತೆಗಳಲ್ಲಿ ಕಾಣುವ ವ್ಯಕ್ತಿತ್ವಕ್ಕಿಂತ ಭಿನ್ನವಾದ ವ್ಯಕ್ತಿತ್ವವೊಂದನ್ನು ಭಾವದಲ್ಲಿ ಅನಾವರಣ ಮಾಡಿದ್ದಾರೆ. ಸಣ್ಣ ಕತೆಗಳಲ್ಲಿ ನಾವು ಕಾಣುವುದು ಶ್ರೀನಿವಾಸರನ್ನು. ಆದರೆ ಭಾವದಲ್ಲಿ ಮೂಡುವವರು ಮುನಿಯಬಲ್ಲ, ಜಗಳವಾಡಬಲ್ಲ, ರಾಜೀನಾಮೆ ಕೊಡಬಲ್ಲ ಜಾಲಾರಿ ಮರದ ಹೂವಿನ ಸುಗಂಧಕ್ಕಾಗಿ ಹುಡುಕುತ್ತಾ ಬೆಟ್ಟ ಹತ್ತಿ ಅಲೆದಾಡಬಲ್ಲ ಮಾಸ್ತಿಯವರು. ರವೀಂದ್ರನಾಥ ಠಾಕೂರರ ಬಗ್ಗೆ ಪಂಡಿತರು ಒಂದು ಮಾತು ಹೇಳುತ್ತಾರೆ. ಠಾಕೂರರ ಸಾಹಿತ್ಯದಲ್ಲಿ ಕಾಣುವ ಠಾಕೂರರು ಅವರ ವರ್ಣಚಿತ್ರಗಳಲ್ಲಿ ಕಾಣುವ ಠಾಕೂರರಿಗಿಂತ ಬಹಳ ಭಿನ್ನವಾದವರು. ಪ್ರಪಂಚಕ್ಕೆ ಅವರ ಸಾಹಿತ್ಯದ ಮೂಲಕ ಅನಾವರಣ ವಾಗದ ಒಂದು ಮುಖ ಅವರ ಚಿತ್ರಗಳಲ್ಲಿ ಅನಾವರಣಗೊಳ್ಳುತ್ತದೆ ಎಂದು. ಮಾಸ್ತಿಯವರ ವಿಷಯಕ್ಕೂ ಈ ಮಾತು ಸತ್ಯ.

●

'ಜೀವನ' ಕಾರ್ಯಾಲಯದ ಮಾಸ್ತಿ

ಚಿ. ಶ್ರೀನಿವಾಸ ರಾಜು

'ಮಾಸ್ತಿ ಉತ್ಸವ'ದ ವಿಚಾರ ಸಂಕಿರಣದಲ್ಲಿ ನನ್ನ ಭಾಗಕ್ಕೆ ಬಂದಿರುವ ವಿಷಯ 'ಜೀವನ ಕಾರ್ಯಾಲಯದ ಮಾಸ್ತಿ.' ಈ ವಿಷಯದ ಬಗ್ಗೆ ಏನು ಹೇಳಬೇಕು? ಏನು ಬಿಡಬೇಕು? ಎಂಬ ಗೊಂದಲದಲ್ಲಿ ಸಿಕ್ಕಿಬಿದ್ದು, ಕೊನೆಗೆ ವಿಷಯವನ್ನು ನನ್ನ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ಜೀವನ ಕಾರ್ಯಾಲಯದ ಚಟುವಟಿಕೆ, ಜೀವನ ಪತ್ರಿಕೆ ಮತ್ತು 'ಜೀವನ' ಪತ್ರಿಕೆಯ ಮಾಸ್ತಿಯವರ ಸಂಪಾದಕೀಯಗಳಿಗೆ ನನ್ನನ್ನು ಸೀಮಿತಗೊಳಿಸಿಕೊಂಡಿದ್ದೇನೆ.

ಮಾಸ್ತಿಯವರದು ಮುಖ್ಯವಾಗಿ ಎರಡು ಬಗೆಯ ಚಟುವಟಿಕೆ:

೧. ಸೃಜನಶೀಲ ಲೇಖಕರಾಗಿ

೨. ಸ್ವಯಂ ಪ್ರಕಾಶಕರಾಗಿ

ಮಾಸ್ತಿಯವರು ಪ್ರಕಾಶಕರಾಗಿ ಎರಡು ರೀತಿಯ ಕಾರ್ಯಗಳನ್ನು ನಿರ್ವಹಿಸಿದರು. ಒಂದು, ಜೀವನ ಕಾರ್ಯಾಲಯದಿಂದ ಅನೇಕ ಪುಸ್ತಕಗಳನ್ನು ಪ್ರಕಟಿಸಿದರು. ಇನ್ನೊಂದು, 'ಜೀವನ' ಪತ್ರಿಕೆಯನ್ನು ಇಪ್ಪತ್ತೊಂದು ವರ್ಷಗಳವರೆಗೆ ನಡೆಸಿದರು.

ಮಾಸ್ತಿಯವರು ತಮ್ಮ ಪ್ರತಿಯೊಂದು ಬರಹವನ್ನು ಅಚ್ಚುಕಟ್ಟಾಗಿ ಪುಸ್ತಕದ ರೂಪದಲ್ಲಿ ತಂದರು. ತಮ್ಮ ಗೆಳೆಯರ ಪುಸ್ತಕಗಳನ್ನು ಪ್ರಕಟಿಸಿದರು. ಅವರ ನೇತೃತ್ವದಲ್ಲಿ

ಪ್ರಕಟವಾದ ಪುಸ್ತಕಗಳು ಮುಖಪುಟದ ತಳುಕಿಲ್ಲದೆ, ನೋಡಿದ ಕೂಡಲೇ ಜೀವನ ಕಾರ್ಯಾಲಯದ ಪ್ರಕಟಣೆಯ ಛಾಪು ಕಂಡು ಬರುತ್ತದೆ.

ಮಾಸ್ತಿಯವರು ಪ್ರಕಾಶಕರಾಗಿ ಹಣವನ್ನು ಪೋಲು ಮಾಡುತ್ತಿರಲಿಲ್ಲ. ಮುದ್ರಣದ ಖರ್ಚಿನಲ್ಲಿ ಸಾಕಷ್ಟು ಕಡಿಮೆ ಮಾಡಿಕೊಳ್ಳುವಂತೆ ಚೌಕಾಸಿ ಮಾಡುತ್ತಿದ್ದರು. ಕರಡು ಪ್ರತಿಯ ಪ್ರತಿಯೊಂದು ಪುಟವನ್ನು ಸಮಾಧಾನವಾಗುವವರೆಗೂ 'ಸ್ಟ್ರೈಕ್ ಆರ್ಡರ್' ಕೊಡುತ್ತಿರಲಿಲ್ಲ. ನನ್ನ ಅನುಭವಕ್ಕೆ ಬಂದಂತೆ ಬೆಂಗಳೂರಿನ ಮುದ್ರಣಾಲಯದವರೊಬ್ಬರು 'ಜೀವನ ಕಾರ್ಯಾಲಯ'ದ ಒಂದು ಪುಸ್ತಕವನ್ನು ಅಚ್ಚು ಮಾಡಿದರು. ಇನ್ನೊಂದು ಪುಸ್ತಕದ ಮುದ್ರಣಕ್ಕೆ ಒಪ್ಪಿಕೊಳ್ಳಲಿಲ್ಲ. ಕೊಂಡು ಓದುವವನ ದೃಷ್ಟಿಯಿಂದ ಮಾಸ್ತಿಯವರು ಇದ್ದಾಗ ಪ್ರಕಟಿಸಿದ ಪುಸ್ತಕಗಳು ದುಬಾರಿ ಬೆಲೆಯವಾಗಿರಲಿಲ್ಲ. ಮಾಸ್ತಿಯವರು ಅನಾವಶ್ಯಕವಾಗಿ, ಉಚಿತವಾಗಿ, ಹೆಚ್ಚಿನ ರಿಯಾಯತಿಯಲ್ಲಿ ಪುಸ್ತಕಗಳನ್ನು ಕೊಡುತ್ತಿರಲಿಲ್ಲ.

ಮಾಸ್ತಿಯವರು ಅಂದಿನ ಸರ್ಕಾರದ ವರ್ತನೆಯಿಂದ ಕುಪಿತರಾಗಿ, ನಿರೀಕ್ಷೆಗೆ ಸ್ವಲ್ಪ ಮುಂದಾಗಿ ಅಧಿಕಾರದಿಂದ ವಿಶ್ರಾಂತಿಯನ್ನು ಪಡೆದಿದ್ದರು. ಬರಹಗಾರನ, ಪ್ರಕಾಶಕನ ಬದುಕನ್ನು ಆರಿಸಿಕೊಂಡಿದ್ದರು. ಅವರದು ಬೆಂಗಳೂರು ಗವೀಪುರದ ಬಡಾವಣೆಯಲ್ಲಿ ದೊಡ್ಡ ಮಹಡಿ ಮನೆ. ಕೆಳಗೆ ಕುಟುಂಬ ವರ್ಗದವರ ವಾಸ. ಮೇಲೆ 'ಜೀವನ ಕಾರ್ಯಾಲಯ'. ಅವರು ಬೆಳಿಗ್ಗೆ ನಿತ್ಯಕರ್ಮಗಳನ್ನು ಮುಗಿಸಿ, ಕಛೇರಿಗೆ ಹೋಗುವಂತೆ 'ಜೀವನ ಕಾರ್ಯಾಲಯ'ದ ಅಟ್ಟ ಸೇರುತ್ತಿದ್ದರು. ಮತ್ತೆ ಕೆಳಗೆ ಇಳಿದು ಬರುತ್ತಿದ್ದದ್ದು ಮಧ್ಯಾಹ್ನ ಸುಮಾರು ಎರಡು ಗಂಟೆಗೆ. ಲಘುವಾಗಿ ಏನನ್ನಾದರು ತೆಗೆದುಕೊಂಡು ಮತ್ತೆ 'ಜೀವನ ಕಾರ್ಯಾಲಯ'ದ ಕೆಲಸದಲ್ಲಿ ನಿರತರು. ಸಂಜೆ ನಿರ್ದಿಷ್ಟ ಸಮಯಕ್ಕೆ ಅವರನ್ನು–

'ಗವೀಪುರದಿಂದ ಗಾಂಧಿ ಬಜಾರಿನ ಕೊನೆಗೆ
ಪ್ರಕೃತಿಯ ಕರೆಯಂತೆ ಎಳೆಯುವುದು ಕ್ಲಬ್ಬು'

ಮಾಸ್ತಿ ಮನೆಯಲ್ಲಿದ್ದರೂ ಕಛೇರಿಯ ಶಿಸ್ತು, ಅಚ್ಚುಕಟ್ಟನ್ನು ಬಿಟ್ಟುಕೊಟ್ಟವರಲ್ಲ. ಪ್ರಕಾಶಕ ಮಾಸ್ತಿಯವರ ಬದುಕಿನಲ್ಲಿ 'ಜೀವನ' ಪತ್ರಿಕೆಯ ಪ್ರಕಟಣೆ ಮುಖ್ಯವಾದ ಭಾಗ.

'ಕಾವ್ಯಾರಾಮ' ಎಂಬ ಒಂದು ಸೇವಾ ಸಂಸ್ಥೆಯನ್ನು ಮತ್ತು ಅದೇ ಹೆಸರಿನ ಮಾಸ ಪತ್ರಿಕೆಯನ್ನು ನಡೆಸಬೇಕೆಂದು ಮಾಸ್ತಿ ಕನಸು ಕಂಡಿದ್ದರು. ಸುಮಾರು ಅದೇ ಸಮಯಕ್ಕೆ ದ. ರಾ. ಬೇಂದ್ರೆಯವರು ಕೆಲಸ ಇಲ್ಲದೆ ಬಿಡುವಾಗಿದ್ದುದರಿಂದ ಮಾಸ ಪತ್ರಿಕೆಯ ಕೆಲಸ ಧಾರವಾಡದಿಂದ ಪ್ರಾರಂಭವಾಯಿತು. 'ಕಾವ್ಯಾರಾಮ'ದ ಹೆಸರನ್ನು ಬಿಟ್ಟುಕೊಟ್ಟು ಪತ್ರಿಕೆಯನ್ನು 'ಜೀವನ' ಎಂದು ಕರೆಯಲು ನಿಶ್ಚಯವಾಯಿತು. 'ಜೀವನ' ಪತ್ರಿಕೆ ೧೯೪೦ರ ನವೆಂಬರ್ ತಿಂಗಳಲ್ಲಿ ಆರಂಭವಾಯಿತು. ಎರಡನೆಯ ಮಹಾಯುದ್ಧದ ಕಷ್ಟ–ನಷ್ಟದ ಕಾಲದಲ್ಲಿಯೂ ಪತ್ರಿಕೆ ದ. ರಾ. ಬೇಂದ್ರೆ, ವಿ. ಕೃ. ಗೋಕಾಕ್ ಮತ್ತು ರಂ. ಶ್ರೀ ಮುಗಳಿಯವರ ಸಂಪಾದಕತ್ವದಲ್ಲಿ ಮೂರು ವರ್ಷ ಚೆನ್ನಾಗಿ ನಡೆಯಿತು. ನಾಲ್ಕನೆಯ ವರ್ಷ ಅನಿವಾರ್ಯವಾಗಿ ಮಾಸಿಕ ಪತ್ರಿಕೆಯನ್ನು ತ್ರೈಮಾಸಿಕ ಪತ್ರಿಕೆಯನ್ನಾಗಿ ಮಾರ್ಪಡಿಸಬೇಕಾಯಿತು. ಕಾಗದದ ಕೊರತೆಯಿಂದ,

ವರಮಾನದ ಕೊರತೆಯಿಂದ ಪತ್ರಿಕೆಯನ್ನು ನಡೆಸುವುದು ಕಷ್ಟವಾಯಿತು. ಆ ವೇಳೆಗೆ ಮಾಸ್ತಿಯವರು ಕೆಲಸದಿಂದ ವಿಶ್ರಾಂತಿ ಪಡೆದಿದ್ದರು. ಐದನೆಯ ವರ್ಷದಿಂದ 'ಜೀವನ' ಪತ್ರಿಕೆ ಧಾರವಾಡದಿಂದ ಬೆಂಗಳೂರಿಗೆ ಬಂದು ಮಾಸ್ತಿಯವರ ಸಂಪಾದಕತ್ವದಲ್ಲಿ ಮುಂದುವರೆಯಿತು.

'ಜೀವನ' ಕನ್ನಡದ ಕಿರು ಸಾಹಿತ್ಯಿಕ ಪತ್ರಿಕೆಗಳ ಇತಿಹಾಸದಲ್ಲಿ ದೊಡ್ಡ ಹೆಸರು. ಹೊಸಗನ್ನಡ ನವೋದಯ ಸಂದರ್ಭದಲ್ಲಿ ಕನ್ನಡಕ್ಕಾಗಿ ದುಡಿದ ಬಹುಪಾಲು ಮಹನೀಯರೆಲ್ಲಾ ಪತ್ರಿಕೆಯೊಂದನ್ನು ಕನ್ನಡದ ಪುನರುಜ್ಜೀವನದ ಸಾಧನವನ್ನಾಗಿ ಮಾಡಿಕೊಂಡಿದ್ದರು. ಡಿ. ವಿ. ಜಿ. (ಸುಮತಿ) ಎ. ಆರ್. ಕೃಷ್ಣಶಾಸ್ತ್ರಿ (ಪ್ರಬುದ್ಧ ಕರ್ಣಾಟಕ) ಶಿವರಾಮ ಕಾರಂತ (ವಸಂತ) ಫ. ಗು. ಹಳಕಟ್ಟಿ (ಶಿವಾನುಭವ) ಆಲೂರು ವೆಂಕಟರಾಯರು (ಜಯ ಕರ್ಣಾಟಕ) ಆನಂದಕಂದ (ಜಯಂತಿ) ಕಡೆಂಗೊಡ್ಲು ಶಂಕರಭಟ್ಟ (ರಾಷ್ಟ್ರಬಂಧು) ಕಲ್ಯಾಣಮ್ಮ (ಸರಸ್ವತಿ) ಅ. ನ. ಕೃ. (ಕಥಾಂಜಲಿ) ಮುಂತಾದುವನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಈ ಪರಂಪರೆಯನ್ನು ನಾವು ಇಂದಿನ ಕೆಲವು ಪ್ರಮುಖ ಬರಹಗಾರರಲ್ಲೂ ಕಾಣಬಹುದು.

'ಜೀವನ' ಪತ್ರಿಕೆ ದ. ರಾ. ಬೇಂದ್ರೆ, ವಿಶ್ವೇಶ್ವರಯ್ಯ, ಆರ್. ಆರ್. ದಿವಾಕರ್, ಎ. ಆರ್. ಕೃಷ್ಣಶಾಸ್ತ್ರಿ ಮತ್ತು ನವರತ್ನ ರಾಮರಾಯರುನ್ನು ಕುರಿತು ವಿಶಿಷ್ಟ ಸಂಚಿಕೆಗಳನ್ನು ಪ್ರಕಟಿಸಿತು. ಪತ್ರಿಕೆಯಲ್ಲಿ ಬಂದ ಲೇಖನಗಳು ಅನಂತರದಲ್ಲಿ ಪುಸ್ತಕಗಳಾಗಿ ಪ್ರಕಟವಾದದ್ದು ಉಂಟು. ನವರತ್ನ ರಾಮರಾಯರ 'ಕೆಲವು ನೆನಪುಗಳು', ತಿರುಮಲೆ ರಾಜಮ್ಮನವರ 'ವೀಣೆ ಶೇಷಣ್ಣ' ಕೃತಿಗಳನ್ನು ಜ್ಞಾಪಿಸಿಕೊಳ್ಳಬಹುದು. ಜೀವನ ಕಾರ್ಯಾಲಯದಿಂದ ಪ್ರಕಟವಾದ ಪುಸ್ತಕಗಳು ಓದುಗ ವರ್ಗದಲ್ಲಿ ತುಂಬಾ ಪ್ರಿಯವಾದವು. 'ಜೀವನ' ಪತ್ರಿಕೆ ಸಾಹಿತ್ಯಪ್ರಿಯರ ಮೆಚ್ಚುಗೆ ಪಡೆಯಿತು.

'ಜೀವನ' ಪತ್ರಿಕೆಗೆ ಇಪ್ಪತ್ತೈದು ವರ್ಷಗಳು ತುಂಬಿದಾಗ ಮಾಸ್ತಿಯವರು 'ಉತ್ಸವ ಸಂಚಿಕೆ'ಯನ್ನು ಪ್ರಕಟಿಸಿದರು. ಪತ್ರಿಕೆಯನ್ನು ಇಪ್ಪತ್ತೊಂದು ವರ್ಷ ನಡೆಸಿ, ಮುಂದಿನ ಸೇವೆಯ ಹೊಣೆಯನ್ನು ಮಿತ್ರರ ಕೈಗೆ ಒಪ್ಪಿಸಿದರು. "ದೈವ ಎಲ್ಲ ಸೌಕರ್ಯವನ್ನು ಒದಗಿಸಿ, ಇದು ಒಂದು ಕರ್ತವ್ಯ ಎಂಬ ಬುದ್ಧಿಯನ್ನು ಕೊಟ್ಟಿದ್ದರಿಂದ ಈ ಕೆಲಸ ಇದುವರೆಗೆ ನನ್ನಿಂದ ನಡೆದಿದೆ"[3] ಎಂದು ಹೇಳಿದ್ದಾರೆ. 'ಜೀವನ'ದ ಹೊಣೆಯನ್ನು ಕೆ. ಗೋಪಾಲಕೃಷ್ಣರಾಯರ ನೇತೃತ್ವದ ಮಿತ್ರರು ಉತ್ಸಾಹದಿಂದ ವಹಿಸಿಕೊಂಡರು.

ಜೀವನ ಪತ್ರಿಕೆಯ ಇತಿಹಾಸವನ್ನು ನಾಲ್ಕು ಹಂತಗಳಲ್ಲಿ ಗುರುತಿಸಬಹುದು.

ಅ) ಧಾರವಾಡದ 'ಗೆಳೆಯರ ಗುಂಪು' ಪತ್ರಿಕೆ ನಡೆಸಿದ ಹಂತ

ಆ) ಬೆಂಗಳೂರು 'ಜೀವನ ಕಾರ್ಯಾಲಯ' ಪತ್ರಿಕೆ ನಡೆಸಿದ ಹಂತ

ಇ) ಬೆಂಗಳೂರು 'ಗಾಂಧಿ ಸಾಹಿತ್ಯ ಸಂಘ'ದ ಗೆಳೆಯರು ಪತ್ರಿಕೆ ನಡೆಸಿದ ಹಂತ

ಈ) ಅಂತಿಮ ಹಂತ

ಇಪ್ಪತ್ತೊಂದು ವರ್ಷ 'ಜೀವನ' ಪತ್ರಿಕೆಯ ಸಂಪಾದಕರಾಗಿದ್ದ ಮಾಸ್ತಿಯವರು 'ಉತ್ಸವ ಸಂಚಿಕೆ'ಯನ್ನು ಪ್ರಕಟಿಸಿ, ಮಿತ್ರರ ಕೈಗೆ ಪ್ರಕಟಣೆಯ ಹೊಣೆಯನ್ನು ವಹಿಸಿದ ಮೇಲೆ ಪತ್ರಿಕೆಯ ಪ್ರವರ್ತಕರಾಗಿ ಮುಂದುವರೆದರು.

ಮಾಸ್ತಿಯವರೇ ಹೇಳುವಂತೆ ಧಾರವಾಡದಿಂದ ಪ್ರಕಟವಾಗುತ್ತಿದ್ದ ಜೀವನ– "ಅಂದು ನಡೆದಷ್ಟು ಚೆನ್ನ ಮರಳಿ ಈಚೆಗೆ ಎಂದೂ ನಡೆದಿಲ್ಲ. ಆ ಗಾತ್ರ, ಆ ಲೇಖನ ವೈಭವ, ಆ ಉತ್ಸಾಹ ಆ ಮೂರು ವರ್ಷ ಪತ್ರಿಕೆಯ ಸ್ವರ್ಣಯುಗದ ಲಕ್ಷಣ ಆದವು".

'ಜೀವನ' ಬೆಂಗಳೂರಿಗೆ ಬಂದ ಮೇಲೆ ಮಾಸ್ತಿಯವರು ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲ ಬರವಣಿಗೆಗೆ ಒಂದು ಮರ್ಯಾದೆಯನ್ನು ಉಳಿಸಿಕೊಂಡು ಬಂದರು. ಮಡಿ–ಮರ್ಯಾದೆಯನ್ನು ಪಾಲಿಸಿಕೊಂಡು ಬಂದ ಪತ್ರಿಕೆ, ಕನ್ನಡವನ್ನು ಓದಿ ಬರೆಯುವ ಜನರ ಸಂಸ್ಕೃತಿಯನ್ನು ಗಂಭೀರವಾಗಿ ಪ್ರತಿನಿಧಿಸಲು ಇಪ್ಪತ್ತೊಂದು ವರ್ಷಗಳು ಪ್ರಯತ್ನ ಪಟ್ಟಿತು. ಮಾಸ್ತಿಯವರು 'ಉತ್ಸವ ಸಂಚಿಕೆ'ಯಲ್ಲಿ 'ಜೀವನ'ದ ಕಥೆಯನ್ನು ಬರೆಯುತ್ತಾ "ಪತ್ರಿಕೆಯನ್ನು ಕುರಿತು ಒಂದು ವಿಷಯದಲ್ಲಿ ನಿಸ್ಸಂಕೋಚವಾಗಿ ಹೆಮ್ಮೆ ಹೇಳಿಕೊಳ್ಳಬಹುದು. ಅದು ತಿಂಗಳು ತಿಂಗಳು ಮೊದಲ ಕೆಲಸದ ದಿನ ಹೊರಡಬೇಕೆಂದು ಉದ್ದೇಶ. ವಿಶೇಷ ಸಂಚಿಕೆಗಳನ್ನು ಮಾತ್ರ ಅಗಸ್ಟ ೧೫ರಂದು ಹೊರಡಿಸಲಾಯಿತು. ಒಟ್ಟು ಇಪ್ಪತ್ತೊಂದು ವರ್ಷದಲ್ಲಿ ಮಹಾತ್ಮಾ ಗಾಂಧಿಯವರು ಜನವರಿ ೩೦ ರಂದು ತೀರಿಕೊಂಡ ಸಂದರ್ಭದಲ್ಲಿ ಅವರ ವಿಷಯ ಒಂದು ಲೇಖನ ಸೇರಿಸುವ ಉದ್ದೇಶದಿಂದ ಫೆಬ್ರವರಿ ಮೊದಲನೆಯ ತಾರೀಖು ಹೊರಡಬೇಕಾದ ಸಂಚಿಕೆ ಆ ತಿಂಗಳ ೪ರಂದು ಅಂಚೆಗೆ ಹೋಯಿತು. ಉಳಿದಂತೆ ಅದು ತಪ್ಪದೆ ಆಯಾ ತಿಂಗಳ ಸರಿಯಾದ ದಿನದಲ್ಲೇ ಹೊರಬಿದ್ದಿದೆ. ನಿಯತಕಾಲಿಕ ಪತ್ರಿಕೆಗಳು ಈ ನಿಯಮವನ್ನು ಇಷ್ಟು ಚೆನ್ನಾಗಿ ಪಾಲಿಸುವುದು ಕಷ್ಟ 'ಜೀವನ' ಪತ್ರಿಕೆ ಇದನ್ನು ಸಾಧಿಸಿತು" ಎಂದು ಹೇಳಿದ್ದಾರೆ. ಸುಮಾರು ೧೫೦೦ ಚಂದಾದಾರರಿದ್ದ 'ಜೀವನ' ಪತ್ರಿಕೆಯ ಮೂಲಕ ಜಿ. ಎಸ್. ಶಿವರುದ್ರಪ್ಪ, ರಾಮಚಂದ್ರ ಶರ್ಮ, ಕೆ. ಎಸ್. ನರಸಿಂಹಸ್ವಾಮಿ, ಬಾಗಲೋಡಿ ದೇವರಾಯ ಮುಂತಾದ ಬರಹಗಾರರು ಬೆಳಕಿಗೆ ಬಂದಿದ್ದಾರೆ.

'ದೊಡ್ಡವರು ನಡೆಸಿದ ಪತ್ರಿಕೆ ನಿಲ್ಲಬಾರದು' ಎಂದು ಪತ್ರಿಕೆ ಪ್ರಯಾಸದಿಂದ ಮುಂದುವರೆಯಿತು. ಕೆ. ಗೋಪಾಲ ಕೃಷ್ಣರಾಯರಿಗೆ ಆರೋಗ್ಯ, ಆರ್ಥಿಕ ಅಡಚಣೆ ಎದುರಾಯಿತು. ಅನಂತರ ಗಾಂಧಿ ಸಾಹಿತ್ಯ ಸಂಘದ ಸಿದ್ಧವನಹಳ್ಳಿ ಕೃಷ್ಣಶರ್ಮರಿಗೆ ಒತ್ತಾಯದಿಂದ ಸಂಪಾದಕ ಪಟ್ಟವನ್ನು ಗೆಳೆಯರು ಕಟ್ಟಿದರು. ಕೆ. ಎನ್. ಶ್ರೀಹರಿ ಪ್ರಕಾಶಕರಾದರು. ಕೃಷ್ಣಶರ್ಮರು ತಾವೇ ನಡೆಸುತ್ತಿದ್ದ 'ಸರ್ವೋದಯ' ಪತ್ರಿಕೆಯನ್ನು ನಡೆಸಲಾರದೆ ನಿಲ್ಲಿಸಿ ಮೆತ್ತಗಾಗಿದ್ದರು. 'ಜೀವನ' ಪತ್ರಿಕೆಗೆ ಲೇಖನಗಳ ಕೊರತೆ ಪ್ರಾರಂಭವಾಯಿತು. ನಿಯತಕಾಲಿಕವಾಗಿದ್ದ ಪತ್ರಿಕೆ ಅನಿಯತಕಾಲಿಕವಾಯಿತು. ಟಿ. ಎಲ್. ಶ್ರೀನಿವಾಸಾಚಾರ್ಯರ ಪಟ್ಟು ಬಿಡದ ಹಠದಿಂದ ಪತ್ರಿಕೆ ಕುಂಟುತ್ತಾ ಮುನ್ನಡೆಯಿತು. ಸಿದ್ಧವನಹಳ್ಳಿ ಕೃಷ್ಣಶರ್ಮರು ನಿಧನರಾದರು. ಅಲ್ಲಿಗೆ ಪತ್ರಿಕೆಯ ಮೂರನೆಯ ಹಂತ ಮುಕ್ತಾಯವಾಯಿತು.

ಅನಂತರ ವೈಯಕ್ತಿಕ ಕಾರಣಗಳಿಂದಾಗಿ ಜಿ. ಪಿ. ರಾಜರತ್ನಂ, ಎಲ್. ಎಸ್. ಶೇಷಗಿರಿರಾವ್, ರಾಮಾರಾಧ್ಯರು ಪತ್ರಿಕೆಗೆ ಸಂಪಾದಕರಾಗಲು ಒಪ್ಪಲಿಲ್ಲ. ಕೊನೆಗೆ ಹಂ. ಪ. ನಾಗರಾಜಯ್ಯನವರು ಸಂಪಾದಕರಾದರು. ಹಣಕಾಸು ವಿಚಾರದಲ್ಲಿ ಬಿಗಿಮುಷ್ಠಿಯ ಟಿ. ಎಲ್.

ಶ್ರೀನಿವಾಸಾಚಾರ್ಯರು ಮೈಸೂರಿಗೆ ಹೋಗಲೇಬೇಕಾಗಿ ಬಂತು. ಮೊದಲೇ ಕಳಗಿಳಿಯುತ್ತಿದ್ದ ಪತ್ರಿಕೆಯ ಗುಣಮಟ್ಟ ಇನ್ನೂ ಕೆಳಗಿಳಿಯಿತು. ಮಲ್ಲೇಶ್ವರದ ಶಾಮಣ್ಣನವರ ನ್ಯೂ ಬೆಂಗಳೂರು ಪ್ರಿಂಟರ್ಸ್‌ನಲ್ಲಿ ಮುದ್ರಣಗೊಳ್ಳುತ್ತಿದ್ದ 'ಜೀವನ' ಪತ್ರಿಕೆ ಕೇಳುವವರಿಲ್ಲದೆ ನಿಂತಿತು.

ಮಾಸ್ತಿಯವರು ಈ ವಿಷಯದಲ್ಲಿ ತಪ್ಪು ಮಾಡಿದರು. ರಾ. ಶಿ. ಯವರು 'ಕೊರವಂಜಿ'ಗೆ ೨೫ ವರ್ಷ ತುಂಬಿದ ಮೇಲೆ ಕಾಡಿಗೆ ಕಳುಹಿಸಿಕೊಟ್ಟರು. ಅನೇಕರು ನಡೆಸುತ್ತೇವೆಂದು ಮುಂದೆ ಬಂದರೂ ನಿರಾಕರಿಸಿದರು. 'ಕೊರವಂಜಿ'ಯ ಘನತೆ ಉಳಿಯಿತು.

"ನಾಡು ನುಡಿಯ ಸೇವೆಯನ್ನು ಸಂತತವಾಗಿ ನಡೆಸುತ್ತಾ 'ಜೀವನ' ಸಾವಿರ ಕಾಲ ನಡೆಯಲಿ. ನಮ್ಮ ಜನ ಇದನ್ನು ಹೆಮ್ಮೆಯಿಂದ ತಮ್ಮದೆಂದು ನೋಡಿಕೊಳ್ಳುವಂತೆ ದೈವ ಅನುಗ್ರಹಿಸಲಿ" [೫] ಎಂದು ಮಾಸ್ತಿಯವರು ಹೇಳಿದ್ದರು. ಆದರೆ ದೈವ ಅನುಗ್ರಹಿಸಲಿಲ್ಲ.

ಮಾಸ್ತಿಯವರು 'ಜೀವನ' ನಡೆಸುತ್ತಿದ್ದ ಕಾಲದ ಸಂಪಾದಕೀಯಗಳು ಕೆಲವು ಓದುಗರಿಗೆ ಪ್ರಿಯವಾಗಿದ್ದವು. ಒಮ್ಮೆ ಪತ್ರಿಕೆಯಲ್ಲಿ ಅದು ಕಾಣಿಸಿಕೊಳ್ಳದೆ ಇದ್ದಾಗ ವಾಚಕರೊಬ್ಬರು "ಪತ್ರಿಕೆ ತಿಲಕವನ್ನು ಇಟ್ಟುಕೊಳ್ಳಲು ಮರೆತ ಸ್ತ್ರೀಯ ಮುಖದಂತೆ ಇತ್ತು" [೬] ಎಂದು ಬರೆದಿದ್ದರು. ಸಾಹಿತ್ಯದ ಬರಹಗಳಿಗೆ ಮೀಸಲಾಗಿದ್ದ ಪತ್ರಿಕೆಯಲ್ಲಿ ಸಾರ್ವಜನಿಕ ವಿಚಾರಗಳನ್ನು ಕುರಿತು ವಿಚಾರ ವಿಮರ್ಶೆ ಮಾಡುವುದು ಎಷ್ಟರ ಮಟ್ಟಿಗೆ ಉಚಿತ ಎಂಬ ಪ್ರಶ್ನೆಗೆ ಮಾಸ್ತಿಯವರು ಹೀಗೆ ತಿಳಿಸಿದ್ದಾರೆ: "ಈ ಟಿಪ್ಪಣಿಗಳು ಈ ಪರಿಮಾಣದಲ್ಲಿ ರಾಜಕೀಯವನ್ನು ಹರಿಯದೆ ಇದ್ದರೆ ಚೆನ್ನಾಗಿತ್ತು ಎಂದು (ವಾಚಕರು) ಸೂಚಿಸಿದ್ದಾರೆ. ಸಾಹಿತ್ಯ ಜೀವನವನ್ನೆಲ್ಲ ಒಳಗೊಳ್ಳುವ ತತ್ತ್ವ. ಅದು ರಾಜಕೀಯವನ್ನು ಬಿಟ್ಟು ಸೇವೆ ನಡೆಸಿಯೇನು ಎಂದು ಹೇಳುವಂತಿಲ್ಲ". [೭]

ಮಾಸ್ತಿಯವರು ತಮ್ಮ ಸಂಪಾದಕೀಯ ಟಿಪ್ಪಣಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿದ್ದಾರೆ:

೧) **ಲೋಕ ಜೀವನ**

೨) **ರಾಷ್ಟ್ರ ಜೀವನ**

೩) **ಕರ್ನಾಟಕ ಜೀವನ**

ಅನೇಕ ಸಂಗತಿಗಳನ್ನು ಕುರಿತು ಅವರ ಚಿಂತನೆಗಳಿಗೆ ರೂಪುಕೊಟ್ಟಿದ್ದಾರೆ. ಕರ್ನಾಟಕದ ಅತ್ಯುಚ್ಚ ಸಂಸ್ಕೃತಿಯ ದೃಷ್ಟಿಯೇನು ಎಂಬುದನ್ನು ತಮ್ಮ ದೃಷ್ಟಿಕೋನದಿಂದ ತಿಳಿಸಲು ಪ್ರಯತ್ನಿಸಿದ್ದಾರೆ. ಲಿಬರಲ್ ಮನೋಭಾವದ ಭಾರತೀಯನೊಬ್ಬನ ಮನಸ್ಸು ಹೇಗೆ ಹರಿಯುತ್ತಿತ್ತು ಎಂಬುದನ್ನು ಈ ಟಿಪ್ಪಣಿಗಳು ಸೂಚಿಸುತ್ತವೆ. ಮಾಸ್ತಿಯವರ ಬದುಕು–ಬರಹಗಳನ್ನು ಸರಿಯಾಗಿ ಗ್ರಹಿಸಲು ಈ ಟಿಪ್ಪಣಿಗಳ ತಿಳುವಳಿಕೆ ಅಗತ್ಯ.

ಮಾಸ್ತಿಯವರ ವ್ಯಕ್ತಿತ್ವದ ಒಂದು ಪ್ರಮುಖ ಗುಣವೆಂದರೆ ನಿಷ್ಪಕ್ಷಪಾತ ದೃಷ್ಟಿ. ಇದನ್ನು ಸಮಾಜವಾದಿ ಲೇಖಕ ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳಬೇಕಾಗುತ್ತದೆ. ಮಾಸ್ತಿಗೆ ಇದು ಸಹಜ ಸ್ಥಿತಿ. ಇದೇ ಅವರ ಸೃಜನಶೀಲ ಬರಹಗಳ ಯಶಸ್ಸಿನ ಗುಟ್ಟು ಶಾಶ್ವತೀಯತೆ

ಮತ್ತು ಪ್ರಾಂತೀಯತೆ ನಡುವೆ, ಅಲ್ಪಸಂಖ್ಯಾತರು ಮತ್ತು ವರ್ಣವ್ಯವಸ್ಥೆಯ ನಡುವೆ, ಪಾಶ್ಚಾತ್ಯ ಸಂಸ್ಕೃತಿ ಮತ್ತು ವೈದಿಕ ಸಂಸ್ಕೃತಿಗಳ ನಡುವೆ ತನ್ನ ವರ್ಗದ ಆಶೋತ್ತರಗಳು ಮತ್ತು ಶೋಷಿತ ವರ್ಗಗಳ ಆಶೋತ್ತರಗಳ ನಡುವೆ ಮೂಡಿ ಬರುವ ದ್ವಂದ್ವಗಳನ್ನು, ಸಂಕೀರ್ಣತೆಯನ್ನು ಭಾರತೀಯ ಬುದ್ಧಿಜೀವಿ ಗ್ರಹಿಸುವುದು ಕಷ್ಟದ ಕೆಲಸ. ಈ ತಾಕಲಾಟ ಮಾಸ್ತಿಯವರ ಸಂಪಾದಕೀಯಗಳಲ್ಲಿ ಕಂಡು ಬರುವುದಿಲ್ಲ. ಎಲ್ಲವನ್ನೂ ನಾಜೂಕಾಗಿ, ತರ್ಕವ್ಯಾಪ್ತಿಗೆ ಒಗ್ಗಿಸಿಕೊಳ್ಳುವ ಮನೋಭಾವ ಕಂಡು ಬರುತ್ತದೆ.

ಮಾಸ್ತಿಯಂತಹ ಬರಹಗಾರರು ಎಂದೂ ಸಮಾಜದಲ್ಲಿನ ವಕ್ರತೆಯ ಬುನಾದಿಯನ್ನು ಅಲ್ಲಾಡಿಸಲು ಪ್ರಯತ್ನಿಸಿದವರಲ್ಲ. ಯಥಾಸ್ಥಿತಿಯ ಹಂತದಲ್ಲಿ ಸಮಾಜದ ಓರೆಕೋರೆಗಳ ಮೇಲು ಪದರವನ್ನು ಸರಿಪಡಿಸಲು ಪ್ರಾಮಾಣಿಕರಾಗಿ ಶ್ರಮಿಸಿದರು.

ಮಾಸ್ತಿಯವರದು ಮೈಸೂರು ಸಂಸ್ಥಾನದ ಉನ್ನತ ಅಧಿಕಾರಿಯಾಗಿ, ವಸಾಹತುಶಾಹಿ ವಿದ್ಯಾಭ್ಯಾಸದ ಫಲವಾಗಿ, ಸಂಪ್ರದಾಯ ರೂಢಿಯಿಂದ ಬಂದ ಬ್ರಾಹ್ಮಣಿಕೆಯಿಂದ ರೂಪುಗೊಂಡ ವ್ಯಕ್ತಿತ್ವ. ಇವರು ತಮ್ಮ ಸಂಪಾದಕೀಯ ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಒಂದೆರಡು ಅಂಶಗಳ ಕಡೆಗೆ ನಿಮ್ಮ ಗಮನ ಸೆಳೆಯಲು ಪ್ರಯತ್ನಿಸುತ್ತೇನೆ.

ಮಾಸ್ತಿಯವರು ಪ್ರಕಟಿಸುವ ಸಂಪಾದಕೀಯದ ಐದು ಸಂಪುಟಗಳಲ್ಲಿ, ಅತೀ ಹೆಚ್ಚಿನ ಟಿಪ್ಪಣಿಗಳನ್ನು ಬರೆದಿರುವುದು ಪಾಕಿಸ್ತಾನವನ್ನು ಕುರಿತು. ಆ ಟಿಪ್ಪಣಿಗಳನ್ನೆಲ್ಲಾ ಒಂದು ಕಡೆ ತಂದರೆ ಒಂದು ಸಂಪುಟವೇ ಆಗಿ ಬಿಡುತ್ತದೆ. ಸಮಾಜದಲ್ಲಿ ಉಂಟಾಗುತ್ತಿರುವ ಅಗತ್ಯ ಬದಲಾವಣೆಗಳಿಗೆ ಹೊಸ ದೃಷ್ಟಿ ಕೋನವನ್ನು ರೂಪಿಸಿಕೊಳ್ಳುವುದರ ಬದಲು, ತಮ್ಮ ಜೀವನದೃಷ್ಟಿಯ ಮಾದರಿಯ ನೆಲೆಯಿಂದ ಲೋಕವನ್ನು ಕಾಣುವುದು ಮಾಸ್ತಿಯವರಿಗೆ ಮುಖ್ಯವಾಗಿ ಬಿಡುತ್ತದೆ. ಅನೇಕ ಸಂದರ್ಭಗಳಲ್ಲಿ ಬದಲಾವಣೆ ವಿಕೃತಿಯಾಗಿ ಕಂಡು ಬರುತ್ತದೆ. ಮಾಸ್ತಿಯವರ ಸಂಪಾದಕೀಯ ಟಿಪ್ಪಣಿಗಳ ಕೆಲವು ಭಾಗಗಳನ್ನು ಗಮನಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ:

> "ಮದರಾಸಿನ ಜಸ್ಟಿಸ್ ಪಕ್ಷ ಆಂಗ್ಲರ ಉಪದೇಶ ಕೇಳಿ ಬ್ರಾಹ್ಮಣರ ಮೇಲೆ ದ್ವೇಷಮಾಡಿ ಹಿಂದೂಧರ್ಮ ನಾಶಕ್ಕೆ ನಾಂದಿ ಹೇಳಿ ಈಗ ಹತ್ತಿರ ಹತ್ತಿರ ಐವತ್ತು ವರ್ಷ ಆಗಿದೆ. ವಿಷವೃಕ್ಷವನ್ನು ನೆಟ್ಟ ಜಸ್ಟಿಸ್ ಪಕ್ಷ ಈಗ ಇಲ್ಲ. ಆದರೆ ಈ ವೃಕ್ಷ ಬಿಟ್ಟ ಫಲ ದ್ರಾವಿಡ ಕಳಗಂ, ದ್ರಾವಿಡ ಮುನ್ನೇತ್ರ ಕಳಗಂ, ರಾಮಸ್ವಾಮಿ ನಾಯಕರು, ಇವರಂಥ ಇತರ ಜನ........"[೬]

> "ನಮ್ಮ ಧರ್ಮದ ವರ್ಣವ್ಯವಸ್ಥೆ ನಮ್ಮ ಸಂಸ್ಕೃತಿಯನ್ನು ಉಳಿಸುವ ಒಂದು ಮುಖ್ಯ ಸಾಧನವಾಯಿತು ಎಂದು ನಮಗೆ ಕಾಣುತ್ತದೆ. ಇದು ಹಿಂದೂ ಧರ್ಮದಲ್ಲಿ ಒಂದು ದೋಷ ಎಂದು ಹೇಳಲಾರೆವು. ವರ್ಣವ್ಯವಸ್ಥೆಯು ದೋಷ ಎಂಬ ನಿರ್ಣಯಕ್ಕೂ ನಾವು ಬರಲಾರೆವು"[೭]

> "ಭರತವರ್ಷದ ಮುಸ್ಲಿಮರು ಇನ್ನೂ ತಮ್ಮ ಹಿಂದಿನ ಮನೋಧರ್ಮದಿಂದಲೇ ಪೀಡೆಪಡುತ್ತಿದ್ದಾರೆ. ಅವರು ಭರತವರ್ಷತ ಇತರ ಮಕ್ಕಳೊಂದಿಗೆ ಬೆರೆತು ಬಾಳಲಾರರು.

ಹಿಂದೆ ಈ ಮನೋಧರ್ಮ ವಿಷವೃಕ್ಷವಾಗಿ ಬೆಳೆಯಿತು, ಪಾಕಿಸ್ತಾನವನ್ನು ಮಾಡಿತು. ಈಗಿನ ಮನೋಧರ್ಮ ತಕ್ಕಷ್ಟು ಕಾಲ ಬೆಳೆದರೆ ಮರಳಿ ಒಂದು ಪಾಕಿಸ್ತಾನ ರೂಪುಗೊಂಡೀತು'' ೧೦

"ಬ್ರಾಹ್ಮಣ ಜಾತಿಯನ್ನು ಮೊದಲ ವರ್ಣ ಎಂದದ್ದು ಬ್ರಾಹ್ಮಣ ದುರಹಂಕಾರಿಯಾಗಲಿ ಎಂಬ ಅಪೇಕ್ಷೆಯಿಂದ ಅಲ್ಲ. ಯಾವುದೋ ಒಂದು ದೊಡ್ಡ ಗುರಿಯನ್ನು ಸಾಧಿಸುವುದಕ್ಕಾಗಿ. ಸಮಾಜದ ವರ್ಣವ್ಯವಸ್ಥೆಯನ್ನು ಆ ಉದ್ದೇಶಗಳ ಸಾಧನೆಗೆ ಸಹಾಯ ವಾಗುವಂತೆ ತಿದ್ದುವುದು ಪ್ರಾಜ್ಞ ಹಿಂದೂ ಮಹನೀಯರ ಇಂದಿನ ಕರ್ತವ್ಯ. ಜಾತಿಯೆನ್ನುವುದು ನಮ್ಮಲ್ಲಿ ಏರ್ಪಟ್ಟದ್ದು ಬೇರೆ ಬೇರೆ ರೀತಿಯ ಅನ್ನ, ವಸನ, ಆಚಾರದ ಜನ ಪರಸ್ಪರ ಸಹನೆಯಿಂದ ಮೈತ್ರಿಯಿಂದ ಬಾಳುವುದು ಸಾಧ್ಯವಾಗಲಿ ಎಂಬ ದೃಷ್ಟಿಯಿಂದ. ಬಹುರೀತಿಯ ಜನ ತಮ್ಮ ತಮ್ಮ ರೀತಿಯಲ್ಲಿ ಬಾಳುತ್ತ ಹಿಂದೂ ಧರ್ಮದ ಮಕ್ಕಳಾಗಿ ಬಾಳಬೇಕು. ಇದು ಇಂದಿನ ಗುರಿ'' ೧೧

"ಗೋವು ಕೊಡುವ ಹಾಲು ತಾಯ ಹಾಲಿಗೆ ಪ್ರತಿನಿಧಿಯಾಗಿ ರಾಷ್ಟ್ರದ ಮಕ್ಕಳನ್ನು ಸಾಕುತ್ತದೆ. ಆದರಿಂದಲೇ ನಾವು ಗೋಮಾತೆ ಎನ್ನುವುದು. ನಾವೆಲ್ಲ ಹಸುವಿನ ಹಾಲನ್ನು ಕುಡಿದು ಜೀವಿಸಿದ್ದೇವೆ. ಗೋವು ನಮ್ಮನ್ನು ಸಾಕುತ್ತಿರುವ ತಾಯಿ. ನಾವು ಅದರ ಜೀವ ತೆಗೆಯಬಾರದು. ಇದು ಹಿಂದೂ, ಮುಸಲ್ಮಾನ, ಕ್ರಿಸ್ತ ಎಂಬ ಭೇಧವಿಲ್ಲದೆ ರಾಷ್ಟ್ರದ ಇಡೀ ಜನತೆ (ಗೋಹತ್ಯ ನಿಷೇಧ) ಒಪ್ಪಬಹುದಾದ ಮಾತು''೧೨

"ಮೌಲಾನಾ ಅಬುಲ್ ಕಲಾಂ ಅಜಾದ್ ಮಹಾಶಯರು ಮುಸ್ಲಿಮರಾದ್ದರಿಂದ ಅರಬ್ಬಿ ಭಾಷೆಗೆ, ಮುಸ್ಲಿಂ ಕವಿಗೆ, ಈ ಮೊದಲು (೫,೦೦೦ ರೂಪಾಯಿಗಳ ಕೇಂದ್ರ ಸರ್ಕಾರದ ನೆರವು) ಸಹಾಯ ದೊರೆತಂತೆ ಈಗ ಉರ್ದು ಭಾಷೆಗೆ ವಿಶೇಷ ಗಮನ ದೊರೆಯಿತೆಂದು ಯಾರಿಗೆ ಬೇಕಾದರೂ ಕಾಣಬಹುದು. ಅಂಥವರು ಹಾಗೆಂದು ಆಕ್ಷೇಪಿಸಿದರೆ ಮೌಲಾನಾ ಮಹಾಶಯರು ದೂರನ್ನು ಒಪ್ಪಿ ತಲೆ ಬಾಗಬೇಕಾಗುತ್ತದೆ''೧೩

ಕರ್ನಾಟಕದ ಏಕೀಕರಣ ಮಾಸ್ತಿಯವರ ಜೀವನದ ಒಂದು ಮಿಷನ್. ಅದರ ಮೇಲೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಅದಕ್ಕೆ ಸಮ್ಮತಿಯನ್ನು ಸೂಚಿಸದ ರಾಜಾಜಿ, ಡಿ.ವಿ.ಜಿ. ವೀರಣ್ಣಗೌಡರುಗಳನ್ನು ಮಾಸ್ತಿಯವರು ತರಾಟೆಗೆ ತಗೆದುಕೊಂಡರು. ಅಷ್ಟೇಕೆ ತಾವು ತುಂಬು ಗೌರವ ಮತ್ತು ಭಕ್ತಿಯಿಂದ ಕಾಣುತ್ತಿದ್ದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರನ್ನು ಕುರಿತು ಅಕ್ಟೋಬರ್ ೧೯೫೬ರ ಸಂಪಾದಕೀಯದಲ್ಲಿ ಹೀಗೆ ಹೇಳಿದ್ದಾರೆ:

"ತಮ್ಮ ತೊಂಬತ್ತೈದನೆಯ ವರ್ಧಂತಿ ಉತ್ಸವದ ಸಂದರ್ಭದಲ್ಲಿ ಮಾತನಾಡುತ್ತ ಭಾರತರತ್ನ ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು, ಈಗಲಾದರೂ ಸರಿಯೆ ಮೈಸೂರನ್ನು ಬೇರೆ ಪ್ರಾಂತವಾಗಿ ಉಳಿಸುವುದಾದರೆ ಒಳ್ಳೆಯದು. ಈ ಸಂಸ್ಥಾನ ಇದುವರೆಗೆ ತನ್ನದೇ ರೀತಿಯಲ್ಲಿ ಬಾಳಿದೆ. ಮುಂದೂ ಹಾಗೆಯೇ ಬಾಳುವುದಾಗುತ್ತದೆ ಎಂದರಂತೆ. ತಮ್ಮ ಜೀವನದ ಒಂದು ಮಂಗಲದ ವೇಳೆಯಲ್ಲಿ ಭಾರತರತ್ನರು ಈ ಅಮಂಗಲದ ಮಾತನ್ನಾಡಿ ಜನರ ಮನಸ್ಸನ್ನು ಕಲಕಬಾರದಿತ್ತು ಎಂದು ನಮಗೆ ತೋರುತ್ತದೆ. ಹಳಸಿದ ಮಾತನ್ನು ಮರಳಿ ಕಾಯಿಸಿದರೆ ಅದು ಮತ್ತಷ್ಟು ಹಳಸೀತು. ಹೊಸತಾಗುವುದಿಲ್ಲ. ಆದರೆ ಈ ಮಾತಿನಿಂದ ಈ ಹಿರಿಯರು ಯಾವ ಶುಭವನ್ನು ಸಾಧಿಸಬಯಸಿದರೆನ್ನೋಣ?'' ೧೪

ಹೀಗೆ ಕನ್ನಡ, ಕನ್ನಡನಾಡಿನ ವಿಷಯ ಬಂದಾಗಲೆಲ್ಲ ನಿರ್ದಾಕ್ಷಿಣ್ಯವಾದ ಕನ್ನಡ ಪರ ನಿಲುವನ್ನು ತಳೆಯುತ್ತಿದ್ದರು. ಅವರು ಈ ವಿಷಯದಲ್ಲಿ ಒಪ್ಪಂದಕ್ಕೆ ಸಿದ್ಧವಿರಲಿಲ್ಲ. ಜೊತೆಗೆ ಪೂರ್ವಾರ್ಜಿತ ಸಂಸ್ಕೃತಿಯಲ್ಲಿ ಹೆಮ್ಮೆ. ಸನಾತನ ಧರ್ಮವನ್ನು ಹಿಯಾಳಿಸಿ ಮಾತನಾಡಿದರೆ ಅವರು ಸಹಿಸುತ್ತಿರಲಿಲ್ಲ. 'ಸೆಕ್ಯುಲರಿಸಂ' ಎಂಬ 'ಸೋಗಿ'ನಲ್ಲಿ ನಡೆಯುತ್ತಿರುವ ವ್ಯವಹಾರ ಅವರಿಗೆ ಹಿಡಿಸಲೇ ಇಲ್ಲ.

ಅವರ ಸಂಪಾದಕೀಯದ ಪುಟ ಪುಟಗಳಲ್ಲಿ ನಮ್ಮ ಕನ್ನಡ—ಕರ್ನಾಟಕ: ನಮ್ಮ ಧರ್ಮ—ದೇಶ; ನಮ್ಮ ಪ್ರಜಾಪ್ರಭುತ್ವ ಹಿಡಿಯುತ್ತಿರುವ ದಾರಿ ಮಾಸ್ತಿಯವರಿಗೆ ಆತಂಕವನ್ನುಂಟು ಮಾಡಿದೆ. ಈ ಅಪಾಯಕರವಾದ ದಾರಿ, ದೇಶದ ಸಾಧನೆಯನ್ನು ನುಂಗಿಬಿಡುತ್ತದೆಯಲ್ಲ ಎಂಬ ಹೆದರಿಕೆ ಮಾಸ್ತಿಯವರಿಗೆ. ಭರತವರ್ಷ ಬೇರೆ ಯಾವ ದೇಶದ, ಮತದ ಅಭಿಪ್ರಾಯದ ಅನುಕರಣೆಯನ್ನು ಮಾಡದೆ ತನ್ನತನವನ್ನು ಉಳಿಸಿಕೊಂಡು ಹೋಗಬೇಕೆಂಬ ಅಭಿಪ್ರಾಯ ಅವರ ಬರವಣಿಗೆಯಲ್ಲಿ ಕಂಡು ಬರುತ್ತದೆ. ಆದರೆ ಸಂಪಾದಕೀಯಗಳಲ್ಲಿ ಸೂಕ್ಷ್ಮ ಒಳನೋಟಗಳಾಗಲಿ, ಸಾಹಿತ್ಯದ ಅನುರಾಗ ಸೊಗಡಾಗಲಿ ಕಂಡು ಬರುವುದಿಲ್ಲ. ಬಹುಪಾಲು ಟಿಪ್ಪಣಿಗಳು ಉಪದೇಶದ ಧಾಟಿಯನ್ನು ಹಿಡಿಯುತ್ತವೆ.

ಮಾಸ್ತಿಯವರು ೧೯೫೧ ರಿಂದ ೧೯೬೬ರ ವರೆಗಿನ ಬರೆದ ಸಂಪಾದಕೀಯ ಟಿಪ್ಪಣಿಗಳನ್ನು ಅವರು **ಮಾಸ್ತಿಯವರ ಪುಸ್ತಕಗಳು** ಗ್ರಂಥಮಾಲೆಯಲ್ಲಿ ಐದು ಸಂಪುಟ ಗಳಲ್ಲಿ ಪ್ರಕಟಿಸಿದ್ದಾರೆ. ಈ ಐದು ಸಂಪುಟಗಳೇ ೨೪೫೦ ಪುಟಗಳಷ್ಟಾಗುತ್ತದೆ. ಈ ಸಂಪುಟಗಳಲ್ಲಿ ಪ್ರಕಟವಾಗದ ಸಂಪಾದಕೀಯ ಟಿಪ್ಪಣಿಗಳು ಒಂದು ಸಾವಿರ ಪುಟಗಳಷ್ಟಾದರೂ ಆಗುತ್ತದೆ. ಹೀಗೆ ಸುಮಾರು ೩೫೦೦ ಪುಟಗಳ ಟಿಪ್ಪಣಿಗಳಲ್ಲಿ ಮಾಸ್ತಿಯವರ ಸಮಕಾಲೀನ ಜೀವನದ ದಾಖಲೆ ಇದೆ. ಸಂಪಾದಕೀಯಗಳನ್ನು ಸಂಪುಟಗಳ ರೂಪದಲ್ಲಿ ಕನ್ನಡದಲ್ಲಿ ಮೊದಲು ಪ್ರಕಟಿಸಿದ ಕೀರ್ತಿ ಮಾಸ್ತಿಯವರಿಗೆ ಸಲ್ಲುತ್ತದೆ.

ಮಾಸ್ತಿಯವರು ತಮ್ಮ ಸ್ವಂತ ವಿಷಯವಾಗಿ ಒಂದು ಮಾತನ್ನು ಸಂಪಾದಕೀಯದಲ್ಲಿ ಬರೆದುಕೊಂಡಿಲ್ಲ. ಒಂದು ಕಡೆ ಮಾಸ್ತಿಯವರು "ಚೆನ್ನ ಬಸವನಾಯಕ ಕಾದಂಬರಿಯನ್ನು ರಾಷ್ಟ್ರದ ಇತರ ಭಾಷೆಗಳಿಗೆ ಭಾಷಾಂತರ ಮಾಡಲು ಆರಿಸಿದ ವೇಳೆ ಅದರ ವಿರೋಧವಾಗಿ ನಮ್ಮ ಸೋದರ ಕನ್ನಡಿಗರು ಕೆಲವರು ಗೊಂದಲ ಎಬ್ಬಿಸಿದರು. ಅನೇಕ ಮಿತ್ರರು ಕಾದಂಬರಿಯನ್ನು ಸಮರ್ಥಿಸಿ 'ಜೀವನ' ದಲ್ಲಿ ಲೇಖನ ಬರಲಿ ಎಂದು ಬಯಸಿದರು. ನಾನೇ ಬರೆಯಬಹುದು. ಬೇಕೆಂದರೆ ತಾವು ಬರೆಯಲು ಸಿದ್ಧ. ಸಾಹಿತ್ಯಕ್ಷೇತ್ರದಲ್ಲಿ ಇಂಥ ಗೊಂದಲದ ಅನೌಚಿತ್ಯ ಎಷ್ಟು ಎಂದು ಹೇಳುವಂತಿಲ್ಲ. ಕೇವಲ ಸಾಹಿತ್ಯದೃಷ್ಟಿಯಿಂದ ಇದರ ಮಾತನ್ನು ಚರ್ಚಿಸಬಹುದಾಗಿತ್ತು. ಆದರೆ ನಾನು ಎಷ್ಟೇ ನಿರ್ಲೇಪದಿಂದ ಬರೆದರೂ ಇತರರಿಗೆ ಈ ನಿರ್ಲೇಪ ಅಷ್ಟು ಸ್ಪಷ್ಟವಾಗದೆ ಹೋಗಬಹುದು. ಮಿತ್ರರು ನನ್ನನ್ನು ಕುರಿತು ಆಡಿದ ಒಳ್ಳೇ ಮಾತಿಗೆಲ್ಲಾ ನಾನು ಒಪ್ಪಿದಂತಾದೀತು. ಸ್ವಾರ್ಥದ ಭಾಸ ಆಗುವ ಇಂಥ ವರ್ತನೆ ಪತ್ರಿಕೆಗೆ ತಕ್ಕದ್ದಲ್ಲ ಎಂದು ನನ್ನ ಭಾವನೆ. ಹೀಗಾಗಿ ನನ್ನ ಪುಸ್ತಕಗಳನ್ನು ಸಮರ್ಥಿಸಿದ ಯಾವ ಒಂದು ಮಾತಿಗೂ ಪತ್ರಿಕೆಯಲ್ಲಿ ಸ್ಥಳ ಕೊಡಲಿಲ್ಲ" ಎಂದಿದ್ದಾರೆ.

ಮಾಸ್ತಿಯವರ ಸಂಪಾದಕತ್ವದ ಇಪ್ಪತ್ತೊಂದು ವರ್ಷಗಳ 'ಜೀವನ' ಪತ್ರಿಕೆಯ ಇತಿಹಾಸದಲ್ಲಿ ಆಗೊಂದು ಈಗೊಂದು ಉತ್ತಮ ಸಾಹಿತ್ಯಕ ಲೇಖನಗಳು, ಕವನಗಳು ಪ್ರಕಟವಾಗುತ್ತಿದ್ದವು. ಮಾಸಪತ್ರಿಕೆಯೊಂದರಲ್ಲಿ ಓದುಗರನ್ನು ಕಲಕದ ನೀರಸ ಧಾರವಾಹಿಗಳು ಕಾಣಿಸಿಕೊಳ್ಳುತ್ತಿದ್ದವು. ಸಾಹಿತ್ಯ ವಾಗ್ವಾದಗಳಿಗೆ 'ಜೀವನ ' ಪತ್ರಿಕೆ ಸ್ಪಂದಿಸಲಿಲ್ಲ. ತನ್ನ ಕಾಲದ ಸಾಹಿತ್ಯ ಚಳುವಳಿಗಳ ಸೃಜನಶೀಲ ಬರಹಗಳ ಬಗ್ಗೆ ಆರೋಗ್ಯಕರ ಸಾಹಿತ್ಯ ಸಂವಾದಗಳ ಬಗ್ಗೆ 'ಜೀವನ' ಪತ್ರಿಕೆ ಮುಕ್ತ ಮನಸ್ಸಿನಿಂದ ತೆರೆದುಕೊಳ್ಳಲಿಲ್ಲ. ಮಾಸ್ತಿಯವರ ಜಾಣತನದ ಈ ಅಲಿಪ್ತತೆಯೇ ಒಂದು ಸೋಜಿಗದ ಸಂಗತಿ.

"ಮುಸಲ್ಮಾನರಲ್ಲಿ 'ಮೋಜಿನ್' ಎಂಬೊಬ್ಬ ಮನುಷ್ಯ ಇರುತ್ತಾನೆ. ಬೆಳಗಾದಾಗ ಜನರನ್ನು ಪ್ರಾರ್ಥನೆಗೆ ಕೂಗಿ ಎಬ್ಬಿಸುವುದು ಅವನ ಕೆಲಸ. 'ನಾನು ಕೂಗಿದಾಗ ಹೆಚ್ಚು ಜನ ಕೇಳಲಿಲ್ಲ' ಎನ್ನುವ ಮಾತನ್ನು ಅವನು ಆಡುವಂತಿಲ್ಲ. ಇಂತಹವರು ಮಲಗಿದ್ದಾಗ ಕೂಗಿ ಎಬ್ಬಿಸುವ ಕೆಲಸ ಅವನದು. ಕನ್ನಡನಾಡಿನಲ್ಲಿ ನಾನು ಮಾಡಿದುದು ಈ 'ಮೋಜಿನ್' ಕೆಲಸ''[೬] ಎಂದು ಅವರೇ ಹೇಳಿಕೊಂಡಿದ್ದಾರೆ. ಜೀವನ ಕಾರ್ಯಾಲಯದ ಕೆಲಸ ಈ ರೀತಿಯದು.

"ಸಂದ ಜೀವನದೊಂದು ರೀತಿಯಂತೆ
ಸರಳ ಸದಭಿರುಚಿಯ ಖ್ಯಾತಿಯಂತೆ''[೭]

ಅಡಿ ಟಿಪ್ಪಣಿಗಳು :

೧. 'ಮಾಸ್ತಿ' ಕವನ – ಕೆ.ಎಸ್. ನಿಸಾರ್‌ಅಹಮದ್–'ಶ್ರೀನಿವಾಸ'–ಪು ೬೫೬ (೧೯೭೨)

೨. 'ಜೀವನ' ಪತ್ರಿಕೆ 'ಉತ್ಸವ ಸಂಚಿಕೆ' ಮೇ ೧೯೬೫–ಪುಟ : ೧೯

೩. 'ಜೀವನ' ಪತ್ರಿಕೆ 'ಉತ್ಸವ ಸಂಚಿಕೆ' ಮೇ ೧೯೬೫ – 'ಜೀವನ ಪತ್ರಿಕೆಯ ಕಥೆ' – ಮಾಸ್ತಿ ವೆಂಕಟೇಶ ಅಯ್ಯಂಗಾರ್ – ಪುಟ : ೦೩

೪. 'ಜೀವನ' ಪತ್ರಿಕೆ 'ಉತ್ಸವ ಸಂಚಿಕೆ' ಮೇ ೧೯೬೫ – 'ಜೀವನ ಪತ್ರಿಕೆಯ ಕಥೆ' – ಮಾಸ್ತಿ ವೆಂಕಟೇಶ ಅಯ್ಯಂಗಾರ್ – ಪುಟ : ೧೪

೫. 'ಜೀವನ' ಪತ್ರಿಕೆ 'ಉತ್ಸವ ಸಂಚಿಕೆ' ಮೇ ೧೯೬೫ – 'ಜೀವನ ಪತ್ರಿಕೆಯ ಕಥೆ' – ಮಾಸ್ತಿ ವೆಂಕಟೇಶ ಅಯ್ಯಂಗಾರ್ – ಪುಟ : ೧೯

೬. 'ಜೀವನ' ಪತ್ರಿಕೆ 'ಉತ್ಸವ ಸಂಚಿಕೆ' ಮೇ ೧೯೬೫ – 'ಜೀವನ ಪತ್ರಿಕಯ ಕಥೆ' – ಮಾಸ್ತಿ ವೆಂಕಟೇಶ ಅಯ್ಯಂಗಾರ್ – ಪುಟ : ೧೩

೭. 'ಜೀವನ' ಪತ್ರಿಕೆ 'ಉತ್ಸವ ಸಂಚಿಕೆ' ಮೇ ೧೯೬೫ – 'ಜೀವನ ಪತ್ರಿಕೆಯ ಕಥೆ' – ಮಾಸ್ತಿ ವೆಂಕಟೇಶ ಅಯ್ಯಂಗಾರ್ – ಪುಟ : ೧೪

೮. 'ಮಾಸ್ತಿಯವರ ಪುಸ್ತಕಗಳು' ಸಂಪಾದಕೀಯ ೨–ಪುಟ ೪೯೫–೧೯೬೭

೯. 'ಮಾಸ್ತಿಯವರ ಪುಸ್ತಕಗಳು' ಸಂಪಾದಕೀಯ ೨–ಪುಟ ೪೯೬ ಮತ್ತು ೫೨೧ – ೧೯೬೭

೧೦. 'ಮಾಸ್ತಿಯವರ ಪುಸ್ತಕಗಳು' ಸಂಪಾದಕೀಯ ೧–ಪುಟ ೨೮೬ – (೧೯೬೭)

೧೧. 'ಮಾಸ್ತಿಯವರ ಪುಸ್ತಕಗಳು' ಸಂಪಾದಕೀಯ ೨–ಪುಟ ೫೨೨ – (೧೯೬೭)

೧೨. 'ಮಾಸ್ತಿಯವರ ಪುಸ್ತಕಗಳು' ಸಂಪಾದಕೀಯ ೫–ಪುಟ ೩೭೦–೩೭೧ – (೧೯೬೭)

೧೩. 'ಮಾಸ್ತಿಯವರ ಪುಸ್ತಕಗಳು' ಸಂಪಾದಕೀಯ ೧– ಪುಟ ೩೭೦–೩೭೧ – (೧೯೬೭)

೧೪. 'ಮಾಸ್ತಿಯವರ ಪುಸ್ತಕಗಳು' ಸಂಪಾದಕೀಯ ೨–ಪುಟ ೨೯೦–೨೯೧ – (೧೯೬೭)

೧೫. 'ಜೀವನ' ಪತ್ರಿಕೆ – 'ಉತ್ಸವ ಸಂಚಿಕೆ' ಮೇ ೧೯೬೫ ಪುಟ ೧೧–೧೨

೧೬. 'ಶ್ರೀನಿವಾಸ' ಸಂ: ತಿ. ತಾ. ಶರ್ಮ 'ಸಂಪಾದಕೀಯ' ಎಚ್ಚೆಸ್ಕೆ ಪು: ೪೩೭– (೧೯೭೨)

೧೭. 'ಮಾಸ್ತಿ' ಕವನ ಕೆ.ಎಸ್. ನಿಸಾರ್ ಅಹಮದ್ – 'ಶ್ರೀನಿವಾಸ'– ಪು : ೬೫೬ (೧೯೭೨)

''ಮನುಷ್ಯಭಾವ ತಿಳಿದಿರುವ ತಮಗೆ ಮನುಷ್ಯ ಸತ್ತರೆ ನೋವಾಗುತ್ತದೆ. ಮನುಷ್ಯನಂತೆ ಕಾಣುವ ಗೊಂಬೆಗಳು ಸತ್ತರೆ ನೋವಾಗುವದಿಲ್ಲ. ಮನುಷ್ಯಭಾವ ಇಲ್ಲದ ಇನ್ನೊಂದು ತೆರನ ಜೀವಕ್ಕೆ ಮನುಷ್ಯನ ಸಾವು ಹೀಗೆ ದುಃಖ ತರದೆ ಇರುವುದು ಸಾಧ್ಯ ಅಲ್ಲ? ನಾವು ಇಹದಲ್ಲಿದ್ದೇವೆ. ನಾವು ಬಲ್ಲದ್ದು ಇಹದ ಭಾವ. ಪರದ ಭಾವ ಇದೇ ಭಾವವೋ ಬೇರೆ ಭಾವವೋ? ಹೇಗೆ ಹೇಳುವುದು? ಲೋಕವನ್ನು ನಡೆಸುವ ಶಕ್ತಿ ಋನಿಲ್ಲವೆಂದರೂ ನಮ್ಮಲ್ಲಿ ಬಹುಜಾಣ, ಬಹುಶಕ್ತ, ಬಹುಕರುಣಿ ಎನ್ನುವ ಜನರಷ್ಟಾದರೂ ಜಾಣು, ಶಕ್ತ, ಕರುಣೆಯಾಗಿರಬೇಕು. ಪ್ರಾಯಶಃ ಅದಕ್ಕಿಂತ ಹತ್ತೋ, ನೂರೋ, ಸಾವಿರಪಾಲೋ ಶಕ್ತ, ಜಾಣ, ಕರುಣೆ ಆಗಿದ್ದೀತು. ಅದು ಲೋಕವನ್ನು ನಡೆಸುತ್ತದೆ. ಅದು ನಡೆಸುವ ಲೋಕದಲ್ಲಿ ನಾವು ಸೇರಿದ್ದೇವೆ. ಅದು ಎಷ್ಟು ಕಾಲ ನಾವು ಈ ಆಟ ದಿಟ ಎಂದೇ ಇದರಲ್ಲಿ ಬೆರೆಯಬೇಕು. ಆಟದ ಸರಿ ತಪ್ಪನ್ನು ಕುರಿತು ವಿಚಾರ ಮಾಡುವುದು, ತೀರ್ಪಿಗೆ ಬರುವುದು ಸರಿ ಆಗಲಾರದು. ಮನುಷ್ಯನ ಬುದ್ಧಿಗೆ ಒಂದು ಮಿತಿ ಇದೆ. ಈ ಮಿತಿಯಲ್ಲದೆ ಬೇರೆ ವಿಚಾರ, ಬೇರೆ ತೀರ್ಪು ಈ ಮಿತಿಯ ಬುದ್ಧಿಗೆ ನಿಲುಕುವದಿಲ್ಲ.''

– 'ಮಾಯಣ್ಣನ ಕನ್ನಡಿ' ಕಥೆಯಿಂದ

ಸಂಪಾದಕರ ಟಿಪ್ಪಣಿಗಳು

ಸಂಸ್ಕೃತಿ ನದಿಯಂತೆ ಹರಿಯುವಂತಹದು. ಜಡಗೊಳ್ಳದೇ ಹರಿಯುವದೇ ಅದರ ಜೀವಂತಿಕೆ. ಇಂಥ ಚಲನಶೀಲ ಸಂಸ್ಕೃತಿಯ ಇನ್ನೊಂದು ಮಹತ್ವದ ಲಕ್ಷಣನೆಂದರೆ ಸಾತತ್ಯ. ಈ ಸಾತತ್ಯ ಎಂತಹದೆಂದರೆ, ಸಂಸ್ಕೃತಿಯ ಹರಿವಿನಲ್ಲಿ ಕಂದಕಗಳಾಗಲೀ, ನೆಗೆತಗಳಾಗಲೀ ಇರುವುದಿಲ್ಲ. ಬಿಡಿ ಬಿಡಿಯಾದ, ಸಣ್ಣ ಸಣ್ಣ ಬದಲಾವಣೆಗಳನ್ನು ಒಳಗೊಳ್ಳುತ್ತ ಬದಲಾಗುತ್ತ ಹೋಗುವದು ಸಂಸ್ಕೃತಿಯ ಪರಿವರ್ತನೆಯ ಕ್ರಮವಾಗಿದೆ. ಇದು ಸಾಂಸ್ಕೃತಿಕ ವಿಕಾಸ. ಈ ಹಿನ್ನೆಲೆಯಲ್ಲಿ, ಸಂಸ್ಕೃತಿಯ ಅಧ್ಯಯನ, ಸಂಸ್ಕೃತಿಯನ್ನು ಕುರಿತ ಪ್ರತಿಕ್ರಿಯೆ ಆಯಾ ಕಾಲಘಟ್ಟಕ್ಕೆ ಸಂಬಂಧಪಟ್ಟಂತೆ ಸಂಸ್ಕೃತಿಯಲ್ಲಿನ ಒಳಿತು ಕೆಡುಕುಗಳನ್ನು – ಧನಾತ್ಮಕ ಋಣಾತ್ಮಕ ಮೌಲ್ಯಗಳನ್ನು ಗುರುತಿಸಿಕೊಳ್ಳುವದಾಗಿರುತ್ತದೆ. ಸಂಸ್ಕೃತಿಯ ಅಧ್ಯಯನದ ಕ್ರಿಯೆ ಹೀಗೆ ಧನಾತ್ಮಕ ಮೌಲ್ಯಗಳನ್ನು ಗುರುತಿಸುವದಲ್ಲದೇ ಅವುಗಳು ಪರಂಪರೆಯ ಸಾತತ್ಯದಲ್ಲಿ ಮುಂದುವರಿಯುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಇದು ಮಹತ್ವದ ಪ್ರಕ್ರಿಯೆ. ಯಾಕೆಂದರೆ ಸಂಸ್ಕೃತಿಯ ವಿಕಾಸ ಜೀವವಾಕಾಸದಂತೆಯೇ ನಿರುದ್ದಿಶ್ಯಕ್ಕೆ ಬದ್ಧವಾದುದಾಗಿದೆ. ಜೀವವಿಕಾಸದಲ್ಲಿ ನಿರುದ್ದಿಶ್ಯವಾಗಿ ಪಾಲ್ಗೊಳ್ಳುವ ಜೀವಸಂಕುಲದಂತೆಯೇ ಜನಾಂಗಗಳು ತಮ್ಮ ಸಂಸ್ಕೃತಿಯ ವಿಕಾಸದಲ್ಲಿ ನಿರ್ಲಿಪ್ತವಾಗಿ *(passive)* ತೊಡಗಿಕೊಂಡಿರುತ್ತವೆ. ಆದ್ದರಿಂದಲೇ ಜನಸಮುದಾಯಗಳು ತಮ್ಮ ಸಹಜಸ್ಥಿತಿಯಲ್ಲಿ *conservative* ಆಗಿ ತೋರುತ್ತವೆ. ವಿಕಾಸವು ನಿರ್ಲಿಪ್ತವಾದದ್ದಾಗಿ ಅದಕ್ಕೆ ಒಳಿತು ಕೆಡುಕಿನ ಹಂಗಿಲ್ಲ. ಆದರೆ ಮನಿಷ್ಯ ಜೀವನವು ನಿರ್ಮೋಹಿಯಾದದ್ದಲ್ಲ. ಅದು ಧನ–ಋಣಗಳ *co-ordinate*ಗಳನ್ನು ಹೊಂದಿರುವಂಥದು. ಸಂಸ್ಕೃತಿಯ ಅಧ್ಯಯನದಿಂದ ಸಂಸ್ಕಾರಗೊಂಡ ಪ್ರಜ್ಞೆ ಸಂಸ್ಕೃತಿಯ ವಿಕಾಸದಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಪಾಲ್ಗೊಳ್ಳುವದು ಅವಶ್ಯ. ಋಣದ ಇಳುಕಲಿಗೆ ಸರಾಗವಾಗಿ ಹರಿದುಹೋಗುವ ಸಂಸ್ಕೃತಿಯ ಪ್ರವಾಹಕ್ಕೆ ಅಡ್ಡಗಟ್ಟೆ ಕಟ್ಟುವ ಪ್ರಯತ್ನಗಳೇ ಇಂಥ ಕ್ರಿಯಾಶೀಲತೆ.

ಸಂಸ್ಕೃತಿಯ ಸಾತತ್ಯದ ಬಗ್ಗೆ – ಒಳಿತು ಕೆಡುಕುಗಳ ಬಗ್ಗೆ ತನ್ನ ಪ್ರತಿಕ್ರಿಯೆಗಳ ಮೂಲಕ ಸಂಸ್ಕೃತಿಯ ವಿಕಾಸದಲ್ಲಿ ಅತ್ಯಂತ ಘನಿಷ್ಟವಾದ ಕ್ರಿಯಾತ್ಮಕತೆಯನ್ನು ತೋರುವ ಉಪಕರಣಗಳಲ್ಲಿ ಸಾಹಿತ್ಯವೂ ಒಂದು. ಸಾಹಿತ್ಯ ಜನಸಮುದಾಯವನ್ನು ಬಿಲ್ಲಿನಂತೆ ಬಾಗಿಸಲು ಪ್ರಯತ್ನಿಸುತ್ತ ಬೇಕಾದ ದಿಕ್ಕಿಗೆ ಬಾಣದ ಹೂಡುವಿಕೆಗೆ – ಚಲನೆಗೆ ಕಾರಣವಾಗುತ್ತದೆ. ಸಾಹಿತ್ಯವು ಇಂಥ ಉದ್ದೇಶ ಹೊದಿರುವದರಿಂದಲೇ ಅದು ತನ್ನ ಕಾಲದೇಶಗಳಿಗೆ ಅತ್ಯಂತ ನಿಷ್ಟವಾಗಿ ಬದ್ಧವಾಗಿರುತ್ತದೆ. ಸಾಹಿತ್ಯದ ಸಾರ್ವತ್ರಿಕತೆ, ಸಾರ್ವಕಾಲಿಕತೆ ಎನ್ನುವಂತಹದು ಏನಾದರೂ ಇದ್ದರೆ ಅದನ್ನು ನಾವು ಸಂಸ್ಕೃತಿಯ ಸಾತತ್ಯದ ಮೌಲ್ಯದಲ್ಲಿಯೇ ಗುರುತಿಸ ಬೇಕಾಗುತ್ತದೆ. ಸಾಹಿತ್ಯದ ಓದು, ವಿಮರ್ಶೆ ಈ ದಿಕ್ಕಿನಲ್ಲಿ ನಡೆದರೆ ಅದು ಅರ್ಥಪೂರ್ಣಕ್ರಿಯೆ ಎನ್ನಿಸಬಹುದು. ನಮಗೆ ಲಭ್ಯವಿರುವ ಹಿಂದಿನ ಕಾಲಘಟ್ಟಗಳ ಸಾಹಿತ್ಯ ಕೃತಿಗಳನ್ನು ವರ್ತಮಾನದ ಮೌಲ್ಯಗಳ ನಿಕಷಕ್ಕೆ ಅಳವಟ್ಟು ಓದುವದು ಬಹುತೇಕ ನಿಷ್ಫಲ ಕ್ರಿಯೆಯಾಗಬಹುದು.

ಹಳೆಯ ಸಾಹಿತ್ಯದ ಓದು ಆ ಸಾಹಿತ್ಯದ ಹುಟ್ಟಿಗೆ ಕಾರಣವಾದ ಅಂದಿನ ಸಂಸ್ಕೃತಿಯ ಚಲನೆಯನ್ನು ಗುರುತಿಸುವಂಥದ್ದು ಆದಾಗ ಅದು ಹೆಚ್ಚು ಪ್ರಯೋದನಶೀಲವೆನ್ನಿಸಬಹುದು. ಇಂಥ ಓದು ಕಾಲದೇಶಗಳ ಪರಿಸರದಲ್ಲಿ ಮನುಷ್ಯನ ಒಟ್ಟು ನಡೆಯ ಸಮಗ್ರ ಗ್ರಹಿಕೆಯನ್ನು ಒದಗಿಸಲು ಸಹಾಯ ನೀಡುವಂಥದಾಗಿರುತ್ತದೆ. ಆದ್ದರಿಂದಲೇ ಸಂಪೂರ್ಣ ವಿಮರ್ಶೆ ಕೇವಲ ಕೃತಿನಿಷ್ಠವಾದದ್ದಾಗಲಾರದು. ಅದು ಸಾಂಸ್ಕೃತಿಕ, ಸಾಮಾಜಿಕ ಪರಿಸರಗಳ ಹಿನ್ನೆಲೆಯಲ್ಲಿಯೇ ಕೃತಿಯೊಂದನ್ನು ಗುರುತಿಸುವದಾಗಿರುತ್ತದೆ. ಇಂಥ ಕಾರಣದಿಂದಲೇ ನಮಗೆ ಹಳೆಯ ಸಾಹಿತ್ಯ ಪ್ರಸ್ತುತವಾಗುಳಿಯುತ್ತದೆ. ಸಾಹಿತ್ಯ ಪರಂಪರೆಯ, ಹಿಂದಿನ ಸಾಹಿತ್ಯದ ಈ ರೀತಿಯ ಓದು ನಮ್ಮ ಬದುಕಿಗೆ ಒಂದು ಮಾರ್ಗವನ್ನು, ವರ್ತಮಾನದ ತುಮುಲಗಳಿಗೆ ಒಂದು ಸಮಸ್ಥಿತಿಯ ಪರಿಹಾರವನ್ನು ಸೂಚಿಸಬಲ್ಲದು.

ಇಂಥ ಕಾರಣಗಳಿಗಾಗಿ ಮತ್ತು ಮಾಸ್ತಿ ಸಾಹಿತ್ಯದ ವೈಶಿಷ್ಟ್ಯದ ಕಾರಣದಿಂದ ಮತ್ತು ಮಾಸ್ತಿಯವರ ಜನ್ಮಶತಮಾನದ ವಿಶೇಷಕ್ಕಾಗಿ ನಾವು **ಸಂವಾದ**ದ ಈ ಸಂಚಿಕೆಯನ್ನು ಮಾಸ್ತಿ ಸಾಹಿತ್ಯದ ಪುನರ್ ಮೌಲ್ಯಮಾಪನದ ವಿಶೇಷ ಸಂಚಿಕೆಯಾಗಿ ಹೊರತರುತ್ತಿದ್ದೇವೆ.

ಈ ಸಂಚಿಕೆಯಲ್ಲಿ ಸಂಕಲನಗೊಂಡ ಲೇಖನಗಳು ನಾವು ಮೂರು ಸ್ಥಳಗಳಲ್ಲಿ (ಹಾಸನ, ಚಳ್ಳಕೆರೆ ಮತ್ತು ಶಿವಮೊಗ್ಗ) ಏರ್ಪಡಿಸಿದ ಮಾಸ್ತಿ ಕುರಿತ ವಿಚಾರ ಸಂಕಿರಣ ಮತ್ತು ಉತ್ಸವಗಳಲ್ಲಿ ಮಂಡಿಸಿದ ಪ್ರಬಂಧಗಳಾಗಿವೆ. ನಮ್ಮ ಕರೆಯನ್ನು ಮನ್ನಿಸಿ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಬರೆದುಕೊಟ್ಟ ಎಲ್ಲ ವಿದ್ವಾಂಸರುಗಳಿಗೆ ನಮ್ಮ ಕೃತಜ್ಞತೆಗಳು. ಅಲ್ಲದೆ ತಮ್ಮ 'ಮಾಸ್ತಿಯವರ ನಾಟಕಗಳು' ಪುಸ್ತಕದಲ್ಲಿನ 'ನಾಟಕಕಾರ ಮಾಸ್ತಿ' ಲೇಖನವನ್ನು ಬಳಸಿಕೊಳ್ಳಲು ಅನುವು ನೀಡಿದ ಶ್ರೀ ಜಿ. ಎಸ್. ರಂಗನಾಥರಾವ್ ಅವರಿಗೆ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ನಾವು ಏರ್ಪಡಿಸಿದ ಮೂರು ಉತ್ಸವ – ವಿಚಾರ ಸಂಕಿರಣಗಳ ಹಣಕಾಸಿನ ಜವಾಬ್ದಾರಿ ಹೊತ್ತು ಅವುಗಳನ್ನು ಆಗುಮಾಡಿಸಿದ ಹಾಸನದ ಮಿಡ್‌ಟೌನ್ ರೋಟರಿ ಕ್ಲಬ್ಬಿನ ಎಲ್ಲ ಪದಾಧಿಕಾರಿಗಳಿಗೆ, ಚಳ್ಳಕೆರೆಯ ರವೀಂದ್ರ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರು, ಅಧ್ಯಾಪಕ ಸ್ನೇಹಿತರು ಮತ್ತು ಶ್ರೀ ವೀರೇಂದ್ರಕುಮಾರ್ ಅವರಿಗೆ ಮತ್ತು ಶಿವಮೊಗ್ಗೆಯ ಕರ್ನಾಟಕ ಸಂಘದ ಪದಾಧಿಕಾರಿಗಳಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಈ ಸಂಚಿಕೆಯ ವಿಸ್ತೃತರೂಪದ ಗ್ರಂಥ ಒಂದನ್ನು ಇದೇ ಸಂದರ್ಭದಲ್ಲಿ ಹೊರತರುತ್ತಿದ್ದೇವೆ. **'ಮಾಸ್ತಿ ಸಾಹಿತ್ಯ – ಸಮಗ್ರ ದರ್ಶನ'** ಎಂಬ ಆ ಪುಸ್ತಕದಲ್ಲಿ ಈ ಸಂಚಿಕೆಯ ಲೇಖನಗಳಲ್ಲದೆ, ಹಿರಿಯ ವಿಮರ್ಶಕರಾದ ಪ್ರೊ. ಕೀರ್ತಿನಾಥ ಕುರ್ತಕೋಟಿ, ಡಾ. ಶಂಕರಮೊಕಾಶಿ ಪುಣೇಕರ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಕೆ. ನರಸಿಂಹಮೂರ್ತಿ, ಪ್ರೊ. ಎಸ್. ಅನಂತನಾರಾಯಣ, ಡಾ. ಜಿ. ಎಸ್. ಆಮೂರ, ಪ್ರೊ. ಚಂದ್ರಶೇಖರ ಪಾಟೀಲ, ಇವರ ಮಾಸ್ತಿ ಕುರಿತ ವಿಶೇಷ ಲೇಖನಗಳನ್ನು ಅಳವಡಿಸಲಾಗಿದೆ. ಮಾಸ್ತಿಯವರ ಎಲ್ಲ ಸೃಜನ ಮತ್ತು ಸೃಜನೇತರ ಕೃತಿಗಳನ್ನು ಇಲ್ಲಿನ ಲೇಖನಗಳು ಚರ್ಚಿಸುತ್ತವೆ. ಪುಸ್ತಕವನ್ನು ಕೊಳ್ಳುವದರ

ಮೂಲಕ ಸಂವಾದ ಪ್ರಕಾಶನದ ಇಂತಹ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಬೇಕೆಂದು ಸಹೃದಯರನ್ನು ಕೇಳಿಕೊಳ್ಳುತ್ತೇವೆ.

ಕನ್ನಡ ಪ್ರಗತಿಶೀಲ ಪಂಥದ ಪ್ರಮುಖ ಲೇಖಕರಾದ ನಿರಂಜನರು ನಮ್ಮನ್ನು ಆಗಲಿ ಹೋಗಿದ್ದಾರೆ. ನಿರಂಜನರು ಸೈದ್ಧಾಂತಿಕ ಸ್ಪಷ್ಟತೆಯನ್ನು ಹೊಂದಿದ್ದ ಪ್ರಗತಿಶೀಲ ಲೇಖಕರಾಗಿದ್ದರು. ಅವರ 'ಚಿರಸ್ಮರಣೆ' ಮತ್ತು 'ಮೃತ್ಯುಂಜಯ' ಉತ್ಕೃಷ್ಟವಾದ ಸಾಹಿತ್ಯ ಕೃತಿಗಳು. ಬಹುಮುಖ ಪ್ರತಿಭೆಯ ನಿರಂಜನರ ನಿಧನಕ್ಕಾಗಿ ಸಂವಾದ ತನ್ನ ದು:ಖವನ್ನು ತೋಡಿಕೊಳ್ಳುತ್ತದೆ.

ಕನ್ನಡದ ಇನ್ನೊಂದು ಚೇತನ ನಮ್ಮನ್ನಗಲಿದೆ. ಕನ್ನಡದ ನವ್ಯಕಾವ್ಯ ಮಾರ್ಗದ ಉದ್ಘಾಟಕರಾದ ಡಾ. ವಿ. ಕೃ. ಗೋಕಾಕ ಅವರು ನಿಧನರಾಗಿದ್ದಾರೆ. ಸಂವಾದ ಗೋಕಾಕರ ಸಾವಿಗಾಗಿ ತನ್ನ ತೀವ್ರ ಸಂತಾಪ ತೋಡಿಕೊಳ್ಳುತ್ತದೆ.

ಈ ವಿಶೇಷ ಸಂಚಿಕೆಯೊಂದಿಗೆ ನಾಲ್ಕು ಸಂಪುಟಗಳು ಪೂರ್ಣಗೊಂಡು **ಸಂವಾದ**ವು ಐದನೆಯ ಸಂಪುಟವನ್ನು ಪ್ರವೇಶಿಸುತ್ತದೆ. **ಸಂವಾದ**ದ ಪ್ರಕಟಣೆಯ ನಮ್ಮ ಉತ್ಸಾಹವು ಬತ್ತದಂತೆ, ಚಂದಾದಾರರಾಗಿ ಒತ್ತಾಸೆ ನೀಡಿದ ಸಂವಾದದ ಪ್ರಾಮಾಣಿಕ ಓದುಗರೆಲ್ಲರಿಗೆ ನಮ್ಮ ಕೃತಜ್ಞತೆಗಳು ಸಲ್ಲಬೇಕು. ಇನ್ನು ಮುಂದೆ ಕೂಡ ಅವರೆಲ್ಲರ ಮತ್ತು ಹೊಸ ಓದುಗರ ಒತ್ತಾಸೆ ಲಭ್ಯವಾಗುತ್ತದೆನ್ನುವ ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ. ಈ ವಿಶೇಷ ಸಂಚಿಕೆಯೊಂದಿಗೆ ನಮ್ಮ ಬಹುತೇಕ ಓದುಗರ ಚಂದಾ ಮುಗಿಯುತ್ತದೆ. ಅವರೆಲ್ಲರೂ ತಮ್ಮ ಚಂದಾ ನವೀಕರಿಸಬೇಕೆಂದು ವಿನಂತಿಸುತ್ತೇವೆ. ಇನ್ನೊಂದು ಮಾತು : ಮುದ್ರಣ, ಕಾಗದ ಮತ್ತು ಅಂಚೆ ದರಗಳು ಹೆಚ್ಚಿರುವುದರಿಂದ **ಸಂವಾದ**ವನ್ನು ಈಗಿನ ಚಂದಾದರದಲ್ಲಿ ಪೂರೈಸುವದು ಕಷ್ಟಸಾಧ್ಯವಾಗುತ್ತದೆ. ಅನಿವಾರ್ಯವಾಗಿ ಚಂದಾದರ ಹೆಚ್ಚಿಸಬೇಕಾಗಿದೆ. ದಯವಿಟ್ಟು ಹೊಸದರದಲ್ಲಿ ಚಂದಾ ಕಳಿಸಿಕೊಡಬೇಕೆಂದು ವಿನಂತಿಸುತ್ತೇವೆ.

– ಸಂಪಾದಕರು.

ಪುಸ್ತಕ ಸ್ವೀಕಾರ :

೧. **ಅಭಿನಯದ ಬಯಲು** (ಕವನ) – ೧೯೯೨
ಲೇ: ವೀಚಿ ಪು : ೧೪ + ೫೦ ಬೆಲೆ : ರೂ. ೨೫/–
ಹಿಡಿಶಾಪ (ಕವನ) – ೧೯೯೨
ಲೇ : ಡಿ. ಆರ್. ಪೆರುಮಾಳ್ ಕನ್ನಡಕ್ಕೆ : ವೀಚಿ
ಪು : ೧೨ + ೫೮ ಬೆಲೆ : ರೂ. ೨೫/–
(ಈ ಎರಡೂ ಪುಸ್ತಕಗಳ ಪ್ರಕಾಶಕರು : ಚಲನ ಪ್ರಕಾಶನ ಸಹಕಾರಿ, ತುಮಕೂರು–೬)

೨. **ಮೃದುವಾಗಿ ಮುಟ್ಟು** (ಚಿಂತನಗಳು) – ೧೯೯೧
ಲೇ : ಡಾ. ಬಸವರಾಜ ಸಾದರ
ಪ್ರ : ಮಂಜು ಪ್ರಕಾಶನ, ಬೆಂಗಳೂರು–೧೦ ಪು : ೮೬ ಬೆಲೆ : ರೂ. ೨೦/–

೩. **ದಾರಿ** (ಕಾದಂಬರಿ) – ೧೯೯೧
ಲೇ : ಆರ್. ಡಿ. ಹೆಗಡೆ
ಪ್ರ : ಆಲ್ಮನೆ ಪ್ರಕಾಶನ, ಕಾನಗೋಡು–೫೮೧ ೩೪೦ (ಉ.ಕ)
ಪು : ೯೦ ಬೆಲೆ : ರೂ. ೧೩/–

೫. **ಗೌರಿ** (ಕಾದಂಬರಿ)–೧೯೯೨
ಲೇ : ಕೆ. ಸತ್ಯನಾರಾಯಣ
ಪ್ರ : ಅಪರ್ಣ ಪ್ರಕಾಶನ, ೪೩/೪೮, ೭ನೇ ಕ್ರಾಸ್, ವಸಂತನಗರ, ಬೆಂಗಳೂರು–೫೨
ಪು : viii + ೧೫೨ ಬೆಲೆ ರೂ. ೩೦/–

೬. **ಸಾವಯವ ಕೃಷಿ ಕೈಪಿಡಿ** – ೧೯೯೧
ಲೇ : ಕೆ. ಪಿ. ಸುರೇಶ ಹಾಗೂ ಎಂ. ಟಿ. ಶಾಂತಿಮೂಲೆ
ಪ್ರ : ಸಾವಯುವ, ಕುಕ್ಕುಜಡ್ಕ, ಸುಳ್ಯ, ತಾ. (ದ.ಕ) ಪು : ೨೦ ಬೆಲೆ ರೂ. ೪/–

೭. **ಹತ್ತೊಂಭತ್ತು ದೈವೀಕ ಕವಿತೆಗಳು**
ಮೂಲ : ಷಹರ್‌ಜಾದ್ ರಿಖಿ. ಕನ್ನಡಕ್ಕೆ : ಎಚ್. ಎಸ್. ಶಿವಪ್ರಕಾಶ ಪು : ೪೨
ಪ್ರ : ಷಹರ್‌ಜಾದ್ ರಿಖಿ, ೧೯, ಕರ್ಲಿ ಸ್ಟ್ರೀಟ್, ಬೆಂಗಳೂರು–೨೫

೮. **ಆಸ್ಫೋಟ** (ಕವನಗಳು) – ೧೯೯೧
ಲೇ : ಅಶೋಕ ನರೋಡೆ
ಪ್ರ : ರೇಣುಕಾ ಪ್ರಕಾಶನ, ನವೋದಯ ನಗರ, ಧಾರವಾಡ ಬೆಲೆ ರೂ. ೧೫/–

೯. **ಬುಗ್ಗೆ** (ಕವನಗಳು) – ೧೯೯೧
ಲೇ : ಜರಗನಹಳ್ಳಿ ಶಿವಶಂಕರ
ಪ್ರ : ಶುಭದ ಪ್ರಕಾಶನ, ಜರಗನಹಳ್ಳಿ, ಬೆಂಗಳೂರು–೭೮
ಪು : xii + ೭೨ ಬೆಲೆ : ರೂ. ೧೨/–

೧೦. **ದಾರಿ ಮತ್ತು ಆಕಾಶ** (ಕವನಗಳು) – ೧೯೯೧
ಲೇ : ಸ. ರಘುನಾಥ
ಪ್ರ : ಶುಭದ ಪ್ರಕಾಶನ, ಜರಗನಹಳ್ಳಿ, ಬೆಂಗಳೂರು–೭೮
ಪು : xii + ೫೬ ಬೆಲೆ : ರೂ. ೧೦/–

೧೧. **ವ್ಯವಸ್ಥೆ** (ನಾಟಕ)
ಲೇ : ಗೊರೂರು ಅನಂತರಾಜು
ಪ್ರ : ಅನಂತಾನಂತ ಪ್ರಕಾಶನ, ಗೊರೂರು–೫೭೭ ೧೨೦
ಪು : ೩೪ ಬೆಲೆ : ರೂ. ೬/–

ಈ ಪುಸ್ತಕದ ಲೇಖಕರು .....

೧. **ಕೆ. ಸತ್ಯನಾರಾಯಣ**
೨೧೬/೨೦೧; ೫ನೇ ಮೇನ್,
೫ನೇ ಕ್ರಾಸ್, ಚಾಮರಾಜ ಪೇಟೆ
ಬೆಂಗಳೂರು – ೫೬೦ ೦೧೮

೨. **ಡಾ. ಪುರುಷೋತ್ತಮ ಬಿಳಿಮಲೆ**
ಕನ್ನಡ ಅಧ್ಯಾಪಕರು
ಮಂಗಳೂರು ವಿಶ್ವವಿದ್ಯಾಲಯ
ಮಂಗಳಗಂಗೋತ್ರಿ–೫೭೪ ೧೯೯ (ದ.ಕ)

೩. **ಡಾ. ಬಿ. ಎನ್. ಸುಮಿತ್ರಾಬಾಯಿ**
ಸಂಸ್ಕೃತ ಅಧ್ಯಾಪಕರು
ಆಚಾರ್ಯಪಾಠಶಾಲಾ ಪ್ರಥಮ ದರ್ಜೆ
ಕಾಲೇಜು **ಬೆಂಗಳೂರು**

೪. **ಡಿ. ಎಸ್. ನಾಗಭೂಷಣ**
ಆಕಾಶವಾಣಿ
ಹಾಸನ

೫. **ಲಕ್ಷ್ಮೀಶ ತೋಳ್ಪಾಡಿ**
ಶಾಂತಿಗೋಡು ಅಂಚೆ
ಪುತ್ತೂರು ತಾಲೂಕು
ದಕ್ಷಿಣ ಕನ್ನಡ ಜಿಲ್ಲೆ

೬. **ಟಿ. ಪಿ. ಅಶೋಕ**
ಇಂಗ್ಲೀಷ್ ಅಧ್ಯಾಪಕರು
ಲಾಲಬಹದ್ದೂರ್ ಕಾಲೇಜು
ಸಾಗರ ಶಿವಮೊಗ್ಗ ಜಿಲ್ಲೆ

೭. **ಜಿ. ಎನ್ ರಂಗನಾಥನ್**
'ಸ್ನೇಹ' ೨೬೬; ೮ನೇ ಬ್ಲಾಕ್
ಕೋರಮಂಗಲ ಲೇ ಔಟ
ಬೆಂಗಳೂರು – ೫೬೦ ೦೩೪

೮. **ವಿ. ಚಂದ್ರಶೇಖರ ನಂಗಲಿ**
ಕನ್ನಡ ಅಧ್ಯಾಪಕರು
ಸರ್ಕಾರೀ ಮಹಿಳಾ ಕಾಲೇಜು
ಕೋಲಾರ

೯. **ಪ್ರಭುಸ್ವಾಮಿಮಠ ಸಿ. ವಿ.**
ಕನ್ನಡ ಅಧ್ಯಾಪಕರು
ಲಾಲಬಹದ್ದೂರ್ ಕಾಲೇಜು
ಸಾಗರ ಶಿವಮೊಗ್ಗ ಜಿಲ್ಲೆ

೧೦. **ಎಚ್. ಎಸ್. ರಾಘವೇಂದ್ರರಾವ್**
೭, ಶ್ರೀಮಾತಾ, ೧೫ನೇ ಕ್ರಾಸ್
೫ನೇ ಹಂತ, ಜೆ. ಪಿ. ನಗರ
ಬೆಂಗಳೂರು – ೫೬೦ ೦೭೮

೧೧. **ಎಚ್. ಪಟ್ಟಾಭಿರಾಮ ಸೋಮಯಾಜಿ**
ಇಂಗ್ಲೀಷ್ ಅಧ್ಯಾಪಕರು
ಮಂಗಳೂರು ವಿಶ್ವವಿದ್ಯಾಲಯ
ಮಂಗಳಗಂಗೋತ್ರಿ–೫೭೪ ೧೯೯ (ದ.ಕ)

೧೨. **ಸ. ಉಷಾ**
ಕನ್ನಡ ಅಧ್ಯಾಪಕರು
ಹೊಯ್ಸಳೇಶ್ವರ ಕಾಲೇಜು
ಅರಸೀಕೆರೆ ಹಾಸನ ಜಿಲ್ಲೆ

೧೩. **ಜಿ. ಶ್ರೀನಿವಾಸರಾಜು**
ಕನ್ನಡ ಅಧ್ಯಾಪಕರು
ಕ್ರೈಸ್ಟ್ ಕಾಲೇಜು **ಬೆಂಗಳೂರು**

೧೪. **ರಾಘವೇಂದ್ರ ಪಾಟೀಲ**
'ಬಲರಾಮ'
ಮಲ್ಲಾಡಿಹಳ್ಳಿ – ೫೭೭ ೫೩೧
ಚಿತ್ರದುರ್ಗ ಜಿಲ್ಲೆ

ಸಂವಾದ ಪ್ರಕಾಶನ

ಪ್ರಿಯರೇ,

ನಾವು ಏಳು ಪುಸ್ತಕಗಳನ್ನು ಪ್ರಕಟಿಸಿದ್ದು ಅವುಗಳ ವಿವರ ಹೀಗಿದೆ :

೧. **ಈ ನೆಲದ ಹಾಡು** (ಕವನ ಸಂಕಲನ)
ಲೇ: ಸ. ಉಷಾ ಪುಟ: viii + ೫೦ ಬೆಲೆ: ರೂ. ೧೫–೦೦

೨. **ಹೆಜ್ಜೆ ಮೂಡಿದ ಹಾದಿ** (ಕಥಾ ಸಂಕಲನ)
ಲೇ: ಬಾನು ಮುಷ್ತಾಕ್ ಪುಟ : ಬೆಲೆ : viii + ೧೧೦ ಬೆಲೆ ರೂ. ೨೧–೦೦

೩. **ಗಮನ** (ವಿಚಾರ–ವಿಮರ್ಶೆ)
ಲೇ: ಡಿ.ಎಸ್. ನಾಗಭೂಷಣ ಪುಟ: viii + ೧೩೦ ಬೆಲೆ : ರೂ. ೩೦–೦೦

೪. **ಕಾಡಿನ ಹುಡುಗ ಕೃಷ್ಣ** (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)
ಪುಟ : viii + ೧೩೦ ಬೆಲೆ: ರೂ. ೩೫–೦೦

೫. **ಅಜ್ಞಾತ ಮುಂಬಯಿ** (ಪ್ರವಾಸ ಕಥನ)
ರಾಘವೇಂದ್ರ ಪಾಟೀಲ ಪುಟ : ix + ೯೪ ಬೆಲೆ : ರೂ. ೧೦–೦೦

೬. **ಚಂದ್ರನನ್ನು ಕರೆಯಿರಿ ಭೂಮಿಗೆ** (ಕವಿತೆಗಳು)
ಲೇ : ಸವಿತಾ ನಾಗಭೂಷಣ ಪುಟ: ೮೨ ಬೆಲೆ : ರೂ. ೩೦–೦೦

೭. **ಮಾಸ್ತಿ ಸಾಹಿತ್ಯ : ಸಮಗ್ರ ದರ್ಶನ**
ಪುಟ : viii + ೨೦೦ ಬೆಲೆ : ರೂ. ೬೦–೦೦

ಸಂಪರ್ಕಿಸಿ :

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ – ೫೭೭ ೫೩೧, ಚಿತ್ರದುರ್ಗ ಜಿಲ್ಲೆ.

'ಸಂವಾದ'ದ ಹಳೆಯ ಸಂಚಿಕೆಗಳು : ಒಂದನೇ ಹಾಗೂ ಮೂರನೆ ಸಂಚಿಕೆಗಳ ಹೊರತಾಗಿ 'ಸಂವಾದ'ದ ೧೭ನೇ ಸಂಚಿಕೆವರೆಗಿನ ಹಳೆಯ ಸಂಚಿಕೆಗಳು ಲಭ್ಯವಿದ್ದು, ಆಸಕ್ತರು ಅವನ್ನು ಸಂಚಿಕೆಗ ತಲಾ ಮೂರು ರೂಪಾಯಿಗಳಂತೆ ಲೆಕ್ಕ ಹಾಕಿ ಹಣ ಕಳುಹಿಸಿ ಪಡೆಯಬಹುದು. ಕನಿಷ್ಠ ಐದು ಸಂಚಿಕೆಗಳಿಗಾದರೂ ಆದೇಶ ನೀಡದ ಹೊರತು ಸಂಚಿಕೆಗಳನ್ನು ಕಳುಹಿಸಲಾಗುವುದಿಲ್ಲ.

– ಸಂವಾದ ಪ್ರಕಾಶನ

"ಏನು ಆ ಕಾಡು! ಏನು ಆ ಮರಗಳು! ಈ ಜಟ್ಟಿಯಾದವನು ಮನುಷ್ಯನಿಗೆ ರಾಕ್ಷಸನಾದರೆ, ಆ ಕಾಡಿನ ಮರಗಳು ನಮ್ಮ ಊರಿನ ಮರಗಳಿಗೆ ರಾಕ್ಷಸ! ಆ ಮಲೆಗಳ ತಲೆಗಳಾದರೂ ಅದು ಏನು ಎತ್ತರ! ದೂರದಿಂದ ನೋಡಿದಾಗ ಅವುಗಳ ಎತ್ತರ ಅಷ್ಟಾಗಿ ಮನಮುಟ್ಟುವುದಿಲ್ಲ; ಅವುಗಳ ಅಡಿವಾರದಿಂದ ನೋಡಬೇಕು; ಆಗ ತಿಳಿಯುತ್ತದೆ. ಮೇಲಿಂದ ಕೆಳಕ್ಕೆ ನೋಡಿದರೆ ತಲೆ ತಿರುಗುವುದಾಯಿತಲ್ಲ; ಮೇರ್ತಿಯಂಥ ಗಿರಿಯನ್ನು, ಹೊರನಾಡ ತಗ್ಗಿನಿಂದ ನೋಡಿದರೆ ಜನಕ್ಕೆ ತಲೆ ತಿರುಗುತ್ತದೆ. ಸ್ವಲ್ಪಕ್ಕೆ ಭಯವಾಗುವುದಾದರೂ ಹತ್ತು ದಿನ ಬಳಕೆಮಾಡಿಕೊಂಡರೆ ಈ ಕಾಡು, ಈ ಮರ, ಬಾನೆತ್ತರಕ್ಕೆ ತಲೆ ಹಾದಿರುವ ಈ ಮಲೆ, ಗೆಳೆಯರಂತಾಗುತ್ತವೆ. ಮಾತು ಒಂದಾಡುವುದಿಲ್ಲ; ಒಬ್ಬ ಮೂಕ ಜೊತೆಗಾರನಂತೆ ಧೈರ್ಯ ಕೊಡುತ್ತವೆ. ಕಾಪಾಡಿಕೊಳ್ಳುತ್ತವೆ. ಲೋಕ ತನ್ನಿಂದ ಬೇರೆ ವಿರೋಧಿಗಳ ಕಣ ಎಂದು ತಿಳಿದರೆ ಮನುಷ್ಯನಿಗೆ ಭಯ. ಅದು ಶಿವನ ಬೆನ್ನು, ಅಂಬಿಕೆಯ ಮಡಿಲು ಎಂದು ತಿಳಿದರೆ ಭಯವೇ ಇಲ್ಲ. ಗಣಪ ಶಿವನ ಬೆನ್ನು ಬದಿಗೆ ನಿಂತು ಭುಜ ಏರಬೇಕು ಎಂದರೆ ಸುಮ್ಮನೆ ಆಯಿತೆ? ಕಷ್ಟ; ಆದರೆ ಆಡಬೇಕು, ಅವನು ಆಡಲಿ ಎಂದೇ ಶಿವನಿಗೂ ಆಶೆ. ಅಂಬಿಕೆ ಮಗನನ್ನ ಮಡಿಲಲ್ಲಿ ನಿಲ್ಲಿಸಿಕೊಂಡು ಏರು ಎನ್ನುತ್ತಾಳೆ. ಇದನ್ನ ಅರಿಯುವುದೇ ಬುದ್ಧಿವಂತರ ದಾರಿ ....".

– ಮಾಸ್ತಿಯವರ 'ಚೆನ್ನಬಸವನಾಯಕ'